॥ ಶ್ರೀರಾಮಶ್ರೀ ॥

॥ ಶ್ರೀವೇದವ್ಯಾಸೋ ವಿಜಯತೇ ॥

ಭಗವಾನ್ ಶ್ರೀವೇದವ್ಯಾಸ ಪ್ರಣೀತ

ಮಹಾಭಾರತ

ವನಪರ್ವ

ಭಾಗ-೮

(ಶ್ರೀಮದಾನಂದತೀರ್ಥರ ತಾತ್ಪರ್ಯನಿರ್ಣಯ ಶ್ರೀವಾದಿರಾಜತೀರ್ಥರ
ಲಕ್ಷಾಲಂಕಾರದೊಂದಿಗೆ ಪ್ರತಿ ಶ್ಲೋಕಗಳ ಜೊತೆಗೆ ಕನ್ನಡಾನುವಾದ)

ಅನುಗ್ರಹ :

ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು

ಶ್ರೀಹೃಷೀಕೇಶತೀರ್ಥಸಂಸ್ಥಾನಂ, ಪಲಿಮಾರು ಮಠ, ಉಡುಪಿ

ಅನುವಾದಕರು :

ವಿದ್ವಾನ್॥ ಪಿ. ಎಸ್. ಶೇಷಗಿರಿ ಆಚಾರ್ಯ,

ಪ್ರಕಾಶಕರು :

ತತ್ವಸಂಶೋಧನಸಂಸತ್ (ರಿ.)

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಮಾನ್ಯತೆ ಪಡೆದಿದೆ

ಶ್ರೀಪಲಿಮಾರು ಮಠ, ಉಡುಪಿ.

ಮಹಾಭಾರತ - ಭಾರತತಾತ್ಪರ್ಯನಿರ್ಣಯ- ಲಕ್ಷಾಲಂಕಾರ ಕನ್ನಡಾನುವಾದದ ಸಮಗ್ರ ಯೋಜನೆಯ ಕೃತಿಗಳನ್ನು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರ ದ್ವಿತೀಯ ಪರ್ಯಾಯದ ಅಕ್ಕಿಮುಹೂರ್ತದ ಶುಭಸಂದರ್ಭದಲ್ಲಿ(20.01.2017) ದಂದು ಪರಮಪೂಜ್ಯ ಶ್ರೀ ಶ್ರೀ ವಿದ್ಯಾಧೀಶತೀರ್ಥ ಶ್ರೀಪಾದರು ಅನಾವರಣಗೊಳಿಸಿ ಶ್ರೀಕೃಷ್ಣನ ಅಡಿದಾವರೆಗಳಲ್ಲಿ ಸಮರ್ಪಿಸಿದರು.

ವನಪರ್ವ
ಭಾಗ-೮

© ತತ್ವಸಂಶೋಧನ ಸಂಸತ್ (ರಿ.), ಪಲಿಮಾರು ಮಠ, ಉಡುಪಿ.

ISBN : 978-93-81807-52-1

ಈ ಗ್ರಂಥವು ಕರ್ನಾಟಕ ಸರ್ಕಾರದ ಆರ್ಥಿಕ ನೆರವಿನಿಂದ ಮುದ್ರಿತವಾಗಿದೆ

ಪುಟಗಳು	-	VIII + 690 = 698
ಮುದ್ರಿತ ಪ್ರತಿಗಳು	-	1000
ಬೆಲೆ	-	**ರೂ. 425/-**
ಅನುವಾದಕರು	-	ವಿದ್ವಾನ್ ಪಿ.ಎಸ್. ಶೇಷಗಿರಿ ಆಚಾರ್ಯ, ಮೈಸೂರು.
ಪ್ರಕಾಶಕರು	-	ತತ್ವಸಂಶೋಧನಸಂಸತ್, ಪಲಿಮಾರು ಮಠ, ಉಡುಪಿ.
ಪುಟ ಸಂಯೋಜನೆ ಮತ್ತು ಅಕ್ಷರ ಜೋಡಣೆ	-	ಶ್ರೀ ಎಂ. ಶರತ್ ಚಂದ್ರ ಮತ್ತು ಶ್ರೀಮತಿ ನಾಗಲತಾ
ಮುದ್ರಕರು	-	ಪವನ್ ಗ್ರಾಫಿಕ್ಸ್ ಮತ್ತು ಪ್ರಿಂಟರ್ಸ್, ಮೈಸೂರು. ✆ : 7899779255
ಗ್ರಂಥಪ್ರಾಪ್ತಿ	-	ಪಲಿಮಾರು ಮಠ, ಉಡುಪಿ.

ವಿಷಯಾನುಕ್ರಮಣಿಕೆ

ಮಹಾಭಾರತ - ಭಾಗ-೮

ವನಪರ್ವ (ಭಾಗ-೩)

ಅಧ್ಯಾಯ ಸಂಖ್ಯೆ ಪುಟ ಸಂ.

154. ಜಟಾಸುರ ವಧೆಯ ನಂತರ ಯುಧಿಷ್ಠಿರನಿಂದ ನರನಾರಾಯಣಾಶ್ರಮದಲ್ಲಿ ವಾಸ. ಅಲ್ಲಿಂದ ವೃಷಪರ್ವಾಶ್ರಮಕ್ಕೂ ಮತ್ತು ಆರ್ಷ್ಟಿಷೇಣಾಶ್ರಮಕ್ಕೂ ಗಮನ 1

155. ಅರ್ಜುನನ ಆಗಮನದವರೆಗೆ ತನ್ನ ಆಶ್ರಮದಲ್ಲಿಯೇ ಇರುವಂತೆ ಆರ್ಷ್ಟಿಷೇಣನ ಒತ್ತಾಯ. ಕುಶಲ ಪ್ರಶ್ನೆಯ ನೆಪದಲ್ಲಿ ಯುಧಿಷ್ಠಿರನಿಗೆ ಧರ್ಮೋಪದೇಶ 21

156. ಆರ್ಷ್ಟಿಷೇಣಾಶ್ರಮದಲ್ಲಿ ಪಾಂಡವರ ವಾಸ. ಗರುಡ ಮತ್ತು ವಾಯುವೇಗದಿಂದ ದ್ರೌಪದಿಯ ಎದುರಿನಲ್ಲಿ ಪಂಚವರ್ಣ ಪುಷ್ಪಗಳ ಪತನ. ಅವಳ ಪ್ರಾರ್ಥನೆಯಂತೆ ಅಂತಹ ಪುಷ್ಪಗಳನ್ನು ತರಲು ಹೋದ ಭೀಮಸೇನನ ಜೊತೆಯಲ್ಲಿ ಮಣಿಮಂತ ಮೊದಲಾದವರ ಯುದ್ಧ. 29

157. ಅಪಶಕುನಗಳನ್ನು ನೋಡಿ ಯುಧಿಷ್ಠಿರಾದಿಗಳಿಂದ ಪರ್ವತಾಗ್ರಗಮನ. ಯುದ್ಧದ ಸುದ್ದಿಯನ್ನು ತಿಳಿದ ಕುಬೇರನಿಂದ ಅಲ್ಲಿಗೆ ಆಗಮನ. ಕೋಪರಹಿತನಾಗಿ ಹಿಂದೆ ಬಂದ ಅಗಸ್ತ್ಯರ ಶಾಪವನ್ನು ಹೇಳಿ ಭೀಮಸೇನನ ಕಾರ್ಯದ ಅನುಮೋದನೆ. 47

158. ಕುಬೇರನಿಂದ ಯುಧಿಷ್ಠಿರನಿಗೆ ಅನುಶಾಸನ. ಕುಬೇರನ ಅಪ್ಪಣೆಯಂತೆ ರಾಕ್ಷಸರಿಂದ ಪೂಜಿತರಾದ ಯುಧಿಷ್ಠಿರಾದಿಗಳ ಕುಬೇರಗೃಹವಾಸ. 62

159. ಆರ್ಷ್ಟಿಷೇಣನಿಂದ ಮೇರು ಮಂದರ ಚತುರ್ಮುಖಸದನ, ವೈಕುಂಠ ಮತ್ತು ಸೂರ್ಯಚಂದ್ರಗತಿಗಳ ವರ್ಣನೆ. 70

160. ಅಸ್ತ್ರಗಳನ್ನು ಪಡೆದು ಅರ್ಜುನನಿಂದ ಗಂಧಮಾದನಪರ್ವತದಲ್ಲಿ ಪುನರಾಗಮನ. ಯುಧಿಷ್ಠಿರಾದಿಗಳಿಗೆ ತನ್ನ ಸ್ವರ್ಗವಾಸಪ್ರಕಾರದ ಕಥನ. 79

161. ತಮ್ಮಂದಿರಿಂದೊಡಗೂಡಿದ ಯುಧಿಷ್ಠಿರನ ಬಳಿಗೆ ಇಂದ್ರನ ಆಗಮನ ಮತ್ತು ಜಯಾಶೀರ್ವಾದಗಳನ್ನು ಹೇಳಿ ಸ್ವರ್ಗಕ್ಕೆ ನಿರ್ಗಮನ. 89

162. ಅರ್ಜುನನಿಂದ ಕಿರಾತರೂಪಿಯಾದ ಶಿವನ ಜೊತೆಯಲ್ಲಿ ತನ್ನ ಯುದ್ಧ ಮತ್ತು ಪಾಶುಪತಾಸ್ತ್ರ ಪ್ರಾಪ್ತಿ ಪ್ರಕಾರದ ಕಥನ. 93

163. ಅರ್ಜುನನಿಂದ ಸ್ವರ್ಗಲೋಕವಾಸದ ಮತ್ತು ಅಸ್ತ್ರಪ್ರಾಪ್ತಿಪ್ರಕಾರದ ಕಥನ. ವಿದ್ಯಾ ಸಮಾಪ್ತಿಯ ನಂತರ ಇಂದ್ರನಿಗೆ ನಿವಾತ ಕವಚ ವಧೆ ರೂಪವಾದ ಗುರುದಕ್ಷಿಣಾ ಪ್ರಾರ್ಥನೆ. 105

164. ನಿವಾತ ಕವಚರ ಜೊತೆಯಲ್ಲಿ ಯುದ್ಧವನ್ನು ಮಾಡಲು ಅರ್ಜುನನ ಸಮುದ್ರಗಮನ ಮತ್ತು ಯುದ್ಧಾರಂಭ. 124

165. ನಿವಾತಕವಚರ ಜೊತೆಯಲ್ಲಿ ಅರ್ಜುನನ ಯುದ್ಧ. 129

166. ದಾನವರ ಮಾಯಾಯುದ್ಧ ಮತ್ತು ದಿವ್ಯಾಸ್ತ್ರಗಳಿಂದ ಅರ್ಜುನನಿಂದ ಅದರ ಪ್ರತಿಘಾತ. ದಾನವರ ಹನನ. 136

167. ಅರ್ಜುನನಿಂದ ಪುನಃ ಸ್ವರ್ಗಗಮನ. 143

168. ನಿವಾತಕವಚರನ್ನು ಸಂಹಾರಮಾಡಿ ಸ್ವರ್ಗಕ್ಕೆ ಹಿಂದಿರುಗುವ ಅರ್ಜುನನಿಂದ ಹಿರಣ್ಯಪುರ ವಾಸಿಗಳ ಮತ್ತು ಪೌಲೋಮರ ವಧೆ. 150

169. ಅರ್ಜುನನಿಂದ ಇಂದ್ರನು ತನಗೆ ಕವಚ ಕಿರೀಟಾಧಿಗಳನ್ನು ಅನುಗ್ರಹಿಸಿದ ಪ್ರಕಾರ ಕಥನ ಮತ್ತು ಮರುದಿನ ಅಸ್ತ್ರಗಳನ್ನು ಯುಧಿಷ್ಠಿರನಿಗೆ ತೋರಿಸುವುದಾಗಿ ಆಶ್ವಾಸನೆ. 168

170. ಅರ್ಜುನನಿಂದ ಯುಧಿಷ್ಠಿರನಿಗೆ ದಿವ್ಯಾಸ್ತ್ರ ಪ್ರದರ್ಶನ. ಆಸ್ತ್ರತೇಜಸ್ಸಿನಿಂದ ಜಗತ್ತಿಗೆ ಕ್ಷೋಭೆ ಉಂಟಾಗುತ್ತಿರಲು ಇಂದ್ರನ ಆಜ್ಞೆಯಿಂದ ನಾರದರಿಂದ ಅಸ್ತ್ರ ಪ್ರದರ್ಶನದ ನಿಷೇಧ. 172

171. ಯುಧಿಷ್ಠಿರಾದಿಗಳಿಂದ ಗಂಧಮಾದನದಿಂದ ಹಿಂದಿರುಗಲು ನಿಶ್ಚಯ. ಲೋಮಶರ ಸ್ವರ್ಗಗಮನ. ಗಂಧಮಾದನದಿಂದ ಕೈಲಾಸ ಪರ್ವತ, ವೃಷಪರ್ವಾಶ್ರಮ ಮಾರ್ಗವಾಗಿ ಪಾಂಡವರ ದ್ವೈತವನ ಪ್ರವೇಶ ಮತ್ತು ಸರಸ್ವತೀ ತೀರದಲ್ಲಿ ವಿಹಾರ. 179

172. ಬೇಟೆಯಲ್ಲಿ ಪ್ರವೃತ್ತನಾದ ಭೀಮನಿಗೆ ಅಜಗರದಿಂದ ಗ್ರಹಣ. 194

173. ಅಜಗರದಿಂದ ಸ್ವವೃತ್ತಾಂತ ಕಥನ ಮತ್ತು ದುರ್ನಿಮಿತ್ತಗಳನ್ನು ನೋಡಿ ಅಲ್ಲಿಗೆ ಯುಧಿಷ್ಠಿರನ ಆಗಮನ. 207

174. ಸರ್ಪಯುಧಿಷ್ಠಿರ ಸಂವಾದ. ಬ್ರಾಹ್ಮಣ ಜಾತಿ ಮತ್ತು ವೇದ್ಯವಸ್ತುವಿನ ವಿಷಯದಲ್ಲಿ ಪ್ರಶ್ನ ಪ್ರತಿವಚನಗಳು. 221

175. ದಾನ ಅಹಿಂಸಾದಿ ವಿಷಯಗಳಲ್ಲಿ ಸರ್ಪ ಮತ್ತು ಯುಧಿಷ್ಠಿರನ ಸಂವಾದ 231

176. ವರ್ಷಾಕಾಲ ಶರತ್ಕಾಲಗಳ ವರ್ಣನೆ. 244

177. ಕಾಮ್ಯಕವನವನ್ನು ಕುರಿತು ಸತ್ಯಭಾಮಾ ಸಹಿತ ಕೃಷ್ಣನ, ನಾರದರ ಮತ್ತು ಮಾರ್ಕಂಡೇಯರ ಆಗಮನ. ಕೃಷ್ಣನ ಅಪ್ಪಣೆಯಂತೆ ಮಾರ್ಕಂಡೇಯರಿಂದ ಪುರಾಣಕಥನ ಪ್ರಾರಂಭ. 248

178. ಯುಧಿಷ್ಠಿರನ ಪ್ರಶ್ನೆಗೆ ಉತ್ತರವಾಗಿ ಮಾರ್ಕಂಡೇಯರಿಂದ ಪಾಪಪುಣ್ಯಗಳ ಫಲಭೋಗದ ಪ್ರಕಾರದ ಕಥನ. 260

179. ಮಾರ್ಕಂಡೇಯ ಋಷಿಗಳಿಂದ ಯುಧಿಷ್ಠಿರಾದಿಗಳನ್ನು ಕುರಿತು ಮೃತೋಜ್ಜೀವನ ರೂಪವಾದ ಬ್ರಾಹ್ಮಣ ಮಹಿಮೆಯ ಕಥನ. 271

180. ಪೃಥುಚಕ್ರವರ್ತಿಯ ಅಶ್ವಮೇಧಯಾಗದಲ್ಲಿ ಅತ್ರಿಗೌತಮರ ವಿವಾದವನ್ನು ನಿರೂಪಿಸಿ ಮಾರ್ಕಂಡೇಯರಿಂದ ಬ್ರಾಹ್ಮಣರ ಮಹಿಮೆಯ ಕಥನ. 276

181. ಮಾರ್ಕಂಡೇಯರಿಂದ ಯುಧಿಷ್ಠಿರನನ್ನು ಕುರಿತು ತಾರ್ಕ್ಷ್ಯ ಸರಸ್ವತಿಯರ ಸಂವಾದದ ಅನುವಾದ. 285

182. ಮಾರ್ಕಂಡೇಯರಿಂದ ಯುಧಿಷ್ಠಿರನಿಗೆ ಮತ್ಸ್ಯಾವತಾರ ಚರಿತೆಯ ಕಥನ 295

183. ಮಾರ್ಕಂಡೇಯರಿಂದ ಯುಗಪರಿಮಾಣ ಮತ್ತು ಯುಗಧರ್ಮಗಳ ವರ್ಣನೆ. ಅವರಿಂದ ಪ್ರಳಯ ದರ್ಶನ ಮತ್ತು ಶಿಶುರೂಪಿಯಾದ ಹರಿಯ ದರ್ಶನಾದಿಗಳ ಕಥನ. 307

184. ಶಿಶುರೂಪನಾದ ಹರಿಯಿಂದ ಮಾರ್ಕಂಡೇಯರಿಗೆ ತನ್ನ ಸ್ವರೂಪದ ಉಪದೇಶ. ಮಾರ್ಕಂಡೇಯರಿಂದ ಶ್ರೀಕೃಷ್ಣನ ಸರ್ವೋತ್ತಮತ್ವ ಪ್ರತಿಪಾದನೆ ಮತ್ತು ಶ್ರೀಕೃಷ್ಣನಲ್ಲಿ ಪಾಂಡವರ ಶರಣಾಗತಿ. 336

185. ಶ್ರೀಕೃಷ್ಣನಲ್ಲಿ ಪಾಂಡವರ ಶರಣಾಗತಿ. ಕೃಷ್ಣನಿಂದ ಅವರಿಗೆ ಸಾಂತ್ವನ. ಮಾರ್ಕಂಡೇಯರಿಂದ ಕಲಿಯುಗದ ಧರ್ಮದ ಮತ್ತು ಕಲ್ಕಿಯ ಅವತಾರದ ವರ್ಣನೆ. 348

186. ಮಾರ್ಕಂಡೇಯರಿಂದ ಕಲ್ಕಿಯು ಮಾಡುವ ಕೃತಯುಗಸ್ಥಾಪನೆಯ ಕಥನ ಮತ್ತು ಯುಧಿಷ್ಠಿರನಿಗೆ ಮಾರ್ಕಂಡೇಯರಿಂದ ಧರ್ಮೋಪದೇಶ 369

187. ಮಾರ್ಕಂಡೇಯರಿಂದ ಮಂಡೂಕೋಪಾಖ್ಯಾನ ಕಥನ 376

188. ಮಾರ್ಕಂಡೇಯರಿಂದ ಪಾಂಡವರನ್ನು ಕುರಿತು ಸ್ವರ್ಗವಾಸವನ್ನು ಕುರಿತು ಕೀರ್ತಿಯು ಕಾರಣ ಎಂಬ ನಿರೂಪಣೆ. 397

189. ಮಾರ್ಕಂಡೇಯರಿಂದ ಧುಂಧುಮಾರೋಪಾಖ್ಯಾನದ ಆರಂಭ. ಉದಂಕನ ತಪಸ್ಸು, ವಿಷ್ಣುವಿನ ವರದಾನ, ಉದಂಕನಿಂದ ಕುವಲಾಶ್ವನಿಗೆ ಧುಂಧುವಿನ ವಧೆಯ ಪ್ರೇರಣೆ. 404

190. ತನ್ನ ಪುತ್ರನಾದ ಕುವಲಾಶ್ವನು ಧುಂಧುವಧೆ ಮಾಡುವನೆಂದು ಹೇಳಿ ಬೃಹದಶ್ವನ ವನಗಮನ. ಧುಂಧುಜನ್ಮಕ್ಕೆ ಉಪೋದ್ಘಾತವಾಗಿ ಮಧುಕೈಟಭರ ವೃತ್ತಾಂತ. 417

191. ಮಾರ್ಕಂಡೇಯರಿಂದ ದುಂದುಮಾರೋಪಾಖ್ಯಾನ ಕಥನ 424

192. ಮಾರ್ಕಂಡೇಯರಿಂದ ಪತಿವ್ರತಾ ಮಹಾತ್ಮ್ಯ ಕಥನಾರಂಭ 434

193. ಕೌಶಿಕ ಬ್ರಾಹ್ಮಣರ ತಪಸ್ಸು, ಬಲಾಕ ಪಕ್ಷಿಯ ಪತನ ಮತ್ತು ಪತಿವ್ರತೆಯ ಜೊತೆಯಲ್ಲಿ ಸಂವಾದ. 439

194. 450

195. ಕೌಶಿಕ ಬ್ರಾಹ್ಮಣನಿಗೆ ಧರ್ಮವ್ಯಾಧನಿಂದ ಉಪದೇಶದ ಕಥನ 472

196. ಧರ್ಮವ್ಯಾಧನ ಉಪದೇಶ. ಪುರುಷಪ್ರಯತ್ನವನ್ನು ನಿಂದಿಸಿ ದೈವಸಂಕಲ್ಪದ ಪ್ರಶಂಸೆ. 480

197. ಧರ್ಮವ್ಯಾಧನಿಂದ ಸುಬುದ್ಧಿ ಮತ್ತು ದುರ್ಬುದ್ಧಿಗಳಿಂದ ಉಂಟಾಗುವ ಪರಂಪರೆಯ ಕಥನ. ಸತ್ಸಂಗದಿಂದ ಜ್ಞಾನಲಾಭದ ಕಥನ ಮತ್ತು ಬ್ರಹ್ಮವಿದ್ಯೆಯ ವರ್ಣನೆ. 493

198. ಧರ್ಮವ್ಯಾಧನಿಂದ ಪಂಚಮಹಾಭೂತಗಳ ಗುಣನಿರೂಪಣೆ 499

199. ಧರ್ಮವ್ಯಾಧನಿಂದ ಸತ್ತ್ವಾದಿ ಗುಣದಿಂದ ಉಂಟಾಗುವ ಗುಣಗಳ ವರ್ಣನೆ 505

200. ಧರ್ಮವ್ಯಾಧನಿಂದ ಕೌಶಿಕನನ್ನು ಮನೆಗೆ ಕರೆದುಕೊಂಡು ಹೋಗಿ ತನ್ನ ಮಾತಾಪಿತೃಗಳ ದರ್ಶನ ಮತ್ತು ತಾನು ಅವರಿಗೆ ಮಾಡುವ ಶುಶ್ರೂಷೆಯ ಕಥನ. 518

201. ಧರ್ಮವ್ಯಾಧನಿಂದ ಶೂದ್ರಯೋನಿಗೆ ಕಾರಣವಾದ ತನ್ನ ಪೂರ್ವವೃತ್ತಾಂತ ಕಥನ, ನಾನಾ ಧರ್ಮೋಪದೇಶ. ಕೌಶಿಕನ ಪ್ರತಿನಿವೃತ್ತಿ. ಮಾರ್ಕಂಡೇಯರಿಂದ ಯುಧಿಷ್ಠಿರನನ್ನು ಕುರಿತು ಪತಿವ್ರತಾ ಮಹಾತ್ಮ್ಯ ಕಥನದ ಉಪಸಂಹಾರ 525

202. ಮಾರ್ಕಂಡೇಯರಿಂದ ರಾಜರ ಮಹಿಮೆಯ ಕಥನ. ಸುಹೋತ್ರ ಶಿಬಿ ಕಥಾ 539

203. ಮಾರ್ಕಂಡೇಯರಿಂದ ರಾಜರ ಮಹಿಮೆಯ ಕಥನ - ಯಯಾತಿಯ ಕಥೆ 542

204. ಮಾರ್ಕಂಡೇಯರಿಂದ ರಾಜ ಮಹಿಮೆಯ ಕಥನ–
ಸೇದುಕ ವೃಷದರ್ಭರ ಕಥೆ 544

205. ಮಾರ್ಕಂಡೇಯರಿಂದ ಶಿಬಿಯ ಮಹಿಮೆಯ ಕಥನ –
ಶ್ಯೇನ ಕಪೋತೀ ಉಪಾಖ್ಯಾನ. 547

206. ಮಾರ್ಕಂಡೇಯರಿಂದ ಅಷ್ಟಕನ ಅಶ್ವಮೇಧಯಾಗದ ಪ್ರಸಂಗದಲ್ಲಿ
ಶಿಬಿಯ ಮಾಹಾತ್ಮ್ಯದ ಕಥನ. 556

207. ಮಾರ್ಕಂಡೇಯರಿಂದ ಬಕಮುನಿಗಳ ಮಾಹಾತ್ಮ್ಯದ ಕಥನ. ಇಂದ್ರ-
ಬಕ ಸಮಾಗಮ ಮತ್ತು ಚಿರಜೀವಿಗಳ ಕ್ಲೇಶಗಳ ಕಥನ 565

208. ಮಾರ್ಕಂಡೇಯರಿಂದ ಆಂಗೀರಸೋಪಾಖ್ಯಾನ ಪ್ರಾರಂಭ. ಅಂಗೀರಸರಿಂದ
ಬೃಹಸ್ಪತ್ಯಾಚಾರ್ಯರ ಉತ್ಪತ್ತಿ. ದೇವತೆಗಳಿಂದ ಗುರುತ್ವೇನ ಅವರ ಸ್ವೀಕಾರ.
ಅಗ್ನಿಯಿಂದ ಅಂಗೀರಸರನ್ನು ಪ್ರಥಮಪುತ್ರತ್ವೇನ ಸ್ವೀಕಾರ. ಅಗ್ನಿಗಳ ಉತ್ಪತ್ತಿ 574

209. ಸ್ಕಂದೋತ್ಪತ್ತಿಯ ಉಪೋದ್ಘಾತರೂಪವಾಗಿ ಆಂಗೀರಸ ವಂಶದ ಕಥನ 579

210. ಮಾರ್ಕಂಡೇಯರಿಂದ ಪಾಂಚಜನ್ಯ ಅಗ್ನಿಯ ಉತ್ಪತ್ತಿ ಮತ್ತು
ಅವನ ವಂಶದ ಕಥನ. 587

211. ಮಾರ್ಕಂಡೇಯರಿಂದ ವಿಸ್ತಾರವಾಗಿ ಅಗ್ನಿಗಳ ವಂಶ ಮತ್ತು ಗುಣಗಳ ಕಥನ 591

212. ಮಾರ್ಕಂಡೇಯರಿಂದ ಪುನಃ ಅಗ್ನಿವಂಶದ ಕಥನ 599

213. ಮಾರ್ಕಂಡೇಯರಿಂದ ಕುಮಾರೋತ್ಪತ್ತಿ ಪ್ರಕಾರ ಕಥನ ಪ್ರಾರಂಭ 606

214. ಅರುಂಧತಿಯನ್ನು ಬಿಟ್ಟು ಉಳಿದ ಆರು ಸಪ್ತರ್ಷಿ ಪತ್ನಿಯರ
ವೇಷದಿಂದ ಸ್ವಾಹಾದೇವಿಯಿಂದ ಅಗ್ನಿ ಸಮಾಗಮ.
ಷಣ್ಮುಖನ ಉತ್ಪತ್ತಿ ಮತ್ತು ಅವನ ಪರಾಕ್ರಮ. 618

215. ಸಪ್ತರ್ಷಿಗಳಲ್ಲಿ ಆರುಜನರಿಂದ ತಮ್ಮ ಪತ್ನಿಯರ ಪರಿತ್ಯಾಗ, ವಿಶ್ವಾಮಿತ್ರರಿಂದ ಕುಮಾರನಿಗೆ ಜಾತಕರ್ಮಾದಿ ಸಂಸ್ಕಾರ ಮತ್ತು ನಿಜಸ್ಥಿತಿಯ ಘೋಷಣೆ. ಋಷಿಗಳಿಂದ ಪತ್ನಿಯರ ಸ್ವೀಕಾರ. 627

216. ಇಂದ್ರಸ್ಕಂದರ ಯುದ್ಧ. ಸ್ಕಂದನಿಂದ ಇಂದ್ರನಿಗೆ ಅಭಯದಾನ 632

217. ಸ್ಕಂದಪಾರ್ಷದರ ನಿರೂಪಣೆ 636

218. ಮಾರ್ಕಂಡೇಯರಿಂದ ಮುಂದುವರಿದ ಸ್ಕಂದ ಚರಿತ್ರೆಯ ಕಥನ. ಸ್ಕಂದನಿಗೆ ಸೇನಾಪತ್ಯದಲ್ಲಿ ಅಭಿಷೇಕ ಮತ್ತು ದೇವಸೇನೆಯ ಜೊತೆಯಲ್ಲಿ ವಿವಾಹ 639

219. ಮಾರ್ಕಂಡೇಯರಿಂದ ಸ್ಕಂದನ ಮುಂದಿನ ಚರಿತ್ರೆಯ ಕೀರ್ತನೆ 651

220. ಸ್ಕಂದನಿಂದ ಸ್ವಾಹಾದೇವಿಗೆ ಅಭೀಷ್ಟದಾನ. ಬ್ರಹ್ಮದೇವರಿಂದ ಸ್ಕಂದನ ಜನ್ಮವೃತ್ತಾಂತ ಕಥನ 667

221. ಭದ್ರವಟಕ್ಕೆ ಪಾರ್ವತೀ ಸಹಿತನಾದ ರುದ್ರನ ಮತ್ತು ಉಳಿದ ದೇವತೆಗಳ ಆಗಮನ 673

—0—

ಯಕ್ಷಯುದ್ಧಪರ್ವ

ನೂರ ಐವತ್ನಾಲ್ಕನೆಯ ಅಧ್ಯಾಯ

ಜಟಾಸುರ ವಧೆಯ ನಂತರ ಯುಧಿಷ್ಠಿರನಿಂದ ನರನಾರಾಯಣಾಶ್ರಮದಲ್ಲಿ ವಾಸ. ಅಲ್ಲಿಂದ ವೃಷಪರ್ವಾಶ್ರಮಕ್ಕೂ ಮತ್ತು ಆರ್ಷ್ಟಿಷೇಣಾಶ್ರಮಕ್ಕೂ ಗಮನ.

ವೈಶಂಪಾಯನಃ

ನಿಹತೇ ರಾಕ್ಷಸೇ ತಸ್ಮಿನ್ ಪುನರ್ನಾರಾಯಣಾಶ್ರಮಮ್ ।
ಅಭ್ಯೇತ್ಯ ರಾಜಾ ಕೌಂತೇಯೋ ನಿವಾಹಸಮಕರೋತ್ ಪ್ರಭುಃ ॥೧॥

ವೈಶಂಪಾಯನ– ಆ ರಾಕ್ಷಸನಾದ ಜಟಾಸುರನು ಹತನಾಗುತ್ತಿರಲು ಪ್ರಭುವಾದ ಕುಂತೀಪುತ್ರನಾದ ಧರ್ಮರಾಜನು ನರನಾರಾಯಣಾಶ್ರಮಕ್ಕೆ ಬಂದು ಅಲ್ಲಿ ವಾಸವನ್ನು ಮಾಡಿದನು.

ಸ ಸಮಾನೀಯ ತಾನ್ ಸರ್ವಾನ್ ಭ್ರಾತೄನಿತ್ಯಬ್ರವೀದ್ ವಚಃ ।
ದ್ರೌಪದ್ಯಾ ಸಹಿತಾನ್ ಕಾಲೇ ಸಂಸ್ಮರನ್ ಭ್ರಾತರಂ ಜಯಮ್ ॥೨॥

ಅವನು ದ್ರೌಪದೀ ಸಹಿತವಾಗಿ ಎಲ್ಲಾ ತಮ್ಮಂದಿರನ್ನೂ ಕರೆದು ತಮ್ಮನಾದ ಅರ್ಜುನನನ್ನು ಸ್ಮರಿಸಿಕೊಂಡು ಉಚಿತವಾದ ಕಾಲದಲ್ಲಿ ಹೀಗೆ ಮಾತನಾಡಿದನು.

ಸಮಾಶ್ವತಸ್ಯೋಽಭಿಗತಾಃ ಶಿವೇನ ಚರತಾಂ ವನೇ ।
ಕೃತೋದ್ದೇಶಸ್ತು(ಶಃ ಸ) ಬೀಭತ್ಸುಃ ಪಂಚಮೀಮಭಿತಃ ಸಮಾಮ್ ॥೩॥

ಪ್ರಾಪ್ಯ ಪರ್ವತರಾಜಾನಂ ಶ್ವೇತಂ ಶಿಖಿರಿಣಾಂ ವರಮ್ ।
ತತ್ರಾಪಿ ಚ ಕೃತೋದ್ದೇಶಃ ಸಮಾಗಮದಿದೃಕ್ಷುಭಿಃ ॥೪॥

ಕಾಡಿನಲ್ಲಿ ಕ್ಷೇಮದಿಂದ ವಾಸಿಸುತ್ತಾ ನಾಲ್ಕುವರ್ಷಗಳು ಕಳೆದವು. ಅರ್ಜುನನು ತನ್ನ ಸಂಕಲ್ಪಕ್ಕೆ ಅನುಗುಣವಾಗಿ ಐದನೆಯ ವರ್ಷವನ್ನು ಕಳೆಯುತ್ತಿದ್ದಾನೆ. ಪರ್ವತಶ್ರೇಷ್ಠವಾದ ಶ್ವೇತಪರ್ವತಕ್ಕೆ ಬಂದು ಅಲ್ಲಿ ಅವನನ್ನು ನೋಡಲು ಹಂಬಲಿಸುವ ನಮ್ಮ ಜೊತೆಯಲ್ಲಿ ಅವನು ನಮ್ಮನ್ನು ಸಂಧಿಸುತ್ತಾನೆ.

ಕೃತಶ್ಚ ಸಮಯಸ್ತೇನ ಪಾರ್ಥೇನಾಮಿತತೇಜಸಾ ।
ಪಂಚವರ್ಷಾಣಿ ವತ್ಸ್ಯಾಮಿ ವಿದ್ಯಾರ್ಥೀತಿ ಪುರಾ ಮಯಿ ॥೫॥

ಅಮಿತಪರಾಕ್ರಮಿಯಾದ ಪಾರ್ಥನು ನಾನು ವಿದ್ಯಾರ್ಥಿಯಾಗಿ ಐದು ವರ್ಷ ವಾಸಮಾಡುವೆನು ಎಂದು ನನ್ನ ಬಳಿಯಲ್ಲಿ ಹಿಂದೆ ಪ್ರತಿಜ್ಞೆಮಾಡಿದ್ದಾನೆ.

ತ(ಅ)ತ್ರ ಗಾಂಡೀವಧನ್ವಾನಮವಾಪ್ತಾಸ್ತ್ರಮರಿಂದಮಮ್ ।
ದೇವಲೋಕಾದಿಮಂ ಲೋಕಂ ದ್ರಕ್ಷ್ಯಾಮಃ ಪುನರಾಗತಮ್ ॥೬॥

ಅಲ್ಲಿ ಆ ಶ್ವೇತಪರ್ವತದಲ್ಲಿ ಅಸ್ತ್ರಗಳನ್ನು ಸಂಪಾದಿಸಿ ದೇವಲೋಕದಿಂದ ಹಿಂದಿರುಗಿ ಬಂದ ಶತ್ರುದಮನನಾದ ಗಾಂಡೀವ ಧನುರ್ಧಾರಿಯಾದ ಆ ಅರ್ಜುನನನ್ನು ನಾವು ಪುನಃ ನೋಡುವೆವು.

ವೈಶಂಪಾಯನಃ

ಇತ್ಯುಕ್ತ್ವಾ ಬ್ರಾಹ್ಮಣಾನ್ ಸರ್ವಾನಾಮಂತ್ರಯತ ಪಾಂಡವಃ ।
ಕಾರಣಂ ಚೈವ ತತ್ ತೇಷಾಮಾಚಚಕ್ಷೇ ತಪಸ್ವಿನಾಮ್ ॥೭॥

ತಾನುಗ್ರತಪಸಃ ಪ್ರೀತಾನ್ ಕೃತ್ವಾ ಪಾರ್ಥಾಃ ಪ್ರದಕ್ಷಿಣಮ್ ।
ಬ್ರಾಹ್ಮಣಾಸ್ತೇऽನ್ವಮೋದಂತ ಶಿವೇನ ಕುಶಲೇನ ಚ ॥೮॥

ವೈಶಂಪಾಯನ– ಹೀಗೆ ಹೇಳಿ ಪಾಂಡವನಾದ ಧರ್ಮರಾಜನು ತಪಸ್ವಿಗಳಾದ ಬ್ರಾಹ್ಮಣರಿಗೆ ಅಲ್ಲಿಗೆ ಹೋಗುತ್ತಿರುವ ಕಾರಣವನ್ನು ತಿಳಿಸಿದನು. ಉಗ್ರತಪಸ್ವಿಗಳಾದ ಪ್ರಸನ್ನರಾದ ಆ ಬ್ರಾಹ್ಮಣರಿಗೆ ಅಲ್ಲಿದ್ದ ಪಾಂಡವರೆಲ್ಲರೂ ನಮಸ್ಕಾರವನ್ನು ಮಾಡಿದರು.

ಆ ಬ್ರಾಹ್ಮಣರು ನಿಮಗೆ ಮಂಗಳವಾಗಲಿ ಮತ್ತು ನಿರ್ವಿಘ್ನವಾಗಲಿ ಎಂದು ಅವರ ಪ್ರಯಾಣಕ್ಕೆ ಅನುಮತಿಯನ್ನು ಕೊಟ್ಟರು.

ಬ್ರಾಹ್ಮಣಾಃ

ಸುಖೋದರ್ಕಮಿಮಂ ಕ್ಲೇಶಮಚಿರಾದ್ ಭರತರ್ಷಭ ।
ಕ್ಷತ್ರಧರ್ಮೇಣ ಧರ್ಮಜ್ಞ ತೀರ್ತ್ವಾ ಗಾಂ ಪಾಲಯಿಷ್ಯಸಿ ॥೯॥

ಬ್ರಾಹ್ಮಣ– ಎಲೈ ಭರತರ್ಷಭನೇ, ನೀನು ಸುಖಕ್ಕಿಂತ ಉತ್ಕೃಷ್ಟವಾದ ಈ ಕ್ಲೇಶವನ್ನು ಬೇಗ ಕಳೆದು, ಧರ್ಮಜ್ಞನೇ, ನೀನು ಕ್ಷತ್ರಿಯ ಧರ್ಮಕ್ಕೆ ಅನುಗುಣವಾಗಿ ಭೂಮಿಯನ್ನು ಪಾಲಿಸುವಿ.

ವೈಶಂಪಾಯನಃ

ತತ್ ತು ರಾಜಾ ವಚಸ್ತೇಷಾಂ ಪ್ರತಿಗೃಹ್ಯ ತಪಸ್ವಿನಾಮ್ ।
ಪ್ರತಸ್ಥೇ ಸಹ ಏಪ್ಸೈರ್ಭ್ರಾತೃಭಿಶ್ಚ ಪರಂತಪಃ ॥೧೦॥

ದ್ರೌಪದ್ಯಾ ಸಹಿತಃ ಶ್ರೀಮಾನ್ ಹೈಡಿಂಬೇಯಾದಿಭಿಸ್ತದಾ ।
ರಾಕ್ಷಸೈರನುಯಾತೋ ವೈ ಲೋಮಶೇನಾಭಿರಕ್ಷಿತಃ ॥೧೧॥

ವೈಶಂಪಾಯನ– ಪರಂತಪನಾದ ಧರ್ಮರಾಜನಾದರೂ ತಪಸ್ವಿಗಳ ಆ ಮಾತನ್ನು ಸ್ವೀಕರಿಸಿ ಕಾಂತಿಯುಕ್ತನಾದ ಅವನು ದ್ರೌಪದಿಯಿಂದ ಸಹಿತನಾಗಿ ಘಟೋತ್ಕಚ ಮೊದಲಾದ ರಾಕ್ಷಸರಿಂದ ಅನುಗತನಾಗಿ ಲೋಮಶರಿಂದ ರಕ್ಷಿತನಾಗಿ ತಮ್ಮಂದಿರೊಡನೆ ಅಲ್ಲಿಂದ ಹೊರಟನು.

ಕ್ವಚಿತ್ ಪದ್ಭ್ಯಾಂ ತತೋಽಗಚ್ಛದ್ ರಾಕ್ಷಸೈರುಹ್ಯತೇ ಕ್ವಚಿತ್ ।
ತತ್ರ ತತ್ರ ಮಹಾತೇಜಾ ಭ್ರಾತೃಭಿಃ ಸಹ ಸುವ್ರತಃ ॥೧೨॥

ಮಹಾತೇಜಸ್ವಿಯೂ ಒಳ್ಳೆಯ ವ್ರತವನ್ನು ಧರಿಸಿದವನೂ ಆದ ಧರ್ಮರಾಜನು ತಮ್ಮಂದಿರ ಜೊತೆಯಲ್ಲಿ ಕೆಲವು ಕಡೆ ಕಾಲಿನಿಂದಲೇ ನಡೆದನು. ಇನ್ನು ಕೆಲವು ಕಡೆ ರಾಕ್ಷಸರು ಅವನನ್ನು ಎತ್ತಿಕೊಂಡು ನಡೆಯುತ್ತಿದ್ದರು.

ತತೋ ಯುಧಿಷ್ಠಿರೋ ರಾಜಾ ಬಹೂನ್ ಕ್ಲೇಶಾನ್ ವಿಚಿಂತಯನ್ ।
ಸಿಂಹವ್ಯಾಘ್ರಗಜಾಕೀರ್ಣಾಮುದೀಚೀಂ ಪ್ರಯಯೌ ದಿಶಮ್ ॥೧೩॥

ಆಗ ರಾಜನಾದ ಯುಧಿಷ್ಠಿರನು ಅನುಭವಿಸಿದ ಅನೇಕ ಕ್ಲೇಶಗಳನ್ನು ಸ್ಮರಿಸುತ್ತಾ ಸಿಂಹ, ವ್ಯಾಘ್ರ, ಗಜಗಳಿಂದ ತುಂಬಿದ ಈಶಾನ್ಯದಿಕ್ಕನ್ನು ಕುರಿತು ಹೊರಟನು.

ಅವೇಕ್ಷಮಾಣಃ ಕೈಲಾಸಂ ಮೈನಾಕಂ ಚೈವ ಪರ್ವತಮ್ ।
ಗಂಧಮಾದನಪಾದಾಂಶ್ಚ ಶ್ವೇತಂ ಚಾಪಿ ಶಿಲೋಚ್ಚಯಮ್ ॥೧೪॥

ಕೈಲಾಸಪರ್ವತವನ್ನೂ, ಮೈನಾಕಪರ್ವತವನ್ನೂ, ಗಂಧಮಾದನ ಪರ್ವತದ ತಪ್ಪಲು ಪ್ರದೇಶವನ್ನೂ, ಶ್ವೇತಪರ್ವತದ ಶಿಲಾರಾಶಿಯನ್ನೂ ನೋಡುತ್ತಾ ಮುಂದೆ ನಡೆದನು.

ಉಪರ್ಯುಪರಿ ಶೈಲಸ್ಯ ಬಹ್ವೀಶ್ಚ ಸರಿತಃ ಶಿವಾಃ ।
ಪೃಷ್ಠಂ ಹಿಮವತಃ ಪುಣ್ಯಂ ಯಯೌ ಸಪ್ತದಶೇऽಹನಿ ॥೧೫॥

ಪರ್ವತದ ಮೇಲ್ಭಾಗಗಳಲ್ಲಿ ಶುಭಪ್ರದವಾದ ಅನೇಕ ನದಿಗಳನ್ನು ನೋಡುತ್ತಾ ಹದಿನೇಳನೆಯ ದಿವಸ ಪವಿತ್ರವಾದ ಹಿಮಾಲಯದ ತಪ್ಪಲನ್ನು ಸೇರಿದನು.

ದದೃಶುಃ ಪಾಂಡವಾ ರಾಜನ್ ಗಂಧಮಾದನಮಂತಿಕಾತ್ ।
ಪೃಷ್ಠೇ ಹಿಮವತಃ ಪುಣ್ಯೇ ನಾನಾದ್ರುಮಲತಾವೃತೇ ॥೧೬॥

ಪಾಂಡವರು ಹಿಮಾಲಯದ ತಪ್ಪಲಿನ ಸಮೀಪದಲ್ಲಿದ್ದ ಅನೇಕ ವೃಕ್ಷಗಳಿಂದ ಮತ್ತು ಲತೆಗಳಿಂದ ಕೂಡಿದ ಗಂಧಮಾದನ ಪರ್ವತವನ್ನು ನೋಡಿದರು.

ಸಲಿಲಾವರ್ತಸಂಜಾತೈಃ ಪುಷ್ಪಿತೈಶ್ಚ ಮಹೀರುಹೈಃ ।
ಸಮಾವೃತಂ ಪುಣ್ಯತಮಮಾಶ್ರಮಂ ವೃಷಪರ್ವಣಃ ॥೧೭॥

ಅನೇಕ ನದಿಗಳ ಸುಳಿಗಳಿಂದಲೂ ಮತ್ತು ಪುಷ್ಪಿತವಾದ ವೃಕ್ಷಗಳ ಸಮೂಹದಿಂದಲೂ ಸುತ್ತುವರಿಯಲ್ಪಟ್ಟಂತಹ ವೃಷಪರ್ವ ರಾಜರ್ಷಿಯ ಆಶ್ರಮವನ್ನು ನೋಡಿದರು.

ತಮುಪಾಗಮ್ಯ ರಾಜರ್ಷಿಂ ಧರ್ಮಾತ್ಮಾನಮರಿಂದಮಾಃ ।
ಪಾಂಡವಾ ವೃಷಪರ್ವಾಣಮವಂದಂತ ಗತಕ್ಲಮಾಃ ॥೧೮॥

ಅರಿಂದಮರಾದ ಪಾಂಡವರು ಆಶ್ರಮದರ್ಶನದಿಂದಲೇ ತಮ್ಮ ಶ್ರಮವನ್ನು ಕಳೆದುಕೊಂಡವರಾಗಿ ಆಶ್ರಮಕ್ಕೆ ಬಂದು ರಾಜರ್ಷಿಯಾದ ವೃಷಪರ್ವನಿಗೆ ನಮಸ್ಕಾರವನ್ನು ಮಾಡಿದರು.

ಅಭ್ಯನಂದತ್ ಸ ರಾಜರ್ಷಿಃ ಪುತ್ರವದ್ ಭರತರ್ಷಭಾನ್ ।
ಪೂಜಿತಾಶ್ಚಾವಸಂಸ್ತತ್ರ ಸಪ್ತರಾತ್ರಮರಿಂದಮಾಃ ॥೧೯॥

ಆ ರಾಜರ್ಷಿಯು ತನ್ನ ಮಕ್ಕಳಂತೆ ಭರತಶ್ರೇಷ್ಠರನ್ನು ಅಭಿನಂದಿಸಿದನು. ಅರಿಂದಮರಾದ ಪಾಂಡವರು ಅವನಿಂದ ಪೂಜಿತರಾಗಿ ಅಲ್ಲಿ ಏಳು ರಾತ್ರಿಗಳ ಕಾಲ ವಾಸಮಾಡಿದರು.

ಅಷ್ಟಮೇಽಹನಿ ಸಂಪ್ರಾಪ್ತೇ ತಮೃಷಿಂಲೋಕವಿಶ್ರುತಮ್ ।
ಆಮಂತ್ರ್ಯ ವೃಷಪರ್ವಾಣಂ ಪ್ರಸ್ಥಾನಂ ಪ್ರತ್ಯರೋಚಯನ್ ॥೨೦॥

ಎಂಟನೆಯ ದಿವಸವು ಪ್ರಾಪ್ತವಾದಾಗ ಅವರು ಲೋಕವಿಖ್ಯಾತನಾದ ಆ ವೃಷಪರ್ವ ಋಷಿಯ ಅನುಮತಿಯನ್ನು ಪಡೆದು ಮುಂದೆ ಪ್ರಯಾಣ ಮಾಡಲು ಬಯಸಿದರು.

ಏಕೈಕಶಶ್ಚ ತಾನ್ ವಿಪ್ರಾನ್ ನಿವೇದ್ಯ ವೃಷಪರ್ವಣೆ ।
ನ್ಯಾಸಭೂತಾನ್ ಯಥಾಕಾಲಂ ಬಂಧೂನಿವ ಸುಸತ್ಕೃತಾನ್ ॥೨೧॥

ಅವರು ತಮ್ಮ ಬಳಿಯಲ್ಲಿ ರಕ್ಷಣೆಗಾಗಿ ನ್ಯಾಸವಾಗಿದ್ದು, ತಮ್ಮಿಂದ ಆಯಾ ಕಾಲದಲ್ಲಿ ಬಂಧುಗಳಂತೆ ಸುಸತ್ಕೃತರಾದ ಒಬ್ಬೊಬ್ಬ ಬ್ರಾಹ್ಮಣರನ್ನೂ ವೃಷಪರ್ವನಿಗೆ ಪರಿಚಯ ಮಾಡಿಕೊಟ್ಟರು.

ಪಾರಿಬರ್ಹಂ ಚ ತಂ ಶೇಷಂ ಪರಿದಾಯ ಮಹಾತ್ಮನೇ ।
ತತಸ್ತೇ ಯಜ್ಞಪಾತ್ರಾಣಿ ರತ್ನಾನ್ಯಾಭರಣಾನಿ ಚ ।
ನ್ಯದಧುಃ ಪಾಂಡವಾ ರಾಜನ್ನಾಶ್ರಮೇ ವೃಷಪರ್ವಣಃ ॥೨೨॥

ಅನಂತರ ಪಾಂಡವರು ತಮ್ಮಲ್ಲಿದ್ದ ಹೆಚ್ಚಿನ ವಸ್ತ್ರಗಳನ್ನೂ, ಯಜ್ಞಪಾತ್ರೆಗಳನ್ನೂ, ರತ್ನಗಳನ್ನೂ ಮತ್ತು ಆಭರಣಗಳನ್ನೂ ವೃಷಪರ್ವನ ಆಶ್ರಮದಲ್ಲಿಯೇ ಇಟ್ಟರು.

ಅತೀತಾನಾಗತೇ ವಿದ್ವಾನ್ ಕುಶಲಃ ಸರ್ವಧರ್ಮವಿತ್ ।
ಅನ್ವಶಾಸತ್ ಸ ಧರ್ಮಜ್ಞಃ ಪುತ್ರವದ್ ಭರತರ್ಷಭಾನ್ ॥೨೩॥

ಅತೀತಾನಾಗತ ಜ್ಞಾನಿಯಾದ, ಧರ್ಮಜ್ಞನಾದ, ಸರ್ವಧರ್ಮವನ್ನೂ ತಿಳಿದ, ವಿದ್ವಾಂಸನಾದ, ನಿಪುಣನಾದ ವೃಷಪರ್ವನು ಆ ಭರತರ್ಷಭರಿಗೆ ತನ್ನ ಮಕ್ಕಳಂತೆ ಉಪದೇಶ ಮಾಡಿದನು.

ತೇಽನುಜ್ಞಾತಾ ಮಹಾತ್ಮಾನಃ ಪ್ರಯಯುರ್ದಿಶಮುತ್ತರಾಮ್ ।
ಕೃಷ್ಣಯಾ ಸಹಿತಾ ವೀರಾ ಬ್ರಾಹ್ಮಣೈಶ್ಚ ಮಹಾತ್ಮಭಿಃ ॥೨೪॥

ವೃಷಪರ್ವನಿಂದ ಅನುಮತಿಯನ್ನು ಪಡೆದ ಆ ಮಹಾತ್ಮರಾದ ವೀರರು, ಮಹಾತ್ಮರಾದ ಬ್ರಾಹ್ಮಣರೊಡಗೂಡಿ ದ್ರೌಪದಿಯಿಂದ ಸಹಿತರಾಗಿ ಉತ್ತರ ದಿಕ್ಕಿಗೆ ಹೊರಟರು.

ತಾನ್ ಪ್ರಸ್ಥಿತಾನಭ್ಯಗಚ್ಛದ್ ವೃಷಪರ್ವಾ ಮಹೀಪತಿಃ ।
ಉಪನ್ಯಸ್ಯ ಮಹಾತೇಜಾ ವಿಪ್ರೇಭ್ಯಃ ಪಾಂಡವಾಂಸ್ತದಾ ॥೨೫॥

ರಾಜರ್ಷಿಯೂ, ಮಹಾತೇಜಸ್ವಿಯೂ ಆದ ವೃಷಪರ್ವನು ಪಾಂಡವರನ್ನು ಜೊತೆಯಲ್ಲಿ ಹೊರಟ ಬ್ರಾಹ್ಮಣರಿಗೆ ಒಪ್ಪಿಸಿ ಅವರ ಜೊತೆಯಲ್ಲಿ ಹೊರಟನು.

ಅನುಸಂಸಾರ್ಯ ಕೌಂತೇಯಾನಾಶೀರ್ಭಿರಭಿನಂದ್ಯ ಚ ।
ವೃಷಪರ್ವಾ ನಿವವೃತೇ ಪಂಥಾನಮುಪದಿಶ್ಯ ಚ ॥೨೬॥

ವೃಷಪರ್ವನು ಕೌಂತೇಯರ ಜೊತೆಯಲ್ಲಿ ಸ್ವಲ್ಪ ದೂರ ಹೋಗಿ ಅವರನ್ನು ಆಶೀರ್ವಾದಗಳಿಂದ ಅಭಿನಂದಿಸಿ ಅವರಿಗೆ ಮಾರ್ಗವನ್ನು ಉಪದೇಶ ಮಾಡಿ ಅಲ್ಲಿಂದ ಹಿಂದಿರುಗಿದನು.

ನಾನಾಮೃಗಗಣೈರ್ಜುಷ್ಟಂ ಕೌಂತೇಯಃ ಸತ್ಯವಿಕ್ರಮಃ ।
ಪದಾತಿರ್ಭ್ರಾತೃಭಿಃ ಸಾರ್ಧಂ ಪ್ರಾತಿಷ್ಠತ ಯುಧಿಷ್ಠಿರಃ ॥೨೭॥

ಸತ್ಯವಿಕ್ರಮನಾದ ಕುಂತೀಪುತ್ರನಾದ ಯುಧಿಷ್ಠಿರನು ನಾನಾ ಮೃಗಗಳಿಂದ ಕೂಡಿದ ಮಾರ್ಗದಲ್ಲಿ ತಮ್ಮಂದಿರಿಂದ ಸಹಿತನಾಗಿ ಕಾಲುನಡಿಗೆಯಿಂದಲೇ ಮುಂದೆ ಹೊರಟನು.

ನಾನಾದ್ರುಮನಿರೋಧೇಷು ವಸಂತಃ ಶೈಲಸಾನುಷು ।
ಪರ್ವತಂ ವಿವಿಶುಃ ಶ್ವೇತಂ ಚತುರ್ಥೇಽಹನಿ ಪಾಂಡವಾಃ ॥೨೮॥

ಪರ್ವತದ ಪ್ರದೇಶಗಳಲ್ಲಿ ಅನೇಕ ಮರಗಳ ಸಮೂಹದಲ್ಲಿ ಪಾಂಡವರು ವಾಸವನ್ನು ಮಾಡುತ್ತಾ ನಾಲ್ಕನೆಯ ದಿವಸ ಶ್ವೇತಪರ್ವತವನ್ನು ತಲುಪಿದರು.

ಮಹಾಭ್ರಘನಸಂಕಾಶಂ ಸಲಿಲೋಪಹಿತಂ ಶುಭಮ್ ।
ಮಣಿಕಾಂಚನರೂಪ್ಯಸ್ಯ ಶಿಲಾನಾಂ ಚ ಸಮುಚ್ಚಯಮ್ ॥೨೯॥

ರೂಪಂ ಹಿಮವತಃ ಪ್ರಸ್ಥಂ ಬಹುಕಂದರನಿರ್ಝರಮ್ ।
ಶಿಲಾವಿಭಂಗವಿಕಟಂ ಲತಾಪಾದಪಸಂಕುಲಮ್ ॥೩೦॥

ಅವರು ದೊಡ್ಡ ಮೋಡಗಳ ರಾಶಿಯಂತಿದ್ದ, ಎಲ್ಲ ಕಡೆಯಿಂದಲೂ ಜಲದಿಂದ ತುಂಬಿದ, ಶುಭಪ್ರದವಾದ ಮಣಿ, ಸುವರ್ಣ, ರಜತಮಯವಾದ ಶಿಲೆಗಳ ರಾಶಿಗಳನ್ನು ಹೊಂದಿದ್ದ, ಹಿಮದಿಂದ ಕೂಡಿದ, ಅನೇಕ ಗುಹೆಗಳುಳ್ಳ, ಲತಾ ಸಂಕುಲವಾದ, ಅನೇಕವಿಧವಾದ ಶಿಲೆಗಳಿಂದ ಮನೋಹರವಾದ ಆ ಎತ್ತರದ ಪ್ರದೇಶವನ್ನು ಪ್ರವೇಶಿಸಿದರು.

ತೇ ಸಮಾಸಾದ್ಯ ಪಂಥಾನಂ ಯಥೋಕ್ತಂ ವೃಷಪರ್ವಣಾ ।
ಅನುಸಸ್ರುರ್ಯಥೋದ್ದೇಶಂ ಪಶ್ಯಂತೋ ವಿವಿಧಾನ್ನಗಾನ್ ॥೩೧॥

ಅವರು ವೃಷಪರ್ವನಿಂದ ಉಪದಿಷ್ಟವಾದ ಮಾರ್ಗದಲ್ಲಿ ಎತ್ತರ ಎತ್ತರಗಳಲ್ಲಿ ಅನೇಕ ಪರ್ವತಗಳನ್ನು ನೋಡುತ್ತಾ ಮುಂದೆ ನಿಧಾನವಾಗಿ ಸಾಗಿದರು.

ಉಪರ್ಯುಪರಿ ಶೈಲಸ್ಯ ಗುಹಾಃ ಪರಮದುರ್ಗಮಾಃ ।
ಸುದುರ್ಗಮಾಂಸ್ತೇ ಸುಬಹೂನ್ ಸುಖೇನೈವಾಭಿಚಕ್ರಮುಃ ॥೩೨॥

ಪರ್ವತದ ಮೇಲ್ಭಾಗಗಳಲ್ಲಿ ಅತ್ಯಂತ ದುರ್ಗಮವಾದ ಗುಹೆಗಳಿದ್ದವು. ಅವರು ಅಂತಹ ಅನೇಕ ಗುಹೆಗಳನ್ನು ಅನಾಯಾಸದಿಂದ ದಾಟಿ ಮುಂದೆ ಹೋದರು.

ಧೌಮ್ಯಃ ಕೃಷ್ಣಾ ಚ ಪಾರ್ಥಾಶ್ಚ ಲೋಮಶಶ್ಚ ಮಹಾನೃಷಿಃ ।
ಅಗಚ್ಛನ್ ಸಹಿತಾಸ್ತತ್ರ ನ ಕಶ್ಚಿದವಹೀಯತೇ ॥೩೩॥

ಧೌಮ್ಯರು, ದ್ರೌಪದಿ, ಪಾಂಡವರು ಮತ್ತು ಮಹರ್ಷಿಗಳಾದ ಲೋಮಶರು ಎಲ್ಲರೂ ಜೊತೆಯಲ್ಲಿಯೇ ಹೋದರು. ಯಾರೂ ಹಿಂದೆ ಉಳಿಯಲಿಲ್ಲ.

ತೇ ಮೃಗದ್ವಿಜಸಂಘುಷ್ಟಂ ನಾನಾದ್ರುಮಲತಾಯುತಮ್ ।
ಶಾಖಾಮೃಗಗಣೈಶ್ಚೈವ ಸೇವಿತಂ ಸುಮನೋರಮಮ್ ॥೩೪॥

ಪುಣ್ಯಂ ಪದ್ಮಸರೋಯುಕ್ತಂ ಸಪಲ್ವಲಮಹಾವನಮ್ ।
ಉಪತಸ್ಥುರ್ಮಹಾಭಾಗಾ ಮಾಲ್ಯವಂತಂ ಮಹಾಗಿರಿಮ್ ॥೩೫॥

ಆ ಮಹಾನುಭಾವರು ನಾನಾ ಮೃಗಪಕ್ಷಿಗಳಿಂದ ತುಂಬಿದ, ನಾನಾ ವೃಕ್ಷ ಲತೆಗಳಿಂದ ತುಂಬಿದ, ಅನೇಕ ಕಪಿಗಳಿಂದ ಸೇವಿತವಾದ, ಪದ್ಮಸರೋವರದಿಂದ ಯುಕ್ತವಾದ, ಶೀತಲ ಭೂಪ್ರದೇಶದಿಂದ ಯುಕ್ತವಾದ, ಅತ್ಯಂತ ಮನೋಹರವಾದ ಪವಿತ್ರವಾದ ಮಾಲ್ಯವಾನ್ ಮಹಾಪರ್ವತವನ್ನು ತಲುಪಿದರು.

ತತಃ ಕಿಂಪುರುಷಾವಾಸಂ ಸಿದ್ಧಚಾರಣಸೇವಿತಮ್ ।
ದದೃಶುರ್ಹೃಷ್ಟರೋಮಾಣಃ ಪರ್ವತಂ ಗಂಧಮಾದನಮ್ ॥೩೬॥

ವಿದ್ಯಾಧರಾನುಚರಿತಂ ಕಿನ್ನರೀಭಿಸ್ತಥೈವ ಚ ।
ಗಜಸಂಘಸಮಾವಾಸಂ ಸಿಂಹವ್ಯಾಘ್ರಗಣಾಯುತಮ್ ।
ಶರಭೋನ್ನಾದಸಂಘುಷ್ಟಂ ನಾನಾಮೃಗನಿಷೇವಿತಮ್ ॥೩೭॥

ಅಲ್ಲಿಂದ ಮುಂದೆ ಕಿಂಪುರುಷರ ವಾಸಸ್ಥಾನವಾದ, ಸಿದ್ಧಚಾರಣರಿಂದ ಸೇವಿತರಾದ ವಿದ್ಯಾಧರ ಮತ್ತು ಕಿನ್ನರಿಯರ ಸಂಚಾರವಿರುವ, ಆನೆಯ ಸಮೂಹಗಳಿಂದಲೂ, ಸಿಂಹ ವ್ಯಾಘ್ರಗಳ ಸಮೂಹದಿಂದಲೂ ಕೂಡಿದ, ನಾನಾ ಮೃಗಗಳಿಂದ ನಿಶೇವಿತವಾದ, ಶರಭ ಮೃಗಗಳ ಗರ್ಜನೆಗಳಿಂದ ಕೂಡಿದ, ಗಂಧಮಾದನ ಪರ್ವತವನ್ನು ರೋಮಾಂಚಿತರಾಗಿ ನೋಡಿದರು.

ತೇ ಗಂಧಮಾದನವನಂ ತನ್ನಂದನವನೋಪಮಮ್ ।
ಮುದಿತಾಃ ಪಾಂಡುತನಯಾ ಮನೋಹೃದಯನಂದನಮ್ ॥೩೮॥

ವಿವಿಶುಃ ಕ್ರಮಶೋ ವೀರಾಃ ಶರಣ್ಯಂ ಶುಭಕಾನನಮ್ ॥೩೯॥

ವೀರರಾದ ಪಾಂಡುತನಯರು ಸಂತೋಷದಿಂದ ಕೂಡಿದವರಾಗಿ ನಂದನ ವನದಂತಿದ್ದ ಮನೋಹೃದಯ ಸಂತೋಷಕಾರಿಯಾದ, ಶುಭವಾದ, ಎಲ್ಲರಿಗೂ ಆಶ್ರಯವನ್ನು ಕೊಡುವ. ಆ ಗಂಧಮಾದನ ಪರ್ವತದ ವನವನ್ನು ಕ್ರಮವಾಗಿ ಪ್ರವೇಶಿಸಿದರು.

ದ್ರೌಪದೀಸಹಿತಾ ವೀರಾಸ್ತೈಶ್ಚ ವಿಪ್ರೈರ್ಮಹಾತ್ಮಭಿಃ ।
ಶೃಣ್ವಂತಃ ಪ್ರೀತಿಜನನಾನ್ ವಲ್ಗೂನ್ ಮದಕಾಲಾಂಛುಭಾನ್ ॥೪೦॥

ದ್ರೌಪದಿಯಿಂದಲೂ ಮತ್ತು ಮಹಾತ್ಮರಾದ ಬ್ರಾಹ್ಮಣರಿಂದಲೂ ಸಹಿತರಾದ ಆ ವೀರರು ಮನಸ್ಸಿಗೆ ಸಂತೋಷವನ್ನು ಕೊಡುವ ಮಧುರವಾದ ಪಕ್ಷಿಗಳ ಸ್ವರವನ್ನು ಕೇಳುತ್ತಾ ಮುಂದೆ ನಡೆದರು.

ಶ್ರೋತ್ರರಮ್ಯಾನ್ ಸುಮಧುರಾನ್ ಶಬ್ದಾನ್ ಖಗಮುಖೇರಿತಾನ್ ।
ಸರ್ವರ್ತುಫಲಭಾರಾಢ್ಯಾನ್ ಸರ್ವರ್ತುಕುಸುಮೋಜ್ಜ್ವಲಾನ್ ॥೪೧॥

ಪಶ್ಯಂತಃ ಪಾದಪಾಂಶ್ಚಾಪಿ ಫಲಭಾರಾವನಾಮಿತಾನ್ ।
ಆಮ್ರಾನಾಮ್ರಾತಕಾನ್ ಭವ್ಯಾನ್ ನಾರಿಕೇಲಾನ್ ಸತಿಂದುಕಾನ್ ॥೪೨॥

ಅನೇಕ ಪಕ್ಷಿಗಳಿಂದ ಉಚ್ಚರಿಸಲ್ಪಟ್ಟ ಶ್ರೋತ್ರ ಮಧುರವಾದ ಶಬ್ದಗಳನ್ನು ಕೇಳುತ್ತಾ ಎಲ್ಲ ಋತುಗಳಲ್ಲಿಯೂ ಫಲಪುಷ್ಪಗಳನ್ನು ಕೊಡುವ ಫಲಭಾರದಿಂದ ಬಗ್ಗಿರುವ ಆಮ್ರ ಆಮ್ರಾಂತಕ, ನಾರಿಕೇಳ, ತಿಂಧುಕ ಮೊದಲಾದ ಭವ್ಯವಾದ ಮರಗಳನ್ನು ನೋಡುತ್ತಾ ಅವರು ಪ್ರವೇಶಿಸಿದರು.

ಮುಂಜಾತಕಾಂಸ್ತಧಾಂಜೀರಾನ್ ದಾಡಿಮಾನ್ ಬೀಜಪೂರಕಾನ್ ।
ಪನಸಾಂಲ್ಲಕುಚಾನ್ ಮೋಚಾನ್ ಖರ್ಜೂರಾನಾಮ್ಲವೇತಸಾನ್ ॥

ಪಾರಾವತಾಂಸ್ತಥಾ ಕ್ವಿದ್ಯಾನ್ ನೀಪಾಂಶ್ಚಾಪಿ ಮನೋರಮಾನ್ ।
ಬಿಲ್ವಾನ್ ಕಪಿತ್ಥಾನ್ ಜಂಬೂಂಶ್ಚ ಕಾಶ್ಮರೀರ್ಬದರೀಸ್ತಥಾ ॥೪೪॥

ಮುಂಜಾತಕ ಅಂಜೀರ ದಾಡಿಮ ಬೀಜಪೂರಕ ಪನಸ ಲಕುಚ ಮೋಚ ಖರ್ಜೂರ ಅನಾಮ್ಲವೇತಸ ಪಾರಾವತ ಕ್ಷೌದ್ರ ಮನೋಹರವಾದ ನೀಪ ಬಿಲ್ವಕಪಿತ್ಥ ಜಂಬೂ ಕಾಶ್ಮರೀ ಬದರೀ;

ಪ್ಲಕ್ಷಾನುದುಂಬರಾವಟಾನಶ್ವತ್ಥಾನ್ ಕ್ಷೀರಿಕಾಂಸ್ತಥಾ ।
ಭಲ್ಲಾತಕಾನಾಮಲಕೀರ್ಹರೀತಕವಿಭೀತಕಾನ್ ॥೪೫॥

ಪ್ಲಕ್ಷ, ಉದುಂಬರ, ವಟ, ಅಶ್ವತ್ಥ, ಕ್ಷೀರಿಕ, ಭಲ್ಲಾತಕ, ಆಮಲಕ, ಹರೀತಕ, ವಿಭೀತಕ;

ಇಂಗುದಾನ್ ಕರಮರ್ದಾಂಶ್ಚ ತಿಂದುಕಾಂಶ್ಚ ಮಹಾಫಲಾನ್ ।
ಏತಾನನ್ಯಾಂಶ್ಚ ವಿವಿಧಾನ್ ಗಂಧಮಾದನಸಾನುಷು ।
ಫಲೈರಮೃತಕಲ್ಪೈಸ್ತಾನಾಚಿತಾನ್ ಸ್ವಾದುಭಿಸ್ತರೂನ್ ॥೪೬॥

ಇಂಗುದ, ಕರಮರ್ದ, ತಿಂದುಕ ಮೊದಲಾದ ಇನ್ನೂ ಅನೇಕ ಫಲಭರಿತವಾದ ವೃಕ್ಷಗಳನ್ನು ಗಂಧಮಾದನ ಪರ್ವತದ ಶಿಖರಗಳಲ್ಲಿ ಅವರು ನೋಡಿದರು. ಆ ವೃಕ್ಷಗಳು ಅಮೃತಕಲ್ಪವಾದ ರಸಗಳನ್ನು ಹೊಂದಿದ ಫಲಗಳಿಂದ ತುಂಬಿ ಸೂಸುತ್ತಿದ್ದವು.

ತಥೈವ ಚಂಪಕಾಶೋಕಾನ್ ಕೇತಕಾನ್ ಬಕುಲಾಂಸ್ತಥಾ ॥೪೭॥

ಪುನ್ನಾಗಾನ್ ಸಪ್ತಪರ್ಣಾಂಶ್ಚ ಕರ್ಣಿಕಾರಾನ್ ಸಕೇತಕಾನ್ ।
ಪಾಟಲಾನ್ ಕುಟಜಾನ್ ರಮ್ಯಾನ್ ಮಂದಾರೇಂದೀವರಾಂಸ್ತಥಾ ।
ಪಾರಿಜಾತಾನ್ ಕೋವಿದಾರಾನ್ ದೇವದಾರುದ್ರುಮಾಂಸ್ತಥಾ ।
ಶಾಲಾಂಸ್ತಾಲಾಂಸ್ತಮಾಲಾಂಶ್ಚ ಪಿಪ್ಪಲಾನ್ ಹಿಂಗುಕಾಂಸ್ತಥಾ ।
ಶಾಲ್ಮಲೀಃ ಕಿಂಶುಕಾಶೋಕಾನ್ ಶಿಂಶಪಾಃ ಸರಲಾಂಸ್ತಥಾ ॥೪೯॥

ಅದರಂತೆ; ಪುನ್ನಾಗ, ಸಪ್ತಪರ್ಣ, ಕರ್ಣಿಕಾರ, ಕೇತಕ, ಪಾಟಲ, ಕುಟಜ, ರಮ್ಯ, ಮಂದಾರ, ಇಂದೀವರ, ಪಾರಿಜಾತ, ಕೋವಿದಾರ, ದೇವದಾರು, ಶಾಲ, ತಾಲ, ತಮಾಲ, ಪಿಪ್ಪಲ, ಹಿಂಗುಕ, ಶಾಲ್ಮಲಿ, ಕಿಂಶುಕ, ಅಶೋಕ, ಶಿಂಶಪ, ಸರಳ ಮೊದಲಾದ ಪುಷ್ಪವಲ್ಲಿಗಳಿಂದ ಕೂಡಿದ ವೃಕ್ಷಗಳಿಂದ ಕೂಡಿದ ವನವನ್ನು ನೋಡಿದರು.

ಚಕೋರೈಃ ಶತಪತ್ರೈಶ್ಚ ಭೃಂಗರಾಜೈಸ್ತಥಾ ಶುಕೈಃ ॥೫೦॥

ಕೋಕಿಲೈಃ ಕಲವಿಂಕೈಶ್ಚ ಹಾರೀತೈರ್ಜೀವಜೀವಿಕೈಃ ।
ಪ್ರಿಯಕೈಶ್ಚಾತಕೈಶ್ಚೈವ ತಥಾನ್ಯೈರ್ವಿವಿಧೈಃ ಖಗೈಃ ।
ಶ್ರೋತ್ರರಮ್ಯಂ ಸುಮಧುರಂ ಕೂಜದ್ಭಿಶ್ಚಾಪ್ಯಧಿಷ್ಠಿತಾನ್ ॥೫೧॥

ಚಕೋರ, ಶತಪತ್ರ, ಭೃಂಗರಾಜ, ಶುಕ, ಕೋಕಿಲ, ಕಲವಿಂಕ, ಹಾರೀತ, ಚಕೋರ, ಪ್ರಿಯಕ, ಚಾತಕ ಮತ್ತು ಇನ್ನೂ ಅನೇಕ ವಿಧವಿಧವಾದ ಕರ್ಣಮನೋಹರವಾದ ಸುಮಧುರವಾದ ಗಾನವನ್ನು ಮಾಡುವ ಪಕ್ಷಿಗಳಿಂದ ಅಧಿಷ್ಠಿತವಾದ ವನಪ್ರದೇಶವನ್ನು ನೋಡಿದರು.

ಸರಾಂಸಿ ಚ ಮನೋಜ್ಞಾನಿ ಸಮಂತಾಜ್ಜಲಚಾರಿಭಿಃ ॥೫೨॥

ಕುಮುದೈಃ ಪುಂಡರೀಕೈಶ್ಚ ತಥಾ ಕೋಕನದೋತ್ಪಲೈಃ ।
ಕಲ್ಹಾರೈಃ ಕಮಲೈಶ್ಚೈವ ಆಚಿತಾನಿ ಸಮಂತತಃ ॥೫೩॥

ಕುಮುದ, ಪುಂಡರೀಕ, ಕೋಕನದ, ಉತ್ಪಲ, ಕಲ್ಹಾರ, ಕಮಲ ಮೊದಲಾದ ಪುಷ್ಪಗಳಿಂದಲೂ, ಜಲಚರ ಪಕ್ಷಿಗಳಿಂದಲೂ ಅಲಂಕೃತವಾದ ಸರೋವರಗಳನ್ನು ನೋಡಿದರು.

ಕಾದಂಬೈಶ್ಚಕ್ರವಾಕೈಶ್ಚ ಕುರರೈರ್ಜಲಕುಕ್ಕುಟೈಃ ।
ಕಾರಂಡವೈಃ ಪ್ಲವೈರ್ಹಂಸೈರ್ಬಕೈರ್ಮದ್ಗುಭಿರೇವ ಚ ॥೫೪॥

ಏತೈಶ್ಚಾನ್ಯೈಶ್ಚ ಕೀರ್ಣಾನಿ ಸಮಂತಾಜ್ಜಲಚಾರಿಭಿಃ ।

ಕಾದಂಬ, ಚಕ್ರವಾಕ, ಕುರರ, ಜಲಕುಕ್ಕುಟ, ಕಾರಂಡವ, ಪ್ಲವ, ಹಂಸ, ಬಕ, ಮದ್ಗು ಮೊದಲಾದ ಜಲಪಕ್ಷಿಗಳಿಂದಲೂ ಕೂಡಿದ ಸರೋವರಗಳನ್ನು ನೋಡಿದರು.

ಹೃಷ್ಟೈಸ್ತಥಾ ತಾಮರಸರಸಾಸವಮದಾಲಸೈಃ ॥೫೫॥

ಪದ್ಮೋದರಚ್ಯುತರಜಃಕಿಂಜಲ್ಕಾರುಣರಂಜಿತೈಃ ।
ಮಂಜುಸ್ವರೈರ್ಮಧುಕರೈರ್ವಿರುತಾನ್ ಕಮಲಾಕರಾನ್ ।
ಅಪಶ್ಯಂಸ್ತೇ ನರವ್ಯಾಘ್ರಾ ಗಂಧಮಾದನಸಾನುಷು ॥೫೬॥

ಕಮಲದ ಹೂವಿನ ಮಕರಂದವನ್ನು ಪಾನಮಾಡಿ ಮದಿಸಿ ಸಂತುಷ್ಟವಾದ, ಪದ್ಮದ ಮಧ್ಯಭಾಗದಿಂದ ಚೆಲ್ಲಿದ ಕೇಸರಗಳ ಕೆಂಪುಬಣ್ಣದಿಂದ ರಂಜಿತವಾದ, ದುಂಬಿಗಳ ಝೇಂಕಾರದಿಂದ ತುಂಬಿದ ಸರೋವರಗಳನ್ನು ನರವ್ಯಾಘ್ರರಾದ ಅವರು ಗಂಧಮಾದನ ಪರ್ವತದ ಶಿಖರಗಳಲ್ಲಿ ನೋಡಿದರು.

ತಥೈವ ಪದ್ಮಷಂಡೈಶ್ಚ ಮಂಡಿತಾಂಶ್ಚ ಸಮಂತತಃ ॥೫೭॥

ಶಖಿಂಡಿನೀಭಿಃ ಸಹಿತಾಂಲ್ಲತಾಮಂಡಲಕೇಷು ಚ ।
ಮೇಘತೂರ್ಯವ್ಯೋದ್ಗಾಮಮದನಾಕುಲಿತಾನ್ ಭೃಶಮ್ ॥೫೮॥

ಪದ್ಮಲತೆಗಳಿಂದ ಎಲ್ಲಕಡೆಯಲ್ಲಿಯೂ ಅಲಂಕೃತವಾದ ಲತಾ ಸಮೂಹಗಳಲ್ಲಿ ಹೆಣ್ಣುನವಿಲು ಪಕ್ಷಿಗಳಿಂದ ಸಹಿತವಾದ, ಮೇಘದಂತೆ ತೂರ್ಯದಂತೆ ಶ್ರೇಷ್ಠವಾಗಿ ಮಧುರಸ್ವರಗಳನ್ನು ಮಾಡುವ ಗಂಡುನವಿಲುಗಳ ಮಧುರವಾದ ಝೇಂಕಾರರವದಿಂದ ಶೋಭಿತವಾದಂತಹ;

ಕೃತ್ಸ್ನವ ಕೇಕಾಮಧುರಂ ಸಂಗೀತಂ ಮಧುರಸ್ವರಮ್ ।
ಚಿತ್ರಾನ್ ಕಲಾಪಾನ್ ವಿಸ್ತೀರ್ಯ ಸವಿಲಾಸಾನ್ ಮದಾಲಸಾನ್ ॥

ಮಯೂರಾನ್ ದದೃಶುರ್ಹೃಷ್ಟಾನ್ ನೃತ್ಯತೋ ವನಲಾಲಸಾನ್ ।
ಕಾಂತಾಭಿಃ ಸಹಿತಾನನ್ಯಾನಪಶ್ಯನ್ ರಮತಸ್ಸುಖಿಮ್ ॥೬೦॥

ತಮ್ಮ ಸುಂದರವಾದ ಗರಿಗಳನ್ನು ಕೆದರಿಕೊಂಡು ವಿಲಾಸದಿಂದ ಮತ್ತು ಮದದಿಂದ ನರ್ತನವನ್ನು ಮಾಡುತ್ತಾ ಕಾಡಿನ ಅಧಿಕ ಪ್ರೇಮದಿಂದ ತಮ್ಮ ಕಾಂತೆಯರ ಜೊತೆಯಲ್ಲಿ ಸಹಿತರಾದಂತಹ ಸಂತೋಷದಲ್ಲಿರುವ ನವಿಲುಗಳನ್ನು ನೋಡಿದರು.

ವಲ್ಲೀಲತಾಸಂಕಟೇಷು ಕುಟಜೇಷು ಸ್ಥಿತಾಂಸ್ತಥಾ ।
ಕಾಂಶ್ಚಿತ್ ಪ್ರಿಯಾಭಿಃ ಸಹಿತಾನ್ ರಮಮಾಣಾನ್ ಕಲಾಪಿನಃ ॥೬೧॥

ಕಲಾಪರುಚಿರಾಟೋಪನಿಚಿತಾನ್ ಮುಕುಟಾನಿವ ।
ವಿವರೇಷು ತರೂಣಾಂ ಚ ರುಚಿರಾನ್ ದದೃಶುಶ್ಚ ತೇ ॥೬೨॥

ಲತಾಗುಲ್ಮಗಳ ನಿಬಿಡ ಪ್ರದೇಶಗಳಲ್ಲಿಯೂ ಮತ್ತು ಪರ್ಣಕುಟಿಗಳಂತಿರುವ ಸ್ಥಳಗಳಲ್ಲಿಯೂ ತಮ್ಮ ಪ್ರಿಯೆಯಿಂದ ಸಹಿತವಾದ ತಲೆಯ ಮೇಲೆ ಕಿರೀಟದಂತಿರುವ ಶಿಖೆಯನ್ನು ಹೊತ್ತಿರುವ ಶ್ರೇಷ್ಠವಾದ ನವಿಲುಗರಿಗಳಿಂದ ಸುಂದರವಾದ ನವಿಲುಗಳನ್ನು ಅಲ್ಲಿಯೂ ಮತ್ತು ವೃಕ್ಷಗಳ ಪೊಟರೆಗಳಲ್ಲಿಯೂ ನೋಡಿದರು.

ಸಿಂಧುವಾರಾಂಸ್ತಥೋದಾರಾನ್ ಮನ್ಮಥಸ್ಯೇವ ತೋಮರಾನ್ ।
ಸುವರ್ಣವರ್ಣಕುಸುಮಾನ್ ಗಿರೀಣಾಂ ಶಿಖರೇಷು ಚ ।
ಕರ್ಣಿಕಾರಾನ್ ವಿಕಸಿತಾನ್ ಕರ್ಣಪೂರಾನಿವೋತ್ತಮಾನ್ ॥೬೩॥

ತಥಾಪಶ್ಯನ್ ಕುರಬಕಾನ್ ವನರಾಜಿಷು ಪುಷ್ಪಿತಾನ್ ।
ಕಾಮವಶ್ಯೋತ್ಸುಕ್ಯಕರಾನ್ ಕಾಮಸ್ಯೇವ ಶರೋತ್ಕರಾನ್ ॥೬೪॥

ಸಿಂಧುವಾರ, ಉದಾರ ಮೊದಲಾದ ಮನ್ಮಥನ ಆಯುಧದಂತೆ ತೋರುತ್ತಿದ್ದ, ಸುವರ್ಣವರ್ಣದ ಕುಸುಮಗಳಿಂದ ಕರ್ಣಾಭರಣದಂತೆ ಶೋಭಿಸುವ, ಅರಳಿದ ಕರ್ಣಿಕಾರ ಪುಷ್ಪಗಳ ವೃಕ್ಷಗಳನ್ನು ಮತ್ತು ಕುರಬಕ ಪುಷ್ಪವೃಕ್ಷಗಳನ್ನೂ ಮನ್ಮಥನ ಬಾಣಗಳ ಸಮೂಹದಂತೆ ತೋರುತ್ತಿದ್ದ ಕಾಮವರ್ಧಕವಾದ ಅನೇಕ ಸುಂದರವಾದ ಮರಗಳನ್ನೂ ಅವರು ನೋಡಿದರು.

ತಥೈವ ವನರಾಜೀನಾಮುದಾರಾನ್ ರಚಿತಾನಿವ ।
ವಿರಾಜಮಾನಾಂಸ್ತೇऽಪಶ್ಯಂಸ್ತಿಲಕಾಂಸ್ತಿಲಕಾನಿವ ॥೬೫॥

ಅದರಂತೆ ವನಶ್ರೇಣಿಗೆ ತಿಲಕವಿಟ್ಟಂತೆ ಕಾಣುವ ಉದಾರವಾದ ತಿಲಕ ವೃಕ್ಷಗಳ ಶ್ರೇಣಿಗಳನ್ನು ನೋಡಿದರು.

ತಥಾನಂಗಶರಾಕಾರಾನ್ ಸಹಕಾರಾನ್ ಮನೋರಮಾನ್ ।
ಅಪಶ್ಯನ್ ಭ್ರಮರಾರಾವಾನ್ ಮಂಜರೀಭಿರ್ವಿರಾಜಿತಾನ್ ॥೬೬॥

ಅದರಂತೆ ಮನ್ಮಥನ ಬಾಣದಂತಿರುವ ಭ್ರಮರಗಳ ಝೇಂಕಾರದಿಂದ ಕೂಡಿರುವ ಪುಷ್ಪಮಂಜರಿಗಳಿಂದ ವಿರಾಜಿತವಾದ ಸುಂದರವಾದ ಸಹಕಾರ ವೃಕ್ಷಗಳನ್ನೂ ನೋಡಿದರು.

ಹರಣ್ಯಸದೃಶೈಃ ಪುಷ್ಪೈರ್ದಾವಾಗ್ನಿಸದೃಶೈರಪಿ ।
ಲೋಹಿತೈರಂಜನಾಭೈಶ್ಚ ವೈದೂರ್ಯಸದೃಶೈರಪಿ ॥೬೭॥

ತಥಾ ಶಾಲಾಂಸ್ತಮಾಲಾಂಶ್ಚ ಪಾಟಲಾನ್ ಬಕುಲಾನಪಿ ।
ಮಾಲಾ ಇವ ಸಮಾಸಕ್ತಾಃ ಶೈಲಾನಾಂ ಶಿಖರೇಷು ಚ ॥೬೮॥

ಚಿನ್ನದ ಬಣ್ಣವನ್ನು ಹೋಲುವ ಮತ್ತು ದಾವಾಗ್ನಿಯ ಬಣ್ಣವನ್ನು ಹೋಲುವ ಕೆಂಪು, ಕಪ್ಪು ಮತ್ತು ವೈಢೂರ್ಯ ಸದೃಶವಾದ ಪುಷ್ಪಗಳಿಂದ ಕೂಡಿದ ಪರ್ವತ ಶಿಖರಗಳಿಗೆ ಹಾಕಿದ ಮಾಲೆಗಳಂತೆ ತೋರುವ ಶಾಲ, ತಮಾಲ, ಪಾಟಲ, ಬಕುಲ ಮೊದಲಾದ ವೃಕ್ಷಶ್ರೇಣಿಗಳನ್ನು ನೋಡಿದರು.

ಏವಂ ಕ್ರಮೇಣ ತೇ ವೀರಾ ವೀಕ್ಷಮಾಣಾಃ ಸಮಂತತಃ ।
ಗಜಸಂಘಸಮಾಕೀರ್ಣಂ ಸಿಂಹವ್ಯಾಘ್ರಸಮಾಕುಲಮ್ ॥೬೯॥

ಹೀಗೆ ಆ ವೀರರು ಕ್ರಮವಾಗಿ ಸುತ್ತಲೂ ಇದ್ದ ಸಿಂಹವ್ಯಾಘ್ರಗಜಗಳ ಸಮೂಹದಿಂದ ಆಕ್ರಾಂತವಾದ ಪ್ರದೇಶಗಳನ್ನು ನೋಡುತ್ತಾ ಮುಂದೆ ಸಾಗಿದರು.

ಪೀತಾ ಭಾಸ್ಕರವರ್ಣಾಭಾ ಬಭೂವುರ್ವನರಾಜಯಃ ॥೭೦॥

ನಾತ್ರ ಕಂಟಕಿನಃ ಕೇಚಿನ್ನ ಚ ವಿದ್ಯಂತ್ಯಪುಷ್ಪಿತಾಃ ।
ಸ್ನಿಗ್ಧಪತ್ರಫಲಾ ವೃಕ್ಷಾ ಗಂಧಮಾದನಸಾನುಷು ॥೭೦.೧॥

ಸರ್ವರ್ತುಫಲಪುಷ್ಪಾಢ್ಯಾಂ ಗಂಧಮಾದನಸಾನುಷು ॥
ಭ್ರಮರಾರಾವಮಧುರಾ ನಳಿನೀಃ ಪುಲ್ಲಪಂಕಜಾ ॥೭೦.೨॥

ಆ ವನರಾಜಿಗಳು ಹಳದಿಯಾಗಿ ಸಾಯಂಕಾಲದ ಸೂರ್ಯನ ಬಣ್ಣವನ್ನು ಹೋಲುತ್ತಿದ್ದವು. ಅಲ್ಲಿ ಮುಳ್ಳಿದ್ದ ಮರಗಳಾಗಲೀ, ಪುಷ್ಪವಿಲ್ಲದ ಮರಗಳಾಗಲೀ ಯಾವುವೂ ಇರಲಿಲ್ಲ. ಗಂಧಮಾದನ ಶಿಖರಗಳಲ್ಲಿ ಎಲ್ಲ ವೃಕ್ಷಗಳೂ ಒಳ್ಳೆಯ ನೆರಳನ್ನು ಕೊಡುವ ಎಲ್ಲ ಋತುಗಳಲ್ಲೂ ಫಲಪುಷ್ಪಗಳನ್ನು ಬಿಡುವ ಮತ್ತು ನಿಬಿಡವಾದ ಛಾಯೆಯನ್ನು ಕೊಡುವ ವೃಕ್ಷಗಳಿಂದ ತುಂಬಿದ್ದಿತು. ಸರೋವರಗಳು ಭ್ರಮರಗಳ ಝೇಂಕಾರದಿಂದ ಕೂಡಿದ ಅರಳಿದ ಪಂಕಜಗಳಿಂದ ತುಂಬಿದ್ದವು.

ಪಶ್ಯಂತೀ ವಿವಿಧಾನ್‌ವೃಕ್ಷಾಂಸ್ತತ್ರ ಕೃಷ್ಣಾ ಮನೋಹರಾನ್ ।
ಅಂತಿಕಸ್ಥಮಥ ಪ್ರೀತ್ಯಾ ಭೀಮಸೇನಮುವಾಚ ಹ ।

ವಿಲೋಡ್ಯಮಾನಾಃ ಪಶ್ಯೇಮಾಃ ಕರಿಭಿಃ ಸಕರೇಣುಭಿಃ ।
ಪಶ್ಯೇಮಾಂ ನಳಿನೀಂ ಚಾನ್ಯಾಂ ಕಮಲೋತ್ಪಲಮಾಲಿನೀಮ್ ॥೭೦.೩॥

ಸ್ರಗ್ಧರಾಂ ವಿಗ್ರಹವತೀಂ ಸಾಕ್ಷಾತ್‌ಶ್ರಿಯಮಿವಾಪರಮ್ ।
ನಾನಾಕುಸುಮಗಂಧಾಢ್ಯಾನ್ ಪತಸ್ಯೇಮಾಃ ಕಾನನೋತ್ತಮೇ ।
ಉಪಗೀಯಮಾನಾ ಭ್ರಮರೈ ರಾಜಂತೇ ವನರಾಜಯಃ ॥೭೦.೪॥

ಅನೇಕ ವಿಧವಾದ ಸುಂದರವಾದ ಸಮೀಪದಲ್ಲಿದ್ದ ವೃಕ್ಷಗಳನ್ನು ನೋಡುತ್ತಾ ಸಂತೋಷದಿಂದ ದ್ರೌಪದಿಯು ಭೀಮಸೇನನನ್ನು ಕುರಿತು ಮಾತನಾಡಿದಳು. ಗಜಗಳಿಂದಲೂ ಮತ್ತು ಹೆಣ್ಣಾನೆಗಳಿಂದಲೂ ಕಲಕಲ್ಪಡುವ ಈ ಸರೋವರಗಳನ್ನು ನೋಡು. ಕಮಲ ಮತ್ತು ಉತ್ಪಲ ಪುಷ್ಪಗಳ ಮಾಲೆಯನ್ನು ಧರಿಸಿದ ಶರೀರವನ್ನು ಧರಿಸಿದ ಲಕ್ಷ್ಮಿಯಂತೆ ಕಂಗೊಳಿಸುತ್ತಿರುವ ಈ ಸರೋವರವನ್ನು ನೋಡು. ಈ ಶ್ರೇಷ್ಠವಾದ ಕಾಡಿನಲ್ಲಿ ಒಳ್ಳೆಯ ಪುಷ್ಪ ಪರಿಮಳಗಳಿಂದ ಕೂಡಿದ ಈ ಸರೋವರಗಳನ್ನು ನೋಡು. ಈ ವನಶ್ರೇಣಿಗಳು ಭ್ರಮರಗಳ ಮಧುರ ಝೇಂಕಾರದಿಂದ ಶೋಭಿಸುವುದನ್ನು ನೋಡು ಎಂದು ಒಬ್ಬರಿಗೊಬ್ಬರು ಹೇಳುತ್ತಾ ಅವರು ಸಾಗಿದರು.

ವಿಮಲಸ್ಫಟಿಕಾಭಾನಿ ಪಾಂಡರಚ್ಛದನೈರ್ದ್ವಿಜೈಃ ।
ಕಲಹಂಸೈರುಪೇತಾನಿ ಸಾರಸಾಭಿರುತಾನಿ ಚ ॥೭೧॥

ಸರಾಂಸಿ ಸರಿತಃ ಪಾರ್ಥಾಃ ಪಶ್ಯಂತಃ ಶೈಲಸಾನುಷು ।
ವಿವಿಶುಃ ಕ್ರಮಶೋ ವೀರಾ ಅನನ್ಯಂ ಶುಭಕಾನನಮ್ ।

ವಿಮಲಸ್ಫಟಿಕದಂತೆ ಇರುವ ಬಿಳಿಯ ಬಣ್ಣದ ರೆಕ್ಕೆಗಳಿಂದ ಕೂಡಿರುವ ಕಲ ಹಂಸಗಳು ಮತ್ತು ಸಾರಸ ಪಕ್ಷಿಗಳಿಂದ ಕೂಡಿದ್ದ ಸರೋವರಗಳನ್ನೂ ಮತ್ತು ನದಿಗಳನ್ನೂ ನೋಡುತ್ತಾ ಪರ್ವತಶಿಖರಗಳಲ್ಲಿ ಮುಂದೆ ಸಾಗಿದರು. ಅಸಾಧಾರಣವಾದ ಆ ಶುಭ ಕಾನನವನ್ನು ನೋಡುತ್ತಾ ಆ ವೀರರು ಕ್ರಮವಾಗಿ ಮುಂದೆ ಸಾಗಿದರು.

ಪದ್ಮೋತ್ಪಲವಿಮಿಶ್ರಾಣಿ ಸುಖಶೀತಜಲಾನಿ ಚ ॥೭೨॥

ಗಂಧವಂತಿ ಚ ಮಾಲ್ಯಾನಿ ರಸವಂತಿ ಫಲಾನಿ ಚ ।
ಅತೀವ ವೃಕ್ಷಾ ರಾಜಂತೇ ಪುಷ್ಪಿತಾಃ ಶೈಲಸಾನುಷು ॥೭೩॥

ವಿವಿಶುಃ ಪಾಂಡವಾಃ ಸರ್ವೇ ವಿಸ್ಮಯೋತ್ಫುಲ್ಲಲೋಚನಾಃ ।

ಪದ್ಮೋದ್ಫಲಗಳಿಂದ ಮಿಶ್ರಿತವಾದ ಸುಖಶೀತಜಲದಿಂದ ಕೂಡಿದ ಸರೋವರಗಳು ಒಳ್ಳೆಯ ಪುಷ್ಪಗಳಿಂದ ಮತ್ತು ರಸಪರಿಮಳಭರಿತವಾದ ಫಲಗಳಿಂದ ಕೂಡಿದ ವೃಕ್ಷಗಳು, ಪರ್ವತಶಿಖರಗಳಲ್ಲಿ ರಾರಾಜಿಸುತ್ತಿದ್ದವು. ಅಂತಹ ಪ್ರದೇಶವನ್ನು ಪಾಂಡವರೆಲ್ಲರೂ ವಿಸ್ಮಯದಿಂದ ಅರಳಿದ ಕಣ್ಣುಳ್ಳವರಾಗಿ ಪ್ರವೇಶಿಸಿದರು.

ಕಮಲೋತ್ಪಲಕಲ್ಹಾರಪುಂಡರೀಕಸುಗಂಧಿನಾ ।
ಸರಾಂಸಿ ಚ ಮನೋಜ್ಞಾನಿ ವೃಕ್ಷಾಂಶ್ಚಾತಿಮನೋರಮಾನ್ ।
ಸೇವ್ಯಮಾನಾ ವನೇ ತಸ್ಮಿನ್ ಸುಖಸ್ಪರ್ಶೇನ ವಾಯುನಾ ।
ತತೋ ಯುಧಿಷ್ಠಿರೋ ಭೀಮಮಾಹೇದಂ ಪ್ರೀತಿಮದ್ವಚಃ ।

ಕಮಲ ಉತ್ಪಲ ಕಲ್ಹಾರ ಪುಂಡರೀಕಗಳ ಸುಗಂಧದಿಂದ ಕೂಡಿದ ಸರೋವರಗಳನ್ನೂ ಅತಿ ಮನೋಹರವಾದ ವೃಕ್ಷಗಳನ್ನೂ ನೋಡುತ್ತಾ ಆ ಕಾನನದಲ್ಲಿ ಸುಖಸ್ಪರ್ಶವುಳ್ಳ ಶೀತಲವಾಯುವಿನಿಂದ ಸೇವಿಸಲ್ಪಡುತ್ತಾ ಸಂತೋಷಗೊಂಡ ಯುಧಿಷ್ಠಿರನು ಭೀಮಸೇನನನ್ನು ಕುರಿತು ಸಂತೋಷದಿಂದ ಹೀಗೆ ಹೇಳಿದನು.

ಯುಧಿಷ್ಠಿರಸ್ತು ತಾನ್ ವೃಕ್ಷಾನ್ ಪಶ್ಯಮಾನೋ ನಗೋತ್ತಮೇ ।
ಭೀಮಸೇನಮಿದಂ ವಾಕ್ಯಮಬ್ರವೀದ್ ಮಧುರಾಕ್ಷರಮ್ ॥೭೪॥

ಪಶ್ಯ ಭೀಮ ಶುಭಾನ್ ದೇಶಾನ್ ದೇವಾಕ್ರೀಡಾನ್ ಸಮಂತತಃ ।
ಅಮಾನುಷಗತಿಂ ಪ್ರಾಪ್ತಾಃ ಸಂಸಿದ್ಧಾಃ ಸ್ಮ ವೃಕೋದರ ॥೭೫॥

ಎಲೈ ವೃಕೋದರನೇ ಭೀಮಸೇನನೇ, ದೇವತೆಗಳ ವಿಹಾರಸ್ಥಾನವಾದ ಸುತ್ತಲೂ ಇರುವ ಈ ಶುಭಪ್ರದೇಶಗಳನ್ನು ನೋಡು. ನಾವು ಮನುಷ್ಯಗತಿ ಇಲ್ಲದಿರುವ ಪ್ರದೇಶಕ್ಕೆ ಬಂದು ಸಿದ್ಧರಾಗಿದ್ದೇವೆ.

ಲತಾಭಿಃ ಪುಷ್ಪಿತಾಗ್ರಾಭಿಃ ಪುಷ್ಪಿತಾಃ ಪಾದಪೋತ್ತಮಾಃ ।
ಸಂಶ್ಲಿಷ್ಟಾಃ ಪಾರ್ಥ ಶೋಭಂತೇ ಗಂಧಮಾದನಸಾನುಷು ॥೭೬॥

ಎಲೈ ಭೀಮನೇ, ತುದಿಯಲ್ಲಿ ಅರಳಿದ ಪುಷ್ಪಗಳ ಲತೆಗಳಿಂದ ಆಲಿಂಗಿತವಾದ ಶ್ರೇಷ್ಠವಾದ ಪುಷ್ಪಿತವಾದ ವೃಕ್ಷಗಳು ಈ ಗಂಧಮಾದನ ಶಿಖರದಲ್ಲಿ ಶೋಭಿಸುತ್ತಿವೆ.

ಶಿಖಿಂಡಿನೀಭಿಶ್ಚರತಾಂ ಸಹಿತಾನಾಂ ಶಿಖಿಂಡಿನಾಮ್ ।
ನದತಾಂ ಶೃಣು ನಿಘೋರ್ಷಂ ಭೀಮ ಪರ್ವತಸಾನುಷು ॥೭೭॥

ಎಲೈ ಭೀಮನೇ, ಪರ್ವತ ಶಿಖರಗಳಲ್ಲಿ ಹೆಣ್ಣು ನವಿಲುಗಳ ಜೊತೆಯಲ್ಲಿ ಕೇಕೆ ಹಾಕುತ್ತಾ ಸಂಚರಿಸುತ್ತಿರುವ ಈ ನವಿಲುಗಳ ಕೇಕಾರವನ್ನು ಕೇಳು.

ಚಕೋರಾಃ ಶತಪತ್ರಾಶ್ಚ ಮತ್ತಕೋಕಿಲಸಾರಿಕಾಃ ।
ಪತ್ರಿಣಃ ಪುಷ್ಪಿತಾನೇತಾನ್ ಸಂಪತಂತಿ ಮಹಾದ್ರುಮಾನ್ ॥೭೮॥

ಚಕೋರ, ಶತಪತ್ರ, ಮತ್ತಕೋಕಿಲ, ಸಾರಿಕ ಮೊದಲಾದ ಪಕ್ಷಿಗಳು ಈ ಪುಷ್ಪಿತವಾದ ಮಹಾವೃಕ್ಷಗಳಲ್ಲಿ ಹಾರಾಡುತ್ತಿರುವುದನ್ನು ನೋಡು.

ರಕ್ತಪೀತಾರುಣಾಃ ಪಾರ್ಥ ಪಾದಪಾಗ್ರಗತಾಃ ಖಗಾಃ ।
ಪರಸ್ಪರಮುದೀಕ್ಷಂತೇ ಬಹವೋ ಜೀವಜೀವಿಕಾಃ ॥೭೯॥

ಎಲೈ ಪಾರ್ಥನೇ, ರಕ್ತ, ಪೀತ ಮತ್ತು ಅರುಣವರ್ಣದ ಅನೇಕ ಪಕ್ಷಿಗಳು ಮತ್ತು ಚಕೋರ ಪಕ್ಷಿಗಳು ವೃಕ್ಷದ ತುದಿಯಲ್ಲಿ ಕುಳಿತು ಪರಸ್ಪರವಾಗಿ ನೋಡುತ್ತಿವೆ.

ಹರಿತಾರುಣವರ್ಣಾನಾಂ ಶಾದ್ವಲಾನಾಂ ಸಮೀಪತಃ ।
ಸಾರಸಾಃ ಪ್ರತಿದೃಶ್ಯಂತೇ ಶೈಲಪ್ರಸ್ರವಣೇಷ್ವಪಿ ॥೮೦॥

ಹಸಿರು ಮತ್ತು ಕೆಂಪುಬಣ್ಣದಿಂದ ಕೂಡಿದ ಜೌಗು ಪ್ರದೇಶಗಳ ಸಮೀಪದಲ್ಲಿ ಮತ್ತು ಪರ್ವತದ ಝರಿಗಳ ಸಮೀಪದಲ್ಲಿ ಸಾರಸ ಪಕ್ಷಿಗಳು ಕಾಣುತ್ತಿವೆ.

ವದಂತಿ ಮಧುರಾ ವಾಚಃ ಸರ್ವಭೂತಮನೋರಮಾಃ ।
ಭೃಂಗರಾಜೋಪಚಕ್ರಾಶ್ಚ ಲೋಹಪೃಷ್ಠಾಃ ಪತತ್ರಿಣಃ ॥೮೧॥

ಭೃಂಗರಾಜ, ಉಪಚಕ್ರ, ಲೋಹಪೃಷ್ಟವೊದಲಾದ ಪಕ್ಷಿಗಳು ಸರ್ವಪ್ರಾಣಿಗಳಿಗೂ ಮನೋಹರವಾದ ಮಧುರವಾದ ಸ್ವರವನ್ನು ಉಂಟುಮಾಡುತ್ತಿವೆ.

ಚತುರ್ದಿಷಾಣಾಃ ಪದ್ಮಾಭಾಃ ಕುಂಜರಾಃ ಸಕರೇಣವಃ ।
ಏತೇ ವೈದೂರ್ಯವರ್ಣಾಭಂ ಕ್ಷೋಭಯಂತಿ ಮಹತ್ಸರಃ ॥೮೨॥

ನಾಲ್ಕು ದಂತಗಳುಳ್ಳ ಪದ್ಮದ ಕಾಂತಿಯುಳ್ಳ ಹೆಣ್ಣಾನೆಗಳಿಂದ ಸಹಿತವಾದ ಈ ಆನೆಗಳು ವೈಢೂರ್ಯವರ್ಣದಿಂದ ಕೂಡಿದ ಈ ದೊಡ್ಡ ಸರೋವರವನ್ನು ಕದಡುತ್ತಿವೆ.

ಬಹುತಾಲಸಮುತ್ಸೇಧಾಃ ಶೈಲಶೃಂಗಪರಿಚ್ಯುತಾಃ ।
ನಾನಾಪ್ರಸ್ರವಣೇಭ್ಯಶ್ಚ ವಾರಿಧಾರಾಃ ಪತಂತಿ ಚ ॥೮೩॥

ಅನೇಕ ತಾಳವೃಕ್ಷಗಳಷ್ಟು ಎತ್ತರವಾದ ಪರ್ವತಶಿಖರಗಳಿಂದ ಕೆಳಗೆ ಉರುಳಿದ ಅನೇಕ ಜಲಧಾರೆಗಳು, ಅನೇಕ ಝರಿಗಳಲ್ಲಿ ಕೆಳಗೆ ಬಿದ್ದು ಹರಿಯುತ್ತಿವೆ.

ಭಾಸ್ಕರಾಭಾಃ ಪ್ರಭಾಭೀಮಾಃ(ಭಿಶ್ಚ) ಶಾರದಾಭ್ರಘನೋಪಮಾಃ ।
ಶೋಭಯಂತಿ ಮಹಾಶೈಲಂ ನಾನಾರಜತಧಾತವಃ ॥೮೪॥

ಸೂರ್ಯನ ಕಾಂತಿಯುಳ್ಳ ತಮ್ಮ ಪ್ರಭೆಯಿಂದ ಭಯಂಕರವಾಗಿ ತೋರುವ, ಶರತ್ಕಾಲದ ಮೋಡದಂತೆ ಇರುವ, ಅನೇಕ ವಿಧವಾದ ರಜತಧಾತುಗಳು ಈ ಮಹಾ ಪರ್ವತಕ್ಕೆ ಶೋಭೆಯನ್ನು ತಂದುಕೊಡುತ್ತಿವೆ.

ಕ್ವಚಿದಂಜನವರ್ಣಾಭಾಃ ಕ್ವಚಿತ್ಕಾಂಚನಸನ್ನಿಭಾಃ ।
ಧಾತವೋ ಹರಿತಾಲಸ್ಯ ಕ್ವಚಿದ್ಧಿಂಗುಲಕಸ್ಯ ಚ ॥೮೫॥

ಈ ಪರ್ವತದಲ್ಲಿರುವ ಧಾತುಗಳು ಕೆಲವು ಸ್ಥಳಗಳಲ್ಲಿ ಕಾಡಿಗೆ ಬಣ್ಣದಿಂದಲೂ, ಕೆಲವು ಸ್ಥಳಗಳಲ್ಲಿ ಸುವರ್ಣದ ಬಣ್ಣದಿಂದಲೂ, ಇನ್ನು ಕೆಲವು ಸ್ಥಳಗಳಲ್ಲಿ ಹರಿತಾಳ ಮತ್ತು ಹಿಂಗುಲಿಕ ವರ್ಣಗಳಿಂದಲೂ ಕೂಡಿದುದಾಗಿದೆ.

ಮನಃಶಿಲಾಗೃಹಾಶ್ಚೈವ ಸಂಧ್ಯಾಭ್ರನಿಕರೋಪಮಾಃ ।
ಶಶಲೋಹಿತವರ್ಣಾಭಾಃ ಕ್ವಚಿದ್ ಗೈರಿಕಧಾತವಃ ॥೮೬॥

ಸಂಧ್ಯಾಕಾಲದ ಮೋಡಗಳ ರಾಶಿಗಳಂತಿರುವ ಮನೋಹರವಾದ ಗುಹೆಗಳೂ ಮೊಲದ ರಕ್ತದಂತೆ ಶೋಭಿಸುವ ಗೈರಿಕಾದಿ ಧಾತುಗಳೂ ಇಲ್ಲಿ ಇವೆ.

ಸಿತಾಸಿತಾಭ್ರಪ್ರತಿಮಾ ಬಾಲಸೂರ್ಯಸಮಪ್ರಭಾಃ ।
ಏತೇ ಬಹುವಿಧಾಃ ಶೈಲಂ ಶೋಭಯಂತಿ ಮಹಾಪ್ರಭಾಃ ॥೮೭॥

ಬಿಳಿಯ ಮತ್ತು ಕಪ್ಪು ಮೋಡದ ಬಣ್ಣಗಳನ್ನು ಹೊಂದಿರುವ ಬಾಲ ಸೂರ್ಯನ ಕಾಂತಿಯನ್ನು ಹೊಂದಿರುವ ಮಹಾಕಾಂತಿಯಿಂದ ಕೂಡಿದ ಈ ಬಹುವಿಧವಾದ ಧಾತುಗಳು ಈ ಪರ್ವತಕ್ಕೆ ಶೋಭೆಯನ್ನುಂಟು ಮಾಡುತ್ತವೆ.

ಗಂಧರ್ವಾಃ ಸಹ ಕಾಂತಾಭಿರ್ಯಥೋಕ್ತಂ ವೃಷಪರ್ವಣಾ ।
ದೃಶ್ಯಂತೇ ಶೈಲಶೃಂಗೇಷು ಪಾರ್ಥ ಕಿಂಪುರುಷೈಃ ಸಹ ॥೮೮॥

ಎಲೈ ಪಾರ್ಥನೇ, ವೃಷಪರ್ವನು ಹೇಳಿದಂತೆ ಈ ಪರ್ವತ ಶಿಖರಗಳಲ್ಲಿ ಕಾಂತೆಯಂದೊಡಗೂಡಿದ ಗಂಧರ್ವರು ಮತ್ತು ಕಿಂಪುರುಷರು ಕಾಣುತ್ತಿದ್ದಾರೆ.

ಗೀತಾನಾಂ ಸಮತಾಲಾನಾಂ ತಥಾ ಸಾಮ್ನಾಂ ಚ ನಿಸ್ವನಃ ।
ಶ್ರೂಯತೇ ಬಹುಧಾ ಭೀಮಸರ್ವಭೂತ ಮನೋಹರಃ ॥೮೯॥

ಎಲೈ ಭೀಮಸೇನನೇ, ಸರ್ವಪ್ರಾಣಿ ಮನೋಹರವಾದ ಸಮತಾಳವುಳ್ಳ ಗೀತೆಗಳು ಮತ್ತು ಸಾಮವೇದದ ಮಧುರ ಸ್ವನವು ಇಲ್ಲಿ ಬಹುವಿಧವಾಗಿ ಕೇಳಿ ಬರುತ್ತಿದೆ.

ಮಹಾಗಂಗಾಮುದೀಕ್ಷಸ್ವ ಪುಣ್ಯಾಂ ದೇವನದೀಂ ಶುಭಾಮ್ ।
ಕಲಹಂಸಗಣೈರ್ಜುಷ್ಟಾಮೃಷಿಕಿನ್ನರಸೇವಿತಾಮ್ ॥೯೦॥

ಕಲಹಂಸ ಗಣಗಳಿಂದಲೂ ಋಷಿಕಿನ್ನರರಿಂದಲೂ ಸೇವಿತವಾದ ಪುಣ್ಯಪ್ರದವಾದ ಪವಿತ್ರವಾದ ದೇವನದಿಯಾದ ಈ ಮಹಾಗಂಗೆಯನ್ನು ನೋಡು.

ಧಾತುಭಿಶ್ಚ ಸರಿದಿಭಶ್ಚ ಕಿನ್ನರೈರ್ಮೃಗಪಕ್ಷಿಭಿಃ ।
ಗಂಧರ್ವೈಪ್ಸರೋಭಿಶ್ಚ ಕಾನನೈಶ್ಚ ಮನೋರಮೈಃ ॥೯೧॥

ವ್ಯಾಲೈಶ್ಚ ವಿವಿಧಾಕಾರೈಃ ಶತಶೀರ್ಷೈಃ ಸಮಂತತಃ ।
ಉಪೇತಂ ಪಶ್ಯ ಕೌಂತೇಯ ಶೈಲರಾಜಮರಿಂದಮ ॥೯೨॥

ಎಲೈ ಕೌಂತೇಯನೇ, ಅರಿಂದಮನೇ, ಧಾತುಗಳಿಂದಲೂ, ನದಿಗಳಿಂದಲೂ, ಕಿನ್ನರರಿಂದಲೂ, ಮೃಗಪಕ್ಷಿಗಳಿಂದಲೂ, ಗಂಧರ್ವರಿಂದಲೂ, ಅಪ್ಸರೆಯರಿಂದಲೂ ಮನೋಹರವಾದ ಕಾಡುಗಳಿಂದಲೂ ಅನೇಕವಿಧವಾದ ಆಕಾರವನ್ನು ಹೊಂದಿದ ನೂರು ಹೆಡೆಗಳನ್ನು ಹೊಂದಿರುವ ಮಹಾಸರ್ಪಗಳಿಂದಲೂ ಎಲ್ಲ ಕಡೆಯಲ್ಲಿಯೂ ಶೋಭಿತವಾದ ಈ ಪರ್ವತರಾಜನನ್ನು ನೋಡು.

ವೈಶಂಪಾಯನಃ

ತೇ ಪ್ರೀತಮನಸಃ ಶೂರಾಃ ಪ್ರಾಪ್ತಾ ಗತಿಮನುತ್ತಮಾಮ್ ।
ನಾತೃಪ್ಯನ್ ಪರ್ವತೇಂದ್ರಸ್ಯ ದರ್ಶನೇನ ಪರಂತಪಾಃ ॥೯೩॥

ವೈಶಂಪಾಯನ– ಉತ್ತಮವಾದ ಗತಿಯನ್ನು ಹೊಂದಿದ ಪರಂತಪರಾದ ಆ ಶೂರರು ದ್ರೌಪದಿಯಿಂದಲೂ ಮತ್ತು ಮಹಾತ್ಮರಾದ ಬ್ರಾಹ್ಮಣರಿಂದಲೂ ಸಹಿತರಾಗಿ ಆ ಶ್ರೇಷ್ಠಪರ್ವತವನ್ನು ನೋಡಿ ಯುಕ್ತಿಯನ್ನೇ ಹೊಂದಲಿಲ್ಲ.

ಉಪೇತಮಥ ಮಾಲ್ಯೈಶ್ಚ ಫಲವದ್ಭಿಶ್ಚ ಪಾದಪೈಃ ।
ಆರ್ಷ್ಟಿಷೇಣಸ್ಯ ರಾಜರ್ಷೇರಾಶ್ರಮಂ ದದೃಶುಸ್ತದಾ ॥೯೪॥

ಅನಂತರ ಅವರು ಪುಷ್ಪಮಾಲೆಗಳಿಂದಲೂ, ಫಲಭರಿತ ವೃಕ್ಷಗಳಿಂದಲೂ ಶೋಭಿತವಾದ ರಾಜರ್ಷಿಯಾದ ಆರ್ಷ್ಟಿಷೇಣನ ಆಶ್ರಮವನ್ನು ನೋಡಿದರು.

ತತಸ್ತೇ ತಿಗ್ಮತಪಸಂ ಕೃಶಂ ಧಮನಿಸಂತತಮ್ ।
ಪಾರಗಂ ಸರ್ವಧರ್ಮಾಣಾಮಾರ್ಷ್ಟಿಷೇಣಮುಪಾಗಮನ್ ॥೯೫॥

ಅನಂತರ ಅವರು ಉಗ್ರತಪಸ್ವಿಯಾದ, ಕೃಶನಾದ ಶರೀರದಲ್ಲಿ ನರಗಳು ಎದ್ದು ಕಾಣುತ್ತಿರುವ, ಸರ್ವಧರ್ಮಪಾರಂಗತನಾದ, ಆರ್ಷ್ಟಿಷೇಣನನ್ನು ಸಮೀಪಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಚತುಷ್ಪಂಚಾಶದಧಿಕಶತತಮೋಧ್ಯಾಯಃ ॥

॥ ಇತಿ ಯಕ್ಷಯುದ್ಧಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ನಾಲ್ಕನೆಯ ಅಧ್ಯಾಯ ಮುಗಿಯಿತು.

★ ★ ★ ★

ನೂರ ಐವತ್ತೈದನೆಯ ಅಧ್ಯಾಯ

ಅರ್ಜುನನ ಆಗಮನದವರೆಗೆ ತನ್ನ ಆಶ್ರಮದಲ್ಲಿಯೇ ಇರುವಂತೆ
ಆರ್ಷ್ಟಿಷೇಣನ ಒತ್ತಾಯ. ಕುಶಲ ಪ್ರಶ್ನೆಯ ನೆಪದಲ್ಲಿ
ಯುಧಿಷ್ಠಿರನಿಗೆ ಧರ್ಮೋಪದೇಶ.

ವೈಶಂಪಾಯನಃ

ಯುಧಿಷ್ಠಿರಸ್ತಮಾಸಾದ್ಯ ತಪಸಾ ದಗ್ಧಕಿಲ್ಬಿಷಮ್ ।
ಅಭ್ಯವಾದಯತ ಪ್ರೀತಃ ಶಿರಸಾ ನಾಮ ಕೀರ್ತಯನ್ ॥೧॥

ವೈಶಂಪಾಯನ– ತಪಸ್ಸಿನಿಂದ ಪಾಪನಿರ್ಮುಕ್ತನಾದ ಆರ್ಷ್ಟಿಷೇಣನ ಸಮೀಪಕ್ಕೆ ಹೋಗಿ ಯುಧಿಷ್ಠಿರನು ಸಂತೋಷಗೊಂಡು ತನ್ನ ಹೆಸರನ್ನು ಹೇಳುತ್ತಾ ಶಿರಸಾಷ್ಟಾಂಗ ಪ್ರಣಾಮವನ್ನು ಮಾಡಿದರು.

ತತಃ ಕೃಷ್ಣಾ ಚ ಭೀಮಶ್ಚ ಯಮೌ ಚ ಸುತಪಸ್ವಿನೌ ।
ಶಿರೋಭಿಃ ಪ್ರಾಪ್ಯ ರಾಜರ್ಷಿಪರಿವಾರ್ಯೋಪತಸ್ಥಿರೇ ॥೨॥

ದ್ರೌಪದಿ, ಭೀಮಸೇನ ಮತ್ತು ತಪಸ್ವಿಗಳಾದ ನಕುಲಸಹದೇವರು ಆ ರಾಜರ್ಷಿಗೆ ಶಿರಸ್ಸಿನಿಂದ ನಮಸ್ಕಾರವನ್ನು ಮಾಡಿ ಅವನ ಸುತ್ತಲೂ ಸೇರಿದರು.

ತಥೈವ ಧೌಮ್ಯೋ ಧರ್ಮಜ್ಞಃ ಪಾಂಡವಾನಾಂ ಪುರೋಹಿತಃ ।
ಯಥಾನ್ಯಾಯಮುಪಾಕ್ರಾಂತಸ್ತಮೃಷಿಂ ಸಂಶಿತವ್ರತಮ್ ॥೩॥

ಅದರಂತೆ ಪಾಂಡವರ ಪುರೋಹಿತರಾದ ಧರ್ಮಜ್ಞರಾದ ಧೌಮ್ಯರೂ ಸಹ ಶ್ರೇಷ್ಠವ್ರತಧಾರಿಯಾದ ಆರ್ಷ್ಟಿಷೇಣನ ಜೊತೆಯಲ್ಲಿ ಯೋಗ್ಯವಾದ ರೀತಿಯಲ್ಲಿ ಸಮಾಗಮವನ್ನು ಹೊಂದಿದರು.

ಅನ್ವಜಾನಾತ್ ಸ ಧರ್ಮಜ್ಞೋ ಮುನಿರ್ದಿವ್ಯೇನ ಚಕ್ಷುಷಾ ।
ಪಾಂಡೋಃ ಪುತ್ರಾನ್ ಕುರುಶ್ರೇಷ್ಠಾನಾಸ್ಯತಾಮಿತಿ ಚಾಬ್ರವೀತ್ ॥೪॥

ಧರ್ಮಜ್ಞನಾದ ಆರ್ಷ್ಟಿಷೇಣ ಋಷಿಯು ತನ್ನ ದಿವ್ಯಚಕ್ಷುಸ್ಸಿನಿಂದ ಇವರು ಪಾಂಡುವಿನ ಮಕ್ಕಳಾದ ಕುರುಶ್ರೇಷ್ಠರೆಂದು ತಿಳಿದು ಕುಳಿತುಕೊಳ್ಳಿ ಎಂದು ಹೇಳಿದನು.

ಕುರೂಣಾಮೃಷಭಂ ಪಾರ್ಥಂ ಪೂಜಯಿತ್ವಾ ಮಹಾತಪಾಃ ।
ಸಹ ಭ್ರಾತೃಭಿರಾಸೀನಂ ಪರ್ಯಪೃಚ್ಛದನಾಮಯಮ್ ॥೫॥

ಮಹಾತಪಸ್ವಿಯಾದ ಅವನು ಕುರುಶ್ರೇಷ್ಠನಾದ ಯುಧಿಷ್ಠಿರನನ್ನು ಸತ್ಕರಿಸಿ ತಮ್ಮಂದಿರ ಜೊತೆಯಲ್ಲಿ ಕುಳಿತಿದ್ದ ಅವನಿಗೆ ಕುಶಲಪ್ರಶ್ನೆಯನ್ನು ಮಾಡಿದನು.

ನಾನೃತೇ ಕುರುಷೇ ಭಾವಂ ಕಚ್ಚಿದ್ಧರ್ಮೇ ಪ್ರವರ್ತಸೇ ।
ಮಾತಾಪಿತ್ರೋಶ್ಚ ತೇ ವೃತ್ತಿಃ ಕಚ್ಚಿತ್ ಪಾರ್ಥ ನ ಸೀದತಿ ॥೬॥

ಎಲೈ ಪಾರ್ಥನೇ, ನೀನು ಕೆಟ್ಟವಿಷಯದಲ್ಲಿ ಮನಸ್ಸನ್ನು ಹಾಕುವುದಿಲ್ಲವಷ್ಟೆ? ಧರ್ಮದಲ್ಲಿಯೇ ಪ್ರವೃತ್ತನಾಗುವಿಯಷ್ಟೆ? ತಂದೆತಾಯಿಯರ ವಿಷಯದಲ್ಲಿ ನಿನ್ನ ನಡತೆಯು ದುಷ್ಟವಾಗಿಲ್ಲವಷ್ಟೆ?

ಕಚ್ಚಿತ್ ತೇ ಗುರವಃ ಸರ್ವೇ ವೃದ್ಧಾ ವೈದ್ಯಾಶ್ಚ ಪೂಜಿತಾಃ ।
ಕಚ್ಚಿನ್ನ ಕುರುಷೇ ಭಾವಂ ಪಾರ್ಥ ಪಾಪೇಷು ಕರ್ಮಸು ॥೭॥

ಸುಕೃತಂ ಪ್ರತಿಕರ್ತುಂ ಚ ಕಚ್ಚಿದ್ ಹಾತುಂ ಚ ದುಷ್ಕೃತಮ್ ।
ಯಥಾನ್ಯಾಯಂ ಕುರುಶ್ರೇಷ್ಠ ಜಾನಾಸಿ ನ ವಿಕತ್ಥಸೇ ॥೮॥

ಎಲೈ ಪಾರ್ಥನೇ, ವೇದವಿದ್ಯಾವಿಶಾರದರಾದ ವೃದ್ಧರಾದ ನಿನ್ನ ಗುರುಗಳೆಲ್ಲರೂ ನಿನ್ನಿಂದ ಪೂಜಿಸಲ್ಪಡುತ್ತಾರಷ್ಟೆ? ನೀನು ಪಾಪಕರ್ಮಗಳಲ್ಲಿ ಮನಸ್ಸು ಮಾಡುವುದಿಲ್ಲವಷ್ಟೆ? ಎಲೈ ಕುರುಶ್ರೇಷ್ಠನೇ ಪುಣ್ಯವನ್ನು ಸಂಪಾದಿಸಲು ಅಥವಾ ದುಷ್ಟತನವನ್ನು ಬಿಡಲು ಯಥಾಯೋಗ್ಯವಾಗಿ ತಿಳಿದಿರುವಿಯಷ್ಟೆ? (ಒಳ್ಳೆಯ ಕೆಲಸಕ್ಕೆ ಪ್ರತ್ಯುಪಕಾರವನ್ನು ಮಾಡಲು ಮತ್ತು ಕೆಟ್ಟ ಕೆಲಸ ಮಾಡುವವರನ್ನು ತ್ಯಜಿಸಲು ನೀನು ಯೋಗ್ಯವಾಗಿ ತಿಳಿದಿರುವೆಯಷ್ಟೆ?) ನಿನ್ನನ್ನು ನೀನು ಹೊಗಳಿಕೊಳ್ಳುವುದಿಲ್ಲವಷ್ಟೆ?

ಯಥಾರ್ಹಂ ಮಾನಿತಾಃ ಕಚ್ಚಿತ್ ತ್ವಯಾ ನಂದಂತಿ ಸಾಧವಃ ।
ವನೇಷ್ವಪಿ ವಸನ್ ಕಚ್ಚಿತ್ ಧರ್ಮಮೇವಾನುವರ್ತಸೇ ।
ಕಚ್ಚಿದ್ ಧೌಮ್ಯಸ್ತ್ವದಾಚಾರ್ಯೈರ್ನ ಪಾರ್ಥ ಪರಿತಪ್ಯತೇ ॥೯॥

ಪಾರ್ಥನೇ, ಸಜ್ಜನರು ನಿನ್ನಿಂದ ಯಥೋಚಿತವಾಗಿ ಸತ್ಕರಿಸಲ್ಪಟ್ಟು ಸಂತೋಷದಿಂದ ಇದ್ದಾರಷ್ಟೆ? ನೀನು ಕಾಡಿನಲ್ಲಿದ್ದರೂ ಧರ್ಮವನ್ನೇ ಆಚರಿಸುವಿಯಷ್ಟೆ? ನಿನ್ನನಡತೆಯಿಂದ ಧೌಮ್ಯರಿಗೆ ಪರಿತಾಪವುಂಟಾಗುವುದಿಲ್ಲವಷ್ಟೆ?

ದಾನಧರ್ಮತಪಃಶೌಚೈರಾರ್ಜವೇನ ತಿತಿಕ್ಷಯಾ ।
ಪಿತೃಪೈತಾಮಹಂ ವೃತ್ತಂ ಕಚ್ಚಿತ್ ಪಾರ್ಥಾನುವರ್ತಸೇ ॥೧೦॥

ಕಚ್ಚಿದ್ ರಾಜರ್ಷಿಯಾತೇನ ಪಥಾ ಗಚ್ಛಸಿ ಪಾಂಡವ ॥೧೧॥

ಪಾರ್ಥನೇ, ತಂದೆ ತಾತಂದಿರ ನಡತೆಯನ್ನು ನೀನು ಅನುಸರಿಸುತ್ತಿರುವಿಯಷ್ಟೆ? ಎಲೈ ಪಾಂಡವನೇ, ರಾಜರ್ಷಿಗಳು ನಡೆದ ಮಾರ್ಗದಲ್ಲಿನಡೆಯುತ್ತಿರುವಿಯಷ್ಟೆ?

ಸ್ವೇ ಸ್ವೇ ಕಿಲ ಕುಲೇ ಜಾತೇ ಪುತ್ರೇ ನಪ್ತರಿ ವಾ ಪುನಃ ।
ಪಿತರಃ ಪಿತೃಲೋಕಸ್ಥಾಃ ಶೋಚಂತಿ ಚ ಹಸಂತಿ ಚ ॥೧೨॥

ಕಿಂ ತಸ್ಯ ದುಷ್ಕೃತೇಽಸ್ಮಾಭಿಃ ಸಂಪ್ರಾಪ್ತವ್ಯಂ ಭವಿಷ್ಯತಿ ।
ಕಿಂಚಾಸ್ಯ ಸುಕೃತೇಽಸ್ಮಾಭಿಃ ಪ್ರಾಪ್ತವ್ಯಮಿತಿ ಶೋಭನಮ್ ॥೧೩॥

ತಮ್ಮ ತಮ್ಮ ಕುಲದಲ್ಲಿ ಹುಟ್ಟಿದ ಮಕ್ಕಳು ಮತ್ತು ಮೊಮ್ಮಕ್ಕಳುಗಳನ್ನು ಗಮನಿಸಿ ಪಿತೃಲೋಕದಲ್ಲಿರುವ ಪಿತೃಗಳು ಇವನ ಪಾಪದಿಂದ ನಾವು ಏನು ಅನುಭವಿಸಬೇಕಾಗುವುದು ಮತ್ತು ಇವನ ಪುಣ್ಯದಿಂದ ನಾವು ಯಾವ ಸುಖಫಲವನ್ನು ಹೊಂದಬಹುದು ಎಂದುದುಃಖಪಡುತ್ತಾರೆ ಮತ್ತು ಸಂತೋಷದಿಂದ ನಗುತ್ತಾರೆ.

ಪಿತಾ ಮಾತಾ ತಥೈವಾಗ್ನಿರ್ಗುರುರಾತ್ಮಾ ಚ ಪಂಚಮಃ ।
ಯಸ್ಯೈತೇ ಪೂಜಿತಾಃ ಪಾರ್ಥ ತಸ್ಯ ಲೋಕಾವುಭೌ ಜಿತೌ ॥೧೪॥

ಎಲೈ ಪಾರ್ಥನೇ, ಮಾತಾಪಿತೃಗಳು, ಅಗ್ನಿ, ಗುರು ಮತ್ತು ತಾನು ಈ ಐದುಜನರು ಯಾರಿಂದ ಸತ್ಕರಿಸಲ್ಪಡುತ್ತಾರೋ ಅವರಿಗೆ ಉಭಯಲೋಕಗಳ ಜಯವುಂಟಾಗುತ್ತದೆ.

ಅಬ್ಭಕ್ಷಾ ವಾಯುಭಕ್ಷಾಶ್ಚ ಪ್ಲವಮಾನಾ ವಿಹಾಯಸಾ ।
ಜುಷಂತೇ ಪರ್ವತಶ್ರೇಷ್ಠಮೃಷಯಃ ಪರ್ವಸಂಧಿಷು ॥೧೫॥

ಅಬ್ಭಕ್ಷರಾದ ಮತ್ತು ವಾಯುಭಕ್ಷರಾದ ಋಷಿಗಳು ಆಕಾಶದಲ್ಲಿ ಸಂಚಾರ ಮಾಡುತ್ತಾ ಪರ್ವಕಾಲದಲ್ಲಿ ಈ ಶ್ರೇಷ್ಠಪರ್ವತವನ್ನು ಸೇವಿಸುತ್ತಾರೆ.

ಕಾಮಿನಃ ಸಹ ಕಾಂತಾಭಿಃ ಪರಸ್ಪರಮನುವ್ರತಾಃ ।
ದೃಶ್ಯಂತೇ ಶೈಲಶೃಂಗಸ್ಥಾ ಯಥಾ ಕಿಂಪುರುಷಾ ನೃಪ ॥೧೬॥

ಎಲೈ ರಾಜನೇ, ಕಾಮಿಗಳಾದ ಪುರುಷರು ತಮ್ಮ ಕಾಂತೆಯರ ಜೊತೆಯಲ್ಲಿ ಪರಸ್ಪರವಾಗಿ ಅನುಸರಿಸಿಕೊಂಡು ಈ ಪರ್ವತಶಿಖರದಲ್ಲಿ ಕಿಂಪುರುಷರಂತೆ ಕಾಣುತ್ತಾರೆ.

ಅರಜಾಂಸಿ ಚ ವಾಸಾಂಸಿ ವಸಾನಾಃ ಕೌಶಿಕಾನಿ ಚ ।
ದೃಶ್ಯಂತೇ ಬಹವಃ ಪಾರ್ಥ ಗಂಧರ್ವಾಪ್ಸರಸಾಂ ಗಣಾಃ ॥೧೭॥

ವಿದ್ಯಾಧರಗಣಾಶ್ಚೈವ ಸ್ರಗ್ವಿಣಃ ಪ್ರಿಯದರ್ಶನಾಃ ।
ಮಹೋರಗಗಣಾಶ್ಚೈವ ಸುಪರ್ಣಾಶ್ಚಾರಣಾದಯಃ ॥೧೮॥

ಎಲೈ ಪಾರ್ಥನೇ, ಶುಭ್ರವಾದ ರೇಷ್ಮೆಯ ವಸ್ತ್ರಗಳನ್ನು ಉಟ್ಟುಕೊಂಡ ಅನೇಕ ಗಂಧರ್ವರ ಮತ್ತು ಅಪ್ಸರೆಯರ ಗಣಗಳೂ, ಹೂಮಾಲೆಯನ್ನು ಧರಿಸಿದ ಪ್ರಿಯ ದರ್ಶನರಾದ ವಿದ್ಯಾಧರ ಗಣಗಳೂ, ಮಹಾಸರ್ಪಗಳ ಗಣಗಳೂ ಮತ್ತು ಚಾರಣರೂ ಮತ್ತು ಪಕ್ಷಿಗಳೂ ಇಲ್ಲಿ ಕಾಣಬರುತ್ತವೆ.

ಅಸ್ಯ ಚೋಪರಿ ಶೈಲಸ್ಯ ಶ್ರೂಯತೇ ಪರ್ವಸಂಧಿಷು ।
ಭೇರೀಪಣವಶಂಖಾನಾಂ ಮೃದಂಗಾನಾಂ ಚ ನಿಸ್ವನಃ ॥೧೯॥

ಈ ಪರ್ವತದ ಮೇಲ್ಭಾಗದಲ್ಲಿ ಪರ್ವಸಂಧಿಗಳಲ್ಲಿ ಭೇರೀಪಣವಶಂಖಗಳ ಮತ್ತು ಮೃದಂಗಗಳ ಶಬ್ದವು ಕೇಳಿಬರುತ್ತದೆ.

ಇಹಸ್ಥೈರೇವ ತತ್ಸರ್ವಂ ಶ್ರೋತವ್ಯಂ ಭರತರ್ಷಭಾಃ ।
ನ ಕಾರ್ಯಾ ವಃ ಕಥಂಚಿತ್ ಸ್ಯಾತ್ ತತ್ರಾಭಿಗಮನೇ ಮತಿಃ ॥೨೦॥

ಎಲೈ ಭರತಶ್ರೇಷ್ಠರೇ, ಇಲ್ಲಿಯೇ ನಿಂತು ಆ ಶಬ್ದಗಳನ್ನೆಲ್ಲಾ ಕೇಳತಕ್ಕದ್ದು. ಯಾವ ಕಾರಣದಿಂದಲೂ ಅಲ್ಲಿಗೆ ಹೋಗಬೇಕೆಂಬ ಬುದ್ಧಿಯನ್ನು ಮಾಡಬಾರದು.

ನ ಚಾಪ್ಯತಃ ಪರಂ ಶಕ್ಯಂ ಗಂತುಂ ಭರತಸತ್ತಮಾಃ ।
ವಿಹಾರೋ ಹ್ಯತ್ರ ದೇವಾನಾಮಮಾನುಷಗತಿಸ್ತು ಸಾ ॥೨೧॥

ಎಲೈ ಭರತಸತ್ತಮರೇ, ಇಲ್ಲಿಂದ ಆಚೆಗೆ ಹೋಗಲು ಸಾಧ್ಯವೂ ಇಲ್ಲ. ಅದು ದೇವತೆಗಳ ವಿಹಾರಸ್ಥಾನ. ಮನುಷ್ಯರಿಗೆ ಅಗಮ್ಯವಾದುದು.

ಈಷಚ್ಚಪಲಕರ್ಮಾಣಂ ಮನುಷ್ಯಮಿಹ ಭಾರತ ।
ದ್ವಿಷಂತಿ ಸರ್ವಭೂತಾನಿ ತಾಡಯಂತಿ ಚ ರಾಕ್ಷಸಾಃ ॥೨೨॥

ಎಲೈ ಭಾರತನೇ, ಇಲ್ಲಿ ಚಪಲತೆಯಿಂದ ಉದ್ಯುಕ್ತನಾಗುವ ಮನುಷ್ಯನನ್ನು ಎಲ್ಲ ಭೂತಗಳೂ ದ್ವೇಷಿಸುತ್ತವೆ ಮತ್ತು ರಾಕ್ಷಸರು ತಾಡನ ಮಾಡುತ್ತಾರೆ.

ಅಸ್ಯಾತಿಕ್ರಮ್ಯ ಶಿಖಿರಂ ಕೈಲಾಸಸ್ಯ ಯುಧಿಷ್ಠಿರ ।
ಗತಿಃ ಪರಮಸಿದ್ಧಾನಾಂ ದೇವರ್ಷೀಣಾಂ ಪ್ರಕಾಶತೇ ॥೨೩॥

ಎಲೈ ಯುಧಿಷ್ಠಿರನೇ, ಈ ಕೈಲಾಸ ಪರ್ವತದ ಶಿಖರವನ್ನು ದಾಟಿದರೆ ಪರಮ ಸಿದ್ಧರಾದ ದೇವರ್ಷಿಗಳ ಗತಿಯು ಕಾಣುತ್ತದೆ.

ಚಾಪಲಾದಿಹ ಗಚ್ಛಂತಂ ಪಾರ್ಥ ಯಾನಮಿತಃ ಪರಮ್ ।
ಅಯಃಶೂಲಾದಿಭಿರ್ಘ್ನಂತಿ ರಾಕ್ಷಸಾಃ ಶತ್ರುಸೂದನ ॥೨೪॥

ಎಲೈ ಶತ್ರುಸೂದನನಾದ ಪಾರ್ಥನೇ, ಚಾಪಲ್ಯದಿಂದ ಇಲ್ಲಿಂದ ಮುಂದಿನ ಮಾರ್ಗದಲ್ಲಿ ಹೋಗುವ ಮನುಷ್ಯರನ್ನು ರಾಕ್ಷಸರು ಕಬ್ಬಿಣದ ಶೂಲಗಳಿಂದ ಹೊಡೆಯುತ್ತಾರೆ.

ಅಪ್ಸರೋಭಿಃ ಪರಿವೃತಃ ಸಮೃದ್ಧ್ಯಾ ನರವಾಹನಃ ।
ಇಹ ವೈಶ್ರವಣಸ್ತಾತ ಪರ್ವಸಂಧಿಷು ದೃಶ್ಯತೇ ॥೨೫॥

ಎಲೈ ಪ್ರೀತಿಪಾತ್ರನೇ, ಅಪ್ಸರೆಯರಿಂದ ಕೂಡಿದ ನರವಾಹನನಾದ ಕುಬೇರನು ತನ್ನ ವೈಭವದಿಂದ ಕೂಡಿ ಇಲ್ಲಿ ಪರ್ವಸಂಧಿಗಳಲ್ಲಿ ಕಾಣಿಸುತ್ತಾನೆ.

ಶಿಖರಸ್ಥಂ ಸಮಾಸೀನಮಧಿಪಂ ಯಕ್ಷರಾಕ್ಷಸಾಮ್ ।
ಪ್ರೇಕ್ಷಂತೇ ಸರ್ವಭೂತಾನಿ ಭಾನುಮಂತಮಿವೋದಿತಮ್ ॥೨೬॥

ಶಿಖರದಲ್ಲಿ ಕುಳಿತ ಯಕ್ಷ ಮತ್ತು ರಾಕ್ಷಸಾಧಿಪತಿಯಾದ ಕುಬೇರನನ್ನು ಸರ್ವಭೂತಗಳೂ ಕಿರಣಗಳ ಜೊತೆಯಲ್ಲಿ ಉದಿಸಿದ ಸೂರ್ಯನಂತೆ ನೋಡುತ್ತವೆ.

ದೇವದಾನವಸಿದ್ಧಾನಾಂ ತಥಾ ವೈಶ್ರವಣಸ್ಯ ಚ ।
ಗಿರೇಃ ಶಿಖರಮುದ್ಯಾನಮಿದಂ ಭರತಸತ್ತಮ ॥೨೭॥

ಎಲೈ ಭರತಸತ್ತಮನೇ, ಈ ಗಿರಿಶಿಖರವು ದೇವದಾನವ ಸಿದ್ಧರ ಮತ್ತು ಕುಬೇರನ ಉದ್ಯಾನವಾಗಿದೆ.

ಉಪಾಸೀನಸ್ಯ ಧನದಂ ತುಂಬುರೋಃ ಪರ್ವಸಂಧಿಷು ।
ಗೀತಸಾಮಸ್ವನಸ್ತಾತ ಶ್ರೂಯತೇ ಗಂಧಮಾದನೇ ॥೨೮॥

ಪರ್ವಸಂಧಿಗಳಲ್ಲಿ ಕುಬೇರನನ್ನು ಸ್ತೋತ್ರಮಾಡುವ ತುಂಬುರುವಿನ ಸಂಗೀತ ಮತ್ತು ಸಾಮಗಾನದ ಶಬ್ದಗಳು ಈ ಗಂಧಮಾದನ ಪರ್ವತದಲ್ಲಿ ಕೇಳಿಬರುತ್ತವೆ.

ಏತದೇವಂವಿಧಂ ಚಿತ್ರಮಿಹ ತಾತ ಯುಧಿಷ್ಠಿರ ।
ಪ್ರೇಕ್ಷಂತೇ ಸರ್ವಭೂತಾನಿ ಬಹುಶಃ ಪರ್ವಸಂಧಿಷು ॥೨೯॥

ಎಲೈ ಪ್ರೀತಿಪಾತ್ರನಾದ ಯುಧಿಷ್ಠಿರನೇ, ಇದನ್ನು ಮತ್ತು ಇಂತಹ ಅನೇಕ ವಿಚಿತ್ರಗಳನ್ನು ಪರ್ವಸಂಧಿಗಳಲ್ಲಿ ಎಲ್ಲ ಭೂತಗಳೂ ಇಲ್ಲಿ ಬಹಳವಾಗಿ ನೋಡುತ್ತವೆ.

ಭುಂಜಾನಾ ಮುನಿಭೋಜ್ಯಾನಿ ರಸವಂತಿ ಫಲಾನಿ ಚ ।
ವಸಧ್ವಂ ಪಾಂಡವಶ್ರೇಷ್ಠಾ ಯಾವದರ್ಜುನದರ್ಶನಾತ್ ॥೩೦॥

ಎಲೈ ಪಾಂಡವಶ್ರೇಷ್ಠರೇ, ಮುನಿಭೋಜ್ಯವಾದ ರುಚಿಯಾದ ಫಲಗಳನ್ನು ಭುಂಜಿಸುತ್ತಾ ಅರ್ಜುನನನ್ನು ನೋಡುವವರೆಗೆ ಇಲ್ಲಿ ವಾಸವನ್ನು ಮಾಡಿ.

ನ ತಾತ ಚಪಲೈರ್ಭಾವ್ಯಮಿಹ ಪ್ರಾಪ್ತೈಃ ಕಥಂಚನ ।
ಚಪಲಃ ಸರ್ವಭೂತಾನಾಂ ದ್ವೇಷ್ಯೋ ಭವತಿ ಮಾನವಃ ॥೩೧॥

ಎಲೈ ಪ್ರೀತಿಪಾತ್ರನೇ, ಇಲ್ಲಿಗೆ ಬಂದ ಯಾವನೂ ಸಹ ಚಪಲತೆಯಿಂದ ವರ್ತಿಸಬಾರದು. ಚಪಲತೆಯಿಂದ ನಡೆದುಕೊಳ್ಳುವ ಮನುಷ್ಯನು ಎಲ್ಲಾ ಭೂತಗಳ ದ್ವೇಷಕ್ಕೆ ಪಾತ್ರನಾಗುತ್ತಾನೆ.

ಇಹೋಷಿತ್ವಾ ಯಥಾಕಾಮಂ ಯಥಾಶ್ರದ್ಧಂ ವಿಹೃತ್ಯ ಚ ।
ತತಃ ಶಸ್ತ್ರಭೃತಾಂ ಶ್ರೇಷ್ಠ ಪೃಥಿವೀಂ ಪಾಲಯಿಷ್ಯಸಿ ॥೩೨॥

ಶಸ್ತ್ರಧಾರಿಗಳಲ್ಲಿ ಶ್ರೇಷ್ಠನಾದ ಎಲೈ ಧರ್ಮರಾಜನೇ, ಇಲ್ಲಿ ನಿಮ್ಮ ಇಚ್ಛೆಗೆ ತಕ್ಕಂತೆ ಮತ್ತು ಶ್ರದ್ಧೆಗೆ ತಕ್ಕಂತೆ ವಿಹಾರವನ್ನು ಮಾಡುತ್ತಾ ವಾಸಿಸಿ ಅನಂತರ ನೀನು ಪೃಥಿವಿಯನ್ನು ಪಾಲಿಸುವಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಪಂಚಾಶದಧಿಕಶತತಮೋಽಧ್ಯಾಯಃ ॥
॥ ಇತಿ ಯಕ್ಷಯುದ್ಧಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ತೈದನೆಯ
ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ವಸತ್ಸು ತತ್ರ ಪಾರ್ಥೇಷು ಪುನಃ ಕತಿಪಯೈರ್ದಿನೈಃ ।
ಉವಾಚ ಭೀಮಸೇನಸ್ಯ ಯಶೋಧರ್ಮಾಭಿವೃದ್ಧಯೇ ॥೨೯॥

ಪಂಚವರ್ಣಾನಿ ಪುಷ್ಪಾಣಿ ಕೃಷ್ಣಾ ವೀಕ್ಷ್ಯ ಹೃತಾನಿ ತು ।
ಮಾರುತೇನ ಕುಬೇರಸ್ಯ ಗೃಹಾನ್ನಿರಗಮ್ಯತಃ ॥೩೩॥

ಪಾಂಡವರು ಗಂಧಮಾದನದಲ್ಲಿ ವಾಸಮಾಡುತ್ತಿದ್ದಾಗಲೆ ಪುನಃ ಕೆಲವೇ ದಿನಗಳಲ್ಲಿ ಮಾನವರಿಗೆ ಅಗಮ್ಯವಾದ ಕುಬೇರನ ಕಮಲ ವನದಿಂದ ಗಾಳಿ ತಂದು ಬೀಳಿಸಿದ ಪಂಚವರ್ಣದ ಪುಷ್ಪಗಳನ್ನು ದ್ರೌಪದಿ ಕಂಡು ಭೀಮಸೇನನಿಗೆ ಯಶಸ್ಸೂ ಪುಣ್ಯವೂ ಹೆಚ್ಚಲಿ ಎಂಬ ಉದ್ದೇಶದಿಂದ ನುಡಿದಳು.

ಅಗಮ್ಯೋಽಯಂ ಗಿರಿಃ ಸರ್ವೈಃ ಕುಬೇರಾಣಾಭಿಪಾಲಿತಃ ।
ಅದ್ಯ ತ್ವಯ್ಯೇವ ಗಂತವ್ಯೋಯೇ ವಿಧೂಯಾಖಿಲರಾಕ್ಷಸಾನ್ ॥೩೪॥

ಈ ಪರ್ವತ ಕುಬೇರನಿಂದ ರಕ್ಷಿತವಾಗಿದ್ದು ಎಲ್ಲರಿಗೂ ದುರ್ಗಮವಾಗಿದೆ. ಅದರಿಂದ ನೀನೆ ಎಲ್ಲ ರಾಕ್ಷಸರನ್ನೂ ಧಿಃಕರಿಸಿ ಈಗ ಹೋಗಬೇಕು.

ಇತ್ಯುಕ್ತ ಆಶು ಸಗದಃ ಸಧನುಃ ಸಬಾಣೋ
ಭೀಮೋ ಗಿರೀಂದ್ರಮಜಿತೋರುಬಲೋ ವಿಗಾಹೇ ।
ಪ್ರಾಪ್ತಂ ನಿಶಮ್ಯ ಬಲದೈವತಸೂನುಮತ್ರ
ಪದ್ಮತ್ರಯಂ ನ್ಯರುಗದುದ್ಧತರಾಕ್ಷಸಾನಾಮ್ ॥೨೯೫॥

ಅಗ್ರೋ ನಿಧಾಯ ಮಣಿಮಂತಮಜೇಯಮುಗ್ರಂ
ಶಂಭೋರ್ವರಾದ್ ವಿವಿಧಶಸ್ತ್ರಮಹಾಭಿವೃಷ್ಟ್ಯಾ ।
ತಾನ್ ಸರ್ವರಾಕ್ಷಸಗಣಾನ್ ಮಣಿಮತ್ಸಮೇತಾನ್ ।
ಭೀಮೋ ಜಘಾನ ಸಪದಿ ಪ್ರವರೈಃ ಶರೌಘೈಃ ॥೨೯೬॥

ದ್ರೌಪದಿ ಹೀಗೆ ಹೇಳಿದೊಡನೆ ಅಜೇಯನಾದ ಮಹಾಬಲಶಾಲಿ ಭೀಮ ಗದೆ ಧನುರ್ಬಾಣಗಳನ್ನು ಹಿಡಿದು ಬೆಟ್ಟವನ್ನೇರಿದ. ಅವನು ಬಂದುದನ್ನು ಕೇಳಿ ಮೂರು ಪದ್ಮಸಂಖ್ಯೆಯಲ್ಲಿದ್ದ ಬಲೋನ್ಮತ್ತರಾದ ರಾಕ್ಷಸರು ಶಿವನ ವರದಿಂದ ಅಜೇಯನಾದ ಮಣಿಮಂತನೆಂಬ ಕ್ರೂರ ರಾಕ್ಷಸನನ್ನು ಮುಂದೆ ಮಾಡಿಕೊಂಡು ನಾನಾ ಬಗೆಯ ಶಸ್ತ್ರ ಮಹಾಸ್ತ್ರಗಳ ಮಳೆಗರೆಯುತ್ತ ಬಂದು ತಡೆದರು. ಭೀಮ ಮಣಿಮಂತನ ಸಮೇತವಾಗಿ ಆ ಎಲ್ಲ ರಾಕ್ಷಸ ಸಮೂಹಗಳನ್ನು ಶ್ರೇಷ್ಠ ಬಾಣ ಸಮೂಹಗಳಿಂದ ಬೇಗನೆ ಸಂಹರಿಸಿದ.

ಅವಧ್ಯಾಂಸ್ತಾನ್ ಕ್ಷಣೇನೈವ ಹತ್ವಾ ಭೀಮೋ ಮಹಾಬಲಃ ।
ರಣೇ ಕ್ರೋಧವಶಾನ್ ಸರ್ವಾನತಿಷ್ಠದ್ ಗಿರಿಮೂರ್ದ್ಧನಿ ॥೨೯೭॥

ತೇ ಹತಾ ಭೀಮಸೇನೇ ಪ್ರಾಪುರಂಧಂತಮೋಽಖಿಲಾಃ ॥೨೯೮॥

ಅವಧ್ಯರಾದ ಕ್ರೋಧವಶ ರಾಕ್ಷಸರನ್ನು ಯುದ್ಧದಲ್ಲಿ ಕ್ಷಣದಲ್ಲಿ ಕೊಂದು ಮಹಾ ಬಲಿಷ್ಠನಾದ ಭೀಮ ಪರ್ವತದ ತುದಿಯಲ್ಲಿ ನಿಂತ. ಭೀಮಸೇನನಿಂದ ಹತರಾದ ಆ ರಾಕ್ಷಸರೆಲ್ಲರೂ ಅಂಧಂತಮಸ್ಸಿಗೆ ಹೋದರು.

ಹತಾಃ ಸೌಗಂಧಿಕವನೇ ಮಣಿಮಾಂಶ್ಚ ಪುನಃ ಕಲೌ ।
ಜಾತೋ ಮಿಥ್ಯಾಮತಿಂ ಸಮ್ಯಗಾಸ್ತೀರ್ಯಾऽಪಸ್ತಮೋऽಧಿಕಮ್ ॥

ಸೌಗಂಧಿಕ ವನದಲ್ಲಿ ಹತನಾದ ಮಣಿಮಂತ ಪುನಃ ಕಲಿಯುಗದಲ್ಲಿ ಹುಟ್ಟಿ ಮಿಥ್ಯಾಜ್ಞಾನವನ್ನು ಚೆನ್ನಾಗಿ ಹರಡಿ ಮಹಾತಮಸ್ಸನ್ನು ಹೊಂದಿದ.

★ ★ ★ ★

ನೂರ ಐವತ್ತಾರನೆಯ ಅಧ್ಯಾಯ

ಆರ್ಷ್ಟಿಷೇಣಾಶ್ರಮದಲ್ಲಿ ಪಾಂಡವರ ವಾಸ. ಗರುಡ ಮತ್ತು ವಾಯುವೇಗದಿಂದ ದ್ರೌಪದಿಯ ಎದುರಿನಲ್ಲಿ ಪಂಚವರ್ಣ ಪುಷ್ಪಗಳ ಪತನ. ಅವಳ ಪ್ರಾರ್ಥನೆಯಂತೆ ಅಂತಹ ಪುಷ್ಪಗಳನ್ನು ತರಲು ಹೋದ ಭೀಮಸೇನನ ಜೊತೆಯಲ್ಲಿ ಮಣಿಮಂತ ಮೊದಲಾದವರ ಯುದ್ಧ.

ಜನಮೇಜಯಃ

ಪಾಂಡೋಃ ಪುತ್ರಾ ಮಹಾತ್ಮಾನಃ ಸರ್ವೇ ದಿವ್ಯಪರಾಕ್ರಮಾಃ ।
ಕಿಯಂತಂ ಕಾಲಮವಸನ್ ಪರ್ವತೇ ಗಂಧಮಾದನೇ ॥೧॥

ಜನಮೇಜಯ– ಎಲೈ ಬ್ರಾಹ್ಮಣಶ್ರೇಷ್ಠರಾದ ವೈಶಂಪಾಯನರೇ, ಮಹಾತ್ಮರಾದ ದಿವ್ಯಪರಾಕ್ರಮಶಾಲಿಗಳಾದ ಎಲ್ಲಾ ಪಾಂಡುಪುತ್ರರು ಎಷ್ಟು ಸಮಯದವರೆಗೆ ಗಂಧಮಾದನಪರ್ವತದಲ್ಲಿ ವಾಸಿಸಿದರು?

ಆರ್ಷ್ಟಿಷೇಣಾಶ್ರಮೇ ತಸ್ಮಿನ್ ಮಮ ಪೂರ್ವಪಿತಾಮಹಾಃ ।
ಕಂ ಚ ಚಕ್ರುರ್ಮಹಾವೀರ್ಯಾಃ ಸರ್ವೇತಿಬಲಪೌರುಷಾಃ ।

ಅತಿಬಲಪರಾಕ್ರಮಗಳನ್ನು ಹೊಂದಿದ ಮಹಾಶೂರರಾದ ನನ್ನ ಪೂರ್ವಪಿತಾಮಹರೆಲ್ಲರೂ ಆರ್ಷ್ಟಿಷೇಣಾಶ್ರಮದಲ್ಲಿ ಇನ್ನೂ ಏನನ್ನು ಮಾಡಿದರು?

ಕಾನಿ ಚಾಭ್ಯವಹಾರ್ಯಾಣಿ ತತ್ರ ತೇಷಾಂ ಮಹಾತ್ಮನಾಮ್ ।
ವಸತಾಂ ಲೋಕವೀರಾಣಾಮಾಸಂಸ್ತದ್ ಬ್ರೂಹಿ ಸತ್ತಮ ॥೨॥

ಎಲೈ ಸಜ್ಜನಾಗ್ರಣಿಯೇ, ಅಲ್ಲಿ ವಾಸಿಸುವ ಲೋಕವೀರರಾದ ಆ ಮಹಾತ್ಮರು ಯಾವ ಆಹಾರವನ್ನು ಸ್ವೀಕರಿಸಿದರು? ಅದನ್ನು ಹೇಳಿ.

ವಿಸ್ತರೇಣ ಚ ಮೇ ಶಂಸ ಭೀಮಸೇನಪರಾಕ್ರಮಮ್ ।
ಯದ್ಯಚ್ಚಕ್ಕ್ರೇ ಮಹಾಬಾಹುಸ್ತಸ್ಮಿನ್ ಹೈಮವತೇ ಗಿರೌ ॥೩॥

ಮಹಾಬಾಹುವಾದ ಭೀಮಸೇನನು ಆ ಪರ್ವತದಲ್ಲಿ ಏನೇನನ್ನು ಮಾಡಿದನು ಎಂದು ಅವನ ಪರಾಕ್ರಮವನ್ನು ನನಗೆ ವಿಸ್ತಾರವಾಗಿ ಹೇಳಿ.

ನ ಖಲ್ವಾಸೀತ್ ಪುನರ್ಯುದ್ಧಂ ತಸ್ಯ ಯಕ್ಷ್ಯೈರ್ದ್ವಿಜೋತ್ತಮ ।
ಧನದಾಧ್ಯುಷಿತೇ ನಿತ್ಯಂ ವಸತಸ್ತತ್ರ ಪರ್ವತೇ ॥೪॥

ಎಲೈ ದ್ವಿಜೋತ್ತಮರೇ, ಕುಬೇರನ ಆವಾಸಸ್ಥಾನವಾದ ಆ ಪರ್ವತದಲ್ಲಿ ಭೀಮಸೇನನಿಗೂ ಮತ್ತು ಯಕ್ಷರಿಗೂ ಪುನಃ ಯುದ್ಧವಾಗಲಿಲ್ಲವಷ್ಟೆ?

ಕಚ್ಚಿತ್ ಸಮಾಗಮಸ್ತೇಷಾಮಾಸೀದ್ ವೈಶ್ರವಣಸ್ಯ ಚ ।
ತತ್ರ ಹ್ಯಾಯಾತಿ ಧನದ ಆರ್ಷ್ಟಿಷೇಣೋ ಯಥಾऽಬ್ರವೀತ್ ॥೫॥

ಆರ್ಷ್ಟಿಷೇಣನು ಹೇಳಿದಂತೆ ಅಲ್ಲಿಗೆ ಕುಬೇರನು ಆಗಾಗ ಬರುತ್ತಾನಷ್ಟೆ? ಪಾಂಡವರಿಗೂ ಮತ್ತು ಕುಬೇರನಿಗೂ ಸಮಾಗಮವೇನಾದರೂ ಉಂಟಾಯಿತೆ?

ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ತಪೋಧನ ।
ನ ಹಿ ಮೇ ಶೃಣ್ವತಸ್ತೃಪ್ತಿರಸ್ತಿ ತೇಷಾಂ ವಿಚೇಷ್ಟಿತಮ್ ॥೬॥

ತಪೋಧನರೇ, ಇದನ್ನು ನಾನು ವಿಸ್ತಾರವಾಗಿ ಕೇಳಲು ಬಯಸುತ್ತೇನೆ. ಅವರ ಚರ್ಯೆಗಳನ್ನು ಕೇಳುತ್ತಿರುವ ನನಗೆ ತೃಪ್ತಿಯೇ ಉಂಟಾಗುತ್ತಿಲ್ಲ.

ವೈಶಂಪಾಯನಃ

ಏತದಾತ್ಮಹಿತಂ ಶ್ರುತ್ವಾ ತಸ್ಯಾಪ್ರತಿಮತೇಜಸಃ ।
ಶಾಸನಂ ಸತತಂ ಚಕ್ರುಸ್ತಥೈವ ಭರತರ್ಷಭಾಃ ॥೭॥

ವೈಶಂಪಾಯನ– ಅಪ್ರತಿಮ ಪರಾಕ್ರಮಿಯಾದ ಆ ಆರ್ಷ್ಟಿಷೇಣನ ತಮಗೆ ಹಿತವಾದ ಶಾಸನವನ್ನು ಕೇಳಿ. ಭರತರ್ಷಭರು ಸತತವಾಗಿ ಅದನ್ನು ಆಚರಿಸಿದರು.

ಭುಂಜಾನಾ ಮುನಿಭೋಜ್ಯಾನಿ ರಸವಂತಿ ಫಲಾನಿ ಚ ।
ಶುದ್ಧಬಾಣಹತಾನಾಂ ಚ ಮೃಗಾಣಾಂ ಪಿಶಿತಾನಿ ಚ ॥೮॥

ಮೇಧ್ಯಾನಿ ಹಿಮವತ್ಪೃಷ್ಠೇ ಮಧೂನಿ ವಿವಿಧಾನಿ ಚ ।
ರಸಾಯನಸಮೃದ್ಧಾನಿ ತತ್ರೋಷುಸ್ತೇ ಸ್ಮ ಭಾರತಾಃ ॥೯॥

ಆ ಭರತರ್ಷಭರು ಮುನಿಯೋಗ್ಯವಾದ ರಸಯುಕ್ತವಾದ ಫಲಗಳನ್ನು ಸೇವಿಸುತ್ತಾ ಶುದ್ಧವಾದ ಬಾಣಗಳಿಂದ ಹತವಾದ ಮೃಗಗಳ ಮಾಂಸವನ್ನು ಸೇವಿಸುತ್ತಾ

ಹಿಮಾಲಯ ಪರ್ವತದಲ್ಲಿ ವಿವಿಧವಾದ ರಸಾಯನ ಸಮೃದ್ಧವಾದ ಮಧುಗಳನ್ನು ಸೇವಿಸುತ್ತಾ ಅಲ್ಲಿ ವಾಸಮಾಡಿದರು.

ತಥಾ ನಿವಸತಾಂ ತೇಷಾಂ ಪಂಚಮಂ ವರ್ಷಮಭ್ಯಗಾತ್ ।
ಶೃಣ್ವತಾಂ ಲೋಮಶೋಕ್ತಾನಿ ವಾಕ್ಯಾನಿ ವಿವಿಧಾನ್ಯುತ ॥೧೦॥

ಲೋಮಶರು ಹೇಳಿದ ದಿವ್ಯವಾದ ಕಥೆಗಳನ್ನು ಕೇಳಿ ಅಲ್ಲಿ ವಾಸಿಸುತ್ತಿದ್ದ ಅವರಿಗೆ ಐದನೆಯ ವರ್ಷವು ಪ್ರಾಪ್ತವಾಯಿತು.

ಕೃತ್ಯಕಾಲ ಉಪಸ್ಥಾಸ್ಯ ಇತಿ ಚೋಕ್ತ್ವಾ ಘಟೋತ್ಕಚಃ ।
ರಾಕ್ಷಸೈಃ ಸಹ ಸರ್ವೈಶ್ಚ ಪೂರ್ವಮೇವ ಗತಃ ಪ್ರಭೋ ॥೧೧॥

ಪ್ರಭುವೇ, ನನ್ನ ಅವಶ್ಯಕತೆ ಇರುವ ಕಾಲದಲ್ಲಿ ನಾನು ಪುನಃ ಬರುವೆನು ಎಂದು ಹೇಳಿ ರಾಕ್ಷಸರ ಜೊತೆಯಲ್ಲಿ ಘಟೋತ್ಕಚನು ಮೊದಲೇ ಹೊರಟುಹೋಗಿದ್ದನು.

ಆರ್ಷ್ಟಿಷೇಣಾಶ್ರಮೇ ತೇಷಾಂ ವಸತಾಂ ವೈ ಮಹಾತ್ಮನಾಮ್ ।
ಅಗಚ್ಛನ್ ಬಹವೋ ಮಾಸಾಃ ಪಶ್ಯತಾಂ ಮಹದದ್ಭುತಮ್ ॥೧೨॥

ಅನೇಕ ಅದ್ಭುತಗಳನ್ನು ನೋಡುತ್ತಾ ಆರ್ಷ್ಟಿಷೇಣನ ಆಶ್ರಮದಲ್ಲಿ ವಾಸ ಮಾಡುವ ಅವರಿಗೆ ಅನೇಕ ಮಾಸಗಳು ಕಳೆದವು.

ತೈಸ್ತತ್ರ ವಿಹರದ್ಭಿಶ್ಚ ರಮಮಾಣೈಶ್ಚ ಪಾಂಡವೈಃ ।
ಪ್ರೀತಿಮಂತೋ ಮಹಾಭಾಗಾ ಮುನಯಶ್ಚಾರಣಾಸ್ತಥಾ ॥೧೩॥

ಆಜಗ್ಮುಃ ಪಾಂಡವಾನ್ ದ್ರಷ್ಟುಂ ಶುದ್ಧಾತ್ಮಾನೋ ಯತವ್ರತಾಃ ।
ತೇ ತೈಃ ಸಹ ಕಥಾಂ ಚಕ್ರುರ್ದಿವ್ಯಾಂ ಭರತಸತ್ತಮಾಃ ॥೧೪॥

ಪಾಂಡವರು ಅಲ್ಲಿ ಸಂತೋಷದಿಂದ ವಾಸಮಾಡಿ ವಿಹಾರವನ್ನು ಮಾಡುತ್ತಿದ್ದಾಗ ಮಹಾನುಭಾವರಾದ ಶುದ್ಧಮನಸ್ಸುಳ್ಳ ವ್ರತನಿಯಮ ಪರರಾದ ಮುನಿಗಳು ಮತ್ತು ಚಾರಣರು ಪಾಂಡವರ ಮೇಲಿನ ಪ್ರೀತಿಯಿಂದ ಪಾಂಡವರನ್ನು ನೋಡಲು ಅಲ್ಲಿಗೆ ಬಂದರು. ಭರತಶ್ರೇಷ್ಠರು ಅವರ ಜೊತೆಯಲ್ಲಿ ದಿವ್ಯವಾದ ಸಂವಾದಗಳನ್ನು ಮಾಡಿದರು.

ತತಃ ಕತಿಪಯಾಹಸ್ಸು ಮಹಾಹ್ನದನಿವಾಸಿನಮ್ ।
ಋದ್ಧಿಮಂತಂ ಮಹಾನಾಗಂ ಸುಪರ್ಣಃ ಸಹಸಾऽऽಹರತ್ ॥೧೫॥

ಅನಂತರ ಕೆಲವು ದಿನಗಳು ಕಳೆದ ಮೇಲೆ ಒಂದು ದೊಡ್ಡ ಮಡುವಿನಲ್ಲಿದ್ದ ಸಮೃದ್ಧ ಶರೀರವುಳ್ಳ ಒಂದು ಮಹಾನಾಗನನ್ನು ಗರುಡನು ಇದ್ದಕ್ಕಿದ್ದಂತೆಯೇ ಹಾರಿಸಿಕೊಂಡು ಹೋದನು.

ಪ್ರಾಕಂಪತ ಮಹಾಶೈಲಃ ಪ್ರಾಮೃದ್ಯಂತ ಮಹಾದ್ರುಮಾಃ ।
ದದೃಶುಃ ಸರ್ವಭೂತಾನಿ ಪಾಂಡವಾಶ್ಚ ತದದ್ಭುತಮ್ ॥೧೬॥

ಗರುಡನ ಮಹಾವೇಗಕ್ಕೆ ಆ ಮಹಾಪರ್ವತವು ಕಂಪಿಸಿತು. ದೊಡ್ಡದೊಡ್ಡ ವೃಕ್ಷಗಳು ಮುರಿದವು. ಬೇರೆ ಎಲ್ಲಾ ಪ್ರಾಣಿಗಳು ಮತ್ತು ಪಾಂಡವರು ಆ ಅದ್ಭುತವಾದ ದೃಶ್ಯವನ್ನು ನೋಡಿದರು.

ತತಃ ಶೈಲೋತ್ತಮಸ್ಯಾಗ್ರಾತ್ ಪಾಂಡವಾನ್ ಪ್ರತಿ ಮಾರುತಃ ।
ಅವಹತ್ ಸರ್ವಮಾಲ್ಯಾನಿ ಗಂಧವಂತಿ ಶುಭಾನಿ ಚ ॥೧೭॥

ಅನಂತರ ಉಂಟಾದ ದೊಡ್ಡ ಮಾರುತವು ಪಾಂಡವರ ಸಮೀಪದಲ್ಲಿ ಒಳ್ಳೆಯ ಸುಗಂಧವಿರುವ ಎಲ್ಲಾ ಪುಷ್ಪಗಳನ್ನು ಪರ್ವತಶ್ರೇಷ್ಠದ ಅಗ್ರಭಾಗದಿಂದ ತಂದು ಹಾಕಿತು.

ತತ್ರ ಪುಪ್ಲಾವೆ ದಿವ್ಯಾನಿ ಸುಹೃದ್ಭಿಃ ಸಹ ಪಾಂಡವಾಃ ।
ದದೃಶುಃ ಪಂಚವರ್ಣಾನಿ ದ್ರೌಪದೀ ಚ ಯಶಸ್ವಿನೀ ॥೧೮॥

ವಿಶ್ವಾಸಪಾತ್ರರ ಜೊತೆಯಲ್ಲಿ ಇದ್ದ ಪಾಂಡವರು ಮತ್ತು ಯಶಸ್ವಿನಿಯಾದ ದ್ರೌಪದಿಯೂ ಸಹ ಪಂಚವರ್ಣವುಳ್ಳ ಆ ದಿವ್ಯವಾದ ಪುಷ್ಪಗಳನ್ನು ಅಲ್ಲಿ ನೋಡಿದರು.

ಭೀಮಸೇನಂ ತತಃ ಕೃಷ್ಣಾ ಕಾಲೇ ವಚನಮಬ್ರವೀತ್ ।
ವಿವಿಕ್ತೇ ಪರ್ವತೋದ್ದೇಶೇ ಸುಖಾಸೀನಂ ಮಹಾಭುಜಮ್ ॥೧೯॥

ಅನಂತರ ಯೋಗ್ಯವಾದ ಕಾಲದಲ್ಲಿ ಮಹಾಭುಜನಾದ ಭೀಮಸೇನನು ಪರ್ವತದ ಒಂದು ಎತ್ತರವಾದ ಪ್ರದೇಶದಲ್ಲಿ ಸುಖವಾಗಿ ಕುಳಿತಿರುವಾಗ ದ್ರೌಪದಿಯು ಅವನನ್ನು ಸಮೀಪಿಸಿ ಮಾತನಾಡಿದಳು.

ಸುಪರ್ಣಾನಿಲವೇಗೇನ ಶ್ವಸನೇನ ಮಹಾಚಲಾತ್ ।
ಪಂಚವರ್ಣಾನಿ ಪಾತ್ಯಂತೇ ಪುಷ್ಪಾಣಿ ಭರತರ್ಷಭ ॥೨೦॥

ಭರತರ್ಷಭನೇ, ಗರುಡನ ರೆಕ್ಕೆಗಳ ವೇಗದಿಂದ ಮತ್ತು ವಾಯುವೇಗದಿಂದ ಮಹಾಪರ್ವತದ ಅಗ್ರಭಾಗದಿಂದ ಪಂಚವರ್ಣದ ಪುಷ್ಪಗಳು ಬೀಳುತ್ತಿವೆ.

ದಿವ್ಯವರ್ಣಾನಿ ದಿವ್ಯಾನಿ ದಿವ್ಯಗಂಧವಹಾನಿ ಚ ।
ಮದಯಂತೀವ ಗಂಧೇನ ಮನೋ ಮೇ ಭರತರ್ಷಭ ॥೨೧॥

ಎಲೈ ಭರತರ್ಷಭನೇ, ದಿವ್ಯವರ್ಣವುಳ್ಳ, ದಿವ್ಯವಾದ ಗಂಧವುಳ್ಳ ಈ ಪುಷ್ಪಗಳು ತಮ್ಮ ಗಂಧದಿಂದ ನನ್ನ ಮನಸ್ಸಿಗೆ ಮುದವನ್ನು (ಸುಖವನ್ನು) ಉಂಟುಮಾಡುತ್ತಿವೆ.

ಯೇಷಾಂ ತು ದರ್ಶನಾತ್‌ಸ್ಪರ್ಶಾತ್ ಸೌರಭ್ಯಾಚ್ಚ ತಥೈವ ಚ ।
ನಶ್ಯತೀವ ಮನೋದುಃಖಂ ಮಮೇದಂ ಶತ್ರುತಾಪನ ॥೨೨॥

ಎಲೈ ಶತ್ರುತಾಪನನೇ, ಆ ಪುಷ್ಪಗಳ ದರ್ಶನದಿಂದ, ಸ್ಪರ್ಶನದಿಂದ ಹಾಗೂ ಗಂಧದ ಆಘ್ರಾಣದಿಂದ ನನ್ನ ಈ ಮನೋದುಃಖವೆಲ್ಲವೂ ನಾಶವಾಗುವಂತೆ ತೋರುತ್ತದೆ.

ಈದೃಶೈಃ ಕುಸುಮೈರ್ದಿವ್ಯೈಃ ದಿವ್ಯಗಂಧವಹೈಃ ಶುಭೈಃ ।
ದೇವತಾನ್ಯರ್ಚಯಿತ್ವಾಹಮಿಚ್ಛೇಯಂ ಸಂಗಮಂ ತ್ವಯಾ ॥೨೩॥

ಇಂತಹ ದಿವ್ಯಗಂಧೋಪೇತವಾದ ಶುಭವಾದ ದಿವ್ಯಪುಷ್ಪಗಳಿಂದ ದೇವತೆಗಳನ್ನು ಪೂಜಿಸಿ ನಾನು ನಿನ್ನ ಸಂಗವನ್ನು ಬಯಸುತ್ತೇನೆ.

ಇದಂ ತು ಪುರುಷವ್ಯಾಘ್ರ ವಿಶೇಷೇಣಾಂಬುಜಂ ಶುಭಮ್ ।
ಗಂಧಸಂಸ್ಥಾನಸಂಪನ್ನಂ ಮಮ ಮಾನಸವರ್ಧನಮ್ ॥೨೪॥

ಪುರುಷವ್ಯಾಘ್ರನೇ, ಇದೊಂದು ಶುಭವಾದ ಕಮಲ ಪುಷ್ಪವು ದಿವ್ಯಗಂಧದಿಂದ ಯುಕ್ತವಾಗಿ ನನ್ನ ಮನಸ್ಸಿನ ಕಾಮವನ್ನು ಹೆಚ್ಚಿಸುತ್ತಿದೆ.

ವಾಸುದೇವಸಹಾಯೇನ ವಾಸುದೇವಪ್ರಿಯೇಣ ಚ ।
ಖಾಂಡವೇ ಸತ್ಯಸಂಧೇನ ಭ್ರಾತ್ರಾ ತವ ಮಹಾತ್ಮನಾ ॥೨೫॥

ಗಂಧರ್ವೋರಗರಕ್ಷಾಂಸಿ ವಾಸವಶ್ಚ ನಿವಾರಿತಃ ।
ಹತಾ ಮಾಯಾವಿನಶ್ಚೋಗ್ರಾ ಧನುಃ ಪ್ರಾಪ್ತಂ ಚ ಗಾಂಡಿವಮ್ ॥೨೬॥

ನಿನ್ನ ತಮ್ಮನಾದ ಮಹಾತ್ಮನಾದ ಕೃಷ್ಣಪ್ರಿಯನಾದ ಸತ್ಯಸಂಧನಾದ ಅರ್ಜುನನು ಕೃಷ್ಣನ ಸಹಾಯದಿಂದ ಖಾಂಡವವನದಲ್ಲಿ ಗಂಧರ್ವೋರಗರಾಕ್ಷಸರನ್ನು ಮತ್ತು ಇಂದ್ರನನ್ನು ತಡೆದನು. ಅನೇಕ ಭಯಂಕರರಾದ ಮಾಯಾವಿಗಳು ಕೊಲ್ಲಲ್ಪಟ್ಟರು. ಗಾಂಡೀವ ಧನುಸ್ಸು ಅವನಿಗೆ ಪ್ರಾಪ್ತವಾಯಿತು.

ತವಾಪಿ ಸುಮಹತ್ ತೇಜೋ ಮಹದ್ ಬಾಹುಬಲಂ ಚ ತೇ ।
ಅವಿಷಹ್ಯಮನಾಧೃಷ್ಯಂ ಶಕ್ರತುಲ್ಯಬಲೋಪಮಮ್(ಪರಾಕ್ರಮ) ॥೨೭॥

ಇಂದ್ರನಿಗೆ ಸಮಾನವಾದ ಪರಾಕ್ರಮವುಳ್ಳವನೇ, ನಿನಗೂ ಸಹ ಇನ್ನೊಬ್ಬರು ತಡೆಯಲಾರದಂತಹ, ಯಾರೂ ಸೋಲಿಸಲು ಸಾಧ್ಯವಿಲ್ಲದಂತಹ, ಅತ್ಯಂತ ದೊಡ್ಡದಾದ ತೇಜಸ್ಸು ಮತ್ತು ದೊಡ್ಡದಾದ ಬಾಹುಬಲವು ಇದೆ.

ತ್ವದ್ಬಾಹುಬಲವೇಗೇನ ತ್ರಾಸಿತಾಃ ಸರ್ವರಾಕ್ಷಸಾಃ ।
ಹಿತ್ವಾ ಶೈಲಂ ಪ್ರಪದ್ಯಂತಾಂ ಭೀಮಸೇನ ದಿಶೋ ದಶ ॥೨೮॥

ಎಲೈ ಭೀಮಸೇನನೇ, ನಿನ್ನ ಬಾಹುಬಲದ ವೇಗದಿಂದ ಭಯಕ್ಕೆ ಒಳಗಾದ ಎಲ್ಲಾ ರಾಕ್ಷಸರೂ ಈ ಪರ್ವತವನ್ನು ಬಿಟ್ಟು ಹತ್ತು ದಿಕ್ಕುಗಳಿಗೆ ಹೊರಟು ಹೋಗಲಿ.

ತತಃ ಶೈಲೋತ್ತಮಸ್ಯಾಗ್ರಂ ಚಿತ್ರಮಾಲ್ಯಧರಂ ಶಿವಮ್ ।
ವ್ಯಪೇತಭಯಸಮ್ಮೋಹಾಃ ಪಶ್ಯಂತು ಸುಹೃದಸ್ತವ ॥೨೯॥

ಅನಂತರ ನಿನ್ನ ವಿಶ್ವಾಸಪಾತ್ರರು, ವಿಚಿತ್ರವಾದ ಪುಷ್ಪವನ್ನು ಧರಿಸಿರುವ ಮಂಗಳಕರವಾದ ಈ ಪರ್ವತಶ್ರೇಷ್ಠದ ಅಗ್ರಭಾಗವನ್ನು ಯಾವುದೇ ಭಯ ಮತ್ತು ಗಾಬರಿಗಳಿಲ್ಲದೆ ನೋಡುವವರಾಗಲಿ.

ಏವಂ ಪ್ರಣಿಹಿತಂ ಭೀಮ ಚಿರಾತ್ ಪ್ರಭೃತಿ ಮೇ ಮನಃ ।
ದ್ರಷ್ಟುಮಿಚ್ಛಾಮಿ ಶೈಲಾಗ್ರಂ ತ್ವದ್ಬಾಹುಬಲಪಾಲಿತಾ ॥೩೦॥

ಎಲೈ ಭೀಮಸೇನನೇ, ಈ ಒಂದು ಆಸೆಯನ್ನು ನಾನು ಮನಸ್ಸಿನಲ್ಲಿ ಬಹಳ ಕಾಲದಿಂದ ಇಟ್ಟುಕೊಂಡಿದ್ದೇನೆ. ನಿನ್ನ ಬಾಹುಬಲದಿಂದ ರಕ್ಷಿತಳಾಗಿ ಶೈಲಾಗ್ರಗಣ್ಯವನ್ನು ನೋಡಲು ಬಯಸುತ್ತೇನೆ.

ಇಚ್ಛಾಮಿ ಚ ನರವ್ಯಾಘ್ರ ಪುಷ್ಪಂ ಪ್ರತ್ಯಕ್ಷಮೀದೃಶಮ್ ।
ಆನೀಯಮಾನಂ ಕ್ಷಿಪ್ರಂ ವೈ ತ್ವಯಾ ಭರತಸತ್ತಮ ॥೩೧॥

ಎಲೈ ನರವ್ಯಾಘ್ರನೇ, ಭರತಸತ್ತಮನೇ, ನೀನು ಇಂತಹ ಪುಷ್ಪವನ್ನು ಬೇಗ ತಂದು ನನಗೆ ಕೊಡಬೇಕೆಂದು ನಾನು ಬಯಸುತ್ತೇನೆ.

ವೈಶಂಪಾಯನಃ

ತತಃ ಕ್ಷಿಪ್ತಮಿವಾತ್ಮಾನಂ ದ್ರೌಪದ್ಯಾ ಸ ಪರಂತಪಃ ।
ನಾಮೃಷ್ಯತ ಮಹಾಬಾಹುಃ ಪ್ರಹಾರಮಿವ ಸದ್ಗವಃ ॥೩೨॥

ವೈಶಂಪಾಯನ– ಆಗ ಪರಂತಪನಾದ ಮಹಾಬಾಹುವಾದ ಭೀಮಸೇನನು ದ್ರೌಪದಿಯಿಂದ ನಿಂದಿಸಲ್ಪಟ್ಟವನಂತೆ ತನ್ನನ್ನು ತಿಳಿದು ಒಳ್ಳೆಯ ವೃಷಭವು ಪ್ರಹಾರವನ್ನು ಸಹಿಸದಿರುವಂತೆ ಆ ಮಾತುಗಳನ್ನು ಸಹಿಸಲಿಲ್ಲ.

ಸಿಂಹರ್ಷಭಗತಿಃ ಶ್ರೀಮಾನುದಾರಃ ಕನಕಪ್ರಭಃ ।
ಮನಸ್ವೀ ಬಲವಾನ್ ದೃಪ್ತೋ ಮಾನೀ ಶೂರಶ್ಚ ಪಾಂಡವಃ ॥೩೩॥

ಲೋಹಿತಾಕ್ಷಃ ಪೃಥುವ್ಯಂಸೋ ಮತ್ತವಾರಣವಿಕ್ರಮಃ ।
ಸಿಂಹದಂಷ್ಟ್ರೋ ಬೃಹತ್‌ಸ್ಕಂಧಃ ಶಾಲಪೋತ ಇವೋದ್ಗತಃ ॥೩೪॥

ಮಹಾತ್ಮಾ ಚಾರುಸರ್ವಾಂಗಃ ಕಂಬುಗ್ರೀವೋ ಮಹಾಭುಜಃ ।
ರುಗ್ಮಪೃಷ್ಠಂ ಧನುಃ ಖಡ್ಗಂ ತೂಣಾಂಶ್ಚಾಪಿ ಪರಾಮೃಶತ್ ॥೩೫॥

ಸಿಂಹರ್ಷಭಗತಿಯನ್ನು ಹೊಂದಿದ ಕಾಂತಿಯುಕ್ತನಾದ, ಸುವರ್ಣವರ್ಣವನ್ನು ಹೊಂದಿದ, ಉದಾರನಾದ, ಧೈರ್ಯಶಾಲಿಯಾದ, ಬಲಿಷ್ಠನಾದ, ದರ್ಪಿಷ್ಠನಾದ, ಅಭಿಮಾನಶಾಲಿಯಾದ, ಶೂರನಾದ, ಲೋಹಿತಾಕ್ಷನಾದ, ವಿಸ್ತಾರವಾದ ವಕ್ಷಸ್ಥಳವನ್ನು ಹೊಂದಿದ, ಮದ್ದಾನೆಯ ಪರಾಕ್ರಮವನ್ನು ಹೊಂದಿದ, ಸಿಂಹದಂಷ್ಟ್ರನಾದ ವಿಸ್ತಾರವಾದ

ಭುಜವನ್ನು ಹೊಂದಿದ, ಚಿಕ್ಕಸಾಲವೃಕ್ಷದಂತೆ ಎತ್ತರನಾದ, ಸರ್ವಾಂಗದಲ್ಲಿ ಸುಂದರನಾದ, ಕಂಬುಗ್ರೀವನಾದ, ಮಹಾತ್ಮನಾದ, ಪಾಂಡವನಾದ ಭೀಮಸೇನನು ಚಿನ್ನದ ಹಿಡಿಯುಳ್ಳ ಧನುಸ್ಸನ್ನು, ಖಡ್ಗವನ್ನು ಮತ್ತು ಬತ್ತಳಿಕೆಗಳನ್ನು ತೆಗೆದುಕೊಂಡನು.

ಸ ಕೇಸರೀವ ಚೋತ್ಕೃಷ್ಟಃ ಪ್ರಭಿನ್ನ ಇವ ವಾರಣಃ ।
ವ್ಯಪೇತಭಯಸಮ್ಮೋಹಃ ಶೈಲಮಭ್ಯಪತದ್ ಬಲೀ ॥೩೬॥

ಬಲಿಷ್ಠನಾದ ಅವನು ಸಿಟ್ಟುಗೊಂಡ ಸಿಂಹದಂತೆ ಮದಿಸಿದ ಆನೆಯಂತೆ, ಭಯಭ್ರಾಂತಿಗಳಿಂದ ರಹಿತನಾಗಿ ಪರ್ವತವನ್ನು ಪ್ರವೇಶಿಸಿದನು.

ತಂ ಮೃಗೇಂದ್ರಮಿವಾಯಾಂತಂ ಪ್ರಭಿನ್ನಮಿವ ವಾರಣಮ್ ।
ದದೃಶುಃ ಸರ್ವಭೂತಾನಿ ಬಾಣಕಾರ್ಮುಕಧಾರಿಣಮ್ ॥೩೭॥

ಕೈಯಲ್ಲಿ ಧನುರ್ಬಾಣಗಳನ್ನು ಹಿಡಿದು ಮೃಗರಾಜನಾದ ಸಿಂಹದಂತೆ, ಮದೋನ್ಮತ್ತವಾದ ಆನೆಯಂತೆ, ಬರುತ್ತಿರುವ ಅವನನ್ನು ಎಲ್ಲ ಪ್ರಾಣಿಗಳೂ ನೋಡಿದವು.

ದ್ರೌಪದ್ಯಾ ವರ್ಧಯನ್ ಹರ್ಷಂ ಗದಾಮಾದಾಯ ಪಾಂಡವಃ ।
ವ್ಯಪೇತಭಯಸಮ್ಮೋಹಃ ಶೈಲರಾಜಂ ಸಮಾಶ್ರಿತಃ ॥೩೮॥

ದ್ರೌಪದಿಗೆ ಹರ್ಷವನ್ನು ಉಂಟುಮಾಡುತ್ತಾ ಪಾಂಡವನಾದ ಭೀಮಸೇನನು ಭಯಭ್ರಾಂತಿರಹಿತನಾಗಿ ಗದೆಯನ್ನು ತೆಗೆದುಕೊಂಡು ಶೈಲರಾಜನ ಮೇಲೆ ನಿಂತನು.

ನ ಗ್ಲಾನಿರ್ನ ಚ ಕಾತರ್ಯಂ ನ ವೈಕ್ಲವ್ಯಂ ನ ಮತ್ಸರಃ ।
ಕದಾಚಿದ್ಬುಭುಷತೇ ಪಾರ್ಥಮಾತ್ಮಜಂ ಮಾತರಿಶ್ವನಃ ॥೩೯॥

ವಾಯುದೇವರ ಮಗನಾದ ಭೀಮಸೇನನಿಗೆ ಯಾವಾಗಲಾದರೂ ಗ್ಲಾನಿಯಾಗಲೀ, ಕಾತರತೆಯಾಗಲೀ, ಅಧೈರ್ಯವಾಗಲೀ, ಮಾತ್ಸರ್ಯವಾಗಲೀ ಉಂಟಾಗುವುದಿಲ್ಲ.

ತದೇಕಾಯನಮಾಸಾದ್ಯ ವಿಷಮಂ ಭೀಮದರ್ಶನಮ್ ।
ಬಹುತಾಲೋಚ್ಛ್ರಯಂ ಶೃಂಗಮಾರುರೋಹ ಮಹಾಬಲಃ ॥೪೦॥

ಮಹಾಬಲನಾದ ಭೀಮಸೇನನು ಭಯಂಕರವಾಗಿ ಕಾಣುತ್ತಿದ್ದ ಒಬ್ಬನೇ ಹೋಗಬಹುದಾದ ಮಾರ್ಗವನ್ನು ಹಿಡಿದು ಅನೇಕ ತಾಲವೃಕ್ಷಗಳಷ್ಟು ಎತ್ತರವಾದ ಪರ್ವತ ಶೃಂಗವನ್ನು ಏರಿದನು.

ಸಕಿನ್ನರಮಹಾನಾಗಮುನಿಗಂಧರ್ವರಾಕ್ಷಸಾನ್ ।
ಹರ್ಷಯನ್ ಪರ್ವತಸ್ಯಾಗ್ರಮಾರುಹ್ಯ ಸ ಮಹಾಬಲಃ ॥೪೧॥

ತತೋ ವೈಶ್ರವಣಾವಾಸಂ ದದರ್ಶ ಭರತರ್ಷಭಃ ।

ಮಹಾಬಲನಾದ ಭರತರ್ಷಭನಾದ ಅವನು ಕಿನ್ನರರಿಗೂ ಮಹಾನಾಗಗಳಿಗೂ ಮುನಿಗಂಧರ್ವರಾಕ್ಷಸರಿಗೂ ಹರ್ಷವನ್ನು ಉಂಟುಮಾಡುತ್ತಾ ಪರ್ವತಶಿಖರವನ್ನು ಏರಿ ಅಲ್ಲಿಂದ ಕುಬೇರನ ಆವಾಸಸ್ಥಾನವನ್ನು ನೋಡಿದನು.

ಕಾಂಚನೈಃ ಸ್ಫಾಟಿಕೈಶ್ಚೈವ ವೇಶ್ಮಭಿಃ ಸಮಲಂಕೃತಮ್ ॥೪೨॥

ಪ್ರಾಕಾರೇಣ ಪರಿಕ್ಷಿಪ್ತಂ ಸೌವರ್ಣೇನ ಸಮಂತತಃ ।
ಸರ್ವರತ್ನದ್ಯುತಿಮತಾ ಸರ್ವೋದ್ಯಾನವತಾ ತಥಾ ॥೪೩॥

ಅದು ಸುವರ್ಣಮಯವಾದ ಮತ್ತು ಸ್ಫಟಿಕಮಯವಾದ ಗೃಹಗಳಿಂದ ಅಲಂಕೃತವಾಗಿದ್ದಿತು. ಸರ್ವರತ್ನಗಳ ಕಾಂತಿಯನ್ನು ಹೊಂದಿದ, ಸರ್ವೋದ್ಯಾನಗಳಿಂದ ಸುತ್ತುವರಿಯಲ್ಪಟ್ಟ ಸುವರ್ಣಮಯವಾದ ಕೋಟೆಯಿಂದ ಸುತ್ತಲೂ ಆವೃತವಾಗಿದ್ದಿತು.

ಶೈಲಾದಭ್ಯುಚ್ಚ್ರಯವತಾ ಚಯಾಟ್ಟಾಲಕಶೋಭಿನಾ ।
ದ್ವಾರತೋರಣನಿರ್ವ್ಯೂಹಧ್ವಜಸಂವಾಹಶೋಭಿನಾ ।

ವಿಲಾಸಿನೀಭಿರತ್ಯರ್ಥಂ ನೃತ್ಯಂತೀಭಿಃ ಸಮಂತತಃ ।
ವಾಯುನಾ ಧೂಯಮಾನಾಭಿಃ ಪತಾಕಾಭಿರಲಕೃಂತಮ್ ।

ಪರ್ವತಕ್ಕಿಂತಲೂ ಎತ್ತರವಾದ ಅಡಿಪಾಯಗಳಿಂದಲೂ ಮತ್ತು ಉಪ್ಪರಿಗೆಗಳಿಂದಲೂ ಮಹಾದ್ವಾರದ ತೋರಣಗಳಿಂದಲೂ, ಆನೆಯ ದಂತಗಳಿಂದ ನಿರ್ಮಿತವಾದ ಅಲಂಕೃತಗಳಿಂದಲೂ, ಆ ಗೃಹಗಳು ಶೋಭಿಸುತ್ತಿದ್ದವು.

ವಿಲಾಸಿನಿಯರು ಆ ಗೃಹದಲ್ಲಿ ಎಲ್ಲಕಡೆಯಿಂದಲೂ ನರ್ತನವನ್ನು ಮಾಡುತ್ತಿದ್ದರು. ಆ ಗೃಹಗಳು ವಾಯುವಿನಿಂದ ಕಂಪಿಸುವ ಪತಾಕೆಗಳಿಂದ ಅಲಂಕೃತವಾಗಿದ್ದಿತು.

ಧನುಷ್ಕೋಟಿಮವಷ್ಟಭ್ಯ ವಕ್ರಭಾವೇನ ಬಾಹುನಾ ।
ಪಶ್ಯಮಾನಃ ಸ ಖೇದೇನ ದ್ರವಿಣಾಧಿಪತೇಃ ಪುರಮ್ ॥
ಮೋದಯನ್ ಸರ್ವಭೂತಾನಿ ಗಂಧಮಾದನಸಂಭವಃ ।
ಸರ್ವಗಂಧವಹಸ್ತತ್ರ ಮಾರುತಃ ಸುಸುಖೋ ವವೌ ।

ಧನುಷ್ಕೋಟಿಯನ್ನು ಅವಲಂಬಿಸಿ ತನ್ನ ಎಡಬಾಹುವನ್ನು ಅದರ ಮೇಲಿಟ್ಟು ಭೀಮಸೇನನು ಖೇದದಿಂದ ದ್ರವ್ಯಾಧಿಪತಿಯಾದ ಕುಬೇರನ ಪಟ್ಟಣವನ್ನು ನೋಡಿದನು. ಅಲ್ಲಿ ಗಂಧಮಾದನ ಪರ್ವತದಲ್ಲಿ ಉಂಟಾದ ಮಾರುತನು ಎಲ್ಲ ಪರಿಮಳಗಳನ್ನೂ ತೆಗೆದುಕೊಂಡು, ಎಲ್ಲ ಪ್ರಾಣಿಗಳಿಗೂ ಸಂತೋಷವನ್ನುಂಟು ಮಾಡುತ್ತಾ ಸುಖವಾಗಿ ಬೀಸುತ್ತಿತ್ತು.

ಚಿತ್ರಾ ವಿವಿಧವರ್ಣಾಭಾಶ್ಚಿತ್ರಮಂಜರಿಧಾರಿಣಃ ।
ಅಚಿಂತ್ಯಾ ವಿವಿಧಾಸ್ತತ್ರ ದ್ರುಮಾಃ ಪರಮಶೋಭನಃ ॥೪೪॥

ಅಲ್ಲಿ ವಿಚಿತ್ರವಾದ ವಿವಿಧ ವರ್ಣಗಳಿಂದ ಕೂಡಿದ ವಿಚಿತ್ರವಾದ ಹೂಗೊಂಚಲುಳ್ಳ ಅಚಿಂತ್ಯವಾದ ವಿವಿಧವಾದ, ಕಾಂತಿಯುಕ್ತವಾದ ವೃಕ್ಷಗಳಿದ್ದವು.

ರತ್ನಜಾಲಪರಿಕ್ಷಿಪ್ತಂ ಚಿತ್ರಮಾಲ್ಯವಿಭೂತಿಷಿತಮ್ ।
ರಾಕ್ಷಸಾಧಿಪತೇಃ ಸ್ಥಾನಂ ದದೃಶೇ ಭರತರ್ಷಭಃ ॥೪೫॥

ಭರತರ್ಷಭನಾದ ಭೀಮಸೇನನು ರತ್ನಜಾಲಗಳಿಂದ ಸುತ್ತಲೂ ಅಲಂಕೃತವಾದ ವಿಚಿತ್ರಪುಷ್ಪಗಳಿಂದ ಭೂಷಿತವಾದ ರಾಕ್ಷಸಾಧಿಪತಿಯಾದ ಕುಬೇರನ ಸ್ಥಾನವನ್ನು ನೋಡಿದನು.

ಗದಾಖಡ್ಗಧನುಷ್ಪಾಣಿಃ ಸಮಭಿತ್ಯಕ್ತಜೀವಿತಃ ।
ಭೀಮಸೇನೋ ಮಹಾಬಾಹುಸ್ತಸ್ಥೌ ಗಿರಿರಿವಾಚಲಃ ॥೪೬॥

ಮಹಾಬಾಹುವಾದ ಭೀಮಸೇನನು ಕೈಯಲ್ಲಿ ಗದಾಖಡ್ಗ ಧನುಸ್ಸುಗಳನ್ನು ಹಿಡಿದು ಯಾವ ಪ್ರಾಣಭಯವೂ ಇಲ್ಲದೇ ಇನ್ನೊಂದು ಪರ್ವತದಂತೆ ಪರ್ವತಶಿಖರದಲ್ಲಿ ಅಚಲನಾಗಿ ನಿಂತನು.

ತತಃ ಶಂಖಮುಪಾಧ್ಮಾಸೀದ್ ದ್ವಿಷತಾಂ ಲೋಮಹರ್ಷಣಮ್ ।
ಜ್ಯಾಘೋಷತಳಶಬ್ದಂ ಚ ಕೃತ್ವಾ ಭೂತಾನ್ಯಮೋಹಯತ್ ॥೪೭॥

ಅನಂತರ ಶತ್ರುಗಳಿಗೆ ರೋಮಾಂಚವನ್ನು ಉಂಟುಮಾಡುವ ತನ್ನ ಶಂಖವನ್ನು ಊದಿದನು. ಧನುಸ್ಸಿನ ಹೆದೆಯ ಝೇಂಕಾರವನ್ನು ಮತ್ತು ತನ್ನ ಹಸ್ತಗಳ (ಚಪ್ಪಾಳೆ) ಶಬ್ದವನ್ನು ಮಾಡಿ ಎಲ್ಲ ಭೂತಗಳನ್ನು ದಿಗ್ಭ್ರಾಂತಗೊಳಿಸಿದನು.

ತತಃ ಪ್ರಹೃಷ್ಟರೋಮಾಣಸ್ತಂ ಶಬ್ದಮಭಿದುದ್ರುವುಃ ।
ಯಕ್ಷರಾಕ್ಷಸಗಂಧರ್ವಾಃ ಪಾಂಡವಸ್ಯ ಸಮೀಪತಃ ॥೪೮॥

ಆ ಶಬ್ದವನ್ನು ಕೇಳಿ ರೋಮಾಂಚಗೊಂಡ ಯಕ್ಷರಾಕ್ಷಸಗಂಧರ್ವರು ಪಾಂಡವನ ಬಳಿಗೆ ಬಂದರು.

ಗದಾಪರಿಘನಿಸ್ತ್ರಿಂಶಶೂಲಶಕ್ತಿಪರಶ್ವಧಾಃ ।
ಪ್ರಗೃಹೀತಾ ವ್ಯರೋಚಂತ ಯಕ್ಷರಾಕ್ಷಸಬಾಹುಭಿಃ ॥೪೯॥

ಆ ಯಕ್ಷರಾಕ್ಷಸರು ತಮ್ಮ ಬಾಹುಗಳಲ್ಲಿ ಹಿಡಿದ ಗದಾ ಪರಿಘ ಖಡ್ಗ ಶೂಲ ಶಕ್ತಿ ಪರಶ್ವಧ ಮೊದಲಾದ ಆಯುಧಗಳು ಶೋಭಿಸಿದವು.

ತತಃ ಪ್ರವವೃತ್ತೇ ಯುದ್ಧಂ ತೇಷಾಂ ತಸ್ಯ ಚ ಭಾರತ ।
ಸಂರಬ್ಧಾನಾಂ ಮಹಾಘೋಷಂ ಸಿಂಹಾನಾಮಿವ ನರ್ದತಾಮ್ ॥೫೦॥

ಎಲೈ ಭಾರತನೇ, ಅನಂತರ ಸಿಂಹದಂತೆ ಗರ್ಜಿಸುವ ಕ್ರೋಧದಿಂದ ಕೂಡಿದ ಅವರಿಗೂ ಮತ್ತು ಭೀಮಸೇನನಿಗೂ ಮಹಾಘೋಷವನ್ನು ಉಂಟುಮಾಡುವ ಯುದ್ಧವು ಪ್ರಾರಂಭವಾಯಿತು.

ತೈಃ ಪ್ರಯುಕ್ತಾನ್ ಮಹಾಮಾಯೈಃ ಶೂಲಶಕ್ತಿಪರಶ್ವಧಾನ್ ।
ಭಲ್ಲೈರ್ಭೀಮಃ ಪ್ರಚಿಚ್ಛೇದ ಭೀಮವೇಗತರೈಸ್ತತಃ ॥೫೧॥

ಮಹಾಮಾಯಿಗಳಾದ ಅವರು ಪ್ರಯೋಗಿಸಿದ ಶೂಲಶಕ್ತಿಪರಶ್ವಧ ಮೊದಲಾದ ಆಯುಧಗಳನ್ನು ಅದಕ್ಕಿಂತ ಭಯಂಕರ ವೇಗವುಳ್ಳ ತನ್ನ ಆಯುಧಗಳಿಂದ ಭೀಮಸೇನನು ಕತ್ತರಿಸಿದನು.

ಅಂತರಿಕ್ಷಗತಾನಾಂ ಚ ಭೂಮಿಷ್ಠಾನಾಂ ಚ ಗರ್ಜತಾಮ್ ।
ಶರೈರ್ವಿವ್ಯಾಧ ಗಾತ್ರಾಣಿ ರಾಕ್ಷಸಾನಾಂ ಮಹಾಬಲಃ ॥೫೨॥

ಅಂತರಿಕ್ಷದಲ್ಲಿದ್ದು ಮತ್ತು ಭೂಮಿಯ ಮೇಲೆ ನಿಂತು ಗರ್ಜಿಸುವ ಆ ರಾಕ್ಷಸರ ಶರೀರಗಳನ್ನು ಮಹಾಬಲನಾದ ಭೀಮಸೇನನು ಬಾಣಗಳಿಂದ ಪೀಡಿಸಿದನು.

ಶೋಣಿತಸ್ಯ ತತಃ ಪೇತುರ್ಘನಾನಾಮಿವ ಭಾರತ ।
ಗಾತ್ರೇಭ್ಯಃ ಪ್ರಚ್ಯುತಾ ಧಾರಾಃ ರಾಕ್ಷಸಾನಾಂ ಸಮಂತತಃ ॥೫೩॥

ಎಲೈ ಭಾರತನೇ, ಆಗ ಮೋಡಗಳು ಮಳೆಯನ್ನು ಸುರಿಸುವಂತೆ ಎಲ್ಲ ಕಡೆಗಳಲ್ಲಿಯೂ ರಾಕ್ಷಸರ ದೇಹದಿಂದ ಹೊರಟ ರಕ್ತದ ಧಾರೆಗಳು ಭೂಮಿಯ ಮೇಲೆ ಬಿದ್ದು ಹರಿದವು.

ಸಾ ಲೋಹಿತಮಹಾವೃಷ್ಟಿರಭ್ಯವರ್ಷನ್ಮಹಾಬಲಮ್ ।
ಕಾಯೇಭ್ಯಃ ಪ್ರಚ್ಯುತಾ ಧಾರಾ ರಾಕ್ಷಸಾನಾಂ ಸಮಂತತಃ ॥೫೪॥

ಗದಾಪರಿಘಪಾಣೀನಾಂ ರಕ್ಷಸಾಂ ಕಾಯಸಂಭವಾಃ ॥೫೫॥

ಗದಾಪರಿಘವನ್ನು ಹಿಡಿದ ರಾಕ್ಷಸರ ಶರೀರದಿಂದ ಹೊರಹೊಮ್ಮಿದ ಆ ಸುತ್ತಲೂ ಇದ್ದ ರಾಕ್ಷಸರ ರಕ್ತದ ಮಹಾವೃಷ್ಟಿಯು ಆ ಮಹಾಬಲನಾದ ಭೀಮಸೇನನ ಮೇಲೆ ಬಿದ್ದಿತು.

ಭೀಮಬಾಹುಬಲೋತ್ಸೃಷ್ಟೈರಾಯುಧೈರ್ಯಕ್ಷರಕ್ಷಸಾಮ್ ।
ವಿನಿಕೃತ್ತಾನಿ ದೃಶ್ಯಂತೇ ಶರೀರಾಣಿ ಶಿರಾಂಸಿ ಚ ॥೫೬॥

ಭೀಮಸೇನನ ಬಾಹುಬಲದಿಂದ ಪ್ರಯೋಗಿಸಲ್ಪಟ್ಟ ಆಯುಧಗಳಿಂದ ಕತ್ತರಿಸಲ್ಪಟ್ಟ ಯಕ್ಷರಾಕ್ಷಸರ ಶರೀರಗಳು ಮತ್ತು ಶಿರಸ್ಸುಗಳು ಅಲ್ಲಿ ಕಾಣುತ್ತಿದ್ದವು.

ಪ್ರಚ್ಛಾದ್ಯಮಾನಂ ರಕ್ಷೋಭಿಃ ಪಾಂಡವಂ ಪ್ರಿಯದರ್ಶನಮ್ ।
ದದೃಶುಃ ಸರ್ವಭೂತಾನಿ ಸೂರ್ಯಮಭ್ರಗಣೈರಿವ ॥೫೭॥

ಸೂರ್ಯನನ್ನು ಮೋಡಗಳ ಸಮೂಹವು ಮುಚ್ಚಿದಂತೆ ಪ್ರಿಯದರ್ಶನನಾದ ಪಾಂಡವನನ್ನು ರಾಕ್ಷಸರು (ತಮ್ಮ ತಪ್ಪುಗಳಿಂದ) ಮುಚ್ಚುವುದನ್ನು ಎಲ್ಲ ಭೂತಗಳೂ ನೋಡಿದವು.

ಸ ರಶ್ಮಿಭಿರಿವಾದಿತ್ಯಃ ಶರೈರರಿನಿಘಾತಿಭಿಃ ।
ಸರ್ವಾನಾರ್ಚ್ಛನ್ಮಹಾಬಾಹುರ್ಬಲವಾನ್ ಸತ್ಯವಿಕ್ರಮಃ ॥೫೮॥

ಮಹಾಬಾಹುವೂ, ಸತ್ಯವಿಕ್ರಮನೂ, ಬಲಿಷ್ಠನೂ ಆದ ಭೀಮಸೇನನು ಆದಿತ್ಯನು ತನ್ನ ಕಿರಣಗಳಿಂದ ಎಲ್ಲರನ್ನೂ ತಲುಪುವಂತೆ ಶತ್ರುಸಂಹಾರಕವಾದ ತನ್ನ ಬಾಣಗಳಿಂದ ಎಲ್ಲರನ್ನೂ ಸ್ಪರ್ಶಿಸಿದನು.

ಅಭಿತರ್ಜಯಮಾನಾಶ್ಚ ರುವಂತಶ್ಚ ಮಹಾರವಾನ್ ।
ನ ಮೋಹಂ ಭೀಮಸೇನಸ್ಯ ದದೃಶುಃ ಸರ್ವರಾಕ್ಷಸಾಃ ॥೫೯॥

ಎಲ್ಲಾ ರಾಕ್ಷಸರು ಭೀಮಸೇನನ್ನು ಬೆದರಿಸಿ ಮಹಾನಾದಗಳನ್ನು ಮಾಡುತ್ತಿದ್ದರೂ ಅದರಿಂದ ಭೀಮಸೇನನಿಗೆ ಯಾವ ವಿಕಾರವೂ ಉಂಟಾಗುತ್ತಿಲ್ಲವೆಂದು ಅವರು ಗಮನಿಸಿದರು.

ಯಕ್ಷಾ ವಿಕೃತಸರ್ವಾಂಗಾ ಭೀಮಸೇನಭಯಾರ್ದಿತಾಃ ।
ಭೀಮಮಾರ್ತಸ್ವರಂ ಚಕ್ರುರ್ವಿಪ್ರಕೀರ್ಣಮಹಾಯುಧಾಃ ॥೬೦॥

ಯಕ್ಷರು ಸರ್ವಾಂಗಗಳ ವಿಕಾರವನ್ನು ಹೊಂದಿ ಭೀಮಸೇನನ ಭಯದಿಂದ ಪೀಡಿತರಾಗಿ ತಮ್ಮ ಮಹಾಯುಧಗಳನ್ನು ಎಲ್ಲಕಡೆಗಳಲ್ಲಿಯೂ ಎಸೆದು ಭಯಂಕರವಾದ ಆರ್ತನಾದವನ್ನು ಮಾಡಿದರು.

ಉತ್ಸೃಜ್ಯ ತೇ ಗದಾಶೂಲಾಸಿಸಶಕ್ತಿಪರಶ್ವಧಾನ್ ।
ದಕ್ಷಿಣಾಂ ದಿಶಮಾಜಗ್ಮುಸ್ತ್ರಾಸ್ತಿತಾ ದೃಢಧನ್ವನಾ ॥೬೧॥

ಅವರು ದೃಢಧನ್ವನಾದ ಭೀಮಸೇನನಿಗೆ ಹೆದರಿ ತಮ್ಮ ಗದಾ, ಶೂಲ, ಕತ್ತಿ, ಶಕ್ತಿ, ಪರಶ್ವಧ ಮೊದಲಾದ ಆಯುಧಗಳನ್ನು ಅಲ್ಲಿಯೇ ಬಿಟ್ಟು ದಕ್ಷಿಣದಿಕ್ಕಿಗೆ ಬಂದರು.

ತತ್ರ ಶೂಲಗದಾಪಾಣಿರ್ವ್ಯೂಢೋರಸ್ಕೋ ಮಹಾಭುಜಃ ।
ಸಖಾ ವೈಶ್ರವಣಸ್ಯಾಸೀನ್ಮಣಿಮಾನ್ನಾಮ ರಾಕ್ಷಸಃ ॥೬೨॥

ಅವರಲ್ಲಿ ಶೂಲಗದಾಪಾಣಿಯಾದ ಮಹಾಭುಜನಾದ ವಿಸ್ತಾರವಾದ ವಕ್ಷಸ್ಥಳವುಳ್ಳ ವೈಶ್ರವಣನ ಮಿತ್ರನಾದ ಮಣಿಮಂತನೆಂಬ ರಾಕ್ಷಸನಿದ್ದನು.

ಆದರ್ಶಯತ್ ಪ್ರತೀಕಾರಂ (ಅದರ್ಶಯದಧೀಕಾರಂ) ಪೌರುಷಂ ಚ ಮಹಾಬಲಃ
ಸ ತಾನ್ ದೃಷ್ಟ್ವಾ ಪರಾವೃತ್ತಾನ್ ಸ್ಮಯಮಾನ ಇವಾಬ್ರವೀತ್ ॥೬೩॥

ಮಹಾಬಲನಾದ ಅವನು ತನ್ನ ಅಧಿಕಾರವನ್ನು ಮತ್ತು ಪೌರುಷವನ್ನು ಎಲ್ಲರಿಗೂ ತೋರಿಸಿದನು. ಅವನು ಯುದ್ಧದಿಂದ ಹಿಮ್ಮೆಟ್ಟಿದ ಆ ರಾಕ್ಷಸರನ್ನು ನೋಡಿ ನಗುತ್ತಾ ಹೀಗೆ ಮಾತನಾಡಿದನು.

ಏಕೇನ ಬಹವಃ ಸಂಖೇ ಮಾನುಷೇಣ ಪರಾಜಿತಾಃ ।
ಪ್ರಾಪ್ಯ ವೈಶ್ರವಣಾವಾಸಂ ಕಿಂ ವಕ್ಷ್ಯಥ ಧನೇಶ್ವರಮ್ ॥೬೪॥

ಒಬ್ಬ ಮನುಷ್ಯನಿಂದ ಅನೇಕ ರಾಕ್ಷಸರು ಪರಾಜಿತರಾಗಿದ್ದೀರಿ. ಕುಬೇರನ ಮನೆಗೆ ಹಿಂದಿರುಗಿ ಅವನನ್ನು ಕುರಿತು ಏನು ಹೇಳುವಿರಿ?

ವೈಶಂಪಾಯನಃ

ಏವಮಾಭಾಷ್ಯ ತಾನ್ ಸರ್ವಾನಭ್ಯವರ್ತತ ರಾಕ್ಷಸಃ ।
ಶಕ್ತಿಶೂಲಗದಾಪಾಣಿರಭ್ಯಧಾವತ್ ಸ ಪಾಂಡವಮ್ ॥೬೫॥

ವೈಶಂಪಾಯನ– ಹೀಗೆ ಅವರೆಲ್ಲರಿಗೂ ಹೇಳಿ ಆ ರಾಕ್ಷಸನು ಶಕ್ತಿಶೂಲಗದೆಗಳನ್ನು ಹಿಡಿದು ಪಾಂಡವನ ಕಡೆಗೆ ಧಾವಿಸಿ ಬಂದನು.

ತಮಾಪತಂತಂ ವೇಗೇನ ಪ್ರಭಿನ್ನಮಿವ ವಾರಣಮ್ ।
ವತ್ಸದಂತೈಸ್ತ್ರಿಭಿಃ ಪಾರ್ಶ್ವೇ ಭೀಮಸೇನಃ ಸಮಾರ್ದಯತ್ ॥೬೬॥

ಮದಿಸಿದಾನೆಯಂತೆ ವೇಗದಿಂದ ತನ್ನ ಕಡೆಗೆ ಬರುತ್ತಿರುವ ಅವನ ಪಕ್ಕೆಗೆ ಭೀಮಸೇನನು ಮೂರು ವತ್ಸದಂತ ಬಾಣಗಳನ್ನು ಹೊಡೆದು ಅವನನ್ನು ಪೀಡಿಸಿದನು.

ಮಣಿಮಾನಪಿ ಸಂಕ್ರುದ್ಧಃ ಪ್ರಗೃಹ್ಯ ಮಹತೀಂ ಗದಾಮ್ ।
ಪ್ರಾಹಿಣೋದ್ ಭೀಮಸೇನಾಯ ಪರಿಗೃಹ್ಯ ಮಹಾಬಲಃ ॥೬೭॥

ಕೋಪಗೊಂಡ ಹಾಬಲನಾದ ಮಣಿಮಂತನೂ ಸಹ ದೊಡ್ಡ ಗದೆಯನ್ನು ತೆಗೆದುಕೊಂಡು ಅದನ್ನು ಭೀಮಸೇನನ ಮೇಲೆ ಎಸೆದನು.

ವಿದ್ಯುದ್ರೂಪಾಂ ಮಹಾಘೋರಾಮಾಕಾಶೇ ಮಹತೀಂ ಗದಾಮ್ ।
ಶರೈರ್ಬಹುಭಿರಭ್ಯಾರ್ಚ್ಛದ್ ಭೀಮಸೇನಃ ಶಿಲಾಶಿತೈಃ ॥೬೮॥

ಭೀಮಸೇನನು ಮಿಂಚಿನಂತೆ ಮಹಾಘೋರವಾದ ಆಕಾಶದಲ್ಲಿ ಬರುತ್ತಿರುವ ಆ ಗದೆಯನ್ನು ಕಲ್ಲಿನಲ್ಲಿ ಸಾಣೆಯನ್ನು ಹಿಡಿದ ತನ್ನ ಅನೇಕ ಬಾಣಗಳಿಂದ ಪೀಡಿಸಿದನು.

ಪ್ರತ್ಯಹನ್ಯಂತ ತೇ ಸರ್ವೇ ಗದಾಮಾಸಾದ್ಯ ಸಾಯಕಾಃ ।
ನ ವೇಗಂ ಧಾರಯಾಮಾಸುರ್ಗದಾವೇಗಸ್ಯ ವೇಗಿತಾಃ ॥೬೯॥

ಗದೆಯನ್ನು ತಲುಪಿದ ಆ ಬಾಣಗಳೆಲ್ಲವೂ ಗದಾವೇಗದಿಂದ ಪ್ರತಿಹತವಾದವು. ಆ ಬಾಣಗಳು ಗದೆಯ ವೇಗವನ್ನು ಎದುರಿಸಲು ಸಾಧ್ಯವಾಗಲಿಲ್ಲ.

ಗದಾಯುದ್ಧಸಮಾಚಾರಂ ಬುದ್ಧ್ಯಮಾನಃ ಸ ವೀರ್ಯವಾನ್ ।
ವ್ಯಂಸಯಮಾಸ ತಂ ತಸ್ಯ ಪ್ರಹಾರಂ ಭೀಮವಿಕ್ರಮಃ ॥೭೦॥

ಗದಾಯುದ್ಧದ ಪರಿಸ್ಥಿತಿಯನ್ನು ಚೆನ್ನಾಗಿ ತಿಳಿದ ಭೀಮಪರಾಕ್ರಮಿಯಾದ ವೀರ್ಯಶಾಲಿಯಾದ ಭೀಮಸೇನನು ಮಣಿಮಂತನ ಗದಾಪ್ರಹಾರವನ್ನು ವಂಚಿಸಿ ವ್ಯರ್ಥವನ್ನಾಗಿ ಮಾಡಿದನು.

ತತಃ ಶಕ್ತಿಂ ಮಹಾಘೋರಾಂ ರುಗ್ಮದಂಡಾಮಯಸ್ಮಯೀಮ್ ।
ತಸ್ಮಿನ್ನೇವಾಂತರೇ ಧೀಮಾನ್ ಪ್ರಜಹಾರಾಥ ರಾಕ್ಷಸಃ ॥೭೧॥

ಅನಂತರ ಅದೇ ಸಮಯದಲ್ಲಿ ಚಿನ್ನದ ಹಿಡಿಯುಳ್ಳ ಕಬ್ಬಿಣದಿಂದ ಮಾಡಿದ ಮಹಾಘೋರವಾದ ಶಕ್ತ್ಯಾಯುಧವನ್ನು ಮೇಧಾವಿಯಾದ ರಾಕ್ಷಸನು ಭೀಮಸೇನನ ಮೇಲೆ ಪ್ರಯೋಗಿಸಿದನು.

ಸಾ ಭುಜಂ ಭೀಮನಿರ್ಹ್ರಾದಾ ಭಿತ್ತ್ವಾ ಭೀಮಸ್ಯ ದಕ್ಷಿಣಮ್ ।
ಸಾಗ್ನಿಜ್ವಾಲಾ ಮಹಾರೌದ್ರಾ ಪಪಾತ ಸಹಸಾ ಭುವಿ ॥೭೨॥

ಆ ಶಕ್ತ್ಯಾಯುಧವು ಭಯಂಕರವಾದ ನಾದವನ್ನು ಮಾಡುತ್ತಾ ಭೀಮನ ಬಲಭುಜವನ್ನು ಭೇದಿಸಿ ಅಗ್ನಿಜ್ವಾಲೆಗಳ ಸಹಿತವಾಗಿ ಮಹಾಭಯಂಕರವಾಗಿ ಭೂಮಿಯಲ್ಲಿ ಬಿದ್ದಿತು.

ಸೋಽತಿವಿದ್ಧೋ ಮಹೇಷ್ವಾಸಃ ಶಕ್ತ್ಯಾಽಮಿತಪರಾಕ್ರಮಃ ।
ಗದಾಂ ಜಗ್ರಾಹ ಕೌಂತೇಯಃ ಕ್ರೋಧಪರ್ಯಾಕುಲೇಕ್ಷಣಃ ॥೭೩॥

ಅಮಿತಪರಾಕ್ರಮಿಯೂ ಮಹೇಷ್ವಾಸನೂ ಆದ ಕೌಂತೇಯನು ಆ ಗದಾ ಪ್ರಹಾರದಿಂದ ಬಹಳ ಏಟನ್ನು ತಿಂದವನಾಗಿ ಸಿಟ್ಟಿನಿಂದ ತುಂಬಿದ ಕಣ್ಣುಳ್ಳವನಾಗಿ ತನ್ನ ಗದೆಯನ್ನು ಕೈಯಲ್ಲಿ ತೆಗೆದುಕೊಂಡನು.

ರುಗ್ಮಪಟ್ಟಪಿನದ್ಧಾಂ ತಾಂ ಶತ್ರೂಣಾಂ ಭಯವರ್ಧಿನೀಮ್ ।
ಪ್ರಗೃಹ್ಯಾಥ ನದನ್ ಭೀಮಃ ಸರ್ವಶೈಕ್ಯಾಯಸೀಂ ಗದಾಮ್ ।
ತರಸಾ ಚಾಭಿದುದ್ರಾವ ಮಣಿಮಂತಂ ಮಹಾಬಲಮ್ ॥೭೪॥

ಚಿನ್ನದ ಪಟ್ಟಿಗಳಿಂದ ಅಲಂಕೃತವಾದ, ಶತ್ರುಗಳ ಭಯವನ್ನು ಹೆಚ್ಚಿಸುವ, ಯಾವಾಗಲೂ ನಿಲುವಿನಲ್ಲಿಯೇ ಪೂರ್ಣವಾಗಿಟ್ಟಿರುವ, ತನ್ನ ಕಬ್ಬಿಣದ ಗದೆಯನ್ನು ತೆಗೆದುಕೊಂಡು ಗರ್ಜನೆಯನ್ನು ಮಾಡುತ್ತಾ ಭೀಮಸೇನನು ಮಹಾಬಲನಾದ ಮಣಿಮಂತನ ಕಡೆಗೆ ವೇಗದಿಂದ ಧಾವಿಸಿದನು.

ದೀಪ್ಯಮಾನಂ ಮಹಾಶೂಲಂ ಪ್ರಗೃಹ್ಯ ಮಣಿಮಾನಪಿ ।
ಪ್ರಾಹಿಣೋದ್ ಭೀಮಸೇನಾಯ ವೇಗೇನ ಮಹತಾ ನದನ್ ॥೭೫॥

ಮಣಿಮಂತನೂ ಸಹ ಉರಿಯುತ್ತಿರುವ ಮಹಾಶೂಲವನ್ನು ತೆಗೆದುಕೊಂಡು ದೊಡ್ಡದಾಗಿ ಗರ್ಜಿಸುತ್ತಾ ವೇಗದಿಂದ ಅದನ್ನು ಭೀಮಸೇನನ ಮೇಲೆ ಎಸೆದನು.

ಭಂಕ್ತ್ವಾ ಶೂಲಂ ಗದಾಗ್ರೇಣ ಗದಾಯುದ್ಧವಿಶಾರದಃ ।
ಅಭಿದುದ್ರಾವ ತಂ ಹಂತುಂ ಗರುತ್ಮಾನಿವ ಪನ್ನಗಮ್ ॥೭೬॥

ಗದಾಯುದ್ಧ ವಿಶಾರದನಾದ ಭೀಮಸೇನನು ತನ್ನ ಗದೆಯ ತುದಿಯಿಂದ ಆ ಶೂಲವನ್ನು ಮುರಿದು ಗರುಡನು ಸರ್ಪವನ್ನು ಕೊಲ್ಲಲು ಸಾಗಿದಂತೆ ಆ ರಾಕ್ಷಸನನ್ನು ಕೊಲ್ಲಲು ಅವನ ಕಡೆಗೆ ಓಡಿದನು.

ಸೋಽಂತರಿಕ್ಷಮವಪ್ಲುತ್ಯ ವಿಧೂಯ ಸಹಸಾ ಗದಾಮ್ ।
ಪ್ರಚಿಕ್ಷೇಪ ಮಹಾಬಾಹುರ್ವಿನದ್ಯ ರಣಮೂರ್ಧನಿ ॥೭೭॥

ಆ ರಾಕ್ಷಸನಾದರೂ ಅಂತರಿಕ್ಷಕ್ಕೆ ಹಾರಿ ತನ್ನ ಗದೆಯನ್ನು ಅಲ್ಲಾಡಿಸಿ (ತಿರುಗಿಸಿ) ಯುದ್ಧಭೂಮಿಯಲ್ಲಿ ಗರ್ಜನೆಯನ್ನು ಮಾಡುತ್ತಾ ಮಹಾಬಾಹುವಾದ ಅವನು ಭೀಮಸೇನನ ಮೇಲೆ ಎಸೆದನು.

ತತಸ್ತಂ ಗದಯಾ ಭೀಮೋ ಮಣಿಮಂತಂ ನಿಶಾಚರಮ್ ।
ಜಘಾನ ಸಹಸಾ ಮೂರ್ಧ್ನಿ ಸ ಪಪಾತ ಮಮಾರ ಚ ।

ಆಗ ಆ ರಾಕ್ಷಸನಾದ ಮಣಿಮಂತನ ತಲೆಯ ಮೇಲೆ ಭೀಮಸೇನನು ತನ್ನ ಗದೆಯಿಂದ ಹೊಡೆದನು. ರಾಕ್ಷಸನು ಬಿದ್ದು ಮೃತನಾದನು.

ಸೇಂದ್ರಾಶನಿರಿವೇಂದ್ರಣ ವಿಸೃಷ್ಟಾ ವಾತರಂಹಸಾ ।
ಹತ್ವಾ ರಕ್ಷಃ ಕ್ಷಿತಿಂ ಪ್ರಾಪ್ಯ ಕೃತ್ಯೇವ ನಿಪಪಾತ ಹ ॥೭೮॥

ಇಂದ್ರನ ವಜ್ರಾಯುಧದಂತೆ ವಾಯುವೇಗದಿಂದ ಪ್ರಯೋಗಿಸಲ್ಪಟ್ಟ ಆ ಭೀಮಸೇನನ ಗದೆಯು ರಾಕ್ಷಸನನ್ನು ಕೊಂದು ಭೂಮಿಯ ಮೇಲೆ ಬಂದು ಬಿದ್ದಿತು.

ತಂ ರಾಕ್ಷಸಂ ಭೀಮಬಲಂ ಭೀಮಸೇನೇನ ಪಾತಿತಮ್ ।
ದದೃಶುಃ ಸರ್ವಭೂತಾನಿ ಸಿಂಹೇನೇವ ಗವಾಂ ಪತಿಮ್ ॥೭೯॥

ಸಿಂಹದಿಂದ ಹತವಾದ ವೃಷಭದಂತೆ ಭೀಮಸೇನನ ಭಯಂಕರವಾದ ಬಲದಿಂದ ಹತನಾಗಿ ಭೂಮಿಯ ಮೇಲೆ ಬಿದ್ದ ಆ ರಾಕ್ಷಸನನ್ನು ಎಲ್ಲ ಪ್ರಾಣಿಗಳೂ ನೋಡಿದವು.

ತಂ ಪ್ರೇಕ್ಷ್ಯ ನಿಹತಂ ಭೂಮೌ ಹತಶೇಷಾ ನಿಶಾಚರಾಃ ।
ಭೀಮಮಾರ್ತಸ್ವರಂ ಕೃತ್ವಾ ಜಗ್ಮುಃ ಪ್ರಾಚೀಂ ದಿಶಂ ಪ್ರತಿ ॥೮೦॥

ಮೃತನಾಗಿ ಭೂಮಿಯ ಮೇಲೆ ಬಿದ್ದ ಆ ಮಣಿಮಂತನನ್ನು ನೋಡಿ ಅಳಿದುಳಿದ ನಿಶಾಚರರು ಭಯಂಕರವಾದ ಆರ್ತನಾದವನ್ನು ಮಾಡುತ್ತಾ ಪೂರ್ವದಿಕ್ಕಿಗೆ ಹೊರಟು ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಯಕ್ಷಯುದ್ಧಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ತಾರನೆಯ
ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ತತೋ ವೈಶ್ರವಣೋ ರಾಜಾ ಮಹಾಪದ್ಮತ್ರಯೇ ಹತೇ ।
ರಾಕ್ಷಸಾನಾಮವಧ್ಯಾನಾಂ ಸಖಾಯೇ ಮಣಿಮತ್ಯಪಿ ।
ಆರುರೋಹ ರಥಂ ದಿವ್ಯಂ ಯೋದ್ಧುಕಾಮೋ ವೃಕೋದರಮ್ ॥೨೯॥

ಬಳಿಕ ಮೂರು ಮಹಾಪದ್ಮದಷ್ಟಿದ್ದ ಅವಧ್ಯರಾದ ರಾಕ್ಷಸರೂ ತನ್ನ ಮಿತ್ರನಾದ ಮಣಿಮಂತನೂ ಹತನಾದಾಗ ಕುಪಿತನಾದ ಕುಬೇರ ಭೀಮನೊಡನೆ ಯುದ್ಧ ಮಾಡಲು ದಿವ್ಯ ರಥವನ್ನೇರಿದ.

ಅಸುರಾವೇಶತಸ್ತಸ್ಯ ಭೀಮೇ ಕ್ರೋಧೋ ಮಹಾನಭೂತ್ ।
ಸ ಆಜಗಾಮ ಭೀಮೇನ ಯೋದ್ಧುಂ ವಿತ್ತಪತಿಃ ಸ್ವಯಮ್ ॥೩೦॥

ಅಸುರಾವೇಶದಿಂದ ಕುಬೇರನಿಗೆ ಭೀಮನ ಮೇಲೆ ಬಹಳ ಕೋಪ ಉಂಟಾಗಿತ್ತು. ಅದರಿಂದ ಅವನು ಸ್ವತಃ ಭೀಮನೊಡನೆ ಯುದ್ಧ ಮಾಡಲು ಬಂದ.

ತಸ್ಮಿನ್ ಕಾಲೇ ಭೀಮಸೇನಸ್ಯ ಘೋಷಂ
ಶ್ರುತ್ವಾ ರಾಜಾऽಪೃಚ್ಛದಾಶು ಸ್ಮ ಕೃಷ್ಣಾಮ್ ।
ಕ್ವ ಭೀಮ ಇತ್ಯೇವ ತಯೋದಿತಂ ಚ
ಶ್ರುತ್ವಾ ಜಗಾಮಾऽಶು ರಕ್ಷೋಽಸಸಂಸ್ಥಃ ॥೩೦೧॥

ಅದೇ ಸಮಯದಲ್ಲಿ ಭೀಮಸೇನನ ಸಿಂಹಾಸನವನ್ನು ಕೇಳಿ ಧರ್ಮರಾಜ ದ್ರೌಪದಿಯನ್ನು ಕೇಳಿದ 'ಭೀಮನೆಲ್ಲಿ?' ಎಂದು. ಅವಳು ಹೇಳಿದಳು. ಅದನ್ನು ಕೇಳಿ ಧರ್ಮರಾಜನ ಬೇಗನೆ ಘಟೋತ್ಕಚನ ಹೆಗಲನ್ನೇರಿ ಭೀಮನ ಬಳಿಗೆ ಹೋದ.

ಸಭ್ರಾತೃಕೇ ಮುನಿಭಿಃ ಕೃಷ್ಣಯಾ ಚ
ಗತೇ ರಾಜಾನ್ಯತ್ರ ಭೀಮಂ ಕುಬೇರಃ ।
ದೃಷ್ಟ್ವಾऽಸುರಾವೇಶತೋ ಧರ್ಮಜಂ ಚ
ಕಿಂಚಿನ್ಮುಕ್ತಃ ಸ್ನೇಹಯುಕ್ತಸ್ತಥಾऽಸ ॥೩೦೨॥

ಸೋದರರೊಡನೆ ಮುನಿಗಳೊಡನೆ ಕೂಡಿ ದ್ರೌಪದೀ ಸಮೇತನಾಗಿ ಧರ್ಮರಾಜ ಕುಬೇರನ ಭವನಕ್ಕೆ ಹೋದಾಗ ಕುಬೇರ ಭೀಮನನ್ನೂ ಧರ್ಮರಾಜನನ್ನೂ ನೋಡಿ ಸ್ವಲ್ಪ ಅಸುರಾವೇಶದಿಂದ ಮುಕ್ತನಾಗಿ ಸ್ವಲ್ಪ ಸ್ನೇಹಯುಕ್ತನಾದ.

★ ★ ★ ★

ನೂರ ಐವತ್ತೇಳನೆಯ ಅಧ್ಯಾಯ

ಅಪಶಕುನಗಳನ್ನು ನೋಡಿ ಯುಧಿಷ್ಠಿರಾದಿಗಳಿಂದ ಪರ್ವತಾಗ್ರಗಮನ.
ಯುದ್ಧದ ಸುದ್ದಿಯನ್ನು ತಿಳಿದ ಕುಬೇರನಿಂದ ಅಲ್ಲಿಗೆ ಆಗಮನ.
ಕೋಪರಹಿತನಾಗಿ ಹಿಂದೆ ಬಂದ ಅಗಸ್ತ್ಯರ ಶಾಪವನ್ನು ಹೇಳಿ
ಭೀಮಸೇನನ ಕಾರ್ಯದ ಅನುಮೋದನೆ.

ವೈಶಂಪಾಯನಃ

ಶ್ರುತ್ವಾ ಬಹುವಿಧೈಃ ಶಬ್ದೈರ್ನಾದ್ಯಮಾನಾಂ ಗಿರೇರ್ಗುಹಾಮ್ ।
ಅಜಾತಶತ್ರುಃ ಕೌಂತೇಯೋ ಮಾದ್ರೀಪುತ್ರಾವುಭಾವಪಿ ॥೧॥

ಧೌಮ್ಯಃ ಕೃಷ್ಣಾ ಚ ವಿಪ್ರಾಶ್ಚ ಸರ್ವೇ ಚ ಸೃಹೃದಸ್ತಥಾ ।
ಭೀಮಸೇನಮಪಶ್ಯಂತಃ ಸರ್ವೇ ವಿಮನಸೋಽಭವನ್ ॥೨॥

ವೈಶಂಪಾಯನ– ಅನೇಕ ವಿಧವಾದ ಶಬ್ದಗಳಿಂದ ಗುಡುಗುತ್ತಿರುವ ಗಿರಿಗುಹೆಗಳ ಶಬ್ದಗಳನ್ನು ಕೇಳಿ ಅಜಾತಶತ್ರುವಾದ ಕೌಂತೇಯನೂ ಇಬ್ಬರು ಮಾದ್ರಿಪುತ್ರರೂ, ಧೌಮ್ಯರೂ, ದ್ರೌಪದಿಯೂ, ಬ್ರಾಹ್ಮಣರೂ ಮತ್ತು ಎಲ್ಲಾ ವಿಶ್ವಾಸಿಗಳೂ ಭೀಮಸೇನನನ್ನು ಕಾಣದೆ ಎಲ್ಲರೂ ಮನೋವಿಷಾದಕ್ಕೆ ಒಳಗಾದರು.

ದ್ರೌಪದೀಮಾರ್ಷ್ಟಿಷೇಣಾಯ ಸಂಪ್ರದಾಯ ಮಹಾರಥಾಃ ।
ಸಹಿತಾಃ ಸಾಯುಧಾಃ ಶೂರಾಃ ಶೈಲಮಾರುರುಹುಸ್ತದಾ ॥೩॥

ಶೂರರೂ ಮಹಾರಥರೂ ಆದ ಅವರು ದ್ರೌಪದಿಯನ್ನು ಆರ್ಷ್ಟಿಷೇಣರ ವಶಕ್ಕೆ ಒಪ್ಪಿಸಿ ತಮ್ಮ ಆಯುಧಗಳನ್ನು ತೆಗೆದುಕೊಂಡು ಆಗ ಪರ್ವತವನ್ನು ಹತ್ತಿದರು.

ತತಃ ಸಂಪ್ರಾಪ್ಯ ಶೈಲಾಗ್ರಂ ವೀಕ್ಷಮಾಣಾ ಮಹಾರಥಾಃ ।
ದದೃಶುಸ್ತೇ ಮಹೇಷ್ವಾಸಾ ಭೀಮಸೇನಮರಿಂದಮಾಃ ॥೪॥

ಶೈಲಾಗ್ರವನ್ನು ಹತ್ತಿದ ಮಹಾರಥರೂ, ಮಹೇಷ್ವಾಸರೂ, ಅರಿಂದಮರೂ ಆದ ಅವರು ಎಲ್ಲ ಕಡೆಯಲ್ಲಿಯೂ ನೋಡುತ್ತಾ ಭೀಮಸೇನನನ್ನು ನೋಡಿದರು.

ಸ್ಫುರತಶ್ಚ ಮಹಾಕಾಯಾನ್ ಗತಸತ್ತ್ವಾಂಶ್ಚ ರಾಕ್ಷಸಾನ್ ।
ಮಹಾಬಲಾನ್ ಮಹಾಸತ್ತ್ವಾನ್ ಭೀಮಸೇನೇನ ಪಾತಿತಾನ್ ॥೫॥

ಮಹಾಕಾಯರೂ, ಮಹಾಬಲರೂ, ಮಹಾಸತ್ತ್ವವುಳ್ಳವರೂ ಆದ ರಾಕ್ಷಸರು ಭೀಮಸೇನನಿಂದ ಉರುಳಿಸಲ್ಪಟ್ಟು ಇನ್ನೂ ಸ್ವಲ್ಪ ಅಲುಗಾಡುವುದನ್ನೂ ನೋಡಿದರು.

ಶುಶುಭೇ ಸ ಮಹಾಬಾಹುರ್ಗದಾಖಡ್ಗಧನುರ್ಧರಃ ।
ನಿಹತ್ಯ ಸಮರೇ ಸರ್ವಾನ್ ದಾನವಾನ್ ಮಘವಾನಿವ ॥೬॥

ಗದಾಖಡ್ಗಧನುಸ್ಸುಗಳನ್ನು ಹಿಡಿದ ಮಹಾಬಾಹುವಾದ ಭೀಮಸೇನನು ಯುದ್ಧದಲ್ಲಿ ಎಲ್ಲಾ ದಾನವರನ್ನೂ ಸಂಹಾರ ಮಾಡಿದ ಇಂದ್ರನಂತೆ ಶೋಭಿಸುತ್ತಿದ್ದನು.

ತತಸ್ತೇ ಭ್ರಾತರಂ ದೃಷ್ಟ್ವಾ ಪರಿಷ್ವಜ್ಯ ಮಹಾರಥಾಃ ।
ತತ್ರೋಪವಿವಿಶುಃ ಪಾರ್ಥಾಃ ಪ್ರಾಪ್ತಾ ಗತಿಮನುತ್ತಮಾಮ್ ॥೭॥

ಅನಂತರ ಶ್ರೇಷ್ಠವಾದ ಗತಿಯನ್ನು ಹೊಂದಿದ ಮಹಾರಥರಾದ ಪಾರ್ಥರಾದ ಅವರು ಸಹೋದರನಾದ ಭೀಮಸೇನನನ್ನು ಆಲಿಂಗಿಸಿ ಅವನ ಸಮೀಪದಲ್ಲಿ ಕುಳಿತುಕೊಂಡರು.

ತೈಶ್ಚತುರ್ಭಿರ್ಮಹೇಷ್ವಾಸೈರ್ಗಿರಿಶೃಂಗಮಶೋಭತ ।
ಲೋಕಪಾಲೈರ್ಮಹಾಭಾಗೈರ್ದಿವಂ ದೇವವರೈರಿವ ॥೮॥

ಆ ನಾಲ್ಕುಜನ ಮಹಾಧನುರ್ಧಾರಿಗಳಿಂದ ಕೂಡಿದ ಆ ಪರ್ವತಶೃಂಗವು ಮಹಾನುಭಾವರಾದ ದೇವಶ್ರೇಷ್ಠರಾದ ಲೋಕಪಾಲಕರಿಂದ ಕೂಡಿರುವಂತೆ ಶೋಭಿಸಿತು.

ಕುಬೇರಸದನಂ ದೃಷ್ಟ್ವಾ ರಾಕ್ಷಸಾಂಶ್ಚ ನಿಪಾತಿತಾನ್ ।
ಭ್ರಾತಾ ಭ್ರಾತರಮಾಸೀನಮಬ್ರವೀತ್ ಪೃಥಿವೀಪತಿಃ ॥೯॥

ಪೃಥಿವೀಪತಿಯಾದ ಧರ್ಮರಾಜನು ಕುಬೇರ ಸದನವನ್ನೂ, ಸುತ್ತಲೂ ರಾಕ್ಷಸರು ಬಿದ್ದು ಮೃತರಾಗಿರುವುದನ್ನೂ ನೋಡಿ ಕುಳಿತಿದ್ದ ತಮ್ಮನಾದ ಭೀಮಸೇನನನ್ನು ಕುರಿತು ಹೇಳಿದನು.

ಸಾಹಸಾದ್ ಯದಿ ವಾ ಮೋಹಾದ್ ಭೀಮ ಪಾಪಮಿದಂ ಕೃತಮ್ ।
ನೈತತ್ ತೇ ಸದೃಶಂ ವೀರ ಮುನೇರಿವ ಮೃಷಾ ವಧಃ ॥೧೦॥

ವೀರನಾದ ಭೀಮಸೇನನೇ, ನೀನು ಆಲೋಚನೆಯಿಲ್ಲದೇ ಆಗಲಿ ಅಥವಾ ಪ್ರಮಾದದಿಂದಲಾಗಲೀ ಯಾವ ಈ ಪಾಪಕೆಲಸವನ್ನು ಮಾಡಿದ್ದೀಯೋ ಅದು ಮುನಿಗೆ ವ್ಯರ್ಥವಾದ ವಧೆಯು ಹೇಗೆ ಯೋಗ್ಯವಲ್ಲವೋ, ಹಾಗೆ ನಿನಗೆ ಯೋಗ್ಯವಲ್ಲ.

ರಾಜದ್ವಿಷ್ಟಂ ನ ಕರ್ತವ್ಯಮಿತಿ ಧರ್ಮವಿದೋ ವಿದುಃ ।
ತ್ರಿದಶಾನಾಮಿದಂ ದ್ವಿಷ್ಟಂ ಭೀಮಸೇನ ತ್ವಯಾ ಕೃತಮ್ ॥೧೧॥

ರಾಜನಿಗೆ ಅಪ್ರಿಯವಾದುದನ್ನು ಮಾಡಬಾರದೆಂದು ಧರ್ಮವನ್ನು ತಿಳಿದವರು ಹೇಳುತ್ತಾರೆ. ಭೀಮಸೇನನೇ, ನೀನು ದೇವತೆಗಳಿಗೆ ಅಪ್ರಿಯವಾದ ಈ ಕಾರ್ಯವನ್ನು ಮಾಡಿದ್ದೀಯೆ.

ಅರ್ಥಧರ್ಮಾವನಾದೃತ್ಯ ಯಃ ಪಾಪೇ ಕುರುತೇ ಮನಃ ।
ಕರ್ಮಣಾಂ ಪಾರ್ಥ ಪಾಪಾನಾಂ ಸ ಫಲಂ ವಿಂದತೇ ಧ್ರುವಮ್ ॥

ಎಲೈ ಪಾರ್ಥನೇ, ಯಾವನು ಅರ್ಥಧರ್ಮಗಳನ್ನು ವಿಚಾರ ಮಾಡದೆ ತಿರಸ್ಕಾರ ಮಾಡಿ, ಪಾಪಕಾರ್ಯದಲ್ಲಿ ಮನಸ್ಸನ್ನು ಇಡುತ್ತಾನೆಯೋ ಅವನು ಆ ಪಾಪಕಾರ್ಯಗಳ ಫಲವನ್ನು ಶೀಘ್ರದಲ್ಲಿಯೇ ಪಡೆಯುತ್ತಾನೆ.

ಸಾಹಸಂ ಬತ ಭದ್ರಂ ತೇ ದೇವಾನಾಮಪಿ ಚಾಪ್ರಿಯಮ್ ।
ಪುನರೇವಂ ನ ಕರ್ತವ್ಯಂ ಮಮ ಚೇದಿಚ್ಛಸಿ ಪ್ರಿಯಮ್ ॥೧೩॥

ಭೀಮಸೇನನೇ, ನಿನಗೆ ಮಂಗಳವಾಗಲಿ. ನೀನು ನನಗೆ ಪ್ರಿಯವನ್ನು ಮಾಡಲು ಬಯಸುವುದಾದರೆ ದೇವತೆಗಳಿಗೂ ಅಪ್ರಿಯವಾದ ಇಂತಹ ದುಡುಕಿನ ಕಾರ್ಯಗಳನ್ನು ಪುನಃ ಮಾಡಬಾರದು.

ವೈಶಂಪಾಯನಃ

ಏವಮುಕ್ತ್ವಾ ಸ ಧರ್ಮಾತ್ಮಾ ಭ್ರಾತಾ ಭ್ರಾತರಮಚ್ಯುತಮ್ ।
ಭೀಮಸೇನಂ ಮಹಾಬಾಹುಮಪ್ರಧೃಷ್ಯಪರಾಕ್ರಮಮ್ ॥೧೪॥

ಅರ್ಥತತ್ತ್ವವಿಭಾಗಜ್ಞಃ ಕುಂತೀಪುತ್ರೋ ಯುಧಿಷ್ಠಿರಃ ।
ವಿರರಾಮ ಮಹಾತೇಜಾಸ್ತಮೇವಾರ್ಥಂ ವಿಚಿಂತಯನ್ ॥೧೫॥

ವೈಶಂಪಾಯನ– ಧೈರ್ಯಾದಿಗಳಿಂದ ಚ್ಯುತನಾಗದ ಅಪ್ರಧೃಷ್ಯ ಪರಾಕ್ರಮಿಯಾದ ಮಹಾಬಾಹುವಾದ ಭೀಮಸೇನನನ್ನು ಕುರಿತು ಧರ್ಮಾತ್ಮನೂ ಅರ್ಥತತ್ತ್ವಗಳ ವಿಭಾಗವನ್ನು ತಿಳಿದವನೂ, ಮಹಾತೇಜಸ್ವಿಯೂ ಆದ ಕುಂತೀಪುತ್ರನಾದ ಯುಧಿಷ್ಠಿರನು ಅದೇ ವಿಷಯವನ್ನೇ ಚಿಂತಿಸುತ್ತಾ ಸುಮ್ಮನಾದನು.

ತತಸ್ತೇ ಹತಶಿಷ್ಟಾ ಯೇ ಭೀಮಸೇನೇನ ರಾಕ್ಷಸಾಃ ।
ಸಹಿತಾಃ ಪ್ರತ್ಯಪದ್ಯಂತ ಕುಬೇರಸದನಂ ಪ್ರತಿ ॥೧೬॥

ಆಗ ಭೀಮಸೇನನಿಂದ ಹತರಾಗಿ ಉಳಿದ ಆ ಎಲ್ಲಾ ರಾಕ್ಷಸರೂ ಜೊತೆಯಾಗಿ ಕುಬೇರ ಸದನಕ್ಕೆ ಹೋದರು.

ತೇ ಜವೇನ ಮಹಾವೇಗಾಃ ಪ್ರಾಪ್ಯ ವೈಶ್ರವಣಾಲಯಮ್ ।
ಭೀಮಮಾರ್ತಸ್ವರಂ ಚಕ್ರುರ್ಭೀಮಸೇನಭಯಾರ್ದಿತಾಃ ॥೧೭॥

ಮಹಾವೇಗವುಳ್ಳ ಅವರು ಶೀಘ್ರವಾಗಿ ವೈಶ್ರವಣನ ನಿವಾಸಕ್ಕೆ ಹೋಗಿ ಭೀಮಸೇನನ ಭಯದಿಂದ ಪೀಡಿತರಾಗಿ ಭಯಂಕರವಾದ ಆರ್ತನಾದವನ್ನು ಮಾಡಿದರು.

ನ್ಯಸ್ತಶಸ್ತ್ರಾಯುಧಾಃ ಕ್ಲಾಂತಾಃ ಶೋಣಿತಾಕ್ತತನುಚ್ಛದಾಃ ।
ಪ್ರಕೀರ್ಣಮೂರ್ಧಜಾ ರಾಜನ್ ಯಕ್ಷಾಧಿಪತಿಮಬ್ರುವನ್ ॥೧೮॥

ಎಲೈ ರಾಜನೇ, ಅವರು ತಮ್ಮ ಶಸ್ತ್ರಗಳನ್ನೂ, ಆಯುಧಗಳನ್ನೂ ಮುಂದಿಟ್ಟು ದಣಿದು ಶರೀರ ಮತ್ತು ವಸ್ತ್ರಗಳು ರಕ್ತದಿಂದ ತೋಯಿಸಲ್ಪಟ್ಟು, ತಲೆಕೂದಲು ಕೆದರಿದವರಾಗಿ ಯಕ್ಷಾಧಿಪತಿಯಾದ ಕುಬೇರನನ್ನು ಕುರಿತು ಹೀಗೆ ಹೇಳಿದರು.

ಗದಾಪರಿಘನಿಸ್ತ್ರಿಂಶತೋಮರಪ್ರಾಸಯೋಧಿನಃ ।
ರಾಕ್ಷಸಾ ನಿಹತಾಃ ಸರ್ವೇ ತವ ದೇವ ಪುರಃಸರಾಃ ॥೧೯॥

ಎಲೈ ಪ್ರಭುವೇ, ನಿನ್ನ ಪುರಸ್ಸರರಾದ ಗದಾ, ಪರಿಘ (ಒನಕೆ) ಕತ್ತಿ, ತೋಮರ, ಪ್ರಾಸಗಳನ್ನು ಹಿಡಿದು ಯುದ್ಧಮಾಡುವ ರಾಕ್ಷಸರೆಲ್ಲರೂ ಕೊಲ್ಲಲ್ಪಟ್ಟಿದ್ದಾರೆ.

ಪ್ರಮೃದ್ಯ ತರಸಾ ಶೈಲಂ ಮಾನುಷೇಣ ಧನೇಶ್ವರ ।
ಏಕೇನ ಸಹಿತಾಃ ಸಂಖೇ ರಣೇ ಕ್ರೋಧವಶಾಃ ಗಣಾಃ ॥೨೦॥

ಪ್ರವರಾ ರಾಕ್ಷಸೇಂದ್ರಾಣಾಂ ಯಕ್ಷಾಣಾಂ ಚ ನರಾಧಿಪ ।
ಶೇರತೇ ನಿಹತಾ ದೇವ ಗತಸತ್ತ್ವಾಃ ಪರಾಸವಃ ॥೨೧॥

ಧನೇಶ್ವರನೇ, ಒಬ್ಬ ಮನುಷ್ಯನು ವೇಗವಾಗಿ ಪರ್ವತವನ್ನು ಧ್ವಂಸಮಾಡಿದ್ದಾನೆ. ಎಲೈ ನರಾಧಿಪನೇ, ಯಕ್ಷರ ಮತ್ತು ರಾಕ್ಷಸಶ್ರೇಷ್ಠರಾದ ಕ್ರೋಧವಶಗಣಕ್ಕೆ ಸೇರಿದವರೆಲ್ಲರೂ ಯುದ್ಧದಲ್ಲಿ ಎಲ್ಲರೂ ಜೊತೆಯಲ್ಲಿ ಹತರಾಗಿ ಪ್ರಾಣಗಳನ್ನು ಕಳೆದುಕೊಂಡು ಗತಸತ್ತ್ವರಾಗಿ ಭೂಮಿಯ ಮೇಲೆ ಬಿದ್ದಿದ್ದಾರೆ.

ಭಗ್ನಃ ಶೈಲೋ ವಯಂ ಮುಕ್ತಾ ಮಣಿಮಾಂಸ್ತೇ ಸಖಾ ಹತಃ ।
ಮಾನುಷೇಣ ಕೃತಂ ಕರ್ಮ ವಿಧಸ್ತ್ವ ಯದನಂತರಮ್ ॥೨೨॥

ಪರ್ವತವು ಭಗ್ನವಾಗಿದೆ. ನಾವು ಹೇಗೋ ಬಿಡಿಸಿಕೊಂಡು ಬಂದಿದ್ದೇವೆ. ನಿನ್ನ ಸ್ನೇಹಿತನಾದ ಮಣಿಮಂತನು ಹತನಾಗಿದ್ದಾನೆ. ಒಬ್ಬ ಮನುಷ್ಯನು ಇಷ್ಟು ಕಾರ್ಯವನ್ನು ಮಾಡಿದ್ದಾನೆ. ಇನ್ನು ನೀನು ಇದಕ್ಕೆ ಉಚಿತವಾದುದನ್ನು ಮಾಡು.

ವೈಶಂಪಾಯನಃ

ಸ ತಚ್ಛ್ರುತ್ವಾ ತು ಸಂಕ್ರುದ್ಧಃ ಸರ್ವಯಕ್ಷಗಣಾಧಿಪಃ ।
ಕೋಪಸಂರಕ್ತನಯನಃ ಕಥಮಿತ್ಯಬ್ರವೀದ್ ವಚಃ ॥೨೩॥

ವೈಶಂಪಾಯನ– ಅದನ್ನು ಕೇಳಿದ ಯಕ್ಷರಕ್ಷೋಗಣಾಧಿಪನಾದ ಕುಬೇರನು ಬಹಳ ಕೋಪಗೊಂಡು ಕೋಪದಿಂದ ಕೆಂಪಾದ ಕಣ್ಣುಳ್ಳವನಾಗಿ ಇದೆಲ್ಲಾ ಹೇಗೆ ನಡೆಯಿತು ಎಂದು ಕೇಳಿದನು.

ದ್ವಿತೀಯಮಪರಾಧ್ಯಂತಂ ಭೀಮಂ ಶ್ರುತ್ವಾ ಧನೇಶ್ವರಃ ।
ಚುಕ್ರೋಧ ಯಕ್ಷಾಧಿಪತಿರ್ಯುಜ್ಯತಾಮಿತಿ ಚಾಬ್ರವೀತ್ ॥೨೪॥

ಭೀಮಸೇನನು ಇಂತಹ ಅಪರಾಧವನ್ನು ಮಾಡುತ್ತಿರುವನೆಂದು ಎರಡನೆಯ ಬಾರಿಗೆ ಕೇಳಿದ ಯಕ್ಷಾಧಿಪತಿಯಾದ ಕುಬೇರನು ಕೋಪಗೊಂಡು ರಥವನ್ನು ಹೂಡಿ ಎಂದು ಹೇಳಿದನು.

ಅಥಾಭ್ರಘನಸಂಕಾಂಶಂ ಗಿರಿಶೃಂಗಮಿವೋಚ್ಛ್ರಿತಮ್ ।
ರಥಂ ಸಂಯೋಜಯಾಮಾಸುರ್ಗಂಧರ್ವೈರ್ಹೇಮಮಾಲಿಭಿಃ ॥೨೫॥

ಆಗ ಮೇಘನಾದದಂತಹ ನಾದವನ್ನು ಉಂಟುಮಾಡುವ ಗಿರಿಶೃಂಗದಂತೆ ಎತ್ತರವಾದ ಅವನ ರಥವನ್ನು ಚಿನ್ನದ ಮಾಲೆಗಳನ್ನು ಧರಿಸಿದ ಕುದುರೆಗಳನ್ನು ಕಟ್ಟಿ ಹೂಡಿದರು.

ತಸ್ಯ ಸರ್ವಗುಣೋಪೇತಾ ವಿಮಲಾಕ್ಷಾ ಹಯೋತ್ತಮಾಃ ।
ತೇಜೋಬಲಗುಣೋಪೇತಾ ನಾನಾರತ್ನವಿಭೂಷಿತಾಃ ।
ಶೋಭಮಾನಾ ರಥೇ ಯುಕ್ತಾಸ್ತರಿಷ್ಯಂತ ಇವಾಶುಗಾಃ ॥೨೬॥
ಹ್ರೇಷಯಾಮಾಸುರನ್ಯೋನ್ಯಂ ಹ್ರೇಷಿತೈರ್ವಿಜಯಾವಹೈಃ ।

ಸರ್ವಗುಣಗಳಿಂದ ಕೂಡಿದ, ಶುದ್ಧವಾದ ಕಣ್ಣುಗಳುಳ್ಳ, ತೇಜೋಬಲಗುಣಗಳಿಂದ ಕೂಡಿದ, ನಾನಾರತ್ನವಿಭೂಷಿತವಾದ ಅವನ ಶೀಘ್ರಗಾಮಿಯಾದ ಕುದುರೆಗಳು ಎಲ್ಲವನ್ನೂ ದಾಟಿ ಹೋಗುವಂತೆ ಶೋಭಿಸುತ್ತಾ ಪರಸ್ಪರವಾಗಿ ವಿಜಯಸೂಚಕವಾದ ಹ್ರೇಷಾರವಗಳನ್ನು ಮಾಡಿದವು.

ತತಸ್ತೇ ತು ಮಹಾಯಕ್ಷಾಃ ಕ್ರುದ್ಧಂ ದೃಷ್ಟ್ವಾ ಧನೇಶ್ವರಮ್ ॥
ಹರ್ಷಯಾಮಾಸುರನ್ಯೋನ್ಯಮ್ ಇಂಗಿತೈರ್ವಿಜಯಾವಹೈಃ ॥೨೭॥

ಆಗ ಆ ಮಹಾಯಕ್ಷರು ಕೋಪಗೊಂಡ ಕುಬೇರನನ್ನು ನೋಡಿ ವಿಜಯಪ್ರದವಾದ ಇಂಗಿತಗಳಿಂದ ಪರಸ್ಪರವಾಗಿ ಸಂತೋಷಪಡಿಸಿದರು.

ಸ ತಮಾಸ್ಥಾಯ ಭಗವಾನ್ ರಾಜರಾಜೋ ಮಹಾರಥಮ್ ।
ಪ್ರಯಯೌ ದೇವಗಂಧರ್ವೈಃ ಸ್ತೂಯಮಾನೋ ಮಹಾದ್ಯುತಿಃ ॥೨೮॥

ಆ ರಾಜರಾಜನಾದ ಪೂಜ್ಯನಾದ ಮಹಾದ್ಯುತಿಯಾದ ಕುಬೇರನು ಮಹಾರಥವನ್ನು ಏರಿ ದೇವಗಂಧರ್ವರಿಂದ ಸ್ತೋತ್ರಮಾಡಲ್ಪಟ್ಟವನಾಗಿ ಅಲ್ಲಿಂದ ಹೊರಟನು.

ತಂ ಪ್ರಯಾಂತಂ ಮಹಾತ್ಮಾನಂ ಸರ್ವೇ ಯಕ್ಷಾ ಧನಾಧಿಪಮ್ ।
ಅನುಜಗ್ಮುರ್ಮಹಾತ್ಮಾನಂ ಧನದಂ ಘೋರದರ್ಶನಾಃ ॥೨೯॥

ರಕ್ತಾಕ್ಷಾ ಹೇಮಸಂಕಾಶಾ ಮಹಾಕಾಯಾ ಮಹಾಬಲಾಃ ।
ಸಾಯುಧಾ ಬದ್ಧನಿಸ್ತ್ರಿಂಶಾ ಯಕ್ಷಾ ದಶಶತಾವರಾಃ ॥೩೦॥

ಹಾಗೆ ಹೊರಟ ಮಹಾತ್ಮನಾದ ಕುಬೇರನನ್ನು ಘೋರವಾದ ರೂಪವುಳ್ಳ ರಕ್ತಾಕ್ಷರಾದ ಸುವರ್ಣಾಲಂಕೃತರಾದ, ಮಹಾಕಾಯರಾದ, ಮಹಾಬಲರಾದ, ಆಯುಧಗಳನ್ನು ಹಿಡಿದು ಕತ್ತಿಯನ್ನು ಕಟ್ಟಿಕೊಂಡ, ಸಹಸ್ರಸಂಖ್ಯೆಗೆ ಕಡಿಮೆಯಿಲ್ಲದ ಯಕ್ಷರು ಹಿಂಬಾಲಿಸಿದರು.

ತೇ ಜವೇನ ಮಹಾವೇಗಾಃ ಪ್ಲವಮಾನಾ ವಿಹಾಯಸಾ ।
ಗಂಧಮಾದನಮಾಜಗ್ಮುಃ ಪ್ರಕರ್ಷಂತ ಇವಾಂಬರಮ್ ॥೩೧॥

ಮಹಾವೇಗವುಳ್ಳವರು ಆಕಾಶದಲ್ಲಿ ಹಾರಿಬರುತ್ತಾ ಆಕಾಶವನ್ನೇ ಎಳೆದುಕೊಂಡು ಬರುವಂತೆ ಗಂಧಮಾದನ ಪರ್ವತಕ್ಕೆ ಬಂದರು.

ಸಾಯುಧಾ ಬದ್ಧನಿಸ್ತ್ರಿಂಶಾ ಯಕ್ಷಾ ದಶಶತಾಯುತಾಃ ।
ಜವೇನ ಮಹತಾ ವೀರಾಃ ಪರಿವಾರ್ಯೋಪತಸ್ಥಿರೇ ॥೩೨॥

ಕೈಯಲ್ಲಿ ಆಯುಧಗಳನ್ನು ಹಿಡಿದು, ಸೊಂಟದಲ್ಲಿ ಕತ್ತಿಗಳನ್ನು ಕಟ್ಟಿದ ಸಾವಿರ ಸಂಖ್ಯೆಯ ವೀರರಾದ ಯಕ್ಷರು ಬಹಳ ಶೀಘ್ರವಾಗಿ ಕುಬೇರನನ್ನು ಸುತ್ತುವರಿದು ನಿಂತರು.

ಕುಬೇರಂ ಚ ಮಹಾತ್ಮಾನಂ ಯಕ್ಷರಕ್ಷೋಗಣಾವೃತಮ್ ।
ದದೃಶುರ್ಹೃಷ್ಟರೋಮಾಣಃ ಪಾಂಡವಾಃ ಪ್ರಿಯದರ್ಶನಮ್ ॥೩೩॥

ಪಾಂಡವರಾದರೂ ರೋಮಾಂಚಿತರಾಗಿ ಪ್ರಿಯದರ್ಶನನಾದ ಯಕ್ಷ ರಕ್ಷೋಗಣಗಳಿಂದ ಕೂಡಿದ ಮಹಾತ್ಮನಾದ ಕುಬೇರನನ್ನು ನೋಡಿದರು.

ಕುಬೇರಸ್ತು ಮಹಾಸತ್ತ್ವಾನ್ ಪಾಂಡೋಃ ಪುತ್ರಾನ್ ಮಹಾರಥಾನ್ ।
ಅತ್ತಕಾರ್ಮುಕನಿಸ್ತ್ರಿಂಶಾನ್ ದೃಷ್ಟ್ವಾ ಪ್ರೀತೋऽಭವತ್ ತದಾ ॥೩೪॥

ಕುಬೇರನಾದರೂ ಕೈಯಲ್ಲಿ ಕತ್ತಿ ಮತ್ತು ಬಿಲ್ಲುಗಳನ್ನು ಹಿಡಿದ ಮಹಾಬಲಶಾಲಿಗಳಾದ ಮಹಾರಥರಾದ ಪಾಂಡುಪುತ್ರರನ್ನು ನೋಡಿ ಆಗ ಸಂತೋಷಗೊಂಡನು.

ಸರ್ವೇ ಚೇಮೇ ನರವ್ಯಾಘ್ರಾಃ ಪುರಂದರಸಮೌಜಸಃ ।
ದೇವಕಾರ್ಯಂ ಚಿಕೀರ್ಷನ್ ಸ ಹೃದಯೇನ ತುತೋಷ ಹ ॥೩೫॥

ಈ ನರವ್ಯಾಘ್ರರೆಲ್ಲರೂ ಇಂದ್ರನಿಗೆ ಸಮನಾದ ಪರಾಕ್ರಮವುಳ್ಳವರು ಎಂದು ತಿಳಿದು ಕುಬೇರನು ದೇವಕಾರ್ಯವನ್ನು ಮಾಡುವವನಾಗಿ ಮನಸ್ಸಿನಲ್ಲಿ ಸಂತೋಷಪಟ್ಟನು.

ತೇ ಪಕ್ಷಿಣ ಇವಾಪೇತುರ್ಗಿರಿಶೃಂಗಂ ಮಹಾಜವಾಃ ।
ತಸ್ಥುಸ್ತೇಷಾಂ ಸಮಭ್ಯಾಶೇ ಧನೇಶ್ವರಪುರಃಸರಾಃ ॥೩೬॥

ಧನೇಶ್ವರನ ಪುರಸ್ಸರರಾದ ಸೇವಕರೆಲ್ಲರೂ ಮಹಾವೇಗದಿಂದ ಆ ಗಿರಿಶೃಂಗಕ್ಕೆ ಪಕ್ಷಿಗಳಂತೆ ಹಾರಿಬಂದು ಪಾಂಡವರ ಎದುರಿನಲ್ಲಿ ನಿಂತರು.

ತತಸ್ತಂ ಹೃಷ್ಟಮನಸಂ ಪಾಂಡವಾನ್ ಪ್ರತಿ ಭಾರತ ।
ಸಮೀಕ್ಷ್ಯ ಯಕ್ಷಗಂಧರ್ವಾ ನಿರ್ವಿಕಾರಮವಸ್ಥಿತಾಃ ॥೩೭॥

ಎಲೈ ಭಾರತನೇ, ಆಗ ಕುಬೇರನು ಪಾಂಡವರನ್ನು ನೋಡಿ ಸಂತೋಷ ಪಡುತ್ತಿರುವುದನ್ನು ಗಮನಿಸಿದ ಯಕ್ಷಗಂಧರ್ವರು ಶಾಂತರಾಗಿ ನಿಂತರು.

ಪಾಂಡವಾಶ್ಚ ಮಹಾತ್ಮಾನಃ ಪ್ರಣಮ್ಯ ಧನದಂ ಪ್ರಭುಮ್ ।
ನಕುಲಃ ಸಹದೇವಶ್ಚ ಧರ್ಮಪುತ್ರಶ್ಚ ಧರ್ಮವಿತ್ ॥೩೮॥

ಅಪರಾದ್ಧಮಿವಾತ್ಮಾನಂ ಮನ್ಯಮಾನಾ ಮಹಾರಥಾಃ ।
ತಸ್ಥುಃ ಪ್ರಾಂಜಲಯಃ ಸರ್ವೇ ಪರಿವಾರ್ಯ ಧನೇಶ್ವರಮ್ ॥೩೯॥

ಮಹಾತ್ಮರಾದ ಪಾಂಡವರೆಲ್ಲರೂ ಎಂದರೆ ನಕುಲಸಹದೇವ ಮತ್ತು ಧರ್ಮಜ್ಞನಾದ ಯುಧಿಷ್ಠಿರ ಈ ಮಹಾರಥರೆಲ್ಲರೂ ಪ್ರಭುವಾದ ಕುಬೇರನಿಗೆ ನಮಸ್ಕರಿಸಿ ತಾವು ಅಪರಾಧವನ್ನು ಮಾಡಿದವರಂತೆ ತಿಳಿದು ಕೈಗಳನ್ನು ಮುಗಿದು ಎಲ್ಲರೂ ಕುಬೇರನ ಸುತ್ತ ನಿಂತರು.

ಸ ಹ್ಯಾಸನವರಂ ಶ್ರೀಮತ್ ಪುಷ್ಪಕಂ ವಿಶ್ವಕರ್ಮಣಾ ।
ವಿಹಿತಂ ಚಿತ್ರಪರ್ಯಂತಮಾತಿಷ್ಠತ ಧನಾಧಿಪಃ ॥೪೦॥

ಆ ಕುಬೇರನಾದರೂ ವಿಶ್ವಕರ್ಮದಿಂದ ನಿರ್ಮಿತವಾದ ಪುಷ್ಪಕ ವಿಮಾನದ ಅಂಚಿನಲ್ಲಿದ್ದ ಶ್ರೇಷ್ಠವಾದ ಆಸನದಲ್ಲಿ ಕುಳಿತಿದ್ದನು.

ತಮಾಸೀನಂ ಮಹಾಕಾಯಾಃ ಶಂಕುಕರ್ಣಾ ಮಹಾಜವಾಃ ।
ಉಪೋಪವಿವಿಶುರ್ಯಕ್ಷಾ ರಾಕ್ಷಸಾಶ್ಚ ಸಹಸ್ರಶಃ ॥೪೧॥

ಅಲ್ಲಿ ಕುಳಿತಿದ್ದ ಕುಬೇರನ ಸುತ್ತಲೂ ಮಹಾಕಾಯರಾದ, ಮಹಾವೇಗಶಾಲಿಗಳಾದ ಶಂಕುಕರ್ಣ ಮೊದಲಾದ ಯಕ್ಷರೂ ಮತ್ತು ಸಹಸ್ರ ಸಂಖ್ಯೆಯಲ್ಲಿ ರಾಕ್ಷಸರೂ ಕುಳಿತಿದ್ದರು.

ಶತಶಶ್ಚಾಪಿ ಗಂಧರ್ವಾಸ್ತಥೈವಾಪ್ಸರಸಾಂ ಗಣಾಃ ।
ಪರಿವಾರ್ಯೋಪತಿಷ್ಠಂತಿ ಯಥಾ ದೇವಾಃ ಶತಕ್ರತುಮ್ ॥೪೨॥

ಗಂಧರ್ವರು ಹಾಗು ಅಪ್ಸರೆಯರ ಗಣಗಳು ನೂರರ ಸಂಖ್ಯೆಯಲ್ಲಿ ಅವನನ್ನು ಸುತ್ತುವರಿದು ದೇವತೆಗಳು ಇಂದ್ರನನ್ನು ಸ್ತೋತ್ರಮಾಡುವಂತೆ ಸ್ತೋತ್ರಮಾಡುತ್ತಿದ್ದರು.

ಕಾಂಚನೀಂ ಶಿರಸಾ ಬಿಭ್ರದ್ ಭೀಮಸೇನಃ ಸ್ರಜಂ ಶುಭಾಮ್ ।
ಪಾಶಖಡ್ಗಧನುಷ್ಪಾಣೀರುದ್ದೈಕ್ಷತ ಧನಾಧಿಪಮ್ ॥೪೩॥

ಭೀಮಸೇನನು ಸುವರ್ಣಮಯವಾದ ಶುಭವಾದ ಒಂದು ಮಾಲೆಯನ್ನು ತನ್ನ ಶಿರಸ್ಸಿನಲ್ಲಿ ಧರಿಸಿ ಪಾಶ ಖಡ್ಗ ಧನುಸ್ಸುಗಳನ್ನು ಹಿಡಿದು ಧನಾಧಿಪನಾದ ಕುಬೇರನನ್ನು ಕಣ್ಣೆತ್ತಿ ನೋಡಿದನು.

ಭೀಮಸೇನಸ್ಯ ನ ಗ್ಲಾನಿರ್ವಿಕ್ಷತಸ್ಯಾಪಿ ರಾಕ್ಷಸೈಃ ।
ಆಸೀತ್ ತಸ್ಯಾಮವಸ್ಥಾಯಾಂ ಕುಬೇರಮಪಿ ಪಶ್ಯತಃ ॥೪೪॥

ರಾಕ್ಷಸರಿಂದ ಘಾಸಿಗೊಳಿಸಲ್ಪಟ್ಟಿದ್ದರೂ ಕುಬೇರನನ್ನು ನೋಡುತ್ತಿದ್ದ ಆ ಸ್ಥಿತಿಯಲ್ಲಿ ಭೀಮಸೇನನಿಗೆ ಯಾವ ಆಯಾಸವಾಗಲೀ ದುಃಖವಾಗಲೀ ಇರಲಿಲ್ಲ.

ಆದದಾನಂ ಶಿತಾನ್ ಬಾಣಾನ್ ಯೋದ್ಧುಕಾಮಮವಸ್ಥಿತಮ್ ।
ದೃಷ್ಟ್ವಾ ಭೀಮಂ ಧರ್ಮಸುತಮಬ್ರವೀನ್ನರವಾಹನಃ ॥೪೫॥

ಕೈಯಲ್ಲಿ ಬಾಣಗಳನ್ನು ತೆಗೆದುಕೊಂಡು ಯುದ್ಧಮಾಡಲು ಸನ್ನದ್ಧನಾದ ಭೀಮಸೇನನನ್ನು ನೋಡಿ ಕುಬೇರನು ಧರ್ಮರಾಜನನ್ನು ಕುರಿತು ಹೇಳಿದನು.

ವಿದುಸ್ತ್ವಾಂ ಸರ್ವಭೂತಾನಿ ಪಾರ್ಥ ಭೂತಹಿತೇ ರತಮ್ ।
ನಿರ್ಭಯಶ್ಚಾಪಿ ಶೈಲಾಗ್ರೇ ವಸ ತ್ವಂ ಭ್ರಾತೃಭಿಃ ಸಹ ॥೪೬॥

ಎಲೈ ಪಾರ್ಥನೇ, ನೀನು ಸರ್ವಪ್ರಾಣಿಗಳಿಗೂ ಹಿತವನ್ನು ಮಾಡುವವನು ಎಂದು ಎಲ್ಲ ಪ್ರಾಣಿಗಳೂ (ಮನುಷ್ಯರೂ) ನಿನ್ನನ್ನು ತಿಳಿದಿದ್ದಾರೆ. ನೀನು ಈ ಪರ್ವತ ಶಿಖರದಲ್ಲಿ ತಮ್ಮಂದಿರ ಜೊತೆಯಲ್ಲಿ ನಿರ್ಭಯವಾಗಿ ವಾಸವನ್ನು ಮಾಡು.

ನ ಚ ಮನ್ಯುಸ್ತ್ವಯಾ ಕಾರ್ಯೋ ಭೀಮಸೇನಸ್ಯ ಪಾಂಡವ ।
ಕಾಲೇನೈತೇ ಹತಾಃ ಪೂರ್ವಂ ನಿಮಿತ್ತಮನುಜಸ್ತವ ॥೪೭॥

ಎಲೈ ಪಾಂಡವನೇ, ಭೀಮಸೇನನ ಮೇಲೆ ಕೋಪವನ್ನು ಮಾಡಬೇಡ. ಈ ರಾಕ್ಷಸರು ಕಾಲದಿಂದ ಮೊದಲೇ ಹತರಾಗಿದ್ದಾರೆ. ನಿನ್ನ ತಮ್ಮನು ನಿಮಿತ್ತ ಮಾತ್ರ.

ವ್ರೀಡಾ ಚಾತ್ರ ನ ಕರ್ತವ್ಯಾ ಸಾಹಸಂ ಯದಿದಂ ಕೃತಮ್ ।
ದೃಷ್ಟಶ್ಚಾಪಿ ಸುರೈಃ ಪೂರ್ವಂ ವಿನಾಶೋ ಯಕ್ಷರಕ್ಷಸಾಮ್ ॥೪೮॥

ಈ ಯಾವ ಸಾಹಸಕಾರ್ಯ ನಡೆದಿದೆಯೋ ಅದರಲ್ಲಿ ನಾಚಿಕೆಯನ್ನು ಪಟ್ಟುಕೊಳ್ಳುವುದು ಬೇಡ. ಈ ಯಕ್ಷರಾಕ್ಷಸರ ವಿನಾಶವು ದೇವತೆಗಳಿಂದ ಮೊದಲೇ ದೃಷ್ಟವಾಗಿದ್ದಿತು.

ನ ಭೀಮಸೇನೇ ಕೋಪೋ ಮೇ ಪ್ರೀತೋಽಸ್ಮಿ ಭರತರ್ಷಭ ।
ಕರ್ಮಣಾ ಭೀಮಸೇನಸ್ಯ ಮಮ ತುಷ್ಟಿರಭೂತ್ ಪುರಾ ॥೪೯॥

ಎಲೈ ಭರತಶ್ರೇಷ್ಠನೇ, ನನಗೆ ಭೀಮಸೇನನ ಮೇಲೆ ಕೋಪವಿಲ್ಲ. ನಾನು ಪ್ರಸನ್ನನಾಗಿದ್ದೇನೆ. ಭೀಮಸೇನನ ಈ ಕಾರ್ಯದಿಂದ ನನಗೆ ಮೊದಲೇ ಸಂತೋಷವಾಗಿದೆ.

ವೈಶಂಪಾಯನಃ

ಏವಮುಕ್ತ್ವಾ ತು ರಾಜಾನಂ ಭೀಮಸೇನಮಭಾಷತ ॥೫೦॥

ನೈತನ್ಮನಸಿ ಮೇ ತಾತ ವರ್ತತೇ ಕುರುಸತ್ತಮ ।
ಯದಿದಂ ಸಾಹಸಂ ಭೀಮ ಕೃಷ್ಣಾರ್ಥೇ ಕೃತವಾನಸಿ ॥೫೧॥

ವೈಶಂಪಾಯನ– ಧರ್ಮರಾಜನನ್ನು ಕುರಿತು ಹೀಗೆ ಹೇಳಿ ಕುಬೇರನು ಭೀಮಸೇನನನ್ನು ಕುರಿತು ಎಲೈ ಪ್ರೀತಿಪಾತ್ರನೇ, ಕುರುಶ್ರೇಷ್ಠನೇ, ದ್ರೌಪದಿಯ ಸಲುವಾಗಿ ಯಾವ ಈ ಸಾಹಸದ ಕಾರ್ಯವನ್ನು ಮಾಡಿದ್ದೀಯೋ ಅದು ನನ್ನ ಮನಸ್ಸಿನಲ್ಲಿ ಯಾವ ದುಷ್ಪರಿಣಾಮವನ್ನೂ ಮಾಡಿಲ್ಲ.

ಮಾಮನಾದೃತ್ಯ ದೇವಾಂಶ್ಚ ವಿನಾಶಂ ಯಕ್ಷರಕ್ಷಸಾಮ್ ।
ಸ್ವಬಾಹುಬಲಮಾಶ್ರಿತ್ಯ ತೇನಾಹಂ ಪ್ರೀತಿಮಾಂಸ್ತ್ವಯಿ ।
ಶಾಪಾದದ್ಯ ವಿನಿರ್ಮುಕ್ತೋ ಘೋರಾದಸ್ಮಿ ವೃಕೋದರ ॥೫೨॥

ನನ್ನನ್ನು ಮತ್ತು ದೇವತೆಗಳನ್ನು ತಿರಸ್ಕರಿಸಿ ನಿನ್ನ ಬಾಹುಬಲವನ್ನು ಆಶ್ರಯಿಸಿ ಯಾವ ಯಕ್ಷರಾಕ್ಷಸರ ವಿನಾಶವನ್ನು ಮಾಡಿದ್ದೀಯೋ ಅದರಿಂದ ನಾನು ನಿನ್ನಲ್ಲಿ ಸಂತೋಷಗೊಂಡಿದ್ದೇನೆ. ಎಲೈ ವೃಕೋದರನೇ, ನಾನು ಈ ದಿನ ಘೋರವಾದ ಶಾಪದಿಂದ ವಿನಿರ್ಮುಕ್ತನಾಗಿದ್ದೇನೆ.

ಅಹಂ ಪೂರ್ವಮಗಸ್ತ್ಯೇನ ಕ್ರುದ್ಧೇನ ಪರಮರ್ಷಿಣಾ ।
ಶಪ್ತೋಽಪರಾಧೇ ಕಸ್ಮಿಂಶ್ಚಿತ್ ತಸ್ಯೈಷಾ ನಿಷ್ಕೃತಿಃ ಕೃತಾ ॥೫೩॥

ನಾನು ಹಿಂದೆ ಪರಮ ಋಷಿಗಳಾದ ಅಗಸ್ತ್ಯರಿಗೆ ಯಾವುದೋ ಒಂದು ಅಪರಾಧವನ್ನು ಮಾಡಿ ಕೋಪಗೊಂಡ ಅವರಿಂದ ಶಾಪವನ್ನು ಹೊಂದಿದೆ. ಈ ದಿನ ಆ ಶಾಪದ ವಿಮೋಚನೆಯಾಯಿತು.

ದೃಷ್ಟೋ ಹಿ ಮಮ ಸಂಕ್ಲೇಶಃ ಪುರಾ ಪಾಂಡವನಂದನ ।
ನ ತವಾತ್ರಾಪರಾಧೋಽಸ್ತಿ ಕಥಂಚಿದಪಿ ಪಾಂಡವ ॥೫೪॥

ಎಲೈ ಪಾಂಡವನಂದನನೇ, ಆ ಶಾಪನಿಮಿತ್ತವಾಗಿ ನನ್ನ ಈ ದಿನದ ಕ್ಲೇಶವನ್ನು ನಾನು ಮೊದಲೇ ತಿಳಿದಿದ್ದೆ. ಎಲೈ ಪಾಂಡವನೇ, ಇದರಲ್ಲಿ ನಿನ್ನ ಯಾವ ಅಪರಾಧವೂ ಇಲ್ಲ.

ಯುಧಿಷ್ಠಿರಃ

ಕಥಂ ಶಪ್ತೋಽಸಿ ಭಗವನ್ನಗಸ್ತ್ಯೇನ ಮಹಾತ್ಮನಾ ।
ಶ್ರೋತುಮಿಚ್ಛಾಮ್ಯಹಂ ದೇವ ತವೈತಚ್ಛಾಪಕಾರಣಮ್ ॥೫೫॥

ಯುಧಿಷ್ಠಿರ– ಪೂಜ್ಯನಾದ ಕುಬೇರನೇ, ಮಹಾತ್ಮರಾದ ಅಗಸ್ತ್ಯರಿಂದ ಹೇಗೆ ಶಾಪಕ್ಕೆ ಒಳಗಾದೆ? ದೇವನೇ, ನಿನ್ನ ಈ ಶಾಪಕಾರಣವನ್ನು ನಾನು ತಿಳಿಯಲು ಬಯಸುತ್ತೇನೆ.

ಇದಂ ಚಾಶ್ಚರ್ಯಭೂತಂ ಮೇ ಯತ್ ಕ್ರೋಧಾತ್ ತಸ್ಯ ಧೀಮತಃ ।
ತದೈವ ತ್ವಂ ನ ನಿರ್ದಗ್ಧಃ ಸಬಲಃ ಸಪದಾನುಗಃ ॥೫೬॥

ಇದು ನನಗೆ ಇನ್ನೂ ಆಶ್ಚರ್ಯಭೂತವಾದುದು. ಏಕೆಂದರೆ ಆ ಮೇಧಾವಿಗಳ ಕ್ರೋಧಕ್ಕೆ ಪಾತ್ರನಾದ ನೀನು ಆಗಲೇ ಸೈನ್ಯ ಮತ್ತು ಸೇವಕರಿಂದ ಕೂಡಿ ಭಸ್ಮವಾಗಲಿಲ್ಲ.

ಧನೇಶ್ವರಃ

ದೇವತಾನಾಮಭೂನ್ಮಂತ್ರಃ ಕುಶಾವತ್ಯಾಂ ನರೇಶ್ವರ ॥೫೭॥

ವೃತಸ್ತತ್ರಾಹಮಗಮಂ ಮಹಾಪದ್ಮಶತೈಸ್ತ್ರಿಭಿಃ ।
ಯಕ್ಷಾಣಾಂ ಘೋರರೂಪಾಣಾಂ ವಿವಿಧಾಯುಧಧಾರಿಣಾಮ್ ।
ಅಧ್ವನ್ಯಹಮಥಾಪಶ್ಯಮಗಸ್ತ್ಯಮೃಷಿಸತ್ತಮಮ್ ॥೫೮॥

ಧನೇಶ್ವರ– ನರೇಶ್ವರನೇ, ಹಿಂದೆ ಕುಶಾವತಿಯಲ್ಲಿ ದೇವತೆಗಳ ಮಂತ್ರಾಲೋಚನೆಯ ಸಭೆಯು ನಡೆಯಿತು. ಅಲ್ಲಿ ಆಹೂತನಾಗಿದ್ದ ನಾನು ಮುನ್ನೂರು ಮಹಾಪದ್ಮ ಸಂಖ್ಯೆಯ ಘೋರರೂಪರಾದ ವಿವಿಧಾಯುಧ ಧಾರಿಗಳಾದ ಯಕ್ಷರ ಜೊತೆಯಲ್ಲಿ ಅಲ್ಲಿಗೆ ಹೋದೆ. ಹೋಗುತ್ತಾ ದಾರಿಯಲ್ಲಿ ಋಷಿಶ್ರೇಷ್ಠರಾದ ಅಗಸ್ತ್ಯರನ್ನು ನೋಡಿದೆ.

ಉಗ್ರಂ ತಪಸ್ತಪ್ಯಮಾನಂ ಯಮುನಾತೀರಮಾಶ್ರಿತಮ್ ।
ನಾನಾಪಕ್ಷಿಗಣಾಕೀರ್ಣಂ ಪುಷ್ಪಿತದ್ರುಮಶೋಭಿತಮ್ ॥೫೯॥

ತಮೂರ್ಧ್ವಬಾಹುಂ ದೃಷ್ಟ್ವೈವ ಸೂರ್ಯಸ್ಯಾಭಿಮುಖೇ ಸ್ಥಿತಮ್ ।
ತೇಜೋರಾಶಿಂ ದೀಪ್ಯಮಾನಂ ಹುತಾಶನಮಿವೈಧಿತಮ್ ॥೬೦॥

ಅವರು ನಾನಾ ಪಕ್ಷಿಗಣಗಳಿಂದ ತುಂಬಿದ ಪುಷ್ಪವುಳ್ಳ ವೃಕ್ಷಗಳಿಂದ ಶೋಭಿತವಾದ ಯಮುನಾ ತೀರದಲ್ಲಿ ನಿಂತು ತಪಸ್ಸನ್ನು ಮಾಡುತ್ತಿದ್ದರು. ಅವರು ಸೂರ್ಯನಿಗೆ ಅಭಿಮುಖವಾಗಿ ನಿಂತು ತೇಜೋರಾಶಿಯಂತೆ ಬೆಳಗುತ್ತಾ ಉರಿಯುತ್ತಿರುವ ಅಗ್ನಿಜ್ವಾಲೆಯಂತೆ ಬೆಳಗುತ್ತಿದ್ದರು.

ರಾಕ್ಷಸಾಧಿಪತಿಃ ಶ್ರೀಮಾನ್ ಮಣಿಮಾನ್ನಾಮ ಮೇ ಸಖಾ ।
ಮೌಖ್ಯಾದಜ್ಞಾನಭಾವಾಚ್ಚ ದರ್ಪಾನ್ಮೋಹಾಚ್ಚ ಪಾರ್ಥಿವ ॥೬೧॥

ನ್ಯಷ್ಠೀವದಾಕಾಶಗತೋ ಮಹರ್ಷೇಸ್ತಸ್ಯ ಮೂರ್ಧನಿ ।
ತತಃ ಕ್ರುದ್ಧಃ ಸ ಭಗವಾನುವಾಚೇದಂ ತಪೋಧನಃ ॥೬೨॥

ಎಲೈ ರಾಜನೇ, ಅವರನ್ನು ನೋಡಿದ ನನ್ನ ಸ್ನೇಹಿತನಾದ ರಾಕ್ಷಸಾಧಿಪತಿಯಾದ ಮಣಿಮಂತನು ಮೂರ್ಖತನದಿಂದಲೂ, ಅಜ್ಞಾನದಿಂದಲೂ, ದರ್ಪದಿಂದಲೂ ಮತ್ತು ಮೋಹದಿಂದಲೂ ಆಕಾಶಮಾರ್ಗದಿಂದಲೇ ಆ ಮಹರ್ಷಿಗಳ ತಲೆಯ ಮೇಲೆ ಉಗುಳಿದನು. ಆಗ ಕೋಪಗೊಂಡ ತಪೋಧನರಾದ ಆ ಪೂಜ್ಯರು ಈ ಮಾತನ್ನು ಆಡಿದರು.

ಮಾಮವಜ್ಞಾಯ ದುಷ್ಟಾತ್ಮಾ ಯಸ್ಮಾದೇಷ ಸಖಾ ತವ ।
ಧರ್ಷಣಾಂ ಕೃತವಾನೇತಾಂ ಪಶ್ಯತಸ್ತೇ ಧನೇಶ್ವರ ॥೬೩॥

ತಸ್ಮಾತ್ ಸಹೈಭಿಃ ಸೈನ್ಯೈಸ್ತೇ ವಧಂ ಪ್ರಾಪ್ಸ್ಯತಿ ಮಾನುಷಾತ್ ।
ತ್ವಂ ಚಾಪ್ಯೇಭಿರ್ಹತೈಃ ಸೈನ್ಯೈಃ ಕ್ಲೇಶಂ ಪ್ರಾಪ್ಯೇಹ ದುರ್ಮತಿಃ ॥೬೪॥

ತಮೇವ ಮಾನುಷಂ ದೃಷ್ಟ್ವಾ ಕಿಲ್ಬಿಷಾದ್ ವಿಪ್ರಮೋಕ್ಷ್ಯಸೇ ॥೬೫॥

ನಿನ್ನ ಸ್ನೇಹಿತನಾದ ಈ ದುಷ್ಟನಾದ ಮಣಿಮಂತನು ನನ್ನನ್ನು ತಿರಸ್ಕರಿಸಿ ನಿನ್ನ ಕಣ್ಣೆದುರಿಗೇ ನನಗೆ ಅವಮಾನ ಮಾಡಿರುವುದರಿಂದ, ಎಲೈ ಧನೇಶ್ವರನೇ, ಇವನು ನಿನ್ನ ಸೈನ್ಯದ ಜೊತೆಯಲ್ಲಿ ಒಬ್ಬ ಮನುಷ್ಯನಿಂದ ವಧೆಯನ್ನು ಹೊಂದುವನು. ನೀನೂ ಸಹ ನಿನ್ನ ಸೈನ್ಯದ ವಧೆಯನ್ನು ನೋಡಿ ಕ್ಲೇಶವನ್ನೂ, ವಿಷಾದವನ್ನೂ ಅನುಭವಿಸಿ ಅದೇ ಮನುಷ್ಯನನ್ನು ನೋಡಿ ನಿನ್ನ ಪಾಪದಿಂದ ನಿರ್ಮುಕ್ತನಾಗುವಿ.

ಸೈನ್ಯಾನಾಂ ತು ತವೈತೇಷಾಂ ಪುತ್ರಪೌತ್ರಬಲಾನ್ವಿತಮ್ ।
ನ ಶಾಪಂ ಪ್ರಾಪ್ಸ್ಯ(ಪ್ಯ)ತೇ ಘೋರಂ ತತ್ತವಾಜ್ಞಾಂ ಕರಿಷ್ಯತಿ ॥೬೬॥

ಈ ನಿನ್ನ ಸೈನ್ಯದ ಪುತ್ರಪೌತ್ರರಿಂದ ಒಡಗೂಡಿದ ಸೈನ್ಯಕ್ಕೆ ನನ್ನ ಘೋರವಾದ ಶಾಪವು ತಟ್ಟುವುದಿಲ್ಲ (ಈ ಸೈನ್ಯವು ನಾಶವಾದರೂ) ಆ ಸೈನ್ಯವು ನಿನ್ನ ಆದೇಶವನ್ನು ಪಾಲಿಸುವುದು.

ಕುಬೇರಃ

ಏಷ ಶಾಪೋ ಮಯಾ ಪ್ರಾಪ್ತಃ ಪ್ರಾಕ್ತಸ್ಮಾದ್ಯಪಿಸತ್ತಮಾತ್ ।
ಸ ಭೀಮೇನ ಮಹಾರಾಜ ಭ್ರಾತ್ರಾ ತವ ವಿಮೋಕ್ಷಿತಃ ॥೬೭॥

ಹೀಗೆ ಹಿಂದೆ ಆ ಋಷಿಶ್ರೇಷ್ಠರಿಂದ ನಾನು ಶಾಪವನ್ನು ಪಡೆದೆ. ಎಲೈ ಮಹಾರಾಜನೇ, ಈಗ ನಿನ್ನ ತಮ್ಮನಾದ ಭೀಮಸೇನನಿಂದ ಆ ಶಾಪದಿಂದ ನಿರ್ಮುಕ್ತನಾಗಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಪಂಚಾಶದಧಿಕಶತತಮೋಽಧ್ಯಾಯಃ ॥
॥ ಇತಿ ಯಕ್ಷಯುದ್ಧಪರ್ವಣಿ ಚತುರ್ಥೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ತೇಳನೆಯ
ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಧೃತಾಯುಧಂ ಭೀಮಮೀಕ್ಷ್ಯಾಪಿ ಕಿಂಚಿದ್
ದೈತ್ಯಾವೇಶಾದ್ ಬಹು ಮೇನೇ ನ ಭೀಮಮ್ ।
ಅಗಸ್ತ್ಯಶಾಪಂ ಚಾವದತ್ ಸ್ವಸ್ಯ ಪೂರ್ವಂ
ಸಖಾಯನಾಶೇ ಕಾರಣಂ ರಾಜರಾಜಃ ॥೩೦೩॥

ಸ್ವಲ್ಪ ಅಸುರಾವೇಶವಿದ್ದ ಪ್ರಯುಕ್ತ ಆಯುಧಪಾಣಿಯಾದ ಭೀಮನನ್ನು ನೋಡಿಯೂ ಅವನಲ್ಲಿ ಮಹತ್ವವನ್ನು ಕಾಣಲಿಲ್ಲ, ಕುಬೇರ. ತನ್ನ ಮಿತ್ರನ ಮರಣಕ್ಕೆ ಅಗಸ್ತ್ಯರ ಶಾಪ ಕಾರಣ ಎಂದ.

ದೈತ್ಯಾವೇಶಾದುಜ್ಝಿತಃ ಶಾಂತಭಾವೋ
ದದೌ ನಿಜಂ ಸ್ಥಾನಮೇಷಾಂ ಸುತುಷ್ಟಃ ।
ಆವಾಸಾರ್ಥ ತೇಽವಸಂಸ್ತತ್ರ ಪಾರ್ಥಾ-
ಸ್ತಥಾಽನ್ಯೇಷಾಂ ದೈವತಾನಾಂ ಗೃಹೇಷು ॥೩೦೪॥

ಕುಬೇರ ದೈತ್ಯಾವೇಶದಿಂದ ಮುಕ್ತನಾಗಿ ಶಾಂತಭಾವದಿಂದ ಕೂಡಿ ಸಂತುಷ್ಟನಾಗಿ ಪಾಂಡವರಿಗೆ ಆವಾಸ ಮಾಡಲು ತನ್ನ ಮನೆಯನ್ನೇ ಕೊಟ್ಟ. ಪಾಂಡವರು ಅಲ್ಲಿಯೂ ಬೇರೆ ಬೇರೆ ದೇವತೆಗಳ ಮನೆಗಳಲ್ಲಿಯೂ ವಾಸಮಾಡಿದರು.

ತತ್ರೈವ ತೇಷಾಂ ವಸತಾಂ ಮಹಾತ್ಮನಾ-
ಮಾನಂದಿನಾಮಬ್ದಚತುಷ್ಟಯೇ ಗತೇ ।
ಪಂಚಾಬ್ದಮಾಧ್ಯಾಪ್ಯ ಮಹಾಂತಿ ಚಾಸ್ತ್ರ-
ಣೀಂದ್ರೋ ಗುರ್ವರ್ಥಂ ಫಲ್ಗುನೇನಾರ್ಥಿತೋಽಭೂತ್ ॥೩೦೫॥

ದೇವತೆಗಳ ಅರಮನೆಗಳಲ್ಲಿ ಪಾಂಡವರು ಆನಂದದಿಂದ ವಾಸ ಮಾಡುತ್ತಿದ್ದಂತೆ ನಾಲ್ಕು ವರ್ಷಗಳು ಕಳೆದಾಗ ಐದು ವರ್ಷಕಾಲ ಮಹಾ ಅಸ್ತ್ರಗಳನ್ನು ಅರ್ಜುನನಿಗೆ ದೇವೇಂದ್ರ ಕಲಿಸಿ ಗುರುದಕ್ಷಿಣೆಯ ಬಗ್ಗೆ ಅರ್ಜುನನಿಂದ ಪ್ರಾರ್ಥಿತನಾದ.

★ ★ ★ ★

ನೂರ ಐವತ್ತೆಂಟನೆಯ ಅಧ್ಯಾಯ

ಕುಬೇರನಿಂದ ಯುಧಿಷ್ಠಿರನಿಗೆ ಅನುಶಾಸನ. ಕುಬೇರನ ಅಪ್ಪಣೆಯಂತೆ ರಾಕ್ಷಸರಿಂದ ಪೂಜಿತರಾದ ಯುಧಿಷ್ಠಿರಾದಿಗಳ ಕುಬೇರಗೃಹವಾಸ.

ಧನದಃ

ಯುಧಿಷ್ಠಿರ ಧೃತಿರ್ದಾಕ್ಷ್ಯಂ ದೇಶಕಾಲಪರಾಕ್ರಮಾಃ ।
ಲೋಕತಂತ್ರವಿಧಾನಾನಾಮೇಷ ಪಂಚವಿಧೋ ವಿಧಿಃ ॥೧॥

ಕುಬೇರ– ಎಲೈ ಯುಧಿಷ್ಠಿರನೇ, ಧೈರ್ಯ, ದಕ್ಷತೆ, ದೇಶಕಾಲಪರಾಕ್ರಮಗಳು ಇವು ಲೋಕದಲ್ಲಿ ಯಾವ ಕಾರ್ಯವನ್ನು ಸಾಧಿಸಬೇಕಾದರೂ ಇರಬೇಕಾದ ಐದು ವಿಧವಾದ ಉಪಾಯಗಳು.

ಧೃತಿಮಂತಶ್ಚ ದಕ್ಷಾಶ್ಚ ಸ್ವೇ ಸ್ವೇ ಕರ್ಮಣಿ ಭಾರತ ।
ಪರಾಕ್ರಮವಿಧಾನಜ್ಞಾ ನರಾ ಕೃತಯುಗೇಽಭವನ್ ॥೨॥

ಎಲೈ ಭಾರತನೇ, ಕೃತಯುಗದಲ್ಲಿ ಧೈರ್ಯಶಾಲಿಗಳೂ, ತಮ್ಮ ತಮ್ಮ ಕರ್ಮದಲ್ಲಿ ದಕ್ಷತೆಯುಳ್ಳವರೂ, ಪರಾಕ್ರಮದ ವಿಧಾನವನ್ನು ತಿಳಿದವರು ಆದ ಮನುಷ್ಯರೂ ಇದ್ದರು.

ಧೃತಿಮಾನ್ ದೇಶಕಾಲಜ್ಞಃ ಸರ್ವಧರ್ಮವಿಧಾನವಿತ್ ।
ಕ್ಷತ್ರಿಯಃ ಕ್ಷತ್ರಿಯಶ್ರೇಷ್ಠ ಪ್ರಶಾಸ್ತಿ ಪೃಥಿವೀಂ ಚಿರಮ್ ॥೩॥

ಎಲೈ ಕ್ಷತ್ರಿಯಶ್ರೇಷ್ಠನೇ, ಧೈರ್ಯವಂತನೂ, ದೇಶಕಾಲಗಳನ್ನು ತಿಳಿದವನೂ, ಸರ್ವಧರ್ಮದ ರೀತಿಯನ್ನು ತಿಳಿದವನೂ ಆದ ಕ್ಷತ್ರಿಯನು ಭೂಮಿಯನ್ನು ಬಹುಕಾಲ ಆಳುತ್ತಾನೆ.

ಯ ಏವಂ ವರ್ತತೇ ಪಾರ್ಥ ಪುರುಷಃ ಸರ್ವಕರ್ಮಸು ।
ಸ ಲೋಕೇ ಲಭತೇ ವೀರ ಯಶಃ ಪ್ರೇತ್ಯ ಚ ಸದ್ಗತಿಮ್ ॥೪॥

ಎಲೈ ವೀರನೇ, ಯಾವ ಮನುಷ್ಯನು ಎಲ್ಲಾ ಕಾರ್ಯಗಳಲ್ಲಿಯೂ ಈ ರೀತಿ ವರ್ತಿಸುತ್ತಾನೆಯೋ ಅವನು ಲೋಕದಲ್ಲಿ ಕೀರ್ತಿಯನ್ನೂ ಮರಣಾನಂತರ ಪರಲೋಕದಲ್ಲಿ ಸದ್ಗತಿಯನ್ನೂ ಪಡೆಯುತ್ತಾನೆ.

ದೇಶಕಾಲಾಂತರಪ್ರೇಪ್ಸುಃ ಕೃತ್ವಾ ಶಕ್ರಃ ಪರಾಕ್ರಮಮ್ ।
ಸಂಪ್ರಾಪ್ತಸ್ತ್ರಿದಿವೇ ರಾಜ್ಯಂ ವೃತ್ರಹಾ ವಸುಭಿಃ ಸಹ ॥೫॥

ದೇಶಕಾಲ ವಿಶೇಷಗಳನ್ನು ಚೆನ್ನಾಗಿ ತಿಳಿದ ವೃತ್ರಸೂದನನಾದ ಇಂದ್ರನು ಪರಾಕ್ರಮವನ್ನು ಮಾಡಿ ವಸುಗಳ ಜೊತೆಯಲ್ಲಿ ಸ್ವರ್ಗರಾಜ್ಯವನ್ನು ಪಡೆದನು.

ಪಾಪಾತ್ಮಾ ಪಾಪಬುದ್ಧಿರ್ಯಃ ಪಾಪಮೇವಾನುವರ್ತತೇ ।
ಕರ್ಮಣಾಮವಿಭಾಗಜ್ಞಃ ಪ್ರೇತ್ಯ ಚೇಹ ವಿನಶ್ಯತಿ ॥೬॥

ಪಾಪಾತ್ಮನಾದವನೂ ಮತ್ತು ಪಾಪಬುದ್ಧಿಯುಳ್ಳವನೂ ಆದವನು ಪಾಪವನ್ನೇ ಅನುಸರಿಸುತ್ತಾನೆ. ಕರ್ಮಗಳ ವಿಭಾಗವನ್ನು ತಿಳಿಯದ ಅವನು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ನಾಶವನ್ನು ಹೊಂದುತ್ತಾನೆ.

ಅಕಾಲಜ್ಞಃ ಸುದುರ್ಮೇಧಾಃ ಕಾರ್ಯಾಣಾಮವಿಶೇಷವಿತ್ ।
ವೃಥಾऽऽಚಾರಸಮಾರಂಭಃ ಪ್ರೇತ್ಯ ಚೇಹ ವಿನಶ್ಯತಿ ॥೭॥

ಕಾಲವನ್ನು ತಿಳಿಯದವನು ಕಾರ್ಯಗಳ ವಿಶೇಷವನ್ನು ತಿಳಿಯದವನು ವ್ಯರ್ಥವಾದ ಆಚಾರವನ್ನು ಮಾಡುವವನು ದುರ್ಬುದ್ಧಿಯುಳ್ಳ ಮನುಷ್ಯನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ವಿನಾಶವನ್ನು ಹೊಂದುತ್ತಾನೆ.

ಸಾಹಸೇ ವರ್ತಮಾನಾನಾಂ ನಿಕೃತೀನಾಂ ದುರಾತ್ಮನಾಮ್ ।
ಸರ್ವಸಾಮರ್ಥ್ಯಲಿಪ್ಸೂನಾಂ ಪಾಪೋ ಭವತಿ ನಿಶ್ಚಯಃ ॥೮॥

ಸಾಹಸ ಕಾರ್ಯದಲ್ಲಿ ತೊಡಗಿ ಎಲ್ಲ ಸಾಮರ್ಥ್ಯವನ್ನೂ ಬಯಸುವ ವಂಚನೆಕಾರರ ನಿರ್ಧಾರವು ಯಾವಾಗಲೂ ಪಾಪವೇ ಆಗುತ್ತದೆ.

ಅಧರ್ಮಜ್ಞೋऽವಲಿಪ್ತಶ್ಚ ಬಾಲಬುದ್ಧಿರಮರ್ಷಣಃ ।
ನಿರ್ಭಯೋ ಭೀಮಸೇನೋऽಯಂ ತಂ ಶಾಧಿ ಪುರುಷರ್ಷಭ ॥೯॥

ಎಲೈ ಪುರುಷರ್ಷಭನೇ, ಈ ಭೀಮಸೇನನು ಅಧರ್ಮಜ್ಞನೂ, ದರ್ಪವುಳ್ಳವನೂ, ಬಾಲಬುದ್ಧಿಯುಳ್ಳವನೂ, ಕ್ರೋಧಶೀಲನೂ, ನಿರ್ಭಯನೂ ಆಗಿದ್ದಾನೆ. ನೀನು ಅವನನ್ನು ಶಾಸನಮಾಡು.

ಆರ್ಷ್ಟಿಷೇಣಸ್ಯ ರಾಜರ್ಷೇಃ ಪ್ರಾಪ್ಯ ಭೂಯಸ್ತ್ವಮಾಶ್ರಮಮ್ ।
ತಾಮಿಸ್ರಂ ಪ್ರಥಮಂ ಪಕ್ಷಂ ವೀತಶೋಕಭಯೋ ವಸ ॥೧೦॥

ನೀನು ಪುನಃ ಆರ್ಷ್ಟಿಷೇಣರ ಆಶ್ರಮಕ್ಕೆ ಹೋಗಿ ಯಾವ ಶೋಕಭಯವಿಲ್ಲದೆ ಈ ಕೃಷ್ಣಪಕ್ಷದಲ್ಲಿ ವಾಸವನ್ನು ಮಾಡು.

ಅಲಕಾಃ ಸಹ ಗಂಧರ್ವೈರ್ಯಕ್ಷಾಶ್ಚ ಸಹ ಕಿನ್ನರೈಃ ।
ಮನ್ನಿಯುಕ್ತಾ ಮನುಷ್ಯೇಂದ್ರ ಸರ್ವೇ ಚ ಗಿರಿವಾಸಿನಃ ।
ರಕ್ಷಿಷ್ಯಂತಿ ಮಹಾಬಾಹೋ ಸಹಿತಂ ದ್ವಿಜಸತ್ತಮೈಃ ॥೧೧॥

ಎಲೈ ಮಹಾಬಾಹುವಾದ ನರೇಂದ್ರನೇ, ನನ್ನ ರಾಜಧಾನಿಯಾದ ಅಲಕಾ ಪಟ್ಟಣದ ನಿವಾಸಿಗಳು ಗಂಧರ್ವರ, ಯಕ್ಷರ, ಕಿನ್ನರರ ಮತ್ತು ಎಲ್ಲಾ ಗಿರಿವಾಸಿಗಳ ಜೊತೆಯಲ್ಲಿ ನನ್ನ ಆದೇಶದಂತೆ ದ್ವಿಜಶ್ರೇಷ್ಠರಿಂದ ಕೂಡಿದ ನಿನ್ನನ್ನು ರಕ್ಷಿಸುವರು.

ಸಾಹಸಾದನುಸಂಪ್ರಾಪ್ತಃ ಪ್ರತಿಬುದ್ಧ್ಯ ವೃಕೋದರಃ ।
ವಾರ್ಯತಾಂ ಸಾಧ್ವಯಂ ರಾಜಂಸ್ತ್ವಯಾ ಧರ್ಮಭೃತಾಂ ವರ ॥೧೨॥

ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ, ಸಾಹಸದಿಂದ ಇಲ್ಲಿಗೆ ಬಂದ ವೃಕೋದರನನ್ನು ನೀನು ಬೋಧಿಸಿ ಮುಂದೆ ಅಂತಹ ಕೆಲಸಗಳನ್ನು ಮಾಡದಂತೆ ಅವನನ್ನು ತಡೆ.

ಇತಃ ಪರಂ ಚ ವೋ ರಾಜನ್ ದ್ರಕ್ಷ್ಯಂತಿ ವನಗೋಚರಾಃ ।
ಉಪಸ್ಥಾಸ್ಯಂತಿ ವೋ ರಾಜನ್ ರಕ್ಷಿಷ್ಯಂತೇ ಚ ವಃ ಸದಾ ॥೧೩॥

ತಥೈವ ಚಾನ್ನಪಾನಾನಿ ಸ್ವಾದೂನಿ ಚ ಬಹೂನಿ ಚ ।
ಆಹರಿಷ್ಯಂತಿ ಮತ್ಪ್ರೇಷ್ಯಾಃ ಸದಾ ವಃ ಪುರುಷರ್ಷಭಾಃ ॥೧೪॥

ಎಲೈ ರಾಜನೇ, ಇನ್ನು ಮುಂದೆ ವನವಾಸಿಗಳು ನಿಮ್ಮ ದರ್ಶನಕ್ಕೆ ಬರುವರು. ಎಲೈ ಪುರುಷಶ್ರೇಷ್ಠರೇ, ನನ್ನ ಸೇವಕರೇ ಯಾವಾಗಲೂ ನಿಮಗೆ ರುಚಿಯಾದ ಬಹುವಾದ ಅನ್ನಪಾನಗಳನ್ನೂ ತಂದು ಒದಗಿಸುವರು.

ಯಥಾ ಜಿಷ್ಣುರ್ಮಹೇಂದ್ರಸ್ಯ ಯಥಾ ವಾಯೋರ್ವೃಕೋದರಃ ।
ಧರ್ಮಸ್ಯ ತ್ವಂ ಯಥಾ ತಾತ ಯೋಗೋತ್ಪನ್ನೋ ನಿಜಃ ಸುತಃ ॥೧೫॥

ಆತ್ಮಜಾವಾತ್ಮಸಂಪನ್ನೌ ಯಮೌ ಚೋಭೌ ಯಥಾಶ್ವಿನೋಃ ।
ರಕ್ಷ್ಯಸ್ತದ್ವನ್ಮಮಾಪೀಹ ಯೂಯಂ ಸರ್ವೇ ಯುಧಿಷ್ಠಿರ ॥೧೬॥

ಮಹೇಂದ್ರನಿಗೆ ಅರ್ಜುನನು, ವಾಯುದೇವರಿಗೆ ಭೀಮಸೇನನು, ಯಮಧರ್ಮನಿಗೆ ನೀನು ಮತ್ತು ಅಶ್ವಿನೀದೇವತೆಗಳಿಗೆ ನಕುಲಸಹದೇವರು ಹೇಗೆ ಯೋಗದಿಂದ ಉತ್ಪನ್ನರಾಗಿ ಅವರಿಂದ ರಕ್ಷಿಸಲ್ಪಡುವಿರೋ ಅದರಂತೆ, ಎಲೈ ಯುಧಿಷ್ಠಿರನೇ, ನೀವೆಲ್ಲರೂ ನನ್ನಿಂದಲೂ ಸಹ ಇಲ್ಲಿ ರಕ್ಷಿಸಲ್ಪಡಬೇಕಾದವರು.

ಅರ್ಥತತ್ತ್ವವಿಧಾನಜ್ಞಃ ಸರ್ವಧರ್ಮವಿಧಾನವಿತ್ ।
ಭೀಮಸೇನಾದವರಜಃ ಫಲ್ಗುನಃ ಕುಶಲೀ ದಿವಿ ॥೧೭॥

ಅರ್ಥತತ್ತ್ವಗಳ ಪ್ರಕಾರಗಳನ್ನು ತಿಳಿದ, ಸರ್ವಧರ್ಮಗಳ ಪ್ರಕಾರಗಳನ್ನು ತಿಳಿದ, ಭೀಮಸೇನನ ತಮ್ಮನಾದ ಅರ್ಜುನನು ಸ್ವರ್ಗದಲ್ಲಿ ಕ್ಷೇಮದಿಂದಿದ್ದಾನೆ.

ಯಾಃ ಕಾಶ್ಚನ ಮತಾ ಲೋಕೇ ಸ್ವರ್ಗ್ಯಾಃ ಪರಮಸಂಪದಃ ।
ಜನ್ಮಪ್ರಭೃತಿ ತಾಃ ಸರ್ವಾಃ ಸ್ಥಿತಾಸ್ತಾತ ಧನಂಜಯೇ ॥೧೮॥

ಎಲೈ ಪ್ರೀತಿಪಾತ್ರನೇ, ಸ್ವರ್ಗಕ್ಕೆ ಉಚಿತವಾದ ಶ್ರೇಷ್ಠವಾದ ಸಂಪತ್ತುಗಳೆಂದು ಲೋಕದಲ್ಲಿ ಎಷ್ಟು ಪ್ರಸಿದ್ಧವಾಗಿವೆಯೋ ಅವೆಲ್ಲವನ್ನೂ ಧನಂಜಯನು ಹುಟ್ಟಿದಾಗಿನಿಂದಲೇ ಪಡೆದಿದ್ದಾನೆ.

ದಮೋ ದಾನಂ ಬಲಂ ಬುದ್ಧಿರ್ಹ್ರೀರ್ಧೃತಿಸ್ತೇಜ ಉತ್ತಮಮ್ ।
ಏತಾನ್ಯಪಿ ಮಹಾಸತ್ತ್ವೇ ಸ್ಥಿತಾನ್ಯಮಿತತೇಜಸಿ ॥೧೯॥

ಇಂದ್ರಿಯ ನಿಗ್ರಹ, ದಾನ, ಬಲ, ಬುದ್ಧಿ, ನಾಚಿಕೆ, ಧೈರ್ಯ, ಶ್ರೇಷ್ಠವಾದ ಶೌರ್ಯ ಇವೆಲ್ಲವೂ ಅಮಿತಪರಾಕ್ರಮಿಯಾದ ಮಹಾಸತ್ತ್ವನಾದ ಅರ್ಜುನನಲ್ಲಿ ಇವೆ.

ನ ಮೋಹಾತ್ ಕುರುತೇ ಜಿಷ್ಣುಃ ಕರ್ಮ ಪಾಂಡವ ಗರ್ಹಿತಮ್ ।
ನ ಪಾರ್ಥಸ್ಯ ಮೃಷೋಕ್ತಾನಿ ಕಥಯಂತಿ ನರಾ ನೃಪು ॥೨೦॥

ಎಲೈ ಪಾಂಡವನೇ, ಅರ್ಜುನನು ಎಂದೂ ಮೋಹದಿಂದ ನಿಂದ್ಯವಾದ ಕಾರ್ಯವನ್ನು ಮಾಡುವುದಿಲ್ಲ. ಮತ್ತು ಯಾವ ಜನರೂ ಸಹ ಅರ್ಜುನನು ಸುಳ್ಳು ಮಾತನಾಡುತ್ತಾನೆ ಎಂದು ಹೇಳುವುದಿಲ್ಲ.

ಸ ದೇವಪಿತೃಗಂಧರ್ವೈಃ ಕುರೂಣಾಂ ಕೀರ್ತಿವರ್ಧನಃ ।
ಮಾನಿತಃ ಕುರುತೇಽಸ್ತ್ರಾಣಿ ಶಕ್ರಸದ್ಮನಿ ಭಾರತ ॥೨೧॥

ಎಲೈ ಭಾರತನೇ, ಕುರುಗಳ ಕೀರ್ತಿವರ್ಧನನಾದ ಅವನು ದೇವ-ಪಿತೃ-ಗಂಧರ್ವರಿಂದ ಪೂಜಿತರಾಗಿ ಇಂದ್ರನ ಅರಮನೆಯಲ್ಲಿ ಅಸ್ತ್ರವಿದ್ಯೆಯನ್ನು ಕಲಿಯುತ್ತಿದ್ದಾನೆ.

ಯೋಽಸೌ ಸರ್ವಾನ್ ಮಹೀಪಾಲಾನ್ ಧರ್ಮೇಣ ವಶಮಾನಯತ್।
ಸ ಶಂತನುರ್ಮಹಾತೇಜಾಃ ಪಿತುಸ್ತವ ಪಿತಾಮಹಃ ॥೨೨॥

ಪ್ರೀಯತೇ ಪಾರ್ಥ ಪಾರ್ಥೇನ ದಿವಿ ಗಾಂಡೀವಧನ್ವನಾ ।
ಸಮ್ಯಕ್ ಚಾಸೌ ಮಹಾವೀರ್ಯಃ ಕುಲಧುರ್ಯೇಣ ಪಾರ್ಥಿವಃ ॥೨೩॥

ಯಾವ ಮಹಾತೇಜಸ್ವಿಯಾದ, ನಿನ್ನ ತಂದೆಯ ತಾತನಾದ, ಶಂತನು ಚಕ್ರವರ್ತಿಯು ಎಲ್ಲ ರಾಜರನ್ನೂ ವಶಪಡಿಸಿಕೊಂಡನೋ ಅಂತಹ ಶಂತನುವು ಸ್ವರ್ಗಲೋಕದಲ್ಲಿ ಗಾಂಡೀವಧನುರ್ಧಾರಿಯಾದ ಕುಲದ ಗೌರವಭಾರವನ್ನು ಹೊತ್ತಿರುವ ಅರ್ಜುನನ ಜೊತೆಯಲ್ಲಿ ಬಹಳ ಸಂತೋಷದಿಂದ ಇದ್ದಾನೆ.

ಪಿತೄನ್ ದೇವಾನೃಷೀನ್ ವಿಪ್ರಾನ್ ಪೂಜಯಿತ್ವಾ ಮಹಾತಪಾಃ ।
ಸಪ್ತ ಮುಖ್ಯಾನ್ ಮಹಾಮೇಧಾನಾಹರದ್ ಯಮುನಾಂ ಪ್ರತಿ ॥೨೪॥

ಅಧಿರಾಜಃ ಸ ರಾಜಂಸ್ತ್ವಂ ಶಂತನುಃ ಪ್ರಪಿತಾಮಹಃ ।
ಸ್ವರ್ಗಜಿಚ್ಛಕ್ರಲೋಕಸ್ಥಃ ಕುಶಲಂ ಪರಿಪೃಚ್ಛತಿ ॥೨೫॥

ಯಾವ ನಿನ್ನ ಪ್ರಪಿತಾಮಹನಾದ ಶಂತನುವು ಯಮುನಾತೀರದಲ್ಲಿ ಏಳು ಮಹಾಯಾಗಗಳನ್ನು ಮಾಡಿದನೋ, ಎಲೈ ರಾಜನೇ, ಅಂತಹ ಅಧಿರಾಜನಾದ ಶಂತನುವು ತನ್ನ ಪುಣ್ಯದಿಂದ ಸ್ವರ್ಗಲೋಕವನ್ನು ಸಂಪಾದಿಸಿ ಇಂದ್ರಲೋಕದಲ್ಲಿದ್ದು ನಿನ್ನ ಕುಶಲವನ್ನು ವಿಚಾರಿಸುತ್ತಿದ್ದಾನೆ.

ವೈಶಂಪಾಯನಃ

ಏತತ್ ಶ್ರುತ್ವಾ ತು ವಚನಂ ಧನದೇನ ಪ್ರಭಾಷಿತಮ್ ।
ತತಃ ಶಕ್ತಿಂ ಗದಾಂ ಖಡ್ಗಂ ಧನುಶ್ಚ ಭರತರ್ಷಭಃ ।
ಅಂಸೇ ಪ್ರಾಧತ್ತ ನಮಶ್ಚಕ್ರೇ ಕುಬೇರಾಯ ವೃಕೋದರಃ ॥೨೬॥

ವೈಶಂಪಾಯನ– ಕುಬೇರನಿಂದ ಹೇಳಲ್ಪಟ್ಟ ಈ ಮಾತುಗಳನ್ನು ಕೇಳಿ ಭರತ ಶ್ರೇಷ್ಠನಾದ ವೃಕೋದರನು ತನ್ನ ಶಕ್ತಿ, ಗದೆ, ಖಡ್ಗ, ಧನುಸ್ಸುಗಳನ್ನು ಭುಜದಲ್ಲಿ ಇಟ್ಟುಕೊಂಡು ಕುಬೇರನಿಗೆ ನಮಸ್ಕಾರವನ್ನು ಮಾಡಿದನು.

ಏತತ್‌ಶ್ರುತ್ವಾ ತು ವಚನಂ ಧನದೇನ ಪ್ರಭಾಷಿತಮ್ ।
ಪಾಂಡವಾಶ್ಚ ತತಸ್ತೇನ ಬಭೂವುಃ ಸಂಪ್ರಹರ್ಷಿತಾಃ ।
ತತೋಽಬ್ರವೀದ್ ಧನಾಧ್ಯಕ್ಷಃ ಶರಣ್ಯಃ ಶರಣಾಗತಮ್ ॥೨೭॥

ಕುಬೇರನು ಆಡಿದ ಈ ಮಾತುಗಳನ್ನು ಕೇಳಿ ಪಾಂಡವರೆಲ್ಲರೂ ಅದರಿಂದ ಸಂತೋಷಗೊಂಡರು. ಆಗ ಶರಣಾಗತವತ್ಸಲನಾದ ಕುಬೇರನು ಶರಣಾಗತನಾದ ಧರ್ಮರಾಜನನ್ನು ಕುರಿತು ಹೀಗೆ ಹೇಳಿದನು;

ಮಾನಹಾ ಭವ ಶತ್ರೂಣಾಂ ಸುಹೃದಾಂ ನಂದಿವರ್ಧನಃ ।
ವಿಭಯಸ್ತಾಪ ಶೈಲಾಗ್ರೇ ವಸಾನಃ ಸಹ ಬಂಧುಭಿಃ ॥೨೮॥

ಸುಪರ್ಣಪಿತೃದೇವಾನಾಂ ಸತತಂ ಮಾನಕೃದ್ ಭವ ।
ಋಜುಂ ಪಶ್ಯತ ಮಾ ವಕ್ರಂ ಸತ್ಯಂ ವದತ ಮಾऽನೃತಮ್ ॥೨೯॥

ದೀರ್ಘಂ ಪಶ್ಯತ ಮಾ ಹ್ರಸ್ವಂ ಪರಂ ಪಶ್ಯತ ಮಾऽಪರಮ್ ।

ಶತ್ರುಗಳ ಮಾನವನ್ನು ಕಳೆದು ಸುಹೃದರಿಗೆ ಸಂತೋಷವನ್ನು ಉಂಟುಮಾಡುವವನಾಗು. ಈ ಪರ್ವತಶಿಖರದಲ್ಲಿ ಬಂಧುಗಳ ಜೊತೆಯಲ್ಲಿ ನಿರ್ಭಯವಾಗಿ ವಾಸಮಾಡುತ್ತಾ ಪಕ್ಷಿಗಳಿಗೆ ಮತ್ತು ಪಿತೃದೇವತೆಗಳಿಗೆ ಮಾನವನ್ನು ಕೊಡುವವನಾಗು. ನೇರವಾದ ದೃಷ್ಟಿಯಿರಲಿ; ವಕ್ರದೃಷ್ಟಿಯು ಬೇಡ. ಸತ್ಯವನ್ನು ನುಡಿಯಿರಿ; ಅಸತ್ಯವನ್ನು ನುಡಿಯಬೇಡಿ. ದೀರ್ಘದೃಷ್ಟಿಯನ್ನು ಹೊಂದಿ; ಸಂಕುಚಿತ ದೃಷ್ಟಿಯನ್ನು ಹೊಂದಬೇಡಿ. ಮುಂದೆ ಇರುವುದನ್ನು ನೋಡಿ; ಹಿಂದಿರುವುದನ್ನು ನೋಡಬೇಡಿ.

ಸ್ವೇಷು ವೇಶ್ಮಸು ರಮ್ಯೇಷು ವಸತಾಮಿತ್ರತಾಪನಾಃ ।
ಕಾಮಾನ್ನ ಪರಿಹಾಸ್ಯಂತಿ ಯಕ್ಷಾ ವೋ ಭರತರ್ಷಭಾಃ ॥೩೦॥

ಎಲೈ ಶತ್ರುತಾಪನರೇ, ಭರತರ್ಷಭರೇ, ನಿಮ್ಮ ನಿಮ್ಮ ಸುಂದರವಾದ ಗೃಹಗಳಲ್ಲಿ ವಾಸವನ್ನು ಮಾಡಿ. ಯಕ್ಷರು ನಿಮಗೆ ಯಾವ ವಸ್ತುಗಳೂ ನ್ಯೂನವಾಗದಂತೆ ನೋಡಿಕೊಳ್ಳುವರು.

ಶೀಘ್ರಮೇವ ಗುಡಾಕೇಶಃ ಕೃತಾಸ್ತ್ರಃ ಪುನರೇಷ್ಯತಿ ।
ಸಾಕ್ಷಾನ್ಮಘವತೋತ್ಸೃಷ್ಟಃ ಸಂಪ್ರಾಪ್ಸ್ಯತಿ ಧನಂಜಯಃ ॥೩೧॥

ಗುಡಾಕೇಶನಾದ ಅರ್ಜುನನು ಶೀಘ್ರವಾಗಿಯೇ ಅಸ್ತ್ರವನ್ನು ಸಂಪಾದಿಸಿ ಇಂದ್ರನಿಂದ ಬೀಳ್ಕೊಡಲ್ಪಟ್ಟು ಪುನಃ ಇಲ್ಲಿಗೆ ಬರುವನು.

ವೈಶಂಪಾಯನಃ

ಏವಮುತ್ತಮಕರ್ಮಾಣಮನುಶಿಷ್ಯ ಯುಧಿಷ್ಠಿರಮ್ ।
ಅಸ್ತಂ(ಶ್ವೇತಂ) ಗಿರಿವರಶ್ರೇಷ್ಠಂ ಪ್ರಯಯೌ ಗುಹ್ಯಕಾಧಿಪಃ ॥೩೨॥

ವೈಶಂಪಾಯನ– ಹೀಗೆ ಉತ್ತಮಕಾರ್ಯಗಳನ್ನು ಮಾಡುವ ಯುಧಿಷ್ಠಿರನಿಗೆ ಅನುಶಾಸನವನ್ನು ಮಾಡಿ ಗುಹ್ಯಕಾಧಿಪನಾದ ಕುಬೇರನು ತನ್ನ ಶ್ರೇಷ್ಠವಾದ ಅಸ್ತಪರ್ವತಕ್ಕೆ (ಶ್ವೇತ ಪರ್ವತಕ್ಕೆ) ಹೋದನು.

ತಂ ಪರಿಸ್ತೋಮಸಂಕೀರ್ಣೈರ್ನಾನಾರತ್ನವಿಭೂಷಿತೈಃ ।
ಯಾನೈರನುಯಯುರ್ಯಕ್ಷಾ ರಾಕ್ಷಸಾಶ್ಚ ಸಹಸ್ರಶಃ ॥೩೩॥

ಅವನ ಹಿಂದೆ ನಾನಾರತ್ನವಿಭೂಷಿತವಾದ ಸಾಧನಗಳಿಂದ ಅಲಂಕೃತವಾದ ಯಾನಗಳಲ್ಲಿ ಸಹಸ್ರಾರು ಯಕ್ಷರು ಮತ್ತು ರಾಕ್ಷಸರು ಪ್ರಯಾಣ ಮಾಡಿದರು.

ಪಕ್ಷಿಣಾಮಿವ ನಿರ್ಘೋಷಃ ಕುಬೇರಸದನಂ ಪ್ರತಿ ।
ಬಭೂವ ಪರಮಾಶ್ವಾನಾಮೈರಾವಣಪಥೇ ಯತಾಮ್ ॥೩೪॥

ಕುಬೇರ ಸದನದ ಸಮೀಪದಲ್ಲಿ ಕುಬೇರನ ಮಿತ್ರನಾದ ಐರಾವಣನ ಗೃಹದ ಮಾರ್ಗದಲ್ಲಿ ಹೋಗುವ ಶ್ರೇಷ್ಠವಾದ ಅಶ್ವಗಳಿಂದ ಉಂಟಾದ ಶಬ್ದವು ಪಕ್ಷಿಗಳ ನಿರ್ಘೋಷದಂತೆ ಇದ್ದಿತು.

ತೇ ಜಗ್ಮುಸ್ತೂರ್ಣಮಾಕಾಶಂ ಧನಾಧಿಪತಿವಾಜಿನಃ ।
ಪ್ರಕರ್ಷಂತ ಇವಾಭ್ರಾಣಿ ಪಿಬಂತ ಇವ ಮಾರುತಮ್ ॥೩೫॥

ಆ ಕುಬೇರನ ಅಶ್ವಗಳು ಬಹಳ ಬೇಗ ಆಕಾಶವನ್ನು ಸೇರಿ ಮೋಡಗಳನ್ನು ಎಳೆದುಕೊಂಡು ಹೋಗುವಂತೆ ಮತ್ತು ವಾಯುವನ್ನು ಹೀರುವಂತೆ ತೋರಿದವು.

ತತಸ್ತಾನಿ ಶರೀರಾಣಿ ಗತಸತ್ತ್ವಾನಿ ರಕ್ಷಸಾಮ್ ।
ಅಪಾಕೃಷ್ಯಂತ ಶೈಲಾಗ್ರಾದ್ ಧನಾಧಿಪತಿಶಾಸನಾತ್ ॥೩೬॥

ಅನಂತರ ಕುಬೇರನ ಶಾಸನದಂತೆ ಮೃತರಾದ ಯಕ್ಷರಾಕ್ಷಸರ ಶರೀರಗಳೆಲ್ಲವೂ ಆ ಪರ್ವತಾಗ್ರದಿಂದ ದೂರ ಎಸೆಯಲ್ಪಟ್ಟವು.

ತೇಷಾಂ ಹಿ ಶಾಪಕಾಲಃ ಸ ಕೃತೋಽಗಸ್ತ್ಯೇನ ಧೀಮತಾ ।
ಸಮರೇ ನಿಹತಾಸ್ತಸ್ಮಾಚ್ಚಾಪಸ್ಯಾಂತೋಽಭವತ್ ತದಾ ॥೩೭॥

ಅವರಿಗೆ ಮೇಧಾವಿಗಳಾದ ಅಗಸ್ತ್ಯರೇ ಶಾಪಕಾಲದ ಅವಧಿಯನ್ನು ಸೂಚಿಸಿದ್ದರು. ಅವರು ಯುದ್ಧದಲ್ಲಿ ಹತರಾದರು, ಆಗ ಶಾಪದ ಕಾಲವು ಮುಗಿಯಿತು.

ಪಾಂಡವಾಶ್ಚ ಮಹಾತ್ಮಾನಸ್ತೇಷು ವೇಶ್ಮಸು ತಾಃ ಕ್ಷಪಾಃ (ತಾಂ ಕ್ಷಪಾಮ್)।
ಸುಖಮೂಷುರ್ಗತೋದ್ವೇಗಾಃ ಪೂಜಿತಾಃ ಸರ್ವರಾಕ್ಷಸೈಃ ॥೩೮॥

ಮಹಾತ್ಮರಾದ ಪಾಂಡವರಾದರೂ ಕುಬೇರನು ಹೇಳಿದ ಆ ಮನೆಗಳಲ್ಲಿ ಸರ್ವರಾಕ್ಷಸರಿಂದ ಪೂಜಿತರಾಗಿ ಯಾವ ಉದ್ವೇಗವೂ ಇಲ್ಲದೇ ಸುಖವಾಗಿ ಆ ಕೆಲವು ರಾತ್ರಿಗಳನ್ನು ಕಳೆದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಪಂಚಾಶದಧಿಕಶತತಮೋऽಧ್ಯಾಯಃ ॥
॥ ಇತಿ ಯಕ್ಷಯುದ್ಧಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ತೆಂಟನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಐವತ್ತೊಂಬತ್ತನೆಯ ಅಧ್ಯಾಯ

ಆರ್ಷ್ಟಿಷೇಣನಿಂದ ಮೇರು ಮಂದರ ಚತುರ್ಮುಖಸದನ, ವೈಕುಂಠ ಮತ್ತು ಸೂರ್ಯಚಂದ್ರಗತಿಗಳ ವರ್ಣನೆ.

ವೈಶಂಪಾಯನಃ

ತತಃ ಸೂರ್ಯೋದಯೇ ಧೌಮ್ಯಃ ಪಾಂಚಾಲೀಸಹಿತಾಂಶ್ಚ ತಾನ್ ।
ಆರ್ಷ್ಟಿಷೇಣೇನ ಸಹಿತಃ ಪಾಂಡವಾನಭ್ಯವರ್ತತ ॥೧॥

ವೈಶಂಪಾಯನ– ಅನಂತರ ಸೂರ್ಯೋದಯವಾದಾಗ ಧೌಮ್ಯರು ಆರ್ಷ್ಟಿಷೇಣನ ಜೊತೆಯಲ್ಲಿ ದ್ರೌಪದಿಯ ಸಹಿತರಾಗಿದ್ದ ಪಾಂಡವರನ್ನು ಸಮೀಪಿಸಿದರು.

ತೇऽಭಿವಾದ್ಯಾರ್ಷ್ಟಿಷೇಣಸ್ಯ ಪಾದೌ ಧೌಮ್ಯಸ್ಯ ಚೈವ ಹ ।
ತತಃ ಪ್ರಾಂಜಲಯಃ ಸರ್ವೇ ಬ್ರಾಹ್ಮಣಾಂಸ್ತಾನಪೂಜಯನ್ ॥೨॥

ಅವರೆಲ್ಲರೂ ಧೌಮ್ಯರ ಮತ್ತು ಆರ್ಷ್ಟಿಷೇಣನ ಪಾದಗಳಿಗೆ ನಮಸ್ಕರಿಸಿ ಕೈಗಳನ್ನು ಮುಗಿದು ಆ ಬ್ರಾಹ್ಮಣರನ್ನು ಪೂಜಿಸಿದರು.

ತತೋ ಯುಧಿಷ್ಠಿರಂ ಧೌಮ್ಯೋ ಗೃಹೀತ್ವಾ ದಕ್ಷಿಣೇ ಕರೇ ।
ಪ್ರಾಚೀಂ ದಿಶಮಭಿಪ್ರೇಕ್ಷ್ಯ ಮಹರ್ಷಿರಿದಮಬ್ರವೀತ್ ॥೩॥

ಅನಂತರ ಮಹರ್ಷಿಗಳಾದ ಧೌಮ್ಯರು ಯುಧಿಷ್ಠಿರನ ಬಲಗೈಯನ್ನು ಹಿಡಿದುಕೊಂಡು ಪೂರ್ವದಿಕ್ಕನ್ನು ನೋಡುತ್ತಾ ಹೀಗೆ ಮಾತನಾಡಿದರು.

ಅಸೌ ಸಾಗರಪರ್ಯಂತಾಂ ಭೂಮಿಮಾವೃತ್ಯ ತಿಷ್ಠತಿ ।
ಶೈಲರಾಜೋ ಮಹಾರಾಜ ಮಂದರೋಽತಿ ವಿರಾಜತೇ ॥೪॥

ಎಲೈ ಮಹಾರಾಜನೇ, ಈ ಶೈಲರಾಜವಾದ ಮಂದರವು ಸಮುದ್ರ ಪರ್ಯಂತವಾದ ಭೂಮಿಯನ್ನು ಆವರಿಸಿಕೊಂಡು ಶೋಭಿಸುತ್ತಿದೆ.

ಇಂದ್ರವೈಶ್ರವಣಾವೇತಾಂ ದಿಶಂ ಪಾಂಡವ ರಕ್ಷತಃ ।
ಪರ್ವತೈಶ್ಚ ವನಾಂತೈಶ್ಚ ಕಾನನೈಶ್ಚೈವ ಶೋಭಿತಾಮ್ ॥೫॥

ಎಲೈ ಪಾಂಡವನೇ, ಪರ್ವತಗಳಿಂದಲೂ ಮತ್ತು ಕಾಡುಗಳಿಂದಲೂ ಶೋಭಿತವಾದ ಈ ದಿಕ್ಕನ್ನು ಇಂದ್ರ ಮತ್ತು ಕುಬೇರರು ರಕ್ಷಿಸುತ್ತಾರೆ.

ಏತದಾಹುರ್ಮಹೇಂದ್ರಸ್ಯ ರಾಜ್ಞೋ ವೈಶ್ರವಣಸ್ಯ ಚ ।
ಋಷಯಃ ಸರ್ವಧರ್ಮಜ್ಞಾಃ ಸದ್ಮ ತಾತ ಮನೀಷಿಣಃ ॥೬॥

ಪ್ರೀತಿಪಾತ್ರನೇ, ಸರ್ವಧರ್ಮಗಳನ್ನು ತಿಳಿದ ಮೇಧಾವಿಗಳು ಮತ್ತು ಋಷಿಗಳು ಈ ದಿಕ್ಕನ್ನು ಮಹೇಂದ್ರನ ಮತ್ತು ಕುಬೇರನ ಆವಾಸಸ್ಥಾನವೆಂದು ಹೇಳುತ್ತಾರೆ.

ಅತಶ್ಚೋದ್ಯಂತಮಾದಿತ್ಯಮುಪತಿಷ್ಠಂತಿ ವೈ ಪ್ರಜಾಃ ।
ಋಷಯಶ್ಚಾಪಿ ಧರ್ಮಜ್ಞಾಃ ಸಿದ್ಧಾಃ ಸಾಧ್ಯಾಶ್ಚ ದೇವತಾಃ ॥೭॥

ಇಲ್ಲಿಂದ ಉದಯಿಸುವ ಸೂರ್ಯನನ್ನು ಎಲ್ಲಾ ಪ್ರಜೆಗಳೂ ಧರ್ಮಜ್ಞರಾದ ಋಷಿಗಳೂ, ಸಿದ್ಧರೂ, ಸಾಧ್ಯರು ಮತ್ತು ದೇವತೆಗಳು ಸ್ತೋತ್ರಮಾಡುತ್ತಾರೆ.

ಯಮಸ್ತು ರಾಜಾ ಧರ್ಮಜ್ಞಃ ಸರ್ವಪ್ರಾಣಭೃತಾಂ ಪ್ರಭುಃ ।
ಪ್ರೇತಸತ್ತ್ವಗತಿಂ ಹ್ಯೇನಾಂ ದಕ್ಷಿಣಾಮಾಶ್ರಿತೋ ದಿಶಮ್ ॥೮॥

ಏತತ್‌ಸಂಯಮನಂ ಪುಣ್ಯಮತೀವಾದ್ಭುತದರ್ಶನಮ್ ।
ಪ್ರೇತರಾಜಸ್ಯ ಭವನಮೃದ್ಧ್ಯಾ ಪರಮಯಾ ಯುತಮ್ ॥೯॥

ಸರ್ವ ಜೀವರಿಗೆ ಪ್ರಭುವಾದ, ಮರಣವನ್ನು ಹೊಂದಿದ ಜೀವರಿಗೆ ಗತಿಯಾದ, ಧರ್ಮಜ್ಞನಾದ ಯಮರಾಜನು ಈ ದಕ್ಷಿಣ ದಿಕ್ಕನ್ನು ಆಶ್ರಯಿಸಿಕೊಂಡಿದ್ದಾನೆ. ಇದು ಅದ್ಭುತವಾದ ದರ್ಶನವುಳ್ಳ ಪವಿತ್ರವಾದ ಪ್ರೇತರಾಜ ಯಮನ ಸಂಯಮನ ಪಟ್ಟಣ. ಇದು ಎಲ್ಲ ಸಂಪತ್ತಿನಿಂದಲೂ ಕೂಡಿದೆ.

ಯಂ ಪ್ರಾಪ್ಯ ಸವಿತಾ ರಾಜನ್ ಸತ್ಯೇನ ಪ್ರತಿತಿಷ್ಠತಿ ।
ಅಸ್ತಂ ಪರ್ವತರಾಜಾನಮೇತಮಾಹುರ್ಮನೀಷಿಣಃ ॥೧೦॥

ಎಲೈ ರಾಜನೇ, ಸತ್ಯದಿಂದ ಸಂಚಾರಮಾಡುವ ಸೂರ್ಯನು ಮೇರುವಿನ ಪೂರ್ವದಿಕ್ಕಿನಲ್ಲಿರುವ ಪ್ರಜೆಗಳಿಗೆ ಅಸ್ತಪರ್ವತವಾದ ದಕ್ಷಿಣದಿಕ್ಕಿನ ಪರ್ವತವನ್ನು ತಲುಪಿ ಅಸ್ತನಾಗುತ್ತಾನೆಂದು ಜ್ಞಾನಿಗಳು ಹೇಳುತ್ತಾರೆ.

ಏತಂ ಪರ್ವತರಾಜಾನಂ ಸಮುದ್ರಂ ಚ ಮಹೋದಧಿಮ್ ।
ಆವಸನ್ ವರುಣೋ ರಾಜಾ ಭೂತಾನಿ ಪರಿರಕ್ಷತಿ ॥೧೧॥

ಈ ಪರ್ವತವನ್ನು (ಪಶ್ಚಿಮ ದಿಕ್ಕಿನ ಪರ್ವತವನ್ನು) ಮತ್ತು ಮಹಾಜಲಗಳಿಗೆ ಆಶ್ರಯವಾದ ಸಮುದ್ರವನ್ನು ತನ್ನ ಆವಾಸವನ್ನಾಗಿ ಮಾಡಿಕೊಂಡು ರಾಜನಾದ ವರುಣನು ಎಲ್ಲಾ ಪ್ರಾಣಿಗಳನ್ನೂ ರಕ್ಷಿಸುತ್ತಾನೆ.

ಉದೀಚೀಂ ದೀಪಯನ್ನೇಷ ದಿಶಂ ತಿಷ್ಠತಿ ವೀರ್ಯವಾನ್ ।
ಮಹಾಮೇರುರ್ಮಹಾಭಾಗ ಶಿವೋ ಬ್ರಹ್ಮವಿದಾಂ ಗತಿಃ ॥೧೨॥

ಎಲೈ ಮಹಾನುಭಾವನೇ, ಈ ವೀರ್ಯಶಾಲಿಯಾದ, ಬ್ರಹ್ಮಜ್ಞಾನಿಗಳಿಗೆ ಗತಿಯಾದ, ಮಂಗಳವಾದ ಮಹಾಮೇರು ಪರ್ವತವು ಉತ್ತರದಿಕ್ಕನ್ನು ಪ್ರಕಾಶಿಸಿಕೊಂಡು ಇರುತ್ತದೆ.

ಯಸ್ಮಿನ್ ಬ್ರಹ್ಮಸದಶ್ಚೈವ ಭೂತಾತ್ಮಾ ಚಾವತಿಷ್ಠತೇ ।
ಪ್ರಜಾಪತಿಃ ಸೃಜನ್ ಸರ್ವಂ ಯತ್ಕಿಂಚಿಜ್ಜಂಗಮಾಗಮಮ್ ॥೧೩॥

ಯಾನಾಹುರ್ಬ್ರಹ್ಮಣಃ ಪುತ್ರಾನ್ ಮಾನಸಾನ್ ದಕ್ಷಸಪ್ತಮಾನ್ ।
ತೇಷಾಮಪಿ ಮಹಾಮೇರುಃ ಶಿವಂ ಸ್ಥಾನಮನಾಮಯಮ್ ॥೧೪॥

ಅದರಲ್ಲಿ (ಅದರ ಶಿಖರದಲ್ಲಿ) ಎಲ್ಲ ಜೀವರಿಗೆ ಒಡೆಯನಾದ ಬ್ರಹ್ಮದೇವರ ಸಭೆಯಿದೆ. ಬ್ರಹ್ಮದೇವರು ಸ್ಥಾವರ ಜಂಗಮರೂಪವಾದ ಎಲ್ಲ ಪ್ರಜೆಗಳನ್ನೂ ಸೃಷ್ಟಿಸುವವರು. ಬ್ರಹ್ಮದೇವರ ಮಾನಸ ಪುತ್ರರಾದ ದಕ್ಷಪ್ರಜಾಪತಿ ಮೊದಲಾದ ಏಳು ಜನರಿಗೂ ಈ ಮಹಾಮೇರುವು ಮಂಗಳವಾದ ನಿರುಪದ್ರವವಾದ ವಾಸಸ್ಥಾನವಾಗಿದೆ.

ಅತ್ರೈವ ಪ್ರತಿತಿಷ್ಠಂತಿ ಪುನರತ್ರೋ(ರೇವೋ)ದಯಂತಿ ಚ ।
ಸಪ್ತ ದೇವರ್ಷಯಸ್ತಾತ ವಸಿಷ್ಠಪ್ರಮುಖಾಃ ಸದಾ ॥೧೫॥

ಎಲೈ ಪ್ರೀತಿಪಾತ್ರನೇ, ವಸಿಷ್ಠ ಮೊದಲಾದ ಸಪ್ತಋಷಿಗಳು ಯಾವಾಗಲೂ ಇಲ್ಲಿಂದಲೇ ಉದಯವನ್ನು ಹೊಂದಿ ಇಲ್ಲಿಂದಲೇ ಹೊರಡುತ್ತಾರೆ.

ದೇಶಂ ವಿರಜಸಂ ಪಶ್ಯ ಮೇರೋಃ ಶಿಖರಮುತ್ತಮಮ್ ।
ಯತ್ರಾತೃತೃಪ್ತೈರಧ್ಯಾಸ್ತೇ ದೇವೈಃ ಸಹ ಪಿತಾಮಹಃ ॥೧೬॥

ರಜೋರಹಿತವಾದ ಮೇರುವಿನ ಶ್ರೇಷ್ಠವಾದ ಶಿಖರ ಪ್ರದೇಶವನ್ನು ನೋಡು. ಆತೃತೃಪ್ತರಾದ ಜ್ಞಾನಿಗಳ ಜೊತೆಯಲ್ಲಿ ಬ್ರಹ್ಮದೇವರು ಅಲ್ಲಿ ಇರುತ್ತಾರೆ.

ಯಮಾಹುಃ ಸರ್ವಭೂತಾನಾಂ ಪ್ರಕೃತೇಃ ಪ್ರಕೃತಿಂ ಧ್ರುವಮ್ ।
ಅನಾದಿನಿಧನಂ ದೇವಂ ಪ್ರಭುಂ ನಾರಾಯಣಂ ಪರಮ್ ।
ಬ್ರಹ್ಮಣಃ ಸದನಾತ್ ತಸ್ಯ ಪರಂ ಸ್ಥಾನಂ ಪ್ರಕಾಶತೇ ॥೧೭॥

ಪ್ರಕೃತಿಗಿಂತಲೂ ಪರವಾದ ಶಾಶ್ವತನಾದ ಅನಾದಿನಿಧನನಾದ ಸರ್ವಭೂತಪತಿಯಾದ ಪ್ರಭುವಾದ ನಾರಾಯಣದೇವರ ಸ್ಥಾನವು ಈ ಬ್ರಹ್ಮಸದನದ ಆಚೆಗೆ ಪ್ರಕಾಶಿಸುತ್ತದೆ.

ದೇವಾ ಅಪಿ ನ ಪಶ್ಯಂತಿ ಸರ್ವತೇಜೋಮಯಂ ಶುಭಮ್ ॥೧೮॥

ಅತ್ಯರ್ಕಾನಲದೀಪ್ತಂ ತತ್ ಸ್ಥಾನಂ ವಿಷ್ಣೋರ್ಮಹಾತ್ಮನಃ ।
ಸ್ವಯೈವ ಪ್ರಭಯಾ ರಾಜನ್ ದುಷ್ಪ್ರೇಕ್ಷ್ಯಂ ದೇವದಾನವೈಃ ॥೧೯॥

ಎಲೈ ರಾಜನೇ, ತನ್ನ ಕಾಂತಿಯಿಂದಲೇ ದೇವದಾನವರಿಂದ ನೋಡಲು ಅಸಾಧ್ಯವಾದ ಸೂರ್ಯಾಗ್ನಿಗಳ ಪ್ರಕಾಶಕ್ಕಿಂತಲೂ ಮಿಗಿಲಾದ ಪ್ರಕಾಶವುಳ್ಳ ಮಹಾತ್ಮನಾದ ವಿಷ್ಣುವಿನ ಸರ್ವತೇಜೋಮಯವಾದ ಪವಿತ್ರವಾದ ಸ್ಥಾನವನ್ನು ದೇವತೆಗಳೂ ಕಾಣುವುದಿಲ್ಲ.

ಪ್ರಾಚ್ಯಾಂ ನಾರಾಯಣಸ್ಥಾನಂ ಮೇರಾವತಿವಿರಾಜತೇ ॥೨೦॥

ಯತ್ರ ಭೂತೇಶ್ವರಸ್ತಾತ ಸರ್ವಪ್ರಕೃತಿರಾತ್ಮಭೂಃ ।
ಭಾಸಯನ್ ಸರ್ವಭೂತಾನಿ ಸುಶ್ರಿಯಾऽಭಿವಿರಾಜತೇ ॥೨೧॥

ಮೇರುಶಿಖರದ ಪೂರ್ವದಿಕ್ಕಿನಲ್ಲಿ ನಾರಾಯಣನ ಸ್ಥಾನವು ಬಹಳವಾಗಿ ಶೋಭಿಸುತ್ತದೆ. ಎಲೈ ಪ್ರೀತಿಪಾತ್ರನೇ, ಅಲ್ಲಿ ಸರ್ವಮೂಲಕಾರಣನಾದ, ಸ್ವತಂತ್ರನಾದ ಸರ್ವೇಶ್ವರನಾದ ಪ್ರಭುವು ಎಲ್ಲವನ್ನೂ ಬೆಳಗುತ್ತಾ ತನ್ನ ಶ್ರೇಷ್ಠವಾದ ಕಾಂತಿಯಿಂದ ಶೋಭಿಸುತ್ತಾನೆ.

ನಾತ್ರ ಬ್ರಹ್ಮರ್ಷಯಸ್ತಾತ ಕುತ ಏವ ಮಹರ್ಷಯಃ ।
ಪ್ರಾಪ್ನುವಂತಿ ಗತಿಂ ಹ್ಯೇತಾಂ ಯತೀನಾಂ ಕುರುಸತ್ತಮ ॥೨೨॥

ಎಲೈ ಪ್ರೀತಿಪಾತ್ರನಾದ ಕುರುಶ್ರೇಷ್ಠನೇ, ಬ್ರಹ್ಮರ್ಷಿಗಳೂ ಆ ಸ್ಥಾನವನ್ನು ಹೊಂದುವುದಿಲ್ಲ. ಇನ್ನು ಮಹರ್ಷಿಗಳು ಎಲ್ಲಿಂದ ಹೊಂದಬೇಕು? ಯತಿಗಳು ಮಾತ್ರ ಆ ಸ್ಥಾನವನ್ನು ಹೊಂದುತ್ತಾರೆ.

ನ ತಂ ಜ್ಯೋತೀಂಷಿ ಸರ್ವಾಣಿ ಪ್ರಾಪ್ಯ ಭಾಸಂತಿ ಪಾಂಡವ ।
ಸ್ವಯಂ ಪ್ರಭುರಚಿಂತ್ಯಾತ್ಮಾ ತತ್ರ ಹ್ಯತಿವಿರಾಜತೇ ॥೨೩॥

ಎಲೈ ಪಾಂಡವನೇ, ಎಲ್ಲ ಜ್ಯೋತಿಗಳೂ ಸೇರಿ ಆ ನಾರಾಯಣನನ್ನು ಪ್ರಕಾಶಿಸಲಾರವು. ಪ್ರಭುವೂ ಅಚಿಂತ್ಯಶಕ್ತಿಸಂಪನ್ನನೂ ಆದ ಅವನು ತಾನೇ ಸ್ವತಃ ಬಹಳವಾಗಿ ಪ್ರಕಾಶಿಸುತ್ತಾನೆ.

ಯತಯಸ್ತತ್ರ ಗಚ್ಛಂತಿ ಭಕ್ತ್ಯಾ ನಾರಾಯಣಂ ಹರಿಮ್ ।
ಪರೇಣ ತಪಸಾ ಯುಕ್ತಾ ಭಾವಿತಾಃ ಕರ್ಮಭಿಃ ಶುಭೈಃ ॥೨೪॥

ಶ್ರೇಷ್ಠವಾದ ತಪಸ್ಸಿನಿಂದಲೂ ಮತ್ತು ಶುಭಕರ್ಮಗಳಿಂದಲೂ ನಾರಾಯಣನಾದ ಹರಿಯನ್ನು ಭಕ್ತಿಯಿಂದ ಉಪಾಸನೆ ಮಾಡಿದ ಯತಿಗಳು ಅಲ್ಲಿಗೆ ಹೋಗುತ್ತಾರೆ.

ಯೋಗಸಿದ್ಧಾ ಮಹಾತ್ಮಾನಸ್ತಮೋಮೋಹವಿವರ್ಜಿತಾಃ ।
ತತ್ರ ಗತ್ವಾ ಪುನರ್ನೇಮಂ ಲೋಕಮಾಯಾಂತಿ ಭಾರತ ।
ಸ್ವಯಂಭುವಂ ಮಹಾತ್ಮಾನಂ ದೇವದೇವಂ ಸನಾತನಮ್ ॥೨೫॥

ಎಲೈ ಭಾರತನೇ, ಯೋಗಸಿದ್ಧರಾದ ರಾಜಸತಾಮಸವರ್ಜಿತರಾದ ಮಹಾತ್ಮರು ಅಲ್ಲಿಗೆ ಹೋದ ಮೇಲೆ ಸ್ವಯಂಭುವಾದ (ಸ್ವತಂತ್ರನಾದ) ಮಹಾತ್ಮನಾದ ದೇವದೇವನಾದ ವೇದಗಮ್ಯನಾದ ನಾರಾಯಣನನ್ನು ಹೊಂದಿ ಪುನಃ ಈ ಲೋಕಕ್ಕೆ ಹಿಂದಿರುಗಿ ಬರುವುದಿಲ್ಲ.

ಸ್ಥಾನಮೇತನ್ಮಹಾಭಾಗ ಧ್ರುವಮಕ್ಷಯಮವ್ಯಯಮ್ ।
ಈಶ್ವರಸ್ಯ ಸದಾ ಹ್ಯೇತತ್ ಪ್ರಣಮಾತ್ರ ಯುಧಿಷ್ಠಿರ ॥೨೬॥

ಎಲೈ ಮಹಾನುಭಾವನೇ, ಇದು ಎಂದೂ ನಶಿಸದಿರುವ ಆ ಪರಮೇಶ್ವರನ ಶಾಶ್ವತವಾದ ಅವ್ಯಯವಾದ ಸ್ಥಾನ. ಯುಧಿಷ್ಠಿರನೇ, ಈ ಸ್ಥಾನಕ್ಕೆ ನಮಸ್ಕಾರವನ್ನು ಮಾಡು.

ಏನಂ ತ್ವಹರಹರ್ಮೇರುಂ ಸೂರ್ಯಾಚಂದ್ರಮಸೌ ಧ್ರುವಮ್ ।
ಪ್ರದಕ್ಷಿಣಮುಪಾವೃತ್ಯ ಕುರುತಃ ಕುರುನಂದನ ।
ಜ್ಯೋತೀಂಷಿ ಚಾಪ್ಯಶೇಷೇಣ ಸರ್ವಾಣ್ಯನಘ ಸರ್ವತಃ ।
ಪರಿಯಾಂತಿ ಮಹಾರಾಜ ಗಿರಿರಾಜಂ ಪ್ರದಕ್ಷಿಣಮ್ ।

ಎಲೈ ಕುರುನಂದನನೇ, ಪ್ರತಿದಿವಸವೂ ಸೂರ್ಯಚಂದ್ರರು ಧ್ರುವವಾದ ಮೇರುವಿಗೆ ಪ್ರದಕ್ಷಿಣೆಯನ್ನು ಮಾಡುತ್ತಾರೆ. ಎಲೈ ಅನಘನಾದ ಮಹಾರಾಜನೇ, ಮತ್ತು ಎಲ್ಲಾ ಜ್ಯೋತಿಃಕಾಯಗಳೂ ಸಹ ಗಿರಿರಾಜ ಮೇರುವಿಗೆ ಪ್ರದಕ್ಷಿಣೆಯನ್ನು ಮಾಡುತ್ತವೆ.

ಏತಂ ಜ್ಯೋತೀಂಷಿ ಸರ್ವಾಣಿ ಪ್ರಕರ್ಷನ್ ಭಗವಾನಪಿ ।
ಕುರುತೇ ವಿತಮಸ್ಕರ್ಮಾ ಆದಿತ್ಯೋಽಭಿಪ್ರದಕ್ಷಿಣಮ್ ॥೨೭॥

ಭಗವಾನ್ ಸೂರ್ಯನು ಈ ಎಲ್ಲಾ ಜ್ಯೋತಿಸ್ಸುಗಳನ್ನೂ ಎಳೆದುಕೊಂಡು ಕತ್ತಲಿನ ನಾಶವನ್ನು ಮಾಡುವ ಕಾರ್ಯವನ್ನು ಮಾಡುವವನಾಗಿ ಈ ಮೇರುವಿಗೆ ಪ್ರದಕ್ಷಿಣೆಯನ್ನು ಮಾಡುತ್ತಾನೆ.

ಅಸ್ತಂ ಪ್ರಾಪ್ಯ ತತಃ ಸಂಧ್ಯಾಮತಿಕ್ರಮ್ಯ ದಿವಾಕರಃ ।
ಉದೀಚೀಂ ಭಜತೇ ಕಾಷ್ಠಾಂ ದಿಶಮೇಷ ವಿಭಾವಸುಃ ॥೨೮॥

ವಿಭಾವಸು ಎಂದು ಕರೆಯಲ್ಪಡುವ ದಿವಾಕರನು ಸಂಧ್ಯಾಕಾಲವನ್ನು ಹೊಂದಿ ಅಸ್ತನಾಗಿ ಉತ್ತರದಿಕ್ಕನ್ನು ಆಶ್ರಯಿಸುತ್ತಾನೆ.

ಸ ಮೇರುಮನುವೃತ್ತಃ ಸನ್ ಪುನರ್ಗಚ್ಛತಿ ಪಾಂಡವ ।
ಪ್ರಾಙ್ಮುಖಿಃ ಸವಿತಾ ದೇವಃ ಸರ್ವಭೂತಹಿತೇ ರತಃ ॥೨೯॥

ಎಲೈ ಪಾಂಡವನೇ, ಸರ್ವಭೂತಹಿತದಲ್ಲಿ ರತನಾದ ಆ ಸವಿತೃದೇವನು ಪುನಃ ಮೇರುವನ್ನು ಬಳಸಿಕೊಂಡು ಪೂರ್ವಾಭಿಮುಖವಾಗಿ ಬರುತ್ತಾನೆ.

ಸ ಮಾಸಾನ್ ವಿಭಜನ್ ಕಾಲೇ ಬಹುಧಾ ಪರ್ವಸಂಧಿಷು ।
ತಥೈವ ಭಗವಾನ್ ಸೋಮೋ ನಕ್ಷತ್ರೈಃ ಸಹ ಗಚ್ಛತಿ ॥೩೦॥

ಸೂರ್ಯನು ಪರ್ವಸಂಧಿಗಳಲ್ಲಿ ಮಾಸಗಳನ್ನು ಅನೇಕ ರೀತಿಯಲ್ಲಿ ವಿಭಾಗಮಾಡುತ್ತಾ ಸಂಚರಿಸುತ್ತಾನೆ. ಹಾಗೆಯೇ ಪೂಜ್ಯನಾದ ಚಂದ್ರನೂ ನಕ್ಷತ್ರಗಳ ಜೊತೆಯಲ್ಲಿ ಸಂಚರಿಸುತ್ತಾನೆ.

ಏವಮೇತಂ ಪರಿಕ್ರಮ್ಯ ಮಹಾಮೇರುಮತಂದ್ರಿತಃ ।
ಸೋಮಶ್ಚ ವಿಭಜನ್ ಕಾಲಂ ಬಹುಧಾ ಪರ್ವಸಂಧಿಷು ॥೩೧॥

ಭಾವಯನ್ ಸರ್ವಭೂತಾನಿ ಪುನರ್ಗಚ್ಛತಿ ಮಂದರಮ್ ॥೩೨॥

ಅದರಂತೆ ಚಂದ್ರನೂ ಸಹ ಪರ್ವಸಂಧಿಗಳಾದ ಪೂರ್ಣಿಮಾ ಮತ್ತು ಅಮಾವಾಸ್ಯೆಗಳಲ್ಲಿ ಕಾಲವನ್ನು ವಿಭಾಗಮಾಡುತ್ತಾ ಆಲಸ್ಯವಿಲ್ಲದೆ ಈ ಮಹಾಮೇರುವನ್ನು ಪ್ರದಕ್ಷಿಣೆ ಮಾಡಿ ಎಲ್ಲ ಪ್ರಾಣಿಗಳಿಗೆ ಸಂತೋಷವನ್ನು ಕೊಡುತ್ತಾ ಮಂದರ ಪರ್ವತದ ಸಮೀಪಕ್ಕೆ ಬರುತ್ತಾನೆ.

ತಥಾ ತಮಿಸ್ರಹಾ ದೇವೋ ಮಯೂಖೈರ್ಭಾವಯನ್ ಜಗತ್ ।
ಮಾರ್ಗಮೇಮದಸಂಬಾಧಮಾದಿತ್ಯಃ ಪರಿವರ್ತತೇ ॥೩೩॥

ಅದರಂತೆ ಕತ್ತಲಿನ ನಾಶವನ್ನು ಮಾಡುವ ಸೂರ್ಯದೇವನು ತನ್ನ ಕಿರಣಗಳಿಂದ ಈ ಜಗತ್ತನ್ನು ರಕ್ಷಣೆ ಮಾಡುತ್ತಾ ನಿಬಿಡವಲ್ಲದ ಈ ಮಾರ್ಗದಲ್ಲಿ ಪ್ರದಕ್ಷಿಣಾಕಾರದಲ್ಲಿ ಸಂಚರಿಸುತ್ತಾನೆ.

ಸಿಸೃಕ್ಷುಃ ಶಿಶಿರಾನ್ಯೇಷ ದಕ್ಷಿಣಾಂ ಭಜತೇ ದಿಶಮ್ ।
ತತಃ ಸರ್ವಾಣಿ ಭೂತಾನಿ ಕಾಲೋಽಭ್ಯರ್ಚ್ಚತಿ ಶೈಶಿರಃ ॥೩೪॥

ಸೂರ್ಯನು ಹಿಮಕಾಲವನ್ನು ಉಂಟುಮಾಡುವವನಾಗಿ ದಕ್ಷಿಣ ದಿಕ್ಕಿಗೆ ತಿರುಗುತ್ತಾನೆ. ಆಗ ಎಲ್ಲಾ ಪ್ರಾಣಿಗಳೂ ಶೈತ್ಯವನ್ನು ಅನುಭವಿಸುತ್ತವೆ.

ಸ್ಥಾವರಾಣಾಂ ಚ ಭೂತಾನಾಂ ಜಂಗಮಾನಾಂ ಚ ತೇಜಸಾ ।
ತೇಜಾಂಸಿ ಸಮುಪಾದತ್ತೇ ನಿವೃತ್ತಃ ಸ ವಿಭಾವಸುಃ ॥೩೫॥

ದಕ್ಷಿಣಾಯನದಿಂದ ನಿವೃತ್ತನಾದ ಸೂರ್ಯನು ತನ್ನ ತೇಜಸ್ಸಿನಿಂದ ಸ್ಥಾವರ ಜಂಗಮ ವಸ್ತುಗಳ ಎಲ್ಲಾ ತೇಜಸ್ಸನ್ನೂ ಅಪಹರಿಸುತ್ತಾನೆ.

ತತಃ ಸ್ವೇದಕ್ಲಮೌ ತಂದ್ರೀ ಗ್ಲಾನಿಶ್ಚ ಭಜತೇ ನರಾನ್ ।
ಪ್ರಾಣಿಭಿಃ ಸತತಂ ಸ್ವಪ್ನೋ ಹ್ಯಭೀಕ್ಷ್ಣಂ ಚ ನಿಷೇವ್ಯತೇ ॥೩೬॥

ಆಗ ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ಬೆವರು, ಆಯಾಸ, ಆಲಸ್ಯ ಮತ್ತು ಗ್ಲಾನಿಗಳು ಉಂಟಾಗುತ್ತವೆ. ಪ್ರಾಣಿಗಳು ಮಧ್ಯಾಹ್ನದಲ್ಲಿಯೂ ಮಲಗಿರುವುದಕ್ಕೆ ಅಪೇಕ್ಷೆ ಪಡುತ್ತವೆ.

ಏವಮೇತದನಿರ್ದೇಶ್ಯಂ ಮಾರ್ಗಮಾವೃತ್ಯ ಭಾನುಮಾನ್ ।
ಪುನಃ ಸೃಜತಿ ವರ್ಷಾಣಿ ಭಗವಾನ್ ಭಾವಯನ್ ಪ್ರಜಾಃ ॥೩೭॥

ಹೀಗೆ ಕಿರಣಗಳಿಂದೊಡಗೂಡಿದ ಸೂರ್ಯನು ಈ ಅನಿರ್ದೇಶ್ಯವಾದ ಮಾರ್ಗದಲ್ಲಿ ತಿರುಗುತ್ತಾ ಎಲ್ಲಾ ಪ್ರಜೆಗಳಿಗೂ ಹಿತವನ್ನು ಮಾಡುವವನಾಗಿ ಪುನಃ ಮಳೆಯನ್ನು ಸೃಷ್ಟಿ ಮಾಡುತ್ತಾನೆ.

ವೃಷ್ಟಿಮಾರುತಸಂತಾಪೈಃ ಸುಖೈಃ ಸ್ಥಾವರಜಂಗಮಾನ್ ।
ವರ್ಧಯನ್ ಸುಮಹಾತೇಜಾಃ ಪುನಃ ಪ್ರತಿನಿವರ್ತತೇ ॥೩೮॥

ಹೀಗೆ ವೃಷ್ಟಿ, ಮಾರುತ, ತಾಪ ಮತ್ತು ಸುಖಗಳಿಂದ ಸ್ಥಾವರಜಂಗಮ ಪ್ರಾಣಿಗಳನ್ನು ಪೋಷಿಸುತ್ತಾ ಮಹಾತೇಜಸ್ವಿಯಾದ ಸೂರ್ಯನು ಪುನಃ ಪುನಃ ಸಂಚರಿಸುತ್ತಾನೆ.

ಏವಮೇಷ ಚರನ್ ಪಾರ್ಥ ಕಾಲಚಕ್ರಮತಂದ್ರಿತಃ ।
ಪ್ರಕರ್ಷನ್ ಸರ್ವಭೂತಾನಿ ಸವಿತಾ ಪರಿವರ್ತತೇ ॥೩೯॥

ಎಲೈ ಪಾರ್ಥನೇ, ಹೀಗೆ ಈ ಸೂರ್ಯನು ಕಾಲಚಕ್ರವನ್ನು ತನ್ನೊಡನೆ ಎಳೆದುಕೊಂಡು ಮೇರುವಿಗೆ ಪ್ರದಕ್ಷಿಣೆ ಮಾಡುತ್ತಾನೆ.

ಸಂತತಾ ಗತಿರೇತಸ್ಯ ನೈಷ ತಿಷ್ಠತಿ ಪಾಂಡವ ।
ಆದಾಯೈವ ತು ಭೂತಾನಾಂ ತೇಜೋ ವಿಸೃಜತೇ ಪುನಃ ॥೪೦॥

ಸೂರ್ಯನ ಗತಿಯು ಸಂತತವಾದುದು. ಎಲೈ ಪಾಂಡವನೇ, ಅವನು ಒಂದು ಕ್ಷಣವೂ ವಿಶ್ರಮಿಸುವುದಿಲ್ಲ. ಅವನು ಪ್ರಾಣಿಗಳ ತೇಜಸ್ಸನ್ನು ಅಪಹರಿಸಿ ಪುನಃ ಹಿಂದೆ ಕೊಡುತ್ತಾನೆ.

ವಿಭಜನ್ ಸರ್ವಭೂತಾನಾಮಾಯುಃ ಕರ್ಮ ಚ ಭಾರತ ।
ಅಹೋರಾತ್ರಂ ಕಲಾಃ ಕಾಷ್ಠಾಃ ಸೃಜತ್ಯೇಷ ಸದಾ ವಿಭುಃ ॥೪೧॥

ಎಲೈ ಭಾರತನೇ, ಎಲ್ಲಾ ಪ್ರಾಣಿಗಳ ಆಯಸ್ಸನ್ನು ಮತ್ತು ಕರ್ಮಗಳನ್ನು ವಿಭಾಗ ಮಾಡುತ್ತಾ ಈ ಪ್ರಭುವು ಸದಾಕಾಲದಲ್ಲಿಯೂ ಕಲಾ ಕಾಷ್ಠಾ ಅಹೋರಾತ್ರ ಮೊದಲಾದ ಕಾಲವಿಭಾಗಗಳನ್ನು ಸೃಷ್ಟಿಸುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ಯಕ್ಷಯುದ್ಧಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಐವತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಅರವತ್ತನೆಯ ಅಧ್ಯಾಯ

ಅಸ್ತ್ರಗಳನ್ನು ಪಡೆದು ಅರ್ಜುನನಿಂದ ಗಂಧಮಾದನಪರ್ವತದಲ್ಲಿ ಪುನರಾಗಮನ.
ಯುಧಿಷ್ಠಿರಾದಿಗಳಿಗೆ ತನ್ನ ಸ್ವರ್ಗವಾಸಪ್ರಕಾರದ ಕಥನ.

ವೈಶಂಪಾಯನಃ

ತಸ್ಮಿನ್ ನಗೇಂದ್ರೇ ವಸತಾಂ ತು ತೇಷಾಂ
ಮಹಾತ್ಮನಾಂ ಸದ್ವ್ರತಮಾಸ್ಥಿತಾನಾಮ್ ।
ರತಿಃ ಪ್ರಮೋದಶ್ಚ ಬಭೂವ ತೇಷಾಂ
ಆಕಾಂಕ್ಷತಾಂ ದರ್ಶನಮರ್ಜುನಸ್ಯ ॥೧॥

ವೈಶಂಪಾಯನ– ಆ ಪರ್ವತಶ್ರೇಷ್ಠದಲ್ಲಿ ಅರ್ಜುನನ ದರ್ಶನವನ್ನು ಬಯಸಿ ವಾಸಮಾಡುತ್ತಿದ್ದ ಸದ್ವ್ರತಧಾರಿಗಳಾದ ಆ ಮಹಾತ್ಮರಿಗೆ ಸುಖಸಂತೋಷಗಳು ಉಂಟಾದವು.

ತಾನ್ ವೀರ್ಯಯುಕ್ತಾನ್ ಸುವಿಶುದ್ಧಕಾಮಾನ್
ತೇಜಸ್ವಿನಃ ಸತ್ಯಧೃತಿಪ್ರಧಾನಾನ್ ।
ಸಂಪ್ರೀಯಮಾಣಾ ಬಹವೋऽಭಿಜಗ್ಮುಃ
ಗಂಧರ್ವಸಂಘಾಶ್ಚ ಮಹರ್ಷಯಶ್ಚ ॥೨॥

ಪರಾಕ್ರಮಯುಕ್ತರಾಗಿ ವಿಶುದ್ಧವಾದ ಆಸೆಗಳನ್ನು ಹೊಂದಿ ತೇಜಸ್ವಿಗಳೂ, ಸತ್ಯಧೈರ್ಯಪರಾಯಣರೂ ಆದ ಅವರನ್ನು ನೋಡಿ ಸಂತೋಷಗೊಂಡ ಅನೇಕ ಮಹರ್ಷಿಗಳು ಮತ್ತು ಗಂಧರ್ವರ ಸಮೂಹಗಳು ಅಲ್ಲಿಗೆ ಬಂದರು.

ತಂ ಪಾದಪೈಃ ಪುಷ್ಪಧರೈರುಪೇತಂ
ನಗೋತ್ತಮಂ ಪ್ರಾಪ್ಯ ಮಹಾರಥಾನಾಮ್ ।
ಮನಃಪ್ರಸಾದಃ ಪರಮೋ ಬಭೂವ
ಯಥಾ ದಿವಂ ಪ್ರಾಪ್ಯ ಮರುದ್ಗಣಾನಾಮ್ ॥೩॥

ಪುಷ್ಪಭರಿತವಾದ ವೃಕ್ಷಗಳಿಂದ ಕೂಡಿದ ಆ ಶ್ರೇಷ್ಠ ಪರ್ವತವನ್ನು ಹೊಂದಿ ಮಹಾರಥರಾದ ಅವರಿಗೆ ಸ್ವರ್ಗವನ್ನು ಸೇರಿದ ಮರುದ್ಗಣಗಳಿಗೆ ಉಂಟಾದಂತ ಶ್ರೇಷ್ಠವಾದ ಮನಃಪ್ರಸನ್ನತೆಯು ಉಂಟಾಯಿತು.

ಮಯೂರಹಂಸಸ್ವನನಾದಿತಾನಿ
ಪುಷ್ಪೋಪಕೀರ್ಣಾನಿ ಮಹಾಚಲಸ್ಯ ।
ಶೃಂಗಾಣಿ ಸಾನೂನಿ ಚ ಪಶ್ಯಮಾನಾ
ಗಿರೇಃ ಪರಂ ಹರ್ಷಮವಾಪ್ಯ ತಸ್ಥುಃ ॥೪॥

ಮಯೂರ ಮತ್ತು ಹಂಸಗಳ ಧ್ವನಿಯಿಂದ ನಾದಿತವಾದ, ಪುಷ್ಪಗಳು ಚೆಲ್ಲಿರುವ ಆ ಮಹಾಪರ್ವತದ ಶಿಖರಗಳನ್ನೂ ಮತ್ತು ತಪ್ಪಲುಗಳನ್ನೂ ನೋಡುತ್ತಾ ಅವರು ಬಹಳ ಸಂತೋಷವನ್ನು ಹೊಂದಿ ವಾಸಮಾಡಿದರು.

ಸಾಕ್ಷಾತ್ಕುಬೇರೇಣ ಕೃತಾಶ್ಚ ತಸ್ಮಿನ್
ನಗೋತ್ತಮೇ ಸಂವೃತಕೂಲರೋಧಸಃ ।
ಕಾದಂಬಕಾರಂಡವಹಂಸಜುಷ್ಟಾಃ
ಪದ್ಮಾಕುಲಾಃ ಪುಷ್ಕರಿಣೀರಪಶ್ಯನ್ ॥೫॥

ಕುಬೇರನು ಸಾಕ್ಷಾತ್ತಾಗಿ ಆ ಶ್ರೇಷ್ಠಪರ್ವತದಲ್ಲಿ ನಿರ್ಮಿಸಿದ ಚೆನ್ನಾಗಿ ಆವೃತವಾದ ತೀರಗಳುಳ್ಳ ಕದಂಬ, ಕಾರಂಡವ, ಹಂಸ ಮೊದಲಾದ ಪಕ್ಷಿಗಳಿಂದಲೂ ಮತ್ತು ಪದ್ಮಗಳಿಂದಲೂ ಆವೃತವಾದ ಸರೋವರಗಳನ್ನು ಅವರು ನೋಡಿದರು.

ಕ್ರೀಡಾಪ್ರದೇಶಾಂಶ್ಚ ಸಮೃದ್ಧರೂಪಾನ್
ಸವೇದಿಕಾಂಸ್ತೇ ನ್ಯವಸನ್ ಸುವೇಶಾನ್ ।
ಮಣಿಪ್ರಕೀರ್ಣಾಂಶ್ಚ ಮನೋರಮಾಂಶ್ಚ
ಯಥಾ ಭವೇಯುರ್ಧನದಸ್ಯ ರಾಜ್ಞಃ ॥೬॥

ರಾಜನಾದ ಕುಬೇರನಿಗೆ ಯೋಗ್ಯವಾದಂತಹ ಸಮೃದ್ಧರೂಪವುಳ್ಳ ವೇದಿಕೆಗಳನ್ನು ಹೊಂದಿದ ಒಳ್ಳೆಯ ವಿಶ್ರಾಂತಿಗ್ರಹಗಳನ್ನು ಹೊಂದಿದ ಮಣಿಗಳಿಂದ ಅಲಂಕೃತವಾದ ಮನೋಹರವಾದ ಕ್ರೀಡಾಪ್ರದೇಶಗಳನ್ನು ನೋಡಿ ಅಲ್ಲಿ ವಾಸಿಸಿದರು.

ಅನೇಕವರ್ಣೈಶ್ಚ ಸುಗಂಧಿಭಿಶ್ಚ
ಮಹಾದ್ರುಮೈಃ ಸಂತತಮಭ್ರಜಾಲೈಃ ।
ತಪಃಪ್ರಧಾನಾಃ ಸತತಂ ಚರಂತಃ
ಶೃಂಗಂ ಗಿರೇಶ್ಚಿಂತಯಿತುಂ ನ ಶೇಕುಃ ॥೭॥

ಅನೇಕವರ್ಣಗಳಿಂದಲೂ ಸುಗಂಧಯುಕ್ತವಾದ ಮಹಾವೃಕ್ಷಗಳಿಂದಲೂ ಮತ್ತು ವಿಸ್ತಾರವಾದ ಮಹಾದ್ರುಮಗಳಿಂದಲೂ ಕೂಡಿದ, ಮೇಘಸಮೂಹಗಳಿಂದ ಸತತವಾಗಿ ಆವೃತವಾದಂತಹ, ಶೃಂಗಗಳಲ್ಲಿ ತಪಃಪ್ರಧಾನರಾದ ಅವರು ಸಂಚರಿಸುತ್ತಾ ಆ ಗಿರಿಯ ಉಳಿದ ಶೃಂಗಗಳನ್ನು ಅವರು ಚಿಂತಿಸಲು ಸಾಧ್ಯವಾಗಲಿಲ್ಲ.

ಸ್ವತೇಜಸಾ ತಸ್ಯ ನಗೋತ್ತಮಸ್ಯ
ಮಹೌಷಧೀನಾಂ ಚ ತಥಾ ಪ್ರಭಾವಾತ್ ।
ವಿಭಕ್ತಭಾವೋ ನ ಬಭೂವ ಕಶ್ಚಿದ್
ನಿಶಾಮುಖಂ ಪ್ರಾಪ್ಯ ನರರ್ಷಭಾಣಾಮ್ ॥೮॥

ತಮ್ಮ ಸತ್ವದಿಂದಲೂ ಮತ್ತು ಆ ಶ್ರೇಷ್ಠಪರ್ವತಗಳ ಮಹೌಷಧಿಗಳ ಪ್ರಭಾವದಿಂದಲೂ ಆ ನರರ್ಷಭರು ನಿಶಾಮುಖದಲ್ಲಿ ಸ್ವಸ್ಥಮನಸ್ಸಿನಿಂದ ಇರುತ್ತಿದ್ದರು.

ಯಮಾಸ್ಥಿತಃ ಸ್ಥಾವರಜಂಗಮಾನಿ
ವಿಭಾವಸುಭಾವಯತೇಽಮಿತೌಜಾಃ ।
ತಸ್ಯೋದಯಂ ಚಾಸ್ತಮನಂ ಚ
ವೀರಾಸ್ತತ್ರ ಸ್ಥಿತಾಸ್ತೇ ದದೃಶುರ್ನೃಸಿಂಹಾಃ ॥೯॥

ಯಾವ ಪರ್ವತವನ್ನು ಆಶ್ರಯಿಸಿ ಅಮಿತಪ್ರಭಾವಶಾಲಿಯಾದ ಸೂರ್ಯನು ಸ್ಥಾವರ ಜಂಗಮ ಪ್ರಪಂಚವನ್ನು ಅಭಿವೃದ್ಧಿಗೊಳಿಸುತ್ತಾನೆಯೋ ಅಂತಹ ಸೂರ್ಯನ ಉದಯಾಸ್ತಗಳನ್ನು ವೀರರಾದ ನರಸಿಂಹರಾದ ಅವರು ಅಲ್ಲಿನಿಂತು ನೋಡಿದರು.

ರವೇಸ್ತಮಿಸ್ಯಾಗಮನಿರ್ಗಮಾಂಸ್ತೇ
ತಥೋದಯಂ ಚಾಸ್ತಮನಂ ಚ ವೀರಾಃ ।
ಸಮಾವೃತಾಃ ಪ್ರೇಕ್ಷ್ಯ ತಮೋನುದಸ್ಯ
ಗಭಸ್ತಿಜಾಲೈಃ ಪ್ರದಿಶೋ ದಿಶಶ್ಚ ॥೧೦॥

ಸ್ವಾಧ್ಯಾಯವಂತಃ ಸತತಕ್ರಿಯಾಶ್ಚ ಧರ್ಮಪ್ರಧಾನಾಶ್ಚ ಶುಚಿವ್ರತಾಶ್ಚ ।
ಸತ್ಯೇ ಸ್ಥಿತಾಸ್ತಸ್ಯ ಮಹಾರಥಸ್ಯ ಸತ್ಯವ್ರತಸ್ಯಾಗಮನಪ್ರತೀಕ್ಷಾಃ ॥೧೧॥

ಸೂರ್ಯನ ಕತ್ತಲಿನೊಳಗೆ ಪ್ರವೇಶವನ್ನೂ ಮತ್ತು ಕತ್ತಲಿನಿಂದ ನಿರ್ಗಮವನ್ನು ಅವನ ಉದಯಾಸ್ತಗಳನ್ನೂ ಕತ್ತಲನ್ನು ಪರಿಹರಿಸುವ ಅವನ ಕಿರಣ ಸಮೂಹಗಳಿಂದ ದಿಕ್ಕುವಿದಿಕ್ಕುಗಳನ್ನೂ ನೋಡಿ ಸ್ವಾಧ್ಯಾಯವನ್ನು ಮಾಡುತ್ತಾ ಸತತಕ್ರಿಯೆಗಳನ್ನು ಮಾಡುವವರಾಗಿ ಧರ್ಮಪ್ರಧಾನರಾಗಿ ಶುಚಿವ್ರತವನ್ನು ಆಚರಿಸುವವರಾಗಿ ಸತ್ಯದಲ್ಲಿ ನಿಷ್ಠರಾಗಿದ್ದ ಅವರು ಮಹಾರಥನಾದ ಸತ್ಯವ್ರತನಾದ ಅರ್ಜುನನ ಆಗಮನದ ನಿರೀಕ್ಷೆಯಲ್ಲಿದ್ದರು.

ಇಹೈವ ಹರ್ಷೋಽಸ್ತು ಸಮಾಗತಾನಾಂ
ಕ್ಷಿಪ್ರಂ ಕೃತಾಸ್ತ್ರೇಣ ಧನಂಜಯೇನ
ಇತಿ ಬ್ರುವಂತಃ ಪರಮಾಶಿಷಸ್ತೇ
ಪಾರ್ಥಾಸ್ತಪೋಯೋಗಪರಾ ಬಭೂವುಃ ॥೧೨॥

ಇಲ್ಲಿಯೇ ಅಸ್ತ್ರವನ್ನು ಸಂಪಾದಿಸಿದ ಅರ್ಜುನನಿಂದ ಬೇಗ ಸಮಾಗಮವನ್ನು ಹೊಂದಿ ಇಲ್ಲಿಗೆ ಬಂದ ನಮಗೆಲ್ಲರಿಗೂ ಸಂತೋಷವುಂಟಾಗಲಿ ಎಂದು ಆಶೀರ್ವಾದ ವಚನಗಳನ್ನು ಹೇಳುತ್ತಾ ಆ ಪಾಂಡವರು ತಪೋಯೋಗಪರರಾದರು.

ದೃಷ್ಟ್ವಾ ವಿಚಿತ್ರಾಣಿ ಗಿರೌ ವನಾನಿ
ಕಿರೀಟಿನಂ ಚಿಂತಯತಾಮಭೀಕ್ಷ್ಣಮ್ ।
ಬಭೂವ ರಾತ್ರಿರ್ದಿವಸಶ್ಚ ತೇಷಾಂ
ಸಂವತ್ಸರೇಣೈವ ಸಮಾನರೂಪಃ ॥೧೩॥

ಆ ಪರ್ವತದಲ್ಲಿ ವಿಚಿತ್ರವಾದ ವನಗಳನ್ನು ನೋಡಿ ಸತತವಾಗಿ ಅರ್ಜುನನನ್ನು ಚಿಂತಿಸುವ ಅವರಿಗೆ ಹಗಲುರಾತ್ರಿಗಳು ಒಂದು ಸಂವತ್ಸರದಷ್ಟು ದೀರ್ಘರೂಪವನ್ನು ತಾಳಿದವು.

ಯದೈವ ಧೌಮ್ಯಾನುಮತೇ ಮಹಾತ್ಮಾ
ಕೃತ್ವಾ ಜಟಾಂ ಪ್ರವ್ರಜಿತಃ ಸ ಜಿಷ್ಣುಃ ।
ತದೈವ ತೇಷಾಂ ನ ಬಭೂವ ಹರ್ಷಃ
ಕುತೋ ರತಿಸ್ತದ್ಗತಮಾನಸಾನಾಮ್ ॥೧೪॥

ಯಾವಾಗ ಧೌಮ್ಯರ ಅನುಮತಿಯನ್ನು ಪಡೆದು ಜಟೆಗಳನ್ನು ಹಾಕಿಕೊಂಡು ಮಹಾತ್ಮನಾದ ಅರ್ಜುನನು ತಮ್ಮಿಂದ ಹೊರಟನೋ ಆಗಲೇ ಅವರಿಗೆ ಸಂತೋಷವಾಗಲಿಲ್ಲ. ಇನ್ನು ವಿಷಯಸುಖದಿಂದ ಉಂಟಾದ ಸಂತೋಷವು ಅರ್ಜುನನಲ್ಲಿನೆಟ್ಟ ಮನಸುಳ್ಳ ಅವರಿಗೆ ಎಲ್ಲಿಂದ ಉಂಟಾಗಬೇಕು?

ಭ್ರಾತುರ್ನಿಯೋಗಾತ್ತು ಯುಧಿಷ್ಠಿರಸ್ಯ
ವನಾದಸೌ ವಾರಣಮತ್ತಗಾಮೀ ।
ಯತ್ ಕಾಮ್ಯಕಾತ್ ಪ್ರವ್ರಜಿತಃ ಸ
ಜಿಷ್ಣುಸ್ತದೈವ ತೇ ಶೋಕಹತಾ ಬಭೂವುಃ ॥೧೫॥

ಅಣ್ಣನಾದ ಯುಧಿಷ್ಠಿರನ ಅಪ್ಪಣೆಯಂತೆ ಮತ್ತಗಜಗಾಮಿಯಾದ ಆ ಅರ್ಜುನನು ಯಾವಾಗ ಕಾಮ್ಯಕವನದಿಂದ ಹೊರಟನೋ ಆಗಲೇ ಅವರೆಲ್ಲರೂ ಶೋಕಪರವಶರಾದರು.

ತಥೈವ ತಂ ಚಿಂತಯತಾಂ ಸಿತಾಶ್ವಂ
ಅಸ್ತ್ರಾರ್ಥಿನಂ ವಾಸವಮಭ್ಯುಪೇತಮ್ ।
ಮಾಸೋಽಥ ಕೃಚ್ಛ್ರೇಣ ತದಾ ವ್ಯತೀತಸ್ತಸ್ಮಿನ್
ನಗೇ ಭಾರತ ಭಾರತಾನಾಮ್ ॥೧೬॥

ಎಲೈ ಭಾರತನೇ, ಹಾಗೇ ಅಸ್ತ್ರಾರ್ಥವಾಗಿ ಇಂದ್ರನ ಬಳಿಗೆ ಹೋದ ಶ್ವೇತವಾಹನನಾದ ಅರ್ಜುನನನ್ನು ಸತತವಾಗಿ ಚಿಂತಿಸುವ ಆ ಪಾಂಡವರಿಗೆ ಆ ಪರ್ವತದಲ್ಲಿ ಒಂದು ತಿಂಗಳು ಬಹಳ ಕಷ್ಟದಿಂದ ಕಳೆಯಿತು.

ಉಷಿತ್ವಾ ಪಂಚ ವರ್ಷಾಣಿ ಸಹಸ್ರಾಕ್ಷನಿವೇಶನೇ ।
ಅವಾಪ್ಯ ದಿವ್ಯಾನ್ಯಸ್ತ್ರಾಣಿ ಸರ್ವಾಣಿ ವಿಬುಧೇಶ್ವರಾತ್ ।
ಆಗ್ನೇಯಂ ವಾರುಣಂ ಸೌಮ್ಯಂ ವಾಯವ್ಯಮಥ ವೈಷ್ಣವಮ್ ।
ಐಂದ್ರಂ ಪಾಶುಪತಂ ಬ್ರಾಹ್ಮಂ ಪಾರಮೇಷ್ಠ್ಯಂ ಪ್ರಜಾಪತೇಃ ॥೧೬.೧॥

ಯಮಸ್ಯ ಧಾತುಃ ಸವಿತುಸ್ತ್ವಷ್ಟುರ್ವೈಶ್ರವಣಸ್ಯ ಚ ।
ತಾನಿ ಪ್ರಾಪ್ಯ ಸಹಸ್ರಾಕ್ಷಾದಭಿವಾದ್ಯ ಶತಕ್ರತುಮ್ ॥೧೬.೨॥

ಅನುಜ್ಞಾತಸ್ತದಾ ತೇನ ಕೃತ್ವಾ ಚಾಪಿ ಪ್ರದಕ್ಷಿಣಮ್ ।
ಆಗಚ್ಛದರ್ಜುನಃ ಪ್ರೀತಃ ಪ್ರಹೃಷ್ಟೋ ಗಂಧಮಾದನಮ್ ॥೧೬.೩॥

ಇಂದ್ರನ ಮನೆಯಲ್ಲಿ ಐದುವರ್ಷಗಳ ಕಾಲ ವಾಸಮಾಡಿ ವಿಬುಧೇಶ್ವರನಾದ ಅವನಿಂದ ಎಲ್ಲಾ ದಿವ್ಯಾಸ್ತ್ರಗಳನ್ನೂ ಆಗ್ನೇಯ, ವಾರುಣ, ಸೌಮ್ಯ , ವಾಯವ್ಯ , ವೈಷ್ಣವ, ಐಂದ್ರ , ಪಾಶುಪತ, ಬ್ರಾಹ್ಮ , ಯಾಮ್ಯ , ಕೌಬೇರ, ಸಾವಿತ್ರ , ತ್ವಾಷ್ಟ್ರ ಮೊದಲಾದ ಅಸ್ತ್ರಗಳನ್ನು ಇಂದ್ರನಿಂದ ಪಡೆದು ಶತಕ್ರತುವಾದ ಇಂದ್ರನಿಗೆ ನಮಸ್ಕಾರವನ್ನು ಮಾಡಿ ಅವನ ಅನುಮತಿಯನ್ನು ಪಡೆದು ಅವನಿಗೆ ಪ್ರದಕ್ಷಿಣೆಯನ್ನು ಮಾಡಿ ಅರ್ಜುನನು ಸಂತೋಷದಿಂದ ಗಂಧಮಾದನಪರ್ವತಕ್ಕೆ ಹೊರಟನು.

ತತಃ ಕದಾಚಿದ್ಧರಿಸಂಪ್ರಯುಕ್ತಂ
ಮಹೇಂದ್ರವಾಹಂ ಸಹಸೋಪಯಾತಮ್ ।
ವಿದ್ಯುತ್ಪ್ರಭಂ ಪ್ರೇಕ್ಷ್ಯ ಮಹಾರಥಾನಾಂ
ಹರ್ಷೋऽರ್ಜುನಂ ಚಿಂತಯತಾಂ ಬಭೂವ ॥೧೭॥

ಅನಂತರ ಸ್ವಲ್ಪಕಾಲದ ಮೇಲೆ ಅಶ್ವಗಳಿಂದ ಕೂಡಿದ ವಿದ್ಯುತ್ತಿನ ಕಾಂತಿಯನ್ನು ಹೊಂದಿದ ಇಂದ್ರವಾಹನವು ಇದ್ದಕ್ಕಿದ್ದಂತೆಯೇ ಬಂದುದನ್ನು ನೋಡಿ ಯಾವಾಗಲೂ ಅರ್ಜುನನನ್ನೇ ಚಿಂತಿಸುವ ಆ ಮಹಾರಥರಿಗೆ ಹರ್ಷವುಂಟಾಯಿತು.

ಸ ದೀಪ್ಯಮಾನಃ ಸಹಸಾऽಂತರಿಕ್ಷಂ
ಪ್ರಕಾಶಯನ್ ಮಾತಲಿಸಂಗೃಹೀತಃ ।
ಬಭೌ ಮಹೋಲ್ಕೇವ ಘನಾಂತರಸ್ಥಾ
ಶಿಖೇವ ಚಾಗ್ನೇರ್ಜ್ವಲಿತಾ ವಿಧೂಮಾ ॥೧೮॥

ಮಾತಲಿಯಿಂದ ಸಂಗೃಹೀತವಾದ ಆ ರಥವು ಮೋಡಗಳ ಮಧ್ಯದಲ್ಲಿರುವ ದೊಡ್ಡ ಉಲ್ಕೆಯಂತೆ, ಧೂಮವಿಲ್ಲದ ಅಗ್ನಿಯ ಉರಿಯುತ್ತಿರುವ ಶಿಖೆಯಂತೆ, ಒಮ್ಮೆಲೇ, ಅಂತರಿಕ್ಷವನ್ನು ಪ್ರಕಾಶಿಸುತ್ತಾ ಬೆಳಗಿತು.

ತಮಾಸ್ಥಿತಃ ಸಂದದೃಶೇ ಕಿರೀಟೀ ಸ್ರಗ್ವೀ
ನವಾನ್ಯಾಭರಣಾನಿ ಬಿಭ್ರತ್ ।

ಧನಂಜಯೋ ವಜ್ರಧರಪ್ರಭಾವಃ ಶ್ರಿಯಾ
ಜ್ವಲನ್ ಪರ್ವತಮಾಜಗಾಮ ॥೧೯॥

ಅಂತಹ ರಥವನ್ನು ಆಶ್ರಯಿಸಿದ, ಕಿರೀಟವನ್ನೂ ಮಾಲೆಯನ್ನೂ ಹೊಸ ಆಭರಣಗಳನ್ನೂ ಧರಿಸಿದ, ಇಂದ್ರನಿಗೆ ಸಮಾನವಾದ ಪ್ರಭೆಯುಳ್ಳ, ಅರ್ಜುನನು ಅವರಿಂದ ನೋಡಲ್ಪಟ್ಟನು. ಕಾಂತಿಯಿಂದ ಬೆಳಗುತ್ತಾ ಅರ್ಜುನನು ಆ ಪರ್ವತಕ್ಕೆ ಬಂದನು.

ಸ ಶೈಲಮಾಸಾದ್ಯ ಕಿರೀಟಮಾಲೀ
ಮಹೇಂದ್ರವಾಹಾದವರುಹ್ಯ ತಸ್ಮಾತ್ ।
ಧೌಮ್ಯಸ್ಯ ಪಾದಾವಭಿವಾದ್ಯ
ಧೀಮಾನಜಾತಶತ್ರೋಸ್ತದನಂತರಂ ಚ ॥೨೦॥

ವೃಕೋದರಸ್ಯಾಪಿ ಚ ವಂದ್ಯ ಪಾದೌ
ಮಾದ್ರೀಸುತಾಭ್ಯಾಮಭಿವಾದಿತಶ್ಚ ।
ಸಮೇತ್ಯ ಕೃಷ್ಣಾಂ ಪರಿಸಾಂತ್ವ್ಯ ಚೈನಾಂ
ಪ್ರಹ್ವೋಽಭವದ್ ಭ್ರಾತುರುಪಹ್ವರೇ ಸಃ ॥೨೧॥

ಕಿರೀಟ ಮತ್ತು ಮಾಲೆಗಳನ್ನು ಧರಿಸಿದ ಅರ್ಜುನನು ಗಂಧಮಾದನ ಪರ್ವತವನ್ನು ತಲುಪಿ, ಆ ಇಂದ್ರರಥದಿಂದ ಇಳಿದು ಮೇಧಾವಿಯಾದ ಅವನು ಧೌಮ್ಯರ ಪಾದಗಳಿಗೆ ನಮಸ್ಕರಿಸಿ ಅನಂತರ ಧರ್ಮರಾಜನ ಮತ್ತು ಭೀಮಸೇನನ ಪಾದಗಳಿಗೆ ನಮಸ್ಕರಿಸಿ ಮಾದ್ರೀಸುತರಾದ ನಕುಲಸಹದೇವರಿಂದ ನಮಸ್ಕರಿಸಲ್ಪಟ್ಟವನಾಗಿ ದ್ರೌಪದಿಯ ಜೊತೆಗೂಡಿ ಅವಳನ್ನು ಸಮಾಧಾನಪಡಿಸಿ ಅಣ್ಣನ ಸಮೀಪದಲ್ಲಿ ವಿನಯದಿಂದ ನಿಂತನು.

ಬಭೂವ ತೇಷಾಂ ಪರಮಃ ಪ್ರಹರ್ಷ–
ಸ್ತೇನಾಪ್ರಮೇಯೇಣ ಸಮಾಗತಾನಾಮ್ ।
ಸ ಚಾಪಿ ತಾನ್ ಪ್ರೇಕ್ಷ್ಯ ಕಿರೀಟಮಾಲೀ
ನನಂದ ರಾಜಾನಮಭಿಪ್ರಶಂಸನ್ ॥೨೨॥

ಆ ಅಪ್ರಮೇಯನಾದ ಅರ್ಜುನನ ಆಗಮನದಿಂದ ಆ ಪಾಂಡವರಿಗೆ ಪರಮ ಸಂತೋಷವುಂಟಾಯಿತು. ಆ ಕಿರೀಟಮಾಲಿಯಾದ ಅರ್ಜುನನಾದರೂ ಅವರನ್ನು ನೋಡಿ ರಾಜನಾದ ಧರ್ಮರಾಜನನ್ನು ಹೊಗಳುತ್ತಾ ಸಂತೋಷಪಟ್ಟನು.

ಯಮಾಸ್ಥಿತಃ ಸಪ್ತ ಜಘಾನ ಪೂಗಾನ್
ದಿತೇಃ ಸುತಾನಾಂ ನಮುಚೇರ್ನಿಹಂತಾ ।
ತಮಿಂದ್ರವಾಹಂ ಸಮುಪೇತ್ಯ ಪಾರ್ಥಾಃ
ಪ್ರದಕ್ಷಿಣಂ ಚಕ್ರುರದೀನಸತ್ತ್ವಾಃ ॥೨೩॥

ಯಾವ ರಥವನ್ನು ಏರಿ ನಮುಚಿಸೂದನನಾದ ಇಂದ್ರನು ದಿತಿಪುತ್ರರ ಏಳು ಗಣಗಳನ್ನು ಸಂಹರಿಸಿದನೋ ಅಂತಹ ಇಂದ್ರರಥವನ್ನು ಸಮೀಪಿಸಿ ಪಾಂಡವರು ಉಬ್ಬಿದ ಮನಸ್ಸುಳ್ಳವರಾಗಿ ಅದಕ್ಕೆ ಪ್ರದಕ್ಷಿಣೆಯನ್ನು ಮಾಡಿದರು.

ತೇ ಮಾತಲೇಶ್ಚಕ್ರುರತೀವ ಹೃಷ್ಟಾಃ
ಸತ್ಕಾರಮಗ್ರ್ಯಂ ಸುರರಾಜತುಲ್ಯಮ್ ।
ಸರ್ವಾನ್ ಯಥಾವಚ್ಚ ದಿವೌಕಸಸ್ತೇ
ಪಪ್ರಚ್ಛುರೇನಂ ಕುರುರಾಜಪುತ್ರಾಃ ॥೨೪॥

ಅತೀವ ಸಂತುಷ್ಟರಾದ ಅವರು ದೇವರಾಜನಾದ ಇಂದ್ರನಿಗೆ ಯೋಗ್ಯವಾದಂತಹ ಶ್ರೇಷ್ಠವಾದ ಸತ್ಕಾರವನ್ನು ಮಾತಲಿಗೆ ಮಾಡಿದರು ಮತ್ತು ಕ್ರಮದಿಂದ ಆ ಕುರುರಾಜಪುತ್ರರು ಮಾತಲಿಯನ್ನು ಕುರಿತು ಎಲ್ಲಾ ದೇವತೆಗಳ ಕುಶಲವನ್ನೂ ಕೇಳಿದರು.

ತಾನಪೃಸೌ ಮಾತಲಿರಭ್ಯನಂದನ್
ಪಿತೇವ ಪುತ್ರಾನನುಶಿಷ್ಯ ಪಾರ್ಥಾನ್ ।
ಯಯೌ ರಥೇನಾಪ್ರತಿಮಪ್ರಭೇಣ
ಪುನಃ ಸಕಾಶಂ ತ್ರಿದಿವೇಶ್ವರಸ್ಯ ॥೨೫॥

ಆ ಮಾತಲಿಯಾದರೂ ಪಾಂಡವರನ್ನು ನೋಡಿ ಸಂತೋಷಪಟ್ಟು ತಂದೆಯು ಮಕ್ಕಳಿಗೆ ಮಾಡುವಂತೆ ಅವರಿಗೆ ಅನುಶಾಸನವನ್ನು ಮಾಡಿ ಅಪ್ರತಿಮ ಪ್ರಭೆಯುಳ್ಳ ಆ ರಥವನ್ನು ತೆಗೆದುಕೊಂಡು ಪುನಃ ಸ್ವರ್ಗಾಧಿಪತಿಯಾದ ಇಂದ್ರನ ಸಮೀಪಕ್ಕೆ ಹೋದನು.

ಗತೇ ತು ತಸ್ಮಿನ್ನರದೇವವರ್ಯಃ
ಶಕ್ರಾತ್ಮಜಃ ಶಕ್ರರಿಪುಪ್ರಮಾಥೀ ।
ಸಾಕ್ಷಾತ್‌ಸಹಸ್ರಾಕ್ಷ ಇವ ಪ್ರತೀತಃ
ಶ್ರೀಮಾನ್ ಸ್ವದೇಹಾದವಮುಚ್ಯ ಜಿಷ್ಣುಃ ॥೨೬॥

ಶಕ್ರೇಣ ದತ್ತಾನಿ ದದೌ ಮಹಾತ್ಮಾ
ಮಹಾಧನಾನ್ಯುತ್ತಮರೂಪವಂತಿ ।
ದಿವಾಕರಾಭಾನಿ ವಿಭೂಷಣಾನಿ ಪ್ರೀತಃ
ಪ್ರಿಯಾಯೈ ಶ್ರುತಸೋಮಮಾತ್ರೇ ॥೨೭॥

ಮೂತಲಿಯು ಹೊರಟುಹೋಗುತ್ತಿರಲು ಇಂದ್ರಪುತ್ರನಾದ, ಇಂದ್ರಶತ್ರುಘಾತಿಯಾದ, ಸಾಕ್ಷಾತ್ ಇಂದ್ರನಂತೆ ತೋರುತ್ತಿದ್ದ ಕಾಂತಿಯುಕ್ತನಾದ ಮಹಾತ್ಮನಾದ ಅರ್ಜುನನು ಇಂದ್ರನಿಂದ ಕೊಡಲ್ಪಟ್ಟ ಮಹಾಬೆಲೆಬಾಳುವ ಉತ್ತಮ ರೂಪವನ್ನು ಹೊಂದಿದ ಸೂರ್ಯನಂತೆ ಹೊಳೆಯುವ ಆಭರಣಗಳನ್ನು ತನ್ನ ದೇಹದಿಂದ ತೆಗೆದು ಪ್ರಿಯೆಯಾದ ಶ್ರುತಸೋಮನ ತಾಯಿಯಾದ ದ್ರೌಪದಿಗೆ ಸಂತೋಷದಿಂದ ಕೊಟ್ಟನು.

ತತಃ ಸ ತೇಷಾಂ ಕುರುಪಂಗವಾನಾಂ
ತೇಷಾಂ ಚ ಸೂರ್ಯಾಗ್ನಿಸಮಪ್ರಭಾಣಾಮ್ ।
ವಿಪ್ರರ್ಷಭಾಣಾಮುಪವಿಶ್ಯ ಮಧ್ಯೇ
ಸರ್ವಂ ಯಥಾವತ್ ಕಥಯಾಂಬಭೂವ ॥೨೮॥

ಅನಂತರ ಅವನು ಸೂರ್ಯಾಗ್ನಿ ಸಮಾನವಾದ ಪ್ರಭೆಯುಳ್ಳ ಬ್ರಾಹ್ಮಣ ಶ್ರೇಷ್ಠರ ಮಧ್ಯದಲ್ಲಿ ಕುಳಿತು ಎಲ್ಲಾ ಕಥೆಯನ್ನೂ ವಿಸ್ತಾರವಾಗಿ ಹೇಳಿದನು.

ಅರ್ಜುನಃ

ಏವಂ ಮಯಾऽಸ್ತ್ರಾಣ್ಯುಪಶಿಕ್ಷಿತಾನಿ
ಶಕ್ರಾಚ್ಚ ವಾತಾಚ್ಚ ಶಿವಾಚ್ಚ ಸಾಕ್ಷಾತ್ ।
ತಥೈವ ಶೀಲೇನ ಸಮಾಧಿನಾऽಥ ಪ್ರೀತಾಃ
ಸುರಾ ಮೇ ಸಹಿತಾಃ ಸಹೇಂದ್ರಾಃ ॥೨೯॥

ಅರ್ಜುನ– ನಾನು ಈ ರೀತಿಯಾಗಿ ಇಂದ್ರನಿಂದಲೂ, ವಾಯುವಿನಿಂದಲೂ ಮತ್ತು ಸಾಕ್ಷಾತ್ ಶಿವನಿಂದಲೂ ಅಸ್ತ್ರಗಳನ್ನು ಸಂಪಾದಿಸಿದೆ. ಅಸ್ತ್ರಗಳ ಉಪದೇಶವನ್ನು ಪಡೆದೆ. ನನ್ನ ಶೀಲದಿಂದಲೂ ಮತ್ತು ಸಮಾಧಿಯಿಂದಲೂ ಪ್ರಸನ್ನರಾದ ಇಂದ್ರ ಮೊದಲಾದ ದೇವತೆಗಳು ಎಲ್ಲರೂ ಸೇರಿ ನನಗೆ ಅಸ್ತ್ರಗಳನ್ನು ಕೊಟ್ಟರು.

ವೈಶಂಪಾಯನಃ

ಸಂಕ್ಷೇಪತೋ ವೈ ಸ ವಿಶುದ್ಧಕರ್ಮಾ
ತೇಭ್ಯಃ ಸಮಾಖ್ಯಾಯ ದಿವಿ ಪ್ರವಾಸಮ್ ।
ಮಾದ್ರೀಸುತಾಭ್ಯಾಂ ಸಹಿತಃ ಕಿರೀಟೀ
ಸುಷ್ವಾಪ ತಾಮಾವಸತಿಂ ಪ್ರತೀತಃ ॥೩೦॥

ವೈಶಂಪಾಯನ– ಆ ವಿಶುದ್ಧಕರ್ಮನಾದ ಅರ್ಜುನನು ಉಳಿದ ಹಗಲಿನ ಕಾಲದಲ್ಲಿ ತನ್ನ ಸ್ವರ್ಗಪ್ರವಾಸವನ್ನು ಸಂಕ್ಷೇಪವಾಗಿ ನಿರೂಪಿಸಿ ಮಾದ್ರೀ ಸುತರ ಜೊತೆಯಲ್ಲಿ ಮಲಗಿ ಆ ರಾತ್ರಿಯಲ್ಲಿ ಸಂತೋಷದಿಂದ ನಿದ್ರೆಮಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ಯಕ್ಷಯುದ್ಧಪರ್ವಣಿ ಸಪ್ತಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ತನೆಯ
ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ವಧಂ ವವ್ರೇ ಸ್ವಶತ್ರೂಣಾಮಿಂದ್ರಃ ಪಾರ್ಥಾತ್ ಸ್ವರೂಪತಃ ।
ನಿವಾತಕವಚಾಖ್ಯಾನಾಂ ಯೇಷಾಂ ಬ್ರಹ್ಮಾ ದದೌ ವರಮ್ ।
ಅವಧ್ಯತಾಂ ಸುರೈರ್ದೈತ್ಯೈರ್ಗಂಧರ್ವೈಃ ಪರಿರಾಕ್ಷಸೈಃ ।
ಪುನರಿಂದ್ರೇಣಾರ್ಥಿತೋऽದಾಜ್ಜಹೀಮಾನ್ ನರದೇಹವಾನ್ ॥

ದೇವೇಂದ್ರ ತನ್ನ ಅವತಾರನೇ ಆದ ಅರ್ಜುನನಿಂದ ನಿವಾತಕವಚರೆಂಬ ಹೆಸರಿನ ತನ್ನ ಶತ್ರುಗಳ ವಧೆಯನ್ನು ಗುರುದಕ್ಷಿಣೆಯಾಗಿ ಕೇಳಿದ. ಏಕೆಂದರೆ ನಿವಾತಕವಚರಿಗೆ

ಬ್ರಹ್ಮದೇವದಾನವ ಗಂಧರ್ವ ಯಕ್ಷರಾಕ್ಷಸರಿಂದ ಅವಧ್ಯತ್ವವರ ನೀಡಿದ್ದ. ಬ್ರಹ್ಮನೇ ಪುನಃ ಇಂದ್ರನಿಂದ ಪ್ರಾರ್ಥಿತನಾಗಿ ನೀನು ಇವರನ್ನು ಮನುಷ್ಯ ಶರೀರಿಯಾಗಿ ಸಂಹರಿಸು ಎಂದು ವರ ನೀಡಿದ್ದ.

ಇತಿ ತೇನಾರ್ಜುನಂ ಶಕ್ರಃ ಸ್ವಾತ್ಮಾನಂ ನರದೇಹಗಮ್ ।
ಜಗಾದ ತಾನ್ ಜಹೀತ್ಯೇವ ಕಿರೀಟಂ ಸ್ವಂ ನಿಬದ್ಧ ಚ ॥೩೦೭॥

ಆದರಿಂದ ಇಂದ್ರ ಮನುಷ್ಯ ದೇಹದಲ್ಲಿರುವ ತನ್ನ ಅವತಾರನೆ ಆದ ಅರ್ಜುನನಿಗೆ ತನ್ನ ಕಿರೀಟವನ್ನು ತೊಡಿಸಿ ನಿವಾತಕವಚರನ್ನು ಕೊಲು ಎಂದ.

★ ★ ★ ★

ನೂರ ಆರವತ್ತೊಂದನೆಯ ಅಧ್ಯಾಯ

ತಮ್ಮಂದಿರಿಂದೊಡಗೂಡಿದ ಯುಧಿಷ್ಠಿರನ ಬಳಿಗೆ ಇಂದ್ರನ ಆಗಮನ ಮತ್ತು ಜಯಾಶೀರ್ವಾದಗಳನ್ನು ಹೇಳಿ ಸ್ವರ್ಗಕ್ಕೆ ನಿರ್ಗಮನ.

ವೈಶಂಪಾಯನಃ

ಏತಸ್ಮಿನ್ನೇವ ಕಾಲೇ ತು ಸರ್ವವಾದಿತ್ರನಿಸ್ವನಃ ।
ಬಭೂವ ತುಮುಲಃ ಶಬ್ದಸ್ತ್ವಂತರಿಕ್ಷೇ ದಿವೌಕಸಾಮ್ ।
ರಥನೇಮಿಸ್ವನಶ್ಚೈವ ಘಂಟಾಶಬ್ದಶ್ಚ ಭಾರತ ॥೧॥

ವೈಶಂಪಾಯನ– ಆ ಸಮಯದಲ್ಲಿಯೇ ಅಂತರಿಕ್ಷದಲ್ಲಿ ಸರ್ವವಾದ್ಯಗಳ ಘೋಷವೂ ಮತ್ತು ದೇವತೆಗಳ ತುಮುಲವಾದ ಶಬ್ದವೂ ಉಂಟಾಯಿತು. ಎಲೈ ಭಾರತನೇ, ರಥದ ಚಕ್ರದ ಶಬ್ದವೂ ಮತ್ತು ಘಂಟಾಶಬ್ದವೂ ಉಂಟಾಯಿತು.

ಪೃಥಗ್ವ್ಯಾಲಮೃಗಾಣಾಂ ಚ ಪಕ್ಷಿಣಾಂಚೈವ ಸರ್ವಶಃ ।
ರವೋನ್ಮುಖಾಸ್ತೇ ದದೃಶುಃ ಪ್ರೀಯಮಾಣಾಃ ಕುರೂದ್ವಹಾಃ ॥೨॥

ಆ ವನದಲ್ಲಿದ್ದ ವನ್ಯಮೃಗಗಳ ಮತ್ತು ಎಲ್ಲಾ ಪಕ್ಷಿಗಳ ಶಬ್ದಗಳೂ ಎಲ್ಲಾ ಕಡೆ ಉಂಟಾದವು. ಆ ಕುರೂದ್ವಹರು ಸಂತೋಷದಿಂದ ಆ ಶಬ್ದವು ಬಂದ ಕಡೆಗೆ ಮುಖವನ್ನು ಎತ್ತಿನೋಡಿದರು.

ಮರುದ್ಭಿರನ್ವಿತಂ ಶಕ್ರಮಾಪತಂತಂ ವಿಹಾಯಸಾ ॥೩॥
ತೇ ಸಮಂತಾದನುಯಯುರ್ಗಂಧರ್ವಾಪ್ಸರಸಾಂ ಗಣಾಃ ।
ವಿಮಾನೈಃ ಸೂರ್ಯಸಂಕಾಶೈರ್ದೇವರಾಜಮರಿಂದಮಮ್ ॥೪॥

ಮರುದ್ಗಣಗಳಿಂದ ಹಿಂಬಾಲಿಸಲ್ಪಟ್ಟು ಆಕಾಶದಲ್ಲಿ ಬರುತ್ತಿದ್ದ ಅರಿಂದಮನಾದ ದೇವರಾಜನಾದ ಇಂದ್ರನನ್ನೂ, ಅವನ ಸುತ್ತಲೂ ಸೂರ್ಯಪ್ರಭೆಗಳುಳ್ಳ ವಿಮಾನಗಳಲ್ಲಿ ಅರಿಂದಮನಾದ ದೇವರಾಜನಾದ ಇಂದ್ರನನ್ನು ಬರುತ್ತಿರುವ ಗಂಧರ್ವಾಪ್ಸರೆಯರ ಗಣಗಳನ್ನೂ ಅವರು ನೋಡಿದರು.

ತತಃ ಸ ಹರಿಭಿರ್ಯುಕ್ತಂ ಜಾಂಬೂನದಪರಿಷ್ಕೃತಮ್ ।
ಮೇಘನಾದಿನಮಾರುಹ್ಯ ಶ್ರಿಯಾ ಪರಮಯಾ ಜ್ವಲನ್ ।
ಪಾರ್ಥಾನಭ್ಯಾಜಗಾಮಾಶು ದೇವರಾಜಃ ಪುರಂದರಃ ॥೫॥

ಅನಂತರ ಆ ದೇವರಾಜನಾದ ಇಂದ್ರನು ಅಶ್ವಗಳನ್ನು ಹೂಡಿದ್ದ ಸುವರ್ಣದಿಂದ ಅಲಂಕೃತವಾದ, ಮೇಘನಾದವುಳ್ಳ, ತನ್ನ ರಥದಿಂದ ಇಳಿದು ಪರಮಕಾಂತಿಯಿಂದ ಜ್ವಲಿಸುತ್ತಾ ಪಾಂಡವರ ಸಮೀಪಕ್ಕೆ ಬೇಗ ಬಂದನು.

ಆಗತ್ಯ ಚ ಸಹಸ್ರಾಕ್ಷೋ ರಥಾದವರುರೋಹ ವೈ ॥೬॥

ಸಹಸ್ರಾಕ್ಷನು ರಥದಿಂದ ಇಳಿದುಬಂದನು.

ತಂ ದೃಷ್ಟ್ವೈವ ಮಹಾತ್ಮಾನಂ ಧರ್ಮರಾಜೋ ಯುಧಿಷ್ಠಿರಃ ।
ಭ್ರಾತೃಭಿಃ ಸಹಿತಃ ಶ್ರೀಮಾನ್ ದೇವರಾಜಮುಪಾಗಮತ್ ॥೭॥

ಆ ಮಹಾತ್ಮನಾದ ಇಂದ್ರನನ್ನು ನೋಡಿದ ತಕ್ಷಣವೇ ಕಾಂತಿಯುಕ್ತನಾದ ಧರ್ಮರಾಜನಾದ ಯುಧಿಷ್ಠಿರನು ತಮ್ಮಂದಿರ ಜೊತೆಯಲ್ಲಿ ದೇವರಾಜನ ಸಮೀಪಕ್ಕೆ ಬಂದನು.

ಪೂಜಯಾಮಾಸ ಚೈವಾಥ ವಿಧಿವದ್ ಭೂರಿದಕ್ಷಿಣಃ ।
ಯಥಾರ್ಹಮಮಿತಾತ್ಮಾನಂ ವಿಧಿದೃಷ್ಟೇನ ಕರ್ಮಣಾ ॥೮॥

ಭೂರಿದಕ್ಷಿಣೆಯನ್ನು ಕೊಡುವ ಅವನು ಶಾಸ್ತ್ರವು ಹೇಳಿದ ಪ್ರಕಾರದಿಂದ ಅಮಿತಾತ್ಮನಾದ ಆ ಪುರಂದರನಿಗೆ ಉಚಿತವಾದ ರೀತಿಯಲ್ಲಿ ಪೂಜೆಯನ್ನು ಮಾಡಿದನು.

ಧನಂಜಯಶ್ಚ ತೇಜಸ್ವೀ ಪ್ರಣಿಪತ್ಯ ಪುರಂದರಮ್ ।
ಭ್ರಾತೃ(ಭೃತ್ಯ)ವತ್ ಪ್ರಣತಸ್ತಸ್ಥೌ ದೇವರಾಜಸಮೀಪತಃ ॥೯॥

ತೇಜಸ್ವಿಯಾದ ಅರ್ಜುನನೂ ಸಹ ಇಂದ್ರನಿಗೆ ನಮಸ್ಕರಿಸಿ ಆ ದೇವರಾಜನ ಸಮೀಪದಲ್ಲಿ ತಮ್ಮನಂತೆ (ಭೃತ್ಯನಂತೆ) ನಮಸ್ಕಾರವನ್ನು ಮಾಡಿ ನಿಂತನು.

ಆಪ್ರಾಯತಂ (ಆಪ್ಯಾಯತ) ಮಹಾತೇಜಾಃ ಕುಂತೀಪುತ್ರೋ ಯುಧಿಷ್ಠಿರಃ।
ಧನಂಜಯಮಭಿಪ್ರೇಕ್ಷ್ಯ ವಿನೀತಂ ಸ್ಥಿತಮಂತಿಕೇ ॥೧೦॥

ಜಟಿಲಂ ದೇವರಾಜಸ್ಯ ತಪೋಯುಕ್ತಮಕಲ್ಮಷಮ್ ।
ಹರ್ಷೇಣ ಮಹತಾऽऽವಿಷ್ಟಃ ಫಲ್ಗುನಸ್ಯಾಥ ದರ್ಶನಾತ್ ॥೧೧॥

ಬಭೂವ ಪರಮಪ್ರೀತೋ ದೇವರಾಜಂ ಚ ಪೂಜಯನ್ ।

ಮಹಾತೇಜಸ್ವಿಯಾದ ಕುಂತೀಪುತ್ರನಾದ ಯುಧಿಷ್ಠಿರನು ವಿನಯದಿಂದ ಸಮೀಪದಲ್ಲಿ ನಿಂತಿರುವ ಜಟಿಲನಾದ, ತಪೋಯುಕ್ತನಾದ, ಕಲ್ಮಷರಹಿತನಾದ ಅರ್ಜುನನು ದೇವರಾಜನ ಸಮೀಪದಲ್ಲಿ ನಿಂತಿರುವುದನ್ನು ನೋಡಿ ಫಲ್ಗುನನ ದರ್ಶನದಿಂದ ಬಹಳ ಸಂತೋಷವುಳ್ಳವನಾಗಿ ದೇವರಾಜನನ್ನು ಪೂಜಿಸುತ್ತಾ ಬಹಳ ಸಂತೋಷಪಟ್ಟನು.

ತಂ ತಥಾऽದೀನಮನಸಂ ರಾಜಾನಂ ಹರ್ಷಸಂಪ್ಲುತಮ್ ।
ಉವಾಚ ವಚನಂ ಧೀಮಾನ್ ದೇವರಾಜಃ ಪುರಂದರಃ ॥೧೨॥

ಹಾಗೆ ಹರ್ಷದಿಂದ ತುಂಬಿ ಉನ್ನತವಾದ ಮನಸ್ಸನ್ನು ಹೊಂದಿದ್ದ ಆ ರಾಜನನ್ನು ಕುರಿತು ಮೇಧಾವಿಯಾದ ದೇವರಾಜನಾದ ಪುರಂದರನು ಹೀಗೆ ಮಾತನಾಡಿದನು.

ತ್ವಮಿಮಾಂ ಪೃಥಿವೀಂ ರಾಜನ್ ಪ್ರಶಾಸಿಷ್ಯಸಿ ಪಾಂಡವ ।
ಸ್ವಸ್ತಿ ಪ್ರಾಪ್ನುಹಿ ಕೌಂತೇಯ ಕಾಮ್ಯಕಂ ಪುನರಾಶ್ರಮಮ್ ॥೧೩॥

ಎಲೈ ಪಾಂಡವನೇ, ರಾಜನೇ, ನೀನು ಈ ಭೂಮಿಯನ್ನು ಆಳುವಿ. ನಿನಗೆ ಮಂಗಳವಾಗಲಿ. ಕೌಂತೇಯನೇ, ಪುನಃ ಕಾಮ್ಯಕವನಕ್ಕೆ ಹಿಂದಿರುಗು.

ಅಸ್ತ್ರಾಣಿ ಲಬ್ಧಾನಿ ಚ ಪಾಂಡವೇನ ಸರ್ವಾಣಿ ಮತ್ತಃ ಪ್ರಯತೇನ ರಾಜನ್ ।
ಕೃತಪ್ರಿಯಶ್ಚಾಸ್ಮಿ ಧನಂಜಯೇನ ಜೇತುಂ ನ ಶಕ್ಯಸ್ತ್ರಿಭಿರೇಷ ಲೋಕೈಃ ॥

ಎಲೈ ರಾಜನೇ, ನಿಯಮಬದ್ಧನಾದ ಅರ್ಜುನನು ನನ್ನಿಂದ ಎಲ್ಲಾ ಅಸ್ತ್ರಗಳನ್ನೂ ಸ್ವೀಕರಿಸಿದ್ದಾನೆ ಮತ್ತು ಧನಂಜಯನು ನನಗೆ ಸಂತೋಷವನ್ನೂ ಉಂಟುಮಾಡಿದ್ದಾನೆ. ಮೂರುಲೋಕಗಳೂ ಅವನನ್ನು ಗೆಲ್ಲಲಾರವು.

ವೈಶಂಪಾಯನಃ

ಏವಮುಕ್ತ್ವಾ ಸಹಸ್ರಾಕ್ಷಃ ಕುಂತೀಪುತ್ರಂ ಯುಧಿಷ್ಠಿರಮ್ ।
ಜಗಾಮ ತ್ರಿದಿವಂ ಹೃಷ್ಟಃ ಸ್ತೂಯಮಾನೋ ಮಹರ್ಷಿಭಿಃ ॥೧೫೫॥

ವೈಶಂಪಾಯನ– ಸಹಸ್ರಾಕ್ಷನಾದ ಇಂದ್ರನು ಕುಂತೀಪುತ್ರನಾದ ಯುಧಿಷ್ಠಿರನಿಗೆ ಹೀಗೆ ಹೇಳಿ ಮಹರ್ಷಿಗಳಿಂದ ಸ್ತೋತ್ರಮಾಡಲ್ಪಟ್ಟವನಾಗಿ ಸಂತೋಷದಿಂದ ಸ್ವರ್ಗಕ್ಕೆ ಹಿಂದಿರುಗಿದನು.

ಧನೇಶ್ವರಗೃಹಸ್ಥಾನಾಂ ಪಾಂಡವಾನಾಂ ಸಮಾಗಮಮ್ ।
ಶಕ್ರೇಣ ಯ ಇದಂ ವಿದ್ವಾನಧೀಯೀತ ಸಮಾಹಿತಃ ॥೧೬॥

ಸಂವತ್ಸರಂ ಬ್ರಹ್ಮಚಾರೀ ನಿಯತಃ ಸಂಶಿತವ್ರತಃ ।
ಸ ಜೀವೇದ್ಧಿ ನಿರಾಬಾಧಃ ಸುಸುಖೀ ಶರದಾಂ ಶತಮ್ ॥೧೭॥

ಕುಬೇರನ ಮನೆಯಲ್ಲಿ ವಾಸಿಸುವ ಪಾಂಡವರಿಗೆ ಉಂಟಾದ ಈ ಇಂದ್ರನ ಸಮಾಗಮವನ್ನು ಯಾವ ವಿದ್ವಾಂಸನು ಒಂದು ಸಂವತ್ಸರದ ಕಾಲ ಬ್ರಹ್ಮಚರ್ಯವನ್ನು ಮಾಡಿ ನಿಯಮಬದ್ಧನಾಗಿದ್ದು, ಶ್ರೇಷ್ಠವಾದ ವ್ರತವನ್ನು ಮಾಡಿ ಶಾಂತಮನಸ್ಸಿನಿಂದ ಅಧ್ಯಯನವನ್ನು ಮಾಡುವನೋ ಅವನು ಯಾವ ಬಾಧೆಯೂ ಇಲ್ಲದೆ ಸುಖವಾಗಿ ನೂರುವರ್ಷಗಳ ಕಾಲ ಜೀವಿಸುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ಯಕ್ಷಯುದ್ಧಪರ್ವಣಿ ಅಷ್ಟಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ತೊಂದನೆಯ
ಅಧ್ಯಾಯ ಮುಗಿಯಿತು

ನೂರ ಅರವತ್ತೆರಡನೆಯ ಅಧ್ಯಾಯ

ಅರ್ಜುನನಿಂದ ಕಿರಾತರೂಪಿಯಾದ ಶಿವನ ಜೊತೆಯಲ್ಲಿ ತನ್ನ ಯುದ್ಧ ಮತ್ತು ಪಾಶುಪತಾಸ್ತ್ರ ಪ್ರಾಪ್ತಿ ಪ್ರಕಾರದ ಕಥನ.

ವೈಶಂಪಾಯನಃ

ಯಥಾಗತಂ ಗತೇ ಶಕ್ರೇ ಭ್ರಾತೃಭಿಃ ಸಹ ಸಂಗತಃ ।
ಕೃಷ್ಣಯಾ ಚೈವ ಬೀಭತ್ಸುರ್ಧರ್ಮಪುತ್ರಮಪೂಜಯತ್ ॥೧॥

ವೈಶಂಪಾಯನ– ಇಂದ್ರನು ಬಂದಂತೆಯೇ ಹಿಂದೆ ಹೋಗುತ್ತಿರಲು ಅರ್ಜುನನು ತನ್ನ ಸಹೋದರರ ಜೊತೆಯಲ್ಲಿಯೂ ದ್ರೌಪದಿಯ ಜೊತೆಯಲ್ಲಿಯೂ ಸಮಾಗಮವನ್ನು ಹೊಂದಿ ಧರ್ಮರಾಜನನ್ನು ಪೂಜಿಸಿದನು.

ಅಭಿವಾದಯಮಾನಂ ತಂ ಮೂರ್ಧ್ನ್ಯುಪಾಘ್ರಾಯ ಪಾಂಡವಮ್ ।
ಹರ್ಷಗದ್ಗದಯಾ ವಾಚಾ ಪ್ರಹೃಷ್ಟೋಽರ್ಜುನಮಬ್ರವೀತ್ ॥೨॥

ಹಾಗೆ ನಮಸ್ಕಾರ ಮಾಡಿದ ಪಾಂಡುಪುತ್ರನಾದ ಅರ್ಜುನನನ್ನು ಧರ್ಮರಾಜನು ಶಿರಸ್ಸಿನಲ್ಲಿ ಆಘ್ರಾಣಿಸಿ ಹರ್ಷಗದ್ಗದವಾದ ವಾಣಿಯಿಂದ ಹೀಗೆ ಹೇಳಿದನು;

ಕಥಮರ್ಜುನ ಕಾಲೋಽಯಂ ಸ್ವರ್ಗೇ ವ್ಯತಿಗತಸ್ತವ ।
ಕಥಂ ಚಾಸ್ತ್ರಾಣ್ಯವಾಪ್ತಾನಿ ದೇವರಾಜಶ್ಚ ತೋಷಿತಃ ॥೩॥

ಅರ್ಜುನನೇ, ಸ್ವರ್ಗದಲ್ಲಿ ನಿನ್ನ ಕಾಲವು ಹೇಗೆ ಕಳೆಯಿತು? ಹೇಗೆ ಅಸ್ತ್ರಗಳನ್ನು ಸಂಪಾದಿಸಿದೆ? ಮತ್ತು ದೇವರಾಜನಾದ ಇಂದ್ರನನ್ನು ಹೇಗೆ ಸಂತೋಷಪಡಿಸಿದೆ?

ಸಮ್ಯಗ್ವಾ ತೇ ಗೃಹೀತಾನಿ ಕಚ್ಚಿದಸ್ತ್ರಾಣಿ ಪಾಂಡವ ।
ಕಚ್ಚಿತ್ ಸುರಾಧಿಪಃ ಪ್ರೀತೋ ರುದ್ರೋ ವಾಽಸ್ತ್ರಾಣ್ಯದಾತ್ ತವ ॥೪॥

ಎಲೈ ಪಾಂಡವನೇ, ನೀನು ಅಸ್ತ್ರಗಳನ್ನು ಸರಿಯಾದ ಕ್ರಮದಲ್ಲಿ ಸ್ವೀಕರಿಸಿರುವೆಯಷ್ಟೆ? ದೇವೇಶನಾದ ಇಂದ್ರನೂ ಮತ್ತು ರುದ್ರನೂ ಸಹ ಪ್ರಸನ್ನರಾಗಿ ನಿನಗೆ ಅಸ್ತ್ರಗಳನ್ನು ನೀಡಿದ್ದಾರಷ್ಟೆ?

ಯಥಾ ದೃಷ್ಟಶ್ಚ ತೇ ಶಕ್ರೋ ಭಗವಾನ್ ವಾ ಪಿನಾಕಧೃಕ್ ।
ಯಥೈವಾಸ್ತ್ರಾಣ್ಯವಾಪ್ತಾನಿ ಯಥೈವಾರಾಧಿತಶ್ಚ ತೇ ॥೫॥

ಯಥೋಕ್ತವಾಂಸ್ತ್ವಾಂ ಭಗವಾನ್ ಶತಕ್ರತುರರಿಂದಮ ।
ಕೃತಪ್ರಿಯಸ್ತ್ವಯಾಽಸ್ಮೀತಿ ತಸ್ಯ ತೇ ಕಿಂ ಪ್ರಿಯಂ ಕೃತಮ್ ।
ಏತದಿಚ್ಛಾಮ್ಯಹಂ ಶ್ರೋತುಂ ವಿಸ್ತರೇಣ ಮಹಾದ್ಯುತೇ ॥೬॥

ನೀನು ಇಂದ್ರನನ್ನಾಗಲೀ ಅಥವಾ ಪೂಜ್ಯನಾದ ಪಿನಾಕಧಾರಿಯಾದ ರುದ್ರನನ್ನಾಗಲೀ ಹೇಗೆ ನೋಡಿದೆ? ನೀನು ಹೇಗೆ ಅಸ್ತ್ರಗಳನ್ನು ಪಡೆದೆ? ಹೇಗೆ ಅವರನ್ನು ಆರಾಧಿಸಿದೆ? ಎಲೈ ಅರಿಂದಮನೇ, ಪೂಜ್ಯನಾದ ಇಂದ್ರನು ನಿನ್ನಿಂದ ಉಪಕೃತನಾಗಿದ್ದೇನೆ ಎಂದು ನಿನಗೆ ಹೇಳಿದನಷ್ಟೆ? ನೀನು ಅವನಿಗೆ ಯಾವ ಪ್ರಿಯವನ್ನು ಮಾಡಿದೆ? ಎಲೈ ಮಹಾದ್ಯುತಿಯೇ ನಾನು ಇದನ್ನು ವಿಸ್ತಾರವಾಗಿ ಕೇಳಲು ಬಯಸುತ್ತೇನೆ.

ಯಥಾ ತುಷ್ಟೋ ಮಹಾದೇವೋ ದೇವರಾಜಸ್ತಥಾನಘ ॥೭॥

ಯಚ್ಚಾಪಿ ವಜ್ರಪಾಣೇಸ್ತು ಪ್ರಿಯಂ ಕೃತಮರಿಂದಮ ।
ಏತದಾಖ್ಯಾಹಿ ಮೇ ಸರ್ವಮಖಿಲೇನ ಧನಂಜಯ ॥೮॥

ಎಲೈ ಅನಘನೇ, ದೇವರಾಜನಾದ ಇಂದ್ರನು ಮತ್ತು ಮಹಾದೇವನು ಹೇಗೆ ಪ್ರಸನ್ನರಾದರು? ಎಲೈ ಅರಿಂದಮನೇ, ನೀನು ವಜ್ರಪಾಣಿಯಾದ ಇಂದ್ರನಿಗೆ ಯಾವ ಪ್ರಿಯವನ್ನು ಮಾಡಿದೆ? ಎಲೈ ಧನಂಜಯನೇ, ಇದೆಲ್ಲವನ್ನೂ ವಿಸ್ತಾರವಾಗಿ ಹೇಳು.

ಅರ್ಜುನಃ

ಶೃಣು ಹಂತ ಮಹಾರಾಜ ವಿಧಿನಾ ಯೇನ ದೃಷ್ಟವಾನ್ ।
ಶತಕ್ರತುಮಹಂ ದೇವಂ ಭಗವಂತಂ ಚ ಶಂಕರಮ್ ॥೯॥

ಅರ್ಜುನ– ಮಹಾರಾಜನೇ, ನಾನು ಯಾವ ವಿಧಿಯಿಂದ ಶತಕ್ರತುವಾದ ಇಂದ್ರನನ್ನೂ ಮತ್ತು ಭಗವಂತನಾದ ಶಂಕರನನ್ನೂ ನೋಡಿದೆನೆಂದು ಕೇಳು.

ವಿದ್ಯಾಮಧೀತ್ಯ ತಾಂ ರಾಜಸ್ತ್ವಯೋಕ್ತಾಮರಿಮರ್ದನ ।
ಭವತಾ ಚ ಸಮಾದಿಷ್ಟಸ್ತಪಸೇ ಪ್ರಸ್ಥಿತೋ ವನಮ್ ॥೧೦॥

ಎಲೈ ಅರಿಮರ್ದನನೇ, ನಾನು ನೀನು ಉಪದೇಶಮಾಡಿದ ಮಂತ್ರಗಳನ್ನು ಅಧ್ಯಯನ ಮಾಡಿ ನಿನ್ನ ಆದೇಶವನ್ನು ಪಡೆದು ತಪಸ್ಸಿಗಾಗಿ ಕಾಡಿಗೆ ಹೊರಟೆ.

ಭೃಗುತುಂಗಮಥೋ ಗತ್ವಾ ಕಾಮ್ಯಕಾದಾಸ್ಥಿತಸ್ತಪಃ ।
ಏಕರಾತ್ರೋಷಿತಃ ಕಂಚಿದಪಶ್ಯಂ ಬ್ರಾಹ್ಮಣಂ ಪಥಿ ॥೧೧॥

ಅನಂತರ ನಾನು ಕಾಮ್ಯಕವನದಿಂದ ಭೃಗುತುಂಗವನ್ನು ತಲುಪಿ ಅಲ್ಲಿ ತಪಸ್ಸನ್ನು ಮಾಡಿ ಒಂದು ರಾತ್ರಿ ವಾಸವನ್ನು ಮಾಡಿ ದಾರಿಯಲ್ಲಿ ಒಬ್ಬ ಬ್ರಾಹ್ಮಣನನ್ನು ನೋಡಿದೆ.

ಸ ಮಾಮಪೃಚ್ಛತ್ ಕೌಂತೇಯ ಕ್ವಾಸಿ ಗಂತಾ ಬ್ರವೀಹಿ ಮೇ ।
ತಸ್ಮಾ ಅವಿತಥಂ ಸರ್ವಮಬ್ರುವಂ ಕುರುನಂದನ ॥೧೨॥

ಅವನು ಕೌಂತೇಯನೇ ನೀನು ಎಲ್ಲಿಗೆ ಹೋಗುತ್ತಿದ್ದೀಯೆ ಹೇಳು ಎಂದು ನನ್ನನ್ನು ಕೇಳಿದನು. ಎಲೈ ಕುರುನಂದನನೇ, ನಾನು ಅವನಿಗೆ ಎಲ್ಲವನ್ನೂ ಸತ್ಯವಾಗಿ ಹೇಳಿದೆನು.

ಸ ತಥ್ಯಂ ಮಮ ತಚ್ಛ್ರುತ್ವಾ ಬ್ರಾಹ್ಮಣೋ ರಾಜಸತ್ತಮ ।
ಅಪೂಜಯತ ಮಾಂ ರಾಜನ್ ಪ್ರೀತಿಮಾಂಶ್ಚಾಭವನ್ಮಯಿ ॥೧೩॥

ಎಲೈ ರಾಜಶ್ರೇಷ್ಠನೇ, ಆ ಬ್ರಾಹ್ಮಣನು ನನ್ನ ಸತ್ಯವಚನವನ್ನು ಕೇಳಿ ನನ್ನಲ್ಲಿ ಪ್ರೀತಿಯನ್ನು ಹೊಂದಿ ನನ್ನನ್ನು ಸತ್ಕರಿಸಿದನು.

ತತೋ ಮಾಮಬ್ರವೀತ್ ಪ್ರೀತಸ್ತಪ ಆತಿಷ್ಠ ಭಾರತ ।
ತಪಸ್ವೀ ನಚಿರೇಣ ತ್ವಂ ದ್ರಕ್ಷ್ಯಸೇ ವಿಬುಧಾಧಿಪಮ್ ॥೧೪॥

ಅನಂತರ ಅವನು ನನ್ನನ್ನು ಕುರಿತು ಸಂತೋಷದಿಂದ ಭಾರತನೇ, ತಪಸ್ಸನ್ನು ಆಚರಿಸು. ತಪಸ್ವಿಯಾದ ನೀನು ಶೀಘ್ರವಾಗಿ ವಿಬುಧಾಧಿಪನಾದ ಇಂದ್ರನನ್ನು ನೋಡುವಿ ಎಂದು ಹೇಳಿದನು.

ತತೋಽಹಂ ವಚನಾತ್ ತಸ್ಯ ಗಿರಿಮಾರುಹ್ಯ ಶೈಶಿರಮ್ ।
ತಪೋಽತಪ್ಯಂ ಮಹಾರಾಜ ಮಾಸಂ ಮೂಲಫಲಾಶನಃ ॥೧೫॥

ಎಲೈ ಮಹಾರಾಜನೇ, ಅನಂತರ ನಾನು ಅವನ ವಚನದಂತೆ ಹಿಮಾಲಯ ಪರ್ವತವನ್ನು ಹತ್ತಿ ಒಂದು ತಿಂಗಳ ಕಾಲ ಮೂಲಫಲಗಳನ್ನು ಸೇವಿಸಿ ತಪಸ್ಸನ್ನು ಮಾಡಿದೆನು.

ದ್ವಿತೀಯಶ್ಚಾಪಿ ಮೇ ಮಾಸೋ ಜಲಂ ಭಕ್ಷಯತೋ ಗತಃ ।
ನಿರಾಹಾರಸ್ಯತೀಯೇಽಥ ಮಾಸೇ ಪಾಂಡವನಂದನ ॥೧೬॥

ಎಲೈ ಪಾಂಡವನಂದನನೇ, ಎರಡನೆಯ ತಿಂಗಳು ಕೇವಲ ಜಲಭಕ್ಷಣವನ್ನು ಮಾಡಿ ತಪಸ್ಸು ಮಾಡುವುದರಲ್ಲಿ ಕಳೆಯಿತು. ಮೂರನೆಯ ತಿಂಗಳಿನಲ್ಲಿ ನಾನು ನಿರಾಹಾರನಾದೆ.

ಊರ್ಧ್ವಬಾಹುಶ್ಚತುರ್ಥಂ ತು ಮಾಸಮಸ್ಮಿ ಸ್ಥಿತಸ್ತದಾ ।
ನ ಚ ಮೇ ಹೀಯತೇ ಪ್ರಾಣಸ್ತದದ್ಭುತಮಿವಾಭವತ್ ॥೧೭॥

ನಾಲ್ಕನೆಯ ಮಾಸದಲ್ಲಿ ನಾನು ಊರ್ಧ್ವಬಾಹುವಾಗಿ ನಿಂತೆ. ನನ್ನ ಪ್ರಾಣವು ಹೋಗಲಿಲ್ಲ. ಈ ಸಂಗತಿಯು ಆಶ್ಚರ್ಯಕರವಾಗಿದ್ದಿತು.

ಪಂಚಮೇ ತ್ವಥ ಸಂಪ್ರಾಪ್ತೇ ಪ್ರಥಮೇ ದಿವಸೇ ಗತೇ ।
ವರಾಹಸಂಸ್ಥಿತಂ ಭೂತಂ ಮತ್ಸಮೀಪಂ ಸಮಾಗಮತ್ ॥೧೮॥

ಐದನೆಯ ತಿಂಗಳಿನಲ್ಲಿ ಮೊದಲನೆಯ ದಿವಸವು ಕಳೆಯುತ್ತಿರಲು ನನ್ನ ಸಮೀಪಕ್ಕೆ ವರಾಹರೂಪದ ಒಂದು ಪ್ರಾಣಿಯು ಬಂದಿತು.

ನಿಘ್ನನ್ ಪ್ರೋಥೇನ ಪೃಥಿವೀಂ ವಿಲಿಖಂಶ್ಚರಣೈರಪಿ ।
ಸಮ್ಮಾರ್ಜನ್ ಜಠರೇಣೋರ್ವೀಂ ವಿವರ್ತಂಶ್ಚ ಮುಹುರ್ಮುಹುಃ ॥

ಅದು ತನ್ನ ಕೋರೆದಾಡೆಯಿಂದ ಭೂಮಿಯನ್ನು ಕೊರೆಯುತ್ತಾ ಪಾದಗಳಿಂದ ಭೂಮಿಯ ಮೇಲೆ ಬರೆಯುತ್ತಾ ಉದರದಿಂದ ಭೂಮಿಯನ್ನು ಸಾರಿಸುತ್ತಾ ಪುನಃ ಪುನಃ ಹೊರಳಾಡುತ್ತಿತ್ತು.

ಅನು ತಸ್ಯಾಪರಂ ಭೂತಂ ಮಹತ್ಕ್ಷ್ಮೇರಾತಸಂಸ್ಥಿತಮ್ ।
ಧನುರ್ಬಾಣಾಸಿಮತ್‌ಪ್ರಾಪ್ತಂ ಸ್ತ್ರೀಗಣಾನುಗತಂ ತದಾ ॥೨೦॥

ಆ ಪ್ರಾಣಿಯ ಹಿಂದೆ ದೊಡ್ಡ ಕಿರಾತ ರೂಪವನ್ನು ಧರಿಸಿದ, ಕೈಗಳಲ್ಲಿ ಧನುಸ್ಸು, ಬಾಣ ಮತ್ತು ಅಸ್ತ್ರಗಳನ್ನು ಹಿಡಿದ, ಸ್ತ್ರೀಗಣದಿಂದ ಹಿಂಬಾಲಿಸಲ್ಪಟ್ಟ, ಇನ್ನೊಂದು ವಸ್ತುವು ಬಂದಿತು.

ತತೋಽಹಂ ಧನುರಾದಾಯ ತಥಾಽಕ್ಷಯ್ಯೇ ಮಹೇಷುಧೀ ।
ಅತಾಡಯಂ ಶರೇಣಾಥ ತದ್ಭೂತಂ ಲೋಮಹರ್ಷಣಮ್ ॥೨೧॥

ಆಗ ನಾನು ಧನುಸ್ಸನ್ನೂ ಮತ್ತು ಅಕ್ಷಯ ಬತ್ತಳಿಕೆಯನ್ನು ತೆಗೆದುಕೊಂಡು ಬಾಣದಿಂದ ರೋಮಾಂಚಕಾರಿಯಾಗಿದ್ದ ಆ ಪ್ರಾಣಿಯನ್ನು ಹೊಡೆದೆನು.

ಯುಗಪತ್ ತಂ ಕಿರಾತಸ್ತು ವಿಕೃಷ್ಯ ಬಲವದ್ಧನುಃ ।
ಅಭ್ಯಾಜಘ್ನೇ ದೃಢತರಂ ಕಂಪಯನ್ನಿವ ಮೇ ಮನಃ ॥೨೨॥

ಅದೇ ಕಾಲದಲ್ಲಿಯೇ ಆ ಕಿರಾತನೂ ಸಹ ತನ್ನ ದೃಢವಾದ ಧನುಸ್ಸನ್ನು ಎಳೆದು ನನ್ನ ಮನಸ್ಸನ್ನು ಕಂಪಿಸುವಂತೆ ಆ ಪ್ರಾಣಿಗೆ ನನಗಿಂತ ದೃಢವಾಗಿ ಹೊಡೆದನು.

ಸ ತು ಮಾಮಬ್ರವೀದ್ ರಾಜನ್ ಮಮ ಪೂರ್ವಪರಿಗ್ರಹಃ ।
ಮೃಗಯಾಧರ್ಮಮುತ್ಸೃಜ್ಯ ಕಿಮರ್ಥಂ ತಾಡಿತಸ್ತ್ವಯಾ ॥೨೩॥

ರಾಜನೇ, ಅವನು ನನ್ನನ್ನು ಕುರಿತು ಇದನ್ನು ನಾನು ಮೊದಲು ನೋಡಿ ಹಿಂಬಾಲಿಸಿದುದು. ಬೇಟೆಯ ಧರ್ಮವನ್ನು ಬಿಟ್ಟು ನೀನು ಏಕೆ ಈ ಪ್ರಾಣಿಗೆ ಹೊಡೆದೆ ಎಂದು ಕೇಳಿದನು?

ಏಷ ತೇ ನಿಶಿತೈರ್ಬಾಣೈರ್ದರ್ಪಂ ಹನ್ಮಿ ಸ್ಥಿರೋ ಭವ ।
ಸ ವರ್ಷವಾನ್ಮಹಾಕಾಯಸ್ತತೋ ಮಾಮಭ್ಯಧಾವತ ॥೨೪॥

ಹರಿತವಾದ ಬಾಣಗಳಿಂದ ನಿನ್ನ ದರ್ಪವನ್ನು ನಾಶಮಾಡುತ್ತೇನೆ. ನನ್ನ ಎದುರಿಗೆ ನಿಲ್ಲು ಎಂದು ಹೇಳಿ ಮಹಾಕಾಯವುಳ್ಳ ಅವನು ಬಾಣಗಳ ಮಳೆಯನ್ನು ಸುರಿಸುತ್ತಾ ನನ್ನೆಡೆಗೆ ಧಾವಿಸಿ ಬಂದನು.

ತತೋ ಗಿರಿಮಿವಾತ್ಯರ್ಥಮಾವೃಣೋನ್ಮಾಂ ಮಹಾಶರೈಃ ।
ತಂ ಚಾಹಂ ಶರವರ್ಷೇಣ ಮಹತಾ ಸಮವಾಕಿರಮ್ ॥೨೫॥

ಆಗ ಅವನು ಮಳೆಯ ಧಾರೆಗಳು ಪರ್ವತವನ್ನು ಮುಚ್ಚುವಂತೆ ತನ್ನ ಮಹಾಬಾಣಗಳಿಂದ ನನ್ನನ್ನು ಮುಚ್ಚಿದನು. ನಾನೂ ಸಹ ದೊಡ್ಡ ಶರವೃಷ್ಟಿಯನ್ನು ಅವನ ಮೇಲೆ ಪ್ರಯೋಗಿಸಿದೆನು.

ತತಃ ಶರೈರ್ದೀಪ್ತಮುಖೈರ್ಯಂತ್ರಿತೈರನುಮಂತ್ರಿತೈಃ ।
ಪ್ರತ್ಯವಿಧ್ಯಮಹಂ ತಂ ತು ವಜ್ರೈರಿವ ಶಿಲೋಚ್ಚಯಮ್ ॥೨೬॥

ಅನಂತರ ಜ್ವಲಿಸುವ ಮುಖಗಳುಳ್ಳ ಯಂತ್ರಾರೂಢವಾದ ಅನುಮಂತ್ರಿತವಾದ ಬಾಣಗಳಿಂದ ವಜ್ರಾಯುಧದಿಂದ ಶಿಲಾರಾಶಿಯಾದ ಪರ್ವತವನ್ನು ಹೊಡೆದಂತೆ ನಾನು ಅವನಿಗೆ ಹೊಡೆದೆನು.

ತಸ್ಯ ತಚ್ಛತಧಾ ರೂಪಮಭವಚ್ಚ ಸಹಸ್ರಧಾ ।
ತಾನಿ ಚಾಸ್ಯ ಶರೀರಾಣಿ ಶರೈರಹಮತಾಡಯಮ್ ॥೨೭॥

ನಾನು ಹೊಡೆಯುತ್ತಿದ್ದಂತೆ ಅವನ ರೂಪವು ನೂರುಪಟ್ಟಾಗಿ ಸಾವಿರಪಟ್ಟಾಗಿ ಅಭಿವೃದ್ಧಿಯನ್ನು ಹೊಂದಿತು. ಅವನ ಆ ಶರೀರಗಳಿಗೂ ಬಾಣಪ್ರಯೋಗವನ್ನು ಮಾಡಿದೆನು.

ಪುನಸ್ತಾನಿ ಶರೀರಾಣಿ ಏಕೀಭೂತಾನಿ ಭಾರತ ।
ಅದೃಶ್ಯಂತ ಮಹಾರಾಜ ತಾನ್ಯಹಂ ವ್ಯಧಮಂ ಪುನಃ ॥೨೮॥

ಎಲೈ ಭಾರತನೇ, ಪುನಃ ಆ ಶರೀರಗಳೆಲ್ಲವೂ ಒಂದಾಗಿ ಒಂದೇ ಶರೀರವಾಗಿ ಕಂಡವು. ಮಹಾರಾಜನೇ, ನಾನು ಪುನಃ ಅವುಗಳನ್ನು ಬಾಣದಿಂದ ಪೀಡಿಸಿದೆನು.

ಅಣುರ್ಬೃಹಚ್ಛರಾ ಭೂತ್ವಾ ಬೃಹಚ್ಚಾಣುಶಿರಾಃ ಪುನಃ ।
ಏಕೀಭೂತಸ್ತದಾ ರಾಜನ್ ಸೋಽಭ್ಯವರ್ತತ ಮಾಂ ಯುಧಿ ॥೨೯॥

ಎಲೈ ರಾಜನೇ, ಅವು ದೊಡ್ಡ ತಲೆಯುಳ್ಳ ಅಣುಶರೀರ, ಚಿಕ್ಕ ತಲೆಯುಳ್ಳ ಬೃಹತ್ ಶರೀರಗಳಾಗಿ ಅನೇಕ ರೂಪವನ್ನು ಹೊಂದಿ ಪುನಃ ಎಲ್ಲವೂ ಒಂದಾಗಿ ಯುದ್ಧದಲ್ಲಿ ನನ್ನ ಮೇಲೆ ಎರಗಿ ಬಂದವು.

ಯದಾಽಭಿಭವಿತುಂ ಬಾಣೈರ್ನ ಚ ಶಕ್ನೋಮಿ ತಂ ರಣೇ ।
ತತೋ ಮಹಾಸ್ತ್ರಮಾತಿಷ್ಠಂ ವಾಯವ್ಯಂ ಭರತರ್ಷಭ ॥೩೦॥

ಎಲೈ ಭರತರ್ಷಭನೇ, ನಾನು ನನ್ನ ಬಾಣಗಳಿಂದ ಯುದ್ಧದಲ್ಲಿ ಅವನನ್ನು ಸೋಲಿಸಲು ಸಾಧ್ಯವಿಲ್ಲದಾದಾಗ ನಾನು ಮಹಾಸ್ತ್ರವಾದ ವಾಯವ್ಯಾಸ್ತ್ರವನ್ನು ಪ್ರಯೋಗಿಸಿದೆ.

ನ ಚೈನಮಶಕಂ ಹಂತುಂ ತದದ್ಭುತಮಿವಾಭವತ್ ।
ತಸ್ಮಿನ್ ಪ್ರತಿಹತೇ ಚಾಸ್ತ್ರೇ ವಿಸ್ಮಯೋ ಮೇ ಮಹಾನಭೂತ್ ॥೩೧॥

ಆದರೂ ನಾನು ಅವನನ್ನು ಸಂಹರಿಸಲು ಸಾಧ್ಯವಾಗಲಿಲ್ಲ. ಆ ಸಂಗತಿಯು ಅದ್ಭುತವಾಗಿ ಕಂಡಿತು. ವಾಯವ್ಯಾಸ್ತ್ರವೂ ಪ್ರತಿಹತವಾದಾಗ ನನಗೆ ಬಹಳ ಆಶ್ಚರ್ಯವುಂಟಾಯಿತು.

ಭೂಯ ಏವ ಮಹಾರಾಜ ಸವಿಶೇಷಮಹಂ ತತಃ ।
ಅಸ್ತ್ರಪೂಗೇನ ಮಹತಾ ರಣೇ ಭೂತಮವಾಕಿರಮ್ ॥೩೨॥

ಎಲೈ ಮಹಾರಾಜನೇ, ಆಗ ನಾನು ಪುನಃ ವಿಶೇಷವಾಗಿ ಆ ಯುದ್ಧದಲ್ಲಿ ದೊಡ್ಡ ಅಸ್ತ್ರಸಮೂಹಗಳ ಮಳೆಯನ್ನು ಆ ಕಿರಾತನ ಮೇಲೆ ಸುರಿಸಿದೆನು.

ಸ್ಥೂಣಾಕರ್ಣಮಯೋಭಾಜಂ ಶರವರ್ಷಂ ಶರೋಲ್ಬಣಮ್ ।
ಶಲಭಾಸ್ತ್ರಮಶ್ಮವರ್ಷಂ ಸಮಾಸ್ಥಾಯಾಹಮಭ್ಯಯಾಮ್ ॥೩೩॥

ಶರವರ್ಷವನ್ನು ಸುರಿಸುವ ಉಲ್ಬಣವಾದ ಶರದಲ್ಲಿ ಅಭಿಮಂತ್ರಿತವಾದ ಸ್ಥೂಣಾಕರ್ಣಾಸ್ತ್ರವನ್ನೂ ಮತ್ತು ಬಂಡೆಗಳ ಮಳೆಯನ್ನು ಸುರಿಸುವ ಶರಭಾಸ್ತ್ರವನ್ನು ಆಶ್ರಯಿಸಿ ನಾನು ಅವನ ಎದುರಾಗಿ ಹೋಗಿ ಪ್ರಯೋಗಿಸಿದೆನು.

ಜಗ್ರಾಸ ಪ್ರಸಭಂ ತಾನಿ ಸರ್ವಾಣ್ಯಸ್ತ್ರಾಣಿ ಮೇ ನೃಪ ।
ತೇಷು ಸರ್ವೇಷು ಜಗ್ಧೇಷು ಬ್ರಹ್ಮಾಸ್ತ್ರಂ ಮಹದಾದಿಶಮ್ ॥೩೪॥

ಎಲೈ ರಾಜನೇ, ಆ ನನ್ನ ಎಲ್ಲಾ ಅಸ್ತ್ರಗಳನ್ನೂ ಆ ಕಿರಾತನು ಶೀಘ್ರವಾಗಿ ನುಂಗಿದನು. ಅವನು ಎಲ್ಲಾ ಅಸ್ತ್ರಗಳನ್ನೂ ನುಂಗಿದಮೇಲೆ ನಾನು ಘೋರವಾದ ಬ್ರಹ್ಮಾಸ್ತ್ರವನ್ನು ಆಶ್ರಯಿಸಿದೆನು.

ಆಗ ಅವನು ಮಳೆಯ ಧಾರೆಗಳು ಪರ್ವತವನ್ನು ಮುಚ್ಚುವಂತೆ ತನ್ನ ಮಹಾಬಾಣಗಳಿಂದ ನನ್ನನ್ನು ಮುಚ್ಚಿದನು. ನಾನೂ ಸಹ ದೊಡ್ಡ ಶರವೃಷ್ಟಿಯನ್ನು ಅವನ ಮೇಲೆ ಪ್ರಯೋಗಿಸಿದೆನು.

ತತಃ ಶರೈರ್ದೀಪ್ತಮುಖೈರ್ಯಂತ್ರಿತೈರನುಮಂತ್ರಿತೈಃ ।
ಪ್ರತ್ಯವಿಧ್ಯಮಹಂ ತಂ ತು ವಜ್ರೈರಿವ ಶಿಲೋಚ್ಚಯಮ್ ॥೨೬॥

ಅನಂತರ ಜ್ವಲಿಸುವ ಮುಖಗಳುಳ್ಳ ಯಂತ್ರಾರೂಢವಾದ ಅನುಮಂತ್ರಿತವಾದ ಬಾಣಗಳಿಂದ ವಜ್ರಾಯುಧದಿಂದ ಶಿಲಾರಾಶಿಯಾದ ಪರ್ವತವನ್ನು ಹೊಡೆದಂತೆ ನಾನು ಅವನಿಗೆ ಹೊಡೆದೆನು.

ತಸ್ಯ ತಚ್ಛತಧಾ ರೂಪಮಭವಚ್ಚ ಸಹಸ್ರಧಾ ।
ತಾನಿ ಚಾಸ್ಯ ಶರೀರಾಣಿ ಶರೈರಹಮತಾಡಯಮ್ ॥೨೭॥

ನಾನು ಹೊಡೆಯುತ್ತಿದ್ದಂತೆ ಅವನ ರೂಪವು ನೂರುಪಟ್ಟಾಗಿ ಸಾವಿರಪಟ್ಟಾಗಿ ಅಭಿವೃದ್ಧಿಯನ್ನು ಹೊಂದಿತು. ಅವನ ಆ ಶರೀರಗಳಿಗೂ ಬಾಣಪ್ರಯೋಗವನ್ನು ಮಾಡಿದೆನು.

ಪುನಸ್ತಾನಿ ಶರೀರಾಣಿ ಏಕೀಭೂತಾನಿ ಭಾರತ ।
ಅದೃಶ್ಯಂತ ಮಹಾರಾಜ ತಾನ್ಯಹಂ ವ್ಯಧಮಂ ಪುನಃ ॥೨೮॥

ಎಲೈ ಭಾರತನೇ, ಪುನಃ ಆ ಶರೀರಗಳೆಲ್ಲವೂ ಒಂದಾಗಿ ಒಂದೇ ಶರೀರವಾಗಿ ಕಂಡವು. ಮಹಾರಾಜನೇ, ನಾನು ಪುನಃ ಅವುಗಳನ್ನು ಬಾಣದಿಂದ ಪೀಡಿಸಿದೆನು.

ಅಣುರ್ಬೃಹಚ್ಛಿರಾ ಭೂತ್ವಾ ಬೃಹಚ್ಚಾಣುಶಿರಾಃ ಪುನಃ ।
ಏಕೀಭೂತಸ್ತದಾ ರಾಜನ್ ಸೋಽಭ್ಯವರ್ತತ ಮಾಂ ಯುಧಿ ॥೨೯॥

ಎಲೈ ರಾಜನೇ, ಅವು ದೊಡ್ಡ ತಲೆಯುಳ್ಳ ಅಣುಶರೀರ, ಚಿಕ್ಕ ತಲೆಯುಳ್ಳ ಬೃಹತ್ ಶರೀರಗಳಾಗಿ ಅನೇಕ ರೂಪವನ್ನು ಹೊಂದಿ ಪುನಃ ಎಲ್ಲವೂ ಒಂದಾಗಿ ಯುದ್ಧದಲ್ಲಿ ನನ್ನ ಮೇಲೆ ಎರಗಿ ಬಂದವು.

ಯದಾಽಭಿಭವಿತುಂ ಬಾಣೈರ್ನ ಚ ಶಕ್ನೋಮಿ ತಂ ರಣೇ ।
ತತೋ ಮಹಾಸ್ತ್ರಮಾತಿಷ್ಠಂ ವಾಯವ್ಯಂ ಭರತರ್ಷಭ ॥೩೦॥

ಎಲೈ ಭರತರ್ಷಭನೇ, ನಾನು ನನ್ನ ಬಾಣಗಳಿಂದ ಯುದ್ಧದಲ್ಲಿ ಅವನನ್ನು ಸೋಲಿಸಲು ಸಾಧ್ಯವಿಲ್ಲದಾದಾಗ ನಾನು ಮಹಾಸ್ತ್ರವಾದ ವಾಯವ್ಯಾಸ್ತ್ರವನ್ನು ಪ್ರಯೋಗಿಸಿದೆ.

ನ ಚೈನಮಶಕಂ ಹಂತುಂ ತದದ್ಭುತಮಿವಾಭವತ್ ।
ತಸ್ಮಿನ್ ಪ್ರತಿಹತೇ ಚಾಸ್ತ್ರೇ ವಿಸ್ಮಯೋ ಮೇ ಮಹಾನಭೂತ್ ॥೩೧॥

ಆದರೂ ನಾನು ಅವನನ್ನು ಸಂಹರಿಸಲು ಸಾಧ್ಯವಾಗಲಿಲ್ಲ. ಆ ಸಂಗತಿಯು ಅದ್ಭುತವಾಗಿ ಕಂಡಿತು. ವಾಯವ್ಯಾಸ್ತ್ರವೂ ಪ್ರತಿಹತವಾದಾಗ ನನಗೆ ಬಹಳ ಆಶ್ಚರ್ಯವುಂಟಾಯಿತು.

ಭೂಯ ಏವ ಮಹಾರಾಜ ಸವಿಶೇಷಮಹಂ ತತಃ ।
ಅಸ್ತ್ರಪೂಗೇನ ಮಹತಾ ರಣೇ ಭೂತಮವಾಕಿರಮ್ ॥೩೨॥

ಎಲೈ ಮಹಾರಾಜನೇ, ಆಗ ನಾನು ಪುನಃ ವಿಶೇಷವಾಗಿ ಆ ಯುದ್ಧದಲ್ಲಿ ದೊಡ್ಡ ಅಸ್ತ್ರಸಮೂಹಗಳ ಮಳೆಯನ್ನು ಆ ಕಿರಾತನ ಮೇಲೆ ಸುರಿಸಿದೆನು.

ಸ್ಥೂಣಾಕರ್ಣಮಯೋಭಾಜಂ ಶರವರ್ಷಂ ಶರೋಲ್ಬಣಮ್ ।
ಶಲಭಾಸ್ತ್ರಮಶ್ಮವರ್ಷಂ ಸಮಾಸ್ಥಾಯಾಹಮಭ್ಯಯಾಮ್ ॥೩೩॥

ಶರವರ್ಷವನ್ನು ಸುರಿಸುವ ಉಲ್ಬಣವಾದ ಶರದಲ್ಲಿ ಅಭಿಮಂತ್ರಿತವಾದ ಸ್ಥೂಣಾಕರ್ಣಾಸ್ತ್ರವನ್ನೂ ಮತ್ತು ಬಂಡೆಗಳ ಮಳೆಯನ್ನು ಸುರಿಸುವ ಶರಭಾಸ್ತ್ರವನ್ನು ಆಶ್ರಯಿಸಿ ನಾನು ಅವನ ಎದುರಾಗಿ ಹೋಗಿ ಪ್ರಯೋಗಿಸಿದೆನು.

ಜಗ್ರಾಸ ಪ್ರಸಭಂ ತಾನಿ ಸರ್ವಾಣ್ಯಸ್ತ್ರಾಣಿ ಮೇ ನೃಪ ।
ತೇಷು ಸರ್ವೇಷು ಜಗ್ಧೇಷು ಬ್ರಹ್ಮಾಸ್ತ್ರಂ ಮಹದಾದಿಶಮ್ ॥೩೪॥

ಎಲೈ ರಾಜನೇ, ಆ ನನ್ನ ಎಲ್ಲಾ ಅಸ್ತ್ರಗಳನ್ನೂ ಆ ಕಿರಾತನು ಶೀಘ್ರವಾಗಿ ನುಂಗಿದನು. ಅವನು ಎಲ್ಲಾ ಅಸ್ತ್ರಗಳನ್ನೂ ನುಂಗಿದಮೇಲೆ ನಾನು ಘೋರವಾದ ಬ್ರಹ್ಮಾಸ್ತ್ರವನ್ನು ಆಶ್ರಯಿಸಿದೆನು.

ತತಃ ಪ್ರಜ್ವಲಿತೈರ್ಬಾಣೈಃ ಸರ್ವತಃ ಸೋಪಚೀಯತೇ ।
ಉಪಚೀಯಮಾನಶ್ಚ ಮಯಾ ಮಹಾಸ್ತ್ರೇಣ ವ್ಯವರ್ಧತ ॥೩೫॥

ತತಃ ಸಂತಾಪಿತಾ ಲೋಕಾ ಮತ್ಸೃಷ್ಟೇನ ತೇಜಸಾ ।
ಕ್ಷಣೇನ ಹಿ ದಿಶಃ ಖಂ ಚ ಸರ್ವತೋ ಹಿ ವಿದೀಪಿತಮ್ ॥೩೬॥

ಆಗ ನನ್ನಿಂದ ಪ್ರಯೋಗಿಸಲ್ಪಟ್ಟ ಆ ಮಹಾಸ್ತ್ರವು ಎಲ್ಲಕಡೆಗಳಲ್ಲಿಯೂ ಪ್ರಜ್ವಲಿತ ಬಾಣಗಳಿಂದ ಉಪಚಯವನ್ನು ಹೊಂದಿ ಅಭಿವೃದ್ಧಿಯನ್ನು ಹೊಂದಿತು. ನಾನು ಸೃಷ್ಟಿ ಮಾಡಿದ ಅಸ್ತ್ರತೇಜಸ್ಸಿನಿಂದ ಎಲ್ಲ ಲೋಕಗಳೂ ಸಂತಾಪಗೊಂಡವು. ಕ್ಷಣಕಾಲದಲ್ಲಿ ದಿಕ್ಕುಗಳೂ ಮತ್ತು ಅಂತರಿಕ್ಷವೂ ಸಹ ಜ್ವಾಲೆಯಿಂದ ಉರಿಯಲು ಪ್ರಾರಂಭವಾಯಿತು.

ತದಪ್ಯಸ್ತ್ರಂ ಮಹಾತೇಜಾಃ ಕ್ಷಣೇನೈವ ವ್ಯಶಾತಯತ್ ।
ಬ್ರಹ್ಮಾಸ್ತ್ರೇ ತು ಹತೇ ರಾಜನ್ ಭಯಂ ಮಾಂ ಮಹದಾವಿಶತ್ ॥೩೭॥

ಮಹಾತೇಜಸ್ವಿಯಾದ ಆ ಕಿರಾತನು ಒಂದು ಕ್ಷಣದಲ್ಲಿಯೇ ಆ ಅಸ್ತ್ರವನ್ನು ನಾಶಮಾಡಿದನು. ರಾಜನೇ, ಬ್ರಹ್ಮಾಸ್ತ್ರವು ಪ್ರತಿಹತಿಯನ್ನು ಹೊಂದಿದಾಗ ನನಗೆ ದೊಡ್ಡ ಭಯವುಂಟಾಯಿತು.

ತತೋಽಹಂ ಧನುರಾದಾಯ ತಥಾಽಕ್ಷಯ್ಯೌ ಮಹೇಷುಧೀ ।
ಸಹಸಾಽಭ್ಯಹನಂ ಭೂತಂ ತಾನ್ಯಪ್ಯಸ್ತ್ರಾಣ್ಯಭಕ್ಷಯತ್ ॥೩೮॥

ಆಗ ನಾನು ನನ್ನ ಧನುಸ್ಸನ್ನೂ ಮತ್ತು ಅಕ್ಷಯ ಬತ್ತಳಿಕೆಗಳನ್ನೂ ತೆಗೆದುಕೊಂಡು ಅದರಿಂದಲೇ ಆ ಕಿರಾತನಿಗೆ ಹೊಡೆದೆನು. ಅವನು ಆ ಅಸ್ತ್ರಗಳನ್ನೂ ಭಕ್ಷಿಸಿದನು.

ಹತೇಷ್ವಸ್ತ್ರೇಷು ಸರ್ವೇಷು ಭಕ್ಷಿತೇಷ್ವಾಯುಧೇಷು ಚ ।
ಮಮ ತಸ್ಯ ಚ ಭೂತಸ್ಯ ಬಾಹುಯುದ್ಧಮವರ್ತತ ॥೩೯॥

ಎಲ್ಲಾ ಅಸ್ತ್ರಗಳೂ ಪ್ರತಿಹತವಾಗಿ ಎಲ್ಲಾ ಆಯುಧಗಳೂ ನುಂಗಲ್ಪಡುತ್ತಿರಲು ನನಗೂ ಆ ಕಿರಾತರೂಪದ ಭೂತಕ್ಕೂ ಬಾಹುಯುದ್ಧವು ನಡೆಯಿತು.

ವ್ಯಾಯಾಮಂ ಮುಷ್ಟಿಭಿಃ ಕೃತ್ವಾ ತಳೈರಪಿ ಸಮಾಗತೈಃ ।
ಅಪಾರಯಂಶ್ಚ ತದ್ಭೂತಂ ನಿಶ್ಚೇಷ್ಟಮಗಮಂ ಮಹೀಮ್ ॥೪೦॥

ತನ್ನ ಮುಷ್ಟಿಯನ್ನು ಸಂಘಟಿಸಿ ಹಸ್ತತಳದಿಂದಲೂ ಆ ಕಿರಾತನು ನನಗೆ ಹೊಡೆದನು. ಆ ಭೂತವು ನನ್ನನ್ನು ನಿಶ್ಚೇಷ್ಟನನ್ನಾಗಿ ಮಾಡಿ ಭೂಮಿಯ ಮೇಲೆ ಕೆಡವಿತು.

ತತಃ ಪ್ರಹಸ್ಯ ತದ್ಭೂತಂ ತತ್ಕೈವಾಂತರಧೀಯತ ।
ಸಹ ಸ್ತ್ರೀಭಿರ್ಮಹಾರಾಜ ಪಶ್ಯತೋ ಮೇಽದ್ಭುತೋಪಮಮ್ ॥೪೧॥

ಎಲೈ ಮಹಾರಾಜನೇ, ಅನಂತರ ಆ ಅದ್ಭುತವಾದ ಕಿರಾತನು ನಗುತ್ತಾ ನಾನು ನೋಡುತ್ತಿರುವಂತೆಯೇ ಸ್ತ್ರೀಯರ ಜೊತೆಯಲ್ಲಿ ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ತತಶ್ಚಿಂತಾಂ ಸಮಗಮಂ ಪೂಜಯಿಷ್ಯಾಮ್ಯಹಂ ಪುನಃ ।
ಇತಿ ಪುಷ್ಪಾಣಿ ಸಂಗೃಹ್ಯ ಸೈಕತಂ ಶಂಕರಂ ಪ್ರಭುಮ್ ॥೪೧.೧॥

ಪೂಜಯಿಷ್ಯಂಸ್ತಮದ್ರಾಕ್ಷಂ ಕಿರಾತಂ ಪುಷ್ಪಧಾರಿಣಮ್ ।

ಆಗ ನನಗೆ ಚಿಂತೆಯುಂಟಾಯಿತು. ನಾನು ಪೂಜಿಸುವೆನೆಂದು ಉದ್ದೇಶಿಸಿ ಪುಷ್ಪವನ್ನು ಸಂಗ್ರಹಿಸಿ ಮರಳಿನ ಲಿಂಗವನ್ನು ಮಾಡಿ ಪೂಜಿಸಿದ ಪುಷ್ಪಗಳು ಆ ಕಿರಾತನ ಮೇಲೆ ಇರುವುದನ್ನು ನೋಡಿದೆನು.

ತತಶ್ಚಾನ್ಯಾನಿ ಪುಷ್ಪಾಣಿ ಪೂಜಯಿಷ್ಯನ್ ಪುನಃ ಪುನಃ ॥೪೧.೨॥

ತಾನಿ ಸರ್ವಾಣಿ ದೃಷ್ಟ್ವಾಽಹಂ ಕಿರಾತಸ್ಯ ಚ ಮೂರ್ಧನಿ ।
ಇತಿ ಕೃತ್ವಾ ಮಹಾದೇವಂ ಪ್ರಣತೋಽಸ್ಮಿ ಪುನಃ ಪುನಃ ॥೪೧.೩॥

ಅನಂತರ ಬೇರೆ ಪುಷ್ಪಗಳನ್ನು ಪುನಃ ಪುನಃ ಪೂಜಿಸುವವನಾದರೂ ಆ ಎಲ್ಲಾ ಪುಷ್ಪಗಳೂ ಕಿರಾತನ ತಲೆಯ ಮೇಲೆ ಇದ್ದುದನ್ನು ನೋಡಿ ನಾನು ಆ ಮಹಾದೇವನನ್ನು ಪುನಃ ಪುನಃ ನಮಸ್ಕರಿಸಿದೆ.

ಏವಂ ಕೃತ್ವಾ ಸ ಭಗವಾಂಸ್ತತೋಽನ್ಯದ್ ರೂಪಮಾಸ್ಥಿತಃ ।
ದಿವ್ಯಮೇವ ಮಹಾರಾಜ ವಸಾನೋಽದ್ಭುತಮಂಬರಮ್ ॥೪೨॥

ಹಿತ್ವಾ ಮೃಗತನುಂ ತಾಂ ಚ ಭಗವಾಂಸ್ತ್ರಿದಶೇಶ್ವರಃ ।
ಸ್ವರೂಪಂ ದಿವ್ಯಮಾಸ್ಥಾಯ ತಸ್ಯೌ ತತ್ರ ಮಹೇಶ್ವರಃ ॥೪೩॥

ಎಲೈ ಮಹಾರಾಜನೇ, ಆ ಪೂಜ್ಯನಾದ ಈಶ್ವರನು ಹೀಗೆ ಮಾಡಿ ಇನ್ನೊಂದು ದಿವ್ಯವಾದ ರೂಪವನ್ನು ಧರಿಸಿ ಅದ್ಭುತವಾದ ವಸ್ತ್ರಗಳಿಂದ ಅಲಂಕೃತನಾಗಿ ಬೇಟೆಯಾಡುವ ಕಿರಾತನ ಶರೀರವನ್ನು ಬಿಟ್ಟು ದಿವ್ಯಸ್ವರೂಪವನ್ನು ತೆಗೆದುಕೊಂಡು ಅಲ್ಲಿ ಸ್ತ್ರೀದಶೇಶ್ವರನಾದ ಪೂಜ್ಯನಾದ ಮಹೇಶ್ವರನು ನಿಂತನು.

ಅದೃಶ್ಯತ ತತಃ ಸಾಕ್ಷಾದ್ ಭಗವಾನ್ ಗೋವೃಷಧ್ವಜಃ ।
ಉಮಾಸಹಾಯೋ ವ್ಯಾಲಧೃಗ್ ಬಹುರೂಪಃ ಪಿನಾಕಧೃಕ್ ॥೪೪॥

ಗೋವೃಷಧ್ವಜನಾದ ಉಮಾಸಹಾಯನಾದ ಗಜಚರ್ಮವನ್ನು ಧರಿಸಿದ, ಪಿನಾಕಪಾಣಿಯಾದ ಬಹುರೂಪನಾದ ಮಹೇಶ್ವರನನ್ನು ನಾನು ಸಾಕ್ಷಾತ್ತಾಗಿ ನೋಡಿದೆನು.

ಸ ಮಾಮಭ್ಯೇತ್ಯ ಸಮರೇ ತಥೈವಾಭಿಮುಖಂ ಸ್ಥಿತಮ್ ।
ಶೂಲಪಾಣಿರಥೋವಾಚ ತುಷ್ಟೋಽಸ್ಮೀತಿ ಪರಂತಪ ॥೪೫॥

ಎಲೈ ಪರಂತಪನೇ, ಶೂಲಪಾಣಿಯಾದ ಅವನು ಯುದ್ಧದಲ್ಲಿ ಅವನಿಗೆ ಅಭಿಮುಖವಾಗಿ ಹಾಗೆಯೇ ನಿಂತಿದ್ದ ನನ್ನನ್ನು ಸಮೀಪಿಸಿ ನಾನು ಸಂತುಷ್ಟನಾಗಿದ್ದೇನೆ ಎಂದು ಹೇಳಿದನು.

ತತಸ್ತದ್ಧನುರಾದಾಯ ತೂಣೌ ಚಾಕ್ಷಯ್ಯಸಾಯಕೌ ।
ಪ್ರಾದಾನ್ಮಮೈವ ಭಗವಾನ್ ಧಾರಯಸ್ವೇತಿ ಚಾಬ್ರವೀತ್ ॥೪೬॥

ಅನಂತರ ಆ ಧನುಸ್ಸನ್ನೂ, ಬತ್ತಳಿಕೆಗಳನ್ನೂ ಮತ್ತು ಅಕ್ಷಯಬಾಣಗಳನ್ನೂ ಆ ಭಗವಂತನು ನನಗೇ ಕೊಟ್ಟು ನೀನೇ ಇದನ್ನು ಧರಿಸು ಎಂದು ಹೇಳಿದನು.

ಮಹೇಶ್ವರಃ

ತುಷ್ಟೋಽಸ್ಮಿ ತವ ಕೌಂತೇಯ ಬ್ರೂಹಿ ಕಿಂ ಕರವಾಣಿ ತೇ ।
ಯತ್ ತೇ ಮನೋಗತಂ ವೀರ ತದ್ ಬ್ರೂಹಿ ವಿತರಾಮ್ಯಹಮ್ ।
ಅಮರತ್ವಮಪಾಹಾಯ ಬ್ರೂಹಿ ಯತ್ ತೇ ಮನೋಗತಮ್ ॥೪೭॥

ಕೌಂತೇಯನೇ, ನಾನು ನಿನಗೆ ಸಂತುಷ್ಟನಾಗಿದ್ದೇನೆ. ನಿನಗೆ ಏನು ಮಾಡಲಿ ಎಂದು ಹೇಳು. ವೀರನೇ, ಸಶರೀರವಾಗಿ ಸ್ವರ್ಗಕ್ಕೆ ಹೋಗುವುದನ್ನು ಬಿಟ್ಟು ನಿನ್ನ ಮನಸ್ಸಿನಲ್ಲಿ ಏನಿದೆಯೋ ಅದನ್ನು ಹೇಳು, ನಾನು ನೆರವೇರಿಸುತ್ತೇನೆ.

ಅರ್ಜುನಃ

ತತಃ ಪ್ರಾಂಜಲಿರೇವಾಹಮಸ್ತ್ರೇಷು ಗತಮಾನಸಃ ।
ಪ್ರಣಮ್ಯ ಮನಸಾ ಶರ್ವಂ ತತೋ ವಚನಮಾದದೇ ॥೪೮॥

ಅರ್ಜುನ– ಆಗ ಅಸ್ತ್ರಗಳಲ್ಲಿಯೇ ನೆಟ್ಟ ಮನಸ್ಸುಳ್ಳ ನಾನು ಆ ಶಿವನಿಗೆ ಕೈಗಳನ್ನು ಮುಗಿದು ಮನಸ್ಸಿನಿಂದಲೇ ಪ್ರಣಾಮವನ್ನು ಮಾಡಿ ಮಾತನಾಡಿದೆನು.

ಭಗವಾನ್ ಮೇ ಪ್ರಸನ್ನಶ್ಚೇದೀಪ್ಸಿತೋಽಯಂ ವರೋ ಮಮ ।
ಅಸ್ತ್ರಾಣೀಚ್ಛಾಮ್ಯಹಂ ಜ್ಞಾತುಂ ಯಾನಿ ದೇವೇಷು ಕಾನಿಚಿತ್ ॥೪೯॥

ಪೂಜ್ಯನಾದ ನೀನು ನನ್ನ ಮೇಲೆ ಪ್ರಸನ್ನನಾಗಿರುವುದಾದರೆ ದೇವತೆಗಳಲ್ಲಿ ಇರುವ ಎಲ್ಲಾ ಅಸ್ತ್ರಗಳನ್ನೂ ನಾನು ಪಡೆಯಲು ಇಚ್ಛಿಸುತ್ತೇನೆ. ಇದು ನನಗೆ ಇಷ್ಟವಾದ ವರ (ಎಂದು ಹೇಳಿದೆನು)

ದದಾನೀತ್ಯೇವ ಭಗವಾನಬ್ರವೀತ್ ತ್ರ್ಯಂಬಕಶ್ಚ ಮಾಮ್ ।
ರೌದ್ರಮಸ್ತ್ರಂ ಮದೀಯಂ ತ್ವಾಮುಪಸ್ಥಾಸ್ಯತಿ ಪಾಂಡವ ॥೫೦॥

ಎಲೈ ಪಾಂಡವನೇ, ಭಗವಂತನಾದ ತ್ರ್ಯಂಬಕನು ನಾನು ಕೊಡುವೆನು ಎಂದೇ ಹೇಳಿದನು. ನನ್ನ ಪಾಶುಪತಾಸ್ತ್ರವು ನಿನಗೆ ಬಂದು ಸೇರುವುದು ಎಂದೂ ಹೇಳಿದನು.

ಪ್ರದದೌ ಚ ಮಮ ಪ್ರೀತಃ ಸೋಽಸ್ತ್ರಂ ಪಾಶುಪತಂ ಮಹತ್ ।
ಉವಾಚ ಚ ಮಹಾದೇವೋ ದತ್ತ್ವಾ ಮೇಽಸ್ತ್ರಂ ಸನಾತನಮ್ ॥೫೧॥

ಪ್ರೀತನಾದ ಮಹಾದೇವನು ನನಗೆ ಶ್ರೇಷ್ಠವಾದ ಸನಾತನವಾದ ಪಾಶುಪತಾಸ್ತ್ರವನ್ನು ಕೊಟ್ಟು ಹೀಗೆ ಹೇಳಿದನು.

ಮಹೇಶ್ವರಃ

ನ ಪ್ರಯೋಜ್ಯಂ ಭವೇದೇತನ್ಮಾನುಷೇಷು ಕಥಂಚನ ।
ಜಗದ್ ವಿನಿರ್ದಹೇದೇವಮಲ್ಪತೇಜಸಿ ಪಾತಿತಮ್ ।
ಪೀಡ್ಯಮಾನೇನ ಬಲವತ್ ಪ್ರಯೋಜ್ಯಂ ಸ್ಯಾದ್ ಧನಂಜಯ ॥೫೨॥

ಅಸ್ತ್ರಾಣಾಂ ಪ್ರತಿಘಾತೇ ಚ ಸರ್ವಥೈವ ಪ್ರಯೋಜಯೇತ್ ॥೫೩॥

ಮಹೇಶ್ವರ– ಈ ಅಸ್ತ್ರವನ್ನು ಎಂದೂ ಮನುಷ್ಯರ ಮೇಲೆ ಪ್ರಯೋಗಿಸಬಾರದು. ಈ ಅಸ್ತ್ರವನ್ನು ಅಲ್ಪಸತ್ತ್ವವುಳ್ಳ ಮನುಷ್ಯರ ಮೇಲೆ ಪ್ರಯೋಗಿಸಿದರೆ ಅದು ಜಗತ್ತನ್ನೇ ಸುಟ್ಟೀತು. ಎಲೈ ಧನಂಜಯನೇ, ಬಲಿಷ್ಠನಾದ ಶತ್ರುವಿನಿಂದ ಪೀಡಿಸಲ್ಪಡುವಾಗ ಶತ್ರುಗಳ ಅಸ್ತ್ರಗಳ ಪ್ರತಿಘಾತಕ್ಕಾಗಿ ಇದನ್ನು ಅವಶ್ಯವಾಗಿ ಉಪಯೋಗಿಸಬೇಕು.

ಅರ್ಜುನಃ

ತದಪ್ರತಿಹತಂ ದಿವ್ಯಂ ಸರ್ವಾಸ್ತ್ರಪ್ರತಿಷೇಧನಮ್ ।
ಮೂರ್ತಿಮನ್ಮೇ ಸ್ಥಿತಂ ಪಾರ್ಶ್ವೇ ಪ್ರಸನ್ನೇ ಗೋವೃಷಧ್ವಜೇ ॥೫೪॥

ಅರ್ಜುನ– ಗೋವೃಷಧ್ವಜನಾದ ಶಂಕರನು ಪ್ರಸನ್ನನಾಗಿರುವಾಗ ಪ್ರತಿಘಾತರಹಿತವಾದ ಸರ್ವಾಸ್ತ್ರಪ್ರತಿಘಾತಕವಾದ ಆ ದಿವ್ಯಾಸ್ತ್ರವು ಶರೀರವನ್ನು ಧರಿಸಿ ನನ್ನ ಪಕ್ಕದಲ್ಲಿ ನಿಂತಿತು.

ಉತ್ಸಾದನಮಮಿತ್ರಾಣಾಂ ಪರಸೇನಾನಿಕರ್ತನಮ್ ।
ದುರಾಸದಂ ದುಷ್ಸಹಂ ಸುರದಾನವರಾಕ್ಷಸೈಃ ॥೫೫॥

ಶತ್ರುಗಳನ್ನು ವಿನಾಶಗೊಳಿಸುವ ಪರಸೈನ್ಯವನ್ನು ಕತ್ತರಿಸುವ ಸುರದಾನವ ರಾಕ್ಷಸರು ಯಾರೂ ಅದರ ಹತ್ತಿರ ಸುಳಿಯಲು ಸಾಧ್ಯವಾಗದ ಯಾರೂ ಅದರ ತೇಜಸ್ಸನ್ನು ಸಹಿಸಲಾರದಂತಹ ಆ ದಿವ್ಯಾಸ್ತ್ರವು (ನನ್ನ ಪಾರ್ಶ್ವದಲ್ಲಿ ನಿಂತಿತು).

ಅನುಜ್ಞಾತಸ್ತ್ವಹಂ ತೇನ ತತ್ರೈವ ಸಮುಪಾವಿಶಮ್ ।
ಪ್ರೇಕ್ಷತಶ್ಚೈವ ಮೇ ದೇವಸ್ತತ್ರೈವಾಂತರಧೀಯತ ॥೫೬॥

ನಾನು ಅವನ ಅನುಮತಿಯನ್ನು ಪಡೆದು ಅಲ್ಲಿಯೇ ಕುಳಿತುಕೊಂಡೆನು. ನಾನು ನೋಡುತ್ತಿರುವಂತೆಯೇ ಆ ದೇವನು ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ಯಕ್ಷಯುದ್ಧಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ತೆರಡನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಅರವತ್ಮೂರನೆಯ ಅಧ್ಯಾಯ

ಅರ್ಜುನನಿಂದ ಸ್ವರ್ಗಲೋಕವಾಸದ ಮತ್ತು ಅಸ್ತ್ರಪ್ರಾಪ್ತಿಪ್ರಕಾರದ ಕಥನ.
ವಿದ್ಯಾ ಸಮಾಪ್ತಿಯ ನಂತರ ಇಂದ್ರನಿಗೆ ನಿವಾತ ಕವಚ ವಧೆ
ರೂಪವಾದ ಗುರುದಕ್ಷಿಣಾ ಪ್ರಾರ್ಥನೆ.

ಅರ್ಜುನಃ

ತತಸ್ತಾಮವಸಂ ಪ್ರೀತೋ ರಜನೀಂ ತತ್ರ ಭಾರತ ।
ಪ್ರಸಾದಾದ್ ದೇವದೇವಸ್ಯ ತ್ರ್ಯಂಬಕಸ್ಯ ಮಹಾತ್ಮನಃ ॥೧॥

ಅರ್ಜುನ– ಎಲೈ ಭಾರತನೇ, ಅನಂತರ ಆ ರಾತ್ರಿಯನ್ನು ದೇವದೇವನಾದ ಮಹಾತ್ಮನಾದ ತ್ರ್ಯಂಬಕನ ಅನುಗ್ರಹದಿಂದ ಅಲ್ಲಿಯೇ ಕಳೆದೆನು.

ವ್ಯುಷಿತೋ ರಜನೀಂ ಚಾಹಂ ಕೃತ್ವಾ ಪೌರ್ವಾಹ್ಣಿಕೀಃ ಕ್ರಿಯಾಃ ।
ಅಪಶ್ಯಂ ತಂ ದ್ವಿಜಶ್ರೇಷ್ಠಂ ದೃಷ್ಟವಾನಸ್ಮಿ ಯಂ ಪುರಾ ॥೨॥

ರಾತ್ರಿಯು ಕಳೆದು ನಾನು ಪ್ರಾತರಾಹ್ನಿಕ ಕ್ರಿಯೆಗಳನ್ನು ಮಾಡಿದ ಮೇಲೆ ಹಿಂದೆ ನೋಡಿದ ಆ ದ್ವಿಜಶ್ರೇಷ್ಠನನ್ನು ನೋಡಿದೆನು.

ತಸ್ಮೈ ಚಾಹಂ ಯಥಾವೃತ್ತಂ ಸರ್ವಮೇವ ನ್ಯವೇದಯಮ್ ।
ಭಗವಂತಂ ಮಹಾದೇವಂ ಸಮೇತೋऽಸ್ಮೀತಿ ಭಾರತ ॥೩॥

ಎಲೈ ಭಾರತನೇ, ನಾನು ಅವನಿಗೆ ಭಗವಂತನಾದ ಮಹಾದೇವನನ್ನು ನೋಡಿದೆನೆಂದು ನಡೆದ ಎಲ್ಲಾವೃತ್ತಾಂತವನ್ನೂ ನಡೆದಂತೆಯೇ ನಿವೇದಿಸಿದೆನು.

ಸ ಮಾಮುವಾಚ ರಾಜೇಂದ್ರ ಪ್ರೀಯಾಮಾಣೋ ದ್ವಿಜೋತ್ತಮಃ ।
ದೃಷ್ಟಸ್ತ್ವಯಾ ಮಹಾದೇವೋ ಯಥಾ ನಾನ್ಯೇನ ಕೇನಚಿತ್ ॥೪॥

ಎಲೈ ರಾಜೇಂದ್ರನೇ, ಆ ದ್ವಿಜೋತ್ತಮನು ಸಂತೋಷದಿಂದ ನನ್ನನ್ನು ಕುರಿತು ನೀನು ಬೇರೆ ಯಾರೂ ನೋಡದಿದ್ದ ರೀತಿಯಲ್ಲಿ ಮಹಾದೇವನನ್ನು ನೋಡಿದ್ದೀಯೆ ಎಂದು ಹೇಳಿದನು.

ಸಮೇತ್ಯ ಲೋಕಪಾಲೈಸ್ತು ಸರ್ವೈರ್ವೈವಸ್ವತಾದಿಭಿಃ ।
ದ್ರಷ್ಟಾಸ್ಯನಘ ದೇವೇಂದ್ರಂ ಸ ಚ ತೇಽಸ್ತ್ರಾಣಿ ದಾಸ್ಯತಿ ॥೫॥

ಎಲೈ ಅನಘನೇ, ನೀನು ಲೋಕಪಾಲಕರಾದ ಯಮಾದಿ ಸರ್ವದೇವತೆಗಳನ್ನೂ ಸಂಧಿಸಿ ದೇವೇಂದ್ರನನ್ನು ನೋಡುವಿ. ಅವನು ನಿನಗೆ ಅಸ್ತ್ರಗಳನ್ನು ಕೊಡುವನು.

ಏವಮುಕ್ತ್ವಾ ಸ ಮಾಂ ರಾಜನ್ನಾಶ್ಲಿಷ್ಯ ಚ ಪುನಃ ಪುನಃ ।
ಅಗಚ್ಛತ್ ಸ ಯಥಾಕಾಮಂ ಬ್ರಾಹ್ಮಣಃ ಸೂರ್ಯಸನ್ನಿಭಃ ॥೬॥

ಹೀಗೆ ಹೇಳಿ ಆ ಸೂರ್ಯಪ್ರಭೆಯುಳ್ಳ ಬ್ರಾಹ್ಮಣನು ನನ್ನನ್ನು ಪುನಃ ಪುನಃ ಆಲಿಂಗಿಸಿ ಅವನಿಗಿಷ್ಟವಾದ ದಾರಿಯಲ್ಲಿ ಹೊರಟುಹೋದನು.

ಅಥಾಪರಾಹ್ಣೇ ತಸ್ಯಾಹ್ನಃ ಪ್ರಾವಾತ್ ಪುಣ್ಯಃ ಸಮೀರಣಃ ।
ಪುನರ್ನವಮಿಮಂ ಲೋಕಂ ಕುರ್ವನ್ನಿವ ಸಪತ್ನಹನ್ ॥೭॥

ಎಲೈ ಶತ್ರುನಾಶನನೇ, ಆ ದಿನ ಅಪರಾಹ್ಣದಲ್ಲಿ ಈ ಲೋಕವನ್ನು ಪುನಃ ನವೀಕರಿಸುವಂತೆ ಶುಭವಾದ ವಾಯುವು ಬೀಸಿತು.

ದಿವ್ಯಾನಿ ಚೈವ ಮಾಲ್ಯಾನಿ ಸುಗಂಧೀನಿ ನವಾನಿ ಚ ।
ಶೈಶಿರಸ್ಯ ಗಿರೇಃ ಪಾದೇ ಪ್ರಾದುರಾಸನ್ ಸಮೀಪತಃ ॥೮॥

ಆ ಹಿಮಾಲಯ ಪರ್ವತದ ಪಾದದಲ್ಲಿ ದಿವ್ಯವಾದ ಸುಗಂಧಯುಕ್ತವಾದ ಹೊಸ ಪುಷ್ಪಗಳು ಬಿದ್ದವು.

ವಾದಿತ್ರಾಣಿ ಚ ದಿವ್ಯಾನಿ ಸುಘೋರಾಣಿ ಸಮಂತತಃ ।
ಸ್ತುತಯಶ್ಚೇಂದ್ರಸಂಯುಕ್ತಾ ಅಶ್ರೂಯಂತ ಮನೋಹರಾಃ ॥೯॥

ದಿವ್ಯವಾದ ಸುಘೋರವಾದ ವಾದ್ಯಗಳು ಮೊಳಗಿದವು. ಮನೋಹರವಾದ ಇಂದ್ರಸ್ತೋತ್ರಗಳು ಕೇಳಿಬಂದವು.

ಗಣಾಶ್ಚಾಪ್ಸರಸಾಂ ತತ್ರ ಗಂಧರ್ವಾಣಾಂ ತಥೈವ ಚ ।
ಪುರಸ್ತಾದ್ ದೇವದೇವಸ್ಯ ಜಗುರ್ಗೀತಾನಿ ಸರ್ವಶಃ ॥೧೦॥

ಅಲ್ಲಿ ದೇವದೇವನಾದ ಇಂದ್ರನ ಮುಂದೆ ಗಂಧರ್ವರ ಗಣಗಳು ಮತ್ತು ಅಪ್ಸರೆಯರ ಗಣಗಳು ಎಲ್ಲಕಡೆಗಳಲ್ಲಿಯೂ ಗಾನವನ್ನು ಮಾಡುತ್ತಿದ್ದರು.

ಮರುತಾಂ ಚ ಗಣಾಸ್ತತ್ರ ದೇವಯಾನೈರುಪಾಗಮನ್ ।
ಮಹೇಂದ್ರಾನುಚರಾ ಯೇ ಚ ಯೇ ಚ ಸದ್ಮನಿವಾಸಿನಃ ॥೧೧॥

ಮಹೇಂದ್ರನ ಅನುಚರರು ಮತ್ತು ಮಹೇಂದ್ರನ ಭವನದಲ್ಲಿ ವಾಸಿಸುವವರು ಮತ್ತು ಮರುತ್ತುಗಳ ಗಣಗಳೂ ಸಹ ದೇವಯಾನಗಳಲ್ಲಿ ಅಲ್ಲಿಗೆ ಬಂದವು.

ತತೋ ಮರುತ್ವಾನ್ ಹರಿಭಿರ್ಯುಕ್ತೈರ್ವಾಹ್ಯೈಃ ಸ್ವಲಂಕೃತೈಃ ।
ಶಚೀಸಹಾಯಸ್ತತ್ರಾಯಾತ್ ಸಹ ಸರ್ವೈಸ್ತದಾಮರೈಃ ॥೧೨॥

ಅನಂತರ ದೇವೇಂದ್ರನು ಅಶ್ವಗಳನ್ನು ಹೂಡಿದ ಚೆನ್ನಾಗಿ ಅಲಂಕೃತವಾದ ತನ್ನ ರಥದಲ್ಲಿ ಶಚೀಸಹಾಯನಾಗಿ ಎಲ್ಲಾ ದೇವತೆಗಳ ಜೊತೆಯಲ್ಲಿ ಅಲ್ಲಿಗೆ ಬಂದನು.

ಏತಸ್ಮಿನ್ನೇವ ಕಾಲೇ ತು ಕುಬೇರೋ ನರವಾಹನಃ ।
ದರ್ಶಯಾಮಾಸ ಮಾಂ ರಾಜಂಲ್ಲಕ್ಷ್ಮ್ಯಾ ಪರಮಯಾ ಯುತಃ ॥೧೩॥

ಎಲೈ ರಾಜನೇ, ಆ ವೇಳೆಗೆ ಸರಿಯಾಗಿ ನರವಾಹನನಾದ ಕುಬೇರನು ತನ್ನ ಪರಮಕಾಂತಿಯಿಂದೊಡಗೂಡಿ ನನಗೆ ದರ್ಶನವನ್ನು ಕೊಟ್ಟನು.

ದಕ್ಷಿಣಸ್ಯಾಂ ದಿಶಿ ಯಮಂ ಪ್ರತ್ಯಪಶ್ಯಂ ವ್ಯವಸ್ಥಿತಮ್ ।
ವರುಣಂ ದೇವರಾಜಂ ಚ ಯಥಾಸ್ಥಾನಮವಸ್ಥಿತಮ್ ॥೧೪॥

ತೇ ಮಾಮೂಚುರ್ಮಹಾರಾಜ ಸಾಂತಯಿತ್ವಾ ನರರ್ಷಭ ॥೧೪.೧॥

ದಕ್ಷಿಣದಿಕ್ಕಿನಲ್ಲಿ ಅವಸ್ಥಿತನಾದ ಯಮನನ್ನು ನೋಡಿದೆನು. ಅದರಂತೆ ದೇವರಾಜನಾದ ವರ್ಣನು ತನ್ನ ದಿಕ್ಕಾದ ಪಶ್ಚಿಮದಲ್ಲಿ ಅವಸ್ಥಿತನಾಗಿರುವುದನ್ನು ನೋಡಿದೆನು. ಎಲೈ ಮಹಾರಾಜನೇ, ನರಶ್ರೇಷ್ಠನೇ, ಅವರು ನನ್ನನ್ನು ಸಮಾಧಾನ ಪಡಿಸಿ ಹೀಗೆ ಮಾತನಾಡಿದರು.

ಸವ್ಯಸಾಚಿನ್ ನಿರೀಕ್ಷಾಸ್ಮಾಂಲ್ಲೋಕಪಾಲಾನವಸ್ಥಿತಾನ್ ॥೧೫॥

ಸುರಕಾರ್ಯಾರ್ಥಸಿದ್ಧ್ಯರ್ಥಂ ದೃಷ್ಟವಾನಸಿ ಶಂಕರಮ್ ।
ಅಸ್ಮತ್ತೋಽಪಿ ಗೃಹಾಣ ತ್ವಮಸ್ತ್ರಾಣೀತಿ ಸಮಂತತಃ ॥೧೬॥

ಎಲೈ ಸವ್ಯಸಾಚಿಯೇ, ನಿನ್ನ ಎದುರಿಗೆ ನಿಂತಿರುವ ಲೋಕಪಾಲಕರಾದ ನಮ್ಮನ್ನು ನೋಡು. ಸುರಕಾರ್ಯಸಿದ್ಧಿಗಾಗಿ ನೀನು ಶಂಕರನನ್ನು ನೋಡಿದವನಾಗಿದ್ದೀಯೇ. ನಮ್ಮಿಂದಲೂ ಸಹ ಎಲ್ಲರಿಂದಲೂ ಅಸ್ತ್ರಗಳನ್ನು ನೀನು ಸ್ವೀಕರಿಸು ಎಂದು ಹೇಳಿದರು.

ಅರ್ಜುನಃ

ತತೋಽಹಂ ಪ್ರಯತೋ ಭೂತ್ವಾ ಪ್ರಣಿಪತ್ಯ ಸುರರ್ಷಭಾನ್ ।
ಪ್ರತ್ಯಗೃಹ್ಣಂ ತದಾಽಸ್ತ್ರಾಣಿ ಮಹಾಂತಿ ವಿಧಿವದ್ ವಿಭೋ ॥೧೭॥

ಅರ್ಜುನ– ಎಲೈ ವಿಭುವೇ, ಅನಂತರ ನಾನು ವಾಗಾದಿ ನಿಯಮವುಳ್ಳವನಾಗಿ ದೇವಶ್ರೇಷ್ಠರಾದ ಅವರಿಗೆ ನಮಸ್ಕರಿಸಿ ಆ ಮಹಾಸ್ತ್ರಗಳನ್ನು ವಿಧಿಪೂರ್ವಕವಾಗಿ ಸ್ವೀಕರಿಸಿದೆನು.

ಗೃಹೀತಾಸ್ತ್ರಸ್ತತೋ ದೇವೈರನುಜ್ಞಾತೋಽಸ್ಮಿ ಭಾರತ ।
ಅಥ ದೇವಾ ಯಯುಃ ಸರ್ವೇ ಯಥಾಗತಮರಿಂದಮ ॥೧೮॥

ಎಲೈ ಭಾರತನೇ, ಅಸ್ತ್ರಗಳನ್ನು ತೆಗೆದುಕೊಂಡ ಮೇಲೆ ದೇವತೆಗಳಿಂದ ಅನುಮತಿಯನ್ನು ಪಡೆದೆನು. ಅರಿಂದಮನೇ, ಅನಂತರ ದೇವತೆಗಳು ತಾವು ಬಂದ ದಾರಿಯಲ್ಲಿಯೇ ಹಿಂದಿರುಗಿದರು.

ಮಘವಾನಪಿ ದೇವೇಶೋ ರಥಮಾರುಹ್ಯ ಸುಪ್ರಭಮ್ ।
ಉವಾಚ ಭಗವಾನ್ ಸ್ವರ್ಗಂ ಗಂತವ್ಯಂ ಫಲ್ಗುನ ತ್ವಯಾ ॥೧೯॥

ದೇವೇಶನಾದ ಪೂಜ್ಯನಾದ ಇಂದ್ರನೂ ಸಹ ತನ್ನ ಕಾಂತಿಯುಕ್ತವಾದ ರಥವನ್ನು ಏರಿ ಅರ್ಜುನನೇ ನೀನು ಸ್ವರ್ಗಕ್ಕೆ ಬರಬೇಕು ಎಂದು ಹೇಳಿದನು.

ಪುರೈವಾಗಮನಾದಸ್ಮಾದ್ ವೇದಾಹಂ ತ್ವಾಂ ಧನಂಜಯ ।
ಅತಃ ಪರಂ ತ್ವಹಂ ವೈ ತ್ವಾಂ ದರ್ಶಯೇ ಭರತರ್ಷಭ ॥೨೦॥

ಎಲೈ ಧನಂಜಯನೇ, ನೀನು ಇಲ್ಲಿ ಬರುವುದಕ್ಕಿಂತ ಮೊದಲೇ ನಾನು ನಿನ್ನನ್ನು ತಿಳಿದಿದ್ದೆ. ಎಲೈ ಭರತರ್ಷಭನೇ, ಇಲ್ಲಿಂದ ಮುಂದಕ್ಕೆ ನಾನು ನಿನಗೆ ಸ್ವರ್ಗವನ್ನು ತೋರಿಸುವೆನು.

ತ್ವಯಾ ಹಿ ತೀರ್ಥೇಷು ಪುರಾ ಸಮಾಪ್ಲಾವಃ ಕೃತೋಽಸಕೃತ್ ।
ತಪಶ್ಚೇದಂ ಮಹತ್ತಪ್ತಂ ಸ್ವರ್ಗಂ ಗಂತಾಸಿ ಪಾಂಡವ ॥೨೧॥

ಭೂಯಶ್ಚೈವ ಚ ತಪ್ತವ್ಯಂ ತಪಶ್ಚರಣಮುತ್ತಮಮ್ ॥೨೨॥

ನೀನು ಹಿಂದೆ ಅನೇಕ ತೀರ್ಥಗಳಲ್ಲಿ ಅನೇಕ ಬಾರಿ ಸ್ನಾನವನ್ನು ಮಾಡಿದ್ದೀಯೆ. ಮತ್ತು ಈ ಮಹಾತಪಸ್ಸನ್ನೂ ಮಾಡಿದ್ದೀಯೆ. ಎಲೈ ಪಾಂಡವನೇ, ನೀನು ಸ್ವರ್ಗಕ್ಕೆ ಹೋಗುವವನಾಗುವಿ. ಅದಕ್ಕಾಗಿ ಪುನಃ ಶ್ರೇಷ್ಠವಾದ ತಪಸ್ಸನ್ನು ಆಚರಿಸಬೇಕು.

ಸ್ವರ್ಗಂ ತ್ವವಶ್ಯಂ ಗಂತವ್ಯಂ ತ್ವಯಾ ಶತ್ರುನಿಷೂದನ ।
ಮಾತಲಿರ್ಮನ್ನಿಯೋಗಾತ್ ತ್ವಾಂ ತ್ರಿದಿವಂ ಪ್ರಾಪಯಿಷ್ಯತಿ ॥೨೩॥

ಎಲೈ ಶತ್ರುಸೂದನನೇ, ನೀನು ಅವಶ್ಯವಾಗಿ ಸ್ವರ್ಗಕ್ಕೆ ಬರಬೇಕು. ನನ್ನ ಆದೇಶದಂತೆ ನನ್ನ ಸಾರಥಿಯಾದ ಮಾತಲಿಯು ನಿನ್ನನ್ನು ಸ್ವರ್ಗಕ್ಕೆ ಕರೆದೊಯ್ಯುವನು.

ವಿದಿತಸ್ತ್ವಂ ಹಿ ದೇವಾನಾಂ ಮುನೀನಾಂ ಚ ಮಹಾತ್ಮನಾಮ್ ।
ಇಹಸ್ಥಃ ಪಾಂಡವಶ್ರೇಷ್ಠ ತಪಃ ಕುರ್ವನ್ ಸುದುಷ್ಕರಮ್ ॥೨೪॥

ಎಲೈ ಪಾಂಡವಶ್ರೇಷ್ಠನೇ, ನೀನು ಇಲ್ಲಿದ್ದು ಬಹಳ ದುಷ್ಕರವಾದ ತಪಸ್ಸನ್ನು ಮಾಡುತ್ತಿರುವಾಗಲೇ ನಿನ್ನನ್ನು ದೇವತೆಗಳೂ ಮತ್ತು ಮಹಾತ್ಮರಾದ ಎಲ್ಲ ಋಷಿಗಳೂ ಗಮನಿಸಿದ್ದಾರೆ.

ಅರ್ಜುನಃ

ತತೋಽಹಮಬ್ರುವಂ ಶಕ್ರಂ ಪ್ರಸೀದ ಭಗವನ್ ಮಮ ।
ಆಚಾರ್ಯಂ ವರಯೇಯಂ ತ್ವಾಮಸ್ತ್ರಾರ್ಥಂ ತ್ರಿದಶೇಶ್ವರ ॥೨೫॥

ಅರ್ಜುನ– ಆಗ ನಾನು ಇಂದ್ರನನ್ನು ಕುರಿತು ಪೂಜ್ಯನೇ, ನನಗೆ ಅನುಗ್ರಹವನ್ನು ಮಾಡು. ತ್ರಿದಶೇಶ್ವರನೇ ನಾನು ಅಸ್ತ್ರದ ಸಲುವಾಗಿ ನಿನ್ನನ್ನು ಗುರುವೆಂದು ವರಣೆ ಮಾಡುತ್ತೇನೆ ಎಂದ ಹೇಳಿದನು.

ಇಂದ್ರಃ

ಕ್ರೂರಕರ್ಮಾಸ್ತ್ರವಿತ್ ತಾತ್ ಭವಿಷ್ಯಸಿ ಪರಂತಪ ।
ಯದರ್ಥಮಸ್ತ್ರಾಣೀಪ್ಸಸ್ತ್ವಂ ತಂ ಕಾಮಂ ಪಾಂಡವಾಪ್ನುಹಿ ॥೨೬॥

ಇಂದ್ರ– ಪರಂತಪನೇ, ಅಸ್ತ್ರಪ್ರಾಪ್ತಿಯಾದ ಮೇಲೆ ನೀನು ಘೋರಕರ್ಮವನ್ನು ಮಾಡುವವನಾಗುವಿ. ಎಲೈ ಪಾಂಡವನೇ, ಯಾವ ಉದ್ದೇಶದಿಂದ ನೀನು ಅಸ್ತ್ರಗಳನ್ನು ಪಡೆಯಲು ಬಯಸುತ್ತಿದ್ದೀಯೋ ಆ ನಿನ್ನ ಆಸೆಯು ನೆರವೇರಲಿ.

ಅರ್ಜುನಃ

ತತೋಽಹಮಬ್ರುವಂ ನಾಹಂ ದಿವ್ಯಾನ್ಯಸ್ತ್ರಾಣಿ ಶತ್ರುಹನ್ ।
ಮಾನುಷೇಷು ಪ್ರಯೋಕ್ಷ್ಯಾಮಿ ವಿನಾಽಸ್ತ್ರಪ್ರತಿಘಾತನಾತ್ ॥೨೭॥

ಅರ್ಜುನ– ಎಲೈ ಶತ್ರುಸೂದನನೇ, ನಾನು ಆ ದಿವ್ಯಾಸ್ತ್ರಗಳನ್ನು ಮನುಷ್ಯರ ಮೇಲೆ ಪ್ರಯೋಗಿಸುವುದಿಲ್ಲ. ಶತ್ರುವಿನ ಅಸ್ತ್ರದ ಪ್ರತಿಘಾತಕ್ಕಾಗಿ ಮಾತ್ರ ಪ್ರಯೋಗಿಸುವೆನು ಎಂದು ಹೇಳಿದೆನು.

ತಾನಿ ದಿವ್ಯಾನಿ ಮೇಽಸ್ತ್ರಾಣಿ ಪ್ರಯಚ್ಛ ವಿಬುಧಾಧಿಪ ।
ಲೋಕಾಂಶ್ಚಾಸ್ತ್ರಜಿತಾನ್ ಪಶ್ಚಾಲ್ಲಭೇಯಂ ಸುರಪುಂಗವ ॥೨೮॥

ಎಲೈ ವಿಭುಧಾಧಿಪನೇ, ನನಗೆ ಆ ದಿವ್ಯಾಸ್ತ್ರಗಳನ್ನು ನೀಡು. ಸುರಪುಂಗವನೇ, ನಾನು ಆ ಅಸ್ತ್ರಗಳನ್ನು ಪಡೆದು ಅನಂತರ ಅಸ್ತ್ರದಿಂದ ಜಿತವಾದ ಲೋಕಗಳನ್ನು ಹೊಂದುವೆನು ಎಂದು ಹೇಳಿದೆನು.

ಇಂದ್ರಃ

ಪರೀಕ್ಷಾರ್ಥಂ ಮಯೈತತ್ ತೇ ವಾಕ್ಯಮುಕ್ತಂ ಧನಂಜಯ ।
ಮಮಾತ್ಮಜಸ್ಯ ವಚನಂ ಸೂಪಪನ್ನಮಿದಂ ತವ ॥೨೯॥

ಇಂದ್ರ– ಧನಂಜಯನೇ, ನಿನ್ನನ್ನು ಪರೀಕ್ಷಿಸುವ ಸಲುವಾಗಿ ನಾನು ಈ ಮಾತನ್ನು ಹೇಳಿದೆನು. ನನ್ನ ಪುತ್ರನಾದ ನಿನ್ನ ಇಂತಹ ಉತ್ತರ ವಚನವು ಬಹಳ ಯೋಗ್ಯವಾಗಿಯೇ ಇದೆ.

ಶಿಕ್ಷಾಮಿ (ಶಿಕ್ಷ ಮೇ) ಭವನಂ ಗತ್ವಾ ಸರ್ವಾಣ್ಯಸ್ತ್ರಾಣಿ ಭಾರತ ।
ವಾಯೋರಗ್ನೇರ್ವಸುಭ್ಯೋಽಪಿ ವರುಣಾತ್ ಸಮರುದ್ಗಣಾತ್ ॥೩೦॥

ಎಲೈ ಭಾರತನೇ, ನಿನ್ನನ್ನು ನನ್ನ ಮನೆಗೆ ಕರೆದುಕೊಂಡು ಹೋಗಿ ವಾಯು, ಅಗ್ನಿ, ವಸು, ವರುಣ, ಮರುದ್ಗಣ ಇವರ ಅಸ್ತ್ರವನ್ನು ಉಪದೇಶಕೊಡುತ್ತೇನೆ.

ಸಾಧ್ಯಂ ಪೈತಾಮಹಂ ಚೈವ ಗಂಧರ್ವೋರಗರಕ್ಷಸಾಮ್ ।
ವೈಷ್ಣವಾನಿ ಚ ಸರ್ವಾಣಿ ನೈರ್ಋತಾನಿ ತಥೈವ ಚ ।
ಮದ್ಗತಾನಿ ಚ ಜಾನೀಹಿ ಸರ್ವಾಸ್ತ್ರಾಣಿ ಕುರೂದ್ವಹ ॥೩೧॥

ಹಾಗೆಯೇ ಸಾಧ್ಯರ, ಪಿತಾಮಹನ, ಗಂಧರ್ವೋರಗರಾಕ್ಷಸರ ಅಸ್ತ್ರಗಳನ್ನೂ, ಎಲ್ಲಾ ವೈಷ್ಣವಾಸ್ತ್ರಗಳನ್ನೂ, ನೈರ್ಋತಾಸ್ತ್ರಗಳನ್ನೂ ಉಪದೇಶ ಕೊಡುತ್ತೇನೆ. ಎಲೈ ಕುರೂದ್ವಹನೇ, ಆ ಎಲ್ಲಾ ಅಸ್ತ್ರಗಳೂ ನನ್ನಲ್ಲಿ ಇವೆ ಎಂದು ತಿಳಿ.

ಅರ್ಜುನಃ

ಏವಮುಕ್ತ್ವಾ ತು ಮಾಂ ಶಕ್ರಸ್ತತ್ರೈವಾಂತರಧೀಯತ ॥೩೨॥

ಅರ್ಜುನ– ಹೀಗೆ ನನ್ನನ್ನು ಕುರಿತು ಹೇಳಿ ಇಂದ್ರನು ಅಲ್ಲಿಯೇ ಅಂತರ್ಧಾನವನ್ನು ಹೊಂದಿದನು.

ಅಥಾಪಶ್ಯಂ ಹರಿಯುಜಂ (ತಂ) ರಥಮೈಂದ್ರಮುಪಸ್ಥಿತಮ್ ।
ದಿವ್ಯಂ ಮಾಯಾಮಯಂ ಪುಣ್ಯಂ ಯತ್ತಂ ಮಾತಲಿನಾ ನೃಪ ॥೩೩॥

ಎಲೈ ರಾಜನೇ, ಅನಂತರ ನಾನು ಅಶ್ವಗಳನ್ನು ಹೂಡಿದ ದಿವ್ಯವಾದ ಮಾಯಾಮಯವಾದ ಪವಿತ್ರವಾದ ಮಾತಲಿಯಿಂದ ನಿಯಂತ್ರಿಸಲ್ಪಟ್ಟ ರಥವನ್ನು ನೋಡಿದೆನು.

ಲೋಕಪಾಲೇಷು ಯಾತೇಷು ಮಾಮುವಾಚಾಥ ಮಾತಲಿಃ ।
ದ್ರಷ್ಟುಮಿಚ್ಛತಿ ಶಕ್ರಸ್ತ್ವಾಂ ದೇವರಾಜೋ ಮಹಾದ್ಯುತೇ ॥೩೪॥

ಲೋಕಪಾಲಕರು ಹೊರಟು ಹೋದಮೇಲೆ ಮಾತಲಿಯು ನನ್ನನ್ನು ಕುರಿತು ಮಹಾದ್ಯುತಿಯೇ, ದೇವರಾಜನಾದ ಇಂದ್ರನು ನಿನ್ನನ್ನು ನೋಡಲು ಬಯಸುತ್ತಾನೆ ಎಂದು ಹೇಳಿದನು.

ಸಂಸಿದ್ಧ್ಯಸ್ವ ಮಹಾಬಾಹೋ ಕುರು ಕಾರ್ಯಮನಂತರಮ್ ।
ಪಶ್ಯ ಪುಣ್ಯಕೃತಾಂಲ್ಲೋಕಾನ್ ಸಶರೀರೋ ದಿವಂ ವ್ರಜ ॥೩೫॥

ಮಹಾಬಾಹುವೇ, ಮೊದಲು ಸಿದ್ಧನಾಗು. ಅದಕ್ಕೆ ಬೇಕಾದ ಕಾರ್ಯವನ್ನು ಮಾಡು. ಉಳಿದ ಕಾರ್ಯವನ್ನು ಅನಂತರ ಮಾಡು. ಸಶರೀರನಾಗಿ ಸ್ವರ್ಗಕ್ಕೆ ಹೋಗಿ ಪುಣ್ಯವನ್ನು ಸಂಪಾದಿಸಿದವರ ಲೋಕವನ್ನು ನೋಡು.

ಅರ್ಜುನಃ

ಇತ್ಯುಕ್ತೋಽಹಂ ಮಾತಲಿನಾ ಗಿರಿಮಾಮಂತ್ರ್ಯ ಶೈಶಿರಮ್ ।
ಪ್ರದಕ್ಷಿಣಮುಪಾವೃತ್ಯ ಸಮಾರೋಹಂ ರಥೋತ್ತಮಮ್ ।
ಚೋದಯಾಮಾಸ ಸ ಹಯಾನ್ ಮನೋಮಾರುತರಂಹಸಃ ॥೩೬॥

ಅರ್ಜುನ– ಮಾತಲಿಯಿಂದ ಹೀಗೆ ಹೇಳಲ್ಪಟ್ಟ ನಾನು ಆ ಹಿಮಾಲಯ ಪರ್ವತವನ್ನು ಆಮಂತ್ರಿಸಿ ಪ್ರದಕ್ಷಿಣೆಯನ್ನು ಮಾಡಿ ಆ ಶ್ರೇಷ್ಠವಾದ ರಥವನ್ನು ಹತ್ತಿದೆನು. ಮನೋವೇಗ ಮತ್ತು ವಾಯುವೇಗವುಳ್ಳ ಆ ಅಶ್ವಗಳನ್ನು ಮಾತಲಿಯು ನಡೆಸಿದನು.

ಮಾತಲಿರ್ಹಯತತ್ತ್ವಜ್ಞೋ ಸರ್ವಶಾಸ್ತ್ರವಿಶಾರದಃ ।
ಅವೈಕ್ಷತ ಚ ಮೇ ವಕ್ತ್ರಂ ಸ್ಥಿತಸ್ಯಾಥ ಸ ಸಾರಥಿಃ ॥೩೭॥

ಹಯತತ್ತ್ವಜ್ಞನೂ, ಸರ್ವಶಾಸ್ತ್ರವಿಶಾರದನೂ ಆದ ಸಾರಥಿಯು ಅಲುಗಾಡದೆ ಕುಳಿತಿದ್ದ ನನ್ನ ಮುಖವನ್ನು ನೋಡಿದನು.

ತಥಾ ಭ್ರಾಂತೇ ರಥೇ ರಾಜನ್ ವಿಸ್ಮಿತಶ್ಚೇದಮಬ್ರವೀತ್ ॥೩೮॥

ಎಲೈ ರಾಜನೇ, ಹಾಗೆ ರಥವು ಹೊರಡುತ್ತಿರಲು ವಿಸ್ಮಿತನಾಗಿ ಈ ಮಾತನ್ನಾಡಿದನು.

ಅತ್ಯದ್ಭುತಮಿದಂ ತ್ವದ್ಯ ವಿಚಿತ್ರಂ ಪ್ರತಿಭಾತಿ ಮೇ ।
ಯದಾಸ್ಥಿತೋ ರಥಂ ದಿವ್ಯಂ ಪದಾನ್ನ ಚಲಿತಃ ಪದಮ್ ॥೩೯॥

ಈ ದಿನ ಈ ಘಟನೆಯು ಅತ್ಯದ್ಭುತವಾದುದೆಂದು ನನಗೆ ತೋರುತ್ತದೆ. ಏಕೆಂದರೆ ದಿವ್ಯರಥವನ್ನು ಏರಿದ ನೀನು ಸ್ವಲ್ಪವೂ ಅಲುಗಾಡಲಿಲ್ಲ.

ದೇವರಾಜೋऽಪಿ ಹಿ ಮಯಾ ನಿತ್ಯಮತ್ರೋಪಲಕ್ಷಿತಃ ।
ವಿಚಲನ್ ಪ್ರಥಮೋತ್ಪಾತೇ ಹಯಾನಾಂ ಭರತರ್ಷಭ ॥೪೦॥

ಎಲೈ ಭರತರ್ಷಭನೇ, ಅಶ್ವಗಳ ಮೊದಲ ನೆಗೆತದಲ್ಲಿ ದೇವರಾಜನೂ ಸಹ ತನ್ನ ಸ್ಥಾನದಲ್ಲಿ ಚಲಿಸುವುದನ್ನು ನಾನು ಯಾವಾಗಲೂ ನೋಡುತ್ತೇನೆ.

ತ್ವಂ ಪುನಃ ಸ್ಥಿತ ಏವಾತ್ರ ರಥೇ ಭ್ರಾಂತೇ ಕುರೂದ್ವಹ ।
ಅತಿಶಕ್ರಮಿದಂ ಸರ್ವಂ ತವೇತಿ ಪ್ರತಿಭಾತಿ ಮೇ ॥೪೧॥

ಕುರೂದ್ವಹನೇ, ನೀನು ಮಾತ್ರ ರಥವು ಚಲಿಸಿದಾಗ ಅಲುಗಾಡದೆ ಕುಳಿತಿದ್ದೀಯೆ. ನಿನ್ನ ಈ ಸಾಮರ್ಥ್ಯವು ಇಂದ್ರನ ಸಾಮರ್ಥ್ಯವನ್ನು ಮೀರಿದುದೆಂದು ನನಗೆ ತೋರುತ್ತದೆ.

ಅರ್ಜುನಃ

ಇತ್ಯುಕ್ತ್ವಾऽऽಕಾಶಮಾವಿಶ್ಯ ಮಾತಲಿರ್ವಿಬುಧಾಲಯಾನ್ ।
ದರ್ಶಯಾಮಾಸ ಮೇ ರಾಜನ್ ವಿಮಾನಾನಿ ಚ ಭಾರತ ॥೪೨॥

ಅರ್ಜುನ– ಎಲೈ ಭಾರತನೇ, ಎಲೈ ರಾಜನೇ, ಮಾತಲಿಯು ಹೀಗೆ ಹೇಳಿ ಆಕಾಶಕ್ಕೇರಿ ದೇವತೆಗಳ ನಿವಾಸಗಳನ್ನೂ ಮತ್ತು ವಿಮಾನಗಳನ್ನೂ ನನಗೆ ತೋರಿಸಿದನು.

ನಂದನಾದೀನಿ ದೇವಾನಾಂ ವನಾನ್ಯುಪವನಾನಿ ಚ ।
ದರ್ಶಯಾಮಾಸ ಮೇ ಶೀಘ್ರಂ ಮಾತಲಿಃ ಶಕ್ರಸಾರಥಿಃ ॥೪೩॥

ನಂದನಾದಿ ದೇವವನಗಳನ್ನೂ ಮತ್ತು ಉಪವನಗಳನ್ನೂ ಸಹ ಇಂದ್ರ ಸಾರಥಿಯಾದ ಮಾತಲಿಯು ನನಗೆ ಶೀಘ್ರವಾಗಿ ತೋರಿಸಿದನು.

ತತಃ ಶಕ್ರಸ್ಯ ಭವನಮಪಶ್ಯಮಮರಾವತೀಮ್ ।
ದಿವ್ಯೈಃ ಕಾಮಫಲೈರ್ವೃಕ್ಷೈ ರತ್ನೈಶ್ಚ ಸಮಲಂಕೃತಾಮ್ ॥೪೪॥

ಅನಂತರ ದಿವ್ಯವಾದ ಕಾಮಫಲಗಳುಳ್ಳ ವೃಕ್ಷಗಳಿಂದ ಕೂಡಿದ ಮತ್ತು ರತ್ನಗಳಿಂದ ಅಲಂಕೃತವಾದ ಇಂದ್ರನ ವಾಸಸ್ಥಾನವಾದ ಅಮರಾವತಿ ಪಟ್ಟಣವನ್ನು ನೋಡಿದೆನು.

ನ ತತ್ರ ಸೂರ್ಯಸ್ತಪತಿ ನ ಶೀತೋಷ್ಣೇ ನ ಚ ಕ್ಲಮಃ ।
ನ ಬಾಧತೇ ತತ್ರ ರಜಸ್ತತ್ರಾಸ್ತಿ ನ ಜರಾ ನೃಪ ॥೪೫॥

ಎಲೈ ರಾಜನೇ, ಅಲ್ಲಿ ಸೂರ್ಯನು ತಾಪವನ್ನು ಉಂಟುಮಾಡುವುದಿಲ್ಲ. ಅಲ್ಲಿ ಶೀತೋಷ್ಣಗಳಾಗಲೀ ಅಥವಾ ಆಯಾಸವಾಗಲೀ ಉಂಟಾಗುವುದಿಲ್ಲ. ಅಲ್ಲಿ ಧೂಳಿನ ಬಾಧೆಯಾಗಲೀ ಅಥವಾ ಮುಪ್ಪಾಗಲೀ ಇಲ್ಲ.

ನ ತತ್ರ ಶೋಕೋ ದೈನ್ಯಂ ವಾ ದೌರ್ಬಲ್ಯಂ ಚೋಪಲಕ್ಷ್ಯತೇ ।
ದಿವೌಕಸಾಂ ಮಹಾರಾಜ ನ ಗ್ಲಾನಿರರಿಮರ್ದನ ।
ನ ಕ್ರೋಧಲೋಭೌ ತತ್ರಾಸ್ತಾಂ ಸುರಾದೀನಾಂ ವಿಶಾಂಪತೇ ॥೪೬॥

ಎಲೈ ಅರಿಮರ್ದನನಾದ ರಾಜನೇ, ಅಲ್ಲಿ ದೇವತೆಗಳಿಗೆ ಶೋಕವಾಗಲೀ, ದೈನ್ಯವಾಗಲೀ ಅಥವಾ ದೌರ್ಬಲ್ಯವಾಗಲೀ ಅಥವಾ ಗ್ಲಾನಿಯಾಗಲೀ ಕಂಡುಬರುವುದಿಲ್ಲ. ಎಲೈ ರಾಜನೇ, ಅಲ್ಲಿ ದೇವತೆಗಳಿಗೆ ಕ್ರೋಧಲೋಭಗಳು ಇರಲಿಲ್ಲ.

ನಿತ್ಯತುಷ್ಟಾಶ್ಚ ತೇ ರಾಜನ್ ಪ್ರಾಣಿನಃ ಸುರವೇಶ್ಮನಿ ।
ನಿತ್ಯಪುಷ್ಪಫಲಾಸ್ತತ್ರ ಪಾದಪಾ ಹರಿತಚ್ಛದಾಃ ॥೪೭॥

ಎಲೈ ರಾಜನೇ, ಇಂದ್ರನ ಮನೆಯಲ್ಲಿ ಎಲ್ಲ ಪ್ರಾಣಿಗಳೂ ಯಾವಾಗಲೂ ಸಂತೋಷದಿಂದಿರುತ್ತವೆ. ಹಸಿರು ಎಲೆಗಳ ಹೊದಿಕೆಯಿಂದ ಕೂಡಿದ ವೃಕ್ಷಗಳು ಅಲ್ಲಿ ನಿತ್ಯವೂ ಪುಷ್ಪಫಲಭರಿತವಾಗಿರುತ್ತವೆ.

ಪುಷ್ಕರಿಣ್ಯಶ್ಚ ವಿವಿಧಾಃ ಪದ್ಮಸೌಗಂಧಿಕಾಯುತಾಃ ।
ಶೀತಸ್ತತ್ರ ವವೌ ವಾಯುಃ ಸುಗಂಧೀ ಜೀವನಃ ಶುಚಿಃ ॥೪೮॥

ಅಲ್ಲಿ ಪದ್ಮಸೌಗಂಧಿಕಾದಿ ಪುಷ್ಪಗಳನ್ನೊಳಗೊಂಡ ಅನೇಕ ಪುಷ್ಕರಿಣಿಗಳಿವೆ. ಸುಗಂಧಯುಕ್ತವಾದ ಶುದ್ಧವಾದ ಜೀವನಪ್ರದವಾದ ವಾಯುವು ಅಲ್ಲಿ ತಂಪಾಗಿ ಬೀಸುತ್ತದೆ.

ಸರ್ವರತ್ನವಿಚಿತ್ರಾ ಚ ಭೂಮಿಃ ಪುಷ್ಪವಿಭೂಷಿತಾ ।
ಮೃಗದ್ವಿಜಾಶ್ಚ ಬಹವೋ ರುಚಿರಾ ಮಧುರಸ್ವರಾಃ ॥೪೯॥

ವಿಮಾನಗಾಮಿನಶ್ಚಾತ್ರ ದೃಶ್ಯಂತೇ ಬಹವೋಽಂಬರೇ ॥೫೦॥

ಎಲ್ಲ ರತ್ನಗಳಿಂದ ಅಲಂಕೃತವಾದ ಭೂಮಿಯು ಪುಷ್ಪಗಳಿಂದಲೂ ಅಲಂಕೃತವಾಗಿರುತ್ತವೆ. ಅಲ್ಲಿ ಸುಂದರವಾದ ಮಧುರಸ್ವರವುಳ್ಳ ಅನೇಕ ಮೃಗಪಕ್ಷಿಗಳಿವೆ. ಕೆಲವು ಪಕ್ಷಿಗಳು ಮನೆಯ ಉಪ್ಪರಿಗೆಗಳಲ್ಲೂ, ಇನ್ನೂ ಅನೇಕ ಪಕ್ಷಿಗಳು ಆಕಾಶದಲ್ಲಿಯೂ ಕಂಡುಬರುತ್ತವೆ.

ತತೋಽಪಶ್ಯಂ ವಸೂನ್ ರುದ್ರಾನ್ ಸಾಧ್ಯಾಂಶ್ಚ ಸಮರುದ್ಗಣಾನ್ ।
ಆದಿತ್ಯಾನಶ್ವಿನೌ ಚೈವ ತಾನ್ ಸರ್ವಾನ್ ಪ್ರತ್ಯಪೂಜಯಮ್ ॥೫೧॥

ಅನಂತರ ನಾನು ವಸುಗಳನ್ನೂ, ರುದ್ರರನ್ನೂ, ಮರುದ್ಗಣಗಳಿಂದ ಸಹಿತರಾದ ಸಾಧ್ಯರನ್ನೂ, ಆದಿತ್ಯರನ್ನೂ, ಅಶ್ವಿನೀದೇವತೆಗಳನ್ನೂ ನೋಡಿದೆನು. ಆ ಎಲ್ಲರನ್ನೂ ಪೂಜಿಸಿದೆನು.

ತೇ ಮಾಂ ವೀರ್ಯೇಣ ಯಶಸಾ ತೇಜಸಾ ಚ ಬಲೇನ ಚ ।
ಅಸ್ತ್ರೈಶ್ಚಾಪ್ಯನ್ವಜಾನಂತ ಸಂಗ್ರಾಮೇ ವಿಜಯೇನ ಚ ॥೫೨॥

ಅವರು ನನ್ನನ್ನು ವೀರ್ಯದಿಂದಲೂ, ಕೀರ್ತಿಯಿಂದಲೂ, ತೇಜಸ್ಸಿನಿಂದಲೂ, ಬಲದಿಂದಲೂ, ಅಸ್ತ್ರಗಳಿಂದಲೂ, ಸಂಗ್ರಾಮ ವಿಜಯದಿಂದಲೂ ಅಭಿನಂದಿಸಿ ಆಶೀರ್ವಾದ ಮಾಡಿದರು.

ಪ್ರವಿಶ್ಯ ತಾಂ ಪುರೀಂ ದಿವ್ಯಾಂ ದೇವಗಂಧರ್ವಪೂಜಿತಾಮ್ ।
ದೇವರಾಜಂ ಸಹಸ್ರಾಕ್ಷಮುಪಾತಿಷ್ಠಂ ಕೃತಾಂಜಲಿಃ ॥೫೩॥

ದೇವಗಂಧರ್ವಪೂಜಿತವಾದ ಆ ದಿವ್ಯಪಟ್ಟಣವನ್ನು ಪ್ರವೇಶಮಾಡಿ ನಾನು ದೇವರಾಜನಾದ ಸಹಸ್ರಾಕ್ಷನಾದ ಇಂದ್ರನ ಬಳಿ ಕೈಗಳನ್ನು ಜೋಡಿಸಿ ನಿಂತೆ.

ದದಾವರ್ಘಾಸನಂ ಪ್ರೀತಃ ಶಕ್ರೋ ಮೇ ದದತಾಂ ವರಃ ।
ಬಹುಮಾನಾಚ್ಚ ಗಾತ್ರಾಣಿ ಪಸ್ಪರ್ಶ ಮಮ ವಾಸವಃ ॥೫೪॥

ದಾನಮಾಡುವವರಲ್ಲಿ ಶ್ರೇಷ್ಠನಾದ ಇಂದ್ರನು ಸಂತೋಷದಿಂದ ನನಗೆ ತನ್ನ ಅರ್ಧಾಸನವನ್ನು ಕೊಟ್ಟನು ಮತ್ತು ಇಂದ್ರನು ಬಹುಮಾನದಿಂದ ನನ್ನ ಶರೀರವನ್ನು ನೇವರಿಸಿದನು.

ತತ್ರಾಹಂ ದೇವಗಂಧರ್ವೈಃ ಸಹಿತೋ ಭೂರಿದಕ್ಷಿಣೈಃ ।
ಅಸ್ತ್ರಾರ್ಥಮವಸಂ ಸ್ವರ್ಗೇ ಶಿಕ್ಷಾಣೋಽಸ್ತ್ರಾಣಿ ಭಾರತ ॥೫೫॥

ಎಲೈ ಭಾರತನೇ, ನಾನು ಸ್ವರ್ಗದಲ್ಲಿ ಭೂರಿದಕ್ಷಿಣೆಯನ್ನು ಕೊಡುವ ದೇವಗಂಧರ್ವರಿಂದ ಸಹಿತನಾಗಿ ಅಸ್ತ್ರಗಳನ್ನು ಅಭ್ಯಾಸಮಾಡುತ್ತಾ ಹೊಸ ಅಸ್ತ್ರಗಳನ್ನು ಪಡೆಯುವ ಉದ್ದೇಶದಿಂದ ವಾಸಮಾಡಿದೆನು.

ವಿಶ್ವಾವಸೋಶ್ಚ ವೈ ಪುತ್ರಶ್ಚಿತ್ರಸೇನೋಽಭವತ್ ಸಖಾ ।
ಸ ಚ ಗಾಂಧರ್ವಮಖಿಲಂ ಗ್ರಾಹಯಾಮಾಸ ಮಾಂ ನೃಪ ॥೫೬॥

ವಿಶ್ವಾವಸು ಗಂಧರ್ವನ ಮಗನಾದ ಚಿತ್ರಸೇನನನು ನನಗೆ ಸ್ನೇಹಿತನಾದನು. ಎಲೈ ರಾಜನೇ, ಅವನು ನನಗೆ ಗಂಧರ್ವವಿದ್ಯೆ ಎಲ್ಲವನ್ನೂ ಕಲಿಸಿದನು.

ತತ್ರಾಹಮವಸಂ ರಾಜನ್ ಗೃಹೀತಾಸ್ತ್ರಃ ಸುಪೂಜಿತಃ ।
ಸುಖಿಂ ಶಕ್ರಸ್ಯ ಭವನೇ ಸರ್ವಕಾಮಸಮನ್ವಿತಃ ॥೫೭॥

ಎಲೈ ರಾಜನೇ, ನಾನು ಆ ಇಂದ್ರಭವನದಲ್ಲಿ ಅಸ್ತ್ರಗಳನ್ನು ಸ್ವೀಕರಿಸಿ ಎಲ್ಲರಿಂದಲೂ ಪೂಜಿತನಾಗಿ ಸರ್ವಭೋಗಸಮನ್ವಿತನಾಗಿ ಸುಖವಾಗಿ ವಾಸಮಾಡಿದೆ.

ಶೃಣ್ವನ್ ವೈ ಗೀತಶಬ್ದಂ ಚ ತೂರ್ಯಶಬ್ದಂ ಚ ಪುಷ್ಕಲಮ್ ।
ಪಶ್ಯಂಶ್ಚಾಪ್ಸರಸಃ ಶ್ರೇಷ್ಠಾ ನೃತ್ಯಂತೀರ್ಭರತರ್ಷಭ ॥೫೮॥

ತತ್ಸರ್ವಮನವಜ್ಞಾಯ ತಥ್ಯಂ ವಿಜ್ಞಾಯ ಭಾರತ ।
ಅತ್ಯರ್ಥಂ ಪ್ರತಿಗೃಹ್ಯಾಹಮಸ್ತ್ರೇಷ್ವೇವ ವ್ಯವಸ್ಥಿತಃ ॥೫೯॥

ಗೀತಶಬ್ದ ಮತ್ತು ವಾದ್ಯಗಳ ಶಬ್ದವನ್ನು ಪುಷ್ಕಲವಾಗಿ ಕೇಳುತ್ತಿದ್ದರೂ ನೃತ್ಯ ಮಾಡುವ ಶ್ರೇಷ್ಠರಾದ ಅಪ್ಸರೆಯರನ್ನು ನೋಡುತ್ತಿದ್ದರೂ, ಎಲೈ ಭರತರ್ಷಭನೇ, ನಾನು ಅವೆಲ್ಲವನ್ನೂ ತಿರಸ್ಕರಿಸಿ ಮುಖ್ಯವಾದ ವಿಷಯವನ್ನು ಗಮನಿಸಿ ಅಸ್ತ್ರವಿದ್ಯೆಯಲ್ಲಿಯೇ ಬಹಳವಾಗಿ ನಿರತನಾಗಿದ್ದೆ.

ತತೋಽತುಷ್ಯತ್ ಸಹಸ್ರಾಕ್ಷಸ್ತೇನ ಕಾಮೇನ ಮೇ ವಿಭುಃ ।
ಏವಂ ಮೇ ವಸತೋ ರಾಜನ್ನೇಷ ಕಾಲೋಽತ್ಯಗಾದ್ದಿವಿ ॥೬೦॥

ಆಗ ನನ್ನ ಆಸೆಯನ್ನು ತಿಳಿದ ವಿಭುವಾದ ಇಂದ್ರನು ನನ್ನ ಮೇಲೆ ಸಂತೋಷವನ್ನು ಹೊಂದಿದನು. ಎಲೈ ರಾಜನೇ, ಸ್ವರ್ಗದಲ್ಲಿ ವಾಸಿಸುವ ನನಗೆ ಹೀಗೆ ಕಾಲವು ಕಳೆಯಿತು.

ಕೃತಾಸ್ತ್ರಮತಿವಿಶ್ವಸ್ತಮಥ ಮಾಂ ಹರಿವಾಹನಃ ।
ಸಂಸ್ಪೃಶ್ಯ ಮೂರ್ಧ್ನಿ ಪಾಣಿಭ್ಯಾಮಿದಂ ವಚನಮಬ್ರವೀತ್ ॥೬೧॥

ಅಸ್ತ್ರವನ್ನು ಸ್ವೀಕರಿಸಿ ನಾನು ವಿಶ್ವಾಸದಿಂದಿರುವಾಗ ಹರಿವಾಹನನಾದ ಇಂದ್ರನು ನನ್ನ ತಲೆಯ ಮೇಲೆ ತನ್ನ ಕೈಯನ್ನಿಟ್ಟು ಈ ಮಾತನ್ನು ಆಡಿದನು.

ನ ತ್ವಮದ್ಯ ಯುಧಾ ಜೇತುಂ ಶಕ್ಯಃ ಸುರಗಣೈರಪಿ ।
ಕಿಂ ಪುನರ್ಮಾನುಷೇ ಲೋಕೇ ಮಾನುಷೈರಕೃತಾತ್ಮಭಿಃ ॥೬೨॥

ನಿನ್ನನ್ನು ಈ ದಿನ ಯುದ್ಧದಲ್ಲಿ ದೇವತೆಗಳ ಗಣಗಳೂ ಗೆಲ್ಲಲಾರವು, ಇನ್ನು ದುರ್ಬಲಾತ್ಮರಾದ ಮನುಷ್ಯರು, ಮನುಷ್ಯಲೋಕದಲ್ಲಿ ನಿನ್ನನ್ನು ಗೆಲ್ಲಲಾರರು ಎಂದು ಹೇಳುವುದೇನು?

ಅಪ್ರಮೇಯೋಽಪ್ರಧೃಷ್ಯಶ್ಚ ಯುದ್ಧೇಷ್ವಪ್ರತಿಮಸ್ತಥಾ ।
ಅಜೇಯಸ್ತ್ವಂ ಹಿ ಸಂಗ್ರಾಮೇ ಸರ್ವೈರಪಿ ಸುರಾಸುರೈಃ ॥೬೩॥

ನೀನು ಅಪ್ರಮೇಯನಾಗಿದ್ದೀಯೆ. ಯಾರಿಂದಲೂ ಸೋಲನ್ನು ಅನುಭವಿಸುವುದಿಲ್ಲ. ಯುದ್ಧದಲ್ಲಿ ಅಪ್ರತಿಮನಾದವನು. ಸುರಾಸುರರೆಲ್ಲರೂ ಸೇರಿದರೂ ಸಂಗ್ರಾಮದಲ್ಲಿ ನಿನ್ನನ್ನು ಜಯಿಸಲಾರರು.

ಅರ್ಜುನಃ

ಅಥಾಬ್ರವೀತ್ಪುನರ್ದೇವಃ ಸಂಪ್ರಹೃಷ್ಟತನೂರುಹಃ ।
ಅಸ್ತ್ರಯುದ್ಧೇ ಸಮೋ ವೀರ ನ ತೇ ಕಶ್ಚಿದ್ ಭವಿಷ್ಯತಿ ॥೬೪॥

ಅರ್ಜುನ– ಅನಂತರ ಇಂದ್ರದೇವನು ರೋಮಾಂಚವುಳ್ಳವನಾಗಿ ನನ್ನನ್ನು ಕುರಿತು ಎಲೈ ವೀರನೇ, ಅಸ್ತ್ರಯುದ್ಧದಲ್ಲಿ ನಿನಗೆ ಯಾರೂ ಸಮರಾಗಿರುವುದಿಲ್ಲ.

ಅಪ್ರಮತ್ತಃ ಸದಾ ದಕ್ಷಃ ಸತ್ಯವಾದೀ ಜಿತೇಂದ್ರಿಯಃ ।
ಬ್ರಹ್ಮಣ್ಯಶ್ಚಾಸ್ತ್ರವಿಚ್ಚಾಸಿ ಶೂರಶ್ಚಾಸಿ ಕುರೂದ್ವಹ ॥೬೫॥

ಎಲೈ ಕುರೂದ್ವಹನೇ, ನೀನು ಯಾವಾಗಲೂ ಜಾಗರೂಕನಾಗಿರುವವನು; ದಕ್ಷನಾಗಿರುವವನು, ಸತ್ಯವಾದಿ; ಜಿತೇಂದ್ರಿಯನಾಗಿರುವವನು; ಬ್ರಾಹ್ಮಣರಿಗೆ ಹಿತವನ್ನುಂಟುಮಾಡುವವನು; ಅಸ್ತ್ರಜ್ಞನು; ಶೂರನೂ ಆಗಿದ್ದೀಯೆ.

ಅಸ್ತ್ರಾಣಿ ಸಮವಾಪ್ತಾನಿ ತ್ವಯಾ ದಶ ಚ ಪಂಚ ಚ ।
ಪಂಚಭಿರ್ವಿಧಿಭಿಃ ಪಾರ್ಥ ವಿದ್ಯತೇ ನ ತ್ವಯಾ ಸಮಃ ॥೬೬॥

ನೀನು ಹದಿನೈದು ಅಸ್ತ್ರಗಳನ್ನು ಅವುಗಳ ಐದುವಿಧಿಗಳೊಂದಿಗೆ ಸಂಪಾದಿಸಿದ್ದೀಯೆ. ನಿನಗೆ ಯಾರೂ ಸಮರಲ್ಲ.

ಪ್ರಯೋಗಮುಪಸಂಹಾರಮಾವೃತ್ತಿಂ ಚ ಧನಂಜಯ ।
ಪ್ರಾಯಶ್ಚಿತ್ತಂ ಚ ವೇತ್ಥ ತ್ವಂ ಪ್ರತಿಘಾತಂ ಚ ಸರ್ವಶಃ ॥೬೭॥

ಎಲೈ ಧನಂಜಯನೇ, ಪ್ರಯೋಗ, ಉಪಸಂಹಾರ, ಆವೃತ್ತಿ, ಪ್ರಾಯಶ್ಚಿತ್ತ ಮತ್ತು ಪ್ರತಿಘಾತ ಈ ಐದು ವಿಧಿಗಳನ್ನು ಎಲ್ಲಾ ಅಸ್ತ್ರಗಳಿಗೆ ತಿಳಿದಿದ್ದೀಯೆ.

ತತೋ ಗುರ್ವರ್ಥಕಾಲೋಽಯಂ ಸಮುತ್ಪನ್ನಃ ಪರಂತಪ ।
ಪ್ರತಿಜಾನೀಷ್ವ ತಂ ಕರ್ತುಂ ತತೋ ವೇತ್ಸ್ಯಾಮ್ಯಹಂ ಪರಮ್ ॥೬೮॥

ಆದ್ದರಿಂದ ಎಲೈ ಪರಂತಪನೇ, ಈಗ ಗುರುದಕ್ಷಿಣೆಯನ್ನು ಕೊಡುವ ಕಾಲವು ಬಂದೊದಗಿದೆ. ಗುರುದಕ್ಷಿಣೆಯನ್ನು ಕೊಡುವೆನೆಂದು ಪ್ರತಿಜ್ಞೆಯನ್ನು ಮಾಡು. ಅನಂತರ ಮುಂದಿನ ವಿಷಯವನ್ನು ಹೇಳುತ್ತೇನೆ (ಎಂದು ಹೇಳಿದನು).

ತತೋಽಹಮಬ್ರುವಂ ರಾಜನ್ ದೇವರಾಜಮಿದಂ ವಚಃ ।
ವಿಷಹ್ಯಂ ಯನ್ಮಯಾ ಕರ್ತುಂ ಕೃತಮೇವ ನಿಬೋಧ ತತ್ ॥೬೯॥

ಎಲೈ ರಾಜನೇ, ಆಗ ನಾನು ದೇವರಾಜನನ್ನು ಕುರಿತು ಯಾವುದು ನನ್ನ ಕೈಯಿಂದ ಮಾಡಲು ಸಾಧ್ಯವೋ ಅದನ್ನು ಮಾಡಿದ್ದೇನೆಂದೇ ತಿಳಿ ಎಂದು ಹೇಳಿದೆನು.

ತತೋ ಮಾಮಬ್ರವೀದ್ ರಾಜನ್ ಪ್ರಹಸನ್ ಬಲವೃತ್ರಹಾ ।
ನಾವಿಷಹ್ಯಂ ತವಾದ್ಯಾಸ್ತಿ ತ್ರಿಷು ಲೋಕೇಷು ಕಿಂಚನ ॥೭೦॥

ಆಗ ಬಲವೃತ್ರಸೂದನನಾದ ಇಂದ್ರನು ನಗುತ್ತಾ ನನ್ನನ್ನು ಕುರಿತು ಈ ದಿನ ಮೂರುಲೋಕದಲ್ಲಿ ನೀನು ಮಾಡಲು ಸಾಧ್ಯವಿಲ್ಲದ ಕೆಲಸವು ಯಾವುದೂ ಇಲ್ಲ ಎಂದು ಹೇಳಿದನು.

ನಿವಾತಕವಚಾ ನಾಮ ದಾನವಾ ಮಮ ಶತ್ರವಃ ।
ಸಮುದ್ರಕುಕ್ಷಿಮಾಶ್ರಿತ್ಯ ದುರ್ಗೇ ಪ್ರತಿವಸಂತ್ಯುತ ॥೭೧॥

ನನ್ನ ಶತ್ರುಗಳಾದ ನಿವಾತಕವಚರೆಂಬ ದಾನವರು ಸಮುದ್ರಕುಕ್ಷಿಯನ್ನು ಆಶ್ರಯಿಸಿ ದುರ್ಗದಲ್ಲಿ ವಾಸವನ್ನು ಮಾಡುತ್ತಾರೆ.

ತಿಸ್ರಃ ಕೋಟ್ಯಃ ಸಮಾಖ್ಯಾತಾಸ್ತುಲ್ಯರೂಪಬಲಪ್ರಭಾಃ ।
ತಾಂಸ್ತತ್ರ ಜಹಿ ಕೌಂತೇಯ ಗುರ್ವರ್ಥಸ್ತೇ ಭವಿಷ್ಯತಿ ॥೭೨॥

ಎಲೈ ಕೌಂತೇಯನೇ, ಅವರು ಮೂರುಕೋಟಿ ಸಂಖ್ಯೆಯಲ್ಲಿದ್ದಾರೆ. ಅವರೆಲ್ಲರೂ ಸಮಾನವಾದ ರೂಪ, ಬಲ, ಕಾಂತಿಗಳುಳ್ಳವರು. ಅಲ್ಲಿ ಹೋಗಿ ಅವರನ್ನು ಸಂಹಾರ

ಮಾಡಿದರೆ ಅದು ನೀನು ಕೊಡಬೇಕಾದ ಗುರುದಕ್ಷಿಣೆಯಾಗುವುದು (ಎಂದು ಹೇಳಿದನು).

ಅರ್ಜುನಃ

ತತೋ ಮಾತಲಿಸಂಯುಕ್ತಂ ಮಯೂರವಸುರೋಮಭಿಃ ।
ಹಯೈರುಪೇತಂ ಪ್ರಾದಾನ್ಮೇ ರಥಂ ದಿವ್ಯಂ ಮಹಾಪ್ರಭಮ್ ॥೭೩॥

ಅರ್ಜುನ– ಅನಂತರ ಮಾತಲಿಯಿಂದ ಕೂಡಿದ ನವಿಲಿನ ಬಣ್ಣದ ರೋಮಗಳನ್ನು ಹೊಂದಿದ ಕುದುರೆಗಳನ್ನು ಹೂಡಿದ ಮಹಾಕಾಂತಿಯುಳ್ಳ ದಿವ್ಯವಾದ ರಥವನ್ನು ನನಗೆ ಕೊಟ್ಟನು.

ಬಬಂಧ ಚೈವ ಮೇ ಮೂರ್ಧ್ನಿ ಕಿರೀಟಮಿದಮುತ್ತಮಮ್ ।
ಸ್ವರೂಪಸದೃಶಂ ಚೈವ ಪ್ರಾದಾದಂಗವಿಭೂಷಣಮ್ ॥೭೪॥

ನನ್ನ ತಲೆಯಲ್ಲಿ ಈ ಶ್ರೇಷ್ಠವಾದ ಕಿರೀಟವನ್ನು ಅವನೇ ಕಟ್ಟಿದನು ಮತ್ತು ನನಗೆ ಸರಿಹೊಂದುವ ಅಂಗವಿಭೂಷಣಗಳನ್ನೂ ಕೊಟ್ಟನು.

ಅಭೇದ್ಯಂ ಕವಚಂ ಚೇದಂ ಸ್ಪರ್ಶರೂಪವದುತ್ತಮಮ್ ।
ಅಜರಾಂ ಜ್ಯಾಮಿಮಾಂ ಚಾಪಿ ಗಾಂಡೀವೇ ಸಮಯೋಜಯತ್ ॥೭೫॥

ಅಭೇದ್ಯವಾದ ಒಳ್ಳೆಯ ಸ್ಪರ್ಶ ಮತ್ತು ರೂಪವುಳ್ಳ ಶ್ರೇಷ್ಠವಾದ ಕವಚವನ್ನು ಕೊಟ್ಟು, ಗಾಂಡೀವ ಧನುಸ್ಸಿಗೆ ನಾಶಹೊಂದದಿರುವ ಈ ಹೆದೆಯನ್ನೂ ಕಟ್ಟಿದನು (ಗಾಂಡೀವ ಧನುಸ್ಸಿನ ಹೆದೆಯು ಕತ್ತರಿಸಲ್ಪಟ್ಟರೆ ಅದು ತಾನೇ ಬೆಳೆಯುತ್ತದೆ. ನಾಶವನ್ನು ಹೊಂದುವುದಿಲ್ಲ. ಬೇರೆ ಹೆದೆಯನ್ನು ಕಟ್ಟಬೇಕಾದ ಪ್ರಸಂಗವಿಲ್ಲ).

ತತಃ ಪ್ರಾಯಾಮಹಂ ತೇನ ಸ್ಯಂದನೇನ ವಿರಾಜತಾ ।
ಯೇನಾಜಯದ್ ದೇವಪತಿರ್ಬಲಿಂ ವೈರೋಚನಿಂ ಪುರಾ ॥೭೬॥

ಅನಂತರ ಯಾವ ರಥವನ್ನು ಏರಿ ದೇವಪತಿಯಾದ ಇಂದ್ರನು ಹಿಂದೆ ವಿರೋಚನನ ಮಗನಾದ ಬಲಿಯನ್ನು ಜಯಿಸಿದನೋ ಅದೇ ಕಾಂತಿಯುಕ್ತವಾದ ರಥವನ್ನೇರಿ ನಾನು ಅಲ್ಲಿಂದ ಹೊರಟೆನು.

ತತೋ ದೇವಾಃ ಸರ್ವ ಏವ ತೇನ ಘೋಷೇಣ ಬೋಧಿತಾಃ ।
ಮನ್ವಾನಾ ದೇವರಾಜಂ ಮಾಂ ಸಮಾಜಗ್ಮುರ್ವಿಶಾಂಪತೇ ॥೭೭॥

ಎಲೈ ರಾಜನೇ, ಆಗ ದೇವತೆಗಳೆಲ್ಲರೂ ಆ ರಥಘೋಷವನ್ನು ಕೇಳಿ ನನ್ನನ್ನು ಇಂದ್ರನೆಂದು ತಿಳಿದು ನನ್ನ ಬಳಿಗೆ ಬಂದರು.

ದೃಷ್ಟ್ವಾ ಚ ಮಾಮಪೃಚ್ಛಂತ ಕಿಂ ಕರಿಷ್ಯಸಿ ಫಲ್ಗುನ ।
ತಾನಬ್ರುವಂ ಯಥಾಭೂತಮಿದಂ ಕರ್ತಾಸ್ಮಿ ಸಂಯುಗೇ ॥೭೮॥

ಅವರೆಲ್ಲರೂ ನನ್ನನ್ನು ನೋಡಿ ಅರ್ಜುನ ಏನನ್ನು ಮಾಡುವಿ ಎಂದು ಕೇಳಿದರು. ನಾನು ಯಥಾರ್ಥವಾದ ವಿಷಯಗಳನ್ನು ತಿಳಿಸಿ ಯುದ್ಧದಲ್ಲಿ ಈ ಕಾರ್ಯವನ್ನು ಮಾಡುವೆನು ಎಂದು ತಿಳಿಸಿದೆನು.

ನಿವಾತಕವಚಾನಾಂ ತು ಪ್ರಸ್ಥಿತಂ ಮಾಂ ವಧೈಷಿಣಮ್ ।
ನಿಬೋಧತ ಮಹಾಭಾಗಾಃ ಶಿವಂ ಚಾಶಾಸ್ತ ಮೇಽನಘಾಃ ॥೭೯॥

ಎಲೈ ಮಹಾನುಭಾವರೇ, ನಾನು ನಿವಾತಕವಚರ ವಧೆಯನ್ನು ಉದ್ದೇಶಿಸಿ ಹೊರಟಿದ್ದೇನೆಂದು ತಿಳಿಯಿರಿ. ಅನಘರೇ, ನನಗೆ ಮಂಗಳವನ್ನು ಆಶೀರ್ವಾದ ಮಾಡಿ.

ತತೋ ವಾಗ್ಭಿಃ ಪ್ರಶಸ್ತಾಭಿಸ್ತ್ರಿದಶಾಃ ಪೃಥಿವೀಪತೇ ।
ತುಷ್ಟುವುರ್ಮಾಂ ಪ್ರಸನ್ನಾಸ್ತೇ ಯಥಾ ದೇವಂ ಪುರಂದರಮ್ ॥೮೦॥

ಎಲೈ ರಾಜನೇ, ಆಗ ದೇವತೆಗಳು ಸಂತೋಷಗೊಂಡು ದೇವನಾದ ಇಂದ್ರನಿಗೆ ಮಂಗಳಾಶಂಸನೆಯನ್ನು ಮಾಡಿದಂತೆ ನನಗೂ ಸಹ ತಮ್ಮ ವಾಣಿಯಿಂದ ಮಂಗಳಾಶಂಸನವನ್ನು ಮಾಡಿದರು.

ದೇವಾಃ

ರಥೇನಾನೇನ ಮಘವಾ ಜಿತವಾನ್ ಶಂಬರಂ ಯುಧಿ ।
ನಮುಚಿಂ ಬಲವೃತ್ರೌ ಚ ಪ್ರಹ್ಲಾದನರಕಾವಪಿ ॥೮೧॥

ದೇವತೆಗಳು– ಈ ರಥದಿಂದಲೇ ಹಿಂದೆ ಯುದ್ಧದಲ್ಲಿ ಇಂದ್ರನು ಶಂಬರನನ್ನೂ, ನಮುಚಿಯನ್ನೂ, ಬಲನನ್ನೂ, ವೃತ್ರನನ್ನೂ, ಪ್ರಹ್ಲಾದ ಮತ್ತು ನರಕರನ್ನೂ ಗೆದ್ದನು.

ಬಹೂನಿ ಚ ಸಹಸ್ರಾಣಿ ಪ್ರಯುತಾನ್ಯರ್ಬುದಾನ್ಯಪಿ ।
ರಥೇನಾನೇನ ದೈತ್ಯಾನಾಂ ಜಿತವಾನ್ ಮಘವಾ ಯುಧಿ ॥೮೨॥

ಇಂದ್ರನು ಯುದ್ಧದಲ್ಲಿ ಅನೇಕ ಸಹಸ್ರಗಳ ಅಥವಾ ಪ್ರಯುತಗಳ ಅಥವಾ ಅರ್ಬುದಗಳ ಸಂಖ್ಯೆಯಲ್ಲಿ ಇದ್ದ ದೈತ್ಯರನ್ನು ಈ ರಥದಲ್ಲಿಯೇ ಪ್ರಯಾಣ ಮಾಡಿ ಗೆದ್ದನು.

ತ್ವಮಪ್ಯನೇನ ಕೌಂತೇಯ ನಿವಾತಕವಚಾನ್ ರಣೇ ।
ವಿಜೇತಾ ಯುಧಿ ವಿಕ್ರಮ್ಯ ಪುರೇವ ಮಘವಾ ವಶೀ ॥೮೩॥

ಕೌಂತೇಯನೇ, ಹಿಂದೆ ಇಂದ್ರನು ವಿಕ್ರಮವನ್ನು ಪ್ರದರ್ಶಿಸಿ ಶತ್ರುಗಳನ್ನು ಮೆಟ್ಟಿದಂತೆ ನೀನೂ ಸಹ ಯುದ್ಧದಲ್ಲಿ ಈ ರಥದಿಂದಲೇ ಪ್ರಯಾಣ ಮಾಡಿ ನಿವಾತಕವಚರನ್ನು ಗೆಲ್ಲುವವನಾಗುವಿ.

ಅಯಂ ಚ ಶಂಖಿಪ್ರವರೋ ಯೇನ ಜೇತಾಸಿ ದಾನವಾನ್ ।
ಅನೇನ ವಿಜಿತಾ ಲೋಕಾಃ ಶಕ್ರೇಣಾಪಿ ಮಹಾತ್ಮನಾ ॥೮೪॥

ಈ ಶ್ರೇಷ್ಠ ಶಂಖದಿಂದ (ಧ್ವನಿಯಿಂದ) ನೀನು ದಾನವರನ್ನು ಗೆಲ್ಲುವಿ. ಮಹಾತ್ಮನಾದ ಇಂದ್ರನೂ ಈ ಶಂಖಧ್ವನಿಯಿಂದಲೇ ಹಿಂದೆ ಲೋಕಗಳನ್ನು ಗೆದ್ದನು.

ಅರ್ಜುನಃ

ಪ್ರದೀಯಮಾನಂ ದೇವೈಸ್ತಂ ದೇವದತ್ತಂ ಜಲೋದ್ಭವಮ್ ।
ಪ್ರತ್ಯಗೃಹ್ಣಂ ಜಯಾಯೈನಂ ಸ್ತೂಯಮಾನಸ್ತದಾऽಮರೈಃ ॥೮೫॥

ಅರ್ಜುನ– ನಾನು ನೀರಿನಲ್ಲಿ ಉದ್ಭವಿಸಿದ ಆ ದೇವದತ್ತ ಶಂಖವನ್ನು ದೇವತೆಗಳಿಂದ ಕೊಡಮಾಡಿದುದನ್ನು ಜಯದ ಸಲುವಾಗಿ ಸ್ವೀಕರಿಸಿದೆನು. ಆಗ ದೇವತೆಗಳು ನನ್ನನ್ನು ಪ್ರಶಂಸಿಸಿದರು.

ಸ ಶಂಖೀ ಕವಚೀ ಬಾಣೀ ಪ್ರಗೃಹೀತಶರಾಸನಃ ।
ದಾನವಾಲಯಮತ್ಯುಗ್ರಂ ಪ್ರಯಾತೋऽಸ್ಮಿ ಯುಯುತ್ಸಯಾ ॥೮೬॥

ಅಂತಹ ನಾನು ಶಂಖವನ್ನು ತೆಗೆದುಕೊಂಡು, ಕವಚವನ್ನು ಧರಿಸಿ, ಧನುರ್ಬಾಣಗಳನ್ನು ಕೈಯಲ್ಲಿ ಹಿಡಿದುಕೊಂಡು ಯುದ್ಧವನ್ನು ಮಾಡುವ ಇಚ್ಛೆಯಿಂದ ಘೋರವಾದ ದಾನವಾಲಯವನ್ನು ಕುರಿತು ಪ್ರಯಾಣವನ್ನು ಮಾಡಿದೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ನಿವಾತಕವಚಯುದ್ಧಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ಮೂರನೆಯ
ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಐಂದ್ರಂ ಸ್ಯಂದನಮಾರುಹ್ಯ ಪಾರ್ಥೋ ಮಾತಲಿಸಂಯುತಃ ।
ಗಾಂಡೀವಂ ಧನುರಾದಾಯ ಯಯೌ ಹಂತುಂ ಮಹಾಸುರಾನ್ ॥

ಅರ್ಜುನ ಮಾತಲಿ ಸಮೇತನಾಗಿ ಇಂದ್ರನ ರಥವನ್ನೇರಿ ಗಾಂಡೀವ ಧನುಸ್ಸನ್ನು ಹಿಡಿದು ಮಹಾ ಅಸುರರನ್ನು ಕೊಲ್ಲಲು ಹೊರಟ.

ಶಂಖಂ ದದುಸ್ತಸ್ಯ ದೇವಾ ದೇವದತ್ತಃ ಸ ಶಂಕರಾಟ್ ।
ನಾದಯನ್ ಶಾಂಖಘೋಷೇಣ ಧನುರ್ವಿಸ್ಫಾರಯನ್ ಮಹತ್ ॥
ದಧಾನಃ ಕುಂಡಲೇ ದಿವ್ಯೇ ಶಕ್ರದತ್ತೇ ಸುಭಾಸ್ವರೇ ।
ಆಸಸಾದ ಪುರಂ ದಿವ್ಯಂ ದೈತ್ಯಾನಾಮಿಂದ್ರನಂದನಃ ॥೩೧೦॥

ಅರ್ಜುನನಿಗೆ ದೇವತೆಗಳು ಒಂದು ಶಂಖವನ್ನು ಕೊಟ್ಟರು. ಅದು ದೇವದತ್ತ ಎಂಬ ಶ್ರೇಷ್ಠವಾದ ಶಂಖ. ಇಂದ್ರದತ್ತವಾದ ಹೊಳೆಯುವ ಕುಂಡಲಗಳನ್ನು ಧರಿಸಿ ಶಂಖನಾದದಿಂದ ಎಲ್ಲ ದಿಕ್ಕುಗಳನ್ನೂ ಪ್ರತಿಧ್ವನಿಗೊಳಿಸುತ್ತ ಮಹಾಧನುಸ್ಸನ್ನೂ ಠೇಂಕರಿಸುತ್ತ ದಾನವರ ದಿವ್ಯನಗರವನ್ನು ಸೇರಿದ ಅರ್ಜುನ.

ತಸ್ಯ ಶಂಖಧ್ವನಿಂ ಶ್ರುತ್ವಾ ಗಾಂಡೀವಸ್ಯ ಚ ನಿಃಸ್ವನಮ್ ।
ಅಭಿಮಸ್ತುರ್ಮಹಾವೀರ್ಯಾಃ ನಿವಾತಕವಚಾಸುರಾಃ ॥೩೧೧॥

ಅರ್ಜುನನ ಶಂಖಧ್ವನಿಯನ್ನೂ ಗಾಂಡೀವದ ಧ್ವನಿಯನ್ನೂ ಕೇಳಿ ಮಹಾಬಲಿಷ್ಠರಾದ ನಿವಾತಕವಚಾಸುರರು ಇದಿರಿಗೆ ಬಂದರು.

ತಿಸ್ರಃ ಕೋಟ್ಯೋ ದಾನವಾನಾಂ ಸ್ವಯಂಭುವರಗರ್ವಿತಾಃ ।
ನಾನಾಯುಧೈಃ ರಣೇ ಪಾರ್ಥಮಭ್ಯವರ್ಷನ್ ಸುಸಂಹತಾಃ ॥೩೧೨॥

ಬ್ರಹ್ಮವರದಿಂದ ದೃಪ್ತರಾದ ಮೂರು ಕೋಟಿ ದಾನವರು ಚೆನ್ನಾಗಿ ಸಂಘಟಿತರಾಗಿ ಯುದ್ಧದಲ್ಲಿ ಅರ್ಜುನನ ಮೇಲೆ ನಾನಾ ಆಯುಧಗಳ ಮಳೆಗೆರೆದರು.

★ ★ ★ ★

ನೂರ ಅರವತ್ನಾಲ್ಕನೆಯ ಅಧ್ಯಾಯ

ನಿವಾತ ಕವಚರ ಜೊತೆಯಲ್ಲಿ ಯುದ್ಧವನ್ನು ಮಾಡಲು ಅರ್ಜುನನ ಸಮುದ್ರಗಮನ ಮತ್ತು ಯುದ್ಧಾರಂಭ.

ಅರ್ಜುನಃ

ತತೋಽಹಂ ಸ್ತೂಯಮಾನಸ್ತು ತತ್ರ ತತ್ರ ಮಹರ್ಷಿಭಿಃ ।
ಅಪಶ್ಯಮುದಧಿಂ ಭೀಮಮಪಾಂಪತಿಮಥಾವ್ಯಯಮ್ ॥೧॥

ಅರ್ಜುನ– ಆಗ ಅಲ್ಲಲ್ಲಿ ನಾನು ಮಹರ್ಷಿಗಳಿಂದ ಸ್ತೋತ್ರ ಮಾಡಲ್ಪಟ್ಟು ನಾಶವನ್ನು ಹೊಂದದಿರುವ ಅಪಾರ ಜಲನಿಧಿಯಾದ ಭಯಂಕರವಾದ ಸಮುದ್ರವನ್ನು ನೋಡಿದೆನು.

ಫೇನವತ್ಯಃ ಪ್ರಕೀರ್ಣಾಶ್ಚ ಸಂಹತಾಶ್ಚ ಸಮುತ್ಥಿತಾಃ ।
ಊರ್ಮಯಶ್ಚಾತ್ರ ದೃಶ್ಯಂತೇ ವಲ್ಗಂತ ಇವ ಪರ್ವತಾಃ ॥೨॥

ನೊರೆಯಿಂದ ಕೂಡಿ ಕೆಲವು ಸಲ ಬಿಡಿಬಿಡಿಯಾಗಿ, ಇನ್ನು ಕೆಲವು ಸಹ ಒಟ್ಟಿಗೆ ಎದ್ದುಬರುವ ಅಲೆಗಳು ಮಾತನಾಡುವ ಪರ್ವತಗಳಂತೆ ಕಾಣುತ್ತಿದ್ದವು.

ನಾವಃ ಸಹಸ್ರಶಸ್ತತ್ರ ರತ್ನಪೂರ್ಣಾಃ ಸಮಂತತಃ ।
ನಭಸೀವ ವಿಮಾನಾನಿ ವಿಚರಂತ್ಯೋ ವಿರೇಜಿರೇ ॥೩॥

ಆಕಾಶದಲ್ಲಿ ವಿಮಾನಗಳು ಸಂಚರಿಸಿದಂತೆ ರತ್ನತುಂಬಿದ ಹಡಗುಗಳು ಸಾವಿರಾರು ಸಂಖ್ಯೆಯಲ್ಲಿ ಅಲ್ಲಿ ಸಂಚರಿಸುತ್ತಾ ಶೋಭೆಯನ್ನು ಉಂಟುಮಾಡಿದವು.

ತಿಮಿಂಗಿಲಾಃ ಕಚ್ಛಪಾಶ್ಚ ತಥಾ ತಿಮಿತಿಮಿಂಗಿಲಾಃ ।
ಮಕರಾಶ್ಚಾತ್ರ ದೃಶ್ಯಂತೇ ಜಲೇ ಮಗ್ನಾ ಇವಾದ್ರಯಃ ॥೪॥

ತಿಮಿಂಗಿಲಗಳು, ಕೂರ್ಮಗಳು, ತಿಮಿತಿಮಿಂಗಿಲಗಳು ಮತ್ತು ಮೊಸಳೆಗಳೂ ನೀರಿನಲ್ಲಿ ಮುಳುಗಿದ ಪರ್ವತಗಳಂತೆ ಕಾಣುತ್ತಿದ್ದವು.

ಶಂಖಾನಾಂ ಚ ಸಹಸ್ರಾಣಿ ಮಗ್ನಾನ್ಯಪ್ಸು ಸಮಂತತಃ ।
ದೃಶ್ಯಂತೇ ಸ್ಮ ಯಥಾ ರಾತ್ರೌ ತಾರಾಸ್ತನ್ವಭ್ರಸಂವೃತಾಃ ॥೫॥

ನೀರಿನಲ್ಲಿ ಸ್ವಲ್ಪ ಸ್ವಲ್ಪ ಮುಳುಗಿದ ಸುತ್ತಲೂ ಇದ್ದ ಸಹಸ್ರಾರು ಶಂಖಗಳು ರಾತ್ರಿಯ ವೇಳೆಯಲ್ಲಿ ತೆಳುವಾದ ಮೋಡದಿಂದ ಮುಸುಕಿದ ನಕ್ಷತ್ರಗಳಂತೆ ಕಾಣುತ್ತಿದ್ದವು.

ತಥಾ ಸಹಸ್ರಶಸ್ತತ್ರ ರತ್ನಸಂಘಾಃ ಪ್ಲವಂತ್ಯುತ ।
ವಾಯುಶ್ಚ ಘೂರ್ಣತೇ ಭೀಮಸ್ತದದ್ಭುತಮಿವಾಭವತ್ ॥೬॥

ಹಾಗೆಯೇ ಅಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ರತ್ನಸಮೂಹಗಳು ತೇಲುತ್ತಿದ್ದವು. ವಾಯುವು ಭಯಂಕರವಾಗಿ ಸದ್ದುಮಾಡುತ್ತಾ ಬೀಸುತ್ತಿತ್ತು. ಅದು ಅದ್ಭುತವಾಗಿದ್ದಿತು.

ತದುದೀಕ್ಷ್ಯ ಮಹಾವೇಗಂ ಸರ್ವಾಂಭೋನಿಧಿಮುತ್ತಮಮ್ ।
ಅಪಶ್ಯಂ ದಾನವಾಕೀರ್ಣಂ ತದ್ ದೈತ್ಯಪುರಮಂತಿಕಾತ್ ॥೭॥

ಮಹಾರಭಸದಿಂದ ಕೂಡಿದ, ಎಲ್ಲ ನೀರುಗಳಿಗೂ ಆಶ್ರಯವಾದ, ಆ ಸಮುದ್ರವನ್ನು ನೋಡಿ ಅದರಲ್ಲಿ ದಾನವರಿಂದ ತುಂಬಿದ ಅವರ ಪಟ್ಟಣವನ್ನು ಸಮೀಪದಿಂದ ನೋಡಿದೆನು.

ತತ್ರೈವ ಮಾತಲಿಸ್ತೂರ್ಣಂ ನಿಪತ್ಯ ಪೃಥಿವೀತಳೇ ।
ತ್ರಾಸಯನ್‌ರಥಘೋಷೇಣ ತತ್ಪುರಂ ಸಮುಪಾದ್ರವತ್ ॥೮॥

ಅಲ್ಲಿಯೇ ಮಾತಲಿಯು ಆಕಾಶದಲ್ಲಿ ಹೋಗುತ್ತಿದ್ದ ರಥವನ್ನು ಭೂತಳದಲ್ಲಿ ಇಳಿಸಿ ರಥಘೋಷದಿಂದ ಎಲ್ಲರಿಗೂ ಭಯವನ್ನು ಉಂಟುಮಾಡುತ್ತಾ ಆ ಪುರದ ಕಡೆಗೆ ರಥವನ್ನು ಓಡಿಸಿದನು.

ರಥಘೋಷಂ ತು ತಂ ಶ್ರುತ್ವಾ ಸ್ತನಯಿತ್ನೋರಿವಾಂಬರೇ ।
ಮನ್ವಾನಾ ದೇವರಾಜಂ ಮಾಮಾವಿಗ್ನಾ ದಾನವಾಭವನ್ ॥೯॥

ಆಕಾಶದಲ್ಲಿ ಮೊಳಗುವ ಗುಡುಗಿನ ಧ್ವನಿಯಂತಿರುವ ಆ ರಥಘೋಷವನ್ನು ಕೇಳಿ ನನ್ನನ್ನು ದೇವರಾಜನೆಂದು ತಿಳಿದು ದಾನವರು ಭಯಗ್ರಸ್ತರಾದರು.

ಸರ್ವೇ ಸಂಭ್ರಾಂತಮನಸಃ ಶರಚಾಪಧರಾಃ ಸ್ಥಿತಾಃ ।
ತಥಾಸಿಶೂಲಪರಶುಗದಾಮುಸಲಪಾಣಯಃ ॥೧೦॥

ಅವರೆಲ್ಲರೂ ದಿಗ್ಭ್ರಾಂತವಾದ ಮನಸ್ಸುಳ್ಳವರಾಗಿ ಬಿಲ್ಲುಬಾಣಗಳನ್ನೂ, ಕತ್ತಿ ಶೂಲ ಪರಶು ಗದಾ ಮುಸಲ ಮೊದಲಾದ ಆಯುಧಗಳನ್ನೂ ಕೈಯಲ್ಲಿ ಹಿಡಿದು ನಿಂತರು.

ತತೋ ದ್ವಾರಾಣಿ ಪಿದಧುರ್ದಾನವಾಸ್ತ್ರಚೇತಸಃ ।
ಸಂವಿಧಾಯ ಪುರೇ ರಕ್ಷಾಂ ನ ಸ್ಮ ಕಶ್ಚನ ದೃಶ್ಯತೇ ॥೧೧॥

ಅನಂತರ ಹೆದರಿದ ಮನಸ್ಸುಳ್ಳ ಆ ದಾನವರು ಪಟ್ಟಣದೊಳಗೆ ರಕ್ಷಣೆಯ ವ್ಯವಸ್ಥೆಯನ್ನು ಮಾಡಿ ಮಹಾದ್ವಾರಗಳನ್ನು ಮುಚ್ಚಿದರು. ಯಾರೊಬ್ಬರೂ ಕಣ್ಣಿಗೆ ಬೀಳಲಿಲ್ಲ.

ತತಃ ಶಂಖಮುಪಾದಾಯ ದೇವದತ್ತಂ ಮಹಾಸ್ವನಮ್ ।
ಪರಮಾಂ ಮುದಮಾಶ್ರಿತ್ಯ ಪ್ರಾಧಮಂ ತಂ ಶನೈರಹಮ್ ॥೧೨॥

ಆಗ ನಾನು ಮಹಾಸ್ವನವುಳ್ಳ ದೇವದತ್ತ ಶಂಖವನ್ನು ತೆಗೆದುಕೊಂಡು ಬಹಳ ಸಂತೋಷದಿಂದ ನಿಧಾನವಾಗಿ ಊದಿದೆನು.

ಸ ತು ಶಬ್ದೋ ದಿವಂ ಸ್ತಬ್ಧ್ವಾ ಪ್ರತಿಶಬ್ದಮಜೀಜನತ್ ।
ವಿತ್ರೇಸುಶ್ಚ ನಿಲಿಲ್ಯುಶ್ಚ ಭೂತಾನಿ ಸುಮಹಾಂತ್ಯಪಿ ॥೧೩॥

ಆ ಶಬ್ದವಾದರೂ ಆಕಾಶಕ್ಕೆ ಹೋಗಿ ಅಲ್ಲಿಂದ ಪ್ರತಿಧ್ವನಿಯನ್ನು ಉಂಟುಮಾಡಿತು. ಎಲ್ಲಾ ದೊಡ್ಡದೊಡ್ಡ ಪ್ರಾಣಿಗಳೂ ಸಹ ಹೆದರಿ ಅಡಗಿಕೊಂಡವು.

ತತೋ ನಿವಾತಕವಚಾಃ ಸರ್ವ ಏವ ಸ್ವಲಂಕೃತಾಃ ।
ದಂಸಿತಾ ವಿವಿಧೈಸ್ತ್ರಾಣೈರ್ವಿಚಿತ್ರಾಯುಧಪಾಣಯಃ ॥೧೪॥

ಆಯಸೈಶ್ಚ ಮಹಾಶೂಲೈರ್ಗದಾಭಿರ್ಮುಸಲೈರಪಿ ।
ಪಟ್ಟಿಸೈಃ ಕರವಾಳೈಶ್ಚ ರಥಚಕ್ರೈಶ್ಚ ಭಾರತ ॥೧೫॥

ಶತಘ್ನೀಭಿರ್ಭುಶುಂಡೀಭಿಃ ಖಡ್ಗೈಶ್ಚಿತ್ರೈಃ ಸ್ವಲಂಕೃತೈಃ ।
ಪ್ರಗೃಹೀತೈರ್ದಿತೇಃ ಪುತ್ರಾಃ ಪ್ರಾದುರಾಸನ್ ಸಹಸ್ರಶಃ ॥೧೬॥

ಅನಂತರ ಎಲ್ಲಾ ನಿವಾತಕವಚರೂ ಚೆನ್ನಾಗಿ ಅಲಂಕಾರ ಮಾಡಿಕೊಂಡು ವಿವಿಧವಾದ ರಕ್ಷಣಾ ಕವಚಗಳನ್ನು ಧಾರಣೆಮಾಡಿ ವಿಚಿತ್ರಾಯುಧಗಳನ್ನು– ಕಬ್ಬಿಣದಿಂದ ಮಾಡಿದ ಮಹಾಶೂಲಗಳು, ಗದೆಗಳು, ಮುಸಲಗಳು, ಪಟ್ಟಿಸಗಳು, ಕತ್ತಿಗಳು, ರಥಚಕ್ರಗಳು, ಶತಘ್ನಿಗಳು, ಭೂಸುಂಡಗಳು, ಕರವಾಳಗಳು ಈ ಅಲಂಕೃತವಾದ ಆಯುಧಗಳನ್ನು ಕೈಯಲ್ಲಿ ಹಿಡಿದು ದಿತಿಪುತ್ರರಾದ ಅವರು ಸಹಸ್ರ ಸಂಖ್ಯೆಯಲ್ಲಿ ಎದುರಿಗೆ ಬಂದರು.

ತತೋ ವೇಗೇನ ಮಹತಾ ದಾನವಾ ಮಾಮುಪಾದ್ರವನ್
ವಿಮುಂಚಂತೋ ಶಿತಾನ್ ಬಾಣಾನ್ ಶತಶೋಽಥ ಸಹಸ್ರಶಃ ॥೧೭॥

ಅನಂತರ ದಾನವರು ಶೀಘ್ರವಾಗಿ ಶತಸಂಖ್ಯೆಯಲ್ಲಿ ಸಹಸ್ರ ಸಂಖ್ಯೆಯಲ್ಲಿ ನನ್ನ ಮೇಲೆ ಬಾಣಗಳನ್ನು ಸುರಿಸುತ್ತಾ ನನ್ನ ಕಡೆಗೆ ಓಡಿಬಂದರು.

ತತೋ ವಿಚಾರ್ಯ ಬಹುಶೋ ರಥಮಾರ್ಗೇಷು ತಾನ್ ಹಯಾನ್ ।
ಪ್ರಾಚೋದಯತ್ ಸಮೇ ದೇಶೇ ಮಾತಲಿರ್ಭರತರ್ಷಭ ॥೧೮॥

ಎಲೈ ಭರತರ್ಷಭನೇ, ಆಗ ಮಾತಲಿಯು ಬಹಳವಾಗಿ ವಿಚಾರಮಾಡಿ ಸಮತಟ್ಟಾದ ಪ್ರದೇಶದಲ್ಲಿರುವ ಅನೇಕ ರಥಮಾರ್ಗಗಳಲ್ಲಿ ಆ ಕುದುರೆಗಳನ್ನು ಪ್ರಚೋದಿಸಿದನು.

ತೇನ ತೇಷಾಂ ಪ್ರಣುನ್ನಾನಾಮಾಶುತ್ವಾಚ್ಛೀಘ್ರಗಾಮಿನಾಮ್ ।
ನಾನ್ವಪಶ್ಯಂ ತದಾ ಕಿಂಚಿತ್ ತನ್ಮೇऽದ್ಭುತಮಿವಾಭವತ್ ॥೧೯॥

ಶೀಘ್ರವಾಗಿ ಹೋಗುವ ಆ ವೇಗವುಳ್ಳ ಕುದುರೆಗಳು ಎಲ್ಲವನ್ನೂ ಧ್ವಂಸ ಮಾಡಿಕೊಂಡು ಹೋಗುವಾಗ ನನ್ನ ಕಣ್ಣಿಗೆ ಏನೂ ಕಾಣಲಿಲ್ಲ. ಅದು ಅದ್ಭುತವಾಗಿದ್ದಿತು.

ತತಸ್ತೇ ದಾನವಾಸ್ತತ್ರ ವಾದಿತ್ರಾಣಿ ಸಹಸ್ರಶಃ ।
ವಿಕೃತಸ್ವರರೂಪಾಣಿ ಭೃಶಂ ಸರ್ವಾಣ್ಯನಾದಯನ್ ॥೨೦॥

ಆಗ ಆ ದಾನವರು ವಿಕೃತಸ್ವರ ರೂಪಗಳುಳ್ಳ ಸಹಸ್ರಾರು ವಾದ್ಯಗಳನ್ನು ಎಲ್ಲವನ್ನೂ ಗಟ್ಟಿಯಾಗಿ ಮೊಳಗಿಸಿದರು.

ತೇನ ಶಬ್ದೇನ ಸಹಸಾ ಸಮುದ್ರೇ ಪರ್ವತೋಪಮಾಃ ।
ಆಪ್ಲವಂತ ಗತೈಃ ಸತ್ತ್ವೈರ್ಮತ್ಸ್ಯಾಃ ಶತಸಹಸ್ರಶಃ ॥೨೧॥

ಆ ಶಬ್ದವನ್ನು ಕೇಳಿ ಹೆದರಿಕೆಯಿಂದ ಮೃತವಾದ ಪರ್ವತದಷ್ಟು ದೊಡ್ಡದಾದ ಮೀನುಗಳು, ಶತಸಹಸ್ರಸಂಖ್ಯೆಯಲ್ಲಿ ಮರಣವನ್ನು ಹೊಂದಿ ತೇಲಿದವು.

ಸ ಸಂಪ್ರಹಾರಸ್ತುಮುಲಸ್ತೇಷಾಂ ಚ ಮಮ ಭಾರತ ।
ಅವರ್ತತ ಮಹಾಘೋರೋ ನಿವಾತಕವಚಾಂತಕಃ ॥೨೨॥

ಎಲೈ ಭಾರತನೇ, ಅವರಿಗೂ ಮತ್ತು ನನಗೂ ನಡೆದ ಆ ಯುದ್ಧವು ಮಹಾಘೋರವೂ ಮತ್ತು ತೀವ್ರವೂ ಆಗಿದ್ದು ನಿವಾತಕವಚರ ನಾಶವನ್ನು ಉಂಟು ಮಾಡುವುದಾಗಿದ್ದಿತು.

ತತೋ ದೇವರ್ಷಯಶ್ಚೈವ ತಥಾನ್ಯೇ ಚ ಮಹರ್ಷಯಃ ।
ಬ್ರಹ್ಮರ್ಷಯಶ್ಚ ಸಿದ್ಧಾಶ್ಚ ಸಮಾಜಗ್ಮುರ್ಮಹಾಮೃಧೇ ॥೨೩॥

ಆಗ ಮಹಾಯುದ್ಧವು ನಡೆಯುತ್ತಿರಲು ದೇವರ್ಷಿಗಳೂ ಅದರಂತೆ ಮಹರ್ಷಿಗಳೂ ಮತ್ತು ಬ್ರಹ್ಮರ್ಷಿಗಳೂ ಮತ್ತು ಸಿದ್ಧರೂ ಅಲ್ಲಿಗೆ ಬಂದರು.

ತೇ ವೈ ಮಾಮನುರೂಪಾಭಿರ್ಮಧುರಾಭಿರ್ಜಯೈಷಿಣಃ ।
ಅಸ್ತುವನ್ ಮುನಯೋ ವಾಗ್ಭಿರ್ಯಥೇಂದ್ರಂ ತಾರಕಾಮಯೇ ॥೨೪॥

ನನ್ನ ಜಯವನ್ನು ಬಯಸಿದ ಆ ಋಷಿಗಳು ಅನುರೂಪವಾದ ಮಧುರವಾದ ಮಾತುಗಳಿಂದ ತಾರಕಾಮಯ ಯುದ್ಧದಲ್ಲಿ ಇಂದ್ರನನ್ನು ಸ್ತೋತ್ರ ಪೂರ್ವಕವಾಗಿ ಆಶೀರ್ವಾದ ಮಾಡಿದಂತೆ ಆಶೀರ್ವದಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ನಿವಾತಕವಚಯುದ್ಧಪರ್ವಣಿ ಏಕಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ನಾಲ್ಕನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಅರವತ್ತೈದನೆಯ ಅಧ್ಯಾಯ

ನಿವಾತಕವಚರ ಜೊತೆಯಲ್ಲಿ ಅರ್ಜುನನ ಯುದ್ಧ.

ಅರ್ಜುನಃ

ತತೋ ನಿವಾತಕವಚಾಃ ಸರ್ವೇ ವೇಗೇನ ಭಾರತ ।
ಅಭ್ಯದ್ರವನ್ ಮಾಂ ಸಹಿತಾಃ ಪ್ರಗೃಹೀತಾಯುಧಾ ರಣೇ ॥೧॥

ಅರ್ಜುನ– ಎಲೈ ಭಾರತನೇ, ಆಗ ನಿವಾತಕವಚರೆಲ್ಲರೂ ಕೈಯಲ್ಲಿ ಆಯುಧಗಳನ್ನು ಹಿಡಿದು ಯುದ್ಧದಲ್ಲಿ ಒಟ್ಟಿಗೆ ನನ್ನ ಕಡೆಗೆ ವೇಗದಿಂದ ಓಡಿಬಂದರು.

ಆಚ್ಛಾದ್ಯ ರಥಪಂಥಾನಮುತ್ಕೃಶಂತೋ ಮಹಾರಥಾಃ ।
ಆವೃತ್ಯ ಸರ್ವತಸ್ತೇ ಮಾಂ ಶರವರ್ಷೈರವಾಕಿರನ್ ॥೨॥

ಮಹಾರಥರಾದ ಅವರು ನನ್ನ ರಥಮಾರ್ಗವನ್ನು ತಡೆದು ಗಟ್ಟಿಯಾಗಿ ಕಿರುಚುತ್ತಾ ಎಲ್ಲಕಡೆಗಳಿಂದಲೂ ನನ್ನನ್ನು ಆವರಿಸಿ ನನ್ನ ಮೇಲೆ ಬಾಣಗಳ ಮಳೆಯನ್ನು ಕರೆದರು.

ತತೋಽಪರೇ ಮಹಾವೀರ್ಯಾಃ ಶೂಲಪಟ್ಟಿಸಪಾಣಯಃ ।
ಶೂಲಾನಿ ಚ ಭುಶುಂಡೀಶ್ಚ ಮುಮುಚುರ್ದಾನವಾ ಮಯಿ ॥೩॥

ಮತ್ತು ಮಹಾವೀರರಾದ ಇನ್ನು ಕೆಲವು ದಾನವರು ಕೈಯಲ್ಲಿ ಶೂಲಪಟ್ಟಿಸಗಳನ್ನೂ ಹಿಡಿದು ಶೂಲಗಳನ್ನು ಮತ್ತು ಭುಶುಂಡಿಗಳನ್ನು ನನ್ನ ಮೇಲೆ ಎಸೆದರು.

ತಚ್ಛೂಲವರ್ಷಂ ಸುಮಹದ್ ಗದಾಶಕ್ತಿಸಮಾಕುಲಮ್ ।
ಅನಿಶಂ ಸೃಜ್ಯಮಾನಂ ತೈರತನ್ ಮದ್ರಥೋಪರಿ ॥೪॥

ಅವರಿಂದ ಸತತವಾಗಿ ಸೃಷ್ಟಿಸಲ್ಪಟ್ಟ ದೊಡ್ಡ ಗದಾಶಕ್ತಿ ಆಯುಧಗಳಿಂದ ಕೂಡಿದ ಆ ಶೂಲವರ್ಷವು ನನ್ನ ರಥದ ಮೇಲೆ ಬಿದ್ದಿತು.

ಅನ್ಯೇ ಮಾಮಭ್ಯಧಾವಂತ ನಿವಾತಕವಚಾ ಯುಧಿ ।
ಶಿತಶಸ್ತ್ರಾಯುಧಾ ರೌದ್ರಾಃ ಕಾಲರೂಪಾಃ ಪ್ರಹಾರಿಣಃ ॥೫॥

ಇನ್ನು ಕೆಲವು ಕೃಷ್ಣವರ್ಣದ ಭಯಂಕರರಾದ ಪ್ರಹಾರಶೀಲರಾದ ನಿವಾತಕವಚರು ಹರಿತವಾದ ಶಸ್ತ್ರಮತ್ತು ಆಯುಧಗಳನ್ನು ಹಿಡಿದು ಯುದ್ಧದಲ್ಲಿ ನನ್ನ ಮೇಲೆ ಎರಗಿ ಬಂದರು.

ತಾನಹಂ ವಿವಿಧೈರ್ಬಾಣೈರ್ವೇಗವದ್ಭಿರಜಿಹ್ಮಗೈಃ ।
ಗಾಂಡೀವಮುಕ್ತೈರಭ್ಯಘ್ನಮೇಕೈಕಂ ದಶಭಿರ್ಮೃಧೇ ॥೬॥

ತೇ ಕೃತಾ ವಿಮುಖಾಃ ಸರ್ವೇ ಮತ್ಸೃಯುಕ್ತೈಃ ಶಿಲಾಶಿತೈಃ ।
ತತೋ ಮಾತಲಿನಾ ತೂರ್ಣಂ ಹಯಾಸ್ತೇ ಸಂಪ್ರಚೋದಿತಾಃ ॥೭॥

ನಾನು ಅವರಿಗೆ ವೇಗವುಳ್ಳ, ನೇರವಾದ, ಗಾಂಡೀವಮುಕ್ತವಾದ, ವಿವಿಧ ಬಾಣಗಳಿಂದ ಯುದ್ಧದಲ್ಲಿ ಒಬ್ಬೊಬ್ಬನಿಗೆ ಹತ್ತುಬಾಣಗಳಂತೆ ಬಾಣಗಳನ್ನು ಪ್ರಯೋಗಿಸಿದೆ. ಅವರೆಲ್ಲರೂ ಕಲ್ಲಿನ ಮೇಲೆ ಸಾಣೆಯನ್ನು ಹಿಡಿದ ನನ್ನಿಂದ ಪ್ರಯೋಗಿಸಲ್ಪಟ್ಟ ಆ ಬಾಣಗಳಿಂದ ಯುದ್ಧದಲ್ಲಿ ವಿಮುಖರಾದರು. ಆಗ ಮಾತಲಿಯು ನನ್ನ ರಥದ ಹಯಗಳನ್ನು ಶೀಘ್ರವಾಗಿ ಪ್ರಚೋದಿಸಿದನು.

ಮಾರ್ಗಾನ್ ಬಹುವಿಧಾಂಸ್ತತ್ರ ವಿಚೇರುರ್ವಾತರಂಹಸಃ ।
ಸುಸಂಯುತಾ ಮಾತಲಿನಾ ಪ್ರಾಮಥ್ನಂತ ದಿತೇಃ ಸುತಾನ್ ॥೮॥

ವಾಯುವೇಗವುಳ್ಳ ಆ ಕುದುರೆಗಳು ಯುದ್ಧಭೂಮಿಯಲ್ಲಿ ಅನೇಕ ಮಾರ್ಗಗಳಲ್ಲಿ ಸಂಚರಿಸಿದವು. ಮಾತಲಿಯಿಂದ ಚೆನ್ನಾಗಿ ನಿಯಂತ್ರಿಸಲ್ಪಟ್ಟ ಆ ಅಶ್ವಗಳು ದಿತಿಯ ಪುತ್ರರನ್ನು ಕಾಲಾಡಿದವು.

ಶತಂ ಶತಾಸ್ತೇ ಹರಯಸ್ತಸ್ಮಿನ್ ಯುಕ್ತಾ ಮಹಾರಥೇ ।
ತದಾ ಮಾತಲಿನಾ ಯತ್ತಾ ವ್ಯಚರನ್ನಲ್ಪಕಾ ಇವ ॥೯॥

ಆ ಮಹಾರಥಕ್ಕೆ ಹೂಡಿದ ಹತ್ತುಸಾವಿರ ಕುದುರೆಗಳು ಮಾತಲಿಯಿಂದ ನಿಯಂತ್ರಿಸಲ್ಪಟ್ಟು ಅಲ್ಪಸಂಖ್ಯೆಯಲ್ಲಿದ್ದ ಕುದುರೆಗಳಂತೆ ಸಂಚರಿಸಿದವು.

ತೇಷಾಂ ಚರಣಪಾತೇನ ರಥನೇಮಿಸ್ವನೇನ ಚ ।
ಮಮ ಬಾಣನಿಪಾತೈಶ್ಚ ಹತಾಸ್ತೇ ಶತಶೋಽಸುರಾಃ ॥೧೦॥

ಅವುಗಳ ಪದಘಾತದಿಂದಲೂ ರಥನೇಮಿಯ ಘೋಷದಿಂದಲೂ ಮತ್ತು ನನ್ನ ಬಾಣಪ್ರಯೋಗದಿಂದಲೂ ಅಸುರರು ನೂರಾರು ಸಂಖ್ಯೆಯಲ್ಲಿ ಹತರಾದರು.

ಗತಾಸವಸ್ತಥೈವಾನ್ಯೇ ಪ್ರಗೃಹೀತಶರಾಸನಾಃ ।
ಹತಸಾರಥಯಸ್ತತ್ರ ವ್ಯಕೃಷ್ಯಂತ ತುರಂಗಮೈಃ ॥೧೧॥

ಕೈಯಲ್ಲಿ ಧನುಸ್ಸನ್ನು ಹಿಡಿದು ತಮ್ಮ ಸಾರಥಿಗಳನ್ನು ಕಳೆದುಕೊಂಡು ಮೃತರಾದ ಅನೇಕ ದಾನವರನ್ನು ನಮ್ಮ ಕುದುರೆಗಳು ಯುದ್ಧಭೂಮಿಯಲ್ಲಿ ಎಳೆದಾಡಿದವು.

ತೇ ದಿಶೋ ವಿದಿಶಃ ಸರ್ವೇ ಪ್ರತಿರುಧ್ಯ ಪ್ರಹಾರಿಣಃ ।
ಅಭ್ಯಘ್ನನ್ ವಿವಿಧೈಃ ಶಸ್ತ್ರೈಸ್ತತೋ ಮೇ ವ್ಯಥಿತಂ ಮನಃ ॥೧೨॥

ಆ ದಾನವರೆಲ್ಲರೂ ಪ್ರಹಾರಶೀಲರಾಗಿ ದಿಕ್ಕುಗಳನ್ನೂ ಮತ್ತು ವಿದಿಕ್ಕುಗಳನ್ನೂ ಮುಚ್ಚಿ ಅನೇಕ ಶಸ್ತ್ರಗಳಿಂದ ನನ್ನನ್ನು ಹೊಡೆದರು. ಆಗ ನನ್ನ ಮನಸ್ಸಿಗೆ ವ್ಯಥೆಯಾಯಿತು.

ತತೋಽಹಂ ಮಾತಲೇರ್ವೀರ್ಯಮಪಶ್ಯಂ ಪರಮಾದ್ಭುತಮ್ ।
ಅಶ್ವಾಂಸ್ತಥಾ ವೇಗವತೋ ಯದಯತ್ನಾದಧಾರಯನ್ ॥೧೩॥

ಆಗ ನಾನು ಅಂತಹ ವೇಗವುಳ್ಳ ಅಶ್ವಗಳನ್ನು ಅನಾಯಾಸವಾಗಿ ನಿಯಂತ್ರಿಸುವ ಮಾತಲಿಯ ಪರಮಾದ್ಭುತವಾದ ಸಾಮರ್ಥ್ಯವನ್ನು ನೋಡಿದೆನು.

ತತೋಽಹಂ ಲಘುಭಿಶ್ಚಿತ್ರೈರಸ್ತ್ರೈಸ್ತಾನಸುರಾನ್ ರಣೇ ।
ಚಿಚ್ಛೇದ ಸಾಯುಧಾನ್ ರಾಜನ್ ಶತಶೋಽಥ ಸಹಸ್ರಶಃ ॥೧೪॥

ಎಲೈ ರಾಜನೇ, ಆಗ ನಾನು ಲಘುವಾದ ವಿಚಿತ್ರವಾದ ಅಸ್ತ್ರಗಳಿಂದ ಆ ಯುದ್ಧದಲ್ಲಿ ಕೈಯಲ್ಲಿ ಆಯುಧಗಳನ್ನು ಹಿಡಿದಿದ್ದ ಅಸುರರನ್ನು, ನೂರರಗಟ್ಟಲೆ ಮತ್ತು ಸಾವಿರದ ಗಟ್ಟಲೆ ಕತ್ತರಿಸಿದೆನು.

ಏವಂ ಮೇ ಚರತಸ್ತತ್ರ ಸರ್ವಯತ್ನೇನ ಶತ್ರುಹನ್ ।
ಪ್ರೀತಿಮಾನಭವದ್ ವೀರೋ ಮಾತಲಿಃ ಶಕ್ರಸಾರಥಿಃ ॥೧೫॥

ಎಲೈ ಶತ್ರುಘಾತಕನೇ, ಹೀಗೆ ನಾನು ಸರ್ವಪ್ರಯತ್ನದಿಂದ ಯುದ್ಧಭೂಮಿಯಲ್ಲಿ ಸಂಚರಿಸುವುದನ್ನು ನೋಡಿ ಇಂದ್ರಸಾರಥಿಯಾದ ವೀರನಾದ ಮಾತಲಿಯು ನನ್ನಲ್ಲಿ ಪ್ರೀತಿಯುಳ್ಳವನಾದನು.

ವಧ್ಯಮಾನಾಸ್ತತಸ್ತೈಸ್ತು ಹಯೈಸ್ತೇನ ರಥೇನ ಚ ।
ಅಗಮನ್ ಪ್ರಕ್ಷಯಂ ಕೇಚಿನ್ನ್ಯವರ್ತಂತ ತಥಾ ಪರೇ ॥೧೬॥

ಆಗ ಅಶ್ವಗಳಿಂದಲೂ ಮತ್ತು ರಥದಿಂದಲೂ ಹತರಾದ ಆ ದಾನವರ ಸೇನೆಯು ವಿಶೇಷವಾಗಿ ಕ್ಷಯವನ್ನು ಹೊಂದಿತು. ಇನ್ನು ಕೆಲವರು ಯುದ್ಧಭೂಮಿಯಿಂದ ಹಿಮ್ಮೆಟ್ಟಿದ್ದರು.

ಸ್ಪರ್ಧಮಾನಾ ಇವಾಸ್ಮಾಭಿರ್ನಿವಾತಕವಚಾ ರಣೇ ।
ಶರವರ್ಷೈಃ ಶರಾರ್ತಂ ಮಾಂ ಮಹದ್ಭಿಃ ಪ್ರತ್ಯವಾರಯನ್ ॥೧೭॥

ಇನ್ನು ಕೆಲವು ನಿವಾತಕವಚರು ಯುದ್ಧದಲ್ಲಿ ನನ್ನ ಜೊತೆಯಲ್ಲಿ ಸ್ಪರ್ಧೆ ಮಾಡುವಂತೆ ಶರಗಳಿಂದ ಪೀಡಿತನಾದ ನನ್ನನ್ನು ದೊಡ್ಡ ಶರವರ್ಷದಿಂದ ತಡೆಹಿಡಿದರು.

ತತೋಽಹಂ ಲಘುಭಿಶ್ಚಿತ್ರೈರ್ಬ್ರಹ್ಮಾಸ್ತ್ರಪರಿಮಂತ್ರಿತೈಃ ।
ವ್ಯಧಮಂ ಸಾಯಕೈರಾಶು ಶತಶೋಽಥ ಸಹಸ್ರಶಃ ॥೧೮॥

ಆಗ ನಾನು ಬ್ರಹ್ಮಾಸ್ತ್ರದಿಂದ ಅಭಿಮಂತ್ರಿತವಾದ ಚಿಕ್ಕ ಮತ್ತು ವಿಚಿತ್ರವಾದ ಬಾಣಗಳಿಂದ ಆ ಸೈನ್ಯವನ್ನು ನೂರರ ಸಂಖ್ಯೆಯಲ್ಲಿ ಮತ್ತು ಸಾವಿರದ ಸಂಖ್ಯೆಯಲ್ಲಿ ನಾಶಪಡಿಸಿದೆನು.

ತತಃ ಸಂಪೀಡ್ಯಮಾನಾಸ್ತೇ ಕ್ರೋಧಾವಿಷ್ಟಾ ಮಹಾಸುರಾಃ ।
ಅಪೀಡಯನ್ಮಾಂ ಸಹಿತಾಃ ಶರಶೂಲಾಸಿವೃಷ್ಟಿಭಿಃ ॥೧೯॥

ಆಗ ನನ್ನ ಬಾಣಗಳಿಂದ ಪೀಡಿಸಲ್ಪಟ್ಟ ಮಹಾ ಅಸುರರು ಕ್ರೋಧಾವಿಷ್ಟರಾಗಿ ಎಲ್ಲರೂ ಒಟ್ಟಿಗೆ ಶರಶೂಲ ಮತ್ತು ಖಡ್ಗಗಳ ವರ್ಷದಿಂದ ನನ್ನನ್ನು ಪೀಡಿಸಿದರು.

ತತೋಽಹಮಸ್ತ್ರಮಾತಿಷ್ಠಂ ಪರಮಂ ತಿಗ್ಮತೈಜಸಮ್ ।
ದಯಿತಂ ದೇವರಾಜಸ್ಯ ಮಾಧವಂ ನಾಮ ಭಾರತ ॥೨೦॥

ಎಲೈ ಭಾರತನೇ, ಆಗ ನಾನು ದೇವರಾಜನಿಗೆ ಪ್ರಿಯವಾದ ತೀಕ್ಷ್ಣಸಾಮರ್ಥ್ಯವುಳ್ಳ ಶ್ರೇಷ್ಠವಾದ ಮಾಧವಾಸ್ತ್ರವನ್ನು ಆಶ್ರಯಿಸಿದೆನು.

ತತಃ ಖಡ್ಗಾಂಸ್ತ್ರಿಶೂಲಾಂಶ್ಚ ತೋಮರಾಂಶ್ಚ ಸಹಸ್ರಶಃ ।
ಅಸ್ತ್ರವೀರ್ಯೇಣ ಶತಧಾ ತೈರ್ಮುಕ್ತಾನಮಹಚ್ಛಿದಮ್ ॥೨೧॥

ಆಗ ನಾನು ಆ ಅಸ್ತ್ರದ ಸಾಮರ್ಥ್ಯದಿಂದ ಅವರಿಂದ ಪ್ರಯೋಗಿಸಲ್ಪಟ್ಟ ಖಡ್ಗಗಳನ್ನೂ, ತ್ರಿಶೂಲಗಳನ್ನೂ ಮತ್ತು ಸಾವಿರಾರು ತೋಮರಗಳನ್ನೂ ಒಂದೊಂದನ್ನೂ ನೂರಾರು ಭಾಗವಾಗಿ ಕತ್ತರಿಸಿದೆನು.

ಛಿತ್ತ್ವಾ ಪ್ರಹರಣಾನ್ಯೇಷಾಂ ತತಸ್ತಾನಪಿ ಸರ್ವಶಃ ।
ಪ್ರತ್ಯವಿಧ್ಯಮಹಂ ರೋಷಾದ್ ದಶಾಭಿರ್ದಶಭಿಃ ಶರೈಃ ॥೨೨॥

ಅವರ ಅಸ್ತ್ರಗಳನ್ನು ಕತ್ತರಿಸಿ ಅನಂತರ ರೋಷದಿಂದ ನಾನು ಒಬ್ಬೊಬ್ಬನಿಗೆ ಹತ್ತು ಬಾಣಗಳಂತೆ ಅವರೆಲ್ಲರನ್ನೂ ಬಾಣಗಳಿಂದ ಹೊಡೆದೆನು.

ಗಾಂಡೀವಾದ್ಧಿ ತದಾ ಸಂಖೇ ಯಥಾ ಭ್ರಮರಪಂಕ್ತಯಃ ।
ನಿಷ್ಪತಂತಿ ಮಹಾಬಾಣಾಸ್ತಂ ಮಾತಲಿರಪೂಜಯತ್ ॥೨೩॥

ಆಗ ಗಾಂಡೀವದಿಂದ ಮಹಾಬಾಣಗಳು ಭ್ರಮರಪಂಕ್ತಿಯಂತೆ ಹೊರಬರುತ್ತಿದ್ದುದನ್ನು ನೋಡಿ ಮಾತಲಿಯು ನನ್ನ ಮೇಲೆ ಗೌರವವುಳ್ಳವನಾದನು.

ತೇಷಾಮಪಿ ತು ಬಾಣಾಸ್ತೇ ಬಹುಲಾಚ್ಛಲಭಾ ಇವ ।
ಅವಾಕಿರನ್ ಮಾಂ ಬಲವತ್ ತಾನಹಂ ವ್ಯಧಮಂ ಶರೈಃ ॥೨೪॥

ಅನೇಕವಾದ ಕಾರಣದಿಂದ ಶಲಭ (ದೀಪದ ಹುಳು)ದಂತಿದ್ದ ಅವರ ಬಾಣಗಳೂ ಸಹ ಬಲದಿಂದ ಕೂಡಿ ನನ್ನ ಮೇಲೆ ಬಿದ್ದವು. ನಾನು ಅವುಗಳನ್ನು ನನ್ನ ಬಾಣಗಳಿಂದ ನಾಶಪಡಿಸಿದೆನು.

ವಧ್ಯಮಾನಾಸ್ತತಸ್ತೇ ತು ನಿವಾತಕವಚಾಃ ಪುನಃ ।
ಶರವರ್ಷೈರ್ಮಹದ್ಭಿರ್ಮಾಂ ಸಮಂತಾತ್ ಪರ್ಯವಾರಯನ್ ॥೨೫॥

ಹೀಗೆ ವಧ್ಯಮಾನರಾದ ಆ ನಿವಾತಕವಚರು ಪುನಃ ಎಲ್ಲ ಕಡೆಗಳಿಂದಲೂ ದೊಡ್ಡ ಶರವರ್ಷದಿಂದ ನನ್ನನ್ನು ಆವರಿಸಿದರು.

ಶರವೇಗಾನ್ ನಿಹತ್ಯಾಹಮಸ್ತ್ರೈರಸ್ತ್ರವಿಘಾತಿಭಿಃ ।
ಜ್ವಲದ್ಭಿಃ ಪರಮೈಃ ಶೀಘ್ರೈಸ್ತಾನವಿಧ್ಯಂ ಸಹಸ್ರಶಃ ॥೨೬॥

ಅಸ್ತ್ರವಿಘಾತಿಗಳಾದ ಅಸ್ತ್ರಗಳಿಂದ ಅವರ ಶರವೇಗವನ್ನು ನಾಶಪಡಿಸಿ ಉರಿಯುತ್ತಿರುವ ಶೀಘ್ರಗಾಮಿಗಳಾದ ಶ್ರೇಷ್ಠವಾದ ಬಾಣಗಳಿಂದ ಅವರಿಗೆ ಸಹಸ್ರ ಸಂಖ್ಯೆಯಲ್ಲಿ ಹೊಡೆದೆನು.

ತೇಷಾಂ ಛಿನ್ನಾನಿ ಗಾತ್ರಾಣಿ ವಿಸೃಜಂತಿ ಸ್ಮ ಶೋಣಿತಮ್ ।
ಪ್ರಾವೃಷೀವಾಭಿವೃಷ್ಟಾನಿ ಶೃಂಗಾಣ್ಯಥ ಧರಾಭೃತಾಮ್ ॥೨೭॥

ಆ ಬಾಣಗಳಿಂದ ಕತ್ತರಿಸಲ್ಪಟ್ಟ ಅವರ ಶರೀರಗಳು ಮಳೆಗಾಲದಲ್ಲಿ ಪರ್ವತ ಶೃಂಗಗಳಿಂದ ಕೆಳಗೆ ಹರಿಯುವ ನೀರಿನಂತೆ ರಕ್ತದ ಧಾರೆಗಳನ್ನು ಸೃಷ್ಟಿಸಿದವು.

ಇಂದ್ರಾಶನಿಸಮಸ್ಪರ್ಶೈರ್ವೇಗವದ್ಭಿರಜಿಹ್ಮಗೈಃ ।
ಮದ್ಬಾಣೈರ್ವಧ್ಯಮಾನಾಸ್ತೇ ಸಮುದ್ವಿಗ್ನಾಃ ಸ್ಮ ದಾನವಾಃ ॥೨೮॥

ಇಂದ್ರನ ವಜ್ರಾಯುಧಕ್ಕೆ ಸಮವಾದ ಸ್ಪರ್ಶವುಳ್ಳ, ವೇಗವುಳ್ಳ ಮತ್ತು ನೇರವಾದ ನನ್ನ ಬಾಣಗಳಿಂದ ಹೊಡೆಯಲ್ಪಟ್ಟ ಆ ದಾನವರು ಸಮುದ್ವಿಗ್ನರಾದರು.

ಶತಧಾ ಭಿನ್ನದೇಹಾಸ್ತೇ ಕ್ಷೀಣಪ್ರಹರಣೌಜಸಃ ।
ತತೋ ನಿವಾತಕವಚಾ ಮಾಮಯುಧ್ಯಂತ ಮಾಯಯಾ ॥೩೯॥

ಆ ನಿವಾತಕವಚರು ನೂರಾರು ಸಂಖ್ಯೆಯಲ್ಲಿ ಭಿನ್ನದೇಹರಾಗಿ ತಮ್ಮ ಶಸ್ತ್ರಗಳನ್ನೂ ಮತ್ತು ಸಾಮರ್ಥ್ಯಗಳನ್ನೂ ಕಳೆದುಕೊಂಡ ಮೇಲೆ ನನ್ನ ಜೊತೆಯಲ್ಲಿ ಮಾಯಾಯುದ್ಧವನ್ನು ಪ್ರಾರಂಭಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ನಿವಾತಕವಚಯುದ್ಧಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ತೈದನೆಯ
ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ತೇಷಾಂ ಸ ಶಸ್ತ್ರಾಣಿ ಕಿರೀಟಮಾಲೀ
ನಿವಾರ್ಯ ಗಾಂಡೀವಧನುಃಪ್ರಮುಕ್ತೈಃ ।
ಶರೈಃ ಶಿರಾಂಸಿ ಪ್ರಚಕರ್ತ ವೀರೋ
ಸಹಸ್ರಶಿಕ್ಷಾಬಲಸಂಪ್ರಯುಕ್ತೈಃ ॥೩೧೩॥

ಕಿರೀಟ ಹಾರಗಳನ್ನು ಧರಿಸಿದ ವೀರ ಅರ್ಜುನ ನಿವಾತಕವಚರ ಶಸ್ತ್ರಗಳನ್ನು ತಡೆದು ಗಾಂಡೀವ ಧನುಸ್ಸಿನಿಂದ ಮಹಾ ಅಸ್ತ್ರಗಳ ಅಭ್ಯಾಸ ಬಲದಿಂದ ಚೆನ್ನಾಗಿ ಬಾಣ ಪ್ರಯೋಗ ಮಾಡಿ ಅವರ ತಲೆಗಳನ್ನು ಕತ್ತರಿಸಿದ.

ಸರ್ವೇ ಹತಾಸ್ತೇನ ಮಹಾರಥೇನ ತೇ
ದಾನವಾಃ ಸೋऽಪಿ ಯಯೌ ತಥಾऽನ್ಯಾನ್ ।
ಪೌಲೋಮಕಾಲೇಯಗಣಾಭಿಧಾನಾನ್
ಷಷ್ಟಿಂ ಸಹಸ್ರಾಣಿ ಮಹಾರಥಾನಾಮ್ ॥೩೧೪॥

ಮಹಾರಥನಾದ ಅರ್ಜುನ ಆ ಎಲ್ಲ ದಾನವರನ್ನೂ ಸಂಹರಿಸಿದ. ಹಾಗೇ ಮಹಾರಥರಾದ ಅರವತ್ತು ಸಾವಿರ ಪೌಲೋಮ ಕಾಲೇಯ ಗಣಗಳೆಂಬ ಹೆಸರಿನ ಬೇರೆ ದಾನವರನ್ನೂ ಆಕ್ರಮಿಸಿದ.

ತಾನಸ್ತ್ರಶಸ್ತ್ರಾಣ್ಯಭಿವರ್ಷಮಾಣಾನ್
ಧನಂಜಯಃ ಪಾಶುಪತಾಸ್ತ್ರತೋ ದ್ರಾಕ್ ।
ದಗ್ಧ್ವಾ ಯಯೌ ಪುನರೇವೇಂದ್ರಸದ್ಮ
ತಂ ಸಸ್ವಜೇ ಪ್ರೀತಿಯುತಶ್ಚ ಶಕ್ರಃ ॥೩೧೫॥

ಆ ಪೌಲೋಮ ಕಾಲಿಕೇಯರು ಅಸ್ತ್ರಶಸ್ತ್ರಗಳ ಮಳೆ ಸುರಿಸುತ್ತಿದ್ದಂತೆಯೇ ಅರ್ಜುನ ಅವರನ್ನು ಬೇಗನೆ ಪಾಶುಪತಾಸ್ತ್ರದಿಂದ ಸುಟ್ಟು ಪುನಃ ಸ್ವರ್ಗಲೋಕಕ್ಕೆ ಹೋದ. ಇಂದ್ರ ಸಂತುಷ್ಟನಾಗಿ ಅವನನ್ನು ಆಲಿಂಗಿಸಿದ.

★ ★ ★ ★

ನೂರ ಅರವತ್ತಾರನೆಯ ಅಧ್ಯಾಯ

ದಾನವರ ಮಾಯಾಯುದ್ಧ ಮತ್ತು ದಿವ್ಯಾಸ್ತ್ರಗಳಿಂದ ಅರ್ಜುನನಿಂದ ಅದರ ಪ್ರತಿಘಾತ. ದಾನವರ ಹನನ.

ಅರ್ಜುನಃ

ತತೋऽಶ್ಮವರ್ಷಂ ಸುಮಹತ್ ಪ್ರಾದುರಾಸೀತ್ ಸಮಂತತಃ ।
ನಗಮಾತ್ರೈಃ ಶಿಲಾಖಂಡೈಸ್ತನ್ಮಾಂ ದೃಢಮಪೀಡಯತ್ ॥೧॥

ಅರ್ಜುನ– ಅನಂತರ ಪರ್ವತಗಾತ್ರದ ಶಿಲಾಖಂಡಗಳಿಂದ ಕೂಡಿದ ದೊಡ್ಡ ಶಿಲಾವರ್ಷವು ಪ್ರಾದುರ್ಭಾವವನ್ನು ಹೊಂದಿ ನನ್ನನ್ನು ಬಹಳವಾಗಿ ಪೀಡಿಸಿತು.

ತದಹಂ ವಜ್ರಸಂಕಾಶೈರ್ಮಹೇಂದ್ರಾಸ್ತ್ರಪ್ರಚೋದಿತೈಃ ।
ಅಚೂರ್ಣಯಂ ವೇಗವದ್ಭಿಃ ಶರಜಾಲೈರ್ಮಹಾಹವೇ ॥೨॥

ನಾನು ಆ ಮಹಾಯುದ್ಧದಲ್ಲಿ ಇಂದ್ರಾಸ್ತ್ರಗಳಿಂದ ಅಭಿಮಂತ್ರಿತವಾದ ವೇಗವುಳ್ಳ ವಜ್ರಸದೃಶವಾದ ಬಾಣಸಮೂಹಗಳಿಂದ ಆ ಶಿಲೆಗಳನ್ನು ಪುಡಿಪುಡಿ ಮಾಡಿದೆನು.

ಚೂರ್ಣ್ಯಮಾನೇಽಶ್ಮವರ್ಷೇ ತು ಪಾವಕಃ ಸಮಜಾಯತ ।
ತತ್ರಾಶ್ಮಚೂರ್ಣಾ ನ್ಯಪತನ್ ಪಾವಕಪ್ರಕರಾ ಇವ ॥೩॥

ಶಿಲಾವರ್ಷವು ಪುಡಿಮಾಡಲ್ಪಡುತ್ತಿರಲು ಅಗ್ನಿಯು ಉಂಟಾಯಿತು. ಅಗ್ನಿಯ ಕೆಂಡಗಳಂತೆ ಕಲ್ಲಿನ ಚೂರುಗಳು ಬೀಳಲು ಪ್ರಾರಂಭಿಸಿದವು.

ತತೋಽಶ್ಮವರ್ಷೇ ವಿಹತೇ ಜಲವರ್ಷಂ ಮಹತ್ತರಮ್ ।
ಧಾರಾಭಿರಕ್ಷಮಾತ್ರಾಭಿಃ ಪ್ರಾದುರಾಸೀತ್ ಮಮಾಂತಿಕೇ ॥೪॥

ಶಿಲಾವರ್ಷವು ಪ್ರತಿಹತವಾದಮೇಲೆ ನನ್ನ ಸಮೀಪದಲ್ಲಿ ಒನಕೆಯ ಗಾತ್ರದ ಧಾರೆಗಳಿಂದ ಕೂಡಿದ ಬಹಳ ದೊಡ್ಡದಾದ ಜಲವರ್ಷವು ಉಂಟಾಯಿತು.

ನಭಸಃ ಪ್ರಚ್ಯುತಾ ಧಾರಾಸ್ತಿಗ್ಮವೀರ್ಯಾಃ ಸಹಸ್ರಶಃ ।
ಆವೃಣ್ವನ್ ಸರ್ವತೋ ವ್ಯೋಮ ದಿಶಶ್ಚೋಪದಿಶಸ್ತಥಾ ॥೫॥

ಆಕಾಶದಿಂದ ಕೆಳಗೆ ಬಂದ ಬಹಳ ಬಲಶಾಲಿಗಳಾದ ಸಹಸ್ರಾರು ಸಂಖ್ಯೆಯ ಧಾರೆಗಳು ಆಕಾಶವನ್ನು ಮತ್ತು ದಿಕ್ಕುವಿದಿಕ್ಕುಗಳನ್ನು ಎಲ್ಲಕಡೆಗಳಲ್ಲಿಯೂ ಆವರಿಸಿದವು.

ಧಾರಾಣಾಂ ಚ ನಿಪಾತೇನ ವಾಯೋರ್ವಿಸ್ಫೂರ್ಜಿತೇನ ಚ ।
ಗರ್ಜಿತೇನ ಚ ದೈತ್ಯಾನಾಂ ನ ಪ್ರಾಜ್ಞಾಯತ ಕಿಂಚನ ॥೬॥

ಜಲಧಾರೆಗಳ ಶಬ್ದಗಳಿಂದ, ಬೀಸುವ ವಾಯುವಿನ ಸ್ಫೋಟ ಶಬ್ದಗಳಿಂದ, ಮತ್ತು ದೈತ್ಯರ ಗರ್ಜನೆಗಳ ಕಾರಣದಿಂದ ಏನೂ ತಿಳಿಯುತ್ತಿರಲಿಲ್ಲ.

ಧಾರಾ ದಿವಿ ಚ ಸಂಬದ್ಧಾ ವಸುಧಾಯಾಂ ಚ ಸರ್ವಶಃ ।
ವ್ಯಾಮೋಹಯಂತ ಮಾಂ ತತ್ರ ನಿಪತಂತ್ಯೋಽನಿಶಂ ಭುವಿ ॥೭॥

ಎಲ್ಲಕಡೆಗಳಲ್ಲಿಯೂ ಆಕಾಶದಿಂದ ಭೂಮಿಯವರೆಗೆ ಸಂಬದ್ಧವಾಗಿದ್ದು, ಭೂಮಿಯ ಮೇಲೆ ಸತತವಾಗಿ ಬೀಳುವ ಜಲಧಾರೆಗಳು ನನಗೆ ವ್ಯಾಮೋಹವನ್ನು ಉಂಟುಮಾಡಿದವು.

ತತ್ರೋಪದಿಷ್ಟಮಿಂದ್ರೇಣ ದಿವ್ಯಮಸ್ತ್ರಂ ವಿಶೋಷಣಮ್ ।
ದೀಪ್ತಂ ಪ್ರಾಹಿಣವಂ ಘೋರಮಶುಷ್ಯತ್ ತೇನ ತಜ್ಜಲಮ್ ॥೮॥

ಆಗ ನಾನು ಇಂದ್ರನಿಂದ ಉಪದಿಷ್ಟವಾದ ದಿವ್ಯವಾದ ಘೋರವಾದ ಮತ್ತು ಜ್ವಲಿಸುವ ವಿಶೋಷಣಾಸ್ತ್ರವನ್ನು ಪ್ರಯೋಗಿಸಿದೆನು. ಆ ಜಲವೆಲ್ಲವೂ ಒಣಗಿ ಹೋಯಿತು.

ಹತೇಽಶ್ಮವರ್ಷೇ ಚ ಮಯಾ ಜಲವರ್ಷೇ ಚ ಶೋಷಿತೇ ।
ಮುಮುಚುರ್ದಾನವಾ ಮಾಯಾಮಗ್ನಿಂ ವಾಯುಂ ಚ ಭಾರತ ॥೯॥

ಎಲೈ ಭಾರತನೇ, ಶಿಲಾವರ್ಷ ಮತ್ತು ಜಲವರ್ಷಗಳು ಹತವಾಗಿ ಶೋಷಿತವಾಗುತ್ತಿರಲು ದಾನವರು ಮಾಯೆಯಿಂದ ಅಗ್ನಿ ಮತ್ತು ವಾಯುಗಳನ್ನು ಸೃಷ್ಟಿಸಿ ನನ್ನ ಮೇಲೆ ಪ್ರಯೋಗಿಸಿದರು.

ತತೋಽಹಮಗ್ನಿಂ ವ್ಯಧಮಂ ಸಲಿಲಾಸ್ತ್ರೇಣ ಸರ್ವಶಃ ।
ಶೈಲೇನ ಚ ಮಹಾಸ್ತ್ರೇಣ ವಾಯೋರ್ವೇಗಮಧಾರಯಮ್ ॥೧೦॥

ಆಗ ನಾನು ಜಲಾಸ್ತ್ರದಿಂದ (ವಾರುಣಾಸ್ತ್ರದಿಂದ) ಆ ಅಗ್ನಿಯನ್ನು ಎಲ್ಲಕಡೆಯಲ್ಲಿಯೂ ಶಾಂತಗೊಳಿಸಿದೆನು. ಮತ್ತು ಪರ್ವತಾಸ್ತ್ರದಿಂದ ವಾಯುವಿನ ವೇಗವನ್ನು ತಡೆದೆನು.

ತಸ್ಯಾಂ ಪ್ರತಿಹತಾಯಾಂ ತು(ತೇ) ದಾನವಾ ಯುದ್ಧದುರ್ಮದಾಃ ।
ಪ್ರಾಕುರ್ವನ್ ವಿವಿಧಾಂ ಮಾಯಾಂ ಯೌಗಪದ್ಯೇನ ಭಾರತ ॥೧೧॥

ಎಲೈ ಭಾರತನೇ, ಅದು ಪ್ರತಿಹತವಾಗುತ್ತಿರಲು ಯುದ್ಧ ದುರ್ಮದರಾದ ಆ ದಾನವರು ಅನೇಕ ಮಾಯೆಗಳನ್ನು ಒಟ್ಟಿಗೆ ಸೃಷ್ಟಿಸಿದರು.

ತತೋ ವರ್ಷಂ ಪ್ರಾದುರಭೂತ್ ಸುಮಹಲ್ಲೋಮಹರ್ಷಣಮ್ ।
ಅಸ್ತ್ರಾಣಾಂ ಘೋರರೂಪಾಣಾಮಗ್ನೇರ್ವಾಯೋಸ್ತಥಾಽಶ್ಮನಾಮ್ ।
ಸಾ ತು ಮಾಯಾಮಯೀ ವೃಷ್ಟಿಃ ಪೀಡಯಾಮಾಸ ಮಾಂ ಯುಧಿ ॥

ಅನಂತರ ಅಸ್ತ್ರಗಳ, ಘೋರರೂಪವಾದ ಅಗ್ನಿ, ವಾಯು ಮತ್ತು ಶಿಲೆಗಳ, ರೋಮಾಂಚಕರವಾದ ದೊಡ್ಡ ವೃಷ್ಟಿಯು ಕಂಡುಬಂದಿತು. ಆ ಮಾಯಾಮಯವಾದ ವೃಷ್ಟಿಯು ಯುದ್ಧದಲ್ಲಿ ನನ್ನನ್ನು ಪೀಡಿಸಿತು.

ಅಥ ಘೋರಂ ತಮಸ್ತೀವ್ರಂ ಪ್ರಾದುರಾಸೀತ್ ಸಮಂತತಃ ॥೧೩॥

ಅನಂತರ ಘೋರವಾದ ನಿಬಿಡವಾದ ಕತ್ತಲೆಯು ಎಲ್ಲಕಡೆಯಲ್ಲಿಯೂ ಕಾಣಿಸಿಕೊಂಡಿತು.

ತಮಸಾ ಸಂವೃತೇ ಲೋಕೇ ಘೋರೇಣಾವರಣೇನ (ಘೋರೇಣ ಪರುಷೇಣ) ಚ।
ತುರಗಾ(ಹರಯೋ) ವಿಮುಖಾಶ್ಚಾಸನ್ ಪ್ರಾಸ್ಖಲಚ್ಚಾಪಿ ಮಾತಲಿಃ ॥೧೪॥

ಹೀಗೆ ಲೋಕದಲ್ಲಿ ಎಲ್ಲಕಡೆಯಲ್ಲಿಯೂ ಕತ್ತಲು ಆವರಿಸಿದಾಗ ಅಶ್ವಗಳು ವಿಮುಖವಾದವು ಮತ್ತು ಮಾತಲಿಯೂ ಸಹ ಎಡವಲು ಪ್ರಾರಂಭಿಸಿದನು.

ಹಸ್ತಾದ್ಧಿರಣ್ಮ(ಶ್ಮ)ಯಶ್ಚಾಸ್ಯ ಪ್ರತೋದಃ ಪ್ರಾಪತದ್ಭುವಿ ।
ಅಸಕೃಚ್ಚಾಹ ಮಾಂ ಭೀತಃ ಕಿಂ ಕರಿಷ್ಯಾಮ ಇತ್ಯಪಿ (ಕ್ವಾಸೀತಿ ಭರತರ್ಷಭ) ॥೧೫॥

ಅವನ ಹಸ್ತದಿಂದ ಚಿನ್ನದ ಚಾವಟಿಯು ನೆಲದ ಮೇಲೆ ಬಿದ್ದಿತು. ಅವನು ಅನೇಕ ಬಾರಿ ನನ್ನನ್ನು ಕುರಿತು ಭಯದಿಂದ ಈಗ ಏನು ಮಾಡೋಣ ಎಂದು ಕೇಳಿದನು.

ಮಾಂ ಚ ಭೀರಾವಿಶತ್ ತೀವ್ರಾ ತಸ್ಮಿನ್ ವಿಗತಚೇತಸಿ ।
ಸ ಚ ಮಾಂ ವಿಗತಜ್ಞಾನಃ ಸಂತ್ರಸ್ತಮಿದಮಬ್ರವೀತ್ ॥೧೬॥

ಮಾತಲಿಯು ಹೀಗೆ ಸಮ್ಮೋಹಕ್ಕೆ ಒಳಗಾಗುತ್ತಿರಲು ನನಗೂ ತೀವ್ರವಾದ ಭಯ ಉಂಟಾಯಿತು. ವಿಸಂಜ್ಞನಾದ ಅವನು ಭಯಗ್ರಸ್ತನಾದ ನನ್ನನ್ನು ಕುರಿತು ಹೀಗೆ ಹೇಳಿದನು.

ಸುರಾಣಾಮಸುರಾಣಾಂ ಚ ಸಂಗ್ರಾಮಃ ಸುಮಹಾನಭೂತ್ ।
ಅಮೃತಾರ್ಥಂ ಪುರಾ ಪಾರ್ಥ ಸ ಚ ದೃಷ್ಟೋ ಮಯಾऽನಘ ॥೧೭॥

ಎಲೈ ಅನಘನೇ, ಪಾರ್ಥನೇ, ಹಿಂದೆ ಅಮೃತದ ಸಲುವಾಗಿ ಸುರಾಸುರರಿಗೆ ದೊಡ್ಡ ಯುದ್ಧವು ನಡೆಯಿತು. ಅದನ್ನು ನಾನು ನೋಡಿದ್ದೇನೆ.

ಶಂಬರಸ್ಯ ವಧೇ ಚಾಪಿ(ಘೋರಃ) ಸಂಗ್ರಾಮಃ ಸುಮಹಾನಭೂತ್ ।
ಸಾರಥ್ಯಂ ದೇವರಾಜಸ್ಯ ತತ್ರಾಪಿ ಕೃತವಾನಹಮ್ ॥೧೮॥

ಶಂಬರನ ವಧೆಯಾದಾಗಲೂ ಘೋರವಾದ ಯುದ್ಧವು ಜರುಗಿತು. ಆಗಲೂ ನಾನು ದೇವರಾಜನಿಗೆ ಸಾರಥ್ಯವನ್ನು ಮಾಡಿದೆ.

ತಥೈವ ವೃತ್ರಸ್ಯ ವಧೇ ಸಂಗೃಹೀತಾ ಹಯಾ ಮಯಾ ।
ವೈರೋಚನೇರ್ಮಹಾಯುದ್ಧಂ ದೃಷ್ಟಂ ಚಾಪಿ ಸುದಾರುಣಮ್ ॥೧೯॥

ವೃತ್ರವಧೆಯ ಸಮಯದಲ್ಲಿಯೂ ನಾನು ಅಶ್ವಗಳನ್ನು ನಿಯಂತ್ರಿಸಿದೆ. ವಿರೋಚನನ ಮಗನಾದ ಬಲಿಯ ಜೊತೆಯಲ್ಲಿ ನಡೆದ ಧಾರುಣವಾದ ಯುದ್ಧವನ್ನೂ ನೋಡಿದ್ದೇನೆ.

ಏತೇ ಮಯಾ ಮಹಾಘೋರಾಃ ಸಂಗ್ರಾಮಾಃ ಪರ್ಯುಪಾಸಿತಾಃ ।
ನ ಚಾಪಿ ವಿಗತಜ್ಞಾನೋಽಭೂತಪೂರ್ವೋಽಸ್ಮಿ ಪಾಂಡವ ॥೨೦॥

ನಾನು ಈ ಘೋರವಾದ ಸಂಗ್ರಾಮಗಳನ್ನು ನೋಡಿದ್ದೇನೆ ಮತ್ತು ಇಂದ್ರರಥವನ್ನು ಆಗ ನಡೆಸಿದ್ದೇನೆ. ಎಲೈ ಪಾಂಡವನೇ, ಆದರೆ ಹಿಂದೆ ಎಂದೂ ಹೀಗೆ ವಿಸಂಜ್ಞನಾಗಿಲ್ಲ.

ಪಿತಾಮಹೇನ ಸಂಹಾರಃ ಪ್ರಜಾನಾಂ ವಿಹಿತೋ ಧ್ರುವಮ್ ।
ನ ಹಿ ಯುದ್ಧಮಿದಂ ಯುಕ್ತಮನ್ಯತ್ರ ಜಗತಃ ಕ್ಷಯಾತ್ ॥೨೧॥

ಪಿತಾಮಹರಾದ ಬ್ರಹ್ಮದೇವರು ಎಲ್ಲ ಪ್ರಜೆಗಳ ವಿನಾಶವನ್ನು ವಿಧಾನ ಮಾಡಿರುವಂತೆ ನಿಶ್ಚಿತವಾಗಿ ತೋರುತ್ತದೆ. ಜಗತ್ತಿನ ಕ್ಷಯದ ಸಂದರ್ಭವನ್ನು ಬಿಟ್ಟು ಬೇರೆ ಕಾಲದಲ್ಲಿ ಇಂತಹ ಯುದ್ಧವು ಯುಕ್ತವಾಗುವುದಿಲ್ಲ.

ಅರ್ಜುನಃ

ತಸ್ಯ ತದ್ವಚನಂ ಶ್ರುತ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।
(ಮೋಹಯಿಷ್ಯನ್ದಾನವಾನಾಮಹಂ ಮಾಯಾಬಲಂ ಮಹತ್)॥೨೨॥

ಅಬ್ರುವಂ ಮಾತಲಿಂ ಭೀತಂ ಪಶ್ಯ ಮೇ ಭುಜಯೋರ್ಬಲಮ್ ।
ಅಸ್ತ್ರಾಣಾಂ ಚ ಪ್ರಭಾವಂ ವೈ ಧನುಷೋ ಗಾಂಡಿವಸ್ಯ ಚ ॥೨೩॥

ಅರ್ಜುನ– ಅವನ ಆ ಮಾತುಗಳನ್ನು ಕೇಳಿ ನಾನು ನನ್ನನ್ನೇ ಸಮಾಧಾನ ಮಾಡಿಕೊಂಡು ದಾನವರ ದೊಡ್ಡ ಮಾಯಾಬಲವನ್ನು ಮೋಹಗೊಳಿಸಲು ಉದ್ದೇಶಿಸಿ

ಭೀತನಾದ ಮಾತಲಿಯನ್ನು ಕುರಿತು ನನ್ನ ಭುಜಬಲವನ್ನೂ, ನನ್ನ ಅಸ್ತ್ರಗಳ ಮತ್ತು ಗಾಂಡೀವ ಧನುಸ್ಸಿನ ಸಾಮರ್ಥ್ಯವನ್ನೂ ನೋಡು ಎಂದು ಹೇಳಿದೆನು.

ಅದ್ಯಾಸ್ತ್ರಮಾಯಯೈತೇಷಾಂ ಮಾಯಾಮೇತಾಂ ಸುದಾರುಣಾಮ್ ।
ವಿನಿಹನ್ಮಿ ತಮಶ್ಚೋಗ್ರಂ ಮಾ ಭೈಃ ಸೂತ ಸ್ಥಿರೋ ಭವ ॥೨೪॥

ಎಲೈ ಸಾರಥಿಯೇ, ಸ್ಥಿರವಾಗಿರು. ನಾನು ಈಗ ನನ್ನ ಅಸ್ತ್ರಗಳ ಸಾಮರ್ಥ್ಯದಿಂದ ದಾನವರ ಈ ಘೋರವಾದ ಮಾಯೆಯನ್ನು ವಿನಾಶಗೊಳಿಸುತ್ತೇನೆ. ತೀವ್ರವಾದ ತಮಸ್ಸನ್ನೂ ಸಂಹರಿಸುತ್ತೇನೆ.

ಏವಮುಕ್ತ್ವಾ ऽಹಮಸೃಜಮಸ್ತ್ರಮಾಯಾಂ ನರಾಧಿಪ ।
ಮೋಹನೀಂ ಸರ್ವಶತ್ರೂಣಾಂ (ಭೂತಾನಾಂ) ಹಿತಾಯ ತ್ರಿದಿವೌಕಸಾಮ್ ॥೨೫॥

ಎಲೈ ನರಾಧಿಪನೇ, ಹೀಗೆ ಹೇಳಿ ನಾನು ಎಲ್ಲಾ ಶತ್ರುಗಳನ್ನು ಮೋಹನಗೊಳಿಸಲು ಮತ್ತು ದೇವತೆಗಳನ್ನು ಸಂತೋಷಪಡಿಸಲು ನನ್ನ ಅಸ್ತ್ರಮಾಯೆಯನ್ನು ಸೃಷ್ಟಿಸಿದೆನು.

ಪೀಡ್ಯಮಾನಾಸು ಮಾಯಾಸು ತಾಸು ತಾಸ್ವಸುರೋತ್ತಮಾಃ ।
ಪುನರ್ಬಹುವಿಧಾ ಮಾಯಾಃ ಪ್ರಾಕುರ್ವನ್ನಮಿತೌಜಸಃ ॥೨೬॥

ನನ್ನ ಅಸ್ತ್ರಮಾಯೆಯಿಂದ ಅವರ ಆಯಾಮಾಯೆಗಳು ನಾಶಗೊಳಿಸಲ್ಪಡುತ್ತಿರಲು ಅಮಿತಪರಾಕ್ರಮಿಗಳಾದ ಆ ಅಸುರೋತ್ತಮರು ಪುನಃ ಅನೇಕ ವಿಧವಾದ ಮಾಯೆಗಳನ್ನು ಸೃಷ್ಟಿಸಿದರು.

ಪುನಃ ಪ್ರಕಾಶಮಭವತ್ ತಮಸಾ ಗ್ರಸ್ಯತೇ ಪುನಃ ।
ಭವತ್ಯದರ್ಶನೋ ಲೋಕಃ ಪುನರಪ್ಸು ನಿಮಜ್ಜತಿ ॥೨೭॥

ಪುನಃ ಬೆಳಕಾಗುತ್ತದೆ ಮತ್ತು ಪುನಃ ಕತ್ತಲೆಯಾಗುತ್ತದೆ. ಯಾವ ಲೋಕವೂ ಕಾಣುವುದಿಲ್ಲ. ಪುನಃ ಜಗತ್ತು ನೀರಿನಲ್ಲಿ ಮುಳುಗುತ್ತದೆ.

ಸುಸಂಗೃಹಿತೈರ್ಹರಿಭಿಃ ಪ್ರಕಾಶೇ ಸತಿ ಮಾತಲಿಃ ।
ವ್ಯಚರತ್ ಸ್ಯಂದನಾಗ್ರೇ ಕೃಣ ಸಂಗ್ರಾಮೇ ರೋ(ಲೋ)ಮಹರ್ಷಣೇ ॥

ಆಗ ಪ್ರಕಾಶವುಂಟಾದಾಗ ಮಾತಲಿಯು ಅಶ್ವಗಳನ್ನು ಚೆನ್ನಾಗಿ ನಿಯಂತ್ರಿಸಿ ರೋಮಾಂಚಕಾರಿಯಾದ ಆ ಸಂಗ್ರಾಮದಲ್ಲಿ ನನ್ನ ಶ್ರೇಷ್ಠವಾದ ಆ ರಥವನ್ನು ನಡೆಸಿದನು.

ತತಃ ಪರಿಪತಂತ್ಯಗ್ರಾ(ಪರ್ಯಪತನ್ನಗ್ರಾ। ನಿವಾತಕವಚಾ ಮಯಿ ।
ತಾನಹಂ ವಿವರಂ ದೃಷ್ಟ್ವಾ ಪ್ರಾಹಿಣ್ವಂ ಯಮಸಾದನಮ್ ॥೨೯॥

ನಂತರ ಉಗ್ರರಾದ ನಿವಾತಕವಚರು ನನ್ನ ಮೇಲೆ ಬೀಳಲು ಪ್ರಾರಂಭಿಸಿದರು. ನಾನು ಸೂಕ್ಷ್ಮವಾದ ಅವಕಾಶವನ್ನು ನೋಡಿಕೊಂಡು ಅವರನ್ನು ಯಮಲೋಕಕ್ಕೆ ಕಳುಹಿಸಿದೆನು.

ವರ್ತಮಾನೇ ತಥಾ ಯುದ್ಧೇ ನಿವಾತಕವಚಾಂತಕೇ ।
ನಾಪಶ್ಯಂ ಸಹಸಾ ಸರ್ವಾನ್ ದಾನವಾನ್ ಮಾಯಯಾऽऽವೃತಾನ್ ॥

ನಿವಾತಕವಚ ನಾಶಕವಾದ ಯುದ್ಧವು ಹಾಗೆ ನಡೆಯುತ್ತಿರಲು ಇದ್ದಕ್ಕಿದ್ದಂತೆಯೇ ಯಾವ ದಾನವರೂ ಕಾಣಲಿಲ್ಲ. ಅವರು ತಮ್ಮ ಮಾಯೆಯಿಂದ ಆವೃತರಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಟ್‌ಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ನಿವಾತಕವಚಯುದ್ಧಪರ್ವಣಿ ತ್ರಯೋದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ತಾರನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಅರವತ್ತೇಳನೆಯ ಅಧ್ಯಾಯ

ಅರ್ಜುನನಿಂದ ಪುನಃ ಸ್ವರ್ಗಗಮನ.

ಅರ್ಜುನಃ

ಅದೃಶ್ಯಮಾನಾಸ್ತೇ ದೈತ್ಯಾ ಯೋಧಯಂತಿ ಸ್ಮ ಮಾಯಯಾ ।
ಅದೃಶ್ಯೇನಾಸ್ತ್ರವೀರ್ಯೇಣ ತಾನಪ್ಯಹಮಯೋಧಯಮ್ ॥೧॥

ಅರ್ಜುನ– ಆ ದೈತ್ಯರು ತಮ್ಮ ಮಾಯೆಯಿಂದ ಅದೃಶ್ಯರಾಗಿ ಯುದ್ಧವನ್ನು ಮಾಡಲು ಪ್ರಾರಂಭಿಸಿದರು. ನಾನೂ ಸಹ ಅದೃಶ್ಯಾಸ್ತ್ರದ ಸಾಮರ್ಥ್ಯದಿಂದಲೇ ಅವರ ಜೊತೆಯಲ್ಲಿ ಯುದ್ಧವನ್ನು ಮಾಡಿದೆನು.

ಗಾಂಡೀವಮುಕ್ತಾ ವಿಶಿಖಾಃ ಸಮ್ಯಗಸ್ತ್ರಪ್ರಯೋಜಿತೈಃ (ಚೋದಿತಾಃ) ।
ಅಚ್ಛಿದನ್ನುತ್ತಮಾಂಗಾನಿ ಯತ್ರ ಯತ್ರ ಸ್ಮ ತೇऽಭವನ್ ॥೨॥

ಗಾಂಡೀವ ಧನುಸ್ಸಿನಿಂದ ಅಸ್ತ್ರಪೂರ್ವಕವಾಗಿ ಪ್ರಯೋಗಿಸಲ್ಪಟ್ಟ ಬಾಣಗಳು ಅವರು ಎಲ್ಲೆಲ್ಲಿ ಇದ್ದರೋ ಅಲ್ಲಿಯೇ ಅವರ ತಲೆಗಳನ್ನು ಕತ್ತರಿಸಿದವು.

ತತೋ ನಿವಾತಕವಚಾ ವಧ್ಯಮಾನಾ ಮಯಾ ಯುಧಿ ।
ಸಂಹೃತ್ಯ ಮಾಯಾಂ ತರ(ಸಹ)ಸಾ ಪ್ರಾವಿಶನ್ ಪುರಮಾತ್ಮನಃ ॥೩॥

ಅನಂತರ ನನ್ನಿಂದ ಹತರಾಗುತ್ತಿದ್ದ ನಿವಾತಕವಚರು ತಮ್ಮ ಮಾಯೆಯನ್ನು ಉಪಸಂಹಾರ ಮಾಡಿ ಶೀಘ್ರವಾಗಿ ತಮ್ಮ ಪಟ್ಟಣಕ್ಕೆ ಹಿಂದಿರುಗಿದರು.

ವ್ಯಪಯಾತೇಷು ದೈತ್ಯೇಷು ಪ್ರಾದುರ್ಭೂತೇ ಚ ದರ್ಶನೇ ।
ಅಪಶ್ಯಂ ದಾನವಾಂಸ್ತತ್ರ ಹತಾನ್ ಶತಸಹಸ್ರಶಃ ॥೪॥

ದೈತ್ಯರು ಹೊರಟುಹೋಗಿ ಪ್ರಕಾಶವು ಉಂಟಾದಾಗ ನಾನು ಅಲ್ಲಿ ದಾನವರು, ನೂರುಸಾವಿರ ಸಂಖ್ಯೆಗಳಲ್ಲಿ ಹತರಾಗಿರುವುದನ್ನು ನೋಡಿದೆನು.

ವಿನಿಷ್ಪಿಷ್ಟಾನಿ ತತ್ಕೇಷಾಂ ಶಸ್ತ್ರಾಣ್ಯಾಭರಣಾನಿ ಚ ।
ಶತಶಃ ಸ್ಮ ಪ್ರದೃಶ್ಯಂತೇ ಗಾತ್ರಾಣಿ ಕವಚಾನಿ ಚ ॥೫॥

ಅವರ ಶಸ್ತ್ರಗಳು, ಆಭರಣಗಳು, ಕವಚಗಳು ಮತ್ತು ಶರೀರಗಳು ಎಲ್ಲವೂ ಕತ್ತರಿಸಲ್ಪಟ್ಟು ನೂರಾರು ಸಂಖ್ಯೆಯಲ್ಲಿ ಕಾಣತೊಡಗಿದವು.

ಹಯಾನಾಂ ನಾಂತರಂ ಹ್ಯಾಸೀತ್ ಪದಾದ್ವಿಚಲಿತುಂ ಪದಮ್ ।
ಉತ್ಪತ್ಯ ಸಹಸಾ ತಸ್ಥುರಂತರಿಕ್ಷಗಮಾಸ್ತತಃ ॥೬॥

ನನ್ನ ಕುದುರೆಗಳಿಗೆ ಭೂಮಿಯ ಮೇಲೆ ಕಾಲಿಡಲು ಅವಕಾಶವಿರಲಿಲ್ಲ. ಆಗ ಅವು ತಕ್ಷಣ ಹಾರಿ ಅಂತರಿಕ್ಷದಲ್ಲಿ ಸಂಚರಿಸಲು ಪ್ರಾರಂಭಿಸಿದವು.

ತತೋ ನಿವಾತಕವಚಾ ವ್ಯೋಮ ಸಂಛಾದ್ಯ ಕೇವಲಮ್ ।
ಅದೃಶ್ಯಾ ಹ್ಯತ್ಯವರ್ತಂತ ವಿಸೃಜಂತಃ ಶಿಲೋಚ್ಚಯಾನ್ ॥೭॥

ಆಗ ನಿವಾತಕವಚರು ಆಕಾಶವೆಲ್ಲವನ್ನೂ ಕತ್ತಲಿನಿಂದ ಆವರಿಸಿ ಅದೃಶ್ಯರಾಗಿಯೇ ಶಿಲಾವರ್ಷವನ್ನು ಉಂಟುಮಾಡುತ್ತಾ ಪುನಃ ಹಿಂದಿರುಗಿದರು.

ಅಂತರ್ಭೂಮಿಗತಾಶ್ಚಾನ್ಯೇ ಹಯಾನಾಂ ಚರಣಾನಥ ।
ನ್ಯಗೃಹ್ಣನ್ ದಾನವಾ ಘೋರಾ ರಥಚಕ್ರೇ ಚ ಭಾರತ ॥೮॥

ಕೆಲವು ದಾನವರು ಭೂಮಿಯ ಒಳಗೆ ಸೇರಿ ಕುದುರೆಗಳ ಕಾಲುಗಳನ್ನು ಹಿಡಿದರು. ಎಲೈ ಭಾರತನೇ, ಇನ್ನು ಕೆಲವು ದಾನವರು ರಥವನ್ನು ಮತ್ತು ಚಕ್ರವನ್ನು ಹಿಡಿದರು.

ವಿನಿಗೃಹ್ಯ ಹಯಾಂಶ್ಚಾನ್ಯೇ ರಥಂ ಚ ಮಮ ಯುಧ್ಯತಃ ।
ಸರ್ವತೋ ಮಾಮವಿಧ್ಯಂತ ಸರಥಂ ಧರಣೀಧರೈಃ ॥೯॥

ಅವರು ನನ್ನ ರಥವನ್ನೂ, ಅಶ್ವವನ್ನೂ ನಿಗ್ರಹಿಸಿದರು. ಯುದ್ಧಮಾಡುತ್ತಿರುವ ನನ್ನ ಮೇಲೆ ಮತ್ತು ನನ್ನ ರಥದ ಮೇಲೆ ಎಲ್ಲಕಡೆಗಳಿಂದಲೂ ಪರ್ವತಗಳನ್ನು ಎಸೆದು ನನ್ನನ್ನು ಪೀಡಿಸಿದರು.

ಪರ್ವತೈರುಪಚೀಯದ್ಭಿಃ ಪತದ್ಭಿಶ್ಚ ತಥಾऽಪರೈಃ ।
ಸ ದೇಶೋ ಯತ್ರ ವರ್ತಾಮ ಗುಹೇವ ಸಮಪದ್ಯತ ॥೧೦॥

ನನ್ನ ಮೇಲೆ ಬೀಳುತ್ತಿರುವ ಸಮೃದ್ಧವಾದ ಆ ಪರ್ವತದಿಂದ ನಾವು ಇದ್ದ ಸ್ಥಳವು ಒಂದು ಗುಹೆಯಂತಾಯಿತು.

ಪರ್ವತೈಶ್ಚಾದ್ಯಮಾನೋಽಹಂ ನಿಗೃಹೀತೈಶ್ಚ ವಾಜಿಭಿಃ ।
ಅಗಚ್ಛಂ ಪರಮಾಮಾರ್ತಿಂ ಮಾತಲಿಸ್ತದಲಕ್ಷಯತ್ ।
ಲಕ್ಷಯಿತ್ವಾ ಚ ಮಾಂ ಭೀತಮಿದಂ ವಚನಮಬ್ರವೀತ್ ॥೧೧॥

ಅರ್ಜುನಾರ್ಜುನ ಮಾ ಭೈಸ್ತ್ವಂ ವಜ್ರಮಸ್ತ್ರಮುದೀರಯ ॥೧೨॥

ನನ್ನ ಅಶ್ವಗಳು ತಡೆಯಲ್ಪಟ್ಟು ನಾನು ಪರ್ವತದಿಂದ ಮುಚ್ಚಲ್ಪಟ್ಟಾಗ ಬಹಳ ವಿಷಾದಕ್ಕೆ ಒಳಗಾದೆನು. ಮಾತಲಿಯು ಅದನ್ನು ಲಕ್ಷಿಸಿ ಭೀತನಾದ ನನ್ನನ್ನು ಕುರಿತು ಅರ್ಜುನನೇ ಹೆದರಬೇಡ ವಜ್ರಾಸ್ತ್ರವನ್ನು ಪ್ರಯೋಗಿಸು ಎಂದು ಹೇಳಿದನು.

ತತೋಽಹಂ ತಸ್ಯ ತದ್ವಾಕ್ಯಂ ಶ್ರುತ್ವಾ ವಜ್ರಮುದೀರಯಮ್ ।
ದೇವರಾಜಸ್ಯ ದಯಿತಂ ವಜ್ರ(ಭೀಮ)ಮಸ್ತ್ರಂ ನರಾಧಿಪ ॥೧೩॥

ಎಲೈ ನರಾಧಿಪನೇ, ಆಗ ನಾನು ಅವನ ಮಾತನ್ನು ಕೇಳಿ ದೇವರಾಜನಿಗೆ ಪ್ರಿಯವಾದ ವಜ್ರಾಸ್ತ್ರವನ್ನು ಪ್ರಯೋಗಿಸಿದೆನು.

ಅಚಲಂ ಸ್ಥಾನಮಾಸಾದ್ಯ ಗಾಂಡೀವಮನುಮಂತ್ರ್ಯ ಚ ।
ಅಮುಂಚಂ ವಜ್ರಸಂಸ್ಪರ್ಶಾನಾಯಸಾನ್ ನಿಶಿತಾನ್ ಶರಾನ್ ॥೧೪॥

ಒಂದು ಸ್ಥಿರವಾದ ಸ್ಥಾನದಲ್ಲಿ ನಿಂತು ಗಾಂಡೀವವನ್ನು ಅಭಿಮಂತ್ರಿಸಿ ವಜ್ರಸಂಸ್ಪರ್ಶವುಳ್ಳ ಅಯೋಮಯವಾದ ತೀಕ್ಷ್ಣವಾದ ಬಾಣಗಳನ್ನು ಪ್ರಯೋಗಿಸಿದೆನು.

ತತೋ ಮಾಯಾಶ್ಚ ತಾಃ ಸರ್ವಾ ನಿವಾತಕವಚಾಂಶ್ಚ ತಾನ್ ।
ತೇ ವಜ್ರಚೋದಿತಾ ಬಾಣಾ ವಜ್ರಭೂತಾಃ ಸಮಾವಿಶನ್ ॥೧೫॥

ಆಗ ವಜ್ರಾಸ್ತ್ರದಿಂದ ಪ್ರೇರಿತವಾದ ನನ್ನ ಬಾಣಗಳು ಸ್ವತಃ ವಜ್ರಗಳಂತೆಯೇ ಆಗಿ ನಿವಾತಕವಚರ ಶರೀರಗಳನ್ನೂ ಮತ್ತು ಎಲ್ಲಾ ಮಾಯೆಗಳನ್ನೂ ಪ್ರವೇಶಿಸಿದವು.

ತೇ ವಜ್ರವೇಗವಿಹತಾ ದಾನವಾಃ ಪರ್ವತೋಪಮಾಃ ।
ಇತರೇತರಮಾಶ್ಲಿಷ್ಯ ನ್ಯಪತನ್ ಪೃಥಿವೀತಲೇ ॥೧೬॥

ಆ ವಜ್ರ ವೇಗದಿಂದ ನಿಹತರಾದ ಪರ್ವತಕಾಯರಾದ ದಾನವರು ಒಬ್ಬರನ್ನೊಬ್ಬರು ಆಲಿಂಗಿಸಿಕೊಂಡು ಭೂಮಿಯ ಮೇಲೆ ಉರುಳಿದರು.

ಅಂತರ್ಭೂಮೌ ಚ ಯೇಽಗೃಹ್ಣನ್ ದಾನವಾ ರಥವಾಜಿನಃ ।
ಅನುಪ್ರವಿಶ್ಯ ತಾನ್ ಬಾಣಾಃ ಪ್ರಾಹಿಣ್ವನ್ ಯಮಸಾದನಮ್ ॥೧೭॥

ಆ ಬಾಣಗಳು ಭೂಮಿಯ ಒಳಗೆ ಅಡಗಿ ರಥ ಮತ್ತು ಕುದುರೆಗಳನ್ನು ಹಿಡಿದ ದಾನವರ ಶರೀರಗಳನ್ನು ಪ್ರವೇಶಿಸಿ ಅವರನ್ನು ಯಮಲೋಕಕ್ಕೆ ಕಳುಹಿಸಿದವು.

ತದಾ ನಿ(ಹತೈರ್ನಿ)ವಾತಕವಚೈರ್ನಿರಸ್ತೈಃ ಪರ್ವತೋಪಮೈಃ ।
ಸಮಾಚ್ಛಾದ್ಯತ ದೇಶಃ ಸ ವಿಕೀರ್ಣೈರಿವ ಪರ್ವತೈಃ ॥೧೮॥

ಆಗ ಹತರಾದ ಪರ್ವತಕಾಯರಾದ ನಿವಾತಕವಚರ ಎಲ್ಲ ಕಡೆಯಲ್ಲಿಯೂ ಚೆಲ್ಲಾಡಿದ ಆ ದೇಹವೆಂಬ ಪರ್ವತಗಳಿಂದ ಆ ಭೂಪ್ರದೇಶವೆಲ್ಲವೂ ಆವರಿಸಲ್ಪಟ್ಟಿತು.

ನ ಹಯಾನಾಂ ಕ್ಷತಿಃ ಕ(ಕಾ)ಚಿನ್ನ ರಥಸ್ಯ ನ ಮಾತಲೇಃ ।
ಮಮ ಚಾದೃಶ್ಯತ ತದಾ ತದದ್ಭುತಮಿವಾಭವತ್ ॥೧೯॥

ನನಗಾಗಲೀ, ನನ್ನ ರಥಕ್ಕಾಗಲೀ ಅಥವಾ ಮಾತಲಿಗಾಗಲೀ ಯಾವ ಗಾಯವೂ ಆಗಲಿಲ್ಲ. ಅದು ಅದ್ಭುತವಾಗಿದ್ದಿತು.

ತತೋ ಮಾಂ ಪ್ರಹಸನ್ ರಾಜನ್ ಮಾತಲಿಃ ಪ್ರತ್ಯಭಾಷತ ।
ನೈತದರ್ಜುನ ದೇವೇಷು ತ್ವಯಿ ವೀರ್ಯಂ ಯದೀಕ್ಷ್ಯತೇ ॥೨೦॥

ಮಾತಲಿ– ರಾಜನೇ, ಆಗ ಮಾತಲಿಯು ನಗುತ್ತಾ ನನ್ನನ್ನು ಕುರಿತು 'ಎಲೈ ಅರ್ಜುನನೇ, ನಿನ್ನಲ್ಲಿ ಯಾವ ಪರಾಕ್ರಮವನ್ನು ನೋಡುತ್ತಿದ್ದೇನೆಯೋ ಅದು ದೇವತೆಗಳಲ್ಲಿಯೂ ಇಲ್ಲ' ಎಂದು ಹೇಳಿದನು.

ಹತೇಷ್ವಸುರಸಂಘೇಷು ದಾರಾಸ್ತೇಷಾಂ ತು ಸರ್ವಶಃ ।
ಪ್ರಾಕ್ರೋಶನ್ ನಗರೇ ದಾರಾ(ತಸ್ಮಿನ್) ಯಥಾ ಶರದಿ ಲಕ್ಷಣಾಃ ॥೨೧॥

ಅಸುರ ಸಮೂಹಗಳು ಹತವಾಗುತ್ತಿರಲು ನಗರದಲ್ಲಿ ಅವರ ಪತ್ನಿಯರು ಶರತ್ಕಾಲದಲ್ಲಿ ಜಲವು ಕ್ಷಯವನ್ನು ಹೊಂದಿದಾಗ ಹೆಣ್ಣು ಸಾರಸಪಕ್ಷಿಗಳಂತೆ ಕಿರುಚಿದರು.

ತತೋ ಮಾತಲಿನಾ ಸಾರ್ಧಮಹಂ ತತ್ಪುರಮಭ್ಯಯಾಮ್ ।
ತ್ರಾಸಯನ್ ರಥಘೋಷೇಣ ನಿವಾತಕವಚಸ್ತ್ರಿಯಃ ॥೨೨॥

ಅನಂತರ ನಾನು ಮಾತಲಿಯ ಜೊತೆಯಲ್ಲಿ ರಥಘೋಷದಿಂದ ನಿವಾತಕವಚ ವನಿತೆಯರಿಗೆ ಭಯವನ್ನುಂಟುಮಾಡುತ್ತಾ ಅವರ ಪಟ್ಟಣವನ್ನು ಪ್ರವೇಶಿಸಿದೆನು.

ತಾನ್ ದೃಷ್ಟ್ವಾ ದಶಸಾಹಸ್ರಾನ್ ಮಯೂರಸದೃಶಾನ್ ಹಯಾನ್ ।
ರಥಂ ಚ ರವಿಸಂಕಾಶಂ ಪರ್ಜನ್ಯನಿನದಂ ತದಾ
(ಪ್ರಾದ್ರವನ್‌ಗಣಶಃ ಸ್ತ್ರಿಯಃ) ॥೨೩॥

ಮಯೂರವರ್ಣದ ಹತ್ತುಸಹಸ್ರಕುದುರೆಗಳನ್ನು ಹೂಡಿದ ರವಿಕಾಂತಿಯುಳ್ಳ, ಪರ್ಜನ್ಯಘೋಷವನ್ನುಳ್ಳ ರಥವನ್ನು ನೋಡಿ ಆ ಸ್ತ್ರೀಯರು ಗುಂಪು ಗುಂಪಾಗಿ ಓಡಿ ಹೋದರು.

ತಾಭಿರಾಭರಣೈಃ ಶಬ್ದಸ್ತ್ರಾಸಿತಾಭಿಃ ಸಮೀರಿತಃ ।
ಶಿಲಾನಾಮಿವ ಶೈಲೇಷು ಪತಂತೀನಾಮಭೂತ್ ತದಾ ॥೨೪॥

ಭಯದಿಂದ ಓಡಿಹೋಗುತ್ತಿದ್ದ ಅವರ ಆಭರಣದಿಂದ ಉಂಟಾದ ಶಬ್ದಗಳು ಪರ್ವತದ ಮೇಲೆ ಬೀಳುತ್ತಿದ್ದ ಶಿಲೆಗಳ ಶಬ್ದಗಳಂತೆ ಕೇಳಿಬಂದವು.

ವಿತ್ರಸ್ತಾ ದೈತ್ಯನಾರ್ಯಸ್ತಾಃ ಸ್ವಾನಿ ವೇಶ್ಮಾನ್ಯಥಾವಿಶನ್ ।
ಬಹುರತ್ನವಿಚಿತ್ರಾಣಿ ಶಾತಕುಂಭಮಯಾನಿ ಚ ॥೨೫॥

ಹೆದರಿದ ದೈತ್ಯನಾರಿಯರು ಬಹುರತ್ನವಿಚಿತ್ರವಾದ ಸುವರ್ಣಮಯವಾದ ತಮ್ಮ ಮನೆಗಳನ್ನು ಪ್ರವೇಶಿಸಿದರು.

ತದದ್ಭುತಾಕಾರಮಹಂ ದೃಷ್ಟ್ವಾ ನಗರಮುತ್ತಮಮ್ ।
ವಿಶಿಷ್ಟಂ ದೇವನಗರಾದಪೃಚ್ಛಂ ಮಾತಲಿಂ ತತಃ ॥೨೬॥

ಅದ್ಭುತವಾದ ಮತ್ತು ಶ್ರೇಷ್ಠವಾದ ದೇವತೆಗಳ ನಗರಕ್ಕಿಂತಲೂ ವಿಶಿಷ್ಟವಾದ ಆ ನಗರವನ್ನು ನೋಡಿ ನಾನು ಮಾತಲಿಯನ್ನು ಕೇಳಿದೆನು.

ಇದಮೇವಂವಿಧಂ ಕಸ್ಮಾದ್ ದೇವಾ ನಾವಾಸಯುಂತ್ಯುತ ।
ಪುರಂದರಪುರಾದ್ಧೀದಂ ವಿಶಿಷ್ಟಮಿತಿ ಲಕ್ಷಯೇ ॥೨೭॥

ಇಂತಹ ಈ ಪಟ್ಟಣದಲ್ಲಿ ದೇವತೆಗಳು ಏಕೆ ವಾಸಮಾಡುವುದಿಲ್ಲ? ಇಂದ್ರನ ಪಟ್ಟಣಕ್ಕಿಂತಲೂ ಇದು ಉತ್ತಮವಾಗಿದೆ ಎಂದು ನಾನು ಕಾಣುತ್ತಿದ್ದೇನೆ.

ಮಾತಲಿಃ

ಆಸೀದಿದಂ ಪುರಾ ಪಾರ್ಥ ದೇವರಾಜಸ್ಯ ನಃ ಪುರಮ್ ।
ತತೋ ನಿವಾತಕವಚೈರಿತಃ ಪ್ರಚ್ಯಾವಿತಾಃ ಸುರಾಃ ॥೨೮॥

ಮಾತಲಿ– ಪಾರ್ಥನೇ, ಇದು ಮೊದಲು ನಮ್ಮ ದೇವರಾಜನ ಪಟ್ಟಣವಾಗಿದ್ದಿತು. ಅನಂತರ ನಿವಾತಕವಚರು ದೇವತೆಗಳನ್ನು ಇಲ್ಲಿಂದ ಓಡಿಸಿದರು.

ತಪಸ್ತಪ್ತ್ವಾ ಮಹತ್ತೀವ್ರಂ ಪ್ರಸಾದ್ಯ ಚ ಪಿತಾಮಹಮ್ ।
ಪ್ರಾಪ್ತಾಃ ಪುರಂ (ಇದಂ ವೃತಂ) ನಿವಾಸಾಯ ದೇವೇಭ್ಯಶ್ಚಾಭಯಂ ಯುಧಿ ॥೨೯॥

ಅವರು ತೀವ್ರವಾದ ತಪಸ್ಸನ್ನು ಮಾಡಿ ಬ್ರಹ್ಮದೇವರನ್ನು ಸಂತೋಷಪಡಿಸಿ ನಿವಾಸಕ್ಕೋಸ್ಕರ ಈ ನಗರವನ್ನೂ, ಯುದ್ಧದಲ್ಲಿ ದೇವತೆಗಳಿಂದ ಅಭಯವನ್ನೂ ಪಡೆದರು.

ತಥಾ ದೇವೈರವಧ್ಯತ್ವಂ ಪುರಸ್ಯಾಭೇದ್ಯತ್ವಮೇವ ತು ।
ಮನುಷ್ಯಾಣಾಂ ದುರ್ಬಲತ್ವಾದುಪೇಕ್ಷ್ಯೈರ್ವ ಮಹಾಸುರೈಃ ॥೨೯.೧॥

ಅದರಂತೆಯೇ, ಮನುಷ್ಯರು ದುರ್ಬಲರಾದುದರಿಂದ ಅವರನ್ನು ಉಪೇಕ್ಷೆ ಮಾಡಿ ಮಹಾಸುರರು ನಾವು ದೇವತೆಗಳಿಂದ ಅವಧ್ಯರಾಗಬೇಕೆಂದು ಮತ್ತು ನಮ್ಮ ಪಟ್ಟಣವು ಅಭೇದ್ಯವಾಗಬೇಕೆಂದು ವರವನ್ನು ಪಡೆದರು.

ತತಃ ಶಕ್ರೇಣ ಭಗವಾನ್ ಸ್ವಯಂಭೂರಿತಿ ಚೋದಿತಃ ।
ವಿಧತ್ತಾಂ ಭಗವಾನಂತಮಾತ್ಮನೋ ಹಿತಕಾಮ್ಯಯಾ ॥೩೦॥

ಅನಂತರ ಇಂದ್ರನು ತನ್ನ ಹಿತವನ್ನು ಬಯಸಿ ಬ್ರಹ್ಮದೇವರನ್ನು ಸಮೀಪಿಸಿ ಪೂಜ್ಯರೇ, ಇವರ ವಿನಾಶವನ್ನು ವಿಧಾನಮಾಡಿ ಎಂದು ಒತ್ತಾಯಮಾಡಿದನು.

ತತ ಉಕ್ತೋ ಭಗವತಾ ದಿಷ್ಟಮತ್ರೇತಿ ವಾಸವಃ ।
ಭವಿತಾಂತಸ್ತ್ವಮೇವೈಷಾಂ ದೇಹೇನಾನ್ಯೇನ ವೃತ್ರಹನ್ ॥೩೧॥

ಆಗ ಪೂಜ್ಯರಾದ ಬ್ರಹ್ಮದೇವರು ಇಂದ್ರನನ್ನು ಕುರಿತು ನಾನು ಈಗಾಗಲೇ ಅವರ ವಿನಾಶವನ್ನು ವ್ಯವಸ್ಥೆಮಾಡಿದ್ದೇನೆ. ಎಲೈ ವೃತ್ರಹಂತಕನೇ, ನೀನೇ ಇನ್ನೊಂದು ಶರೀರದಿಂದ ಅವರಿಗೆ ಹಂತಕನಾಗುವಿ ಎಂದು ಹೇಳಿದರು.

ತತ ಏಷಾಂ ವಧಾರ್ಥಾಯ ಶಕ್ರೋಽಸ್ತ್ರಾಣಿ ದದೌ ತವ ।
ನ ಹಿ ಶಕ್ಯಾಃ ಸುರೈರ್ಹಂತುಂ ಯ ಏತೇ ನಿಹತಾಸ್ತ್ವಯಾ ॥೩೨॥

ಆದ್ದರಿಂದಲೇ ಇವರ ವಧೆಯ ಸಲುವಾಗಿ ಇಂದ್ರನು ನಿನಗೆ ಅಸ್ತ್ರಗಳನ್ನು ಕೊಟ್ಟನು. ದೇವತೆಗಳಿಂದ ಅವಧ್ಯರಾದ ಇವರನ್ನು ನೀನು ಈ ದಿನ ಸಂಹರಿಸಿದ್ದೀಯೆ.

ಕಾಲಸ್ಯ ಪರಿಣಾಮೇನ ತತಸ್ತ್ವಮಿಹ ಭಾರತ ।
ಏಷಾಮಂತಕರಃ ಪ್ರಾಪ್ತಸ್ತತ್ ತ್ವಯಾ ಚ ಕೃತಂ ತಥಾ ॥೩೩॥

ಎಲೈ ಭಾರತನೇ, ಕಾಲಪರಿಣಾಮದಿಂದ ನೀನು ಇಲ್ಲಿಗೆ ಇವರಿಗೆ ಹಂತಕನಾಗಿ ಪ್ರಾಪ್ತನಾಗಿ ಬಂದಿದ್ದೀಯೆ ಮತ್ತು ಆ ಕಾರ್ಯವನ್ನು ನೆರವೇರಿಸಿದ್ದೀಯೆ.

ದಾನವಾನಾಂ ವಿನಾಶಾಯ ಅಸ್ತ್ರಾಣಾಂ ಪರಮಂ ಬಲಮ್ ।
ಗ್ರಾಹಿತಸ್ತ್ವಂ ಮಹೇಂದ್ರೇಣ ಪುರುಷೇಂದ್ರ ತದುತ್ತಮಮ್ ॥೩೪॥

ಎಲೈ ಪುರುಷಶ್ರೇಷ್ಠನೇ, ದಾನವರ ವಿನಾಶಕ್ಕೋಸ್ಕರ ಅಸ್ತ್ರಗಳ ಶ್ರೇಷ್ಠವಾದ ಬಲವನ್ನು ನಿನಗೆ ಇಂದ್ರನು ಆಧಾನಮಾಡಿದ್ದಾನೆ.

ಅರ್ಜುನಃ

ತತಃ ಪ್ರಶಾಮ್ಯ ನಗರಂ ದಾನವಾಂಶ್ಚ ನಿಹತ್ಯ ತಾನ್ ।
ಪುನರ್ಮಾತಲಿನಾ ಸಾರ್ಧಮಗಮಂ(ಚ್ಛಂ) ದೇವಸದ್ಮ ತತ್ ॥೩೫॥

ಅರ್ಜುನ– ಆಗ ನಾನು ಆ ದಾನವರನ್ನು ಸಂಹರಿಸಿ ಆ ನಗರವನ್ನು ಶಾಂತಗೊಳಿಸಿ ಮಾತಲಿಯ ಜೊತೆಯಲ್ಲಿ ಪುನಃ ದೇವರಾಜನ ಮನೆಗೆ ಹಿಂದಿರುಗಿದೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಸಪ್ತಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ನಿವಾತಕವಚಯುದ್ಧಪರ್ವಣಿ ಚತುರ್ದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ತೇಳನೆಯ ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಯಯುರಂಧಂ ತಮಸ್ತೇऽಪಿ ಸರ್ವದೇವದ್ವಿಷೋऽಸುರಾಃ ।

ದೇವಶತ್ರುಗಳಾದ ಆ ಅಸುರರೆಲ್ಲರೂ ಅಂಧಂತಮಸ್ಸಿಗೆ ಹೋದರು.

★ ★ ★ ★

ನೂರ ಅರವತ್ತೆಂಟನೆಯ ಅಧ್ಯಾಯ

ನಿವಾತಕವಚರನ್ನು ಸಂಹಾರಮಾಡಿ ಸ್ವರ್ಗಕ್ಕೆ ಹಿಂದಿರುಗುವ ಅರ್ಜುನನಿಂದ ಹಿರಣ್ಯಪುರ ವಾಸಿಗಳ ಮತ್ತು ಪೌಲೋಮರ ವಧೆ.

ಅರ್ಜುನಃ

ನಿವರ್ತಮಾನೇನ ತದಾ(ಮಯಾ) ಮಹದ್ ದೃಷ್ಟಂ ತತೋऽಪರಮ್।
ಪುರಂ ಕಾಮಗಮಂ(ಚರಂ) ದಿವ್ಯಂ ಪಾವಕಾರ್ಕಸಮಪ್ರಭಮ್ ॥೧॥

ಅರ್ಜುನ– ಅಲ್ಲಿಂದ ಹಿಂದಿರುಗುತ್ತಿದ್ದ ನಾನು ದಿವ್ಯವಾದ ಸೂರ್ಯಾಗ್ನಿ ಸಮಕಾಂತಿಯನ್ನು ಹೊಂದಿದ ಕಾಮಗಾಮಿಯಾದ ಇನ್ನೊಂದು ಪಟ್ಟಣವನ್ನು ನೋಡಿದೆನು.

ರತ್ನದ್ರುಮಮಯೈಶ್ಚಿತ್ರೈಃ ಸುಸ್ವರೈಶ್ಚ ಪತತ್ರಿಭಿಃ ।
ಪೌಲೋಮೈಃ ಕಾಲಕೇಯೈ(ಕಂಜೈ)ಶ್ಚ ನಿತ್ಯಹೃಷ್ಟೈರಧಿಷ್ಠಿತಮ್ ॥೨॥

ರತ್ನಮಯವಾದ ವಿಚಿತ್ರವೃಕ್ಷಗಳಿಂದಲೂ ಮತ್ತು ಸುಸ್ವರವುಳ್ಳ ಪಕ್ಷಿಗಳಿಂದಲೂ ಕೂಡಿದ್ದ ಆ ಪಟ್ಟಣವು ನಿತ್ಯವೂ ಮುದಿತರಾದ ಕೌಲೋಮರು ಮತ್ತು ಕಾಲಕೇಯರಿಂದ ವಾಸಿಸಲ್ಪಡುತ್ತಿತ್ತು.

ಗೋಪುರಾಟ್ಟಾಲಕೋಪೇತಂ ಚತುರ್ದ್ವಾರಂ ದುರಾಸದಮ್ ।
ಸರ್ವರತ್ನಮಯಂ ದಿವ್ಯಮದ್ಭುತೋಪಮದರ್ಶನಮ್ ॥೩॥

ಸರ್ವರತ್ನಮಯವಾದ ಗೋಪುರಗಳು, ಉಪ್ಪರಿಗೆಗಳು ಮತ್ತು ಚತುರ್ದ್ವಾರಗಳಿಂದ ಕೂಡಿ ಅದ್ಭುತವಾಗಿ ಕಾಣುತ್ತಿದ್ದ ಆ ದಿವ್ಯಪಟ್ಟಣವು ಪ್ರವೇಶಿಸಲು ಬಹಳ ಕಷ್ಟವಾಗಿದ್ದಿತು.

ದ್ರುಮೈಃ ಪುಷ್ಪಫಲೋಪೇತೈಃ ಸರ್ವರತ್ನಮಯೈರ್ವೃತಮ್ ।
ತಥಾ ಪತತ್ರಿಭಿರ್ದಿವ್ಯೈರುಪೇತಂ ಸುಮನೋಹರೈಃ ॥೪॥

ಫಲಪುಷ್ಪಭರಿತವಾದ ಸರ್ವರತ್ನಮಯವಾದ ವೃಕ್ಷಗಳಿಂದಲೂ, ಮನೋಹರವಾದ ದಿವ್ಯಪಕ್ಷಿಗಳಿಂದಲೂ ಕೂಡಿದ್ದಿತು.

ಅಸುರೈರ್ನಿತ್ಯಮುದಿತೈಃ ಶೂಲರ್ಷ್ಟಿಮುಸಲಾಯುಧೈಃ ।
ಚಾಪಮುದ್ಗರಹಸ್ತೈಶ್ಚ ಸ್ರಗ್ವಿಭಿಃ ಸರ್ವತೋ ವೃತಮ್ ॥೫॥

ಮಾಲೆಗಳನ್ನು ಧರಿಸಿ ಕೈಯಲ್ಲಿ ಶೂಲ, ಋಷ್ಟಿ, ಮುಸಲ, ಚಾಪ, ಮುದ್ಗರ ಮೊದಲಾದ ಆಯುಧಗಳನ್ನು ಹಿಡಿದ ನಿತ್ಯಸಂತುಷ್ಟರಾದ ಅಸುರರಿಂದ ಎಲ್ಲಕಡೆಯಲ್ಲಿಯೂ ತುಂಬಿದ್ದಿತು.

ತದಹಂ ಪ್ರೇಕ್ಷ್ಯ ದೈತ್ಯಾನಾಂ ಪುರಮದ್ಭುತದರ್ಶನಮ್ ।
ಅಪೃಚ್ಛಂ ಮಾತಲಿಂ ರಾಜನ್ ಕಿಮಿದಂ ವರ್ತತೇऽದ್ಭುತವ್ ॥೬॥

ರಾಜನೇ, ನಾನು ಅದ್ಭುತವಾಗಿ ಕಾಣುತ್ತಿದ್ದ ದೈತ್ಯರ ಆ ಪಟ್ಟಣವನ್ನು ನೋಡಿ ಮಾತಲಿಯನ್ನು ಕುರಿತು ಇದೇನು ಹೀಗೆ ಅದ್ಭುತವಾಗಿದೆ ಎಂದು ಕೇಳಿದೆನು.

ಮಾತಲಿಃ

ಪುಲೋಮಾ ನಾಮ ದೈತೇಯೀ ಕಾಲಕಾ ಚ ಮಹಾಸುರೀ ।
ದಿವ್ಯಂ ವರ್ಷಸಹಸ್ರಂ ತೇ ಚೇರತುಃ ಪರಮಂ ತಪಃ ॥೭॥

ಮಾತಲಿ– ಪುಲೋಮಾ ಎಂಬ ದೈತ್ಯವನಿತೆಯೂ ಕಾಲಕಾ ಎಂಬ ಮಹಾ ಅಸುರ ವನಿತೆಯೂ ಸಹ ದಿವ್ಯವರ್ಷ ಸಹಸ್ರಗಳವರೆಗೆ ಉತ್ಕೃಷ್ಟವಾದ ತಪಸ್ಸನ್ನು ಮಾಡಿದರು.

ತಪಸೋಽಂತೇ ತತಸ್ತಾಭ್ಯಾಂ ಸ್ವಯಂಭೂರದದಾದ್ ವರಮ್ ।
ಅಗೃಹ್ಣೀತಾಂ ವರಂ ತೇ ತು ಸುತಾನಾಮಲ್ಪದುಃಖಿತಾಮ್ ॥೮॥

ಅವಧ್ಯತಾಂ ಚ ರಾಜೇಂದ್ರ ಸುರರಾಕ್ಷಸಪನ್ನಗೈಃ ।
ಪುರಂ ಸುರಮಣೀಯಂ ಚ ಖಿಚರಂ ಸುಮಹಾಪ್ರಭಮ್ ॥೯॥

ಸರ್ವರತ್ನೈಃ ಸಮುದಿತಂ ದುರ್ಧರ್ಷಮಮರೈರಪಿ ।
ಮಹರ್ಷಿಯಕ್ಷಗಂಧರ್ವಪನ್ನಗಾಸುರರಾಕ್ಷಸೈಃ ।
ಸರ್ವಕಾಮಗುಣೋಪೇತಂ ವೀತಶೋಕಮನಾಮಯಮ್ ॥೧೦॥

ತಪಸ್ಸಿನ ಕೊನೆಯಲ್ಲಿ ಅವರಿಬ್ಬರಿಗೂ ಬ್ರಹ್ಮದೇವರು ವರಗಳನ್ನು ಕೊಟ್ಟರು. ರಾಜೇಂದ್ರನೇ, ಅವರಿಬ್ಬರೂ ತಮ್ಮ ಮಕ್ಕಳಿಗೆ ಅಲ್ಪದುಃಖವನ್ನೂ ದೇವರಾಕ್ಷಸ ಸರ್ಪಗಳಿಂದ ಅವಧ್ಯತ್ವವನ್ನೂ ಮತ್ತು ಅತ್ಯಂತ ಮನೋಹರವಾದ ಮಹಾಕಾಂತಿಯನ್ನುಳ್ಳ ಸರ್ವರತ್ನಗಳಿಂದ ಕೂಡಿದ ದೇವತೆಗಳಿಗೆ, ಮಹರ್ಷಿಗಳಿಗೆ, ಯಕ್ಷಗಂಧರ್ವ ಪನ್ನಗಾಸುರ ರಾಕ್ಷಸರಿಗೆ ಸೋಲದಂತಹ, ಸರ್ವಕಾಮಗುಣೋಪೇತವಾದ ಶೋಕರೋಗಗಳಿಂದ ಮುಕ್ತವಾದ ಆಕಾಶಗಾಮಿಯಾದ ಒಂದು ನಗರವನ್ನೂ ವರವಾಗಿ ಬೇಡಿದರು.

ಬ್ರಹ್ಮಣಾ ಭರತಶ್ರೇಷ್ಠ ಕಾಲಕೇಯಕೃತೇ ಕೃತಮ್ ॥೧೧॥

ತದೇತತ್ ಖಪುರಂ ದಿವ್ಯಂ ಚರತ್ಯಮರವರ್ಜಿತಮ್ ।
ಪೌಲೋಮಾಧ್ಯುಷಿತಂ ವೀರ ಕಾಲಕಂಜೈಶ್ಚ ದಾನವೈಃ ॥೧೨॥

ಎಲೈ ವೀರನೇ, ಭರತಶ್ರೇಷ್ಠನೇ, ಈ ಪಟ್ಟಣವು ಕಾಲಕೇಯರ ಸಲುವಾಗಿ ಬ್ರಹ್ಮದೇವರಿಂದ ರಚಿಸಲ್ಪಟ್ಟಿತು. ಇದು ಪೌಲೋಮರಿಂದಲೂ ಮತ್ತು ಕಾಲಕೇಯ ದಾನವರಿಂದಲೂ ಅಧಿಷ್ಠಿತವಾಗಿ ಸರ್ವ ದೇವತೆಗಳಿಂದ ವರ್ಜಿತವಾಗಿ ಆಕಾಶದಲ್ಲಿ ಸಂಚರಿಸುತ್ತದೆ.

ಹಿರಣ್ಯಪುರಮಿತ್ಯೇವಂ ಖ್ಯಾಯತೇ ನಗರಂ ಮಹತ್ ।
ರಕ್ಷಿತಂ ಕಾಲಕೇಯೈಶ್ಚ ಪೌಲೋಮೈಶ್ಚ ಮಹಾಸುರೈಃ ॥೧೩॥

ಮಹಾಸುರರಾದ ಕಾಲಕೇಯರಿಂದಲೂ ಮತ್ತು ಪೌಲೋಮರಿಂದಲೂ ರಕ್ಷಿಸಲ್ಪಡುವ ಈ ದೊಡ್ಡ ನಗರವು ಹಿರಣ್ಯಪುರವೆಂದೇ ಪ್ರಸಿದ್ಧವಾಗಿದೆ.

ತ ಏತೇ ಮುದಿತಾ ರಾಜನ್ನವಧ್ಯಾಃ ಸರ್ವದೈವತೈಃ ।
ನಿವಸಂತ್ಯತ್ರ ರಾಜೇಂದ್ರ ಗತೋದ್ವೇಗಾ ನಿರುತ್ಸುಕಾಃ ॥೧೪॥

ಎಲೈ ರಾಜೇಂದ್ರನೇ, ಇವರು ಸರ್ವದೇವತೆಗಳಿಂದ ಅವಧ್ಯರಾಗಿ ಯಾವ ಉದ್ವೇಗ ಮತ್ತು ಆತಂಕಗಳಿಲ್ಲದೇ ಸಂತೋಷದಿಂದ ಈ ಪಟ್ಟಣದಲ್ಲಿ ವಾಸಿಸುತ್ತಾರೆ.

ಸುರಾಸುರೈರವಧ್ಯಾನಾಂ ದಾನವಾನಾಂ ಧನಂಜಯ ।
ಮಾನುಷಾತ್ ಮೃತ್ಯುರೇತೇಷಾಂ ನಿರ್ದಿಷ್ಟೋ ಬ್ರಹ್ಮಣಾ ಪುರಾ ॥೧೫॥

ಎಲೈ ಧನಂಜಯನೇ, ದೇವದಾನವರಿಂದ ಅವಧ್ಯರಾದ ಇವರಿಗೆ ಬ್ರಹ್ಮದೇವರು ಮನುಷ್ಯನಿಂದ ಮೃತ್ಯುವನ್ನು ಹಿಂದೆಯೇ ನಿರ್ದೇಶಮಾಡಿದ್ದಾರೆ.

ಏತಾನಪಿ ರಣೇ ಪಾರ್ಥ ಕಾಲಕಂಜಾನ್ ದುರಾಸದಾನ್ ।
ವಜ್ರಾಸ್ತ್ರೇಣ ನಯಸ್ವಾಶು ವಿನಾಶಂ ಸುಮಹಾಬಲಾನ್ ॥೧೫.೧॥

ಎಲೈ ಪಾರ್ಥನೇ, ಈ ದುರಾಸದರಾದ ಮಹಾಬಲಿಷ್ಠರಾದ ಕಾಲಕಂಜರನ್ನೂ (ಕಾಲಕೇಯರನ್ನೂ) ಯುದ್ಧದಲ್ಲಿ ವಜ್ರಾಸ್ತ್ರದಿಂದ ಶೀಘ್ರವಾಗಿ ವಿನಾಶಮಾಡು.

ಅರ್ಜುನಃ

ಸುರಾಸುರೈರವಧ್ಯಂ ತದಹಂ ಜ್ಞಾತ್ವಾ ವಿಶಾಂಪತೇ ।
ಅಬ್ರುವಂ ಮಾತಲಿಂ ಹೃಷ್ಟೋ ಯಾಹ್ಯೇತತ್ಪುರಮಂಜಸಾ ॥೧೬॥

ಅರ್ಜುನ– ಎಲೈ ರಾಜನೇ, ಅವರು ಸುರಾಸುರರಿಂದ ಅವಧ್ಯರೆಂದು ತಿಳಿದ ನಾನು ಸಂತೋಷಗೊಂಡು ಮಾತಲಿಯನ್ನು ಕುರಿತು ಈ ಪಟ್ಟಣವನ್ನು ಚೆನ್ನಾಗಿ ಪ್ರವೇಶಮಾಡು ಎಂದು ಹೇಳಿದೆನು.

ತ್ರಿದಶೇಶದ್ವಿಷೋ ಯಾವತ್ ಕ್ಷಯಮಸ್ತ್ರೈರ್ನಯಾಮ್ಯಹಮ್ ।
ನ ಕಥಂಚಿದ್ಧಿ ಮೇ ಪಾಪಾ ನವಧ್ಯಾ ಯೇ ಸುರದ್ವಿಷಃ ॥೧೭॥

ನಾನು ದೇವದ್ವೇಷಿಗಳನ್ನು ನನ್ನ ಅಸ್ತ್ರಗಳಿಂದ ವಿನಾಶಗೊಳಿಸುತ್ತೇನೆ. ದೇವದ್ವೇಷಿಗಳಾದ ಪಾಪಿಗಳು ನನಗೆ ಯಾವ ಕಾರಣದಿಂದಲೂ ಅವಧ್ಯರಲ್ಲ.

ಉವಾಹ ಮಾಂ ತತಃ ಶೀಘ್ರಂ ಹಿರಣ್ಯಪುರಮಂತಿಕಾತ್ ।
ರಥೇನ ತೇನ ದಿವ್ಯೇನ ಹರಿಯುಕ್ತೇನ ಮಾತಲಿಃ ॥೧೮॥

ಆಗ ಮಾತಲಿಯು ದಿವ್ಯಾಶ್ವಗಳನ್ನು ಹೂಡಿದ ರಥದಿಂದ ನನ್ನನ್ನು ಶೀಘ್ರವಾಗಿ ಹಿರಣ್ಯಪುರದ ಸಮೀಪಕ್ಕೆ ಕರೆದುಕೊಂಡು ಹೋದನು.

ತೇ ಮಾಮಾಲಕ್ಷ್ಯ ದೈತೇಯಾ ವಿಚಿತ್ರಾಭರಣಾಂಬರಾಃ ।
ಸಮುತ್ಪೇತುರ್ಮಹಾವೇಗಾ ರಥಾನಾಸ್ಥಾಯ ದಂಸಿತಾಃ ॥೧೯॥

ವಿಚಿತ್ರಾಭರಣ ವಸ್ತ್ರಗಳನ್ನು ಧರಿಸಿದ ಆ ಮಹಾವೇಗವುಳ್ಳ ದೈತೇಯರು ನನ್ನನ್ನು ಗಮನಿಸಿ ಕವಚಗಳನ್ನು ತೊಟ್ಟು ರಥಗಳನ್ನು ಏರಿ ನನ್ನ ಮೇಲೆ ಎರಗಿದರು.

ತತೋ ನಾಲೀಕನಾರಾಚೈರ್ಭಲ್ಲೈಃ ಶಕ್ತ್ಯೃಷ್ಟಿತೋಮರೈಃ ।
ಪ್ರತ್ಯಘ್ನನ್ ದಾನವೇಂದ್ರಾ ಮಾಂ ಕ್ರುದ್ಧಾಸ್ತೀವ್ರಪರಾಕ್ರಮಾಃ ॥೨೦॥

ಅನಂತರ ಕ್ರೋಧಯುಕ್ತರೂ, ತೀವ್ರಪರಾಕ್ರಮಶಾಲಿಗಳೂ ಆದ ದಾನವೇಂದ್ರರು ನಾಲೀಕ, ಬಾಣಗಳು, ಭಲ್ಲಗಳು ಮತ್ತು ಶಕ್ತಿಋಷ್ಟಿತೋಮರಗಳಿಂದ ನನ್ನ ಮೇಲೆ ಪ್ರಹಾರ ಮಾಡಿದರು.

ತದಹಂ ಶರವರ್ಷೇಣ ಮಹತಾ ಪ್ರತ್ಯವಾರಯಮ್ ।
ಶಸ್ತ್ರವರ್ಷಂ ಮಹದ್ ರಾಜನ್ ವಿದ್ಯಾಬಲಮುಪಾಶ್ರಿತಃ ॥೨೧॥

ಎಲೈ ರಾಜನೇ, ನಾನು ಆ ದೊಡ್ಡ ಶಸ್ತ್ರವರ್ಷವನ್ನು ವಿದ್ಯಾಬಲಗಳನ್ನು ಆಶ್ರಯಿಸಿ ಪ್ರತಿಯಾದ ದೊಡ್ಡ ಬಾಣವರ್ಷದಿಂದ ತಡೆದೆನು.

ವ್ಯಾಮೋಹಯಂ ಚ ತಾನ್ ಸರ್ವಾನ್ ರಥಮಾರ್ಗೈಶ್ಚರನ್ ರಣೇ ।
ತೇऽನ್ಯೋನ್ಯಮಭಿಸಮ್ಮೂಢಾಃ ಪಾತಯಂತಿ ಸ್ಮ ದಾನವಾನ್ ॥೨೨॥

ಯುದ್ಧದಲ್ಲಿ ರಥಮಾರ್ಗಗಳಲ್ಲಿ ಸಂಚರಿಸುತ್ತಾ ಅವರೆಲ್ಲರಿಗೂ ಭ್ರಾಂತಿಯನ್ನು ಉಂಟುಮಾಡಿದೆನು. ಆ ದಾನವರು ಭ್ರಾಂತಿವಶರಾಗಿ ಒಬ್ಬರನ್ನೊಬ್ಬರು ಕೊಂದು ಹಾಕಿದರು.

ತೇಷಾಮೇವಂ ವಿಮೂಢಾನಾಮನ್ಯೋನ್ಯಮಭಿಧಾವತಾಮ್ ।
ಶಿರಾಂಸಿ ವಿಶಿಖೈರ್ದೀಪ್ತೈರ್ನ್ಯಹನಂ ಶತಸಂಘಶಃ ॥೨೩॥

ಹೀಗೆ ಭ್ರಾಂತಿಗೆ ಒಳಗಾಗಿ ಪರಸ್ಪರವಾಗಿ ಮೇಲೆರಗುತ್ತಿದ್ದ ಅವರ ಶಿರಸ್ಸುಗಳನ್ನು ದೀಪ್ತವಾದ ಬಾಣಗಳಿಂದ ನೂರರ ಸಂಖ್ಯೆಯಲ್ಲಿ ಹೊಡೆದು ಉರುಳಿಸಿದೆನು.

ತೇ ವಧ್ಯಮಾನಾ ದೈತೇಯಾಃ ಪುರಮಾಸ್ಥಾಯ ತತ್ಪುನಃ ।
ಸ(ಖ)ಮುತ್ಪೇತುಃ ಸನಗರಾ ಮಾಯಾಮಾಸ್ಥಾಯ ದಾನವೀಮ್ ॥೨೪॥

ದೈತೇಯರು ಹೀಗೆ ಘಾಸಿಗೆ ಸಿಲುಕಿದಾಗ ಅವರು ಪುನಃ ತಮ್ಮ ಪುರವನ್ನು ಪ್ರವೇಶಿಸಿ ದಾನವ ಮಾಯೆಯನ್ನು ಆಶ್ರಯಿಸಿ ಪಟ್ಟಣದ ಜೊತೆಯಲ್ಲಿ ಅಂತರಿಕ್ಷಕ್ಕೆ ಹಾರಿದರು.

ತತೋಽಹಂ ಶರವರ್ಷೇಣ ಮಹತಾ ಕುರುನಂದನ ।
ಮಾರ್ಗಮಾವೃತ್ಯ ದೈತ್ಯಾನಾಂ ಗತಿಂ ಚೈಷಾಮವಾರಯಮ್ ॥೨೫॥

ಎಲೈ ಕುರುನಂದನನೇ, ಆಗ ನಾನು ದೊಡ್ಡ ಶರವರ್ಷದಿಂದ ಅವರ ಮಾರ್ಗವನ್ನು ಪ್ರತಿರೋಧಿಸಿ ಅವರ ಊರ್ಧ್ವಗಮನವನ್ನು ತಡೆದೆನು.

ತತ್ಪುರಂ ಖಚರಂ ದಿವ್ಯಂ ಕಾಮಗಂ ಸೂರ್ಯಸಪ್ರಭಮ್ ।
ದೈತೇಯೈರ್ವರದಾನೇನ ಧಾರ್ಯತೇ ಸ್ಮ ಯಥಾಸುಖಮ್ ॥೨೬॥

ಸೂರ್ಯಕಾಂತಿಯುಳ್ಳ ಕಾಮಗಾಮಿಯಾದ ಆಕಾಶದಲ್ಲಿ ಸಂಚರಿಸುವ ಆ ದಿವ್ಯವಾದ ಪಟ್ಟಣವನ್ನು ದೈತೇಯರು ವರದಾನದ ಬಲದಿಂದ ಸುಖವಾಗಿ ಧರಿಸಿದ್ದರು.

ಅಂತರ್ಭೂಮೌ ನಿಪತತಿ ಪುನರೂರ್ಧ್ವಂ ಪ್ರತಿಷ್ಠತೇ ।
ಪುನಸ್ತಿರ್ಯಕ್ ಪ್ರಯಾತ್ಯಾಶು ಪುನರಪ್ಸು ನಿಮಜ್ಜತಿ ॥೨೭॥

ಆ ಪಟ್ಟಣವು ಭೂಮಿಯ ಒಳಗೆ ಪ್ರವೇಶಿಸುತ್ತದೆ. ಪುನಃ ಆಕಾಶಕ್ಕೆ ಹಾರುತ್ತದೆ. ಪುನಃ ಅಡ್ಡವಾಗಿ ಸಂಚರಿಸುತ್ತದೆ ಮತ್ತು ಪುನಃ ಬೇಗ ನೀರಿನಲ್ಲಿ ಮುಳುಗುತ್ತದೆ.

ಅಮರಾವತಿಸಂಕಾಶಂ ತತ್ಪುರಂ ಕಾಮಗಂ ಮಹತ್ ।
ಅಹಮಸ್ತ್ರೈರ್ಬಹುವಿಧೈಃ ಪ್ರತ್ಯಗೃಹ್ಣಂ ಪರಂತಪ ॥೨೮॥

ಎಲೈ ಪರಂತಪನೇ, ಅಮರಾವತಿಗೆ ಸದೃಶವಾದ ಕಾಮಗಮನವುಳ್ಳ ಆ ದೊಡ್ಡ ಪಟ್ಟಣವನ್ನು ನಾನು ಅನೇಕ ವಿಧವಾದ ಅಸ್ತ್ರಗಳಿಂದ ತಡೆದು ನಿಲ್ಲಿಸಿದೆನು.

ತತೋಽಹಂ ಶರಜಾಲೇನ ದಿವ್ಯಾಸ್ತ್ರನುದಿತೇನ ಚ ।
ವ್ಯಗೃಹ್ಣಂ ಸಹ ದೈತೇಯೈಸ್ತತ್ಪುರಂ ಪುರುಷರ್ಷಭ ॥೨೯॥

ಎಲೈ ಪುರುಷರ್ಷಭನೇ, ಅನಂತರ ನಾನು ದಿವ್ಯಾಸ್ತ್ರ ಪ್ರೇರಿತವಾದ ಬಾಣ ಸಮೂಹಗಳನ್ನು ದೈತೇಯರಿದ್ದ ಆ ಪಟ್ಟಣಕ್ಕೆ ಪ್ರಹಾರಮಾಡಿದೆನು.

ವಿಕ್ಷತಂ ಚಾಯಸೈರ್ಬಾಣೈರ್ಮರ್ತ್ಯಯುಕ್ತೈರಜಿಹ್ಮಗೈಃ ।
ಮಹೀಮಭ್ಯಪತದ್ ರಾಜನ್ ಭಗ್ನಂ ಪುರಮಾಸುರಮ್ ॥೩೦॥

ಎಲೈ ರಾಜನೇ, ನನ್ನಿಂದ ಪ್ರಯುಕ್ತವಾದ ಋಜುವಾದ ಕಬ್ಬಿಣದ ಬಾಣಗಳಿಂದ ಬಹಳವಾಗಿ ಶಿಥಿಲವಾದ ಆ ಅಸುರರ ಪಟ್ಟಣವು ಮುರಿದು ಭೂಮಿಯ ಮೇಲೆ ಬಿದ್ದಿತು.

ತೇ ವಧ್ಯಮಾನಾ ಮದ್ಬಾಣೈರ್ವಜ್ರವೇಗೈರಯಸ್ಮಯೈಃ ।
ಪರ್ಯಭ್ರಮಂತ ವೈ ರಾಜನ್ನಸುರಾಃ ಕಾಲಚೋದಿತಾಃ ॥೩೧॥

ಎಲೈ ರಾಜನೇ, ಆ ಅಸುರರಾದರೂ ಸಹ ವಜ್ರವೇಗವುಳ್ಳ ಅಯಸ್ಮಯವಾದ ನನ್ನ ಬಾಣಗಳಿಂದ ಹೊಡೆಯಲ್ಪಟ್ಟು ಮೃತ್ಯುಚೋದಿತರಾಗಿ ಅಲ್ಲಿಯೇ ತಿರುಗಾಡಿದರು.

ತತೋ ಮಾತಲಿರಾರುಹ್ಯ ಪುರಸ್ತಾನ್ನಿಪತನ್ನಿವ ।
ಮಹೀಮವಾತರತ್ ಕ್ಷಿಪ್ರಂ ರಥೇನಾದಿತ್ಯವರ್ಚಸಾ ॥೩೨॥

ಆಗ ಮಾತಲಿಯು ಆದಿತ್ಯಪ್ರಭೆಯುಳ್ಳ ನನ್ನ ರಥವನ್ನು ತೆಗೆದುಕೊಂಡು ಆಕಾಶದಲ್ಲಿ ಮೇಲೆ ಹೋಗಿ ಕೆಳಗೆ ಬೀಳುತ್ತಿದೆಯೋ ಎಂಬಂತೆ ಕ್ಷಿಪ್ರವಾಗಿ ಅವರ ಎದುರಿಗೆ ನಿಲ್ಲಿಸಿದನು.

ಯುಯುತ್ಸೂನಾಂ ಮಯಾ ಸಾರ್ಧಂ ಪರ್ಯವರ್ತಂತ ಭಾರತ ।
ತಾನ್ಯಹಂ ನಿಶಿತೈರ್ಬಾಣೈರ್ವ್ಯಧಮಂ ಗಾರ್ಧ್ರರಾಜಿತೈಃ ॥೩೩॥

ಎಲೈ ಭಾರತನೇ, ಯುದ್ಧಾಪೇಕ್ಷಿಗಳಾದ ಅವರಿಗೂ ಮತ್ತು ನನಗೂ ಯುದ್ಧವು ನಡೆಯಿತು. ನಾನು ಅವರನ್ನು ಹದ್ದಿನ ಗರಿಗಳಿಂದ ಅಲಂಕೃತವಾದ ಹರಿತವಾದ ಬಾಣಗಳಿಂದ ನಾಶಮಾಡಿದೆನು.

ತೇ ಯುದ್ಧೇ ಸನ್ನ್ಯವರ್ತಂತ ಸಮುದ್ರಸ್ಯ ಯಥೋರ್ಮಯಃ ।
ನೇಮೇ ಶಕ್ಯಾ ಮಾನುಷೇಣ ಯುದ್ಧೇನೇತಿ ಪ್ರಚಿಂತ್ಯ ತತ್ ॥೩೪॥

ತತೋಽಹಮಾನುಪೂರ್ವ್ಯೇಣ ದಿವ್ಯಾನ್ಯಸ್ತ್ರಾಣ್ಯಯೋಜಯಮ್ ॥೩೫॥

ಅವರು ಸಮುದ್ರದ ಅಲೆಗಳಂತೆ ಪುನಃ ಪುನಃ ನನ್ನ ಎದುರಿಗೆ ಬಂದರು. ಆಗ ನಾನು ಮಾನುಷ ಯುದ್ಧದಿಂದ ಇವರನ್ನು ನಾಶಮಾಡಲು ಸಾಧ್ಯವಿಲ್ಲವೆಂದು ತಿಳಿದು ಕ್ರಮವಾಗಿ ಒಂದೊಂದಾಗಿ ದಿವ್ಯಾಸ್ತ್ರಗಳನ್ನು ಪ್ರಯೋಗಿಸಿದೆನು.

ತತಸ್ತಾನಿ ಸಹಸ್ರಾಣಿ ರಥಿನಾಂ ಚಿತ್ರಯೋಧಿನಾಮ್ ।
ಅಸ್ತ್ರಾಣಿ ಮಮ ದಿವ್ಯಾನಿ ಪ್ರತ್ಯಘ್ನನ್ ಶನಕೈರಿವ ॥೩೬॥

ಆಗ ನನ್ನ ದಿವ್ಯಾಸ್ತ್ರಗಳು ಚಿತ್ರಯೋಧಿಗಳಾದ ಆ ಸಹಸ್ರ ರಥಿಕರ ಮೇಲೆ ಹೋಗಿ ನಿಧಾನವಾಗಿ ಹೊಡೆದವು.

ರಥಮಾರ್ಗಾನ್ ವಿಚಿತ್ರಾಂಸ್ತೇ ವಿಚರಂತೋ ಮಹಾಬಲಾಃ ।
ಪ್ರತ್ಯದೃಶ್ಯಂತ ಸಂಗ್ರಾಮೇ ಶತಶೋಽಥ ಸಹಸ್ರಶಃ ॥೩೭॥

ಆ ಮಹಾಬಲರಾದ ದಾನವರೂ ಸಹ ಯುದ್ಧದಲ್ಲಿ ವಿಚಿತ್ರವಾದ ರಥಮಾರ್ಗಗಳಲ್ಲಿ ಸಂಚರಿಸುತ್ತಾ ಶತಸಂಖ್ಯೆಯಲ್ಲಿ ಸಹಸ್ರಸಂಖ್ಯೆಯಲ್ಲಿ ಕಾಣತೊಡಗಿದರು.

ವಿಚಿತ್ರಮುಕುಟಾಪೀಡಾ ವಿಚಿತ್ರಕವಚಧ್ವಜಾಃ ।
ವಿಚಿತ್ರಾಭರಣಾಶ್ಚೈವ ನಂದಯಂತೀವ ಮೇ ಮನಃ ॥೩೮॥

ಅವರ ವಿಚಿತ್ರವಾದ ಕಿರೀಟಾಭರಣಗಳನ್ನೂ ಮತ್ತು ಕವಚಧ್ವಜಗಳನ್ನೂ ನೋಡಿ ನನಗೆ ಮನಸ್ಸಿನಲ್ಲಿಯೇ ಹರ್ಷವುಂಟಾದಂತೆ ಆಯಿತು.

ಅಹಂ ತು ಶರವರ್ಷೈಸ್ತಾನಸ್ತ್ರಪ್ರಚುದಿತೈಃ ರಣೇ ।
ನಾಶಕ್ನುವಂ ಪೀಡಯಿತುಂ ತೇ ತು ಮಾಂ ಪ್ರತ್ಯಪೀಡಯನ್ ॥೩೯॥

ನಾನು ಯುದ್ಧದಲ್ಲಿ ಅಸ್ತ್ರಪ್ರೇರಿತವಾದ ನನ್ನ ಬಾಣಗಳಿಂದ ಅವರನ್ನು ಪೀಡಿಸಲು ಸಾಧ್ಯವಾಗಲಿಲ್ಲ. ಪ್ರತಿಯಾಗಿ ಅವರೇ ನನ್ನನ್ನು ಪೀಡಿಸಿದರು.

ತೈಃ ಪೀಡ್ಯಮಾನೋ ಬಹುಭಿಃ ಕೃತಾಸ್ತ್ರೈಃ ಕುಶಲೈರ್ಯುಧಿ ।
ವ್ಯಥಿತೋಽಸ್ಮಿ ಮಹಾಯುದ್ಧೇ ಭಯಂ ಚಾಗಾನ್‌ಮಹನ್ಮಮ ॥೪೦॥

ಒಳ್ಳೆಯ ಅಸ್ತ್ರಾಭ್ಯಾಸವನ್ನು ಉಳ್ಳ ಕುಶಲರಾದ ಅನೇಕರಿಂದ ಪೀಡಿಸಲ್ಪಟ್ಟ ನಾನು ಮಹಾಯುದ್ಧದಲ್ಲಿ ವ್ಯಥೆಯನ್ನು ಹೊಂದಿದೆ. ನನಗೆ ದೊಡ್ಡ ಭಯವೂ ಉಂಟಾಯಿತು.

ತತೋಽಹಂ ಪರಮಾಯತ್ತೋ ಮಾತಲಿಂ ಪರಿಪೃಷ್ಟವಾನ್ ।
ಕಿಮೇತೇ ಮಮ ಬಾಣೌಘೈರ್ದಿವ್ಯಾಸ್ತ್ರಪ್ರತಿಮಂತ್ರಿತೈಃ ।
ನ ವಧ್ಯಂತೇ ಮಹಾಘೋರೈಸ್ತತ್ತ್ವಮಾಖ್ಯಾಹಿ ಪೃಚ್ಛತಃ ॥೪೧॥

ಆಗ ನಾನು ಬಹಳ ಪ್ರಯತ್ನಪಟ್ಟು ಮಾತಲಿಯನ್ನು ಕುರಿತು– 'ಎಲೈ ಮಾತಲಿಯೇ, ಇವರು ದಿವ್ಯಾಸ್ತ್ರಮಂತ್ರಿತವಾದ ನನ್ನ ಮಹಾಘೋರವಾದ ಬಾಣಸಮೂಹಗಳಿಂದ ವಧೆಯನ್ನು ಹೊಂದುತ್ತಿಲ್ಲ. ನಿನ್ನನ್ನು ಪ್ರಶ್ನಿಸುತ್ತಿರುವ ನನಗೆ ಸತ್ಯಾಂಶವನ್ನು ಹೇಳು' ಎಂದು ಕೇಳಿದೆನು.

ಸ ಮಾಮುವಾಚ ಪರ್ಯಾಪ್ತಸ್ತ್ವಮೇಷಾಂ ಭರತರ್ಷಭ ।
ತಾನುದ್ದಿಶ್ಯಾಥ ಮರ್ಮಾಣಿ ಪ್ರತಿಘಾತಂ ತದಾಚರ ॥೪೨॥

ಎಲೈ ಭರತರ್ಷಭನೇ, ಅವನು ನನ್ನನ್ನು ಕುರಿತು– 'ನೀನು ಇವರನ್ನು ಸಂಹರಿಸಲು ಸಮರ್ಥನಾಗಿದ್ದೀಯೆ. ಅವರಿಗೆ ಮರ್ಮಗಳಲ್ಲಿ ಪ್ರತಿಘಾತವನ್ನು ಮಾಡು' (ಬಾಣ ಪ್ರಯೋಗವನ್ನು ಮಾಡು) ಎಂದು ಹೇಳಿದನು.

ಏತತ್ ಶ್ರುತ್ವಾ ತು ರಾಜೇಂದ್ರ ಸಂಪ್ರಹೃಷ್ಟಸ್ತಮೂಚಿವಾನ್ ।
ನಿವರ್ತಯ ರಥಂ ಶೀಘ್ರಂ ಪಶ್ಯ ಚೈತಾನ್ ನಿಪಾತಿತಾನ್ ॥೪೩॥

ಏವಮುಕ್ತೋ ರಥಂ ತತ್ರ ಮಾತಲಿಃ ಪರ್ಯವರ್ತಯತ್ ॥೪೪॥

ಎಲೈ ರಾಜೇಂದ್ರನೇ, ಅದನ್ನು ಕೇಳಿ ಸಂತೋಷಗೊಂಡ ನಾನು ಶೀಘ್ರವಾಗಿ ರಥವನ್ನು ಹಿಂದಿರುಗಿಸು ಅವರನ್ನು ನಾನು ಹೊಡೆದು ಉರುಳಿಸುವುದನ್ನು ನೋಡು ಎಂದು ಹೇಳಿದೆನು. ಹೀಗೆ ಹೇಳಲ್ಪಟ್ಟ ಮಾತಲಿಯು ಅಲ್ಲಿ ರಥವನ್ನು ಹಿಂದಿರುಗಿಸಿದನು.

ತತೋ ಮತ್ವಾ ರಣೇ ಭಗ್ನಂ ದಾನವಾಃ ಪ್ರತಿಹರ್ಷಿತಾಃ ।
ವಿಚುಕ್ರುಶುರ್ಮಹಾರಾಜ ಸ್ವರೇಣ ಮಹತಾ ಮುಹುಃ ॥೪೫॥

ಅಭಗ್ನಃ ಕೈಶ್ಚಿದಪ್ಯೇಷ ಪಾಂಡವೋ ರಣಮೂರ್ಧನಿ ।
ಅಸ್ಮಾಭಿಃ ಸಮರೇ ಭಗ್ನ ಇತ್ಯೇವಂ ಸಂಘಶಸ್ತದಾ ॥೪೬॥

ಎಲೈ ಮಹಾರಾಜನೇ, ಆಗ ರಣದಲ್ಲಿ ನಾನು ಸೋತಿದ್ದೇನೆಂದು ತಿಳಿದು ಸಂತೋಷಪಡುತ್ತಿದ್ದ ದಾನವರು ದೊಡ್ಡ ಸ್ವರದಿಂದ ಕಿರುಚಿದರು. ಯಾರಿಂದಲೂ ಯುದ್ಧದಲ್ಲಿ ಸೋಲಿಸಲ್ಪಡದಿರುವ ಈ ಪಾಂಡವನು ನಮ್ಮಿಂದ ಭಗ್ನನಾಗಿದ್ದಾನೆ ಎಂದು ಸಮೂಹ ಸಮೂಹಗಳಲ್ಲಿ ಕಿರುಚಿದರು.

ತತೋಽಹಂ ದೇವದೇವಾಯ ರುದ್ರಾಯ ಪ್ರಯತೋ ರಣೇ ।
ಮಹತ್ಪಾಶುಪತಂ ದಿವ್ಯಂ ಸರ್ವಲೋಕನಮಸ್ಕೃತಮ್ ॥
ಪ್ರಯತಃ ಪ್ರಣತೋ ಭೂತ್ವಾ ನಮಸ್ಕೃತ್ಯ ಮಹಾತ್ಮನೇ ।
ಸ್ವಸ್ತಿ ಭೂತೇಭ್ಯ ಇತ್ಯುಕ್ತ್ವಾ ಮಹಾಸ್ತ್ರಂ ಸಮಚೋದಯಮ್ ॥೪೭॥

ಆಗ ನಾನು ಆ ಯುದ್ಧದಲ್ಲಿ ದೇವದೇವನಾದ ರುದ್ರನಿಗೆ ಮನಸ್ಸಿನಲ್ಲಿಯೇ ನಮಸ್ಕರಿಸಿ ಆ ಮಹಾತ್ಮನಿಗೆ ಪ್ರಣಾಮವನ್ನು ಮಾಡಿ ಎಲ್ಲ ಪ್ರಾಣಿಗಳಿಗೂ ಕ್ಷೇಮವಾಗಲಿ ಎಂದು ಹೇಳಿ ಸರ್ವಲೋಕ ನಮಸ್ಕೃತವಾದ ದಿವ್ಯವಾದ ಆ ಮಹಾ ಪಾಶುಪತಾಸ್ತ್ರವನ್ನು ಪ್ರಯೋಗಿಸಿದೆನು.

ಯತ್ತದ್ ರೌದ್ರಮಿತಿ ಖ್ಯಾತಂ ಸರ್ವಲೋಕನಮಸ್ಕೃತಮ್ ॥೪೮॥

ರೌದ್ರವೆಂದು ಪ್ರಸಿದ್ಧವಾದ ಸರ್ವಶತ್ರುವಿನಾಶಕವಾದ, ಸರ್ವಲೋಕ ನಮಸ್ಕೃತವಾದ ದಿವ್ಯವಾದ ಪಾಶುಪತಾಸ್ತ್ರವನ್ನು ನಾನು ಪ್ರಯೋಗಿಸಿದೆನು.

ತತೋಽಪಶ್ಯಂ ತ್ರಿಶಿರಸಂ ಪುರುಷಂ ನವಲೋಚನಮ್ ।
ತ್ರಿಮುಖಂ ಷಡ್‌ಭುಜಂ ದೀಪ್ತಮರ್ಕಜ್ವಲನಮೂರ್ಧನಮ್ ॥೪೯॥

ಆಗ ನಾನು ಮೂರು ತಲೆಗಳು, ಒಂಭತ್ತುಕಣ್ಣುಗಳು, ಮೂರು ಮುಖಗಳು, ಆರು ಭುಜಗಳು ಇರುವ ಸೂರ್ಯನ ಜ್ವಾಲೆಯಂತಿರುವ ಕೇಶಗಳುಳ್ಳ ಕಾಂತಿಯುಕ್ತನಾದ ಒಬ್ಬವ್ಯಕ್ತಿಯನ್ನು ನೋಡಿದೆನು.

ಲೇಲಿಹಾನೈರ್ಮಹಾನಾಗೈಃ ಕೃತಚೌಡ(ಚೀರ)ಮಮಿತ್ರಹನ್ ।
ಭಕ್ತಾನುಕಂಪಿನಂ ದೇವಂ ನಾಗಯಜ್ಞೋಪವೀತಿನಮ್ ॥೫೦॥

ಎಲೈ ಶತ್ರುಸೂದನನೇ, ನಾಲಗೆಯನ್ನು ಚಾಚಿ ನೆಕ್ಕುತ್ತಿರುವ ಮಹಾನಾಗಗಳ ಕಿರೀಟವನ್ನು ಹೊಂದಿದಂತಹ ನಾಗಯಜ್ಞೋಪವೀತವನ್ನು ಧರಿಸಿದ ಭಕ್ತಾನುಕಂಪಿಯಾದ ಮಹೇಶ್ವರನನ್ನು ನೋಡಿದೆನು.

ವಿಭೋ(ಭೀ)ಸ್ತತಸ್ತದಸ್ತ್ರಂ ತು ಘೋರಂ ರೌದ್ರಂ ಸನಾತನಮ್ ।
ದೃಷ್ಟ್ವಾ ಗಾಂಡೀವಸಂಯೋಗಮಾನೀಯ ಭರತರ್ಷಭ ॥೫೧॥

ನಮಸ್ಕೃತ್ವಾ ತ್ರಿನೇತ್ರಾಯ ಶರ್ವಾಯಾಮಿತತೇಜಸೇ ।
ಮುಕ್ತವಾನ್ ದಾನವೇಂದ್ರಾಣಾಂ ಪರಾಭಾವಾಯ ಭಾರತ ॥೫೨॥

ಎಲೈ ಭಾರತನೇ, ಆಗ ನಾನು ನಿರ್ಭಯನಾಗಿ ಸನಾತನವಾದ ಘೋರವಾದ ಆ ಪಾಶುಪತಾಸ್ತ್ರವನ್ನು ನೋಡಿ ಅದನ್ನು ಗಾಂಡೀವ ಧನುಸ್ಸಿನಲ್ಲಿ ಹೂಡಿ ಅಮಿತ ತೇಜಸ್ವಿಯಾದ ತ್ರಿನೇತ್ರನಾದ ರುದ್ರನಿಗೆ ನಮಸ್ಕಾರ ಮಾಡಿ ದಾನವೇಂದ್ರರ ಪರಾಭವವನ್ನು ಉದ್ದೇಶಿಸಿ ಪ್ರಯೋಗಿಸಿದೆನು.

ಮುಕ್ತಮಾತ್ರೇ ತತಸ್ತಸ್ಮಿನ್ ರೂಪಾಣ್ಯಾಸನ್ ಸಹಸ್ರಶಃ ।
ಮೃಗಾಣಾಮಥ ಸಿಂಹಾನಾಂ ವ್ಯಾಘ್ರಾಣಾಂ ಚ ವಿಶಾಂಪತೇ ॥೫೩॥

ಋಕ್ಷಾಣಾಂ ಮಹಿಷಾಣಾಂ ಚ ಪನ್ನಗಾನಾಂ ತಥಾ ಗವಾಮ್ ।
ಶರಭಾಣಾಂ ಗಜಾನಾಂ ಚ ವಾನರಾಣಾಂ ಚ ಸಂಘಶಃ ॥೫೪॥

ಎಲೈ ರಾಜನೇ, ನಾನು ಆ ಅಸ್ತ್ರವನ್ನು ಪ್ರಯೋಗಿಸಿದ ತಕ್ಷಣವೇ ಅಲ್ಲಿ ಸಹಸ್ರಾರು ಆಕೃತಿಗಳು- ಮೃಗಗಳ, ಸಿಂಹಗಳ, ವ್ಯಾಘ್ರಗಳ, ಕರಡಿಗಳ, ಕಾಡುಕೋಣಗಳ, ಸರ್ಪಗಳ, ಗೋವುಗಳ, ಶರಭಗಳ, ಗಜಗಳ, ವಾನರಗಳ ಆಕೃತಿಗಳು- ಕಾಣತೊಡಗಿದವು.

ಋಷಭಾಣಾಂ ವರಾಹಾಣಾಂ ಮಾರ್ಜಾರಾಣಾಂ ತಥೈವ ಚ ।
ಋಕ್ಷಾಶ್ವಗಜವಕ್ತ್ರಾಣಾಮುಲೂಕಾನಾಂ ತಥೈವ ಚ ॥೫೫॥

ಮೀನವಾಯಸರೂಪಾಣಾಂ ನಾನಾವಕ್ತ್ರಪ್ರಚಾರಿಣಾಮ್ ।
ಸಾಲಾವೃಕಾಣಾಂ ಪ್ರೇತಾನಾಂ ಮುರುಂಟಾನಾಂ ಚ ಸರ್ವಶಃ ॥೫೬॥

ಕರಡಿಗಳ, ಅಶ್ವಗಳ ಮತ್ತು ಗಜಗಳ ಮುಖಗಳನ್ನು ಹೊಂದಿದವರು ಗೂಬೆಗಳ ಆಕೃತಿ ಉಳ್ಳವರು ಮತ್ಸ ಮತ್ತು ಕಾಗೆಗಳ ಆಕೃತಿಯುಳ್ಳವರು, ವೃಷಭ ವರಾಹ ಮಾರ್ಜಾಲಗಳ ಆಕೃತಿಗಳುಳ್ಳವರು, ಅನೇಕ ವದನಗಳನ್ನುಳ್ಳವರು, ಸಾಲಾವೃಕಗಳು, ಪ್ರೇತಗಳು, ಮುರುಂಟಗಳು ಎಲ್ಲಕಡೆಯಲ್ಲಿಯೂ ಕಾಣತೊಡಗಿದವು.

ಶಾರ್ದೂಲಾನಾಂ ವರಾಹಾಣಾಂ ಶರಭಾಣಾಂ ಪ್ರವಲ್ಗತಾಮ್ ।
ಗೃಧ್ರಾಣಾಂ ಗರುಡಾನಾಂ ಚ ಚಮರಾಣಾಂ ತಥೈವ ಚ ।
ದೇವಾನಾಂ ಚ ಋಷೀಣಾಂ ಚ ಗಂಧರ್ವಾಣಾಂ ಚ ಸರ್ವಶಃ ।
ಪಿಶಾಚಾನಾಂ ಸಯಕ್ಷಾಣಾಂ ತಥೈವ ಚ ಸುರದ್ವಿಷಾಮ್ ॥೫೭॥

ಶಾರ್ದೂಲಗಳ, ವರಾಹಗಳ, ಗರ್ಜಿಸುವ ಶರಭಗಳ, ಗೃಧ್ರಗಳ, ಗರುಡಗಳ, ಚಮರಮೃಗಗಳ ಹಾಗೂ ದೇವತೆಗಳ, ಋಷಿಗಳ, ಗಂಧರ್ವರ, ಪಿಶಾಚಗಳ, ಯಕ್ಷರ ಮತ್ತು ಅಸುರರ ಆಕೃತಿಗಳು ಕಾಣತೊಡಗಿದವು.

ಗುಹ್ಯಕಾನಾಂ ಚ ಸಂಗ್ರಾಮೇ ನೈಋತಾನಾಂ ತಥೈವ ಚ ।
ಋಷಾಣಾಂ ಗಜವಕ್ತ್ರಾಣಾಮುಲೂಕಾನಾಂ ತಥೈವ ಚ ॥೫೮॥

ಆ ಯುದ್ಧದಲ್ಲಿ ಗುಹ್ಯಕರ, ನೈಋತರು, ಮೊಸಳೆಗಳ, ಗಜಗಳ ಮತ್ತು ಉಲೂಕಗಳ ವಕ್ತ್ರವುಳ್ಳವರು ಕಾಣತೊಡಗಿದರು.

ಮೀನವಾಜಿಸರೂಪಾಣಾಂ ನಾನಾಶಸ್ತ್ರಾಸಿಪಾಣಿನಾಮ್ ।
ತಥೈವ ಯಾತುಧಾನಾನಾಂ ಗದಾಮುದ್ಗರಧಾರಿಣಾಮ್ ॥೫೯॥

ಮತ್ಸ ಮತ್ತು ಅಶ್ವಗಳ ರೂಪಗಳುಳ್ಳ, ಕೈಯಲ್ಲಿ ನಾನಾ ಶಸ್ತ್ರಗಳನ್ನು ಮತ್ತು ಖಡ್ಗಗಳನ್ನು ಹಿಡಿದ ಹಾಗೆಯೇ ಗದಾಮುದ್ಗರಗಳನ್ನು ಕೈಯಲ್ಲಿ ಹಿಡಿದ ಯಾತುಧಾನರ (ರಾಕ್ಷಸರ) ಆಕೃತಿಗಳು ಅಲ್ಲಿ ಕಂಡುಬಂದವು.

ಏತೈಶ್ಚಾನ್ಯೈಶ್ಚ ಬಹುಭಿರ್ನಾನಾರೂಪಧರೈಸ್ತಥಾ ।
ಸರ್ವಮಾಸೀಜ್ಜಗದ್ ವ್ಯಾಪ್ತಂ ತಸ್ಮಿನ್ನಸ್ತ್ರೇ ವಿಸರ್ಜಿತೇ ॥೬೦॥

ನಾನು ಆ ಅಸ್ತ್ರವನ್ನು ಪ್ರಯೋಗಿಸುತ್ತಿದ್ದಂತೆಯೇ ಇಂತಹ ಮತ್ತು ಇನ್ನೂ ಅನೇಕ ಬೇರೆ ಬೇರೆ ರೂಪಗಳನ್ನು ಹೊಂದಿದ ಅನೇಕ ಪ್ರಾಣಿಗಳಿಂದ (ಯೋಧರಿಂದ) ಎಲ್ಲ ಜಗತ್ತೂ ತುಂಬಿಹೋಯಿತು.

ತ್ರಿಶಿರೋಭಿಶ್ಚತುರ್ದಂಷ್ಟ್ರೈಶ್ಚತುರಾಸ್ಯೈಶ್ಚತುರ್ಭುಜೈಃ ।
ಅನೇಕರೂಪಸಂಯುಕ್ತೈರ್ಮಾಂಸಮೇದೋವಸಾಶಿಭಿಃ ।
ಅಭೀಕ್ಷ್ಣಂ ವಧ್ಯಮಾನಾಸ್ತೇ ದಾನವಾ ನಾಶಮಾಗತಾಃ ॥೬೧॥

ಮೂರು ತಲೆಗಳುಳ್ಳ, ನಾಲ್ಕು ಕೋರೆದಾಡಿಗಳು ಮತ್ತು ನಾಲ್ಕು ಮುಖಗಳುಳ್ಳ, ನಾಲ್ಕು ಭುಜಗಳುಳ್ಳ, ಮಾಂಸ, ಮೇದಸ್ಸು ಮತ್ತು ಕೊಬ್ಬುಗಳನ್ನು ತಿನ್ನುವ ಇಂತಹ ಅನೇಕ ಆಕೃತಿಯುಳ್ಳ ಜೀವರಿಂದ ಸತತವಾಗಿ ವಧ್ಯಮಾನರಾದ ಆ ದಾನವರು ನಾಶವನ್ನು ಹೊಂದಿದರು.

ಅದ್ರಿಸಾರಮಯೈಶ್ಚಾನ್ಯೈರ್ಬಾಣೈರಪಿ ನಿಬರ್ಹಣೈಃ ।
ನ್ಯಹನಂ ದಾನವಾನ್ ಸರ್ವಾನ್ ಮುಹೂರ್ತೇನೈವ ಭಾರತ ॥೬೩॥

ಎಲೈ ಭಾರತನೇ, ನಾನು ಸೂರ್ಯಜ್ವಾಲೆಯಂತಹ ತೇಜಸ್ಸುಳ್ಳ ವಜ್ರಾಯುಧ ಮತ್ತು ಸಿಡಿಲಿಗೆ ಸಮಾನವಾದ ಕಾಂತಿಯುಳ್ಳ ಪರ್ವತದ ಸಾರದಿಂದ ಮಾಡಿದಂತೆ

ಇರುವ ರೆಕ್ಕೆಗಳನ್ನು ಹೊಂದಿದ ಬೇರೆ ಬಾಣಗಳಿಂದಲೂ ಒಂದು ಮುಹೂರ್ತದಲ್ಲಿ ದಾನವರನ್ನು ಸಂಹರಿಸಿದೆನು.

ಗಾಂಡೀವಾಸ್ತ್ರಪ್ರಣುನ್ನಾಂಸ್ತಾನ್ ಗತಾಸೂನ್ ನಭಸಶ್ಚ್ಯುತಾನ್ ।
ದೃಷ್ಟ್ವಾಽಹಂ ಪ್ರಣಮಂ ಭೂಯಸ್ತ್ರಿಪುರಘ್ನಾಯ ವೇಧಸೇ ॥೬೪॥

ಗಾಂಡೀವ ಧನುಸ್ಸಿನಿಂದ ಅಸ್ತ್ರಪೂರ್ವಕವಾಗಿ ಮುಕ್ತವಾದ ಬಾಣಗಳಿಂದ ಆ ದಾನವರು ಆಕಾಶದಿಂದ ಸತ್ತುಬೀಳುತ್ತಿರುವುದನ್ನು ನೋಡಿದ ನಾನು ತ್ರಿಪುರಾರಿಯಾದ ಜಗದ್ಧಾರಕನಾದ ರುದ್ರದೇವರಿಗೆ ಪುನಃ ಪ್ರಣಾಮವನ್ನು ಮಾಡಿದೆನು.

ತಥಾ ರೌದ್ರಾಸ್ತ್ರನಿಷ್ಪಿಷ್ಟಾನ್ ದಿವ್ಯಾಭರಣಭೂಷಿತಾನ್ ।
ನಿಶಾಮ್ಯ ಪರಮಂ ಹರ್ಷಮಗಮದ್ ದೇವಸಾರಥಿಃ ॥೬೫॥

ಹಾಗೆಯೇ, ಪಾಶುಪತಾಸ್ತ್ರದಿಂದ ದಿವ್ಯಾಭರಣಭೂಷಿತರಾದ ದಾನವರು ನಾಶಮಾಡಲ್ಪಡುತ್ತಿರುವುದನ್ನು ನೋಡಿ ದೇವಸಾರಥಿಯಾದ ಮಾತಲಿಯು ಪರಮ ಹರ್ಷವನ್ನು ಹೊಂದಿದನು.

ತದಸಹ್ಯಂ ಕೃತಂ ಕರ್ಮ ದೇವೈರಪಿ ದುರಾಸದಮ್ ।
ದೃಷ್ಟ್ವಾ ಮಾಂ ಪೂಜಯಾಮಾಸ ಮಾತಲಿಃ ಶಕ್ರಸಾರಥಿಃ ॥೬೬॥

ದೇವತೆಗಳಿಗೂ ಅಸಾಧ್ಯವಾದ ಕರ್ಮವನ್ನು ನಾನು ಮಾಡಿದುದನ್ನು ನೋಡಿ ಇಂದ್ರ ಸಾರಥಿಯಾದ ಮಾತಲಿಯು ನನ್ನನ್ನು ಸತ್ಕರಿಸಿದನು.

ಉವಾಚ ವಚನಂ ಚೇದಂ ಪ್ರೀಯಮಾಣಃ ಕೃತಾಂಜಲಿಃ ।
ಹತಾಂಸ್ತಾನ್ ದಾನವಾನ್ ದೃಷ್ಟ್ವಾ ಮಯಾ ಸಂಖೇ ಸಹಸ್ರಶಃ ॥೬೭॥

ನಾನು ಯುದ್ಧದಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ದಾನವರನ್ನು ಸಂಹರಿಸಿದುದನ್ನು ನೋಡಿ ಅವನು ಸಂತೋಷಗೊಂಡು ನನಗೆ ಕೈಗಳನ್ನು ಮುಗಿದು ಹೀಗೆ ಹೇಳಿದನು.

ಮಾತಲಿಃ

ಸುರಾಸುರೈರಸಹ್ಯಂ ಹಿ ಕರ್ಮ ಯತ್ ಸಾಧಿತಂ ತ್ವಯಾ ।
ನ ಹ್ಯೇತತ್ ಸಂಯುಗೇ ಕರ್ತುಮಪಿ ಶಕ್ತಃ ಸುರೇಶ್ವರಃ ॥೬೮॥

ಧ್ರುವಂ ಧನಂಜಯ ಪ್ರೀತಸ್ತ್ವಯಿ ಶಕ್ರಃ ಪುರಾರ್ದನ ॥೬೯॥

ಮಾತಲಿ– ಎಲೈ ಧನಂಜಯನೇ, ಎಲೈ ಹಿರಣ್ಯಪುರನಾಶನನೇ, ನೀನು ಸುರಾಸುರರಿಗೆ ಅಸಾಧ್ಯವಾದ ಯಾವ ಕಾರ್ಯವನ್ನು ಈ ದಿನ ಸಾಧಿಸಿರುವೆಯೋ ಅದನ್ನು ಹಿಂದೆ ಸುರೇಶ್ವರನಾದ ಇಂದ್ರನು ಸಾಧಿಸಲು ಸಮರ್ಥನಾಗಲಿಲ್ಲ. ಧನಂಜಯನೇ, ಖಂಡಿತವಾಗಿ ಇಂದ್ರನು ನಿನ್ನ ಈ ಕಾರ್ಯದಿಂದ ನಿನ್ನಲ್ಲಿ ಸಂತೋಷವುಳ್ಳವನಾಗುತ್ತಾನೆ.

ಸುರಾಸುರೈರವಧ್ಯಂ ಹಿ ಪುರಮೇತತ್ ಖಗಂ ಮಹತ್ ।
ತ್ವಯಾ ವಿಮಥಿತಂ ವೀರ ಸ್ವವೀರ್ಯತಪಸೋ ಬಲಾತ್ ॥೭೦॥

ಎಲೈ ವೀರನೇ, ಸುರಾಸುರರಿಂದ ಅವಧ್ಯವಾದ ಆಕಾಶಗಾಮಿಯಾದ ಈ ಪಟ್ಟಣವನ್ನು ನೀನು ನಿನ್ನ ಪರಾಕ್ರಮ ಮತ್ತು ತಪಸ್ಸಿನ ಬಲದಿಂದ ನಾಶಮಾಡಿದ್ದೀಯೆ (ಎಂದು ಹೇಳಿದನು).

ಅರ್ಜುನಃ

ವಿಧ್ವಸ್ತೇ ಖಪುರೇ ತಸ್ಮಿನ್ ದಾನವೇಷು ಹತೇಷು ಚ ।
ವಿನದಂತ್ಯಃ ಸ್ತ್ರಿಯಃ ಸರ್ವಾ ನಿಷ್ಪೇತುರ್ನಗರಾದ್ ಬಹಿಃ ॥೭೧॥

ಅರ್ಜುನ– ಆ ನಗರವು ನಾಶಮಾಡಲ್ಪಟ್ಟು ದಾನವರು ಹತರಾಗುತ್ತಿರಲು ಅವರ ಪತ್ನಿಯರೆಲ್ಲರೂ ಗಟ್ಟಿಯಾಗಿ ರೋದನಮಾಡುತ್ತಾ ನಗರದಿಂದ ಹೊರಗೆ ಬಂದರು.

ಪ್ರಕೀರ್ಣಕೇಶ್ಯೋ ವ್ಯಥಿತಾಃ ಕುರರ್ಯ ಇವ ದುಃಖಿತಾಃ ।
ಕುರರ್ಯ ಇವ ವಾಶಂತ್ಯೋ ದುಃಖಿತಾಶ್ಚ ಮುಹುರ್ಮುಹುಃ ॥೭೨॥

ತಲೆಗಳನ್ನು ಕೆದರಿಕೊಂಡು ವ್ಯಥೆಯಿಂದ ಕೂಡಿದವರಾಗಿ ಕುರರಿಗಳಂತೆ ದುಃಖಿತರಾಗಿ ಕುರರಿಗಳಂತೆ ಅಳುತ್ತಾ ಪುನಃಪುನಃ ದುಃಖಿತರಾದರು.

ಪೇತುಃ ಪುತ್ರಾನ್ ಪಿತೄನ್ ಭ್ರಾತೄನ್ ಶೋಚಮಾನಾ ಮಹೀತಳೇ ।
ರುದತ್ಯೋ ದೀನಕಂಠ್ಯಸ್ತು ನಿನದಂತ್ಯೋ ಹತೇಶ್ವರಾಃ ।
ಉರಾಂಸಿ ಪರಿನಿಘ್ನಂತ್ಯೋ ವಿಸ್ರಸ್ತಸ್ರಗ್ವಿಭೂಷಣಾಃ ॥೭೩॥

ಮಕ್ಕಳನ್ನೂ, ತಂದೆಗಳನ್ನೂ, ಸಹೋದರರನ್ನೂ ಕುರಿತು ಶೋಕಪಡುತ್ತಾ ದೀನ ಕಂಠದಿಂದ ಅಳುತ್ತಾ ಪತಿಗಳನ್ನು ಕಳೆದುಕೊಂಡು ಕೂಗುತ್ತಾ ಎದೆಗಳನ್ನು ಬಡಿದುಕೊಳ್ಳುತ್ತಾ ತಮ್ಮ ವಸ್ತ್ರಾಭರಣಗಳು ವ್ಯತ್ಯಸ್ತವಾಗಿರುತ್ತಿರಲು ಭೂಮಿಯ ಮೇಲೆ ಬಿದ್ದರು.

ತಚ್ಛೋಕಯುಕ್ತಮಶ್ರೀಕಂ ದುಃಖದೈನ್ಯಸಮಾಹತಮ್ ।
ನ ಬಭೌ ದಾನವಪುರಂ ಹತತ್ವಿಟ್ಕಂ ಹತೇಶ್ವರಮ್ ॥೭೪॥

ಶೋಕಯುಕ್ತವಾದ, ಕಾಂತಿರಹಿತವಾದ, ದುಃಖದೈನ್ಯಗಳಿಂದ, ಹತವಾದ ಪ್ರಭುಗಳನ್ನು ಕಳೆದುಕೊಂಡ ತೇಜೋಹೀನವಾದ ಆ ದಾನವ ಪುರವು ಶೋಭಿಸಲಿಲ್ಲ.

ಗಂಧರ್ವನಗರಾಕಾರಂ ಹತನಾಗಮಿವ ಹ್ರದಮ್ ।
ಶುಷ್ಕವೃಕ್ಷಮಿವಾರಣ್ಯಮದೃಶ್ಯಮಭವತ್ ಪುರಮ್ ॥೭೫॥

ಸರ್ಪವು ಹತವಾದ ಸರೋವರದಂತೆ, ಒಣಗಿದ ಮರಗಳುಳ್ಳ ಕಾಡಿನಂತೆ, ಗಂಧರ್ವನಗರದಂತೆ ಆ ಪಟ್ಟಣವು ನೋಡುವುದಕ್ಕೆ ಅಸಾಧ್ಯವಾಗಿದ್ದಿತು.

ಮಾಂ ತು ಸಂಹೃಷ್ಟಮನಸಂ ಕ್ಷಿಪ್ರಂ ಮಾತಲಿರಾನಯತ್ ।
ದೇವರಾಜಸ್ಯ ಭವನಂ ಕೃತಕರ್ಮಾಣಮಾಹವಾತ್ ॥೭೬॥

ಯುದ್ಧದಲ್ಲಿ ಕಾರ್ಯವನ್ನು ಸಾಧಿಸಿ ಸಂತೋಷಗೊಂಡ ನನ್ನನ್ನಾದರೂ ಮಾತಲಿಯು ಶೀಘ್ರವಾಗಿ ದೇವರಾಜನ ಭವನಕ್ಕೆ ಕರೆತಂದನು.

ಹಿರಣ್ಯಪುರಮುತ್ಸೃಜ್ಯ ನಿಹತ್ಯ ಚ ಮಹಾಸುರಾನ್ ।
ನಿವಾತಕವಚಾಂಶ್ಚೈವ ತತೋಽಹಂ ಶಕ್ರಮಾಗಮಮ್ ॥೭೭॥

ಹಿರಣ್ಯಪುರವನ್ನು ತ್ಯಜಿಸಿ ಮಹಾಸುರರನ್ನೂ ಮತ್ತು ನಿವಾತಕವಚರನ್ನೂ ಸಂಹರಿಸಿ ನಾನು ಇಂದ್ರನ ಸಮೀಪಕ್ಕೆ ಬಂದೆನು.

ಮಮ ಕರ್ಮ ಚ ದೇವೇಂದ್ರಂ ಮಾತಲಿರ್ವಿಸ್ತರೇಣ ತತ್ ।
ಸರ್ವಂ ವಿಶ್ರಾವಯಾಮಾಸ ಯಥಾಭೂತಂ ಮಹಾದ್ಯುತೇ ॥೭೮॥

ಎಲೈ ಮಹಾದ್ಯುತಿಯೇ, ನಾನು ಮಾಡಿದ ಕಾರ್ಯವನ್ನು ಅದು ನಡೆದಂತೆಯೇ ಮಾತಲಿಯು ದೇವೇಂದ್ರನಿಗೆ ವಿಸ್ತಾರವಾಗಿ ತಿಳಿಸಿದನು.

ಹಿರಣ್ಯಪುರಘಾತಂ ಚ ಮಾಯಾನಾಂ ಚ ನಿವಾರಣಮ್ ।
ನಿವಾತಕವಚಾನಾಂ ಚ ವಧಂ ಸಂಖೇ ಮಹೌಜಸಾಮ್ ॥೭೯॥

ಕಾಲಕೇಯವಧಂ ಚೈವ ಅದ್ಭುತಂ ರೋಮಹರ್ಷಣಮ್ ।
ತತ್ ಶ್ರುತ್ವಾ ಭಗವಾನ್ ಪ್ರೀತಃ ಸಹಸ್ರಾಕ್ಷಃ ಪುರಂದರಃ ॥೮೦॥

ಹಿರಣ್ಯಪುರದ ನಾಶ, ಮಾಯೆಗಳ ನಿವಾರಣ, ಮಹಾಬಲವುಳ್ಳ ನಿವಾತಕವಚರ ವಧೆ, ರೋಮಾಂಚಕಾರಿಯಾದ ಕಾಲಕೇಯರ ಅದ್ಭುತವಾದ ವಧೆ ಇವುಗಳನ್ನೆಲ್ಲಾ ಕೇಳಿದ ಪೂಜ್ಯನಾದ ಸಹಸ್ರಾಕ್ಷನಾದ ಪುರಂದರನು ಸಂತೋಷಗೊಂಡನು.

ಮರುದ್ಭಿಃ ಸಹಿತಃ ಶ್ರೀಮಾನ್ ಸಾಧುಸಾಧ್ವಿತ್ಯಥಾಬ್ರವೀತ್ ।
ಪರಿಷ್ವಜ್ಯ ಚ ಮಾಂ ಪ್ರೇಮ್ಣಾ ಮೂರ್ಧ್ನಿ ಚಾಘ್ರಾಯ ಸಸ್ಮಿತಮ್ ॥೮೧॥

ಕಾಂತಿಯುಕ್ತನಾದ ಅವನು ನನ್ನನ್ನು ಪ್ರೀತಿಯಿಂದ ಆಲಿಂಗಿಸಿ ಮಂದಹಾಸಪೂರ್ವಕವಾಗಿ ಶಿರಸ್ಸಿನಲ್ಲಿ ಆಘ್ರಾಣಿಸಿ ಮರುತ್ತುಗಳಿಂದ ಸಹಿತನಾಗಿ ಸಾಧು ಸಾಧು ಎಂದು ಪ್ರಶಂಸೆ ಮಾಡಿದನು.

ತತೋ ಮಾಂ ದೇವರಾಜೋ ವೈ ಸಮಾಶ್ವಾಸ್ಯ ಪುನಃ ಪುನಃ ।
ಅಬ್ರವೀದ್ ವಿಬುಧೈಃ ಸಾರ್ಧಮಿದಂ ಸ ಮಧುರಂ ವಚಃ ॥೮೨॥

ಆಗ ದೇವರಾಜನು ಪರಿಪರಿಯಾಗಿ ನನ್ನನ್ನು ಸಮಾಧಾನ ಮಾಡಿ ದೇವತೆಗಳ ಜೊತೆಯಲ್ಲಿ ಈ ಮಧುರವಾದ ಮಾತುಗಳನ್ನು ಆಡಿದನು.

ಅತಿದೇವಾಸುರಂ ಕರ್ಮ ಕೃತಮೇವ ತ್ವಯಾ ರಣೇ ।
ಗುರ್ವರ್ಥಶ್ಚ ಕೃತಃ ಪಾರ್ಥ ಮಹಾಶತ್ರೂನ್‌ಘ್ನತಾ ಮಮ ॥೮೩॥

ಎಲೈ ಪಾರ್ಥನೇ, ನೀನು ಯುದ್ಧದಲ್ಲಿ ದೇವತೆಗಳಿಗೂ ಮೀರಿದ ಕರ್ಮವನ್ನು ಮಾಡಿದ್ದೀಯೆ. ನನ್ನ ಮಹಾಶತ್ರುಗಳನ್ನು ಸಂಹಾರ ಮಾಡಿ ನನಗೆ ಗುರುದಕ್ಷಿಣೆಯನ್ನೂ ಕೊಟ್ಟಿದ್ದೀಯೆ.

ಏವಮೇವ ಸದಾ ಭಾವ್ಯಂ ಸ್ಥಿರೇಣಾಜೌ ಧನಂಜಯ ।
ಅಸಮ್ಮೂಢೇನ ಚಾಸ್ತ್ರಾಣಾಂ ಕರ್ತವ್ಯಂ ಪ್ರತಿಪಾದನಮ್ ॥೮೪॥

ಎಲೈ ಧನಂಜಯನೇ, ಯಾವಾಗಲೂ ಯುದ್ಧದಲ್ಲಿ ಹೀಗೆಯೇ ಸ್ಥಿರವಾಗಿರಬೇಕು. ಯಾವುದೇ ಪ್ರಮಾದವಿಲ್ಲದೆ ಅಸ್ತ್ರಗಳನ್ನು ಪ್ರಯೋಗಿಸಬೇಕು.

ಅವಿಷಹ್ಯೋ ರಣೇ ಹಿ ತ್ವಂ ದೇವದಾನವರಾಕ್ಷಸೈಃ ।
ಸಯಕ್ಷಾಸುರಗಂಧರ್ವೈಃ ಸಪಕ್ಷಿಗಣಪನ್ನಗೈಃ ॥೮೫॥

ನೀನು ಯುದ್ಧದಲ್ಲಿ ದೇವದಾನವರಾಕ್ಷಸರಿಂದಲೂ, ಯಕ್ಷಾಸುರ ಗಂಧರ್ವರಿಂದಲೂ, ಪಕ್ಷಿಗಣಸರ್ಪಗಳಿಂದಲೂ ಅವಿಷಹ್ಯನಾಗಿದ್ದೀಯೆ (ಅಜೇಯನಾಗಿದ್ದೀಯೆ).

ವಸುಧಾಂ ಚಾಪಿ ಕೌಂತೇಯ ತ್ವದ್ಬಾಹುಬಲನಿರ್ಜಿತಾಮ್ ।
ಪಾಲಯಿಷ್ಯತಿ ಧರ್ಮಾತ್ಮಾ ಕುಂತೀಪುತ್ರೋ ಯುಧಿಷ್ಠಿರಃ ॥೮೬॥

ಎಲೈ ಕೌಂತೇಯನೇ, ನಿನ್ನ ಬಾಹುಬಲದಿಂದ ನಿರ್ಜಿತವಾದ ಭೂಮಿಯನ್ನು ಧರ್ಮಾತ್ಮನಾದ ಕುಂತೀಪುತ್ರನಾದ ಯುಧಿಷ್ಠಿರನು ಪಾಲಿಸುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಷಷ್ಟ್ಯಧಿಕಶತತಮೋऽಧ್ಯಾಯಃ ॥
॥ ಇತಿ ನಿವಾತಕವಚಯುದ್ಧಪರ್ವಣಿ ಪಂಚದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ತೆಂಟನೆಯ ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಅಥಾನುಜ್ಞಾಪ್ಯ ಪಿತರಂ ರಥೇನೈಂದ್ರೇಣ ಭಾಸ್ವತಾ ।
ಸೋದರ್ಯಾಣಾಂ ಸಕಾಶಂ ಸ ಯಯೌ ವಜ್ರಧರಾತ್ಮಜಃ ॥೩೧೬॥

ಅರ್ಜುನ ಇಂದ್ರನ ಅನುಮತಿ ಪಡೆದು ಹೊಳೆಯುವ ಇಂದ್ರರಥದಿಂದ ಸೋದರರ ಬಳಿಗೆ ಬಂದ.

ಆಯಾಂತಮೀಕ್ಷ್ಯ ಬಿಭ್ರತ್ಸಂ ಮುಮುದುರ್ಭ್ರಾತರೋऽಧಿಕಮ್ ।

ಅರ್ಜುನ ಬಂದುದನ್ನು ನೋಡಿ ಸೋದರರು ಬಹಳ ಸಂತೋಷಪಟ್ಟರು.

★ ★ ★ ★

ನೂರ ಅರವತ್ತೊಂಬತ್ತನೆಯ ಅಧ್ಯಾಯ

ಅರ್ಜುನನಿಂದ ಇಂದ್ರನು ತನಗೆ ಕವಚ ಕಿರೀಟಾಧಿಗಳನ್ನು ಅನುಗ್ರಹಿಸಿದ ಪ್ರಕಾರ ಕಥನ ಮತ್ತು ಮರುದಿನ ಅಸ್ತ್ರಗಳನ್ನು ಯುಧಿಷ್ಠಿರನಿಗೆ ತೋರಿಸುವುದಾಗಿ ಆಶ್ವಾಸನೆ.

ಅರ್ಜುನಃ

ತತೋ ಮಾಮತಿವಿಶ್ವಸ್ತಂ ಸಂರೂಢಶರವಿಕ್ಷತಮ್ ।
ದೇವರಾಜೋऽನುಗೃಹ್ಯೇದಂ ಕಾಲೇ ವಚನಮಬ್ರವೀತ್ ॥೧॥

ಅರ್ಜುನ– ಅನಂತರ ಯುದ್ಧದಲ್ಲಿ ಬಾಣಗಳಿಂದ ಗಾಯಗೊಂಡು ಆದರೂ ಅತ್ಯಂತ ಸಮಾಧಾನದಿಂದ ಕೂಡಿದ ನನ್ನನ್ನು ಕುರಿತು ಯೋಗ್ಯಕಾಲದಲ್ಲಿ ದೇವರಾಜನಾದ ಇಂದ್ರನು ಮಾತನಾಡಿದನು.

ದಿವ್ಯಾನ್ಯಸ್ತ್ರಾಣಿ ಸರ್ವಾಣಿ ತ್ವಯಿ ತಿಷ್ಠಂತಿ ಭಾರತ ।
ನ ತ್ವಾऽಭಿಭವಿತುಂ ಶಕ್ತೋ ಮಾನುಷೋ ಭುವಿ ಕಶ್ಚನ ॥೨॥

ಎಲೈ ಭಾರತನೇ, ಎಲ್ಲಾ ದಿವ್ಯಾಸ್ತ್ರಗಳು ನಿನ್ನಲ್ಲಿ ಇವೆ. ನಿನ್ನನ್ನು ಸೋಲಿಸಲು ಭೂಮಿಯಲ್ಲಿರುವ ಯಾವ ಮನುಷ್ಯನಿಗೂ ಸಾಧ್ಯವಿಲ್ಲ.

ಭೀಷ್ಮೋ ದ್ರೋಣಃ ಕೃಪಃ ಕರ್ಣಃ ಶಕುನಿಃ ಸಹ ರಾಜಭಿಃ ।
ಸಂಗ್ರಾಮಸ್ಥಸ್ಯ ತೇ ಪುತ್ರ ಕಲಾಂ ನಾರ್ಹಂತಿ ಷೋಡಶೀಮ್ ॥೩॥

ಭೀಷ್ಮ, ದ್ರೋಣ, ಕೃಪ, ಕರ್ಣ, ರಾಜರಿಂದೊಡಗೂಡಿದ ಶಕುನಿ ಇವರೆಲ್ಲರೂ ಯುದ್ಧದಲ್ಲಿನಿಂತ ನಿನ್ನ ತೇಜಸ್ಸಿನ ಹದಿನಾರನೆಯ ಒಂದು ಅಂಶವನ್ನು ಹೊಂದಲಾರರು (ಎಂದು ಹೇಳಿದನು).

ಅರ್ಜುನಃ

ಇದಂ ಚ ಮೇ ತನುತ್ರಾಣಂ ಪ್ರಾಯಚ್ಛತ್ ಮಘವಾನ್ ಪ್ರಭುಃ ।
ಅಭೇದ್ಯ ಕವಚಂ ದಿವ್ಯಂ ಸ್ರಜಂ ಚೈವ ಹಿರಣ್ಮಯೀಮ್ ॥೪॥

ಅರ್ಜುನ– ಪ್ರಭುವಾದ ಇಂದ್ರನು ಈ ನನ್ನ ಅಭೇದ್ಯವಾದ ಮತ್ತು ದಿವ್ಯವಾದ ಶರೀರ ಕವಚವನ್ನು ಮತ್ತು ಸುವರ್ಣಮಯವಾದ ಮಾಲೆಯನ್ನು ಕೊಟ್ಟನು.

ದೇವದತ್ತಂ ಚ ಮೇ ಶಂಖಂ ಪುನಃ ಪ್ರಾದಾನ್ಮಹಾರವಮ್ ।
ದಿವ್ಯಂ ಚೇದಂ ಕಿರೀಟಂ ಮೇ ಸ್ವಯಮಿಂದ್ರೋ ಯುಯೋಜ ಹ ॥೫॥

ಮಹಾನಾದವನ್ನು ಮಾಡುವ ಈ ದೇವದತ್ತಶಂಖವನ್ನೂ ನನಗೆ ಕೊಟ್ಟನು. ಈ ದಿವ್ಯವಾದ ಕಿರೀಟವನ್ನು ಇಂದ್ರನು ತಾನೇ ನನ್ನ ತಲೆಯ ಮೇಲೆ ಅಳವಡಿಸಿದನು.

ತತೋ ದಿವ್ಯಾನಿ ವಸ್ತ್ರಾಣಿ ದಿವ್ಯಾನ್ಯಾಭರಣಾನಿ ಚ ।
ಪ್ರಾದಾಚ್ಛಕ್ರೋ ಮಮೈತಾನಿ ರುಚಿರಾಣಿ ಬೃಹಂತಿ ಚ ॥೬॥

ಅನಂತರ ಇಂದ್ರನು ನನಗೆ ಈ ಮನೋಹರವಾದ ದೊಡ್ಡದಾದ ದಿವ್ಯವಾದ ವಸ್ತ್ರಗಳನ್ನೂ ಮತ್ತು ದಿವ್ಯವಾದ ಆಭರಣಗಳನ್ನೂ ನೀಡಿದನು.

ಏವಂ ಸಂಪೂಜಿತಸ್ತತ್ರ ಸುಖಮಸ್ಮ್ಯುಷಿತೋ ನೃಪ ।
ಇಂದ್ರಸ್ಯ ಭವನೇ ಪುಣ್ಯೇ ಗಂಧರ್ವಶಿಶುಭಿಃ ಸಹ ।
ತತೋ ಮಾಮಬ್ರವೀಚ್ಛಕ್ರಃ ಪ್ರೀತಿಮಾನಮರೈಃ ಸಹ ॥೭॥

ಸಮಯೋಽರ್ಜುನ ಗಂತುಂ ತೇ ಭ್ರಾತರೋ ಹಿ ಸ್ಮರಂತಿ ತೇ ॥೮॥

ಎಲೈ ರಾಜನೇ, ಹೀಗೆ ಪುಣ್ಯಪ್ರದವಾದ ಇಂದ್ರಭವನದಲ್ಲಿ ಪೂಜಿಸಲ್ಪಟ್ಟ ಗಂಧರ್ವ ಕುಮಾರರ ಜೊತೆಯಲ್ಲಿ ಸುಖವಾಗಿ ವಾಸಮಾಡಿದೆ. ಆಗ ದೇವತೆಗಳ ಜೊತೆಯಲ್ಲಿದ್ದ ಇಂದ್ರನು ನನ್ನನ್ನು ಕುರಿತು ಸಂತೋಷದಿಂದ ಅರ್ಜುನನೇ ನೀನು ಪ್ರಯಾಣ ಮಾಡುವ ಸಮಯವು ಪ್ರಾಪ್ತವಾಗಿದೆ. ನಿನ್ನ ಸಹೋದರರು ನಿನ್ನ ಸ್ಮರಿಸುತ್ತಾರೆ ಎಂದು ಹೇಳಿದನು.

ಏವಮಿಂದ್ರಸ್ಯ ಭವನೇ ಪಂಚ ವರ್ಷಾಣಿ ಭಾರತ ।
ಉಷಿತಾನಿ ಮಯಾ ರಾಜನ್ ಸ್ಮರತಾ ದ್ಯೂತಜಂ ಕಲಿಮ್ ॥೯॥

ಎಲೈ ರಾಜನೇ, ಎಲೈ ಭಾರತನೇ, ಹೀಗೆ ಐದು ವರ್ಷಗಳ ಕಾಲ ನಾನು ದ್ಯೂತದಿಂದ ಉಂಟಾದ ದುಃಖವನ್ನು ಸ್ಮರಿಸುತ್ತಾ ಇಂದ್ರಭವನದಲ್ಲಿ ವಾಸವನ್ನು ಮಾಡಿದೆ.

ತತೋ ಭವಂತಮದ್ರಾಕ್ಷಂ ಭ್ರಾತೃಭಿಃ ಪರಿವಾರಿತಮ್ ।
ಗಂಧಮಾದನಪಾದಸ್ಯ ಪರ್ವತಸ್ಯಾಸ್ಯ ಮೂರ್ಧನಿ ॥೧೦॥

ಅನಂತರ ಗಂಧಮಾದನ ಪರ್ವತದ ಪಾದದಲ್ಲಿರುವ ಈ ಪರ್ವತದ ಶಿಖರದಲ್ಲಿ ಸಹೋದರರಿಂದ ಕೂಡಿದ ನಿನ್ನನ್ನು ನೋಡಿದೆನು.

ಯುಧಿಷ್ಠಿರಃ

ದಿಷ್ಟ್ಯಾ ಧನಂಜಯಾಸ್ತ್ರಾಣಿ ತ್ವಯಾ ಪ್ರಾಪ್ತಾನಿ ಭಾರತ ।
ದಿಷ್ಟ್ಯಾ ಚಾರಾಧಿತೋ ರಾಜಾ ದೇವಾನಾಮೀಶ್ವರಃ ಪ್ರಭುಃ ॥೧೧॥

ಯುಧಿಷ್ಠಿರ– ಎಲೈ ಭಾರತನೇ, ಭಗವದನುಗ್ರಹದಿಂದ ನೀನು ಅಸ್ತ್ರಗಳನ್ನು ಸಂಪಾದಿಸಿದ್ದೀಯೆ. ಭಗವದನುಗ್ರಹದಿಂದಲೇ ದೇವರಾಜನಾದ ಪ್ರಭುವಾದ ಇಂದ್ರನನ್ನು ಆರಾಧಿಸಿದ್ದೀಯೆ.

ದಿಷ್ಟ್ಯಾ ಚ ಭಗವಾನ್ ಸ್ಥಾಣುರ್ದೇವ್ಯಾ ಸಹ ಪರಂತಪ ।
ಸಾಕ್ಷಾದ್ ದೃಷ್ಟಃ ಸ್ವಯುದ್ಧೇನ ತೋಷಿತಶ್ಚ ತ್ವಯಾऽನಘ ॥೧೨॥

ಎಲೈ ಪರಂತಪನೇ, ಎಲೈ ಅನಘನೇ, ಭಗವದನುಗ್ರಹದಿಂದಲೇ ನೀನು ನಿನ್ನ ಯುದ್ಧದಿಂದ ರುದ್ರನನ್ನು ಸಂತೋಷಪಡಿಸಿ ಪೂಜ್ಯನಾದ ಉಮಾಸಹಿತನಾದ ಸ್ಥಾಣುದೇವನನ್ನು ಸಾಕ್ಷಾತ್ತಾಗಿ ನೋಡಿದೆ.

ದಿಷ್ಟ್ಯಾ ಚ ಲೋಕಪಾಲೈಸ್ತ್ವಂ ಸಮೇತೋ ಭರತರ್ಷಭ ।
ದಿಷ್ಟ್ಯಾ ವರ್ಧಾಮಹೇ ಪಾರ್ಥ ದಿಷ್ಟ್ಯಾऽಸಿ ಪುನರಾಗತಃ ॥೧೩॥

ಎಲೈ ಭರತರ್ಷಭನೇ, ಭಗವದನುಗ್ರಹದಿಂದಲೇ ನೀನು ಲೋಕಪಾಲಕರಿಂದ ಸಮಾಗಮವನ್ನು ಹೊಂದಿದೆ. ಪಾರ್ಥನೇ, ಭಗವದನುಗ್ರಹದಿಂದಲೇ ನೀನು ಹಿಂದಿರುಗಿ ಬಂದಿದ್ದೀಯೆ. ಭಗವದನುಗ್ರಹದಿಂದಲೇ ನಾವು ಅಭ್ಯುದ್ಧಿಯನ್ನು ಹೊಂದುತ್ತಿದ್ದೇವೆ.

ಅದ್ಯ ಕೃತ್ಸ್ನಾಂ ಮಹೀಂ ದೇವೀಂ ವಿಜಿತಾಂ ಪುರಮಾಲಿನೀಮ್ ।
ಮನ್ಯೇ ಚ ಧೃತರಾಷ್ಟ್ರಸ್ಯ ಪುತ್ರಾನಪಿ ವಶೀಕೃತಾನ್ ।
ಪಶ್ಯಾಮಿ ಭೂಮಿಂ ಕೌಂತೇಯ ತ್ವಯಾ ಮೇ ಪ್ರತಿಪಾದಿತಾಮ್ ॥೧೪॥

ಈ ದಿನ ನಗರಗಳ ಮಾಲೆಯುಳ್ಳ ಸಮಗ್ರ ಭೂಮಿಯು ವಿಜಿತವಾಗಿದೆ. ಮತ್ತು ಧೃತರಾಷ್ಟ್ರನ ಪುತ್ರರು ವಶೀಕೃತರಾಗಿದ್ದಾರೆ ಎಂದು ಭಾವಿಸಿದ್ದೇನೆ. ಎಲೈ ಕೌಂತೇಯನೇ, ನೀನು ಈ ದಿನ ನನಗೆ ಭೂಮಿಯನ್ನು ಕೊಡುತ್ತಿರುವುದನ್ನು ನೋಡುತ್ತಿದ್ದೇನೆ.

ಇಚ್ಛಾಮಿ ತಾನಿ ಚಾಸ್ತ್ರಾಣಿ ದ್ರಷ್ಟುಂ ದಿವ್ಯಾನಿ ಭಾರತ ।
ಯೈಸ್ತಥಾ ವೀರ್ಯವಂತಸ್ತೇ ನಿವಾತಕವಚಾ ಹತಾಃ ॥೧೫॥

ಎಲೈ ಭಾರತನೇ, ಯಾವ ದಿವ್ಯಾಸ್ತ್ರಗಳಿಂದ ನೀನು ಪರಾಕ್ರಮಶಾಲಿಗಳಾದ ನಿವಾತ ಕವಚರನ್ನು ಸಂಹರಿಸಿದೆಯೋ ಅಂತಹ ದಿವ್ಯಾಸ್ತ್ರಗಳನ್ನು ನೋಡಲು ಬಯಸುತೀನೆ.

ಅರ್ಜುನಃ

ಶ್ವಃ ಪ್ರಭಾತೇ ಭವಾನ್‌ದ್ರಷ್ಟಾ ದಿವ್ಯಾನ್ಯಸ್ತ್ರಾಣಿ ಸರ್ವಶಃ ।
ನಿವಾತಕವಚಾ ಘೋರಾ ಯೈರ್ಮಯಾ ವಿನಿಪಾತಿತಾಃ ॥೧೬॥

ಅರ್ಜುನ– ಯಾವ ದಿವ್ಯಾಸ್ತ್ರಗಳಿಂದ ನಾನು ಘೋರರಾದ ನಿವಾತಕವಚರನ್ನು ವಧೆಮಾಡಿದೆನೋ ಅಂತಹ ಎಲ್ಲಾ ಅಸ್ತ್ರಗಳನ್ನೂ ನೀನು ನಾಳೆಯ ಬೆಳಿಗ್ಗೆ ನೋಡುವಿ.

ವೈಶಂಪಾಯನಃ

ಏವಮಾಗಮನಂ ತತ್ರ ಕಥಯಿತ್ವಾ ಧನಂಜಯಃ ।
ಭ್ರಾತೃಭಿಃ ಸಹಿತಃ ಸರ್ವೈ ರಜನೀಂ ತಾಮುವಾಸ ಹ ॥೧೭॥

ವೈಶಂಪಾಯನ– ಹೀಗೆ ಧನಂಜಯನು ತನ್ನ ಆಗಮನದ ಪ್ರಕಾರವನ್ನು ತಿಳಿಸಿ ಎಲ್ಲಾ ಸಹೋದರರಿಂದ ಸಹಿತನಾಗಿ ಆ ರಾತ್ರಿಯನ್ನು ಅಲ್ಲಿ ಕಳೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಏಕೋನಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ನಿವಾತಕವಚಯುದ್ಧಪರ್ವಣಿ ಷೋಡಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಅರವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ಎಪ್ಪತ್ತನೆಯ ಅಧ್ಯಾಯ

ಅರ್ಜುನನಿಂದ ಯುಧಿಷ್ಠಿರನಿಗೆ ದಿವ್ಯಾಸ್ತ್ರ ಪ್ರದರ್ಶನ. ಅಸ್ತ್ರ ತೇಜಸ್ಸಿನಿಂದ ಜಗತ್ತಿಗೆ ಕ್ಷೋಭೆ ಉಂಟಾಗುತ್ತಿರಲು ಇಂದ್ರನ ಅಪ್ಪಣೆಯಿಂದ ನಾರದರಿಂದ ಅಸ್ತ್ರ ಪ್ರದರ್ಶನದ ನಿಷೇಧ.

ವೈಶಂಪಾಯನಃ

ತಸ್ಯಾಂ ರಾತ್ರ್ಯಾಂ ವ್ಯತೀತಾಯಾಂ ಧರ್ಮರಾಜೋ ಯುಧಿಷ್ಠಿರಃ ।
ಉತ್ಥಾಯಾವಶ್ಯಕಾರ್ಯಾಣಿ ಕೃತವಾನ್ ಭ್ರಾತೃಭಿಃ ಸಹ ।
ತತಃ ಸಂಚೋದಯಾಮಾಸ ಸೋऽರ್ಜುನಂ ಭ್ರಾತೃನಂದನಮ್ ॥೧॥

ದರ್ಶಯಾಸ್ತ್ರಾಣಿ ಕೌಂತೇಯ ಯೈರ್ಜಿತಾ ದಾನವಾಸ್ತ್ವಯಾ ॥೨॥

ವೈಶಂಪಾಯನ– ಆ ರಾತ್ರಿಯು ಕಳೆಯುತ್ತಿರಲು ಧರ್ಮರಾಜನಾದ ಯುಧಿಷ್ಠಿರನು ಎದ್ದು ತಮ್ಮಂದಿರ ಜೊತೆಯಲ್ಲಿ ಅವಶ್ಯಕಾರ್ಯಗಳನ್ನು ಮಾಡಿದನು. ಅನಂತರ ಭ್ರಾತೃನಂದನನಾದ ಅರ್ಜುನನನ್ನು ಕುರಿತು– 'ಕೌಂತೇಯನೇ, ಯಾವ ಅಸ್ತ್ರಗಳಿಂದ

ನೀನು ದಾನವರನ್ನು ಗೆದ್ದೆಯೋ ಅಂತಹ ಅಸ್ತ್ರಗಳನ್ನು ತೋರಿಸು' ಎಂದು ಒತ್ತಾಯ ಮಾಡಿದನು.

ತತೋ ಧನಂಜಯೋ ರಾಜನ್ ದೇವೈರ್ದತ್ತಾನಿ ಪಾಂಡವಃ ।
ಅಸ್ತ್ರಾಣಿ ತಾನಿ ದಿವ್ಯಾನಿ ದರ್ಶಯಾಮಾಸ ಭಾರತ ॥೩॥

ಎಲೈ ರಾಜನೇ, ಆಗ ಪಾಂಡವನಾದ ಧನಂಜಯನು ದೇವತೆಗಳಿಂದ ಕೊಡಲ್ಪಟ್ಟ ಆ ದಿವ್ಯಾಸ್ತ್ರಗಳನ್ನು ತೋರಿಸಿದನು.

ಯಥಾನ್ಯಾಯಂ ಮಹಾತೇಜಾಃ ಶೌಚಂ ಪರಮಮಾಸ್ಥಿತಃ ।
ನಮಸ್ಕೃತ್ಯ ತ್ರಿನೇತ್ರಾಯ ವಾಸವಾಯ ಚ ಪಾಂಡವಃ ॥೪॥

ತ್ರಿಕೂಬರಂ ಸಮುದ್ರಂ ಚ ತ್ರಿಭಿರ್ವಂಶೈಸ್ತ್ರಿವೇಣುಕಮ್ ।
ಪಾರ್ಥಿವಂ ರಥಮಾಸ್ಥಾಯ ಶೋಭಮಾನೋ ಧನಂಜಯಃ ॥೫॥

ಮಹಾತೇಜಸ್ವಿಯಾದ ಪಾಂಡವನು ವಿಧ್ಯುಕ್ತವಾಗಿ ಪರಮ ಶೌಚವನ್ನು ಆಶ್ರಯಿಸಿದವನಾಗಿ ರುದ್ರನಿಗೂ ಮತ್ತು ಇಂದ್ರನಿಗೂ ನಮಸ್ಕರಿಸಿ ಮೂರು ಕೂಬರರಿಂದಲೂ ರಥದ ಮುದ್ರೆಗಳಿಂದ (ರಥದ ಲಕ್ಷಣಗಳಿಂದಲೂ) ಕೂಡಿದ ಮೂರು ವಂಶಗಳಿಂದಲೂ ಮತ್ತು ಮೂರು ಧ್ವಜಗಳಿಂದಲೂ ಕೂಡಿದ ಪಾರ್ಥಿವವಾದ ರಥವನ್ನು ಏರಿ ಶೋಭಿಸಿದನು.

ದಿವ್ಯೇನ ಸಂವೃತಸ್ತೇನ ಕವಚೇನ ಸುವರ್ಚಸಾ ।
ಧನುರಾದಾಯ ಗಾಂಡೀವಂ ದೇವದತ್ತಂ ಸ ವಾರಿಜಮ್ ॥೬॥

ಶೋಶುಭ್ಯಮಾನಃ ಕೌಂತೇಯ ಆನುಪೂರ್ವ್ಯಾನ್ ಮಹಾಭುಜಃ ।
ಅಸ್ತ್ರಾಣಿ ತಾನಿ ದಿವ್ಯಾನಿ ದರ್ಶನಾಯೋಪಚಕ್ರಮೇ ॥೭॥

ಒಳ್ಳೆಯ ಕಾಂತಿಯುಕ್ತವಾದ ದಿವ್ಯವಾದ ಕವಚದಿಂದ ಆಚ್ಛಾದಿತನಾಗಿ ಗಾಂಡೀವ ಧನುಸ್ಸನ್ನು ಮತ್ತು ದೇವದತ್ತ ಶಂಖವನ್ನೂ ತೆಗೆದುಕೊಂಡು ಮಹಾಭುಜನಾದ ಕುಂತೀಪುತ್ರನಾದ ಅರ್ಜುನನು ಕ್ರಮವಾಗಿ ಆ ದಿವ್ಯಾಸ್ತ್ರಗಳನ್ನು ತೋರಿಸಲು ಪ್ರಾರಂಭಿಸಿದನು.

ಅಥ ಪ್ರಯೋಕ್ಷ್ಯಮಾಣೇಷು ದಿವ್ಯೇಷ್ವಸ್ತ್ರೇಷು ತೇಷು ವೈ ।
ಸಮಾಕ್ರಾಂತಾ ಮಹೀ ಪದ್ಭ್ಯಾಂ ಸಮಕಂಪತ ಸದ್ರುಮಾ ॥೮॥

ಆಗ ಆ ದಿವ್ಯಾಸ್ತ್ರಗಳು ಪ್ರಯೋಗಿಸಲ್ಪಡುತ್ತಿರಲು ಅವನು ಪಾದಗಳಿಂದ ಮೆಟ್ಟಿನಿಂತ ಭೂಮಿಯು ವೃಕ್ಷಗಳ ಸಹಿತವಾಗಿ ಕಂಪಿಸಿತು.

ಕ್ಷುಭಿತಾಃ ಸರಿತಶ್ಚೈವ ತಥೈವ ಚ ಮಹೋದಧಿಃ ।
ಶೈಲಾಶ್ಚಾಪಿ ವ್ಯದೀರ್ಯಂತ ನ ವವೌ ಚ ಸಮೀರಣಃ ॥೯॥

ನದಿಗಳು ಮತ್ತು ಸಮುದ್ರವು ಕ್ಷೋಭೆಗೊಂಡವು. ಪರ್ವತಗಳು ಬಿರಿದವು. ವಾಯುವು ಸ್ಥಬ್ಧವಾಯಿತು.

ನ ಬಭಾಸೇ ಸಹಸ್ರಾಂಶುರ್ನ ಜಜ್ವಾಲ ಚ ಪಾವಕಃ ।
ನ ವೇದಾಃ ಪ್ರತಿಭಾಂತಿ ಸ್ಮ ದ್ವಿಜಾತೀನಾಂ ಕಥಂಚನ ॥೧೦॥

ಸಹಸ್ರಕಿರಣನಾದ ಸೂರ್ಯನು ಕಾಂತಿಹೀನನಾದನು. ಅಗ್ನಿಯು ಜ್ವಲಿಸಲಿಲ್ಲ. ಬ್ರಾಹ್ಮಣರಿಗೆ ಯಾವ ರೀತಿಯಿಂದಲೂ ವೇದಗಳ ಪ್ರತಿಭಾನವೇ ಉಂಟಾಗಲಿಲ್ಲ (ವೇದಗಳು ಮರೆತುಹೋದವು).

ಅಂತರ್ಭೂಮಿಗತಾ ಯೇ ಚ ಪ್ರಾಣಿನೋ ಜನಮೇಜಯ ।
ಪೀಡ್ಯಮಾನಾಃ ಸಮುತ್ಥಾಯ ಪಾಂಡವಂ ಪರ್ಯವಾರಯನ್ ॥೧೧॥

ಎಲೈ ಜನಮೇಜಯನೇ, ಭೂಮಿಯ ಕೆಳಗಿದ್ದ ಪ್ರಾಣಿಗಳು ಪೀಡೆಗೆ ಒಳಗಾಗಿ ಮೇಲಕ್ಕೆದ್ದು ಪಾಂಡವನಾದ ಅರ್ಜುನನನ್ನು ಸುತ್ತುವರಿದವು.

ವೇಪಮಾನಾಃ ಪ್ರಾಂಜಲಯಸ್ತೇ ಸರ್ವೇ ವಿಕೃತಾನನಾಃ ।
ದಹ್ಯಮಾನಾಸ್ತದಾಸ್ತ್ರೈಸ್ತೇ ಯಾಚಂತಿ ಸ್ಮ ಧನಂಜಯಮ್ ॥೧೨॥

ವಿಕೃತ ಮುಖವುಳ್ಳ ಅವು ಅಸ್ತ್ರತೇಜಸ್ಸಿನಿಂದ ದಹಿಸಲ್ಪಟ್ಟವುಗಳಾಗಿ ನಡುಗುತ್ತಾ ಕೈಗಳನ್ನು ಮುಗಿದು ಅರ್ಜುನನನ್ನು ಬೇಡಿದವು.

ತತೋ ಬ್ರಹ್ಮರ್ಷಯಶ್ಚೈವ ಸಿದ್ಧಾ ಯೇ ಚ ಮಹರ್ಷಯಃ ।
ಜಂಗಮಾನಿ ಚ ಭೂತಾನಿ ಸರ್ವಾಣ್ಯೇವಾವತಸ್ಥಿರೇ ॥೧೩॥

ಅನಂತರ ಬ್ರಹ್ಮರ್ಷಿಗಳೂ, ಸಿದ್ಧರೂ, ಮಹರ್ಷಿಗಳೂ ಚಲಿಸುವ ಎಲ್ಲಾ ಪ್ರಾಣಿಗಳು ಅರ್ಜುನನ ಸುತ್ತಲೂ ಸೇರಿದರು.

ದೇವರ್ಷಯಶ್ಚ ಪ್ರವರಾಸ್ತಥೈವ ಚ ದಿವೌಕಸಃ ।
ಯಕ್ಷರಾಕ್ಷಸಗಂಧರ್ವಾಸ್ತಥೈವ ಚ ಪತತ್ರಿಣಃ ॥೧೪॥

ಖೇಚರಾಣಿ ಚ ಭೂತಾನಿ ಸರ್ವಾಣ್ಯೇವಾವತಸ್ಥಿರೇ ।

ಶ್ರೇಷ್ಠರಾದ ದೇವತೆಗಳೂ, ದೇವರ್ಷಿಗಳೂ, ಯಕ್ಷರಾಕ್ಷಸ ಗಂಧರ್ವರೂ ಅದರಂತೆಯೇ ಪಕ್ಷಿಗಳೂ ಮತ್ತು ಆಕಾಶದಲ್ಲಿ ಸಂಚರಿಸುವ ಎಲ್ಲಾ ಭೂತಗಳೂ ಅರ್ಜುನನ ಸುತ್ತಲೂ ನಿಂತವು.

ತತೋ ಪಿತಾಮಹಶ್ಚೈವ ಲೋಕಪಾಲಾಶ್ಚ ಸರ್ವಶಃ ।
ಭಗವಾಂಶ್ಚ ಮಹಾದೇವಃ ಸಗಣೋಽಭ್ಯಾಯಯೌ ತದಾ ॥೧೫॥

ಅನಂತರ ಪಿತಾಮಹನಾದ ಬ್ರಹ್ಮನೂ ಮತ್ತು ಎಲ್ಲಾ ಲೋಕಪಾಲಕರೂ ತನ್ನ ಪರಿವಾರದಿಂದೊಡಗೂಡಿದ ಪೂಜ್ಯನಾದ ಮಹಾದೇವನೂ ಅಲ್ಲಿಗೆ ಬಂದರು.

ತತೋ ವಾಯುರ್ಮಹಾರಾಜ ದಿವ್ಯೈರ್ಮಾಲ್ಯೈಃ ಸುಗಂಧಿಭಿಃ ।
ಅಭಿತಃ ಪಾಂಡವಂ ಚಿತ್ರೈರವಚಕ್ರೇ ಸಮಂತತಃ ॥೧೬॥

ಎಲೈ ಮಹಾರಾಜನೇ, ಆಗ ಸುಗಂಧಯುಕ್ತವಾದ ದಿವ್ಯ ಮತ್ತು ವಿಚಿತ್ರವಾದ ಪುಷ್ಪಮಾಲೆಗಳಿಂದ ಕೂಡಿದ ವಾಯುವು ಪಾಂಡವನಾದ ಅರ್ಜುನನ ಸುತ್ತಲೂ ಎಲ್ಲ ಕಡೆಯಲ್ಲಿಯೂ ಬೀಸಿತು.

ಜಗುಶ್ಚ ಗಾಥಾ ವಿವಿಧಾ ಗಂಧರ್ವಾಃ ಸುರಚೋದಿತಾಃ ।
ನನೃತುಃ ಸಂಘಶಶ್ಚೈವ ರಾಜನ್ನಪ್ಸರಸಾಂ ಗಣಾಃ ॥೧೭॥

ದೇವತೆಗಳಿಂದ ಪ್ರೇರಿತರಾಗಿ ಗಂಧರ್ವರು, ವಿಧವಿಧವಾದ ಗೀತೆಗಳನ್ನು ಹಾಡಿದರು. ಎಲೈ ರಾಜನೇ, ಅಪ್ಸರೆಯರ ಗಣಗಳು ಸಮೂಹದಿಂದ ನರ್ತನವನ್ನು ಮಾಡಿದವು.

ದೇವತೂರ್ಯಾಣ್ಯವಾದ್ಯಂತ ರಮ್ಯಾಣಿ ಮಧುರಾಣಿ ಚ ।
ತಸ್ಮಿಂಶ್ಚ ತಾದೃಶೇ ಕಾಲೇ ನಾರದಶ್ಚೋದಿತಃ ಸುರೈಃ ।
ಆಗಮ್ಯಾಹ ವಚಃ ಪಾರ್ಥಂ ಶ್ರವಣೀಯಮಿದಂ ನೃಪ ॥೧೮॥

ಎಲೈ ರಾಜನೇ, ದೇವವಾದ್ಯಗಳು ಮನೋಹರವಾಗಿ ಮತ್ತು ಮಧುರವಾಗಿ ಬಾರಿಸಿದವು. ಆ ಕಾಲದಲ್ಲಿ ದೇವತೆಗಳಿಂದ ಪ್ರೇರಿತರಾದ ನಾರದರು ಅಲ್ಲಿಗೆ ಬಂದು ಅರ್ಜುನನನ್ನು ಕುರಿತು ಹೇಳಬೇಕಾದ ಈ ಮಾತುಗಳನ್ನು ಹೇಳಿದರು.

ಅರ್ಜುನಾರ್ಜುನ ಮಾ ಯುಂಕ್ಷ್ವ ದಿವ್ಯಾನ್ಯಸ್ತ್ರಾಣಿ ಭಾರತ ।
ನೈತಾನಿ ನಿರಧಿಷ್ಠಾನೇ ಪ್ರಯುಜ್ಯಂತೇ ಕಥಂಚನ ।
ಪ್ರಯೋಗೇಷು ಮಹಾನ್ ದೋಷೋ ಹ್ಯಸ್ತ್ರಾಣಾಂ ಕುರುನಂದನ॥೧೯॥

ಏತಾನಿ ರಕ್ಷ್ಯಮಾಣಾನಿ ಧನಂಜಯ ಯಥಾಗಮಮ್ ।
ಬಲವಂತಿ ಸುಖಾಹಾರ್ಹಾಣಿ ಭವಿಷ್ಯಂತಿ ನ ಸಂಶಯಃ ॥೨೦॥

ಅರ್ಜುನ, ಅರ್ಜುನ, ಎಲೈ ಭಾರತನೇ, ದಿವ್ಯಾಸ್ತ್ರಗಳನ್ನು ಪ್ರಯೋಗಿಸಬೇಡ. ಈ ಅಸ್ತ್ರಗಳು ಒಂದು ಗುರಿಯಿಲ್ಲದೆ ಎಂದೂ ಪ್ರಯೋಗಿಸಲ್ಪಡುವುದಿಲ್ಲ. ಎಲೈ ಕುರುನಂದನನೇ, ಈ ಅಸ್ತ್ರಗಳನ್ನು ನಿರದಿಷ್ಠಾನದಲ್ಲಿ ಪ್ರಯೋಗಿಸಿದರೆ ಬಹಳ ದೋಷ ಉಂಟಾಗುತ್ತದೆ. ಧನಂಜಯನೇ, ಇವು ಬಂದ ರೀತಿಯಿಂದಲೇ ರಕ್ಷಿಸಲ್ಪಟ್ಟರೆ ನಿಸ್ಸಂಶಯವಾಗಿ ಬಲಿಷ್ಠವಾಗಿಯೂ ಮತ್ತು ಸುಖಕರವಾಗಿಯೂ ಆಗುವವು.

ಅರಕ್ಷ್ಯಮಾಣಾನ್ಯೇತಾನಿ ತ್ರೈಲೋಕ್ಯಸ್ಯಾಪಿ ಪಾಂಡವ ।
ಭವಂತಿ ಸ್ಮ ವಿನಾಶಾಯ ಮೈವಂ ಭೂಯಃ ಕೃಥಾಃ ಕ್ವಚಿತ್ ॥೨೧॥

ಎಲೈ ಪಾಂಡವನೇ, ಇವುಗಳ ರಕ್ಷಣೆಯನ್ನು ಮಾಡದಿದ್ದರೆ ಇವು ಮೂರು ಲೋಕಗಳ ವಿನಾಶಕ್ಕೂ ಕಾರಣವಾಗುತ್ತವೆ. ಹೀಗೆ ಇನ್ನೊಮ್ಮೆ ಮಾಡಬೇಡ.

ಅಜಾತಶತ್ರೋ ತ್ವಂ ಚೈವ ದ್ರಕ್ಷ್ಯಸೇ ತಾನಿ ಸಂಯುಗೇ ।
ಯೋಜ್ಯಮಾನಾನಿ ಪಾರ್ಥೇನ ದ್ವಿಷತಾಮವಮರ್ದನೇ ॥೨೨॥

ಎಲೈ ಅಜಾತಶತ್ರುವಾದ ಯುಧಿಷ್ಠಿರನೇ, ನೀನೂ ಸಹ ಯುದ್ಧದಲ್ಲಿ ಪಾರ್ಥನು ಶತ್ರುಗಳನ್ನು ಸೋಲಿಸಲು ಪ್ರಯೋಗಿಸುವಾಗ ಈ ಅಸ್ತ್ರಗಳನ್ನು ನೋಡುವಿ.

ವೈಶಂಪಾಯನಃ

ನಿವಾರ್ಯಾಥ ತತಃ ಪಾರ್ಥಂ ಸರ್ವೇ ದೇವಾ ಯಥಾಗತಮ್ ।
ಜಗ್ಮುರನ್ಯೇ ಚ ಯೇ ತತ್ರ ಸಮಾಜಗ್ಮುರ್ನರರ್ಷಭ ॥೨೩॥

ವೈಶಂಪಾಯನ– ಹಾಗೆಯೇ ಎಲ್ಲಾ ದೇವತೆಗಳು ಹೀಗೆ ಅರ್ಜುನನನ್ನು ನಿಷೇಧಿಸಿ ತಾವು ಬಂದಂತೆಯೇ ಹಿಂದಿರುಗಿದರು. ಎಲೈ ನರರ್ಷಭನೇ, ಅಲ್ಲಿಗೆ ಬಂದ ಬೇರೆಯವರೂ ಹಿಂದಿರುಗಿದರು.

ತೇಷು ಸರ್ವೇಷು ಕೌರವ್ಯ ಪ್ರತಿಯಾತೇಷು ಪಾಂಡವಾಃ ।
ತಸ್ಮಿನ್ನೇವ ವನೇ ಹೃಷ್ಟಾಸ್ತ ಊಷುಃ ಸಹ ಕೃಷ್ಣಯಾ ॥೨೪॥

ಎಲೈ ಕೌರವಕುಲದಲ್ಲಿ ಹುಟ್ಟಿದ ಜನಮೇಜಯನೇ, ಅವರೆಲ್ಲರೂ ಹೊರಟು ಹೋದಮೇಲೆ ಪಾಂಡವರೆಲ್ಲರೂ ಅದೇ ವನದಲ್ಲಿ ದ್ರೌಪದಿಯ ಜೊತೆಯಲ್ಲಿ ಹರ್ಷದಿಂದ ವಾಸಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತತ್ಯಧಿಕಶತತಮೋऽಧ್ಯಾಯಃ ॥

॥ ಇತಿ ನಿವಾತಕವಚಯುದ್ಧಪರ್ವಣಿ ಸಪ್ತದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ತನೆಯ ಅಧ್ಯಾಯ ಮುಗಿಯಿತು

★ ★ ★ ★

ಅಜಗರಪರ್ವ

ಮಹಾಭಾರತತತ್ಪರ್ಯನಿರ್ಣಯ ೨೨ ಅಧ್ಯಾಯ

ಊಷುಶ್ಚ ಚತುರೋಽಬ್ದಾಂಸ್ತೇ ಪುನರ್ಮೇರೌ ಪ್ರಮೋದಿನಃ ॥೩೧೭॥

ಬಳಿಕ ಪುನಃ ಮೇರುವಿನಲ್ಲಿ ನಾಲ್ಕು ವರ್ಷ ಆನಂದದಿಂದ ವಾಸ ಮಾಡಿದರು.

ಕಥಾಭಿರ್ವಾಸುದೇವಸ್ಯ ಧ್ಯಾನೇನಾಭ್ಯರ್ಚನೇನ ಚ ।
ಯಯೌ ಕಾಲಃ ಸುಖೇನೈವ ತೇಷಾಂ ವಿಷ್ಣುರತಾತ್ಮನಾಮ್ ॥೩೧೮॥

ಹರಿಯಲ್ಲಿಯೇ ನೆಟ್ಟ ಮನಸ್ಸುಳ್ಳ ಪಾಂಡವರಿಗೆ ಹರಿಕಥೆಗಳಿಂದಲೂ ಧ್ಯಾನ ಪೂಜೆಗಳಿಂದಲೂ ಸುಖವಾಗಿಯೇ ಕಾಲ ಕಳೆಯಿತು.

ನೈವ ಶತ್ರೂನನುತ್ಸಾದ್ಯ ನಾನಾದಾಯ ಮಹದ್ ಯಶಃ ।
ನಾಕೃತ್ವಾ ವಾಸುದೇವಾಜ್ಞಾಂ ರಾಜ್ಞಾಂ ಮುಖ್ಯಗತಿರ್ಭವೇತ್ ॥೩೧೯॥

ಶತ್ರುಗಳನ್ನು ನಾಶಮಾಡದೆ ಮಹಾ ಯಶಸ್ಸನ್ನು ಸಂಪಾದಿಸದೆ ಹರಿಯಾಜ್ಞೆಯನ್ನು ನಡೆಸದೆ ರಾಜರಿಗೆ ಮುಖ್ಯವಾದ ಸದ್ಗತಿ ದೊರೆಯಲಾರದು.

ತದನ್ಯೇಷಾಂ ತು ವರ್ಣಾನಾಂ ಕ್ಷಮಾ ಬಾಹ್ಯೇಷು ಶತ್ರುಷು ।
ಪ್ರಾಯೋ ಧರ್ಮ ಇತಿ ಪ್ರೋಕ್ತೋ ಹರೇರಾಜ್ಞಾಽಖಿಲಸ್ಯ ಚ ॥೩೨೦॥

ಬೇರೆ ವರ್ಣದವರಿಗೆ ಬಾಹ್ಯ ಶತ್ರುಗಳಲ್ಲಿ ಪ್ರಾಯಃ ಕ್ಷಮೆಯೇ ಧರ್ಮವೆಂದು ಉಕ್ತವಾಗಿದೆ. ನಾಲ್ಕು ವರ್ಷದವರಿಗೂ ನಾಲ್ಕು ಆಶ್ರಮದವರಿಗೂ ಶ್ರುತಿಸ್ಮೃತಿ ರೂಪವಾದ ಹರಿಯಾಜ್ಞೆಯನು ಅನುಸರಿಸುವುದೇ ಧರ್ಮವೆನಿಸುತ್ತದೆ.

ಇತಿ ಭೀಮವಚಃ ಶ್ರುತ್ವಾ ಸಸೋದರ್ಯೋ ಯುಧಿಷ್ಠಿರಃ ।
ರಾಕ್ಷಸಸ್ಕಂಧಮಾರೂಢಃ ಕೃಷ್ಣಯಾ ಚಾऽಽಯಯೌ ಪುನಃ ॥೩೨೧॥

ಹೀಗೆ ಭೀಮನ ಮಾತನ್ನು ಕೇಳಿ ಧರ್ಮರಾಜ ದ್ರೌಪದೀ ಸಮೇತನಾಗಿ ಸೋದರೊಂದಿಗಿನ ಘಟೋತ್ಕಚ ಮುಂತಾದ ರಾಕ್ಷಸರ ಹೆಗಲನ್ನೇರಿ ಪುನಃ ಹಿಮಾಲಯದ ಕಡೆಗೆ ಬಂದ.

★ ★ ★ ★ ★

ನೂರ ಎಪ್ಪತ್ತೊಂದನೆಯ ಅಧ್ಯಾಯ

ಯುಧಿಷ್ಠಿರಾದಿಗಳಿಂದ ಗಂಧಮಾದನದಿಂದ ಹಿಂದಿರುಗಲು ನಿಶ್ಚಯ. ಲೋಮಶರ ಸ್ವರ್ಗಗಮನ. ಗಂಧಮಾದನದಿಂದ ಕೈಲಾಸ ಪರ್ವತ, ವೃಷಪರ್ವಾಶ್ರಮ ಮಾರ್ಗವಾಗಿ ಪಾಂಡವರ ದ್ವೈತವನ ಪ್ರವೇಶ ಮತ್ತು ಸರಸ್ವತೀ ತೀರದಲ್ಲಿ ವಿಹಾರ.

ಜನಮೇಜಯಃ

ತಸ್ಮಿನ್ ಕೃತಾಸ್ತ್ರೇ ರಥಿನಾಂ ಪ್ರವೀರೇ
ಪ್ರತ್ಯಾಗತೇ ಭವನಾದ್ ವೃತ್ರಹಂತುಃ ।
ಅತಃ ಪರಂ ಕಿಮಕುರ್ವಂತ ಪಾರ್ಥಾಃ
ಸಮೇತ್ಯ ಶೂರೇಣ ಧನಂಜಯೇನ ॥೧॥

ಜನಮೇಜಯ– ರಥಿಶ್ರೇಷ್ಠನಾದ ಶೂರನಾದ ಧನಂಜಯನು ಇಂದ್ರನ ಭವನದಿಂದ ಅಸ್ತ್ರವನ್ನು ಸಂಪಾದಿಸಿ ಹಿಂದಿರುಗಿದ ಮೇಲೆ ಪಾಂಡವರೆಲ್ಲರೂ ಒಟ್ಟುಗೂಡಿ ಏನು ಮಾಡಿದರು?

ವನೇಷು ತೇಷ್ವೇವ ತು ತೇ ನರೇಂದ್ರಾಃ
ಸಹಾರ್ಜುನೇನೇಂದ್ರಸಮೇನ ವೀರಾಃ ।

ತಸ್ಮಿಂಶ್ಚ ಶೈಲಪ್ರವರೇ ಸುರಮ್ಯೇ
ಧನೇಶ್ವರಾಕ್ರೀಡಗತಾ ವಿಜುಹ್ರುಃ ॥೨॥

ವೈಶಂಪಾಯನ– ವೀರರಾದ ಆ ಪಾಂಡವರು ಇಂದ್ರನಿಗೆ ಸಮನಾದ ಅರ್ಜುನನಿಂದ ಕೂಡಿಕೊಂಡು ಅದೇ ವನಗಳಲ್ಲಿ ಅದೇ ಮನೋಹರವಾದ ಪರ್ವತಶ್ರೇಷ್ಠವಾದ ಗಂಧಮಾದನದಲ್ಲಿ ಕುಬೇರನ ವಿಹಾರಸ್ಥಾನದಲ್ಲಿ ವಿಹರಿಸಿದರು.

ವೇಶ್ಮಾನಿ ತಾನ್ಯಪ್ರತಿಮಾನಿ ಪಶ್ಯನ್
ಕ್ರೀಡಾಶ್ಚ ನಾನಾದ್ರುಮಸನ್ನಿಬದ್ಧಾಃ ।
ಚಚಾರ ಧನ್ವೀ ಬಹುಧಾ ನರೇಂದ್ರಃ
ಸೋಽಸ್ತ್ರೇಷು ಯತ್ತಃ ಸತತಂ ಕಿರೀಟೀ ॥೩॥

ನರೇಂದ್ರನಾದ ಅರ್ಜುನನು ಆ ಅಸದೃಶವಾದ ಗೃಹಗಳನ್ನು ನೋಡುತ್ತಾ ನಾನಾ ವೃಕ್ಷಗಳಲ್ಲಿ ಉಂಟಾಗುವ ಕ್ರೀಡೆಗಳನ್ನು ನೋಡುತ್ತಾ ಧನುಸ್ಸನ್ನು ಹಿಡಿದು ಅನೇಕ ರೀತಿಯಲ್ಲಿ ಸಂಚರಿಸಿದನು. ಕಿರೀಟಯಾದ ಅವನು ಯಾವಾಗಲೂ ಅಸ್ತ್ರಗಳಲ್ಲಿಯೇ ನಿರತನಾಗಿದ್ದನು.

ಅವಾಪ್ಯ ವಾಸಂ ನರದೇವಪುತ್ರಾಃ
ಪ್ರಸಾದಜಂ ವೈಶ್ರವಣಸ್ಯ ರಾಜ್ಞಃ ।
ನ ಪ್ರಾಣಿನಾಂ ತೇ ಸ್ಪೃಹಯಂತಿ ರಾಜನ್
ಶಿವಶ್ಚ ಕಾಲಃ ಸ ಬಭೂವ ತೇಷಾಮ್ ॥೪॥

ಎಲೈ ರಾಜನೇ, ಆ ನರದೇವಪುತ್ರರು ರಾಜನಾದ ಕುಬೇರನ ಅನುಗ್ರಹದಿಂದ ದೊರೆತ ಅವನ ಮನೆಯ ವಾಸವನ್ನು ಹೊಂದಿ ಬೇರೆ ಯಾವ ಪ್ರಾಣಿಯನ್ನೂ ಬಯಸಲಿಲ್ಲ. ಅವರಿಗೆ ಆ ಕಾಲವು ಶುಭವಾಗಿ ಕಳೆಯಿತು.

ಸಮೇತ್ಯ ಪಾರ್ಥೇನ ಯಥೈಕರಾತ್ರ–
ಮೂಷುಃ ಸಮಾಸ್ತತ್ರ ತದಾ ಚತಸ್ರಃ ।
ಪೂರ್ವಾಶ್ಚ ಷಟ್ ತಾ ದಶ ಪಾಂಡವಾನಾಂ
ಶಿವಾ ಬಭೂವುರ್ವಸತಾಂ ವನೇಷು ॥೫॥

ಅವರು ಅರ್ಜುನನ ಜೊತೆಯಲ್ಲಿ ಬೆರೆತು ಅಲ್ಲಿ ನಾಲ್ಕುವರ್ಷಗಳನ್ನು ಒಂದು ದಿನದಂತೆ ಕಳೆದರು. ಅದಕ್ಕೆ ಮೊದಲು ಆರುವರ್ಷಗಳನ್ನು ಕಳೆದಿದ್ದರು. ವನವಾಸವನ್ನು ಮಾಡುವ ಪಾಂಡವರಿಗೆ ಈ ಹತ್ತುವರ್ಷಗಳು ಶುಭವಾಗಿದ್ದವು.

ತತೋಽಬ್ರವೀದ್ ವಾಯುಸುತಸ್ತರಸ್ವೀ
ಜಿಷ್ಣುಶ್ಚ ರಾಜಾನಮುಪೋಪವಿಶ್ಯ ।
ಯಮೌ ಚ ವೀರೌ ಸುರರಾಜಕಲ್ಪಾ-
ವೇಕಾಂತಮಾಸ್ಥಾಯ ಹಿತಂ ಪ್ರಿಯಂ ಚ ॥೬॥

ಆಗ ಶೀಘ್ರಗಾಮಿಯಾದ ವಾಯುಕುಮಾರನಾದ ಭೀಮಸೇನನೂ ಅರ್ಜುನನೂ ದೇವೇಂದ್ರ ಸಮಾನರಾದ ವೀರರಾದ ನಕುಲಸಹದೇವರೂ ಒಂದು ಏಕಾಂತ ಸ್ಥಳದಲ್ಲಿ ಸೇರಿ ರಾಜನ ಸಮೀಪದಲ್ಲಿ ಕುಳಿತುಕೊಂಡು ಹಿತವನ್ನು ಮತ್ತು ಪ್ರಿಯವನ್ನು ಮಾತನಾಡಿದರು.

ತವ ಪ್ರತಿಜ್ಞಾಂ ಕುರುರಾಜ ಸತ್ಯಾಂ
ಚಿಕೀರ್ಷಮಾಣಾಸ್ತದನು ಪ್ರಿಯಂ ಚ ।
ತತೋ ನ ಗಚ್ಛಾಮ ವನಾನ್ಯಪಾಸ್ಯ
ಸುಯೋಧನಂ ಸಾನುಚರಂ ನಿಹಂತುಮ್ ॥೭॥

ಎಲೈ ಕುರುರಾಜನೇ, ನಿನ್ನ ಪ್ರತಿಜ್ಞೆಯನ್ನು ಸತ್ಯವನ್ನು ಮಾಡಿ ಅದರಿಂದ ನಿನಗೆ ಪ್ರಿಯವನ್ನುಂಟು ಮಾಡುವುದಕ್ಕೋಸ್ಕರ ನಾವು ಈಗ ಪರಿವಾರ ಸಹಿತನಾದ ಸುಯೋಧನವನ್ನು ಕೊಲ್ಲಲು ವನವನ್ನು ತ್ಯಜಿಸಿ ಹೋಗಲಾರೆವು.

ಏಕಾದಶಂ ವರ್ಷಮಿದಂ ವಸಾಮಃ
ಸುಯೋಧನೇನಾತ್ತಸುಖಾಃ ಸುಖಾರ್ಹಾಃ ।
ತಂ ವಂಚಯಿತ್ವಾಽಧಮವೃದ್ಧಿಶೀಲ-
ಮಜ್ಞಾತವಾಸಂ ಸುಖಮಾಪ್ನುಯಾಮ ॥೮॥

ಸುಖಕ್ಕೆ ಅರ್ಹರಾದ ನಾವು ನಮ್ಮ ಎಲ್ಲಾ ಸುಖವನ್ನೂ ಸುಯೋಧನನು ಕಸಿದುಕೊಂಡಿರುವಾಗ ಈ ಹನ್ನೊಂದನೆಯ ವರ್ಷವನ್ನು ಕಳೆಯುತ್ತಿದ್ದೇವೆ.

ಅಜ್ಞಾತವಾಸದಲ್ಲಿ ಆ ಅಧರ್ಮಬುದ್ಧಿಯುಳ್ಳ ಮತ್ತು ಅಧಮಶೀಲವುಳ್ಳ ಸುಯೋಧನನ್ನು (ನಮ್ಮನ್ನು ಗುರುತಿಸದಂತೆ) ವಂಚಿಸಿ ಸುಖವನ್ನು ಪಡೆದೇವು.

ತವಾಜ್ಞಯಾ ಪಾರ್ಥಿವ ನಿರ್ವಿಶಂಕಾ
ವಿಹಾಯ ಮಾನಂ ವಿಚರಾಮೋ ವನಾನಿ ।
ಸಮೀಪವಾಸೇನ ವಿಲೋಭಿತಾಸ್ತೇ
ಜ್ಞಾಸ್ಯಂತಿ ನಾಸ್ಮಾನಪಕೃಷ್ಟದೇಶಾನ್ ॥೯॥

ಎಲೈ ರಾಜನೇ, ನಿನ್ನ ಆಜ್ಞೆಯಿಂದ ನಾವು ಮಾನವನ್ನು ಬಿಟ್ಟು ಯಾವ ಶಂಕೆಯೂ ಇಲ್ಲದೆ ಕಾಡುಗಳಲ್ಲಿ ಸಂಚರಿಸುತ್ತಿದ್ದೇವೆ. ಅಜ್ಞಾತವಾಸಕ್ಕಾಗಿ ದೂರಹೋಗಿರುವರೆಂದು ಭಾವಿಸುವ ದುರ್ಯೋಧನನನ್ನು ನಾವು ಸಮೀಪವಾಸದಿಂದ ವಂಚಿಸೋಣ. ಅವರು ನಮ್ಮನ್ನು ತಿಳಿಯುವುದಿಲ್ಲ.

ಸಂವತ್ಸರಂ ತತ್ರ ವಿಹೃತ್ಯ ಗೂಢಂ
ನರಾಧಮಂ ತಂ ಸುಖಮುದ್ಧರೇಮ।
ನಿರ್ಯಾತ್ಯ ವೈರಂ ಸಫಲಂ ಸಪುಷ್ಪಂ
ತಸ್ಮೈ ನರೇಂದ್ರಾಧಮಪೂರುಷಾಯ ॥೧೦॥

ಒಂದುವರ್ಷದ ಕಾಲ ಅಲ್ಲಿ ಗೂಢವಾಗಿ ವಿಹರಿಸಿ ಆ ನರಾಧಮನಿಗೆ ಅವನ ವೈರವನ್ನು ಪುಷ್ಪಫಲಗಳ ಜೊತೆಯಲ್ಲಿ ಹಿಂದಿರುಗಿಸಿ ಅವನನ್ನು ಅನಾಯಾಸವಾಗಿ ವಿನಾಶಗೊಳಿಸೋಣ.

ಸುಯೋಧನಾಯಾನುಚರೈರ್ವೃತಾಯ
ತತೋ ಮಹೀಮಾವಸ ಧರ್ಮರಾಜ ।
ಸ್ವರ್ಗೋಪಮಂ ದೇಶಮಿಮಂ ಚರದ್ಭಿಃ
ಶಕ್ಯೋ ವಿಂಹತುಂ ನರದೇವ ಶೋಕಃ ॥೧೧॥

ಧರ್ಮರಾಜನೇ, ಅನುಚರರಿಂದ ಕೂಡಿದ ಸುಯೋಧನನಿಗೆ ಪ್ರತೀಕಾರವನ್ನು ಮಾಡಿ ನೀನು ಭೂಮಿಯನ್ನು ಆಳು. ಎಲೈ ನರದೇವನೇ, ಸ್ವರ್ಗಸದೃಶವಾದ ಈ ದೇಶದಲ್ಲಿ ಸಂಚರಿಸುವ ನಾವು ನಮ್ಮ ಶೋಕವನ್ನು ಪರಿಹರಿಸಿಕೊಳ್ಳಲು ಸಾಧ್ಯವಾಗುತ್ತದೆ.

ಕೀರ್ತಿಸ್ತು ತೇ ಭಾರತ ಪುಣ್ಯಗಂಧಾ
ನಶ್ಯೇದ್ಧಿ ಲೋಕೇಷು ಚರಾಚರೇಷು ।
ತತ್ಪ್ರಾಪ್ಯ ರಾಜ್ಯಂ ಕುರುಪುಂಗವಾನಾಂ
ಶಕ್ಯಂ ಮಹತ್ ಪ್ರಾಪ್ತುಮಥ ಕ್ರಿಯಾಶ್ಚ ॥೧೨॥

ಎಲೈ ಭಾರತನೇ, ಇಲ್ಲದಿದ್ದರೆ ಚರಾಚರಲೋಕಗಳಲ್ಲಿ ಸಂಚರಿಸುವ ನಿನ್ನ ಪುಣ್ಯಪರಿಮಳವುಳ್ಳ ಕೀರ್ತಿಯು ನಾಶವನ್ನು ಹೊಂದೀತು. ಕುರುಪುಂಗವರ ಆ ರಾಜ್ಯವನ್ನು ಮರಳಿ ಪಡೆದು ನಾವು ದೊಡ್ಡದನ್ನು ಸಾಧಿಸಲು ಮತ್ತು ದೊಡ್ಡ ಕ್ರಿಯೆಗಳನ್ನು ಮಾಡಲು ಸಮರ್ಥರಾಗುತ್ತೇವೆ.

ಇದಂ ತು ಶಕ್ಯಂ ಸತತಂ ನರೇಂದ್ರ
ಪ್ರಾಪ್ತುಂ ತ್ವಯಾ ಯಲ್ಲಭಸೇ ಕುಬೇರಾತ್ ।
ಕುರುಷ್ವ ಬುದ್ಧಿ ದ್ವಿಷತಾಂ ವಧಾಯ
ಕೃತಾಗಸಾಂ ಭಾರತ ನಿಗ್ರಹೇ ಚ ॥೧೩॥

ಎಲೈ ನರೇಂದ್ರನೇ, ಕುಬೇರನಿಂದ ನೀನು ಯಾವ ಅನುಗ್ರಹವನ್ನು ಪಡೆದಿದ್ದೀಯೋ ಅದನ್ನು ಯಾವಾಗಲೂ ಪಡೆಯಲು ಸಾಧ್ಯ. ಎಲೈ ಭಾರತನೇ, ನಮಗೆ ಅಪರಾಧವೆಸಗಿದ ಶತ್ರುಗಳನ್ನು ನಿಗ್ರಹಿಸಿ ಅವರ ವಧೆಯನ್ನು ಮಾಡಲು ನೀನು ನಿರ್ಧರಿಸು.

ತೇಜಸ್ತವೋಗ್ರಂ ನ ಸಹೇತ ರಾಜನ್
ಸಮೇತ್ಯ ಸಾಕ್ಷಾದಪಿ ವಜ್ರಪಾಣಿಃ ।
ನ ಹಿ ವ್ಯಥಾಂ ಜಾತು ಕರಿಷ್ಯತಸ್ತೇ
ಸಮೇತ್ಯ ದೇವೈರಪಿ ಧರ್ಮರಾಜ ॥೧೪॥

ಎಲೈ ರಾಜನೇ, ನಿನ್ನನ್ನು ಸಾಕ್ಷಾತ್ತಾಗಿ ಎದುರಿಸಿದರೆ ವಜ್ರಪಾಣಿಯಾದ ಇಂದ್ರನೂ ಸಹ ನಿನ್ನ ಉಗ್ರವಾದ ತೇಜಸ್ಸನ್ನು ಸಹಿಸಲಾರ. ಎಲೈ ಧರ್ಮರಾಜನೇ, ದೇವತೆಗಳಿಂದಲೂ ದುರ್ಜಯರಾದ ಅವರಿಬ್ಬರು ಎಂದೂ ವ್ಯಥೆಯನ್ನು ಮಾಡುವುದಿಲ್ಲ.

ತವಾರ್ಥಸಿದ್ಧ್ಯರ್ಥಮಪಿ ಪ್ರವೃತ್ತೌ
ಸುಪರ್ಣಕೇತುಶ್ಚ ಶನೇಶ್ಚ ನಪ್ತಾ ।
ತಥೈವ ಕೃಷ್ಣೋಽಪ್ರತಿಮೋ ಬಲೇನ
ತಥೈವ ಚಾಹಂ ನರದೇವವರ್ಯ ॥೧೫॥

ಸುಪರ್ಣಕೇತುವಾದ ಕೃಷ್ಣನೂ ಮತ್ತು . ಶಿನಿಯ ಮೊಮ್ಮಗನಾದ ಸಾತ್ಯಕಿಯೂ ಸಹ ನಿನ್ನ ಹಿತಪ್ರಾಪ್ತಿಯ ಸಲುವಾಗಿ ಪ್ರವೃತ್ತರಾಗುವರು. ಅದರಂತೆ ಕೃಷ್ಣನೂ (=ಅರ್ಜುನನೂ) ಬಲದಲ್ಲಿ ಅಪ್ರತಿಮನಾಗಿದ್ದಾನೆ. ನರದೇವಶ್ರೇಷ್ಠನೇ, ನಾನೂ (=ಭೀಮಸೇನನೂ) ಸಹ ಬಲದಲ್ಲಿ ಅಪ್ರತಿಮನಾಗಿದ್ದೇನೆ.

ತಥೈವ ಚೇಮೌ ನರದೇವವರ್ಯ
ಯಮೌ ಚ ವೀರೌ ಕೃತಿನೌ ಪ್ರಯೋಗೇ ।
ತ್ವದರ್ಥಯೋಗಪ್ರಭವಪ್ರಧಾನಾಃ
ಶಮಂ ಕರಿಷ್ಯಾಮ ಪರಾನ್ ಸಮೇತ್ಯ ॥೧೬॥

ಎಲೈ ನರದೇವವರ್ಯನೇ, ಹಾಗೆಯೇ ವೀರರಾದ ನಕುಲಸಹದೇವರೂ ಶಸ್ತ್ರಾಸ್ತ್ರ ಪ್ರಯೋಗದಲ್ಲಿ ನಿಪುಣರಾಗಿದ್ದಾರೆ. ನಿನ್ನ ಅರ್ಥಪ್ರಾಪ್ತಿ ಮತ್ತು ಐಶ್ವರ್ಯ ವೃದ್ಧಿಗಳನ್ನೇ ಪ್ರಧಾನವಾದ ಉದ್ದೇಶವಾಗಿ ಹೊಂದಿದ ನಾವು ಶತ್ರುಗಳನ್ನು ಎದುರಿಸಿ ಅವರನ್ನು ನಾಶಮಾಡೋಣ.

ವೈಶಂಪಾಯನಃ

ತತಸ್ತದಾಜ್ಞಾಯ ಮತಂ ಮಹಾತ್ಮಾ
ತೇಷಾಂ ಚ ಧರ್ಮಸ್ಯ ಸುತೋ ವರಿಷ್ಠಃ ।
ಪ್ರದಕ್ಷಿಣಂ ವೈಶ್ರವಣಾಧಿವಾಸಂ ಚಕಾರ
ಧರ್ಮಾರ್ಥವಿದುತ್ತಮೌಜಾಃ ॥೧೭॥

ವೈಶಂಪಾಯನ– ಆಗ ಮಹಾತ್ಮನಾದ ಶ್ರೇಷ್ಠನಾದ ಯಮಧರ್ಮಪುತ್ರನಾದ ಧರ್ಮಾರ್ಥವನ್ನು ತಿಳಿದ, ಉತ್ತಮಪರಾಕ್ರಮವುಳ್ಳ ಯುಧಿಷ್ಠಿರನು ಅವರ ಮಾತುಗಳನ್ನು ಕೇಳಿ ಕುಬೇರನ ನಿವಾಸಕ್ಕೆ ಪ್ರದಕ್ಷಿಣೆಯನ್ನು ಮಾಡಿದನು.

ಆಮಂತ್ರ್ಯ ವೇಶ್ಮಾನಿ ನದೀಃ ಸರಾಂಸಿ
ಸರ್ವಾಣಿ ರಕ್ಷಾಂಸಿ ಚ ಧರ್ಮರಾಜಃ ।
ಯಥಾಗತಂ ಮಾರ್ಗಮವೇಕ್ಷಮಾಣಃ
ಪುನರ್ಗಿರಿಂ ಚೈವ ನಿರೀಕ್ಷಮಾಣಃ ॥೧೮॥

ಸಮಾಪ್ತಕರ್ಮಾ ಸಹಿತಃ ಸುಹೃದ್ಭಿ-
ಜಿತ್ವಾಸಪತ್ನಾನ್ ಪ್ರತಿಲಭ್ಯ ರಾಜ್ಯಮ್ ।
ಶೈಲೇಂದ್ರ ಭೂಯಸ್ತಪಸೇ ಜಿತಾತ್ಮಾ
ದ್ರಷ್ಟಾ ತವಾಸ್ಮೀತಿ ಮತಿಂ ಚಕಾರ ॥೧೯॥

ಧರ್ಮರಾಜನು ಆ ಗೃಹಗಳಿಗೂ, ನದಿಗಳಿಗೂ, ಸರೋವರಗಳಿಗೂ, ಎಲ್ಲಾ ರಾಕ್ಷಸರಿಗೂ ಹಿಂದಿರುಗಲು ಅನುಮತಿಯನ್ನು ಕೇಳಿ ಪುನಃ ಬಂದ ಮಾರ್ಗವನ್ನು ನೋಡುತ್ತಾ ಪುನಃ ಪುನಃ ಪರ್ವತವನ್ನು ನೋಡುತ್ತಾ, ಎಲೈ ಪರ್ವತರಾಜನೇ, ನಾನು ಶತ್ರುಗಳನ್ನು ಯುದ್ಧದಲ್ಲಿ ಗೆದ್ದು ರಾಜ್ಯವನ್ನು ಪಡೆದು ಎಲ್ಲ ಕಾರ್ಯಗಳನ್ನು ಮುಗಿಸಿ ಜಿತೇಂದ್ರಿಯನಾಗಿ ತಪಸ್ಸಿಗೋಸ್ಕರ ಬಂದು ನಿನ್ನನ್ನು ನೋಡುತ್ತೇನೆ ಎಂದು ಮನಸ್ಸಿನಲ್ಲಿಯೇ ನಿರ್ಧರಿಸಿದನು (ಪರ್ವತವನ್ನು ಕುರಿತು ಹೇಳಿದನು).

ವೃತಶ್ಚ ಸರ್ವೈರನುಜೈರ್ದ್ವಿಜೈಶ್ಚ ತೇನೈವ
ಮಾರ್ಗೇಣ ಪತಿಃ ಕುರೂಣಾಮ್ ।
ಉವಾಹ ಚೈತಾನ್ ಗಣಶಸ್ತಥೈವ
ಘಟೋತ್ಕಚಃ ಪರ್ವತನಿರ್ಝರೇಷು ॥೨೦॥

ತಮ್ಮಂದಿರಿಂದಲೂ ಮತ್ತು ಬ್ರಾಹ್ಮಣರಿಂದಲೂ ಕೂಡಿದವನಾಗಿ ಆ ಕುರುಪತಿಯು ತಾನು ಹೋದ ಮಾರ್ಗದಿಂದಲೇ ಹಿಂದಿರುಗಿದನು. ಘಟೋತ್ಕಚ ಮತ್ತು ಅವನ ಗಣಗಳು ಪರ್ವತಗಳಲ್ಲಿ ಮತ್ತು ಝರಿಗಳಲ್ಲಿ ಪಾಂಡವರನ್ನು ಎತ್ತಿಕೊಂಡು ಹೋದರು.

ತಾನ್‌ಪ್ರಸ್ಥಿತಾನ್ ಪ್ರೀತಿಮನಾ ಮಹರ್ಷಿಃ
ಪಿತೇವ ಪುತ್ರಾನನುಶಿಷ್ಯ ಸರ್ವಾನ್ ।
ಸ ಲೋಮಶಃ ಪ್ರೀತಮನಾ ಜಗಾಮ
ದಿವೌಕಸಾಂ ಪುಣ್ಯತಮಂ ನಿವಾಸಮ್ ॥೨೧॥

ಅಲ್ಲಿಂದ ಹೊರಟ ಆ ಎಲ್ಲಾ ಪಾಂಡವರನ್ನು ಮಹರ್ಷಿಗಳಾದ ಲೋಮಶರು ತಂದೆಯು ಮಕ್ಕಳಿಗೆ ಅನುಶಾಸನ ಮಾಡುವಂತೆ ಪ್ರೀತಿಯಿಂದ ಅನುಶಾಸನ ಮಾಡಿ ದೇವತೆಗಳ ಪವಿತ್ರವಾದ ನಿವಾಸಕ್ಕೆ ಹೊರಟುಹೋದರು.

ತೇನಾರ್ಷ್ಟಿಷೇಣೇನ ತಥಾನುಶಿಷ್ಟಾ-
ತೀರ್ಥಾನಿರಮ್ಯಾಣಿ ತಪೋವನಾನಿ ।
ಮಹಾಂತಿ ಚಾನ್ಯಾನಿ ಸರಾಂಸಿ ಪಾರ್ಥಾಃ
ಸಂಪಶ್ಯಮಾನಾಃ ಪ್ರಯಯುರ್ನರಾಗ್ರ್ಯಾಃ ॥೨೨॥

ಲೋಮಶರಿಂದಲೂ ಮತ್ತು ಆರ್ಷ್ಟಿಷೇಣರಿಂದಲೂ ಹಾಗೆ ಅನುಶಾಸನವನ್ನು ಪಡೆದ ನರಶ್ರೇಷ್ಠರಾದ ಪಾರ್ಥರು ಮನೋಹರವಾದ ತಪೋವನಗಳನ್ನೂ, ದೊಡ್ಡ ಸರೋವರಗಳನ್ನೂ ನೋಡುತ್ತಾ ಮುಂದೆ ಸಾಗಿದರು.

ನಗೋತ್ತಮಂ ಪ್ರಸ್ರವಣೈರುಪೇತಂ
ದಿಶಾಂ ಗಜೈಃ ಕಿನ್ನರಪಕ್ಷಿಭಿಶ್ಚ ।
ಸುಖಂ ನಿವಾಸಂ ಜಹತಾಂ ಹಿ ತೇಷಾಂ
ನ ಪ್ರೀತಿರಾಸೀದ್ ಭರತರ್ಷಭಾಣಾಮ್ ॥೨೩॥

ಅನೇಕ ಝರಿಗಳಿಂದಲೂ ಮತ್ತು ದಿಗ್ಗಜಗಳಿಂದಲೂ ಕೂಡಿದ, ಕಿನ್ನರರು ಮತ್ತು ಪಕ್ಷಿಗಳಿಗೆ ಸುಖವಾದ ವಾಸಸ್ಥಾನವಾದ, ಆ ಪರ್ವತಶ್ರೇಷ್ಠವನ್ನು ತ್ಯಜಿಸುವ ಆ ಭರತರ್ಷಭರಿಗೆ ಸಂತೋಷವಾಗಲಿಲ್ಲ.

ತತಸ್ತು ತೇಷಾಂ ಪುನರೇವ ಹರ್ಷಃ
ಕೈಲಾಸಮಾಲೋಕ್ಯ ಮಹಾನ್ ಬಭೂವ ।
ಕುಬೇರಕಾಂತಂ ಭರತರ್ಷಭಾಣಾಂ
ಮಹೀಧರಂ ವಾರಿಧರಪ್ರಕಾಶಮ್ ॥೨೪॥

ಅನಂತರ ಹಿಂದಿರುಗುವ ಆ ಭರತರ್ಷಭರಿಗೆ ಕುಬೇರನಿಗೆ ಪ್ರಿಯವಾದ ಮೋಡಗಳ ಕಾಂತಿಯನ್ನು ಹೊಂದಿದ್ದ ಕೈಲಾಸ ಪರ್ವತವನ್ನು ನೋಡಿ ಬಹಳ ಸಂತೋಷವುಂಟಾಯಿತು.

ಸಮುಚ್ಛ್ರಯಾನ್‌ಪರ್ವತಸನ್ನಿರೋಧಾನ್
ಗೋಷ್ಠಾನ್ ಹರೀಣಾಂ ಗಿರಿಸೇತುಮಾಲಾಃ ।
ಬಹೂನ್ ಪ್ರಪಾತಾಂಶ್ಚ ಸಮೀಕ್ಷ್ಯ ವೀರಾಃ
ಸ್ಥಲಾನಿ ನಿಮ್ನಾನಿ ಚ ತತ್ರ ತತ್ರ ॥೨೫॥

ತಥೈವ ಚಾನ್ಯಾನಿ ಮಹಾವನಾನಿ
ಮೃಗದ್ವಿಜಾನೇಕಪಸೇವಿತಾನಿ ।
ಆಲೋಕಯಾಂತೋಽಭಿಯಯುಃ
ಪ್ರತೀತಾಸ್ತೇ ಧನ್ವಿನಃ ಖಡ್ಗಧರಾ ನರಾಗ್ರ್ಯಾಃ ॥೨೬॥

ಖಡ್ಗಧಾರಿಗಳೂ ಮತ್ತು ಧನುರ್ಧಾರಿಗಳೂ ಆದ ಆ ಪುರುಷಶ್ರೇಷ್ಠರು ಅನೇಕ ಉನ್ನತವಾದ ಪರ್ವತಗಳನ್ನೂ, ಸಿಂಹಗಳ ಗುಹೆಗಳನ್ನೂ, ದಿವ್ಯಸೇತುಮಾಲೆಗಳನ್ನೂ, ಅನೇಕ ಜಲಪಾತಗಳನ್ನೂ, ಅನೇಕ ತಗ್ಗುಪ್ರದೇಶಗಳನ್ನೂ ಮೃಗಪಕ್ಷಿಗಳಿಂದ ಸೇವಿತವಾದ ಅನೇಕ ಮಹಾಮರಗಳನ್ನೂ ನೋಡುತ್ತಾ ಸಂತೋಷಗೊಂಡು ಮುಂದೆ ಸಾಗಿದರು.

ವನಾನಿ ರಮ್ಯಾಣಿ ನದೀಃ ಸರಾಂಸಿ
ಗುಹಾ ಗಿರೀಣಾಂ ಗಿರಿಗಹ್ವರಾಣಿ ।
ಏತೇ ನಿವಾಸಾಃ ಸತತಂ ಬಭೂವು–
ರ್ದಿವಾನಿಶಂ ಪ್ರಾಪ್ಯ ನರರ್ಷಭಾಣಾಮ್ ॥೨೭॥

ರಮ್ಯವಾದ ವನಗಳು, ನದಿಗಳು, ಸರೋವರಗಳು, ಪರ್ವತದ ಗುಹೆಗಳು, ಪರ್ವತದ ತಪ್ಪಲು ಪ್ರದೇಶಗಳು ಇವುಗಳು ಆ ನರರ್ಷಭರಿಗೆ ಹಗಲು ಮತ್ತು ರಾತ್ರಿಯ ಕಾಲದಲ್ಲಿ ಸತತವಾಗಿ ನಿವಾಸಸ್ಥಾನವಾಗಿದ್ದವು.

ತೇ ದುರ್ಗವಾಸಂ ಬಹುಧಾ ನಿರುಷ್ಯ
ವ್ಯತೀತ್ಯ ಕೈಲಾಸಮಚಿಂತ್ಯರೂಪಮ್ ।
ಆಸೇದುರತ್ಯರ್ಥಮನೋರಮಂ ತೇ
ತಮಾಶ್ರಮಾಗ್ರ್ಯಂ ವೃಷಪರ್ವಣಸ್ತು ॥೨೮॥

ಅವರು ಅನೇಕ ಪ್ರಕಾರಗಳಿಂದ ದುರ್ಗವಾಸವನ್ನು ಕಳೆದು ಅಚಿಂತ್ಯರೂಪವುಳ್ಳ ಕೈಲಾಸಪರ್ವತವನ್ನು ದಾಟಿ ಅತ್ಯಂತ ಮನೋಹರವಾದ ವೃಷಪರ್ವನ ಶ್ರೇಷ್ಠವಾದ ಆಶ್ರಮವನ್ನು ತಲುಪಿದರು.

ಸಮೇತ್ಯ ರಾಜ್ಞಾ ವೃಷಪರ್ವಣಾ ತೇ
ಪ್ರತ್ಯರ್ಚಿತಾಸ್ತೇನ ಚ ವೀತಮೋಹಾಃ ।
ಶಶಂಸಿರೇ ವಿಸ್ತರಶಃ ಪ್ರವಾಸಂ ಗಿರೌ
ಯಥಾವದ್ ವೃಷಪರ್ವಣಸ್ತೇ ॥೨೯॥

ವೀತಮೋಹರಾದ ಅವರು ವೃಷಪರ್ವರಾಜನ ಜೊತೆಯಲ್ಲಿ ಸಮಾಗಮವನ್ನು ಹೊಂದಿ ಅವನಿಂದ ಪೂಜಿತರಾಗಿ ಆ ವೃಷಪರ್ವನಿಗೆ ತಮ್ಮ ಪರ್ವತ ಪ್ರವಾಸದ ಕಥೆಯನ್ನು ಯಥಾರ್ಥವಾಗಿ ಮತ್ತು ವಿಸ್ತಾರವಾಗಿ ಹೇಳಿದರು.

ಸುಖೋಷಿತಾಸ್ತಸ್ಯ ತ ಏಕರಾತ್ರಂ
ಪುಣ್ಯಾಶ್ರಮೇ ದೇವಮಹರ್ಷಿಜುಷ್ಟೇ ।
ಅಭ್ಯಾಯಯುಸ್ತೇ ಬದರೀಂ ವಿಶಾಲಾಂ
ಸುಖೇನ ವೀರಾಃ ಪುನರೇವ ವಾಸಮ್ ॥೩೦॥

ದೇವರ್ಷಿಗಳಿಂದ ಮತ್ತು ಮಹರ್ಷಿಗಳಿಂದ ಸೇವಿತವಾದ ಅವನ ಆ ಪವಿತ್ರವಾದ ಆಶ್ರಮದಲ್ಲಿ ಆ ವೀರರು ಒಂದುರಾತ್ರಿಯನ್ನು ಸುಖವಾಗಿ ಕಳೆದು ಪುನಃ ವಿಶಾಲಾ ಬದರಿಗೆ ವಾಸಕ್ಕಾಗಿ ಬಂದರು.

ಊಷುಸ್ತತಸ್ತತ್ರ ಮಹಾನುಭಾವಾ
ನಾರಾಯಣಸ್ಥಾನಗತಾಃ ಸಮಗ್ರಾಃ ।
ಕುಬೇರಕಾಂತಾಂ ನಳಿನೀಂ ವಿಶೋಕಾಃ
ಸಂಪಶ್ಯಮಾನಾಃ ಸುರಸಿದ್ಧಜುಷ್ಟಾಮ್ ॥೩೧॥

ಮಹಾನುಭಾವರಾದ ಅವರೆಲ್ಲರೂ ನಾರಾಯಣಸ್ಥಾನವಾದ ಆ ಪ್ರದೇಶದಲ್ಲಿ ಸುರಸಿದ್ಧಸೇವಿತವಾದ ಕುಬೇರನಿಗೆ ಪ್ರಿಯವಾದ ಸರೋವರವನ್ನು ಶೋಕರಹಿತರಾಗಿ ನೋಡುತ್ತಾ ವಾಸವನ್ನು ಮಾಡಿದರು.

ತಾಂ ಚಾಥ ದೃಷ್ಟ್ವಾ ನಳಿನೀಂ ವಿಶೋಕಾಃ
ಪಾಂಡೋಃ ಸುತಾಃ ಸರ್ವನರಪ್ರಧಾನಾಃ ।
ತೇ ರೇಮಿರೇ ನಂದನವಾಸಮೇತ್ಯ
ದ್ವಿಜರ್ಷಯೋ ವೀತಮಲಾ ಯಥೈವ ॥೩೨॥

ಸರ್ವನರಶ್ರೇಷ್ಠರಾದ ಶೋಕರಹಿತರಾದ ಪಾಂಡುಸುತರು ಆ ಸರೋವರವನ್ನು ನೋಡಿ ನಿಷ್ಕಲ್ಮಶರಾದ ಬ್ರಾಹ್ಮಣ ಋಷಿಗಳು ನಂದನವನವನ್ನು ಸೇರಿ ಸುಖಪಡುವಂತೆ ಸಂತೋಷಪಟ್ಟರು.

ತತಃ ಕ್ರಮೇಣೋಪಯಯುರ್ನೃವೀರಾ
ಯಥಾಗತೇನೈವ ಪಥಾ ಸಮಗ್ರಾಃ ।
ವಿಹೃತ್ಯ ಮಾಸಂ ಸುಖಿನೋ ಬದರ್ಯಾಂ
ಕಿರಾತರಾಜ್ಞೋ ವಿಷಯಂ ಸುಬಾಹೋಃ ॥೩೩॥

ಆ ಎಲ್ಲಾ ನರವೀರರಾದ ಪಾಂಡವರು ಬದರಿಯಲ್ಲಿ ಒಂದು ತಿಂಗಳ ಕಾಲ ಸುಖವಾಗಿ ವಿಹರಿಸಿ ತಾವು ಮೊದಲು ಹೋದ ಮಾರ್ಗದಿಂದಲೇ ಕ್ರಮವಾಗಿ ಹಿಂದಿರುಗಿ ಕಿರಾತರಾಜನಾದ ಸುಬಾಹುವಿನ ದೇಶವನ್ನು ತಲುಪಿದರು.

ಪೀನಾಂಸ್ತುಷಾರಾನ್ ದರದಾಂಶ್ಚ ಸರ್ವಾನ್
ದೇಶಾನ್ ಕುಲಿಂದಸ್ಯ ಚ ಭೂರಿರತ್ನಾನ್ ।
ಅತೀತ್ಯ ದುರ್ಗಂ ಹಿಮವತ್ಪ್ರದೇಶಂ
ಪುರಂ ಸುಬಾಹೋರ್ದದೃಶುರ್ನೃವೀರಾಃ ॥೩೪॥

ಬದರಿಯಿಂದ ಹೊರಟ ಆ ನರಶ್ರೇಷ್ಠರು ಪೀನ, ತುಷಾರ, ದರದ, ಕುಲಿಂದ, ಭೂರಿರತ್ನಗಳುಳ್ಳ ದೇಶಗಳನ್ನು ದಾಟಿ ದುರ್ಗಮವಾದ ಹಿಮಾಲಯ ಪ್ರದೇಶವನ್ನೂ ದಾಟಿ ಸುಬಾಹುವಿನ ರಾಜಧಾನಿಯನ್ನು (ಪಟ್ಟಣವನ್ನು) ನೋಡಿದರು.

ಶ್ರುತ್ವಾ ಚ ತಾನ್ ಪಾರ್ಥಿವಪುತ್ರಪೌತ್ರಾನ್
ಪ್ರಾಪ್ತಾನ್ ಸುಬಾಹುರ್ವಿಷಯೇ ಸಮಗ್ರಾನ್ ।
ಪ್ರತ್ಯುದ್ಯಯೌ ಪ್ರೀತಿಯುತಃ ಸ ರಾಜಾ ತಂ
ಚಾಭ್ಯನಂದನ್ ವೃಷಭಾಃ ಕುರೂಣಾಮ್ ॥೩೫॥

ರಾಜಪುತ್ರರೂ ಮತ್ತು ಪೌತ್ರರೆಲ್ಲರೂ ತನ್ನ ದೇಶಕ್ಕೆ ಬಂದ ವಾರ್ತೆಯನ್ನು ಕೇಳಿದ ಸುಬಾಹುರಾಜನು ಸಂತೋಷದಿಂದ ಅವರೆದುರಿಗೆ ಬಂದು ಅವರನ್ನು ಅಭಿನಂದಿಸಿದನು. ಕುರುಶ್ರೇಷ್ಠರೂ ಸಹ ಆ ರಾಜನನ್ನು ಅಭಿನಂದಿಸಿದರು.

ಸಮೇತ್ಯ ರಾಜ್ಞಾ ತು ಸುಬಾಹುನಾ ತೇ
ಸೂತೈರ್ವಿಶೋಕಪ್ರಮುಖೈಶ್ಚ ಸರ್ವೇ ।
ಸಹೇಂದ್ರಸೇನೈಃ ಪರಿಚಾರಿಕೈಶ್ಚ
ಪೌರೋಗವೈರ್ಯೇ ಚ ಮಹಾನಸಸ್ಥಾಃ ॥೩೬॥

ಸುಖೋಷಿತಾಸ್ತತ್ರ ತ ಏಕರಾತ್ರಂ ಸೂತಾನ್
ಸಮಾದಾಯ ರಥಾಂಶ್ಚ ಸರ್ವಾನ್ ।
ಘಟೋತ್ಕಚಂ ಸಾನುಚರಂ ವಿಸೃಜ್ಯ
ತತೋಽಭ್ಯಯುರ್ಯಾಮುನಮದ್ರಿರಾಜಮ್ ॥೩೭॥

ಅವರು ಸುಬಾಹುರಾಜನ ಸಮಾಗಮವನ್ನು ಹೊಂದಿ ಅಲ್ಲಿ ಒಂದು ರಾತ್ರಿಯ ಕಾಲ ತಂಗಿ ವಿಶೋಕ ಮೊದಲಾದ ಸೂತರನ್ನೂ, ಇಂದ್ರಸೇನ ಮೊದಲಾದ ಪರಿಚಾರಕರನ್ನೂ ಅಡಿಗೆ ಮನೆಯ ಮೇಲ್ವಿಚಾರಕರನ್ನೂ ಕರೆದುಕೊಂಡು ಅದರಂತೆ ರಥಗಳನ್ನು ತೆಗೆದುಕೊಂಡು ಅನುಚರರಿಂದ ಸಹಿತನಾದ ಘಟೋತ್ಕಚನನ್ನು ಬೀಳ್ಕೊಟ್ಟು ಯಮುನಾ ನದಿಯ ಉತ್ಪತ್ತಿ ಸ್ಥಾನವಾದ ಪರ್ವತಶ್ರೇಷ್ಠಕ್ಕೆ (ಯಮುನೋತ್ರಿಗೆ) ಬಂದರು.

ತಸ್ಮಿನ್ ಗಿರೌ ಪ್ರಸ್ರವಣೋಪಪನ್ನಹಿಮೋತ್ತರೀಯಾರುಣಪಾಂಡುಸಾನೌ ।
ವಿಶಾಖಿಯೂಪಂ ಸಮುಪೇತ್ಯ ಚಕ್ರುಸ್ತದಾ ನಿವಾಸಂ ಪುರುಷಪ್ರವೀರಾಃ॥

ಆ ಪರ್ವತದಲ್ಲಿ ನೀರಿನ ಝರಿಗಳಿಂದ ಉಂಟಾದ ಹಿಮಮಯವಾದ ಉತ್ತರೀಯದಿಂದ ಅರುಣಪಾಂಡುವಾಗಿ ಕಾಣುತ್ತಿದ್ದ ಶಿಖರದಲ್ಲಿ ವಿಶಾಖಿಯೂಪ ಎಂಬ ಒಂದು ಸ್ಥಾನವನ್ನು ಸೇರಿ ಆ ಪುರುಷಪ್ರವೀರರು ಅಲ್ಲಿ ನಿವಾಸವನ್ನು ಮಾಡಿದರು.

ವರಾಹನಾನಾಮೃಗಪಕ್ಷಿಜುಷ್ಟಂ ಮಹಾವನಂ ಚೈತ್ರರಥಪ್ರಕಾಶಮ್ ।
ಶಿವೇನ ಪಾರ್ಥಾ ಮೃಗಯಾಪ್ರಧಾನಾಃ ಸಂವತ್ಸರಂ ತತ್ರ ವನೇ ವಿಜಹ್ರುಃ ॥

ಅನೇಕ ವರಾಹಗಳಿಂದಲೂ, ಮೃಗಪಕ್ಷಿಗಳಿಂದಲೂ ಸೇವಿತವಾದ ಚೈತ್ರರಥಪ್ರಕಾಶವೆಂಬ ಆ ಮಹಾವನದಲ್ಲಿ ಪಾರ್ಥರು ಬೇಟೆಯಾಡುತ್ತಾ ಒಂದು ವರ್ಷದ ಕಾಲ ಸುಖವಾಗಿ ವಿಹಾರ ಮಾಡಿದರು.

ತತ್ರಾಸಸಾದಾತಿಬಲಂ ಭುಜಂಗಂ
ಕ್ಷುಧಾರ್ದಿತಂ ಮೃತ್ಯುಮಿವೋಗ್ರರೂಪಮ್ ।
ವೃಕೋದರಃ ಪರ್ವತಕಂದರಾಯಾಂ
ವಿಷಾದಮೋಹವ್ಯಥಿತಾಂತರಾತ್ಮಾ ॥೪೦॥

ಅಲ್ಲಿ ಒಂದು ಪರ್ವತದ ಕಣಿವೆಯಲ್ಲಿ ವೃಕೋದರನು ಮೃತ್ಯುವಿನಂತೆ ಉಗ್ರರೂಪವನ್ನು ಹೊಂದಿದ್ದ ಹಸಿವಿನಿಂದ ಪೀಡಿತವಾದ ಮಹಾಬಲವುಳ್ಳ ಭುಜಂಗಮವನ್ನು ತಲುಪಿ ವಿಷಾದ ಮೋಹಗಳಿಂದ ಕೂಡಿದ ಮನಸ್ಸುಳ್ಳವನಾದನು.

ದ್ವಿಪೋಽಭವದ್ ಯತ್ರ ವೃಕೋದರಸ್ಯ
ಯುಧಿಷ್ಠಿರೋ ಧರ್ಮಭೃತಾಂ ವರಿಷ್ಠಃ ।
ಅಮೋಕ್ಷಯದ್ ಯಸ್ತಮನಂತತೇಜಾ
ಗ್ರಾಹೇಣ ಸಂವೇಷ್ಟಿತಸರ್ವಗಾತ್ರಮ್ ॥೪೧॥

ಅಲ್ಲಿ ಧರ್ಮಿಷ್ಠರಲ್ಲಿ ಶ್ರೇಷ್ಠನಾದ ಯುಧಿಷ್ಠಿರನು ವೃಕೋದರನಿಗೆ ದ್ವೀಪನಾದನು (ಅಪಾಯದಿಂದ ಪಾರುಮಾಡುವವನಾದನು). ಅನಂತ ತೇಜಸ್ಸುಳ್ಳ ಅವನು ಸರ್ವಶರೀರವೂ ಸರ್ಪದಿಂದ ವೇಷ್ಟಿತವಾದ ಆ ಭೀಮನನ್ನು ಆ ಸರ್ಪದ ಹಿಡಿತದಿಂದ ಬಿಡಿಸಿದನು.

ತೇ ದ್ವಾದಶಂ ವರ್ಷಮುಪೋಪಯಾತಂ
ವನೇ ವಿಹರ್ತುಂ ಕುರವಃ ಪ್ರತೀತಾಃ ।
ತಸ್ಮಾದ್ ವನಾಚ್ಚೈತ್ರರಥಪ್ರಕಾಶಾತ್
ಶ್ರಿಯಾಜ್ವಲಂತಸ್ತಪಸಾ ಚ ಯುಕ್ತಾಃ ॥೪೨॥

ತತಶ್ಚ ಯಾತ್ವಾ ಮರುಧನ್ವಪಾರ್ಶ್ವಂ
ಸದಾ ಧನುರ್ವೇದರತಿಪ್ರಧಾನಾಃ ।

ಸರಸ್ವತೀಮೇತ್ಯ ನಿವಾಸಕಾಮಾಃ
ಸರಸ್ತತೋ ದ್ವೈತವನಂ ಪ್ರತೀಯುಃ ॥೪೩॥

ಆ ಕುರುಗಳು ಹನ್ನೆರಡುವರ್ಷಗಳ ಕಾಲ ಕಾಡಿನಲ್ಲಿ ವಿಹರಿಸಲು ನಿಶ್ಚಯಿಸಿದ್ದು ಕಾಂತಿಯಿಂದ ಬೆಳಗುತ್ತಾ ತಪಸ್ಸಿನಿಂದ ಕೂಡಿದವರಾಗಿ ಯಾವಾಗಲೂ ಧನುರ್ವೇದನಿಷ್ಠರಾಗಿ ಆ ಚೈತ್ರರಥಪ್ರಕಾಶವನದಿಂದ ಹೊರಟು ಮರುಭೂಮಿಯನ್ನು ದಾಟಿ ಸರಸ್ವತೀ ನದಿಯನ್ನು ಸೇರಿ ನಿವಾಸವನ್ನು ಮಾಡಲು ಇಚ್ಛೆಯುಳ್ಳವರಾಗಿ ಅಲ್ಲಿಂದ ಸರೋವರವನ್ನೂ ಮತ್ತು ದ್ವೈತವನವನ್ನು ಕುರಿತು ಪ್ರಯಾಣ ಮಾಡಿದರು.

ಸಮೀಕ್ಷ್ಯ ತಾನ್ ದ್ವೈತವನೇ ನಿವಿಷ್ಟಾನ್
ನಿವಾಸಿನಸ್ತತ್ರ ತತೋऽಭಿಜಗ್ಮುಃ ।
ತಪೋದಮಾಚಾರಸಮಾಧಿಯುಕ್ತಾ–
ಸ್ಸ್ರುಕ್ಕೋದಪಾತ್ರಾವರಣಾಶ್ಮಕುಟ್ಟಾಃ ॥೪೪॥

ಅವರು ದ್ವೈತವನವನ್ನು ಪ್ರವೇಶಮಾಡಿದುದನ್ನು ನೋಡಿ ತಪಸ್ಸು, ಇಂದ್ರಿಯ ನಿಗ್ರಹ, ಸದಾಚಾರ ಮತ್ತು ಸಮಾಧಿಗಳಿಂದ ಕೂಡಿದ ವಾನಪ್ರಸ್ಥರು ಅವರಿಗೆ ಧರ್ಬಾಸನಗಳನ್ನೂ ಅರ್ಘ್ಯಕ್ಕೋಸ್ಕರ ಜಲಪಾತ್ರೆಗಳನ್ನೂ ತೆಗೆದುಕೊಂಡು ಅವರಿಗೆ ಅಭಿಮುಖವಾಗಿ ಬಂದರು.

ಪ್ಲಕ್ಷಾಕ್ಷರೌಹೀತಕವೇತಸಾಶ್ಚ ತಥಾ
ಬದರ್ಯಃ ಖದಿರಾಃ ಶಿರೀಷಾಃ ।
ಬಿಲ್ವೇಂಗುದಾಃ ಪೀಲುಶಮೀಕರೀರಾಃ
ಸರಸ್ವತೀತೀರರುಹಾ ಬಭೂವುಃ ॥೪೫॥

ಸರಸ್ವತೀ ತೀರದಲ್ಲಿ ಪ್ಲಕ್ಷ, ಅಕ್ಷ, ರೋಹಿತಕ, ವೇತಸ, ಬದರಿ, ಖದಿರ, ಶಿರೀಷ, ಬಿಲ್ವ, ಇಂಗುದ, ಪೀಲು, ಶಮೀ, ಕರೀರ ಮೊದಲಾದ ವೃಕ್ಷಗಳು ಬೆಳೆದಿದ್ದವು.

ತಾಂ ಯಕ್ಷಗಂಧರ್ವಮಹರ್ಷಿಕಾಂತಾ–
ಮಾಗಾರಭೂತಾಮಿವ ದೇವತಾನಾಮ್ ।

ಸರಸ್ವತೀಂ ಪ್ರೀತಿಯುತಾಶ್ಚರಂತಃ
ಸುಖಂವಿಜಹ್ರುರ್ನರದೇವಪುತ್ರಾಃ ॥೪೬॥

ಯಕ್ಷರಿಗೂ, ಗಂಧರ್ವರಿಗೂ ಮಹರ್ಷಿಗಳಿಗೂ ಪ್ರಿಯವಾದ ದೇವತೆಗಳ ನಿವಾಸಸ್ಥಾನವಾದ ಆ ಸರಸ್ವತೀ ನದಿಯ ತೀರದಲ್ಲಿ ಸಂತೋಷದಿಂದ ಸಂಚರಿಸುತ್ತಾ ಆ ರಾಜಕುಮಾರರು ಸುಖದಿಂದ ವಿಹಾರಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಅಜಗರಪರ್ವಣಿ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ತೊಂದನೆಯ
ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಪಾದೇಷು ತೇಷು ನಿವಾಸತ್ಸು ಹಿಮಾಲಯಸ್ಯ
ಯಾಮ್ಯಾಶ್ರಿತೇಷು ಪವಮಾನಸುತಃ ಕದಾಚಿತ್ ।
ಧನ್ವೀ ಮೃಗಾನನುಚರನ್ ಸಹಸಾऽऽಸಸಾದ ಹಾऽऽಯೋಃ
ಸುತಂ ನಹುಷಮಾಜಗರೋರುರೂಪಮ್ ॥೩.೨೨॥

ಹಿಮಾಲಯದ ದಕ್ಷಿಣ ತಪ್ಪಲಿನಲ್ಲಿ ಪಾಂಡವರು ವಾಸಮಾಡುತ್ತಿದ್ದಾಗ ಒಂದು ದಿನ ಭೀಮ ಬಿಲ್ಲು ಹಿಡಿದು ಮೃಗಗಳನ್ನು ಬೇಟೆಯಾಡುತ್ತ ಹೆಬ್ಬಾವಿನ ರೂಪದಲ್ಲಿದ್ದ ನಹುಷನ ಬಳಿಗೆ ಬಂದ.

★ ★ ★ ★

ನೂರ ಎಪ್ಪತ್ತೆರಡನೆಯ ಅಧ್ಯಾಯ

ಬೇಟೆಯಲ್ಲಿ ಪ್ರವೃತ್ತನಾದ ಭೀಮನಿಗೆ ಅಜಗರದಿಂದ ಗ್ರಹಣ.

ಜನಮೇಜಯಃ

ಕಥಂ ನಾಗಾಯುತಪ್ರಾಣೋ ಭೀಮೋ ಭೀಮಪರಾಕ್ರಮಃ ।
ಭಯಮಾಹಾರಯತ್ ತೀವ್ರಂ ತಸ್ಮಾದಜಗರಾನ್ಮುನೇ ॥೧॥

ಜನಮೇಜಯ– ಎಲೈ ಋಷಿಯೇ, ಹತ್ತುಸಾವಿರ ಆನೆಗಳ ಪ್ರಾಣಬಲವುಳ್ಳವನೂ ಮತ್ತು ಭಯಂಕರ ಪರಾಕ್ರಮಿಯೂ ಆದ ಭೀಮಸೇನನಿಗೆ ಆ ಅಜಗರದಿಂದ ತೀವ್ರ ಭಯವು ಹೇಗೆ ಉಂಟಾಯಿತು?

ಪೌಲಸ್ತ್ಯಂ ಧನದಂ ಯುದ್ಧೇ ಯ ಆಹ್ವಯತಿ ದರ್ಪಿತಃ ।
ನಳಿನ್ಯಾಂ ಕದನಂ ಕೃತ್ವಾ ನಿಹಂತಾ ಯಕ್ಷರಾಕ್ಷಸಾಮ್ ॥೨॥

ತಂ ಶಂಸಸಿ ಭಯಾವಿಷ್ಟಮಾಪನ್ನಮರಿಸೂದನಮ್ ।
ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ ॥೩॥

ಯಾವನು ದರ್ಪದಿಂದ ಪೌಲಸ್ತ್ಯನಾದ ಕುಬೇರನನ್ನು ಯುದ್ಧಕ್ಕೆ ಆಹ್ವಾನಿಸುತ್ತಾನೆಯೋ, ಯಾವನು ಸೌಗಂಧಿಕ ಸರೋವರದಲ್ಲಿ ಯುದ್ಧವನ್ನು ಮಾಡಿ ಯಕ್ಷರಾಕ್ಷಸರರನ್ನು ಕೊಲ್ಲುತ್ತಾನೆಯೋ, ಅಂತಹ ಶತ್ರುಸೂದನನಾದ ಭೀಮಸೇನನನ್ನು ಭಯಗ್ರಸ್ತನಾದನೆಂದು ಹೇಳುತ್ತಿದ್ದೀರಿ. ಇದನ್ನು ನಾನು ಕೇಳಲು ಬಯಸುತ್ತೇನೆ. ಈ ವಿಷಯದಲ್ಲಿ ನನಗೆ ಬಹಳ ಕುತೂಹಲವಿದೆ.

ವೈಶಂಪಾಯನಃ

ಯದೃಚ್ಛಯಾ ಧನುಷ್ಪಾಣಿರ್ಬದ್ಧಖಡ್ಗೋ ವೃಕೋದರಃ ।
ದದರ್ಶ ತದ್ವನಂ ರಮ್ಯಂ ದೇವಗಂಧರ್ವಸೇವಿತಮ್ ॥೪॥

ವೈಶಂಪಾಯನ– ಒಮ್ಮೆ ವೃಕೋದರನು ಯದೃಚ್ಛೆಯಿಂದ ಕೈಯಲ್ಲಿ ಧನುಸ್ಸನ್ನು ಹಿಡಿದು ಸೊಂಟದಲ್ಲಿ ಖಡ್ಗವನ್ನು ಕಟ್ಟಿಕೊಂಡು ರಮ್ಯವಾದ ದೇವಗಂಧರ್ವ ಸೇವಿತವಾದ ಆ ವನವನ್ನು ನೋಡಿದನು.

ಸ ದದರ್ಶ ಶುಭಾನ್ ದೇಶಾನ್ ಗಿರೇರ್ಹಿಮವತಸ್ತದಾ ।
ದೇವರ್ಷಿಸಿಚರಿತಾನಪ್ಸರೋಗಣಸೇವಿತಾನ್ ॥೬॥

ದೇವತೆಗಳೂ ಋಷಿಗಳೂ ಸಿದ್ಧರೂ ಸಂಚರಿಸುವ, ಅಪ್ಸರೆಯರ ಗಣಗಳಿಂದ ಸೇವಿತವಾದ, ಹಿಮಾಲಯದ ಶುಭಪ್ರದೇಶಗಳನ್ನು ಅವನು ಆಗ ನೋಡಿದನು.

ಚಕೋರೈರುಪಚಕ್ರೈಶ್ಚ ಪಕ್ಷಿಭಿರ್ಜೀವಜೀವಕೈಃ ।
ಕೋಕಿಲೈರ್ಭೃಂಗರಾಜೈಶ್ಚ ತತ್ರ ತತ್ರ ನಿನಾದಿತಾನ್ ॥೭॥

ಆ ವನವು ಚಕೋರ, ಉಪಚಕ್ರ, ಜೀವಜೀವಕ, ಕೋಕಿಲ, ಭೃಂಗರಾಜ ಮೊದಲಾದ ಪಕ್ಷಿಗಳ ನಾದಗಳು ವನದಿಂದ ಅಲ್ಲಲ್ಲಿ ಕೇಳಿಬರುತ್ತಿದ್ದವು.

ನಿತ್ಯಪುಷ್ಪಫಲೈರ್ವೃಕ್ಷೈರ್ಹಿಮಸಂಸ್ಪರ್ಶಕೋಮಲೈಃ ।
ಉಪೇತಾನ್ ಬಹುಲಚ್ಛಾಯೈರ್ಮನೋನಯನನಂದನೈಃ ॥೮॥

ನಿತ್ಯವೂ ಪುಷ್ಪಫಲಭರಿತವಾದ, ಹಿಮಸ್ಪರ್ಶದಿಂದ ಮೃದುವಾದ, ಬಹಳ ನೆರಳನ್ನು ಕೊಡುವ, ಮನೋನಯನಗಳಿಗೆ ಸಂತೋಷವನ್ನು ಉಂಟುಮಾಡುವ, ವೃಕ್ಷಗಳಿಂದ ಕೂಡಿದ್ದಿತು.

ಸ ಸಂಪಶ್ಯನ್ ಗಿರಿನದೀರ್ವೈದೂರ್ಯಮಣಿಸನ್ನಿಭೈಃ ।
ಸಲಿಲೈರ್ಹಿಮಸಂಕಾಶೈರ್ಹಂಸಕಾರಂಡವಾಯುತೈಃ ॥೯॥

ವನಾನಿ ದೇವದಾರೂಣಾಂ ಮೇಘಾನಾಮಿವ ವಾಗುರಾಃ ।
ಹರಿಚಂದನಮಿಶ್ರಾಣಿ ತುಂಗಕಾಲೀಯಕನ್ಯಾಪಿ ॥೧೦॥

ಅವನು ವೈಢೂರ್ಯಮಣಿಯಂತಿರುವ ಜಲದಿಂದ ತುಂಬಿದ, ಹಿಮದ ಪ್ರಭೆಗಳುಳ್ಳ, ಹಂಸಕಾರಂಡವಾದಿ ಪಕ್ಷಿಗಳುಳ್ಳ ನದಿಗಳನ್ನೂ, ದೇವದಾರು ವೃಕ್ಷಗಳಿಂದ ಮೋಡಗಳ ಬಲೆಯಂತೆ ತೋರುವ ದೇವದಾರು ವನಗಳನ್ನೂ, ಹರಿಚಂದನ ಮಿಶ್ರಿತವಾದ ತುಂಗ, ಕಾಲೀಯಕ ಮೊದಲಾದ ವೃಕ್ಷಗಳನ್ನೂ ನೋಡುತ್ತಾ ಮುಂದೆ ನಡೆದನು.

ಮೃಗಯಾಂ ಪರಿಧಾವನ್ ಸ ಸಮೇಷು ಮರುಧನ್ವಸು ।
ವಿಧ್ಯನ್ ಮೃಗಾನ್ ಶರೈಃ ಶುದ್ಧೈಶ್ಚಚಾರ ಸ ಮಹಾಬಲಃ ॥೧೧॥

ಮಹಾಬಲನಾದ ಅವನು ಆ ಮರುಧನ್ವದ ಸಮವಾದ ಪ್ರದೇಶಗಳಲ್ಲಿ ಓಡಾಡುತ್ತಾ ಶುದ್ಧಬಾಣಗಳಿಂದ ಮೃಗಗಳನ್ನು ಕೊಲ್ಲುತ್ತಾ ಓಡಾಡಿದನು.

ಭೀಮಸೇನಸ್ತು ವಿಖ್ಯಾತೋ ಮಹಾಂತಂ ದಂಷ್ಟಿಣಂ ಬಲಾತ್ ।
ನಿಘ್ನನ್ ನಾಗಶತಪ್ರಾಣೋ ವನೇ ತಸ್ಮಿನ್ ಮಹಾಬಲಃ ॥೧೨॥

ಮೃಗಾಣಾಂ ಸ ವರಾಹಾಣಾಂ ಮಹಿಷಾಣಾಂ ಮಹಾಭುಜಃ ।
ವಿನಿಘ್ನಂಸ್ತತ್ರ ತತ್ರೈವ ಭೀಮೋ ಭೀಮಪರಾಕ್ರಮಃ ॥೧೩॥

ವಿಖ್ಯಾತನಾದ ಮಹಾಬಲನಾದ ಭೀಮಪರಾಕ್ರಮನಾದ ಮಹಾಭುಜನಾದ ಭೀಮನು ಮೃಗಗಳನ್ನೂ, ವರಾಹಗಳನ್ನೂ, ಮಹಿಷಗಳನ್ನೂ ಸಂಹಾರಮಾಡಿದನು.

ಸ ಮಾತಂಗಶತಪ್ರಾಣೋ ಮನುಷ್ಯಶತವಾರಣಃ ।
ಸಿಂಹಶಾರ್ದೂಲವಿಕ್ರಾಂತೋ ವನೇ ತಸ್ಮಿನ್ ಮಹಾಬಲಃ ॥೧೪॥

ವೃಕ್ಷಾನುತ್ಪಾಟಯಾಮಾಸ ತರಸಾ ವೈ ಬಭಂಜ ಚ ।
ಪೃಥಿವ್ಯಾಶ್ಚ ಪ್ರದೇಶಾನ್ ವೈ ನಾದಯಂಸ್ತು ವನಾನಿ ಚ ॥೧೫॥

ನೂರು ಆನೆಗಳ ಬಲವುಳ್ಳ, ನೂರು ಮನುಷ್ಯರ ಜೊತೆಯಲ್ಲಿ ಒಮ್ಮೆಲೇ ಯುದ್ಧ ಮಾಡುವ ಸಾಮರ್ಥ್ಯವುಳ್ಳ, ಸಿಂಹಶಾರ್ದೂಲವಿಕ್ರಮವುಳ್ಳ ಆ ಮಹಾಬಲನಾದ ಭೀಮಸೇನನು ಆ ಕಾಡಿನಲ್ಲಿ ವೃಕ್ಷಗಳನ್ನು ಕಿತ್ತು ತನ್ನ ಬಲದಿಂದ ಮುರಿದನು. ಭೂಮಿಯ ಪ್ರದೇಶಗಳನ್ನು ಮತ್ತು ಆ ಕಾಡನ್ನು ತನ್ನ ನಾದದಿಂದ ತುಂಬುತ್ತಾ ಬೇಟೆಯಾಡಿದನು.

ಪರ್ವತಾಗ್ರಾಣಿ ವೈ ಮೃದ್ನನ್ ನಾದಯಾನಶ್ಚ ವಿಜ್ವರಃ ।
ಪ್ರಕ್ಷಿಪನ್ ಪಾದಪಾಂಶ್ಚಾಪಿ ನಾದೇನಾಪೂರಯನ್ ಮಹೀಮ್ ॥೧೬॥

ವೇಗೇನ ನ್ಯಪತದ್ ಭೀಮೋ ನಿರ್ಭಯಶ್ಚ ಪುನಃ ಪುನಃ ।
ಆಸ್ಫೋಟಯನ್ ಕ್ಷ್ವೇಡಯಂಶ್ಚ ತಳತಾಲಾಂಶ್ಚ ವಾದಯನ್ ।
ಚಿರಸಂಬದ್ಧದರ್ಪಸ್ತು ಭೀಮಸೇನೋ ವನೇ ತದಾ ॥೧೭॥

ಯಾವ ಆತಂಕವೂ ಇಲ್ಲದೆ ಪರ್ವತದ ಶಿಖರಗಳನ್ನು ಕೆಡವುತ್ತಾ ತನ್ನ ಸಿಂಹನಾದದಿಂದ ಆ ಪ್ರದೇಶವನ್ನೆಲ್ಲಾ ತುಂಬುತ್ತಾ, ಮರಗಳನ್ನು ಕಿತ್ತು ಎಸೆಯುತ್ತಾ, ಚಪ್ಪಾಳೆಯನ್ನು ತಟ್ಟುತ್ತಾ, ಸಿಂಹನಾದವನ್ನು ಮಾಡುತ್ತಾ ದರ್ಪಿಷ್ಠನಾದ ಭೀಮಸೇನನು ಆ ಕಾಡಿನಲ್ಲಿ ನಿರ್ಭಯನಾಗಿ ವೇಗದಿಂದ ಸಂಚರಿಸಿದನು.

ಗಜೇಂದ್ರಾಶ್ಚ ಮಹಾಸತ್ತ್ವಾ ಮೃಗೇಂದ್ರಾಶ್ಚ ಮಹಾಬಲಾಃ ।
ಭೀಮಸೇನಸ್ಯ ನಾದೇನ ವ್ಯಮುಂಚಂತ ಗುಹಾ ಭಯಾತ್ ॥೧೮॥

ಕ್ವಚಿತ್ಪ್ರದ್ರಾವಂಸ್ತಿಷ್ಠಂಶ್ಚ ಕ್ವಚಿಚ್ಚೋಪವಿಶಂಸ್ತಥಾ ।
ಮೃಗಪ್ರೇಪ್ಸುರ್ಮಹಾರೌದ್ರೇ ವನೇ ಚರತಿ ನಿರ್ಭಯಃ ॥೧೯॥

ಮಹಾಬಲವುಳ್ಳ ಮಹಾಗಜಗಳೂ ಮತ್ತು ಸಿಂಹಗಳೂ ಭೀಮಸೇನನ ನಾದಕ್ಕೆ ಹೆದರಿ ತಮ್ಮ ಗುಹೆಗಳನ್ನು ತ್ಯಜಿಸಿದವು. ನಿರ್ಭಯನಾದ ಭೀಮಸೇನನು ಒಮ್ಮೆ ಓಡುತ್ತಾ, ಒಮ್ಮೆ ನಿಲ್ಲುತ್ತಾ, ಒಮ್ಮೆ ಕುಳಿತುಕೊಳ್ಳುತ್ತಾ ಮೃಗಗಳನ್ನು ಕೊಲ್ಲಲು ಬಯಸಿ ಭಯಂಕರವಾದ ಕಾಡಿನಲ್ಲಿ ಸಂಚರಿಸಿದನು.

ಸ ತತ್ರ ಮನುಜವ್ಯಾಘ್ರೋ ವನೇ ವನಚರೋಪಮಃ ।
ಪದ್ಭ್ಯಾಮಭಿಸಮಾಪೇದೇ ಭೀಮಸೇನೋ ಮಹಾಬಲಃ ॥೨೦॥

ಸ ಪ್ರವಿಷ್ಟೋ ಮಹಾರಣ್ಯೇ ನಾದಾನ್ ನದತಿ ಚಾದ್ಭುತಾನ್ ।
ತ್ರಾಸಯನ್ ಸರ್ವಭೂತಾನಿ ಮಹಾಸತ್ತ್ವಪರಾಕ್ರಮಃ ॥೨೧॥

ಮಹಾಸತ್ತ್ವಪರಾಕ್ರಮವುಳ್ಳ, ಮನುಜವ್ಯಾಘ್ರನಾದ ಆ ಭೀಮಸೇನನು ಮಹಾರಣ್ಯವನ್ನು ಪ್ರವಿಷ್ಟನಾಗಿ ಅದ್ಭುತವಾದ ನಾದಗಳನ್ನು ಮಾಡುತ್ತಾ, ಎಲ್ಲ ಪ್ರಾಣಿಗಳಲ್ಲಿಯೂ ಭಯವನ್ನುಂಟು ಮಾಡುತ್ತಾ, ವನಚರನಂತೆ ನಡೆದುಕೊಂಡೇ ಎಲ್ಲಕಡೆಯಲ್ಲಿಯೂ ಸಂಚರಿಸಿದನು.

ತತೋ ಭೀಮಸ್ಯ ಶಬ್ದೇನ ಭೀತಾಃ ಸರ್ಪಾ ಗುಹಾಶಯಾಃ ।
ಅತಿಕ್ರಾಂತಾಸ್ತು ವೇಗೇನ ಜಗಾಮಾನುಸೃತಃ ಶನೈಃ ॥೨೨॥

ಆಗ ಭೀಮನ ಶಬ್ದದಿಂದ ಹೆದರಿದ ಗುಹೆಯಲ್ಲಿ ಮಲಗಿದ್ದ ಸರ್ಪಗಳು ಶೀಘ್ರವಾಗಿ ಹೊರಗೆ ಬಂದವು. ಭೀಮಸೇನನು ಅವುಗಳಿಂದ ಅನುಸರಿಸಲ್ಪಟ್ಟು ಭೀಮನು ಮೆಲ್ಲನೆ ಹೋದನು.

ತತೋऽಮರವರಪ್ರಖ್ಯೋ ಭೀಮಸೇನೋ ಮಹಾಬಲಃ ॥೨೩॥

ಸ ದದರ್ಶ ಮಹಾಕಾಯಂ ಭುಜಗಂ ಲೋಮಹರ್ಷಣಮ್ ।
ಗಿರಿದುರ್ಗೇ ಸಮಾಪನ್ನಂ ಕಾಯೇನಾವೃತ್ಯ ಕಂದರಮ್ ॥೨೪॥

ಆಗ ಶ್ರೇಷ್ಠದೇವತೆಯಾದ ಮಹಾಬಲನಾದ ಭೀಮಸೇನನು ಮಹಾಶರೀರವುಳ್ಳ ರೋಮಾಂಚಕಾರಿಯಾದ ತನ್ನ ದೇಹದಿಂದ ಆ ದುರ್ಗದಲ್ಲಿ ಒಂದು ಕಣಿವೆಯನ್ನೇ ಆವರಿಸಿಕೊಂಡಿದ್ದಂತಹ ಒಂದು ಸರ್ಪವನ್ನು ನೋಡಿದನು.

ಪರ್ವತಾಭೋಗವರ್ಷ್ಮಾಣಮತಿಕಾಯಂ ಮಹಾಬಲಮ್ ।
ಚಿತ್ರಾಂಗದಮಂಗಜೈಶ್ಚಿತ್ರೈರ್ಹರಿದ್ರಾಸದೃಶಚ್ಛವಿಮ್ ॥೨೫॥

ಗುಹಾಕಾರೇಣ ವಕ್ತ್ರೇಣ ಚತುರ್ದಂಷ್ಟ್ರೇಣ ರಾಜತಾ ।
ದೀಪ್ತಾಕ್ಷೇಣಾತಿತಾಮ್ರೇಣ ಲಿಹಾನಂ ಸೃಕ್ಕಿಣೇ ಮುಹುಃ ॥೨೬॥

ಪರ್ವತಗಾತ್ರದ ಶರೀರವನ್ನು ಹೊಂದಿದ, ಅತಿಕಾಯವಾದ, ಮಹಾಬಲವುಳ್ಳ ಚಿತ್ರವಾದ ಅವಯವಗಳಿಂದ ಕೂಡಿದ, ಹಳದಿಯ ಬಣ್ಣದ, ಗುಹೆಯಂತಿರುವ ಬಾಯಿಯಲ್ಲಿ ಹೊಳೆಯುವ ನಾಲ್ಕು ಕೋರೆದಾಡೆಗಳಿಂದ ಶೋಭಿಸುವ, ಕೆಂಪಾದ ಕಣ್ಣುಗಳನ್ನು ಹೊಂದಿದ, ತನ್ನ ಕಟಬಾಯಿಯನ್ನು ನಾಲಿಗೆಯಿಂದ ಮತ್ತೆ ಮತ್ತೆ ಸವರಿಕೊಳ್ಳುವ ಆ ಸರ್ಪವನ್ನು ನೋಡಿದನು.

ತ್ರಾಸನಂ ಸರ್ವಭೂತಾನಾಂ ಕಾಲಾಂತಕಯಮೋಪಮಮ್ ।
ನಿಃಶ್ವಾಸಕ್ಷ್ವೇವಡನಾದೇನ ಭರ್ತ್ಸಯಂತಮಿವ ಸ್ಥಿತಮ್ ॥೨೭॥

ಅದು ಎಲ್ಲ ಪ್ರಾಣಿಗಳಿಗೂ ಭಯವನ್ನುಂಟುಮಾಡುತ್ತಾ ತನ್ನ ನಿಃಶ್ವಾಸ ಮತ್ತು ಸಿಟ್ಟಿನ ನಾದಗಳಿಂದ ಎಲ್ಲರನ್ನೂ ತಿರಸ್ಕರಿಸುತ್ತಾ ಕಾಲಾಂತಕ ಯಮನಂತೆ ಇದ್ದಿತು.

ಸ ಭೀಮಂ ಸಹಸಾಭ್ಯೇತ್ಯ ಸ್ಪೃಷ್ಟಾ ತಂ ಕುಪಿತೋ ಭೃಶಮ್ ।
ಜಗ್ರಾಹಾಜಗರೋ ಗ್ರಾಹೋ ಭುಜಯೋರುಭಯೋರ್ಬಲಾತ್ ॥೨೮॥

ಆ ಅಜಗರವು ಬಹಳ ಕೋಪದಿಂದ ಭೀಮನ ಕಡೆಗೆ ಇದ್ದಕ್ಕಿದ್ದಂತೆ ತನ್ನ ಕಟಿಪ್ರದೇಶದಿಂದ ಭೀಮನ ಎರಡು ಭುಜಗಳನ್ನು ಬಲವಾಗಿ ಸುತ್ತಿಕೊಂಡಿತು.

ತೇನ ಸಂಸ್ಪೃಷ್ಟಗಾತ್ರಸ್ಯ ಭೀಮಸೇನಸ್ಯ ವೈ ತದಾ ।
ಸಂಜ್ಞಾ ಮುಮೋಹ ಸಹಸಾ ವರದಾನೇನ ತಸ್ಯ ಹಿ ॥೨೯॥

ಭೀಮಸೇನನಿಗೆ ಆ ಸರ್ಪ ಸ್ಪರ್ಶವಾದ ತಕ್ಷಣ ಆ ಸರ್ಪಕ್ಕೆ ಇದ್ದ ವರದಾನದಿಂದ ಸಂಜ್ಞೆಯು ಹೊರಟು ಹೋಯಿತು.

ದಶನಾಗಸಹಸ್ರಾಣಿ ಧಾರಯಂತಿ ಹಿ ಯದ್ಬಲಮ್ ।
ತದ್ಬಲಂ ಭೀಮಸೇನಸ್ಯ ಭುಜಯೋರ್ನ ಸ ಮಂಸತ ॥೩೦॥

ಯಾವ ಭೀಮಸೇನನ ಬಲವನ್ನು ಹತ್ತುಸಹಸ್ರ ಗಜಗಳು ತಡೆಯಬಹುದೋ ಅಂತಹ ಭೀಮಸೇನನ ಬಲವನ್ನು ಆ ಸರ್ಪವು ಗಣನೆಗೇ ತೆಗೆದುಕೊಳ್ಳಲಿಲ್ಲ.

ಸ ತೇಜಸ್ವೀ ತಥಾ ತೇನ ಭುಜಗೇನ ವಶೀಕೃತಃ ।
ವಿಸ್ಫುರನ್ ಶನಕೈರ್ಭೀಮೋ ನ ಶಶಾಕ ವಿಚೇಷ್ಟಿತುಮ್ ॥೩೧॥

ಸರ್ಪದ ವಶಕ್ಕೆ ಹಾಗೆ ಸಿಲುಕಿದ ಆ ತೇಜಸ್ವಿಯಾದ ಭೀಮಸೇನನು ಬಿಡಿಸಿಕೊಳ್ಳಲು ಪ್ರಯತ್ನಪಟ್ಟರೂ ಅಲುಗಾಡಲೂ ಸಾಧ್ಯವಾಗಲಿಲ್ಲ.

ನಾಗಾಯುತಸಮಪ್ರಾಣಃ ಸಿಂಹಸ್ಕಂಧೋ ಮಹಾಭುಜಃ ।
ಗೃಹೀತೋ ವ್ಯಜಹಾತ್ ಸತ್ತ್ವಂ ವರದಾನವಿಮೋಹಿತಃ ॥೩೨॥

ಸರ್ಪದ ವರದಾನದಿಂದ ವಿಮೋಹಿತನಾದ, ಹತ್ತುಸಾವಿರ ಆನೆಗಳ ಪ್ರಾಣಬಲವುಳ್ಳ ಸಿಂಹಸ್ಕಂಧನಾದ ಮಹಾಭುಜನಾದ, ಭೀಮಸೇನನು ಸರ್ಪಗ್ರಹಕ್ಕೆ ಒಳಗಾಗಿ ತನ್ನ ಸತ್ತ್ವವನ್ನು ತ್ಯಜಿಸಿದನು.

ನ ಹಿ ಪ್ರಯತ್ನಮಕರೋತ್ ತೀವ್ರಮಾತ್ಮವಿಮೋಕ್ಷಣೇ ।
ನ ಚೈನಮಶಕದ್ ವೀರಃ ಕಥಂಚಿತ್ ಪ್ರತಿಬಾಧಿತುಮ್ ॥೩೩॥

ಅನಂತರ ಅವನು ತನ್ನನ್ನು ಬಿಡಿಸಿಕೊಳ್ಳಲು ಪ್ರಯತ್ನವನ್ನೂ ಮಾಡಲಿಲ್ಲ. ವೀರನಾದ ಅವನು ಆ ಮಹಾಸರ್ಪಕ್ಕೆ ಬಾಧೆಯನ್ನು ಉಂಟುಮಾಡಲು ಸಮರ್ಥನಾಗಲಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾಸಪ್ತತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಅಜಗರಪರ್ವಣಿ ದ್ವಿತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ತೆರಡನೆಯ
ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಪೂರ್ವಂ ಹಿ ವೃತ್ರವಧಾತೋಽಂಬುಜನಾಲತಂತು-
ಸಂಸ್ಥೇ ಶಚೀಪ್ರಣಯಿನಿ ಪ್ರವಿಚಿಂತ್ಯ ದೇವಾಃ ।
ಚಕ್ರುಸ್ತ್ರಿಲೋಕಪತಿಮಾಯುಸುತಂ ವರಂ ಚ
ದತ್ತ್ವಾಕ್ಷಗೋಚರತಪೋಽಸ್ಯ ಬಲಂ ಚ ಸರ್ವಮ್ ॥೩೨॥

ಹಿಂದೆ ವೃತ್ರವಧೆಯ ನಿಮಿತ್ತದಿಂದ ಇಂದ್ರಕಮಲನಾಳದ ತಂತುವಿನಲ್ಲಿ ಇದ್ದಾಗ ದೇವತೆಗಳು ವಿಚಾರಮಾಡಿ ನಹುಷನನ್ನು ಅವನ ಕಣ್ಣಿಗೆ ಬಿದ್ದವರ ತಪಸ್ಸೂ ಬಲವೂ ಪೂರ್ತಿಯಾಗಿ ಅವನಿಗೆ ಬರುವಂತೆ ವರನೀಡಿ ಮೂಲೋಕದ ಅಧಿಪತಿಯನ್ನಾಗಿ ಮಾಡಿದರು.

ಸ ಸರ್ವಸುರವಿಪ್ರೇಂದ್ರತಪಶ್ಚ ವಲಮಕ್ಷಯಮ್ ।
ಅವಾಪ್ಯ ವವೃಧೇ ನಿತ್ಯಂ ದರ್ಪಾದೈಚ್ಛಚ್ಛಚೀಮಪಿ ॥೩೪॥

ನಹುಷ ಎಲ್ಲ ದೇವ ಋಷಿಗಳ ತಪಸ್ಸನ್ನೂ ಅಕ್ಷಯವಾದ ಬಲವನ್ನೂ ಹೊಂದಿ ಸದಾ ಮೆರೆಯುತ್ತ ದರ್ಪದಿಂದ ಬೀಗಿದ. ದರ್ಪದಿಂದ ಶಚಿಯನ್ನೂ ಬಯಸಿದ.

ಸ ಇಂದ್ರವಚನಾಚ್ಚಚ್ಯಾ ಮಹರ್ಷಿಗಣವಾಹನೇ ।
ನಿಯುಕ್ತೋ ವಂಚನಾಯೈವ ವಾಹಯಾಮಾಸ ತಾನೃಷೀನ್ ॥೩೨೫॥

ಶಚಿ ಇಂದ್ರನ ಮಾತಿನಂತೆ ನಹುಷನನ್ನು ವಂಚಿಸುವುದಕ್ಕಾಗಿ ಮಹರ್ಷಿ ಸಮೂಹದಿಂದ ವಾಹನ ಹೊರಿಸಲು ಹೇಳಿದಳು. ನಹುಷ ಆ ಋಷಿಗಳಿಂದ ತನ್ನ ವಾಹವನ್ನು ಹೊರಿಸಿದ.

ಸ ಶಚೀಪ್ರತಿಷೇಧಾರ್ಥಮಗಸ್ತ್ಯೇನ ಮಹಾತ್ಮನಾ ।
ವೇದಪ್ರಾಮಾಣ್ಯವಿಷಯೇ ಪೃಷ್ಟೋ ನೇತ್ಯಾಹ ಮೂಢಧೀಃ ।
ಪ್ರಮಾಣಮಿತಿ ತೇನೋಕ್ತಃ ಶಿರಸ್ಯೇನಂ ಪದಾऽಹನತ್ ॥೩೨೬॥

ನಹುಷನಿಗೆ ಶಚೀ ಸಂಗವಾಗದಂತೆ ಮಾಡುವುದಕ್ಕಾಗಿ ಮಹಾತ್ಮ ಅಗಸ್ತ್ಯವೇದ ಪ್ರಾಮಾಣ್ಯ ವಿಷಯದಲ್ಲಿ ಪ್ರಶ್ನೆ ಮಾಡಿದ. ಮೂಢಬುದ್ಧಿಯ ನಹುಷ ಪ್ರಮಾಣವಲ್ಲ ಎಂದ. ಪ್ರಮಾಣವೇ ಎಂದು ಅಗಸ್ತ್ಯವಾದಿಸಿದಾಗ ನಹುಷ ಅವನ ತಲೆಯನ್ನು ಕಾಲಿಂದ ತುಳಿದ.

ತದಾ ಭೃಗುಂ ತಸ್ಯ ಜಟಾಸು ಲೀನಂ
ಕದಾऽಪಿ ತಸ್ಯಾಕ್ಷಿಪಥಂ ನ ಯಾತಮ್ ।
ಆವಿಶ್ಯ ಕಂಚಪ್ರಭವಃ ಶಶಾಪ
ವ್ರಜಾऽಶು ಪಾಪಾಜಗರತ್ವಮೇವ ॥೩೨೭॥

ಆಗ ನಹುಷನಿಗೆ ಎಂದೂ ದೃಷ್ಟಿಗೋಚರನಾಗದೆ ಅಗಸ್ತ್ಯನ ಜಟೆಯಲ್ಲಿ ಅಡಗಿ ಕುಳಿತಿದ್ದ ಭೃಗುಮುನಿಯಲ್ಲಿ ಬ್ರಜಹ್ಮ ಆವೇಶಗೊಂಡು 'ಪಾಪಿಯೇ, ನೀನು ಕೂಡಲೇ ಹೆಬ್ಬಾವಾಗು' ಎಂದು ಶಪಿಸಿದ.

ಷಷ್ಠೇ ಕಾಲೇ ಯಸ್ತ್ವಯಾऽಸಾದಿತಃ ಸ್ಯಾತ್
ಸ ತೇ ವಶಂ ಯಾತು ಬಲಾಧಿಕೋऽಪಿ ।
ಯದಾ ಗೃಹೀತಂ ಪುರುಷಂ ನಿಹಂತುಂ
ನ ಶಕ್ಷ್ಯಸೇ ಯದಿ ಸ ತ್ವದ್ಗೃಹೀತಃ ।
ಶಕ್ತೋऽಪಿ ನಾऽತ್ಮಾನಮಭಿಪ್ರಮೋಚಯೇತ್
ತದಾऽಸ್ಯ ಸ್ಯಾತ್ ತ್ವತ್ತಪೋऽಗ್ರ್ಯಂ ಬಲಂ ಚ ॥೩೨೮॥

ಪಷ್ಕಕಾಲ ಯಾರು ನಿನಗೆ ಸಿಗುವನೋ ಅವನು ಮಹಾಬಲಿಷ್ಠನಾದರೂ ನಿನ್ನ ವಶಕ್ಕೆ ಬರಲಿ. ನೀನು ಹಿಡಿದ ವ್ಯಕ್ತಿಯನ್ನು ನಿನಗೆ ಕೊಲ್ಲಲು ಆಗದಿದ್ದಾಗ, ಆ ವ್ಯಕ್ತಿ ಶಕ್ತನಾಗಿದ್ದರೂ ತನ್ನನ್ನು ಬಿಡಿಸಿಕೊಳ್ಳದಿದ್ದಾಗ ನಿನ್ನ ಉತ್ತಮವಾದ ತಪಸ್ಸು ಬಲವೆಲ್ಲವೂ ಅವನಲ್ಲಿಯೇ ಹೋಗಿ ಸೇರುತ್ತದೆ.

ಸರ್ವದೇವಮುನೀಂದ್ರಾಣಾಂ ಯತ್ ತಪಸ್ತ್ವಪುಪಾಶ್ರಿತಮ್ ।
ತಚ್ಚ ಸರ್ವಂ ತಮೇವೈತಿ ನಾತ್ರ ಕಾರ್ಯಾ ವಿಚಾರಣಾ ॥೩೨೯॥

ಎಲ್ಲ ದೇವತೆಗಳ ಮುನಿಗಳ ಯಾವ ತಪೋಬಲ ನಿನ್ನಲ್ಲಿ ಬಂದು ಸೇರಿರುವುದೋ ಅದೆಲ್ಲವೂ ಅವನನ್ನೇ ಸೇರುತ್ತದೆ. ಇದರಲ್ಲಿ ವಿಚಾರ ಮಾಡುವುದೇ ಬೇಡ.

ಯದಾ ಪ್ರಶ್ನಾಂಸ್ತ್ವದೀಯಾಂಶ್ಚ ಕಶ್ಚಿತ್ ಪರಿಹರಿಷ್ಯತಿ ।
ತದಾ ಗಂತಾಽಸಿ ಚ ದಿವಂ ವಿಸೃಜ್ಯಾಽಜಗರಂ ತನುಮ್ ।
ಸ್ಮೃತಿಶ್ಚ ಮತ್ಪ್ರಸಾದೇನ ಸರ್ವದಾ ತೇ ಭವಿಷ್ಯತಿ ॥೩೩೦॥

ಯಾವಾಗ ನಿನ್ನ ಪ್ರಶ್ನೆಗಳನ್ನು ಒಬ್ಬನು ಪರಿಹರಿಸುವನೋ ಆಗ ನೀನು ಹಾವಿನ ಶರೀರವನ್ನು ಬಿಟ್ಟು ಸ್ವರ್ಗಕ್ಕೆ ಹೋಗುವಿ. ನನ್ನ ಅನುಗ್ರಹದಿಂದ ನಿನಗೆ ಪೂರ್ವಜನ್ಮದ ಸ್ಮರಣೆ ಸದಾ ಇರುತ್ತದೆ.

ಭೃಗುದೇಹಗತೇನೈವಂ ಶಪ್ತಃ ಕಮಲಯೋನಿನಾ ।
ಪಪಾತಾಜಗರೋ ಭೂತ್ವಾ ನಹುಷಃ ಕ್ಷಣಮಾತ್ರತಃ ॥೩೩೧॥

ಭೃಗು ಮುನಿಯ ಶರೀರದಲ್ಲಿದ್ದ ಬ್ರಹ್ಮನಿಂದ ಹೀಗೆ ಶಾಪ ಹೊಂದಿದ ನಹುಷ ಕ್ಷಣ ಮಾತ್ರದಲ್ಲಿ ಹೆಬ್ಬಾವಾಗಿ ಭೂಮಿಯಲ್ಲಿ ಬಿದ್ದ.

ಇಂದ್ರೋಽಪ್ಯವಾಪ ಸ್ವಂ ಸ್ಥಾನಮಿಷ್ಟ್ವಾ ವಿಷ್ಣುಂ ವಿಪಾಪಕಃ ।
ಧರ್ಮವೃದ್ಧ್ಯರ್ಥಮೇವೈತತ್ ಪಾಪಮಾಸೀಚ್ಛಚೀಪತೇಃ ॥೩೩೨॥

ಇಂದ್ರ ಪಾಪರಹಿತನಾಗಿದ್ದರೂ ವಿಷ್ಣುವನ್ನು ಯಾಗದಿಂದ ಆರಾಧಿಸಿ ತನ್ನ ಸ್ಥಾನವನ್ನು ಹೊಂದಿದ. ವೃತ್ರಹತ್ಯಾಪಾಪ ಇಂದ್ರನಿಗೆ ಹೀಗೆ ಪುಣ್ಯವೃದ್ಧಿಗೇ ಕಾರಣವಾಯಿತು.

ನ ಹಿ ಲೋಕಾವನಂ ಪಾಪಂ ತ್ರೈಲೋಕ್ಯೇಶಸ್ಯ ವಜ್ರಿಣಃ ।
ವೃತ್ರಂ ಹತ್ವಾ-ಮಹಾನಾಸೇತ್ಯಾದಿ ವೇದಪದಂ ಚ ಯತ್ ॥೩೩೩॥

ಏಕೆಂದರೆ ಮೂಲೋಕದೊಡೆಯನಾದ ದೇವೇಂದ್ರ ಲೋಕರಕ್ಷಣೆಗಾಗಿ ಮಾಡಿದ ವೃತಹತ್ಯೆ ಪಾಪಹೇತುವಾಗದು ತಾನೆ? ಇಂದ್ರ ವೃತ್ರನನ್ನು ಕೊಂದು ಪುಣ್ಯ ಗಳಿಸಿದನೆಂದು ವೇದವಚನವಿದೆ.

ಕ್ವಚಿತ್ ಪಾಪಂ ಚ ಪುಣ್ಯಾನಾಂ ವೃದ್ಧಯೇ ಭವತಿ ಸ್ಫುಟಮ್ ।
ವೃತ್ರಹತ್ಯಾ ಯಥೇಂದ್ರಸ್ಯ ಜಾತಾ ಧರ್ಮಸ್ಯ ವೃದ್ಧಯೇ ॥೩೩೪॥

ದೇವಾನಾಂ ವಾ ಮುನೀನಾಂ ವಾ ಭವೇದೇವಂ ನ ವೈ ನೃಣಾಮ್ ।
ಪಾಪಂ ಯತ್ ಪುಣ್ಯಮೇವೈತದಸುರಾಣಾಂ ವಿಲೋಮತಃ ।
ಏವಂ ಸ್ಕಾಂದೇ ಹಿ ವಚನಂ ನ ಪಾಪಂ ತಚ್ಛಚೀಪತೇಃ ॥೩೩೫॥

ಕೆಲವೆಡೆ ಪಾಪಕರ್ಮವೂ ಪುಣ್ಯವೃದ್ಧಿಗೇ ಕಾರಣವಾಗುವುದು ಸ್ಪಷ್ಟವಿದೆ. ಏಕೆಂದರೆ ಇಂದ್ರನಿಗೆ ವೃತ್ರಹತ್ಯಾ ಎಂಬ ಪಾಪಕರ್ಮ ಪುಣ್ಯವೃದ್ಧಿಗೆ ಕಾರಣವಾಯಿತು. ದೇವತೆಗಳ ಮತ್ತು ಮುನಿಗಳ ವಿಷಯದಲ್ಲಿ ಮಾತ್ರ ಇದು ಹೀಗೆ. ಮನುಷ್ಯರ ವಿಷಯದಲ್ಲಿ ಅಲ್ಲ. ಅಸುರರಿಗೆ ಇದಕ್ಕೆ ವ್ಯತಿರಿಕ್ತವಾಗಿ ಪುಣ್ಯಕರ್ಮವೂ ಪಾಪ ವೃದ್ಧಿಗೆ ಕಾರಣವಾಗುತ್ತದೆ ಎಂದು ಸ್ಕಾಂದಪುರಾಣದಲ್ಲಿ ಹೇಳಿದ. ಅದರಿಂದ ವೃತ್ರಹತ್ಯೆ ಇಂದ್ರನಿಗೆ ಪಾಪಕರವಾಗಲಿಲ್ಲ.

ನಾನ್ಯಸ್ಯ ಪದಮಾಪ್ಸ್ಯಂತಿ ತದ್ ದೇವಾನಾಂ ವ್ರತಂ ಪರಮ್ ।
ತಸ್ಮಾತ್ ತಂ ನಹುಷಂ ಶಕ್ರಪದೇ ವಿದಧುರೀಶ್ವರಾಃ ॥೩೩೬॥

ಇನ್ನೊಬ್ಬರ ಪದವಿಯನ್ನು ಏರದಿರುವುದು ದೇವತೆಗಳಿಗೆ ಒಂದು ಮಹಾ ವ್ರತ. ಅದರಿಂದ ದೇವತೆಗಳು ತಾವು ಇಂದ್ರ ಪದವಿಯನ್ನೇರಲು ಶಕ್ತರಾಗಿದ್ದರೂ ನಹುಷನನ್ನು ಆ ಸ್ಥಾನದಲ್ಲಿ ಕುಳ್ಳಿರಿಸಿದರು.

ತಸ್ಮಿನ್ನೇವಂ ನಿಪತಿತೇ ಬ್ರಹ್ಮಣಃ ಶಾಪಕಾರಣಾತ್ ।
ಅಷ್ಟಾವಿಂಶತಿಮೇ ಪ್ರಾಪ ಯುಗೇ ಭೀಮಸ್ತುಮುಲ್ಬಣಮ್ ।
ಜಾನನ್ನೇವ ತದೀಯಂ ತತ್ ತಪ ಆದಾತುಮೀಪ್ಸಯಾ ॥೩೩೭॥

ನಹುಷ ಬ್ರಹ್ಮನ ಶಾಪಪ್ರಯುಕ್ತ ಪತಿತನಾದಾಗ ಇಪ್ಪತ್ತೆಂಟನೇ ದ್ವಾಪರದಲ್ಲಿ ಭೀಮ ಆತನನ್ನು ಕ್ರೂರವಾದ ಹೆಬ್ಬಾವೆಂದು ತಿಳಿದಿದ್ದೂ ಅವನ ತಪಸ್ಸನ್ನು ಸೆಳೆದುಕೊಳ್ಳುವ ಇಚ್ಛೆಯಿಂದ ಬಳಿಗೆ ಬಂದ.

ಯತ್ತತ್ ಸುರಾಣಾಂ ಸರ್ವೇಷಾಂ ಮುನೀನಾಂ ಚ ತಪಃ ಸ್ಥಿತಮ್ ।
ತದ್ ಗೃಹೀತುಂ ವಶಗವದಿಚ್ಛಯೈವಾऽಸ ಮಾರುತಿಃ ॥೩೩೮॥

ನಹುಷನಲ್ಲಿದ್ದ ಎಲ್ಲ ದೇವತೆಗಳ ಮತ್ತು ಮುನಿಗಳ ತಪಸ್ಸನ್ನು ಸ್ವೀಕರಿಸುವುದಕ್ಕಾಗಿ ಭೀಮ ಸ್ವೇಚ್ಛೆಯಿಂದಲೇ ನಹುಷನ ವಶನಾದ.

ದೇವಾನಾಂ ಹಿ ನೃಜಾತಾನಾಮಲ್ಪಂ ವ್ಯಕ್ತಂ ಭವೇದ್ ಬಲಮ್ ।
ಇಚ್ಛಯಾ ವ್ಯಕ್ತತಾ ಯಾತಿ ವಾಯೋರನ್ಯೇಷು ತಚ್ಚ ನ ॥೩೩೯॥

ನಿತ್ಯಂ ವ್ಯಕ್ತಾ ಗುಣಾ ವಿಷ್ಣೋರಿತಿ ಶಾಸ್ತ್ರಸ್ಯ ನಿರ್ಣಯಃ ।
ಏವಮನ್ಯೇऽಪಿ ಹಿ ಗುಣಾ ಮಾನುಷಾದಿಷು ಜನ್ಮಸು ॥೩೪೦॥

ಬೇರೆ ದೇವತೆಗಳು ಮನುಷ್ಯರಾಗಿ ಹುಟ್ಟಿದಾಗ ಅವರ ದಿವ್ಯಬಲ ಸ್ವಲ್ಪವೇ ವ್ಯಕ್ತವಾಗುತ್ತದೆ. ವಾಯುವಿಗೆ ಇಚ್ಛೆಯಿಂದ ವ್ಯಕ್ತವಾಗುತ್ತದೆ. ಅನ್ಯರಲ್ಲಿ ಅದೂ ಇಲ್ಲ. ಆದಾನಾದಿ ಕಾರಣದಿಂದಲೆ ವ್ಯಕ್ತವಾಗಬೇಕು. ಶ್ರೀಹರಿಗೆ ಗುಣಗಳು ಸದಾ ವ್ಯಕ್ತವೇ ಆಗಿರುತ್ತದೆ. ಇದು ಶಾಸ್ತ್ರನಿರ್ಣಯ. ಹೀಗೇ ದೇವತೆಗಳಿಗೆ ಮನುಷ್ಯಾದಿ ಜನ್ಮಗಳಲ್ಲಿ ಬೇರೆ ಜ್ಞಾನಾನಂದಾದಿ ಗುಣಗಳೂ ಸ್ವಲ್ಪವೇ ವ್ಯಕ್ತವಾಗುತ್ತವೆ.

ದೇವಾನಾಂ ಮಾನುಷಾದೌ ತು ಶಕ್ಯೇऽಪ್ಯವ್ಯಕ್ತತಾಕೃತೇ ।
ಧರ್ಮವೃದ್ಧಿರ್ಭವೇತ್ ತೇಷಾಂ ಪ್ರೀತೋ ಭವತಿ ಕೇಶವಃ ॥೩೪೧॥

ದೇವತೆಗಳು ಮನುಷ್ಯಾದಿ ಜನ್ಮಗಳಲ್ಲಿ ತಮ್ಮ ದಿವ್ಯಗುಣಗಳನ್ನು ವ್ಯಕ್ತ ಮಾಡಿಕೊಳ್ಳಲು ಶಕ್ತರಾಗಿದ್ದರೂ ವ್ಯಕ್ತಮಾಡಿಕೊಳ್ಳದಿರುವುದರಿಂದ ಅವರಿಗೆ ಪುಣ್ಯವೃದ್ಧಿಯಾಗುತ್ತದೆ. ವಿಷ್ಣುಸುಪ್ರೀತನಾಗುತ್ತಾನೆ.

ತನ್ಮಾನುಷೇ ಬಲೇ ತಸ್ಯ ವರಾದ್ ವಾರಿತವತ್ ಸ್ಥಿತೇ ।
ದೈವಂ ಬಲಂ ಸುಶಕ್ತೋऽಪಿ ವ್ಯಕ್ತಂ ಚಕ್ರೇ ನ ಮಾರುತಿಃ ॥೩೪೨॥

ಅದರಿಂದ ಭೀಮ ತನ್ನ ಮಾನುಷಬಲ ಬ್ರಹ್ಮನ ವರದಿಂದ ಸ್ವಲ್ಪ ಪ್ರತಿಬದ್ಧವಾದಂತಿರಲು ದೈವಬಲವನ್ನು ವ್ಯಕ್ತಮಾಡಲು ಸುಶಕ್ತನಾದರೂ ವ್ಯಕ್ತಮಾಡಿಕೊಳ್ಳಲಿಲ್ಲ.

ಆತ್ಮಮೋಕ್ಷಾಯ ನ ಪ್ರಶ್ನಾನ್ ವ್ಯಾಜಹಾರ ಸ ಚಾಭಿಭೂಃ ।
ವಿದ್ಯೋಪಜೀವನಂ ಧರ್ಮೋ ವಿಪ್ರಾಣಾಮಪಿ ನೋ ಯತಃ ॥೩೪೩॥

ಕಿಮುತ ಕ್ಷತ್ರಿಯಸ್ಯೇತಿ ಜಾನನ್ನಪಿ ವೃಕೋದರಃ ।
ತತ್ಪ್ರಶ್ನಪರಿಹಾರೇಣ ನಾಽತ್ಮಮೋಕ್ಷಂ ಸಮೈಚ್ಛತ ॥೩೪೪॥

ನಹುಷನ ಪ್ರಶ್ನೆಗಳಿಗೆ ಉತ್ತರಿಸಲು ಭೀಮ ಸಮರ್ಥನಾದರೂ ಉತ್ತರಿಸಲಿಲ್ಲ. ಏಕೆಂದರೆ ವಿದ್ಯೆಯನ್ನು ಜೀವನಕ್ಕಾಗಿ ಅವಲಂಬಿಸುವುದು ಬ್ರಾಹ್ಮಣರಿಗೆ ಕೂಡ ಧರ್ಮವಲ್ಲ. ಕ್ಷತ್ರಿಯನಿಗೆ ಇನ್ನೇನು? ಅದರಿಂದ ಭೀಮ ಬಲ್ಲವನಾಗಿದ್ದರೂ ನಹುಷನ ಪ್ರಶ್ನೆಗಳಿಗೆ ಪರಿಹಾರ ನೀಡುವ ಮೂಲಕ ತನ್ನ ಬಿಡುಗಡೆ ಮಾಡಿಕೊಳ್ಳಲು ಬಯಸಲಿಲ್ಲ.

ಅಯತಂತಮಪಿ ಹ್ಯೇನಂ ಚಾಲನಾಯಾಪಿ ನಾಶಕತ್ ।
ಪೂರ್ಣೋಽಪಿ ಸರ್ವಲೋಕಾನಾಂ ಬಲೇನ ನಹುಷಸ್ತದಾ ।
ವೇಷ್ಟಯಿತ್ವೈವ ತಂ ಭೀಮಂ ಸ್ಥಿತೋಽಸೌ ನಾಶಕತ್ ಪರಮ್ ॥೩೪೫॥

ಕಣ್ಣಿಗೆ ಬಿದ್ದ ಸಮಸ್ತಜನರ ಬಲದಿಂದಲೂ ತುಂಬಿದ್ದ ನಹುಷ ಆಗ ಭೀಮನನ್ನು, ಅವನು ಏನೂ ಪ್ರಯತ್ನ ಮಾಡದಿದ್ದಾಗಲೂ, ಅಲ್ಲಾಡಿಸಲೂ ಶಕ್ತನಾಗಲಿಲ್ಲ. ಭೀಮನನ್ನು ಸುತ್ತಿಕೊಂಡಿದ್ದ ಹೊರತು ಇನ್ನೇನ್ನೂ ಮಾಡಲು ಶಕ್ತನಾಗಲಿಲ್ಲ.

ಭ್ರಾತೃಮಾತ್ರಾದಿಷು ಸ್ನೇಹಾತ್ ಕ್ಷಿಪ್ರಮಾತ್ಮವಿಮೋಕ್ಷಣಮ್ ।
ಇಚ್ಛನ್ನಪಿ ನ ಮೋಕ್ಷಾಯ ಯತ್ನಂ ಚಕ್ರೇ ವೃಕೋದರಃ ॥೩೪೬॥

ಭೀಮ ಸೋದರರಲ್ಲಿಮತ್ತು ತಾಯಿ ಮುಂತಾದವರಲ್ಲಿರುವ ಪ್ರೀತಿಯಿಂದ ಬೇಗನೆ ತನ್ನ ಬಿಡುಗಡೆಯಾಗಬೇಕೆಂದು ಬಯಸಿದರೂ ಬಿಡುಗಡೆಗಾಗಿ ಯತ್ನ ಮಾಡಲಿಲ್ಲ.

ಸರ್ವದೇವಮುನೀಂದ್ರಾಣಾಂ ತಪ ಆದಾತುಮತ್ರಗಮ್ ।
ಭ್ರಾತ್ರಾದಿಷು ಸ್ನೇಹವಶಾನ್ನ ಸ್ಥಾತವ್ಯಮಿಹೇತ್ಯಪಿ ॥೩೪೭॥

ಮನ್ವಾನಃ ಕಾಲತೋ ಭಂಘಂ ಸ್ವಯಮೇವೈಷ ಯಾಸ್ಯತಿ ।
ಆಜ್ಞಯಾ ವಾಸುದೇವಸ್ಯ ದಾರ್ಢ್ಯಾದ್ ದೇಹಸ್ಯ ಮೇ ತಥಾ ॥೩೪೭॥

ಸ್ರಸ್ತಾಂಘೇ ಪತಿತೇ ಸರ್ಪೇ ಯಾಸ್ಯಾಮಿತಿ ವಿಚಿಂತಯನ್ ।
ತಸ್ಥೌ ಭೀಮೋ ಹರಿಂ ಧ್ಯಾಯನ್ ಸ್ವಭಾವಾನ್ನ ತದಿಚ್ಛಯಾ ॥೩೪೮॥

ನಹುಷನಲ್ಲಿದ್ದ ದೇವತೆಗಳ ಮುನೀಂದ್ರರ ತಪಸ್ಸನ್ನು ಸೆಳೆದುಕೊಳ್ಳುವುದಕ್ಕಾಗಿ ಭೀಮ ಸೋದರರು ತಾಯಿ ಮುಂತಾದವರ ಮೇಲಿನ ಸ್ನೇಹದಿಂದ ತಾನು ಹೆಚ್ಚು ಕಾಲ ಹಾವಿನ ತೆಕ್ಕೆಯಲ್ಲಿ ಇರಕೂಡದೆಂದು ತಿಳಿದವನಾಗಿದ್ದರೂ ಸ್ವಲ್ಪ ಹೊತ್ತಿನಲ್ಲಿ ಹಾವು ತಾನೇ ಶಕ್ತಿಗುಂದುತ್ತದೆ. ಹರಿಯ ಇಚ್ಛೆಯಿಂದ ಮತ್ತು ನನ್ನ ಶರೀರದ ದಾರ್ಢ್ಯದಿಂದ ಅದು ಶರೀರ ಶೈಥಿಲ್ಯ ಹೊಂದಿ ಕೆಳಗೆ ಬೀಳುವಾಗ ನಾನು ಹೊರಟು ಹೋಗುವೆನೆಂದು ಆಲೋಚಿಸಿ ಸ್ವಾಭಾವಿಕವಾಗಿ ಹರಿಯನ್ನು ಧ್ಯಾನಿಸುತ್ತ ನಿಂತ ಹೊರತು ಬಿಡುಗಡೆ ಬಯಸಿ ಹರಿಧ್ಯಾನವನ್ನು ಮಾಡಲಿಲ್ಲ.

ತದೈವ ಬ್ರಹ್ಮವಚನಾತ್ ಪೂರ್ವೋಕ್ತಾನ್ ಕೇಶವಾಜ್ಞಯಾ ।
ಬಲಂ ತಪಶ್ಚ ಸರ್ವಸ್ಯ ತತ್ರಾಸ್ಥಮಾಯಾದ್ ವೃಕೋದರಮ್ ॥೩೪೯॥

ಆಗಲೇ ಹರಿಯಾಜ್ಞೆಯಿಂದ ಹಿಂದೆ ಹೇಳಿದ ಬ್ರಹ್ಮನ ಮಾತಿನಿಂದ ನಹುಷನಲ್ಲಿದ್ದ ಎಲ್ಲ ದೇವಮುನಿಗಳ ತಪಸ್ಸೂ ಬಲವೂ ಭೀಮನಲ್ಲಿ ಬಂದುಸೇರಿತು.

ಪೂರಿತೋ ನಹುಷಸ್ಥೇನ ತಪಸಾ ಚ ಬಲೇನ ಚ ।
ಭೀಮೇ ಸ ನಹುಷೋಽಥಾಽಸೀತ್ ಸ್ರಸ್ತಭೋಗಃ ಶನೈಃ ಶನೈಃ ॥೩೫೦॥

ನಹುಷನಲ್ಲಿದ್ದ ತಪಸ್ಸಿನಿಂದಲೂ ಬಲದಿಂದಲೂ ಭೀಮ ತುಂಬಿಕೊಂಡಾಗ ನಹುಷ ನಿಧಾನವಾಗಿ ಶರೀರ ಶೈಥಿಲ್ಯವನ್ನು ಹೊಂದಿದ.

★ ★ ★ ★

ನೂರ ಎಪ್ಪತ್ಮೂರನೆಯ ಅಧ್ಯಾಯ

ಅಜಗರದಿಂದ ಸ್ವವೃತ್ತಾಂತ ಕಥನ ಮತ್ತು ದುರ್ನಿಮಿತ್ತಗಳನ್ನು ನೋಡಿ ಅಲ್ಲಿಗೆ ಯುಧಿಷ್ಠಿರನ ಆಗಮನ.

ವೈಶಂಪಾಯನಃ

ಸ ಭೀಮಸೇನಸ್ತೇಜಸ್ವೀ ತಥಾ ಸರ್ಪವಶಂ ಗತಃ ।
ಚಿಂತಯಾಮಾಸ ಸರ್ಪಸ್ಯ ವೀರ್ಯಮತ್ಯದ್ಭುತಂ ಮಹತ್ ॥೧॥

ವೈಶಂಪಾಯನ– ಆ ತೇಜಸ್ವಿಯಾದ ಭೀಮಸೇನನು ಹಾಗೆ ಸರ್ಪವಶನಾಗಿ ಆ ಸರ್ಪದ ಅದ್ಭುತವಾದ ಮಹಾಪರಾಕ್ರಮವನ್ನು ಚಿಂತಿಸಿದನು.

ಉವಾಚ ಚ ಮಹಾಸರ್ಪಂ ಕಾಮಯಾ ಬ್ರೂಹಿ ಪನ್ನಗ ।
ಕಸ್ತ್ವಂ ಭೋ ಭುಜಗಶ್ರೇಷ್ಠ ಕಿಂ ಮಯಾ ಚ ಕರಿಷ್ಯಸಿ ॥೨॥

ಅವನು ಆ ಮಹಾಸರ್ಪವನ್ನು ಕುರಿತು ಎಲೈ ಭುಜಗಶ್ರೇಷ್ಠ ನೀನು ಯಾರು? ನನ್ನಿಂದ ನಿನಗೆ ಏನಾಗಬೇಕು ಎಂಬುದನ್ನು ನಿನ್ನ ಇಚ್ಛೆಯಿಂದಲೇ ಹೇಳು.

ಪಾಂಡವೋ ಭೀಮಸೇನೋಽಹಂ ಧರ್ಮರಾಜಾದನಂತರಃ ।
ನಾಗಾಯುತಸಮಪ್ರಾಣಸ್ತ್ವಯಾ ನೀತಃ ಕಥಂ ವಶಮ್ ॥೩॥

ನಾನು ಧರ್ಮರಾಜನ ತಮ್ಮನಾದ ಭೀಮಸೇನನೆಂಬ ಪಾಂಡುಪುತ್ರ. ಹತ್ತುಸಾವಿರ ನನ್ನನ್ನು ಆನೆಗಳ ಬಲವುಳ್ಳ ನೀನು ಹೇಗೆ ವಶಪಡಿಸಿಕೊಂಡೆ?

ಸಿಂಹಾಃ ಕೇಸರಿಣೋ ವ್ಯಾಘ್ರಾ ಮಹಿಷಾ ವಾರಣಾಸ್ತಥಾ ।
ಸಮಾಗತಾಶ್ಚ ಬಹುಶೋ ನಿಹತಾಶ್ಚ ಮಯಾ ಯುಧಿ ॥೪॥

ನನ್ನನ್ನು ಎದುರಿಸಿದ ಅನೇಕ ಕೇಸರವುಳ್ಳ ಸಿಂಹಗಳನ್ನೂ, ವ್ಯಾಘ್ರಗಳನ್ನೂ, ಮಹಿಷಗಳನ್ನೂ ಮತ್ತು ಗಜಗಳನ್ನೂ ಯುದ್ಧದಲ್ಲಿ ನಾನು ಅನೇಕಬಾರಿ ಕೊಂದಿದ್ದೇನೆ.

ರಾಕ್ಷಸಾಶ್ಚ ಪಿಶಾಚಾಶ್ಚ ಪನ್ನಗಾಶ್ಚ ಮಹಾಬಲಾಃ ।
ಭುಜವೇಗಮಶಕ್ತಾ ಮೇ ಸೋಢುಂ ಪನ್ನಗಸತ್ತಮ ॥೫॥

ಎಲೈ ಪನ್ನಗಶ್ರೇಷ್ಠನೇ, ಮಹಾಬಲರಾದ ರಾಕ್ಷಸರಾಗಲೀ, ಪಿಶಾಚಗಳಾಗಲೀ, ಸರ್ಪಗಳಾಗಲೀ ನನ್ನ ಭುಜವೇಗವನ್ನು ಸಹಿಸಲಾರರು.

ಕಿಂ ನು ವಿದ್ಯಾಬಲಂ ಕಿಂ ನು ವರದಾನಮಥೋ ತವ ।
ಉದ್ಯೋಗಮಪಿ ಕುರ್ವಾಣೋ ವಶಗೋಽಸ್ಮಿ ಕೃತಸ್ತ್ವಯಾ ॥೬॥

ನಿನಗೇನು ವಿದ್ಯಾಬಲವಿದೆಯೇ? ಅಥವಾ ವರದಾನದ ಬಲವೇ? ನಾನು ಬಿಡಿಸಿಕೊಳ್ಳಲು ಪ್ರಯತ್ನಪಡುತ್ತಿದ್ದರೂ ನನ್ನನ್ನು ನೀನು ವಶಪಡಿಸಿಕೊಂಡಿದ್ದೀಯೆ.

ಅಸತ್ಯೋ ವಿಕ್ರಮೋ ನ್ಯೂನಾಮಿತಿ ಮೇ ಧೀಯತೇ ಮತಿಃ ।
ಯಥೇದಂ ಮೇ ತ್ವಯಾ ನಾಗ ಬಲಂ ಪ್ರತಿಹತಂ ಮಹತ್ ॥೭॥

ಎಲೈ ನಾಗನೇ, ನನ್ನ ದೊಡ್ಡ ಬಲವು ನಿನ್ನಿಂದ ಪ್ರತಿಹತವಾಗಿರುವುದರಿಂದ ನಾನು ಮನುಷ್ಯರ ಪರಾಕ್ರಮ ಸತ್ಯ(ನಿತ್ಯ)ವಲ್ಲವೆಂದು ಈ ದಿನ ತಿಳಿಯುತ್ತಿದ್ದೇನೆ (ಎಂದು ಹೇಳಿದನು).

ವೈಶಂಪಾಯನಃ

ಇತ್ಯೇವಂ ವಾದಿನಂ ವೀರಂ ಭೀಮಮಕ್ಲಿಷ್ಟಕಾರಿಣಮ್ ।
ಭೋಗೇನ ಮಹತಾ ಗೃಹ್ಯ ಸಮಂತಾತ್ ಪರ್ಯವೇಷ್ಟಯತ್ ॥೮॥

ವೈಶಂಪಾಯನ– ಹೀಗೆ ಹೇಳುತ್ತಿದ್ದ ಅನಾಯಾಸವಾಗಿ ಎಲ್ಲವನ್ನೂ ಮಾಡುವ ವೀರನಾದ ಭೀಮಸೇನನನ್ನು ಆ ಸರ್ಪವು ತನ್ನ ದೊಡ್ಡ ದೇಹದಿಂದ ಪೂರ್ಣವಾಗಿ ಸುತ್ತುವರಿಯಿತು.

ನಿಗೃಹ್ಯೈನಂ ಮಹಾಬಾಹುಂ ತತಃ ಸ ಭುಜಗಸ್ತದಾ ।
ವಿಮುಚ್ಯಾಸ್ಯ ಭುಜೌ ಪೀನಾವಿದಂ ವಚನಮಬ್ರವೀತ್ ॥೯॥

ಹೀಗೆ ಆ ಭುಜಗವು ಮಹಾಬಾಹುವಾದ ಭೀಮಸೇನನನ್ನು ನಿಗ್ರಹಿಸಿ ಅನಂತರ ಅವನ ಪುಷ್ಪವಾದ ಭುಜಗಳನ್ನು ಮಾತ್ರ ಬಿಟ್ಟು ಮಾತನಾಡಿತು.

ದಿಷ್ಟ್ಯಾ ತ್ವಂ ಕ್ಷುಧಿತಸ್ಯಾದ್ಯ ದೇವೈರ್ಭಕ್ಷೋ ಮಹಾಭುಜ ।
ದಿಷ್ಟ್ಯಾ ಕಾಲಸ್ಯ ಮಹತಃ ಪ್ರಿಯಾಃ ಪ್ರಾಣಾ ಹಿ ದೇಹಿನಾಮ್ ॥೧೦॥

ಎಲೈ ಮಹಾಭುಜನೇ, ಹಸಿದಿರುವ ನನಗೆ ಈ ದಿನ ದೇವತೆಗಳು ನಿನ್ನನ್ನು ಆಹಾರವಾಗಿ ಸಂಕಲ್ಪಿಸಿದ್ದಾರೆ. ದೈವಸಂಕಲ್ಪದಿಂದಲೇ ಎಷ್ಟು ಸಮಯವಾದರೂ ದೇಹಿಗಳಿಗೆ ಅವರ ಪ್ರಾಣಗಳು ಪ್ರಿಯವಾಗಿರುತ್ತವೆ.

ಯಥಾ ತ್ವಿದಂ ಮಯಾ ಪ್ರಾಪ್ತಂ ಸರ್ಪರೂಪಮರಿಂದಮ ।
ತಥಾऽವಶ್ಯಂ ಮಯಾ ಖ್ಯಾಪ್ಯಂ ತವಾದ್ಯ ಶೃಣು ಸತ್ತಮ ॥೧೧॥

ಎಲೈ ಸಜ್ಜನರಲ್ಲಿ ಶ್ರೇಷ್ಠನಾದವನೇ, ಅರಿಂದಮನೇ, ನಾನು ಹೇಗೆ ಈ ಸರ್ಪರೂಪವನ್ನು ಪಡೆದೆ ಎಂಬ ವಿಷಯವನ್ನು ಅವಶ್ಯವಾಗಿ ಈ ದಿನ ಹೇಳಲೇಬೇಕು. ಅದನ್ನು ಕೇಳು.

ಇಮಾಮವಸ್ಥಾಂ ಸಂಪ್ರಾಪ್ತೋ ಹ್ಯಹಂ ಕೋಪಾನ್ಮನೀಷಿಣಾಮ್ ।
ಶಾಪಸ್ಯಾಂತಂ ಪರಿಪ್ರೇಪ್ಸುಃ ಸರ್ವಂ ತತ್‌ಕಥಯಾಮಿ ತೇ ॥೧೨॥

ಜ್ಞಾನಿಗಳ ಕೋಪಕ್ಕೆ ಪಾತ್ರನಾಗಿ ಈ ಅವಸ್ಥೆಯನ್ನು ಹೊಂದಿ ಶಾಪದ ಮೋಕ್ಷವನ್ನು ನಿರೀಕ್ಷಿಸುತ್ತಿರುವ ನಾನು ನಿನಗೆ ಎಲ್ಲವನ್ನೂ ಹೇಳುತ್ತೇನೆ.

ನಹುಷೋ ನಾಮ ರಾಜರ್ಷಿರ್ಯ್ಯಕ್ತಂ ತೇ ಶೋತ್ರಮಾಗತಃ ।
ತವೈವ ಪೂರ್ವಃ ಪೂರ್ವೇಷಾಮಾಯೋರ್ವಂಶಧರಃ ಸುತಃ ॥೧೩॥

ನಿನ್ನ ಕಿವಿಗೆ ಬಿದ್ದಿದ್ದರೆ ನಾನು ನಹುಷ ಎಂಬ ರಾಜರ್ಷಿ. ನಾನು ನಿನ್ನ ಪೂರ್ವಿಕನಾದ ಆಯುವಿನ ವಂಶಧರ ಪುತ್ರನಾಗಿ ನಿನ್ನ ಪೂರ್ವಿಕನಾಗಿದ್ದೇನೆ.

ತಪೋಭಿಃ ಕ್ರತುಭಿಶ್ಚೈವ ವಿದ್ಯಯಾऽಭಿಜನೇನ ಚ ।
ತ್ರೈಲೋಕ್ಯೈಶ್ವರ್ಯಮತುಲಂ ಪ್ರಾಪ್ತಂ ಮೇ ವಿಕ್ರಮೇಣ ಚ ॥೧೩.೧॥

ನಾನು ತಪಸ್ಸಿನಿಂದಲೂ, ಯಜ್ಞಗಳಿಂದಲೂ, ವಿದ್ಯೆಯಿಂದಲೂ ಶ್ರೇಷ್ಠಜನ್ಮದಿಂದಲೂ ಮತ್ತು ಪರಾಕ್ರಮದಿಂದಲೂ ಮೂರುಲೋಕದ ಅತುಲವಾದ ಐಶ್ವರ್ಯವನ್ನು ಪಡೆದೆ.

ಅಥ ಸರ್ವನೃಪೋನ್ಮಾಥೀ ಮದೋ ಮಾಂ ಸಮುಪಾವಿಶತ್ ।
ಸಹಸ್ರಂ ಮುನಿಮುಖ್ಯಾನಾಮುವಾಹ ಶಿಬಿಕಾಂ ಮಮ ॥೧೩.೨॥

ಎಲ್ಲ ರಾಜರನ್ನೂ ಸೋಲಿಸಿದ ನನಗೆ ಮದವು ಉಂಟಾಯಿತು. ಒಂದು ಸಾವಿರ ಸಂಖ್ಯೆಯ ಋಷಿಶ್ರೇಷ್ಠರು ನನ್ನ ಶಿಬಿಕೆಯನ್ನು ಹೊರುತ್ತಿದ್ದರು.

ತತೋ ವಿಭ್ರಂಶಿತಶ್ಚಾಹಮಗಸ್ತ್ಯೇನ ಮಹಾತ್ಮನಾ ।
ಇಮಾಮವಸ್ಥಾಂ ಸಂಪ್ರಾಪ್ತಃ ಪಶ್ಯ ದೈವಮಿದಂ ಮಮ ॥೧೩.೪॥

ಆಗ ಮಹಾತ್ಮರಾದ ಅಗಸ್ತ್ಯರು ನನ್ನನ್ನು ಆ ಸ್ಥಾನದಿಂದ ವಿಭ್ರಂಶಗೊಳಿಸಿದರು. ಈಗ ಈ ಅವಸ್ಥೆಯನ್ನು ಹೊಂದಿದ್ದೇನೆ. ನನ್ನ ದುರದೃಷ್ಟವನ್ನು ನೋಡು.

ನ ದೈವಂ ಪ್ರಜ್ಞಯಾ ತಾತ ನ ಬಲೋತ್ಸಾಹಶಕ್ತಿಭಿಃ ।
ನ ಸಹಾಯಬಲೈಶ್ಚಾಪಿ ಕಶ್ಚಿದಪ್ಯತಿವರ್ತತೇ ॥೧೩.೫॥

ಪ್ರೀತಿಪಾತ್ರನೇ, ದೈವವಿಹಿತವಾದುದನ್ನು ಬಲದಿಂದಲಾಗಲೀ, ಉತ್ಸಾಹ ಶಕ್ತಿಗಳಿಂದಾಗಲೀ, ಪ್ರಜ್ಞೆಯಿಂದಾಗಲೀ ಅಥವಾ ಅನೇಕ ಸಹಾಯಬಲದಿಂದಾಗಲೀ ಯಾರೂ ಮೀರಲಾರರು.

ಯಥಾ ಪ್ರಾಜ್ಞಾಶ್ಚ ಶೂರಾಶ್ಚ ದೃಶ್ಯಂತೇ ದುಃಖಜೀವಿನಃ ।
ಭೀರುಮುರ್ಖಾಶ್ಚ ಸುಖಿನಸ್ತಸ್ಮಾದ್ ದೈವಂ ಹಿ ಕಾರಣಮ್ ॥೧೩.೫॥

ಪ್ರಾಜ್ಞರೂ ಶೂರರೂ ದುಃಖದಿಂದ ಬದುಕುವುದು ಕಂಡುಬರುತ್ತದೆ. ಭೀರುಗಳು ಮತ್ತು ಮೂರ್ಖರು ಸುಖವಾಗಿರುವುದು ಕಂಡುಬರುತ್ತದೆ. ಆದ್ದರಿಂದ ಎಲ್ಲದಕ್ಕೂ ದೈವವೇ ಕಾರಣ.

ಸೋಽಹಂ ಶಾಪಾದಗಸ್ತ್ಯಸ್ಯ ಬ್ರಾಹ್ಮಣಾನವಮನ್ಯ ಚ ।
ಇಮಾಮವಸ್ಥಾಮಾಪನ್ನಃ ಪಶ್ಯ ದೈವಮಿದಂ ಮಮ ॥೧೪॥

ಅಂತಹ ನಾನು ಬ್ರಾಹ್ಮಣರನ್ನು ಅವಮಾನ ಮಾಡಿ ಅಗಸ್ತ್ಯರ ಶಾಪದಿಂದ ಈ ಅವಸ್ಥೆಯನ್ನು ಹೊಂದಿದ್ದೇನೆ. ನನ್ನ ದುರದೃಷ್ಟವನ್ನು ನೋಡು.

ತ್ವಾಂ ಚೇದವಧ್ಯಂ ದಾಯಾದಮತೀವ ಪ್ರಿಯದರ್ಶನಮ್ ।
ಅಹಮದ್ಯೋಪಯೋಕ್ಷ್ಯಾಮಿ ವಿಧಾನಂ ಪಶ್ಯ ಯಾದೃಶಮ್ ॥೧೫॥

ಒಂದು ಪಕ್ಷ ಈ ದಿನ ನಾನು ಅವಧ್ಯನಾದ ಪ್ರಿಯದರ್ಶನನಾದ ನನ್ನ ವಂಶದವನೇ ಆದ ನಿನ್ನನ್ನು ಭಕ್ಷಿಸುವುದಾದರೆ ದೈವವಿಧಾನವು ಯಾವ ರೀತಿ ಇದೆ ಎಂದು ನೋಡು.

ನ ಹಿ ಮೇ ಮುಚ್ಯತೇ ಕಶ್ಚಿತ್ ಕಥಂಚಿತ್ ಪ್ರಗ್ರಹಂ ಗತಃ ।
ಗಜೋ ವಾ ಮಹಿಷೋ ವಾಪಿ ಷಷ್ಠೇ ಕಾಲೇ ನರೋತ್ತಮ ॥೧೬॥

ಎಲೈ ನರೋತ್ತಮನೇ, ಹಗಲಿನ ಕೊನೆಯ ಆರನೆಯ ಭಾಗದ ಕಾಲದಲ್ಲಿ ಗಜವಾಗಲೀ, ಮಹಿಷವಾಗಲೀ ಯಾರು ನನಗೆ ದೊರೆಯುತ್ತಾರೋ ಅವರು ಯಾರೂ ನನ್ನಿಂದ ಬಿಡಿಸಿಕೊಳ್ಳಲು ಸಾಧ್ಯವಿಲ್ಲ.

ನಾಸಿ ಕೇವಲಸರ್ಪೇಣ ತಿರ್ಯಗ್ಯೋನಿಷು ವರ್ತತಾ ।
ಗೃಹೀತಃ ಕೌರವಶ್ರೇಷ್ಠ ವರದಾನವಮಿದಂ ಮಮ ॥೧೭॥

ಎಲೈ ಕೌರವಶ್ರೇಷ್ಠನೇ, ನೀನು ತಿರ್ಯಗ್ಯೋನಿಯಲ್ಲಿರುವ ಯಾವುದೋ ಒಂದು ಸರ್ಪದಿಂದ ಗೃಹೀತವಾಗಿಲ್ಲ. ಇದು ನನ್ನ ವರದಾನ.

ಪತತಾ ಹಿ ವಿಮಾನಾಗ್ರ್ಯಾನ್ಮಯಾ ಶಕ್ರಾಸನಾದ್ ದ್ರುತಮ್ ।
ಕುರು ಶಾಪಾಂತಮಿತ್ಯುಕ್ತೋ ಭಗವಾನ್ ಮುನಿಸತ್ತಮಃ ।
ಸ ಮಾಮುವಾಚ ತೇಜಸ್ವೀ ಕೃಪಯಾಽಭಿಪರಿಪ್ಲುತಃ ॥೧೮॥

ಮೋಕ್ಷಸ್ತೇ ಭವಿತಾ ರಾಜನ್ ಕಸ್ಮಾಚ್ಚಿತ್ ಕಾಲಪರ್ಯಯಾತ್ ॥೧೯॥

ನಾನು ಇಂದ್ರನ ಉಪ್ಪರಿಗೆಯ ಮೇಲಿಂದ ಇಂದ್ರನ ಆಸನದಿಂದ ಶೀಘ್ರವಾಗಿ ಬೀಳುವಾಗ ಶಾಪವಿಮೋಕ್ಷವನ್ನು ಮಾಡಿ ಎಂದು ಕೇಳಲ್ಪಟ್ಟ ಪೂಜ್ಯರೂ ತೇಜಸ್ವಿಗಳೂ ಆದ ಮುನಿಶ್ರೇಷ್ಠರು ದಯದಿಂದ ಕೂಡಿದವರಾಗಿ ನನ್ನನ್ನು ಕುರಿತು ಎಲೈ ರಾಜನೇ, ಕೆಲವು ಕಾಲವು ಕಳೆದ ಮೇಲೆ ನಿನಗೆ ಶಾಪದಿಂದ ಮೋಕ್ಷವುಂಟಾಗುವುದು ಎಂದು ಹೇಳಿದರು.

ತತೋಽಸ್ಮಿ ಪತಿತೋ ಭೂಮೌ ನ ಚ ಮಾಮಜಹಾತ್ ಸ್ಮೃತಿಃ ।
ಸ್ಮಾರ್ತಮಸ್ತಿ ಪುರಾಣಂ ಮೇ ಯಥೈವಾಧಿಗತಂ ತಥಾ ॥೨೦॥

ಆಗ ನಾನು ಭೂಮಿಯಲ್ಲಿ ಬಿದ್ದೆ. ಆದರೆ ನನಗೆ ಸ್ಮೃತಿಯು ನಾಶಹೊಂದಲಿಲ್ಲ. ನಾನು ಹಿಂದೆ ಏನೇನು ಅನುಭವಿಸಿದ್ದೆನೋ, ಪ್ರಾಚೀನವಾದ ಆ ಘಟನೆಯೆಲ್ಲವೂ ನನ್ನ ಸ್ಮೃತಿಯಲ್ಲಿದೆ.

ಯಸ್ತು ತೇ ವ್ಯಾಹೃತಾನ್ ಪ್ರಶ್ನಾನ್ ಪ್ರತಿಬ್ರೂಯಾದ್ ವಿಭಾಗವಿತ್ ।
ಸ ತ್ವಾಂ ಮೋಕ್ಷಯಿತಾ ಶಾಪಾದಿತಿ ಮಾಮಬ್ರವೀದೃಷಿಃ ॥೨೧॥

ಯಾವ ವಿಶೇಷಜ್ಞನಾದವನು ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಳುತ್ತಾನೋ ಅವನು ನಿನ್ನನ್ನು ಶಾಪದಿಂದ ಬಿಡಿಸುವನು ಎಂದು ಅಗಸ್ತ್ಯಋಷಿಗಳು ನನಗೆ ಹೇಳಿದರು.

ಗೃಹೀತಸ್ಯ ತ್ವಯಾ ರಾಜನ್ ಪ್ರಾಣಿನೋಽಪಿ ಬಲೀಯಸಃ ।
ಸತ್ತ್ವ ಭ್ರಂಶೋಽಧಿಕಸ್ಯಾಪಿ ಸರ್ವಸ್ಯಾಶು ಭವಿಷ್ಯತಿ ॥೨೨॥

ಎಲೈ ರಾಜನೇ, ನೀನು ಯಾವ ಪ್ರಾಣಿಯನ್ನು ಹಿಡಿಯುತ್ತೀಯೋ ಅದು ನಿನಗಿಂತ ಅಧಿಕ ಬಲವುಳ್ಳದ್ದಾದರೂ ನೀನು ಹಿಡಿದ ತಕ್ಷಣ ಅದಕ್ಕೆ ಆ ಬಲದ ಭ್ರಂಶವು ಶೀಘ್ರವಾಗಿ ಉಂಟಾಗುವುದು.

ಇತಿ ಚಾಪ್ಯಹಮಶ್ರೌಷಂ ವಚಸ್ತೇಷಾಂ ದಯಾವತಾಮ್ ।
ಮಯಿ ಸಂಜಾತಹಾರ್ದಾನಾಮಥ ತೇಽಂತರ್ಹಿತಾ ದ್ವಿಜಾಃ ॥೨೩॥

ಹೀಗೆ ನನ್ನಲ್ಲಿ ಪ್ರೀತಿ ಉಂಟಾದ ದಯಾವಂತರಾದ ಆ ಋಷಿಗಳ ಮಾತನ್ನು ನಾನು ಕೇಳಿದೆನು. ಅನಂತರ ಎಲ್ಲಾ ಋಷಿಗಳೂ ಅಂತರ್ಧಾನವನ್ನು ಹೊಂದಿದರು.

ಸೋಽಹಂ ಪರಮದುಷ್ಕರ್ಮಾ ವಸಾಮಿ ನಿರಯೇಽಶುಚೌ ।
ಸರ್ಪಯೋನಿಮಿಮಾಂ ಪ್ರಾಪ್ಯ ಕಾಲಾಕಾಂಕ್ಷೀ ಮಹಾದ್ಯುತೇ ॥೨೪॥

ಎಲೈ ಮಹಾದ್ಯುತಿಯೇ, ನಾನು ಪರಮದುಷ್ಕರ್ಮವನ್ನು ಮಾಡಿ ಅಶುಚಿಯಾದ ನೀಚವಾದ ಈ ಸರ್ಪಯೋನಿಯನ್ನು ಹೊಂದಿ ಶಾಪದ ಮೋಕ್ಷಕಾಲವನ್ನು ನಿರೀಕ್ಷಿಸುತ್ತಾ ವಾಸಮಾಡುತ್ತಿದ್ದೇನೆ (ಎಂದು ಹೇಳಿತು).

ವೈಶಂಪಾಯನಃ

ತಮುವಾಚ ಮಹಾಬಾಹುರ್ಭೀಮಸೇನೋ ಭುಜಂಗಮಮ್ ॥೨೪॥

ನ ಚ ಕುಪ್ಯೇ ಮಹಾಸರ್ಪ ನ ಚಾತ್ಮಾನಂ ವಿಗರ್ಹಯೇ ॥೨೫॥

ವೈಶಂಪಾಯನ– ಆಗ ಮಹಾಬಾಹುವಾದ ಭೀಮಸೇನನು ಸರ್ಪವನ್ನು ಕುರಿತು ಎಲೈ ಮಹಾಸರ್ಪವೇ, ನನಗೆ ನಿನ್ನ ಮೇಲೆ ಕೋಪವೂ ಇಲ್ಲ ಮತ್ತು ನನ್ನ ಮೇಲೆ ನಿಂದನೆಯೂ ಇಲ್ಲ ಎಂದು ಹೇಳಿದನು.

ಯಸ್ಮಾದಭಾವೀ ಭಾವೀ ವಾ ಮನುಷ್ಯಃ ಸುಖದುಃಖಯೋಃ ।
ಆಗಮೇ ಯದಿ ವಾಽಪಾಯೇ ನ ತತ್ರ ಗ್ಲಪಯೇನ್ಮನಃ ॥೨೬॥

ಮನುಷ್ಯನು ಸುಖದುಃಖಗಳನ್ನು ಸಂಪಾದನೆ ಮಾಡಲು ಅಥವಾ ಪರಿತ್ಯಾಗ ಮಾಡಲು ಸ್ವತಃ ಸಮರ್ಥನಲ್ಲವಾದ್ದರಿಂದ ಆ ವಿಷಯದಲ್ಲಿ ಮನಸ್ಸಿನಲ್ಲಿ ವಿಷಾದವನ್ನು ಮಾಡಬಾರದು.

ದೈವಂ ಪುರುಷಕಾರೇಣ ಕೋ ವಂಚಯಿತುಮರ್ಹತಿ ।
ದೈವಮೇವ ಪರಂ ಮನ್ಯೇ ಪುರುಷಾರ್ಥೋ ನಿರರ್ಥಕಃ ॥೨೭॥

ಪುರುಷಪ್ರಯತ್ನದಿಂದ ಯಾರು ದೈವವನ್ನು ವಂಚಿಸಲು ಸಾಧ್ಯ ? ನಾನು ದೈವವೇ ಪರವೆಂದು ತಿಳಿಯುತ್ತೇನೆ. ಪುರುಷಪ್ರಯತ್ನವು ನಿರರ್ಥಕವಾದುದು.

ಪಶ್ಯ ದೈವೋಪಘಾತಾದ್ಧಿ ಭುಜವೀರ್ಯಮುಪಾಶ್ರಯಮ್ ।
ಇಮಾಮವಸ್ಥಾಂ ಸಂಪ್ರಾಪ್ತಮನಿಮಿತ್ತಮಿಹಾದ್ಯ ಮಾಮ್ ॥೨೮॥

ದೈವವು ಪ್ರತಿಕೂಲವಾಗಿರುವುದರಿಂದ ನನ್ನ ಭುಜವೀರ್ಯವನ್ನು ಅವಲಂಬಿಸಿದ ನಾನು ನಿಷ್ಕಾರಣವಾಗಿ ಇಂತಹ ಅವಸ್ಥೆಯನ್ನು ಹೊಂದಿರುವುದನ್ನು ನೋಡು.

ಕಿಂತು ನಾದ್ಯಾನುಶೋಚಾಮಿ ತಥಾಽಽತ್ಮಾನಂ ವಿನಾಶಿತಮ್ ।
ಯಥಾ ನು ವಿಪಿನೇ ನ್ಯಸ್ತಾನ್ ಭ್ರಾತೄನ್ ರಾಜ್ಯಪರಿಚ್ಯುತಾನ್ ॥೨೯॥

ಆದರೆ ನಾನು ಕಾಡಿನಲ್ಲಿರುವ ನನ್ನ ಸಹೋದರನನ್ನು ಕುರಿತು ಶೋಕಪಡುವಂತೆ ನನ್ನ ವಿನಾಶವನ್ನು ಕುರಿತು ನಾನು ಶೋಕಪಡುವುದಿಲ್ಲ.

ಹಿಮವಾಂಶ್ಚ ಸುದುರ್ಗೋಽಯಂ ಯಕ್ಷರಾಕ್ಷಸಸಂಕುಲಃ ।
ಮಾಂ ಸಮುದ್ವೀಕ್ಷಮಾಣಾಸ್ತೇ ಪ್ರಪತಿಷ್ಯಂತಿ ವಿಹ್ವಲಾಃ ॥೩೦॥

ಯಕ್ಷರಾಕ್ಷಸರಿಂದ ತುಂಬಿದ ಈ ಹಿಮಾಲಯಪರ್ವತವು ಬಹಳ ದುರ್ಗಮವಾದುದು. ಅಲ್ಲಿ ಅವರು ನನ್ನನ್ನು ನಿರೀಕ್ಷಿಸುತ್ತಾ ವಿಹ್ವಲರಾಗಿ ಬಿದ್ದುಹೋಗುವರು.

ವಿನಷ್ಟಮಥ ಮಾಂ ಶ್ರುತ್ವಾ ಭವಿಷ್ಯಂತಿ ನಿರುದ್ಯಮಾಃ ।
ಧರ್ಮಶೀಲಾ ಮಯಾ ತೇ ಹಿ ಬಾಧ್ಯಂತೇ ರಾಜ್ಯಗೃದ್ಧಿನಾ ॥೩೧॥

ಮತ್ತು ನಾನು ನಾಶಹೊಂದಿದ ವಾರ್ತೆಯನ್ನು ಕೇಳಿ ಅವರು ನಿರುದ್ಯೋಗಿಗಳಾಗುವರು. ರಾಜ್ಯದ ಆಸೆಯಿಂದ ನಾನು ಧರ್ಮಶೀಲರಾದ ಅವರನ್ನು ಬಾಧಿಸಿದಂತಾಗುತ್ತದೆ.

ಅಥವಾ ನಾರ್ಜುನೋ ಧೀಮಾನ್ ವಿಷಾದಮುಪಯಾಸ್ಯತಿ ।
ಸರ್ವಾಸ್ತ್ರವಿದನಾಧೃಷ್ಯೋ ದೇವಗಂಧರ್ವರಾಕ್ಷಸೈಃ ॥೩೨॥

ಅಥವಾ ಎಲ್ಲ ಅಸ್ತ್ರಗಳನ್ನು ಹೊಂದಿದ, ದೇವಗಂಧರ್ವರಾಕ್ಷಸರಿಂದ ಸೋಲದಿರುವ, ಮೇಧಾವಿಯಾದ ಅರ್ಜುನನು ವಿಷಾದವನ್ನು ಹೊಂದುವುದಿಲ್ಲ.

ಸಮರ್ಥಃ ಸ ಮಹಾಬಾಹುರೇಕೋಽಪಿ ಸುಮಹಾಬಲಃ ।
ದೇವರಾಜಮಪಿ ಸ್ಥಾನಾತ್ ಪ್ರಚ್ಯಾವಯಿತುಮಂಜಸಾ ॥೩೩॥

ಸುಮಹಾಬಲವುಳ್ಳ ಮಹಾಬಾಹುವಾದ ಅವನು ದೇವರಾಜನಾದ ಇಂದ್ರನನ್ನೂ ಸಹ ಅವನ ಸ್ಥಾನದಿಂದ ವಿಹೀನನನ್ನಾಗಿ ಮಾಡಲು ಚೆನ್ನಾಗಿ ಸಮರ್ಥನಾಗಿದ್ದಾನೆ.

ಕಿಂ ಪುನರ್ಧೃತರಾಷ್ಟ್ರಸ್ಯ ಪುತ್ರಂ ದುರ್ಯೋತದೇವಿನಮ್ ।
ವಿದ್ವಿಷ್ಟಂ ಸರ್ವಲೋಕಸ್ಯ ದಂಭಮೋಹಪರಾಯಣಮ್ ॥೩೪॥

ಹೀಗಿರುವ ಡಂಭಮೋಹಗಳನ್ನೇ ಆಶ್ರಯಿಸಿದ, ಎಲ್ಲರ ದ್ವೇಷಕ್ಕೆ ಪಾತ್ರನಾದ, ಕೆಟ್ಟ ಜೂಜನ್ನು ಆಡಿದ, ಧೃತರಾಷ್ಟ್ರನ ಪುತ್ರನ ವಿಷಯದಲ್ಲಿ ಹೇಳುವುದೇನು?

ಮಾತರಂ ಚೈವ ಶೋಚಾಮಿ ಕೃಪಣಾಂ ಪುತ್ರಗೃದ್ಧಿನೀಮ್ ।
ಯಾऽಸ್ಮಾಕಂ ನಿತ್ಯಮಾಶಾಸ್ತೇ ಮಹತ್ತ್ವಮಧಿಕಂ ಪರೈಃ ॥೩೫॥

ಮತ್ತು ಯಾವಳು ನಿತ್ಯವಾಗಿ ಬೇರೆಯವರಿಗಿಂತ ಹೆಚ್ಚಿದ ನಮ್ಮ ಅಭ್ಯುದಯವನ್ನು ಯಾವಾಗಲೂ ಬಯಸುತ್ತಾಳೆಯೋ ಅಂತಹ ಪುತ್ರವತ್ಸಲೆಯಾದ ಕೃಪಣಳಾದ ತಾಯಿಯನ್ನು ಕುರಿತು ಶೋಕಪಡುತ್ತೇನೆ.

ತಸ್ಯಾಃ ಕಥಂ ತ್ವನಾಥಾಯಾ ಮದ್ವಿನಾಶಾದ್ ಭುಜಂಗಮ ।
ಸಫಲಾಸ್ತೇ ಭವಿಷ್ಯಂತಿ ಮಯಿ ಸರ್ವೇ ಮನೋರಥಾಃ ॥೩೬॥

ಎಲೈ ಭುಜಂಗಮನೇ, ನನ್ನ ವಿನಾಶದಿಂದ ಅನಾಥಳಾದ ಅವಳು ನನ್ನಲ್ಲಿ ಇಟ್ಟುಕೊಂಡಿರುವ ಎಲ್ಲಾ ಮನೋರಥಗಳು ಹೇಗೆ ಸಫಲವಾಗುವುವು?

ನಕುಲಃ ಸಹದೇವಶ್ಚ ಯಮೌ ಚ ಗುರುವರ್ತಿನೌ ।
ಮದ್ಬಾಹುಬಲಸಂಗುಪ್ತೌ ನಿತ್ಯಂ ಪುರುಷಮಾನಿನೌ ॥೩೭॥

ತಮ್ಮ ಪರಾಕ್ರಮದಲ್ಲಿ ವಿಶ್ವಾಸವುಳ್ಳ ಅವಳಿಗಳಾದ ನಕುಲಸಹದೇವರಿಬ್ಬರೂ ಹಿರಿಯರಾದ ನಮ್ಮನ್ನು ಅನುಸರಿಸಿಕೊಂಡು ನನ್ನ ಬಾಹುಬಲದಿಂದ ರಕ್ಷಿತರಾಗಿದ್ದಾರೆ.

ಭವಿಷ್ಯತೋ ನಿರುತ್ಸಾಹೌ ಭ್ರಷ್ಟವೀರ್ಯಪರಾಕ್ರಮೌ ।
ಮದ್ವಿನಾಶಾತ್ ಪರಿದ್ಯೂನಾವಿತಿ ಮೇ ವರ್ತತೇ ಮತಿಃ ॥೩೮॥

ನಾನು ವಿನಾಶಹೊಂದಿದರೆ ಅವರೂ ತಮ್ಮ ವೀರ್ಯಪರಾಕ್ರಮಗಳನ್ನು ಕಳೆದುಕೊಂಡು ನಿರುತ್ಸಾಹರಾಗಿ ನಾಶವನ್ನು ಹೊಂದುವರು ಎಂದು ನನಗೆ ತೋರುತ್ತದೆ (ಎಂದು ಹೇಳಿದನು).

ವೈಶಂಪಾಯನಃ

ಏವಂವಿಧಂ ಬಹು ತದಾ ವಿಲಲಾಪ ವೃಕೋದರಃ ।
ಭುಜಂಗಭೋಗಸಂರುದ್ಧೋ ನಾಶಕಚ್ಚ ವಿಚೇಷ್ಟಿತುಮ್ ॥೩೯॥

ವೈಶಂಪಾಯನ– ಹೀಗೆ ವೃಕೋದರನು ಬಹುವಿಧವಾಗಿ ವಿಲಾಪವನ್ನು ಮಾಡಿದನು. ಸರ್ಪಶರೀರದಿಂದ ಗೃಹೀತನಾಗಿ ಅವನಿಗೆ ಅಲುಗಾಡಲೂ ಸಾಧ್ಯವಾಗಲಿಲ್ಲ.

ಯುಧಿಷ್ಠಿರಸ್ತು ಕೌಂತೇಯೋ ಬಭೂವಾಸ್ವಸ್ಥಚೇತನಃ ।
ಅನಿಷ್ಟದರ್ಶನಾನ್ ಘೋರಾನುತ್ಪಾತಾನ್ ಪರಿಚಿಂತಯನ್ ॥೪೦॥

ಕುಂತೀಪುತ್ರನಾದ ಯುಧಿಷ್ಠಿರನಾದರೂ ಅಪಶಕುನಗಳನ್ನು ನೋಡಿ ಘೋರವಾದ ಅನರ್ಥವನ್ನು ಚಿಂತಿಸುತ್ತಾ ಮನಸ್ಸಿನಲ್ಲಿ ಅಸ್ವಸ್ಥನಾದನು.

ದಾರುಣಂ ಹ್ಯಶಿವಂ ನಾದಂ ಶಿವಾ ದಕ್ಷಿಣತಃ ಸ್ಥಿತಾ ।
ದೀಪ್ತಾಯಾಂ ದಿಶಿ ವಿತ್ರಸ್ತಾ ರೌತಿ ತಸ್ಯಾಶ್ರಮಸ್ಯ ಹ ॥೪೧॥

ಅವನ ಬಲಭಾಗದಲ್ಲಿದ್ದ ಹೆಣ್ಣುನರಿಗಳು ದಾರುಣವಾದ ಅಮಂಗಳವಾದ ನಾದವನ್ನು ಮಾಡಿದವು. ದಿಕ್ಕುಗಳು ಉರಿಯುತ್ತಿರುವುದನ್ನು ನೋಡಿ ಹೆದರಿದ ಹೆಣ್ಣು ನರಿಯು ಅವನ ಆಶ್ರಮದ ಬಳಿ ಅತ್ತಂತೆ ಕಿರುಚಿತು.

ಏಕಪಕ್ಷಾಕ್ಷಿಚರಣಾ ವರ್ತಿಕಾ ಘೋರದರ್ಶನಾ ।
ರಕ್ತಂ ವಮಂತೀ ದದೃಶೇ ಪ್ರತ್ಯಾದಿತ್ಯಮಭಾಸುರಾ ॥೪೨॥

ಒಂದು ಕಣ್ಣು, ಒಂದು ಪಾದ ಮತ್ತು ಒಂದು ರೆಕ್ಕೆಯುಳ್ಳ ನೋಡಲು ಭಯಂಕರವಾದ ಮತ್ತು ಅಮಂಗಳವಾದ ವರ್ತಿಕಾ ಪಕ್ಷಿಯು ಸೂರ್ಯನಿಗೆ ಎದುರಾಗಿ ರಕ್ತವನ್ನು ಕಾರುವುದು ಕಂಡುಬಂದಿತು.

ಪ್ರವವೌ ಚಾನಿಲೋ ರೂಕ್ಷಶ್ಚಂಡಃ ಶರ್ಕರಕರ್ಷಣಃ ।
ಅಪಸವ್ಯಾನಿ ಸರ್ವಾಣಿ ಮೃಗಪಕ್ಷಿರುತಾನಿ ಚ ॥೪೩॥

ವಾಯುವು ಒರಟಾಗಿ ಮರಳಿನ ಕಣಗಳನ್ನು ಎಳೆದುಕೊಂಡು ಕ್ರೂರವಾಗಿ ಬೀಸಿತು. ಎಲ್ಲ ಮೃಗಪಕ್ಷಿಗಳ ನಾದವು ಅವನಿಗೆ ಅಪಸವ್ಯವಾದವು.

ಪೃಷ್ಠತೋ ವಾಯಸಃ ಕೃಷ್ಣೋ ಯಾಹಿ ಯಾಹೀತಿ ಶಂಸತಿ ।
ಮುಹುರ್ಮುಹುಃ ಸ್ಫುರತಿ ಚ ದಕ್ಷಿಣೋಽಸ್ಯ ಭುಜಸ್ತಥಾ ॥೪೪॥

ಅವನ ಹಿಂದುಗಡೆಯಿಂದ ಕಪ್ಪಾದ ಕಾಗೆಯು ಹೋಗು ಹೋಗು ಎಂದು ಕಿರುಚಿತು. ಅವನ ಬಲಭುಜವು ಪುನಃ ಪುನಃ ಅದುರಿತು.

ಹೃದಯಂ ಚರಣಶ್ಚಾಪಿ ವಾಮೋಽಸ್ಯ ಪರಿತಪ್ಯತಿ ।
ಸವ್ಯಸ್ಯಾಕ್ಷ್ಣೋ ವಿಕಾರಶ್ಚಾಪ್ಯನಿಷ್ಟಃ ಸಮಪದ್ಯತ ॥೪೫॥

ಅವನ ಎದೆ ಮತ್ತು ಎಡಪಾದಗಳು ಇದ್ದಕ್ಕಿದ್ದಂತೆ ಬಿಸಿಯಾದವು. ಎಡಗಣ್ಣಿನಲ್ಲಿ ಅನಿಷ್ಟವಾದ ವಿಕಾರವು (ಅದರುವಿಕೆಯು) ಉಂಟಾಯಿತು.

ಧರ್ಮರಾಜೋಽಪಿ ಮೇಧಾವೀ ಮನ್ಯಮಾನೋ ಮಹದ್ಭಯಮ್ ।
ದ್ರೌಪದೀಂ ಪರಿಪಪ್ರಚ್ಛ ಕ್ವ ಭೀಮ ಇತಿ ಭಾರತ ॥೪೬॥

ಎಲೈ ಭಾರತನೇ, ಮೇಧಾವಿಯಾದ ಧರ್ಮರಾಜನೂ ಸಹ ದೊಡ್ಡ ಭಯವು ಉಪಸ್ಥಿತವಾಗಿದೆ ಎಂದು ತಿಳಿದು ದ್ರೌಪದಿಯನ್ನು ಕುರಿತು ಭೀಮನು ಎಲ್ಲಿದ್ದಾನೆ ಎಂದು ಕೇಳಿದನು.

ಶಶಂಸ ತಸ್ಮೈ ಪಾಂಚಾಲೀ ಚಿರಯಾತಂ ವೃಕೋದರಮ್ ।
ಕಥಯಾಮಾಸ ತತ್ಸರ್ವಂ ಮೃಗಾನ್ ಹಂತುಮಿತೋ ಗತಮ್ ।
ಸ ಪ್ರತಸ್ಥೇ ಮಹಾಬಾಹುರ್ಧೌಮ್ಯೇನ ಸಹಿತೋ ನೃಪಃ ॥೪೭॥

ಪಾಂಚಾಲಿಯೂ ಸಹ ಮೃಗಗಳನ್ನು ಬೇಟೆಯಾಡಲು ವೃಕೋದರನು ಹೊರಟು ಬಹುಕಾಲವಾಗಿದೆ ಎಂಬ ಎಲ್ಲ ವಿಷಯಗಳನ್ನೂ ಅವನಿಗೆ ತಿಳಿಸಿದಳು.

ತಚ್ಛ್ರುತ್ವಾ ತ್ವರಿತೋ ರಾಜಾ ಭೃಶಮುದ್ವಿಗ್ನಮಾನಸಃ ॥೪೮॥

ಅದನ್ನು ಕೇಳಿ ಮನಸ್ಸಿನಲ್ಲಿ ಉದ್ವೇಗವನ್ನು ಹೊಂದಿದ ಮಹಾಬಾಹುವಾದ ಧರ್ಮರಾಜನು ಧೌಮ್ಯರಿಂದ ಕೂಡಿಕೊಂಡು ಶೀಘ್ರವಾಗಿ ಹೊರಟನು.

ದ್ರೌಪದ್ಯಾ ರಕ್ಷಣಂ ಕಾರ್ಯಮಿತ್ಯುವಾಚ ಧನಂಜಯಮ್ ।
ನಕುಲಂ ಸಹದೇವಂ ಚ ವ್ಯಾದಿದೇಶ ದ್ವಿಜಾನ್ ಪ್ರತಿ ॥೪೯॥

ನೀನು ದ್ರೌಪದಿಯ ರಕ್ಷಣೆಯನ್ನು ಮಾಡಬೇಕು ಎಂದು ಅರ್ಜುನನಿಗೆ ಹೇಳಿದನು. ನಕುಲಸಹದೇವರಿಗೆ ಬ್ರಾಹ್ಮಣರ ರಕ್ಷಣೆಯ ವಿಷಯದಲ್ಲಿ ಆದೇಶವನ್ನು ನೀಡಿದನು.

ಸ ತಸ್ಯ ಪದಮುನ್ನೀಯ ತಸ್ಮಾದೇವಾಶ್ರಮಾತ್ ಪ್ರಭುಃ ।
ದದರ್ಶ ಪೃಥಿವೀಂ ಚಿಹ್ನೈರ್ಭೀಮಸ್ಯ ಪರಿಚಿಹ್ನಿತಾಮ್ ॥೫೦॥

ಪ್ರಭುವಾದ ಅವನು ಭೀಮಸೇನನ ಪಾದಗಳನ್ನು ಗಮನಿಸಿ ಆಶ್ರಮದಿಂದ ಹೊರಟು ಭೂಮಿಯ ಮೇಲೆ ಮೂಡಿದ ಭೀಮಸೇನನ ಪಾದಚಿಹ್ನೆಗಳನ್ನು ನೋಡಿದನು.

ಮೃಗಯಾಮಾಸ ಕೌಂತೇಯೋ ಭೀಮಸೇನಂ ಮಹಾವನೇ ।
ಸ ಪ್ರಾಚೀಂ ದಿಶಮಾಸ್ಥಾಯ ಮಹತೋ ಗಜಯೂಥಪಾನ್ ॥೫೦.೧॥

ತತೋ ಮೃಗಸಹಸ್ರಾಣಿ ಮೃಗೇಂದ್ರಾಣಾಂ ಶತಾನಿ ಚ ।
ಪತಿತಾನಿ ವನೇ ದೃಷ್ಟ್ವಾ ಮಾರ್ಗಂ ತಸ್ಯಾವಿಶನ್ನೃಪಃ ॥೫೦.೨॥

ಕೌಂತೇಯನಾದ ಅವನು ಮಹಾವನದಲ್ಲಿ ಭೀಮಸೇನನನ್ನು ಹುಡುಕಿದನು. ಅವನು ಪೂರ್ವದಿಕ್ಕಿನಲ್ಲಿ ಹೋಗಿ ದೊಡ್ಡ ಗಜಸಮೂಹಗಳು, ಸಾವಿರಾರು ಮೃಗಗಳು, ನೂರಾರು ಸಿಂಹಗಳು ಸತ್ತುಬಿದ್ದಿರುವುದನ್ನು ನೋಡಿ ಆ ಮಾರ್ಗದಲ್ಲಿ ಮುಂದೆ ಸಾಗಿದನು.

ಧಾವತಸ್ತಸ್ಯ ವೀರಸ್ಯ ಮೃಗಾರ್ಥಂ ವಾತರಂಹಸಃ ।
ಊರುವಾತವಿನಿರ್ಭಗ್ನಾ ದ್ರುಮಾ ವ್ಯಾವರ್ಜಿತಾಃ ಪಥಿ ॥೫೧॥

ಮೃಗಗಳನ್ನು ಹಿಂಬಾಲಿಸಿ ವಾಯುವೇಗದಿಂದ ಓಡುವ ಆ ಭೀಮಸೇನನ ತೊಡೆಗಳಿಂದ ಉಂಟಾದ ವಾಯುವಿನಿಂದ ಭಗ್ನವಾದ ವೃಕ್ಷಗಳು ದಾರಿಯಲ್ಲಿ ಬಿದ್ದಿದ್ದವು.

ಸ ಗತ್ವಾ ತೈಸ್ತದಾ ಚಿಹ್ನೈರ್ದದರ್ಶ ಗಿರಿಗಹ್ವರೇ ।
ಗೃಹೀತಂ ಭುಜಗೇಂದ್ರೇಣ ನಿಶ್ಚೇಷ್ಟಮನುಜಂ ತದಾ ॥೫೨॥

ಅವನು ಆ ಚಿಹ್ನೆಗಳನ್ನು ಅನುಸರಿಸಿಕೊಂಡು ಮುಂದೆ ನಡೆದು ಒಂದು ಕಣಿವೆಯಲ್ಲಿ ಭುಜಗೇಂದ್ರನಿಂದ ಹಿಡಿಯಲ್ಪಟ್ಟ ತನ್ನ ತಮ್ಮನನ್ನು ನೋಡಿದನು.

ರೂಕ್ಷಮಾರುತಭೂಯಿಷ್ಠೇ ನಿಷ್ಪತ್ರದ್ರುಮಸಂಕುಲೇ ।
ಈರಿಣೇ ನಿರ್ಜಲೇ ದೇಶೇ ಕಂಟಕಿದ್ರುಮಸಂಕುಲೇ ।
ಅಶ್ಮಸ್ಥಾಣುಕ್ಷುಪಾಕೀರ್ಣೇ ಸುದುರ್ಗೇ ವಿಷಮೋತ್ಕಟೇ ॥೫೨.೧॥

ಚಂಡಮಾರುತದಿಂದ ಕೂಡಿದ, ಪತ್ರಗಳಿಲ್ಲದ ವೃಕ್ಷಗಳು ನಿಬಿಡವಾಗಿದ್ದ, ನಿರ್ಜಲವಾದ, ಮುಳ್ಳಿನ ಮರಗಳಿಂದ ತುಂಬಿದ್ದ, ಕಲ್ಲುಬಂಡೆಗಳು ಮತ್ತು ಪೊದೆಗಳಿಂದ ತುಂಬಿದ್ದ ದುರ್ಗಮವಾದ ಮತ್ತು ಅತ್ಯಂತ ವಿಷಮವಾದ ಮರುಭೂಮಿಯ ಪ್ರದೇಶದಲ್ಲಿ ಭೀಮಸೇನನನ್ನು ನೋಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಅಜಗರಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ಮೂರನೆಯ
ಅಧ್ಯಾಯ ಮುಗಿಯಿತು

★ ★ ★ ★

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಗತೇ ಭೀಮೇ ನಿಮಿತ್ತಾನಿ ದೃಷ್ಟ್ವಾ ರಾಜಾ ಯುಧಿಷ್ಠಿರಃ ।
ಪಪ್ರಚ್ಛ ಕ್ವ ಗತೋ ಭೀಮ ಇತಿ ಕೃಷ್ಣಾಂ ಚಲನ್ಮನಾಃ ॥೩೫೧॥

ಭೀಮ ಹೊರಟು ಹೋದಾಗ ರಾಜಾ ಯುಧಿಷ್ಠಿರ, ಉತ್ಪಾತಗಳನ್ನು ಕಂಡು ಶಂಕಾಗ್ರಸ್ತನಾಗಿ 'ಭೀಮನೆಲ್ಲಿಗೆ ಹೋದನೆ'ಂದು ದ್ರೌಪದಿಯನ್ನು ಕೇಳಿದ.

ಯಾತಂ ಮೃಗಾರ್ಥಂ ಸ ನಿಶಮ್ಯ ರಾಜಾ
ತದೂರುವೇಗಾತ್ ಪತಿತಾನ್ ನಗೇಂದ್ರಾನ್ ।
ದೃಷ್ಟ್ವಾ ಪಥಾ ಯೇನ ಯಯೌ ಸ ತತ್ರ
ದೃಷ್ಟ್ವಾ ಚ ಸರ್ಪಾವೃತಮನ್ವಪೃಚ್ಛತ್ ॥೩೫೨॥

ಭೀಮ ಬೇಟೆಗೆ ಹೋಗಿದ್ದಾನೆ ಎಂದು ಕೇಳಿ ಧರ್ಮರಾಜ ಅವನ ನಡಿಗೆಯ ರಭಸಕ್ಕೆ ತೊಡೆಗಳ ಸ್ಪರ್ಶದಿಂದ ಬಿದ್ದ ದೊಡ್ಡ ಮರಗಳನ್ನು ನೋಡಿ ಆ ಮಾರ್ಗದಿಂದ ನಡೆದ. ಅಲ್ಲಿ ಭೀಮ ಹೆಬ್ಬಾವಿನಿಂದ ಸುತ್ತಲ್ಪಟ್ಟಿದ್ದನ್ನು ಕಂಡು ಕಾರಣವನ್ನು ಕೇಳಿದ.

ಸ ಕಾರಣಂ ನಹುಷಾತ್ ಸರ್ವಮೇವ
ಶುಶ್ರಾವ ತತ್ಪ್ರಶ್ನಮಶೇಷತಶ್ಚ ।
ಭ್ರಾತೃಸ್ನೇಹಾದ್ ವ್ಯಾಚರೋದ್ ಧರ್ಮಸೂನು-
ಸ್ತದೈವ ಸೋಽಪ್ಯಾರುಹತ್ ಸ್ವರ್ಗಲೋಕಮ್ ॥೩೫೩॥

ಧರ್ಮರಾಜ ನಹುಷನಿಂದ ಎಲ್ಲವನ್ನೂ ಕೇಳಿ ತಿಳಿದುಕೊಂಡ. ಸೋದರ ಪ್ರೇಮದಿಂದ ನಹುಷನ ಎಲ್ಲ ಪ್ರಶ್ನೆಗಳನ್ನೂ ಉತ್ತರಿಸಿದ. ಆಗಲೇ ನಹುಷ ಸ್ವರ್ಗಲೋಕಕ್ಕೆ ತೆರಳಿದ.

ದಿವ್ಯಾಂಬರೇ ಕುಂಡಲೀನಿ ಸ್ವಪೂರ್ವೇ
ಗತೇ ವಿಮಾನೇನ ಸ ಧರ್ಮರಾಜಃ ।
ಭೀಮಶ್ಚಾಽಯಾತ್ ಸಾಶ್ರಮಾಯೈವ ಸರ್ವಂ
ಯುಧಿಷ್ಠಿರಃ ಕಥಯಾಮಾಸ ತತ್ರ ॥೩೫೪॥

ದಿವ್ಯ ವಸ್ತ್ರಗಳನ್ನೂ ಕುಂಡಲಗಳನ್ನೂ ಧರಿಸಿದ ತಮ್ಮ ವಂಶದ ಪೂರ್ವಜನಾದ ನಹುಷ ವಿಮಾನದಿಂದ ಸ್ವರ್ಗಕ್ಕೆ ಹೋದಾಗ ಧರ್ಮರಾಜನೂ ಭೀಮನೂ ತಮ್ಮಾಶ್ರಮಕ್ಕೆ ಬಂದರು. ಅಲ್ಲಿ ಎಲ್ಲ ವೃತ್ತಾಂತವನ್ನೂ ಧರ್ಮರಾಜ ಹೇಳಿದ.

ಶ್ರುತ್ವಾ ಕೃಷ್ಣಾ ಭ್ರಾತರಶ್ಚಾಸ್ಯ ಸರ್ವೇ ಸರ್ವೇ
ಮುನೀಂದ್ರಾ ಭೀಮಸೇನೇಽತಿಭಕ್ತಾಃ ।
ವ್ರೀಡಾಂ ಯಯುರ್ಭೀಮಸೇನಗ್ರಹೇಣ
ತಥಾಽಬ್ರುವನ್ ಸ್ನೇಹತೋ ಭೀಮಸೇನಮ್ ॥೩೫೫॥

ನೈತಾದೃಶಂ ಸಾಹಸಂ ತೇಽನುರೂಪಂ
ಶಕ್ತೋಽಪಿ ಯತ್ ಸ್ವಾತ್ಮನೋ ಮೋಕ್ಷಣಾಯ ।
ನೈವಾಽಕರೋ ಯತ್ನಮತೋ ನಿಜಾನಾಂ
ಮಹದ್ ದುಃಖಂ ಹೃದಯೇ ಪ್ರಾರ್ಪಯಸ್ತ್ವಮ್ ॥೩೫೬॥

ಮೈವಂ ಪುನಃ ಕಾರ್ಯಮಿತಿ ಬ್ರುವಂತಃ
ಸಮಾಶ್ಲಿಷನ್ ಸರ್ವ ಏವೈತ್ಯ ಭೀಮಮ್ ।

ತತೋಽಹೋಭಿಃ ಕೈಶ್ಚಿದಾಪುಃ ಕುರೂಣಾಂ
ರಾಷ್ಟ್ರಂ ಪಾರ್ಥಾ ಮುನಿಮುಖ್ಯೈಃ ಸಮೇತಾ ॥೩೫೭॥

ಭೀಮನಲ್ಲಿ ಅತ್ಯಂತ ಭಕ್ತಿಯುಕ್ತರಾದ ದ್ರೌಪದಿಯೂ ಎಲ್ಲ ಸೋದರರೂ ಎಲ್ಲ ಮುನಿಗಳೂ ಭೀಮ ಹಾವಿನ ತೆಕ್ಕೆಯಲ್ಲಿದ್ದ ಬಗ್ಗೆ ನಾಚಿದರು. ಮತ್ತು ಸ್ನೇಹದಿಂದ ಹೇಳಿದರು, 'ಭೀಮ, ಇಂಥ ಸಹನೆ ನಿನಗೆ ತಕ್ಕುದಲ್ಲ. ನೀನು ನಿನ್ನ ಬಿಡುಗಡೆ ಮಾಡಿಕೊಳ್ಳಲು ಶಕ್ತನಾಗಿದ್ದು ಅದಕ್ಕೆ ಪ್ರಯತ್ನ ಮಾಡಲಿಲ್ಲ. ಆ ಮೂಲಕ ನೀನು ನಿನ್ನವರ ಹೃದಯದಲ್ಲಿ ಮಹಾ ಕಳವಳ ಉಂಟು ಮಾಡಿರುವೆ. ಹೀಗೆ ಮತ್ತೆ ನೀನು ಮಾಡಕೂಡದು' ಎಂದು ಹೇಳುತ್ತ ಎಲ್ಲರೂ ಬಂದು ಭೀಮನನ್ನು ಅಪ್ಪಿಕೊಂಡರು. ಬಳಿಕ ಕೆಲವು ದಿನಗಳಲ್ಲಿ ಪಾಂಡವರು ಮುನೀಂದ್ರರಿಂದ ಸಮೇತರಾಗಿ ಕುರುರಾಜ್ಯದಲ್ಲಿರುವ ದ್ವೈತ ವನಕ್ಕೆ ಬಂದರು.

★ ★ ★ ★

ನೂರ ಎಪ್ಪತ್ನಾಲ್ಕನೆಯ ಅಧ್ಯಾಯ

ಸರ್ಪಯುಧಿಷ್ಠಿರ ಸಂವಾದ. ಬ್ರಾಹ್ಮಣ ಜಾತಿ ಮತ್ತು ವೇದ್ಯವಸ್ತುವಿನ ವಿಷಯದಲ್ಲಿ ಪ್ರಶ್ನ ಪ್ರತಿವಚನಗಳು.

ವೈಶಂಪಾಯನಃ

ಯುಧಿಷ್ಠಿರಸ್ತಮಾಸಾದ್ಯ ಸರ್ಪಭೋಗೇನ ವೇಷ್ಟಿತಮ್ ।
ದಯಿತಂ ಭ್ರಾತರಂ ಧೀಮಾನಿದಂ ವಚನಮಬ್ರವೀತ್ ॥೧॥

ಕುಂತೀಮಾತಃ ಕಥಮಿಮಾಮಾಪದಂ ತ್ವಮವಾಪ್ತವಾನ್ ।
ಕಶ್ಚಾಯಂ ಪರ್ವತಾಭೋಗಪ್ರತಿಮಃ ಪನ್ನಗೋತ್ತಮಃ ॥೨॥

ವೈಶಂಪಾಯನ– ಮೇಧಾವಿಯಾದ ಯುಧಿಷ್ಠಿರನು ಸರ್ಪಶರೀರದಿಂದ ಸುತ್ತುವರಿಯಲ್ಪಟ್ಟ ಪ್ರಿಯನಾದ ತಮ್ಮನನ್ನು ಕುರಿತು– 'ಕುಂತೀಪುತ್ರನೇ, ನಿನಗೆ ಈ ಆಪತ್ತು ಹೇಗೆ ಪ್ರಾಪ್ತವಾಯಿತು. ಪರ್ವತಸದೃಶವಾದ ಶರೀರವನ್ನು ಹೊಂದಿರುವ ಈ ಪನ್ನಗೋತ್ತಮನು ಯಾರು?' ಎಂದು ಕೇಳಿದನು.

ಸ ಧರ್ಮರಾಜಮಾಲಕ್ಷ್ಯ ಭ್ರಾತಾ ಭ್ರಾತರಮಗ್ರಜಮ್ ।
ಕಥಯಾಮಾಸ ತತ್ಸರ್ವಂ ಗ್ರಹಣಾದಿವಿಚೇಷ್ಟಿತಮ್ ॥೩॥

ತಮ್ಮನಾದ ಅವನು ಅಣ್ಣನಾದ ಧರ್ಮರಾಜನನ್ನು ಗಮನಿಸಿ ಸರ್ಪದಿಂದ ಗ್ರಹಣವನ್ನು ಹೊಂದಿದ ಎಲ್ಲಾ ವಿಷಯವನ್ನೂ ಹೇಳಿದನು.

ಅಯಮಾರ್ಯ ಮಹಾಸತ್ತ್ವೋ ಭಕ್ಷಾರ್ಥಂ ಮಾಂ ಗೃಹೀತವಾನ್ ।
ನಹುಷೋ ನಾಮ ರಾಜರ್ಷಿಃ ಪ್ರಾಣವಾನಿವ ಸಂಸ್ಥಿತಃ ॥೩.೧॥

ಆರ್ಯನೇ, ಮಹಾಬಲವುಳ್ಳ ಇವನು ಆಹಾರಾರ್ಥವಾಗಿ ನನ್ನನ್ನು ಹಿಡಿದಿದ್ದಾನೆ. ಇವನು ರಾಜರ್ಷಿಯಾದ ನಹುಷ. ಸರ್ಪದಂತೆ ಇದ್ದಾನೆ (ಸರ್ಪವಲ್ಲ).

ಯುಧಿಷ್ಠಿರಃ

ಮುಚ್ಯತಾಮಯಮಾಯುಷ್ಮನ್ ಭ್ರಾತಾ ಮೇಽಮಿತವಿಕ್ರಮಃ ।
ವಯಮಾಹ್ಯಾರಮನ್ಯಂ ತೇ ದಾಸ್ಯಾಮಃ ಕ್ಷುನ್ನಿವಾರಣಮ್ ॥೩.೨॥

ಯುಧಿಷ್ಠಿರ– ಆಯುಷ್ಮಂತನೇ, ಈ ನನ್ನ ಅಮಿತವಿಕ್ರಮನಾದ ತಮ್ಮನನ್ನು ಬಿಟ್ಟುಬಿಡು. ನಾವು ನಿನ್ನ ಹಸಿವನ್ನು ನಿವಾರಿಸಲು ನಿನಗೆ ಬೇರೆ ಆಹಾರವನ್ನು ಕೊಡುವೆವು.

ಸರ್ಪಃ

ಆಹಾರೋ ರಾಜಪುತ್ರೋಽಯಂ ಮಯಾ ಪ್ರಾಪ್ತೋ ಮುಖಾಗತಃ ।
ಗಮ್ಯತಾಂ ನೇಹ ಸ್ಥಾತವ್ಯಂ ಶ್ವೋ ಭವಾನಪಿ ಮೇ ಭವೇತ್ ॥೩.೩॥

ಸರ್ಪ– ಈ ರಾಜಪುತ್ರನು ಈ ದಿನ ನನಗೆ ಆಹಾರವಾಗಿ ನನ್ನ ಮುಖದ ಮುಂದೆ ಬಂದು ಒದಗಿದ್ದಾನೆ. ಇಲ್ಲಿ ನಿಲ್ಲಬೇಡ ಹೊರಟುಹೋಗು. ನಾಳೆ ನೀನೂ ಸಹ ಆಹಾರವಾಗಬಹುದು.

ವ್ರತಮೇತನ್ಮಹಾಬಾಹೋ ವಿಷಯಂ ಮಮ ಯೋ ವ್ರಜೇತ್ ।
ಸ ಮೇ ಭಕ್ಷ್ಯೋ ಭವೇತ್ ತಾತ ತ್ವಂ ಚಾಪಿ ವಿಷಯೇ ಮಮ ॥೩.೪॥

ಎಲೈ ಮಹಾಬಾಹುವೇ, ಯಾರು ನನ್ನ ದೇಶಕ್ಕೆ ಬರುತ್ತಾನೋ ಅವನು ನನಗೆ ಭಕ್ಷವಾಗುತ್ತಾನೆ ಎಂಬುದು ನನ್ನ ವ್ರತ. ಪ್ರೀತಿಪಾತ್ರನೇ, ನೀನೂ ಸಹ ನನ್ನ ದೇಶಕ್ಕೆ ಬಂದಿದ್ದೀಯೆ.

ಚಿರೇಣಾದ್ಯ ಮಯಾऽऽಹಾರಃ ಪ್ರಾಪ್ತೋऽಯಮನುಜಸ್ತವ ।
ನಾಹಮೇನಂ ವಿಮೋಕ್ಷ್ಯಾಮಿ ನ ಚಾನ್ಯಮಭಿಕಾಂಕ್ಷಯೇ ॥೩.೫॥

ಬಹಳ ಕಾಲದ ಮೇಲೆ ನಿನ್ನ ತಮ್ಮನು ನನಗೆ ಆಹಾರವಾಗಿ ಸಿಕ್ಕಿದ್ದಾನೆ. ನಾನು ಇವನನ್ನು ಬಿಡುವುದಿಲ್ಲ ಮತ್ತು ಬೇರೆ ಆಹಾರವನ್ನೂ ಬಯಸುವುದಿಲ್ಲ.

ಯುಧಿಷ್ಠಿರಃ

ದೇವೋ ವಾ ಯದಿ ವಾ ದೈತ್ಯ ಉರಗೋ ವಾ ಭವಾನ್ ಯದಿ ।
ಸತ್ಯಂ ಸರ್ಪ ವಚೋ ಬ್ರೂಹಿ ಪೃಚ್ಛತಿ ತ್ವಾಂ ಯುಧಿಷ್ಠಿರಃ ॥೪॥

ಯುಧಿಷ್ಠಿರ– ಎಲೈ ಸರ್ಪವೇ, ನೀನು ದೇವತೆಯೇ ಅಥವಾ ದೈತ್ಯನೇ ಅಥವಾ ಒಂದುಪಕ್ಷ ಸರ್ಪವೇ ಆಗಿದ್ದೀಯಾ? ಎಂದು ಸತ್ಯವನ್ನು ನುಡಿ. ನಿನ್ನನ್ನು ಯುಧಿಷ್ಠಿರನು ಪ್ರಶ್ನೆಯನ್ನು ಮಾಡುತ್ತಿದ್ದಾನೆ.

ಕಿಮಾಹೃತ್ಯ ವಿದಿತ್ವಾ ವಾ ಪ್ರೀತಿಸ್ತೇ ಸ್ಯಾದ್ ಭುಜಂಗಮ ।
ಕಿಮಾಹಾರಂ ಪ್ರಯಚ್ಛಾಮಿ ಕಥಂ ಮುಂಚೇದ್ ಭವಾನಿಮಮ್ ॥೫॥

ಎಲೈ ಭುಜಂಗಮನೇ, ಏನನ್ನು ತಂದು ಒಪ್ಪಿಸಿದರೆ ನಿನಗೆ ಸಂತೋಷ ಉಂಟಾಗುತ್ತದೆ? ನಿನಗೆ ಯಾವ ಆಹಾರವನ್ನು ಕೊಡಲಿ? ಏನು ಮಾಡಿದರೆ ನೀನು ಇವನನ್ನು ಬಿಡುತ್ತೀಯೆ?

ಸರ್ಪಃ

ನಹುಷೋ ನಾಮ ರಾಜಾऽಹಮಾಸಂ ಪೂರ್ವಸ್ತವಾನಘ ।
ಪ್ರಥಿತಃ ಪಂಚಮಃ ಸೋಮಾದಾಯೋಃ ಪುತ್ರೋ ನರಾಧಿಪ ॥೬॥

ಸರ್ಪ– ಎಲೈ ಅನಘನೇ, ನಾನು ನಿನ್ನ ಪೂರ್ವಿಕನಾದ ನಹುಷನೆಂಬ ರಾಜನಾಗಿದ್ದೆನು. ಎಲೈ ನರಾಧಿಪನೇ, ನಾನು ಚಂದ್ರವಂಶದಲ್ಲಿ ಚಂದ್ರನಿಂದ ಐದನೆಯವನೆಂದು ಪ್ರಖ್ಯಾತನಾಗಿದ್ದವನು. ಮತ್ತು ಆಯುಮಹಾರಾಜನ ಪುತ್ರ.

ಕ್ರತುಭಿಸ್ತಪಸಾ ಚೈವ ಸ್ವಾಧ್ಯಾಯೇನ ದಮೇನ ಚ ।
ತ್ರೈಲೋಕ್ಯೈಶ್ವರ್ಯಮವ್ಯಗ್ರಂ ಪ್ರಾಪ್ತೋಽಹಂ ವಿಕ್ರಮೇಣ ಚ ॥೭॥

ನಾನು ಯಜ್ಞಗಳಿಂದಲೂ, ತಪಸ್ಸಿನಿಂದಲೂ, ವೇದಾಧ್ಯಯನದಿಂದಲೂ, ಇಂದ್ರಿಯನಿಗ್ರಹದಿಂದಲೂ, ಪರಾಕ್ರಮದಿಂದಲೂ ಸಂಪೂರ್ಣವಾದ ತ್ರೈಲೋಕ್ಯೈಶ್ವರ್ಯವನ್ನು ಸಂಪಾದಿಸಿದೆನು.

ತದೈಶ್ವರ್ಯಂ ಸಮಾಸಾದ್ಯ ದರ್ಪೋ ಮಾಮಗಮತ್ ತದಾ ।
ಸಹಸ್ರಂ ಹಿ ದ್ವಿಜಾತೀನಾಮುವಾಹ ಶಿಬಿಕಾಂ ಮಮ ॥೮॥

ಆ ಐಶ್ವರ್ಯವನ್ನು ಹೊಂದಿದ ನನಗೆ ಆಗ ದರ್ಪವುಂಟಾಯಿತು. ಒಂದು ಸಹಸ್ರ ಋಷಿಗಳು ನನ್ನ ಪಲ್ಲಕ್ಕಿಯನ್ನು ಹೊರುತ್ತಿದ್ದರು.

ಐಶ್ವರ್ಯಮದಮತ್ತೋಽಹಮವಮನ್ಯ ತತೋ ದ್ವಿಜಾನ್ ।
ಇಮಾಮಗಸ್ತ್ಯೇನ ದಶಾಮಾನೀತಃ ಪೃಥಿವೀಪತೇ ॥೯॥

ಎಲೈ ರಾಜನೇ, ಐಶ್ವರ್ಯಮದಮತ್ತನಾದ ನಾನು ಹಾಗೆ ಬ್ರಾಹ್ಮಣರನ್ನು ಅವಮಾನ ಮಾಡಿದಾಗ ಅಗಸ್ತ್ಯರು ನನಗೆ ಈ ಅವಸ್ಥೆಯನ್ನು ತಂದುಕೊಟ್ಟರು.

ನ ತು ಮಾಮಜಹಾತ್ ಪ್ರಜ್ಞಾ ಯಾವದದ್ಯೇತಿ ಪಾಂಡವ ।
ತಸ್ಯೈವಾನುಗ್ರಹಾದ್ ರಾಜನ್ನಗತಸ್ಯಸ್ಯ ಮಹಾತ್ಮನಃ ॥೧೦॥

ಎಲೈ ಪಾಂಡವನೇ, ರಾಜನೇ, ಆದರೆ ಅದೇ ಮಹತ್ಮರಾದ ಅಗಸ್ತ್ಯರ ಅನುಗ್ರಹದಿಂದ ನನಗೆ ಇಲ್ಲಿಯವರೆಗೆ ಹಿಂದಿನ ಸ್ಮರಣೆಯು ನಷ್ಟವಾಗಲಿಲ್ಲ.

ಷಷ್ಠೇ ಕಾಲೇ ಮಯಾಽಽಹಾರಃ ಪ್ರಾಪ್ತೋಽಯಮನುಜಸ್ತವ ।
ನಾಹಮೇನಂ ವಿಮೋಕ್ಷ್ಯಾಮಿ ನ ಚಾನ್ಯದಪಿ ಕಾಮಯೇ ॥೧೧॥

ನಿನ್ನ ತಮ್ಮನು ಹಗಲಿನ ಕೊನೆಯ ಆರನೆಯ ಭಾಗದಲ್ಲಿ ನನಗೆ ಆಹಾರವಾಗಿ ಪ್ರಾಪ್ತನಾಗಿದ್ದಾನೆ. ನಾನು ಇವನನ್ನು ಬಿಡುವುದಿಲ್ಲ ಮತ್ತು ಬೇರೆ ಆಹಾರವನ್ನೂ ಬಯಸುವುದಿಲ್ಲ.

ಪ್ರಶ್ನಾನುಚ್ಚಾರಿತಾನದ್ಯ ವ್ಯಾಹರಿಷ್ಯಸಿ ಚೇನ್ಮಮ ।
ಅಥ ಪಶ್ಚಾದ್ ವಿಮೋಕ್ಷ್ಯಾಮಿ ಭ್ರಾತರಂ ತೇ ವೃಕೋದರಮ್ ॥೧೨॥

ಒಂದುಪಕ್ಷ ನಾನು ಕೇಳಿದ ಪ್ರಶ್ನೆಗಳಿಗೆ ನೀನು ಉತ್ತರವನ್ನು ಕೊಡುವುದಾದರೆ ಅನಂತರ ನಿನ್ನ ತಮ್ಮನಾದ ವೃಕೋದರನನ್ನು ಬಿಡುಗಡೆಗೊಳಿಸುತ್ತೇನೆ.

ಯುಧಿಷ್ಠಿರಃ

ಬ್ರೂಹಿ ಸರ್ಪ ಯಥಾಕಾಮಂ ಪ್ರತಿವಕ್ಷ್ಯಾಮಿ ತೇ ವಚಃ ।
ಅಪಿ ಚೇಚ್ಛಕ್ನುಯಾಂ ಪ್ರೀತಿಮಾಹರ್ತುಂ ತೇ ಭುಜಂಗಮ ॥೧೩॥

ಯುಧಿಷ್ಠಿರ– ಎಲೈ ಭುಜಂಗಮವೇ, ನೀನು ಪ್ರಶ್ನೆಗಳನ್ನು ಕೇಳು. ಉತ್ತರವನ್ನು ಕೊಟ್ಟು ನಿನ್ನನ್ನು ಸಂತೋಷಪಡಿಸಲು ಸಾಧ್ಯವಾದರೆ ನಾನು ಉತ್ತರಗಳನ್ನು ಹೇಳುವೆನು.

ವೇದ್ಯಂ ಚ ಬ್ರಾಹ್ಮಣೇನೇಹ ತದ್‌ಭವಾನ್ ವೇತ್ತಿ ಕೇವಲಮ್ ।
ಸರ್ಪರಾಜ ತತಃ ಶ್ರುತ್ವಾ ಪ್ರತಿವಕ್ಷ್ಯಾಮಿ ತೇ ವಚಃ ॥೧೪॥

ಎಲೈ ಸರ್ಪರಾಜನೇ, ಬ್ರಾಹ್ಮಣನು ಏನು ತಿಳಿಯಬೇಕೋ ಅದೆಲ್ಲವನ್ನೂ ನೀನು ತಿಳಿದಿದ್ದೀಯೆ. ಆದ್ದರಿಂದ ನಿನ್ನ ಪ್ರಶ್ನೆಗಳನ್ನು ಕೇಳಿ ಅನಂತರ ಉತ್ತರವನ್ನು ಹೇಳುವೆನು.

ಸರ್ಪಃ

ಬ್ರಾಹ್ಮಣಃ ಕೋ ಭವೇದ್ ರಾಜನ್ ವೇದ್ಯಂ ಕಿಂ ಚ ಯುಧಿಷ್ಠಿರ ।
ಬ್ರವೀಹ್ಯತಿಮತಿಂ ತ್ವಾಂ ಹಿ ವಾಕ್ಯೈರನುಮಿಮೀಮಹೇ ॥೧೫॥

ಸರ್ಪ– ಯುಧಿಷ್ಠಿರನೇ, ಬ್ರಾಹ್ಮಣನೆಂದರೆ ಯಾರು? ಮತ್ತು ವೇದ್ಯವಾದ ವಸ್ತುವೆಂದರೆ ಯಾವುದು ಎಂದು ಹೇಳು. ನಿನ್ನ ವಾಕ್ಯಗಳಿಂದ ನೀನು ಮಹಾ ಮೇಧಾವಿ ಎಂದು ಭಾವಿಸುತ್ತೇನೆ.

ಯುಧಿಷ್ಠಿರಃ

ಸತ್ಯಂ ದಾನಂ ಕ್ಷಮಾ ಶೀಲಮಾನೃಶಂಸ್ಯಂ ತಪೋ ಘೃಣಾ ।
ದೃಶ್ಯಂತೇ ಯತ್ರ ನಾಗೇಂದ್ರ ಸ ಬ್ರಾಹ್ಮಣ ಇತಿ ಸ್ಮೃತಿಃ(ತಃ) ॥೧೬॥

ಯುಧಿಷ್ಠಿರ– ಎಲೈ ನಾಗೇಂದ್ರನೇ, ಸತ್ಯ , ದಾನ, ಕ್ಷಮಾ, ಶೀಲ, ಮಾರ್ದವ, ದಯೆ ಈ ಗುಣಗಳು ಎಲ್ಲಿ ಕಾಣುತ್ತವೆಯೋ ಅವನನ್ನು ಬ್ರಾಹ್ಮಣನೆಂದು ಕರೆಯುತ್ತಾರೆ.

ದೀನಾನುಕಂಪೀ ಸತತಂ ಸತತಂ ಸಾಧುವತ್ಸಲಃ ।
ನಿತ್ಯಂ ದಾನರತಶ್ಚೈವ ತಂ ದೇವಾ ಬ್ರಾಹ್ಮಣಂ ವಿದುಃ ॥೧೬೮.೧॥

ಯಾವನು ದೀನಾನುಕಂಪಿಯೋ, ಸತತವಾಗಿ ಸಾಧುಗಳಲ್ಲಿ ಪ್ರೀತಿಯುಳ್ಳವನಾಗಿದ್ದಾನೆಯೋ ಮತ್ತು ನಿತ್ಯವೂ ದಾನರತವನಾಗಿದ್ದಾನೆಯೋ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಸರ್ಪಃ

ಯತ್ನೇನ ಬ್ರೂಹಿ ರಾಜೇಂದ್ರ ಕಃ ಕಾಲಃ ಶ್ರಾದ್ಧದಾನಯೋಃ ।
ಪ್ರಶ್ನಂ ಪ್ರಶ್ನವಿದಾಂ ಶ್ರೇಷ್ಠ ಸರ್ವವಿತ್ತ್ವಂ ಮತೋಽಸಿ ಮೇ ॥೧೬೯.೨॥

ಸರ್ಪ– ಎಲೈ ರಾಜೇಂದ್ರನೇ, ಶ್ರಾದ್ಧ ಮತ್ತು ದಾನಗಳಿಗೆ ಯಾವುದು ಯೋಗ್ಯವಾದ ಕಾಲವೆಂದು ವಿಚಾರಮಾಡಿ ಹೇಳು. ನೀನು ಪ್ರಶ್ನೆಗಳಿಗೆ ಉತ್ತರವನ್ನು ಹೇಳುವುದರಲ್ಲಿ ಶ್ರೇಷ್ಠನಾದವನು. ನೀನು ಸರ್ವಜ್ಞನೆಂದು ನನ್ನ ಅಭಿಪ್ರಾಯ.

ಯುಧಿಷ್ಠಿರಃ

ಯತ್ರ ವೈ ಬ್ರಾಹ್ಮಣಂ ಪಶ್ಯೇಚ್ಛ್ರೋತ್ರಿಯಂ ಧ್ಯಾನತತ್ಪರಮ್ ।
ಧನಂ ಮನ್ಯೇದ್ ವಿಶಿಷ್ಟಂ ತು ಸ ಕಾಲಃ ಶ್ರದ್ಧಾದಾನಯೋಃ ॥೧೬೯.೩॥

ಯುಧಿಷ್ಠಿರ– ಯಾವಾಗ ಶ್ರೋತ್ರಿಯನು ಜ್ಞಾನತತ್ಪರನೂ ಆದ ಬ್ರಾಹ್ಮಣನು ದೊರೆಯುತ್ತಾನೆಯೋ ಮತ್ತು ತನ್ನ ಬಳಿ ವಿಶಿಷ್ಟವಾದ ಧನವಿದೆ ಎಂದು ತಿಳಿಯುತ್ತಾನೆಯೋ ಅದು ಶ್ರಾದ್ಧ ದಾನಗಳಿಗೆ ಯೋಗ್ಯವಾದ ಕಾಲ.

ಸರ್ಪಃ

ಕಿಂ ವೇದ್ಯಂ ಪರಮಂ ರಾಜನ್ ಪ್ರಶಂಸ ಮೇ ತ್ವಂ ಯುಧಿಷ್ಠಿರ ॥

ಸರ್ವಜ್ಞೋಽಸಿ ಮಹಾಬಾಹೋ ವಾಕ್ಯೈರನುಮಿಮೀಮಹೇ ।

ಸರ್ಪ– ರಾಜನೇ, ತಿಳಿಯಲ್ಪಡಬೇಕಾದ ವಸ್ತುಗಳಲ್ಲಿ ಶ್ರೇಷ್ಠವಾದುದು ಯಾವುದು? ಯುಧಿಷ್ಠಿರನೇ ಅದನ್ನು ನನಗೆ ಹೇಳು. ಮಹಾಬಾಹುವೇ, ನಿನ್ನ ವಾಕ್ಯದಿಂದ ನೀನು ಸರ್ವಜ್ಞನೆಂದು ಊಹಿಸುತ್ತೇನೆ.

ಯುಧಿಷ್ಠಿರಃ

ವೇದ್ಯಂ ಸರ್ಪ ಪರಂ ಬ್ರಹ್ಮ ನಿರ್ದುಃಖಮಸುಖಂ ಚ ಯತ್ ।
ಯತ್ರ ಗತ್ವಾ ನ ಶೋಚಂತಿ ಭವತಃ ಕಂ ವಿವಕ್ಷಿತಮ್ ॥೧೭॥

ಯುಧಿಷ್ಠಿರ– ಎಲೈ ಸರ್ಪವೇ, ವೇದ್ಯವಾದ ವಸ್ತುವೆಂದರೆ ಎಲ್ಲ ವಿಧವಾದ ದುಃಖದಿಂದ ಮತ್ತು ಪ್ರಾಕೃತವಾದ ಸುಖದಿಂದ ರಹಿತವಾದ ಪರಬ್ರಹ್ಮ. ಯಾವನನ್ನು ಹೊಂದಿದರೆ ಜೀವನು ದುಃಖಪಡುವುದಿಲ್ಲವೋ ಅಂತಹ ವಸ್ತುವು ಅವನು. ನಿನ್ನ ಅಭಿಪ್ರಾಯವೇನು?

ಸರ್ಪಃ

ಚಾತುರ್ವರ್ಣ್ಯಂ ಪ್ರಮಾಣಂ ಚ ಸತ್ಯಂ ಚ ಬ್ರಹ್ಮ ಚೈವ ಹಿ ।
ಶೂದ್ರೇಷ್ವಪಿ ಚ ಸತ್ಯಂ ಚ ದಾನಮಕ್ರೋಧ ಏವ ಚ ॥೧೮॥

ಆನೃಶಂಸ್ಯಮಹಿಂಸಾ ಚ ಘೃಣಾ ಚೈವ ಯುಧಿಷ್ಠಿರ ।
ವೇದ್ಯಂ ಯಚ್ಚಾತ್ರ ನಿರ್ದುಃಖಮಸುಖಂ ಚ ನರಾಧಿಪ ।
ತಾಭ್ಯಾಂ ಹೀನಂ ಪದಂ ಚಾನ್ಯನ್ನ ತದಸ್ತೀತಿ ಲಕ್ಷಯೇ ॥೧೯॥

ಸರ್ಪ– ನಾಲ್ಕುವರ್ಣಗಳ ಆಚಾರವು ಬ್ರಾಹ್ಮಣಾದಿ ಜಾತಿ ವಿಷಯದಲ್ಲಿ ಒಂದು ಪ್ರಮಾಣ. ಶಾಶ್ವತವಾದ ವೇದವೂ ಪ್ರಮಾಣ. ಎಲೈ ಯುಧಿಷ್ಠಿರನೇ, ಶೂದ್ರರಲ್ಲಿಯೂ ಸತ್ಯ, ದಾನ, ಅಕ್ರೋಧ, ಮಾರ್ದವ, ಅಹಿಂಸೆ ಮತ್ತು ದಯೆ ಇಂತಹ ಗುಣಗಳು ಕಂಡುಬರುತ್ತವೆ. ಎಲೈ ನರಾಧಿಪನೇ, ವೇದ್ಯವಾದ ವಸ್ತುವೆಂದರೆ ಸುಖ ದುಃಖರಹಿತವಾದುದು. ಅಂತಹ ಪ್ರಾಕೃತ ಸುಖದುಃಖರಹಿತವಾದ ವಸ್ತುವು ಈ ಸಂಸಾರದಲ್ಲಿ ಇನ್ನೊಂದು ಕಾಣುವುದಿಲ್ಲ.

ತಾಂಶ್ಚ ಸರ್ವಾನಶೇಷೇಣ ಕಥಯಸ್ವ ನರಾಧಿಪ ।

ಎಲೈ ನರಾಧಿಪನೇ, ಈ ವಿಷಯವನ್ನು ಸಮಗ್ರವಾಗಿ ಹೇಳು.

ಯುಧಿಷ್ಠಿರಃ

ಶೂದ್ರೇ ತು ಯದ್‌ಭವೇಲ್ಲಕ್ಷ್ಯ ದ್ವಿಜೇ ತಚ್ಚ ನ ವಿದ್ಯತೇ ।
ನ ವೈ ಶೂದ್ರೋ ಭವೇಚ್ಛೂದ್ರೋ ಬ್ರಾಹ್ಮಣೋ ನ ಚ ಬ್ರಾಹ್ಮಣಃ॥೨೦॥

ಯುಧಿಷ್ಠಿರ– ಯಾವ ಸತ್ಯಾದಿ ಲಕ್ಷಣಗಳು ಶೂದ್ರನಲ್ಲಿ ಇರುತ್ತವೆಯೋ ಮತ್ತು ಬ್ರಾಹ್ಮಣನಲ್ಲಿ ಇರುವುದಿಲ್ಲವೋ ಆ ಶೂದ್ರನು ಶೂದ್ರನಲ್ಲ. ಆ ಬ್ರಾಹ್ಮಣನು ಬ್ರಾಹ್ಮಣನೂ ಅಲ್ಲ.

ಯತ್ರೈತಲ್ಲಕ್ಷ್ಯತೇ ಸರ್ಪ ವೃತ್ತಂ ಸ ಬ್ರಾಹ್ಮಣಃ ಸ್ಮೃತಃ ।
ಯತ್ರೈತನ್ನ ಭವೇತ್ ಸರ್ಪ ತಂ ಶೂದ್ರಮಿತಿ ನಿರ್ದಿಶೇತ್ ॥೨೧॥

ಎಲೈ ಸರ್ಪವೇ, ಎಲ್ಲಿ ಇಂತಹ ಸತ್ಯಾದಿ ನಡತೆಯು ಕಾಣುತ್ತದೆಯೋ ಅವನನ್ನೇ ಬ್ರಾಹ್ಮಣನೆಂದು ಹೇಳಬೇಕು. ಎಲ್ಲಿ ಕಾಣುವುದಿಲ್ಲವೋ ಅವನನ್ನು ಶೂದ್ರನೆಂದು ಹೇಳಬೇಕು.

ಯತ್ ಪುನರ್ಭವತಾ ಪ್ರೋಕ್ತಂ ನ ವೇದ್ಯಂ ವಿದ್ಯತೀತಿ ಚ ।
ತಾಭ್ಯಾಂ ಹೀನಮತೋಽನ್ಯತ್ರ ಪದಂ ನಾಸ್ತೀ(ದಮಸ್ತೀ)ತಿ ಚೇದಪಿ ॥

ಪ್ರಾಕೃತ ಸುಖದುಃಖದಿಂದ ಹೀನವಾದ ಇನ್ನೊಂದು ವಸ್ತುವು ಈ ಸಂಸಾರದಲ್ಲಿ ಇಲ್ಲವೆಂದು ಹೇಳಿದೆಯಷ್ಟೆ?

ಏವಮೇತನ್ಮತಂ ಸರ್ಪ ತಾಭ್ಯಾಂ ಹೀನಂ ನ ವಿದ್ಯತೇ ।
ಯಥಾ ಶೀತೋಷ್ಣಯೋರ್ಮಧ್ಯೇ ಭವೇನ್ನೋಷ್ಣಂ ನ ಶೀತತಾ ॥೨೩॥

ಏವಂ ವೈ ಸುಖದುಃಖಾಭ್ಯಾಂ ಹೀನಂ ನಾ(ನಮ)ಸ್ತಿ ಪದಂ ಕ್ವಚಿತ್ ।
ಏಷಾ ಮಮ ಮತಿಃ ಸರ್ಪ ಯಥಾ ವಾ ಮನ್ಯತೇ ಭವಾನ್ ॥೨೪॥

ಎಲೈ ಸರ್ಪವೇ, ನನ್ನ ಅಭಿಪ್ರಾಯವೂ ಹಾಗೆಯೇ. ಶೀತ ಉಷ್ಣಗಳ ಮಧ್ಯೆ ಯಾವುದು ಉಷ್ಣವಲ್ಲದ ಮತ್ತು ಶೈತ್ಯವಿಲ್ಲದ ವಸ್ತುವಿಲ್ಲವೋ ಅದರಂತೆ ಸುಖದುಃಖದಿಂದ ರಹಿತವಾದ ವಸ್ತುವು ಇನ್ನೊಂದು ಇಲ್ಲ. ಇದು ನನ್ನ ಅಭಿಪ್ರಾಯ. ನಿನ್ನ ಅಭಿಪ್ರಾಯವೇನು?

ಸರ್ಪಃ

ಯದಿ ತೇ ವೃತ್ತತೋ ರಾಜನ್‌ಬ್ರಾಹ್ಮಣಃ ಪ್ರಸಮೀಕ್ಷಿತಃ ।
ವೃಥಾ ಜಾತಿಸ್ತದಾऽऽಯುಷ್ಮನ್ ಕೃತಿರ್ಯಾವನ್ನ ವಿದ್ಯತೇ ॥೨೫॥

ಸರ್ಪ– ಎಲೈ ಆಯುಷ್ಮಂತನಾದ ರಾಜನೇ, ನಡತೆಯಿಂದಲೇ ಬ್ರಾಹ್ಮಣನೆಂದು ನಿರ್ಧರಿಸುವುದಾದರೆ ಎಲ್ಲಿ ನಡತೆಯಿಲ್ಲವೋ ಅಂತಹ ಸ್ಥಳದಲ್ಲಿ ಜಾತಿಯು ವ್ಯರ್ಥವಾಗುತ್ತದೆ.

ಯುಧಿಷ್ಠಿರಃ

ಜಾತಿರತ್ರ ಮಹಾಸರ್ಪ ಮನುಷ್ಯತ್ವೇ ಮಹಾಮತೇ ।
ಸಂಕರಾತ್ ಸರ್ವವರ್ಣಾನಾಂ ದುಷ್ಪರೀಕ್ಷ್ಯೇತಿ ಮೇ ಮತಿಃ ॥೨೬॥

ಯುಧಿಷ್ಠಿರ– ಎಲೈ ಮಹಾಬುದ್ಧಿಯುಳ್ಳ ಮಹಾಸರ್ಪವೇ, ಈ ಸಂಸಾರದಲ್ಲಿ ಮನುಷ್ಯರಲ್ಲಿ ಎಲ್ಲ ವರ್ಣಗಳಲ್ಲಿಯೂ ಸಾಂಕರ್ಯವಿರುವುದರಿಂದ ಜಾತಿಯನ್ನು ನಿರ್ಧರಿಸುವುದು ಕಷ್ಟ ಎಂದು ನನ್ನ ಅಭಿಪ್ರಾಯ.

ಸರ್ವೇ ಸರ್ವಾಸ್ವಪತ್ಯಾನಿ ಜನಯಂತಿ ಸದಾ ನರಾಃ ।
ವಾಙ್ ಮೈಥುನಮಥೋ ಜನ್ಮ ಮರಣಂ ಚ ಸಮಂ ನೃಣಾಮ್॥೨೭॥

ಮನುಷ್ಯರಲ್ಲಿ ಎಲ್ಲ ಪುರುಷರೂ ಎಲ್ಲ ಸ್ತ್ರೀಯರಲ್ಲಿಯೂ ಮಕ್ಕಳನ್ನು ಪಡೆಯುತ್ತಾರೆ. ವಾಕ್, ಮೈಥುನ, ಜನನಮರಣಗಳು ಈ ನಾಲ್ಕು ಎಲ್ಲ ಮನುಷ್ಯರಿಗೂ ಸಮಾನವಾಗಿವೆ.

ಇದಮಾರ್ಷಂ ಪ್ರಮಾಣಂ ಚ ಯೇ ಯಜಾಮಹ ಇತ್ಯಪಿ ।
ತಸ್ಮಾಚ್ಛೀಲಂ ಪ್ರಧಾನೇಷ್ಟಂ ವಿದುರ್ಯೇ ತತ್ತ್ವದರ್ಶಿನಃ ॥೨೮॥

ಯೇ ಯಜಾಮಹೇ ಇತ್ಯಾದಿ ವೇದವಾಕ್ಯವು ಬ್ರಾಹ್ಮಣಾದಿಗಳ ಆಚಾರದಲ್ಲಿ ಪ್ರಮಾಣವಾದುದು. ಆದ್ದರಿಂದ ಶೀಲವೇ ಪ್ರಧಾನವಾದುದು ಮತ್ತು ಅಪೇಕ್ಷಿತವಾದುದೆಂದು ಜ್ಞಾನಿಗಳು ತಿಳಿಯುತ್ತಾರೆ.

ಪ್ರಾಙ್‌ನಾಭಿವರ್ಧನಾತ್ ಪುಂಸೋ ಜಾತಕರ್ಮ ವಿಧೀಯತೇ ।
ತತಸ್ತು ನಾಮಕರಣಂ ತತಶ್ಚೌಲಂ ವಿಧೀಯತೇ ॥೨೯॥

ನಾಭಿನಾಳವನ್ನು ಕತ್ತರಿಸುವುದಕ್ಕಿಂತ ಮುಂಚೆ ದ್ವಿಜಾತಿಗಳಿಗೆ ಜಾತಕರ್ಮವು ಅನಂತರ ನಾಮಕರಣವು ಅನಂತರ ಚೌಲವು ವಿಧಿಸಲ್ಪಡುತ್ತದೆ.

ತತೋಪನಯನಂ ಪ್ರೋಕ್ತಂ ದ್ವಿಜಾತೀನಾಂ ಯಥಾವಿಧಿ ।
ತದಾ(ತ್ರಾ)ಸ್ಯ ಮಾತಾ ಸಾವಿತ್ರೀ ಪಿತಾ ತ್ವಾಚಾರ್ಯ ಉಚ್ಯತೇ ॥೩೦॥

ಅನಂತರ ದ್ವಿಜರಿಗೆ ವಿಧಿಪೂರ್ವಕವಾಗಿ ಉಪನಯನವು ಹೇಳಲ್ಪಡುತ್ತದೆ. ಉಪನಯನವಾದಾಗ ಆ ವ್ಯಕ್ತಿಗೆ ಗಾಯತ್ರಿಯು ತಾಯಿಯೂ ಆಚಾರ್ಯನು ತಂದೆಯೂ ಆಗುತ್ತಾರೆ ಎಂದು ಹೇಳಲ್ಪಡುತ್ತದೆ.

ತಾವಚ್ಛೂದ್ರಸಮೋ ಹ್ಯೇಷ ಯಾವದ್ವೇದೇ ನ ಜಾಯತೇ ।
ತಸ್ಮಿನ್ನೇವಂ ಮತಿರ್ದ್ವೈಧೇ ಮನುಃ ಸ್ವಾಯಂಭುವೋಽಬ್ರವೀತ್ ॥೩೧॥

ಕೃತಕೃತ್ಯಾಃ ಪುನರ್ವರ್ಣಾ ಯದಿ ವೃತ್ತಂ ನ ವಿದ್ಯತೇ ।
ಸಂಕರಸ್ತ್ವತ್ರ ನಾಗೇಂದ್ರ ಬಲವಾನ್ ಪ್ರಸಮೀಕ್ಷಿತಃ ॥೩೨॥

ಎಲ್ಲಿಯವರೆಗೆ ವೇದಗ್ರಹಣವನ್ನು ಮಾಡುವುದಿಲ್ಲವೋ ಅಲ್ಲಿಯವರೆಗೆ ದ್ವಿಜನು ಶೂದ್ರಸಮಾನನಾಗುತ್ತಾನೆ. ಆದ್ದರಿಂದ ಜಾತಿಯ ವಿಷಯದಲ್ಲಿ ಈ ರೀತಿ ಸಂಶಯವುಂಟಾದರೆ ಸ್ವಾಯಂಭುವ ಮನುವು ಆಚಾರವಿಲ್ಲದ ಸ್ಥಳದಲ್ಲಿ ಜಾತಿಗಳು ಅಪ್ರಯೋಜಕ ಎಂದು ಹೇಳಿದ್ದಾನೆ. ಎಲೈ ನಾಗೇಂದ್ರನೇ, ಜನ್ಮದಿಂದ ಜಾತಿಯನ್ನು ನಿರ್ಧರಿಸುವುದಾದರೆ ಈ ವಿಷಯದಲ್ಲಿ ಪ್ರಬಲವಾದ ಸಾಂಕರ್ಯವು ಕಾಣುತ್ತದೆ.

ಯತ್ರೇದಾನೀಂ ಮಹಾಸರ್ಪ ಸಂಸ್ಕೃತಂ ವೃತ್ತಮಿಷ್ಯತೇ ।
ತಂ ಬ್ರಾಹ್ಮಣಮಹಂ ಪೂರ್ವಮುಕ್ತವಾನ್ ಭುಜಗೋತ್ತಮ ॥೩೩॥

ಭುಜಗೋತ್ತಮನೇ, ಮಹಾಸರ್ಪವೇ, ಆದ್ದರಿಂದ ಈಗ ಎಲ್ಲಿ ಸುಸಂಸ್ಕೃತವಾದ ನಡತೆಯು ಕಾಣುತ್ತದೆಯೋ ಅವನು ಬ್ರಾಹ್ಮಣ ಎಂದು ನಾನು ಮೊದಲೇ ಹೇಳಿದೆ.

ಸರ್ಪಃ

ಶ್ರುತಂ ವಿದಿತವೇದ್ಯಸ್ಯ ತವ ವಾಕ್ಯಂ ಯುಧಿಷ್ಠಿರ ।
ಭಕ್ಷಯೇಯಮಹಂ ಕಸ್ಮಾದ್ ಭ್ರಾತರಂ ತೇ ವೃಕೋದರಮ್ ॥೩೪॥

ಸರ್ಪ– ಎಲೈ ಯುಧಿಷ್ಠಿರನೇ, ಸರ್ವಜ್ಞನಾದ ನಿನ್ನ ಮಾತುಗಳನ್ನು ಕೇಳಿದೆನು. ನಿನ್ನ ತಮ್ಮನಾದ ವೃಕೋದರನನ್ನು ನಾನು ಹೇಗೆ ಭಕ್ಷಿಸಿಯೇನು?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುಃಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಅಜಗರಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ನಾಲ್ಕನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಎಪ್ಪತ್ತೈದನೆಯ ಅಧ್ಯಾಯ

ದಾನ ಅಹಿಂಸಾದಿ ವಿಷಯಗಳಲ್ಲಿ ಸರ್ಪ ಮತ್ತು ಯುಧಿಷ್ಠಿರನ ಸಂವಾದ.

ಯುಧಿಷ್ಠಿರಃ

ಭವಾನೇತಾದೃಶೋ ಲೋಕೇ ವೇದವೇದಾಂಗಪಾರಗಃ ।
ಬ್ರೂಹಿ ಕಿಂ ಕುರ್ವತಃ ಕರ್ಮ ಭವೇದ್ ಗತಿರನುತ್ತಮಾ ॥೧॥

ಯುಧಿಷ್ಠಿರ– ನೀನು ಈ ಲೋಕದಲ್ಲಿ ವೇದವೇದಾಂಗ ಪಾರಂಗತನಾದ ಇಂತಹ ವ್ಯಕ್ತಿಯಾಗಿದ್ದೀಯೆ. ಯಾವ ಕರ್ಮವನ್ನು ಮಾಡಿದರೆ ಶ್ರೇಷ್ಠವಾದ ಗತಿಯಾಗುತ್ತದೆ ಎಂದು ಹೇಳು.

ಸರ್ಪಃ

ಪಾತ್ರೇ ದತ್ತ್ವಾ ಪ್ರಿಯಾಣ್ಯುಕ್ತ್ವಾ ಸತ್ಯಮುಕ್ತ್ವಾ ಚ ಭಾರತ ।
ಅಹಿಂಸಾನಿರತಃ ಸ್ವರ್ಗಂ ಗಚ್ಛೇದಿತಿ ಮತಿರ್ಮಮ ॥೨॥

ಸರ್ಪ– ಎಲೈ ಭಾರತನೇ, ಪಾತ್ರದಲ್ಲಿ ದಾನವನ್ನು ಮಾಡಿ ಪ್ರಿಯವಚನಗಳನ್ನು, ಸತ್ಯವಚನಗಳನ್ನು ಆಡಿ ಅಹಿಂಸಾ ನಿರತನಾದ ಪುರುಷನು ಸ್ವರ್ಗಕ್ಕೆ ಹೋಗುವನೆಂದು ನನ್ನ ಅಭಿಪ್ರಾಯ.

ಯುಧಿಷ್ಠಿರಃ

ದಾನಾದ್ವಾ ಸರ್ಪ ಸತ್ಯಾದ್ವಾ ಕಿಮತೋ ಗುರು ದೃಶ್ಯತೇ ।
ಅಹಿಂಸಾಪ್ರಿಯಯೋಶ್ಚೈವ ಗುರುಲಾಘವಮುಚ್ಯತಾಮ್ ॥೩॥

ಯುಧಿಷ್ಠಿರ– ಎಲೈ ಸರ್ಪವೇ, ದಾನ ಮತ್ತು ಸತ್ಯವಚನ ಇವೆರಡರಲ್ಲಿ ಯಾವುದು ಶ್ರೇಷ್ಠವಾದುದು? ಹಾಗೆಯೇ ಅಹಿಂಸಾ ಮತ್ತು ಪ್ರಿಯವಚನಗಳಲ್ಲಿ ಯಾವುದು ಶ್ರೇಷ್ಠ ಮತ್ತು ಯಾವುದು ಕನಿಷ್ಠ ಎಂದು ಹೇಳು.

ಸರ್ಪಃ

ದಾನಂ ಚ ಸತ್ಯಂ ತತ್ತ್ವಂ ವಾ ಅಹಿಂಸಾ ಪ್ರಿಯಮೇವ ಚ ।
ಏಷಾಂ ಕಾರ್ಯಗರೀಯಸ್ತ್ವಾದ್ ದೃಶ್ಯತೇ ಗುರುಲಾಘವಮ್ ॥೪॥

ಸರ್ಪ– ದಾನ ಸತ್ಯವಚನಗಳು, ಅಹಿಂಸಾ ಮತ್ತು ಪ್ರಿಯವಚನಗಳು ಇವುಗಳಿಂದ ಉಂಟಾಗುವ ಕಾರ್ಯಗಳನ್ನು ಗಮನಿಸಿ ಯಾವುದು ಶ್ರೇಷ್ಠ, ಯಾವುದು ಕನಿಷ್ಠ ಎಂದು ಹೇಳಬೇಕು.

ಕ್ವಚಿದ್ ದಾನಪ್ರಯೋಗಾದ್ಧಿ ಸತ್ಯಮೇವ ವಿಶಿಷ್ಯತೇ ।
ಸತ್ಯವಾಕ್ಯಾಚ್ಚ ರಾಜೇಂದ್ರ ಕಿಂಚಿದ್ದಾನಂ ವಿಶಿಷ್ಯತೇ ॥೫॥

ಸತ್ಯವನ್ನು ಹೇಳಿದರೆ ಯಾರಿಗೂ ಅನಿಷ್ಟವಾಗದಿದ್ದರೆ ಆಗ ದಾನಕ್ಕಿಂತಲೂ ಸತ್ಯವೇ ಶ್ರೇಷ್ಠವಾಗುತ್ತದೆ. ಕಳ್ಳನು ಬ್ರಾಹ್ಮಣ ಹಿಂಸೆಯನ್ನು ಮಾಡುವುದಕ್ಕೋಸ್ಕರ ಬ್ರಾಹ್ಮಣರನ್ನು ಹುಡುಕುತ್ತಿದ್ದರೆ ಅಲ್ಲಿ ಸತ್ಯವಚನದಿಂದ ಹಿಂಸೆಯೇ ಉಂಟಾಗುವುದರಿಂದ ಅಂತಹ ಸ್ಥಳದಲ್ಲಿ ಸತ್ಯವಚನಕ್ಕಿಂತಲೂ ದಾನವೇ ಶ್ರೇಷ್ಠವಾಗುತ್ತದೆ.

ಏವಮೇವ ಮಹೇಷ್ವಾಸ ಪ್ರಿಯವಾಕ್ಯಾನ್ ಮಹೀಪತೇ ।
ಅಹಿಂಸಾ ದೃಶ್ಯತೇ ಗುರ್ವೀ ತತಶ್ಚ ಪ್ರಿಯಮಿಷ್ಯತೇ ॥೬॥

ಎಲೈ ಮಹೇಷ್ವಾಸನೇ, ಎಲೈ ಮಹೀಪತಿಯೇ, ಇದರಂತೆ ಒಮ್ಮೊಮ್ಮೆ ಪ್ರಿಯವಚನಕ್ಕಿಂತಲೂ ಅಹಿಂಸೆಯೇ ಶ್ರೇಷ್ಠವಾಗುತ್ತದೆ. ಮತ್ತೊಮ್ಮೆ ಅಹಿಂಸೆಗಿಂತಲೂ ಪ್ರಿಯವಚನವೇ ಶ್ರೇಷ್ಠವಾಗುತ್ತದೆ.

ಏವಮೇತದ್ ಭವೇದ್ರಾಜನ್ ಕಾರ್ಯಾಪೇಕ್ಷಮನಂತರಮ್ ।
ಯದಭಿಪ್ರೇತಮನ್ಯತ್ ತೇ ಬ್ರೂಹಿ ಯಾವದ್ ಬ್ರವೀಮ್ಯಹಮ್ ॥೭॥

ರಾಜನೇ, ಹೀಗೆ ಅನಂತರ ಉಂಟಾಗುವ ಕಾರ್ಯವನ್ನು ಗಮನಿಸಿ ಜ್ಯೇಷ್ಠ ಕನಿಷ್ಠತೆಗಳನ್ನು ನಿರ್ಧರಿಸಬೇಕು. ನೀನು ಬೇರೆ ಏನನ್ನಾದರೂ ಕೇಳುವುದಿದ್ದರೆ ಕೇಳು. ಅದಕ್ಕೆ ಉತ್ತರವನ್ನು ಹೇಳುತ್ತೇನೆ.

ಯುಧಿಷ್ಠಿರಃ

ಕಥಂ ಸ್ವರ್ಗೇ ಗತಿಃ ಸರ್ಪ ಕರ್ಮಣಾಂ ಚ ಫಲಂ ಧ್ರುವಮ್ ।
ಅಶರೀರಸ್ಯ ದೃಶ್ಯೇತ ಪ್ರಬ್ರೂಹಿ ವಿಷಯಾಂಶ್ಚ ಮೇ ॥೮॥

ಯುಧಿಷ್ಠಿರ– ಎಲೈ ಸರ್ಪವೇ, ಕರ್ಮಗಳಿಗೆ ಅವಶ್ಯವಾಗಿ ಫಲಗಳು ಉಂಟಾಗುತ್ತವೆ. ಶರೀರವನ್ನು ಇಲ್ಲೇ ತ್ಯಜಿಸಿದ ಪುರುಷನು ಹೇಗೆ ಸ್ವರ್ಗಕ್ಕೆ ಹೋಗುತ್ತಾನೆ? (ಹೋಗಿ ಕರ್ಮದ ಫಲವನ್ನು ಅನುಭವಿಸುತ್ತಾನೆ?) ಈ ವಿಷಯಗಳನ್ನು ನನಗೆ ಹೇಳು.

ಸರ್ಪಃ

ತಿಸ್ರೋ ವೈ ಗತಯೋ ರಾಜನ್ ಪರಿದೃಷ್ಟಾಃ ಸ್ವಕರ್ಮಭಿಃ ।
ಮಾನುಷಂ ಸ್ವರ್ಗವಾಸಶ್ಚ ತಿರ್ಯಗ್ಯೋನಿಶ್ಚ ತತ್ ತ್ರಿಧಾ ॥೯॥

ಸರ್ಪ– ಎಲೈ ರಾಜನೇ, ತನ್ನ ಕರ್ಮಗಳಿಂದ ಮನುಷ್ಯ ಜನ್ಮ, ಸ್ವರ್ಗಪ್ರಾಪ್ತಿ, ತಿರ್ಯಗ್ಯೋನಿ ಪ್ರಾಪ್ತಿ ಎಂಬ ಮೂರುವಿಧವಾದ ಗತಿಗಳು ಕಂಡುಬರುತ್ತದೆ.

ತತ್ರ ವೈ ಮಾನುಷಾಲ್ಲೋಕಾದ್ ದಾನಾದಿಭಿರತಂದ್ರಿತಃ ।
ಅಹಿಂಸಾರ್ಥಸಮಾಯುಕ್ತೈಃ ಕಾರಣೈಃ ಸ್ವರ್ಗಮಶ್ನುತೇ ॥೧೦॥

ಮನುಷ್ಯಶರೀರದಲ್ಲಿದ್ದು ದಾನಾದಿಗಳನ್ನು ಮಾಡಿ ಅಹಿಂಸಾದಿಗಳನ್ನು ಅನುಷ್ಠಾನ ಮಾಡಿದರೆ ಆ ಕಾರಣದಿಂದ ಜೀವನು ಸ್ವರ್ಗವನ್ನು ಪಡೆಯುತ್ತಾನೆ.

ವಿಪರೀತೈಶ್ಚ ರಾಜೇಂದ್ರ ಕಾರಣೈರ್ಮಾನುಷೋ ಭವೇತ್ ।
ತಿರ್ಯಗ್ಯೋನಿಸ್ತಥಾ ತಾತ ವಿಶೇಷಶ್ಚಾತ್ರ ವಕ್ಷ್ಯತೇ ॥೧೧॥

ಎಲೈ ರಾಜೇಂದ್ರನೇ, ಇದಕ್ಕೆ ವಿಪರೀತವಾದ ಕರ್ಮವನ್ನು ಮಾಡಿದರೆ ಪುನಃ ಮನುಷ್ಯನಾಗುತ್ತಾನೆ. ಅಥವಾ ವಿಶೇಷವಾಗಿ ನೀಚಯೋನಿಗಳನ್ನು ಹೊಂದುತ್ತಾನೆ ಎಂದು ಹೇಳಲ್ಪಡುತ್ತದೆ.

ಕಾಮಕ್ರೋಧಸಮಾಯುಕ್ತೋ ಹಿಂಸಾಲೋಭಸಮನ್ವಿತಃ ।
ಮನುಷ್ಯತ್ವಾತ್ ಪರಿಭ್ರಷ್ಟಸ್ತಿರ್ಯಗ್ಯೋನೌ ಪ್ರಸೂಯತೇ ॥೧೨॥

ಕಾಮಕ್ರೋಧಗಳಿಂದ ಕೂಡಿ, ಹಿಂಸಾಲೋಭಗಳಿಂದ ಕೂಡಿ ಕರ್ಮಗಳನ್ನು ಮಾಡುವವನು ಮನುಷ್ಯತ್ವದಿಂದ ಭ್ರಷ್ಟನಾಗಿ ತಿರ್ಯಗ್ಯೋನಿಗಳಲ್ಲಿ ಜನಿಸುತ್ತಾನೆ.

ತಿರ್ಯಗ್ಯೋನ್ಯಾಃ ಪೃಥಗ್ಜಾವ್ಯೋ ಮನುಷ್ಯಾರ್ಥೇ ವಿಧೀಯತೇ ।
ಗವಾದಿಭ್ಯಸ್ತಥಾಶ್ವೇಭ್ಯೋ ದೇವತ್ವಮಪಿ ದೃಶ್ಯತೇ ॥೧೩॥

ಪುನಃ ಮನುಷ್ಯನಾಗಿ ಹುಟ್ಟಬೇಕಾದರೆ ತಿರ್ಯಗ್ಯೋನಿಯನ್ನು ಹೊಂದಿಸುವ ನಡತೆಯನ್ನು ಬಿಟ್ಟು ಬೇರೆ ನಡತೆಯನ್ನು ಹೊಂದಿರಬೇಕೆಂದು ಹೇಳಲ್ಪಡುತ್ತದೆ. ಗವಾದಿ ಯೋನಿಗಳಿಂದ ಮತ್ತು ಅಶ್ವಯೋನಿಯಿಂದ ಸ್ವರ್ಗಪ್ರಾಪ್ತಿಯು ಕಂಡುಬರುತ್ತದೆ.

ಸೋಽಯಮೇತಾ ಗತಿ(ತೀ)ಸ್ತಾತ ಜಂತುಶ್ಚರತಿ ಕಾರ್ಯವಾನ್ ।
ನಿತ್ಯೇ ಮಹತಿ ಚಾತ್ಮಾನಮವಸ್ಥಾಪಯತೇ ದ್ವಿಜಃ ॥೧೪॥

ಪ್ರೀತಿಪಾತ್ರನೇ, ಹೀಗೆ ಕರ್ಮಗಳನ್ನು ಮಾಡುವ ಜಂತುವು ಈ ಮೂರು ಗತಿಗಳನ್ನು ಹೊಂದುವನು. ದ್ವಿಜನಾದವನು ಶ್ರವಣಾದಿ ಸಾಧನದಿಂದ ಶಾಶ್ವತವಾದ ಮೋಕ್ಷವನ್ನೂ ಹೊಂದುವನು.

ಜಾತೋ ಜಾತಶ್ಚ ಬಲವದ್ ಭುಂಕ್ತೇ ಚಾತ್ಮಾ ಸ ದೇಹವಾನ್ ।
ಫಲಾರ್ಥಸ್ತಾತ ನಿಷ್ಪ್ರಕೃತಃ ಪ್ರಜಾಪಾಲನಭಾವನಃ ॥೧೫॥

ಪ್ರೀತಿಪಾತ್ರನೇ, ಫಲೋದ್ದೇಶದಿಂದ ಕರ್ಮವನ್ನು ಮಾಡಿದ ಜೀವನು ಮತ್ತೆ ಮತ್ತೆ ದೇಹವನ್ನು ಪಡೆದು ಹುಟ್ಟಿ ಬಲಾತ್ಕಾರದಿಂದ ತನ್ನ ಕರ್ಮದ ಫಲಗಳನ್ನು ಭೋಗಿಸುತ್ತಾನೆ. ಫಲಸಂಕಲ್ಪರಹಿತನಾಗಿ ಕರ್ಮಗಳನ್ನು ಮಾಡುವವನು ಜಗತ್ಪಾಲಕನಾದ ಪರಮಾತ್ಮನ ಧ್ಯಾನದಲ್ಲಿ ಇರುತ್ತಾನೆ.

ಯುಧಿಷ್ಠಿರಃ

ಶಬ್ದೇ ಸ್ಪರ್ಶೇ ಚ ರೂಪೇ ಚ ತಥೈವ ರಸಗಂಧಯೋಃ ।
ತಸ್ಯಾಧಿಷ್ಠಾನಮವ್ಯಗ್ರೋ ಬ್ರೂಹಿ ಸರ್ಪ ಯಥಾತಥಮ್ ॥೧೬॥

ಕಿಂ ನ ಗೃಹ್ಣಾಸಿ(ತಿ) ವಿಷಯಾನ್ ಯುಗಪತ್ ತ್ವಂ ಮಹಾಪತೇ ।
ಏತಾವದುಚ್ಯತಾಂ ಚೋಕ್ತಂ ಸರ್ವಂ ಪನ್ನಗಸತ್ತಮ ॥೧೭॥

ಯುಧಿಷ್ಠಿರ– ಎಲೈ ಮಹಾಮೇಧಾವಿಯಾದ ಸರ್ಪವೇ, ಶಬ್ದ ಸ್ಪರ್ಶ ರೂಪ ರಸ ಗಂಧಗಳಿಗೆ ಯಾವುದು ಅಧಿಷ್ಠಾನವೆಂಬುದನ್ನು ಸರಿಯಾಗಿ ಹೇಳು? ಎಲೈ ಪನ್ನಗಶ್ರೇಷ್ಠನೇ, ಏಕೆ ಎರಡು ಜ್ಞಾನಗಳು ಒಂದೇ ಕಾಲದಲ್ಲಿ ಉತ್ಪನ್ನವಾಗುವುದಿಲ್ಲ ಎಂಬುದನ್ನೂ ಹೇಳು?

ಸರ್ಪಃ

ಯದಾತ್ಮದ್ರವ್ಯಮಾಯುಷ್ಮನ್ ದೇಹಸಂಶ್ರಯಣಾನ್ವಿತಮ್ ।
ಕರಣಾಧಿಷ್ಠಿತಂ ಭೋಗಾನುಪಭುಂಕ್ತೇ ಯಥಾವಿಧಿ ॥೧೮॥

ಸರ್ಪ– ಎಲೈ ಆಯುಷ್ಮಂತನೇ, ಆತ್ಮರೂಪನಾದ ವಸ್ತುವು ದೇಹವನ್ನು ಆಶ್ರಯಿಸಿ ಕರಣಗಳಲ್ಲಿ ಅಧಿಷ್ಠಿತನಾಗಿ ತನ್ನ ಕರ್ಮಕ್ಕೆ ಅನುಗುಣವಾಗಿ ಬಂದ ಸುಖದುಃಖ ಅನುಭವಗಳನ್ನು ಭೋಗಿಸುತ್ತದೆ.

ಜ್ಞಾನಂ ಚೈವಾತ್ರ ಬುದ್ಧಿಶ್ಚ ಮನಶ್ಚ ಭರತರ್ಷಭ ।
ತಸ್ಯ ಭೋಗಾಧಿಕರಣೇ ಕರಣಾನಿ ನಿಬೋಧ ಮೇ ॥೧೯॥

ಎಲೈ ಭರತರ್ಷಭನೇ, ಜೀವನಿಗೆ ಇಂತಹ ಭೋಗಗಳನ್ನು ಅನುಭವಿಸಲು ಭೋಗಾಯತನವಾದ ಶರೀರದಲ್ಲಿರುವ ಜ್ಞಾನೇಂದ್ರಿಯಗಳು, ಬುದ್ಧಿ ಮತ್ತು ಮನಸ್ಸು ಇವುಗಳನ್ನು ಕರಣಗಳೆಂದು ತಿಳಿ (ಜ್ಞಾನೇಂದ್ರಿಯಗಳು ಏಳು ಎಂಬ ವಿವಕ್ಷೆ ಇರುವಾಗ

ಮನಸ್ಸು ಮತ್ತು ಬುದ್ಧಿ ಬೇರೆ ಬೇರೆ ಕರಣಗಳಾಗುತ್ತವೆ. ಅದಲ್ಲದೇ ಮನಸ್ಸಿನಿಂದ ಉಂಟಾದ ಜ್ಞಾನಕ್ಕೂ ಬುದ್ಧಿ ಎಂಬ ವ್ಯವಹಾರವಿದೆ).

ಮನಸಾ ತಾತ ಪರ್ಯೇತಿ ಕ್ರಮಶೋ ವಿಷಯಾನಿಮಾನ್ ।
ವಿಷಯಾಯತನಸ್ಥೇನ(ಸ್ಥೋ) ಹಿ ಭೂತಾತ್ಮಾ ಕ್ಷೇತ್ರನಿಃಸೃತಃ(ಮಾಸ್ಥಿತಃ) ॥

ಎಲೈ ಪ್ರೀತಿಪಾತ್ರನೇ, ಜೀವನು ತನ್ನ ಹೃದಯರೂಪಸ್ಥಾನದಲ್ಲಿ ಇದ್ದುಕೊಂಡು ವಿಷಯದಲ್ಲಿ ನೆಲೆಗೊಂಡ ಮನಸ್ಸಿನಿಂದ ಶಬ್ದಸ್ಪರ್ಶಾದಿ ವಿಷಯಗಳನ್ನು ಕ್ರಮವಾಗಿ ಸಂಚರಿಸುತ್ತಾನೆ.

ತತ್ರ ಚಾಪಿ ನರವ್ಯಾಘ್ರ ಮನೋ ಜಂತೋರ್ವಿಧೀಯತೇ ।
ತಸ್ಮಾದ್ ಯುಗಪದತ್ರಾಸ್ಯ ಗ್ರಹಣಂ ನೋಪಪದ್ಯತೇ ॥೨೧॥

ನರವ್ಯಾಘ್ರನೇ, ಅದರಲ್ಲೂ ಜ್ಞಾನವನ್ನು ಉಂಟುಮಾಡುವ ವಿಷಯದಲ್ಲಿ ಜೀವನಿಗೆ ಮನಸ್ಸು ಬಹಳ ವಿಶೇಷವಾದುದು ಎಂದು ಹೇಳಲ್ಪಡುತ್ತದೆ. ಆದ್ದರಿಂದ ಮನಸ್ಸು ಕ್ರಮವಾಗಿ ವಿಷಯಗಳಲ್ಲಿ ಹೋಗುವುದರಿಂದ ಒಂದೇ ಕಾಲದಲ್ಲಿ ಅನೇಕ ಜ್ಞಾನಗಳು ಉತ್ಪತ್ತಿಯಾಗುವುದಿಲ್ಲ.

ಸ ಆತ್ಮಾ ಪುರುಷವ್ಯಾಘ್ರ ಭ್ರುವೋರಂತರಮಾಶ್ರಿತಃ ।
ಬುದ್ಧಿಂ ದ್ರವ್ಯೇಷು ಸೃಜತಿ ವಿವಿಧೇಷು ಪರಾವರಾಮ್ ॥೨೨॥

ಎಲೈ ಪುರುಷವ್ಯಾಘ್ರನೇ, ಪರಮಾತ್ಮನು ಭ್ರೂಮಧ್ಯದಲ್ಲಿರುವ ಆಜ್ಞಾಚಕ್ರವನ್ನು ಆಶ್ರಯಿಸಿದವನಾಗಿ ಜೀವನಿಗೆ ಈ ವಿಧವಾದ ಶ್ರೇಷ್ಠ ಮತ್ತು ಕನಿಷ್ಠವಾದ ವಿಷಯಗಳ ಬುದ್ಧಿಯನ್ನು ಉಂಟುಮಾಡುತ್ತಾನೆ.

ಬುದ್ಧೇರುತ್ತರಕಾಲಾ ಚ ವೇದನಾ ದೃಶ್ಯತೇ ಬುಧೈಃ ।
ಏಷ ವೈ ರಾಜಶಾರ್ದೂಲ ವಿಧಿಃ ಕ್ಷೇತ್ರಜ್ಞಭಾವನಃ ॥೨೩॥

ಬುದ್ಧಿಯು ಉತ್ಪತ್ತಿಯಾದನಂತರ ಸುಖದುಃಖಭೋಗಗಳು ಉಂಟಾಗುವುದೆಂದು ಜ್ಞಾನಿಗಳು ತಿಳಿಯುತ್ತಾರೆ. ಎಲೈ ರಾಜಶಾರ್ದೂಲನೇ, ಕ್ಷೇತ್ರಜ್ಞನಾದ ಪರಮಾತ್ಮನಿಂದ ಉಂಟಾಗುವ ಸುಖದುಃಖಭೋಗ ಪ್ರಕಾರವು ಈ ರೀತಿ ಇದೆ.

ಯುಧಿಷ್ಠಿರಃ

ಮನಸಶ್ಚಾಪಿ ಬುದ್ಧೇಶ್ಚ ಬ್ರೂಹಿ ಮೇ ಲಕ್ಷಣಂ ಪರಮ್ ।
ಏತದಧ್ಯಾತ್ಮವಿದುಷಾಂ ಪರಂ ಕಾರ್ಯಂ ವಿಧೀಯತೇ ॥೨೪॥

ಯುಧಿಷ್ಠಿರ– ಮನಸ್ಸಿಗೂ ಮತ್ತು ಬುದ್ಧಿಗೂ ಇರುವ ಭಿನ್ನವಾದ ಲಕ್ಷಣಗಳನ್ನು ನನಗೆ ಹೇಳು. ಅಧ್ಯಾತ್ಮವಿದ್ಯೆಯನ್ನು ಬಲ್ಲವರಿಗೆ ಇದು ಶ್ರೇಷ್ಠವಾದ ಕಾರ್ಯವೆಂದು ಹೇಳಲ್ಪಡುತ್ತದೆ.

ಸರ್ಪಃ

ಬುದ್ಧಿರಾತ್ಮಾನುಗಾ ತಾತ ಉತ್ಪಾತೇನ ವಿಧೀಯತೇ ।
ತದಾಶ್ರಿತಾ ಹಿ ಸಂಜ್ಞೈಷಾ ಬುದ್ಧಿಸ್ತಸ್ಯೈಷಿಣೇ ಭವೇತ್ ॥೨೫॥

ಸರ್ಪ– ಎಲೈ ಪ್ರೀತಿಪಾತ್ರನೇ, ಬುದ್ಧಿಯು ಆತ್ಮನನ್ನು ಅನುಸರಿಸಿಕೊಂಡೇ ಇರುತ್ತದೆ. ವಿಷಯೇಂದ್ರಿಯಸನ್ನಿಕರ್ಷದಿಂದ ಉಂಟಾಗುತ್ತದೆ. ವಿಷಯೇಂದ್ರಿಯ ಸನ್ನಿಕರ್ಷದಿಂದ ಉಂಟಾದ ಜ್ಞಾನಕ್ಕೆ ಬುದ್ಧಿ ಎಂದು ಹೆಸರು. ಬುದ್ಧಿಯು ಸ್ವಾಮಿಯಾಗಿ ಆತ್ಮನನ್ನು ಬಯಸುತ್ತದೆ.

ಬುದ್ಧಿರುತ್ಪದ್ಯತೇ ಕಾರ್ಯಾನ್‌ಮನಸ್ತೂತ್ಪನ್ನಮೇವ ಹಿ ।
ಬುದ್ಧೇರ್ಗುಣವಿಧಾನೇನ ಮನಸ್ತದ್ಗುಣವದ್ ಭವೇತ್ ॥೨೬॥

ತನ್ನ ಕಾರಣ ಸಾಮಗ್ರಿಯಿಂದ ಬುದ್ಧಿಯು ಉಂಟಾಗುತ್ತದೆ. ಆದರೆ ಮನಸ್ಸು ಮಾತ್ರ ಪೂರ್ವದಲ್ಲಿಯೇ ಇದೆ. ಬುದ್ಧಿಯ ಗುಣಕ್ಕೆ ಅನುಸಾರವಾಗಿ ಮನಸ್ಸಿನಲ್ಲಿ ಗುಣಗಳು ಉಂಟಾಗುತ್ತವೆ (ಇಷ್ಟಾನಿಷ್ಟಸಾಧನತ್ವಜ್ಞಾನಕ್ಕೆ ಅನುಸಾರವಾಗಿ ಮನಸ್ಸಿನಲ್ಲಿ ರಾಗದ್ವೇಷಗಳು ಉಂಟಾಗುತ್ತವೆ).

ಏತದ್ವಿಶೇಷಣಂ ತಾತ ಮನೋಬುದ್ಧ್ಯೋರ್ಯದಂತರಮ್ ।
ತ್ವಮಪ್ಯತ್ರಾಭಸಂಬುದ್ಧಃ ಕಥಂ ವಾ ಮನ್ಯತೇ ಭವಾನ್ ॥೨೭॥

ಎಲೈ ಪ್ರೀತಿಪಾತ್ರನೇ, ಇದು ಮನಸ್ಸು ಮತ್ತು ಬುದ್ಧಿಗಳಿಗೆ ಇರುವ ಅಂತರ ಮತ್ತು ಅವುಗಳ ಅಸಾಧಾರಣ ಧರ್ಮವೂ ಹೌದು. ಈ ವಿಷಯಗಳನ್ನೆಲ್ಲಾ ನೀನೂ ಸಹ ಚೆನ್ನಾಗಿ ತಿಳಿದಿದ್ದೀಯೆ. ನಿನ್ನ ಅಭಿಪ್ರಾಯವೇನು?

ಯುಧಿಷ್ಠಿರಃ

ಅಹೋ ಬುದ್ಧಿಮತಾಂ ಶ್ರೇಷ್ಠ ಶುಭಾ ಬುದ್ಧಿರಿಯಂ ತವ ।
ವಿದಿತಂ ವೇದಿತವ್ಯಂ ತೇ ಕಸ್ಮಾತ್ ಸಮನುಪೃಚ್ಛಸಿ ॥೨೮॥

ಸರ್ವಜ್ಞಂ ತ್ವಾಂ ಕಥಂ ಮೋಹ ಆವಿಶತ್ ಸ್ವರ್ಗವಾಸಿನಮ್ ।
ಏವಮದ್ಭುತಕರ್ಮಾಣಮಿತಿ ಮೇ ಸಂಶಯೋ ಮಹಾನ್ ॥೨೯॥

ಯುಧಿಷ್ಠಿರ– ಎಲೈ ಮೇಧಾವಿಗಳಲ್ಲಿ ಶ್ರೇಷ್ಠನಾದವನೇ, ನಿನ್ನ ಈ ಬುದ್ಧಿಯು ಬಹಳ ಶುಭವಾಗಿದೆ. ತಿಳಿಯಬೇಕಾದುದೆಲ್ಲಾ ನಿನಗೆ ತಿಳಿದಿದೆ. ನನ್ನನ್ನು ಏಕೆ ಪ್ರಶ್ನೆ ಮಾಡುತ್ತೀಯೆ? ಅದ್ಭುತ ಕರ್ಮಗಳನ್ನು ಮಾಡಿ ಸ್ವರ್ಗವಾಸಿಯಾದ ಸರ್ವಜ್ಞನಾದ ನಿನಗೆ ಹೇಗೆ ಮೋಹವುಂಟಾಯಿತು ಎಂಬ ವಿಷಯದಲ್ಲಿ ನನಗೆ ಬಹಳ ಸಂಶಯವಿದೆ.

ಸರ್ಪಃ

ಸುಪ್ರಜ್ಞಮಪಿ ಚೇಚ್ಛೂರಮೃದ್ಧಿರ್ಮೋಹಯತೇ ನರಮ್ ।
ವರ್ತಮಾನಃ ಸುಖೇ ಸರ್ವೋ ಮುಹ್ಯತೀತಿ ಮತಿರ್ಮಮ ॥೩೦॥

ಸರ್ಪ– ಶೂರನಿಗೂ ಮತ್ತು ಒಳ್ಳೆಯ ಪ್ರಜ್ಞೆಯುಳ್ಳ ಮನುಷ್ಯನಿಗೂ ಐಶ್ವರ್ಯವು ಮೋಹವನ್ನು ಉಂಟು ಮಾಡುತ್ತದೆ. ಬಹಳ ಸುಖವನ್ನು ಅನುಭವಿಸುವ ಎಲ್ಲ ಮನುಷ್ಯನೂ ಮೋಹಕ್ಕೆ ಒಳಗಾಗುತ್ತಾನೆ ಎಂದು ನನ್ನ ಅಭಿಪ್ರಾಯ.

ಸೋಽಹಮೈಶ್ವರ್ಯಮೋಹೇನ ಮದಾವಿಷ್ಟೋ ಯುಧಿಷ್ಠಿರ ।
ಪತಿತಃ ಪ್ರತಿಸಂಬುದ್ಧಸ್ತಾ ತ್ವಂ ತು ಸಂಬೋಧಯಾಮ್ಯಹಮ್ ॥೩೧॥

ಎಲೈ ಯುಧಿಷ್ಠಿರನೇ, ನಾನೂ ಸಹ ಐಶ್ವರ್ಯದ ಮದದಿಂದ ಮೋಹಾವಿಷ್ಟನಾದೆ. ಅದರಿಂದ ಪತಿತನಾಗಿ ಈಗ ಪ್ರತಿಬುದ್ಧನಾಗಿ ನಿನ್ನ ಜೊತೆಯಲ್ಲಿ ಮಾತನಾಡುತ್ತಿದ್ದೇನೆ.

ಕೃತಂ ಕಾರ್ಯಂ ಮಹಾರಾಜ ತ್ವಯಾ ಮಮ ಪರಂತಪ ।
ಕ್ಷೀಣಃ ಶಾಪಃ ಸುಕೃಚ್ಛ್ರೋ ಮೇ ತ್ವಯಾ ಸಂಭಾಷ್ಯ ಸಾಧುನಾ ॥೩೨॥

ಎಲೈ ಪರಂತಪನಾದ ಮಹಾರಾಜನೇ, ನೀನು ನನಗೆ ಬಹಳ ಉಪಕಾರವನ್ನು ಮಾಡಿದ್ದೀಯೆ. ನನಗೆ ಬಂದ ಬಹಳ ಕಷ್ಟಕರವಾದ ಶಾಪವು ಈ ದಿನ ಸಜ್ಜನನಾದ ನಿನ್ನ ಜೊತೆಯಲ್ಲಿ ಮಾತನಾಡಿ ನಾಶವನ್ನು ಹೊಂದಿದೆ.

ಅಹಂ ಹಿ ದಿವಿ ದಿವ್ಯೇನ ವಿಮಾನೇನ ಚರನ್ ಪುರಾ ।
ಅಭಿಮಾನೇನ ಮತ್ತಃ ಸನ್ ಕಂಚಿನ್ನಾನ್ಯಮಚಿಂತಯಮ್ ॥೩೩॥

ನಾನಾದರೂ ಹಿಂದೆ ಸ್ವರ್ಗಲೋಕದಲ್ಲಿ ದಿವ್ಯವಾದ ವಿಮಾನದಿಂದ ಸಂಚರಿಸುತ್ತಾ ಐಶ್ವರ್ಯದಿಂದ ಮತ್ತನಾಗಿ ಇನ್ನೊಬ್ಬನನ್ನು ಗಣನೆಗೇ ತಂದುಕೊಳ್ಳಲಿಲ್ಲ.

ಬ್ರಹ್ಮರ್ಷಿದೇವಗಂಧರ್ವಯಕ್ಷರಾಕ್ಷಸಪನ್ನಗಾಃ ।
ಕರಾನ್ ಮಮ ಪ್ರಯಚ್ಛಂತಿ ಸರ್ವೇ ತ್ರೈಲೋಕ್ಯವಾಸಿನಃ ॥೩೪॥

ಮೂರುಲೋಕಗಳಲ್ಲಿ ವಾಸಿಸುವ ಬ್ರಹ್ಮರ್ಷಿಗಳು, ದೇವತೆಗಳು, ಗಂಧರ್ವರು, ಯಕ್ಷರಾಕ್ಷಸರು ಸರ್ಪಗಳು ಎಲ್ಲರೂ ನನಗೆ ಕಪ್ಪವನ್ನು ತಂದುಕೊಡುತ್ತಿದ್ದರು.

ಚಕ್ಷುಷಾ ಯಂ ಪ್ರಪಶ್ಯಾಮಿ ಪ್ರಾಣಿನಂ ಪೃಥಿವೀಪತೇ ।
ತಸ್ಯ ತೇಜೋ ಹರಾಮ್ಯಾಶು ತದ್ಧಿ ದೃಷ್ಟೇರ್ಬಲಂ ಮಮ ॥೩೫॥

ಎಲೈ ರಾಜನೇ, ನಾನು ಯಾರನ್ನು ಕಣ್ಣಿನಿಂದ ನೋಡುತ್ತೇನೆಯೋ ಅವನ ತೇಜಸ್ಸನ್ನು ಅಪಹರಿಸುತ್ತಿದ್ದೆ. ನನ್ನ ದೃಷ್ಟಿಯ ಬಲವು ಹಾಗಿದ್ದಿತು.

ಬ್ರಹ್ಮರ್ಷೀಣಾಂ ಸಹಸ್ರಂ ಹಿ ಉವಾಹ ಶಿಬಿಕಾಂ ಮಮ ।
ಸ ಮಾಮಪನಯೋ ರಾಜನ್ ಭ್ರಂಶಯಾಮಾಸ ವೈ ಶ್ರಿಯಃ ॥೩೬॥

ಒಂದು ಸಹಸ್ರ ಬ್ರಹ್ಮರ್ಷಿಗಳು ನನ್ನ ಪಲ್ಲಕ್ಕಿಯನ್ನು ಹೊರುತ್ತಿದ್ದರು. ಎಲೈ ರಾಜನೇ, ನಾನು ಮಾಡಿದ ಆ ಅನ್ಯಾಯವು ನನ್ನನ್ನು ಸಂಪತ್ತಿನಿಂದ ಕೆಳಗೆ ಉರುಳಿಸಿತು.

ತತ್ರ ಹ್ಯಗಸ್ತ್ಯಃ ಪಾದೇನ ವಹನ್ ಸ್ಪೃಷ್ಟೋ ಮಯಾ ಮುನಿಃ ।
ಅದೃಷ್ಟೇನ ತತೋಽಸ್ಮ್ಯುಕ್ತೋ ಧ್ವಂಸ ಸರ್ಪೇತಿ ವೈ ರುಷಾ ॥೩೭॥

ಆ ಸಮಯದಲ್ಲಿ ಪಲ್ಲಕ್ಕಿಯನ್ನು ಹೊರುತ್ತಿದ್ದ ಅಗಸ್ತ್ಯರನ್ನು ನಾನು ಪಾದದಿಂದ ಒದ್ದೆನು. ಅವರ ಹೃದಯದಲ್ಲಿ ಸ್ಥಿತರಾದ ಪರಮಾತ್ಮನು ರೋಷದಿಂದ ಸರ್ಪವಾಗಿ ಕೆಳಗೆ ಬೀಳು ಎಂದು ಹೇಳಿದನು.

ತತಸ್ತಸ್ಮಾದ್ ವಿಮಾನಾಗ್ರಾತ್ ಪ್ರಚ್ಯುತಶ್ಚ್ಯುತಲಕ್ಷಣಃ ।
ಪ್ರಪತನ್ ಬುಬುಧೇತ್ಮಾನಂ ವ್ಯಾಲೀಭೂತಮಧೋಮುಖಮ್ ॥

ಆಗ ನನ್ನ ಶುಭಲಕ್ಷಣಗಳನ್ನು ಕಳೆದುಕೊಂಡು ಶ್ರೇಷ್ಠವಾದ ವಿಮಾನವನ್ನು ಕಳೆದುಕೊಂಡು ತಲೆಕೆಳಗಾಗಿ ಬೀಳುತ್ತಾ ನಾನು ಒಂದು ಸರ್ಪವಾಗಿರುವುದನ್ನು ಗಮನಿಸಿದೆನು.

ಅಯಾಚಂ ತಮಹಂ ವಿಪ್ರಂ ಶಾಪಸ್ಯಾಂತೋ ಭವೇದಿತಿ ।
ಪ್ರಮಾದಾತ್‌ಸಂಪ್ರಮೂಢ್ಯ ಭಗವನ್ ಕ್ಷಂತುಮರ್ಹಸಿ ॥೩೯॥

ನಾನು ಆ ಬ್ರಾಹ್ಮಣರನ್ನು ಕುರಿತು ಪೂಜ್ಯರೇ, ಪ್ರಮಾದದಿಂದ ಮೋಹಕ್ಕೆ ಒಳಗಾದ ನನ್ನನ್ನು ನೀವು ಕ್ಷಮಿಸಬೇಕು. ಶಾಪಕ್ಕೆ ವಿಮೋಚನೆಯನ್ನು ಮಾಡಬೇಕು ಎಂದು ಬೇಡಿದೆನು.

ತತಃ ಸ ಮಾಮುವಾಚೇದಂ ಪ್ರಪತಂತಂ ಕೃಪಾನ್ವಿತಃ ।
ಯುಧಿಷ್ಠಿರೋ ಧರ್ಮರಾಜಃ ಶಾಪಾತ್ ತ್ವಾಂ ಮೋಕ್ಷಯಿಷ್ಯತಿ ॥೪೦॥

ಅಭಿಮಾನಸ್ಯ ಘೋರಸ್ಯ ಪಾಪಸ್ಯ ಚ ನರಾಧಿಪ ।
ಫಲೇ ಕ್ಷೀಣೇ ಮಹಾರಾಜ ಫಲಂ ಪುಣ್ಯಮವಾಪ್ಸ್ಯಸಿ ॥೪೧॥

ಆಗ ದಯಾನ್ವಿತರಾದ ಅವರು ಕೆಳಗೆ ಬೀಳುತ್ತಿದ್ದ ನನ್ನನ್ನು ಕುರಿತು ಧರ್ಮರಾಜನಾದ ಯುಧಿಷ್ಠಿರನು ನಿನ್ನನ್ನು ದರ್ಪದಿಂದ ಮಾಡಿದ ಘೋರವಾದ ಪಾಪದಿಂದಲೂ ಮತ್ತು ಈ ಶಾಪದಿಂದಲೂ ಬಿಡುಗಡೆಗೊಳಿಸುವನು. ಎಲೈ ಮಹಾರಾಜನೇ, ಪಾಪದ ಫಲವು ನಾಶವನ್ನು ಹೊಂದಿದ ಮೇಲೆ ನೀನು ಪುನಃ ಪುಣ್ಯವನ್ನು ಪಡೆಯುವಿ ಎಂದು ಹೇಳಿದರು.

ತತೋ ಮೇ ವಿಸ್ಮಯೋ ಜಾತಸ್ತದ್ ದೃಷ್ಟ್ವಾ ತಪಸೋ ಬಲಮ್ ।
ಬ್ರಹ್ಮ ಚ ಬ್ರಾಹ್ಮಣತ್ವಂ ಚ ಯೇನ ತ್ವಾಹಮಚೂಚುದಮ್ ॥೪೨॥

ಆಗ ನನಗೆ ತಪಸ್ಸಿನ ಬಲವನ್ನೂ, ವೇದದ ಬಲವನ್ನೂ ಮತ್ತು ಬ್ರಾಹ್ಮಣರ ಬಲವನ್ನೂ ನೋಡಿ ವಿಸ್ಮಯವುಂಟಾಯಿತು. ಅದರಿಂದ ನಾನು ನಿನ್ನನ್ನು ಮಾತನಾಡುವಂತೆ ಒತ್ತಾಯ ಮಾಡಿದೆನು.

ಸತ್ಯಂ ದಮಸ್ತಪೋ ದಾನಮಹಿಂಸಾ ಧರ್ಮನಿತ್ಯತಾ ।
ಸಾಧಕಾನಿ ಸದಾ ಪುಂಸಾಂ ನ ಜಾತಿರ್ನ ಕುಲಂ ನೃಪ ॥೪೨॥

ಎಲೈ ರಾಜನೇ, ಸತ್ಯ, ಇಂದ್ರಿಯನಿಗ್ರಹ, ತಪಸ್ಸು, ದಾನ, ಅಹಿಂಸಾ, ಸರ್ವದಾ ಧರ್ಮಾಚರಣೆ ಇವು ಮನುಷ್ಯನಿಗೆ ಯಾವಾಗಲೂ ಸಾಧಕವೇ ಹೊರತು ಜಾತಿಯಾಗಲೀ, ಕುಲವಾಗಲೀ ಅಲ್ಲ.

ಅರಿಷ್ಟ ಏಷ ತೇ ಭ್ರಾತಾ ಭೀಮಸೇನೋ ಮಹಾಬಲಃ ।
ಸ್ವಸ್ತಿ ತೇऽಸ್ತು ಮಹಾರಾಜ ಗಮಿಷ್ಯಾಮಿ ದಿವಂ ಪುನಃ ॥೪೩॥

ಎಲೈ ಮಹಾರಾಜನೇ, ನಿನ್ನ ತಮ್ಮನಾದ ಮಹಾಬಲನಾದ ಭೀಮಸೇನನು ಪೂರ್ಣಕ್ಷೇಮದಿಂದ ಇದ್ದಾನೆ. ನಿನಗೆ ಮಂಗಳವಾಗಲಿ. ನಾನು ಪುನಃ ಸ್ವರ್ಗಕ್ಕೆ ಹೋಗುವೆನು.

ಸ ಚಾಯಂ ಪುರುಷವ್ಯಾಘ್ರ ಕಾಲಃ ಪುಣ್ಯ ಉಪಾಗತಃ ।
ತದಸ್ಮಾತ್ ಕಾರಣಾತ್ ಪಾರ್ಥ ಕಾರ್ಯಂ ಮಮ ಮಹತ್‌ಕೃತಮ್ ॥

ಎಲೈ ಪುರುಷವ್ಯಾಘ್ರನೇ, ನನಗೆ ಇಂತಹ ಪುಣ್ಯಕಾಲವು ಪ್ರಾಪ್ತವಾಗಿದೆ. ಎಲೈ ಪಾರ್ಥನೇ, ಈ ಕಾರಣದಿಂದ ನೀನು ನನಗೆ ದೊಡ್ಡ ಉಪಕಾರವನ್ನು ಮಾಡಿದ್ದೀಯೆ.

ವೈಶಂಪಾಯನಃ

ತತಸ್ತಸ್ಮಿನ್ ಮುಹೂರ್ತೇ ತು ವಿಮಾನಂ ಕಾಮಗಾಮಿ ವೈ ।
ಅವಪಾತೇನ ಮಹತಾ ತತ್ರಾವಾಪ ತದುತ್ತಮಮ್ ॥೪೬॥

ವೈಶಂಪಾಯನ– ಆಗ ಆ ಮುಹೂರ್ತದಲ್ಲಿ ಕಾಮಗಾಮಿಯಾದ ಒಂದು ಕ್ಷೇತ್ರವಾದ ವಿಮಾನವು ಬಹಳ ಮೇಲಿನಿಂದ ಕೆಳಗಿಳಿದು ಅಲ್ಲಿಗೆ ಬಂದಿತು.

ಇತ್ಯುಕ್ತ್ವಾ ऽऽಜಗರಂ ದೇಹಂ ಮುಕ್ತ್ವಾ ಸ ನಹುಷೋ ನೃಪಃ ।
ದಿವ್ಯಂ ವಪುಃ ಸಮಾಸ್ಥಾಯ ಗತಸ್ತ್ರಿದಿವಮೇವ ಹ ॥೪೭॥

ನಹುಷರಾಜನು ಹೀಗೆ ಮಾತನಾಡಿ ಆ ಸರ್ಪದೇಹವನ್ನು ಬಿಟ್ಟು ದಿವ್ಯವಾದ ದೇಹವನ್ನು ಧರಿಸಿ ಸ್ವರ್ಗಕ್ಕೇ ಹೊರಟುಹೋದನು.

ಯುಧಿಷ್ಠಿರೋऽಪಿ ಧರ್ಮಾತ್ಮಾ ಭ್ರಾತ್ರಾ ಭೀಮೇನ ಸಂಗತಃ ।
ಧೌಮ್ಯೇನ ಸಹಿತಃ ಶ್ರೀಮಾನಾಶ್ರಮಂ ಪುನರಾಗಮತ್ ॥೪೮॥

ಧರ್ಮಾತ್ಮನಾದ ಕಾಂತಿಯುಕ್ತನಾದ ಯುಧಿಷ್ಠಿರನೂ ಸಹ ತಮ್ಮನಾದ ಭೀಮನಿಂದಲೂ ಮತ್ತು ಧೌಮ್ಯರಿಂದಲೂ ಸಹಿತನಾಗಿ ಪುನಃ ತನ್ನ ಆಶ್ರಮವನ್ನು ತಲುಪಿದನು.

ತತೋ ದ್ವಿಜೇಭ್ಯಃ ಸರ್ವೇಭ್ಯಃ ಸಮೇತೇಭ್ಯೋ ಯಥಾತಥಮ್ ।
ಕಥಯಾಮಾಸ ತತ್ಸರ್ವಂ ಧರ್ಮರಾಜೋ ಯುಧಿಷ್ಠಿರಃ ॥೪೯॥

ಅನಂತರ ಅಲ್ಲಿಗೆ ಬಂದ ಎಲ್ಲಾ ಬ್ರಾಹ್ಮಣರಿಗೂ ನಡೆದ ಎಲ್ಲಾ ಘಟನೆಯನ್ನೂ ಧರ್ಮರಾಜನಾದ ಯುಧಿಷ್ಠಿರನು ವಿಸ್ತಾರವಾಗಿ ಹೇಳಿದನು.

ತತ್ಶ್ರುತ್ವಾ ತೇ ದ್ವಿಜಾಃ ಸರ್ವೇ ಭ್ರಾತರಶ್ಚಾಸ್ಯ ತೇ ತ್ರಯಃ ।
ಆಸನ್ ಸುಪ್ರೀಡಿತಾ ರಾಜನ್ ದ್ರೌಪದೀ ಚ ಯಶಸ್ವಿನೀ ॥೫೦॥

ಎಲೈ ರಾಜನೇ, ಅದನ್ನು ಕೇಳಿದ ಅಲ್ಲಿಗೆ ಬಂದ ಎಲ್ಲಾ ಬ್ರಾಹ್ಮಣರೂ ಮತ್ತು ಧರ್ಮರಾಜನ ಮೂರು ತಮ್ಮಂದಿರೂ ಮತ್ತು ಕೀರ್ತಿಶಾಲಿನಿಯಾದ ದ್ರೌಪದಿಯೂ ಬಹಳ ನಾಚಿಕೆಗೊಂಡರು.

ತೇ ತು ಸರ್ವೇ ದ್ವಿಜಶ್ರೇಷ್ಠಾಃ ಪಾಂಡವಾನಾಂ ಹಿತೇಪ್ಸಯಾ ।
ಮೈವಮಿತ್ಯಬ್ರುವನ್ ಭೀಮಂ ಗರ್ಹಯಂತೋಽಸ್ಯ ಸಾಹಸಮ್ ॥೫೧॥

ಆ ಎಲ್ಲ ಬ್ರಾಹ್ಮಣಶ್ರೇಷ್ಠರು ಪಾಂಡವರಿಗೆ ಹಿತವನ್ನು ಬಯಸಿ ಭೀಮಸಾಹಸವನ್ನು ತೆಗಳುತ್ತಾ ಇನ್ನೊಮ್ಮೆ ಹೀಗೆ ಮಾಡಬಾರದು ಎಂದು ಹೇಳಿದರು.

ಪಾಂಡವಾಸ್ತು ಭಯಾನ್ಮುಕ್ತಂ ಪ್ರೇಕ್ಷ್ಯ ಭೀಮಂ ಮಹಾಬಲಮ್ ।
ಹರ್ಷಮಾಹಾರಯಾಂಚಕ್ರುರ್ವಿಜಹ್ರುಶ್ಚ ಮುದಾ ಯುತಾಃ ॥೫೨॥

ಪಾಂಡವರಾದರೂ ಭಯದಿಂದ ಮುಕ್ತನಾದ ಮಹಾಬಲನಾದ ಭೀಮಸೇನನನ್ನು ನೋಡಿ ಬಹಳ ಸಂತೋಷವನ್ನುಪಟ್ಟು ಆ ಸಂತೋಷದಿಂದ ಕೂಡಿದವರಾಗಿ ವಿಹಾರವನ್ನು ಮಾಡಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಸಪ್ತತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಅಜಗರಪರ್ವಣಿ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ತೈದನೆಯ ಅಧ್ಯಾಯ ಮುಗಿಯಿತು

ಮಾರ್ಕಂಡೇಯಸಮಾಸ್ಯಾಪರ್ವ

ಮಹಾಭಾರತ ತಾತ್ಪರ್ಯನಿರ್ಣಯ -೨೨ ಅಧ್ಯಾಯ

ಮಾರ್ಕಂಡೇಯಸ್ತದಾऽऽಗತ್ಯ ತೇಷಾಮಕಥಯತ್ ಕಥಾಃ ।
ಬಹ್ವ್ಯಶ್ಚೈವ ವಿಚಿತ್ರಾಶ್ಚ ಭಾಷಾತ್ರಯಸಮನ್ವಿತಾಃ ॥೩೭೨॥

ಮಾರ್ಕಂಡೇಯ ಮುನಿ ಬಂದು ಪಾಂಡವರಿಗೆ ಮೂರು ಭಾಷೆಗಳಿಂದ ಕೂಡಿದ ವಿಚಿತ್ರವಾದ ಬಹಳ ಕಥೆಗಳನ್ನು ಹೇಳಿದ.

ಲೋಕದರ್ವನಮಾಶ್ರಿತ್ಯ ದೇವಾಶ್ಚ ಮನುಯಸ್ತಥಾ ।
ಬ್ರೂಯುಃ ಕಥಾಸ್ತತ್ರ ಶಿಕ್ಷಾ ಗ್ರಾಹ್ಯಾ ನಾರ್ಥಃ ಕಥಂಚನ ॥೩೭೩॥

ಲೋಕ ರೀತಿಯನ್ನು ಅನುಸರಿಸಿ ದೇವತೆಗಳೂ ಮುನಿಗಳೂ ಕಥೆಗಳನ್ನು ಹೇಳಬಹುದು. ಆಗ ಅದರಲ್ಲಿನೀತಿಯನ್ನು ಮಾತ್ರ ಸ್ವೀಕರಿಸಬೇಕು. ಕಥಾ ಮಸ್ತುವನ್ನಲ್ಲ.

ಅರ್ಥಃ ಸಮಾಧಿಭಾಷಾಹು ಗ್ರಾಹ್ಯಃ ಸರ್ವೋऽಪ್ಯಸಂಶಯಮ್ ।
ಪರದರ್ಶನಭಾಷಾಸು ಜ್ಞೇಯಂ ತದ್ದರ್ಶನಂ ತಥಾ ॥೩೭೪॥

ಗ್ರಾಹ್ಯೋ ನಾರ್ಥೋ ವೈದಿಕಂ ತು ದರ್ಶನಂ ಗ್ರಾಹ್ಯಮೇವ ಹಿ ।
ಅನ್ಯಾರ್ಥೋ ಗುಹ್ಯಭಾಷಾಸು ಗ್ರಾಹ್ಯ ಏವಂ ವಿನಿರ್ಣಯಃ ॥೩೭೫॥

ಸಮಾಧಿ ಭಾಷೆಗಳಲ್ಲಿ ಹೇಳಿದ ವಿಷಯವೆಲ್ಲವೂ ನಿಸ್ಸಂಶಯವಾಗಿ ಗ್ರಾಹ್ಯ. ಪರದರ್ಶನ ಭಾಷೆಯಲ್ಲಿ ಹೇಳಿದಾಗ ಪರರ ದರ್ಶನ ಹಾಗೆ ಇದೆ ಎಂದು ಮಾತ್ರ ತಿಳಿಯಬೇಕು. ಹೇಳಿದ ವಿಷಯ ಗ್ರಾಹ್ಯವಲ್ಲ. ವೈದಿಕ ಪರದರ್ಶನವು ಮಾತ್ರ ಗ್ರಾಹ್ಯವೇ. ಗುಹ್ಯ ಭಾಷೆಗಳಲ್ಲಿ ಬೇರೆಯೇ ಅರ್ಥಗ್ರಾಹ್ಯ. ಹೀಗೆ ಶಾಸ್ತ್ರಗಳಲ್ಲಿ ಭಾಷಾ ನಿರ್ಣಯವಿದೆ.

★ ★ ★ ★

ನೂರ ಎಪ್ಪತ್ತಾರನೆಯ ಅಧ್ಯಾಯ

ವರ್ಷಾಕಾಲ ಶರತ್ಕಾಲಗಳ ವರ್ಣನೆ.

ವೈಶಂಪಾಯನಃ

ನಿದಾಘಾಂತಕರಃ ಕಾಲಃ ಸರ್ವಭೂತಸುಖಾವಹಃ ।
ತತ್ರೈವ ವಸತಾಂ ತೇಷಾಂ ಪ್ರಾವೃಟ್ ಸಮಭಿಪದ್ಯತ ॥೧॥

ವೈಶಂಪಾಯನ– ಅವರು ಅಲ್ಲಿಯೇ ವಾಸಿಸುತ್ತಿರುವಾಗ ಬೇಸಿಗೆ ತಾಪವನ್ನು ಕಡಿಮೆ ಮಾಡುವ ಎಲ್ಲ ಪ್ರಾಣಿಗಳಿಗೂ ಸುಖವನ್ನು ತರುವ ಮಳೆಗಾಲವು ಉಂಟಾಯಿತು.

ಛಾದಯಂತೋ ಮಹಾಘೋಷಾಃ ಖಂ ದಿಶಶ್ಚ ಬಲಾಹಕಾಃ ।
ಪ್ರವವರ್ಷುರ್ದಿವಾರಾತ್ರಮಸಿತಾಃ ಸತತಂ ತದಾ ॥೨॥

ತಾಪಾತ್ಯಯನಿಕೇತಾಶ್ಚ ಶತಶೋಽಥ ಸಹಸ್ರಶಃ ।
ಅಪೇತಾರ್ಕಂಪ್ರಭಾಜಾಲಾಃ ಸವಿದ್ಯುದ್ವಿಮಲಪ್ರಭಾಃ ॥೩॥

ಸೂರ್ಯನ ಕಿರಣಗಳ ಪ್ರಭೆಯಿಂದ ರಹಿತವಾದ, ಮಿಂಚಿನ ವಿಮಲಕಾಂತಿಗಳಿಂದ ಕೂಡಿದ, ಬೇಸಿಗೆಕಾಲದ ಕೊನೆಯಲ್ಲಿ ಬಂದ ಮಳೆಗಾಲವನ್ನು ಆಶ್ರಯಿಸಿದ, ಮಹಾಘೋಷವುಳ್ಳ ಕಪ್ಪುಮೋಡಗಳು ದಿಕ್ಕುವಿದಿಕ್ಕುಗಳನ್ನು ಮುಚ್ಚಿಕೊಂಡು ಸತತವಾಗಿ ಮಳೆಯನ್ನು ಸುರಿಸಿದವು.

ವಿರೂಢಶಷ್ಪ ಧರಣೀ ಮತ್ತದಂಶಸರೀಸೃಪಾ ।
ಬಭೂವ ಪಯಸಾ ಸಿಕ್ತಾ ಶಾಂತಾ ಸರ್ವಮನೋರಮಾ ॥೪॥

ಹುಲ್ಲುಗಳು ಬೆಳೆದು ಮದಿಸಿದ ಕ್ರಿಮಿಯಿಂದ ಮತ್ತು ಸರ್ಪಗಳಿಂದ ಕೂಡಿದ ಮತ್ತು ನೀರಿನಿಂದ ತೋಯಿಸಲ್ಪಟ್ಟ ಭೂಮಿಯು ಶಾಂತವೂ ಮತ್ತು ಸರ್ವ ಮನೋರಮವೂ ಆಯಿತು.

ನ ಸ್ಮ ಪ್ರಜ್ಞಾಯತೇ ಕಿಂಚಿದಂಭಸಾ ಸಮವಸ್ಥತೇ ।
ಸಮಂ ವಾ ವಿಷಮಂ ವಾಪಿ ನದ್ಯೋ ವಾ ಸ್ಥಾವರಾಣಿ ಚ ॥೫॥

ನೀರು ಎಲ್ಲಕಡೆಯಲ್ಲಿಯೂ ಹರಡಿರುವಾಗ ಉಬ್ಬುತಗ್ಗುಗಳಾಗಲೀ ಅಥವಾ ನದಿಗಳು ಮತ್ತು ಭೂಮಿಯಾಗಲೀ ಕಾಣುತ್ತಿರಲಿಲ್ಲ.

ಕ್ಷುಬ್ಧತೋಯಾ ಮಹಾವೇಗಾಃ ಶ್ವಸಮಾನಾ ಇವಾಶುಗಾಃ ।
ಸಿಂಧವಃ ಶೋಭಯಾಂಚಕ್ರುಃ ಕಾನನಾನಿ ತಪಾತ್ಯಯೇ ॥೬॥

ಕ್ಷುಬ್ಧವಾದ ಜಲವುಳ್ಳ ಮಹಾವೇಗದಿಂದ ಕೂಡಿದ ನದಿಗಳು ಬೇಸಿಗೆ ಕಾಲವು ಕಳೆಯುತ್ತಿರಲು ಕಾಡುಗಳಲ್ಲಿ ಗಟ್ಟಿಯಾಗಿ ಉಸಿರಾಡುವ ಅಶ್ವಗಳಂತೆ ಕ್ಷೋಭೆಯನ್ನು ಉಂಟುಮಾಡಿದವು.

ನದತಾಂ ಕಾನನಾಂತೇಷು ಶ್ರೂಯಂತೇ ವಿವಿಧಾಃ ಸ್ವನಾಃ ।
ವೃಷ್ಟಿಭಿಶ್ಚಾದ್ಯಮಾನಾನಾಂ ವರಾಹಮೃಗಪಕ್ಷಿಣಾಮ್ ॥೭॥

ಮಳೆಯಿಂದ ಆವರಿಸಲ್ಪಟ್ಟು ವನಪ್ರದೇಶಗಳಲ್ಲಿ ಕಿರುಚುವ ವರಾಹ ಮೃಗಪಕ್ಷಿಗಳ ವಿಧವಿಧವಾದ ಧ್ವನಿಗಳು ಕೇಳಿಬರುತ್ತಿದ್ದವು.

ಸ್ತೋಕಕಾಃ ಶಿಖಿನಶ್ಚೈವ ಪುಂಸ್ಕೋಕಿಲಗಣೈಃ ಸಹ ।
ಮತ್ತಾಃ ಪರಿಪತಂತಿ ಸ್ಮ ದರ್ದುರಾಶ್ಚೈವ ದರ್ಪಿತಾಃ ॥೮॥

ಸ್ತೋಕಕಗಳು (ಪಕ್ಷಿವಿಶೇಷ) ಮತ್ತು ನವಿಲುಗಳು ಗಂಡುಕೋಗಿಲೆಗಳ ಸಮೂಹದ ಜೊತೆಯಲ್ಲಿ ಮದದಿಂದ ಸುತ್ತಲೂ ಹಾರಾಡುತ್ತಿದ್ದವು ಮತ್ತು ಕಪ್ಪೆಗಳು ದರ್ಪದಿಂದ ಹೊರಬರುತ್ತಿದ್ದವು.

ತಥಾ ಬಹುವಿಧಾಕಾರಾ ಪ್ರಾವೃಣ್ಮೇಘಾನುನಾದಿತಾ ।
ಅಭ್ಯತೀತಾ ಶಿವಾ ತೇಷಾಂ ಚರತಾಂ ಮರುಧನ್ವಸು ॥೯॥

ಕಾಡಿನಲ್ಲಿ ಮರಗಳಿಲ್ಲದ ಪ್ರದೇಶದಲ್ಲಿ ಸಂಚರಿಸುವ ಅವರಿಗೆ ಮೇಘಗಳ ಗರ್ಜನೆಯಿಂದ ಕೂಡಿದ ಮಂಗಳವಾದ ಬಹುವಿಧವಾದ ವರ್ಷಾಕಾಲವು ಕಳೆಯಿತು.

ಕ್ರೌಂಚಹಂಸಸಮಾಕೀರ್ಣಾ ಶರತ್ ಪ್ರಮುದಿತಾಭವತ್ ।
ರೂಢಕಕ್ಷವನಪ್ರಸ್ಥಾ ಪ್ರಸನ್ನಜಲನಿಮ್ನಗಾ ॥೧೦॥

ಅನಂತರ ತಿಳಿಯಾದ ನೀರಿನಿಂದ ಕೂಡಿದ ನದಿಗಳುಳ್ಳ ಬೆಳೆದುನಿಂತ ಹುಲ್ಲುಗಾವಲು ಮತ್ತು ಮರಗಳಿಂದ ಕೂಡಿದ ಕ್ರೌಂಚಹಂಸ ಮೊದಲಾದ ಪಕ್ಷಿಗಳಿಂದ ತುಂಬಿದ ಶರತ್‌ಕಾಲವು ಸಂತೋಷದಿಂದ ಉದಯಿಸಿತು.

ವಿಮಲಾಕಾಶನಕ್ಷತ್ರಾ ಶರತ್ತೇಷಾಂ ಶಿವಾऽಭವತ್ ।
ಮೃಗದ್ವಿಜಸಮಾಕೀರ್ಣಾ ಪಾಂಡವಾನಾಂ ಮಹಾತ್ಮನಾಮ್ ॥೧೧॥

ನಿರಭ್ರವಾದ ಆಕಾಶದಲ್ಲಿ ಶೋಭಿಸುವ ನಕ್ಷತ್ರವುಳ್ಳ ,ಮೃಗಪಕ್ಷಿಗಳುಳ್ಳ ಶರತ್ಕಾಲವವು ಮಹಾತ್ಮರಾದ ಪಾಂಡವರಿಗೆ ಮಂಗಳಕರವಾಗಿದ್ದಿತು.

ದೃಶ್ಯಂತೇ ಶಾಂತರಜಸಃ ಕ್ಷಪಾ ಜಲದಶೀತಲಾಃ ।
ಗ್ರಹನಕ್ಷತ್ರಸಂಘೈಶ್ಚ ಸೋಮೇನ ಚ ವಿರಾಜಿತಾಃ ॥೧೨॥

ಧೂಳೆಲ್ಲವೂ ಅಡಗಿ ಮೋಡದಿಂದ ಶೀತಲವಾದ ರಾತ್ರಿಗಳು ಗ್ರಹನಕ್ಷತ್ರ ಸಮೂಹಗಳಿಂದಲೂ ಮತ್ತು ಚಂದ್ರನಿಂದಲೂ ವಿರಾಜಿತವಾಗಿ ಕಾಣುತ್ತಿದ್ದವು.

ಕುಮುದೈಃ ಪುಂಡರೀಕೈಶ್ಚ ಶೀತವಾರಿಧರಾಃ ಶಿವಾಃ ।
ನದೀಃ ಪುಷ್ಕರಿಣೀಶ್ಚೈವ ದದೃಶುಃ ಸಮಲಂಕೃತಾಃ ॥೧೩॥

ನದಿಗಳು ಮತ್ತು ಸರೋವರಗಳು ತಂಪಾದ ನೀರನ್ನು ಹೊಂದಿ ಕುಮುದ ಕಮಲಗಳಿಂದ ಅಲಂಕೃತವಾಗಿ ಮಂಗಳಪ್ರದವಾಗಿ ಕಾಣುತ್ತಿದ್ದವು.

ಆಕಾಶಸಂಕಾಶಜಲಾಂ ತೀರವಾನೀರಸಂಕುಲಾಮ್ ।
ಬಭೂವ ಚರತಾಂ ಹರ್ಷಃ ಪುಣ್ಯತೀರ್ಥಾಂ ಸರಸ್ವತೀಮ್ ॥೧೪॥

ಆಕಾಶದಂತೆ ನೀಲಿಯಾದ ನೀರುಳ್ಳ ತೀರದಲ್ಲಿ ಬೆಳೆದ ವಾನೀರ ವೃಕ್ಷಗಳಿಂದ ನಿಬಿಡವಾದ ಪುಣ್ಯತೀರ್ಥವಾದ ಸರಸ್ವತೀ ನದಿಯ ದಡದಲ್ಲಿ ಸಂಚರಿಸುವ ಪಾಂಡವರಿಗೆ ಸಂತೋಷಪಟ್ಟರು.

ತೇ ವೈ ಮುಮುದಿರೇ ವೀರಾಃ ಪ್ರಸನ್ನಸಲಿಲಾಂ ಶಿವಾಮ್ ।
ಪಶ್ಯಂತೋ ದೃಢಧನ್ವಾನಃ ಪರಿಪೂರ್ಣಾಂ ಸರಸ್ವತೀಮ್ ॥೧೫॥

ದೃಢಧನುಸ್ಸುಳ್ಳ ಆ ವೀರರು ಸ್ವಚ್ಛವಾದ ನೀರಿನಿಂದ ತುಂಬಿಹರಿಯುತ್ತಿದ್ದ ಮಂಗಳವಾದ ಸರಸ್ವತೀ ನದಿಯನ್ನು ನೋಡಿ ಸಂತೋಷವಾಯಿತು.

ತೇಷಾಂ ಪುಣ್ಯತಮಾ ರಾತ್ರಿಃ ಪರ್ವಸಂಧೌ ಸ್ಮ ಶಾರದೀ ।
ತತ್ರೈವ ವಸತಾಮಾಸೀತ್ ಕಾರ್ತಿಕೀ ಜನಮೇಜಯ ॥೧೬॥

ಎಲೈ ಜನಮೇಜಯನೇ, ಶರತ್ಕಾಲ ಮತ್ತು ಹೇಮಂತಕಾಲಗಳ ಸಂಧಿಯ ಪರ್ವದಲ್ಲಿ ಉಂಟಾಗುವ ಕಾರ್ತಿಕಮಾಸದ ಪವಿತ್ರವಾದ ಪೌರ್ಣಮಾಸಿಯು ಅಲ್ಲಿಯೇ ವಾಸಮಾಡುವ ಪಾಂಡವರಿಗೆ ಉಂಟಾಯಿತು.

ಪುಣ್ಯಕೃದ್ಭಿರ್ಮಹಾಸತ್ತ್ವೈಸ್ತಾಪಸೈಃ ಸಹ ಪಾಂಡವಾಃ ।
ತತ್ಸರ್ವೇ ಭರತಶ್ರೇಷ್ಠಾಃ ಸಮೂಹುರ್ಯೋಗಮುತ್ತಮಮ್ ॥೧೭॥

ಪುಣ್ಯವಂತರೂ, ಮಹಾಸಾಮರ್ಥ್ಯೋಪೇತರೂ ಆದ ತಪಸ್ವಿಗಳ ಜೊತೆಯಲ್ಲಿ ಚಲಿಸುತ್ತಿದ್ದ ಭರತಶ್ರೇಷ್ಠರಾದ ಪಾಂಡವರೆಲ್ಲರೂ ತಮ್ಮ ಶ್ರೇಷ್ಠವಾದ ಸಾಧನವನ್ನು ತಾವೇ ಹೊತ್ತುಕೊಂಡು ನಡೆದರು.

ತಮಿಸ್ರಾಭ್ಯುದಯೇ ತಸ್ಮಿನ್ ಧೌಮ್ಯೇನ ಸಹ ಪಾಂಡವಾಃ ।
ಸೂತೈಃ ಪೌರೋಗವೈಶ್ಚೈವ ಕಾಮ್ಯಕಂ ಪ್ರಯಯುರ್ವನಮ್ ॥೧೮॥

ಆ ಕಾಡಿನಲ್ಲಿ ಸಂಜೆಯ ಕತ್ತಲು ಪ್ರಾರಂಭವಾಗುವ ವೇಳೆಗೆ ಧೌಮ್ಯರಿಂದ ಸಹಿತರಾದ ಪಾಂಡವರು ಸೂತರ ಮತ್ತು ಪೌರೋಗವರ ಜೊತೆಯಲ್ಲಿ ಕಾಮ್ಯಕವನವನ್ನು ತಲುಪಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಕಾಮ್ಯಕವನಪ್ರವೇಶೇ ಷಟ್‌ಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಮಾರ್ಕಂಡೇಯಸಮಾಖ್ಯಾಪರ್ವಣಿ
ಕಾಮ್ಯಕವನಪ್ರವೇಶೇ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ತಾರನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ಎಪ್ಪತ್ತೇಳನೆಯ ಅಧ್ಯಾಯ

ಕಾಮ್ಯಕವನವನ್ನು ಕುರಿತು ಸತ್ಯಭಾಮಾ ಸಹಿತ ಕೃಷ್ಣನ, ನಾರದರ ಮತ್ತು ಮಾರ್ಕಂಡೇಯರ ಆಗಮನ. ಕೃಷ್ಣನ ಅಪ್ಪಣೆಯಂತೆ ಮಾರ್ಕಂಡೇಯರಿಂದ ಪುರಾಣಕಥನ ಪ್ರಾರಂಭ.

ವೈಶಂಪಾಯನಃ

ಕಾಮ್ಯಕಂ ಪ್ರಾಪ್ಯ ಕೌರವ್ಯ ಯುಧಿಷ್ಠಿರಪುರೋಗಮಾಃ ।
ಕೃತಾತಿಥ್ಯಾ ಮುನಿಗಣೈರ್ನಿಷೇದುಃ ಸಹ ಕೃಷ್ಣಯಾ ॥೧॥

ವೈಶಂಪಾಯನ– ಎಲೈ ಕೌರವ್ಯನಾದ ಜನಮೇಜಯನೇ, ಯುಧಿಷ್ಠಿರ ಮೊದಲಾದವರು ಕಾಮ್ಯಕವನವನ್ನು ತಲುಪಿ ಮುನಿಗಣಗಳಿಂದ ಸತ್ಕಾರವನ್ನು ಹೊಂದಿದವರಾಗಿ ದ್ರೌಪದಿಯ ಜೊತೆಯಲ್ಲಿ ಅಲ್ಲಿ ವಾಸಮಾಡಿದರು.

ತತಸ್ತಾನ್ ಪರಿವಿಶ್ವಸ್ತಾನ್ ವಸತಃ ಪಾಂಡುನಂದನಾನ್ ।
ಬ್ರಾಹ್ಮಣಾ ಬಹವಸ್ತತ್ರ ಸಮಂತಾತ್ ಪರ್ಯವಾರಯನ್ ॥೨॥

ಅನಂತರ ಅಲ್ಲಿ ಸಮಾಧಾನದಿಂದ ಪಾಂಡುನಂದನರು ವಾಸಮಾಡುತ್ತಿರಲು ಅನೇಕ ಬ್ರಾಹ್ಮಣರು ಅಲ್ಲಿಗೆ ಬಂದು ಅವರ ಸುತ್ತಲೂ ನೆರೆದರು.

ಅಥಾಬ್ರವೀದ್ ದ್ವಿಜಃ ಕಶ್ಚಿದರ್ಜುನಸ್ಯ ಪ್ರಿಯಃ ಸಖಾ ।
ಸ ಏಷ್ಯತಿ ಮಹಾಬಾಹುರ್ವಶೀ ಶೌರಿರುದಾರಧೀಃ ॥೩॥

ಅನಂತರ ಅರ್ಜುನನ ಪ್ರಿಯಸ್ನೇಹಿತನಾದ ಒಬ್ಬ ಬ್ರಾಹ್ಮಣನು ಉದಾರ ಬುದ್ಧಿಯುಳ್ಳ ಮಹಾಬಾಹುವಾದ ಸರ್ವನಿಯಾಮಕನಾದ ಶೌರಿಯಾದ ಕೃಷ್ಣನು ಇಲ್ಲಿಗೆ ಬರುವನು ಎಂದು ಹೇಳಿದನು.

ವಿದಿತಾ ಹಿ ಹರೇರ್ಯೂಯಮಿಹಾಯಾತಾಃ ಕುರೂದ್ವಹಾಃ ।
ಸದಾ ಹಿ ದರ್ಶನಾಕಾಂಕ್ಷೀ ಶ್ರೇಯೋನ್ವೇಷೀ ಚ ವೋ ಹರಿಃ ॥೪॥

ಎಲೈ ಕುರೂದ್ವಹರೇ, ನೀವು ಇಲ್ಲಿಗೆ ಬಂದ ವಿಷಯವು ಹರಿಗೆ ತಿಳಿದಿದೆ. ಅವನು ಯಾವಾಗಲೂ ನಿಮ್ಮ ದರ್ಶನಾಕಾಂಕ್ಷಿಯೂ ಮತ್ತು ಶ್ರೇಯಸ್ಸನ್ನು ಬಯಸುವವನೂ ಆಗಿದ್ದಾನೆ.

ಬಹುವತ್ಸರಜೀವೀ ಚ ಮಾರ್ಕಂಡೇಯೋ ಮಹಾತಪಾಃ ।
ಸ್ವಾಧ್ಯಾಯತಪಸಾ ಯುಕ್ತಃ ಕ್ಷಿಪ್ರಂ ಯುಷ್ಮಾನ್ ಸಮೇಷ್ಯತಿ ॥೫॥

ಮಹಾತಪಸ್ವಿಗಳೂ, ಅನೇಕ ವರ್ಷಗಳವರೆಗೆ ಜೀವಿಸುವ ಚಿರಂಜೀವಿಗಳೂ, ಸ್ವಾಧ್ಯಾಯತಪಸ್ಸಿನಿಂದ ಕೂಡಿದವರೂ ಆದ ಮಾರ್ಕಂಡೇಯರು ಬೇಗ ಬಂದು ನಿಮ್ಮ ಜೊತೆಯಲ್ಲಿ ಸೇರುವರು (ಎಂದು ಹೇಳಿದನು).

ತಥೈವ ಬ್ರುವತಸ್ತಸ್ಯ ಪ್ರತ್ಯದೃಶ್ಯತ ಕೇಶವಃ ।
ಶೈಬ್ಯಸುಗ್ರೀವಯುಕ್ತೇನ ರಥೇನ ರಥಿನಾಂ ವರಃ ॥೬॥

ಆ ಬ್ರಾಹ್ಮಣನು ಹಾಗೆ ಹೇಳುತ್ತಿರುವಂತೆಯೇ ಶೈಬ್ಯಸುಗ್ರೀವ ಅಶ್ವಗಳನ್ನು ಹೂಡಿದ ರಥದಿಂದ ಬರುತ್ತಿರುವ, ರಥಿಗಳಲ್ಲಿ ಶ್ರೇಷ್ಠನಾದ, ಕೇಶವನು ಕಾಣಿಸಿದನು.

ಮಘವಾನಿವ ಪೌಲೋಮ್ಯಾ ಸಹಿತಃ ಸತ್ಯಭಾಮಯಾ ।
ಉಪಾಯಾದ್ ದೇವಕೀಪುತ್ರೋ ದಿದೃಕ್ಷುಃ ಕುರುಸತ್ತಮಾನ್ ॥೭॥

ಸತ್ಯಭಾಮಾಸಹಿತನಾಗಿ ಶಚೀಸಹಿತ ಇಂದ್ರನಂತೆ ದೇವಕೀಪುತ್ರನು ಕುರುಶ್ರೇಷ್ಠರನ್ನು ನೋಡಲು ಬಯಸಿ ಅಲ್ಲಿಗೆ ಬಂದನು.

ಅವತೀರ್ಯ ರಥಾತ್ ಕೃಷ್ಣೋ ಧರ್ಮರಾಜಂ ಯಥಾವಿಧಿ ।
ವವಂದೇ ಮುದಿತೋ ಧೀಮಾನ್ ಭೀಮಂ ಚ ಬಲಿನಾಂ ವರಮ್ ॥

ಮೇಧಾವಿಯಾದ ಕೃಷ್ಣನು ರಥದಿಂದ ಇಳಿದು ಸಂತೋಷದಿಂದ ಧರ್ಮರಾಜನನ್ನೂ ಮತ್ತು ಬಲವುಳ್ಳವರಲ್ಲಿ ಶ್ರೇಷ್ಠನಾದ ಭೀಮನನ್ನೂ ವಂದಿಸಿದನು.

ಪೂಜಯಾಮಾಸ ಧೌಮ್ಯಂ ಚ ಯಮಾಭ್ಯಾಮಭಿವಾದಿತಃ ।
ಪರಿಷ್ವಜ್ಯ ಗುಡಾಕೇಶಂ ದ್ರೌಪದೀಂ ಪರ್ಯಸಾಂತ್ವಯತ್ ॥೯॥

ಅವನು ಧೌಮ್ಯರನ್ನು ಪೂಜಿಸಿದನು. ನಕುಲಸಹದೇವರಿಂದ ನಮಸ್ಕರಿಸಲ್ಪಟ್ಟನು. ಅರ್ಜುನನನ್ನು ಆಲಿಂಗಿಸಿ ದ್ರೌಪದಿಯನ್ನು ಸಮಾಧಾನಪಡಿಸಿದನು.

ಸ ದೃಷ್ಟ್ವಾ ಫಲ್ಗುನಂ ವೀರಂ ಚಿರಸ್ಯ ಪ್ರಿಯಮಾಗತಮ್ ।
ಪರ್ಯಷ್ವಜತ ದಾಶಾರ್ಹಃ ಪುನಃ ಪುನರರಿಂದಮಃ ॥೧೦॥

ಅರಿಂದಮನಾದ ಆ ದಾಶಾರ್ಹನು ಬಹುಕಾಲದಮೇಲೆ ಹಿಂದಿರುಗಿ ಬಂದ ವೀರನಾದ ಅರ್ಜುನನನ್ನು ನೋಡಿ ಅವನನ್ನು ಪುನಃ ಪುನಃ ಆಲಿಂಗಿಸಿದನು.

ತಥೈವ ಸತ್ಯಭಾಮಾಽಪಿ ದ್ರೌಪದೀಂ ಪರಿಷಸ್ವಜೇ ।
ಪಾಂಡವಾನಾಂ ಪ್ರಿಯಾಂ ಭಾರ್ಯಾಂ ಕೃಷ್ಣಸ್ಯ ಮಹಿಷೀ ಪ್ರಿಯಾ॥೧೧॥

ಅದರಂತೆ ಕೃಷ್ಣನ ಪ್ರಿಯರಾಣಿಯಾದ ಸತ್ಯಭಾಮೆಯೂ ಸಹ ಪಾಂಡವರ ಪ್ರಿಯಪತ್ನಿಯಾದ ದ್ರೌಪದಿಯನ್ನು ಆಲಿಂಗಿಸಿದಳು.

ತತಸ್ತೇ ಪಾಂಡವಾಃ ಸರ್ವೇ ಸಭಾರ್ಯಾಃ ಸಪುರೋಹಿತಾಃ ।
ಆನರ್ಚುಃ ಪುಂಡರೀಕಾಕ್ಷಂ ಪರಿವವ್ರುಶ್ಚ ಸರ್ವಶಃ ॥೧೨॥

ಅನಂತರ ಆ ಪಾಂಡವರೆಲ್ಲರೂ ಪತ್ನೀ ಪುರೋಹಿತ ಸಹಿತರಾಗಿ ಪುಂಡರೀಕಾಕ್ಷನಾದ ಕೃಷ್ಣನನ್ನು ಪೂಜಿಸಿ ಅವನ ಸುತ್ತಲೂ ಕುಳಿತರು.

ಕೃಷ್ಣಸ್ತು ಪಾರ್ಥೇನ ಸಮೇತ್ಯ ವಿದ್ವಾನ್ ಧನಂಜಯೇನಾಸುರತರ್ಜನೇನ।
ಬಭೌ ಯಥಾ ಭೂತಪತಿರ್ಮಹಾತ್ಮಾ ಸಮೇತ್ಯ ಸಾಕ್ಷಾದ್ ಭಗವಾನ್ ಗುಹೇನ ॥೧೩॥

ಸರ್ವಜ್ಞನಾದ ಕೃಷ್ಣನಾದರೂ ಅಸುರ ಸಂಹಾರಕನಾದ ಅರ್ಜುನನ ಜೊತೆಯಲ್ಲಿ ಕೂಡಿ ಮಹಾನುಭಾವನಾದ ಪೂಜ್ಯನಾದ ಭೂತಪತಿಯಾದ ರುದ್ರನು ಗುಹನ ಜೊತೆಯಲ್ಲಿ ಶೋಭಿಸಿದಂತೆ ಶೋಭಿಸಿದನು.

ತತಃ ಸಮಸ್ತಾನಿ ಕಿರೀಟಮಾಲೀ ವನೇಷು ವೃತ್ತಾನಿ ಗದಾಗ್ರಜಾಯ ।
ಉಕ್ತ್ವಾ ಯಥಾವತ್ ಪುನರನ್ವಪೃಚ್ಛತ್ ಕಥಂ ಸುಭದ್ರಾ ಚ ಸ ಚಾಭಿಮನ್ಯುಃ ॥೧೪॥

ಅನಂತರ ಕಿರೀಟಮಾಲಿಯಾದ ಅರ್ಜುನನು ಗದಾಗ್ರಜನಾದ ಕೃಷ್ಣನಿಗೆ ದ್ವೈತವನಾದಿಗಳಲ್ಲಿ ನಡೆದ ಸಮಸ್ತ ವಿಷಯಗಳನ್ನೂ ಸರಿಯಾಗಿ ಹೇಳಿ ಪುನಃ ಸುಭದ್ರೆ ಮತ್ತು ಅಭಿಮನ್ಯುವು ಹೇಗಿದ್ದಾರೆ ಎಂದು ಕೇಳಿದನು.

ಸ ಪೂಜಯಿತ್ವಾ ಮಧುಹಾ ಯಥಾವತ್ ಪಾರ್ಥಂ ಚ ಕೃಷ್ಣಾಂ ಚ ಪುರೋಹಿತಂ ಚ ।
ಉವಾಚ ರಾಜಾನಮಭಿಪ್ರಶಂಸನ್ ಯುಧಿಷ್ಠಿರಂ ತತ್ರ ಸಹೋಪವಿಶ್ಯ ॥

ಆ ಮಧುಸೂದನನಾದ ಕೃಷ್ಣನು ಅರ್ಜುನನನ್ನೂ, ದ್ರೌಪದಿಯನ್ನೂ ಮತ್ತು ಪುರೋಹಿತರಾದ ಧೌಮ್ಯರನ್ನೂ ಯಥಾಯೋಗ್ಯವಾಗಿ ಸತ್ಕರಿಸಿ ಅಲ್ಲಿಯೇ ಕುಳಿತು ರಾಜನಾದ ಯುಧಿಷ್ಠಿರನನ್ನು ಪ್ರಶಂಸಿಸುತ್ತಾ ಹೀಗೆ ಮಾತನಾಡಿದನು.

ಧರ್ಮಃ ಪರಃ ಪಾಂಡವ ರಾಜ್ಯಲಾಭಾತ್
ತಸ್ಯಾರ್ಥಮಾಹುಸ್ತಪ ಏವ ರಾಜನ್ ।
ಸತ್ಯಾರ್ಜವಾಭ್ಯಾಂ ಚರತಾ ಸ್ವಧರ್ಮಂ
ಜಿತಸ್ತ್ವಯಾऽಯಂ ಚ ಪರಶ್ಚ ಲೋಕಃ ॥೧೭॥

ಎಲೈ ಪಾಂಡವನೇ, ರಾಜ್ಯಲಾಭಕ್ಕಿಂತಲೂ ಧರ್ಮವೇ ಶ್ರೇಷ್ಠವಾದುದು. ಎಲೈ ರಾಜನೇ, ತಪಸ್ಸನ್ನು ರಾಜ್ಯಲಾಭದ ಫಲವೆಂದು ಹೇಳುತ್ತಾರೆ. ಸತ್ಯ ಮತ್ತು ಆರ್ಜವಗಳಿಂದ ಸ್ವಧರ್ಮವನ್ನು ಆಚರಿಸುವ ನೀನು ಈ ಲೋಕವನ್ನೂ ಮತ್ತು ಪರಲೋಕವನ್ನೂ ಜಯಿಸಿದ್ದೀಯೆ.

ಅಧೀತಮಗ್ರೇ ಚರತಾ ವ್ರತಾನಿ
ಸಮ್ಯಗ್ಧನುರ್ವೇದಮವಾಪ್ಯ ಕೃತ್ಸ್ನಮ್ ।
ಕ್ಷಾತ್ರೇಣ ಧರ್ಮೇಣ ವಸೂನಿ ಲಬ್ಧ್ವಾ
ಸರ್ವೇ ಹ್ಯವಾಪ್ತಾಃ ಕ್ರತವಃ ಪುರಾಣಾಃ ॥೧೮॥

ನೀನು ಹಿಂದೆ ವ್ರತನಿಯಮಪೂರ್ವಕವಾಗಿ ಅಧ್ಯಯನವನ್ನು ಮಾಡಿ ಸಮಗ್ರವಾದ ಧನುರ್ವೇದವನ್ನು ಚೆನ್ನಾಗಿ ಕಲಿತು ಕ್ಷತ್ರಿಯ ಧರ್ಮಕ್ಕೆ ಅನುಸಾರವಾಗಿ ಧನವನ್ನು ಸಂಪಾದಿಸಿ ಶಾಸ್ತ್ರೋಕ್ತವಾದ ಎಲ್ಲಾ ಯಾಗಗಳನ್ನೂ ಮಾಡಿದ್ದೀಯೆ.

ನ ಗ್ರಾಮ್ಯಧರ್ಮೇಷು ರತಿಸ್ತವಾಸ್ತಿ
ಕಾಮಾನ್ನ ಕಿಂಚಿತ್ ಕುರುಷೇ ನರೇಂದ್ರ ।
ನ ಚಾರ್ಥಲೋಭಾತ್ ಪ್ರಜಹಾಸಿ ಧರ್ಮಂ
ತಸ್ಮಾತ್ ಪ್ರಭಾವಾದಸಿ ಧರ್ಮರಾಜಃ ॥೧೯॥

ಎಲೈ ನರೇಂದ್ರನೇ, ನಿನಗೆ ವಿಷಯಸುಖಗಳಲ್ಲಿ ಎಂದೂ ಆಸಕ್ತಿಯಿಲ್ಲ. ಕಾಮದಿಂದ ನೀನು ಯಾವ ಕಾರ್ಯವನ್ನೂ ಮಾಡುವುದಿಲ್ಲ. ಮತ್ತು ಧನಲೋಭದಿಂದ ಯಾವ ಧರ್ಮವನ್ನೂ ಬಿಡುವುದಿಲ್ಲ. ಆ ಪ್ರಭಾವದಿಂದ ನೀನು ಧರ್ಮರಾಜನಾಗಿದ್ದೀಯೆ.

ದಾನಂ ಚ ಸತ್ಯಂ ಚ ತಪಶ್ಚ ರಾಜನ್
ಶ್ರದ್ಧಾ ಚ ಬುದ್ಧಿಶ್ಚ ಕ್ಷಮಾ ಧೃತಿಶ್ಚ।
ಅವಾಪ್ಯ ರಾಷ್ಟ್ರಂ ವಸೂನಿ ಭೋಗಾನ್
ಏಷಾ ಪರಾ ಪಾರ್ಥ ಸದಾ ರತಿಸ್ತೇ ॥೨೦॥

ಎಲೈ ರಾಜನೇ, ದಾನ, ಸತ್ಯ, ತಪಸ್ಸು, ಶ್ರದ್ಧೆ, ಬುದ್ಧಿ, ಕ್ಷಮೆ, ಧೈರ್ಯ ಇವುಗಳಲ್ಲಿಯೇ ಸದಾ ನಿನ್ನ ಆಸಕ್ತಿಯಿದೆ. ರಾಷ್ಟ್ರವನ್ನೂ, ಸಂಪತ್ತನ್ನೂ ಮತ್ತು ಭೋಗವನ್ನೂ ಪುನಃ ಹೊಂದಿ (ದಾನಾದಿಗಳಲ್ಲಿ ರತನಾಗಿರುವುದೇ ನಿನ್ನ ಆಸೆ).

ಯದಾ ಜನೌಘಃ ಕುರುಜಾಂಗಲಾನಾಂ
ಕೃಷ್ಣಾಂ ಸಭಾಯಾಮವಶಾಮಪಶ್ಯತ್ ।
ಅಪೇತಧರ್ಮವ್ಯವಹಾರವೃತ್ತಂ
ಸಹೇತ ತತ್ ಪಾಂಡವ ಕಸ್ತ್ವದನ್ಯಃ ॥೨೧॥

ಎಲೈ ಪಾಂಡವನೇ, ಯಾವಾಗ ಸಭೆಯಲ್ಲಿ ಕುರುಜಾಂಗಲದ ಅನೇಕ ಜನರ ಸಮೂಹವು ಸಭೆಯಲ್ಲಿ ಪರಾಧೀನಳಾಗಿ ಧರ್ಮಕ್ಕೂ ಮತ್ತು ಲೋಕವ್ಯವಹಾರಕ್ಕೂ ಬಾಹಿರವಾದ ನಡವಳಿಕೆಯನ್ನು ದ್ರೌಪದಿಯು ಹೊಂದುವುದನ್ನು ನೋಡಿದರೋ ಅದನ್ನು ನಿನ್ನನ್ನು ಬಿಟ್ಟು ಬೇರೆ ಯಾರು ಸಹಿಸಿಯಾರು?

ಅಸಂಶಯಂ ಸರ್ವಸಮೃದ್ಧಕಾಮಃ
ಕ್ಷಿಪ್ರಂ ಪ್ರಜಾಃ ಪಾಲಯಿತಾಽಸಿ ಸಮ್ಯಕ್ ।
ಇಮೇ ವಯಂ ನಿಗ್ರಹಣೇ ಕುರೂಣಾಂ
ಯದಿ ಪ್ರತಿಜ್ಞಾ ಭವತಃ ಸಮಾಪ್ತಾ ॥೨೨॥

ನೀನು ನಿಸ್ಸಂಶಯವಾಗಿ ಸರ್ವಸಂಪದ್ಭರಿತನಾಗಿ ಶೀಘ್ರವಾಗಿ ಪ್ರಜೆಗಳನ್ನು ಚೆನ್ನಾಗಿ ಪಾಲಿಸುವಿ. ನಿನ್ನ ಪ್ರತಿಜ್ಞೆಯು ಸಮಾಪ್ತವಾದರೆ ಕುರುಗಳನ್ನು ನಿಗ್ರಹಿಸಲು ನಾವು ಸಿದ್ಧರಾಗಿದ್ದೇವೆ.

ಪ್ರೋವಾಚ ಕೃಷ್ಣಾಮಪಿ ಯಾಜ್ಞಸೇನೀಂ
ದಶಾರ್ಹಭರ್ತಾ ಸಹಿತಃ ಸುಹೃದ್ಭಿಃ ।

ಕೃಷ್ಣೇ ಧನುರ್ವೇದರತಿಪ್ರಧಾನಾಸ್ತವಾತ್ಮಜಾಸ್ತೇ ಶಿಶವಃ ಸುಶೀಲಾಃ ।
ಸದ್ಭಿಃ ಸದೈವಾಚರಿತಂ ಸುಹೃದ್ಭಿಶ್ಚರಂತಿ ಪುತ್ರಾಸ್ತವ ಯಾಜ್ಞಸೇನಿ ॥೨೪॥

ದಶಾರ್ಹಸ್ವಾಮಿಯಾದ ಕೃಷ್ಣನು ಪ್ರೀತಿಯುಕ್ತಜನರಲ್ಲಿ ಕುಳಿತಿದ್ದ ಯಾಜ್ಞಸೇನಿಯಾದ ದ್ರೌಪದಿಯನ್ನು ಕುರಿತು ಎಲೌ ದ್ರೌಪದಿಯೇ, ನಿನ್ನ ಮಕ್ಕಳಾದ ಬಾಲಕರು ಒಳ್ಳೆಯ ನಡತೆಯಿಂದ ಕೂಡಿದವರಾಗಿ ಪ್ರಧಾನವಾಗಿ ಧನುರ್ವೇದದಲ್ಲಿಯೇ ಆಸಕ್ತಿಯುಳ್ಳವರಾಗಿದ್ದಾರೆ. ಯಾಜ್ಞಸೇನಿಯೇ, ನಿನ್ನ ಮಕ್ಕಳು ಸಜ್ಜನರು ಆಚರಿಸಿದ ಮಾರ್ಗದಲ್ಲಿಯೇ ನಡೆಯುತ್ತಿದ್ದಾರೆ.

ರಾಜ್ಯೇನ ರಾಷ್ಟ್ರೈಶ್ಚ ನಿಮಂತ್ರ್ಯಮಾಣಾಃ
ಪಿತ್ರಾ ಚ ಕೃಷ್ಣೇ ತವ ಸೋದರೈಶ್ಚ ।
ನ ಯಜ್ಞಸೇನಸ್ಯ ನ ಮಾತುಲಾನಾಂ
ಗೃಹೇಷು ಬಾಲಾ ರತಿಮಾಪ್ನುವಂತಿ ॥೨೫॥

ನಿನ್ನ ತಂದೆಯೂ ಮತ್ತು ಸಹೋದರರೂ ಮತ್ತು ಪಾಂಚಾಲ ದೇಶವೂ ರಾಜ್ಯನಿಮಿತ್ತದಿಂದ ಆಹ್ವಾನಮಾಡಿದರೂ ಸಹ ಆ ಭಾರತರು ಯಜ್ಞಸೇನನ ಮನೆಯಲ್ಲಾಗಲೀ ಅಥವಾ ತಮ್ಮ ಸೋದರಮಾವನ ಮನೆಯಲ್ಲಾಗಲೀ ಸಂತೋಷವನ್ನು ಹೊಂದುವುದಿಲ್ಲ.

ಆನರ್ತಮೇವಾಭಿಮುಖಾಃ ಶಿವೇನ
ಗತ್ವಾ ಧನುರ್ವೇದರತಿಪ್ರಧಾನಾಃ ।
ತವಾತ್ಮಜಾ ವೃಷ್ಣಿಪುರಂ ಪ್ರವಿಶ್ಯ ತದೈವ
(ನದೈವ)ತೇಭ್ಯಃ ಸ್ಪೃಹಯಂತಿ ಕೃಷ್ಣೇ ॥೨೬॥

ದ್ರೌಪದಿಯೇ, ನಿನ್ನ ಮಕ್ಕಳು ದ್ವಾರಕಾ ಪಟ್ಟಣಕ್ಕೆ ಅಭಿಮುಖವಾಗಿಯೇ ನಿರ್ವಿಘ್ನವಾಗಿ ನಡೆದು ಪ್ರಧಾನವಾಗಿ ಧನುರ್ವೇದದಲ್ಲಿಯೇ ರತಿಯುಳ್ಳವರಾಗಿದ್ದಾರೆ. ದ್ವಾರಕಾಪಟ್ಟಣವನ್ನು ಪ್ರವೇಶಿಸಿದ ಅವರಿಗೆ ಅದರಲ್ಲಿಯೇ ಆಸಕ್ತಿಯಿದೆ.

ಯಥಾ ತ್ವಮೇವಾರ್ಹಸಿ ತೇಷು ವೃತ್ತಂ
ಪ್ರಯೋಕ್ತುಮಾರ್ಯಾ ಚ ತಥೈವ ಕುಂತೀ ।

ತೇಷ್ವಪ್ರಮಾದೇನ ತಥಾ ಕರೋತಿ
ತಥೈವ ಭೂಯಶ್ಚ ತಥಾ ಸುಭದ್ರಾ ॥೨೭॥

ನೀನು ಮತ್ತು ಪೂಜ್ಯಳಾದ ಕುಂತಿಯು ಅವರಿಗೆ ಹೇಗೆ ಒಳ್ಳೆಯ ನಡತೆಯನ್ನು ಕಲಿಸುತ್ತೀರೋ ಅದರಂತೆ ಸುಭದ್ರೆಯೂ ಸಹ ಎಚ್ಚರಿಕೆಯಿಂದ ಪುನಃ ಹಾಗೆಯೇ ಮಾಡುತ್ತಿದ್ದಾಳೆ.

ಯಥಾऽನಿರುದ್ಧಸ್ಯ ಯಥಾऽಭಿಮನ್ಯೋ–
ರ್ಯಥಾ ಮುನೀಥಸ್ಯ ಯಥೈವ ಭಾನೋಃ ।
ತಥಾ ಏನೇತಾ ಚ ಗತಿಶ್ಚ ಕೃಷ್ಣೇ
ತವಾತ್ಮಜಾನಾಮಪಿ ರೌಕ್ಮಿಣೇಯಃ ॥೨೮॥

ಎಲೌ ದ್ರೌಪದಿಯೇ, ರುಕ್ಮಿಣಿಯ ಮಗನಾದ ಚಾರುದೇಷ್ಣನು ಅನಿರುದ್ಧ, ಅಭಿಮನ್ಯು , ಸುನೀಥ, ಭಾನು ಇವರಿಗೆ ಪಾಠವನ್ನು ಕಲಿಸುವಂತೆ ನಿನ್ನ ಮಕ್ಕಳಿಗೂ ಪಾಠವನ್ನು ಕಲಿಸುತ್ತಾನೆ ಮತ್ತು ರಕ್ಷಕನಾಗಿದ್ದಾನೆ.

ಗದಾಸಿಚರ್ಮಗ್ರಹಣೇಷು ಶೂರಾನಸ್ತ್ರೇಷು ಶಿಕ್ಷಾಸು ರಥಾಶ್ವಯಾನೇ ।
ಸಮ್ಯಗ್ವಿನೇತಾ ವಿನಯತ್ಯತಂದ್ರಸ್ತಾಂಶ್ಚಾಭಿಮನ್ಯುಃ ಸತತಂ ಕುಮಾರಃ ॥

ಸುಭದ್ರೆಯ ಮಗನಾದ ಅಭಿಮನ್ಯುವು ಸತತವಾಗಿ ಶೂರರಾದ ನಿನ್ನ ಮಕ್ಕಳಿಗೆ ಗದಾ ಚರ್ಮ ಗ್ರಹಣಗಳ ವಿಷಯವನ್ನೂ, ಅಸ್ತ್ರಗಳನ್ನೂ, ರಥಯಾನ ಮತ್ತು ಅಶ್ವಯಾನವನ್ನೂ ಸ್ವಲ್ಪವೂ ಆಲಸ್ಯವಿಲ್ಲದೇ ಚೆನ್ನಾಗಿ ಕಲಿಸುತ್ತಿದ್ದಾನೆ.

ಸ ಚಾಪಿ ಸಮ್ಯಕ್ಪ್ರಣಿಧಾಯ ಶಿಕ್ಷಾಂ
ಶಸ್ತ್ರೇ ಚೈಷಾಂ ವಿಧಿವತ್ ಪ್ರದಾಯ ।
ತವಾತ್ಮಜಾನಾಂ ಚ ತಥಾऽಭಿಮನ್ಯೋಃ
ಪರಾಕ್ರಮೈಸ್ತುಷ್ಯತಿ ರೌಕ್ಮಿಣೇಯಃ ॥೩೦॥

ರುಕ್ಮಿಣಿಯ ಮಗನಾದ ಚಾರುದೇಷ್ಣನೂ ಸಹ ಒಳ್ಳೆಯ ಅವಧಾನದಿಂದ ಕೂಡಿದವನಾಗಿ ಅಭಿಮನ್ಯುವಿಗೂ ಮತ್ತು ನಿನ್ನ ಮಕ್ಕಳಿಗೂ ವಿಧಿಪೂರ್ವಕವಾಗಿ ಶಸ್ತ್ರವಿದ್ಯೆಯನ್ನು ಕಲಿಸಿ ಅವರ ಪರಾಕ್ರಮಗಳನ್ನು ನೋಡಿ ಸಂತೋಷಪಡುತ್ತಾನೆ.

ಯದಾ ವಿಹಾರಂ ಪ್ರಸಮೀಕ್ಷಮಾಣಾಃ
ಪ್ರಯಾಂತಿ ಪುತ್ರಾಸ್ತವ ಯಾಜ್ಞಸೇನಿ ।
ಏಕೈಕಮೇಷಾಮನುಯಾಂತಿ ತತ್ರ
ರಥಾಶ್ಚ ಯಾನಾನಿ ಚ ದಂತಿನಶ್ಚ ॥೩೧॥

ಎಲೌ ದ್ರೌಪದಿಯೇ, ನಿನ್ನ ಮಕ್ಕಳು ವಿಹಾರವನ್ನು ಬಯಸಿ ಹೊರಗೆ ಹೊರಟಾಗ ಅವರಲ್ಲಿ ಒಬ್ಬೊಬ್ಬರನ್ನೂ ರಥಗಳೂ, ಅಶ್ವಾದಿಯಾನಗಳೂ, ಗಜಗಳೂ ಹಿಂಬಾಲಿಸುತ್ತವೆ (ಎಂದು ಹೇಳಿದನು).

ಅಥಾಬ್ರವೀದ್ ಧರ್ಮರಾಜಂ ತು
ಕೃಷ್ಣೋ ದಶಾರ್ಹಯೋಧಾಃ ಕುಕುರಾಂಧಕಾಶ್ಚ ।
ಏತೇ ನಿದೇಶಂ ತವ ಪಾಲಯಂತಃ
ತಿಷ್ಠಂತು ಯತ್ರೇಚ್ಛಸಿ ತತ್ರ ರಾಜನ್ ॥೩೨॥

ಅನಂತರ ಧರ್ಮರಾಜನನ್ನು ಕುರಿತು ಕೃಷ್ಣನು ಎಲೈ ರಾಜನೇ, ದಶಾರ್ಹ ಯೋಧರು ಮತ್ತು ಕುಕುರಾಂಧಕರೂ ಸಹ ನಿನ್ನ ಆಜ್ಞೆಯನ್ನು ಪಾಲಿಸುತ್ತಾ ನೀನು ಬಯಸಿದಲ್ಲಿ ಇರಲಿ.

ಆವರ್ತತಾಂ ಕಾರ್ಮುಕವೇಗವಾತಾ
ಹಲಾಯುಧಪ್ರಗ್ರಹಣಾ ಮಧೂನಾಮ್ ।
ಸೇನಾ ತವಾರ್ಥೇಷು ನರೇಂದ್ರ ಯತ್ತಾ
ಸಸಾದಿಪತ್ಯಶ್ವರಥಾ ಸನಾಗಾ ॥೩೩॥

ಎಲೈ ನರೇಂದ್ರನೇ, ಧನುಸ್ಸಿನ ವೇಗದ ವಾಯುವಿನಿಂದಲೂ, ಬಲರಾಮನ ಆಯುಧಗಳಿಂದಲೂ ಕೂಡಿದ ಮಧುಗಳ ಸೇನೆಯು ಅಶ್ವರಥಗಜಪದಾತಿಗಳ ಸಹಿತವಾಗಿ ನಿನ್ನ ಪ್ರಯೋಜನವನ್ನು ಸಾಧಿಸಲು ಪ್ರವೃತ್ತವಾಗಲಿ.

ಪ್ರಸ್ಥಾಪ್ಯತಾಂ ಪಾಂಡವ ಧಾರ್ತರಾಷ್ಟ್ರಃ
ಸುಯೋಧನಃ ಪಾಪಕೃತಾಂ ವರಿಷ್ಠಃ ।
ಸ ಸಾನುಬಂಧಃ ಸಸೃಹೃದ್ಗಣಶ್ಚ
ಭೌಮಸ್ಯ ಸೌಭಾಧಿಪತೇಶ್ಚ ಮಾರ್ಗಮ್ ॥೩೪॥

ಎಲೈ ಪಾಂಡವನೇ, ಪಾಪಿಗಳಲ್ಲಿ ಶ್ರೇಷ್ಠನಾದ ಧೃತರಾಷ್ಟ್ರನ ಪುತ್ರನಾದ ಸುಯೋದನನು ಅವನ ಪರಿವಾರ ಮತ್ತು ಮಿತ್ರವರ್ಗದೊಂದಿಗೆ ನರಕಾಸುರನ ಮತ್ತು ಸೌಭಾದಿಪತಿಯಾದ ಸಾಲ್ವನ ಮಾರ್ಗದಲ್ಲಿ ಕಳುಹಿಸಲ್ಪಡಲಿ.

ಕಾಮಂ ತಥಾ ತಿಷ್ಠ ನರೇಂದ್ರ ತಸ್ಮಿನ್
ಯಥಾ ಕೃತಸ್ತೇ ಸಮಯಃ ಸಭಾಯಾಮ್ ।
ದಾಶಾರ್ಹಯೋಧೈಸ್ತು ಹತಾರಿಯೋಧಂ
ಪ್ರತೀಕ್ಷತಾಂ ನಾಗಪುರಂ ಭವಂತಮ್ ॥೩೫॥

ನರೇಂದ್ರನೇ, ನೀನು ಸಭೆಯಲ್ಲಿ ಪ್ರತಿಜ್ಞೆ ಮಾಡಿದಂತೆ ಹಾಗೆಯೇ ಇರು. ದಾಶಾರ್ಹ ಯೋಧರಿಂದ ಶತ್ರುಸಂಹಾರವನ್ನು ಹೊಂದಿದ ಹಸ್ತಿನಪುರವು ನಿನ್ನ ಆಗಮನವನ್ನು ನಿರೀಕ್ಷಿಸಲಿ.

ವ್ಯಪೇತಮನ್ಯುರ್ವ್ಯಪನೀತಪಾಪ್ಮಾ
ವಿಹೃತ್ಯ ಯತ್ರೇಚ್ಛಸಿ ತತ್ರ ಕಾಮಮ್ ।
ತತಃ ಸಮೃದ್ಧಂ ಪ್ರಥಮಂ ವಿಶೋಕಃ
ಪ್ರಪತ್ಸ್ಯಸೇ ನಾಗಪುರಂ ಸುರಾಷ್ಟ್ರಮ್ ॥೩೬॥

ಕ್ರೋಧವಿಲ್ಲದೆ, ದುಷ್ಕರ್ಮವಿಲ್ಲದೆ ನಿನ್ನ ಮನಸ್ಸಿಗೆ ಪ್ರಶಸ್ತವಾದ ಕಡೆಯಲ್ಲಿ ವಿಹರಿಸಿ ಅನಂತರ ನೀನು ಶೋಕರಹಿತನಾಗಿ ಶ್ರೇಷ್ಠವಾದ ಒಳ್ಳೆಯ ರಾಷ್ಟ್ರವಾದ ನಾಗಪುರವನ್ನು ಹೊಂದುವಿ (ಎಂದು ಹೇಳಿದನು).

ವೈಶಂಪಾಯನಃ

ತತಸ್ತದಾಜ್ಞಾಯ ಮತಂ ಮಹಾತ್ಮಾ
ಯಥಾವದುಕ್ತಂ ಪುರುಷೋತ್ತಮೇನ ।
ಪ್ರಶಸ್ಯ ವಿಪ್ರೇಕ್ಷ್ಯ ಚ ಧರ್ಮರಾಜಃ
ಕೃತಾಂಜಲಿಃ ಕೇಶವಮಿತ್ಯುವಾಚ ।
ಕಾಲೋದಯೇ ತಚ್ಚ ತತಶ್ಚ ಭೂಯಃ
ಕರ್ತಾ ಭವಾನ್‌ಕರ್ಮ ನ ಸಂಶಯೋಽಸ್ತಿ ॥೩೭॥

ವೈಶಂಪಾಯನ– ಆಗ ಪುರುಷೋತ್ತಮನಿಂದ ಹೀಗೆ ಹೇಳಲ್ಪಟ್ಟ ಮಹಾತ್ಮನಾದ ಧರ್ಮರಾಜನು ಕೃಷ್ಣನ ಮಾತುಗಳ ಯಥಾರ್ಥವಾದ ಅಭಿಪ್ರಾಯವನ್ನು ತಿಳಿದು ಕೃಷ್ಣನನ್ನು ಪ್ರಶಂಸಿಸಿ, ಕೃಷ್ಣನನ್ನು ನೋಡಿ ಕೈಗಳನ್ನು ಮುಗಿದು ಯೋಗ್ಯವಾದ ಕಾಲದಲ್ಲಿ ಇದನ್ನು ಮತ್ತು ಇದಕ್ಕಿಂತ ಹೆಚ್ಚಿನ ಕಾರ್ಯವನ್ನು ನೀನು ಮಾಡುವವನಾಗುವಿ. ಇದರಲ್ಲಿ ನನಗೆ ಸಂಶಯವಿಲ್ಲ ಎಂದು ಹೇಳಿದನು.

ಯಥಾಪ್ರತಿಜ್ಞಂ ವಿಹೃತಶ್ಚ ಕಾಲಃ
ಸರ್ವಾಃ ಸಮಾ ದ್ವಾದಶ ನಿರ್ಜನೇಷು ।
ಅಜ್ಞಾತಚರ್ಯಾಂ ವಿಧಿವತ್ ಸಮಾಪ್ಯ
ಭವದ್ಗತಾಃ ಕೇಶವ ಪಾಂಡವೇಯಾಃ ॥೩೮॥

ಅಸಂಶಯಂ ಕೇಶವ ಪಾಂಡವಾನಾಂ
ಭವಾನ್ ಗತಿಸ್ತ್ವಚ್ಚರಣಾ ಹಿ ಪಾರ್ಥಾಃ ॥೩೯॥

ಎಲೈ ಕೇಶವನೇ, ಪಾಂಡುಪುತ್ರರೆಲ್ಲರೂ ತಾವು ಮಾಡಿದ ಪ್ರತಿಜ್ಞೆಗೆ ಅನುಗುಣವಾಗಿ ಹನ್ನೆರಡು ವರ್ಷಗಳ ಕಾಲ ನಿರ್ಜನವಾದ ಕಾಡುಗಳಲ್ಲಿ ವಿಹಾರವನ್ನು ಮಾಡಿ ಅಜ್ಞಾತವಾಸವನ್ನು ವಿಧಿಪೂರ್ವಕವಾಗಿ ಸಮಾಪ್ತಿಗೊಳಿಸಿ ಬಂದು ನಿನ್ನನ್ನು ಆಶ್ರಯಿಸುವರು. ಕೇಶವನೇ, ನಿಸ್ಸಂಶಯವಾಗಿ ಪಾಂಡವರಿಗೆ ನೀನೇ ಗತಿ. ಪಾರ್ಥರೆಲ್ಲರಿಗೂ ನೀನೇ ಆಶ್ರಯನಾಗಿದ್ದೀಯೆ.

ಏಷೈವ ಬುದ್ಧಿರ್ಭವತಾಂ ಸದಾ ತ್ವಾಂ
ಸತ್ಯೇ ಸ್ಥಿತಾಃ ಕೇಶವ ಪಾಂಡವೇಯಾಃ ।
ಸದಾನಧರ್ಮಾಃ ಸಜನಾಃ ಸದಾರಾಃ
ಸಬಾಂಧವಾಸ್ತ್ವಚ್ಚರಣಾ ಹಿ ಪಾರ್ಥಾಃ ।

ಎಲೈ ಕೇಶವನೇ, ನೀನು ನಮ್ಮನ್ನು ಅನುಗ್ರಹಮಾಡುವ ಈ ಬುದ್ಧಿಯು ನಿನಗೆ ಯಾವಾಗಲೂ ಇರಲಿ. ದಾನಧರ್ಮಗಳಿಂದಲೂ ಬಂಧುಜನ ಪರಿವಾರದಿಂದಲೂ ಪತ್ನಿಯರಿಂದಲೂ ಕೂಡಿದ ಪಾಂಡವರೆಲ್ಲರಿಗೂ ನೀನೇ ಗತಿಯಾಗಿದ್ದೀಯಷ್ಟೆ (ಎಂದು ಹೇಳಿದನು).

ಎಲೈ ಪಾಂಡವನೇ, ಪಾಪಿಗಳಲ್ಲಿ ಶ್ರೇಷ್ಠನಾದ ಧೃತರಾಷ್ಟ್ರನ ಪುತ್ರನಾದ ಸುಯೋದನನು ಅವನ ಪರಿವಾರ ಮತ್ತು ಮಿತ್ರವರ್ಗದೊಂದಿಗೆ ನರಕಾಸುರನ ಮತ್ತು ಸೌಭಾದಿಪತಿಯಾದ ಸಾಲ್ವನ ಮಾರ್ಗದಲ್ಲಿ ಕಳುಹಿಸಲ್ಪಡಲಿ.

ಕಾಮಂ ತಥಾ ತಿಷ್ಠ ನರೇಂದ್ರ ತಸ್ಮಿನ್
ಯಥಾ ಕೃತಸ್ತೇ ಸಮಯಃ ಸಭಾಯಾಮ್ ।
ದಾಶಾರ್ಹಯೋಧೈಸ್ತು ಹತಾರಿಯೋಧಂ
ಪ್ರತೀಕ್ಷತಾಂ ನಾಗಪುರಂ ಭವಂತಮ್ ॥೩೫॥

ನರೇಂದ್ರನೇ, ನೀನು ಸಭೆಯಲ್ಲಿ ಪ್ರತಿಜ್ಞೆ ಮಾಡಿದಂತೆ ಹಾಗೆಯೇ ಇರು. ದಾಶಾರ್ಹ ಯೋಧರಿಂದ ಶತ್ರುಸಂಹಾರವನ್ನು ಹೊಂದಿದ ಹಸ್ತಿನಪುರವು ನಿನ್ನ ಆಗಮನವನ್ನು ನಿರೀಕ್ಷಿಸಲಿ.

ವ್ಯಪೇತಮನ್ಯುರ್ವ್ಯಪನೀತಪಾಪ್ಮಾ
ವಿಹೃತ್ಯ ಯತ್ರೇಚ್ಛಸಿ ತತ್ರ ಕಾಮಮ್ ।
ತತಃ ಸಮೃದ್ಧಂ ಪ್ರಥಮಂ ವಿಶೋಕಃ
ಪ್ರಪತ್ಸ್ಯಸೇ ನಾಗಪುರಂ ಸುರಾಷ್ಟ್ರಮ್ ॥೩೬॥

ಕ್ರೋಧವಿಲ್ಲದೆ, ದುಷ್ಕರ್ಮವಿಲ್ಲದೆ ನಿನ್ನ ಮನಸ್ಸಿಗೆ ಪ್ರಶಸ್ತವಾದ ಕಡೆಯಲ್ಲಿ ವಿಹರಿಸಿ ಅನಂತರ ನೀನು ಶೋಕರಹಿತನಾಗಿ ಶ್ರೇಷ್ಠವಾದ ಒಳ್ಳೆಯ ರಾಷ್ಟ್ರವಾದ ನಾಗಪುರವನ್ನು ಹೊಂದುವಿ (ಎಂದು ಹೇಳಿದನು).

ವೈಶಂಪಾಯನಃ

ತತಸ್ತದಾಜ್ಞಾಯ ಮತಂ ಮಹಾತ್ಮಾ
ಯಥಾವದುಕ್ತಂ ಪುರುಷೋತ್ತಮೇನ ।
ಪ್ರಶಸ್ಯ ವಿಪ್ರೇಕ್ಷ್ಯ ಚ ಧರ್ಮರಾಜಃ
ಕೃತಾಂಜಲಿಃ ಕೇಶವಮಿತ್ಯುವಾಚ ।
ಕಾಲೋದಯೇ ತಚ್ಚ ತತಶ್ಚ ಭೂಯಃ
ಕರ್ತಾ ಭವಾನ್‌ಕರ್ಮ ನ ಸಂಶಯೋಽಸ್ತಿ ॥೩೭॥

ವೈಶಂಪಾಯನ– ಆಗ ಪುರುಷೋತ್ತಮನಿಂದ ಹೀಗೆ ಹೇಳಲ್ಪಟ್ಟ ಮಹಾತ್ಮನಾದ ಧರ್ಮರಾಜನು ಕೃಷ್ಣನ ಮಾತುಗಳ ಯಥಾರ್ಥವಾದ ಅಭಿಪ್ರಾಯವನ್ನು ತಿಳಿದು ಕೃಷ್ಣನನ್ನು ಪ್ರಶಂಸಿಸಿ, ಕೃಷ್ಣನನ್ನು ನೋಡಿ ಕೈಗಳನ್ನು ಮುಗಿದು ಯೋಗ್ಯವಾದ ಕಾಲದಲ್ಲಿ ಇದನ್ನು ಮತ್ತು ಇದಕ್ಕಿಂತ ಹೆಚ್ಚಿನ ಕಾರ್ಯವನ್ನು ನೀನು ಮಾಡುವವನಾಗುವಿ. ಇದರಲ್ಲಿ ನನಗೆ ಸಂಶಯವಿಲ್ಲ ಎಂದು ಹೇಳಿದನು.

ಯಥಾಪ್ರತಿಜ್ಞಂ ವಿಹೃತಶ್ಚ ಕಾಲಃ
ಸರ್ವಾಃ ಸಮಾ ದ್ವಾದಶ ನಿರ್ಜನೇಷು ।
ಅಜ್ಞಾತಚರ್ಯಾಂ ವಿಧಿವತ್ ಸಮಾಪ್ಯ
ಭವದ್ಗತಾಃ ಕೇಶವ ಪಾಂಡವೇಯಾಃ ॥೩೮॥

ಅಸಂಶಯಂ ಕೇಶವ ಪಾಂಡವಾನಾಂ
ಭವಾನ್ ಗತಿಸ್ತ್ವಚ್ಚರಣಾ ಹಿ ಪಾರ್ಥಾಃ ॥೩೯॥

ಎಲೈ ಕೇಶವನೇ, ಪಾಂಡುಪುತ್ರರೆಲ್ಲರೂ ತಾವು ಮಾಡಿದ ಪ್ರತಿಜ್ಞೆಗೆ ಅನುಗುಣವಾಗಿ ಹನ್ನೆರಡು ವರ್ಷಗಳ ಕಾಲ ನಿರ್ಜನವಾದ ಕಾಡುಗಳಲ್ಲಿ ವಿಹಾರವನ್ನು ಮಾಡಿ ಅಜ್ಞಾತವಾಸವನ್ನು ವಿಧಿಪೂರ್ವಕವಾಗಿ ಸಮಾಪ್ತಿಗೊಳಿಸಿ ಬಂದು ನಿನ್ನನ್ನು ಆಶ್ರಯಿಸುವರು. ಕೇಶವನೇ, ನಿಸ್ಸಂಶಯವಾಗಿ ಪಾಂಡವರಿಗೆ ನೀನೇ ಗತಿ. ಪಾರ್ಥರೆಲ್ಲರಿಗೂ ನೀನೇ ಆಶ್ರಯನಾಗಿದ್ದೀಯೆ.

ಏಷೈವ ಬುದ್ಧಿರ್ಜುಷತಾಂ ಸದಾ ತ್ವಾಂ
ಸತ್ಯೇ ಸ್ಥಿತಾಃ ಕೇಶವ ಪಾಂಡವೇಯಾಃ ।
ಸದಾನಧರ್ಮಾಃ ಸಜನಾಃ ಸದಾರಾಃ
ಸಬಾಂಧವಾಸ್ತ್ವಚ್ಚರಣಾ ಹಿ ಪಾರ್ಥಾಃ ।

ಎಲೈ ಕೇಶವನೇ, ನೀನು ನಮ್ಮನ್ನು ಅನುಗ್ರಹಮಾಡುವ ಈ ಬುದ್ಧಿಯು ನಿನಗೆ ಯಾವಾಗಲೂ ಇರಲಿ. ದಾನಧರ್ಮಗಳಿಂದಲೂ ಬಂಧುಜನ ಪರಿವಾರದಿಂದಲೂ ಪತ್ನಿಯರಿಂದಲೂ ಕೂಡಿದ ಪಾಂಡವರೆಲ್ಲರಿಗೂ ನೀನೇ ಗತಿಯಾಗಿದ್ದೀಯಷ್ಟೆ (ಎಂದು ಹೇಳಿದನು).

ವೈಶಂಪಾಯನಃ

ತಥಾ ವದತಿ ವಾರ್ಷ್ಣೇಯೇ ಧರ್ಮರಾಜೇ ಚ ಭಾರತ ।
ಅಥ ಪಶ್ಚಾತ್ ತಪೋವೃದ್ಧೋ ಬಹುವರ್ಷಸಹಸ್ರಧೃಕ್ ।
ಪ್ರತ್ಯದೃಶ್ಯತ ಧರ್ಮಾತ್ಮಾ ಮಾರ್ಕಂಡೇಯೋ ಮಹಾತಪಾಃ ॥೪೦॥

ವೈಶಂಪಾಯನ– ಎಲೈ ಭಾರತನೇ, ಧರ್ಮರಾಜನು ಮತ್ತು ಕೃಷ್ಣನು ಹೀಗೆ ಮಾತನಾಡುತ್ತಿರಲು ಅನೇಕ ಸಹಸ್ರವರ್ಷಗಳ ಕಾಲ ಜೀವಿಸುವ ತಪೋವೃದ್ಧರೂ, ಮಹಾತಪಸ್ವಿಗಳೂ, ಧರ್ಮಾತ್ಮರೂ ಆದ ಮಾರ್ಕಂಡೇಯರು ಕಾಣಿಸಿಕೊಂಡರು.

ಅಜರಶ್ಚಾಮರಶ್ಚೈವ ರೂಪೌದಾರ್ಯಗುಣಾನ್ವಿತಃ ।
ವ್ಯದೃಶ್ಯತ ತಥಾ ಯುಕ್ತೋ ಯಥಾ ಸ್ಯಾತ್ ಪಂಚವಿಂಶಕಃ ॥

ಅಜರಾಮರರೂ ರೂಪ ಔದಾರ್ಯಗುಣಯುಕ್ತರೂ ಆದ ಅವರು ಇಪ್ಪತ್ತೈದು ವರ್ಷದ ತರುಣನಂತೆ ಕಂಡುಬಂದರು.

ತಮಾಗತಮೃಷಿಂ ವೃದ್ಧಂ ಬಹುವರ್ಷಸಹಸ್ರಿಣಮ್ ।
ಆನರ್ಚುರ್ಬ್ರಾಹ್ಮಣಾಃ ಸರ್ವೇ ಕೃಷ್ಣಶ್ಚ ಸಹ ಪಾಂಡವೈಃ ॥೪೧॥

ಸಂಪ್ರಾಪ್ತರಾದ ಬಹುವರ್ಷಸಹಸ್ರಜೀವರಾದ ವೃದ್ಧರಾದ ಆ ಋಷಿಗಳಿಗೆ ಎಲ್ಲಾ ಬ್ರಾಹ್ಮಣರೂ ಮತ್ತು ಪಾಂಡವರಿಂದ ಕೂಡಿದ ಕೃಷ್ಣನೂ ಸಹ ಪೂಜೆಯನ್ನು ಸಲ್ಲಿಸಿದರು.

ತಮರ್ಚಿತಂ ಸುವಿಶ್ವಸ್ತಮಾಸೀನಮೃಷಿಸತ್ತಮಮ್ ।
ಬ್ರಾಹ್ಮಣಾನಾಂ ಮತೇನಾಹ ಪಾಂಡವಾನಾಂ ಚ ಕೇಶವಃ ॥೪೨॥

ಪೂಜಿಸಲ್ಪಟ್ಟು ಸಮಾಧಾನದಿಂದ ಕುಳಿತಿದ್ದ ಆ ಋಷಿಶ್ರೇಷ್ಠರನ್ನು ಕುರಿತು ಬ್ರಾಹ್ಮಣರ ಮತ್ತು ಪಾಂಡವರ ಅಭಿಪ್ರಾಯದಂತೆ ಕೇಶವನು ಹೀಗೆ ಮಾತನಾಡಿದನು.

ಶುಶ್ರೂಷವಃ ಪಾಂಡವಾಸ್ತೇ ಬ್ರಾಹ್ಮಣಾಶ್ಚ ಸಮಾಗತಾಃ ।
ದ್ರೌಪದೀ ಸತ್ಯಭಾಮಾ ಚ ತಥಾಽಹಂ ಪರಮಂ ವಚಃ ॥೪೩॥

ಪಾಂಡವರೂ ಇಲ್ಲಿ ಸಮಾಗತರಾದ ಬ್ರಾಹ್ಮಣರೂ, ದ್ರೌಪದಿಯೂ, ಸತ್ಯಭಾಮೆಯೂ ಮತ್ತು ನಾನೂ ಸಹ ನಿನ್ನ ಶ್ರೇಷ್ಠವಾದ ಮಾತುಗಳನ್ನು ಕೇಳಲು ಬಯಸುತ್ತೇವೆ.

ಪುರಾವೃತ್ತಾಃ ಕಥಾಃ ಪುಣ್ಯಾಃ ಸದಾಚಾರಾನ್ ಸನಾತನಾನ್ ।
ರಾಜ್ಞಾಂ ಸ್ತ್ರೀಣಾಮೃಷೀಣಾಂ ಚ ಮಾರ್ಕಂಡೇಯ ವಿಚಕ್ಷ್ವ ನಃ ॥೪೪॥

ಎಲೈ ಮಾರ್ಕಂಡೇಯರೇ, ರಾಜರ, ಸ್ತ್ರೀಯರ ಮತ್ತು ಋಷಿಗಳ ಪುರಾತನಗಳಾದ ಸದಾಚಾರದಿಂದ ಕೂಡಿದ ಪವಿತ್ರವಾದ ಕಥೆಯನ್ನು ನಮಗೆ ಹೇಳುವವರಾಗಿ.

ವೈಶಂಪಾಯನಃ

ತೇಷು ತತ್ರೋಪವಿಷ್ಟೇಷು ದೇವರ್ಷಿರಪಿ ನಾರದಃ ।
ಆಜಗಾಮ ವಿಶುದ್ಧಾತ್ಮಾ ಪಾಂಡವಾನವಲೋಕಕಃ ॥೪೫॥

ವೈಶಂಪಾಯನ– ಅವರು ಅಲ್ಲಿ ಕುಳಿತಿರಲು ವಿಶುದ್ಧಾತ್ಮರಾದ ದೇವರ್ಷಿಯಾದ ನಾರದರೂ ಸಹ ಪಾಂಡವರನ್ನು ನೋಡಲು ಅಲ್ಲಿಗೆ ಬಂದರು.

ತಮಪ್ಯಥ ಮಹಾತ್ಮಾನಂ ಸರ್ವೇ ತೇ ಪರುಷರ್ಷಭಾಃ ।
ಪಾದ್ಯಾರ್ಘ್ಯಾಭ್ಯಾಂ ಯಥಾನ್ಯಾಯಮುಪತಸ್ಥುರ್ಮನೀಷಿಣಃ ॥೪೬॥

ಆಗತರಾದ ಆ ಮಹಾತ್ಮರಿಗೂ ಸಹ ಮೇಧಾವಿಗಳಾದ ಪುರುಷಶ್ರೇಷ್ಠರೆಲ್ಲರೂ ಪಾದ್ಯ ಅರ್ಘ್ಯಗಳನ್ನು ನೀಡಿ ಶಾಸ್ತ್ರೋಕ್ತರಾಗಿ ಸತ್ಕರಿಸಿದರು.

ನಾರದಸ್ತ್ವಥ ದೇವರ್ಷಿರ್ಜ್ಞಾತ್ವಾ ತಾಂಸ್ತು ಕೃತಕ್ಷಣಾನ್ ।
ಮಾರ್ಕಂಡೇಯಸ್ಯ ವದತಸ್ತಾಂ ಕಥಾಮನ್ವಮೋದತ ॥೪೭॥

ದೇವರ್ಷಿಗಳಾದ ನಾರದರು ಆಗ ಮಾರ್ಕಂಡೇಯರಿಂದ ಕಥೆಗಳನ್ನು ಕೇಳುವ ವಿಷಯದಲ್ಲಿ ಅವಕಾಶವನ್ನು ಮಾಡಿಕೊಂಡು ಕುಳಿತಿದ್ದ ಅವರನ್ನು ತಿಳಿದು ಆ ಕಥೆಗೆ ತಮ್ಮ ಅನುಮೋದನೆಯನ್ನು ನೀಡಿದರು.

ಉವಾಚ ಚೈನಂ ಕಾಲಜ್ಞಃ ಸ್ಥಯನ್ನಿವ ಸನಾತನಃ ।
ಬ್ರಹ್ಮರ್ಷೇ ಕಥ್ಯತಾಂ ಯತ್ತೇ ಪಾಂಡವೇಷು ವಿವಕ್ಷಿತಮ್ ॥೪೮॥

ಕಾಲಜ್ಞರೂ, ಸನಾತನರೂ ಆದ ಅವರು ನಗುತ್ತಾ ಬ್ರಹ್ಮರ್ಷಿಗಳೇ ಪಾಂಡವರಿಗೆ ಏನು ಹೇಳಬೇಕೆಂದು ಬಯಸಿದ್ದೀರೋ ಅದನ್ನು ಹೇಳಿ ಎಂದು ಕೇಳಿದರು.

ಏವಮುಕ್ತಃ ಪ್ರತ್ಯುವಾಚ ಮಾರ್ಕಂಡೇಯೋ ಮಹಾತಪಾಃ ।
ಕ್ಷಣಂ ಕುರುಧ್ವಂ ವಿಪುಲಮಾಖ್ಯಾತವ್ಯಂ ಭವಿಷ್ಯತಿ ॥೪೯॥

ಹೀಗೆ ಹೇಳಲ್ಪಟ್ಟ ಮಹಾತಪಸ್ವಿಗಳಾದ ಮಾರ್ಕಂಡೇಯರು ಎಲ್ಲರೂ ಅವಕಾಶವನ್ನು ಮಾಡಿಕೊಳ್ಳಿ ಹೇಳಬೇಕಾದದ್ದು ಬಹಳವಾಗಿದೆ ಎಂದು ಹೇಳಿದರು.

ಏವಮುಕ್ತಾ ವ್(ಕ್ತಾಃ) ಕ್ಷಣಂ ಚಕ್ರುಃ ಪಾಂಡವಾಃ ಸಹ ತೈರ್ದ್ವಿಜೈಃ ।
ಮಧ್ಯಂದಿನೇ ಯಥಾऽऽದಿತ್ಯಂ ಪ್ರೇಕ್ಷಂತಸ್ತೇ ಮಹಾಮುನಿಮ್ ॥೫೦॥

ಹೀಗೆ ಹೇಳಲ್ಪಟ್ಟ ಪಾಂಡವರು ಬ್ರಾಹ್ಮಣರ ಜೊತೆಯಲ್ಲಿ ಮಧ್ಯಂದಿನದ ಸೂರ್ಯನಂತೆ ಪ್ರಕಾಶಮಾನರಾದ ಆ ಋಷಿಗಳನ್ನು ನೋಡುತ್ತಾ ಅವಕಾಶವನ್ನು ಮಾಡಿಕೊಂಡರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ದ್ವಿತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ತೇಳನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಎಪ್ಪತ್ತೆಂಟನೆಯ ಅಧ್ಯಾಯ

ಯುಧಿಷ್ಠಿರನ ಪ್ರಶ್ನೆಗೆ ಉತ್ತರವಾಗಿ ಮಾರ್ಕಂಡೇಯರಿಂದ
ಪಾಪಪುಣ್ಯಗಳ ಫಲಭೋಗದ ಪ್ರಕಾರದ ಕಥನ.

ವೈಶಂಪಾಯನಃ

ತಂ ವಿವಕ್ಷಂತಮಾಲಕ್ಷ್ಯ ಕುರುರಾಜೋ ಮಹಾಮುನಿಮ್ ।
ಕಥಾಸಂಜನನಾರ್ಥಾಯ ಚೋದಯಾಮಾಸ ಪಾಂಡವಃ ॥೧॥

ವೈಶಂಪಾಯನ– ಮಾರ್ಕಂಡೇಯರು ಮಾತನಾಡಲು ಉದ್ಯುಕ್ತರಾಗಿರುವುದನ್ನು ಗಮನಿಸಿ ಕುರುರಾಜನಾದ ಪಾಂಡವನು ಕಥೆಯನ್ನು ಪ್ರಾರಂಭಿಸುವ ಸಲುವಾಗಿ ಆ ಮಹಾಮುನಿಗಳನ್ನು ಕುರಿತು ಪ್ರಶ್ನೆ ಮಾಡಿದನು (ಹೀಗೆ ಮಾತನಾಡಿದನು).

ಭವಾನ್ ದೈವತದೈತ್ಯಾನಾಮೃಷೀಣಾಂ ಚ ಮಹಾತ್ಮನಾಮ್ ।
ರಾಜರ್ಷೀಣಾಂ ಚ ಸರ್ವೇಷಾಂ ಚರಿತಜ್ಞಃ ಪುರಾತನಃ ॥೨॥

ನೀವು ದೇವತೆಗಳ, ದೈತ್ಯರ, ಮಹಾತ್ಮರಾದ ಋಷಿಗಳ ಮತ್ತು ಎಲ್ಲಾ ರಾಜರ್ಷಿಗಳ ಕಥೆಗಳನ್ನು ತಿಳಿದಿರುವ ಪುರಾತನ ಪುರುಷರು.

ಸೇವ್ಯಶ್ಚೋಪಾಸಿತವ್ಯಶ್ಚ ಮತೋ ನಃ ಕಾಂಕ್ಷಿತಶ್ಚಿರಮ್ ।
ಅಯಂ ಚ ದೇವಕೀಪುತ್ರಃ ಪ್ರಾಪ್ತೋಽಸ್ಮಾನವಲೋಕಕಃ ॥೩॥

ನಾವು ಬಹುಕಾಲದಿಂದಲೂ ನಿಮ್ಮ ಸೇವೆಯನ್ನು ಮತ್ತು ಉಪಾಸನೆಯನ್ನು ಮಾಡಬೇಕೆಂಬ ಅಭಿಪ್ರಾಯವನ್ನು ಹೊಂದಿದ್ದೆವು. ಈ ದೇವಕೀಪುತ್ರನಾದ ಕೃಷ್ಣನೂ ನಮ್ಮನ್ನು ನೋಡಲು ಇಲ್ಲಿಗೆ ಬಂದಿದ್ದಾನೆ.

ಭವತ್ಯೇವ ಹಿ ಮೇ ಬುದ್ಧಿರ್ದೃಷ್ಟ್ವಾऽऽತ್ಮಾನಂ ಸುಖಾಚ್ಚ್ಯುತಮ್ ।
ಧಾರ್ತರಾಷ್ಟ್ರಾಂಶ್ಚ ದುರ್ವೃತ್ತಾನ್ಋಧ್ಯತಃ ಪ್ರೇಕ್ಷ್ಯ ಸರ್ವತಃ ॥೪॥

ಸುಖದಿಂದ ಚ್ಯುತರಾದ ನಮ್ಮನ್ನೂ ಮತ್ತು ಎಲ್ಲಾ ವಿಧವಾದ ಸಮೃದ್ಧಿಯನ್ನು ಹೊಂದಿರುವ ದುರಾಚಾರಿಗಳಾದ ಧೃತರಾಷ್ಟ್ರ ಪುತ್ರರನ್ನೂ ನೋಡಿ ನನಗೆ ಈ ಬುದ್ಧಿಯುಂಟಾಗುತ್ತದೆ.

ಕರ್ಮಣಃ ಪುರುಷಃ ಕರ್ತಾ ಶುಭಸ್ಯಾಪ್ಯಶುಭಸ್ಯ ವಾ ।
ಸ ಫಲಂ ತದುಪಾಶ್ನಾತಿ ಕಥಂ ಕರ್ತಾ ಸ್ವಿದೀಶ್ವರಃ ॥೫॥

ಶುಭಾಶುಭಕರ್ಮಗಳಿಗೆ ಕರ್ತೃವಾದ ಜೀವನು ಆ ಕರ್ಮದ ಫಲವನ್ನು ಅನುಭವಿಸುತ್ತಾರೆ. ಕರ್ತೃವಾದ ಈಶ್ವರನ ವಿಷಯದಲ್ಲಿ ಹೇಗೆ?

ಅಥ ವಾ ಸುಖದುಃಖೇಷು ನೃಣಾಂ ಬ್ರಹ್ಮವಿದಾಂ ವರ ।
ಇಹ ವಾ ಕೃತಮನ್ವೇತಿ ಪರದೇಹೇऽಥ ವಾ ಪುನಃ ॥೬॥

ಮತ್ತು ಎಲೈ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರಾದವರೇ, ಪುರುಷರು ಕರ್ಮಫಲವಾದ ಸುಖದುಃಖಗಳನ್ನು ಈ ದೇಹದಲ್ಲಿಯೇ ಅನುಭವಿಸುತ್ತಾರೆಯೇ? ಅಥವಾ ಇನ್ನೊಂದು ದೇಹದಲ್ಲಿ ಅನುಭವಿಸುತ್ತಾರೆಯೇ?

ದೇಹೀ ಚ ದೇಹಂ ಸಂತ್ಯಜ್ಯ ಮೃಗ್ಯಮಾಣಃ ಶುಭಾಶುಭೈಃ ।
ಕಥಂ ಸಂಯುಜ್ಯತೇ ಪ್ರೇತ್ಯ ಇಹ ವಾ ದ್ವಿಜಸತ್ತಮ ॥೭॥

ಎಲೈ ದ್ವಿಜಶ್ರೇಷ್ಠರೇ, ಜೀವನು ದೇಹವನ್ನು ತ್ಯಾಗಮಾಡಿದ ಮೇಲೆ ಶುಭಾಶುಭ ಕರ್ಮಗಳು ಅವನನ್ನು ಹುಡುಕಿ ಈ ಲೋಕದಲ್ಲಾಗಲೀ, ಪರಲೋಕದಲ್ಲಾಗಲೀ ಹೇಗೆ ಅವನ ಜೊತೆಯಲ್ಲಿ ಸೇರುತ್ತವೆ?

ಐಹಲೌಕಿಕಮೇವೇಹ ಉತಾಹೋ ಪಾರಲೌಕಿಕಮ್ ।
ಕ್ವ ಚ ಕರ್ಮಾಣಿ ತಿಷ್ಠಂತಿ ಜಂತೋಃ ಪ್ರೇತಸ್ಯ ಭಾರ್ಗವ ।
ಏತತ್ ಸರ್ವಂ ಯಥಾವೃತ್ತಂ ಮುನೇ ವಕ್ತುಮಿಹಾರ್ಹಸಿ ॥೮॥

ಎಲೈ ಭಾರ್ಗವಗೋತ್ರೋತ್ಪನ್ನರೇ, ಜೀವನು ಮಾಡಿದ ಕರ್ಮಗಳು ಅವನು ಮರಣಹೊಂದಿದ ಮೇಲೆ ಈ ಲೋಕದಲ್ಲಿಯೇ ಉಳಿಯುತ್ತವೆಯೇ? ಅಥವಾ ಪರಲೋಕಕ್ಕೆ ಹೋಗುತ್ತವೆಯೇ? ಎಲೈ ಋಷಿಗಳೇ, ತಾವು ಇವೆಲ್ಲವನ್ನೂ ಸರಿಯಾಗಿ ತಿಳಿಸಬೇಕು.

ಮಾರ್ಕಂಡೇಯಃ

ತ್ವದ್ಯುಕ್ತೋಽಯಮನುಪ್ರಶ್ನೋ ಯಥಾವದ್ ವದತಾಂ ವರ ।
ವಿದಿತಂ ವೇದಿತವ್ಯಂ ತೇ ಸ್ಥಿತ್ಯರ್ಥಂ ತ್ವಂ ತು ಪೃಚ್ಛಸಿ ॥೯॥

ಮಾರ್ಕಂಡೇಯ– ಎಲೈ ಮಾತನಾಡುವವರಲ್ಲಿ ಶ್ರೇಷ್ಠನೇ, ನೀನು ನಿನ್ನನ್ನೂ ಸೇರಿಸಿ ಈ ಪ್ರಶ್ನೆಯನ್ನು ಕೇಳಿದೆಯಷ್ಟೆ? ನೀನು ತಿಳಿಯಬೇಕಾದುದೆಲ್ಲವನ್ನೂ ತಿಳಿದಿದ್ದೀಯೆ. ಆದರೂ ಲೋಕದ ಧರ್ಮಸ್ಥಿತಿಗಾಗಿ ಮಾತ್ರ ಈ ಪ್ರಶ್ನೆಗಳನ್ನು ಕೇಳುತ್ತಿದ್ದೀಯೆ.

ಅತ್ರ ತೇ ಕಥಯಿಷ್ಯಾಮಿ ತದಿಹೈಕಮನಾಃ ಶೃಣು ।
ಯಥೇಹಾಮುತ್ರ ಚ ನರಃ ಸುಖದುಃಖಮುಪಾಶ್ನುತೇ ॥೧೦॥

ಜೀವನು ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಹೇಗೆ ಸುಖದುಃಖಗಳನ್ನು ಹೊಂದುತ್ತಾನೆ ಎಂದು ಹೇಳುವೆನು. ಅದನ್ನು ಏಕಾಗ್ರ ಮನಸ್ಸಿನಿಂದ ಕೇಳು.

ನಿರ್ಮಲಾನಿ ಶರೀರಾಣಿ ವಿಶುದ್ಧಾನಿ ಶರೀರಿಣಾಮ್ ।
ಸಸರ್ಜ ಧರ್ಮತಂತ್ರಾಣಿ ಪೂರ್ವೋತ್ಪನ್ನಃ ಪ್ರಜಾಪತಿಃ ॥೧೧॥

ಮೊದಲು ಜನಿಸಿದ ಪ್ರಜಾಪತಿಗಳಾದ ಬ್ರಹ್ಮದೇವರು ಜೀವರಿಗೆ ವಿಶುದ್ಧವಾದ ಧರ್ಮಸಾಧಕವಾದ ನಿರ್ಮಲವಾದ ಶರೀರಗಳನ್ನು ಸೃಷ್ಟಿಸಿದನು.

ಅಮೋಘಫಲಸಂಕಲ್ಪಾಃ ಸುವ್ರತಾಃ ಸತ್ಯವಾದಿನಃ ।
ಬ್ರಹ್ಮಭೂತಾ ನರಾಃ ಪುಣ್ಯಾಃ ಪುರಾಣಾಃ ಕುರುಸತ್ತಮ ॥೧೨॥

ಎಲೈ ಕುರುಶ್ರೇಷ್ಠನೇ, ಪುರಾತನರಾದ ಆ ಪುಣ್ಯಪುರುಷರು ಒಳ್ಳೆಯ ವ್ರತನಿಷ್ಠರಾಗಿ ಸತ್ಯವಾದಿಗಳಾಗಿ ಯಾವಾಗಲೂ ದೇವರನ್ನೇ ಧ್ಯಾನಿಸುವವರಾಗಿ ವ್ಯರ್ಥವಲ್ಲದ ಫಲಸಂಕಲ್ಪಗಳನ್ನು ಉಳ್ಳವರಾಗಿ ಇದ್ದರು.

ಸರ್ವೇ ದೇವೈಃ ಸಮಾಯಾಂತಿ ಸ್ವಚ್ಛಂದೇನ ನಭಸ್ತಳಮ್ ।
ತತಶ್ಚ ಪುನರಾಯಾಂತಿ ಸರ್ವೇ ಸ್ವಚ್ಛಂದಚಾರಿಣ ॥೧೩॥

ಎಲ್ಲರೂ ತಮ್ಮ ಇಚ್ಛೆಗೆ ಅನುಗುಣವಾಗಿ ಆಕಾಶದಲ್ಲಿ ದೇವತೆಗಳ ಜೊತೆಯಲ್ಲಿ ಸೇರುತ್ತಾರೆ. ಮತ್ತು ಎಲ್ಲರೂ ಸ್ವಚ್ಛಂದಚಾರಿಗಳಾಗಿ ಹಿಂದೆ ಬರುತ್ತಾರೆ.

ಸ್ವಚ್ಛಂದಮರಣಾಶ್ಚಾಸನ್ ನರಾಃ ಸ್ವಚ್ಛಂದಜೀವಿನಃ ।
ಅಲ್ಪಬಾಧಾ ನಿರಾತಂಕಾಃ ಸಿದ್ಧಾರ್ಥಾ ನಿರುಪದ್ರವಾಃ ॥೧೪॥

ಸ್ವಚ್ಛಂದಚಾರಿಗಳಾದ ಆ ಪುರುಷರೆಲ್ಲರೂ ಸ್ವಚ್ಛಂದ ಮರಣವುಳ್ಳವರೂ, ಅಲ್ಪಬಾಧೆಯುಳ್ಳವರೂ, ಉಪದ್ರವರಹಿತರೂ, ಎಲ್ಲವನ್ನೂ ಸಾಧಿಸಿದವರೂ ಮತ್ತು ನಿರಾತಂಕರೂ ಆಗಿದ್ದರು.

ದ್ರಷ್ಟಾರೋ ದೇವಸಂಘಾನಾಮೃಷೀಣಾಂ ಚ ಮಹಾತ್ಮನಾಮ್ ।
ಪ್ರತ್ಯಕ್ಷಾಃ ಸರ್ವಧರ್ಮಾಣಾಂ ದಾಂತಾ ವಿಗತಮತ್ಸರಾಃ ।
ಆಸನ್ ವರ್ಷಸಹಸ್ರೀಯಾಸ್ತಥಾ ಪುತ್ರಸಹಸ್ರಿಣಃ ॥೧೫॥

ಅವರು ದೇವಸಮೂಹಗಳನ್ನು ಮತ್ತು ಮಹಾತ್ಮರಾದ ಋಷಿಗಳನ್ನು ನೋಡುತ್ತಿದ್ದರು. ಸರ್ವಧರ್ಮಗಳೂ ಅವರಿಗೆ ಪ್ರತ್ಯಕ್ಷವಾಗಿದ್ದವು. ಅವರು ಇಂದ್ರಿಯ

ನಿಗ್ರಹವುಳ್ಳವರೂ ಮತ್ತು ಮಾತ್ಸರ್ಯರಹಿತರೂ ಆಗಿದ್ದರು. ಅವರು ಒಂದು ಸಹಸ್ರ ವರ್ಷಗಳ ಕಾಲ ಬದುಕಿರುತ್ತಿದ್ದರು ಮತ್ತು ಸಹಸ್ರಪುತ್ರರನ್ನು ಪಡೆಯುತ್ತಿದ್ದರು.

ತತಃ ಕಾಲಾಂತರೇಽನ್ಯಸ್ಮಿನ್ ಪೃಥಿವೀತಳಚಾರಿಣಃ ॥೧೬॥

ಕಾಮಕ್ರೋಧಾಭಿಭೂತಾಸ್ತೇ ಮಾಯಾವ್ಯಜೋಪಜೀವಿನಃ ।
ಲೋಭಮೋಹಾಭಿಭೂತಾಶ್ಚ ತ್ಯಕ್ತಾ ದೇವೈಸ್ತತೋ ನರಾಃ ॥೧೭॥

ಕಾಲಾಂತರದಲ್ಲಿ ಅವರು ಕಾಮಕ್ರೋಧಗಳಿಗೆ ವಶರಾಗಿ ಕಪಟ ಮತ್ತು ಮೋಸಗಳನ್ನು ಮಾಡುತ್ತಾ ಭೂಮಿಯಲ್ಲಿ ಮಾತ್ರ ಸಂಚರಿಸುವವರಾದರು. ಲೋಭ ಮೋಹಗಳಿಗೆ ವಶರಾದ ಆ ಮನುಷ್ಯರನ್ನು ದೇವತೆಗಳು ತ್ಯಜಿಸಿದರು.

ಅಶುಭೈಃ ಕರ್ಮಭಿಃ ಪಾಪಾಸ್ತಿರ್ಯಙ್ ನಿರಯಗಾಮಿನಃ ।
ಸಂಸಾರೇಷು ವಿಚಿತ್ರೇಷು ಪಚ್ಯಮಾನಾಃ ಪುನಃ ಪುನಃ ॥೧೮॥

ಅಶುಭಕರ್ಮಗಳನ್ನು ಮಾಡಿ ಪಾಪವನ್ನು ಗಳಿಸಿದ ಅವರು ನೀಚಯೋನಿಗಳಿಗೆ ಮತ್ತು ನರಕಗಳಿಗೆ ಪುನಃಪುನಃ ಹೋಗಿ ವಿಚಿತ್ರವಾದ ಸಂಸಾರದಲ್ಲಿ ದುಃಖಪಡುವವರಾದರು.

ಮೋಘೇಷ್ಟಾ ಮೋಘಸಂಕಲ್ಪಾ ಮೋಘಜ್ಞಾನಾ ವಿಚೇತಸಃ ।
ಕಾಂಕ್ಷಿಣಃ ಸರ್ವಕಾಮಾನಾಂ ನಾಸ್ತಿಕಾ ಭಿನ್ನಸೇತವಃ ॥೧೯॥

ವ್ಯರ್ಥವಾದ ಇಚ್ಛೆ, ವ್ಯರ್ಥವಾದ ಸಂಕಲ್ಪ, ವ್ಯರ್ಥವಾದ ಜ್ಞಾನ ಇವುಗಳನ್ನು ಹೊಂದಿ ಪ್ರಜ್ಞಾಶೂನ್ಯರಾಗಿ ಎಲ್ಲ ಭೋಗವಸ್ತುಗಳನ್ನು ಅಪೇಕ್ಷಿಸುತ್ತಾ ನಾಸ್ತಿಕರೂ ಮತ್ತು ಮರ್ಯಾದಾ ರಹಿತರೂ ಆದರು.

ಸರ್ವಾಭಿಶಂಕಿನಶ್ಚೈವ ಸಂವೃತ್ತಾಃ ಕ್ಲೇಶದಾಯಿನಃ ।
ಅಶುಭೈಃ ಕರ್ಮಭಿಶ್ಚಾಪಿ ಪ್ರಾಯಶಃ ಪರಿಚಿಹ್ನಿತಾಃ ॥೨೦॥

ಎಲ್ಲದರಲ್ಲಿಯೂ ಸಂಶಯವನ್ನು ಮಾಡುವವರೂ ಮತ್ತು ಇನ್ನೊಬ್ಬರಿಗೆ ಕ್ಲೇಶವನ್ನು ಕೊಡುವವರೂ ಆದರು. ಹೆಚ್ಚಾಗಿ ಅಶುಭಕರ್ಮಗಳ ಚಿಹ್ನೆಗಳಿಂದ ಕೂಡಿದವರಾದರು.

ದೌಷ್ಕುಲ್ಯಾ ವ್ಯಾಧಿಬಹುಲಾ ದುರಾತ್ಮನೋऽಪತಾಪಿನಃ ।
ಭವಂತ್ಯಲ್ಪಾಯುಷಃ ಪಾಪಾ ರೌದ್ರಕರ್ಮಫಲೋದಯಾಃ ।
ನಾಥಂತಃ ಸರ್ವಕಾಮಾನಾಂ ನಾಸ್ತಿಕಾ ಭಿನ್ನಚೇತಸಃ ॥೨೧॥

ದುಷ್ಕುಲಗಳಲ್ಲಿ ಜನ್ಮವನ್ನು ಹೊಂದಿ ಅನೇಕ ವ್ಯಾಧಿಗಳಿಂದ ಪೀಡಿತರಾಗಿ ದುಷ್ಟವಾದ ಮನಸ್ಸನ್ನು ಹೊಂದಿ ಪಶ್ಚಾತ್ತಾಪರಹಿತರಾಗಿ ಎಲ್ಲ ಭೋಗಸಾಮಗ್ರಿಗಳನ್ನೂ ಬಯಸಿ ನಾಸ್ತಿಕರೂ, ಭಗ್ನಮನಸ್ಸುಳ್ಳವರೂ ಆಗಿ ಘೋರವಾದ ಕರ್ಮಫಲಗಳನ್ನು ಅನುಭವಿಸುತ್ತಾ ಪಾಪಾಚಾರಿಗಳಾದ ಅವರು ಅಲ್ಪಾಯುಷಿಗಳಾದರು.

ಜಂತೋ ಪ್ರೇತಸ್ಯ ಕೌಂತೇಯ ಗತಿಃ ಸ್ಯೈರಿಹ ಕರ್ಮಭಿಃ ।
ಪ್ರಾಜ್ಞಸ್ಯ ಹೀನಬುದ್ಧೇಶ್ಚ ಕರ್ಮಕೋಶಃ ಕ್ವ ತಿಷ್ಠತಿ ॥೨೨॥

ಕ್ವಚಿತ್ತತ್ ಸಮುಪಾಶ್ನಾತಿ ಸುಕೃತಂ ಯದಿ ವೇತರತ್ ।
ಇತಿ ತೇ ದರ್ಶನಂ ಯಚ್ಚ ತತ್ರಾಪ್ಯನುನಯಂ ಶೃಣು ॥೨೩॥

ಎಲೈ ಕೌಂತೇಯನೇ, ಜಂತುವು ಪ್ರಾಜ್ಞನಾಗಲೀ ಅಥವಾ ಹೀನ ಬುದ್ಧಿಯುಳ್ಳವನಾಗಲೀ ಅವನು ಮೃತನಾದಮೇಲೆ ಅವನು ಮಾಡಿದ ಕರ್ಮಗಳ ಸಮೂಹವು ಎಲ್ಲಿರುತ್ತದೆ. ಆ ಕರ್ಮಗಳ ಗತಿಯು ಎಲ್ಲಿ ಉಂಟಾಗುತ್ತದೆ. ಸುಕೃತವಾಗಲೀ ಅಥವಾ ದುಷ್ಕೃತವಾಗಲೀ ಅದನ್ನು ಎಲ್ಲಿದ್ದು ಜೀವನು ಅನುಭವಿಸುತ್ತಾನೆ ಎಂದು ನಿನ್ನ ಪ್ರಶ್ನೆಯಷ್ಟೆ? ಅದಕ್ಕೆ ಉತ್ತರವನ್ನು ಹೇಳುತ್ತೇನೆ, ಕೇಳು.

ಅಯಮಾದಿಶರೀರೇಣ ದೇವಸೃಷ್ಟೇನ ಮಾನವಃ ।
ಶುಭಾನಾಮಶುಭಾನಾಂ ಚ ಕುರುತೇ ಸಂಚಯಂ ಮಹತ್ ॥೨೪॥

ದೇವರಿಂದ ಮತ್ತು ದೇವತೆಗಳಿಂದ ಕೊಡಲ್ಪಟ್ಟ ಇದೇ ಮೊದಲಾದ ಶರೀರಗಳಲ್ಲಿ ಮನುಷ್ಯನು ಶುಭಾಶುಭಕರ್ಮಗಳನ್ನು ಮಾಡಿ ಅವುಗಳ ದೊಡ್ಡ ಕೋಶವನ್ನು ಮಾಡುತ್ತಾನೆ.

ಆಯುಷೋऽಂತೇ ಪ್ರಹಾಯೇದಂ ಕ್ಷೀಣಪ್ರಾಯಂ ಕಳೇವರಮ್ ।
ಸಂಭವತ್ಯೇವ ಯುಗಪದ್ ಯೋನೌ ನಾಸ್ಯತ್ರ ಸಂಶಯಃ ॥೨೫॥

ಆಯಸ್ಸು ಮುಗಿದಮೇಲೆ ಕ್ಷೀಣವಾದ ಈ ಶರೀರವನ್ನು ಬಿಟ್ಟು ಇನ್ನೊಂದು ಯೋನಿಯಲ್ಲಿ ಏಕಕಾಲದಲ್ಲಿ ಜನಿಸುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ.

ತತ್ರಾಸ್ಯ ಸ್ವಕೃತಂ ಕರ್ಮ ಛಾಯೇವಾನುಗತಂ ಸದಾ ।
ಫಲತ್ಯಥ ಸುಖಾರ್ಹೋ ವಾ ದುಃಖಾರ್ಹೋ ವಾऽಥ ಜಾಯತೇ ॥

ಮನುಷ್ಯನನ್ನು ನೆರಳು ಅನುಸರಿಸುವಂತೆ ಅಲ್ಲಿ ಅವನು ಮಾಡಿದ ಸುಖಪ್ರದವಾಗಲೀ ಅಥವಾ ದುಃಖಪ್ರದವಾಗಲೀ ಆದ ಕರ್ಮಗಳು ಅವನನ್ನು ಅನುಸರಿಸಿ ಫಲವನ್ನು ಕೊಡುತ್ತವೆ.

ಅನುಶೇತೇ ಶಯಾನಂ ಚ ತಿಷ್ಠಂತಂ ಚಾನುತಿಷ್ಠತಿ ।
ಅನುಧಾವತಿ ಧಾವಂತಂ ಪೂರ್ವಕರ್ಮ ಕೃತಂ ನರಮ್ ।

ಮನುಷ್ಯನು ಮಾಡಿದ ಪೂರ್ವಕರ್ಮವು ಅವನು ಮಲಗಿದ್ದರೆ ಮಲಗಿರುತ್ತದೆ. ನಿಂತಿದ್ದರೆ ನಿಂತಿರುತ್ತದೆ. ಓಡಿದರೆ ಅವನ ಜೊತೆಯಲ್ಲಿ ಓಡುತ್ತದೆ.

ಕೃತಾಂತವಿಧಿಸಂಯುಕ್ತಃ ಸ ಜಂತುರ್ಲಕ್ಷಣೈಃ ಶುಭೈಃ ।
ಅಶುಭೈರ್ವಾ ನಿರಾದಾನೋ ಲಕ್ಷ್ಯತೇ ಜ್ಞಾನದೃಷ್ಟಿಭಿಃ ॥೨೭॥

ಜ್ಞಾನದೃಷ್ಟಿಯುಳ್ಳ ಮಹಾತ್ಮರು ಕೃತಾಂತವಿಧಿಗೆ ಅನುಗುಣವಾಗಿ ಜಂತುವು ಶುಭಲಕ್ಷಣ ಮತ್ತು ಅಶುಭಲಕ್ಷಣಗಳಿಂದ ಕೂಡಿರುವುದನ್ನು ಗಮನಿಸುತ್ತಾರೆ.

ಏಷಾ ತಾವದಬುದ್ಧೀನಾಂ ಗತಿರುಕ್ತಾ ಯುಧಿಷ್ಠಿರ ।
ಅತಃ ಪರಂ ಜ್ಞಾನವತಾಂ ನಿಬೋಧ ಗತಿಮುತ್ತಮಾಮ್ ॥೨೮॥

ಎಲೈ ಯುಧಿಷ್ಠಿರನೇ, ಇದುವರೆಗೆ ನಾನು ಅಜ್ಞಾನಿಗಳಿಗೆ ಆಗುವ ಗತಿಯನ್ನು ಹೇಳಿದೆನು. ಇನ್ನು ಮುಂದೆ ಜ್ಞಾನಿಗಳಿಗೆ ಉಂಟಾಗುವ ಶ್ರೇಷ್ಠವಾದ ಗತಿಯನ್ನು ಹೇಳುತ್ತೇನೆ ಅದನ್ನು ಕೇಳು.

ಮನುಷ್ಯಾಸ್ತಪ್ತತಪಸಃ ಸರ್ವಾಗಮಪರಾಯಣಾಃ ।
ಸ್ಥಿರವ್ರತಾಃ ಸತ್ಯಪರಾ ಗುರುಶುಶ್ರೂಷಣೇ ರತಾಃ ॥೨೯॥

ಸುಶೀಲಾಃ ಶುಕ್ಲಜಾತೀಯಾಃ ಕ್ಷಾಂತಾ ದಾಂತಾಃ ಸುತೇಜಸಃ ।
ಶುಚಿಯೋನ್ಯಂತರಗತಾಃ ಪ್ರಾಯಶಃ ಶುಭಲಕ್ಷಣಾಃ ॥೩೦॥

ಜಿತೇಂದ್ರಿಯತ್ವಾದ್ ವಶಿನಃ ಶುಕ್ಲತ್ವಾನ್ಮಂದರೋಗಿಣಃ ।
ಅಬಾಧಾಶ್ಚಾಪರಿತ್ರಾಸಾ ಭವಂತಿ ನಿರುಪದ್ರವಾಃ ॥೩೧॥

ತಪಸ್ಸನ್ನು ಮಾಡಿ ಸರ್ವಾಗಮಪರಾಯಣರಾಗಿ, ವ್ರತಗಳನ್ನು ಆಚರಿಸಿ, ಸತ್ಯಪರರಾಗಿ, ಗುರುಸೇವೆಯಲ್ಲಿ ರತರಾಗಿ ಇರುವ ಮನುಷ್ಯರು ಒಳ್ಳೆಯ ಶೀಲವನ್ನು ಮತ್ತು ಒಳ್ಳೆಯ ಜಾತಿಯನ್ನು ಹೊಂದಿದವರಾಗಿ ತಮ್ಮ ತಮ್ಮ ತೇಜಸ್ಸುಗಳಿಂದ ಸಹಿತರಾಗಿ, ಒಳ್ಳೆಯ ಯೋನಿಗಳಲ್ಲಿ ಜನಿಸುವವರಾಗಿ, ಪ್ರಾಯಶಃ ಶುಭಲಕ್ಷಣವುಳ್ಳವರಾಗಿ, ಇಂದ್ರಿಯಜಯವುಳ್ಳಕಾರಣದಿಂದ ಮನೋಜಯ ಉಳ್ಳವರಾಗಿ, ಪರಿಶುದ್ಧರಾಗಿರುವುದರಿಂದ ಅಲ್ಪರೋಗವುಳ್ಳವರಾಗಿ, ಯಾವ ಬಾಧೆಯೂ ಪರಿತ್ರಾಸವೂ ಇಲ್ಲದೇ ಉಪದ್ರವರಹಿತರಾಗಿರುತ್ತಾರೆ.

ಚ್ಯವಂತಂ ಜಾಯಮಾನಂ ಚ ಗರ್ಭಸ್ಥಂ ಚೈವ ಸರ್ವಶಃ ।
ಸ್ವಮಾತ್ಮಾನಂ ಪರಂ ಚೈವ ಬುಧ್ಯಂತೇ ಜ್ಞಾನಚಕ್ಷುಷಾ ॥೩೨॥

ಸ್ವರ್ಗದಿಂದ ಕೆಳಗೆ ಬರುವ ಗರ್ಭಸ್ಥರಾದ, ತಾಯಿಯ ಉದರದಿಂದ ಹೊರಗೆ ಬರುತ್ತಿರುವ, ತಮ್ಮನ್ನೂ ಇನ್ನೊಬ್ಬರನ್ನೂ ಎಲ್ಲರೀತಿಯಿಂದಲೂ ತಮ್ಮ ಜ್ಞಾನ ಚಕ್ಷುಸ್ಸಿನಿಂದ ತಿಳಿಯುತ್ತಾರೆ.

ಕರ್ಮಭೂಮಿಮಿಮಾಂ ಪ್ರಾಪ್ಯ ಪುನರ್ಯಾಂತಿ ಸುರಾಲಯಮ್ ।
ಕೃತ್ವಾ ಶುಭಾನಿ ಕರ್ಮಾಣಿ ಜ್ಞಾನೇನ ಭರತರ್ಷಭ ॥೩೩॥

ಋಷಯಸ್ತೇ ಮಹಾತ್ಮಾನಃ ಪ್ರತ್ಯಕ್ಷಾಗಮಬುದ್ಧಯಃ ।

ಎಲೈ ಭರತರ್ಷಭನೇ, ಈ ಕರ್ಮಭೂಮಿಗೆ ಬಂದು ಜ್ಞಾನಪೂರ್ವಕವಾಗಿ ಶುಭಕರ್ಮಗಳನ್ನು ಮಾಡಿ ಪುನಃ ಸ್ವರ್ಗಕ್ಕೆ ಹೋಗುತ್ತಾರೆ. ಅವರು ಆಗಮದಲ್ಲಿ ಹೇಳಿದುದನ್ನೆಲ್ಲಾ ಪ್ರತ್ಯಕ್ಷವಾಗಿ ನೋಡುವ ಮಹಾನುಭಾವರಾದ ಋಷಿಗಳು.

ಕಂಚಿದ್ ದೈವಾದ್ಬಹಾತ್ ಕಂಚಿತ್ ಕಂಚಿದೇವ ಸ್ವಕರ್ಮಭಿಃ ।
ಪ್ರಾಪ್ನುವಂತಿ ನರಾ ರಾಜನ್ ಮಾ ತೇಽಸ್ತ್ವನ್ಯಾ ವಿಚಾರಣಾ ॥೩೪॥

ಮನುಷ್ಯರು ಮಾತ್ರ ದೈವದಿಂದ ಸ್ವಲ್ಪಭಾಗವನ್ನು, ತಮ್ಮ ಯೋಗ್ಯತೆಯಿಂದ ಸ್ವಲ್ಪ ಭಾಗವನ್ನು, ತಮ್ಮ ಕರ್ಮದಿಂದ ಸ್ವಲ್ಪಮಾತ್ರ ಭಾಗವನ್ನು ಹೊಂದಿರುವ ಫಲಗಳನ್ನು ಪಡೆಯುತ್ತಾರೆ. ರಾಜನೇ, ಈ ವಿಷಯದಲ್ಲಿ ನೀನು ಅನ್ಯಥಾ ಚಿಂತಿಸುವುದು ಬೇಡ.

ಇಮಾಮತ್ರೋಪಮಾಂ ಚಾಪಿ ನಿಬೋಧ ವದತಾಂ ವರ ।
ಮನುಷ್ಯಲೋಕೇ ಯಚ್ಛ್ರೇಯಃ ಪರಂ ಮನ್ಯೇ ಯುಧಿಷ್ಠಿರ ॥೩೫॥

ಇಹ ವೈಕಸ್ಯ ನಾಮುತ್ರ ಅಮುತ್ರೈಕಸ್ಯ ನೋ ಇಹ ।
ಇಹ ಚಾಮುತ್ರಚೈಕಸ್ಯ ನಾಮುತ್ರೈಕಸ್ಯ ನೋ ಇಹ ॥೩೬॥

ಮಾತನಾಡುವವರಲ್ಲಿ ಶ್ರೇಷ್ಠನಾದ ರಾಜನೇ, ನಾನು ಹೇಳುವ ಈ ದೃಷ್ಟಾಂತವನ್ನು ತಿಳಿದುಕೋ. ಯುಧಿಷ್ಠಿರನೇ, ಮನುಷ್ಯಲೋಕದಲ್ಲಿ ಯಾವುದು ಪರಮಶ್ರೇಯಸ್ಸೆಂದು ತಿಳಿಯಲ್ಪಡುತ್ತದೆಯೋ ಅದನ್ನು ಕೆಲವರು ಇಲ್ಲಿ ಅನುಭವಿಸುತ್ತಾರೆ, ಸ್ವರ್ಗದಲ್ಲಿ ಅನುಭವಿಸುವುದಿಲ್ಲ. ಇನ್ನು ಕೆಲವರು ಸ್ವರ್ಗದಲ್ಲಿ ಅನುಭವಿಸುತ್ತಾರೆ, ಮನುಷ್ಯ ಲೋಕದಲ್ಲಿ ಅನುಭವಿಸುವುದಿಲ್ಲ. ಇನ್ನು ಕೆಲವರು ಇಲ್ಲಿಯೂ ಮತ್ತು ಸ್ವರ್ಗಲೋಕದಲ್ಲಿಯೂ ಅನುಭವಿಸುತ್ತಾರೆ. ಇನ್ನು ಕೆಲವರು ಇಲ್ಲಾಗಲೀ ಅಥವಾ ಸ್ವರ್ಗಲೋಕದಲ್ಲಾಗಲೀ ಅನುಭವಿಸುವುದಿಲ್ಲ.

ಧನಾನಿ ಯೇಷಾಂ ವಿಪುಲಾನಿ ಸಂತಿ
ನಿತ್ಯಂ ರಮಂತೇ ಸುವಿಭೂಷಿತಾಂಗಾಃ ।
ತೇಷಾಮಯಂ ಶತ್ರುವರಘ್ನ ಲೋಕೋ
ನಾಸೌ ಸದಾ ದೇಹಸುಖೇ ರತಾನಾಮ್ ॥೩೭॥

ಎಲೈ ಶ್ರೇಷ್ಠ ಶತ್ರುನಾಶಕನೇ, ಯಾರು ಈ ಲೋಕದಲ್ಲಿ ವಿಪುಲವಾದ ಧನವನ್ನು ಹೊಂದಿ ಅಲಂಕಾರವನ್ನು ಮಾಡಿಕೊಂಡು ಸಂತೋಷಪಡುತ್ತಾರೆಯೋ ಅವರಿಗೆ ಈ ಲೋಕವು ಮಾತ್ರ. ಸದಾ ದೇಹಸುಖದಲ್ಲಿ ಆಸಕ್ತರಾದ ಅವರಿಗೆ ಪರಲೋಕವಿಲ್ಲ.

ಯೇ ಯೋಗಯುಕ್ತಾಸ್ತಪಸಿ ಪ್ರಸಕ್ತಾಃ
ಸ್ವಾಧ್ಯಾಯಶೀಲಾ ಜರಯಂತಿ ದೇಹಾನ್ ।
ಜಿತೇಂದ್ರಿಯಾಃ ಪ್ರಾಣಿವಧೇ ನಿವೃತ್ತಾ–
ಸ್ತೇಷಾಮಸೌ ನಾಯಮರಿಘ್ನ ಲೋಕಃ ॥೩೮॥

ಎಲೈ ಶತ್ರುಸೂದನನೇ, ಯಾರು ಯೋಗಯುಕ್ತರಾಗಿ, ತಪೋನಿಷ್ಠರಾಗಿ, ಸ್ವಾಧ್ಯಾಯನಿಷ್ಠರಾಗಿ, ಜಿತೇಂದ್ರಿಯರಾಗಿ, ಪ್ರಾಣಿವಧೆಯಿಂದ ನಿವೃತ್ತರಾಗಿ ದೇಹವನ್ನು ಸವೆಸುತ್ತಾರೆಯೋ ಅವರಿಗೆ ಪರಲೋಕವು ಮಾತ್ರ ಇದೆ. ಈ ಲೋಕವಿಲ್ಲ.

ಯೇ ಧರ್ಮಮೇವ ಪ್ರಥಮಂ ಚರಂತಿ
ಧರ್ಮೇಣ ಲಬ್ಧ್ವಾ ಚ ಧನಾನಿ ಕಾಲೇ ।
ದಾರಾನವಾಪ್ಯ ಕ್ರತುಭಿರ್ಯಜಂತೇ
ತೇಷಾಮಯಂ ಚೈವ ಪರಶ್ಚ ಲೋಕಃ ॥೩೯॥

ಯಾರು ಬಾಲ್ಯದಿಂದಲೂ ಧರ್ಮವನ್ನೇ ಆಚರಿಸುತ್ತಾರೆಯೋ ಮತ್ತು ಧರ್ಮದಿಂದ ಧನವನ್ನು ಸಂಪಾದಿಸಿ ಯೋಗ್ಯಕಾಲದಲ್ಲಿ ವಿವಾಹವನ್ನು ಮಾಡಿಕೊಂಡು ಯಾಗಯಜ್ಞಗಳನ್ನು ಆಚರಿಸುತ್ತಾರೆಯೋ ಅವರಿಗೆ ಈ ಲೋಕವೂ ಇದೆ, ಪರಲೋಕವೂ ಇದೆ.

ಯೇ ನೈವ ವಿದ್ಯಾಂ ನ ತಪೋ ನ ದಾನಂ
ನ ಚಾಪಿ ಮೂಢಾಃ ಪ್ರಜನೇ ಯತಂತಿ ।
ನ ಚಾನುಗಚ್ಛಂತಿ ಸುಖಾನಿ
ಭೋಗಾಂಸ್ತೇಷಾಮಯಂ ನೈವ ಪರಶ್ಚ ಲೋಕಃ ॥೪೦॥

ಯಾವ ಮೂಢರು ವಿದ್ಯೆಗಾಗಲೀ, ತಪಸ್ಸಿಗಾಗಲೀ, ದಾನಕ್ಕಾಗಲೀ, ಪ್ರಜೋತ್ಪತ್ತಿಗಾಗಲೀ ಪ್ರಯತ್ನಪಡುವುದಿಲ್ಲವೋ ಮತ್ತು ಸುಖಭೋಗಗಳನ್ನೂ ಸಹ ಅನುಭವಿಸುವುದಿಲ್ಲವೋ ಅವರಿಗೆ ಈ ಲೋಕವೂ ಇಲ್ಲ, ಪರಲೋಕವೂ ಇಲ್ಲ.

ಸರ್ವೇ ಭವಂತಸ್ತ್ವತಿವೀರ್ಯಸತ್ತ್ವಾ
ದಿವ್ಯೌಜಸಃ ಸಂಹನನೋಪಪನ್ನಾಃ ।
ಲೋಕಾದಮುಷ್ಮಾದವನಿಂ ಪ್ರಪನ್ನಾಃ
ಸ್ವಧೀತವಿದ್ಯಾಃ ಸುರಕಾರ್ಯಹೇತೋಃ ॥೪೧॥

ನೀವೆಲ್ಲರೂ ಅತಿಬಲಪರಾಕ್ರಮವುಳ್ಳವರು, ದಿವ್ಯಶಕ್ತಿಯುಳ್ಳ ಶರೀರಗಳನ್ನು ಹೊಂದಿದವರು, ಎಲ್ಲ ವಿದ್ಯೆಗಳನ್ನೂ ಅಧ್ಯಯನ ಮಾಡಿದವರು ಮತ್ತು ದೇವಕಾರ್ಯದ ಸಲುವಾಗಿ ಸ್ವರ್ಗಲೋಕದಿಂದ ಭೂಮಿಗೆ ಬಂದವರು.

ಕೃತ್ವೈವ ಕರ್ಮಾಣಿ ಮಹಾಂತಿಶೂರಾ–
ಸ್ತಪೋದಮಾಚಾರವಿಹಾರಶೀಲಾಃ ।
ದೇವಾನೃಷೀನ್ ಪ್ರೇತಗಣಾಂಶ್ಚ ಸರ್ವಾನ್
ಸಂತರ್ಪಯಿತ್ವಾ ವಿಧಿನಾ ಪರೇಣ ॥೪೨॥

ಸ್ವರ್ಗಂ ಪರಂ ಪುಣ್ಯಕೃತೋ ನಿವಾಸಂ
ಕ್ರಮೇಣ ಸಂಪ್ರಾಪ್ಸ್ಯಥ ಕರ್ಮಭಿಃ ಸ್ವೈಃ ।
ಮಾ ಭೂದ್ ವಿಶಂಕಾ ತವ ಕೌರವೇಂದ್ರ
ದೃಷ್ಟ್ವಾऽऽತ್ಮನಃ ಕ್ಲೇಶಮಿಮಂ ಸುಖಾರ್ಹಮ್ ॥೪೩॥

ಎಲೈ ಶೂರರೇ, ನೀವು ಮಹತ್ಕಾರ್ಯಗಳನ್ನು ಮಾಡಿ ತಪೋದಮ ಆಚಾರ ವಿಹಾರಶೀಲರಾಗಿ ದೇವತೆಗಳನ್ನು, ಋಷಿಗಳನ್ನು ಮತ್ತು ಎಲ್ಲಾ ಪ್ರೇತಗಣಗಳನ್ನು ಶ್ರೇಷ್ಠವಾದ ವಿಧಿಯಿಂದ ತೃಪ್ತಿಪಡಿಸಿ, ಪುಣ್ಯವನ್ನು ಸಂಪಾದಿಸಿದವರಾಗಿ ನಿಮ್ಮ ಕರ್ಮಗಳಿಂದ ಶ್ರೇಷ್ಠವಾದ ಸ್ವರ್ಗಲೋಕವನ್ನು ಕ್ರಮವಾಗಿ ಹೊಂದುವಿರಿ. ಎಲೈ ಕೌರವೇಂದ್ರನೇ, ಸುಖಾರ್ಹನಾಗಿರುವ ನೀನು ಈಗ ಅನುಭವಿಸುತ್ತಿರುವ ಈ ಕ್ಲೇಶವನ್ನು ನೋಡಿ ನಾನು ಹೇಳಿದ ವಿಷಯದಲ್ಲಿ ಸಂಶಯವನ್ನು ಪಡುವುದು ಬೇಡ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಕಾಮ್ಯಕವನಪ್ರವೇಶೇ ಅಷ್ಟಸಪ್ತತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ತೃತೀಯೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ತೆಂಟನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ

ಮಾರ್ಕಂಡೇಯ ಋಷಿಗಳಿಂದ ಯುಧಿಷ್ಠಿರಾದಿಗಳನ್ನು ಕುರಿತು ಮೃತೋಜ್ಜೀವನ ರೂಪವಾದ ಬ್ರಾಹ್ಮಣ ಮಹಿಮೆಯ ಕಥನ.

ವೈಶಂಪಾಯನಃ

ಮಾರ್ಕಂಡೇಯಂ ಮಹಾತ್ಮಾನಮೂಚುಃ ಪಾಂಡುಸುತಾಸ್ತದಾ ।
ಮಾಹಾತ್ಮ್ಯಂ ದ್ವಿಜಮುಖ್ಯಾನಾಂ ಶ್ರೋತುಮಿಚ್ಛಾಮ ಕಥ್ಯತಾಮ್ ॥೧॥

ಏವಮುಕ್ತಃ ಸ ಭಗವಾನ್ ಮಾರ್ಕಂಡೆಯೋ ಮಹಾತಪಾಃ ।
ಉವಾಚ ಸುಮಹಾತೇಜಾಃ ಸರ್ವಶಾಸ್ತ್ರವಿಶಾರದಃ ॥೨॥

ವೈಶಂಪಾಯನ– ಮಹಾತ್ಮರಾದ ಮಾರ್ಕಂಡೇಯರನ್ನು ಕುರಿತು ಪಾಂಡುಪುತ್ರರು ಶ್ರೇಷ್ಠರಾದ ಬ್ರಾಹ್ಮಣರ ಮಹಿಮೆಯನ್ನು ಕೇಳಲು ಇಚ್ಛಿಸುತ್ತೇವೆ ಅದನ್ನು ಹೇಳಿ ಎಂದು ಕೇಳಿದರು. ಹೀಗೆ ಹೇಳಲ್ಪಟ್ಟ ಮಹಾತೇಜಸ್ವಿಗಳೂ, ಸರ್ವಶಾಸ್ತ್ರ ವಿಶಾರದರೂ, ಮಹಾತಪಸ್ವಿಗಳೂ ಆದ ಪೂಜ್ಯರಾದ ಮಾರ್ಕಂಡೇಯರು ಹೀಗೆ ಮಾತನಾಡಿದರು.

ಹೈಹಯಾನಾಂ ಕುಲಕರೋ ರಾಜಾ ಪರಪುರಂಜಯಃ ।
ಕುಮಾರೋ ರೂಪಸಂಪನ್ನೋ ಮೃಗಯಾಂ ವ್ಯಚರದ್ ಬಲೀ ॥೩॥

ಹೈಹಯವಂಶದಲ್ಲಿ ಜನಿಸಿದ ಆ ವಂಶದ ವರ್ಧಕನಾದ ಶತ್ರುಗಳ ಜಯಿಸುವ ಸುಂದರನಾದ ಮತ್ತು ಬಲಿಷ್ಠನಾದ ಕುಮಾರನೆಂಬ ರಾಜನು ಬೇಟೆಗೆ ಹೊರಟನು.

ಚರಮಾಣಸ್ತು ಸೋಽರಣ್ಯೇ ತೃಣವೀರುತ್ಸಮಾವೃತೇ ।
ಕೃಷ್ಣಾಜಿನೋತ್ತರಾಸಂಗಂ ದದರ್ಶ ಮುನಿಮಂತಿಕೇ ॥೪॥

ಅವನು ಪೊದೆಗಳಿಂದ ಮತ್ತು ಹುಲ್ಲಿನಿಂದ ಕೂಡಿದ ಕಾಡಿನಲ್ಲಿ ಸಂಚಾರವನ್ನು ಮಾಡುತ್ತಾ ಕೃಷ್ಣಾಜಿನದ ಉತ್ತರೀಯವನ್ನು ಧರಿಸಿದ ಒಬ್ಬ ಮುನಿಯನ್ನು ಸಮೀಪದಲ್ಲಿ ನೋಡಿದನು.

ಸ ತೇನ ನಿಹತೋಽರಣ್ಯೇ ಮನ್ಯಮಾನೇನ ವೈ ಮೃಗಮ್ ।
ವ್ಯಥಿತಃ ಕರ್ಮ ತತ್ ಕೃತ್ವಾ ಶೋಕೋಪಹತಚೇತನಃ ॥೫॥

ಅವನು ಅದನ್ನು ಕಾಡಿನಲ್ಲಿರುವ ಮೃಗವೆಂದು ಭಾವಿಸಿ ವಧೆ ಮಾಡಿದನು. ತನ್ನ ಕರ್ಮದಿಂದ ಶೋಕಕ್ಕೆ ಒಳಗಾದವನಾಗಿ ವ್ಯಥೆಪಟ್ಟನು.

ಜಗಾಮ ಹೈಹಯಾನಾಂ ವೈ ಸಕಾಶಂ ಪ್ರಥಿತಾತ್ಮನಾಮ್ ।
ರಾಜ್ಞಾಂ ರಾಜೀವನೇತ್ರೋಽಸೌ ಕುಮಾರಃ ಪೃಥಿವೀಪತಿಃ ॥೬॥

ರಾಜೀವಲೋಚನನಾದ ರಾಜನಾದ ಆ ಕುಮಾರನು ಹೈಹಯಕುಲದಲ್ಲಿ ಪ್ರಖ್ಯಾತರಾದ ತನ್ನ ಹಿರಿಯ ರಾಜರ ಬಳಿಗೆ ಹೋದನು.

ತೇಷಾಂ ಚ ತದ್ ಯಥಾವೃತ್ತಂ ಕಥಯಾಮಾಸ ವೈ ತದಾ ।
ಸುಕುಮಾರೋ ಮಹೀಪಾಲೋ ಹೈಹಯಾನಾಂ ಮಹೀಭೃತಾಮ್ ॥

ರಾಜನಾದ ಕುಮಾರನು ಹೈಹಯಕುಲದ ಹಿರಿಯ ರಾಜರಿಗೆ ಆಗ ನಡೆದುದೆಲ್ಲವನ್ನೂ ಹಾಗೆಯೇ ತಿಳಿಸಿದನು.

ತಂ ಚಾಪಿ ಹಿಂಸಿತಂ ತಾತ ಮುನಿಂ ಮೂಲಫಲಾಶಿನಂ ।
ಶ್ರುತ್ವಾ ದೃಷ್ಟ್ವಾ ಚ ತೇ ತತ್ರ ಬಭೂವುರ್ದೀನಮಾನಸಾಃ ॥೮॥

ಎಲೈ ಪ್ರೀತಿಪಾತ್ರನೇ, ಕಂದಫಲಗಳನ್ನು ಭಕ್ಷಿಸುವ ಮುನಿಯು ಅವನಿಂದ ವಧೆಮಾಡಲ್ಪಟ್ಟದ್ದನ್ನು ಕೇಳಿ ಮತ್ತು ಅಲ್ಲಿಗೆ ಬಂದು ನೋಡಿ ಅವರೆಲ್ಲರೂ ಧೀನ ಮನಸ್ಕರಾದರು.

ಕಸ್ಯಾಯಮಿತಿ ತೇ ಸರ್ವೇ ಮಾರ್ಗಮಾಣಾಸ್ತತಸ್ತತಃ ।
ಜಗ್ಮುಶ್ಚಾರಿಷ್ಟನೇಮ್ನೋಽಥ ತಾರ್ಕ್ಷ್ಯಸ್ಯಾಶ್ರಮಮಂಜಸಾ ॥೯॥

ಈ ಋಷಿಯು ಯಾರಿಗೆ ಸೇರಿದವರು ಎಂದು ಅವರೆಲ್ಲರೂ ಹುಡುಕುತ್ತಾ ಕಾಶ್ಯಪ ಗೋತ್ರದಲ್ಲಿ ಜನಿಸಿದ ಅರಿಷ್ಟನೇಮಿಯ ಆಶ್ರಮಕ್ಕೆ ಬಂದರು.

ತೇಽಭಿವಾದ್ಯ ಮಹಾತ್ಮಾನಂ ತಂ ಮುನಿಂ ನಿಯತವ್ರತಮ್ ।
ತಸ್ಥುಃ ಸರ್ವೇ ಸ ತು ಮುನಿಸ್ತೇಷಾಂ ಪೂಜಾಂ ಯಥಾಹರತ್ ॥೧೦॥

ನಿಯತವ್ರತರಾದ ಆ ಮಹಾತ್ಮರಾದ ಋಷಿಗಳಿಗೆ ಅವರೆಲ್ಲರೂ ನಮಸ್ಕಾರ ಮಾಡಿ ನಿಂತರು. ಆ ಋಷಿಗಳು ಅವರಿಗೆ ಸತ್ಕಾರವನ್ನು ಮಾಡಲು ಉಪಕ್ರಮಿಸಿದರು.

ತೇ ತಮೂಚುರ್ಮಹಾತ್ಮಾನಂ ನ ವಯಂ ಸತ್ಕ್ರಿಯಾಂ ಮುನೇ ।
ತ್ವತ್ತೋಽರ್ಹಾಃ ಕರ್ಮದೋಷೇಣ ಬ್ರಾಹ್ಮಣೋ ಹಿಂಸಿತೋ ಹಿ ನಃ ॥

ಅವರು ಆ ಮಹಾತ್ಮರನ್ನು ಕುರಿತು ಋಷಿಗಳೇ, ನಾವು ನಮ್ಮ ಕರ್ಮದೋಷದಿಂದ ಒಬ್ಬ ಬ್ರಾಹ್ಮಣನನ್ನು ಕೊಂದಿದ್ದೇವೆ. ಆದ್ದರಿಂದ ನಿಮ್ಮ ಸತ್ಕಾರಕ್ಕೆ ಅರ್ಹರಲ್ಲ ಎಂದು ಹೇಳಿದರು.

ತಾನಬ್ರವೀತ್ ಸ ವಿಪ್ರರ್ಷಿಃ ಕಥಂ ವೋ ಬ್ರಾಹ್ಮಣೋ ಹತಃ ।
ಕ್ವ ಚಾಸೌ ಬ್ರೂತ ಸಹಿತಾಃ ಪಶ್ಯಧ್ವಂ ಮೇ ತಪೋಬಲಮ್ ॥೧೨॥

ಆ ಬ್ರಾಹ್ಮಣ ಋಷಿಗಳು ಅವರನ್ನು ಕುರಿತು ನೀವು ಬ್ರಾಹ್ಮಣನನ್ನು ಹೇಗೆ ಹನನ ಮಾಡಿದಿರಿ, ಅವನು ಎಲ್ಲಿದ್ದಾನೆ ಎಂದು ಹೇಳಿ. ನೀವೆಲ್ಲರೂ ನನ್ನ ತಪೋಬಲವನ್ನು ನೋಡಿ ಎಂದು ಹೇಳಿದರು.

ತೇ ತು ತತ್ಸರ್ವಮಖಿಲಮಾಖ್ಯಾಯಾಸ್ಮೈ ಯಥಾತಥಮ್ ।
ನಾಪಶ್ಯಂಸ್ತಮೃಷಿಂ ತತ್ರ ಗತಾಸುಂ ತೇ ಸಮಾಗತಾಃ ॥೧೩॥

ಅವರಾದರೂ ನಡೆದುದೆಲ್ಲವನ್ನೂ ಯಥಾವತ್ತಾಗಿ ಆ ಋಷಿಗಳಿಗೆ ಹೇಳಿ ಆ ಋಷಿಯ ದೇಹವಿದ್ದ ಪ್ರದೇಶಕ್ಕೆ ಸಮಾಗತರಾಗಲು ಆ ಋಷಿಯು ಅಲ್ಲಿ ಕಾಣಲಿಲ್ಲ.

ಅನ್ವೇಷಮಾಣಾಃ ಸವ್ರೀಡಾಃ ಸ್ವಪ್ನವದ್ ಗತಚೇತನಾಃ ।
ತಾನಬ್ರವೀತ್ ತತ್ರ ಮುನಿಸ್ತಾರ್ಕ್ಷ್ಯ ಃ ಪರಪುರಂಜಯ ॥೧೪॥

ಅವರು ಆ ಋಷಿಯನ್ನು ಹುಡುಕುತ್ತಾ ನಾಚಿಕೆಯುಳ್ಳವರೂ, ಸ್ವಪ್ನದಂತೆ ಚಿತ್ತಶೂನ್ಯರಾದವರೂ ಆದರು. ಎಲೈ ಪರಪುರಂಜಯನೇ, ಆಗ ಅಲ್ಲಿ ತಾರ್ಕ್ಷ್ಯ ಋಷಿಗಳು ಅವರನ್ನು ಕುರಿತು ಹೇಳಿದರು.

ಸ್ಯಾದಯಂ ಬ್ರಾಹ್ಮಣಃ ಸೋಽಥ ಯುಷ್ಮಾಭಿರ್ಯೋ ವಿನಾಶಿತಃ ।
ಪುತ್ರೋ ಹ್ಯಯಂ ಮಮ ನೃಪಾಸ್ತಪೋಬಲಸಮನ್ವಿತಃ ॥೧೫॥

ನಿಮ್ಮಿಂದ ವಧೆ ಮಾಡಲ್ಪಟ್ಟ ಬ್ರಾಹ್ಮಣನು ಇವನು ಇರಬಹುದು. ಎಲೈ ರಾಜರೇ, ಇವನು ತಪೋಬಲಸಮನ್ವಿತನಾದ ನನ್ನ ಪುತ್ರ .

ತೇ ಚ ದೃಷ್ಟ್ವೈವ ತಮೃಷಿಂ ವಿಸ್ಮಯಂ ಪರಮಂ ಗತಾಃ ।
ಮಹದಾಯಶ್ಚರ್ಯಮಿತಿ ವೈ ತೇ ಬ್ರುವಾಣಾ ಮಹೀಪತೇ ॥೧೬॥

ಎಲೈ ರಾಜನೇ, ಅವರಾದರೂ ಅವನನ್ನು ನೋಡಿದ ತಕ್ಷಣ ಇದು ದೊಡ್ಡ ಆಶ್ಚರ್ಯವೆಂದು ಹೇಳುತ್ತಾ ಪರಮಾಶ್ಚರ್ಯವೆಂದು ಹೊಂದಿದರು.

ಮೃತೋ ಹ್ಯಯಮುಪಾನೀತಃ ಕಥಂ ಜೀವಿತಮಾಪ್ತವಾನ್ ।
ಕಿಮೇತತ್ ತಪಸೋ ವೀರ್ಯಂ ಯೇನಾಯಂ ಜೀವಿತಃ ಪುನಃ ।
ಶ್ರೋತುಮಿಚ್ಛಾಮಹೇ ವಿಪ್ರ ಯದಿ ಶ್ರೋತವ್ಯಮಿತ್ಯುತ ॥೧೭॥

ಮರಣವನ್ನು ಹೊಂದಿದ್ದ ಈತನು ಪುನಃ ಹೇಗೆ ಜೀವನವನ್ನು ಪಡೆದನು? ಇವನು ಜೀವನವನ್ನು ಪುನಃ ಪಡೆದದ್ದು ತಪಸ್ಸಿನ ಶಕ್ತಿಯೇ? ಎಲೈ ಋಷಿಗಳೇ ನಾವು ಇದನ್ನು ಕೇಳಲು ಬಯಸುತ್ತೇವೆ ಎಂದು ಹೇಳಿದರು.

ಸ ತಾನುವಾಚ ನಾಸ್ಮಾಕಂ ಮೃತ್ಯುಃ ಪ್ರಭವತೇ ನೃಪಾಃ ।
ಕಾರಣಂ ಚ ಪ್ರವಕ್ಷ್ಯಾಮಿ ಹೇತುಯೋಗಸಮಾಸತಃ ॥೧೮॥

ಮೃತ್ಯುಃ ಪ್ರಭವತೇ ಯೇನ ನಾಸ್ಮಾಕಂ ನೃಪಸತ್ತಮಾಃ ॥೧೯॥

ಎಲೈ ರಾಜರೇ, ನಮ್ಮ ಮೇಲೆ ಮೃತ್ಯುವಿನ ಪ್ರಭಾವವಿಲ್ಲ. ಎಲೈ ರಾಜಶ್ರೇಷ್ಠರೇ, ಮೃತ್ಯುವಿಗೆ ಏಕೆ ನಮ್ಮ ಮೇಲೆ ಪ್ರಭಾವವಿಲ್ಲವೆಂಬುದನ್ನೂ ಅದಕ್ಕೆ ಕಾರಣ ಮತ್ತು ಉಪಾಯಗಳನ್ನೂ ಸಂಕ್ಷೇಪವಾಗಿ ಹೇಳುವೆನು.

ಶುದ್ಧಾಚಾರಾ ಅನಲಸಾಃ ಸಂಧ್ಯೋಪಾಸನತತ್ಪರಾಃ ।
ಶುದ್ಧಾನ್ನಾಃ ಶುದ್ಧಸುಧನಾ ಬ್ರಹ್ಮಚರ್ಯವ್ರತಾನ್ವಿತಾಃ ॥೨೦॥

ನಾವು ಶುದ್ಧವಾದ ಆಚಾರವುಳ್ಳವರು, ಆಲಸ್ಯವಿಲ್ಲದವರು, ಸಂಧ್ಯೋಪಾಸನೆಯಲ್ಲಿ ನಿರತರಾದವರು. ಶುದ್ಧವಾದ ಅನ್ನ ಮತ್ತು ಶುದ್ಧವಾದ ಧನವನ್ನು ಹೊಂದಿದವರು. ಬ್ರಹ್ಮಚರ್ಯವ್ರತವನ್ನು ಪಾಲಿಸುವವರು.

ಸತ್ಯಮೇವಾಭಿಜಾನೀಮೋ ನಾನೃತೇ ಕುರ್ಮಹೇ ಮನಃ ।
ಸ್ವಧರ್ಮಮನುತಿಷ್ಠಾಮಸ್ತಸ್ಮಾನ್ ಮೃತ್ಯುಭಯಂ ನ ನಃ ॥೨೧॥

ನಾವು ಸತ್ಯವನ್ನು ಮಾತ್ರ ತಿಳಿದಿದ್ದೇವೆ. ಅನೃತದ ಕಡೆಗೆ ನಮ್ಮ ಮನಸ್ಸು ಹೋಗುವುದಿಲ್ಲ. ನಾವು ನಮ್ಮ ಧರ್ಮವನ್ನು ಅನುಷ್ಠಾನ ಮಾಡುತ್ತೇವೆ. ಆದ್ದರಿಂದ ನಮಗೆ ಮೃತ್ಯುವಿನ ಭಯವಿಲ್ಲ.

ಯದ್ ಬ್ರಾಹ್ಮಣಾನಾಂ ಕುಶಲಂ ತದೇಷಾಂ ಕಥಯಾಮಹೇ ।
ನೈಷಾಂ ದುಶ್ಚರಿತಂ ಬ್ರೂಮಸ್ತಸ್ಮಾನ್ ಮೃತ್ಯುಭಯಂ ನ ನಃ ॥೨೨॥

ಬ್ರಾಹ್ಮಣರು ಮಾಡಿದ ಒಳ್ಳೆಯ ಕೆಲಸಗಳನ್ನು ಮಾತ್ರ ಅವರಿಗೆ ಹೇಳುತ್ತೇವೆ. ಅವರು ಮಾಡಿದ ಕೆಟ್ಟ ಕೆಲಸವನ್ನು ಹೇಳುವುದಿಲ್ಲ. ಆದ್ದರಿಂದ ನಮಗೆ ಮೃತ್ಯುಭಯವಿಲ್ಲ.

ಅತಿಥೀನನ್ನಪಾನೇನ ಭೃತ್ಯಾನತ್ಯಶನೇನ ಚ ।
ತೇಜಸ್ವಿದೇಶವಾಸಾಚ್ಚ ತಸ್ಮಾನ್ ಮೃತ್ಯುಭಯಂ ನ ನಃ ॥೨೩॥

ಅತಿಥಿಗಳನ್ನು ಅನ್ನಪಾನದಿಂದ ಸತ್ಕರಿಸುತ್ತೇವೆ; ಭೃತ್ಯರನ್ನು ಭೂರಿಭೋಜನದಿಂದ ಸಂತೋಷಪಡಿಸುತ್ತೇವೆ; ಮಹಾತ್ಮರ ಜೊತೆಯಲ್ಲಿ ವಾಸಮಾಡುತ್ತೇವೆ. ಆದ್ದರಿಂದ ನಮಗೆ ಮೃತ್ಯುಭಯವಿಲ್ಲ.

ಸಂಭೋಜ್ಯ ಶೇಷಮಶ್ನೀಮಸ್ತಸ್ಮಾನ್ ಮೃತ್ಯುಭಯಂ ನ ನಃ ।
ಶಾಂತಾ ದಾಂತಾ ಕ್ಷಮಾಶೀಲಾಸ್ತೀರ್ಥದಾನಪರಾಯಣಾಃ ।
ಪುಣ್ಯದೇಶನಿವಾಸಾಚ್ಚ ತಸ್ಮಾನ್ ಮೃತ್ಯುಭಯಂ ನ ನಃ ।

ನಾವು ಶಾಂತರೂ, ದಾಂತರೂ, ಕ್ಷಮಾಶೀಲರೂ, ತೀರ್ಥದಾನಪರಾಯಣರೂ, ಪುಣ್ಯದೇಶನಿವಾಸಿಗಳೂ ಆಗಿದ್ದೇವೆ. ನಾವು ಅತಿಥಿಗಳಿಗೆ ಅನ್ನಸತ್ಕಾರವನ್ನು ಮಾಡಿ ಉಳಿದ ಶೇಷವನ್ನು ಭುಂಜಿಸುತ್ತೇವೆ. ಆದ್ದರಿಂದ ನಮಗೆ ಮೃತ್ಯುಭಯವಿಲ್ಲ.

ಏತದ್ವೈ ಲೇಶಮಾತ್ರಂ ವಃ ಸಮಾಖ್ಯಾತಂ ವಿಮತ್ಸರಾಃ ।
ಗಚ್ಛಧ್ವಂ ಸಹಿತಾಃ ಸರ್ವೇ ನ ಪಾಪಾದ್ ಭಯಮಸ್ತಿ ವಃ ॥೨೪॥

ಎಲೈ ಮಾತ್ಸರ್ಯರಹಿತರಾದ ರಾಜರೇ, ನಮ್ಮ ಆಚಾರದಲ್ಲಿ ಅಲ್ಪಭಾಗವನ್ನು ಮಾತ್ರ ನಿಮಗೆ ಹೇಳಿದ್ದೇನೆ. ನೀವೆಲ್ಲರೂ ಇಲ್ಲಿಂದ ಹೋಗಬಹುದು. ನಿಮಗೆ ಪಾಪದ ಭಯವಿಲ್ಲ (ಎಂದು ಹೇಳಿದರು).

ಏವಮಸ್ತ್ವಿತಿ ತೇ ಸರ್ವೇ ಪ್ರತಿಪೂಜ್ಯ ಮಹಾಮುನಿಮ್ ।
ಸ್ವದೇಶಮಗಮನ್ ಹೃಷ್ಟಾ ರಾಜಾನೋ ಭರತರ್ಷಭ ॥೨೫॥

ಎಲೈ ಭರತರ್ಷಭನೇ, ಆ ಎಲ್ಲ ರಾಜರೂ ಆ ಮಹರ್ಷಿಗಳಿಗೆ ಹಾಗೆಯೇ ಆಗಲಿ ಎಂದು ಹೇಳಿ ತಮ್ಮ ದೇಶಕ್ಕೆ ಸಂತೋಷದಿಂದ ಹಿಂದಿರುಗಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನಾಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಪ್ಪತ್ತೊಂಬತ್ತನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ತನೆಯ ಅಧ್ಯಾಯ

ಪೃಥುಚಕ್ರವರ್ತಿಯ ಅಶ್ವಮೇಧಯಾಗದಲ್ಲಿ ಅತ್ರಿಗೌತಮರ ವಿವಾದವನ್ನು ನಿರೂಪಿಸಿ ಮಾರ್ಕಂಡೇಯರಿಂದ ಬ್ರಾಹ್ಮಣರ ಮಹಿಮೆಯ ಕಥನ.

ಮಾರ್ಕಂಡೇಯಃ

ಭೂಯ ಏವ ಮಹಾಭಾಗ್ಯಂ ಬ್ರಾಹ್ಮಣಾನಾಂ ನಿಬೋಧ ಮೇ ।
ವೈನ್ಯೋ ನಾಮೇಹ ರಾಜರ್ಷಿರಶ್ವಮೇಧಾಯ ದೀಕ್ಷಿತಃ ॥೧॥

ಮಾರ್ಕಂಡೇಯ– ಪುನಃ ನನ್ನಿಂದ ಬ್ರಾಹ್ಮಣರ ಮಹಾಭಾಗ್ಯವನ್ನು ಕೇಳಿ ತಿಳಿದುಕೋ. ವೈನ್ಯ (ಪೃಥು) ಎಂಬ ರಾಜರ್ಷಿಯು ಅಶ್ವಮೇಧಯಾಗವನ್ನು ಮಾಡಲು ದೀಕ್ಷಿತನಾದನು.

ತಮತ್ರಿರ್ಗಂತುಮಾರೇಭೇ ವಿತ್ತಾರ್ಥಮಿತಿ ನಃ ಶ್ರುತಮ್ ।
ಭೂಯೋऽರ್ಥಂ ನಾನುರುಧ್ಯತ್ ಸ ಧರ್ಮವ್ಯಕ್ತಿನಿದರ್ಶನಾತ್ ॥೨॥

ಅತ್ರಿ ಋಷಿಗಳು ಅಲ್ಲಿಗೆ ಧನಾರ್ಥಿಯಾಗಿ ಹೋಗಲು ಉಪಕ್ರಮಿಸಿದರು ಎಂದು ನಾವು ಕೇಳಿದ್ದೇವೆ. ಅವರು ಪುನಃ ಆಲೋಚಿಸಿ ತಮ್ಮ ಧರ್ಮದ ಅಭಿವ್ಯಕ್ತಿ ಆಗುವುದೆಂದು ತಿಳಿದು ಧನದ ಆಸೆಯನ್ನು ಬಿಟ್ಟರು.

ಸ ವಿಚಿಂತ್ಯ ಮಹಾತೇಜಾ ವನಮೇವಾನ್ವರೋಚಯತ್ ।
ಧರ್ಮಪತ್ನೀಂ ಸಮಾಹೂಯ ಪುತ್ರಾಂಶ್ಚೇದಮುವಾಚ ಹ ॥೩॥

ಮಹಾತೇಜಸ್ವಿಗಳಾದ ಅವರು ವನವಾಸವೇ ಶ್ರೇಷ್ಠವೆಂದು ನಿಶ್ಚಯಿಸಿ ತಮ್ಮ ಧರ್ಮಪತ್ನಿಯನ್ನು ಮತ್ತು ಮಕ್ಕಳನ್ನು ಕರೆದು ಹೀಗೆ ಹೇಳಿದರು.

ಪ್ರಾಪ್ಸ್ಯಾಮಃ ಫಲಮತ್ಯಂತಂ ಬಹುಲಂ ನಿರುಪದ್ರವಮ್ ।
ಅರಣ್ಯಗಮನಂ ಕ್ಷಿಪ್ರಂ ರೋಚತಾಂ ವೋ ಗುಣಾಧಿಕಮ್ ।

ಅರಣ್ಯವಾಸದಿಂದ ನಾವು ನಿರುಪದ್ರವಿಯಾದ ಶ್ರೇಷ್ಠವಾದ ಬಹಳ ಫಲವನ್ನು ಪಡೆಯುವೆವು. ಆದ್ದರಿಂದ ನೀವು ಶ್ರೇಷ್ಠವಾದ ಅರಣ್ಯಗಮನವನ್ನೇ ಬಯಸಿ (ಎಂದು ಹೇಳಿದರು).

ಮಾರ್ಕಂಡೇಯಃ

ತಂ ಭಾರ್ಯಾ ಪ್ರತ್ಯುವಾಚಾಥ ಧರ್ಮಮೇವಾನುತನ್ವತೀ ॥೪॥

ವೈನ್ಯಂ ಗತ್ವಾ ಮಹಾತ್ಮಾನಮರ್ಥಯಸ್ವ ಧನಂ ಬಹು ॥೫॥

ಮಾರ್ಕಂಡೇಯ– ಆಗ ಅವರ ಪತ್ನಿಯು ಧರ್ಮವನ್ನೇ ಆಚರಿಸುವವಳಾಗಿ ಅವರನ್ನು ಕುರಿತು ಮಹಾತ್ಮನಾದ ವೈನ್ಯನನ್ನು ಸಮೀಪಿಸಿ ಪ್ರಭೂತವಾದ ಧನವನ್ನು ಯಾಚಿಸಿ,

ಸ ತೇ ದಾಸ್ಯತಿ ರಾಜರ್ಷಿರ್ಯಜಮಾನೋऽರ್ಥಿತೋ ಧನಮ್ ।
ತತ ಆದಾಯ ವಿಪ್ರರ್ಷೇ ಪ್ರತಿಗೃಹ್ಯ ಧನಂ ಬಹು
ಭೃತ್ಯಾನ್ ಸುತಾನ್ ಸಂವಿಭಜ್ಯ ತತೋ ವ್ರಜ ಯಥೇಪ್ಸಿತಮ್ ॥೬॥

ಏಷ ವೈ ಪರಮೋ ಧರ್ಮೋ ಧರ್ಮವಿದ್ಭಿರುದಾಹೃತಃ ॥೭॥

ಯಾಗವನ್ನು ಮಾಡಲು ಹೊರಟಿರುವ ಆ ರಾಜರ್ಷಿಯು ಪ್ರಾರ್ಥನೆ ಮಾಡಿದರೆ ಧನವನ್ನು ಕೊಡುವನು. ವಿಪ್ರರ್ಷಿಗಳೇ, ಆ ಬಹಳವಾದ ಧನವನ್ನು ತೆಗೆದುಕೊಂಡು ಬಂದು ಸೇವಕರಿಗೂ ಮತ್ತು ಪುತ್ರರಿಗೂ ಹಂಚಿ ಅನಂತರ ನಿಮ್ಮ ಇಷ್ಟದಂತೆ ಅರಣ್ಯಕ್ಕೆ ಹೋಗಬಹುದು. ಧರ್ಮವನ್ನು ತಿಳಿದವರು ಇದನ್ನು ಶ್ರೇಷ್ಠವೆಂದು ಹೇಳುತ್ತಾರೆ ಎಂದು ಹೇಳಿದಳು.

ಅತ್ರಿಃ

ಕಥಿತೋ ಮೇ ಮಹಾಭಾಗೇ ಗೌತಮೇನ ಮಹಾತ್ಮನಾ ।
ವೈನ್ಯೋ ಧರ್ಮಾರ್ಥಸಂಯುಕ್ತಃ ಸತ್ಯವ್ರತಸಮನ್ವಿತಃ ॥೮॥

ಅತ್ರಿ– ಮಹಾಭಾಗಳೇ, ಮಹಾತ್ಮರಾದ ಗೌತಮರು ವೈನ್ಯನು ಧರ್ಮಾರ್ಥಗಳಿಂದ ಕೂಡಿದವನೆಂದೂ, ಸತ್ಯವ್ರತಸಮನ್ವಿತನೆಂದೂ ಹೇಳಿದ್ದಾರೆ.

ದ್ವೇಷ್ಟಾರಃ ಕಿಂತು ನಃ ಸಂತಿ ವಸಂತಸ್ತತ್ರ ವೈ ದ್ವಿಜಾಃ ।
ಯಥಾ ಮೇ ಗೌತಮಃ ಪ್ರಾಹ ತತೋ ನ ವ್ಯವಸಾಮ್ಯಹಮ್ ॥೯॥

ಆದರೆ ಅಲ್ಲಿ ನಮ್ಮನ್ನು ದ್ವೇಷಿಸುವ ಕೆಲವು ಬ್ರಾಹ್ಮಣರೂ ಇದ್ದಾರೆ. ಹಾಗೆ ಗೌತಮರು ಹೇಳಿದ್ದಾರೆ. ಆದ್ದರಿಂದ ನಾನು ಅಲ್ಲಿಗೆ ಹೋಗುವುದಿಲ್ಲ.

ತತ್ರ ಸ್ಮ ವಾಚಂ ಕಲ್ಯಾಣೀಂ ಧರ್ಮಕಾಮಾರ್ಥಸಂಹಿತಾಮ್ ।
ಮಯೋಕ್ತಾಮನ್ಯಥಾ ಬ್ರೂಯುಸ್ತತಸ್ತೇ ವೈ ನಿರರ್ಥಿಕಾಮ್ ॥೧೦॥

ಅಲ್ಲಿ ನಾನು ಹೋಗಿ ಧರ್ಮಕಾಮಾರ್ಥಸಂಹಿತವಾದ ಶುಭಕರವಾದ ಮಾತುಗಳನ್ನು ಆಡಿದರೆ ಅವರು ಆ ಮಾತುಗಳನ್ನು ಬೇರೆ ರೀತಿಯಾಗಿ ತಿರುಗಿಸಿ ವ್ಯರ್ಥವನ್ನಾಗಿ ಮಾಡುತ್ತಾರೆ.

ಗಮಿಷ್ಯಾಮಿ ಮಹಾಪ್ರಾಜ್ಞೇ ರೋಚತೇ ಮೇ ವಚಸ್ತವ ।
ಗಾಶ್ಚ ಮೇ ದಾಸ್ಯತೇ ವೈನ್ಯಃ ಪ್ರಭೂತಂ ಚಾರ್ಥಸಂಚಯಮ್ ॥೧೧॥

ಮಹಾಪ್ರಾಜ್ಞಳೇ, ನಿನ್ನ ಮಾತು ನನಗೆ ಹಿಡಿಸುತ್ತದೆ. ಆದ್ದರಿಂದ ನಾನು ಹೋಗುವೆನು. ವೈನ್ಯನು ನನಗೆ ಪ್ರಭೂತವಾದ ಧನವನ್ನು ಮತ್ತು ಗೋವುಗಳನ್ನು ಕೊಡುವನು.

ಮಾರ್ಕಂಡೇಯಃ

ಏವಮುಕ್ತ್ವಾ ಜಗಾಮಾಶು ವೈನ್ಯಯಜ್ಞಂ ಮಹಾತಪಾಃ ।
ಗತ್ವಾ ಚ ಯಜ್ಞಾಯತನಮತ್ರಿಸ್ತುಷ್ಟಾವ ತಂ ನೃಪಮ್ ॥೧೨॥

ಮಾರ್ಕಂಡೇಯ– ಹೀಗೆ ಹೇಳಿ ಮಹಾತಪಸ್ವಿಗಳಾದ ಅತ್ರಿಗಳು ಶೀಘ್ರವಾಗಿ ವೈನ್ಯಯಜ್ಞಕ್ಕೆ ಹೋಗಿ ಯಜ್ಞಶಾಲೆಯಲ್ಲಿ ಆ ರಾಜನನ್ನು ಸ್ತೋತ್ರ ಮಾಡಿದರು.

ರಾಜನ್ ಧನ್ಯಸ್ತ್ವಮೀಶಶ್ಚ ಭುವಿ ತ್ವಂ ಪ್ರಥಮೋ ನೃಪಃ ।
ಸ್ತುವಂತಿ ತ್ವಾಂ ಮುನಿಗಣಸ್ತ್ವದನ್ಯೋ ನಾಸ್ತಿ ಧರ್ಮವಿತ್ ।

ರಾಜನೇ, ನೀನು ಧನ್ಯನಾಗಿದ್ದೀಯೆ ಮತ್ತು ಪ್ರಭುವಾಗಿದ್ದೀಯೆ. ಭೂಮಿಯಲ್ಲಿ ನೀನು ಶ್ರೇಷ್ಠನಾದ ರಾಜ. ಮುನಿಗಣಗಳು ನಿನಗಿಂತ ಧರ್ಮಜ್ಞನಾದ ಇನ್ನೊಬ್ಬನು ಇಲ್ಲವೆಂದು ನಿನ್ನನ್ನು ಸ್ತೋತ್ರಮಾಡುತ್ತಾರೆ (ಎಂದು ಹೊಗಳಿದನು).

ಮಾರ್ಕಂಡೇಯಃ

ತಮಬ್ರವೀದೃಷಿಃ ಕ್ರುದ್ಧೋ ವಚನಂ ವೈ ಮಹಾತಪಾಃ ॥೧೩॥

ಮಾರ್ಕಂಡೇಯ– ಆಗ ಕೋಪಗೊಂಡ ಮಹಾತಪಸ್ವಿಗಳಾದ ಗೌತಮ ಋಷಿಗಳು ಹೀಗೆ ಮಾತನಾಡಿದರು.

ಗೌತಮಃ

ಮೈವಮತ್ರೇ ಪುನರ್ಬ್ರೂಯಾ ನ ತೇ ಪ್ರಜ್ಞಾ ಸಮಾಹಿತಾ ।
ಅತ್ರ ನಃ ಪ್ರಥಮಂ ಸ್ಥಾತಾ ಮಹೇಂದ್ರೋ ವೈ ಪ್ರಜಾಪತಿಃ ॥೧೪॥

ಗೌತಮ– ಅತ್ರಿಗಳೇ, ಪುನಃ ಹೀಗೆ ಮಾತನಾಡಬೇಡಿ. ನಿಮ್ಮ ಬುದ್ಧಿಯು ಸ್ಥಿಮಿತವಾಗಿಲ್ಲ. ನಾವು ಪ್ರಜಾಪತಿಯಾದ ಮಹೇಂದ್ರನನ್ನು ಮೊದಲನೆಯ ಸ್ಥಾನದಲ್ಲಿ ನಿಲ್ಲಿಸುತ್ತೇವೆ.

ಮಾರ್ಕಂಡೆಯಃ

ಅಥಾತ್ರಿರಪಿ ರಾಜೇಂದ್ರ ಗೌತಮಂ ಪ್ರತ್ಯಭಾಷತ ॥೧೫॥

ಅಯಮೇವ ವಿಧಾತಾ ಹಿ ಯಥೈವೇಂದ್ರಃ ಪ್ರಜಾಪತಿಃ ।
ತ್ವಮೇವ ಮುಹ್ಯಸೇ ಮೋಹಾನ್ನ ಪ್ರಜ್ಞಾನಂ ತವಾಸ್ತಿ ಹ ॥೧೬॥

ಮಾರ್ಕಂಡೇಯ– ಎಲೈ ರಾಜೇಂದ್ರನೇ, ಆಗ ಅತ್ರಿಗಳೂ ಸಹ ಗೌತಮರನ್ನು ಕುರಿತು ಪ್ರಜಾಪತಿಯಾದ ಇಂದ್ರನು ಹೇಗೆ ವಿಧಾತೃವೋ ಹಾಗೆ ಈ ರಾಜನೂ ವಿಧಾತೃವಾಗಿದ್ದಾನೆ. ನಿನಗೆ ಜ್ಞಾನವಿಲ್ಲ. ಮೋಹದಿಂದ ನೀನೇ ಭ್ರಾಂತನಾಗಿದ್ದೀಯೆ ಎಂದು ಹೇಳಿದರು.

ಗೌತಮಃ

ಜಾನಾಮಿ ನಾಹಂ ಮುಹ್ಯಾಮಿ ತ್ವಮೇವಾತ್ರ ವಿಮುಹ್ಯಸೇ ।
ಸ್ತೌಷಿ ತ್ವಂ ದರ್ಶನಪ್ರೇಪ್ಸೂ ರಾಜಾನಂ ಜನಸಂಸದಿ ॥೧೭॥

ನ ವೇತ್ಥ ಪರಮಂ ಧರ್ಮಂ ನ ಚಾವೈಷಿ ಪ್ರಯೋಜನಮ್ ।
ಬಾಲಸ್ತ್ವಮಸಿ ಮೂಢಶ್ಚ ವೃದ್ಧಃ ಕೇನಾಪಿ ಹೇತುನಾ ॥೧೮॥

ಗೌತಮ– ನನಗೆ ಜ್ಞಾನವು ಸರಿಯಾಗಿದೆ. ಯಾವ ಮೋಹವೂ ಇಲ್ಲ. ನಿನಗೇ ಮೋಹವುಂಟಾಗಿದೆ. ರಾಜನ ದರ್ಶನವನ್ನು ಬಯಸಿ ಜನಸಮೂಹದಲ್ಲಿ ನೀನು ರಾಜನನ್ನು ಸ್ತೋತ್ರಮಾಡುತ್ತಿದ್ದೀಯೆ. ನಿನಗೆ ಶ್ರೇಷ್ಠವಾದ ಧರ್ಮವಾಗಲೀ, ಶ್ರೇಷ್ಠವಾದ ಪ್ರಯೋಜನವಾಗಲೀ ತಿಳಿದಿಲ್ಲ. ನೀನು ಬಾಲನೂ, ಮೂಢನೂ ಆಗಿದ್ದೀಯೆ. ಯಾವುದೋ ಕಾರಣದಿಂದ ಬೆಳೆದಿದ್ದೀಯೆ ಅಷ್ಟೆ (ಎಂದು ಹೇಳಿದರು).

ಮಾರ್ಕಂಡೇಯಃ

ವಿವದಂತೌ ತಥಾ ತೌ ತು ಮುನೀನಾಂ ದರ್ಶನೇ ಸ್ಥಿತೌ ।
ಯೇ ತಸ್ಯ ಯಜ್ಞೇ ಸಂವೃತ್ತಾಸ್ತೇऽಪೃಚ್ಛಂತ ಕಥಂ ತ್ವಿಮೌ ॥೧೯॥

ಪ್ರವೇಶಃ ಕೇನ ದತ್ತೋऽಯಮುಭಯೋರ್ವೈನ್ಯಸಂಸದಿ ।
ಉಚ್ಚೈಃ ಸಮಭಿಭಾಷಂತೌ ಕೇನ ಕಾರ್ಯೇಣ ಧಿಷ್ಠಿತೌ ॥೨೦॥

ಮಾರ್ಕಂಡೇಯ– ಹೀಗೆ ಆ ಯಜ್ಞದಲ್ಲಿ ಸೇರಿದ್ದ ಮುನಿಗಳ ಎದುರಿನಲ್ಲಿ ಅವರು ವಿವಾದವನ್ನು ಮಾಡಿದರು. ಆ ಯಜ್ಞಕ್ಕೆ ಬಂದ ಋಷಿಗಳಾದರೂ ಗಟ್ಟಿಯಾಗಿ ಮಾತನಾಡುತ್ತಾ ವಿವಾದವನ್ನು ಮಾಡುತ್ತಿರುವ ಈ ಇಬ್ಬರಿಗೆ ವೈನ್ಯಸಭೆಯಲ್ಲಿ ಯಾರು ಪ್ರವೇಶವನ್ನು ನೀಡಿದರು? ಇವರು ಯಾವ ಕಾರ್ಯದ ಉದ್ದೇಶದಿಂದ ಬಂದಿದ್ದಾರೆ? ಎಂದು ಕೇಳಿದರು.

ತತಃ ಪರಮಧರ್ಮಾತ್ಮಾ ಕಾಶ್ಯಪಃ ಸರ್ವಧರ್ಮವಿತ್ ।
ವಿವಾದಿನಾವನುಪ್ರಾಪ್ತೌ ತಾವುಭೌ ಪ್ರತ್ಯವೇದಯತ್ ।
ಅಥಾಬ್ರವೀತ್ ಸದಸ್ಯಾಂಸ್ತು ಗೌತಮೋ ಮುನಿಸತ್ತಮಾನ್ ॥೨೧॥

ಅನಂತರ ಪರಮಧರ್ಮಾತ್ಮರೂ, ಎಲ್ಲ ಧರ್ಮವನ್ನೂ ತಿಳಿದವರೂ ಆದ ಕಾಶ್ಯಪರು ಇವರಿಬ್ಬರೂ ವಿವಾದ ಮಾಡಿಕೊಂಡು ಬಂದಿರುವುದನ್ನು ಸದಸ್ಯರಿದ್ದ ಸಭೆಯಲ್ಲಿ ತಿಳಿಸಿದರು. ಆಗ ಗೌತಮರು ಆ ಸದಸ್ಯರಾದ ಮುನಿಶ್ರೇಷ್ಠರನ್ನು ಕುರಿತು ಹೀಗೆ ಮಾತನಾಡಿದರು.

ಆವಯೋರ್ವ್ಯಾಹೃತಂ ಪ್ರಶ್ನಂ ಶೃಣುತ ದ್ವಿಜಸತ್ತಮಾಃ ।
ವೈನ್ಯಂ ವಿಧಾತೇತ್ಯಾಹಾತ್ರಿರತ್ರ ನೌ ಸಂಶಯೋ ಮಹಾನ್ ॥೨೨॥

ಎಲೈ ಬ್ರಾಹ್ಮಣಶ್ರೇಷ್ಠರೇ, ನಾವಿಬ್ಬರೂ ತಂದಿರುವ ಪ್ರಶ್ನೆಯನ್ನು ಚೆನ್ನಾಗಿ ಆಲಿಸಿ. ಅತ್ರಿಗಳು ಈ ವೈನ್ಯರಾಜನನ್ನು ವಿಧಾತ ಎಂದು ಕರೆದರು. ಈ ವಿಷಯದಲ್ಲಿ ನಮಗೆ ದೊಡ್ಡ ವಿವಾದವಿದೆ.

ತತಸ್ತದ್ಗೌತಮೇನೋಕ್ತಂ ವಾಕ್ಯಂ ವೈನ್ಯಸ್ಯ ಸಂಸದಿ ।
ಶ್ರುತ್ವೈವ ತು ಮಹಾತ್ಮಾನೋ ಮುನಯೋಽಭ್ಯದ್ರವನ್ ದ್ರುತಮ್ ॥

ಸನತ್ಕುಮಾರಂ ಧರ್ಮಜ್ಞಂ ಸಂಶಯಚ್ಛೇದನಾಯ ವೈ ।
ಪಪ್ರಚ್ಛುಃ ಪ್ರಣತಾಃ ಸರ್ವೇ ಬ್ರಹ್ಮಾಣಮಿವ ಸೋಮಪಾಃ ॥೨೪॥

ಆಗ ಗೌತಮರು ಸಭೆಯಲ್ಲಿ ಹೇಳಿದ ಈ ಮಾತನ್ನು ಕೇಳಿದ ತಕ್ಷಣವೇ ಮಹಾತ್ಮರಾದ ಋಷಿಗಳು ಶೀಘ್ರವಾಗಿ ತಮ್ಮ ಸಂಶಯವನ್ನು ಪರಿಹಾರ ಮಾಡಿಕೊಳ್ಳಲು ಧರ್ಮಜ್ಞರಾದ ಸನತ್ಕುಮಾರರ ಬಳಿಗೆ ಹೋಗಿ ಅವರಿಗೆ ನಮಸ್ಕಾರವನ್ನು ಮಾಡಿ ಬ್ರಹ್ಮದೇವರನ್ನು ನಮಸ್ಕರಿಸಿ ಎಲ್ಲಾ ದೇವತೆಗಳು ಕೇಳುವಂತೆ ಅವರನ್ನು ಕೇಳಿದರು.

ಸ ಚ ತೇಷಾಂ ವಚಃ ಶ್ರುತ್ವಾ ಯಥಾತತ್ತ್ವಂ ಮಹಾತಪಾಃ ।
ಪ್ರತ್ಯುವಾಚಾಥ ತಾನೇವ ಧರ್ಮಾರ್ಥಸಹಿತಂ ವಚಃ ॥೨೫॥

ಮಹಾತಪಸ್ವಿಗಳಾದ ಸನತ್ಕುಮಾರರು ಅವರ ಮಾತನ್ನು ಸರಿಯಾಗಿ ಆಲಿಸಿ ಅವರನ್ನು ಕುರಿತು ಧರ್ಮಾರ್ಥಸಹಿತವಾದ ಈ ಮಾತುಗಳನ್ನು ಉತ್ತರವಾಗಿ ಕೊಟ್ಟರು.

ಬ್ರಹ್ಮ ಕ್ಷತ್ರೇಣ ಸಹಿತಂ ಕ್ಷತ್ರಂ ಚ ಬ್ರಹ್ಮಣಾ ಸಹ ।
ರಾಜಾ ವೈ ಪ್ರಥಿತೋ ಧರ್ಮಃ ಪ್ರಜಾನಾಂ ಪತಿರೇವ ಚ ॥೨೬॥

ಬ್ರಾಹ್ಮಣರೂ ಕ್ಷತ್ರಿಯರಿಂದ ಒಡಗೂಡಿರುತ್ತಾರೆ. ಕ್ಷತ್ರಿಯರೂ ಸಹ ಬ್ರಾಹ್ಮಣರಿಂದ ಸಹಿತರಾಗಿರುತ್ತಾರೆ. ರಾಜನು ಧರ್ಮನೆಂದೂ, ಪ್ರಜಾಪತಿ ಎಂದೂ ಪ್ರಸಿದ್ಧನಾಗಿರುತ್ತಾನೆ.

ಸ ಏವ ಶಕ್ರಃ ಶುಕ್ರಶ್ಚ ಸ ಧಾತಾ ಚ ಬೃಹಸ್ಪತಿಃ ।
ಸಂಯುಕ್ತೌ ದಹತಃ ಶತ್ರೂನ್ ವನಾನೀವಾಗ್ನಿಮಾರುತೌ ॥
ಪ್ರಜಾಪತಿರ್ವಿರಾಟ್ ಸಮ್ರಾಟ್ ಕ್ಷತ್ರಿಯೋ ಭೂಪತಿರ್ನೃಪಃ ॥೨೭॥

ಯ ಏಭಿಃ ಸ್ತೂಯತೇ ಶಬ್ದೈಃ ಕಸ್ತಂ ನಾರ್ಚಿತುಮರ್ಹತಿ ॥೨೮॥

ಅವನೇ ಇಂದ್ರ, ಶುಕ್ರ, ಧಾತ, ಬೃಹಸ್ಪತಿ, ಪ್ರಜಾಪತಿ, ವಿರಾಟ್, ಸಮ್ರಾಟ್, ಕ್ಷತ್ರಿಯ, ಭೂಪತಿ, ನೃಪ ಎಂಬ ಈ ಶಬ್ದಗಳಿಂದ ಸ್ತೋತ್ರ ಮಾಡಲ್ಪಡುತ್ತಾನೆ. ಅವನನ್ನು ಯಾರು ಪೂಜಿಸುವುದಿಲ್ಲ?

ಪುರಾಯೋನಿರ್ಯುಧಾಜಿಚ್ಚ ಸುಭಿಕ್ಷಾನ್ನ್ಯುಚಿತೋದ್ಭವಃ ।
ಸ್ವರ್ನೇತಾ ಮಹಜಿದ್ ಬಭ್ರುರಿತಿ ರಾಜಾऽಭಿಧೀಯತೇ ।
ಸತ್ಯಯೋನಿಃ ಪುರಾವಿಚ್ಚ ಸತ್ಯಧರ್ಮಪ್ರವರ್ತಕಃ ॥೨೯॥

ಅವನು ಪುರಾಯೋನಿ, ಯುಧಾಜಿತ್, ಸುಭಿಕ್ಷಾನ್ನೇ (ಒಳ್ಳೆಯ ಅನ್ನವನ್ನು ಹೊಂದಿದವನು), ಉಚಿತೋದ್ಭವ (ಯೋಗ್ಯವಾದ ವೈಭವವನ್ನು ಹೊಂದಿದವನು), ಸ್ವರ್ನೇತಾ (ಪ್ರಜೆಗಳನ್ನು ಸ್ವರ್ಗಕ್ಕೆ ಕರೆದುಕೊಂಡು ಹೋಗುವವನು), ಸಹಜಿತ್ (ಯೋಧರ ಜೊತೆಯಲ್ಲಿ ಗೆಲ್ಲುವವನು), ಬಭ್ರು, ರಾಜ, ಸತ್ಯಯೋನಿ, ಪುರಾವಿತ್ (ಪುರಾತನವನ್ನೆಲ್ಲಾ ತಿಳಿದವನು), ಸತ್ಯಧರ್ಮಪ್ರವರ್ತಕ ಎಂದು ಕರೆಯಲ್ಪಡುತ್ತಾನೆ.

ಪುರಾ ಯೋ ಬ್ರಹ್ಮಣಾ ಸೃಷ್ಟಃ ಪ್ರಜಾನಾಂ ಪರಿಪಾಲನೇ ।
ದುಷ್ಟಾನಾಂ ನಿಗ್ರಹಂ ಕರ್ತಾ ಸ ಚ ರಾಜಾಭಿಧೀಯತೇ ॥೨೯.೧॥

ಹಿಂದೆ ಪ್ರಜೆಗಳ ಪಾಲನೆಗಾಗಿ ಬ್ರಹ್ಮದೇವರಿಂದ ಸೃಷ್ಟನಾಗಿ ಯಾವನು ದುಷ್ಟನಿಗ್ರಹವನ್ನು ಮಾಡುತ್ತಾನೆಯೋ ಅವನು ರಾಜ ಎಂದು ಕರೆಯಲ್ಪಡುತ್ತಾನೆ.

ಸತ್ಯಂ ಮನ್ಯುರ್ದಯಾ ರಕ್ಷಾ ಧರ್ಮಾಧರ್ಮವಿಲೋಕನಮ್ ।
ವಿದ್ಯಂತೇ ಯಸ್ಯ ಚಾರಾಶ್ಚ ಸ ರಾಜೇತ್ಯಭಿಧೀಯತೇ ॥೨೯.೨॥

ಯಾವನಲ್ಲಿ ಸತ್ಯ, ಕೋಪ, ದಯಾ, ರಕ್ಷಣೆ ಮತ್ತು ಧರ್ಮಾಧರ್ಮ ವಿವೇಚನೆಗಳು ಇರುತ್ತವೆಯೋ ಮತ್ತು ಯಾವನಿಗೆ ಚಾರರು ಇರುತ್ತಾರೆಯೋ ಅವನನ್ನು ರಾಜ ಎಂದು ಕರೆಯುತ್ತಾರೆ.

ಅಧರ್ಮಾದೃಷಯೋ ಭೀತಾ ಬಲಂ ಕ್ಷತ್ರೇ ಸಮಾದಧನ್ ।
ತಸ್ಮಾದ್ಧಿ ಬ್ರಹ್ಮಣಾ ಕ್ಷತ್ರಂ ಕ್ಷತ್ರೇಣ ಬ್ರಹ್ಮ ಚಾವ್ಯಯಮ್ ॥೩೦॥

ಪ್ರಪಂಚದಲ್ಲಿ ಉಂಟಾಗಬಹುದಾದ ಅಧರ್ಮಕ್ಕೆ ಹೆದರಿ ಋಷಿಗಳು ಕ್ಷತ್ರಿಯ ಸಮೂಹಕ್ಕೆ ಬಲವನ್ನು ಆಧಾನ ಮಾಡಿದರು. ಆದ್ದರಿಂದ ಬ್ರಾಹ್ಮಣರ ಜೊತೆಯಲ್ಲಿ ಸೇರಿದ ಕ್ಷತ್ರಿಯರು ಮತ್ತು ಕ್ಷತ್ರಿಯರ ಜೊತೆಯಲ್ಲಿ ಸೇರಿದ ಬ್ರಾಹ್ಮಣರು ನಾಶರಹಿತರಾಗುತ್ತಾರೆ.

ಆದಿತ್ಯೋ ದಿವಿ ದೇವೇಷು ತಮೋ ನುದತಿ ತೇಜಸಾ ।
ತಥೈವ ನೃಪತಿರ್ಭೂಮಾವಧರ್ಮಾನ್ ನುದತೇ ಭೃಶಮ್ ॥೩೧॥

ದೇವತೆಗಳಲ್ಲಿ ಸೂರ್ಯನು ತನ್ನ ತೇಜಸ್ಸಿನಿಂದ ಅಂತರಿಕ್ಷ ಮತ್ತು ಸ್ವರ್ಗದಲ್ಲಿ ಕತ್ತಲೆಯನ್ನು ಪರಿಹಾರ ಮಾಡುತ್ತಾನೆ. ಅದರಂತೆ ಭೂಮಿಯಲ್ಲಿ ರಾಜನು ತನ್ನ ತೇಜಸ್ಸಿನಿಂದ ಅಧರ್ಮವನ್ನು ಚೆನ್ನಾಗಿ ನಾಶಮಾಡುತ್ತಾನೆ.

ತತೋ ರಾಜ್ಞಃ ಪ್ರಧಾನತ್ವಂ ಶಾಸ್ತ್ರಪ್ರಾಮಾಣ್ಯದರ್ಶನಾತ್ ।
ಉತ್ತರಃ ಸಿದ್ಧ್ಯತೇ ಪಕ್ಷೋ ಯೇನ ರಾಜೇತಿ ಭಾಷಿತಮ್ ॥೩೨॥

ಅತ್ರಿಣಾ ವ್ಯಾಹೃತಂ ಪೂರ್ವಂ ತತ್ ತಥೈವ ನ ಚಾನ್ಯಥಾ ।

ಆದ್ದರಿಂದ ರಾಜನ ಪ್ರಾಧಾನ್ಯವು ಶಾಸ್ತ್ರಪ್ರಾಮಾಣ್ಯದಿಂದ ಸಿದ್ಧವಾಗುತ್ತದೆ. ಆದ್ದರಿಂದ ಉತ್ತರಪಕ್ಷವು ಸಿದ್ಧವಾಗುತ್ತದೆ. ಅತ್ರಿಗಳು ರಾಜ ಎಂದು ಕರೆದುದು, ವಿಧಾತಾ ಎಂದು ಕರೆದುದು ಸರಿಯಾಗಿಯೇ ಇದೆ. ಅದರಲ್ಲಿ ಏನೂ ವ್ಯತ್ಯಾಸವಿಲ್ಲ.

ಮಾರ್ಕಂಡೇಯಃ

ತತಃ ಸ ರಾಜಾ ಸಂಹೃಷ್ಟಃ ಸಿದ್ಧೇ ಪಕ್ಷೇ ಮಹಾಮನಾಃ ।
ತಮತ್ರಿಮಬ್ರವೀತ್ ಪ್ರೀತಃ ಪೂರ್ವಂ ಯೇನಾಭಿಸಂಸ್ತುತಃ ॥೩೩॥

ಮಾರ್ಕಂಡೇಯರು– ಆಗ ಧೈರ್ಯಶಾಲಿಯಾದ ರಾಜನು ನಿರ್ಣಯವು ಹೊರಬೀಳುತ್ತಿರಲು ಸಂತೋಷಗೊಂಡು ಯಾವ ಅತ್ರಿಗಳಿಂದ ಮೊದಲು ಸ್ತೋತ್ರ ಮಾಡಲ್ಪಟ್ಟಿದ್ದನೋ ಅಂತಹ ಅತ್ರಿಗಳನ್ನು ಕುರಿತು ಮಾತನಾಡಿದನು.

ವೈನ್ಯಃ

ಯಸ್ಮಾತ್ ಪೂರ್ವಂ ಮನುಷ್ಯೇಷು ಜ್ಯಾಯಾಂಸಂ ಮಾಮಿಹಾಬ್ರವೀಃ ।
ಸರ್ವದೇವೈಶ್ಚ ವಿಪ್ರರ್ಷೇ ಸಮ್ಮಿತಂ ಶ್ರೇಷ್ಠಮೇವ ಚ ॥೩೪॥

ತಸ್ಮಾತ್ ತೇಽಹಂ ಪ್ರದಾಸ್ಯಾಮಿ ವಿವಿಧಂ ವಸು ಭೂರಿ ಚ ।
ದಾಸೀಸಹಸ್ರಂ ಶ್ಯಾಮಾನಾಂ ಸುವಸ್ತ್ರಾಣಾಮಲಂಕೃತಮ್ ॥೩೫॥

ವೈನ್ಯ– ಎಲೈ ವಿಪ್ರರ್ಷಿಯೇ, ನೀನು ನನ್ನನ್ನು ಮನುಷ್ಯರಲ್ಲಿ ಶ್ರೇಷ್ಠನೆಂದೂ ಮತ್ತು ಎಲ್ಲ ದೇವತೆಗಳಿಗೂ ಸದೃಶನೆಂದೂ ಮೊದಲು ಹೇಳಿದುದರಿಂದ ನಾನು ಸಂತೋಷಗೊಂಡು ನಿನಗೆ ಬಹಳವಾದ, ವಿವಿಧವಾದ ಧನವನ್ನೂ, ಸುವಸ್ತ್ರಮತ್ತು ಸುವರ್ಣಗಳಿಂದ ಅಲಂಕೃತರಾದ ಸುಂದರಿಯರಾದ ಚಿಕ್ಕವಯಸ್ಸಿನ ಸಹಸ್ರ ದಾಸಿಯರನ್ನೂ ಕೊಡುವೆನು.

ದಶಕೋಟೀರ್ಹಿರಣ್ಯಸ್ಯ ರುಕ್ಮಭಾರಾಂಸ್ತಥಾ ದಶ ।
ಏತದ್ ದದಾಮಿ ವಿಪ್ರರ್ಷೇ ಸರ್ವಜ್ಞಸ್ತ್ವಂ ಹಿ ಮೇ ಮತಃ ॥೩೬॥

ವಿಪ್ರರ್ಷಿಯೇ, ನಾನು ಹತ್ತುಕೋಟಿ ಹಿರಣ್ಯವನ್ನೂ, ಹತ್ತು ಮಣ ಸುವರ್ಣವನ್ನು ನಿಮಗೆ ಕೊಡುತ್ತೇನೆ. ನೀವು ಸರ್ವಜ್ಞರೆಂದು ನನ್ನ ಅಭಿಪ್ರಾಯ.

ಮಾರ್ಕಂಡೇಯಃ

ತದತ್ರಿರ್ನ್ಯಾಯತಃ ಸರ್ವಂ ಪ್ರತಿಗೃಹ್ಯಾಭಿಸತ್ಕೃತಃ ।
ಪ್ರತ್ಯುಜ್ಜಗಾಮ ತೇಜಸ್ವೀ ಗೃಹಾನೇವ ಮಹಾತಪಾಃ ॥೩೭॥

ಮಾರ್ಕಂಡೇಯ– ಹೀಗೆ ರಾಜನಿಂದ ಸತ್ಕೃತನಾಗಿ ನ್ಯಾಯದಿಂದ ಪ್ರಾಪ್ತವಾದ ಆ ಧನವನ್ನೆಲ್ಲಾ ತೆಗೆದುಕೊಂಡು ಮಹಾತಪಸ್ವಿಗಳೂ, ತೇಜಸ್ವಿಗಳೂ ಆದ ಅತ್ರಿಗಳು ಮನೆಗೆ ಬಂದರು.

ಪ್ರದಾಯ ಚ ಧನಂ ಪ್ರೀತಃ ಪುತ್ರೇಭ್ಯಃ ಪ್ರಯತಾತ್ಮವಾನ್ ।
ತಪಃ ಸಮಭಿಸಂಧಾಯ ವನಮೇವಾನ್ವಪದ್ಯತ ॥೩೮॥

ಮನೋಜಯವುಳ್ಳ ಅವರು ಸಂತೋಷದಿಂದ ಆ ಧನವನ್ನು ಮಕ್ಕಳಿಗೆ ಹಂಚಿ ತಪಸ್ಸನ್ನೇ ಶ್ರೇಷ್ಠವೆಂದು ಅನುಸಂಧಾನ ಮಾಡಿ ಕಾಡಿಗೆ ಹೋದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ತನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ತೊಂದನೆಯ ಅಧ್ಯಾಯ

ಮಾರ್ಕಂಡೇಯರಿಂದ ಯುಧಿಷ್ಠಿರನನ್ನು ಕುರಿತು ತಾರ್ಕ್ಷ್ಯ
ಸರಸ್ವತಿಯರ ಸಂವಾದದ ಅನುವಾದ.

ಮಾರ್ಕಂಡೇಯಃ

ಅತ್ರೈವ ಚ ಸರಸ್ವತ್ಯಾ ಗೀತಂ ಪರಪುರಂಜಯ ।
ಪೃಷ್ಟಯಾ ಮುನಿನಾ ವೀರ ಶೃಣು ತಾರ್ಕ್ಷ್ಯೇಣ ಧೀಮತಾ ॥೧॥

ಮಾರ್ಕಂಡೇಯ– ಎಲೈ ಪರಪುರಂಜಯನೇ, ಈ ವಿಷಯದಲ್ಲಿಯೇ ಮೇಧಾವಿಗಳಾದ ತಾರ್ಕ್ಷ್ಯ ಋಷಿಗಳ ಪ್ರಶ್ನೆಗೆ ಉತ್ತರವಾಗಿ ಸರಸ್ವತಿಯು ಹಾಡಿದ ಮಾತುಗಳನ್ನು ಕೇಳು.

ತಾರ್ಕ್ಷ್ಯಃ

ಕಿಂ ನು ಶ್ರೇಯಃ ಪುರುಷಸ್ಯೇಹ ಭದ್ರೇ
ಕಥಂ ಕುರ್ವನ್ನ ಚ್ಯವತೇ ಸ್ವಧರ್ಮಾತ್ ।
ಆಚಕ್ಷ್ವ ಮೇ ಚಾರುಸರ್ವಾಂಗಿ ಕುರ್ಯಾಂ
ತ್ವಯಾ ಶಿಷ್ಟೋ ನ ಚ್ಯವೇಯಂ ಸ್ವಧರ್ಮಾತ್ ॥೨॥

ಕಥಂ ಚಾಗ್ನಿಂ ಜುಹುಯಾಂ ಪೂಜಯೇ ವಾ
ಕಸ್ಮಿನ್ ಕಾಲೇ ಕೇನ ಧರ್ಮೋ ನ ನಶ್ಯೇತ್ ।
ಏತತ್ ಸರ್ವಂ ಸುಭಗೇ ಪ್ರಬ್ರವೀಹಿ
ಯಥಾ ಲೋಕಾನ್ ವಿರಜಾಃ ಸಂಚರೇಯಮ್ ॥೩॥

ತಾರ್ಕ್ಷ್ಯ– ಎಲೌ ಮಂಗಳಸ್ವರೂಪಳೇ, ಪುರುಷನಿಗೆ ಶ್ರೇಯಸ್ಸು ಯಾವುದು? ಏನು ಮಾಡಿದರೆ ತನ್ನ ಧರ್ಮದಿಂದ ಚ್ಯುತನಾಗುವುದಿಲ್ಲ? ಎಲೌ ಸರ್ವಾಂಗ ಸುಂದರಿಯೇ, ನನಗೆ ಹೇಳು. ನಿನ್ನಿಂದ ಉಪದಿಷ್ಟನಾಗಿ ನಾನು ಸ್ವಧರ್ಮದಿಂದ ಚ್ಯುತನಾಗದೇ ಇದ್ದೇನು. ಅಗ್ನಿಯಲ್ಲಿ ಹೇಗೆ ಹೋಮವನ್ನು ಮಾಡಬೇಕು? ಹೇಗೆ ಪೂಜೆಯನ್ನು ಮಾಡಬೇಕು? ಯಾವ ಕಾಲದಲ್ಲಿ ಯಾವ ಕಾರಣದಿಂದ ಧರ್ಮವು ನಾಶವನ್ನು ಹೊಂದಲಾರದು? ಎಲೌ ಸೌಭಾಗ್ಯವತಿಯೇ, ಇದೆಲ್ಲವನ್ನೂ ನನಗೆ ಹೇಳು. ನಿನ್ನ ಉಪದೇಶದಿಂದ ನಾನು ರಜ ಆದಿ ದೋಷದೂರವಾದ ಲೋಕಗಳಲ್ಲಿ ಸಂಚರಿಸಿಯೇನು.

ಮಾರ್ಕಂಡೇಯಃ

ಏವಂ ಪೃಷ್ಟಾ ಪ್ರೀತಿಯುಕ್ತೇನ ತೇನ
ಶುಶ್ರೂಷುಮೀಕ್ಷ್ಯೋತ್ತಮಬುದ್ಧಿಯುಕ್ತಮ್ ।
ತಾರ್ಕ್ಷ್ಯಂ ವಿಪ್ರಂ ಧರ್ಮಯುಕ್ತಂ ಹಿತಂ ಚ
ಸರಸ್ವತೀ ವಾಕ್ಯಮಿದಂ ಬಭಾಷೇ ॥೪॥

ಮಾರ್ಕಂಡೇಯರು– ಹೀಗೆ ವಿಶ್ವಾಸದಿಂದ ಪ್ರಶ್ನೆ ಮಾಡಿದ ತಾರ್ಕ್ಷ್ಯರು ಶ್ರವಣೇಚ್ಛಗಳಾಗಿ ಇರುವುದನ್ನು ಮತ್ತು ಉತ್ತಮ ಬುದ್ಧಿಯುಳ್ಳವರಾಗಿರುವುದನ್ನು ಗಮನಿಸಿ ಸರಸ್ವತಿಯು ಆ ಬ್ರಾಹ್ಮಣರನ್ನು ಕುರಿತು ಧರ್ಮಯುಕ್ತವಾದ ಮತ್ತು ಹಿತವಾದ ಈ ಮಾತುಗಳನ್ನು ಆಡಿದಳು.

ಯೋ ಬ್ರಹ್ಮ ಜಾನಾತಿ ಯಥಾಪ್ರದೇಶಂ
ಸ್ವಾಧ್ಯಾಯನಿತ್ಯಃ ಶುಚಿರಪ್ರಮತ್ತಃ ।
ಸ ವೈ ಪಾರಂ ದೇವಲೋಕಸ್ಯ ಗಂತಾ
ಸಹಾಮರೈಃ ಪ್ರಾಪ್ನುಯಾತ್ ಪ್ರೀತಿಯೋಗಮ್ ॥೫॥

ಯಾವನು ಉಪದೇಶಕ್ಕೆ ಅನುಗುಣವಾಗಿ ವೇದವನ್ನು ತಿಳಿದು ನಿತ್ಯದಲ್ಲಿಯೂ ಸ್ವಾಧ್ಯಾಯನಿರತನಾಗಿ ಶುಚಿಯೂ ಮತ್ತು ಪ್ರಮಾದರಹಿತನೂ ಆಗುತ್ತಾನೆಯೋ ಅವನು ದೇವಲೋಕದ ಅಂತವನ್ನು ತಲುಪಿ ದೇವತೆಗಳ ಜೊತೆಯಲ್ಲಿದ್ದು ಅವರ ಪ್ರೀತಿಗೆ ಪಾತ್ರನಾಗುತ್ತಾನೆ.

ತತ್ರ ಸ್ಮ ರಮ್ಯಾ ವಿಪುಲಾ ವಿಶೋಕಾಃ
ಸುಪುಷ್ಪಿತಾಃ ಪುಷ್ಕರಿಣ್ಯಃ ಸುಪುಣ್ಯಾಃ ।
ಅಕರ್ದಮಾ ಮೀನವತ್ಯಃ ಸುತೀರ್ಥಾ
ಹಿರಣ್ಮಯೈರಾವೃತಾಃ ಪುಂಡರೀಕೈಃ ॥೬॥

ಅಲ್ಲಿ ಮನೋಹರವಾದ, ವಿಶಾಲವಾದ ಶೋಕನಾಶವನ್ನು ಮಾಡುವ, ಪವಿತ್ರವಾದ, ಪುಷ್ಪಿತವಾದ, ಹಿರಣ್ಮಯವಾದ ಕಮಲಗಳಿಂದ ಕೂಡಿದ, ಮತ್ಸ್ಯಗಳಿರುವ, ಕೆಲಸರಿಲ್ಲದಿರುವ, ಒಳ್ಳೆಯ ನೀರನ್ನು ಹೊಂದಿದ ಸರೋವರಗಳಿವೆ.

ತಾಸಾಂ ತೀರೇಷ್ವಾಸತೇ ಪುಣ್ಯಕರ್ಮಾ
ಮಹೀಯಮಾನಃ ಪೃಥಗಪ್ಸರೋಭಿಃ ।
ಸುಪುಣ್ಯಗಂಧಾಭಿರಲಂಕೃತಾಭಿ–
ರ್ಹಿರಣ್ಯವರ್ಣಾಭಿರತೀವ ಹೃಷ್ಟಃ ॥೭॥

ಪುಣ್ಯಕರ್ಮವನ್ನು ಮಾಡಿದವನು ಅಂತಹ ಸರೋವರದ ತೀರದಲ್ಲಿ ಸುವರ್ಣವರ್ಣವುಳ್ಳ ಸುಗಂಧಯುಕ್ತರಾದ ಮತ್ತು ಅಲಂಕೃತರಾದ ಅಪ್ಸರೆಯರಿಂದ ಪೂಜಿಸಲ್ಪಡುವನಾಗಿ ಸಂತೋಷದಿಂದ ವಾಸಮಾಡುತ್ತಾನೆ.

ಪರಂ ಲೋಕಂ ಗೋಪ್ರದಾಸ್ತ್ವಾಪ್ನುವಂತಿ
ದತ್ತ್ವಾ ನಡ್ವಾಹಂ ಸೂರ್ಯಲೋಕಂ ವ್ರಜಂತಿ ।
ವಾಸೋ ದತ್ತ್ವಾ ಚಾಂದ್ರಮಸಂ ತು ಲೋಕಂ
ದತ್ತ್ವಾ ಹಿರಣ್ಯಮಮರತ್ವಮೇತಿ ॥೮॥

ಗೋದಾನ ಮಾಡಿದವರು ಉತ್ತಮಲೋಕವನ್ನು ಹೊಂದುತ್ತಾರೆ. ವೃಷಭವನ್ನು ದಾನಮಾಡಿದವರು ಸೂರ್ಯಲೋಕಕ್ಕೆ ಹೋಗುತ್ತಾರೆ. ವಸ್ತ್ರದಾನವನ್ನು ಮಾಡಿದವರು

ಚಂದ್ರಲೋಕಕ್ಕೆ ಹೋಗುತ್ತಾರೆ. ಸುವರ್ಣವನ್ನು ದಾನಮಾಡಿದವನು ದೇವತ್ವವನ್ನು ಹೊಂದುತ್ತಾನೆ.

ಧೇನುಂ ದತ್ತ್ವಾ ಸುಪ್ರಭಾಂ ಸುಪ್ರದೋಹಾಂ
ಕಲ್ಯಾಣವತ್ಸಾಮಪಲಾಯಿನೀಂ ಚ ।
ಯಾವಂತಿ ರೋಮಾಣಿ ಭವಂತಿ ತಸ್ಯಾ–
ಸ್ತಾವದ್ವರ್ಷಾಣ್ಯಾಸತೇ ದೇವಲೋಕೇ ॥೯॥

ಒಳ್ಳೆಯ ಕಾಂತಿಯುಳ್ಳ, ಚೆನ್ನಾಗಿ ಹಾಲನ್ನು ಕೊಡುವ, ಒಳ್ಳೆಯ ಕರುವನ್ನು ಹೊಂದಿದ, ಓಡಿಹೋಗದಿರುವ ಗೋವನ್ನು ದಾನ ಮಾಡಿದವರು ಆ ಗೋವಿನ ದೇಹದಲ್ಲಿ ಎಷ್ಟು ರೋಮಗಳಿರುತ್ತವೆಯೋ ಅಷ್ಟು ವರ್ಷಗಳ ಕಾಲ ದೇವಲೋಕದಲ್ಲಿ ವಾಸಮಾಡುತ್ತಾರೆ.

ಅನಡ್ವಾಹಂ ಸುವ್ರತಂ ಯೋ ದದಾತಿ
ಹಲಸ್ಯ ವೋಢಾರಮನಂತವೀರ್ಯಮ್ ।
ಧುರಂಧರಂ ಬಲವಂತಂ ಯುವಾನಂ
ಪ್ರಾಪ್ನೋತಿ ಲೋಕಾನ್ ದಶಧೇನುದಸ್ಯ ॥೧೦॥

ಯಾರು ಒಳ್ಳೆಯ ನಡತೆಯುಳ್ಳ, ನೇಗಿಲಿಗೆ ಯೋಗ್ಯವಾದ, ಭಾರವನ್ನು ಹೊರುವಷ್ಟು ಶಕ್ತಿಯುಳ್ಳ ಚಿಕ್ಕವಯಸ್ಸಿನ ಎತ್ತನ್ನು ದಾನಮಾಡುತ್ತಾರೋ ಅವರು ಹತ್ತು ಗೋದಾನ ಮಾಡಿದವರು ಹೋಗುವ ಲೋಕಕ್ಕೆ ಹೋಗುತ್ತಾರೆ.

ದದಾತಿ ಯೋ ವೈ ಕಪಿಲಾಂ ಸಚೈಲಾಂ
ಕಾಂಸ್ಯೋಪದೋಹಾಂ ದ್ರವಿಣೈರುತ್ತರೀಯೈಃ ।
ತೈಸ್ತೈರ್ಗುಣೈಃ ಕಾಮುದುಹಾಥ ಭೂತ್ವಾ
ನರಂ ಪ್ರದಾತಾರಮುಪೈತಿ ಸಾ ಗೌಃ ॥೧೦.೧॥

ಯಾರು ವಸ್ತ್ರ, ಹಾಲುಕರೆಯುವ ಕಂಚಿನ ಪಾತ್ರೆ, ಉತ್ತರೀಯ ಮತ್ತು ದ್ರವ್ಯಗಳಿಂದ ಸಹಿತವಾದ ಕಪಿಲ ಗೋವನ್ನು ದಾನಮಾಡುತ್ತಾರೋ ಅಂತಹವರಿಗೆ ಸ್ವರ್ಗಲೋಕದಲ್ಲಿ ಅಂತಹ ಗೋವು ಅವರು ಕೇಳಿದ ಕಾಮವನ್ನೆಲ್ಲಾ ಕೊಡುವುದಾಗಿ ಅವರ ಸಮೀಪದಲ್ಲಿರುತ್ತದೆ.

ಯಾವಂತಿ ರೋಮಣಿ ಭವಂತಿ
ಧೇನ್ವಾಸ್ತಾವತ್ಫಲಂ ಭವತಿ ಗೋಪ್ರದಾನೇ ।
ಪುತ್ರಾಂಶ್ಚ ಪೌತ್ರಾಂಶ್ಚ ಕುಲಂ ಚ ಸರ್ವ–
ಮಾಸಪ್ತಮಂ ತಾರಯತೇ ಪರತ್ರ ॥೧೦.೨॥

ಗೋವಿನ ದೇಹದಲ್ಲಿ ಎಷ್ಟು ರೋಮಗಳಿರುತ್ತವೆಯೋ, ಗೋ ಪ್ರದಾನ ಮಾಡಿದವನು ಅಷ್ಟು ಫಲವನ್ನು ಅನುಭವಿಸುತ್ತಾನೆ. ಮಕ್ಕಳು, ಮೊಮ್ಮಕ್ಕಳನ್ನು ನೀಡುವುದಲ್ಲದೇ ಪರಲೋಕದಲ್ಲಿ ಹಿಂದಿನ ಏಳು ಪಿತೃಗಳನ್ನು ಅದು ದುಃಖದಿಂದ ಪಾರು ಮಾಡುತ್ತದೆ.

ಸದಕ್ಷಿಣಾಂ ಕಾಂಚನಚಾರುಶೃಂಗೀಂ
ಕಾಂಸ್ಯೋಪದೋಹಾಂ ದ್ರವಿಣೈರುತ್ತರೀಯೈಃ ।
ಧೇನುಂ ತಿಲಾನಾಂ ದದತೋ ದ್ವಿಜಾಯ
ಲೋಕಾ ವಸೂನಾಂ ಸುಲಭಾ ಭವಂತಿ ॥೧೦.೩॥

ಕಂಚಿನ ಪಾತ್ರೆಯಿಂದ ಕೂಡಿದ, ಸುವರ್ಣಾಲಂಕೃತವಾದ ಶೃಂಗವುಳ್ಳ, ಉತ್ತರೀಯ ಮತ್ತು ದ್ರವ್ಯಸಹಿತವಾದ ಗೋವನ್ನು, ದಕ್ಷಿಣೆ ಮತ್ತು ತಿಲಗಳ ಜೊತೆಯಲ್ಲಿ ಬ್ರಾಹ್ಮಣನಿಗೆ ದಾನವನ್ನು ಮಾಡುವವನು ಸುಲಭವಾಗಿ ವಸುಗಳ ಲೋಕವನ್ನು ಹೊಂದುತ್ತಾನೆ.

ಸ್ವಕರ್ಮಭಿರ್ದಾನವಸನ್ನಿರುದ್ಧೇ
ತೀವ್ರಾಂಧಕಾರೇ ನರಕೇ ಸಂಪತಂತಮ್ ।
ಮಹಾರ್ಣವೇ ನೌರಿವ ವಾತಯುಕ್ತಾ
ದಾನಂ ಗವಾಂ ತಾರಯತೇ ಪರತ್ರ ॥೧೦.೪॥

ತನ್ನ ದುಷ್ಕರ್ಮಗಳಿಂದ ತೀವ್ರ ಅಂಧಕಾರವಿರುವ ರಾಕ್ಷಸರಿಂದ ಸಂಕುಲವಾದ ನರಕದಲ್ಲಿ ಬೀಳಲಿರುವ ಮನುಷ್ಯನನ್ನು ಗೋದಾನವು ಸಮುದ್ರದಲ್ಲಿ ಹಡಗು ಪಾರುಮಾಡಿದಂತೆ ಅವನನ್ನು ನರಕದಿಂದ ಪಾರುಮಾಡುತ್ತದೆ.

ಯೋ ಬ್ರಾಹ್ಮದೇಯಾಂ ತು ದದಾತಿ
ಕನ್ಯಾಂ ಭೂಮಿಪ್ರದಾನಂ ಚ ಕರೋತಿ ವಿಪ್ರೇ ।
ದದಾತಿ ದಾನಂ ವಿಧಿನಾ ಚ ಯಶ್ಚ
ಸ ಲೋಕಮಾಪ್ನೋತಿ ಪುರಂದರಸ್ಯ ॥೧೦.೫॥

ಯಾರು ಬ್ರಾಹ್ಮವಿಧಿಯಿಂದ ವಿಪ್ರನಿಗೆ ಕನ್ಯಾದಾನವನ್ನೂ ಮತ್ತು ಭೂಮಿ ದಾನವನ್ನೂ ವಿಧಿಪೂರ್ವಕವಾಗಿ ಮಾಡುತ್ತಾನೆಯೋ ಅವನು ಇಂದ್ರಲೋಕವನ್ನು ಹೊಂದುತ್ತಾನೆ.

ಯಃ ಸಪ್ತ ವರ್ಷಾಣಿ ಜುಹೋತಿ ತಾರ್ಕ್ಷ್ಯ
ಹವ್ಯಂ ತ್ವಗ್ನೌ ನಿಯತಃ ಸಾಧುಶೀಲಃ ।
ಸಪ್ತಾವರಾನ್ ಸಪ್ತ ಪೂರ್ವಾನ್ ಪುನಾತಿ
ಪಿತಾಮಹಾನಾತ್ಮನಾ ಕರ್ಮಭಿಃ ಸ್ವೈಃ ॥೧೧॥

ಎಲೈ ತಾರ್ಕ್ಷ್ಯನೇ, ಯಾವನು ನಿಯಮಬದ್ಧನಾಗಿದ್ದು, ಸಾಧುಸ್ವಭಾವವನ್ನು ಹೊಂದಿದವನಾಗಿ ಏಳುವರ್ಷಗಳ ಕಾಲ ಅಗ್ನಿಯಲ್ಲಿ ಹೋಮವನ್ನು ಮಾಡುತ್ತಾನೆಯೋ ಅವನು ತನ್ನನ್ನೂ, ತನ್ನ ಹಿಂದಿನ ಏಳು ಪಿತೃಗಳನ್ನೂ ಮತ್ತು ಮುಂದಿನ ಏಳು ಪೀಳಿಗೆಗಳನ್ನೂ ಅವರ ದುಷ್ಕರ್ಮದಿಂದ ಪಾರುಮಾಡಿ ಪವಿತ್ರೀಕರಿಸುತ್ತಾನೆ.

ತಾರ್ಕ್ಷ್ಯಃ

ಕಿಮಗ್ನಿಹೋತ್ರಸ್ಯ ವ್ರತಂ ಪುರಾಣಮಾಚಕ್ಷ್ವ ಮೇ ಪೃಚ್ಛತಶ್ಚಾನುರೂಪೇ ।
ತ್ವಯಾನುಶಿಷ್ಟೋಽಹಮಿಹಾದ್ಯ ವಿದ್ಯಾಂ ಯದಗ್ನಿಹೋತ್ರಸ್ಯ ವ್ರತಂ
ಪುರಾಣಮ್ ॥೧೨॥

ತಾರ್ಕ್ಷ್ಯ– ಎಲೌ ಸುಂದರಿಯೇ, ಅಗ್ನಿಹೋತ್ರವ್ರತವು ಪ್ರಾಚೀನಕಾಲದಿಂದಲೂ ಹೇಗೆ ನಡೆದುಬಂದಿದೆ ಎಂದು ನನಗೆ ಹೇಳು. ನಿನ್ನ ಉಪದೇಶದಿಂದ ನಾನು ಪ್ರಾಚೀನವಾದ ಅಗ್ನಿಹೋತ್ರವ್ರತವನ್ನು ಈ ದಿನ ತಿಳಿದೇನು.

ಸರಸ್ವತೀ

ನ ಚಾಶುಚಿರ್ನಾಪ್ಯನಿರ್ದಕ್ತಪಾಣಿರ್ನಾಬ್ರಹ್ಮವಿಜ್ಜುಹುಯಾನ್ನಾವಿಪಶ್ಚಿತ್ ।
ಬುಭುತ್ಸವಃ ಶುಚಿಕಾಮಾ ಹಿ ದೇವಾ ನಾಶ್ರದ್ದಧಾನಾದ್ಧಿ ಹವಿರ್ಜುಷಂತಿ॥

ಸರಸ್ವತೀ– ಅಶುಚಿಯಾದವನು, ಕೈಗಳನ್ನು ತೊಳೆಯದವನು, ವೇದವನ್ನು ತಿಳಿಯದವನು ಮತ್ತು ಜ್ಞಾನಶೂನ್ಯನಾದವನು ಹೋಮವನ್ನು ಮಾಡಬಾರದು. ಜ್ಞಾನದಲ್ಲಿ ಆಸಕ್ತಿಯುಳ್ಳ ಶುದ್ಧಿಕಾಮರಾದ ದೇವತೆಗಳು ಶ್ರದ್ಧೆಯಿಲ್ಲದೇ ಹೋಮಿಸಿದ ಹವಿಸ್ಸನ್ನು ಸ್ವೀಕರಿಸುವುದಿಲ್ಲ.

ನಾಶ್ರೋತ್ರಿಯಂ ದೇವಹವ್ಯೇ ನಿಯುಂಜ್ಯಾ–
ನ್ನೋಘಂ ಪುರಾ ಸಿಂಚತಿ ತಾದೃಶೋ ಹಿ ।
ಅಪೂರ್ಣಮಶ್ರೋತ್ರಿಯಮಾಹ ತಾರ್ಕ್ಷ್ಯ
ನ ವೈ ತಾದೃಗ್ಜುಹುಯಾದಗ್ನಿಹೋತ್ರಮ್ ॥೧೪॥

ದೇವತೆಗಳಿಗೆ ಹೋಮಮಾಡಬೇಕಾದಾಗ ಶ್ರೋತ್ರಿಯನಲ್ಲದವನನ್ನು ಪುರೋಹಿತನಾಗಿ ನೇಮಿಸಬಾರದು. ಅಂತಹ ವ್ಯಕ್ತಿಯು ವ್ಯರ್ಥವಾಗಿ ಅಗ್ನಿಯಲ್ಲಿ ಹವಿಸ್ಸನ್ನು ಸುರಿಯುತ್ತಾನೆ. ಎಲೈ ತಾರ್ಕ್ಷ್ಯನೇ, ಶ್ರೋತ್ರಿಯನಲ್ಲದವನು ಪೂರ್ಣನಲ್ಲ. ಅಂತಹವನು ಅಗ್ನಿಯಲ್ಲಿ ಹೋಮವನ್ನು ಮಾಡಬಾರದು.

ಕೃಶಾಶ್ಚ ಯೇ ಜುಹ್ವತಿ ಶ್ರದ್ದಧಾನಾಃ
ಸತ್ಯವ್ರತಾ ಹುತಶಿಷ್ಟಾಶಿನಶ್ಚ ।
ಗವಾಂ ಲೋಕಂ ಪ್ರಾಪ್ಯ ತೇ ಪುಣ್ಯಗಂಧಂ
ಪಶ್ಯಂತಿ ದೇವಂ ಪರಮಂ ಚಾಪಿ ಸತ್ಯಮ್ ॥೧೫॥

ಯಾರು ಶ್ರದ್ಧೆಯುಳ್ಳವರಾಗಿ, ಒಳ್ಳೆಯ ವ್ರತವನ್ನು ಮಾಡುವವರಾಗಿ, ಯಜ್ಞಶೇಷವನ್ನು ಭುಂಜಿಸುವವರಾಗಿ, ಕೃಶರಾಗಿ ಹೋಮವನ್ನು ಮಾಡುತ್ತಾರೆಯೋ ಅವರು ಪುಣ್ಯಗಂಧವುಳ್ಳ ದೇವಲೋಕಕ್ಕೆ ಹೋಗಿ ಸರ್ವೋತ್ತಮನಾದ ಸೃಷ್ಟ್ಯಾದಿಕರ್ತನಾದ ದೇವನನ್ನು ನೋಡುತ್ತಾರೆ.

ತಾರ್ಕ್ಷ್ಯಃ

ಕ್ಷೇತ್ರಜ್ಞಭೂತಾಂ ಪರಲೋಕಭಾವೇ
ಕರ್ಮೋದಯೇ ಬುದ್ಧಿಮತಿಪ್ರವಿಷ್ಟಾಮ್ ।
ಪ್ರಜ್ಞಾಂ ಚ ದೇವೀಂ ಸುಭಗೇ ವಿಮೃಶ್ಯ
ಪೃಚ್ಛಾಮಿ ತ್ವಾಂ ಕಾ ಹ್ಯಸಿ ಚಾರುರೂಪೇ ॥೧೬॥

ತಾರ್ಕ್ಷ್ಯ– ದೇವಿಯೇ, ನೀನು ಪರಲೋಕವಿಷಯಗಳನ್ನು ಕ್ಷೇತ್ರಜ್ಞನಾದ ಪರಮಾತ್ಮನಂತೆ ತಿಳಿದಿರುವುದನ್ನೂ ಮತ್ತು ಕರ್ಮದ ಫಲದ ವಿಷಯದಲ್ಲಿ ಅತ್ಯಂತ ಸೂಕ್ಷ್ಮವಾದ ನಿನ್ನ ಬುದ್ಧಿಯನ್ನೂ ಮತ್ತು ನಿನ್ನ ಪ್ರಜ್ಞೆಯನ್ನೂ ಗಮನಿಸಿ, ಎಲೌ ಸುಂದರಿಯೇ, ಸೌಭಾಗ್ಯವತಿಯೇ, ನೀನು ಯಾರು ಎಂದು ಕೇಳುತ್ತಿದ್ದೇನೆ?

ಸರಸ್ವತೀ

ಅಗ್ನಿಹೋತ್ರಾದಹಮಭ್ಯಾಗತಾಸ್ಮಿ
ವಿಪ್ರರ್ಷಭಾಣಾಂ ಸಂಶಯಚ್ಛೇದನಾಯ ।
ತತ್ತ್ವಜ್ಞಯೋಗಾದಹಮೇತಮಬ್ರುವಂ
ಭಾವೇ ಸ್ಥಿತಾ ತಥ್ಯಮರ್ಥಂ ಯಥಾವತ್ ॥೧೭॥

ಸರಸ್ವತೀ– ನಾನು ವಿಪ್ರರ್ಷಿಗಳ ಅಗ್ನಿಹೋತ್ರದಿಂದ ತತ್ತ್ವಜ್ಞಾನದ ವಿಷಯದಲ್ಲಿ ಸಂಶಯವನ್ನು ಪರಿಹರಿಸಲು ಬಂದಿದ್ದೇನೆ. ನಿನ್ನ ಸಂಪರ್ಕದಿಂದ ನಿನ್ನ ಅಭಿಪ್ರಾಯವನ್ನು ತಿಳಿದು ಎಲ್ಲವನ್ನೂ ಸರಿಯಾಗಿ ಹೇಳಿದ್ದೇನೆ.

ತಾರ್ಕ್ಷ್ಯಃ

ನ ಹಿ ತ್ವಯಾ ಸದೃಶೀ ಕಾಚಿದಸ್ತಿ ವಿಭ್ರಾಜಸೇ
ಹ್ಯತಿಮಾತ್ರಂ ಯಥಾ ಶ್ರೀಃ ।
ರೂಪಂ ಚ ತೇ ದಿವ್ಯಮನಂತಕಾಂತಿ
ಪ್ರಜ್ಞಾಂ ಚ ದೈವೀಂ ಸುಭಗೇ ಬಿಭರ್ಷಿ ॥೧೮॥

ತಾರ್ಕ್ಷ್ಯ– ಎಲೌ ಸೌಭಾಗ್ಯವತಿಯೇ, ನಿನ್ನಂತಹ ವನಿತೆಯು ಇನ್ನೊಬ್ಬಳಿಲ್ಲ. ಲಕ್ಷ್ಮೀದೇವಿಯಂತೆ ಕಂಗೊಳಿಸುತ್ತಿದ್ದೀಯೆ. ನಿನ್ನ ರೂಪವಾದರೂ ದಿವ್ಯವಾದ ಅಪರಿಮಿತವಾದ ಕಾಂತಿಯಿಂದ ಕೂಡಿದೆ. ನೀನು ದೈವೀಪ್ರತಿಭೆಯನ್ನು ಹೊಂದಿದವಳಾಗಿದ್ದೀಯೆ.

ಸರಸ್ವತೀ

ಶ್ರೇಷ್ಠಾನಿ ಯಾನಿ ದ್ವಿಪದಾಂ ವರಿಷ್ಠ
ಯಜ್ಞೇಷು ವಿದ್ವನ್ನುಪಪಾದಯಂತಿ ।

ತೈರೇವ ಚಾಹಂ ಸಂಪ್ರವೃದ್ಧಾ ಭವಾಮಿ
ಚಾಪ್ಯಾಯಿತಾ ರೂಪವತೀ ಚ ವಿಪ್ರ ॥೧೯॥

ಸರಸ್ವತೀ– ಎಲೈ ದ್ವಿಪದರಲ್ಲಿ ಶ್ರೇಷ್ಠನಾದ ಬ್ರಾಹ್ಮಣನೇ, ವಿದ್ವಾಂಸನೇ, ಯಜ್ಞಗಳಲ್ಲಿ ಯಾರು ಶ್ರೇಷ್ಠವಾದ ಪದಾರ್ಥಗಳನ್ನು ಉಪಯೋಗಿಸುತ್ತಾರೆಯೋ ಅಂತಹ ಪದಾರ್ಥಗಳಿಂದ ನಾನು ಅಭಿವೃದ್ಧಳೂ, ಸಂತೋಷವುಳ್ಳವಳೂ ಮತ್ತು ಸೌಂದರ್ಯವುಳ್ಳವಳೂ ಆಗುತ್ತೇನೆ.

ಯಚ್ಚಾಪಿ ವಾಕ್ಯಮುಪಯುಜ್ಯತೇ ಹ
ವಾನಸ್ಪತ್ಯಂ ಪಾಯಸಂ ಪಾರ್ಥಿವಂ ವಾ ।
ದಿವ್ಯೇನ ರೂಪೇಣ ಚ ಪ್ರಜ್ಞಯಾ ಚ
ತೇನೈವ ಸಿದ್ಧಿರಿತಿ ವಿದ್ಧಿ ವಿದ್ವನ್ ॥೨೦॥

ಮತ್ತು ಯಜ್ಞಗಳಲ್ಲಿ ಯಾವ ವೇದಮಂತ್ರಗಳು ಉಪಯೋಗಿಸಲ್ಪಡುತ್ತವೆಯೋ, ಯಾವ ಒಳ್ಳೆಯ ಸಮಿತ್ತು ಮೊದಲಾದ ಇಂಧನಗಳು ಉಪಯೋಗಿಸಲ್ಪಡುತ್ತವೆಯೋ ಮತ್ತು ಕ್ಷೀರಾದಿ ಉಪಯೋಗಿಸಲ್ಪಡುತ್ತದೆಯೋ ಮತ್ತು ವ್ರೀಹಿಯವಾದಿಗಳು ಉಪಯೋಗಿಸಲ್ಪಡುತ್ತವೆಯೋ ಅಂತಹ ಪದಾರ್ಥಗಳಿಂದ ನನಗೆ ದಿವ್ಯರೂಪದ ಮತ್ತು ಪ್ರತಿಭೆಯ ಸಿದ್ಧಿ ಉಂಟಾಗುತ್ತದೆ ಎಂದು ತಿಳಿ.

ತಾರ್ಕ್ಷ್ಯಃ

ಇದಂ ಶ್ರೇಯಃ ಪರಮಂ ಮನ್ಯಮಾನಾ
ವ್ಯಾಯಚ್ಛಂತೇ ಪ್ರತ್ಯಯಾತ್ ಸಂಪ್ರತೀತಾಃ ।
ಆಚಕ್ಷ್ವ ಮೇ ತಂ ಪರಮಂ ವಿಶೋಕಂ
ಮೋಕ್ಷಂ ಪರಂ ಯಂ ಪ್ರವಿಶಂತಿ ಧೀರಾಃ ।
ಸಾಂಖ್ಯಾ ಯೋಗಾ ಪರಮಂ ಯಂ ವಿದಂತಿ
ಪರಂ ಪುರಾಣಂ ತಮಹಂ ನ ವೇದ್ಮಿ ॥೨೧॥

ತಾರ್ಕ್ಷ್ಯ– ಇದು ಪರಮಶ್ರೇಯಸ್ಸೆಂದು ತಿಳಿದು ಸಂತೋಷದಿಂದ ಮತ್ತು ವಿಶ್ವಾಸದಿಂದ ವಿದ್ವಾಂಸರು ಯಾವುದನ್ನು ಶಿಷ್ಯರಿಗೆ ಉಪದೇಶ ಮಾಡುತ್ತಾರೆಯೋ

ಅಂತಹ ಮತ್ತು ಧೀರರಾದವರು ಯಾವುದನ್ನು ಪ್ರವೇಶ ಮಾಡುತ್ತಾರೆಯೋ ಅಂತಹ ಶೋಕರಹಿತವಾದ ಶ್ರೇಷ್ಠವಾದ ಮೋಕ್ಷವನ್ನು ನನಗೆ ಹೇಳು. ಶುದ್ಧಜ್ಞಾನದಲ್ಲಿ ನಿರತರಾದವರು ಮತ್ತು ಭಕ್ತ್ಯಾದಿ ಉಪಾಯಗಳಲ್ಲಿ ನಿರತರಾದವರು ಯಾವ ಪರಮಮೋಕ್ಷವನ್ನು ಪಡೆಯುತ್ತಾರೆಯೋ ಅಂತಹ ಪುರಾತನವಾದ ಮೋಕ್ಷವನ್ನು ನಾನು ತಿಳಿದಿಲ್ಲ.

ಸರಸ್ವತೀ

ತಂ ವೈ ಪರಂ ವೇದವಿದಃ ಪ್ರಪನ್ನಾಃ
ಪರಂ ಪರೇಭ್ಯಃ ಪ್ರಥಿತಂ ಪುರಾಣಮ್ ।
ಸ್ವಾಧ್ಯಾಯವಂತೋ ವ್ರತಪುಣ್ಯಯೋಗೈ-
ಸ್ತಪೋಧನಾ ವೀತಶೋಕಾ ವಿಮುಕ್ತಾಃ ॥೨೨॥

ಸರಸ್ವತೀ– ಸ್ವಾಧ್ಯಾಯವನ್ನು ಮಾಡುವವರು, ವ್ರತಗಳನ್ನು ಮತ್ತು ಪುಣ್ಯವಾದ ಭಕ್ತ್ಯಾದಿ ಉಪಾಯಗಳನ್ನು ಅನುಸರಿಸುವವರು, ತಪೋಧನರಾದವರು, ವೇದಜ್ಞಾನವುಳ್ಳವರು, ಸರ್ವೋತ್ತಮವಾದ ಪ್ರಖ್ಯಾತವಾದ ಪುರಾತನವಾದ ಆ ಮೋಕ್ಷವನ್ನು ಪಡೆದು ಶೋಕರಹಿತರಾಗುತ್ತಾರೆ.

ತಸ್ಯಾಥ ಮಧ್ಯೇ ವೇತಸಃ ಪುಣ್ಯಗಂಧಃ
ಸಹಸ್ರಶಾಖೋ ವಿಪುಲೋ ವಿಭಾತಿ ।
ತಸ್ಯ ಮೂಲಾತ್ಸರಿತಃ ಪ್ರಸ್ರವಂತಿ
ಮಧೂದಕಪ್ರಸ್ರವಣಾಃ ಸುಪುಣ್ಯಾಃ ॥೨೩॥

ಆ ಮೋಕ್ಷದಲ್ಲಿ ಮಧ್ಯಭಾಗದಲ್ಲಿ ಜ್ಞಾನಾನಂದಮಯವಾದ ನದೀಕರ್ದಮ ಸಂಭೂತವಾದ ಸಹಸ್ರ ಶಾಖೆಗಳುಳ್ಳ ಮನೋಹರವಾದ ಗಂಧವುಳ್ಳ ಒಂದು ಲತಾ ವಿಶೇಷವಿದೆ. ಅದರ ಮೂಲದಿಂದ ಪವಿತ್ರವಾದ ಜೇನುತುಪ್ಪ, ನೀರು ಮೊದಲಾದವುಗಳ ನದಿಗಳು ಹರಿಯುತ್ತವೆ.

ಶಾಖಾಂ ಶಾಖಾಂ ಮಹಾನದ್ಯಃ ಸಂಯಾಂತಿ ಪರಿತಃ ಸ್ರವಾಃ ।
ಧಾನಾಪೂಪಾ ಮಾಂಸಕಾಮಾಃ ಸದಾ ಪಾಯಸಕರ್ದಮಾಃ ॥೨೪॥

ಅದರ ಬೇರೆ ಬೇರೆ ಶಾಖೆಗಳಿಂದ ಧಾನ್ಯದ ಅಪೂಪಗಳಿರುವ, ಕಾಮ್ಯವಾದ ಮಾಂಸಗಳಿಂದ ಕೂಡಿದ, ಪಾಯಸದ ಕರ್ದಮದಿಂದ ಕೂಡಿದ ಮಹಾನದಿಗಳು ದಿಕ್ಕುದಿಕ್ಕಿಗೆ ಹರಿಯುತ್ತವೆ.

ಯಸ್ಮಿನ್ನಗ್ನಿಮುಖಾಃ ದೇವಾಃ ಸೇಂದ್ರಾಃ ಸಹಮರುದ್ಗಣಾಃ ।
ಈಜಿರೇ ಕ್ರತುಭಿಃ ಶ್ರೇಷ್ಠೈಸ್ತದಕ್ಷರಮುಪಾಸತೇ ॥೨೫॥

ಅಲ್ಲಿ ಮುಕ್ತರಾದ ಅಗ್ನಿ ಮೊದಲಾದ ದೇವತೆಗಳೂ, ಮರುದ್ಗಣಗಳಿಂದ ಸಹಿತರಾದ ಅನೇಕ ಇಂದ್ರರುಗಳಿಂದ ಕೂಡಿದ ದೇವತೆಗಳೂ ಸಹ ಶ್ರೇಷ್ಠವಾದ ಕರ್ತೃಗಳಿಂದ ಚತುರ್ವಿಧ ನಾಶರಹಿತನಾದ ಹರಿಯನ್ನು ಕುರಿತು ಯಜ್ಞವನ್ನು ಮಾಡಿ ಅವನ ಉಪಾಸನೆಯನ್ನು ಮಾಡುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಾಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ತೊಂದನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ತೆರಡನೆಯ ಅಧ್ಯಾಯ

ಮಾರ್ಕಂಡೇಯರಿಂದ ಯುಧಿಷ್ಠಿರನಿಗೆ ಮತ್ಸ್ಯಾವತಾರ ಚರಿತೆಯ ಕಥನ.

ವೈಶಂಪಾಯನಃ

ತತಃ ಸ ಪಾಂಡವೋ ವಿಪ್ರಂ ಮಾರ್ಕಂಡೇಯಮುವಾಚ ಹ ।
ಕಥಯಸ್ವೇತಿ ಚರಿತಂ ಮನೋರ್ವೈವಸ್ವತಸ್ಯ ಚ ॥೧॥

ವೈಶಂಪಾಯನ– ಅನಂತರ ಆ ಪಾಂಡವನಾದ ಧರ್ಮರಾಜನು ಬ್ರಾಹ್ಮಣರಾದ ಮಾರ್ಕಂಡೇಯನನ್ನು ಕುರಿತು ವೈವಸ್ವತ ಮನುವಿನ ಚರಿತೆಯನ್ನು ಹೇಳಿ ಎಂದು ಕೇಳಿದನು.

ಮಾರ್ಕಂಡೇಯಃ

ವಿವಸ್ವತಃ ಸುತೋ ರಾಜನ್ ಮಹರ್ಷಿಃ ಸುಪ್ರತಾಪವಾನ್ ।
ಬಭೂವ ನರಶಾರ್ದೂಲ ಪ್ರಜಾಪತಿಸಮದ್ಯುತಿಃ ॥೨॥

ಮಾರ್ಕಂಡೇಯ– ಎಲೈ ರಾಜನೇ, ಎಲೈ ನರಶಾರ್ದೂಲನೇ, ವಿವಸ್ವಾನ್ ನಾಮಕ ಸೂರ್ಯನಿಗೆ ಪ್ರತಾಪಶಾಲಿಯಾದ ಪ್ರಜಾಪತಿಗೆ ಸಮನಾದ ಕಾಂತಿಯುಳ್ಳ ಮಹರ್ಷಿಯಾದ ಪುತ್ರನು ಜನಿಸಿದನು.

ಓಜಸಾ ತೇಜಸಾ ಲಕ್ಷ್ಮ್ಯಾ ತಪಸಾ ಚ ವಿಶೇಷತಃ ।
ಅತಿಚಕ್ರಾಮ ಪಿತರಂ ಮನುಃ ಸ್ವಂ ಚ ಪಿತಾಮಹಮ್ ॥೩॥

ಆ ಮನುವು ತನ್ನ ಶಕ್ತಿಯಿಂದಲೂ, ತೇಜಸ್ಸಿನಿಂದಲೂ, ಕಾಂತಿಯಿಂದಲೂ ಮತ್ತು ವಿಶೇಷವಾದ ತಪಸ್ಸಿನಿಂದಲೂ ತನ್ನ ತಂದೆಯಾದ ವಿವಸ್ವಂತನನ್ನು, ತಾತನಾದ ಕಶ್ಯಪರನ್ನು ಮೀರಿದನು.

ಊರ್ಧ್ವಬಾಹುರ್ವಿಶಾಲಾಯಾಂ ಬದರ್ಯಾಂ ಸ ನರಾಧಿಪ ।
ಏಕಪಾದಸ್ಥಿತಸ್ತೀವ್ರಂ ಚಕಾರ ಸುಮಹತ್ತಪಃ ॥೪॥

ಎಲೈ ನರಾಧಿಪನೇ, ಅವನು ವಿಶಾಲಾನಾಮಕವಾದ ಬದರೀಕ್ಷೇತ್ರದಲ್ಲಿ ಒಂದು ಪಾದದ ಮೇಲೆ ನಿಂತು ಊರ್ಧ್ವಬಾಹುವಾಗಿ ತೀವ್ರವಾದ ದೊಡ್ಡ ತಪಸ್ಸನ್ನು ಆಚರಿಸಿದನು.

ಅವಾಕ್ಕಿರಾಸ್ತಥಾ ಚಾಪಿ ನೇತ್ಕೈರನಿಮಿಷೈರ್ದೃಢಮ್ ।
ಸೋಽತಪ್ಯತ ತಪೋ ಘೋರಂ ವರ್ಷಾಣಾಮಯುತಂ ತದಾ ॥೫॥

ತಲೆಕೆಳಗಾಗಿ ನಿಂತು ಕಣ್ಣುರೆಪ್ಪೆಗಳನ್ನು ಮುಚ್ಚದೆ ಹತ್ತುಸಾವಿರ ವರ್ಷಗಳ ಕಾಲ ಸ್ಥಿರವಾಗಿ ಅವನು ಘೋರವಾದ ತಪಸ್ಸನ್ನು ಆಚರಿಸಿದನು.

ತಂ ಕದಾಚಿತ್ ತಪಸ್ಯಂತಮಾರ್ದ್ರಚೀರಜಟಾಧರಮ್ ।
ಚೀರಿಣೀತೀರಮ್ ಆಗಮ್ಯ ಮತ್ಸ್ಯೋ ವಚನಮಬ್ರವೀತ್ ॥೬॥

ಚೀರಿಣೀನದಿಯ ದಡದಲ್ಲಿ ಆರ್ದ್ರವಾದ ನಾರುಮಡಿಯನ್ನು ಉಟ್ಟು ಜಟೆಗಳನ್ನು ಧರಿಸಿ ತಪಸ್ಸು ಮಾಡುವ ಅವನ ಸಮೀಪಕ್ಕೆ ಒಂದು ಕಾಲದಲ್ಲಿ ಒಂದು ಮತ್ಸ್ಯವು ಬಂದು ಹೀಗೆ ಮಾತನಾಡಿತು.

ಭವಾನ್ ಕ್ಷುದ್ರಮತ್ಸ್ಯೋಽಸ್ಮಿ ಬಲವದ್ಭ್ಯೋ ಭಯಂ ಮಮ ।
ಮತ್ಸ್ಯೇಭ್ಯೋ ಹಿ ತತೋ ಮಾಂ ತ್ವಂ ತ್ರಾತುಮರ್ಹಸಿ ಸುವ್ರತ ॥೭॥

ಪೂಜ್ಯನೇ, ನಾನು ಸಣ್ಣ ಮೀನಾಗಿದ್ದೇನೆ. ಬಲಿಷ್ಠವಾದ ಮೀನುಗಳಿಂದ ನನಗೆ ಭಯವಿದೆ. ಎಲೈ ಸುವ್ರತನೇ, ಆದ್ದರಿಂದ ನನ್ನನ್ನು ಬಲಿಷ್ಠ ಮೀನುಗಳಿಂದ ನೀನು ರಕ್ಷಿಸಬೇಕು.

ದುರ್ಬಲಂ ಬಲವಂತೋ ಹಿ ಮತ್ಸ್ಯಾ ಮತ್ಸ್ಯಂ ವಿಶೇಷತಃ ।
ಆಸ್ವದಂತಿ ಸದಾ ವೃತ್ತಿರ್ವಿಹಿತಾ ನಃ ಸನಾತನೀ ॥೮॥

ದುರ್ಬಲವಾದ ಮೀನುಗಳನ್ನು ಪ್ರಬಲವಾದ ಮೀನುಗಳು ವಿಶೇಷವಾಗಿ ಯಾವಾಗಲೂ ತಿನ್ನುತ್ತವೆ. ಇದು ಹಿಂದಿನಿಂದಲೂ ನಡೆದುಬಂದ ಮೀನುಗಳ ಜೀವನ ಪ್ರಕಾರವಾಗಿದೆ.

ತಸ್ಮಾದ್ ಭಯೌಘಾನ್ಮಹತೋ ಮಜ್ಜಂತಂ ಮಾಂ ವಿಶೇಷತಃ ।
ತ್ರಾತುಮರ್ಹಸಿ ಕರ್ತಾಸ್ಮಿ ಕೃತೇ ಪ್ರತಿಕೃತಂ ತವ ॥೯॥

ಆದ್ದರಿಂದ ಈ ದೊಡ್ಡ ಭಯದ ಪ್ರವಾಹದಲ್ಲಿ ವಿಶೇಷವಾಗಿ ಮುಳುಗಿಹೋಗುತ್ತಿರುವ ನನ್ನನ್ನು ನೀನು ರಕ್ಷಿಸಬೇಕು. ನೀನು ಮಾಡಿದ ಉಪಕಾರಕ್ಕೆ ನಾನು ನಿನಗೆ ಪ್ರತ್ಯುಪಕಾರವನ್ನು ಮಾಡುವೆನು (ಎಂದು ಹೇಳಿತು).

ಮಾರ್ಕಂಡೇಯಃ

ಸ ಮತ್ಸ್ಯವಚನಂ ಶ್ರುತ್ವಾ ಕೃಪಯಾಽಭಿಪರಿಪ್ಲುತಃ ।
ಮನುರ್ವೈವಸ್ವತೋಽಗೃಹ್ಣಾತ್ ತಂ ಮತ್ಸ್ಯಂ ಪಾಣಿನಾ ಸ್ವಯಮ್ ॥

ಮಾರ್ಕಂಡೇಯ– ಮೀನಿನ ಮಾತನ್ನು ಕೇಳಿ ಕೃಪೆಯಿಂದ ಕೂಡಿದ ಮನಸ್ಸುಳ್ಳವನಾಗಿ ವೈವಸ್ವತ ಮನುವು ಆ ಮೀನನ್ನು ಕೈಯಿಂದ ಎತ್ತಿಕೊಂಡನು.

ಉದಕಾಂತಮುಪಾನೀಯ ಮತ್ಸ್ಯಂ ವೈವಸ್ವತೋ ಮನುಃ ।
ಅರಂಜಲೇ ಪ್ರಾಕ್ಷಿಪತ್ ತಂ ಚಂದ್ರಾಂಶುಸದೃಶಪ್ರಭೇ(ಭಮ್) ॥೧೧॥

ವೈವಸ್ವತ ಮನುವು ಚಂದ್ರನಂತೆ ಹೊಳೆಯುತ್ತಿದ್ದ ಆ ಮೀನನ್ನು ನೀರಿನ ಅಂಚಿನವರೆಗೆ ತೆಗೆದುಕೊಂಡು ಬಂದು ಒಂದು ಬೋಗುಣಿಯಲ್ಲಿ ಅದನ್ನು ಹಾಕಿದನು.

ಸ ತತ್ರ ವವೃಧೇ ರಾಜನ್ ಮತ್ಸ್ಯಃ ಪರಮಸತ್ಕೃತಃ ।
ಪುತ್ರವತ್ ಸ್ವೀಕರೋತ್ ತಸ್ಮೈ ಮನುರ್ಭಾವಂ ವಿಶೇಷತಃ ॥೧೨॥

ಎಲೈ ರಾಜನೇ, ಮನುವಿನಿಂದ ಚೆನ್ನಾಗಿ ನೋಡಿಕೊಳ್ಳಲ್ಪಟ್ಟ ಆ ಮೀನು ಅಲ್ಲಿ ಬೆಳೆಯಿತು. ಮನುವಾದರೂ ಆ ಮತ್ಸ್ಯವನ್ನು ತನ್ನ ಮಗನಂತೆ ಪ್ರೀತಿಸಿದನು.

ಅಥ ಕಾಲೇನ ಮಹತಾ ಸ ಮತ್ಸ್ಯಃ ಸುಮಹಾನಭೂತ್ ।
ಅರಂಜಲೇ ಯಥಾ ಚೈವ ನಾಸೌ ಸಮಭವತ್ ಕಿಲ ।
ಅಥ ಮತ್ಸ್ಯೋ ಮನುಂ ದೃಷ್ಟ್ವಾ ಪುನರೇವಾಭ್ಯಭಾಷತ ॥೧೩॥

ಭಗವನ್ ಸಾಧು ಮೇಽದ್ಯಾನ್ಯತ್ ಸ್ಥಾನಂ ಸಂಪ್ರತಿಪಾದಯ ॥೧೪॥

ಎಷ್ಟೋ ಕಾಲವು ಕಳೆಯುವ ವೇಳೆಗೆ ಆ ಮತ್ಸ್ಯವು ಬಹಳ ದೊಡ್ಡದಾಯಿತು. ಅದು ಆ ಬೋಗುಣಿಯಲ್ಲಿ ಹಿಡಿಸಲಿಲ್ಲವಷ್ಟೆ? ಆಗ ಅದು ಮನುವನ್ನು ಕುರಿತು ಪುನಃ ಪೂಜ್ಯನೇ, ನನ್ನನ್ನು ಇನ್ನೊಂದು ಸ್ಥಾನಕ್ಕೆ ಈ ದಿನ ಕರೆದುಕೊಂಡು ಹೋಗು ಎಂದು ಹೇಳಿತು.

ಉದ್ಧೃತ್ಯಾರಂಜಲಾತ್ ತಸ್ಮಾತ್ ತತಃ ಸ ಭಗವಾನ್ ಮನುಃ ।
ತಂ ಮತ್ಸ್ಯಮನಯದ್ವಾಪೀಂ ಮಹತೀಂ ಸ ಮನುಸ್ತದಾ ॥೧೫॥

ಪೂಜ್ಯನಾದ ಮನುವು ಆ ಮೀನನ್ನು ಬೋಗುಣಿಯಿಂದ ಎತ್ತಿ ಒಂದು ದೊಡ್ಡ ಬಾವಿಗೆ ತೆಗೆದುಕೊಂಡು ಹೋದನು.

ತತ್ರ ತಂ ಪ್ರಾಕ್ಷಿಪಚ್ಚಾಪಿ ಮನುಃ ಪರಪುರಂಜಯ ।
ಅಥಾವರ್ಧತ ಮತ್ಸ್ಯಃ ಸ ಪುನರ್ವರ್ಷಗಣಾನ್ ಬಹೂನ್ ॥೧೬॥

ಎಲೈ ಪರಪುಂಜಯನೇ, ಆ ಬಾವಿಯಲ್ಲಿ ಮನುವು ಆ ಮೀನನ್ನು ಇಟ್ಟನು. ಆ ಮತ್ಸ್ಯವಾದರೂ ಅಲ್ಲಿ ಪುನಃ ಅನೇಕ ವರ್ಷಗಳ ಕಾಲ ಬೆಳೆಯಿತು.

ದ್ವಿಯೋಜನಾಯತಾ ವಾಪೀ ವಿಸ್ತೃತಾ ಚಾಪಿ ಯೋಜನಮ್ ।
ತಸ್ಯಾಂ ನಾಸೌ ಸಮಭವನ್ಮತ್ಸ್ಯೋ ರಾಜೀವಲೋಚನ ॥೧೭॥

ಎಲೈ ರಾಜೀವಲೋಚನನೇ, ಎರಡು ಯೋಜನ ಉದ್ದ ಮತ್ತು ಒಂದು ಯೋಜನ ಅಗಲವಾದ ಆ ಬಾವಿಯಲ್ಲಿ ಆ ಮೀನಿಗೆ ಸ್ಥಳವು ಸಾಕಾಗಲಿಲ್ಲ.

ವಿಚೇಷ್ಟಿತುಂ ಚ ಕೌಂತೇಯ ಮತ್ಸ್ಯೋ ವಾಪ್ಯಾಂ ವಿಶಾಂಪತೇ ।
ಮನುಂ ಮತ್ಸ್ಯಸ್ತತೋ ದೃಷ್ಟ್ವಾ ಪುನರೇವಾಭ್ಯಭಾಷತ ॥೧೮॥

ನಯ ಮಾಂ ಭಗವನ್ ಸಾಧೋ ಸಮುದ್ರಮಹಿಷೀಂ ಪ್ರಿಯಾಮ್ ।
ಗಂಗಾಂ ತತ್ರ ನಿವತ್ಸ್ಯಾಮಿ ಯಥಾ ವಾ ತಾತ ಮನ್ಯಸೇ ॥೧೯॥

ಎಲೈ ರಾಜನೇ, ಕೌಂತೇಯನೇ, ಆ ಬಾವಿಯಲ್ಲಿ ಮತ್ಸ್ಯವು ಅಲುಗಾಡಲೂ ಸಾಧ್ಯವಾಗಲಿಲ್ಲ. ಆಗ ಅದು ಪುನಃ ಮನುವನ್ನು ನೋಡಿ ಪೂಜ್ಯನಾದ ಸಜ್ಜನನೇ, ನನ್ನನ್ನು ಸಮುದ್ರರಾಜನಾದ ವರುಣನ ಪ್ರಿಯಪತ್ನಿಯಾದ ಗಂಗೆಗೆ ಕರೆದುಕೊಂಡು ಹೋಗು. ಅಲ್ಲಿ ನಾನು ವಾಸವನ್ನು ಮಾಡುವೆನು. ಅಥವಾ ನಿನ್ನ ಅಭಿಪ್ರಾಯವೇನು ಎಂದು ಹೇಳಿತು.

ಏವಮುಕ್ತೋ ಮನುರ್ಮತ್ಸ್ಯಮನಯದ್ಭಗವಾನ್ ವಶೀ ।
ಸಮುದ್ರಮಹಿಷೀಂ ಗಂಗಾಂ ಸ್ವಯಂ ಪ್ರಾಕ್ಷಿಪದೇವ ಚ ॥೨೦॥

ಹೀಗೆ ಹೇಳಲ್ಪಟ್ಟ ಸಮರ್ಥನಾದ ಮನುವು ಆ ಮತ್ಸ್ಯವನ್ನು ತಾನೇ ತೆಗೆದುಕೊಂಡು ಹೋಗಿ ಸಮುದ್ರಮಹಿಷಿಯಾದ ಗಂಗೆಯಲ್ಲಿ ಬಿಟ್ಟನು.

ಸ ತತ್ರ ವವೃಧೇ ಮತ್ಸ್ಯಃ ಕಿಂಚಿತ್‌ಕಾಲಮರಿಂದಮ ।
ತತಃ ಪುನರ್ಮನುಂ ದೃಷ್ಟ್ವಾ ಮತ್ಸ್ಯೋ ವಚನಮಬ್ರವೀತ್ ॥೨೧॥

ಗಂಗಾಯಾಂ ಹಿ ನ ಶಕ್ನೋಮಿ ಬೃಹತ್ತ್ವಾಚ್ಚೇಷ್ಟಿತುಂ ಪ್ರಭೋ ।
ಸಮುದ್ರಂ ನಯ ಮಾಮಾಶು ಪ್ರಸೀದ ಭಗವನ್ನಿತಿ ॥೨೨॥

ಎಲೈ ಅರಿಂದಮನೇ, ಅಲ್ಲಿ ಅದು ಸ್ವಲ್ಪಕಾಲ ಬೆಳೆಯಿತು. ಅನಂತರ ಮನುವನ್ನು ನೋಡಿ ಪುನಃ ಆ ಮತ್ಸ್ಯವು ಪ್ರಭುವೇ, ನಾನು ದೊಡ್ಡದಾಗಿ ಬೆಳೆದಿರುವುದರಿಂದ ಗಂಗೆಯಲ್ಲಿ ಅಲುಗಾಡಲೂ ಸಾಧ್ಯವಾಗುತ್ತಿಲ್ಲ. ಪೂಜ್ಯನೇ, ನನಗೆ ಅನುಗ್ರಹವನ್ನು ಮಾಡು. ನನ್ನನ್ನು ಶೀಘ್ರವಾಗಿ ಸಮುದ್ರಕ್ಕೆ ಕರೆದುಕೊಂಡು ಹೋಗು ಎಂದು ಹೇಳಿತು.

ಉದ್ಧೃತ್ಯ ಗಂಗಾಸಲಿಲಾತ್ ತತೋ ಮತ್ಸ್ಯಂ ಮನುಃ ಸ್ವಯಮ್ ।
ಸಮುದ್ರಮನಯತ್ ಪಾರ್ಥ ತತ್ರ ಚೈನಮವಾಸೃಜತ್ ॥೨೩॥

ಎಲೈ ಪಾರ್ಥನೇ, ಮನುವು ತಾನೇ ಸ್ವತಃ ಆ ಮತ್ಸ್ಯವನ್ನು ಗಂಗೆಯಿಂದ ಎತ್ತಿಕೊಂಡು ಸಮುದ್ರಕ್ಕೆ ತೆಗೆದುಕೊಂಡು ಹೋಗಿ ಅಲ್ಲಿ ಅದನ್ನು ಬಿಟ್ಟನು.

ಸುಮಹಾನಪಿ ಮತ್ಸ್ಯಸ್ತು ಸ ಮನೋರ್ನಯತಸ್ತದಾ ।
ಆಸೀದ್ಯಥೇಷ್ಟಹಾರ್ಯಶ್ಚ ಸ್ಪರ್ಶಗಂಧಸುಖಶ್ಚ ವೈ ॥೨೪॥

ಮತ್ತೆ ಮತ್ತೆ ದೊಡ್ಡದಾಗಿ ಬೆಳೆದಿದ್ದರೂ ಮನುವು ಅದನ್ನು ತೆಗೆದುಕೊಂಡು ಹೋಗುವಾಗ ಅದು ಅನಾಯಾಸವಾಗಿ ತೆಗೆದುಕೊಂಡು ಹೋಗುವಂತೆ ಹಗುರವೂ ಮತ್ತು ಸುಖಸ್ಪರ್ಶ ಮತ್ತು ಗಂಧವುಳ್ಳದ್ದೂ ಆಯಿತಷ್ಟೆ?

ಯದಾ ಸಮುದ್ರೇ ಪ್ರಕ್ಷಿಪ್ತಃ ಸ ಮತ್ಸ್ಯೋ ಮನುನಾ ತದಾ ।
ತತ ಏನಮಿದಂ ವಾಕ್ಯಂ ಸ್ಮಯಮಾನ ಇವಾಬ್ರವೀತ್ ॥೨೫॥

ಯಾವಾಗ ಸ್ವಾಯಂಭುವ ಮನುವು ಆ ಮತ್ಸ್ಯವನ್ನು ಸಮುದ್ರದಲ್ಲಿ ಹಾಕಿದನೋ ಆಗ ಅದು ನಗುತ್ತಾ ಅವನನ್ನು ಕುರಿತು ಮಾತನಾಡಿತು.

ಭಗವನ್ ಹಿ ಕೃತಾ ರಕ್ಷಾ ತ್ವಯಾ ಸರ್ವಾ ವಿಶೇಷತಃ ।
ಪ್ರಾಪ್ತಕಾಲಂ ತು ಯತ್ಕಾರ್ಯಂ ತ್ವಯಾ ತಚ್ಛ್ರೂಯತಾಂ ಮಮ ॥೨೬॥

ಪೂಜ್ಯನೇ, ನೀನು ಎಲ್ಲಾ ರೀತಿಯಿಂದಲೂ ವಿಶೇಷವಾಗಿ ನನ್ನ ರಕ್ಷಣೆಯನ್ನು ಮಾಡಿದ್ದೀಯೆ. ಈಗ ಸದ್ಯದಲ್ಲಿ ನೀನು ಮಾಡಬೇಕಾದ ಕಾರ್ಯವನ್ನು ಹೇಳುತ್ತೇನೆ. ಅದನ್ನು ನನ್ನಿಂದ ಕೇಳು.

ಅಚಿರಾದ್ ಭಗವನ್ ಭೌಮಮಿದಂ ಸ್ಥಾವರಜಂಗಮಮ್ ।
ಸರ್ವಮೇವ ಮಹಾಭಾಗ ಪ್ರಲಯಂ ವೈ ಗಮಿಷ್ಯತಿ ॥೨೭॥

ಎಲೈ ಪೂಜ್ಯನೇ, ಮಹಾಭಾಗನೇ, ಶೀಘ್ರದಲ್ಲಿಯೇ ಭೂಮಿಯಲ್ಲಿರುವ ಸ್ಥಾವರ ಜಂಗಮಾತ್ಮಕವಾದುದೆಲ್ಲವೂ ನಿಶ್ಚಿತವಾಗಿ ಪ್ರಳಯವನ್ನು ಹೊಂದುವುದು.

ಸಂಪ್ರಕ್ಷಾಲನಕಾಲೋಽಯಂ ಲೋಕಾನಾಂ ಸಮುಪಸ್ಥಿತಃ ।
ತಸ್ಮಾತ್ ತ್ವಾಂ ಬೋಧಯಾಮ್ಯದ್ಯ ಯತ್ತೇ ಹಿತಮನುತ್ತಮಮ್ ॥೨೮॥

ಮೂರುಲೋಕಗಳನ್ನೂ ನೀರಿನಿಂದ ತುಂಬುವ ಕಾಲವು ಈಗ ಸನ್ನಿಹಿತವಾಗಿದೆ. ಆದ್ದರಿಂದ ನಿನ್ನ ಶ್ರೇಷ್ಠವಾದ ಹಿತವನ್ನು ನಾನು ಈ ದಿನ ತಿಳಿಸುತ್ತಿದ್ದೇನೆ.

ಚರಾಣಾಂ ಸ್ಥಾವರಾಣಾಂ ಚ ಯಚ್ಚೇಂಗಂ ಯಚ್ಚ ನೇಂಗತಿ ।
ತಸ್ಯ ಸರ್ವಸ್ಯ ಸಂಪ್ರಾಪ್ತಃ ಕಾಲಃ ಪರಮದಾರುಣಃ ॥೨೯॥

ಚಲಿಸುವ ಮತ್ತು ಚಲಿಸದಿರುವ ಎಲ್ಲಾ ಚರಾಚರಗಳಿಗೆ ಪರಮದಾರುಣವಾದ ಕಾಲವು ಈಗ ಸಂಪ್ರಾಪ್ತವಾಗಿದೆ.

ನೌಶ್ಚ ಕಾರಯಿತವ್ಯಾ ತೇ ದೃಢಾ ಯುಕ್ತವಟಾಂಕುರಾ ।
ತತ್ರ ಸಪ್ತರ್ಷಿಭಿಃ ಸಾರ್ಧಮಾರುಹೇಥಾ ಮಹಾಮುನೇ ॥೩೦॥

ನೀನು ಆಲದ ಬಿಳಿಲಿನಿಂದ ಕೂಡಿದ ಒಂದು ದೃಢವಾದ ದೋಣಿಯನ್ನು ಮಾಡಿಸಬೇಕು. ಎಲೈ ಮಹರ್ಷಿಯೇ, ನೀನು ಸಪ್ತರ್ಷಿಗಳ ಜೊತೆಯಲ್ಲಿ ಆ ದೋಣಿಯನ್ನು ಹತ್ತಿಕುಳಿತುಕೊಳ್ಳಬೇಕು.

ಬೀಜಾನಿ ಚೈವ ಸರ್ವಾಣಿ ಯಥೋಕ್ತಾನಿ ದ್ವಿಜೈಃ ಪುರಾ ।
ತಸ್ಯಾಮಾರೋಹಯೇರ್ನಾವಿ ಸುಸಂಗುಪ್ತಾನಿ ಭಾಗಶಃ ॥೩೧॥

ಹಿಂದೆ ಬ್ರಾಹ್ಮಣರು ಹೇಳಿದಂತೆ ಎಲ್ಲಾ ಬೀಜಗಳನ್ನೂ ಆ ದೋಣಿಯಲ್ಲಿ (ಹಡಗಿನಲ್ಲಿ) ಒಂದು ಭಾಗದಲ್ಲಿ ಚೆನ್ನಾಗಿ ರಕ್ಷಣೆ ಮಾಡಿ ತುಂಬಿಸಬೇಕು.

ನೌಸ್ಥಶ್ಚ ಮಾಂ ಪ್ರತೀಕ್ಷೇಥಾಸ್ತತೋ ಮುನಿಜನಪ್ರಿಯ ।
ಆಗಮಿಷ್ಯಾಮ್ಯಹಂ ಶೃಂಗೀ ವಿಜ್ಞೇಯಸ್ತೇನ ತಾಪಸ ॥೩೨॥

ಎಲೈ ಮುನಿಜನಪ್ರಿಯನೇ, ನೌಕೆಯಲ್ಲಿ ಕುಳಿತು ನೀನು ನನ್ನನ್ನು ನಿರೀಕ್ಷಿಸಬೇಕು. ಎಲೈ ತಾಪಸನೇ, ನಾನು ಒಂದು ಶೃಂಗವುಳ್ಳ ಮತ್ಸ್ಯನಾಗಿ ಬರುವೆನು. ಆದರಿಂದ ನೀನು ನನ್ನನ್ನು ತಿಳಿಯಬೇಕು.

ಏವಮೇತತ್ ತ್ವಯಾ ಕಾರ್ಯಂ ಆಪೃಚ್ಛ್ಯಾಸ್ಮಿನ್ ವ್ರಜಾಮ್ಯಹಮ್ ।
ತಾ ನ ಶಕ್ಯಾ ಮಹತ್ಯೋ ವೈ ಆಪಸ್ತರ್ತುಂ ಮಯಾ ವಿನಾ ।
ನಾತಿಶಂಕ್ಯಮಿದಂ ಚಾಪಿ ವಚನಂ ಮೇ ತ್ವಯಾ ವಿಭೋ ॥೩೩॥

ನೀನು ಹೀಗೆ ಮಾಡಬೇಕು. ನೀನು ಆ ದೋಣಿಯಲ್ಲಿ ಕುಳಿತು ನನ್ನನ್ನು ಪ್ರಶ್ನೆ ಮಾಡಬೇಕು. ಈಗ ನಾನು ಹೋಗುತ್ತೇನೆ. ನೀನು ನನ್ನ ಸಹಾಯವಿಲ್ಲದೆ ಆ ದೊಡ್ಡ ಜಲರಾಶಿಯಿಂದ ಪಾರಾಗಲು ಸಾಧ್ಯವಿಲ್ಲ. ಎಲೈ ವಿಭುವೇ, ಈ ನನ್ನ ವಚನಗಳಲ್ಲಿ ನೀನು ಯಾವ ಶಂಕೆಯನ್ನೂ ಮಾಡಬಾರದು.

ಏವಂ ಕರಿಷ್ಯ ಇತಿ ತಂ ಸ ಮತ್ಸ್ಯಂ ಪ್ರತ್ಯಭಾಷತ ।
ಜಗ್ಮತುಶ್ಚ ಯಥಾಕಾಮಮನುಜ್ಞಾಪ್ಯ ಪರಸ್ಪರಮ್ ॥೩೪॥

ಹಾಗೆಯೇ ಮಾಡುವೆನು ಎಂದು ಮನುವು ಆ ಮತ್ಸ್ಯವನ್ನು ಕುರಿತು ಹೇಳಿದನು. ಅನಂತರ ಪರಸ್ಪರ ಅನುಮತಿಯನ್ನು ಪಡೆದು ಇಬ್ಬರೂ ತಮ್ಮ ತಮ್ಮ ದಾರಿಯಲ್ಲಿ ಹೊರಟರು.

ತತೋ ಮನುರ್ಮಹಾರಾಜ ಯಥೋಕ್ತಂ ಮತ್ಸ್ಯಕೇನ ಹ ।
ಬೀಜಾನ್ಯಾದಾಯ ಸರ್ವಾಣಿ ಸಾಗರಂ ಪುಪ್ಲುವೇ ತದಾ ।
ನೌಕಯಾ ಶುಭಯಾ ವೀರ ಮಹೋರ್ಮಿಣಮರಿಂದಮ ॥೩೫॥

ಚಿಂತಯಾಮಾಸ ಚ ಮನುಸ್ತಂ ಮತ್ಸ್ಯಂ ಪೃಥಿವೀಪತೇ ॥೩೬॥

ಎಲೈ ಮಹಾರಾಜನೇ, ಅನಂತರ ಮನುವು ಆ ಮತ್ಸ್ಯವು ಹೇಳಿದಂತೆ ಎಲ್ಲಾ ಬೀಜಗಳನ್ನೂ ತೆಗೆದುಕೊಂಡು ಒಂದು ನೌಕೆಯನ್ನು ಸಿದ್ಧಪಡಿಸಿ ಅದರಲ್ಲಿ ಇಟ್ಟು ದೊಡ್ಡ ಅಲೆಗಳಿರುವ ಸಾಗರದಲ್ಲಿ ಸಂಚರಿಸಿದನು. ಎಲೈ ಅರಿಂದಮನೇ, ಎಲೈ ಪೃಥಿವೀ ಪತಿಯೇ, ಮನುವು ಆಗ ಆ ಮತ್ಸ್ಯವನ್ನು ಕುರಿತು ಚಿಂತಿಸಿದನು.

ಸ ಚ ತಚ್ಚಿಂತಿತಂ ಜ್ಞಾತ್ವಾ ಮತ್ಸ್ಯಃ ಪರಪುರಂಜಯ ।
ಶೃಂಗೀ ತತ್ರಾಜಗಾಮಾಶು ತದಾ ಭರತಸತ್ತಮ ॥೩೭॥

ಎಲೈ ಪರಪುರಂಜಯನೇ, ಭರತಸತ್ತಮನೇ, ಆ ಮತ್ಸ್ಯವಾದರೂ ಮನುವು ತನ್ನನ್ನು ಚಿಂತಿಸುತ್ತಿರುವುದನ್ನು ತಿಳಿದು ಒಂದು ಶೃಂಗವನ್ನು ಧರಿಸಿ ಶೀಘ್ರವಾಗಿ ಅಲ್ಲಿಗೆ ಬಂದಿತು.

ತಂ ದೃಷ್ಟ್ವಾ ಮನುಜವ್ಯಾಘ್ರ ಮನುರ್ಮತ್ಸ್ಯಂ ಜಲಾರ್ಣವೇ ।
ಶೃಂಗಿಣಂ ತಂ ಯಥೋಕ್ತೇನ ರೂಪೇಣಾದ್ರಿಮಿವೋಚ್ಛ್ರಿತಮ್ ॥೩೮॥

ವಟಾರಕಮಯಂ ಪಾಶಮಥ ಮತ್ಸ್ಯಸ್ಯ ಮೂರ್ಧನಿ ।
ಮನುರ್ಮನುಜಶಾರ್ದೂಲ ತಸ್ಮಿನ್ ಶೃಂಗೇ ನ್ಯವೇಶಯತ್ ॥೩೯॥

ಎಲೈ ಮನುಜ ಶಾರ್ದೂಲನೇ, ಮನುವು ಆ ಜಲಸಾಗರದಲ್ಲಿ ಹಾಗೆ ಮೊದಲು ಹೇಳಿದಂತೆ ಶೃಂಗವನ್ನು ಧರಿಸಿ ಬಂದ ಪರ್ವತದಂತೆ ಉನ್ನತವಾಗಿದ್ದ ಆ ಮತ್ಸ್ಯವನ್ನು ನೋಡಿ ಆಲದ ಮರದ ಬಿಳಿಲುಗಳಿಂದ ಮಾಡಿದ ಪಾಶವನ್ನು ಅದರ ತಲೆಯ ಮೇಲಿದ್ದ ಶೃಂಗದಲ್ಲಿ ಕಟ್ಟಿದನು.

ಸಂಯತಸ್ತೇನ ಪಾಶೇನ ಮತ್ಸ್ಯಃ ಪರಪುರಂಜಯ ।
ವೇಗೇನ ಮಹತಾ ನಾವಂ ಪ್ರಾಕರ್ಷಲ್ಲವಣಾಂಭಸಿ ॥೪೦॥

ಎಲೈ ಪರಪುರಂಜಯನೇ, ಆ ಪಾಶದಿಂದ ನಿಯಂತ್ರಿಸಲ್ಪಟ್ಟ ಆ ಮತ್ಸ್ಯವು ಲವಣೋದಕದ ಆ ಸಮುದ್ರದಲ್ಲಿ ಬಹಳ ವೇಗದಿಂದ ಆ ನೌಕೆಯನ್ನು ಎಳೆದಿತು.

ಸ ಚ ತಾಂಸ್ತಾರಯನ್ ನಾವಾ ಸಮುದ್ರಂ ಮನುಜೇಶ್ವರ ।
ನೃತ್ಯಮಾನಮಿವೋರ್ಮೀಭಿರ್ಗರ್ಜಮಾನಮಿವಾಂಭಸಾ ॥೪೧॥

ಕ್ಷೋಭ್ಯಮಾಣಾ ಮಹಾವಾತೈಃ ಸಾ ನೌಸ್ತಸ್ಮಿನ್ ಮಹೋದಧೌ ।
ಘೂರ್ಣತೇ ಚಪಲೇವ ಸ್ತ್ರೀ ಮತ್ತಾ ಪರಪುರಂಜಯ ॥೪೨॥

ಎಲೈ ಮನುಜೇಶ್ವರನೇ, ಪರಪುರಂಜಯನೇ, ಅದು ಅವರನ್ನು ಅಲೆಗಳಿಂದ ನೃತ್ಯಮಾಡುತ್ತಿದ್ದ ನೀರಿನ ಗರ್ಜನೆಯಿಂದ ಕೂಡಿದ್ದ ಆ ಸಮುದ್ರವನ್ನು ದಾಟಿಸುವಾಗ ಆ ನೌಕೆಯು ಚಂಡಮಾರುತಗಳಿಂದ ಕ್ಷೋಭೆಗೆ ಒಳಗಾಗಿ ಆ ಸಮುದ್ರದಲ್ಲಿ ಚಂಚಲವಾದ ಮತ್ತಳಾದ ವನಿತೆಯಂತೆ ಓಲಾಡಿತು.

ನೈವ ಭೂಮಿರ್ನ ಚ ದಿಶಃ ಪ್ರದಿಶೋ ವಾ ಚಕಾಶಿರೇ ।
ಸರ್ವಮಾಂಭಸಮೇವಾಸೀತ್ ಖಂ ದ್ಯೌಶ್ಚ ನರಪುಂಗವ ॥೪೩॥

ಎಲೈ ನರಪುಂಗವನೇ, ಆಗ ಭೂಮಿಯಾಗಲೀ ದಿಕ್ಕುಗಳಾಗಲೀ ಅಥವಾ ವಿದಿಕ್ಕುಗಳಾಗಲೀ ಕಾಣುತ್ತಿರಲಿಲ್ಲ. ಅಂತರಿಕ್ಷ ಆಕಾಶ ಎಲ್ಲವೂ ಜಲಮಯವಾಗಿದ್ದಿತು.

ಏವಂಭೂತೇ ತದಾ ಲೋಕೇ ಸಂಕುಲೇ ಭರತರ್ಷಭ ।
ಅದೃಶ್ಯಂತರ್ಷಯಃ ಸಪ್ತ ಮನುರ್ಮತ್ಸ್ಯಸ್ತಥೈವ ಚ ॥೪೪॥

ಎಲೈ ಭರತರ್ಷಭನೇ, ಆಗ ಹೀಗೆ ಲೋಕವು ಕ್ಷೋಭೆಗೊಂಡಿರಲು ಸಪ್ತರ್ಷಿಗಳು, ಮನು ಮತ್ತು ಆ ಮತ್ಸ್ಯವು ಮಾತ್ರ ಕಾಣುತ್ತಿದ್ದರು.

ಏವಂ ಬಹೂನ್ ವರ್ಷಗಣಾಂಸ್ತಾಂ ನಾವಂ ಸೋಽಥ ಮತ್ಸ್ಯಕಃ ।
ಚಕರ್ಷ ತಂತ್ರಿತೋ ರಾಜಂಸ್ತಸ್ಮಿನ್ ಸಲಿಲಸಂಚಯೇ ॥೪೫॥

ಎಲೈ ರಾಜನೇ, ಹೀಗೆ ಆ ಮತ್ಸ್ಯವು ಅನೇಕ ವರ್ಷಗಳ ಕಾಲ ಆ ನೌಕೆಯಿಂದ ನಿಯಂತ್ರಿತವಾಗಿ ಆ ಜಲರಾಶಿಯಲ್ಲಿ ಆ ನೌಕೆಯನ್ನು ಎಳೆದಾಡಿತು.

ತತೋ ಹಿಮವತಃ ಶೃಂಗಂ ಯತ್ಪರಂ ಭರತರ್ಷಭ ।
ತತ್ಕಾರ್ಷತ್ ತತೋ ನಾವಂ ಸ ಮತ್ಸ್ಯಃ ಕುರುನಂದನ ।
ಅಥಾಬ್ರವೀತ್ ತದಾ ಮತ್ಸ್ಯಸ್ತಾನೃಷೀನ್ ಪ್ರಹಸನ್ ಶನೈಃ ॥೪೬॥

ಅಸ್ಮಿನ್ ಹಿಮವತಃ ಶೃಂಗೇ ನಾವಂ ಬಧ್ನೀತ ಮಾಚಿರಮ್ ॥೪೭॥

ಎಲೈ ಭರತರ್ಷಭನೇ, ಕುರುನಂದನನೇ, ಅನಂತರ ಆ ಮತ್ಸ್ಯವು ಆ ನೌಕೆಯನ್ನು ಹಿಮಾಲಯದ ಎತ್ತರವಾದ ಶೃಂಗದ ಬಳಿಗೆ ಎಳೆದುಕೊಂಡು ಹೋಯಿತು. ಮತ್ತು ನಿಧಾನವಾಗಿ ನಗುತ್ತಾ ಆ ಋಷಿಗಳನ್ನು ಕುರಿತು ಈ ಹಿಮಾಲಯದ ಶಿಖರದಲ್ಲಿ ಈ ನೌಕೆಯನ್ನು ಶೀಘ್ರವಾಗಿ ಬಂಧಿಸಿ ಎಂದು ಹೇಳಿತು.

ಸಾ ಬದ್ಧಾ ತತ್ರ ತೈಸ್ತೂರ್ಣಮೃಷಿಭಿರ್ಭರತರ್ಷಭ ।
ನೌರ್ಮತ್ಸ್ಯಸ್ಯ ವಚಃ ಶ್ರುತ್ವಾ ಶೃಂಗೇ ಹಿಮವತಸ್ತದಾ ॥೪೮॥

ಎಲೈ ಭರತರ್ಷಭನೇ, ಮತ್ಸ್ಯದ ಮಾತನ್ನು ಕೇಳಿ ಆ ಋಷಿಗಳು ಆ ನೌಕೆಯನ್ನು ಹಿಮಾಲಯದ ಶೃಂಗದಲ್ಲಿ ಕಟ್ಟಿದರು.

ತಚ್ಚ ನೌಬಂಧನಂ ನಾಮ ಶೃಂಗಂ ಹಿಮವತಃ ಪರಮ್ ।
ಖ್ಯಾತಮದ್ಯಾಪಿ ಕೌಂತೇಯ ತದ್ ವಿದ್ಧಿ ಭರತರ್ಷಭ ।
ಅಥಾಬ್ರವೀದನಿಮಿಷಸ್ತಾನೃಷೀನ್ ಸಹಿತಸ್ತದಾ ॥೪೯॥

ಎಲೈ ಕೌಂತೇಯನಾದ ಭರತರ್ಷಭನೇ, ಆ ಹಿಮಾಲಯದ ಶಿಖರವು ನೌಕಾ ಬಂಧನ ಎಂಬ ಹೆಸರಿನಿಂದ ಇಂದಿಗೂ ಪ್ರಖ್ಯಾತವಾಗಿದೆ. ಅನಂತರ ಆ ಮತ್ಸ್ಯವು ಆ ಋಷಿಗಳನ್ನು ಕುರಿತು ಹೀಗೆ ಮಾತನಾಡಿತು.

ಅಹಂ ಪ್ರಜಾಪತಿರ್ಬ್ರಹ್ಮಾ ಮತ್ಪರಂ ನಾಧಿಗಮ್ಯತೇ ।
ಮತ್ಸ್ಯರೂಪೇಣ ಯೂಯಂ ಚ ಮಯಾऽಸ್ಮಾನ್ಮೋಕ್ಷಿತಾ ಭಯಾತ್ ॥

ನಾನು ಪ್ರಜಾಪತಿ. ನಾನೇ ಬ್ರಹ್ಮ. ನನಗಿಂತ ಉತ್ತಮವಾದುದು ಎಲ್ಲಿಯೂ ದೊರೆಯುವುದಿಲ್ಲ. ನಾನು ಮತ್ಸ್ಯರೂಪವನ್ನು ಧರಿಸಿ ನಿಮ್ಮನ್ನು ಭಯದಿಂದ ಪಾರುಮಾಡಿದೆ.

ಮನುನಾ ಚ ಪ್ರಜಾಃ ಸರ್ವಾಃ ಸದೇವಾಸುರಮಾನುಷಾಃ ।
ಸ್ರಷ್ಟವ್ಯಾಃ ಸರ್ವಲೋಕಾಶ್ಚ ಯಚ್ಚೇಂಗಂ ಯಚ್ಚ ನೇಂಗತಿ ॥೫೧॥

ಮನುವಿನಿಂದ ದೇವಾಸುರ ಮನುಷ್ಯರೂ, ಎಲ್ಲಾ ಪ್ರಜೆಗಳೂ ಚಲಿಸುವ ಮತ್ತು ಚಲಿಸದಿರುವ ಎಲ್ಲಾ ವಸ್ತುಗಳೂ ಮತ್ತು ಸರ್ವಲೋಕಗಳೂ ಸೃಷ್ಟಿಸಲ್ಪಡಬೇಕಾಗಿವೆ.

ತಪಸಾ ಚಾಪಿ ತೀವ್ರೇಣ ಪ್ರತಿಭಾऽಸ್ಯ ಭವಿಷ್ಯತಿ ।
ಮತ್ಪ್ರಸಾದಾತ್ ಪ್ರಜಾಸರ್ಗೇ ನ ಚ ಮೋಹಂ ಗಮಿಷ್ಯತಿ ॥೫೨॥

ತೀವ್ರವಾದ ತಪಸ್ಸಿನಿಂದ ಅವನಿಗೆ ಅದಕ್ಕೆ ಬೇಕಾದ ಪ್ರತಿಭೆಯು ಉಂಟಾಗುವುದು. ನನ್ನ ಅನುಗ್ರಹದಿಂದ ಅವನಿಗೆ ಪ್ರಜೆಗಳನ್ನು ಸೃಷ್ಟಿಸುವ ವಿಷಯದಲ್ಲಿ ಮೋಹ ಉಂಟಾಗುವುದಿಲ್ಲ (ಎಂದು ಹೇಳಿತು).

ಮಾರ್ಕಂಡೇಯಃ

ಇತ್ಯುಕ್ತ್ವಾ ವಚನಂ ಮತ್ಸ್ಯಃ ಕ್ಷಣೇನಾದರ್ಶನಂ ಗತಃ ॥೫೩॥

ಸ್ರಷ್ಟುಕಾಮಃ ಪ್ರಜಾಶ್ಚಾಪಿ ಮನುರ್ವೈವಸ್ವತಃ ಸ್ವಯಮ್ ।
ಪ್ರಮೂಢೋऽಭೂತ್ ಪ್ರಜಾಸರ್ಗೇ ತಪಸ್ತೇಪೇ ಮಹತ್ತತಃ ॥೫೪॥

ಮಾರ್ಕಂಡೇಯ– ಹೀಗೆ ಹೇಳಿ ಆ ಮತ್ಸ್ಯವು ಒಂದು ಕ್ಷಣದಲ್ಲಿ ಅದೃಶ್ಯವಾಯಿತು. ಪ್ರಜೆಗಳನ್ನು ಸೃಷ್ಟಿಸಲು ಬಯಸಿದ ವೈವಸ್ವತ ಮನುವೂ ಸಹ ಪ್ರಜಾ ಸೃಷ್ಟಿಯ ವಿಷಯದಲ್ಲಿ ತೀವ್ರವಾದ ಮೋಹಕ್ಕೆ ಒಳಗಾಗಿ ದೊಡ್ಡ ತಪಸ್ಸನ್ನು ಆಚರಿಸಿದನು.

ತಪಸಾ ಮಹತಾ ಯುಕ್ತಃ ಸೋಽಥ ಸ್ರಷ್ಟುಂ ಪ್ರಚಕ್ರಮೇ ।
ಸರ್ವಾಃ ಪ್ರಜಾ ಮನುಃ ಸಾಕ್ಷಾದ್ಯಥಾವದ್ಭರತರ್ಷಭ ॥೫೫॥

ಎಲೈ ಭರತರ್ಷಭನೇ, ದೊಡ್ಡ ತಪಸ್ಸಿನಿಂದ ಕೂಡಿದ (ಪ್ರತಿಭೆಯನ್ನು ಸಂಪಾದಿಸಿದ) ಮನುವು ಅನಂತರ ಎಲ್ಲಾ ಪ್ರಜೆಗಳನ್ನೂ ಯಥಾವತ್ತಾಗಿ ತಾನೇ ಸೃಷ್ಟಿ ಮಾಡಲು ಉಪಕ್ರಮಿಸಿದನು.

ವೈಶಂಪಾಯನಃ

ಇತ್ಯೇತನ್ಮಾತ್ಸ್ಯಕಂ ನಾಮ ಪುರಾಣಂ ಪರಿಕೀರ್ತಿತಮ್ ।
ಆಖ್ಯಾನಮಿದಮಾಖ್ಯಾತಂ ಸರ್ವಪಾಪಹರಂ ಮಯಾ ॥೫೬॥

ವೈಶಂಪಾಯನ– ಇದಕ್ಕೆ ಮತ್ಸ್ಯಪುರಾಣವೆಂದು ಹೆಸರು. ಸರ್ವಪಾಪಹರವಾದ ಈ ಕಥೆಯನ್ನು ನಾನು ನಿಮಗೆ ಹೇಳಿದ್ದೇನೆ.

ಯ ಇದಂ ಶೃಣುಯಾನ್ನಿತ್ಯಂ ಮನೋಶ್ಚರಿತಮಾದಿತಃ ।
ಸ ಸುಖೀ ಸರ್ವಪೂರ್ಣಾರ್ಥಃ ಸರ್ವಲೋಕಮಿಯಾನ್ನರಃ ॥೫೭॥

ಯಾವ ಅಧಿಕಾರಿಯು ಆದರದಿಂದ ನಿತ್ಯವೂ ಈ ಮನುವಿನ ಚರಿತೆಯನ್ನು ಶ್ರದ್ಧೆಯಿಂದ ಕೇಳುತ್ತಾನೆಯೋ ಅವನು ಸರ್ವಾರ್ಥಗಳಿಂದ ಪೂರ್ಣನಾಗಿ ಸುಖವನ್ನು ಹೊಂದಿ ಸ್ವರ್ಗಾದಿ ಸರ್ವಲೋಕಗಳನ್ನು ಪಡೆಯುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ದ್ವ್ಯಶೀತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಮಾರ್ಕಂಡೇಯಸಮಾಖ್ಯಾಪರ್ವಣಿ ಮತ್ಸ್ಯೋಪಾಖ್ಯಾನೇ ಸಪ್ತಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ತೆರಡನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ಮೂರನೆಯ ಅಧ್ಯಾಯ

ಮಾರ್ಕಂಡೇಯರಿಂದ ಯುಗಪರಿಮಾಣ ಮತ್ತು ಯುಗಧರ್ಮಗಳ ವರ್ಣನೆ. ಅವರಿಂದ ಪ್ರಳಯ ದರ್ಶನ ಮತ್ತು ಶಿಶುರೂಪಿಯಾದ ಹರಿಯ ದರ್ಶನಾದಿಗಳ ಕಥನ.

ವೈಶಂಪಾಯನಃ

ತತಃ ಸ ಪುನರೇವಾಥ ಮಾರ್ಕಂಡೇಯಂ ಯಶಸ್ವಿನಮ್ ।
ಪಪ್ರಚ್ಛ ವಿನಯೋಪೇತೋ ಧರ್ಮರಾಜೋ ಯುಧಿಷ್ಠಿರಃ ॥೧॥

ವೈಶಂಪಾಯನ– ಅನಂತರ ವಿನಯದಿಂದ ಕೂಡಿದ ಧರ್ಮರಾಜನಾದ ಯುಧಿಷ್ಠಿರನು ಕೀರ್ತಿವಂತರಾದ ಮಾರ್ಕಂಡೇಯರನ್ನು ಕುರಿತು ಪುನಃ ಪ್ರಶ್ನೆ ಮಾಡಿದನು.

ನೈಕಂ ಯುಗಸಹಸ್ರಾಂತಾಸ್ತ್ವಯಾ ದೃಷ್ಟಾ ಮಹಾಮುನೇ ।
ನ ಚಾಪೀಹ ಸಮಃ ಕಶ್ಚಿದಾಯುಷ್ಮಾನ್ ದೃಶ್ಯತೇ ತವ ॥೨॥

ಮಹಾಮುನಿಗಳೇ, ನೀವು ಅನೇಕ ಯುಗಸಹಸ್ರಾಂತದಲ್ಲಿ ಬರುವ ಪ್ರಳಯವನ್ನು ನೋಡಿದ್ದೀರಿ. ನಿಮಗೆ ಸಮನಾದ ಆಯುಸ್ಸುಳ್ಳವರು ಭೂಮಿಯಲ್ಲಿ ಯಾರೂ ಕಾಣುವುದಿಲ್ಲ.

ವರ್ಜಯಿತ್ವಾ ಮಹಾತ್ಮಾನಂ ಬ್ರಹ್ಮಾಣಂ ಪರಮೇಷ್ಠಿನಮ್ ।
ನ ತೇऽಸ್ತಿ ಸದೃಶಃ ಕಶ್ಚಿದಾಯುಷಾ ಬ್ರಹ್ಮವಿತ್ತಮ ॥೩॥

ಎಲೈ ಬ್ರಹ್ಮಜ್ಞಾನಿಗಳಲ್ಲಿ ಶ್ರೇಷ್ಠರೇ, ಪರಮೇಷ್ಠಿ ಎಂದು ಕರೆಯಲ್ಪಡುವ ಮಹಾತ್ಮರಾದ ಬ್ರಹ್ಮದೇವರನ್ನು ಬಿಟ್ಟು ಆಯುಸ್ಸಿನಲ್ಲಿ ನಿಮಗೆ ಸಮಾನರಾದವರು ಯಾರೂ ಇಲ್ಲ.

ಅನಂತರಿಕ್ಷೇ ಲೋಕೇऽಸ್ಮಿನ್ ದೇವದಾನವವರ್ಜಿತೇ ।
ತ್ವಮೇವ ಪ್ರಲಯೇ ವಿಪ್ರ ಬ್ರಹ್ಮಾಣಮುಪತಿಷ್ಠಸೇ ॥೪॥

ಎಲೈ ಬ್ರಾಹ್ಮಣರೇ, ಅಂತರಿಕ್ಷವಾಗಲೀ ಅಥವಾ ದೇವದಾನವರಾಗಲೀ ಇಲ್ಲದಿರುವ ಪ್ರಪಂಚದಲ್ಲಿ ಪ್ರಳಯಕಾಲದಲ್ಲಿ ನೀವೊಬ್ಬರೇ ಬ್ರಹ್ಮದೇವರನ್ನು ಸ್ತೋತ್ರಮಾಡುತ್ತೀರಿ.

ಪ್ರಲಯೇ ಚಾಪಿ ನಿರ್ವೃತ್ತೇ ಪ್ರಬುದ್ಧೇ ಚ ಪಿತಾಮಹೇ ।
ತ್ವಮೇಕಃ ಸೃಜ್ಯಮಾನಾನಿ ಭೂತಾನೀಹ ಪ್ರಪಶ್ಯಸಿ ॥೫॥

ಚತುರ್ವಿಧಾನಿ ವಿಪ್ರರ್ಷೇ ಯಥಾವತ್ ಪರಮೇಷ್ಠಿನಾ ।
ವಾಯುಭೂತಾ ದಿಶಃ ಕೃತ್ವಾ ವಿಕ್ಷಿಪ್ಯಾಪಸ್ತತಸ್ತತಃ ॥೬॥

ಪ್ರಳಯಕಾಲವು ಮುಗಿದು ಬ್ರಹ್ಮದೇವರು ಎದ್ದು ದಿಕ್ಕುಗಳನ್ನೆಲ್ಲಾ ವಾಯುಗಳಿಂದ ತುಂಬಿ, ಜಲವನ್ನೆಲ್ಲಾ ದೂರಸರಿಸಿ ಜರಾಯುಜ, ಸ್ವೇದಜ, ಅಂಡಜ, ಉದ್ಭಿಜ ರೂಪವಾದ ನಾಲ್ಕು ಪ್ರಾಣಗಳನ್ನು ಬ್ರಹ್ಮದೇವರು ಸೃಷ್ಟಿಸುವುದನ್ನು ನೀವೊಬ್ಬರೇ ನೋಡುತ್ತೀರಿ.

ತ್ವಯಾ ಲೋಕಗುರುಃ ಸಾಕ್ಷಾತ್ಸರ್ವಲೋಕಪಿತಾಮಹಃ ।
ಆರಾಧಿತೋ ದ್ವಿಜಶ್ರೇಷ್ಠ ತತ್ಪರೇಣ ಸಮಾಧಿನಾ ॥೭॥

ಎಲೈ ದ್ವಿಜಶ್ರೇಷ್ಠರೇ, ನೀವು ಪರಮಸಮಾಧಿಯಿಂದ ಸರ್ವಲೋಕ ಪಿತಾಮಹರೂ, ಲೋಕಗುರುಗಳೂ ಆದ ಬ್ರಹ್ಮದೇವರನ್ನು ಸಾಕ್ಷಾತ್ತಾಗಿ ಆರಾಧಿಸಿದ್ದೀರಿ.

ತಸ್ಮಾತ್ ತವಾಂತಕೋ ಮೃತ್ಯುರ್ಜರಾ ವಾ ದೇಹನಾಶಿನೀ ।
ನ ತ್ವಾಂ ವಿಶತಿ ವಿಪ್ರರ್ಷೇ ಪ್ರಸಾದಾತ್ಪರಮೇಷ್ಠಿನಃ ॥೮॥

ಎಲೈ ವಿಪ್ರರ್ಷಿಗಳೇ, ಆದ್ದರಿಂದ ನಿಮ್ಮನ್ನು ಅಂತ್ಯಗೊಳಿಸುವ ಮೃತ್ಯುವಾಗಲೀ ಅಥವಾ ದೇಹದಲ್ಲಿ ವಿರೂಪವನ್ನುಂಟು ಮಾಡುವ ಮುಪ್ಪಾಗಲೀ ಬ್ರಹ್ಮದೇವರ ಅನುಗ್ರಹದಿಂದ ನಿಮಗೆ ಎಂದೂ ಉಂಟಾಗುವುದಿಲ್ಲ.

ಯದಾ ನೈವ ರವಿರ್ನಾಗ್ನಿರ್ನ ವಾಯುರ್ನ ಚ ಚಂದ್ರಮಾಃ ।
ನೈವಾಂತರಿಕ್ಷಂ ನೈವೋರ್ವೀ ಶೇಷಂ ಭವತಿ ಕಿಂಚನ ॥೯॥

ತಸ್ಮಿನ್ನೇಕಾರ್ಣವೇ ಲೋಕೇ ನಷ್ಟೇ ಸ್ಥಾವರಜಂಗಮೇ ।
ನಷ್ಟೇ ದೇವಾಸುರಗಣೇ ಸಮುತ್ಸನ್ನಮಹೋರಗೇ ॥೧೦॥

ಶಯಾನಮಮಿತಾತ್ಮಾನಂ ಪದ್ಮೋತ್ಪಲನಿಕೇತನಮ್ ।
ತ್ವಮೇಕಃ ಸರ್ವಭೂತೇಶಂ ಬ್ರಹ್ಮಾಣಮುಪತಿಷ್ಠಸಿ ॥೧೧॥

ಸೂರ್ಯನಾಗಲೀ, ಅಗ್ನಿಯಾಗಲೀ, ವಾಯುವಾಗಲೀ, ಚಂದ್ರನಾಗಲೀ, ಅಂತರಿಕ್ಷವಾಗಲೀ, ಭೂಮಿಯಾಗಲೀ ಅಥವಾ ಉಳಿದ ಯಾವ ವಸ್ತುವಾಗಲೀ ಇಲ್ಲದಿರುವಾಗ ಪ್ರಪಂಚವೆಲ್ಲವೂ ಜಲಮಯವಾಗಿ ಸ್ಥಾವರಜಂಗಮವೆಲ್ಲವೂ ದೇವಾಸುರ ಸಮೂಹವೆಲ್ಲವೂ ಮಹಾಸರ್ಪಗಳು ಮೊದಲಾದವೂ ನಷ್ಟವಾಗಿರುವಾಗ ನೀವೊಬ್ಬರೇ ಅಮಿತಗುಣವಂತನಾದ ಪದ್ಮಪುಷ್ಪನಿವಾಸಿಯಾದ ಎಲ್ಲ ಪ್ರಾಣಿಗಳಿಗೂ ಒಡೆಯರಾದ ಬ್ರಹ್ಮದೇವರನ್ನು ಸ್ತೋತ್ರಮಾಡುತ್ತೀರಿ.

ಏತತ್ತ್ವಯಕ್ಷತಃ ಸರ್ವಂ ಪೂರ್ವಂ ವೃತ್ತಂ ದ್ವಿಜೋತ್ತಮ ।
ತಸ್ಮಾದಿಚ್ಛಾಮ್ಯಹಂ ಶ್ರೋತುಂ ಸರ್ವಹೇತ್ವಾತ್ಮಿಕಾಂ ಕಥಾಮ್ ॥೧೨॥

ಎಲೈ ದ್ವಿಜೋತ್ತಮರೇ, ಈ ಎಲ್ಲವನ್ನೂ ನೀವು ಹಿಂದೆ ಪ್ರತ್ಯಕ್ಷವಾಗಿ ನೋಡಿದ್ದೀರಿ. ಆದ್ದರಿಂದ ನಾನು ನಿಮ್ಮಿಂದ ಎಲ್ಲದಕ್ಕೂ ಕಾರಣವಾದ ಈ ಕಥೆಯನ್ನು ಕೇಳಲು ಬಯಸುತ್ತೇನೆ.

ಅನುಭೂತಂ ಹಿ ಬಹುಶಸ್ತ್ವಯೈಕೇನ ದ್ವಿಜೋತ್ತಮ ।
ನ ತೇಽಸ್ಯವಿದಿತಂ ಕಿಂಚಿತ್ ಸರ್ವಲೋಕೇಷು ನಿತ್ಯದಾ ॥೧೩॥

ಎಲೈ ದ್ವಿಜೋತ್ತಮರೇ, ಇವೆಲ್ಲವನ್ನೂ ನೀವು ಹಿಂದೆ ಅನೇಕ ಬಾರಿ ಅನುಭವಿಸಿದ್ದೀರಿ. ನಿಮಗೆ ಸರ್ವಲೋಕಗಳಲ್ಲಿ ತಿಳಿಯದಿರುವ ವಸ್ತುವು ಯಾವುದೂ ಇಲ್ಲ.

ಮಾರ್ಕಂಡೇಯಃ

ಹಂತ ತೇ ವರ್ತ(ರ್ಣ)ಯಿಷ್ಯಾಮಿ ನಮಸ್ಕೃತ್ವಾ ಸ್ವಯಂಭುವೇ ।
ಪುರುಷಾಯ ಪುರಾಣಾಯ ಶಾಶ್ವತಾಯಾವ್ಯಯಾಯ ಚ ॥೧೪॥

ಮಾರ್ಕಂಡೇಯ– ಬಹಳ ಸಂತೋಷ. ನಾನು ಬ್ರಹ್ಮದೇವರಿಗೂ ಮತ್ತು ಪುರಾಣ ಪುರುಷನಾದ ಶಾಶ್ವತನಾದ ಅವ್ಯಯನಾದ ಅವ್ಯಕ್ತನಾದ ಸೂಕ್ಷ್ಮನಾದ ಪ್ರಾಕೃತಗುಣ ರಹಿತನಾದ ಅಪ್ರಾಕೃತ ಗುಣಪೂರ್ಣನಾದ ನಾರಾಯಣನಿಗೂ ನಮಸ್ಕರಿಸಿ ನೀನು ಕೇಳಿದ ವಿಷಯಗಳನ್ನು ಹೇಳುವೆನು.

ಸ ಏಷ ಪುರುಷವ್ಯಾಘ್ರ ಪೀತವಾಸಾ ಜನಾರ್ದನಃ ।
ಏಷ ಕರ್ತಾ ವಿಕರ್ತಾ ಚ ಭೂತಾತ್ಮಾ ಭೂತಕೃತ್ ಪ್ರಭುಃ ॥೧೫॥

ಎಲೈ ಪುರುಷವ್ಯಾಘ್ರನೇ, ಈ ಪೀತಾಂಬರಧಾರಿಯಾದ ಜನಾರ್ದನನೇ ಕರ್ತಾ, ವಿಕರ್ತಾ, ಸರ್ವವ್ಯಾಪಿ, ಸರ್ವಸಂಹಾರಕ ಮತ್ತು ಪ್ರಭುವಾದವನು.

ಅಚಿಂತ್ಯಂ ಮಹದಾಶ್ಚರ್ಯಂ ಪವಿತ್ರಮಿತಿ ಚೋಚ್ಯತೇ ।
ಅನಾದಿನಿಧನಂ ಭೂತಂ ವಿಶ್ವಮವ್ಯಯಮಕ್ಷಯಮ್ ॥೧೬॥

ಇವನನ್ನು ಅಚಿಂತ್ಯನೆಂದೂ ಮಹದಾಶ್ಚರ್ಯನೆಂದೂ, ಪವಿತ್ರನೆಂದೂ, ಆದ್ಯಂತರಹಿತನೆಂದೂ, ಪೂರ್ಣನೆಂದೂ, ಸರ್ವದಾ ಇರುವವನೆಂದೂ ಅವ್ಯಯನೆಂದೂ, ಚತುರ್ವಿಧನಾಶರಹಿತನೆಂದೂ ಹೇಳುತ್ತಾರೆ.

ಏಷ ಕರ್ತಾ ನ ಕ್ರಿಯತೇ ಕಾರಣಂ ಚಾಪಿ ಪೌರುಷೇ ।
ಯದ್ಯೇಷ ಪುರುಷೋ ವೇದ ವೇದಾ ಅಪಿ ನ ತಂ ವಿದುಃ ॥೧೭॥

ಇವನು ಎಲ್ಲವನ್ನೂ ಮಾಡುತ್ತಾನೆ. ತಾನು ಯಾರಿಂದಲೂ ಮಾಡಲ್ಪಡುವುದಿಲ್ಲ. ಪುರುಷನು ಮಾಡುವ ಎಲ್ಲಾ ಕಾರ್ಯಗಳಿಗೂ ಇವನು ಕಾರಣನಾಗುತ್ತಾನೆ. ಇವನು ಏನನ್ನು ತಿಳಿದಿದ್ದಾನೋ ಅದನ್ನು ವೇದಗಳೂ ತಿಳಿದಿಲ್ಲ (ಹೇಳುವುದಿಲ್ಲ).

ಸರ್ವಮಾಶ್ಚರ್ಯಮೇವೈತನ್ನಿರ್ವೃತ್ತಂ ರಾಜಸತ್ತಮ ।
ಆದಿತೋ ಮನುಜವ್ಯಾಘ್ರ ಕೃತ್ಸ್ನಸ್ಯ ಜಗತಃ ಕ್ಷಯೇ ॥೧೮॥

ಎಲೈ ರಾಜಶ್ರೇಷ್ಠನೇ, ಮನುಜವ್ಯಾಘ್ರನೇ, ಎಲ್ಲ ಜಗತ್ತೂ ನಾಶವನ್ನು ಹೊಂದಿರುವಾಗ ಸೃಷ್ಟಿಯ ಆರಂಭಕಾಲದಲ್ಲಿ ಬಹಳ ಆಶ್ಚರ್ಯಕರವಾದ ಘಟನೆಯು ಜರುಗಿತು.

ಚತ್ವಾರ್ಯಾಹುಃ ಸಹಸ್ರಾಣಿ ವರ್ಷಾಣಾಂ ತತ್ಕೃತಂ ಯುಗಮ್ ।
ತಸ್ಯ ತಾವಚ್ಛತೀ ಸಂಧ್ಯಾ ಸಂಧ್ಯಾಂಶಶ್ಚ ತತಃ ಪರಮ್ ॥೧೯॥

ದೇವಮಾನದ ನಾಲ್ಕು ಸಹಸ್ರವರ್ಷಗಳು ಕೃತಯುಗದ ಪರಿಮಾಣವೆಂದು ಹೇಳುತ್ತಾರೆ (ಮನುಷ್ಯಮಾನದ ಒಂದುವರ್ಷವು ದೇವತೆಗಳ ಒಂದು ದಿನ. ಇಂತಹ

ಗಣನೆಯಲ್ಲಿ ದೇವತೆಗಳಿಗೆ ನಾಲ್ಕುಸಾವಿರ ವರ್ಷಗಳು ಕಳೆಯಬೇಕು). ಕೃತಯುಗಕ್ಕೆ ನಾಲ್ಕುನೂರು ವರ್ಷಗಳ ಸಂಧ್ಯಾಕಾಲವು ಮತ್ತು ನಾಲ್ಕುನೂರು ವರ್ಷಗಳ ಸಂಧ್ಯಾಂಶ ಕಾಲವು ಇರುತ್ತದೆ (ಕೃತಯುಗದ ಆದಿಯಲ್ಲಿ ಇನ್ನೂರುವರ್ಷ ಸಂಧ್ಯಾಕಾಲ, ಅನಂತರ ಇನ್ನೂರುವರ್ಷಗಳು ಸಂಧ್ಯಾಂಶ ಕಾಲ. ಕೃತಯುಗದ ಕೊನೆಯಲ್ಲಿ ಮೊದಲು ಇನ್ನೂರು ವರ್ಷಗಳು ಸಂಧ್ಯಾಂಶ ಕಾಲ, ಕೊನೆಯ ಇನ್ನೂರು ವರ್ಷಗಳು ಸಂಧ್ಯಾ ಕಾಲ. ಹೀಗೆ ಸಂಧ್ಯಾ ಸಂಧ್ಯಾಂಶಕಾಲಗಳನ್ನು ಸೇರಿಸಿ ಎಂಟುನೂರು ವರ್ಷಗಳಾಗುತ್ತವೆ).

ತ್ರೀಣಿ ವರ್ಷಸಹಸ್ರಾಣಿ ತ್ರೇತಾಯುಗಮಿಹೋಚ್ಯತೇ ।
ತಸ್ಯ ತಾವಚ್ಛತೀ ಸಂಧ್ಯಾ ಸಂಧ್ಯಾಂಶಶ್ಚ ತತಃ ಪರಮ್ ॥೨೦॥

ತ್ರೇತಾಯುಗವು ಮೂರುಸಹಸ್ರ ದೇವವರ್ಷಗಳ ಪರಿಮಾಣವುಳ್ಳದ್ದೆಂದು ಹೇಳಲ್ಪಡುತ್ತದೆ. ಅದಕ್ಕೆ ಮುನ್ನೂರು ವರ್ಷ ಸಂಧ್ಯಾಕಾಲವು ಮತ್ತು ಮುನ್ನೂರು ವರ್ಷ ಸಂಧ್ಯಾಂಶ ಕಾಲವು ಇದೆ (ತ್ರೇತಾಯುಗದ ಆದಿಯಲ್ಲಿ ನೂರೈವತ್ತು ವರ್ಷ ಸಂಧ್ಯಾಕಾಲ, ನೂರೈವತ್ತು ವರ್ಷಗಳು ಸಂಧ್ಯಾಂಶ ಕಾಲ. ತ್ರೇತಾಯುಗದ ಕೊನೆಯಲ್ಲಿ ನೂರೈವತ್ತು ವರ್ಷ ಸಂಧ್ಯಾಂಶ ಕಾಲ ಮತ್ತು ಕೊನೆಯ ನೂರೈವತ್ತು ವರ್ಷ ಸಂಧ್ಯಾ ಕಾಲ. ಹೀಗೆ ಒಟ್ಟು ಆರುನೂರು ವರ್ಷಗಳು).

ತಥಾ ವರ್ಷಸಹಸ್ರೇ ದ್ವೇ ದ್ವಾಪರಂ ಪರಿಮಾಣತಃ ।
ತಸ್ಯಾಪಿ ದ್ವಿಶತೀ ಸಂಧ್ಯಾ ಸಂಧ್ಯಾಂಶಶ್ಚ ತಥಾವಿಧಃ ॥೨೧॥

ದ್ವಾಪರ ಯುಗದ ಪರಿಮಾಣ ಎರಡು ಸಾವಿರ ದೇವಮಾನವರ್ಷಗಳು. ಅದಕ್ಕೆ ಹಿಂದಿನ ರೀತಿಯಲ್ಲಿಯೇ ಇನ್ನೂರು ವರ್ಷದ ಸಂಧ್ಯಾಕಾಲವು ಮತ್ತು ಇನ್ನೂರು ವರ್ಷದ ಸಂಧ್ಯಾಂಶ ಕಾಲವು ಇರುತ್ತದೆ.

ಸಹಸ್ರಮೇಕಂ ವರ್ಷಾಣಾಂ ತತಃ ಕಲಿಯುಗಂ ಸ್ಮೃತಮ್ ।
ತಸ್ಯ ವರ್ಷಶತಂ ಸಂಧಿಃ ಸಂಧ್ಯಾಂಶಶ್ಚ ತತಃ ಪರಮ್ ।
ಸಂಧಿಸಂಧ್ಯಾಂಶಯೋಸ್ತುಲ್ಯಂ ಪ್ರಮಾಣಮುಪಧಾರಯ ॥೨೨॥

ಕಲಿಯುಗದ ಪರಿಮಾಣವು ಒಂದು ಸಹಸ್ರ ದೇವಮಾನ ವರ್ಷಗಳು. ಅದಕ್ಕೆ ಒಂದು ನೂರು ವರ್ಷ ಸಂಧಿಯು, ಒಂದು ನೂರು ವರ್ಷ ಸಂಧ್ಯಾಂಶವು ಮೇಲೆ

ಹೇಳಿದ ರೀತಿಯಲ್ಲಿಯೇ ಇದೆ. ಸಂಧಿ ಮತ್ತು ಸಂಧ್ಯಾಂಶ ಕಾಲಗಳು ಎಲ್ಲ ಯುಗಗಳಲ್ಲಿಯೂ ಸಮಾನವಾಗಿರುತ್ತವೆ ಎಂದು ತಿಳಿ.

ಕ್ಷೀಣೇ ಕಲಿಯುಗೇ ಚೈವ ಪ್ರವರ್ತೇತ ಕೃತಂ ಯುಗಮ್ ॥೨೩॥

ಏಷಾ ದ್ವಾದಶಸಾಹಸ್ರೀ ಯುಗಾಖ್ಯಾ ಪರಿಕೀರ್ತ್ತಿತಾ ।
ಏತತ್ಸಹಸ್ರಪರ್ಯಂತಮಹೋ ಬ್ರಾಹ್ಮಮುದಾಹೃತಮ್ ॥೨೪॥

ಕಲಿಯುಗವು ಕಳೆದ ಮೇಲೆ ಪುನಃ ಕೃತಯುಗವು ಪ್ರಾರಂಭವಾಗುತ್ತದೆ. ಹೀಗೆ ನಾಲ್ಕು ಯುಗಗಳಿಗೆ ಒಟ್ಟು ದೇವಮಾನದ ಹನ್ನೆರಡು ಸಾವಿರ ವರ್ಷಗಳು ಆಗುತ್ತವೆ (ಯುಗಗಳಿಂದ ಹತ್ತುಸಾವಿರ, ಸಂಧ್ಯಾ ಸಂಧ್ಯಾಂಶಗಳು ಸೇರಿ ಎರಡು ಸಾವಿರ. ಹೀಗೆ ಒಟ್ಟು ಹನ್ನೆರಡು ಸಾವಿರ ವರ್ಷಗಳಾಗುತ್ತವೆ). ಇಂತಹ ಸಹಸ್ರ ಚತುರ್ಯುಗಗಳು ಮರಳಿದರೆ ಬ್ರಹ್ಮದೇವರ ಒಂದು ಹಗಲು ಎಂದು ಹೇಳುತ್ತಾರೆ.

ವಿಶ್ವಂ ಹಿ ಬ್ರಹ್ಮಭವನೇ ಸರ್ವತಃ ಪರಿವರ್ತ್ತತೇ ।
ಲೋಕಾನಾಂ ಮನುಜವ್ಯಾಘ್ರ ಪ್ರಲಯಂ ತಂ ವಿದುರ್ಬುಧಾಃ ॥೨೫॥

ಬ್ರಹ್ಮದೇವರ ಹಗಲಿನ ಕಾಲದಲ್ಲಿ ಎಲ್ಲಕಡೆಯಲ್ಲಿಯೂ ಜಗತ್ತು ಪ್ರಚಲಿತವಾಗುತ್ತದೆ. ಎಲೈ ಮನುಜವ್ಯಾಘ್ರನೇ, ಹೀಗೆ ಹಗಲಿನ ಸಹಸ್ರ ಯುಗಗಳು ಕಳೆದ ಮೇಲೆ ಜ್ಞಾನಿಗಳು ಪ್ರಳಯಕಾಲವೆಂದು ಹೇಳುತ್ತಾರೆ.

ಅಲ್ಪಾವಶಿಷ್ಟೇ ತು ತದಾ ಯುಗಾಂತೇ ಭರತರ್ಷಭ ।
ಸಹಸ್ರಾಂತೇ ನರಾಃ ಸರ್ವೇ ಪ್ರಾಯಶೋऽನೃತವಾದಿನಃ ॥೨೬॥

ಎಲೈ ಭರತರ್ಷಭನೇ, ಹೀಗೆ ಸಹಸ್ರ ಚತುರ್ಯುಗಗಳು ಕಳೆದು ಕೊನೆಯ ಕಲಿಯುಗದಲ್ಲಿ ಸ್ವಲ್ಪ ಭಾಗ ಮಾತ್ರ ಉಳಿದಿರುವಾಗ ಎಲ್ಲ ಮನುಷ್ಯರೂ ಪ್ರಾಯಶಃ ಸುಳ್ಳನ್ನು ಹೇಳುವವರಾಗುತ್ತಾರೆ.

ಯಜ್ಞಪ್ರತಿನಿಧಿಃ ಪಾರ್ಥ ದಾನಪ್ರತಿನಿಧಿಸ್ತಥಾ ।
ವ್ರತಪ್ರತಿನಿಧಿಶ್ಚೈವ ತಸ್ಮಿನ್‌ಕಾಲೇ ಪ್ರವರ್ತತೇ ॥೨೭॥

ಎಲೈ ಪಾರ್ಥನೇ, ಆಗ ಯಜ್ಞಗಳಾಗಲೀ, ದಾನಗಳಾಗಲೀ, ವ್ರತಗಳಾಗಲೀ ಇರುವುದಿಲ್ಲ. ಅವುಗಳ ಪ್ರತಿನಿಧಿಗಳು ಮಾತ್ರ ಇರುತ್ತವೆ.

ಬ್ರಾಹ್ಮಣಾಃ ಶೂದ್ರಕರ್ಮಾಣಸ್ತಥಾ ಶೂದ್ರಾ ಧನಾರ್ಜಕಾಃ ।
ಕ್ಷತ್ರಧರ್ಮೇಣ ವಾಪ್ಯತ್ರ ವರ್ತಯಂತಿ ಗತೇ ಯುಗೇ ॥೨೮॥

ಬ್ರಾಹ್ಮಣರು ಶೂದ್ರಕರ್ಮವನ್ನು ಮಾಡುತ್ತಾರೆ. ಶೂದ್ರರು ಧನಾರ್ಜನೆಯನ್ನು ಮಾಡುತ್ತಾರೆ ಅಥವಾ ಆ ಯುಗದ ಕೊನೆಯಲ್ಲಿ ಕ್ಷತ್ರಿಯ ಧರ್ಮವನ್ನಾದರೂ ಅನುಸರಿಸುತ್ತಾರೆ.

ನಿವೃತ್ತಯಜ್ಞಸ್ವಾಧ್ಯಾಯಾ ದಂಡಾಜಿನವಿವರ್ಜಿತಾಃ ।
ಬ್ರಾಹ್ಮಣಾಃ ಸರ್ವಭಕ್ಷಾಶ್ಚ ಭವಿಷ್ಯಂತಿ ಕಲೌ ಯುಗೇ ॥೨೯॥

ಬ್ರಾಹ್ಮಣರು ಯಜ್ಞಸ್ವಾಧ್ಯಾಯಗಳನ್ನು ತ್ಯಜಿಸುತ್ತಾರೆ. ದಂಡಾಜಿನಗಳನ್ನೂ ತೊರೆಯುತ್ತಾರೆ. ಕಲಿಯುಗದಲ್ಲಿ ಎಲ್ಲವನ್ನೂ ತಿನ್ನುವವರಾಗುತ್ತಾರೆ.

ಅಜಪಾ ಬ್ರಾಹ್ಮಣಾಸ್ತತ ಶೂದ್ರಾ ಜಪಪರಾಯಣಾಃ ।
ವಿಪರೀತೇ ತದಾ ಲೋಕೇ ಪೂರ್ವರೂಪಂ ಕ್ಷಯಸ್ಯ ತತ್ ॥೩೦॥

ಎಲೈ ಪ್ರೀತಿಪಾತ್ರನೇ, ಬ್ರಾಹ್ಮಣರು ಜಪವನ್ನು ಮಾಡುವುದಿಲ್ಲ. ಶೂದ್ರರು ಜಪನಿಷ್ಠರಾಗುತ್ತಾರೆ. ಹೀಗೆ ಲೋಕವು ತಲೆಕೆಳಗಾದಾಗ ಅದು ಪ್ರಳಯದ ಮುನ್ಸೂಚನೆ ಎಂದು ತಿಳಿಯಬೇಕು.

ಕ್ಷತ್ರಧರ್ಮೇಣ ವಾऽಪ್ಯತ್ರ ವರ್ತಯಂತಿ ಯುಗಕ್ಷಯೇ ।
ಬಹವೋ ಮ್ಲೇಚ್ಛರಾಜಾನಃ ಪೃಥಿವ್ಯಾಂ ಮನುಜಾಧಿಪ ॥೩೧॥

ಎಲೈ ಮನುಜಾಧಿಪನೇ, ಯುಗಕ್ಷಯದ ಸಮಯದಲ್ಲಿ ಭೂಮಿಯಲ್ಲಿ ಅನೇಕ ಮ್ಲೇಚ್ಛರಾಜರುಗಳು ಕ್ಷತ್ರಿಯಧರ್ಮದಿಂದ ವರ್ತಿಸುತ್ತಾರೆ.

ಮೃಷಾನುಶಾಸಿನಃ ಪಾಪಾ ಮೃಷಾವಾದಪರಾಯಣಾಃ ।
ಆಂಧ್ರಾಃ ಶಕಾಃ ಪುಲಿಂದಾಶ್ಚ ಯವನಾಶ್ಚ ನರಾಧಿಪಾಃ ॥೩೨॥

ಆಂಧ್ರರು, ಶಕರು, ಪುಲಿಂದರು, ಯವನರು ಮೊದಲಾದ ರಾಜರುಗಳು ಪಾಪಿಷ್ಠರಾಗಿ ಸುಳ್ಳನ್ನು ಮಾತನಾಡುತ್ತಾ ಸುಳ್ಳು ಶಾಸನಗಳನ್ನು ಮಾಡಿಕೊಂಡಿರುತ್ತಾರೆ.

ಕಾಂಬೋಜಾ ಬಾಹ್ಲಿಕಾಃ ಶೂರಾಸ್ತಥಾऽऽಭೀರಾ ನರೋತ್ತಮ ।
ನ ತದಾ ಬ್ರಾಹ್ಮಣಃ ಕಶ್ಚಿತ್ ಸ್ವಧರ್ಮಮುಪಜೀವತಿ ॥೩೩॥

ಎಲೈ ನರೋತ್ತಮರೇ, ಕಾಂಬೋಜರು, ಬಾಹ್ಲಿಕರು, ಶೂರರು, ಆಭೀರರು ಮೊದಲಾದವರೂ ಕೂಡ ಹಾಗೆಯೇ ಇರುತ್ತಾರೆ. ಆಗ ಯಾವ ಬ್ರಾಹ್ಮಣನೂ ತನ್ನ ಧರ್ಮವನ್ನು ಪರಿಪಾಲಿಸುವುದಿಲ್ಲ.

ಕ್ಷತ್ರಿಯಾಶ್ಚಾಪಿ ವೈಶ್ಯಾಶ್ಚ ವಿಕರ್ಮಸ್ಥಾ ನರಾಧಿಪ ॥೩೪॥

ಎಲೈ ನರಾಧಿಪನೇ, ಕ್ಷತ್ರಿಯರು ಮತ್ತು ವೈಶ್ಯರು ತಮ್ಮ ಧರ್ಮವನ್ನು ಅನುಸರಿಸದೇ ಕೆಟ್ಟ ಕಾರ್ಯಗಳಲ್ಲಿ ತೊಡಗುತ್ತಾರೆ.

ಅಲ್ಪಾಯುಷಃ ಸ್ವಲ್ಪಬಲಾಃ ಸ್ವಲ್ಪವೀರ್ಯಪರಾಕ್ರಮಾಃ ।
ಅಲ್ಪಸಾರಾಲ್ಪದೇಹಶ್ಚ ತಥಾ ಸತ್ಯಾಲ್ಪಭಾಷಿಣಃ ।
ಬಹುಶೂನ್ಯಾ ಜನಪದಾ ಮೃಗವ್ಯಾಲಾವೃತಾ ದಿಶಃ ॥೩೫॥

ಮನುಷ್ಯರು ಅಲ್ಪಾಯುಷಿಗಳು, ಅಲ್ಪಬಲವನ್ನುಳ್ಳವರು, ಅಲ್ಪವೀರ್ಯಪರಾಕ್ರಮವನ್ನು ಉಳ್ಳವರು, ಅಲ್ಪ ಸಾಮರ್ಥ್ಯವುಳ್ಳವರು, ಅಲ್ಪ ದೇಹವನ್ನುಳ್ಳವರು, ಅಲ್ಪಸತ್ಯವನ್ನು ನುಡಿಯುವವರು ಆಗಿರುತ್ತಾರೆ. ದೇಶವೆಲ್ಲವೂ ಶೂನ್ಯಪ್ರಾಯವಾಗಿ ದಿಕ್ಕುದಿಕ್ಕುಗಳು ಮೃಗಸರ್ಪ ಮೊದಲಾದವುಗಳಿಂದ ತುಂಬಿರುತ್ತವೆ.

ಯುಗಾಂತೇ ಸಮನುಪ್ರಾಪ್ತೇ ವೃಥಾ ಚ ಬ್ರಹ್ಮವಾದಿನಃ ।
ಭೋವಾದಿನಸ್ತಥಾ ಶೂದ್ರಾ ಬ್ರಾಹ್ಮಣಶ್ಚಾರ್ಯವಾದಿನಃ ॥೩೬॥

ಯುಗಾಂತವು ಪ್ರಾಪ್ತವಾದಾಗ ಬ್ರಾಹ್ಮಣರ ಮಾತುಗಳು ವ್ಯರ್ಥವಾಗುತ್ತವೆ. ಶೂದ್ರರು ಬ್ರಾಹ್ಮಣರನ್ನು ಎಲವೋ ಎಂದು ಕರೆಯುತ್ತಾರೆ. ಬ್ರಾಹ್ಮಣರು ಶೂದ್ರರನ್ನು ಪೂಜ್ಯರೇ ಎಂದು ಕರೆಯುತ್ತಾರೆ.

ಯುಗಾಂತೇ ಮನುಜವ್ಯಾಘ್ರ ಭವಂತಿ ಬಹುಜಂತವಃ ।
ನ ತಥಾ ಗಂಧಯುಕ್ತಾಶ್ಚ ಸರ್ವಗಂಧಾ ವಿಶಾಂಪತೇ ।
ರಸಾಶ್ಚ ಮನುಜವ್ಯಾಘ್ರ ನ ತಥಾ ಸ್ವಾದುಯೋಗಿನಃ ॥೩೭॥

ಎಲೈ ಮನುಜವ್ಯಾಘ್ರನೇ, ಆ ಯುಗಕ್ಷಯದ ಸಮಯದಲ್ಲಿ ಎಲ್ಲ ಕಡೆಯಲ್ಲಿಯೂ ಜಂತುಗಳು ಹೆಚ್ಚಾಗುತ್ತವೆ. ಎಲೈ ರಾಜನೇ, ಗಂಧವಸ್ತುಗಳಲ್ಲಿ ಮೊದಲಿನ ಗಂಧವು ಇರುವುದಿಲ್ಲ. ಎಲೈ ಮನುಜವ್ಯಾಘ್ರನೇ, ರಸವುಳ್ಳ ವಸ್ತುಗಳಲ್ಲಿ ಮೊದಲಿನ ರಸ ಇರುವುದಿಲ್ಲ.

ಬಹುಪ್ರಜಾ ಹ್ರಸ್ವದೇಹಾಃ ಶೀಲಾಚಾರವಿವರ್ಜಿತಾಃ ।
ಮುಖೇಭಗಾಃ ಸ್ತ್ರಿಯೋ ರಾಜನ್ ಭವಿಷ್ಯಂತಿ ಯುಗಕ್ಷಯೇ ॥೩೮॥

ಮನುಷ್ಯರು ಅನೇಕ ಮಕ್ಕಳನ್ನು ಪಡೆಯುತ್ತಾರೆ. ಹ್ರಸ್ವದೇಹವುಳ್ಳವರಾಗಿರುತ್ತಾರೆ. ಶೀಲಾಚಾರಶೂನ್ಯರಾಗಿರುತ್ತಾರೆ. ಎಲೈ ರಾಜನೇ, ಯುಗಕ್ಷಯದ ಕಾಲದಲ್ಲಿ ಸ್ತ್ರೀಯರಿಗೆ ಮುಖದಲ್ಲಿಯೇ ಭಗವುಂಟಾಗುತ್ತದೆ.

ಅಟ್ಟಶೂಲಾ ಜನಪದಾಃ ಶಿವಶೂಲಾಶ್ಚತುಷ್ಪಥಾಃ ।
ಕೇಶಶೂಲಾಃ ಸ್ತ್ರಿಯೋ ರಾಜನ್ ಭವಿಷ್ಯಂತಿ ಯುಗಕ್ಷಯೇ ॥೩೯॥

ಜನರು ಅನ್ನವಿಕ್ರಯವನ್ನು ಮಾಡುತ್ತಾರೆ. ಬ್ರಾಹ್ಮಣರು ವೇದವಿಕ್ರಯವನ್ನು ಮಾಡುತ್ತಾರೆ. ಎಲೈ ರಾಜನೇ, ಆ ಯುಗಕ್ಷಯ ಸಮಯದಲ್ಲಿ ಸ್ತ್ರೀಯರು ತಮ್ಮ ಭಗವನ್ನೇ ವಿಕ್ರಯಮಾಡುತ್ತಾರೆ.

ಅಲ್ಪಕ್ಷೀರಾಸ್ತಥಾ ಗಾವೋ ಭವಿಷ್ಯಂತಿ ಜನಾಧಿಪ ।
ಅಲ್ಪಪುಷ್ಪಫಲಾಶ್ಚಾಪಿ ಪಾದಪಾ ಬಹುವಾಯಸಾಃ ॥೪೦॥

ಎಲೈ ಜನಾಧಿಪನೇ, ಗೋವುಗಳು ಅಲ್ಪಕ್ಷೀರವನ್ನು ಕೊಡುವವು. ವೃಕ್ಷಗಳು ಅಲ್ಪ ಪುಷ್ಪಫಲಗಳನ್ನು ಕೊಟ್ಟು ಅನೇಕ ಕಾಗೆಗಳಿಂದ ತುಂಬಿರುತ್ತವೆ.

ಬ್ರಹ್ಮವಧ್ಯಾನುಲಿಪ್ತಾನಾಂ ತಥಾ ಮಿಥ್ಯಾಭಿಶಂಸಿನಾಮ್ ।
ನೃಪಾಣಾಂ ಪೃಥಿವೀಪಾಲ ಪ್ರತಿಗೃಹ್ಣಂತಿ ವೈ ದ್ವಿಜಾಃ ॥೪೧॥

ಎಲೈ ರಾಜನೇ, ಬ್ರಾಹ್ಮಣರು ಬ್ರಹ್ಮಹತ್ಯಾ ದೋಷದಿಂದ ಕೂಡಿದ ಮತ್ತು ಅನೃತ ಭಾಷಿಗಳಾದ ರಾಜರುಗಳಿಂದ ದಾನವನ್ನು ಸ್ವೀಕರಿಸುತ್ತಾರೆ.

ಲೋಭಮೋಹಪರೀತಾಶ್ಚ ಮಿಥ್ಯಾಧರ್ಮಧ್ವಜಾವೃತಾಃ ।
ಭಿಕ್ಷಾರ್ಥಂ ಪೃಥಿವೀಪಾಲ ಚಂಚೂರ್ಯಂತೇ ದ್ವಿಜಾ ದಿಶಃ ॥೪೨॥

ಬ್ರಾಹ್ಮಣರು ಲೋಭ, ಮೋಹಗಳಿಗೆ ವಶರಾಗಿ ಸುಳ್ಳುಧರ್ಮಗಳನ್ನು ಆಚರಿಸುತ್ತಾ ಅನ್ನಕ್ಕಾಗಿ ದಿಕ್ಕುದಿಕ್ಕುಗಳಲ್ಲಿ ಅಲೆಯುತ್ತಾರೆ.

ಕರಹಾರಭಯಾತ್ ಪುಂಸೋ ಗೃಹಸ್ಥಾಃ ಪರಿಮೋಷಕಾಃ ।
ಮುನಿಚ್ಛದ್ಮಾಕೃತಿಚ್ಛನ್ನಾ ವಾಣಿಜ್ಯಮುಪಭುಂಜತೇ ॥೪೩॥

ಗೃಹಸ್ಥರು ತೆರಿಗೆಯನ್ನು ಕೊಡಲು ಸಾಧ್ಯವಾಗದೆ ತೆರಿಗೆಯ ವಂಚಕರಾಗುತ್ತಾರೆ. ತಪಸ್ವಿಗಳ ವೇಷವನ್ನು ಧರಿಸಿ ವೃತ್ತಿಗಾಗಿ ವಾಣಿಜ್ಯವನ್ನು ಮಾಡುತ್ತಾರೆ.

ಮಿಥ್ಯಾಚ ನಖರೋಮಾಣಿ ಧಾರಯಂತಿ ತದಾ ದ್ವಿಜಾಃ ।
ಅರ್ಥಲೋಭಾನ್ನರವ್ಯಾಘ್ರ ತಥಾ ಚ ಬ್ರಹ್ಮಚಾರಿಣಃ ॥೪೪॥

ಬ್ರಾಹ್ಮಣರು ಯಾವ ವ್ರತದ ಉದ್ದೇಶವಿಲ್ಲದೆ ನಖರೋಮಗಳನ್ನು ಬೆಳೆಸುತ್ತಾರೆ. ಎಲೈ ನರವ್ಯಾಘ್ರನೇ, ಹಣವನ್ನು ಉಳಿಸುವ ಆಸೆಯಿಂದ ಬ್ರಹ್ಮಚಾರಿಗಳಾಗುತ್ತಾರೆ.

ಆಶ್ರಮೇಷು ವೃಥಾಚಾರಾಃ ಪಾನಪಾ ಗುರುತಲ್ಪಗಾಃ ।
ಇಹಲೌಕಿಕಮೀಹಂತೇ ಮಾಂಸಶೋಣಿತವರ್ಧನಮ್ ॥೪೫॥

ಪಾರಲೌಕಿಕಕಾರ್ಯೇಷು ಪ್ರಮತ್ತಾ ಭೃಶನಾಸ್ತಿಕಾಃ ॥೪೬॥

ಆಶ್ರಮದಲ್ಲಿ ವಾಸಿಸುವವರು ವ್ಯರ್ಥವಾದ ಆಚಾರದಲ್ಲಿ ನಿರತರಾಗಿ ಮದ್ಯಪಾನ ಮತ್ತು ಗುರುತಲ್ಪಗಮನದಲ್ಲಿ ಆಸಕ್ತರಾಗಿ ಈ ಲೋಕದ ಸುಖವನ್ನು ಬಯಸಿ ತಮ್ಮ ದೇಹದ ಮಾಂಸರಕ್ತಗಳನ್ನು ಬೆಳೆಸುವುದರಲ್ಲಿ ಆಸಕ್ತರಾಗಿರುತ್ತಾರೆ. ಪರಲೋಕದ ಕಾರ್ಯಗಳಲ್ಲಿ ಪ್ರಮಾದವನ್ನು ಹೊಂದಿ ಬಹಳ ನಾಸ್ತಿಕರಾಗಿರುತ್ತಾರೆ.

ಬಹುಪಾಷಂಡಸಂಕೀರ್ಣಾಃ ಪರಾನ್ನಗುಣವಾದಿನಃ ।
ಆಶ್ರಮಾ ಮನುಜವ್ಯಾಘ್ರ ಭವಿಷ್ಯಂತಿ ಯುಗಕ್ಷಯೇ ॥೪೭॥

ಎಲೈ ಮನುಜವ್ಯಾಘ್ರನೇ, ಯುಗಕ್ಷಯದ ಸಮಯದಲ್ಲಿ ಆಶ್ರಮಗಳು ಅನೇಕ ಪಾಷಂಡಿಗಳಿಂದ ತುಂಬಿಹೋಗುವವು. ಆಶ್ರಮವಾಸಿಗಳು ಪರಾನ್ನವನ್ನು ಹೊಗಳುವರು.

ಯಥರ್ತುವರ್ಷೀ ಭಗವಾನ್ ನ ತಥಾ ಪಾಕಶಾಸನಃ ।
ನ ಚಾಪಿ ಸರ್ವಬೀಜಾನಿ ಸಮ್ಯಗ್ರೋಹಂತಿ ಭಾರತ ॥೪೮॥

ಎಲೈ ಭಾರತನೇ, ಆಗ ಪೂಜ್ಯನಾದ ಇಂದ್ರನು ಕಾಲಕ್ಕೆ ಸರಿಯಾಗಿ ಮಳೆಯನ್ನು ಸುರಿಸುವುದಿಲ್ಲ ಮತ್ತು ಎಲ್ಲಾ ಬೀಜಗಳೂ ಸಹ ಚೆನ್ನಾಗಿ ಮೊಳಕೆ ಒಡೆದು ಮೇಲೆ ಬರುವುದಿಲ್ಲ.

ಹಿಂಸಾಭಿರಾಮಶ್ಚ ಜನಸ್ತಥಾ ಸಂಪದ್ಯತೇಽಶುಚಿಃ ।
ಫಲಂ ಧರ್ಮಸ್ಯ ರಾಜೇಂದ್ರ ಸರ್ವತ್ರ ಪರಿಹೀಯತೇ ।
ಅಧರ್ಮಫಲಮತ್ಯರ್ಥಂ ತದಾ ಭವತಿ ಚಾನಘ ॥೪೯॥

ಜನರು ಅಶುಚಿಗಳಾಗಿ ಹಿಂಸೆಯಲ್ಲಿ ಸಂತೋಷವನ್ನು ಪಡುತ್ತಾರೆ. ಎಲೈ ರಾಜೇಂದ್ರನೇ, ಧರ್ಮದ ಫಲವು ಎಲ್ಲಕಡೆಯಲ್ಲಿಯೂ ಕ್ಷೀಣವಾಗುತ್ತದೆ. ಎಲೈ ಅನಘನೇ, ಅಧರ್ಮದ ಫಲವು ವೃದ್ಧಿಯನ್ನು ಹೊಂದುತ್ತದೆ.

ತದಾ ಚ ಪೃಥಿವೀಪಾಲ ಯೋ ಭವೇದ್ ಧರ್ಮಸಂಯುತಃ ।
ಅಲ್ಪಾಯುಃ ಸ ಹಿ ಮಂತವ್ಯೋ ನ ಹಿ ಧರ್ಮೋಽಸ್ತಿ ಕಶ್ಚನ ॥೫೦॥

ಎಲೈ ರಾಜನೇ, ಆಗ ಯಾವನಾದರೂ ಧರ್ಮಯುಕ್ತನಾದರೆ ಅವನು ಅಲ್ಪಾಯುಷನೆಂದು ತಿಳಿಯಬೇಕು. ಆಗ ಯಾವ ಧರ್ಮವೂ ಉಳಿಯುವುದಿಲ್ಲ.

ಭೂಯಿಷ್ಠಂ ಕೂಟಮಾನೈಶ್ಚ ಪಣ್ಯಂ ವಿಕ್ರೀಣತೇ ಜನಾಃ ।
ವಣಿಜಶ್ಚ ನರವ್ಯಾಘ್ರ ಬಹುಮಾಯಾ ಭವಂತ್ಯುತ ॥೫೧॥

ಎಲೈ ನರವ್ಯಾಘ್ರನೇ, ವರ್ತಕ ಜನಗಳು ಆಗ ಮೋಸದ ಅಳತೆಗಳಿಂದ ಕ್ರಯದ ವಸ್ತುಗಳನ್ನು ಅಳೆಯುತ್ತಾರೆ. ಮತ್ತು ಬಹಳ ವಂಚನೆಯನ್ನು ಮಾಡುತ್ತಾರೆ.

ಧರ್ಮಿಷ್ಠಾಃ ಪರಿಹೀಯಂತೇ ಪಾಪೀಯಾನ್ ವರ್ಧತೇ ಜನಃ ।
ಧರ್ಮಸ್ಯ ಬಲಹಾನಿಃ ಸ್ಯಾದಧರ್ಮಶ್ಚ ಬಲೀ ತಥಾ ॥೫೨॥

ಧರ್ಮಿಷ್ಠರು ಕ್ಷಯವನ್ನು ಹೊಂದುತ್ತಾರೆ, ಪಾಪಿಗಳು ಅಭಿವೃದ್ಧಿಯನ್ನು ಹೊಂದುತ್ತಾರೆ. ಧರ್ಮದ ಬಲವು ಕುಗ್ಗುತ್ತದೆ, ಅಧರ್ಮದ ಬಲವು ಹೆಚ್ಚುತ್ತದೆ.

ಅಲ್ಪಾಯುಷೋ ದರಿದ್ರಾಶ್ಚ ಧರ್ಮಿಷ್ಠಾ ಮಾನವಾಸ್ತಥಾ ।
ದೀರ್ಘಾಯುಷಃ ಸಮೃದ್ಧಾಶ್ಚ ವಿಧರ್ಮಾಣೋ ಯುಗಕ್ಷಯೇ ।
ನಾಗರಾಣಾಂ ವಿಹಾರೇಷು ವಿಧರ್ಮಾಣೋ ಯುಗಕ್ಷಯೇ ।
ಅಧರ್ಮಿಷ್ಠೈರುಪಾಯೈಶ್ಚ ಪ್ರಜಾ ವ್ಯವಹರಂತ್ಯುತ ॥೫೩॥

ಸಂಚಯೇನ ತಥಾಲ್ಪೇನ ಭವಂತ್ಯಾಢ್ಯಮದಾನ್ವಿತಾಃ ॥೫೪॥

ಧರ್ಮಿಷ್ಠರಾದ ಮನುಷ್ಯರು ಅಲ್ಪಾಯುಷಿಗಳೂ ಮತ್ತು ದರಿದ್ರರೂ ಆಗುತ್ತಾರೆ. ಯುಗಕ್ಷಯದ ಕಾಲದಲ್ಲಿ ಅಧರ್ಮವನ್ನು ಮಾಡುವವರು ದೀರ್ಘಾಯುಷಿಗಳು ಮತ್ತು ಸಂಪದ್ಯುಕ್ತರಾಗುತ್ತಾರೆ. ನಗರದ ವಿಹಾರದ ಸ್ಥಾನಗಳಲ್ಲೆಲ್ಲಾ ಅಧರ್ಮಿಷ್ಠರೇ ಕಂಡುಬರುತ್ತಾರೆ. ಪ್ರಜೆಗಳು ಅಧರ್ಮದ ಉಪಾಯಗಳಿಂದ ವ್ಯವಹಾರವನ್ನು ಮಾಡುತ್ತಾರೆ. ಸ್ವಲ್ಪ ಧನ ಸಂಚಯವನ್ನು ಮಾಡಿದರೂ ಅವರಿಗೆ ತಾವು ಶ್ರೀಮಂತರು ಎಂಬ ಮದ ಉಂಟಾಗುತ್ತದೆ.

ಧನಂ ವಿಶ್ವಾಸತೋ ನ್ಯಸ್ತಂ ಮಿಥೋ ಭೂಯಿಷ್ಠಶೋ ನರಾಃ ।
ನೈತದಸ್ತೀತಿ ಮನುಜಾ ವರ್ತಂತೇ ನಿರಪತ್ರಪಾಃ ।
ಹರ್ತುಂ ವ್ಯವಸಿತಾ ರಾಜನ್ ಪಾಪಾಚಾರಸಮನ್ವಿತಾಃ ॥೫೫॥

ವಿಶ್ವಾಸದಿಂದ ರಕ್ಷಣೆಗಾಗಿ ಇಟ್ಟು ಧನವನ್ನು ಪಾಪಾಚಾರಸಮನ್ವಿತರಾದ ಮನುಷ್ಯರು ಇಡಲೇ ಇಲ್ಲ ಎಂದು ನಾಚಿಕೆ ಇಲ್ಲದೆ ಹೇಳಿ ಆ ಧನವನ್ನು ಅಪಹರಿಸಲು ನಿರ್ಧರಿಸುತ್ತಾರೆ.

ಪುರುಷಾದಾನಿ ಸತ್ತ್ವಾನಿ ಪಕ್ಷಿಣೋಽಥ ಮೃಗಾಸ್ತಥಾ ।
ನಗರಾಣಾಂ ವಿಹಾರೇಷು ಚೈತ್ಯೇಷ್ವಪಿ ಚ ಶೇರತೇ ॥೫೬॥

ಮನುಷ್ಯರನ್ನು ಭಕ್ಷಿಸುವ ಪ್ರಾಣಿಗಳು, ಪಕ್ಷಿಗಳು ಮತ್ತು ಮೃಗಗಳು ಮತ್ತು ದೇವಾಲಯಗಳಲ್ಲಿ ವಾಸಿಸುತ್ತವೆ.

ಸಪ್ತವರ್ಷಾಷ್ಟವರ್ಷಾಶ್ಚ ಸ್ತ್ರಿಯೋ ಗರ್ಭಧರಾ ನೃಪ ।
ದಶದ್ವಾದಶವರ್ಷಾಣಾಂ ಪುಂಸಾಂ ಪುತ್ರಃ ಪ್ರಜಾಯತೇ ॥೫೭॥

ಏಳೆಂಟು ವರ್ಷದ ಕನ್ಯೆಯರು ಗರ್ಭಧರಿಸುತ್ತಾರೆ. ಹತ್ತು ಹನ್ನೆರಡು ವರ್ಷದ ಪುರುಷರಿಗೆ ಪುತ್ರರು ಜನಿಸುತ್ತಾರೆ.

ಭವಂತಿ ಷೋಡಶೇ ವರ್ಷೇ ನರಾಃ ಪಲಿತಿನಸ್ತಥಾ ।
ಆಯುಃಕ್ಷಯೋ ಮನುಷ್ಯಾಣಾಂ ಕ್ಷಿಪ್ರಮೇವ ಪ್ರಪದ್ಯತೇ ॥೫೮॥

ಹದಿನಾರು ವರ್ಷಕ್ಕೆ ಮನುಷ್ಯರು ನೆರೆ ಮತ್ತು ಸುಕ್ಕುಗಳಿಂದ ಕೂಡಿದವರಾಗುತ್ತಾರೆ. ಶೀಘ್ರದಲ್ಲಿಯೇ ಅವರಿಗೆ ಮರಣವು ಉಂಟಾಗುತ್ತದೆ.

ಕ್ಷೀಣಾಯುಷೋ ಮಹಾರಾಜ ತರುಣಾ ವೃದ್ಧಶೀಲಿನಃ ।
ತರುಣಾನಾಂ ಚ ಯಚ್ಚೀಲಂ ತದ್‌ವೃದ್ಧೇಷು ಪ್ರಜಾಯತೇ ॥೫೯॥

ಎಲೈ ಮಹಾರಾಜನೇ, ಕ್ಷೀಣಾಯುಷಿಗಳಾದ ತರುಣರು ವೃದ್ಧರಂತೆ ನಡೆದುಕೊಳ್ಳುತ್ತಾರೆ. ವೃದ್ಧರಲ್ಲಿ ತರುಣರ ಸ್ವಭಾವವು ಉಂಟಾಗುತ್ತದೆ.

ವಿಪರೀತಾಸ್ತದಾ ನಾರ್ಯೋ ವಂಚಯಿತ್ವಾऽರ್ಹತಃ ಪತೀನ್ ।
ವ್ಯಚ್ಚರಂತ್ಯಪಿ ದುಃಶೀಲಾ ದಾಸ್ಯೈಃ ಪಶುಭಿರೇವ ಚ ॥೬೦॥

ನಾರಿಯರು ಧರ್ಮಕ್ಕೆ ವಿರುದ್ಧವಾಗಿ ನಡೆದು ತಮ್ಮ ಯೋಗ್ಯರಾದ ಪತಿಗಳನ್ನು ವಂಚಿಸಿ ದುಶ್ಶೀಲರಾಗಿ ಸೇವಕರ ಜೊತೆಯಲ್ಲಿ ಮತ್ತು ಪಶುಗಳ ಜೊತೆಯಲ್ಲಿ ಮೈಥುನವನ್ನು ಮಾಡುತ್ತಾರೆ.

ವೀರಪತ್ನ್ಯಸ್ತಥಾ ನಾರ್ಯಃ ಸಂಶ್ರಯಂತಿ ನರಾನ್ನೃಪ ।
ಭರ್ತಾರಮಪಿ ಜೀವಂತಮನ್ಯಾನ್ ವ್ಯಭಿಚರಂತ್ಯುತ ॥೬೦.೧॥

ಎಲೈ ರಾಜನೇ, ವೀರಪತ್ನಿಯರೂ ಸಹ ಪರಪುರುಷರನ್ನು ಆಶ್ರಯಿಸುತ್ತಾರೆ. ಪತಿಯು ಬದುಕಿದ್ದರೂ ಸಹ ವ್ಯಭಿಚಾರದಲ್ಲಿ ತೊಡಗುತ್ತಾರೆ.

ತಸ್ಮಿನ್ ಯುಗಸಹಸ್ರಾಂತೇ ಸಂಪ್ರಾಪ್ತೇ ಚಾಯುಷಃ ಕ್ಷಯೇ ।
ಅನಾವೃಷ್ಟಿರ್ಮಹಾರಾಜ ಜಾಯತೇ ಬಹುವಾರ್ಷಿಕೀ ॥೬೧॥

ಎಲೈ ಮಹಾರಾಜನೇ, ಯುಗಸಹಸ್ರಾಂತದಲ್ಲಿ ಎಲ್ಲರ ಆಯುಸ್ಸಿನ ಕ್ಷಯವು ಪ್ರಾಪ್ತವಾದಾಗ ಅನೇಕ ವರ್ಷಗಳ ಕಾಲ ಅನಾವೃಷ್ಟಿ ಉಂಟಾಗುತ್ತದೆ.

ತತಸ್ತಾನ್ಯಲ್ಪಸಾರಾಣಿ ಸತ್ತ್ವಾನಿ ಕ್ಷುಧಿತಾನಿ ವೈ ।
ಪ್ರಲಯಂ ಯಾಂತಿ ಭೂಯಿಷ್ಠಂ ಪೃಥಿವ್ಯಾಂ ಪೃಥಿವೀಪತೇ ॥೬೨॥

ಎಲೈ ಪೃಥಿವೀಪತಿಯೇ, ಆಗ ಅಲ್ಪಸತ್ತ್ವವುಳ್ಳ ಭೂಮಿಯಲ್ಲಿ ವಾಸಿಸುವ ಪ್ರಾಣಿಗಳೆಲ್ಲವೂ ಹಸಿವಿನಿಂದ ಹೆಚ್ಚಾಗಿ ನಾಶವನ್ನು ಹೊಂದುತ್ತವೆ.

ತತೋ ದಿನಕರೈರ್ದೀಪ್ತೈಃ ಸಪ್ತಭಿರ್ಮನುಜಾಧಿಪ ।
ಪೀಯತೇ ಸಲಿಲಂ ಸರ್ವಂ ಸಮುದ್ರೇಷು ಸರಿತ್ಸು ಚ ॥೬೩॥

ಎಲೈ ಮನುಜಾಧಿಪನೇ, ಅನಂತರ ಏಳು ಸೂರ್ಯರು ಪ್ರಖರವಾದ ತಮ್ಮ ಕಿರಣಗಳಿಂದ ಸಮುದ್ರ ಮತ್ತು ನದಿಗಳಲ್ಲಿರುವ ಎಲ್ಲಾ ಜಲವನ್ನೂ ಹೀರುತ್ತಾರೆ.

ಯಚ್ಚ ಕಾಷ್ಠಂ ತೃಣಂ ಚಾಪಿ ಶುಷ್ಕಂ ಚಾರ್ದ್ರಂ ಚ ಭಾರತ ।
ಸರ್ವಂ ತದ್ ಭಸ್ಮಸಾದ್ಭೂತಂ ದೃಶ್ಯತೇ ಭರತರ್ಷಭ ॥೬೪॥

ಎಲೈ ಭರತರ್ಷಭನೇ, ಒಣಗಿದ ಅಥವಾ ಹಸಿಯಾದ ಕಾಷ್ಠ, ತೃಣ ಮೊದಲಾದವು ಎಲ್ಲವೂ ಬೂದಿಯಾಗುವುದು ಕಂಡುಬರುತ್ತದೆ.

ತತಃ ಸಂವರ್ತಕೋ ವಹ್ನಿರ್ವಾಯುನಾ ಸಹ ಭಾರತ ।
ಲೋಕಮಾವಿಶತೇ ಪೂರ್ವಮಾದಿತ್ಯೈರುಪಶೋಷಿತಮ್ ॥೬೫॥

ಎಲೈ ಭಾರತನೇ, ಹೀಗೆ ಮೊದಲು ಸೂರ್ಯರಿಂದ ಶೋಷಣೆಗೊಂಡ ಜಗತ್ತಿನಲ್ಲಿ ಸಂವರ್ತಕವಹ್ನಿಯು ಮತ್ತು ವಾಯುವು ಉಂಟಾಗುತ್ತದೆ.

ತತಃ ಸ ಪೃಥಿವೀಂ ಭಿತ್ತ್ವಾ ಪ್ರವಿಶ್ಯ ಚ ರಸಾತಳಮ್ ।
ದೇವದಾನವಯಕ್ಷಾಣಾಂ ಭಯಂ ಜನಯತೇ ಮಹತ್ ॥೬೬॥

ಅನಂತರ ಆ ವಹ್ನಿಯು ಭೂಮಿಯನ್ನು ಭೇದಿಸಿ ರಸಾತಳವನ್ನು ಪ್ರವೇಶಿಸಿ ದೇವದಾನವ ಯಕ್ಷರಿಗೆ ದೊಡ್ಡ ಭಯವನ್ನು ಉಂಟುಮಾಡುತ್ತದೆ.

ನಿರ್ದಹನ್ ನಾಗಲೋಕಂ ಚ ಯಚ್ಚಕಿಂಚಿತ್ ಕ್ಷಿತಾವಿಹ ।
ಅಧಸ್ತಾತ್ ಪೃಥಿವೀಪಾಲ ಸರ್ವಂ ನಾಶಯತೇ ಕ್ಷಣಾತ್ ॥೬೭॥

ಎಲೈ ಪೃಥಿವೀಪಾಲಕನೇ, ಭೂಮಿಯ ಮೇಲಿದ್ದ ಎಲ್ಲವನ್ನೂ ಸುಡುತ್ತಾ ಭೂಮಿಯ ಕೆಳಗೆ ನಾಗಲೋಕದಲ್ಲಿರುವ ಎಲ್ಲವನ್ನೂ ಒಂದುಕ್ಷಣದಲ್ಲಿ ಸುಟ್ಟು ನಾಶವನ್ನು ಮಾಡುತ್ತದೆ.

ತತೋ ಯೋಜನವಿಂಶಾನಾಂ ಸಹಸ್ರಾಣಿ ಶತಾನಿ ಚ ।
ನಿರ್ದಹತ್ಯಶಿವೋ ವಾಯುಃ ಸ ಚ ಸಂವರ್ತಕೋಽನಲಃ ॥೬೮॥

ಅನಂತರ ಆ ಸಂವರ್ತಕವಹ್ನಿಯು ಇಪ್ಪತ್ತೆರಡು ಸಾವಿರ ಯೋಜನ ಎತ್ತರವಾದ ಜ್ವಾಲೆಗಳಿಂದ ಕ್ರೂರವಾದ ವಾಯುವಿನ ಜೊತೆಯಲ್ಲಿ ಸೇರಿ ಜಗತ್ತನ್ನು ಸುಡುತ್ತದೆ. ಅಗ್ನಿಜ್ವಾಲೆಗಳ ಪ್ರಕಾಶವು ಸ್ವರ್ಗಲೋಕವನ್ನೂ ತಲುಪುತ್ತದೆ.

ಸದೇವಾಸುರಗಂಧರ್ವಂ ಸಯಕ್ಷೋರಗರಾಕ್ಷಸಮ್ ।
ತತೋ ದಹತಿ ದೀಪ್ತಃ ಸ ಸರ್ವಮೇವ ಜಗದ್ ವಿಭುಃ ॥೬೯॥

ಸಮರ್ಥವಾದ ಆ ವಹ್ನಿಯು ಪ್ರಕಾಶಮಾನವಾಗಿ ದೇವಾಸುರಗಂಧರ್ವರನ್ನೂ, ಯಕ್ಷರಾಕ್ಷಸರನ್ನೂ ಎಲ್ಲವನ್ನೂ ಸುಡುತ್ತದೆ.

ತತೋ ಗಜಕುಲಪ್ರಖ್ಯಾಸ್ತಡಿನ್ ಮಾಲಾವಿಭೂಷಿತಾಃ ।
ಉತ್ತಷ್ಠಂತಿ ಮಹಾಮೇಘಾ ನಭಸ್ಯದ್ಭುತದರ್ಶನಾಃ ॥೭೦॥

ಅನಂತರ ಆನೆಗಳ ಸಮೂಹವನ್ನು ಹೋಲುವ ಮಿಂಚುಗಳ ಮಾಲೆಯಿಂದ ವಿಭೂಷಿತವಾದ ಅದ್ಭುತವಾಗಿ ಕಾಣುವ ಮಹಾಮೇಘಗಳು ಆಕಾಶದಲ್ಲಿ ಏಳುತ್ತವೆ.

ಕೇಚಿನ್ನೀಲೋತ್ಪಲಶ್ಯಾಮಾಃ ಕೇಚಿತ್ ಕುಮುದಸನ್ನಿಭಾಃ ।
ಕೇಚಿತ್ ಕಿಂಚಲ್ಕಸಂಕಾಶಾಃ ಕೇಚಿತ್ ಪೀತಾಃ ಪಯೋಧರಾಃ ॥೭೧॥

ಕೆಲವು ಮೋಡಗಳು ನೈದಿಲೆಯ ಬಣ್ಣವನ್ನೂ, ಕೆಲವು ಕುಮುದದ ಬಣ್ಣವನ್ನೂ, ಕೆಲವು ಕೇಸರದ ಬಣ್ಣವನ್ನೂ, ಕೆಲವು ಹಳದಿಯ ಬಣ್ಣವನ್ನೂ ಹೊಂದಿರುತ್ತವೆ.

ಕೇಚಿದ್ಧರಿದ್ರಸಂಕಾಶಾಃ ಕಾರಂಡವನಿಭಾಸ್ತಥಾ ।
ಕೇಚಿತ್ ಕಮಲಪತ್ರಾಭಾಃ ಕೇಚಿದ್ಧಿಂಗುಲಸಪ್ರಭಾಃ ॥೭೨॥

ಕೆಲವು ಮೋಡಗಳು ಅರಿಶಿನದ ಬಣ್ಣಗಳು, ಕೆಲವು ಮೋಡಗಳು ಕಾರಂಡದ ಬಣ್ಣವನ್ನೂ, ಕೆಲವು ಮೋಡಗಳು ಕಮಲಪತ್ರಗಳ ಬಣ್ಣವನ್ನೂ, ಕೆಲವು ಮೋಡಗಳು ಇಂಗುಲವೃಕ್ಷದ ಬಣ್ಣವನ್ನೂ ಹೊಂದಿರುತ್ತವೆ.

ಕೇಚಿತ್ ಪುರವರಾಕಾರಾಃ ಕೇಚಿತ್ ಗಜಕುಲೋಪಮಾಃ ।
ಕೇಚಿದಂಜನಸಂಕಾಶಾಃ ಕೇಚಿನ್ಮಕರಸನ್ನಿಭಾಃ ॥೭೩॥

ಕೆಲವು ಮೋಡಗಳು ನಗರಗಳಂತೆ ತೋರುತ್ತವೆ. ಇನ್ನು ಕೆಲವು ಗಜಸಮೂಹಗಳನ್ನು ಹೋಲುತ್ತವೆ. ಕೆಲವು ಮೊಸಳೆಯನ್ನು ಹೋಲುತ್ತವೆ. ಇನ್ನು ಕೆಲವು ಕಾಡಿಗೆಯಂತೆ ಕಪ್ಪಾಗಿರುತ್ತವೆ.

ವಿದ್ಯುನ್‌ಮಾಲಾಪಿನದ್ಧಾಂಗಾಃ ಸಮುತ್ತಿಷ್ಠಂತಿ ವೈ ಘನಾಃ ।
ಘೋರರೂಪಾ ಮಹಾರಾಜ ಘೋರಸ್ವನನಿನಾದಿತಾಃ ॥೭೪॥

ಎಲೈ ಮಹಾರಾಜನೇ, ಮಿಂಚಿನ ಪಂಕ್ತಿಗಳಿಂದ ಕೂಡಿದವುಗಳಾಗಿ ಭಯಂಕರವಾದ ಆಕಾರವನ್ನು ಮತ್ತು ಭಯಂಕರವಾದ ಗುಡುಗನ್ನು ಉಂಟು ಮಾಡುತ್ತಾ ಮೋಡಗಳು ಮೇಲೇಳುತ್ತವೆ.

ತತೋ ಜಲಧರಾಃ ಸರ್ವೇ ವ್ಯಾಪ್ನುವಂತಿ ನಭಃ ಸ್ಥಲಮ್ ।
ಗರ್ಜಂತಃ ಪೃಥಿವೀಪಾಲ ಪೃಥಿವೀಧರಸನ್ನಿಭಾಃ ॥೭೫॥

ಎಲೈ ಪೃಥಿವೀಪಾಲನೇ, ಅನಂತರ ಪರ್ವತಗಳಂತೆ ತೋರುವ ಎಲ್ಲ ಮೋಡಗಳೂ ಗುಡುಗಿನ ಗರ್ಜನೆಗಳನ್ನು ಮಾಡುತ್ತಾ ಆಕಾಶವನ್ನು ವ್ಯಾಪಿಸುತ್ತವೆ.

ತೈರಿಯಂ ಪೃಥಿವೀ ಸರ್ವಾ ಸಪರ್ವತವನಾಕರಾ ।
ಆಪೂರ್ಯತೇ ಮಹಾರಾಜ ಸಲಿಲೌಘಪರಿಪ್ಲುತಾ ॥೭೬॥

ಎಲೈ ಮಹಾರಾಜನೇ, ಆ ಮೋಡಗಳು ಮಳೆಯ ಪ್ರವಾಹವನ್ನೇ ಸುರಿಸಿ ಪರ್ವತ, ವನಗಳಿಂದ ತುಂಬಿದ ಎಲ್ಲಾ ಭೂಮಿಯನ್ನೂ ನೀರಿನಿಂದ ತುಂಬುತ್ತವೆ.

ತತಸ್ತೇ ಜಲದಾ ಘೋರಾ ರಾವಿಣಃ ಪುರುಷರ್ಷಭ ।
ಸರ್ವತಃ (ಪರ್ವತಾನ್) ಪ್ಲಾವಯಂತ್ಯಾಶು ಚೋದಿತಾಃ ಪರಮೇಷ್ಠಿನಾ ॥

ಎಲೈ ಪುರುಷರ್ಷಭನೇ, ಅನಂತರ ಆ ಮೋಡಗಳು ಬ್ರಹ್ಮದೇವರ ಪ್ರೇರಣೆಗೆ ಅನುಸಾರವಾಗಿ ಗರ್ಜನೆಯನ್ನು ಮಾಡುತ್ತಾ ಎಲ್ಲವನ್ನೂ ಶೀಘ್ರದಲ್ಲಿ ಕೊಚ್ಚಿಹಾಕುತ್ತವೆ.

ವರ್ಷಮಾಣಾ ಮಹತ್ತೋಯಂ ಪೂರಯಂತೋ ವಸುಂಧರಾಮ್ ।
ಸುಘೋರಮಶಿವಂ ರೌದ್ರಂ ನಾಶಯಂತಿ ಚ ಪಾವಕಮ್ ॥೭೮॥

ದೊಡ್ಡ ಮಳೆಯನ್ನು ಕರೆದು ಭೂಮಿಯನ್ನು ನೀರಿನಿಂದ ತುಂಬಿ ಭಯಂಕರವಾಗಿದ್ದ ಅಮಂಗಳವಾದ, ಘೋರವಾದ ಸಂವರ್ತಕವಹ್ನಿಯನ್ನು ನಾಶಮಾಡುತ್ತವೆ.

ತತೋ ದ್ವಾದಶವರ್ಷಾಣಿ ಪಯೋದಾಸ್ತ ಉಪಪ್ಲವೇ ।
ಧಾರಾಭಿಃ ಪೂರಯಂತೋ ವೈ ಚೋದ್ಯಮಾನಾ ಮಹಾತ್ಮನಾ ॥೭೯॥

ಲೋಕಕ್ಷಯದ ಕಾಲದಲ್ಲಿ ಬ್ರಹ್ಮದೇವರಿಂದ ಪ್ರೇರಿತವಾದ ಆ ಮೇಘಗಳು ತಮ್ಮ ಮಳೆಯ ಧಾರೆಯಿಂದ ಎಲ್ಲವನ್ನೂ ತುಂಬುತ್ತಾ ಹನ್ನೆರಡು ವರ್ಷಗಳವರೆಗೆ ಮಳೆಯನ್ನು ಸುರಿಸುತ್ತವೆ.

ತತಃ ಸಮುದ್ರಃ ಸ್ವಾಂ ವೇಲಾಮತಿಕ್ರಾಮತಿ ಭಾರತ ।
ಪರ್ವತಾಶ್ಚ ವಿದೀರ್ಯಂತೇ ಮಹೀ ಚಾಪ್ಸು ನಿಮಜ್ಜತಿ ॥೮೦॥

ಎಲೈ ಭಾರತನೇ, ಆಗ ಸಮುದ್ರವು ತನ್ನ ಎಲ್ಲೆಯನ್ನು ಮೀರಿ ಉಕ್ಕುತ್ತದೆ. ಪರ್ವತಗಳು ಬಿರಿಯುತ್ತದೆ ಮತ್ತು ಭೂಮಿಯು ನೀರಿನಲ್ಲಿ ಮುಳುಗಿ ಹೋಗುತ್ತದೆ.

ಸರ್ವತಃ ಸಹಸಾ ಭ್ರಾಂತಾಸ್ತೇ ಪಯೋದಾ ನಭಸ್ತಳಮ್ ।
ಸಂವೇಷ್ಟಯಿತ್ವಾ ನಶ್ಯಂತಿ ವಾಯುವೇಗಪರಾಹತಾಃ ॥೮೧॥

ಅನಂತರ ವಾಯುವೇಗಕ್ಕೆ ಸಿಲುಕಿದ ಆ ಮೋಡಗಳು ನಭಸ್ತಳದಲ್ಲಿ ಎಲ್ಲ ಕಡೆಯಲ್ಲಿಯೂ ಸುತ್ತುತ್ತಾ ಶೀಘ್ರವಾಗಿ ನಾಶವನ್ನು ಹೊಂದುತ್ತವೆ.

ತತಸ್ತಂ ಮಾರುತಂ ಘೋರಂ ಸ್ವಯಂಭೂರ್ಮನುಜಾಧಿಪ ।
ಆದಿಃ ಪದ್ಮಾಲಯೋ ದೇವಃ ಪೀತ್ವಾ ಸ್ವಪಿತಿ ಭಾರತ ॥೮೨॥

ಎಲೈ ಭಾರತನೇ, ಮನುಜಾಧಿಪನೇ, ಆಗ ಪದ್ಮವಾಸಿಯೂ ಮತ್ತು ಜಗದಾದಿಯೂ ಆದ ಬ್ರಹ್ಮದೇವರು ಆ ಘೋರವಾದ ವಾಯುವನ್ನು ಪಾನಮಾಡಿ ನಿದ್ರೆ ಮಾಡುತ್ತಾರೆ.

ತಸ್ಮಿನ್ನೇಕಾರ್ಣವೇ ಘೋರೇ ನಷ್ಟೇ ಸ್ಥಾವರಜಂಗಮೇ ।
ನಷ್ಟೇ ದೇವಾಸುರಗಣೇ ಯಕ್ಷರಾಕ್ಷಸವರ್ಜಿತೇ ॥೮೩॥

ನಿರ್ಮನುಷ್ಯೇ ಮಹೀಪಾಲ ನಿಃಶ್ವಾಪದಮಹೀರುಹೇ ।
ಅನಂತರಿಕ್ಷೇ ಲೋಕೇಽಸ್ಮಿನ್ ಭ್ರಮಾಮ್ಯೇಕೋಽಹಮಾಹತಃ ॥೮೪॥

ಅಂತಹ ಸ್ಥಾವರ ಜಂಗಮ ರಹಿತವಾದ ದೇವಾಸುರ ಸಮೂಹರಹಿತವಾದ, ಯಕ್ಷರಾಕ್ಷಸಶೂನ್ಯವಾದ, ಮನುಷ್ಯರಹಿತವಾದ, ವೃಕ್ಷಗಳಿಂದಲೂ ಕ್ರೂರ ಪ್ರಾಣಿಗಳಿಂದಲೂ ರಹಿತವಾದ ಅಂತರಿಕ್ಷರಹಿತವಾದ ಏಕಾರ್ಣವ ಲೋಕದಲ್ಲಿ ನಾನೊಬ್ಬನೇ ಆ ನೀರಿನ ಹೊಡೆತಕ್ಕೆ ಸಿಕ್ಕಿ ಸಂಚರಿಸುತ್ತೇನೆ (ಸಂಚರಿಸಿದೆನು).

ಏಕಾರ್ಣವೇ ಜಲೇ ಘೋರೇ ವಿಚರನ್ ಪಾರ್ಥಿವೋತ್ತಮ ।
ಅಪಶ್ಯನ್ ಸರ್ವಭೂತಾನಿ ವೈಕ್ಲವ್ಯಮಗಮಂ ತತಃ ॥೮೫॥

ಎಲೈ ಪಾರ್ಥಿವಶ್ರೇಷ್ಠನೇ, ಅಂತಹ ಏಕಾರ್ಣವವಾದ ಘೋರ ಜಲದಲ್ಲಿ ಸಂಚರಿಸುತ್ತಾ ಬೇರೆ ಯಾವ ಪ್ರಾಣಿಯನ್ನೂ ಕಾಣದೆ ನಾನು ಮನಸ್ಸಿನಲ್ಲಿ ಬಹಳ ವಿಷಾದವನ್ನು ಹೊಂದಿದೆನು.

ತತಃ ಸುದೀರ್ಘಂ ಗತ್ವಾಽಹಂ ಪ್ಲವಮಾನೋ ನರಾಧಿಪ ।
ಶ್ರಾಂತಃ ಕ್ವಚಿನ್ನ ಶರಣಂ ಲಭಾಮ್ಯಹಮತಂದ್ರಿತಃ ॥೮೬॥

ಎಲೈ ನರಾಧಿಪನೇ, ಅನಂತರ ನಾನು ಬಹುಕಾಲದವರೆಗೆ ಆಲಸ್ಯವಿಲ್ಲದೆ ಆ ಜಲದಲ್ಲಿ ಎಷ್ಟು ಈಜಿದಾದರೂ ಎಲ್ಲಿಯೂ ಒಂದು ಆಶ್ರಯವು ದೊರೆಯುವುದಿಲ್ಲ.

ತತಃ ಕದಾಚಿತ್ ಪಶ್ಯಾಮಿ ತಸ್ಮಿನ್ ಸಲಿಲಸಂಚಯೇ ।
ನ್ಯಗ್ರೋಧಂ ಸುಮಹಾಂತಂ ವೈ ವಿಶಾಲಂ ಪೃಥಿವೀಪತೇ ॥೮೭॥

ಎಲೈ ಪೃಥಿವೀಪತಿಯೇ, ಆಗ ಒಮ್ಮೆ ನಾನು ಆ ಜಲರಾಶಿಯಲ್ಲಿ ವಿಶಾಲವಾದ ಒಂದು ದೊಡ್ಡ ಆಲದ ಮರವನ್ನು ನೋಡುತ್ತೇನೆ.

ಶಾಖಾಯಾಂ ತಸ್ಯ ವೃಕ್ಷಸ್ಯ ವಿಸ್ತೀರ್ಣಾಯಾಂ ನರಾಧಿಪ ।
ಪರ್ಯಂಕೇ ಪೃಥಿವೀಪಾಲ ದಿವ್ಯಾಸ್ತರಣಸಂಸ್ಕೃತೇ ॥೮೮॥

ಉಪವಿಷ್ಟಂ ಮಹಾರಾಜ ಪದ್ಮೇಂದುಸದೃಶಾನನಮ್ ।
ಪುಲ್ಲಪದ್ಮವಿಶಾಲಾಕ್ಷಂ ಬಾಲಂ ಪಶ್ಯಾಮಿ ಭಾರತ ॥೮೯॥

ಎಲೈ ನರಾಧಿಪನೇ, ಎಲೈ ಭಾರತನೇ, ಆ ವಿಸ್ತೀರ್ಣವಾದ ವೃಕ್ಷದ ಒಂದು ಶಾಖೆಯಲ್ಲಿ ದಿವ್ಯವಾದ ಹಾಸಿಗೆಯನ್ನು ಹಾಸಿದ ಮಂಚದಲ್ಲಿ ಕುಳಿತಿರುವ ಪದ್ಮದಂತೆ ಚಂದ್ರನಂತೆ ಕಾಂತಿಯುಳ್ಳ ಮುಖವುಳ್ಳ, ಅರಳಿದ ಪದ್ಮಪತ್ರದಂತೆ ವಿಶಾಲವಾದ ನೇತ್ರವುಳ್ಳ ಬಾಲಕನನ್ನು ನೋಡುತ್ತೇನೆ.

ತತೋ ಮೇ ಪೃಥಿವೀಪಾಲ ವಿಸ್ಮಯಃ ಸುಮಹಾನಭೂತ್ ।
ಕಥಂ ತ್ವಯಂ ಶಿಶುಃ ಶೇತೇ ಲೋಕೇ ನಾಶಮುಪಾಗತೇ ॥೯೦॥

ಎಲೈ ಪೃಥಿವೀಪಾಲನೇ, ಆಗ ನನಗೆ ಎಲ್ಲ ಲೋಕವೂ ನಾಶವನ್ನು ಹೊಂದಿರುವಾಗ ಈ ಮಗುವು ಇಲ್ಲಿ ಹೇಗೆ ಮಲಗಿದೆ? ಎಂದು ದೊಡ್ಡ ವಿಸ್ಮಯವುಂಟಾಯಿತು.

ತಪಸಾ ಚಿಂತಯಂಶ್ಚಾಪಿ ತಂ ಶಿಶುಂ ನೋಪಲಕ್ಷಯೇ ।
ಭೂತಂ ಭವ್ಯಂ ಭವಿಷ್ಯಂ ಚ ಜಾನನ್ನಪಿ ನರಾಧಿಪ ॥೯೧॥

ಎಲೈ ನರಾಧಿಪನೇ, ನಾನು ಭೂತ ಭವ್ಯ ಭವಿಷ್ಯತ್ತುಗಳನ್ನು ತಿಳಿದಿದ್ದರೂ ಸಹ, ಎಷ್ಟು ತಪಸ್ಸನ್ನು ಯೋಜನೆ ಮಾಡಿದರೂ ಆ ಶಿಶುವು ಯಾರೆಂದು ತಿಳಿಯುವುದಿಲ್ಲ.

ಅತಸೀಪುಷ್ಪವರ್ಣಾಭಃ ಶ್ರೀವತ್ಸಕೃತಭೂಷಣಃ ।
ಸಾಕ್ಷಾಲ್ಲಕ್ಷ್ಮ್ಯಾ ಇವಾವಾಸಃ ಸ ತದಾ ಪ್ರತಿಭಾತಿ ಮೇ ॥೯೨॥

ಆಗ ಅಗಸೆಯ ಪುಷ್ಪದ ಬಣ್ಣವುಳ್ಳ ಶ್ರೀವತ್ಸಲಾಂಛನನಾದ, ಲಕ್ಷ್ಮಿಯ ಸಾಕ್ಷಾನ್ನಿವಾಸ ಸ್ಥಾನವಾದ ಅವನು ಯಾರೆಂದು ಹೊಳೆಯುತ್ತದೆ.

ತತೋ ಮಾಮಬ್ರವೀದ್ ಬಾಲಃ ಸ ಪದ್ಮನಿಭಲೋಚನಃ ।
ಶ್ರೀವತ್ಸಧಾರೀ ದ್ಯುತಿಮಾನ್ ವಾಕ್ಯಂ ಶ್ರುತಿಸುಖಾವಹಮ್ ॥೯೩॥

ಆಗ ಶ್ರೀವತ್ಸಧಾರಿಯಾದ, ಕಾಂತಿಯುಕ್ತನಾದ, ಪದ್ಮನೇತ್ರನಾದ ಆ ಬಾಲಕನು ನನ್ನ ಕಿವಿಗಳಿಗೆ ಸಂತೋಷವುಂಟಾಗುವಂತೆ ಹೀಗೆ ಮಾತನಾಡಿದನು.

ಜಾನಾಮಿ ತ್ವಾಂ ಪರಿಶ್ರಾಂತಂ ತತೋ ವಿಶ್ರಾಮಕಾಂಕ್ಷಿಣಮ್ ।
ಮಾರ್ಕಂಡೇಯ ಇಹಾಸ್ವ ತ್ವಂ ಯಾವದಿಚ್ಛಸಿ ಭಾರ್ಗವ ॥೯೪॥

ಎಲೈ ಭಾರ್ಗವನಾದ ಮಾರ್ಕಂಡೇಯನೇ, ನೀನು ಬಹಳ ದಣಿದು ವಿಶ್ರಾಂತಿಯನ್ನು ಬಯಸುತ್ತಿದ್ದೀಯೆ ಎಂದು ನಾನು ತಿಳಿದಿದ್ದೇನೆ. ಇಲ್ಲಿ ನಿನಗೆ ಬೇಕಾದಷ್ಟು ಸಮಯದವರೆಗೆ ವಿಶ್ರಾಂತಿಯನ್ನು ಪಡೆಯುವವನಾಗು.

ಅಭ್ಯಂತರಂ ಶರೀರೇ ಮೇ ಪ್ರವಿಶ್ಯ ಮುನಿಸತ್ತಮ ।
ಆಸ್ವ ಭೋ ವಿಹಿತೋ ವಾಸಃ ಪ್ರಸಾದಸ್ತೇ ಕೃತೋ ಮಯಾ ॥೯೫॥

ಎಲೈ ಮುನಿಶ್ರೇಷ್ಠನೇ, ನನ್ನ ಶರೀರದ ಒಳಗೆ ಪ್ರವೇಶಿಸು. ನಿನಗೆ ನಾನು ವಾಸಸ್ಥಾನವನ್ನು ಕಲ್ಪನೆ ಮಾಡಿದ್ದೇನೆ. ನಿನಗೆ ನಾನು ಅನುಗ್ರಹವನ್ನು ಮಾಡಿದ್ದೇನೆ (ಎಂದು ಹೇಳಿದನು).

ತತೋ ಬಾಲೇನ ತೇನೈವಮುಕ್ತಸ್ಯಾಸೀತ್ ತದಾ ಮಮ ।
ನಿರ್ವೇದೋ ಜೀವಿತೇ ದೀರ್ಘೇ ಮನುಷ್ಯತ್ವೇ ಚ ಭಾರತ ॥೯೬॥

ಎಲೈ ಭಾರತನೇ, ಆ ಬಾಲಕನಿಂದ ಈ ಮಾತುಗಳನ್ನು ಕೇಳಿದ ನನಗೆ ನನ್ನ ದೀರ್ಘವಾದ ಜೀವನದಲ್ಲಿ ಮತ್ತು ಮನುಷ್ಯಭಾವದಲ್ಲಿ ವೈರಾಗ್ಯವುಂಟಾಯಿತು.

ತತೋ ಬಾಲೇನ ತೇನಾಸ್ಯಂ ಸಹಸಾ ವಿವೃತಂ ಕೃತಮ್ ।
ತಸ್ಯಾಹಮವಶೋ ವಕ್ತ್ರೇ ದೈವಯೋಗಾತ್ ಪ್ರವೇಶಿತಃ ॥೯೭॥

ಆಗ ಆ ಬಾಲಕನು ಇದ್ದಕ್ಕಿದ್ದಂತೆಯೇ ತನ್ನ ಬಾಯನ್ನು ತೆರೆದನು. ನಾನು ನನಗೆ ಅರಿವಿಲ್ಲದೆಯೇ ದೈವಯೋಗದಿಂದ ಅವನ ಬಾಯಿಯಲ್ಲಿ ಪ್ರವೇಶಿಸಿದೆ.

ತತಃ ಪ್ರವಿಷ್ಟಸ್ತತ್ಕುಕ್ಷಿಂ ಸಹಸಾ ಮನುಜಾಧಿಪ ।
ಸರಾಷ್ಟನಗರಾಕಾರಂ ಕೃತ್ಸ್ನಂ ಪಶ್ಯಾಮಿ ಮೇದಿನೀಮ್ ॥೯೮॥

ಎಲೈ ಮನುಜಾಧಿಪನೇ, ಅವನ ಬಾಯಿಯ ಮಾರ್ಗವಾಗಿ ಅವನ ಉದರವನ್ನು ಸೇರಿದವನಾಗಿ ಅಲ್ಲಿ ರಾಷ್ಟನಗರಗಳಿಂದ ಕೂಡಿದ ಸಮಗ್ರವಾದ ಭೂಮಿಯನ್ನು ನೋಡಿದೆ (ಮಹಾಪ್ರಳಯವನ್ನು ನನಗೆ ತೋರಿಸು ಎಂದು ಮಾರ್ಕಂಡೇಯರಿಂದ ಪ್ರಾರ್ಥಿತನಾದ ಭಗವಂತನಾದ ನಾರಾಯಣನು ಸ್ವಪ್ನಕಾಲದಲ್ಲಿ ಭೂಧರಾದಿಗಳನ್ನು ಸೃಷ್ಟಿಮಾಡುವಂತೆ ತನ್ನ ಅಚಿಂತ್ಯಶಕ್ತಿಯಿಂದ ಮಹಾಪ್ರಳಯ ಪ್ರತಿನಿಧಿಯಾದ ಒಂದು ಪ್ರಳಯವನ್ನು ಸೃಷ್ಟಿಮಾಡಿ ಮಾರ್ಕಂಡೇಯರಿಗೆ ಅದನ್ನು ತೋರಿಸಿ ತನ್ನ ಉದರದಲ್ಲಿದ್ದ ವಿನಾಶವನ್ನು ಹೊಂದದಿರುವ ಸಕಲ ಪ್ರಪಂಚವನ್ನೂ ತೋರಿಸಿದನು. ಏಕೆಂದರೆ ಬ್ರಹ್ಮದೇವರ ದೈನಂದಿನ ಪ್ರಳಯದಲ್ಲಿ ಬ್ರಹ್ಮದೇವರೂ ನಿದ್ರೆ ಮಾಡುವಾಗ ಮಾರ್ಕಂಡೇಯರು ಎಚ್ಚರದಿಂದಿರಲು ಸಾಧ್ಯವಿಲ್ಲ ಎಂದು ವಾದಿರಾಜರು ಲಕ್ಷಾಲಂಕಾರದಲ್ಲಿ ತಿಳಿಸುತ್ತಾರೆ).

ಗಂಗಾಂ ಶತದ್ರುಂ ಸೀತಾಂ ಚ ಯಮುನಾಮಥ ಕೌಶಿಕೀಮ್ ।
ಚರ್ಮಣ್ವತೀಂ ವೇತ್ರವತೀಂ ಚಂದ್ರಭಾಗಾಂ ಸರಸ್ವತೀಮ್ ॥೯೯॥

ಸಿಂಧುಂ ಚೈವ ವಿಪಾಶಾಂ ಚ ನದೀಂ ಗೋದಾವರೀಮಪಿ ।
ವಸ್ವೋಕಸಾರಾಂ ನಳಿನೀಂ ನರ್ಮದಾಂ ಚೈವ ಭಾರತ ॥೧೦೦॥

ಎಲೈ ಭಾರತನೇ, ಗಂಗಾ, ಶತದ್ರು, ಸೀತಾ, ಯಮುನಾ, ಕೌಶಿಕೀ, ಚರ್ಮಣ್ವತೀ, ವೇತ್ರವತೀ, ಚಂದ್ರಭಾಗಾ, ಸರಸ್ವತೀ, ಸಿಂಧು, ವಿಪಾಶಾ, ಗೋದಾವರೀ, ವಸ್ವೋಕಸಾರಾ, ನಳಿನೀ, ನರ್ಮದಾ ಮೊದಲಾದ ನದಿಗಳನ್ನು ನೋಡಿದೆನು.

ನದೀಂ ತಾಮ್ರಾಂ ಚ ವೇಣ್ಣಾಂ ಚ ಪುಣ್ಯತೋಯಾಂ ಶುಭಾವಹಾಮ್।
ಸುವೇಣಾಂ ಕೃಷ್ಣವೇಣಾಂ ಚ ಇರಾಮಾಂ ಚ ಮಹಾನದೀಮ್ ।
ವಿತಸ್ತಾಂ ಚ ನರವ್ಯಾಘ್ರ ಕಾವೇರೀಂ ಸರಿತಾಂ ವರಾಮ್ ॥೧೦೧॥

ಎಲೈ ನರವ್ಯಾಘ್ರನೇ, ತಾಮ್ರ ನದಿ, ಪುಣ್ಯಜಲದಿಂದ ಕೂಡಿದ ವೇಣ್ಣ ನದಿ, ಕೃಷ್ಣಾನದಿ, ಇರಾಮಾ ಮಹಾನದಿ, ವಿತಸ್ತಾ ಮತ್ತು ನದಿಗಳಲ್ಲಿ ಶ್ರೇಷ್ಠವಾದ ಕಾವೇರಿ ಇವುಗಳನ್ನು ನೋಡಿದನು.

ಶೋಣಾಂ(ಣಂ) ಚ ಪುರುಷವ್ಯಾಘ್ರ ವಿಶಲ್ಯಾಂ ಕಿಂಪುನಾಮಪಿ ॥೧೦೨॥

ಏತಾಶ್ಚಾನ್ಯಾಶ್ಚ ನದ್ಯೋಽಹಂ ಪೃಥಿವ್ಯಾಂ ಯಾ ನರೋತ್ತಮ ।
ಪರಿಕ್ರಾಮನ್ ಪ್ರಪಶ್ಯಾಮಿ ತಸ್ಯ ಕುಕ್ಷೌ ಮಹಾತ್ಮನಃ ॥೧೦೩॥

ಎಲೈ ಪುರುಷವ್ಯಾಘ್ರನೇ, ನರೋತ್ತಮನೇ, ಶೋಣ, ವಿಶಲ್ಯಾ , ಕಿಂಪುನ ಇವೇ ಮೊದಲಾದ ಭೂಮಿಯಲ್ಲಿರುವ ಇನ್ನೂ ಅನೇಕ ನದಿಗಳನ್ನು ಆ ಮಹಾತ್ಮನ ಕುಕ್ಷಿಯಲ್ಲಿ ಸಂಚಾರವನ್ನು ಮಾಡುತ್ತಾ ನಾನು ನೋಡಿದೆನು.

ತತಃ ಸಮುದ್ರಂ ಪಶ್ಯಾಮಿ ಯಾದೋಗಣನಿಷೇವಿತಮ್ ।
ರತ್ನಾಕರಮಮಿತ್ರಘ್ನ ಪಯಸೋ ನಿಧಿಮುತ್ತಮಮ್ ॥೧೦೪॥

ಎಲೈ ಶತ್ರುಸೂದನನೇ, ಅನಂತರ ನಾನು ಜಲಚರಪ್ರಾಣಿಗಳಿಂದ ಕೂಡಿದ ರತ್ನಾಕರವಾದ ಶ್ರೇಷ್ಠ ಜಲನಿಧಿಯಾದ ಸಮುದ್ರವನ್ನು ನೋಡಿದೆನು.

ತತ್ರ ಪಶ್ಯಾಮಿ ಗಗನಂ ಚಂದ್ರಸೂರ್ಯವಿರಾಜಿತಮ್ ।
ಜಾಜ್ವಲ್ಯಮಾನಂ ತೇಜೋಭಿಃ ಪಾವಕಾರ್ಕಸಮಪ್ರಭಮ್ ॥೧೦೫॥

ಅಲ್ಲಿ ನಾನು ಅಗ್ನಿಸೂರ್ಯರಿಗೆ ಸಮಾನವಾದ ಪ್ರಕಾಶವುಳ್ಳ ತಮ್ಮ ತೇಜಸ್ಸಿನಿಂದ ಹೊಳೆಯುತ್ತಿರುವ ಚಂದ್ರಸೂರ್ಯರಿಂದ ವಿರಾಜಿತವಾದ ಗಗನವನ್ನು ನೋಡಿದೆನು.

ಪಶ್ಯಾಮಿ ಚ ಮಹೀಂ ರಾಜನ್ ಕಾನನೈರುಪಶೋಭಿತಾಮ್ ।
ಸಪರ್ವತವನದ್ವೀಪಾಂ ನಿಮ್ನಗಾಶತಸಂಕುಲಾಮ್ ॥೧೦೬॥

ಎಲೈ ರಾಜನೇ, ಕಾನನಗಳಿಂದ ಶೋಭಿತವಾದ, ಪರ್ವತವನದ್ವೀಪಗಳಿಂದ ಕೂಡಿದ, ನೂರಾರು ನದಿಗಳಿಂದ ನಿಬಿಡವಾದ ಎಲ್ಲ ಭೂಮಿಯನ್ನು ನೋಡಿದೆನು.

ಯಜಂತೇ ಹಿ ತದಾ ರಾಜನ್ ಬ್ರಾಹ್ಮಣಾ ಬಹುಭಿರ್ಮಖೈಃ ।
ಕ್ಷತ್ರಿಯಾಶ್ಚ ಪ್ರವರ್ತಂತೇ ಸರ್ವವರ್ಣಾನುರಂಜನೈಃ ॥೧೦೭॥

ಅಲ್ಲಿ ಬ್ರಾಹ್ಮಣರು ಅನೇಕ ವಿಧವಾದ ಯಾಗಗಳಿಂದ ದೇವರನ್ನು ಆರಾಧಿಸುತ್ತಾರೆ. ಕ್ಷತ್ರಿಯರು ಎಲ್ಲ ವರ್ಣಗಳಿಗೂ ಸಂತೋಷವನ್ನು ಉಂಟು ಮಾಡುತ್ತಾ ಪ್ರವೃತ್ತರಾಗುತ್ತಾರೆ.

ವೈಶ್ಯಾಃ ಕೃಷಿಂ ಯಥಾನ್ಯಾಯಂ ಕಾರಯಂತಿ ನರಾಧಿಪ ।
ಶುಶ್ರೂಷಾಯಾಂ ಚ ನಿರತಾ ದ್ವಿಜಾನಾಂ ವೃಷಲಾಸ್ತದಾ ॥೧೦೮॥

ಎಲೈ ನರಾಧಿಪನೇ, ವೈಶ್ಯರು ನ್ಯಾಯಪ್ರಾಪ್ತವಾದ ಕೃಷಿಯನ್ನು ಮಾಡಿಸುತ್ತಾರೆ. ಶೂದ್ರರು ದ್ವಿಜರ ಸೇವೆಯಲ್ಲಿ ನಿರತರಾಗಿದ್ದಾರೆ.

ತತಃ ಪರಿಪತನ್ ರಾಜಂಸ್ತಸ್ಯ ಕುಕ್ಷೌ ಮಹಾತ್ಮನಃ ।
ಹಿಮವಂತಂ ಚ ಪಶ್ಯಾಮಿ ಹೇಮಕೂಟಂ ಚ ಪರ್ವತಮ್ ॥೧೦೯॥

ಎಲೈ ರಾಜನೇ, ಆಗ ಹೀಗೆಯೇ ಆ ಮಹಾತ್ಮನ ಉದರದಲ್ಲಿ ಸಂಚರಿಸುತ್ತಾ ಹಿಮಾಲಯ ಪರ್ವತವನ್ನೂ, ಹೇಮಕೂಟಪರ್ವತವನ್ನೂ ನೋಡಿದೆನು.

ನಿಷಧಂ ಚಾಪಿ ಪಶ್ಯಾಮಿ ಶ್ವೇತಂ ಚ ರಜತಾನ್ವಿತಮ್ ।
ಪಶ್ಯಾಮಿ ಚ ಮಹೀಪಾಲ ಪರ್ವತಂ ಗಂಧಮಾದನಮ್ ॥೧೧೦॥

ಎಲೈ ಮಹೀಪಾಲನೇ, ನಿಷಧಪರ್ವತವನ್ನೂ, ರಜತಾನ್ವಿತವಾದ ಶ್ವೇತ ಪರ್ವತವನ್ನೂ ಮತ್ತು ಗಂಧಮಾದನಪರ್ವತವನ್ನೂ ನೋಡಿದೆನು.

ಮಂದರಂ ಮನುಜವ್ಯಾಘ್ರ ನೀಲಂ ಚಾಪಿ ಮಹಾಗಿರಿಮ್ ।
ಪಶ್ಯಾಮಿ ಚ ಮಹಾರಾಜ ಮೇರುಂ ಕನಕಪರ್ವತಮ್ ॥೧೧೧॥

ಎಲೈ ಮನುಜವ್ಯಾಘ್ರನೇ, ಮಹಾರಾಜನೇ, ಮಂದರಪರ್ವತವನ್ನೂ ಮಹಾಪರ್ವತವಾದ ನೀಲವನ್ನೂ, ಸುವರ್ಣಮಯವಾದ ಮೇರು ಪರ್ವತವನ್ನೂ ನೋಡಿದೆನು.

ಮಾಹೇಂದ್ರಂ ಚೈವ ಪಶ್ಯಾಮಿ ವಿಂಧ್ಯಂ ಚ ಗಿರಿಮುತ್ತಮಮ್ ।
ಮಲಯಂ ಚಾಪಿ ಪಶ್ಯಾಮಿ ಪಾರಿಯಾತ್ರಂ ಚ ಪರ್ವತಮ್ ॥೧೧೨॥

ಮಹೇಂದ್ರ ಪರ್ವತವನ್ನೂ, ಶ್ರೇಷ್ಠವಾದ ವಿಂಧ್ಯ ಪರ್ವತವನ್ನೂ, ಮಲಯ ಪರ್ವತವನ್ನೂ ಮತ್ತು ಪಾರಿಯಾತ್ರ ಪರ್ವತವನ್ನೂ ನೋಡಿದೆನು.

ಏತೇ ಚಾನ್ಯೇ ಚ ಬಹವೋ ಯಾವಂತಃ ಪೃಥಿವೀಧರಾಃ ।
ತಸ್ಯೋದರೇ ಮಯಾ ದೃಷ್ಟಾಃ ಸರ್ವೇ ರತ್ನವಿಭೂಷಿತಾಃ ॥೧೧೩॥

ಇವುಗಳನ್ನೂ ಮತ್ತು ಇನ್ನೂ ಭೂಮಿಯಲ್ಲಿ ಎಷ್ಟು ಪರ್ವತಗಳಿವೆಯೋ ಅಂತಹ ರತ್ನ ವಿಭೂಷಿತವಾದ ಎಲ್ಲಾ ಪರ್ವತಗಳನ್ನೂ ನಾನು ಅವನ ಉದರದಲ್ಲಿ ನೋಡಿದೆನು.

ಸಿಂಹಾನ್ ವ್ಯಾಘ್ರಾನ್ ವರಾಹಾಂಶ್ಚ ಪಶ್ಯಾಮಿ ಮನುಜಾಧಿಪ ।
ಪೃಥಿವ್ಯಾಂ ಯಾನಿ ಚಾನ್ಯಾನಿ ಸತ್ತ್ವಾನಿ ಜಗತೀಪತೇ ॥೧೧೪॥

ತಾನಿ ಸರ್ವಾಣ್ಯಹಂ ತತ್ರ ಪಶ್ಯನ್ ಪರ್ಯಚರಂ ತದಾ ॥೧೧೫॥

ಎಲೈ ಮನುಜಾಧಿಪನೇ, ಸಿಂಹಗಳನ್ನೂ, ವ್ಯಾಘ್ರಗಳನ್ನೂ ಮತ್ತು ವರಾಹಗಳನ್ನೂ ಅವನ ಉದರದಲ್ಲಿ ನೋಡಿದೆನು. ಎಲೈ ಜಗತೀಪತಿಯೇ, ಭೂಮಿಯಲ್ಲಿ ಎಷ್ಟು ಪ್ರಾಣಿಗಳಿವೆಯೋ ಅವೆಲ್ಲವನ್ನೂ ನಾನು ಅವನ ಉದರದಲ್ಲಿ ನೋಡುತ್ತಾ ಸಂಚರಿಸಿದೆನು.

ಕುಕ್ಷೌ ತಸ್ಯ ನರವ್ಯಾಘ್ರ ಪ್ರವಿಷ್ಟಃ ಸಂಚರನ್ ದಿಶಃ ।
ಶಕ್ರಾದೀಂಶ್ಚಾಪಿ ಪಶ್ಯಾಮಿ ಕೃತ್ಸ್ನಾನ್ ದೇವಗಣಾನಹಮ್ ॥೧೧೬॥

ಎಲೈ ನರವ್ಯಾಘ್ರನೇ, ನಾನು ಅವನ ಉದರದಲ್ಲಿ ಪ್ರವೇಶ ಮಾಡಿ ಸಂಚರಿಸುತ್ತಾ ದಿಕ್ಕುಗಳನ್ನೂ, ಇಂದ್ರಾದಿ ಸರ್ವದೇವತಾ ಗಣವನ್ನೂ ನೋಡಿದೆನು.

ಸಾಧ್ಯಾನ್ ರುದ್ರಾಂಸ್ತಥಾऽऽದಿತ್ಯಾನ್ ಗುಹ್ಯಕಾನ್ ಪಿತರಸ್ತದಾ ।
ಸರ್ಪಾನ್ ನಾಗಾನ್ ಸುಪರ್ಣಾಂಶ್ಚ ವಸೂನಪ್ಯಶ್ವಿನಾವಪಿ ॥

ಸಾಧ್ಯರನ್ನೂ, ರುದ್ರರನ್ನೂ, ಆದಿತ್ಯರನ್ನೂ, ಗುಹ್ಯಕರನ್ನೂ, ಪಿತೃಗಳನ್ನೂ, ಸರ್ಪಗಳನ್ನೂ, ನಾಗಗಳನ್ನೂ, ಸುಪರ್ಣಗಳನ್ನೂ, ವಸುಗಳನ್ನೂ ಮತ್ತು ಅಶ್ವಿನೀ ದೇವತೆಗಳನ್ನೂ ನೋಡಿದೆನು.

ಗಂಧರ್ವಾಪ್ಸರಸೋ ಯಕ್ಷಾನೃಷೀಂಶ್ಚೈವ ಮಹೀಪತೇ ।
ದೈತ್ಯದಾನವಸಂಘಾಂಶ್ಚ ನಾಗಾಂಶ್ಚ ಮನುಜಾಧಿಪ ।
ಸಿಂಹಿಕಾತನಯಾಂಶ್ಚಾಪಿ ಯೇ ಚಾನ್ಯೇ ಸುರಶತ್ರವಃ ॥೧೧೭॥

ಎಲೈ ಮಹೀಪತಿಯೇ, ಗಂಧರ್ವಾಪ್ಸರಸರನ್ನೂ, ಯಕ್ಷರನ್ನೂ, ಋಷಿಗಳನ್ನೂ ದೈತ್ಯದಾನವ ಸಮೂಹಗಳನ್ನೂ, ನಾಗಗಳನ್ನೂ, ರಾಹುಕೇತುಗಳನ್ನೂ ಮತ್ತು ಬೇರೆ ದೇವಶತ್ರುಗಳನ್ನೂ ನೋಡಿದೆನು.

ಯಚ್ಚ ಕಿಂಚಿನ್ಮಯಾ ಲೋಕೇ ದೃಷ್ಟಂ ಸ್ಥಾವರಜಂಗಮಮ್ ।
ಸರ್ವಂ ಪಶ್ಯಾಮ್ಯಹಂ ರಾಜಂಸ್ತಸ್ಯ ಕುಕ್ಷೌ ಮಹಾತ್ಮನಃ ॥೧೧೮॥

ಎಲೈ ರಾಜನೇ, ನಾನು ಈ ಲೋಕದಲ್ಲಿ ಎಷ್ಟು ಸ್ಥಾವರಜಂಗಮ ವಸ್ತುಗಳನ್ನು ನೋಡಿದ್ದೇನೆಯೋ ಅವೆಲ್ಲವನ್ನೂ ಆ ಮಹಾತ್ಮನ ಉದರದಲ್ಲಿ ನೋಡಿದೆನು.

ಚರಮಾಣಃ ಫಲಾಹಾರಃ ಕೃತ್ಸ್ನಂ ಜಗದಿದಂ ವಿಭೋ ।
ಅಂತಃಶರೀರೇ ತಸ್ಯಾಹಂ ವರ್ಷಾಣಾಮಧಿಕಂ ಶತಮ್ ॥೧೧೯॥

ನ ಚ ಪಶ್ಯಾಮಿ ತಸ್ಯಾಹಂ ದೇಹಸ್ಯಾಂತಂ ಕದಾಚನ ।

ಎಲೈ ರಾಜನೇ, ವಿಭುವೇ, ನಾನು ಫಲಾಹಾರವನ್ನು ಸ್ವೀಕರಿಸುತ್ತಾ ಅವನ ಶರೀರದಲ್ಲಿ ಈ ಸಮಸ್ತ ಜಗತ್ತನ್ನು ನೋಡಿದೆ. ಅವನ ಶರೀರದೊಳಗೆ ನಾನು ನೂರು ವರ್ಷಗಳಿಗಿಂತಲೂ ಹೆಚ್ಚು ಕಾಲ ಸಂಚರಿಸಿದರೂ ಆ ದೇಹದ ಅಂತವೇ ಎಂದೂ ಕಾಣಲಿಲ್ಲ.

ಸತತಂ ಧಾವಮಾನಶ್ಚ ಚಿಂತಯಾನೋ ವಿಶಾಂಪತೇ ॥೧೨೦॥

ಭ್ರಮಂಸ್ತತ್ರ ಮಹೀಪಾಲ ಯದಾ ವರ್ಷಗಣಾನ್ ಬಹೂನ್ ।
ಆಸಾದಯಾಮಿ ನೈವಾಂತಂ ತಸ್ಯ ರಾಜನ್‌ಮಹಾತ್ಮನಃ ॥೧೨೧॥

ಎಲೈ ಭೂಪಾಲನೇ, ಪ್ರಜಾಪಾಲನೇ, ನಾನು ಸತತವಾಗಿ ಚಿಂತಿಸುತ್ತಾ ಶೀಘ್ರವಾಗಿ ಓಡುತ್ತಾ ಅನೇಕ ವರ್ಷಗಳ ಕಾಲ ಸಂಚರಿಸಿದರೂ ಆ ಮಹಾತ್ಮನ ಅಂತವು ಎಲ್ಲೂ ದೊರೆಯಲಿಲ್ಲ.

ತತಸ್ತಮೇವ ಶರಣಂ ಗತೋಽಸ್ಮಿ ವಿಧಿವತ್ ತದಾ ।
ವರೇಣ್ಯಂ ವರದಂ ದೇವಂ ಮನಸಾ ಕರ್ಮಣೈವ ಚ ॥೧೨೨॥

ಆಗ ವರೇಣ್ಯನೂ, ವರದನೂ ಆದ ಆ ದೇವನನ್ನೇ ಮನಸ್ಸಿನಿಂದಲೂ ಮತ್ತು ಕ್ರಿಯೆಯಿಂದಲೂ ವಿಧಿಪೂರ್ವಕವಾಗಿ ಶರಣುಹೊಂದಿದೆನು.

ತತೋಽಹಂ ಸಹಸಾ ರಾಜನ್ ವಾಯುವೇಗೇನ ನಿಸೃತಃ ।
ಮಹಾತ್ಮನೋ ಮುಖಾತ್ ತಸ್ಯ ವಿವೃತಾತ್ ಪುರುಷೋತ್ತಮ ॥೧೨೩॥

ಎಲೈ ಪುರುಷೋತ್ತಮನೇ, ರಾಜನೇ, ನಾನು ಆಗ ಇದ್ದಕ್ಕಿದ್ದಂತೆಯೇ ತೆರೆದ ಆ ಮಹಾತ್ಮನ ಬಾಯಿಯಿಂದ ವಾಯುವೇಗದಿಂದ ಹೊರಗೆ ಬಂದೆನು.

ತತಸ್ತಸ್ಯೈವ ಶಾಖಾಯಾಂ ನ್ಯಗ್ರೋಧಸ್ಯ ವಿಶಾಂಪತೇ ।
ಆಸ್ತೇ ಮನುಜಶಾರ್ದೂಲ ಕೃತ್ಸ್ನಮಾದಾಯ ವೈ ಜಗತ್ ॥೧೨೪॥

ಎಲೈ ಪ್ರಜಾಪತಿಯೇ, ಎಲೈ ಮನುಜ ಶಾರ್ದೂಲನೇ, ಆಗಲೂ ಸಮಗ್ರವಾದ ಜಗತ್ತನ್ನು ಉದರದಲ್ಲಿ ಧರಿಸಿದ ಆ ಶಿಶುವು ಹಾಗೆಯೇ ಆಲದ ಮರದ ಕೊಂಬೆಯಲ್ಲಿ ಆಶ್ರಯವನ್ನು ಪಡೆದಿತ್ತು.

ತೇನೈವ ಬಾಲವೇಷೇಣ ಶ್ರೀವತ್ಸಕೃತಲಕ್ಷಣಮ್ ।
ಆಸೀನಂ ತಂ ನರವ್ಯಾಘ್ರ ಪಶ್ಯಾಮ್ಯಮಿತತೇಜಸಮ್ ॥೧೨೫॥

ಎಲೈ ನರವ್ಯಾಘ್ರನೇ, ನಾನು ಮೊದಲು ನೋಡಿದ ಬಾಲರೂಪದಿಂದಲೇ ಇದ್ದ ಶ್ರೀವತ್ಸಭೂಷಣನಾದ ಅಪರಿಮಿತ ತೇಜಸ್ವಿಯಾದ ಆ ಬಾಲಕನು ಕುಳಿತಿರುವುದನ್ನು ನೋಡಿದೆನು.

ತತೋ ಮಾಮಬ್ರವೀದ್ ಬಾಲಃ ಸ ಪ್ರೀತಃ ಪ್ರಹಸನ್ನಿವ ।
ಶ್ರೀವತ್ಸಧಾರೀ ದ್ಯುತಿಮಾನ್ ಪೀತವಾಸಾ ಮಹಾದ್ಯುತಿಃ ॥೧೨೬॥

ಆಗ ಶ್ರೀವತ್ಸಧಾರಿಯೂ, ಕಾಂತಿಯುಕ್ತನೂ, ಪೀತಾಂಬರಧಾರಿಯೂ, ಮಹಾತೇಜಸ್ವಿಯೂ ಆದ ಆ ಬಾಲಕನು ನನ್ನನ್ನು ನೋಡಿ ನಗುತ್ತಾ ಹೀಗೆ ಮಾತನಾಡಿದನು.

ಅಪೀದಾನೀಂ ಶರೀರೇಽಸ್ಮಿನ್ ಮಾಮಕೇ ಮುನಿಸತ್ತಮ ।
ಉಷಿತಸ್ತ್ವಂ ಸುವಿಶ್ರಾಂತೋ ಮಾರ್ಕಂಡೇಯ ಬ್ರವೀಮಿ ತೇ(ಹಿ ಮೇ) ॥

ಎಲೈ ಋಷಿಶ್ರೇಷ್ಠರಾದ ಮಾರ್ಕಂಡೇಯರೇ, ಇದುವರೆಗೆ ನನ್ನ ಶರೀರದಲ್ಲಿ ಸುವಿಶ್ರಾಂತವಾಗಿ ವಾಸಮಾಡಿದಿರಷ್ಟೆ? ಅದನ್ನು ನನಗೆ ಹೇಳಿ (ಎಂದು ಹೇಳಿದನು).

ಮುಹೂರ್ತಾದಥ ಮೇ ದೃಷ್ಟಿಃ ಪ್ರಾದುರ್ಭೂತಾ ಪುನರ್ನವಾ ।
ಯಯಾ ನಿರ್ಮುಕ್ತಮಾತ್ಮಾನಮಪಶ್ಯಂ ಲಬ್ಧಚೇತಸಮ್ ॥೧೨೮॥

ಒಂದು ಮುಹೂರ್ತವು ಕಳೆದ ಮೇಲೆ ನನಗೆ ನನ್ನ ಜ್ಞಾನವೆಲ್ಲವೂ ಹೊಸದಾಗಿ ಪ್ರಾದುರ್ಭೂತವಾಯಿತು. ನಾನು ಆ ಪ್ರಳಯದಿಂದ ನಿರ್ಮುಕ್ತನಾಗಿ ಸಮಾಧಾನವುಳ್ಳ ಮನಸ್ಸಿನಿಂದ ನಾನು ಇರುವುದನ್ನು ಗಮನಿಸಿದೆ.

ತಸ್ಯ ತಾಮ್ರತಳೌ ತಾತ ಚರಣೌ ಸುಪ್ರತಿಷ್ಠಿತೌ ।
ಸುಜಾತೌ ಮೃದುರಕ್ತಾಭಿರಂಗುಲೀಭಿರ್ವಿರಾಜಿತೌ ॥೧೨೯॥

ಎಲೈ ಪ್ರೀತಿಪಾತ್ರನೇ, ಅವನ ಪಾದತಳಗಳು ಕೆಂಪಾಗಿ ಸುಪ್ರತಿಷ್ಠಿತವಾಗಿದ್ದವು. ಸುಕುಮಾರವಾಗಿ ಮೃದುವಾಗಿ ಕೆಂಪು ಬೆರಳುಗಳಿಂದ ಶೋಭಿಸುತ್ತಿದ್ದವು.

ಪ್ರಯತ್ನೇನ ಮಯಾ ಮೂರ್ಧ್ನಾ ಗೃಹೀತ್ವಾ ಹ್ಯಭಿವಂದಿತೌ ।
ದೃಷ್ಟ್ವಾऽಪರಿಮಿತಂ ತಸ್ಯ ಪ್ರಭಾವಮಮಿತೌಜಸಃ ॥೧೩೦॥

ನಾನು ಅಮಿತಪರಾಕ್ರಮಿಯಾದ ಅವನ ಅಪರಿಮಿತವಾದ ಪ್ರಭಾವವನ್ನು ನೋಡಿ ಪ್ರಯತ್ನಪೂರ್ವಕವಾಗಿ ಆ ಪಾದಗಳನ್ನು ಹಿಡಿದು ಶಿರಸಾ ನಮಸ್ಕಾರವನ್ನು ಮಾಡಿದೆ.

ವಿನಯೇನಾಂಜಲಿಂ ಕೃತ್ವಾ ಪ್ರಯತ್ನೇನೋಪಗಮ್ಯ ಹ ।
ದೃಷ್ಟೋ ಮಯಾ ಸ ಭೂತಾತ್ಮಾ ದೇವಃ ಕಮಲಲೋಚನಃ ॥೧೩೧॥

ಪ್ರಯತ್ನಪೂರ್ವಕವಾಗಿ ಅವನನ್ನು ಸಮೀಪಿಸಿ ವಿನಯದಿಂದ ಕೈಗಳನ್ನು ಜೋಡಿಸಿ ಕಮಲಲೋಚನನಾದ ಸರ್ವಭೂತಾತ್ಮನಾದ ಆ ದೇವನನ್ನು ನೋಡಿದೆನು.

ತಮಹಂ ಪ್ರಾಂಜಲಿರ್ಭೂತ್ವಾ ನಮಸ್ಕೃತ್ಯೇದಮಬ್ರುವಮ್ ।
ಜ್ಞಾತುಮಿಚ್ಛಾಮಿ ದೇವ ತ್ವಾಂ ಮಾಯಾಂ ಚೈತಾಂ ತವೋತ್ತಮಾಮ್ ॥

ನಾನು ಕೈಗಳನ್ನು ಜೋಡಿಸಿ ಅವನಿಗೆ ನಮಸ್ಕರಿಸಿ ದೇವನೇ, ನಾನು ನಿನ್ನನ್ನು ಮತ್ತು ನಿನ್ನ ಶ್ರೇಷ್ಠವಾದ ಈ ಸಾಮರ್ಥ್ಯವನ್ನು ತಿಳಿಯಲು ಬಯಸುತ್ತೇನೆ ಎಂದು ಹೇಳಿದೆನು.

ಆಸ್ಯೇನಾನುಪ್ರವಿಷ್ಟೋऽಹಂ ಶರೀರೇ ಭಗವಂಸ್ತವ ।
ದೃಷ್ಟವಾನಖಿಲಾನ್ ಸರ್ವಾನ್ ಸಮಸ್ತಾನ್ ಜಠರೇ ಹಿ ತೇ ॥೧೩೩॥

ಎಲೈ ಭಗವಂತನೇ, ನಾನು ನಿನ್ನ ಮುಖದಿಂದ ಶರೀರವನ್ನು ಪ್ರವೇಶಿಸಿ ನಿನ್ನ ಉದರದಲ್ಲಿ ಸಮಸ್ತವಾದ ಜಗತ್ತನ್ನು ನೋಡಿದೆನು.

ತವ ದೇವ ಶರೀರಸ್ಥಾ ದೇವದಾನವರಾಕ್ಷಸಾಃ ।
ಯಕ್ಷಗಂಧರ್ವನಾಗಾಶ್ಚ ಜಗತ್ ಸ್ಥಾವರಜಂಗಮಮ್ ॥೧೩೪॥

ಎಲೈ ದೇವನೇ, ನಿನ್ನ ಶರೀರದಲ್ಲಿ ದೇವದಾನವ ರಾಕ್ಷಸರೂ, ಯಕ್ಷಗಂಧರ್ವ ನಾಗರೂ ಇದ್ದರು. ಸ್ಥಾವರಜಂಗವಾತ್ಮಕವಾದ ಸಮಸ್ತ ಪ್ರಪಂಚವೂ ಇದ್ದಿತು.

ತತ್ಪ್ರಸಾದಾಚ್ಚ ಮೇ ದೇವ ಸ್ಮೃತಿರ್ನ ಪರಿಹೀಯತೇ ।
ದ್ರುತಮಂತಃಶರೀರೇ ತೇ ಸತತಂ ಪರಿವರ್ತಿನಃ ॥೧೩೫॥

ಎಲೈ ದೇವನೇ, ನಿನ್ನ ಶರೀರದೊಳಗೆ ಧಾವಿಸಿ ಸತತವಾಗಿ ಸಂಚರಿಸಿದರೂ ನಿನ್ನ ಅನುಗ್ರಹದಿಂದ ನನಗೆ ಸ್ಮೃತಿಯ ನಾಶವು ಉಂಟಾಗಲಿಲ್ಲ.

ನಿರ್ಗತೋಽಹಮಕಾಮಸ್ತು ಇಚ್ಛಯಾ ತೇ ಮಹಾಪ್ರಭೋ ।
ಇಚ್ಛಾಮಿ ಪುಂಡರೀಕಾಕ್ಷ ಜ್ಞಾತುಂ ತ್ವಾಽಹಮನಿಂದಿತಮ್ ॥೧೩೬॥

ಎಲೈ ಮಹಾಪ್ರಭುವೇ, ನಾನು ಇದ್ದಕ್ಕಿದ್ದಂತೆಯೇ ನಿನ್ನ ಇಚ್ಛೆಯಿಂದ ನಿನ್ನ ಶರೀರದಿಂದ ಹೊರಗೆ ಬಂದವನಾಗಿ ಎಲೈ ಪುಂಡರೀಕಾಕ್ಷನೇ, ನಿರ್ದುಷ್ಟನಾದ ನಿನ್ನನ್ನು ತಿಳಿಯಲು ಬಯಸುತ್ತೇನೆ.

ಇಹ ಭೂತ್ವಾ ಶಿಶುಃ ಸಾಕ್ಷಾತ್ ಕಿಂ ಭವಾನವತಿಷ್ಠತೇ ।
ಪೀತ್ವಾ ಜಗದಿದಂ ಸರ್ವಮೇತದಾಖ್ಯಾತುಮರ್ಹಸಿ ॥೧೩೭॥

ಇಲ್ಲಿ ಜಗತ್ತೆಲ್ಲವನ್ನೂ ನಿನ್ನ ಉದರದಲ್ಲಿಟ್ಟು ಶಿಶುರೂಪವನ್ನು ಧರಿಸಿ ಏಕೆ ನಿಂತಿದ್ದೀಯೆ! ಇದೆಲ್ಲವನ್ನೂ ನನಗೆ ಹೇಳಬೇಕು.

ಕಿಮರ್ಥಂ ಚ ಜಗತ್ ಸರ್ವಂ ಶರೀರಸ್ಥಂ ತವಾನಘ ।
ಕಿಯಂತಂ ಚ ತ್ವಯಾ ಕಾಲಮಿಹ ಸ್ಥೇಯಮರಿಂದಮ ॥೧೩೮॥

ಎಲೈ ನಿರ್ದುಷ್ಟನೇ, ನೀನು ಏಕೆ ಎಲ್ಲ ಜಗತ್ತನ್ನು ನಿನ್ನ ಶರೀರದಲ್ಲಿ ಧರಿಸಿದೆ? ಎಲೈ ಅರಿಂದಮನೇ, ಎಷ್ಟುಕಾಲದವರೆಗೆ ನೀನು ಇಲ್ಲಿ ಇರುತ್ತೀಯೆ?

ಏತದಿಚ್ಛಾಮಿ ದೇವೇಶ ಶ್ರೋತುಂ ಬ್ರಾಹ್ಮಣಕಾಮ್ಯಯಾ ।
ತತ್ತಃ ಕಮಲಪತ್ರಾಕ್ಷ ವಿಸ್ತರೇಣ ಯಥಾತಥಮ್ ।
ಮಹದ್‌ಹ್ಯೇತದಚಿಂತ್ಯಂ ಚ ಯದಹಂ ದೃಷ್ಟವಾನ್ ಪ್ರಭೋ ॥

ಎಲೈ ದೇವೇಶನೇ, ಬ್ರಾಹ್ಮಣನಾದ ನನ್ನ ಮೇಲಿನ ಅನುಕಂಪದಿಂದ ನೀನು ಹೇಳುವ ಮಾತುಗಳನ್ನು ಕೇಳಲು ಬಯಸುತ್ತೇನೆ. ಎಲೈ ಕಮಲಪತ್ರಾಕ್ಷನೇ, ಅದನ್ನು ನಾನು ವಿಸ್ತಾರವಾಗಿ ಮತ್ತು ಯಥಾರ್ಥವಾಗಿ ನಿನ್ನಿಂದ ಕೇಳಬೇಕು. ಎಲೈ ಪ್ರಭುವೇ, ನಾನು ನೋಡಿದ ಸಂಗತಿಯು ದೊಡ್ಡ ಅದ್ಭುತವಾದುದು ಮತ್ತು ಅಚಿಂತ್ಯವಾದುದು (ಎಂದು ಹೇಳಿದೆನು).

ಇತ್ಯುಕ್ತಃ ಸ ಮಯಾ ಶ್ರೀಮಾನ್ ದೇವದೇವೋ ಮಹಾದ್ಯುತಿಃ ।
ಸಾಂತ್ವಯನ್ ಮಾಮಿದಂ ವಾಕ್ಯಮುವಾಚ ವದತಾಂ ವರಃ ॥೧೪೦॥

ಹೀಗೆ ಹೇಳಲ್ಪಟ್ಟ ಮಹಾಕಾಂತಿಯುಳ್ಳ, ಮಹಾತೇಜಸ್ಸುಳ್ಳ ಮಾತನಾಡುವವರಲ್ಲಿ ಅಗ್ರಗಣ್ಯನಾದ ಆ ದೇವದೇವನು ನನ್ನನ್ನು ಸಮಾಧಾನಪಡಿಸುತ್ತಾ ಹೀಗೆ ಮಾತನಾಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರ್ಯಶೀತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಅಷ್ಟಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ಮೂರನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ನಾಲ್ಕನೆಯ ಅಧ್ಯಾಯ

ಶಿಶುರೂಪನಾದ ಹರಿಯಿಂದ ಮಾರ್ಕಂಡೇಯರಿಗೆ ತನ್ನ ಸ್ವರೂಪದ ಉಪದೇಶ. ಮಾರ್ಕಂಡೇಯರಿಂದ ಶ್ರೀಕೃಷ್ಣನ ಸರ್ವೋತ್ತಮತ್ವ ಪ್ರತಿಪಾದನೆ ಮತ್ತು ಶ್ರೀಕೃಷ್ಣನಲ್ಲಿ ಪಾಂಡವರ ಶರಣಾಗತಿ.

ದೇವಃ

ಕಾಮಂ ದೇವಾ ಅಪಿ ನ ಮಾಂ ವಿಪ್ರ ಜಾನಂತಿ ತತ್ತ್ವತಃ ।
ತತ್ತ್ವೇತ್ಯಾ ತು ಪ್ರವಕ್ಷ್ಯಾಮಿ ಯಥೇದಂ ವಿಸೃಜಾಮ್ಯಹಮ್ ॥೧॥

ದೇವ– ಎಲೈ ಬ್ರಾಹ್ಮಣನೇ, ದೇವತೆಗಳೂ ಸಹ ನನ್ನನ್ನು ಸರಿಯಾಗಿ ತಿಳಿಯುವುದಿಲ್ಲ. ನಿನ್ನ ಮೇಲಿನ ಪ್ರೀತಿಯಿಂದ ನಾನು ಈ ಜಗತ್ತನ್ನು ಹೇಗೆ ಸೃಷ್ಟಿಸುತ್ತೇನೆ ಎಂದು ಹೇಳುವೆನು.

ಪಿತೃಭಕ್ತೋಽಸಿ ವಿಪ್ರರ್ಷೇ ಮಾಂ ಚೈವ ಶರಣಂ ಗತಃ ।
ತತೋ ದೃಷ್ಟೋಽಸ್ಮಿ ತೇ ಸಾಕ್ಷಾತ್ ಬ್ರಹ್ಮಚರ್ಯಂ ಚ ತೇ ಮಹತ್॥೨॥

ಎಲೈ ವಿಪ್ರರ್ಷಿಯೇ, ನೀನು ಪಿತೃಭಕ್ತನಾದವನು. ನನಗೆ ಶರಣಾಗತನಾಗಿದ್ದೀಯೆ. ನಿನ್ನ ಬ್ರಹ್ಮಚರ್ಯವು ಶ್ರೇಷ್ಠವಾಗಿದೆ. ಆದ್ದರಿಂದ ನೀನು ಸಾಕ್ಷಾತ್ತಾಗಿ ನನ್ನನ್ನು ನೋಡಿದೆ.

ಅಪಾಂ ನಾರಾ ಇತಿ ಪುರಾ ಸಂಜ್ಞಾಕರ್ಮ ಕೃತಂ ಮಯಾ ।
ತೇನ ನಾರಾಯಣೋಽಪ್ಯಕ್ಕೋ ಮಮ ತತ್ ತ್ವಯನಂ ಸದಾ ॥೩॥

ನಾನು ಜಲಕ್ಕೆ ನಾರ ಎಂಬ ಸಂಜ್ಞೆಯನ್ನು ಹಿಂದೆಯೇ ಮಾಡಿದ್ದೇನೆ. ಆ ನಾರವು ನನಗೆ ಆಶ್ರಯವಾಗಿದೆ. ಆದ್ದರಿಂದ ನಾನು ನಾರಾಯಣನೆಂದು ಕರೆಸಿಕೊಳ್ಳಲ್ಪಡುತ್ತೇನೆ.

ಅಹಂ ನಾರಾಯಣೋ ನಾಮ ಪ್ರಭವಃ ಶಾಶ್ವತೋಽವ್ಯಯಃ ।
ವಿಧಾತಾ ಸರ್ವಭೂತಾನಾಂ ಸಂಹರ್ತಾ ಚ ದ್ವಿಜೋತ್ತಮ ॥೪॥

ಎಲೈ ದ್ವಿಜೋತ್ತಮನೇ, ನಾನು ಆ ಕಾರಣದಿಂದ ನಾರಾಯಣ ಎಂಬ ನಾಮವನ್ನು ಧರಿಸಿದ್ದೇನೆ. ಎಲ್ಲಾ ಜಗತ್ತಿನ ಉತ್ಪತ್ತಿ ಸ್ಥಾನವಾಗಿದ್ದೇನೆ. ಶಾಶ್ವತನೂ, ಅವ್ಯಯನೂ, ಸರ್ವಭೂತಗಳ ಸೃಷ್ಟಿಕರ್ತನೂ ಮತ್ತು ಸಂಹಾರಕರ್ತನೂ ಆಗಿದ್ದೇನೆ.

ಅಹಂ ವಿಷ್ಣುರಹಂ ಬ್ರಹ್ಮಾ ಶಕ್ರಶ್ಚಾಹಂ ಸುರಾಧಿಪಃ ।
ಅಹಂ ವೈಶ್ರವಣೋ ರಾಜಾ ಯಮಃ ಪ್ರೇತಾಧಿಪಸ್ತಥಾ ॥೫॥

ನಾನು ವಿಷ್ಣು. ನಾನೇ ಬ್ರಹ್ಮ (ಬ್ರಹ್ಮನಲ್ಲಿದ್ದು ಬ್ರಹ್ಮ ಎಂಬ ಹೆಸರಿನಲ್ಲಿ ಕರೆಸಿಕೊಳ್ಳಲ್ಪಡುವವನು ನಾನೇ ಆಗಿದ್ದೇನೆ. ಹೀಗೆಯೇ ಮುಂದೆಯೂ ಅರ್ಥ ಮಾಡಿಕೊಳ್ಳಬೇಕು). ನಾನು ಸುರಾಧಿಪನಾಗಿದ್ದೇನೆ. ನಾನು ರಾಜನಾದ ಕುಬೇರನಾಗಿದ್ದೇನೆ. ನಾನೇ ಪ್ರೇತಾಧಿಪತಿಯಾದ ಯಮ.

ಅಹಂ ಶಿವಶ್ಚ ಸೋಮಶ್ಚ ಕಾ(ಕ)ಶ್ಯಪೋऽಥ ಪ್ರಜಾಪತಿಃ ।
ಅಹಂ ಧಾತಾ ವಿಧಾತಾ ಚ ಯಜ್ಞಶ್ಚಾಹಂ ದ್ವಿಜೋತ್ತಮ ॥೬॥

ಎಲೈ ದ್ವಿಜೋತ್ತಮನೇ, ನಾನೇ ಶಿವ. ನಾನೇ ಚಂದ್ರ. ನಾನೇ ಪ್ರಜಾಪತಿಯಾದ ಕಾಶ್ಯಪ. ನಾನೇ ಧಾತಾ, ವಿಧಾತಾ ಮತ್ತು ನಾನೇ ಯಜ್ಞ.

ಅಗ್ನಿರಾಸ್ಯಂ ಕ್ಷಿತಿಃ ಪಾದೌ ಚಂದ್ರಾದಿತ್ಯೌ ಚ ಲೋಚನೇ ।
ದಿಶಶ್ಚ(ಸದಿಶಂ) ಚ ನಭಃ ಕಾಯೋ ವಾಯುರ್ಮನಸಿ ಮೇ ಸ್ಥಿತಃ ॥೭॥

ಅಗ್ನಿಯು ನನ್ನ ಮುಖ (ನನ್ನ ಮುಖದಿಂದ ಜನಿಸಿ ಮುಖವನ್ನು ಆಶ್ರಯಿಸಿದವನು. ಇದರಂತೆಯೇ ಉಳಿದುದನ್ನೂ ಅರ್ಥಮಾಡಿಕೊಳ್ಳಬೇಕು). ಭೂಮಿಯು ನನ್ನ ಪಾದಗಳು. ಸೂರ್ಯಚಂದ್ರರು ನನ್ನ ನೇತ್ರಗಳು. ದಿಕ್ಕುಗಳು ಮತ್ತು ಆಕಾಶಗಳು ನನ್ನ ದೇಹ. ವಾಯುವು ನನ್ನ ಮನಸ್ಸಿನಲ್ಲಿ ನೆಲೆಸಿದ್ದಾನೆ.

ಮಯಾ ಕ್ರತುಶತೈರಿಷ್ಟಂ ಬಹುಭಿಃ ಸ್ಆಪ್ತದಕ್ಷಿಣೈಃ ।
ಯಜಂತೇ ವೇದವಿದುಷೋ ಮಾಂ ದೇವಯಜನೇ ಸ್ಥಿತಮ್ ॥೮॥

ನಾನು ಭೂರಿದಕ್ಷಿಣೆಯುಳ್ಳ ಅನೇಕ ಯಜ್ಞಗಳಿಂದ ನನ್ನನ್ನೇ ಪೂಜಿಸಿದ್ದೇನೆ. ದೇವತೆಗಳನ್ನು ಉದ್ದೇಶಿಸಿ ಯಾಗವನ್ನು ಮಾಡುವ ವೇದಜ್ಞರು ದೇವತೆಗಳಲ್ಲಿರುವ ನನ್ನನ್ನೇ ಆರಾಧಿಸುತ್ತಾರೆ.

ಪೃಥಿವ್ಯಾಂ ಕ್ಷತ್ರಿಯೇಂದ್ರಾಶ್ಚ ಪಾರ್ಥಿವಾಃ ಸ್ವರ್ಗಕಾಂಕ್ಷಿಣಃ ।
ಯಜಂತೇ ಮಾಂ ತಥಾ ವೈಶ್ಯಾಃ ಸ್ವರ್ಗಲೋಕಜಿಗೀಷಯಾ ॥೯॥

ಸ್ವರ್ಗಾಪೇಕ್ಷಿಗಳಾದ ಕ್ಷತ್ರಿಯ ಶ್ರೇಷ್ಠರಾದ ರಾಜರೂ ಭೂಲೋಕದಲ್ಲಿ ನನ್ನನ್ನೇ ಉದ್ದೇಶಿಸಿ ಯಾಗವನ್ನು ಮಾಡುತ್ತಾರೆ. ಹಾಗೆಯೇ ವೈಶ್ಯರು ಸ್ವರ್ಗಲೋಕದ ಪ್ರಾಪ್ತಿಯನ್ನು ಉದ್ದೇಶಿಸಿ ನನ್ನನ್ನೇ ಆರಾಧಿಸುತ್ತಾರೆ.

ಚತುಃಸಮುದ್ರಪರ್ಯಂತಾಂ ಮೇರುಮಂದರಭೂಷಣಾಮ್ ।
ಶೇಷೋ ಭೂತ್ವಾಽಹಮೇವೈತಾಂ ಧಾರಯಾಮಿ ವಸುಂಧರಾಮ್॥೧೦॥

ಚತುಃಸಮುದ್ರಪರ್ಯಂತವಾದ ಮೇರುಮಂದರಗಳಿಂದ ಭೂಷಿತವಾದ ಈ ಭೂಮಿಯನ್ನು ನಾನೇ ಶೇಷನಾಗಿ ಧರಿಸಿದ್ದೇನೆ.

ವಾರಾಹಂ ರೂಪಮಾಸ್ಥಾಯ ಮಯೇಯಂ ಜಗತೀ ಪುರಾ ।
ಮಜ್ಜಮಾನಾ ಜಲೇ ವಿಪ್ರ ವೀರ್ಯೇಣಾಸೀತ್ ಸಮುದ್ಧೃತಾ ॥೧೧॥

ಎಲೈ ವಿಪ್ರನೇ, ನೀರಿನಲ್ಲಿ ಮುಳುಗುತ್ತಿರುವಾಗ ನಾನು ವರಾಹರೂಪವನ್ನು ಧರಿಸಿ ನನ್ನ ಸಾಮರ್ಥ್ಯದಿಂದ ಹಿಂದೆ ಈ ಭೂಮಿಯನ್ನು ಮೇಲಕ್ಕೆತ್ತಿದೆ.

ಅಗ್ನಿಶ್ಚ ವಡವಾವಕ್ತ್ರೋ ಭೂತ್ವಾಽಹಂ ದ್ವಿಜಸತ್ತಮ ।
ಪಿಬಾಮ್ಯಪಃ ಸಮಾವಿದ್ಧಾಸ್ತಾಶ್ಚೈವ (ಸದಾ ವಿದ್ವಂಸ್ತಾಶ್ಚೈವಂ)
ವಿಸೃಜಾಮ್ಯಹಮ್ ॥೧೨॥

ಎಲೈ ದ್ವಿಜಶ್ರೇಷ್ಠನೇ, ನಾನೇ ಹೆಣ್ಣುಕುದುರೆಯ ಮುಖವುಳ್ಳ ಅಗ್ನಿಯಾಗಿ ಸಮುದ್ರದ ನೀರನ್ನು ಕುಡಿದು ಪುನಃ ಅದನ್ನು ಹೊರಗೆ ಬಿಡುತ್ತೇನೆ.

ಬ್ರಹ್ಮ ವಕ್ತ್ರಂ ಭುಜೌ ಕ್ಷತ್ರಮೂರೂ ಮೇ ಸಂಸ್ಥಿತಾ ವಿಶಃ ।
ಪಾದೌ ಶೂದ್ರಾ ಭವಂತೀಮೇ ವಿಕ್ರಮೇಣ ಕ್ರಮೇಣ ಚ ॥೧೩॥

ಬ್ರಾಹ್ಮಣ ಜಾತಿಯು ನನ್ನ ಮುಖವನ್ನು, ಕ್ಷತ್ರಿಯ ಜಾತಿಯು ನನ್ನ ಭುಜವನ್ನು, ವೈಶ್ಯ ಜಾತಿಯು ನನ್ನ ತೊಡೆಗಳನ್ನು ಆಶ್ರಯಿಸಿದೆ. ನನ್ನ ಪಾದಗಳನ್ನು ಶೂದ್ರ ಜಾತಿಯು ಆಶ್ರಯಿಸಿದೆ. ನನ್ನ ಸಾಮರ್ಥ್ಯವಿಶೇಷದಿಂದ ಇವೆಲ್ಲವೂ ಆಗುತ್ತದೆ.

ಋಗ್ವೇದಃ ಸಾಮವೇದಶ್ಚ ಯಜುರ್ವೇದೋಽಪ್ಯಥರ್ವಣಃ ।
ಮತ್ತಃ ಪ್ರಾದುರ್ಭವಂತ್ಯೇತೇ ಮಾಮೇವ ಪ್ರವಿಶಂತಿ ಚ ॥೧೪॥

ಋಗ್ವೇದ, ಸಾಮವೇದ ಮತ್ತು ಅಥರ್ವಣ ವೇದವು ನನ್ನಿಂದಲೇ ಹೊರ ಹೊಮ್ಮುತ್ತವೆ. ಮತ್ತು ಪುನಃ ನನ್ನನ್ನೇ ಪ್ರವೇಶಿಸುತ್ತವೆ.

ಯತಯಃ ಶಾಂತಿಪರಮಾ ಯತಾತ್ಮಾನೋ ಬುಭುತ್ಸವಃ ।
ಕಾಮಕ್ರೋಧದ್ವೇಷಮುಕ್ತಾ ನಿಃಸಂಗಾ ವೀತಕಲ್ಮಷಾಃ ॥೧೫॥

ಸತ್ತ್ವಸ್ಥಾ ನಿರಹಂಕಾರಾ ನಿತ್ಯಮಧ್ಯಾತ್ಮಕೋವಿದಾಃ ।
ಮಾಮೇವ ಸತತಂ ವಿಪ್ರಾಶ್ಚಿಂತಯಂತ ಉಪಾಸತೇ ॥೧೬॥

ಪರಮಶಾಂತರಾದ, ಪ್ರಯತ್ನಶೀಲರಾದ, ಜಿಜ್ಞಾಸುಗಳಾದ, ಕಾಮಕ್ರೋಧ ದ್ವೇಷರಹಿತರಾದ, ನಿಸ್ಸಂಗರಾದ, ಕಲ್ಮಷದೂರರಾದ, ಸತ್ತ್ವಗುಣದಲ್ಲಿಯೇ ಇರುವ, ನಿರಹಂಕಾರರಾದ, ಅಧ್ಯಾತ್ಮಕೋವಿದರಾದ, ವಿಪ್ರರಾದ ಯತಿಗಳು ನನ್ನನ್ನೇ ಸತತವಾಗಿ ಚಿಂತಿಸುತ್ತಾ ಉಪಾಸನೆಯನ್ನು ಮಾಡುತ್ತಾರೆ.

ಅಹಂ ಸಂವರ್ತಕೋ ವಹ್ನಿರಹಂ ಸಂವರ್ತಕೋಯಮಃ ।
ಅಹಂ ಸಂವರ್ತಕಃ ಸೂರ್ಯಸ್ತ್ವಹಂ ಸಂವರ್ತಕೋಽನಿಲಃ ॥೧೭॥

ನಾನೇ ಸಂವರ್ತಕವಹ್ನಿ. ನಾನೇ ಸಂವರ್ತಕ ಯಮ. ನಾನೇ ಸಂವರ್ತಕ ಸೂರ್ಯ. ನಾನೇ ಸಂವರ್ತಕ ವಾಯು.

ತಾರಾರೂಪಾಣಿ ದೃಶ್ಯಂತೇ ಯಾನ್ಯೇತಾನಿ ನಭಸ್ತಲೇ ।
ಮಮ ವೈ ರೋಮಕೂಪಾಣಿ ವಿದ್ಧಿ ತ್ವಂ ದ್ವಿಜಸತ್ತಮ
(ಮಮೈ ವೈತಾನಿ ರೂಪಾಣಿ) ॥೧೮॥

ಎಲೈ ದ್ವಿಜಶ್ರೇಷ್ಠನೇ, ಆಕಾಶದಲ್ಲಿ ಯಾವ ನಕ್ಷತ್ರಗಳು ಕಾಣುತ್ತವೆಯೋ ಅವುಗಳು ನನ್ನ ರೋಮಕೂಪಗಳೆಂದು ತಿಳಿ. (ಅವುಗಳನ್ನು ನನ್ನ ರೂಪಗಳೆಂದೇ ತಿಳಿ).

ರತ್ನಾಕರಾಃ ಸಮುದ್ರಾಶ್ಚ ಸರ್ವ ಏವ ಚತುರ್ದಿಶಮ್ ।
ವಸನಂ ಶಯನಂ ಚೈವ ನಿ(ವಿ)ಲಯಂ ಚೈವ ವಿದ್ಧಿ ಮೇ ॥೧೯॥

ರತ್ನಾಕರಗಳಾದ ನಾಲ್ಕು ದಿಕ್ಕುಗಳಲ್ಲಿರುವ ಎಲ್ಲಾ ಸಮುದ್ರಗಳು ನನಗೆ ವಾಸಸ್ಥಾನ ಮತ್ತು ಶಯನಸ್ಥಾನ ಮತ್ತು ನನ್ನ ಮನೆ ಎಂದು ತಿಳಿ.

ಕಾಮಂ ಕ್ರೋಧಂ ಚ ಹರ್ಷಂ ಚ ಭಯಂ ಮೋಹಂ ತಥೈವ ಚ ।
ಮಮೈವ ವಿದ್ಧಿ ರೋಮಾಣಿ ಸರ್ವಾಣ್ಯೇತಾನಿ ಸತ್ತಮ ॥೨೦॥

ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ಕಾಮ-ಕ್ರೋಧ, ಹರ್ಷ-ಭಯ, ಮೋಹ ಇವುಗಳೆಲ್ಲವೂ ನನ್ನ ರೋಮಗಳೆಂದು ತಿಳಿ.)ಇವುಗಳಿಗೆ ಅಭಿಮಾನಿಗಳಾದವರು ನನ್ನ ರೋಮಗಳನ್ನು ಆಶ್ರಯಿಸಿದ್ದಾರೆಂದು ತಿಳಿ).

ಪ್ರಾಪ್ನುವಂತಿ ನರಾ ವಿಪ್ರಾ ಯತ್ ಕೃತ್ವಾ ಕರ್ಮ ಶೋಭನಮ್ ।
ಸತ್ಯಂ ದಾನಂ ತಪಶ್ಚೋಗ್ರಮಹಿಂಸಾ ಚೈವ ಜಂತುಷು ॥೨೧॥

ಮದ್ವಿಧಾನೇನ ವಿಹಿತಾ ಮಮ ದೇಹವಿಹಾರಿಣಃ ।
ಮಯಾऽऽವಿರ್ಭೂತವಿಜ್ಞಾನಾ ವಿಚೇಷ್ಟಂತೇ ನ ಕಾಮತಃ ॥೨೨॥

ಸಮ್ಯಗ್ವೇದಮಧೀಯಾನಾ ಯಜಂತೇ ವಿವಿಧೈರ್ಮಖೈಃ ।
ಶಾಂತಾತ್ಮಾನೋ ಜಿತಕ್ರೋಧಾಃ ಪ್ರಾಪ್ನುವಂತಿ ದ್ವಿಜಾತಯಃ ॥೨೩॥

ಎಲೈ ಬ್ರಾಹ್ಮಣನೇ, ಯಾವ ಶುಭಕರ್ಮವನ್ನು ಮಾಡಿ ಮನುಷ್ಯರು ಸತ್ಯ, ದಾನ, ಉಗ್ರವಾದ ತಪಸ್ಸು, ಸರ್ವ ಜಂತುಗಳಲ್ಲಿ ಅಹಿಂಸೆ ಇಂತಹವುಗಳನ್ನು ಪಡೆಯುತ್ತಾರೆಯೋ ಮತ್ತು ನನ್ನ ಅನುಶಾಸನದಂತೆ ವಿಧಿಸಲ್ಪಟ್ಟ ಇಂತಹ ಗುಣಗಳನ್ನು ಪಡೆದು ವ್ಯಾಪ್ತನಾದ ನನ್ನ ದೇಹದಲ್ಲಿಯೇ ವಿಹರಿಸುತ್ತಾ, ನನ್ನ ಅನುಗ್ರಹದಿಂದ ದಿವ್ಯಜ್ಞಾನವನ್ನು ಪಡೆದು ಅನೇಕ ಯಜ್ಞಗಳಿಂದ ನನ್ನನ್ನು ಆರಾಧಿಸಿ ನನ್ನ ಇಚ್ಛೆಗೆ ಅನುಸಾರವಾಗಿ ನನ್ನ ಪೂಜಾತ್ಮಕವಾಗಿ ಮಾಡುತ್ತಾರೆಯೋ ಅಂತಹ ಶಾಂತಾತ್ಮರಿಂದ ಕ್ರೋಧವನ್ನು ಗೆದ್ದ ಬ್ರಾಹ್ಮಣರಿಂದ ಪ್ರಾಪ್ಯನಾದವನು ನಾನು.

ಪ್ರಾಪ್ತುಂ ನ ಶಕ್ಯೋ ಯೋ ವಿದ್ವನ್ ನರೈರ್ದುಷ್ಕೃತಕರ್ಮಭಿಃ ।
ಲೋಭಾಭಿಭೂತೈಃ ಕೃಪಣೈರನಾರ್ಯೈರಕೃತಾತ್ಮಭಿಃ ॥೨೪॥

ಎಲೈ ವಿದ್ವಾಂಸನೇ, ನಾನು ದುಷ್ಕರ್ಮಕಾರಿಗಳಾದ, ಲೋಭವಶರಾದ, ಕೃಪಣರಾದ, ಅನಾರ್ಯರಾದ, ಅಸಂಸ್ಕೃತರಾದ ಮನುಷ್ಯರಿಂದ ಎಂದೂ ಪ್ರಾಪ್ಯನಾಗುವುದಿಲ್ಲ.

ತಂ ಮಾಂ ಮಹಾಫಲಂ ವಿದ್ಧಿ ನರಾಣಾಂ ಭಾವಿತಾತ್ಮನಾಮ್ ।
ಸುದುಷ್ಪ್ರಾಪಂ ವಿಮೂಢಾನಾಂ ಮಾರ್ಗಂ ಯೋಗೈರ್ನಿಷೇವಿತಮ್ ॥

ಅಂತಹ ನನ್ನನ್ನು ಶುದ್ಧವಾದ ಮನಸ್ಸುಳ್ಳ ಮನುಷ್ಯರಿಗೆ ದೊರೆಯಬಹುದಾದ ಮಹಾಫಲವೆಂದು ತಿಳಿ. ನಾನು ವಿಮೂಢರಿಗೆ ಅಪ್ರಾಪ್ಯನಾದವನು. ಭಕ್ತಾದಿ ಉಪಾಯಗಳಿಂದ ನನ್ನ ಸೇವೆ ಮಾಡುವವರಿಗೆ ನಾನೇ ಮಾರ್ಗಭೂತನಾದವನು.

ಯದಾ ಯದಾ ಚ ಧರ್ಮಸ್ಯ ಗ್ಲಾನಿರ್ಭವತಿ ಭಾರತ(ಸತ್ತಮ) ।
ಅಭ್ಯುತ್ಥಾನಮಧರ್ಮಸ್ಯ ತದಾऽऽತ್ಮಾನಂ ಸೃಜಾಮ್ಯಹಮ್ ॥೨೬॥

ಎಲೈ ಭಾರತನೇ, ಯಾವಾಗ ಯಾವಾಗ ಧರ್ಮದ ಗ್ಲಾನಿ ಉಂಟಾಗುತ್ತದೆಯೋ ಮತ್ತು ಅಧರ್ಮದ ಉನ್ನತಿ ಉಂಟಾಗುತ್ತದೆಯೋ ಆಗ ನನ್ನನ್ನು ನಾನೇ ಸೃಷ್ಟಿ ಮಾಡಿಕೊಳ್ಳುತ್ತೇನೆ (ನಾನು ಅವತರಿಸುತ್ತೇನೆ).

ದೈತ್ಯಾ ಹಿಂಸಾನುರಕ್ತಾಶ್ಚ ಅವಧ್ಯಾಃ ಸುರಸತ್ತಮೈಃ ।
ರಾಕ್ಷಸಾಶ್ಚಾಪಿ ಲೋಕೇऽಸ್ಮಿನ್ ಯದೋತ್ಪತ್ಸ್ಯಂತಿ ದಾರುಣಾಃ ।
ತದಾऽಹಂ ಸಂಪ್ರಸೂಯಾಮಿ ಗೃಹೇಷು ಶುಭಕರ್ಮಣಾಮ್ ॥೨೭॥

ಪ್ರವಿಷ್ಯೋ ಮಾನುಷಂ ದೇಹಂ ಸರ್ವಂ ಪ್ರಶಮಯಾಮ್ಯಹಮ್ ॥೨೮॥

ಹಿಂಸಾನುರಕ್ತರಾದ, ಶ್ರೇಷ್ಠದೇವತೆಗಳಿಂದಲೂ ಅವಧ್ಯರಾದ, ಘೋರರಾದ ದೈತ್ಯರು ಮತ್ತು ರಾಕ್ಷಸರು ಯಾವಾಗ ಈ ಲೋಕದಲ್ಲಿ ಜನಿಸುವರೋ ಆಗ ನಾನು ಶುಭಕರ್ಮವನ್ನು ಆಚರಿಸುವವರ ಗೃಹದಲ್ಲಿ ಮಾನುಷ ದೇಹವನ್ನು ಧರಿಸಿ ಅವತಾರವನ್ನು ಮಾಡಿ ಎಲ್ಲ ಅನರ್ಥಗಳನ್ನೂ ನಾಶಗೊಳಿಸುತ್ತೇನೆ.

ಸೃಷ್ಟ್ವಾ ದೇವಮನುಷ್ಯಾಂಸ್ತು ಗಂಧರ್ವೋರಗರಾಕ್ಷಸಾನ್ ।
ಸ್ಥಾವರಾಣಿ ಚ ಭೂತಾನಿ ಸಂಹಾರಮ್ಯಾತ್ಮಮಾಯಯಾ ॥೨೯॥

ದೇವತೆಗಳನ್ನೂ, ಮನುಷ್ಯರನ್ನೂ, ಗಂಧರ್ವೋರಗ ರಾಕ್ಷಸರನ್ನೂ, ವೃಕ್ಷಪರ್ವತಾದಿ ಸ್ಥಾವರಗಳನ್ನೂ ಸೃಷ್ಟಿಮಾಡಿ ನನ್ನ ಇಚ್ಛೆ ಮತ್ತು ಸಾಮರ್ಥ್ಯದಿಂದಲೇ ಸಂಹಾರ ಮಾಡುತ್ತೇನೆ.

ಕರ್ಮಕಾಲೇ ಪುನರ್ದೇಹಮವಿಚಿಂತ್ಯಂ ಸೃಜಾಮ್ಯಹಮ್ ।
ಆವಿಶ್ಯ ಮಾನುಷಂ ದೇಹಂ ಮರ್ಯಾದಾಬಂಧಕಾರಣಾತ್ ॥೩೦॥

ಪಾಲನಕರ್ಮಕಾಲದಲ್ಲಿ ಅಚಿಂತ್ಯವಾದ ದೇಹವನ್ನು ತೆಗೆದುಕೊಂಡು ಮತ್ತು ಮನುಷ್ಯದೇಹವನ್ನು ಪ್ರವೇಶಿಸಿ ಲೋಕಮರ್ಯಾದೆಯನ್ನು ಸ್ಥಾಪಿಸುತ್ತೇನೆ.

ಶ್ವೇತಃ ಕೃತಯುಗೇ ವರ್ಣಃ ಪೀತಸ್ತ್ರೇತಾಯುಗೇ ಮಮ ।
ರಕ್ತೋ ದ್ವಾಪರಮಾಸಾದ್ಯ ಕೃಷ್ಣಃ ಕಲಿಯುಗೇ ತಥಾ ॥೩೧॥

ನಾನು ಕೃತಯುಗದಲ್ಲಿ ಶ್ವೇತವರ್ಣವನ್ನೂ, ತ್ರೇತಾಯುಗದಲ್ಲಿ ಪೀತವರ್ಣವನ್ನೂ, ದ್ವಾಪರಯುಗದಲ್ಲಿ ರಕ್ತವರ್ಣವನ್ನೂ, ಕಲಿಯುಗವು ಪ್ರಾಪ್ತವಾದಾಗ ಕೃಷ್ಣವರ್ಣವನ್ನೂ ಹೊಂದಿರುತ್ತೇನೆ.

ತ್ರಯೋ ಭಾಗಾ ಹ್ಯಧರ್ಮಸ್ಯ ತಸ್ಮಿನ್ ಕಾಲೇ ಭವಂತಿ ಚ ।
ಯದಾ ಭವತಿ ಮೇ ವರ್ಣಃ ಕೃಷ್ಣೋ ವೈ ಮುನಿಸತ್ತಮ ॥೩೨॥

ಎಲೈ ಮುನಿಶ್ರೇಷ್ಠನೇ, ಯಾವ ಕಾಲದಲ್ಲಿ ಅಧರ್ಮದ ಮೂರು ಪಾದಗಳು ಉಂಟಾಗುತ್ತವೋ ಆಗ ನನ್ನ ವರ್ಣವು ಕೃಷ್ಣವರ್ಣವಾಗುತ್ತದೆ (ತಪಸ್ಸು, ಶೌಚ, ದಯಾ, ಸತ್ಯ ಎಂಬುವು ಧರ್ಮದ ನಾಲ್ಕು ಪಾದಗಳು. ಅಹಂಕಾರ, ಸಂಗ, ಮದ ಮತ್ತು ಅನೃತ ಎಂಬುವು ಅಧರ್ಮದ ನಾಲ್ಕು ಪಾದಗಳು. ಈ ಅಧರ್ಮದ ಪಾದಗಳು ಕ್ರಮವಾಗಿ ಧರ್ಮದ ಪಾದಗಳನ್ನು ನಾಶಮಾಡುತ್ತವೆ. ಕಲಿಯುಗದಲ್ಲಿ ಮಯಸಂಗ ಮದಗಳಿಂದ ಧರ್ಮದ ಮೂರುಪಾದಗಳಾದ ತಪಸ್ಸು, ಶೌಚ ಮತ್ತು ದಯವೆಂಬ ಪಾದಗಳು ನಾಶವಾಗಿ ಸತ್ಯ ಎಂಬ ಒಂದೇ ಪಾದವು ಉಳಿಯುತ್ತದೆ. ಅನೃತವು ಅದಕ್ಕೆ ವಿರೋಧಿಯಾದುದು).

ಅಂತಕಾಲೇ ಚ ಸಂಪ್ರಾಪ್ತೇ ಕಾಲೋ ಭೂತ್ವಾತಿದಾರುಣಃ ।
ತ್ರೈಲೋಕ್ಯಂ ನಾಶಯಾಮ್ಯೇಕಃ ಕೃತ್ಸ್ನಂ ಸ್ಥಾವರಜಂಗಮಮ್ ॥೩೩॥

ಅಂತಕಾಲವು ಪ್ರಾಪ್ತವಾದಾಗ ಅತಿಘೋರವಾದ ಕಾಲನಾಮಕನಾಗಿ ನಾನೊಬ್ಬನೇ ಎಲ್ಲಾ ಸ್ಥಾವರ ಜಂಗಮಗಳಿಂದ ಕೂಡಿದ ಮೂರುಲೋಕಗಳನ್ನೂ ನಾಶಮಾಡುತ್ತೇನೆ.

ಅಹಂ ತ್ರಿವರ್ತ್ಮಾ ವಿಶ್ವಾತ್ಮಾ ಸರ್ವಲೋಕಸುಖಾವಹಃ ।
ಆವಿರ್ಭೂತಃ ಸರ್ವಗೋಽನಂತೋ ಹೃಷೀಕೇಶ ಉರುಕ್ರಮಃ ॥೩೪॥

ನಾನು ಸ್ವರ್ಗ-ನರಕ-ಭೂಮಿ ಎಂಬ ಮೂರು ಮಾರ್ಗಗಳಿಗೂ ಪ್ರೇರಕನಾದವನು (ಅಥವಾ ದೇವತೆಗಳ, ಮನುಷ್ಯರ ಮತ್ತು ಅಸುರರ ಮೂರು ಗತಿಗಳಿಗೂ ಪ್ರೇರಕನಾದವನು. ವಿಶ್ವವ್ಯಾಪಿಯಾದವನು. ಸರ್ವಲೋಕಕ್ಕೆ ಸುಖವನ್ನು ಕೊಡುವವನು). ನನಗೆ ನಾನೇ ಆವಿರ್ಭೂತನಾದವನು. ಸರ್ವತ್ರ ವ್ಯಾಪ್ತನಾದವನು. ಅನಂತನಾದವನು. ಇಂದ್ರಿಯಸ್ವಾಮಿಯಾದವನು ಮತ್ತು ಉರುಕ್ರಮನಾದವನು.

ಕಾಲಚಕ್ರಂ ನಯಾಮ್ಯೇಕೋ ಬ್ರಹ್ಮನ್ನಹಮರೂಪಕಮ್ ।
ಶಮನಂ ಸರ್ವಭೂತಾನಾಂ ಸರ್ವಲೋಕಕೃತೋದ್ಯಮಮ್ ॥೩೫॥

ಎಲೈ ಬ್ರಾಹ್ಮಣನೇ, ನಾನೊಬ್ಬನೇ ಸರ್ವಪ್ರಾಣಿಗಳಿಗೆ ನಾಶಕವಾದ, ಸರ್ವಲೋಕದ ಕಾರ್ಯಗಳಿಗೆ ಕಾರಣವಾದ ಅದೃಶ್ಯವಾದ ಕಾಲಚಕ್ರವನ್ನು ತಿರುಗಿಸುತ್ತೇನೆ.

ಏವಂ ಪ್ರಣಿಹಿತಃ ಸಮ್ಯಙ್ ಮಮಾತ್ಮಾ ಮುನಿಸತ್ತಮ ।
ಸರ್ವಭೂತೇಷು ವಿಪ್ರೇಂದ್ರ ನ ಚ ಮಾಂ ವೇತ್ತಿ ಕಶ್ಚನ ।
ಸರ್ವಲೋಕೇ ಚ ಮಾಂ ಭಕ್ತಾಃ ಪೂಜಯಂತಿ ಚ ಸರ್ವಶಃ ॥೩೬॥

ಎಲೈ ಮುನಿಶ್ರೇಷ್ಠನೇ, ಹೀಗೆ ನನ್ನ ಸ್ವರೂಪವು ಸರ್ವ ಜಡಚೇತನಗಳಲ್ಲಿಯೂ ಸನ್ನಿಹಿತವಾಗಿದೆ. ಎಲೈ ವಿಪ್ರೇಂದ್ರನೇ, ಆದರೆ ಯಾರೂ ನನ್ನನ್ನು ತಿಳಿದಿಲ್ಲ. ಎಲ್ಲ ಲೋಕಗಳಲ್ಲಿರುವ ಭಕ್ತರು ಎಲ್ಲ ರೀತಿಯಿಂದಲೂ ನನ್ನನ್ನು ಪೂಜೆ ಮಾಡುತ್ತಾರೆ.

ಯಚ್ಚ ಕಿಂಚಿತ್ ತ್ವಯಾ ಪ್ರಾಪ್ತಂ ಮಯಿ ಕ್ಲೇಶಾತ್ಮಕಂ ದ್ವಿಜ ।
ಸುಖೋದಯಾಯ ತತ್‌ಸರ್ವಂ ಶ್ರೇಯಸೇ ಚ ತವಾನಘ ॥೩೭॥

ಎಲೈ ಬ್ರಾಹ್ಮಣನೇ, ನನ್ನ ಉದರದಲ್ಲಿರುವಾಗ ನೀನು ಏನು ಕ್ಲೇಶಗಳನ್ನು ಅನುಭವಿಸಿದೆಯೋ ಅದೆಲ್ಲವೂ ಎಲೈ ಅನಘನೇ, ನಿನ್ನ ಸುಖೋದಯಕ್ಕೂ ಮತ್ತು ಶ್ರೇಯಸ್ಸಿಗೂ ಕಾರಣವಾಗುತ್ತವೆ.

ಯಚ್ಚ ಕಿಂಚಿತ್ ತ್ವಯಾ ಲೋಕೇ ದೃಷ್ಟಂ ಸ್ಥಾವರಜಂಗಮಮ್ ।
ವಿಹಿತಃ ಸರ್ವಥೈವಾಸೌ ಮಮಾತ್ಮಾ ಭೂತಭಾವನಃ ॥೩೮॥

ನೀನು ಲೋಕದಲ್ಲಿ ಯಾವ ಸ್ಥಾವರಜಂಗಮವನ್ನು ನೋಡಿದ್ದೀಯೋ ಆ ಎಲ್ಲ ಪ್ರಾಣಿಗಳನ್ನು ಸೃಷ್ಟಿಸುವ ನನ್ನ ಸ್ವರೂಪವು ಹಾಗೆಯೇ ಎಂದರೆ ಹಿಂದೆ ಹೇಳಿದ ಗುಣಗಳಿಂದ ವಿಶಿಷ್ಟವಾಗಿಯೇ ನಿಹಿತವಾಗಿದೆ.

ಅರ್ಧಂ ಮಮ ಶರೀರಸ್ಯ ಸರ್ವಲೋಕಪಿತಾಮಹಃ ।
ಅಹಂ ನಾರಾಯಣೋ ನಾಮ ಶಂಖಿಚಕ್ರಗದಾಧರಃ ॥೩೯॥

ಸರ್ವಲೋಕ ಪಿತಾಮಹನಾದ ಬ್ರಹ್ಮನು ನನ್ನ ಶರೀರದಿಂದ ಒಂದು ಭಾಗ. ನಾನು ಶಂಖ-ಚಕ್ರ-ಗದಾಧಾರಿಯಾದ ನಾರಾಯಣನು.

ಯಾವದ್ ಯುಗಾನಾಂ ವಿಪ್ರರ್ಷೇ ಸಹಸ್ರಪರಿವರ್ತನಾತ್ ।
ತಾವತ್ ಸ್ವಪಿಮಿ ವಿಶ್ವಾತ್ಮಾ ಸರ್ವಭೂತಾನಿ ಮೋಹಯನ್ ॥೪೦॥

ಎಲೈ ವಿಪ್ರರ್ಷಿಯೇ, ವಿಶ್ವಾಂತರ್ಯಾಮಿಯಾದ ನಾನು ಎಲ್ಲ ಪ್ರಾಣಿಗಳಿಗೂ ನಿದ್ರೆಯಿಂದ ಮೋಹವನ್ನುಂಟುಮಾಡಿ ಸಹಸ್ರ ಚತುರ್ಯುಗಗಳನ್ನು ಕಳೆಯುವವರೆಗೆ ಯೋಗನಿದ್ರೆಯನ್ನು ಮಾಡುತ್ತೇನೆ.

ಏವಂ ಸರ್ವಮಹಂ ಕಾಲಮಿಹಾಸ್ಯೇ ಮುನಿಸತ್ತಮ ।
ಅಶಿಶುಃ ಶಿಶುರೂಪೇಣ ಯಾವದ್ ಬ್ರಹ್ಮಾ ನ ಬುಧ್ಯತೇ ॥೪೧॥

ಹೀಗೆ ಎಲೈ ಮುನಿಶ್ರೇಷ್ಠನೇ, ಆ ಸರ್ವಕಾಲವನ್ನೂ ಎಂದರೆ ಬ್ರಹ್ಮದೇವರು ಎಚ್ಚರಗೊಳ್ಳುವವರೆಗೆ ಇರುವ ಕಾಲವನ್ನು ಶಿಶುವಲ್ಲದ ನಾನು ಶಿಶುರೂಪದಿಂದಲೇ ಇದ್ದು ಇಲ್ಲಿ ಕಳೆಯುತ್ತೇನೆ.

ಮಯಾ ಚ ದತ್ತೋ ವಿಪ್ರಾಗ್ರ್ಯ ವರಸ್ತೇ ಬ್ರಹ್ಮರೂಪಿಣಾ ।
ಅಸಕೃತ್ಪರಿತುಷ್ಟೇನ ವಿಪ್ರರ್ಷಿಗಣಪೂಜಿತ ॥೪೨॥

ಎಲೈ ವಿಪ್ರಶ್ರೇಷ್ಠನೇ, ವಿಪ್ರರ್ಷಿಗಣಪೂಜಿತನೇ, ಪುನಃ ಪುನಃ ನನ್ನನ್ನು ಸಂತೋಷಪಡಿಸಿದ ನಿನಗೆ ನಾನು ಬ್ರಹ್ಮನ ಅಂತರ್ಯಾಮಿಯಾಗಿದ್ದು ವರವನ್ನು ನೀಡಿದ್ದೇನೆ.

ಸರ್ವಮೇಕಾರ್ಣವಂ ದೃಷ್ಟ್ವಾ ನಷ್ಟಂ ಸ್ಥಾವರಜಂಗಮಮ್ ।
ವಿಕ್ಲವೋಽಸಿ ಮಯಾ ಜ್ಞಾತಸ್ತತಸ್ತೇ ದರ್ಶಿತಂ ಜಗತ್ ॥೪೩॥

ಜಗತ್ತೆಲ್ಲವೂ ಏಕಾರ್ಣವವಾದುದನ್ನು, ಸ್ಥಾವರಜಂಗಮವೆಲ್ಲವೂ ನಷ್ಟವಾದುದನ್ನು ನೋಡಿ ನೀನು ಗಾಬರಿಗೊಂಡಿದ್ದೀಯೆ ಎಂದು ನಾನು ತಿಳಿದು ಅದಕ್ಕಾಗಿ ನಿನಗೆ ನಾನು ನನ್ನ ಉದರದಲ್ಲಿ ಜಗತ್ತನ್ನು ತೋರಿಸಿದೆ.

ಅಭ್ಯಂತರಂ ಶರೀರಸ್ಯ ಪ್ರವಿಷ್ಟೋಽಸಿ ಯದಾ ಮಮ ।
ದೃಷ್ಟ್ವಾ ಲೋಕಂ ಸಮಸ್ತಂ ಚ ವಿಸ್ಮಿತೋ ನಾವಬುಧ್ಯಸೇ ॥೪೪॥

ನನ್ನ ಶರೀರದೊಳಗೆ ಪ್ರವೇಶಿಸಿ ಎಲ್ಲಾ ಲೋಕಗಳನ್ನೂ ನೋಡಿ ವಿಸ್ಮಿತನಾಗಿ ನೀನು ಅವಬೋಧವನ್ನೇ ಪಡೆಯಲಿಲ್ಲ.

ತತೋಽಸಿ ವಕ್ತ್ರಾದ್ ವಿಪ್ರರ್ಷೇ ದ್ರುತಂ ನಿಃಸಾರಿತೋ ಮಯಾ ।
ಆಖ್ಯಾತಸ್ತೇ ಮಯಾ ಚಾತ್ಮಾ ದುರ್ಜ್ಞೇಯೋ ಹಿ ಸುರಾಸುರೈಃ ॥೪೫॥

ಎಲೈ ವಿಪ್ರರ್ಷಿಯೇ, ಆದ್ದರಿಂದ ನಾನು ನಿನ್ನನ್ನು ನನ್ನ ಮುಖದಿಂದ ಶೀಘ್ರವಾಗಿ ಹೊರದೂಡಿದೆ ಮತ್ತು ಸುರಾಸುರರಿಂದ ತಿಳಿಯಲು ಸಾಧ್ಯವಿಲ್ಲದ ನನ್ನ ಸ್ವರೂಪವನ್ನು ನಿನಗೆ ಉಪದೇಶವನ್ನು ಮಾಡಿದೆ.

ಯಾವತ್ ಸ ಭಗವಾನ್ ಬ್ರಹ್ಮಾ ನ ಬುಧ್ಯೇತ ಮಹಾತಪಾಃ ।
ತಾವತ್ ತ್ವಮಿಹ ವಿಪ್ರರ್ಷೇ ವಿಸ್ರಬ್ಧಶ್ಚರ ವೈ ಸುಖಮ್ ॥೪೬॥

ಎಲೈ ವಿಪ್ರರ್ಷಿಯೇ, ಮಹಾತಪಸ್ವಿಗಳಾದ ಪೂಜ್ಯರಾದ ಬ್ರಹ್ಮದೇವರು ಎಚ್ಚರಗೊಳ್ಳುವವರೆಗೆ ನೀನು ಇಲ್ಲಿ ಸುಖವಾಗಿ ವಿಶ್ವಾಸದಿಂದ ಇರು.

ತತೋ ವಿಬುದ್ಧೇ ತಸ್ಮಿಂಸ್ತು ಸರ್ವಲೋಕಪಿತಾಮಹೇ ।
ಏಕೀಭೂಯ ಹಿ ಸ್ರಕ್ಷ್ಯಾಮಿ ಶರೀರಾಣಿ ದ್ವಿಜೋತ್ತಮ ॥೪೭॥

ಎಲೈ ದ್ವಿಜೋತ್ತಮನೇ, ಅನಂತರ ಸರ್ವಲೋಕಪಿತಾಮಹರಾದ ಆ ಬ್ರಹ್ಮದೇವರು ಎದ್ದಮೇಲೆ ಅವರಲ್ಲಿ ಪ್ರವೇಶವನ್ನು ಮಾಡಿ ಎಲ್ಲ ಶರೀರಗಳನ್ನೂ ಸೃಷ್ಟಿಸುವೆನು.

ಆಕಾಶಂ ಪೃಥಿವೀಂ ಜ್ಯೋತಿರ್ವಾಯುಂ ಸಲಿಲಮೇವ ಚ ।
ಲೋಕೇ ಯಚ್ಚ ಭವೇಚ್ಛೇಷಮಿಹ ಸ್ಥಾವರಜಂಗಮಮ್ ॥೪೮॥

ಆಕಾಶ, ಪೃಥಿವೀ, ಅಗ್ನಿ, ವಾಯು, ಜಲ ಮತ್ತು ಈ ಲೋಕದಲ್ಲಿ ಏನೇನು ಸ್ಥಾವರಜಂಗಮವಿದೆಯೋ (ಅವೆಲ್ಲವನ್ನೂ ಸೃಷ್ಟಿಸುವೆನು).

ಮಾರ್ಕಂಡೇಯಃ

ಇತ್ಯುಕ್ತ್ವಾ ಽಂತರ್ಹಿತಸ್ತಾತ ಸ ದೇವಃ ಪರಮಾದ್ಭುತಃ ।
ಪ್ರಜಾಶ್ಚೇಮಾಃ ಪ್ರಪಶ್ಯಾಮಿ ವಿಚಿತ್ರಾ ವಿವಿಧಾಃ ಕೃತಾಃ ॥೪೯॥

ಮಾರ್ಕಂಡೇಯ– ಎಲೈ ಪ್ರೀತಿಪಾತ್ರನೇ, ಹೀಗೆ ಹೇಳಿ ಆ ಪರಮಾದ್ಭುತನಾದ ದೇವನು ಅಂತರ್ಧಾನವನ್ನು ಹೊಂದಿದನು. ಅನಂತರ ಈ ಪ್ರಜೆಗಳನ್ನು ಅವನು ವಿಧವಿಧವಾಗಿ ಸೃಷ್ಟಿಸುತ್ತಿರುವುದನ್ನು ನೋಡುತ್ತಿದ್ದೇನೆ.

ಏವಂ ದೃಷ್ಟಂ ಮಯಾ ರಾಜಂಸ್ತಸ್ಮಿನ್ ಪ್ರಾಪ್ತೇ ಯುಗಕ್ಷಯೇ ।
ಆಶ್ಚರ್ಯಂ ಭರತಶ್ರೇಷ್ಠ ಸರ್ವಧರ್ಮಭೃತಾಂ ವರ ॥೫೦॥

ಎಲೈ ಭರತಶ್ರೇಷ್ಠನೇ, ಎಲೈ ಎಲ್ಲಾ ಧರ್ಮಿಷ್ಠನಲ್ಲಿ ಶ್ರೇಷ್ಠನಾದವನೇ, ಎಲೈ ರಾಜನೇ, ಯುಗಕ್ಷಯವು ಪ್ರಾಪ್ತವಾದಾಗ ಹೀಗೆ ನಾನು ಆಶ್ಚರ್ಯವನ್ನು ನೋಡಿದೆನು.

ಯಃ ಸ ದೇವೋ ಮಯಾ ದೃಷ್ಟಃ ಪುರಾ ಪದ್ಮಾಯತೇಕ್ಷಣಃ ।
ಸ ಏಷ ಪುರುಷವ್ಯಾಘ್ರ ಸಂಬಂಧೀ ತೇ ಜನಾರ್ದನಃ ॥೫೧॥

ಎಲೈ ಪುರುಷವ್ಯಾಘ್ರನೇ, ನಾನು ಹಿಂದೆ ಯಾವ ಪದ್ಮನೇತ್ರನಾದ ದೇವದೇವನನ್ನು ನೋಡಿದೆನೋ ಅವನೇ ನಿನ್ನ ಸಂಬಂಧಿಯಾದ ಈ ಜನಾರ್ದನ (ಕೃಷ್ಣನಾಗಿದ್ದಾನೆ).

ಅಸ್ಯೈವ ವರದಾನಾದ್ಧಿ ಸ್ಮೃತಿರ್ನ ಪ್ರಜಹಾತಿ ಮಾಮ್ ।
ದೀರ್ಘಮಾಯುಶ್ಚ ಕೌಂತೇಯ ಸ್ವಚ್ಛಂದಮರಣಂ ಮಮ ॥೫೨॥

ಎಲೈ ಕೌಂತೇಯನೇ, ಇವನ ವರದಾನದ ಬಲದಿಂದಲೇ ನನಗೆ ಸ್ಮೃತಿಯು ನಾಶವಾಗಿಲ್ಲ ಮತ್ತು ದೀರ್ಘಾಯುಷ್ಯ ಮತ್ತು ಸ್ವಚ್ಛಂದ ಮರಣಗಳು ಉಂಟಾಗಿವೆ.

ಸ ಏಷ ಕೃಷ್ಣೋ ವಾರ್ಷ್ಣೇಯಃ ಪುರಾಣಪುರುಷೋ ವಿಭುಃ ।
ಆಸ್ತೇ ಹರಿರಚಿಂತ್ಯಾತ್ಮಾ ಕ್ರೀಡನ್ನಿವ ಮಹಾಭುಜಃ ॥೫೩॥

ವೃಷ್ಣಿಕುಲದಲ್ಲಿ ಜನಿಸಿದ ಈ ಕೃಷ್ಣನೇ ಆ ಪುರಾಣ ಪುರುಷನಾದ ವಿಭುವಾದ ಅಚಿಂತ್ಯಸ್ವರೂಪನಾದ ಹರಿಯು. ಮಹಾಭುಜನಾದ ಇವನು ಕ್ರೀಡೆಯನ್ನು ಮಾಡುವವನಂತೆ ಇದ್ದಾನೆ.

ಏಷ ಧಾತಾ ವಿಧಾತಾ ಚ ಸಂಹರ್ತಾ ಚೈವ ಶಾಶ್ವತಃ ।
ಶ್ರೀವತ್ಸವಕ್ಷಾ ಗೋವಿಂದಃ ಪ್ರಜಾಪತಿಪತಿಃ ಪ್ರಭುಃ ॥೫೪॥

ಇವನೇ ಧಾತಾ; ವಿಧಾತಾ; ಸಂಹಾರವನ್ನು ಮಾಡುವವನು; ಶಾಶ್ವತನಾದವನು; ಶ್ರೀವತ್ಸವಕ್ಷಸ್ಥಲವುಳ್ಳವನು; ವೇದಪ್ರತಿಪಾದ್ಯನಾದವನು; ಪ್ರಜಾಪತಿಗೆ ಪತಿಯಾದವನು; ಸರ್ವಸಮರ್ಥನಾದವನು.

ದೃಷ್ಟ್ವೇಮಂ ವೃಷ್ಣಿಪ್ರವರಂ ಸ್ಮೃತಿರ್ಮಾಮಿಯಮಾಗತಾ ।
ಆದಿದೇವಮಜಂ ಜಿಷ್ಣುಂ ಪುರುಷಂ ಪೀತವಾಸಸಮ್ ॥೫೫॥

ಸರ್ವೇಷಾಮೇವ ಭೂತಾನಾಂ ಪಿತಾ ಮಾತಾ ಚ ಮಾಧವಃ ।
ಗಚ್ಛಧ್ವಮೇನಂ ಶರಣಂ ಶರಣ್ಯಂ ಕೌರವರ್ಷಭಾಃ ॥೫೬॥

ಈ ಆದಿದೇವನಾದ ಅಜನಾದ ಜಯಶೀಲನಾದ ಪೀತಾಂಬರಧಾರಿಯಾದ ಪುರುಷನಾದ ವೃಷ್ಣಿಶ್ರೇಷ್ಠನನ್ನು ನೋಡಿ ನನಗೆ ಹಿಂದಿನ ಸ್ಮೃತಿಯೆಲ್ಲವೂ ಉಂಟಾಯಿತು. ಮಧುಕುಲದಲ್ಲಿ ಜನಿಸಿದ ಈ ಕೃಷ್ಣನು ಎಲ್ಲ ಜೀವರಿಗೂ ತಂದೆಯೂ ಹೌದು, ತಾಯಿಯೂ ಹೌದು. ಎಲೈ ಕೌರವಶ್ರೇಷ್ಠರೇ, ಶರಣುಹೊಂದಲು ಯೋಗ್ಯವಾದ ಇವನನ್ನು ಸರ್ವಾತ್ಮನಾ ಶರಣು ಹೊಂದಿ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ನವಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ನಾಲ್ಕನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ತೈದನೆಯ ಅಧ್ಯಾಯ

ಶ್ರೀಕೃಷ್ಣನಲ್ಲಿ ಪಾಂಡವರ ಶರಣಾಗತಿ. ಕೃಷ್ಣನಿಂದ ಅವರಿಗೆ ಸಾಂತ್ವನ.
ಮಾರ್ಕಂಡೇಯರಿಂದ ಕಲಿಯುಗದ ಧರ್ಮದ ಮತ್ತು
ಕಲ್ಕಿಯ ಅವತಾರದ ವರ್ಣನೆ.

ವೈಶಂಪಾಯನಃ

ಏವಮುಕ್ತಾಶ್ಚ ತೇ ಪಾರ್ಥಾ ಯಮೌ ಚ ಪುರುಷರ್ಷಭೌ ।
ದ್ರೌಪದ್ಯಾ ಸಹಿತಾಃ ಸರ್ವೇ ನಮಶ್ಚಕ್ರುರ್ಜನಾರ್ದನಮ್ ॥೧॥

ವೈಶಂಪಾಯನ– ಹೀಗೆ ಹೇಳಲ್ಪಟ್ಟ ಕುಂತೀಪುತ್ರರು ಮತ್ತು ಪುರುಷಶ್ರೇಷ್ಠರಾದ ನಕುಲಸಹದೇವರು ದ್ರೌಪದಿಯಿಂದ ಸಹಿತರಾಗಿ ಎಲ್ಲರೂ ಕೃಷ್ಣನಿಗೆ ನಮಸ್ಕಾರವನ್ನು ಮಾಡಿದರು.

ಸ ಚೈತಾನ್ ಪುರುಷವ್ಯಾಘ್ರ ಸಾಮ್ನಾ ಪರಮವಲ್ಗುನಾ ।
ಸಾಂತ್ವಯಾಮಾಸ ಮಾನಾರ್ಹೋ ಮಾನ್ಯಮಾನೋ ಯಥಾವಿಧಿ ॥೨॥

ಎಲೈ ಪುರುಷವ್ಯಾಘ್ರನೇ, ಸನ್ಮಾನಕ್ಕೆ ಯೋಗ್ಯನಾದ ಮತ್ತು ಹೀಗೆ ವಿಧಿವತ್ತಾಗಿ ಸನ್ಮಾನಿಸಲ್ಪಟ್ಟ ಶ್ರೀಕೃಷ್ಣನು ಪರಮಮಧುರವಾದ ಮಾತುಗಳಿಂದ ಅವರನ್ನು ಸಮಾಧಾನಪಡಿಸಿದನು.

ಯುಧಿಷ್ಠಿರಸ್ತು ಕೌಂತೇಯೋ ಮಾರ್ಕಂಡೇಯಂ ಮಹಾಮುನಿಮ್ ।
ಪುನಃ ಪಪ್ರಚ್ಛ ಧರ್ಮಾತ್ಮಾ ಭವಿಷ್ಯಾಂ ಜಗತೋ ಗತಿಮ್ ॥೩॥

ಧರ್ಮಾತ್ಮನಾದ ಕುಂತೀಪುತ್ರನಾದ ಯುಧಿಷ್ಠಿರನು ಮಾರ್ಕಂಡೇಯ ಮಹಾಮುನಿಯನ್ನು ಕುರಿತು ಮುಂದೆ ಉಂಟಾಗಲಿರುವ ಜಗತ್ತಿನ ಸ್ಥಿತಿಯನ್ನು ಕುರಿತು ಪುನಃ ಹೀಗೆ ಪ್ರಶ್ನೆಯನ್ನು ಮಾಡಿದನು.

ಆಶ್ಚರ್ಯಭೂತಂ ಭವತಃ ಶ್ರುತಂ ನೋ ವದತಾಂ ವರ ।
ಮುನೇ ಭಾರ್ಗವ ಯದ್ ವೃತ್ತಂ ಯುಗಾದೌ ಪ್ರಭವಾತ್ಯಯಮ್ ॥೪॥

ಎಲೈ ಭಾರ್ಗವ ಋಷಿಗಳೇ, ಮಾತನಾಡುವವರಲ್ಲಿ ಶ್ರೇಷ್ಠರಾದವರೇ, ಯುಗದ ಪ್ರಾರಂಭದಲ್ಲಿ ಉಂಟಾದ ಆಶ್ಚರ್ಯಭೂತವಾದ ಸೃಷ್ಟಿಸಂಹಾರಗಳನ್ನು ನಾವು ನಿಮ್ಮಿಂದ ಕೇಳಿದೆವು.

ಅಸ್ಮಿನ್ ಕಲಿಯುಗೇ ತ್ವಸ್ತಿ ಪುನಃ ಕೌತೂಹಲಂ ಮಮ ।
ಸಮಾಕುಲೇಷು ಧರ್ಮೇಷು ಕಿಂ ನು ಶೇಷಂ ಭವಿಷ್ಯತಿ ॥೫॥

ಈ ಕಲಿಯುಗದ ವಿಷಯದಲ್ಲಿ ನನಗೆ ಪುನಃ ಕುತೂಹಲವಿದೆ. ಎಲ್ಲಾ ಧರ್ಮಗಳು ಸಂಕಟಕ್ಕೆ ಒಳಗಾದಾಗ ಏನು ಉಳಿಯುವುದು?

ಕಿಂವೀರ್ಯಾ ಮಾನವಾಸ್ತತ್ರ ಕಿಮಾಹಾರವಿಹಾರಿಣಃ ।
ಕಿಮಾಯುಷಃ ಕಿಂವಸನಾ ಭವಿಷ್ಯಂತಿ ಯುಗಕ್ಷಯೇ ॥೬॥

ಯುಗಕ್ಷಯದ ಸಮಯದಲ್ಲಿ ಮಾನವರಿಗೆ ಎಂತಹ ಸಾಮರ್ಥ್ಯವಿರುತ್ತದೆ? ಎಂತಹ ಆಹಾರವಿಹಾರಗಳು ಇರುತ್ತವೆ? ಅವರ ಆಯುಷ್ಯವೆಷ್ಟು? ಅವರಿಗೆ ಎಂತಹ ವಸ್ತ್ರಗಳು ಇರುವವು?

ಕಾಂ ಚ ಕಾಷ್ಠಾಂ ಸಮಾಸಾದ್ಯ ಪುನಃ ಸಂಪತ್ಸ್ಯತೇ ಕೃತಮ್ ।
ವಿಸ್ತರೇಣ ಮುನೇ ಬ್ರೂಹಿ ವಿಚಿತ್ರಾಣೀಹ ಭಾಷಸೇ ॥೭॥

ಯಾವ ಅಧರ್ಮದ ತುದಿಯನ್ನು ಮುಟ್ಟಿ ಪುನಃ ಕೃತಯುಗವು ಪ್ರಾರಂಭವಾಗುವುದು? ಎಲೈ ಋಷಿಗಳೇ, ಈ ವಿಷಯಗಳನ್ನು ವಿಸ್ತಾರವಾಗಿ ನಿರೂಪಿಸಿ. ನೀವು ವಿಚಿತ್ರವಾಗಿ ಮಾತನಾಡುತ್ತೀರಿ (ಎಂದು ಪ್ರಶ್ನೆಮಾಡಿದನು).

ಇತ್ಯುಕ್ತಃ ಸ ಮುನಿಶ್ರೇಷ್ಠಃ ಪುನರೇವಾಭ್ಯಭಾಷತ ।
ರಮಯನ್ ವೃಷ್ಣಿಶಾರ್ದೂಲಂ ಪಾಂಡವಾಂಶ್ಚ ಮಹಾನೃಷಿಃ ॥೮॥

ಹೀಗೆ ಹೇಳಲ್ಪಟ್ಟ ಆ ಋಷಿಶ್ರೇಷ್ಠರು ವೃಷ್ಣಿವೀರನಾದ ಕೃಷ್ಣನನ್ನು ಮತ್ತು ಪಾಂಡವರನ್ನು ಸಂತೋಷಪಡಿಸುತ್ತಾ ಪುನಃ ಮಾತನಾಡಿದರು.

ಭವಿಷ್ಯಂ ಸರ್ವಲೋಕಸ್ಯ ವೃತ್ತಾಂತಂ ಭರತರ್ಷಭ ।
ಕಲುಷಂ ಕಾಲಮಾಸಾದ್ಯ ಕಥ್ಯಮಾನಂ ನಿಬೋಧ ಮೇ ॥೯॥

ಎಲೈ ಭರತರ್ಷಭನೇ, ಯುಗಕ್ಷಯದ ಕೆಟ್ಟ ಕಾಲವನ್ನು ತಲುಪಿದಾಗ ಸರ್ವಲೋಕದ ವೃತ್ತಾಂತವು ಮುಂದೆ ಹೇಗಿರುವುದೆಂದು ನಾನು ಹೇಳುವುದನ್ನು ನೀನು ಆಲಿಸು.

ಕೃತೇ ಚತುಷ್ಪಾತ್ ಸಕಲೋ ನಿರ್ವ್ಯಾಜೋಪಾಧಿವರ್ಜಿತಃ ।
ವೃಷಃ ಪ್ರತಿಷ್ಠಿತೋ ಧರ್ಮೋ ಮನುಷ್ಯೇ ಭರತರ್ಷಭ ॥೧೦॥

ಎಲೈ ಭರತಶ್ರೇಷ್ಠನೇ, ಕೃತಯುಗದಲ್ಲಿ ಯಾವ ಕಪಟವೂ, ಫಲೋದ್ದೇಶವೂ ಇಲ್ಲದೆ ಪೂರ್ಣವಾದ ಶ್ರೇಷ್ಠವಾದ ಧರ್ಮವು ನಾಲ್ಕುಪಾದಗಳಿಂದ ಕೂಡಿ ಮನುಷ್ಯರಲ್ಲಿ ಪ್ರತಿಷ್ಠಿತವಾಗಿರುತ್ತದೆ.

ಅಧರ್ಮಪಾದವಿದ್ಧಸ್ತು ತ್ರಿಭಿರಂಶೈಃ ಪ್ರತಿಷ್ಠಿತಃ ।
ತ್ರೇತಾಯಾಂ ದ್ವಾಪರೇಽರ್ಧೇನ ವ್ಯಾಮಿಶ್ರೋ ಧರ್ಮ ಉಚ್ಯತೇ॥೧೧॥

ತ್ರೇತಾಯುಗದಲ್ಲಿ ಅಹಂಕಾರ ಎಂಬ ಅಧರ್ಮಪಾದದಿಂದ ತಪಸ್ಸೆಂಬ ಧರ್ಮಪಾದವು ನಷ್ಟವಾಗಿ ಉಳಿದ ಶೌಚ, ದಯಾ ಮತ್ತು ಸತ್ಯ ಎಂಬ ಮೂರುಪಾದಗಳಿಂದ ಪ್ರತಿಷ್ಠಿತವಾಗಿರುತ್ತದೆ. ದ್ವಾಪರಯುಗದಲ್ಲಿ ವಿಷಯಾಸಕ್ತಿಯಿಂದ ಶೌಚವು ನಷ್ಟವಾಗಿ ಅಧರ್ಮ ಕಲುಷಿತವಾದ ಧರ್ಮವು ಎರಡು ಪಾದಗಳಿಂದ ಉಳಿದಿರುತ್ತದೆ.

ತ್ರಿಭಿರಂಶೈರಧರ್ಮಸ್ತು ಲೋಕಾನಾಕ್ರಮ್ಯ ತಿಷ್ಠತಿ ।
ಚತುರ್ಥಾಂಶೇನ ಧರ್ಮಸ್ತು ಮನುಷ್ಯಾನುಪತಿಷ್ಠತಿ ॥೧೨॥

ಕಲಿಯುಗದಲ್ಲಿ ಅಧರ್ಮವು ಸ್ಮಯ, ಸಂಗ, ಮದ ಎಂಬ ಮೂರು ಪಾದದಿಂದ ಜಗತ್ತನ್ನು ಆಕ್ರಮಿಸಿದಾಗ ಮನುಷ್ಯರಲ್ಲಿ ಸತ್ಯ ಎಂಬ ಒಂದೇ ಪಾದದಿಂದ ಧರ್ಮವು ಉಳಿಯುತ್ತದೆ.

ತಾಮಸಂ ಯುಗಮಾಸಾದ್ಯ ತದಾ ಭರತಸತ್ತಮ ।
ಆಯುರ್ವೀರ್ಯಮಥೋ ಬುದ್ಧಿರ್ಬಲಂ ತೇಜಶ್ಚ ಪಾಂಡವ ।
ಮನುಷ್ಯಾಣಾಮನುಯುಗಂ ಹ್ರಸತೀತಿ ನಿಬೋದ ಮೇ ॥೧೩॥

ಎಲೈ ಪಾಂಡವನೇ, ಮನುಷ್ಯರ ಆಯುಸ್ಸು, ವೀರ್ಯ, ಬುದ್ಧಿ, ಬಲ, ತೇಜಸ್ಸುಗಳು ಯುಗದಿಂದ ಯುಗಕ್ಕೆ ಹೋಗುತ್ತಾ ಕಡಿಮೆಯಾಗುತ್ತವೆ ಎಂದು ನನ್ನಿಂದ ತಿಳಿ.

ರಾಜಾನೋ ಬ್ರಾಹ್ಮಣಾ ವೈಶ್ಯಾಃ ಶೂದ್ರಾಶ್ಚೈವ ಯುಧಿಷ್ಠಿರ ।
ವ್ಯಾಜೈರ್ಧರ್ಮಂ ಚರಿಷ್ಯಂತಿ ಧರ್ಮವೈತಂಸಿಕಾ ನರಾಃ ॥೧೪॥

ಎಲೈ ಯುಧಿಷ್ಠಿರನೇ, ರಾಜರು, ಬ್ರಾಹ್ಮಣರು, ವೈಶ್ಯರು ಮತ್ತು ಶೂದ್ರರು ಫಲದ ಉದ್ದೇಶದಿಂದ ಧರ್ಮವನ್ನು ಆಚರಿಸುವರು. ಮನುಷ್ಯರು ಕುಟಿಲತೆಯಿಂದ ಧರ್ಮವನ್ನು ಆಚರಿಸುವರು.

ಸತ್ಯಂ ಸಂಕ್ಷೇಪ್ಸ್ಯತೇ ಲೋಕೇ ನರೈಃ ಪಂಡಿತಮಾನಿಭಿಃ ।
ಸತ್ಯಹಾನ್ಯಾ ತತಸ್ತೇಷಾಮಾಯುರಲ್ಪಂ ಭವಿಷ್ಯತಿ ॥೧೫॥

ತಮ್ಮನ್ನು ಪಂಡಿತರೆಂದು ತಿಳಿದ ಮನುಷ್ಯರು ಲೋಕದಲ್ಲಿ ಸತ್ಯವನ್ನು ವಿನಾಶ ಮಾಡುತ್ತಾರೆ. ಸತ್ಯದ ನಾಶದಿಂದ ಅವರಿಗೆ ಅಲ್ಪಾಯುಸ್ಸು ಉಂಟಾಗುವುದು.

ಆಯುಷಃ ಪ್ರಕ್ಷಯಾದ್ ವಿದ್ಯಾಂ ನ ಶಕ್ಷ್ಯಂತ್ಯುಪಜೀವಿತುಮ್ ।
ವಿದ್ಯಾಹೀನಾನವಿಜ್ಞಾನಾಲ್ಲೋಭೋಽಪ್ಯಭಿಭವಿಷ್ಯತಿ ॥೧೬॥

ಆಯುಸ್ಸಿನ ಕ್ಷಯ ಉಂಟಾಗುವುದರಿಂದ ಅವರು ವಿದ್ಯೆಯನ್ನು ಸಂಪಾದಿಸಿ ಉಪಜೀವನವನ್ನು ಮಾಡಲು ಸಾಧ್ಯವಾಗುವುದಿಲ್ಲ. ವಿದ್ಯಾಹೀನರಾದವರಿಗೆ ಅಜ್ಞಾನದಿಂದ ಲೋಭವು ಉಂಟಾಗುವುದು.

ಲೋಭಕ್ರೋಧಪರಾ ಮೂಢಾಃ ಕಾಮಾಸಕ್ತಾಶ್ಚ ಮಾನವಾಃ ।
ವೈರಬದ್ಧಾ ಭವಿಷ್ಯಂತಿ ಪರಸ್ಪರವಧೈಷಿಣಃ ॥೧೭॥

ಲೋಭ ಕ್ರೋಧಗಳಿಗೆ ವಶರಾಗಿ ಜ್ಞಾನಶೂನ್ಯರಾಗಿ ಕಾಮಾಸಕ್ತರಾದ ಮನುಷ್ಯರು ಪರಸ್ಪರ ವಧೆಯನ್ನು ಬಯಸಿ ವೈರವನ್ನು ಮಾಡುವರು.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾಃ ಸಂಕೀರ್ಯಂತಃ ಪರಸ್ಪರಮ್ ।
ಶೂದ್ರತುಲ್ಯಾ ಭವಿಷ್ಯಂತಿ ತಪಸತ್ಯವಿವರ್ಜಿತಾಃ ।
ಅಂತ್ಯಾ ಮಧ್ಯಾ ಭವಿಷ್ಯಂತಿ ಮಧ್ಯಾಶ್ಚಾಂತ್ಯಾ ನ ಸಂಶಯಃ ॥೧೮॥

ಬ್ರಾಹ್ಮಣರು, ಕ್ಷತ್ರಿಯರು ಮತ್ತು ವೈಶ್ಯರು ಪರಸ್ಪರ ವರ್ಣಸಾಂಕರ್ಯವನ್ನು ಮಾಡುತ್ತಾ ತಪಸ್ಸತ್ಯವಿವರ್ಜಿತರಾಗಿ ಶೂದ್ರರಿಗೆ ಸಮಾನರಾಗಿ ಆಗುವರು. ನೀಚರಾದ ಮನುಷ್ಯರು ಮಧ್ಯಮಸ್ಥಿತಿಗೂ, ಮಧ್ಯಮ ಸ್ಥಿತಿಯಲ್ಲಿದ್ದ ಮನುಷ್ಯರು ನೀಚ ಸ್ಥಿತಿಗೂ ಬರುವರು. ಇದರಲ್ಲಿ ಸಂಶಯವಿಲ್ಲ.

ಈದೃಶೋ ಭವಿತಾ ಲೋಕೋ ಯುಗಾಂತೇ ಪರ್ಯುಪಸ್ಥಿತೇ ॥೧೯॥

ಯುಗಾಂತ ಉಪಸ್ಥಿತವಾದಾಗ ಎಲ್ಲವೂ ಹೀಗೆ ವ್ಯತ್ಯಾಸವಾಗುತ್ತದೆ.

ವಸ್ತ್ರಾಣಾಂ ಪ್ರವರಾ ಶಾಣೀ ಧಾನ್ಯಾನಾಂ ಕೋರದೂಷಕಾಃ ।
ಭಾರ್ಯಾಮಿತ್ರಾಶ್ಚ ಪುರುಷಾ ಭವಿಷ್ಯಂತಿ ಯುಗಕ್ಷಯೇ ॥೨೦॥

ಯುಗಾಂತವು ಸಮೀಪಿಸಿದಾಗ ಒಂದು ಒರಟಾದ ತುಂಡು ವಸ್ತ್ರವೇ ಶ್ರೇಷ್ಠವಾದ ವಸ್ತುವಾಗುವುದು. ಕೋರದೂಷಕ ಎಂದರೆ ಹಾರಕ ಎಂಬ ಧಾನ್ಯವೇ ಶ್ರೇಷ್ಠವಾದ ಧಾನ್ಯವಾಗುವುದು. ಪುರುಷರಿಗೆ ಹೆಂಡತಿಯೇ ಮಿತ್ರಳಾಗುವಳು.

ಮತ್ಸ್ಯಾಮಿಷೇಣ ಜೀವಂತೋ ದುಹಂತಶ್ಚಾಪ್ಯಜೈಡಕಮ್ ।
ಗೋಷು ನಷ್ಟಾಸು ಪುರುಷಾ ಯೇಽಪಿ ನಿತ್ಯಂ ಧೃತವ್ರತಾಃ ।
ತೇಽಪಿ ಲೋಭಸಮಾಯುಕ್ತಾ ಭವಿಷ್ಯಂತಿ ಯುಗಕ್ಷಯೇ ॥೨೧॥

ಮನುಷ್ಯರು ಮೀನಿನ ಮಾಂಸವನ್ನು ತಿಂದು ಬದುಕುವರು. ಗೋವುಗಳು ನಷ್ಟವಾಗುವುದರಿಂದ ಆಡು, ಕುರಿಗಳ ಹಾಲನ್ನು ಉಪಯೋಗಿಸುವರು. ಯುಗ ಕ್ಷಯದ ಸಮಯದಲ್ಲಿ ವ್ರತವನ್ನು ಮಾಡುವ ಮನುಷ್ಯರೂ ಸಹ ಲೋಭದಿಂದ ಕೂಡಿದವರಾಗುವರು.

ಅನ್ಯೋನ್ಯಂ ಪರಿಮುಷ್ಣಂತೋ ಹಿಂಸಯಂತಶ್ಚ ಮಾನವಾಃ ।
ಅಜಪಾ ನಾಸ್ತಿಕಾಃ ಸ್ತೇನಾ ಭವಿಷ್ಯಂತಿ ಯುಗಕ್ಷಯೇ ॥೨೨॥

ಯುಗಕ್ಷಯದ ಸಮಯದಲ್ಲಿ ಮನುಷ್ಯರು ಜಪವನ್ನು ಬಿಟ್ಟು ನಾಸ್ತಿಕರಾಗಿ ಪರಸ್ಪರ ಹಿಂಸೆಯನ್ನು ಮಾಡುತ್ತಾರೆ. ಪರಸ್ಪರ ವಸ್ತುಗಳನ್ನು ಕದಿಯುತಾ ಕಳ್ಳರಾಗುವರು.

ಸರಿತ್ತೀರೇಷು ಕುದ್ದಾಲೈರ್ವಾಪಯಿಷ್ಯಂತಿ ಚೌಷಧೀಃ ।
ತಾಶ್ಚಾಪ್ಯಲ್ಪಫಲಾಸ್ತೇಷಾಂ ಭವಿಷ್ಯಂತಿ ಯುಗಕ್ಷಯೇ ॥೨೩॥

ಯುಗಕ್ಷಯದ ಸಮಯದಲ್ಲಿ ನದೀತೀರಗಳಲ್ಲಿ ಹಾರೆಗಳಿಂದ ಔಷಧಿಯ ಬೀಜಗಳನ್ನು ಬಿತ್ತುವರು. ಅವಾದರೂ ಕೂಡ ಅವರಿಗೆ ಅಲ್ಪಫಲಗಳನ್ನೇ ಕೊಡುವುವು.

ಶ್ರಾದ್ಧೇ ದೈವೇ ಚ ಪುರುಷಾ ಯೇಽಪಿ ನಿತ್ಯಂ ಧೃತವ್ರತಾಃ ।
ತೇಽಪಿ ಲೋಭಸಮಾಯುಕ್ತಾ ಭೋಕ್ಷ್ಯಂತೀಹ ಪರಸ್ಪರಮ್ ॥೨೪॥

ನಿತ್ಯದಲ್ಲಿ ವ್ರತವನ್ನು ಧರಿಸಿದ ಮನುಷ್ಯರೂ ಸಹ ಲೋಭದಿಂದ ಕೂಡಿದವರಾಗಿ ಶ್ರಾದ್ಧದಲ್ಲಿ ಮತ್ತು ದೈವೋತ್ಸವದಲ್ಲಿ ಪರಸ್ಪರವಾಗಿ ಭೋಜನವನ್ನು ಮಾಡುವರು.

ಪಿತಾ ಪುತ್ರಸ್ಯ ಭೋಕ್ತಾ ಚ ಪಿತುಃ ಪುತ್ರಸ್ತಥೈವ ಚ ।
ಅತಿಕ್ರಾಂತಾನಿ ಭೋಜ್ಯಾನಿ ಭವಿಷ್ಯಂತಿ ಯುಗಕ್ಷಯೇ ॥೨೫॥

ತಂದೆಗೆ ಮಗನೇ ಭೋಕ್ತೃವಾಗುತ್ತಾನೆ. ಪುತ್ರನಿಗೆ ತಂದೆಯೇ ಭೋಕ್ತೃವಾಗುತ್ತಾನೆ (ಭೋಜನಕ್ಕೆ ನಿಮಂತ್ರಿಸಲ್ಪಟ್ಟ ಬ್ರಾಹ್ಮಣನಾಗುತ್ತಾನೆ). ಯುಗಕ್ಷಯದಲ್ಲಿ ಭೋಜ್ಯ ವಸ್ತುಗಳೆಲ್ಲವೂ ತಮ್ಮ ಗುಣಧರ್ಮಗಳನ್ನು ಕಳೆದುಕೊಳ್ಳುವವು.

ರಾತ್ರೌ ಭೋಕ್ಷ್ಯಂತಿ ವ್ರತಿನೋ ಗೃಹಿಣೋಽಪಿ ಯುಗಕ್ಷಯೇ ।
ಏವಂವಿಧಂ ಕರಿಷ್ಯಂತಿ ಕಲೌ ಶಾಸ್ತ್ರವಿಮೋಹಿತಾಃ ॥೨೫.೧॥

ವ್ರತವನ್ನು ಧರಿಸಿದ ಗೃಹಸ್ಥರೂ ಸಹ ಯುಗಕ್ಷಯ ಸಮಯದಲ್ಲಿ ರಾತ್ರಿಯಲ್ಲಿ ಭೋಜನವನ್ನು ಮಾಡುವರು. ಕಲಿಯುಗದ ಕೊನೆಯಲ್ಲಿ ಶಾಸ್ತ್ರವಿಮೋಹಿತರಾದ ಜನರು ಈ ರೀತಿಯಲ್ಲಿ ಆಚರಿಸುವರು.

ನ ವ್ರತಾನಿ ಚರಿಷ್ಯಂತಿ ಬ್ರಾಹ್ಮಣಾ ವೇದನಿಂದಕಾಃ ।
ನ ಯಕ್ಷ್ಯಂತಿ ನ ಹೋಷ್ಯಂತಿ ಹೇತುವಾದವಿಮೋಹಿತಾಃ ॥೨೬॥

ಕುತರ್ಕಗಳಿಂದ ವಿಮೋಹಿತರಾದ ಬ್ರಾಹ್ಮಣರು ವ್ರತಗಳನ್ನು ಮಾಡುವುದಿಲ್ಲ. ವೇದಗಳನ್ನು ನಿಂದಿಸುವರು. ಯಾಗವನ್ನು ಮಾಡುವುದಿಲ್ಲ. ಹೋಮವನ್ನು ಮಾಡುವುದಿಲ್ಲ.

ನಿಮ್ನೇ ಕೃಷಿಂ ಕರಿಷ್ಯಂತಿ ಯೋಕ್ಷ್ಯಂತಿ ಧುರಿ ಧೇನುಕಾಃ ।
ಏಕಹಾಯನವತ್ಸಾಂಶ್ಚ ಯೋಜಯಿಷ್ಯಂತಿ ಮಾನವಾಃ ॥೨೭॥

ತಗ್ಗು ಪ್ರದೇಶಗಳಲ್ಲಿ ಮಾತ್ರ ಕೃಷಿಯನ್ನು ಮಾಡುವರು. ಗಾಡಿಗಳಿಗೆ ಮತ್ತು ನೇಗಿಲಿಗೆ ಹಸುಗಳನ್ನು ಕಟ್ಟುವರು. ಮನುಷ್ಯರು ಒಂದು ವರ್ಷದ ಕರುಗಳನ್ನೂ ನೊಗಕ್ಕೆ ಹೂಡುವರು.

ಪುತ್ರಃ ಪಿತೃವಧಂ ಕೃತ್ವಾ ಪಿತಾ ಪುತ್ರವಧಂ ತಥಾ ।
ಸ್ತ್ರಿಯೋಽಪಿ ಪತಿಪುತ್ರಾದಿ ವಧಿಷ್ಯಂತಿ ಯುಗಕ್ಷಯೇ ।
ನಿರುದ್ವೇಗೋ ಬೃಹದ್ವಾದೀ ನ ನಿಂದಾಮುಪಲಪ್ಸ್ಯತೇ ॥೨೮॥

ಮಗನು ತಂದೆಯ ವಧೆಯನ್ನು ಮಾಡುವನು. ಹಾಗೆಯೇ ತಂದೆಯೂ ಮಗನ ವಧೆಯನ್ನು ಮಾಡುವನು. ಯುಗಕ್ಷಯದ ಕಾಲದಲ್ಲಿ ಸ್ತ್ರೀಯರು ಪತಿಪುತ್ರಾದಿಗಳ ವಧೆಯನ್ನು ಮಾಡುವರು. ನಿರ್ಭಯವಾಗಿ ಗಟ್ಟಿಯಾಗಿ ಮಾತನಾಡುವವನು ಯಾವ ಅಪವಾದಕ್ಕೂ ಸಿಲುಕುವುದಿಲ್ಲ.

ಮ್ಲೇಚ್ಛಭೂತಂ ಜಗತ್ಸರ್ವಂ ನಿಷ್ಕ್ರಿಯಂ ಯಜ್ಞವರ್ಜಿತಮ್ ।
ಭವಿಷ್ಯತಿ ನಿರಾನಂದಮನುತ್ಸವಮಥೋ ತಥಾ ॥೨೯॥

ಜಗತ್ತು ಮ್ಲೇಚ್ಛಮಯವಾಗುತ್ತದೆ. ಯಾವ ಸತ್ಕ್ರಿಯಗಳೂ, ಯಜ್ಞಗಳೂ ಇರುವುದಿಲ್ಲ. ಯಾವ ಉತ್ಸವಗಳೂ ಇಲ್ಲದೇ ನಿರಾನಂದವಾಗುವುದು.

ಪ್ರಾಯಶಃ ಕೃಪಣಾನಾಂ ಹಿ ತಥಾ ಬಂಧುಮತಾಮಪಿ ।
ವಿಧವಾನಾಂ ಚ ವಿತ್ತಾನಿ ಹರಿಷ್ಯಂತೀಹ ಮಾನವಾಃ ॥೩೦॥

ಲೋಭಿಗಳಾದವರ ಮತ್ತು ಬಂಧುಗಳನ್ನುಳ್ಳವರ ಮತ್ತು ವಿಧವೆಯರ ವಿತ್ತವನ್ನು ಮನುಷ್ಯರು ಅಪಹರಿಸುವರು.

ಸ್ವಲ್ಪವೀರ್ಯಬಲಾಃ ಸ್ತಬ್ಧಾ ಲೋಭಮೋಹಪರಾಯಣಾಃ ।
ತತ್ಕಥಾದಾನಸಂತುಷ್ಟಾಃ ಶಿಷ್ಯಾನಾಮಪಿ ಬಾಂಧವಾಃ ॥೩೧॥

ಮನುಷ್ಯರು ಸ್ವಲ್ಪ ವೀರ್ಯಬಲವುಳ್ಳವರಾಗಿಯೂ, ಅಹಂಕಾರದಿಂದ ಕೂಡಿದವರಾಗಿಯೂ ಮತ್ತು ಲೋಭ ಮೋಹಗಳಿಂದ ಕೂಡಿದವರಾಗಿಯೂ ಆಗುವರು. ಶಿಷ್ಟರಾದವರ ಬಾಂಧವರೂ ಸಹ ಕಾಮಕ್ರೋಧಗಳ ಕಥೆಯಿಂದ ಮತ್ತು ಅಕಥೆಯಿಂದ ಸಂತುಷ್ಟರಾಗುವರು.

ಪರಿಗ್ರಹಂ ಕರಿಷ್ಯಂತಿ ಮಾಯಾಚಾರಪರಿಗ್ರಹಾಃ ।
ಸಂಘಾತಯಂತಃ ಕೌಂತೇಯ ರಾಜಾನಃ ಪಾಪಬುದ್ಧಯಃ ॥೩೨॥

ಎಲೈ ಕೌಂತೇಯನೇ, ರಾಜರು ಪಾಪಬುದ್ಧಿಯುಳ್ಳವರಾಗಿ ಗುಂಪುಗಳನ್ನು ಕಟ್ಟಿಕೊಂಡು ಕಪಟದಿಂದ ಕೂಡಿದ ಆಚಾರವನ್ನು ಮಾಡುವವರಾಗಿ ಪರಿಗ್ರಹವನ್ನು ಮಾಡುವರು.

ಪರಸ್ಪರವಧೋದ್ಯುಕ್ತಾ ಮೂರ್ಖಾಃ ಪಂಡಿತಮಾನಿನಃ ।
ಭವಿಷ್ಯಂತಿ ಯುಗಸ್ಯಾಂತೇ ಕ್ಷತ್ರಿಯಾ ಲೋಕಕಂಟಕಾಃ ॥೩೩॥

ಯುಗಾಂತ ಸಮಯದಲ್ಲಿ ಕ್ಷತ್ರಿಯರು ಮೂರ್ಖರಾದರೂ ತಮ್ಮನ್ನು ಪಂಡಿತರೆಂದು ತಿಳಿದು ಪರಸ್ಪರ ವಧೋದ್ಯುಕ್ತರಾಗಿ ಲೋಕಕಂಟಕರಾಗುವರು.

ಅರಕ್ಷಿತಾರೋ ಲುಬ್ಧಾಶ್ಚ ಮಾನಾಹಂಕಾರದರ್ಪಿತಾಃ ।
ಕೇವಲಂ ದಂಡರುಚಯೋ ಭವಿಷ್ಯಂತಿ ಯುಗಕ್ಷಯೇ ॥೩೪॥

ಯುಗಕ್ಷಯದ ಕಾಲದಲ್ಲಿ ಅವರು ಯಾರನ್ನೂ ರಕ್ಷಿಸುವುದಿಲ್ಲ. ಲೋಭ, ಮಾನ, ಅಹಂಕಾರ ಮತ್ತು ದರ್ಪಗಳಿಂದ ಕೂಡಿದವರಾಗಿ ಕೇವಲ ಶಿಕ್ಷೆಯನ್ನು ಕೊಡುವುದರಲ್ಲಿಯೇ ಅಭಿರುಚಿಯುಳ್ಳವರಾಗುವರು.

ಆಕ್ರಮ್ಯಾಕ್ರಮ್ಯ ಸಾಧೂನಾಂ ದಾರಾಂಶ್ಚಾಪಿ ಧನಾನಿ ಚ ।
ಭೋಕ್ಷ್ಯಂತೇ ನಿರನುಕ್ರೋಶಾ ರುದತಾಮಪಿ ಭಾರತ ॥೩೫॥

ಎಲೈ ಭಾರತನೇ, ಸಜ್ಜನರನ್ನು ಮೆಟ್ಟಿಮೆಟ್ಟಿ ಅವರು ಅಳುತ್ತಿದ್ದರೂ ಅವರ ಧನ ಮತ್ತು ಪತ್ನಿಯರನ್ನು ನಿರ್ದಯವಾಗಿ ಭೋಗಿಸುವರು.

ನ ಕನ್ಯಾಂ ಯಾಚತೇ ಕಶ್ಚಿನ್ನಾಪಿ ಕನ್ಯಾ ಪ್ರದೀಯತೇ ।
ಸ್ವಯಂಗ್ರಾಹಾ ಭವಿಷ್ಯಂತಿ ಯುಗಾಂತೇ ಸಮುಪಸ್ಥಿತೇ ॥೩೬॥

ಯಾರೂ ಕನ್ಯೆಯನ್ನು ಯಾಚಿಸುವುದಿಲ್ಲ. ಯಾರೂ ಕನ್ಯಾದಾನವನ್ನೂ ಮಾಡುವುದಿಲ್ಲ. ಯುಗಾಂತವು ಪ್ರಾಪ್ತವಾದಾಗ ಸ್ವತಃ ತಾವಾಗಿಯೇ ಕನ್ಯೆಯನ್ನು ಗ್ರಹಣ ಮಾಡುವರು.

ರಾಜಾನಶ್ಚಾಪ್ಯಸಂತುಷ್ಟಾಃ ಪರಾರ್ಥಾನ್‌ಮೂಢಚೇತಸಃ ।
ಸರ್ವೋಪಾಯೈರ್ಹರಿಷ್ಯಂತಿ ಯುಗಾಂತೇ ಪರ್ಯುಪಸ್ಥಿತೇ ॥೩೭॥

ಯುಗಾಂತವು ಸನ್ನಿಹಿತವಾದಾಗ ರಾಜರೂ ಸಹ ಮೂಢಬುದ್ಧಿಯುಳ್ಳವರಾಗಿ ಅತೃಪ್ತಿಯುಳ್ಳವರಾಗಿ ಇನ್ನೊಬ್ಬರ ಧನವನ್ನು ಎಲ್ಲ ಉಪಾಯಗಳಿಂದಲೂ ಅಪಹರಿಸುವರು.

ಮ್ಲೇಚ್ಛೀಭೂತಂ ಜಗತ್ಸರ್ವಂ ಭವಿಷ್ಯತಿ ನ ಸಂಶಯಃ ।
ಹಸ್ತಾದ್ಧಸ್ತಂ ಪರಿಮುಷೇದ್ಯುಗಾಂತೇ ಸಮುಪಸ್ಥಿತೇ ॥೩೮॥

ಜಗತ್ತೆಲ್ಲವೂ ನಿಸ್ಸಂಶಯವಾಗಿ ಮ್ಲೇಚ್ಛಮಯವಾಗುವುದು. ಯುಗಾಂತದ ಸಮಯದಲ್ಲಿ ಕಳ್ಳತನ ಮಾಡಿದ ವಸ್ತುಗಳು ಒಬ್ಬನ ಕೈಯಿಂದ ಇನ್ನೊಬ್ಬನ ಕೈಗೆ ಸಾಗಿಸಲ್ಪಡುವವು.

ಸತ್ಯಂ ಸಂಕ್ಷಿಪ್ಯತೇ ಲೋಕೇ ನರೈಃ ಪಂಡಿತಮಾನಿಭಿಃ ।
ಸ್ಥವಿರಾ ಬಾಲಮತಯೋ ಬಾಲಾಃ ಸ್ಥವಿರಬುದ್ಧಯಃ ॥೩೯॥

ಲೋಕದಲ್ಲಿ ತಮ್ಮನ್ನು ಪಂಡಿತರೆಂದು ತಿಳಿದುಕೊಳ್ಳುವ ಮನುಷ್ಯರು ಸತ್ಯವನ್ನು ನಾಶಮಾಡುವರು. ವೃದ್ಧರಿಗೆ ಬಾಲಕರ ಬುದ್ಧಿಯೂ, ಬಾಲಕರಿಗೆ ವೃದ್ಧರ ಬುದ್ಧಿಯೂ ಉಂಟಾಗುವುದು.

ಭೀರುಸ್ತಥಾ ಶೂರಮಾನೀ ಶೂರಾ ಭೀರುವಿವಾ(ಪಾ)ದಿನಃ ।
ನ ವಿಶ್ವಸಂತಿ ಚಾನ್ಯೋನ್ಯಂ ಯುಗಾಂತೇ ಪರ್ಯುಪಸ್ಥಿತೇ ॥೪೦॥

ಭೀರುಗಳಾದವರು ತಮ್ಮನ್ನು ಶೂರರೆಂದು ತಿಳಿಯುವರು. ಶೂರರು ಭಯದಿಂದ ವಿಷಾದ ಪಡುವರು. ಯುಗಾಂತವು ಸನ್ನಿಹಿತವಾದಾಗ ಒಬ್ಬರಲ್ಲೊಬ್ಬರು ವಿಶ್ವಾಸವನ್ನು ಮಾಡುವುದಿಲ್ಲ.

ಏಕಹಾರ್ಯಂ ಯುಗಂ ಸರ್ವಂ ಲೋಭಮೋಹವ್ಯವಸ್ಥಿತಮ್ ।
ಅಧರ್ಮೋ ವರ್ದ್ಧತೇ ತತ್ರ ನ ತು ಧರ್ಮಃ ಪ್ರವರ್ತತೇ ॥೪೧॥

ಜನಗಳ ಆಹಾರವೆಲ್ಲವೂ ಯುಗಾಂತದಲ್ಲಿ ಒಂದೇ ವಿಧವಾಗಿರುತ್ತದೆ. ಲೋಭ ಮೋಹಗಳು ಸುಪ್ರತಿಷ್ಠಿತವಾಗಿರುತ್ತದೆ. ಅಧರ್ಮವು ಅಭಿವೃದ್ಧಿಯನ್ನು ಹೊಂದುತ್ತವೆ. ಆದರೆ ಧರ್ಮವು ಪ್ರವೃತ್ತವಾಗುವುದಿಲ್ಲ.

ಬ್ರಾಹ್ಮಣಾಃ ಕ್ಷತ್ರಿಯಾ ವೈಶ್ಯಾ ನ ಶಿಷ್ಯಂತಿ ಜನಾಧಿಪ ।
ಏಕವರ್ಣಸ್ತದಾ ಲೋಕೋ ಭವಿಷ್ಯತಿ ಯುಗಕ್ಷಯೇ ॥೪೨॥

ಎಲೈ ಜನಾಧಿಪನೇ, ಯುಗಕ್ಷಯದ ಸಮಯದಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ ವರ್ಣಗಳು ಇರುವುದಿಲ್ಲ. ಲೋಕದಲ್ಲಿ ಒಂದೇ ವರ್ಣವು ಉಳಿಯುತ್ತದೆ. (ಎಲ್ಲರೂ ಶೂದ್ರರಾಗಿರುವರು).

ನ ಕ್ಷಂಸ್ಯತಿ ಪಿತಾ ಪುತ್ರಂ ಪುತ್ರಶ್ಚ ಪಿತರಂ ತಥಾ ।
ಭಾರ್ಯಾಶ್ಚ ಪತಿಶುಶ್ರೂಷಾಂ ನ ಕರಿಷ್ಯಂತಿ ಸಂಕ್ಷಯೇ ॥೪೩॥

ಯುಗಕ್ಷಯದ ಸಮಯದಲ್ಲಿ ತಂದೆಯು ಮಗನನ್ನು ಕ್ಷಮಿಸುವುದಿಲ್ಲ. ಹಾಗೆಯೇ ಮಗನೂ ತಂದೆಯನ್ನು ಕ್ಷಮಿಸುವುದಿಲ್ಲ. ಹಾಗೆಯೇ ಪತ್ನಿಯು ಪತಿಸೇವೆಯನ್ನು ಮಾಡುವುದಿಲ್ಲ.

ಯೇ ಯವಾನ್ನಾ ಜನಪದಾ ಗೋಧೂಮಾನ್ನಾಸ್ತಥೈವ ಚ ।
ತಾನ್ ದೇಶಾನ್‌ಸಂಶ್ರಯಿಷ್ಯಂತಿ ಯುಗಾಂತೇ ಪರ್ಯುಪಸ್ಥಿತೇ ॥೪೪॥

ಯುಗಾಂತವು ಸನ್ನಿಹಿತವಾದಾಗ ಮನುಷ್ಯರು ಜವೇ ಗೋಧಿ ಮತ್ತು ಗೋಧಿ ಯನ್ನು ಆಹಾರವಾಗಿ ಉಪಯೋಗಿಸುವ ದೇಶಗಳಿಗೆ ಹೋಗಿ ನೆಲೆಸುವರು.

ಸ್ತ್ರೀರಾಚಾರಾಶ್ಚ ಪುರುಷಾ ಯೋಷಿತಶ್ಚ ವಿಶಾಂಪತೇ ।
ಅನ್ಯೋನ್ಯಂ ನ ಸಹಿಷ್ಯಂತಿ ಯುಗಾಂತೇ ಪರ್ಯುಪಸ್ಥಿತೇ ॥೪೫॥

ಎಲೈ ರಾಜನೇ, ಪುರುಷರು ಮತ್ತು ಸ್ತ್ರೀಯರು ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳುವರು. ಯುಗಾಂತವು ಸನ್ನಿಹಿತವಾದಾಗ ಒಬ್ಬರನ್ನೊಬ್ಬರು ನೋಡಿ ಸಹಿಸುವುದಿಲ್ಲ.

ಮ್ಲೇಚ್ಛಭೂತಂ ಜಗತ್ಸರ್ವಂ ಭವಿಷ್ಯತಿ ಯುಧಿಷ್ಠಿರ ।
ನ ಶ್ರಾದ್ಧೈಸ್ತರ್ಪಯಿಷ್ಯಂತಿ ದೈವತಾನೀಹ ಮಾನವಾಃ ॥೪೬॥

ಎಲೈ ಯುಧಿಷ್ಠಿರನೇ, ಜಗತ್ತೆಲ್ಲವೂ ಮ್ಲೇಚ್ಛರಿಂದ ತುಂಬುವುದು. ಮನುಷ್ಯರು ಶ್ರಾದ್ಧಗಳಿಂದ ಪಿತೃದೇವತೆಗಳನ್ನು ಸಂತೋಷಪಡಿಸುವುದಿಲ್ಲ.

ನ ಕಶ್ಚಿತ್ ಕಸ್ಯಚಿಚ್ಛ್ರೋತಾ ನ ಕಶ್ಚಿತ್ ಕಸ್ಯಚಿದ್ ಗುರುಃ ।
ತಮೋಗ್ರಸ್ತಸ್ತದಾ ಲೋಕೋ ಭವಿಷ್ಯತಿ ಜನಾಧಿಪ ॥೪೭॥

ಎಲೈ ಜನಾಧಿಪನೇ, ಯಾರಿಗೆ ಯಾರೂ ಶಿಷ್ಯರಿರುವುದಿಲ್ಲ. ಯಾರಿಗೆ ಯಾರೂ ಗುರುವಿರುವುದಿಲ್ಲ. ಆಗ ಜನರೆಲ್ಲರೂ ಅಜ್ಞಾನಗ್ರಸ್ತರಾಗುವರು.

ಪರಮಾಯುಶ್ಚ ಭವಿತಾ ತದಾ ವರ್ಷಾಣಿ ಷೋಡಶ ।
ತತಃ ಪ್ರಾಣಾನ್ ವಿಮೋಕ್ಷ್ಯಂತಿ ಯುಗಾಂತೇ ಸಮುಪಸ್ಥಿತೇ ॥೪೮॥

ಯುಗಾಂತವು ಸನ್ನಿಹಿತವಾದಾಗ ಹದಿನಾರು ವರ್ಷಗಳೇ ಪರಮಾಯುಷ್ಯವಾಗುವುದು. ಅನಂತರ ಮರಣವು ಉಂಟಾಗುವುವು.

ಪಂಚಮೇ ವಾಥ ಷಷ್ಠೇ ವಾ ವರ್ಷೇ ಕನ್ಯಾ ಪ್ರಸೂಯತೇ ।
ಸಪ್ತವರ್ಷಾಷ್ಟವರ್ಷಾಶ್ಚ ಪ್ರಜಾಸ್ಯಂತಿ ನರಾಸ್ತದಾ ॥೪೯॥

ಐದು ಅಥವಾ ಆರನೆಯ ವರ್ಷದಲ್ಲಿ ಕನ್ಯೆಯರೂ, ಏಳೆಂಟು ವರ್ಷದ ಪುರುಷರೂ ಮಕ್ಕಳನ್ನು ಪಡೆಯುವರು.

ಪತ್ನೌ ಸ್ತ್ರೀ ತು ತದಾ ರಾಜನ್ ಪುರುಷೋ ವಾ ಸ್ತ್ರಿಯಂ ಪ್ರತಿ ।
ಯುಗಾಂತೇ ರಾಜಶಾರ್ದೂಲ ನ ತೋಷಮುಪಯಾಸ್ಯತಿ ॥೫೦॥

ಎಲೈ ರಾಜಶಾರ್ದೂಲನೇ, ಯುಗಾಂತದಲ್ಲಿ ಪತ್ನಿಯು ಪತಿಯಲ್ಲಾಗಲೀ, ಪತಿಯು ಪತ್ನಿಯಲ್ಲಾಗಲೀ ಸಂತೋಷ ತೃಪ್ತಿಗಳನ್ನು ಪಡೆಯುವುದಿಲ್ಲ.

ಅಲ್ಪದ್ರವ್ಯಾ ವೃಥಾಲಿಂಗಾ ಹಿಂಸಾ ಚ ಪ್ರಭವಿಷ್ಯತಿ ।
ನ ಕಶ್ಚಿತ್ ಕಸ್ಯಚಿದ್ ದಾತಾ ಭವಿಷ್ಯತಿ ಯುಗಕ್ಷಯೇ ॥೫೧॥

ಅಲ್ಪದ್ರವ್ಯವುಳ್ಳವರಾಗಿ, ವ್ಯರ್ಥವಾಗಿ ಪುರುಷ ಸ್ತ್ರೀ ಚಿಹ್ನೆಯನ್ನು ಧರಿಸಿ ಹಿಂಸೆಯಲ್ಲಿ ತೊಡಗುವರು. ಯುಗಕ್ಷಯದ ಕಾಲದಲ್ಲಿ ಯಾರಿಗೆ ಯಾರೂ ದಾನವನ್ನು ಕೊಡುವುದಿಲ್ಲ.

ಅಟ್ಟಶೂಲಾ ಜನಪದಾಃ ಶಿವಶೂಲಾಶ್ಚತುಷ್ಪಥಾಃ ।
ಕೇಶಶೂಲಾಃ ಸ್ತ್ರಿಯಶ್ಚಾಪಿ ಭವಿಷ್ಯಂತಿ ಯುಗಕ್ಷಯೇ ॥೫೨॥

ಜನರು ಅನ್ನವಿಕ್ರಯವನ್ನು ಮಾಡುವರು. ಬ್ರಾಹ್ಮಣರು ವೇದವಿಕ್ರಯವನ್ನು ಮಾಡುವರು. ಸ್ತ್ರೀಯರು ಯುಗಕ್ಷಯಕಾಲದಲ್ಲಿ ತಮ್ಮ ಭಗವನ್ನು ವಿಕ್ರಯ ಮಾಡುವರು.

ಮ್ಲೇಚ್ಛಾಚಾರಾಃ ಸರ್ವಭಕ್ಷಾ ದಾರುಣಾಃ ಸರ್ವಕರ್ಮಸು ।
ಭಾವಿನಃ ಪಶ್ಚಿಮೇ ಕಾಲೇ ಮನುಷ್ಯಾನಾತ್ರ ಸಂಶಯಃ ॥೫೩॥

ಮನುಷ್ಯರು ಸರ್ವಭಕ್ಷರಾಗಿ ಮ್ಲೇಚ್ಛರಂತೆ ನಡೆದುಕೊಳ್ಳುವರು. ಅಂತ್ಯಕಾಲದಲ್ಲಿ ಎಲ್ಲ ಕರ್ಮಗಳಲ್ಲಿ ಘೋರರಾಗಿರುವರು. ಈ ವಿಷಯದಲ್ಲಿ ಸಂಶಯವಿಲ್ಲ.

ಕ್ರಯವಿಕ್ರಯಕಾಲೇ ಚ ಸರ್ವಃ ಸರ್ವಸ್ಯ ವಂಚನಮ್ ।
ಯುಗಾಂತೇ ಭರತಶ್ರೇಷ್ಠ ವಿತ್ತಲೋಭಾತ್ ಕರಿಷ್ಯತಿ ॥೫೪॥

ಎಲೈ ಭರತಶ್ರೇಷ್ಠನೇ, ಯುಗಾಂತ ಸಮಯದಲ್ಲಿ ಕ್ರಯವಿಕ್ರಯ ಮಾಡುವವರೆಲ್ಲರೂ ಧನಲೋಭದಿಂದ ಎಲ್ಲರಿಗೂ ವಂಚನೆಯನ್ನು ಮಾಡುವರು.

ಜ್ಞಾನಾನಿ ಚಾಪ್ಯವಿಜ್ಞಾಯ ಕರಿಷ್ಯಂತಿ ಕ್ರಿಯಾಸ್ತಥಾ ।
ಆತ್ಮಚ್ಛಂದೇನ ವರ್ತಂತೇ ಯುಗಾಂತೇ ಸಮುಪಸ್ಥಿತೇ ॥೫೫॥

ಯುಗಾಂತದಲ್ಲಿ ಮಾನವರು ವಿದ್ಯೆಯನ್ನು ಕಲಿಯದೆ ಕ್ರಿಯೆಗಳನ್ನು ಮಾಡುವರು ಮತ್ತು ತಮ್ಮ ಮನಸ್ಸಿಗೆ ಬಂದಂತೆ ನಡೆದುಕೊಳ್ಳುವರು.

ಸ್ವಭಾವಾತ್ ಕ್ರೂರಕರ್ಮಾಣಶ್ಚಾನ್ಯೋನ್ಯಮಭಿಶಂಸಿನಃ ।
ಭವಿತಾರೋ ಜನಾಃ ಸರ್ವೇ ಸಂಪ್ರಾಪ್ತೇ ತು ಯುಗಕ್ಷಯೇ ॥೫೬॥

ಯುಗಕ್ಷಯವು ಪ್ರಾಪ್ತವಾದಾಗ ಮನುಷ್ಯರು ಸ್ವಾಭಾವಿಕವಾಗಿ ಕ್ರೂರ ಕರ್ಮಗಳನ್ನು ಮಾಡುವರು. ಪರಸ್ಪರವಾಗಿ ನಿಂದಿಸುವರು.

ಆರಾಮಾಂಶ್ಚೈವ ವೃಕ್ಷಾಂಶ್ಚ ನಾಶಯಿಷ್ಯಂತಿ ನಿರ್ವೃಥಾಃ ।
ಭವಿತಾ ಸಂಶಯೋ ಲೋಕೇ ಜೀವಿತಸ್ಯ ಹಿ ದೇಹಿನಾಮ್ ॥೫೭॥

ಉದ್ಯಾನಗಳನ್ನು ಮತ್ತು ವೃಕ್ಷಗಳನ್ನು ಯಾವ ವ್ಯಥೆಯೂ ಇಲ್ಲದೇ ನಾಶ ಮಾಡುವರು. ಮನುಷ್ಯರು ಜೀವಿಸಿರುವುದೇ ಸಂಶಯಗ್ರಸ್ತವಾಗುವುದು.

ತಥಾ ಲೋಭಾಭಿಭೂತಾಶ್ಚ ಭವಿಷ್ಯಂತಿ ನರಾ ನೃಪ ।
ಬ್ರಾಹ್ಮಣಾಂಶ್ಚ ಹನಿಷ್ಯಂತಿ ಬ್ರಾಹ್ಮಣಸ್ವೋಪಭೋಗಿನಃ ॥೫೮॥

ಎಲೈ ರಾಜನೇ, ಹಾಗೆ ಮನುಷ್ಯರು ಲೋಭದಿಂದ ಕೂಡಿದವರಾಗುವರು. ಬ್ರಾಹ್ಮಣರನ್ನು ಕೊಂದು ಅವರ ಧನವನ್ನೂ ಉಪಭೋಗಿಸುವರು.

ಹಾಹಾಕೃತಾ ದ್ವಿಜಾಶ್ಚೈವ ಭಯಾರ್ತಾ ವೃಷಲಾರ್ದಿತಾಃ ।
ತ್ರಾತಾರಮಲಭಂತೋ ವೈ ಭ್ರಮಿಷ್ಯಂತಿ ಮಹೀಮಿಮಾಮ್ ॥೫೯॥

ಶೂದ್ರರಿಂದ ಹಿಂಸಿತರಾದ ದ್ವಿಜರು ಭಯಾರ್ತರಾಗಿ ಹಾಹಾಕಾರವನ್ನು ಮಾಡುವರು. ಯಾರೂ ರಕ್ಷಕರಿಲ್ಲದೆ ಭೂಮಿಯಲ್ಲೆಲ್ಲಾ ಅಲೆದಾಡುವರು.

ಜೀವಿತಾಂತಕರಾಃ ಕ್ರೂರಾ ರೌದ್ರಾಃ ಪ್ರಾಣವಿಹಿಂಸಕಾಃ ।
ಯದಾ ಭವಿಷ್ಯಂತಿ ನರಾಸ್ತದಾ ಸಂಕ್ಷೇಪ್ಸ್ಯತೇ ಯುಗಮ್ ॥೬೦॥

ಮನುಷ್ಯರು ಯಾವಾಗ ಕ್ರೂರರೂ, ಭಯಂಕರರೂ, ಪ್ರಾಣಹಿಂಸೆಯನ್ನು ಮಾಡುವವರೂ, ಇನ್ನೊಬ್ಬರನ್ನು ಕೊಲ್ಲುವವರೂ ಆಗುವರೋ ಆಗ ಯುಗವು ಸಮಾಪ್ತಿಯನ್ನು ಹೊಂದುವುದು.

ಆಶ್ರಯಿಷ್ಯಂತಿ ಚ ನದೀಃ ಪರ್ವತಾನ್ ವಿಷಮಾಣಿ ಚ ।
ಪ್ರಧಾವಮಾನಾ ವಿತ್ರಸ್ತಾ ದ್ವಿಜಾಃ ಕುರುಕುಲೋದ್ವಹ ॥೬೧॥

ಎಲೈ ಕುರುಕುಲೋದ್ವಹನೇ, ಹೆದರಿದ ದ್ವಿಜರು ಓಡಿಹೋಗಿ ನದಿಗಳನ್ನೂ, ಪರ್ವತಗಳನ್ನೂ, ದುರ್ಗಮ ಪ್ರದೇಶಗಳನ್ನೂ ಆಶ್ರಯಿಸುವರು.

ದಸ್ಯುಭಿಃ ಪೀಡಿತಾ ರಾಜನ್ ಕಾಕಾ ಇವ ದ್ವಿಜೋತ್ತಮಾಃ ।
ಕುರಾಜಭಿಶ್ಚ ಸತತಂ ಕರಭಾರಪ್ರಪೀಡಿತಾಃ ॥೬೨॥

ಎಲೈ ರಾಜನೇ, ದ್ವಿಜಶ್ರೇಷ್ಠರು, ದಸ್ಯುಗಳಿಂದ ಪೀಡಿತರಾಗಿ ಕಾಗೆಗಳಂತೆ ಅಂತಹ ಪ್ರದೇಶವನ್ನು ಆಶ್ರಯಿಸುವರು. ಕೆಟ್ಟ ರಾಜರುಗಳು ಬಂದು ಸತತವಾಗಿ ಪ್ರಜೆಗಳನ್ನು ತೆರಿಗೆಯ ಭಾರದಿಂದ ಪೀಡಿಸುವರು.

ಧೈರ್ಯಂ ತ್ಯಕ್ತ್ವಾ ಮಹೀಪಾಲ ದಾರುಣೇ ಯುಗಸಂಕ್ಷಯೇ ।
ವಿಕರ್ಮಾಣಿ ಕರಿಷ್ಯಂತಿ ಶೂದ್ರಾಣಾಂ ಪರಿಚಾರಕಾಃ ॥೬೩॥

ಎಲೈ ರಾಜನೇ, ಘೋರವಾದ ಯುಗಸಂಕ್ಷಯ ಕಾಲದಲ್ಲಿ ದ್ವಿಜರು ಧೈರ್ಯವನ್ನು ತ್ಯಜಿಸಿ ಶೂದ್ರರ ಪರಿಚಾರಕರಾಗಿ ವಿಕರ್ಮಗಳನ್ನು ಮಾಡುವರು.

ಶೂದ್ರಾ ಧರ್ಮಂ ಪ್ರವಕ್ಷ್ಯಂತಿ ಬ್ರಾಹ್ಮಣಾಃ ಪರ್ಯುಪಾಸಕಾಃ ।
ಶ್ರೋತಾರಶ್ಚ ಭವಿಷ್ಯಂತಿ ಪ್ರಾಮಾಣ್ಯೇನ ವ್ಯವಸ್ಥಿತಾಃ ॥೬೪॥

ಶೂದ್ರರು ಧರ್ಮೋಪದೇಶವನ್ನು ಮಾಡುವರು. ಬ್ರಾಹ್ಮಣರು ಅವರ ಸೇವೆಯನ್ನು ಮಾಡಿ ಅವರಿಂದ ಶ್ರವಣವನ್ನು ಮಾಡಿ ಅವರು ಹೇಳಿದುದರಲ್ಲಿ ಪ್ರಾಮಾಣ್ಯ ಬುದ್ಧಿಯುಳ್ಳವರಾಗುವರು.

ವಿಪರೀತಶ್ಚ ಲೋಕೋಽಯಂ ಭವಿಷ್ಯತ್ಯಧರೋತ್ತರಃ ।
ವಿಡೂಕಾನ್ ಪೂಜಯಿಷ್ಯಂತಿ ವರ್ಜಯಿಷ್ಯಂತಿ ದೇವತಾಃ ॥೬೫॥

ಶೂದ್ರಾಃ ಪರಿಚರಿಷ್ಯಂತಿ ನ ದ್ವಿಜಾನ್ಯುಗಸಂಕ್ಷಯೇ ॥೬೬॥

ಲೋಕವೆಲ್ಲವೂ ವಿಪರೀತ ಆಚಾರಗಳಿಂದ ಕೂಡಿ ತಲೆಕೆಳಗಾಗುವುದು. ಯಾರೂ ದೇವತೆಗಳನ್ನು ಪೂಜಿಸುವುದಿಲ್ಲ. ಟಗರು ಹೋತಗಳನ್ನು ಪೂಜಿಸುವರು. ಯುಗಾಂತ ಕಾಲದಲ್ಲಿ ಶೂದ್ರರು ದ್ವಿಜರ ಸೇವೆಯನ್ನು ಮಾಡುವುದಿಲ್ಲ.

ಆಶ್ರಮೇಷು ಮಹರ್ಷೀಣಾಂ ಬ್ರಾಹ್ಮಣಾವಸಥೇಷು ಚ ।
ದೇವಸ್ಥಾನೇಷು ಚೈತ್ಯೇಷು ನಾಗಾನಾಮಾಲಯೇಷು ಚ ॥೬೭॥

ಜಾಲೂಕಚಿಹ್ನಾ ಪೃಥಿವೀ ನ ದೇವಗೃಹಭೂಷಿತಾ ।
ಭವಿಷ್ಯತಿ ಯುಗೇ ಕ್ಷೀಣೇ ತದ್ಯುಗಾಂತಸ್ಯ ಲಕ್ಷಣಮ್ ॥೬೮॥

ಮಹರ್ಷಿಗಳ ಆಶ್ರಮದಲ್ಲಿ, ಬ್ರಾಹ್ಮಣರ ಮನೆಗಳಲ್ಲಿ, ದೇವಸ್ಥಾನಗಳಲ್ಲಿ, ಪೂಜ್ಯ ವೃಕ್ಷಗಳ ಸನ್ನಿಧಾನದಲ್ಲಿ, ನಾಗಬನಗಳಲ್ಲಿ ಭೂಮಿಯು ವನಜಲೂಕ ಪ್ರಾಣಿಗಳ ಚಿಹ್ನೆಗಳಿಂದ ಕೂಡಿರುವುದು. ದೇವಗೃಹಗಳಿಂದ ಭೂಷಿತವಾಗಿರುವುದಿಲ್ಲ. ಯಾವಾಗ ಈ ರೀತಿಯಾಗುವುದೋ ಆಗ ಯುಗಾಂತವು ಸಮೀಪಿಸಿದೆ ಎಂದು ತಿಳಿಯಬೇಕು.

ಯದಾ ರೌದ್ರಾ ಧರ್ಮಹೀನಾ ಮಾಂಸಾದಾಃ ಪಾನಪಾಸ್ತಥಾ ।
ಭವಿಷ್ಯಂತಿ ನರಾ ನಿತ್ಯಂ ತದಾ ಸಂಕ್ಷೇಪ್ಸ್ಯತೇ ಯುಗಮ್ ॥೬೯॥

ಯಾವಾಗ ಎಲ್ಲ ಮನುಷ್ಯರು ಧರ್ಮಹೀನರೂ, ಮಾಂಸಭಕ್ಷಕರೂ, ಮದ್ಯಪಾನಿಗಳೂ ಮತ್ತು ಘೋರ ಸ್ವಭಾವದವರೂ ಆಗುವರು ಆಗ ಯುಗವು ಸಮಾಪ್ತಿಗೊಳ್ಳುವುದು.

ಪುಷ್ಪಂ ಪುಷ್ಪೇ ಯದಾ ರಾಜನ್ ಫಲೇ ವಾ ಫಲಮಾಶ್ರಿತಮ್ ।
ಪ್ರಜಾಸ್ಯತಿ ಮಹಾರಾಜ ತದಾ ಸಂಕ್ಷೇಪ್ಸ್ಯತೇ ಯುಗಮ್ ।
ಅಕಾಲವರ್ಷೀ ಪರ್ಜನ್ಯೋ ಭವಿಷ್ಯತಿ ಗತೇ ಯುಗೇ ॥೭೦॥

ಎಲೈ ಮಹಾರಾಜನೇ, ಯಾವಾಗ ಪುಷ್ಪದಲ್ಲಿ ಪುಷ್ಪವೂ, ಫಲದಲ್ಲಿ ಫಲವೂ ಉಂಟಾಗುವುದೋ ಆಗ ಯುಗವು ಸಮಾಪ್ತಿಗೊಳ್ಳುವುದು. ಆಗ ಪರ್ಜನ್ಯನು ಅಕಾಲದಲ್ಲಿ ಮಳೆಯನ್ನು ಸುರಿಸುವನು.

ಅಕ್ರಮೇಣ ಮನುಷ್ಯಾಣಾಂ ಭವಿಷ್ಯಂತಿ ತದಾ ಕ್ರಿಯಾಃ ।
ವಿರೋಧಮಥ ಯಾಸ್ಯಂತಿ ವೃಷಲಾ ಬ್ರಾಹ್ಮಣೈಃ ಸಹ ॥೭೧॥

ಮನುಷ್ಯರ ಎಲ್ಲಾಕ್ರಿಯೆಗಳು ಕ್ರಮವ್ಯತ್ಯಾಸದಿಂದ ಉಂಟಾಗುವುದು. ಶೂದ್ರರು ಉಳಿದ ಬ್ರಾಹ್ಮಣರ ಜೊತೆಯಲ್ಲಿ ವಿರೋಧವನ್ನು ಮಾಡುವರು.

ಮಹೀ ಮ್ಲೇಚ್ಛಜನಾಕೀರ್ಣಾ ಭವಿಷ್ಯತಿ ತತೋऽಚಿರಾತ್ ॥೭೨॥

ಕರಭಾರಭಯಾದ್ವಿಪ್ರಾ ಭಜಿಷ್ಯಂತಿ ದಿಶೋ ದಶ ।
ಅನ್ಯಾಯವರ್ತ್ತಿನಶ್ಚಾಪಿ ಭವಿಷ್ಯಂತಿ ನರಾಧಿಪಾಃ ॥೭೩॥

ಆಗ ಶೀಘ್ರದಲ್ಲಿಯೇ ಭೂಮಿಯು ಮ್ಲೇಚ್ಛ ಜನರಿಂದ ತುಂಬುವುದು. ಬ್ರಾಹ್ಮಣರು ತೆರಿಗೆಯ ಭಾರದ ಭಯದಿಂದ ಹತ್ತು ದಿಕ್ಕುಗಳನ್ನು ಆಶ್ರಯಿಸುವರು. ರಾಜರು ಅನ್ಯಾಯ ಮಾರ್ಗದಲ್ಲಿಯೇ ನಡೆಯುವರು.

ನಿರ್ವಿಶೇಷಾ ಜನಪದಾಸ್ತಥಾ ವಿಪ್ಲವಕರಾರ್ದಿತಾಃ ।
ಆಶ್ರಮಾನುಪಲಪ್ಸ್ಯಂತಿ ಫಲಮೂಲೋಪಜೀವಿನಃ ॥೭೪॥

ದೇಶವಾಸಿಗಳೆಲ್ಲರೂ ಬಿಟ್ಟಿಯ ಕೆಲಸ ಮತ್ತು ತೆರಿಗೆಗಳಿಂದ ಹಿಂಸೆಗೊಳಗಾಗಿ ಒಂದೇ ರೀತಿಯಲ್ಲಿ ಇರುವರು. ಕಂದಮೂಲಫಲಗಳನ್ನು ಸೇವಿಸುತ್ತಾ ಆಶ್ರಮಗಳಲ್ಲಿ ನೆಲೆಸುವರು.

ಏವಂ ಪರ್ಯಾಕುಲೇ ಲೋಕೇ ಮರ್ಯಾದಾ ನ ಭವಿಷ್ಯತಿ ।
ನ ಸ್ಥಾಸ್ಯಂತ್ಯುಪದೇಶೇ ಚ ಶಿಷ್ಯಾ ವಿಪ್ರಿಯಕಾರಿಣಃ ॥೭೫॥

ಹೀಗೆ ಲೋಕವು ಪರ್ಯಾಕುಲವಾಗುತ್ತಿರಲು ಯಾವ ಒಂದು ಒಳ್ಳೆಯ ನಡತೆಯೂ ಉಳಿಯುವುದಿಲ್ಲ. ಶಿಷ್ಯರು ಗುರುಗಳ ಉಪದೇಶವನ್ನು ಕೇಳುವುದಿಲ್ಲ ಮತ್ತು ಗುರುಗಳಿಗೆ ವಿಪ್ರಿಯವನ್ನು ಮಾಡುತ್ತಾರೆ.

ಬ್ರಾಹ್ಮಣಾಃ ಕ್ಷತ್ರಿಯಾಃ ವೈಶ್ಯಾಃ ಪರಿತ್ಯಕ್ಷ್ಯಂತಿ ಸತ್ಕ್ರಿಯಾಮ್ ॥
ಆಚಾರ್ಯೋಪನಿಧಿಶ್ಚೈವ ಭರ್ತ್ಸ್ಯತೇ ತದನಂತರಮ್ ॥೭೬॥

ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರೆಲ್ಲರೂ ಸತ್ಕ್ರಿಯೆಗಳನ್ನು ತ್ಯಜಿಸುತ್ತಾರೆ. ಗುರುಗಳ ಪ್ರತಿನಿಧಿಗಳಾದವರು ಗುರುವಿಗೆ ಅವಮಾನ ಮಾಡಿದಮೇಲೆ ಅವಮಾನಿತರಾಗುತ್ತಾರೆ.

ಲೋಕವೆಲ್ಲವೂ ವಿಪರೀತ ಆಚಾರಗಳಿಂದ ಕೂಡಿ ತಲೆಕೆಳಗಾಗುವುದು. ಯಾರೂ ದೇವತೆಗಳನ್ನು ಪೂಜಿಸುವುದಿಲ್ಲ. ಟಗರು ಹೋತಗಳನ್ನು ಪೂಜಿಸುವರು. ಯುಗಾಂತ ಕಾಲದಲ್ಲಿ ಶೂದ್ರರು ದ್ವಿಜರ ಸೇವೆಯನ್ನು ಮಾಡುವುದಿಲ್ಲ.

ಆಶ್ರಮೇಷು ಮಹರ್ಷೀಣಾಂ ಬ್ರಾಹ್ಮಣಾವಸಥೇಷು ಚ ।
ದೇವಸ್ಥಾನೇಷು ಚೈತ್ಯೇಷು ನಾಗಾನಾಮಾಲಯೇಷು ಚ ॥೬೭॥

ಜಾಲೂಕಚಿಹ್ನಾ ಪೃಥಿವೀ ನ ದೇವಗೃಹಭೂಷಿತಾ ।
ಭವಿಷ್ಯತಿ ಯುಗೇ ಕ್ಷೀಣೇ ತದ್ಯುಗಾಂತಸ್ಯ ಲಕ್ಷಣಮ್ ॥೬೮॥

ಮಹರ್ಷಿಗಳ ಆಶ್ರಮದಲ್ಲಿ, ಬ್ರಾಹ್ಮಣರ ಮನೆಗಳಲ್ಲಿ, ದೇವಸ್ಥಾನಗಳಲ್ಲಿ, ಪೂಜ್ಯ ವೃಕ್ಷಗಳ ಸನ್ನಿಧಾನದಲ್ಲಿ, ನಾಗಬನಗಳಲ್ಲಿ ಭೂಮಿಯು ವನಜಲೂಕ ಪ್ರಾಣಿಗಳ ಚಿಹ್ನೆಗಳಿಂದ ಕೂಡಿರುವುದು. ದೇವಗೃಹಗಳಿಂದ ಭೂಷಿತವಾಗಿರುವುದಿಲ್ಲ. ಯಾವಾಗ ಈ ರೀತಿಯಾಗುವುದೋ ಆಗ ಯುಗಾಂತವು ಸಮೀಪಿಸಿದೆ ಎಂದು ತಿಳಿಯಬೇಕು.

ಯದಾ ರೌದ್ರಾ ಧರ್ಮಹೀನಾ ಮಾಂಸಾದಾಃ ಪಾನಪಾಸ್ತಥಾ ।
ಭವಿಷ್ಯಂತಿ ನರಾ ನಿತ್ಯಂ ತದಾ ಸಂಕ್ಷೇಪ್ಸ್ಯತೇ ಯುಗಮ್ ॥೬೯॥

ಯಾವಾಗ ಎಲ್ಲ ಮನುಷ್ಯರು ಧರ್ಮಹೀನರೂ, ಮಾಂಸಭಕ್ಷಕರೂ, ಮದ್ಯಪಾನಿಗಳೂ ಮತ್ತು ಘೋರ ಸ್ವಭಾವದವರೂ ಆಗುವರು ಆಗ ಯುಗವು ಸಮಾಪ್ತಿಗೊಳ್ಳುವುದು.

ಪುಷ್ಪಂ ಪುಷ್ಪೇ ಯದಾ ರಾಜನ್ ಫಲೇ ವಾ ಫಲಮಾಶ್ರಿತಮ್ ।
ಪ್ರಜಾಸ್ಯತಿ ಮಹಾರಾಜ ತದಾ ಸಂಕ್ಷೇಪ್ಸ್ಯತೇ ಯುಗಮ್ ।
ಅಕಾಲವರ್ಷೀ ಪರ್ಜನ್ಯೋ ಭವಿಷ್ಯತಿ ಗತೇ ಯುಗೇ ॥೭೦॥

ಎಲೈ ಮಹಾರಾಜನೇ, ಯಾವಾಗ ಪುಷ್ಪದಲ್ಲಿ ಪುಷ್ಪವೂ, ಫಲದಲ್ಲಿ ಫಲವೂ ಉಂಟಾಗುವುದೋ ಆಗ ಯುಗವು ಸಮಾಪ್ತಿಗೊಳ್ಳುವುದು. ಆಗ ಪರ್ಜನ್ಯನು ಅಕಾಲದಲ್ಲಿ ಮಳೆಯನ್ನು ಸುರಿಸುವನು.

ಅಕ್ರಮೇಣ ಮನುಷ್ಯಾಣಾಂ ಭವಿಷ್ಯಂತಿ ತದಾ ಕ್ರಿಯಾಃ ।
ವಿರೋಧಮಥ ಯಾಸ್ಯಂತಿ ವೃಷಲಾ ಬ್ರಾಹ್ಮಣೈಃ ಸಹ ॥೭೧॥

ಮನುಷ್ಯರ ಎಲ್ಲಾಕ್ರಿಯೆಗಳು ಕ್ರಮವ್ಯತ್ಯಾಸದಿಂದ ಉಂಟಾಗುವುದು. ಶೂದ್ರರು ಉಳಿದ ಬ್ರಾಹ್ಮಣರ ಜೊತೆಯಲ್ಲಿ ವಿರೋಧವನ್ನು ಮಾಡುವರು.

ಮಹೀ ಮ್ಲೇಚ್ಛಜನಾಕೀರ್ಣಾ ಭವಿಷ್ಯತಿ ತತೋಽಚಿರಾತ್ ॥೭೨॥

ಕರಭಾರಭಯಾದ್ವಿಪ್ರಾ ಭಜಿಷ್ಯಂತಿ ದಿಶೋ ದಶ ।
ಅನ್ಯಾಯವರ್ತ್ತಿನಶ್ಚಾಪಿ ಭವಿಷ್ಯಂತಿ ನರಾಧಿಪಾಃ ॥೭೩॥

ಆಗ ಶೀಘ್ರದಲ್ಲಿಯೇ ಭೂಮಿಯು ಮ್ಲೇಚ್ಛ ಜನರಿಂದ ತುಂಬುವುದು. ಬ್ರಾಹ್ಮಣರು ತೆರಿಗೆಯ ಭಾರದ ಭಯದಿಂದ ಹತ್ತು ದಿಕ್ಕುಗಳನ್ನು ಆಶ್ರಯಿಸುವರು. ರಾಜರು ಅನ್ಯಾಯ ಮಾರ್ಗದಲ್ಲಿಯೇ ನಡೆಯುವರು.

ನಿರ್ವಿಶೇಷಾ ಜನಪದಾಸ್ತಥಾ ವಿಪ್ಲವಕರಾರ್ದಿತಾಃ ।
ಆಶ್ರಮಾನುಪಲಪ್ಸ್ಯಂತಿ ಫಲಮೂಲೋಪಜೀವಿನಃ ॥೭೪॥

ದೇಶವಾಸಿಗಳೆಲ್ಲರೂ ಬಿಟ್ಟಿಯ ಕೆಲಸ ಮತ್ತು ತೆರಿಗೆಗಳಿಂದ ಹಿಂಸೆಗೊಳಗಾಗಿ ಒಂದೇ ರೀತಿಯಲ್ಲಿ ಇರುವರು. ಕಂದಮೂಲಫಲಗಳನ್ನು ಸೇವಿಸುತ್ತಾ ಆಶ್ರಮಗಳಲ್ಲಿ ನೆಲೆಸುವರು.

ಏವಂ ಪರ್ಯಾಕುಲೇ ಲೋಕೇ ಮರ್ಯಾದಾ ನ ಭವಿಷ್ಯತಿ ।
ನ ಸ್ಥಾಸ್ಯಂತ್ಯುಪದೇಶೇ ಚ ಶಿಷ್ಯಾ ವಿಪ್ರಿಯಕಾರಿಣಃ ॥೭೫॥

ಹೀಗೆ ಲೋಕವು ಪರ್ಯಾಕುಲವಾಗುತ್ತಿರಲು ಯಾವ ಒಂದು ಒಳ್ಳೆಯ ನಡತೆಯೂ ಉಳಿಯುವುದಿಲ್ಲ. ಶಿಷ್ಯರು ಗುರುಗಳ ಉಪದೇಶವನ್ನು ಕೇಳುವುದಿಲ್ಲ ಮತ್ತು ಗುರುಗಳಿಗೆ ವಿಪ್ರಿಯವನ್ನು ಮಾಡುತ್ತಾರೆ.

ಬ್ರಾಹ್ಮಣಾಃ ಕ್ಷತ್ರಿಯಾಃ ವೈಶ್ಯಾಃ ಪರಿತ್ಯಕ್ಷ್ಯಂತಿ ಸತ್ಕ್ರಿಯಾಮ್ ॥
ಆಚಾರ್ಯೋಪನಿಧಿಶ್ಚೈವ ಭರ್ತ್ಸ್ಯತೇ ತದನಂತರಮ್ ॥೭೬॥

ಬ್ರಾಹ್ಮಣ, ಕ್ಷತ್ರಿಯ ಮತ್ತು ವೈಶ್ಯರೆಲ್ಲರೂ ಸತ್ಕ್ರಿಯೆಗಳನ್ನು ತ್ಯಜಿಸುತ್ತಾರೆ. ಗುರುಗಳ ಪ್ರತಿನಿಧಿಗಳಾದವರು ಗುರುವಿಗೆ ಅವಮಾನ ಮಾಡಿದಮೇಲೆ ಅವಮಾನಿತರಾಗುತ್ತಾರೆ.

ಅರ್ಥಯುಕ್ತಾ ಪ್ರವತ್ಸ್ಯಂತಿ ಮಿತ್ರಸಂಬಂಧಿಬಾಂಧವಾಃ ।
ಅಭಾವಃ ಸರ್ವಭೂತಾನಾಂ ಯುಗಾಂತೇ ಸಂಭವಿಷ್ಯತಿ ॥೭೭॥

ಮಿತ್ರ ಸಂಬಂಧಿ ಬಾಂಧವರು ಧನದ ಉದ್ದೇಶದಿಂದ ಜೊತೆಯಲ್ಲಿ ವಾಸ ಮಾಡುವರು. ಎಲ್ಲ ಪ್ರಾಣಿಗಳ ಅಭಾವವು ಯುಗಾಂತದಲ್ಲಿ ಉಂಟಾಗುವುದು.

ದಿಶಃ ಪ್ರಜ್ವಲಿತಾಃ ಸರ್ವಾ ನಕ್ಷತ್ರಾಣ್ಯಪ್ರಭಾಣಿ ಚ ।
ಜ್ಯೋತೀಂಷಿ ಪ್ರತಿಕೂಲಾನಿ ವಾತಾಃ ಪರ್ಯಾಕುಲಾಸ್ತಥಾ ॥೭೮॥

ಎಲ್ಲ ದಿಕ್ಕುಗಳು ಉರಿಯುತ್ತವೆ. ನಕ್ಷತ್ರಗಳು ತಮ್ಮ ಕಾಂತಿಯನ್ನು ಕಳೆದುಕೊಳ್ಳುವವು. ಗ್ರಹಗಳು ಪ್ರತಿಕೂಲವಾಗುವವು. ವಾಯುಗಳು ವ್ಯತ್ಯಸ್ತವಾಗಿ ಬೀಸುವವು.

ಉಲ್ಕಾಪಾತಾಶ್ಚ ಬಹವೋ ಮಹಾಭಯನಿದರ್ಶಕಾಃ ।
ಷಡ್ಭಿರನ್ಯೈಶ್ಚ ಸಹಿತೋ ಭಾಸ್ಕರಃ ಪ್ರತಪಿಷ್ಯತಿ ।
ತುಮುಲಾಶ್ಚಾಪಿ ನಿರ್ಘಾತಾ ದಿಗ್ದಾಹಾಶ್ಚಾಪಿ ಸರ್ವಶಃ ॥೭೯॥

ಮಹಾಭಯವನ್ನು ಸೂಚಿಸುವ ಅನೇಕ ಉಲ್ಕಾಪಾತಗಳು ಉಂಟಾಗುವುವು. ಸೂರ್ಯನು ಉಳಿದ ಆರು ಸೂರ್ಯರ ಜೊತೆಯಲ್ಲಿ ಸೇರಿ ಜಗತ್ತನ್ನು ಸುಡುವನು. ಘೋರವಾದ ಸಿಡಿಲುಗಳು ಮತ್ತು ಎಲ್ಲಾ ದಿಕ್ಕುಗಳಲ್ಲಿಯೂ ದಾಹಗಳು ಉಂಟಾಗುವುವು.

ಕಬಂಧಾಂತರ್ಹಿತೋ ಭಾನುರುದಯಾಸ್ತಮನೇ ತದಾ ।
ಅಕಾಲವರ್ಷೀ ಭಗವಾನ್ ಭವಿಷ್ಯತಿ ಸಹಸ್ರದೃಕ್ ॥೮೦॥

ಸೂರ್ಯೋದಯ ಮತ್ತು ಸೂರ್ಯಾಸ್ತಗಳಲ್ಲಿ ಸೂರ್ಯನು ಮೋಡಗಳಿಂದ ಆಚ್ಛಾದಿತನಾಗುವನು. ಪೂಜ್ಯನಾದ ಇಂದ್ರನು ಅಕಾಲದಲ್ಲಿ ಮಳೆಯನ್ನು ಸುರಿಸುವನು.

ಸಸ್ಯಾನಿ ಚ ನ ರೋಕ್ಷ್ಯಂತಿ ಯುಗಾಂತೇ ಪರ್ಯುಪಸ್ಥಿತೇ ॥೮೧॥

ಅಭೀಕ್ಷ್ಣಂ ಕ್ರೂರವಾದಿನ್ಯಃ ಪರುಷಾ ರುದತಿಪ್ರಿಯಾಃ ।
ಭರ್ತೃಣಾಂ ವಚನೇ ಚೈವ ನ ಸ್ಥಾಸ್ಯಂತಿ ತತಃ ಸ್ತ್ರಿಯಃ ॥೮೨॥

ಯುಗಾಂತವು ಸನ್ನಿಹಿತವಾದಾಗ ಸಸ್ಯವು ಬೆಳೆಯುವುದಿಲ್ಲ. ಸ್ತ್ರೀಯರು ಆಗ ಯಾವಾಗಲೂ ಕ್ರೂರವಾದ ಮತ್ತು ಒರಟಾದ ಮಾತನ್ನಾಡುತ್ತಾ ರೋದನ ಪ್ರಿಯರಾಗುವರು. ಪತಿಗಳ ಮಾತನ್ನು ಸ್ತ್ರೀಯರು ಪಾಲಿಸುವುದಿಲ್ಲ.

ಪುತ್ರಾಶ್ಚ ಮಾತಾಪಿತರೌ ಹನಿಷ್ಯಂತಿ ಯುಗಕ್ಷಯೇ ।
ಸೂದಯಿಷ್ಯಂತಿ ಚ ಪತೀನ್ ಸ್ತ್ರಿಯಃ ಪುತ್ರಾನುಪಾಶ್ರಿತಾಃ ॥೮೩॥

ಯುಗಕ್ಷಯದಲ್ಲಿ ಮಕ್ಕಳು ತಂದೆ ತಾಯಿಗಳನ್ನು ಕೊಲ್ಲುವರು. ಸ್ತ್ರೀಯರು ಪುತ್ರರನ್ನು ಅವಲಂಬಿಸಿ ಪತಿಗಳನ್ನು ಕೊಲ್ಲುವರು.

ಅಪರ್ವಣಿ ಮಹಾರಾಜ ಸೂರ್ಯಂ ರಾಹುರುಪೈಷ್ಯತಿ ।
ಯುಗಾಂತೇ ಹುತಭುಕ್ಚಾಪಿ ಸರ್ವತಃ ಪ್ರಜ್ವಲಿಷ್ಯತಿ ॥೮೪॥

ಎಲೈ ಮಹಾರಾಜನೇ, ರಾಹುವು ಪರ್ವಕಾಲವಲ್ಲದ ಕಾಲದಲ್ಲಿ ಸೂರ್ಯನನ್ನು ಸಮೀಪಿಸಿ ಹಿಡಿಯುವನು. ಯುಗಾಂತ ಸಮಯದಲ್ಲಿ ಎಲ್ಲ ಕಡೆಯಲ್ಲಿಯೂ ಅಗ್ನಿಯು ಉಂಟಾಗುವುದು.

ಪಾನೀಯಂ-ಭೋಜನಂ ಚಾಪಿ ಯಾಚಮಾನಾಸ್ತದಾऽಧ್ವಗಾಃ ।
ನ ಲಪ್ಸ್ಯಂತೇ ನಿವಾಸಂ ಚ ನಿರಸ್ತಾಃ ಪಥಿ ಶೇರತೇ ॥೮೫॥

ದಾರಿಹೋಕರು ಅನ್ನಪಾನಗಳನ್ನು ಯಾಚಿಸಿದರೂ ಅವರಿಗೆ ಅದನ್ನು ನೀಡದೆ ಅವರು ಮಾರ್ಗದಲ್ಲೇ ವಾಸವನ್ನು ಮಾಡಿ ಮಲಗುವರು.

ನಿರ್ಘಾತವಾಯಸಾ ನಾಗಾಃ ಶಕುನಾಃ ಸಮೃಗಾದ್ವಿಜಾಃ ।
ರೂಕ್ಷಾ ವಾಚೋ ವಿಮೋಕ್ಷ್ಯಂತಿ ಯುಗಾಂತೇ ಪರ್ಯುಪಸ್ಥಿತೇ ।
ಮಿತ್ರಸಂಬಂಧಿನಶ್ಚಾಪಿ ಸಂತ್ಯಕ್ಷ್ಯಂತಿ ನರಾಸ್ತದಾ ॥೮೬॥

ಅಪಶಕುನವನ್ನು ನುಡಿಯುವ ಕಾಗೆಗಳು, ಸರ್ಪಗಳು, ಶಕುನ ಪಕ್ಷಿಗಳು ಮತ್ತು ಉಳಿದ ಎಲ್ಲಾ ಮೃಗಪಕ್ಷಿಗಳೆಲ್ಲಾ ಯುಗಾಂತವು ಸನ್ನಿಹಿತವಾದಾಗ ಒರಟಾದ ಮತ್ತು ಭಯಂಕರವಾದ ಧ್ವನಿಗಳನ್ನು ಮಾಡುವವು. ಮನುಷ್ಯರು ಮಿತ್ರರನ್ನೂ ಮತ್ತು ಸಂಬಂಧಿಗಳನ್ನು ತ್ಯಜಿಸುವರು.

ಜನಂ ಪರಿಜನಂ ಚಾಪಿ ಯುಗಾಂತೇ ಪರ್ಯುಪಸ್ಥಿತೇ ।
ಅಥ ದೇಶಾನ್‌ದಿಶಾಶ್ಚಾಪಿ ಪತ್ತನಾನಿ ಪುರಾಣಿ ಚ ।
ಕ್ರಮಶಃ ಸಂಶ್ರಯಿಷ್ಯಂತಿ ಯುಗಾಂತೇ ಪರ್ಯುಪಸ್ಥಿತೇ ॥೮೭॥

ಯುಗಾಂತವು ಸನ್ನಿಹಿತವಾದಾಗ ಜನರು ಮತ್ತು ಪರಿವಾರದವರು ಬೇರೆ ಬೇರೆ ದಿಕ್ಕುಗಳನ್ನು, ದೇಶಗಳನ್ನು, ಪಟ್ಟಣ ಮತ್ತು ಪುರಗಳನ್ನು ಕ್ರಮವಾಗಿ ಆಶ್ರಯಿಸುವರು.

ಹಾ ತಾತ ಹಾ ಸುತೇತ್ಯೇವಂ ತದಾ ವಾಚಃ ಸುದಾರುಣಾಃ ।
ವಿಕ್ರೋಶಮಾನಶ್ಚಾನ್ಯೋನ್ಯಂ ಜನೋ ಗಾಂ ಪರ್ಯಟಿಷ್ಯತಿ ॥೮೮॥

ಅಯ್ಯೋ ತಂದೆಯೇ, ಅಯ್ಯೋ ಪುತ್ರನೇ ಎಂಬ ದಾರುಣವಾದ ಶಬ್ದಗಳಿಂದ ಪರಸ್ಪರವಾಗಿ ಕಿರುಚುತ್ತಾ ಜನರು ಭೂಮಿಯಲ್ಲಿ ತಿರುಗಾಡುವರು.

ಭೋವಾದಿನಸ್ತಥಾ ಶೂದ್ರಾಃ ಬ್ರಾಹ್ಮಣಾ ಪ್ರಾಕೃತಪ್ರಿಯಾಃ ।
ಪಾಷಂಡಜನಸಂಕೀರ್ಣಾ ಭವಿಷ್ಯಂತಿ ಯುಗಕ್ಷಯೇ ॥೮೯॥

ಯುಗಕ್ಷಯಕಾಲದಲ್ಲಿ ಶೂದ್ರರು ಬ್ರಾಹ್ಮಣರನ್ನು ಎಲವೋ ಎಂದು ಕರೆಯುವರು. ಬ್ರಾಹ್ಮಣರು ಪ್ರಾಕೃತ ಭಾಷೆಯ ಪ್ರಿಯರಾಗುವರು. ಪಾಷಂಡ ಜನರು ಎಲ್ಲ ಕಡೆಯಲ್ಲಿಯೂ ತುಂಬುವರು.

ತತಸ್ತುಮುಲಸಂಘಾತೇ ವರ್ತಮಾನೇ ಯುಗಕ್ಷಯೇ ।
ದ್ವಿಜಾತಿಪೂರ್ವಕೋ ಲೋಕಃ ಕ್ರಮೇಣ ಪ್ರಭವಿಷ್ಯತಿ ॥೯೦॥

ಯುಗಕ್ಷಯದ ಕಾಲದಲ್ಲಿ ಇಂತಹ ಘೋರವಾದ ಸಂಘರ್ಷವು ಉಂಟಾಗುತ್ತಿರಲು ಲೋಕದಲ್ಲಿ ಕ್ರಮವಾಗಿ ಹೆಣ್ಣು, ಗಂಡು ಎಂಬ ಎರಡೇ ಜಾತಿಗಳು ಉಳಿಯುವವು.

ತತಃ ಕಾಲಾಂತರೇಽನ್ಯಸ್ಮಿನ್ ಪುನರ್ಲೋಕವಿವೃದ್ಧಯೇ ।
ಭವಿಷ್ಯತಿ ಪುನರ್ದೈವಮನುಕೂಲಂ ಯದೃಚ್ಛಯಾ ॥೯೧॥

ಅನಂತರ ಅನುಕೂಲವಾದ ಕಾಲವು ಒದಗಿದಾಗ ಪುನಃ ಲೋಕದ ಏಳಿಗೆಗಾಗಿ ತನ್ನ ಇಚ್ಛೆಯಿಂದಲೇ ದೈವವು ಅನುಕೂಲವಾಗುವುದು.

ಯದಾ ಸೂರ್ಯಶ್ಚ ಚಂದ್ರಶ್ಚ ತಥಾ ತಿಷ್ಯಬೃಹಸ್ಪತೀ ।
ಏಕರಾಶೌ ಸಮೇಷ್ಯಂತಿ ಪ್ರಪತ್ಸ್ಯತಿ ತದಾ ಕೃತಮ್ ॥೯೨॥

ಸೂರ್ಯ, ಚಂದ್ರ ಮತ್ತು ಬೃಹಸ್ಪತಿಗಳು ಯಾವಾಗ ಕರ್ಕಾಟಕ ರಾಶಿಯಲ್ಲಿ ಪುಷ್ಯನಕ್ಷತ್ರದಲ್ಲಿ ಏಕಕಾಲದಲ್ಲಿ ಪ್ರವೇಶಿಸುವರೋ ಆಗ ಕೃತಯುಗವು ಪ್ರಾರಂಭವಾಗುವುದು.

ಕಾಲವರ್ಷೀ ಚ ಪರ್ಜನ್ಯೋ ನಕ್ಷತ್ರಾಣಿ ಶುಭಾನಿ ಚ ।
ಪ್ರದಕ್ಷಿಣಾ ಗ್ರಹಾಶ್ಚಾಪಿ ಭವಿಷ್ಯಂತ್ಯನುಲೋಮಗಾಃ ॥೯೩॥

ಕ್ಷೇಮಂ ಸುಭಿಕ್ಷಮಾರೋಗ್ಯಂ ಭವಿಷ್ಯತಿ ನಿರಾಮಯಮ್ ॥೯೪॥

ಪರ್ಜನ್ಯನು ಕಾಲಕಾಲಕ್ಕೆ ಮಳೆಯನ್ನು ಸುರಿಸುವನು. ನಕ್ಷತ್ರಗಳು ಶುಭಪ್ರದಗಳಾಗುವುವು. ಎಲ್ಲಗ್ರಹಗಳು ಅನುಕೂಲವಾಗಿ ದಲ್ಲಿಪ್ರದಕ್ಷಿಣಾಕಾರದಲ್ಲಿ ಚಲಿಸುವವು. ಕ್ಷೇಮವೂ, ಸುಭಿಕ್ಷವೂ, ಆರೋಗ್ಯವೂ, ನಿರುಪದ್ರವವೂ ಉಂಟಾಗುವುವು.

ಕಲ್ಕೀ ವಿಷ್ಣುಯಶಾ ನಾಮ ದ್ವಿಜಃ ಕಾಲಪ್ರಜೋದಿತಃ ।
ಉತ್ಪತ್ಸ್ಯತೇ ಮಹಾವೀರ್ಯೋ ಮಹಾಬುದ್ಧಿಪರಾಕ್ರಮಃ ॥೯೫॥

ವಿಷ್ಣುವು ಅನುಕೂಲವಾದ ಕಾಲದಲ್ಲಿ ಮಹಾವೀರ್ಯನೂ, ಮಹಾಬುದ್ಧಿ ಪರಾಕ್ರಮವನ್ನು ಉಳ್ಳವನೂ ಆಗಿ ವಿಷ್ಣುಯಶಸ್ ಎಂಬ ಬ್ರಾಹ್ಮಣನ ಮನೆಯಲ್ಲಿ ತಾನೂ ವಿಷ್ಣುಯಶಸ್ ಎಂಬ ಬ್ರಾಹ್ಮಣನಾಗಿ ಕಲ್ಕಿ ಎಂಬ ಹೆಸರಿನಿಂದ ಅವತಾರ ಮಾಡುವನು.

ಸಂಭೂತಃ ಸಂಭಲಗ್ರಾಮೇ ಬ್ರಾಹ್ಮಣವಸಥೇ ಶುಭೇ ।
ಮಹಾತ್ಮಾ ತಸ್ಯ ಸರ್ವಾಣಿ ವಾಹನಾನ್ಯಾಯುಧಾನಿ ಚ ।
ಉಪಸ್ಥಾಸ್ಯಂತಿ ಯೋಧಾಶ್ಚ ಶಸ್ತ್ರಾಣಿ ಕವಚಾನಿ ಚ ॥೯೭॥

ಎಲೈ ರಾಜನೇ, ಆ ಮಹಾತ್ಮನು ಸಂಭಲಗ್ರಾಮದಲ್ಲಿ (ಶಂಬಲ ಗ್ರಾಮದಲ್ಲಿ) ಶುದ್ಧವಾದ ಬ್ರಾಹ್ಮಣನ ಮನೆಯಲ್ಲಿಪ್ರಜೆಗಳಿಗೆ ಹಿತವನ್ನುಂಟು ಮಾಡುವ ಸಲುವಾಗಿ

ಒಳ್ಳೆಯ ನಡತೆಯುಳ್ಳವನಾಗಿ ಅವತರಿಸುವನು. ಅವನು ಮನಸ್ಸಿನಲ್ಲಿ ಯೋಚಿಸಿದ ತಕ್ಷಣ ಎಲ್ಲಾ ವಾಹನಗಳೂ, ಆಯುಧಗಳೂ, ಯೋಧರೂ, ಶಸ್ತ್ರಗಳೂ ಮತ್ತು ಕವಚಗಳು ಅವನ ಸುತ್ತಲೂ ಸೇರುವವು.

ಸ ಧರ್ಮವಿಜಯೀ ರಾಜಾ ಚಕ್ರವರ್ತೀ ಭವಿಷ್ಯತಿ ।
ಸ ಚೇಮಂ ಸಂಕುಲಂ ಲೋಕಂ ಪ್ರಸಾದಮುಪನೇಷ್ಯತಿ ॥೯೮॥

ಅವನು ಧರ್ಮವಿಜಯವನ್ನು ಸಂಪಾದಿಸಿ ಜನಗಳನ್ನು ರಂಜಿಸುವ ಚಕ್ರವರ್ತಿಯಾಗುವನು. ಅದಕ್ಕಿಂತ ಮೊದಲು ಸಂಕಟಕ್ಕೆ ಒಳಗಾದ ಲೋಕದಲ್ಲಿರುವ ದುಷ್ಟರನ್ನೆಲ್ಲಾ ವಿನಾಶಮಾಡುವನು.

ಉತ್ಥಿತೋ ಬ್ರಾಹ್ಮಣೋ ದೀಪ್ತಃ ಕ್ಷಯಾಂತಕೃದುದಾರಧೀಃ ।
ಸಂಕ್ಷೇಪಕೋ ಹಿ ಸರ್ವಸ್ಯ ಯುಗಸ್ಯ ಪರಿವರ್ತಕಃ ॥೯೯॥

ಬ್ರಾಹ್ಮಣರ ಮನೆಯಲ್ಲಿ ಉದಿಸಿ, ಕಾಂತಿಯುಳ್ಳವನಾಗಿ, ಉದಾರವಾದ ಬುದ್ಧಿಯುಳ್ಳವನಾಗಿ ಕಲಿಯುಗದ ಕ್ಷಯವನ್ನು ಉಂಟುಮಾಡಿ ಅನಂತರ ಕೃತಯುಗದ ಪ್ರವರ್ತಕನಾಗುವನು.

ಸ ಸರ್ವತ್ರ ಗತಾನ್ ಕ್ಷುದ್ರಾನ್ ಬ್ರಾಹ್ಮಣೈಃ ಪರಿವಾರಿತಃ ।
ಉತ್ಸಾದಯಿಷ್ಯತಿ ತದಾ ಸರ್ವಮ್ಲೇಚ್ಛಗಣಾನ್ ದ್ವಿಜಃ ॥೧೦೦॥

ಬ್ರಾಹ್ಮಣನಾದ ಅವನು, ಬ್ರಾಹ್ಮಣರಿಂದ ಸುತ್ತುವರಿಯಲ್ಪಟ್ಟು ದಿಕ್ಕು ದಿಕ್ಕುಗಳಲ್ಲಿರುವ ಸರ್ವಮ್ಲೇಚ್ಛರ ಸಮೂಹಗಳನ್ನು ವಿನಾಶಗೊಳಿಸುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಾಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ದಶಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ತೈದನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ತಾರನೆಯ ಅಧ್ಯಾಯ

ಮಾರ್ಕಂಡೇಯರಿಂದ ಕಲ್ಕಿಯು ಮಾಡುವ ಕೃತಯುಗಸ್ಥಾಪನೆಯ ಕಥನ ಮತ್ತು ಯುಧಿಷ್ಠಿರನಿಗೆ ಮಾರ್ಕಂಡೇಯರಿಂದ ಧರ್ಮೋಪದೇಶ.

ಮಾರ್ಕಂಡೇಯಃ

ತತಶ್ಚೋರಕ್ಷಯಂ ಕೃತ್ವಾ ದ್ವಿಜೇಭ್ಯಃ ಪೃಥಿವೀಮಿಮಾಮ್ ।
ವಾಜಿಮೇಧೇ ಮಹಾಯಜ್ಞೇ ವಿಧಿವತ್ ಕಲ್ಪಯಿಷ್ಯತಿ ॥೧॥

ಮಾರ್ಕಂಡೇಯ– ಅನಂತರ ಚೋರರನ್ನು ವಿನಾಶಮಾಡಿ ವಾಜಿಮೇಧ ಮಹಾಯಾಗವನ್ನು ಮಾಡಿ ಅದರಲ್ಲಿ ಬ್ರಾಹ್ಮಣರಿಗೆ ವಿಧಿಪೂರ್ವಕವಾಗಿ ಈ ಭೂಮಿಯನ್ನು ಕೊಡುವನು.

ಸ್ಥಾಪಯಿತ್ವಾ ಚ ಮರ್ಯಾದಾಃ ಸ್ವಯಂಭುವಿಹಿತಾಃ ಶುಭಾಃ ।
ವನಂ ಪುಣ್ಯಯಶಃಕರ್ಮಾ ಜರಯಾ ಸಂಶ್ರ(ಕ್ಷ)ಯಿಷ್ಯತಿ ।
ತಚ್ಚೀಲಮನುವರ್ತ್ಸ್ಯಂತಿ ಮನುಷ್ಯಾ ಲೋಕವಾಸಿನಃ ॥೨॥

ಬ್ರಹ್ಮದೇವರಿಂದ ವಿಹಿತವಾದ ಎಲ್ಲಾ ಶುಭವಾದ ಲೋಕಮರ್ಯಾದೆಗಳನ್ನು ಸ್ಥಾಪಿಸಿ ಪುಣ್ಯವಾದ ಕೀರ್ತಿಯನ್ನು ಹೊಂದಿ, ಪುಣ್ಯವಾದ ಕರ್ಮವನ್ನು ಮಾಡುವವನಾಗಿ, ನಿರ್ಜನವಾದ ವನಗಳನ್ನು ನಾಶಮಾಡಿ ಬ್ರಾಹ್ಮಣಗ್ರಾಮದಿಂದ ತುಂಬುವನು. ಲೋಕದಲ್ಲಿ ವಾಸಿಸುವ ಜನರು ಅವನ ಶೀಲವನ್ನೇ ಅನುಸರಿಸುವರು.

ವಿಪ್ರೈಶ್ಚೋರಕ್ಷಯೇ ಚೈವ ಕೃತೇ ಕ್ಷೇಮಂ ಭವಿಷ್ಯತಿ ॥೩॥

ಚೋರಕ್ಷಯವು ಉಂಟಾಗುತ್ತಿರಲು ವಿಪ್ರರಿಂದ ಲೋಕಕ್ಕೆ ಕ್ಷೇಮವಾಗುವುದು.

ಕೃಷ್ಣಾಜಿನಾನಿ ಶಕ್ತೀಶ್ಚ ತ್ರಿಶೂಲಾನ್ಯಾಯುಧಾನಿ ಚ ।
ಸ್ಥಾಪಯನ್ ವಿಪ್ರಶಾರ್ದೂಲಾನ್ ದೇಶೇಷು ವಿಜಿತೇಷು ಚ ॥೪॥

ತನ್ನಿಂದ ವಿಜಿತವಾದ ದೇಶಗಳಲ್ಲಿ ಕೃಷ್ಣಾಜಿನಗಳನ್ನೂ ಮತ್ತು ಶಕ್ತಿತ್ರಿಶೂಲ ಮೊದಲಾದ ಆಯುಧಗಳನ್ನು ಸ್ಥಾಪಿಸುವವನಾಗುತ್ತಾನೆ (ಶಕ್ತಿ, ತ್ರಿಶೂಲ ಮೊದಲಾದ ಆಯುಧಗಳನ್ನು ನೋಡಿ ಕಳ್ಳರು ಹೆದರುವಂತೆ ಬ್ರಾಹ್ಮಣರ ಕೃಷ್ಣಾಜಿನವನ್ನು ನೋಡಿಯೂ ಚೋರರು ಹೆದರಿ ಓಡುವಂತೆ ಮಾಡುತ್ತಾನೆ).

ಸಂಸ್ತೂಯಮಾನೋ ವಿಪ್ರೇಂದ್ರೈರ್ಮಾನಯಾನೋ ದ್ವಿಜೋತ್ತಮಾನ್ ।
ಕಲ್ಕೀ ಚರಿಷ್ಯತಿ ಮಹೀಂ ಸದಾ ದಸ್ಯುವಧೇ ರತಃ ॥೫॥

ವಿಪ್ರಶ್ರೇಷ್ಠರಿಂದ ಸ್ತೋತ್ರಮಾಡಲ್ಪಟ್ಟು ಶ್ರೇಷ್ಠರಾದ ವಿಪ್ರರಿಗೆ ಸನ್ಮಾನವನ್ನು ಮಾಡುತ್ತಾ ಸದಾ ದಸ್ಯುವಧೆಯಲ್ಲೇ ನಿರತನಾಗಿ ಕಲ್ಕಿಯು ಭೂಮಿಯಲ್ಲಿ ಸಂಚರಿಸುವನು.

ಹಾ ಮಾತಸ್ತಾತ ಪುತ್ರೇತಿ ತಾಸ್ತಾ ವಾಚಃ ಸುದಾರುಣಾಃ ।
ವಿಕ್ರೋಶಮಾನಾನ್ ಸುಭೃಶಂ ದಸ್ಯೂನ್ ನೇಷ್ಯತಿ ಸಂಕ್ಷಯಮ್ ॥೬॥

ಅಯ್ಯೋ ತಾಯಿಯೇ, ಅಯ್ಯೋ ಮಗನೇ ಎಂಬ ಧಾರುಣವಾದ ಮಾತುಗಳಿಂದ ವಿಕ್ರೋಶಮಾಡುತ್ತಿರುವ ದಸ್ಯುಗಳನ್ನು ಪೂರ್ಣವಾಗಿ ನಾಶಗೊಳಿಸುವನು.

ತತೋऽಧರ್ಮವಿನಾಶೋ ವೈ ಧರ್ಮವೃದ್ಧಿಶ್ಚ ಭಾರತ ।
ಭವಿಷ್ಯತಿ ಕೃತೇ ಪ್ರಾಪ್ತೇ ಕ್ರಿಯಾವಾಂಶ್ಚ ಜನಸ್ತಥಾ ॥೭॥

ಎಲೈ ಭಾರತನೇ, ಆಗ ಕೃತಯುಗವು ಪ್ರಾಪ್ತವಾಗಲು ಅಧರ್ಮದ ವಿನಾಶವೂ ಮತ್ತು ಧರ್ಮದ ವೃದ್ಧಿಯೂ ಉಂಟಾಗುವುದು. ಜನರು ಸತ್ಕಾರ್ಯಗಳಲ್ಲಿ ನಿರತರಾಗುವರು.

ಆರಾಮಾಶ್ಚೈವ ಚೈತ್ಯಾಶ್ಚ ತಟಾಕಾವಸಥಾಸ್ತಥಾ ।
ಯಜ್ಞಕ್ರಿಯಾಶ್ಚ ವಿವಿಧಾ ಭವಿಷ್ಯಂತಿ ಕೃತೇ ಯುಗೇ ।
ಬ್ರಾಹ್ಮಣಾಃ ಸಾಧವಶ್ಚೈವ ಮುನಯಶ್ಚ ತಪಸ್ವಿನಃ ॥೮॥

ಉದ್ಯಾನವನಗಳು, ಪೂಜಾವೃಕ್ಷಗಳು, ಸರೋವರಗಳು, ಬ್ರಾಹ್ಮಣರ ಅಗ್ರಹಾರಗಳು, ವಿವಿಧವಾದ ಯಜ್ಞಕ್ರಿಯೆಗಳು ಕೃತಯುಗದಲ್ಲಿ ಉಂಟಾಗುವುವು. ಸಾಧುಗಳಾದ ಬ್ರಾಹ್ಮಣರೂ, ತಪಸ್ವಿಗಳಾದ ಋಷಿಗಳೂ ಉಂಟಾಗುವರು.

ಆಶ್ರಮಾಶ್ಚಾವಿಪಾಷಂಡಾಃ ಸ್ಥಿತಾಃ ಸತ್ಯೇ ಜನಾಸ್ತದಾ ।
ಜಾಯಂತಿ ಸರ್ವಭೂತಾನಿ ಶುಧ್ಯಮಾನಾನಿ ಚೈವ ಹಿ ॥೯॥

ಆಶ್ರಮಗಳು ಸಂಪೂರ್ಣವಾಗಿ ಪಾಷಂಡರಹಿತವಾಗುವುವು. ಜನರು ಸತ್ಯದಲ್ಲಿಯೇ ರತರಾಗುವರು. ಎಲ್ಲ ಪ್ರಾಣಿಗಳು ಶುದ್ಧವಾದ ತಮ್ಮ ಮರಿಗಳನ್ನು ಪ್ರಸವಿಸುವುವು.

ಸರ್ವೇಷ್ವೃತುಷು ರಾಜೇಂದ್ರ ಸರ್ವಂ ಸಸ್ಯಂ ಭವಿಷ್ಯತಿ ॥೧೦॥

ಎಲೈ ರಾಜೇಂದ್ರನೇ, ಎಲ್ಲ ಋತುಗಳಲ್ಲಿಯೂ ಎಲ್ಲಾ ಸಸ್ಯಗಳೂ ಬೆಳೆಯುವವು.

ನರಾ ದಾನೇಷು ನಿರತಾ ವ್ರತೇಷು ನಿಯಮೇಷು ಚ ।
ಜಪಯಜ್ಞಪರಾ ವಿಪ್ರಾ ಧರ್ಮಕಾಮಾ ಮುದಾ ಯುತಾಃ ।
ಪಾಲಯಿಷ್ಯಂತಿ ರಾಜಾನೋ ಧರ್ಮೇಣೇಮಾಂ ವಸುಂಧರಾಮ್ ॥

ಮನುಷ್ಯರು ದಾನಗಳಲ್ಲಿಯೂ, ವ್ರತನಿಯಮಗಳಲ್ಲಿಯೂ ನಿರತರಾಗುವರು. ಬ್ರಾಹ್ಮಣರು ಜಪಯಜ್ಞಪರರಾಗಿ ಧರ್ಮವನ್ನೇ ಬಯಸಿ ಸಂತೋಷದಿಂದ ಇರುವರು. ರಾಜರು ಧರ್ಮದಿಂದ ಈ ಭೂಮಿಯನ್ನು ಪಾಲಿಸುವರು.

ವ್ಯವಹಾರರತಾ ವೈಶ್ಯಾ ಭವಿಷ್ಯಂತಿ ಕೃತೇ ಯುಗೇ ।
ಷಟ್‌ಕರ್ಮನಿರತಾ ವಿಪ್ರಾಃ ಕ್ಷತ್ರಿಯಾ ವಿಕ್ರಮೇ ರತಾಃ ॥೧೨॥

ಶುಶ್ರೂಷಾಯಾಂ ರತಾಃ ಶೂದ್ರಸ್ತಥಾ ವರ್ಣತ್ರಯಸ್ಯ ಚ ॥೧೩॥

ಕೃತಯುಗದಲ್ಲಿ ವೈಶ್ಯರು ವ್ಯಾಪಾರಾದಿ ವ್ಯವಹಾರಗಳಲ್ಲಿ ನಿರತರಾಗುವರು. ಬ್ರಾಹ್ಮಣರು ಷಟ್‌ಕರ್ಮಗಳಲ್ಲಿ ನಿರತರಾಗುವರು. ಕ್ಷತ್ರಿಯರು ಪರಾಕ್ರಮಗಳಲ್ಲಿ ನಿರತರಾಗುವರು. ಶೂದ್ರರು ಮೂರುವರ್ಣಗಳ ಸೇವೆಯಲ್ಲಿ ನಿರತರಾಗುವರು.

ಏಷ ಧರ್ಮಃ ಕೃತಯುಗೇ ತ್ರೇತಾಯಾಂ ದ್ವಾಪರೇ ತಥಾ ।
ಪಶ್ಚಿಮೇ ಯುಗಕಾಲೇ ಚ ಯಃ ಸ ತೇ ಸಂಪ್ರಕೀರ್ತಿತಃ ।
ಸರ್ವಲೋಕಸ್ಯ ವಿದಿತಾ ಯುಗಸಂಖ್ಯಾ ಚ ಪಾಂಡವ ॥೧೪॥

ಇದು ಕೃತಯುಗದ ಧರ್ಮ. ತ್ರೇತಾಯುಗದಲ್ಲಿ, ದ್ವಾಪರಯುಗದಲ್ಲಿ ಮತ್ತು ಕೊನೆಯದಾದ ಕಲಿಯುಗದ ಕಾಲದಲ್ಲಿ ಧರ್ಮವು ಹೇಗಿರುತ್ತದೆ ಎಂದು ನಿನಗೆ ಮೊದಲೇ ತಿಳಿಸಿದ್ದೇನೆ. ಯುಗಸಂಖ್ಯೆಯೂ ಸಹ ಎಲ್ಲ ಜನರಿಗೂ ತಿಳಿದಿದೆ.

ಏತತ್ ತೇ ಸರ್ವಮಾಖ್ಯಾತಮತೀತಾನಾಗತಂ ತಥಾ ।
ವಾಯುಪ್ರೋಕ್ತಮನುಸ್ಮೃತ್ಯ ಪುರಾಣಮೃಷಿಸಂಸ್ತುತಮ್ ॥೧೫॥

ಋಷಿಗಳಿಂದ ಪ್ರಶಂಸಿಸಲ್ಪಟ್ಟು ವಾಯುಪ್ರೋಕ್ತ ಪುರಾಣವನ್ನು ಅನುಸರಿಸಿ ನಾನು ನಿನಗೆ ಅತೀತವಾದ ಮತ್ತು ಅನಾಗತವಾದ ಎಲ್ಲವನ್ನೂ ತಿಳಿಸಿದ್ದೇನೆ.

ಏವಂ ಸಂಸಾರಮಾರ್ಗಾ ಮೇ ಬಹುಶಶ್ಚಿರಜೀವಿನಾ ।
ದೃಷ್ಟಾಶ್ಚೈವಾನುಭೂತಾಶ್ಚ ತಾಂಸ್ತೇ ಕಥಿತವಾನಹಮ್ ॥೧೬॥

ಚಿರಜೀವಯಾದ ನಾನು ನೋಡಿ ಅನುಭವಿಸಿದ ಈ ವಿಧವಿಧವಾದ ಸಂಸಾರ ಮಾರ್ಗಗಳನ್ನು ನಾನು ನಿನಗೆ ಹೇಳಿದ್ದೇನೆ.

ಇದಂ ಚೈವಾಪರಂ ಭೂಯಃ ಸಹ ಭ್ರಾತೃಭಿರಚ್ಯುತ ।
ಧರ್ಮಸಂಶಯಮೋಕ್ಷಾರ್ಥಂ ನಿಬೋಧ ವಚನಂ ಮಮ ॥೧೭॥

ಎಲೈ ಭಕ್ತಾಧಿಗಳಿಂದ ಚ್ಯುತನಾಗದವನೇ, ಧರ್ಮವಿಷಯದಲ್ಲಿ ಸಂಶಯ ಪರಿಹಾರಕ್ಕಾಗಿ ನಾನು ಹೇಳುವ ಈ ಮಾತನ್ನು ತಮ್ಮಂದಿರ ಜೊತೆಯಲ್ಲಿ ಕೇಳು.

ಧರ್ಮೇ ತ್ವಯಾऽऽತ್ಮಾ ಸಂಯೋಜ್ಯೋ ನಿತ್ಯಂ ಧರ್ಮಭೃತಾಂ ವರ ।
ಧರ್ಮಾತ್ಮಾ ಹಿ ಸುಖಿಂ ರಾಜನ್ ಪ್ರೇತ್ಯ ಚೇಹ ಚ ವಿಂದತಿ ।
ನಿಬೋಧ ಚ ಶುಭಾಂ ವಾಣೀಂ ಯಾಂ ಪ್ರವಕ್ಷ್ಯಾಮಿ ತೇऽನಘ ॥೧೮॥

ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ, ನೀನು ಯಾವಾಗಲೂ ನಿನ್ನನ್ನು ಧರ್ಮದಲ್ಲಿಯೇ ತೊಡಗಿಸಿಕೊಳ್ಳಬೇಕು. ಎಲೈ ರಾಜನೇ, ಧರ್ಮಾತ್ಮನಾದವನೇ ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಸುಖವನ್ನು ಹೊಂದುವನು. ಎಲೈ ಅನಘನೇ, ನಾನು ಹೇಳುವ ಇನ್ನೊಂದು ಶುಭವಾದ ಮಾತನ್ನು ಕೇಳು.

ನ ಬ್ರಾಹ್ಮಣೇ ಪರಿಭವಃ ಕರ್ತವ್ಯಸ್ತೇ ಕದಾಚನ ।
ಬ್ರಾಹ್ಮಣಃ ಕುಪಿತೋ ಹನ್ಯಾದಪಿ ಲೋಕಾನ್ ಪ್ರತಿಜ್ಞಯಾ ॥೧೯॥

ಬ್ರಾಹ್ಮಣನಿಗೆ ನೀನು ಎಂದೂ ಅವಮಾನವನ್ನು ಮಾಡಬಾರದು. ಕುಪಿತನಾದ ಬ್ರಾಹ್ಮಣನು ತನ್ನ ಪ್ರತಿಜ್ಞೆಯಿಂದಲೇ ಲೋಕಗಳನ್ನು ನಾಶಮಾಡಿಯಾನು.

ವೈಶಂಪಾಯನಃ

ಮಾರ್ಕಂಡೇಯವಚಃ ಶ್ರುತ್ವಾ ಕುರೂಣಾಂ ಪ್ರವರೋ ನೃಪಃ ।
ಉವಾಚ ವಚನಂ ಧೀಮಾನ್ ಪರಮಂ ಪರಮದ್ಯುತಿಃ ॥೨೦॥

ವೈಶಂಪಾಯನ– ಮಾರ್ಕಂಡೇಯರ ಮಾತುಗಳನ್ನು ಕೇಳಿದ ಮೇಧಾವಿಯಾದ, ಪರಮಕಾಂತಿಯುಕ್ತನಾದ, ಕುರುಶ್ರೇಷ್ಠನಾದ ಧರ್ಮರಾಜನು ಹೀಗೆ ಮಾತನಾಡಿದನು.

ಏತತ್‌ಶ್ರುತ್ವಾ ಮಯಾ ಕಿಂ ಸ್ಯಾತ್ ಕರ್ತವ್ಯಂ ಮುನಿಸತ್ತಮ ।
ಕಥಂ ಚಾಯಂ ಜಿತೋ ಲೋಕೋ ರಕ್ಷಿತವ್ಯೋ ಭವಿಷ್ಯತಿ ॥೨೧॥

ಎಲೈ ಮುನಿಶ್ರೇಷ್ಠರೇ, ನಿಮ್ಮ ಮಾತನ್ನು ಕೇಳಿ ನಾನು ಏನು ಮಾಡಬೇಕು? ಜಿತವಾದ ಈ ಲೋಕವನ್ನು ನಾನು ಹೇಗೆ ರಕ್ಷಿಸಬೇಕು?

ಮಾರ್ಕಂಡೇಯಃ

ದಯಾವಾನ್ ಸರ್ವಭೂತೇಷು ಹಿತೋ ರಕ್ತೋಽನಸೂಯಕಃ ।
ಸತ್ಯವಾದೀ ಮೃದುರ್ದಾಂತಃ ಪ್ರಜಾನಾಂ ರಕ್ಷಣೇ ರತಃ ॥೨೨॥

ಚರ ಧರ್ಮಂ ತ್ಯಜಾಧರ್ಮಂ ಪಿತೄನ್ ದೇವಾಂಶ್ಚ ಪೂಜಯ ।
ಪ್ರಮಾದಾದ್ ಯತ್ಕೃತಂ ತೇಽಭೂತ್ ಸಮ್ಯಗ್ದಾನೇನ ತಜ್ಜಪ ॥೨೩॥

ಮಾರ್ಕಂಡೇಯರು– ಸರ್ವಪ್ರಾಣಿಗಳಲ್ಲಿಯೂ ದಯೆಯನ್ನು ಮಾಡಿ, ಎಲ್ಲರಲ್ಲಿಯೂ ಸ್ನೇಹವನ್ನು ಮಾಡಿ, ಎಲ್ಲರಿಗೂ ಹಿತನಾಗಿದ್ದು, ಅಸೂಯೆಯನ್ನು ಮಾಡದೆ, ಸತ್ಯವಚನವನ್ನು ನುಡಿದು, ಮೃದುವೂ, ಇಂದ್ರಿಯ ನಿಗ್ರಹವುಳ್ಳವನೂ, ಪ್ರಜಾಪಾಲನೆಯಲ್ಲಿ ನಿರತನಾದವನೂ ಆಗಿ ಧರ್ಮವನ್ನು ಆಚರಿಸು. ಅಧರ್ಮವನ್ನು ತ್ಯಜಿಸು. ಪಿತೃಗಳನ್ನು ಮತ್ತು ದೇವತೆಗಳನ್ನು ಪೂಜಿಸು. ಪ್ರಮಾದದಿಂದ ಉಂಟಾದ ಪಾಪವನ್ನು ಒಳ್ಳೆಯ ದಾನವನ್ನು ಕೊಡುವುದರಿಂದ ಜಯಿಸು.

ಅಲಂ ತೇ ಮಾನಮಾಶ್ರಿತ್ಯ ಸತತಂ ಪರವಾನ್ ಭವ ।
ವಿಜಿತ್ಯ ಪೃಥಿವೀಂ ಸರ್ವಾಂ ಮೋದಮಾನಃ ಸುಖೀ ಭವ ॥೨೪॥

ಅಹಂಕಾರವನ್ನು ಪಡಬೇಡ. ನಿತ್ಯದಲ್ಲಿಯೂ ವಿನೀತನಾಗಿರು. ಸಮಗ್ರವಾದ ಭೂಮಿಯನ್ನು ಗೆದ್ದು ಸಂತೋಷಪಡುತ್ತಾ ಸುಖವಾಗಿರು.

ಏಷ ಭೂತೋ ಭವಿಷ್ಯಶ್ಚ ಧರ್ಮಸ್ತೇ ಸಮುದೀರಿತಃ ।
ನ ತೇಽಸ್ಯವಿದಿತಂ ಕಿಂಚಿದತೀತಾನಾಗತಂ ಭುವಿ ॥೨೫॥

ಭೂತಕಾಲದ ಮತ್ತು ಭವಿಷ್ಯಕಾಲದ ಈ ಧರ್ಮಗಳನ್ನು ನಾನು ನಿನಗೆ ಹೇಳಿದ್ದೇನೆ. ಭೂಮಿಯಲ್ಲಿ ಭೂತಭವಿಷ್ಯತ್ ಕಾಲದಲ್ಲಿ ನಿನಗೆ ತಿಳಿಯದಿರುವ ವಸ್ತುವು ಯಾವುದೂ ಇಲ್ಲ.

ತಸ್ಮಾದಿಮಂ ಪರಿಕ್ಲೇಶಂ ತ್ವಂ ತಾತ ಹೃದಿ ಮಾ ಕೃಥಾಃ ।
ಪ್ರಾಜ್ಞಾಸ್ತಾತ ನ ಮುಹ್ಯಂತಿ ಕಾಲೇನಾಪಿ ಪ್ರಪೀಡಿತಾಃ ॥೨೬॥

ಎಲೈ ಪ್ರೀತಿಪಾತ್ರನೇ, ಆದ್ದರಿಂದ ಈಗ ಅನುಭವಿಸುತ್ತಿರುವ ಕ್ಲೇಶವನ್ನು ಮನಸ್ಸಿನಲ್ಲಿ ಹಚ್ಚಿಕೊಳ್ಳಬೇಡ. ಪ್ರೀತಿಪಾತ್ರನೇ, ಕಾಲಚಕ್ರದಲ್ಲಿ ಪೀಡೆಗೆ ಒಳಗಾದರೂ ಸಹ ಪ್ರಾಜ್ಞರು ಮೋಹಕ್ಕೆ ಒಳಗಾಗುವುದಿಲ್ಲ.

ಏಷ ಕಾಲೋ ಮಹಾಬಾಹೋ ಅಪಿ ಸರ್ವದಿವೌಕಸಾಮ್ ।
ಮುಹ್ಯಂತೇ ಹಿ ಪ್ರಜಾಸ್ತಾತ ಕಾಲೇನಾಪಿ ಪ್ರಚೋದಿತಾಃ ॥೨೭॥

ಎಲೈ ಮಹಾಬಾಹುವೇ, ಕಾಲನಾಮಕ ಪರಮಾತ್ಮನ ಸಾಮರ್ಥ್ಯವು ಅಂತಹುದು. ದೇವತೆಗಳ ಮಕ್ಕಳೂ ಸಹ ಅವನಿಂದ ಪ್ರೇರಿತರಾಗಿ ಮೋಹಕ್ಕೆ ಒಳಗಾಗುತ್ತಾರೆ.

ಮಾ ಚ ತತ್ರ ವಿಶಂಕಾಭೂದ್ ಯನ್ಮಯೋಕ್ತಂ ತವಾನಘ ।
ಆಶಂಕ್ಯ ಮದ್ವಚೋ ಹ್ಯೇತದ್ ಧರ್ಮಲೋಪೋ ಭವೇತ್ ತವ ॥೨೮॥

ಎಲೈ ಅನಘನೇ, ನಾನು ಹೇಳಿದ ವಿಷಯದಲ್ಲಿ ಸಂಶಯವನ್ನು ಪಡಬೇಡ. ನನ್ನ ಮಾತಿನಲ್ಲಿ ಸಂಶಯವನ್ನು ಪಟ್ಟರೆ ನಿನಗೆ ಧರ್ಮಲೋಪವು ಉಂಟಾದೀತು.

ಜಾತೋಽಪಿ(ಸಿ) ಪಶ್ಚಿಮೇ ವಂಶೇ ಕುರೂಣಾಂ ಭರತರ್ಷಭ ।
ಕರ್ಮಣಾ ಮನಸಾ ವಾಚಾ ಸರ್ವಮೇತತ್ ಸಮಾಚರ ॥೨೯॥

ಎಲೈ ಭರತರ್ಷಭನೇ, ಕುರುಗಳ ಚರಮವಂಶದಲ್ಲಿ ಜನಿಸಿದ್ದೀಯೆ. ನೀನು ಕರ್ಮದಿಂದಲೂ, ಮನಸ್ಸಿನಿಂದಲೂ ಮತ್ತು ಮಾತಿನಿಂದಲೂ ನಾನು ಹೇಳಿದ ಎಲ್ಲವನ್ನೂ ಆಚರಿಸು.

ಯುಧಿಷ್ಠಿರಃ

ಯತ್ ತ್ವಯೋಕ್ತಂ ದ್ವಿಜಶ್ರೇಷ್ಠ ವಾಕ್ಯಂ ಶ್ರುತಿಮನೋಹರಮ್ ।
ತಥಾ ಕರಿಷ್ಯೇ ಯತ್ನೇನ ಭವತಃ ಶಾಸನಂ ವಿಭೋ ॥೩೦॥

ಯುಧಿಷ್ಠಿರ– ಎಲೈ ದ್ವಿಜಶ್ರೇಷ್ಠರೇ, ಶ್ರವಣ ಮನೋಹರವಾದ ಮಾತುಗಳನ್ನು ಏನು ನೀವು ಆಡಿದ್ದೀರೋ ಅದನ್ನು ಪ್ರಯತ್ನಪೂರ್ವಕವಾಗಿ ಮಾಡುವೆನು. ಸಮರ್ಥರಾದವರೇ, ನಿಮ್ಮ ಶಾಸನವನ್ನು ಪ್ರಯತ್ನಪೂರ್ವಕವಾಗಿ ಆಚರಿಸುವೆನು.

ನ ಮೇ ಲೋಭೋಽಸ್ತಿ ವಿಪ್ರೇಂದ್ರ ನ ಭಯಂ ನ ಚ ಮತ್ಸರಃ ।
ಕರಿಷ್ಯಾಮಿ ಹಿ ತತ್ಸರ್ವಮುಕ್ತಂ ಯತ್ ತೇ ಮಯಿ ಪ್ರಭೋ ॥೩೧॥

ಎಲೈ ವಿಪ್ರೇಂದ್ರರೇ, ನನಗೆ ಲೋಭವಿಲ್ಲ. ಭಯವಾಗಲೀ, ಮತ್ಸರವಾಗಲೀ ಇಲ್ಲ. ಪ್ರಭುಗಳೇ, ನೀವು ಹೇಳಿದ ಎಲ್ಲವನ್ನೂ ನಾನು ಮಾಡುವೆನು.

ವೈಶಂಪಾಯನಃ

ಶ್ರುತ್ವಾ ತು ವಚನಂ ತಸ್ಯ ಮಾರ್ಕಂಡೇಯಸ್ಯ ಧೀಮತಃ ।
ಸಂಹೃಷ್ಟಾಃ ಪಾಂಡವಾ ರಾಜನ್ ಸಹಿತಾಃ ಶಾರ್ಙ್ಗಧನ್ವನಾ ॥೩೨॥

ವೈಶಂಪಾಯನ– ಎಲೈ ರಾಜನೇ, ಮೇಧಾವಿಗಳಾದ ಆ ಮಾರ್ಕಂಡೇಯರ ಮಾತುಗಳನ್ನು ಕೇಳಿ ಕೃಷ್ಣನಿಂದ ಸಹಿತರಾದ ಪಾಂಡವರು ಸಂತೋಷಪಟ್ಟರು.

ವಿಪ್ರರ್ಷಭಾಶ್ಚ ತೇ ಸರ್ವೇ ಯೇ ತತ್ರಾಸನ್ ಸಮಾಗತಾಃ ।

ತಥಾ ಕಥಾಂ ಶುಭಾಂ ಶ್ರುತ್ವಾ ಮಾರ್ಕಂಡೇಯಸ್ಯ ಧೀಮತಃ ।
ವಿಸ್ಮಿತಾಃ ಸಮಪದ್ಯಂತ ಪುರಾಣಸ್ಯ ನಿವೇದನಾತ್ ॥೩೩॥

ಮೇಧಾವಿಗಳಾದ ಮಾರ್ಕಂಡೇಯರ ಶುಭವಚನಗಳನ್ನು ಕೇಳಿ ಅಲ್ಲಿಗೆ ಪ್ರಾಪ್ತರಾದ ವಿಪ್ರಶ್ರೇಷ್ಠರೂ ಸಹ ಪುರಾಣದ ಜ್ಞಾನದಿಂದ ವಿಸ್ಮಿತರಾದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಡಶೀತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಯುಧಿಷ್ಠಿರಾನುಶಾಸನೇ
ಏಕಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ತಾರನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ತೇಳನೆಯ ಅಧ್ಯಾಯ

ಮಾರ್ಕಂಡೇಯರಿಂದ ಮಂಡೂಕೋಪಾಖ್ಯಾನ ಕಥನ.

ವೈಶಂಪಾಯನಃ

ಭೂಯ ಏವ ಬ್ರಾಹ್ಮಣಮಾಹಾತ್ಮ್ಯಂ ವಕ್ತುಮರ್ಹಸೀತ್ಯಬ್ರವೀತ್
ಪಾಂಡವೇಯೋ ಮಾರ್ಕಂಡೇಯಮ್ ॥೧॥

ವೈಶಂಪಾಯನ– ಪಾಂಡುಪುತ್ರನಾದ ಧರ್ಮರಾಜನು ಮಾರ್ಕಂಡೇಯರನ್ನು ಕುರಿತು ಪುನಃ ಬ್ರಾಹ್ಮಣ ಮಹಾತ್ಮ್ಯವನ್ನು ತಾವು ಹೇಳಬೇಕು ಎಂದು ಕೇಳಿದನು.

ಅಥಾಚಷ್ಟ ಮಾರ್ಕಂಡೇಯೋಽಪೂರ್ವಮಿದಂ
ಶ್ರೂಯತಾಂ ಬ್ರಾಹ್ಮಣಾನಾಂ ಚರಿತಮ್ ॥೨॥

ಆಗ ಮಾರ್ಕಂಡೇಯರು ಅಪೂರ್ವವಾದ ಈ ಬ್ರಾಹ್ಮಣ ಚರಿತ್ರೆಯನ್ನು ಕೇಳು ಎಂದು ಹೇಳಿದರು.

ಮಾರ್ಕಂಡೇಯಃ

ಅಯೋಧ್ಯಾಯಾಮಿಕ್ಷ್ವಾಕುಕುಲೋದ್ಭವಃ ಪಾರ್ಥಿವಃ
ಪರೀಕ್ಷಿನ್ನಾಮ ಮೃಗಯಾಮಗಮತ್ ॥೩॥

ಮಾರ್ಕಂಡೇಯರು– ಅಯೋಧ್ಯೆಯಲ್ಲಿ ಇಕ್ಷ್ವಾಕು ವಂಶದಲ್ಲಿ ಜನಿಸಿದ ಪರೀಕ್ಷಿತ ಎಂಬ ರಾಜನು ಬೇಟೆಗೆ ಹೋದನು.

ತಮೇಕಾಶ್ವೇನ ಮೃಗಮನುಸರಂತಂ ಮೃಗೋ ದೂರಮಪಾಹರತ್ ॥೪॥

ಒಂದು ಅಶ್ವದ ಮೇಲೆ ಮೃಗವನ್ನು ಅನುಸರಿಸಿ ಹೋದ ಅವನನ್ನು ಮೃಗವು ದೂರಕ್ಕೆ ಕೊಂಡೊಯ್ದಿತು.

ಅಧ್ವನಿ ಜಾತಶ್ರಮಃ ಕ್ಷುತ್ಪಿಪಾಸಾಭಿಭೂತಶ್ಚೈಕಸ್ಮಿನ್
ದೇಶೇ ನೀಲಂ ಗಹನಂ ವನಖಂಡಮಪಶ್ಯತ್ ॥೫॥

ಮಾರ್ಗದಲ್ಲಿ ಬಳಲಿದವನಾಗಿ ಹಸಿವು ನೀರಡಿಕೆಗಳಿಂದ ಪರಾಭೂತನಾಗಿ ಅವನು ಒಂದು ಪ್ರದೇಶದಲ್ಲಿ ದಟ್ಟವಾದ, ನೀಲವಾದ ಒಂದು ವನಪ್ರದೇಶವನ್ನು ನೋಡಿದನು.

ತಚ್ಚ ವಿವೇಶ ತತಸ್ತಸ್ಯ ವನಖಂಡಸ್ಯ ಮಧ್ಯೇऽತೀವ
ರಮಣೀಯಂ ಸರೋ ದೃಷ್ಟ್ವಾ ಸಾಶ್ವ ಏವ ವ್ಯಗಾಹತ ॥೬॥

ಅದನ್ನು ಪ್ರವೇಶಿಸಿದನು. ಅನಂತರ ಅಲ್ಲಿ ಆ ವನಖಂಡದ ಮಧ್ಯದಲ್ಲಿ ಇದ್ದ ರಮಣೀಯವಾದ ಸರೋವರವನ್ನು ನೋಡಿ ಅಶ್ವದ ಜೊತೆಯಲ್ಲಿ ಅಲ್ಲಿ ಸ್ನಾನವನ್ನು ಮಾಡಿದನು.

ಅಥಾಶ್ವಸ್ತಃ ಸ ಬಿಸಮೃಣಾಲಮಶ್ವಾಯಾಗ್ರತೋ
ನಿಕ್ಷಿಪ್ಯ ಪುಷ್ಕರಿಣೀತೀರೇ ಸಂವಿವೇಶ ।
ತತಃ ಶಯಾನೋ ಮಧುರಂ ಗೀತಮಶೃಣೋತ್ ॥೭॥

ಸ್ವಲ್ಪ ಸಮಾಧಾನವನ್ನು ಪಡೆದ ಅವನು ಕಮಲದ ದಂಟುಗಳನ್ನು ಅಶ್ವದ ಮುಂದೆ ಹಾಕಿ, ಸರೋವರದ ತೀರದಲ್ಲಿ ಮಲಗಿದನು. ಅಲ್ಲಿ ಮಲಗಿ ಅವನು ಮಧುರವಾದ ಗಾನವನ್ನು ಕೇಳಿದನು.

ಸ ಶ್ರುತ್ವಾऽಚಿಂತಯನ್ನೇಹ ಮನುಷ್ಯಗತಿಂ
ಪಶ್ಯಾಮಿ ಕಸ್ಯ ಖಿಲ್ವಯಂ ಗೀತಶಬ್ದ ಇತಿ ॥೮॥

ಅಥಾಪಶ್ಯತ್ ಕನ್ಯಾಂ ಪರಮರೂಪದರ್ಶನೀಯಾಂ
ಪುಷ್ಪಾಣ್ಯವಚಿನ್ವಂತೀಂ ಗಾಯಂತೀಂ ಚ ।
ಅಥ ಸಾ ರಾಜ್ಞಃ ಸಮೀಪೇ ಪರ್ಯಕ್ರಾಮತ್ ॥೯॥

ಅವನು ಅದನ್ನು ಕೇಳಿ ಇಲ್ಲಿ ಮನುಷ್ಯರ ಗಮನವೇ ಇಲ್ಲ ಎಂದು ಕಾಣುತ್ತಿದೆ. ಈ ಗೀತಶಬ್ದವು ಯಾರದ್ದಾಗಿರಬಹುದು? ಎಂದು ಯೋಚಿಸಿದನು. ಅನಂತರ ಅವನು ಪರಮಸುಂದರಿಯಾದ ಒಬ್ಬ ಕನ್ಯೆಯು ಹೂವುಗಳನ್ನು ಬಿಡಿಸುತ್ತಾ ಹಾಡುತ್ತಿರುವುದನ್ನು ನೋಡಿದನು. ಆಗ ಅವಳು ರಾಜನ ಸಮೀಪಕ್ಕೆ ಬಂದಳು.

ತಾಮಬ್ರವೀತ್ ಸರಾಜಾ ಕಸ್ಯಾಸಿ ಭದ್ರೇ ಕಾ ವಾ ತ್ವಮಿತಿ ॥೧೦॥

ರಾಜನು ಅವಳನ್ನು ಕುರಿತು ಮಂಗಳಸ್ವರೂಪಳೇ, ನೀನು ಯಾರು ಮತ್ತು ಯಾರಿಗೆ ಸೇರಿದವಳು ಎಂದು ಕೇಳಿದನು.

ಸಾ ಪ್ರತ್ಯುವಾಚ ಕನ್ಯಾಽಸ್ಮೀತಿ ॥೧೧॥

ಅವಳು ನಾನು ಕನ್ಯೆ ಎಂದು ಉತ್ತರವನ್ನು ಕೊಟ್ಟಳು.

ತಾಂ ರಾಜೋವಾಚಾರ್ಥೀ ತ್ವಯಾಽಹಮಿತಿ ॥೧೨॥

ಆಗ ರಾಜನು ನಾನು ನಿನ್ನ ಉದ್ದೇಶದಿಂದ ಕನ್ಯಾರ್ಥಿಯಾಗಿದ್ದೇನೆ ಎಂದು ಹೇಳಿದನು.

ಅಥೋವಾಚ ಕನ್ಯಾ ಸಮಯೇನಾಹಂ ಶಕ್ಯಾ
ತ್ವಯಾ ಲಬ್ಧುಂ ನಾನ್ಯಥೇತಿ ॥೧೩॥

ಆಗ ಕನ್ಯೆಯು ಒಂದು ಷರತ್ತಿನ ಮೇಲೆ ನೀನು ನನ್ನನ್ನು ಪಡೆಯಲು ಸಾಧ್ಯ. ಇಲ್ಲದಿದ್ದರೆ ಇಲ್ಲ ಎಂದು ಹೇಳಿದಳು.

ರಾಜಾ ತಾಂ ಸಮಯಮಪೃಚ್ಛತ್ । ಕಃ ಸಮಯ ಇತಿ ॥೧೪॥

ರಾಜನು ಏನು ಷರತ್ತು ಎಂದು ಅವಳನ್ನು ಷರತ್ತಿನ ವಿಷಯದಲ್ಲಿ ಪ್ರಶ್ನಿಸಿದನು.

ಕನ್ಯೋವಾಚ ನೋದಕಂ ಮೇ ದರ್ಶಯಿತವ್ಯಮಿತಿ ॥೧೫॥

ಕನ್ಯೆಯು ನನಗೆ ನೀರನ್ನು ತೋರಿಸಬಾರದು ಎಂದು ಹೇಳಿದಳು.

ಸ ರಾಜಾ ತಾಂ ಬಾಢಮಿತ್ಯುಕ್ತ್ವಾ ತಾಮುಪಯೇಮೇ
ಕೃತೋದ್ವಾಹಶ್ಚ ರಾಜಾ ಪರೀಕ್ಷಿತ್ ಕ್ರೀಡಮಾನೋ ಮುದಾ
ಪರಮಯಾ ಯುಕ್ತಸ್ತೂಷ್ಣೀಂ ಸಂಗಮ್ಯ ತಯಾ ಸಹಾಸ್ತೇ ॥೧೬॥

ಆ ರಾಜನು ಹಾಗೆಯೇ ಆಗಲಿ ಎಂದು ಹೇಳಿ ಅವಳನ್ನು ವಿವಾಹವಾದನು. ವಿವಾಹಿತನಾದ ಪರೀಕ್ಷಿತ್ ರಾಜನು ಅವಳ ಜೊತೆಯಲ್ಲಿ ವಿಹರಿಸುತ್ತಾ ಪರಮ ಸಂತೋಷದಿಂದ ಕೂಡಿದವನಾಗಿ ಅವಳ ಜೊತೆಯಲ್ಲಿ ಸುಮ್ಮನೆ ಕಾಲವನ್ನು ಕಳೆದನು.

ತತಸ್ತತ್ರೈವಾಸೀನೇ ರಾಜನಿ ಸೇನಾಽನ್ವಗಚ್ಛತ್ ।
ಸಾ ಸೇನೋಪವಿಷ್ಟಂ ರಾಜಾನಂ ಪರಿವಾರ್ಯಾತಿಷ್ಠತ್ ॥೧೭॥

ರಾಜನು ಅಲ್ಲಿಯೇ ಇರುತ್ತಿರಲು ಸೇನೆಯು ಅವನನ್ನು ಹಿಂಬಾಲಿಸಿತು. ಆ ಸೇನೆಯು ಕುಳಿತಿದ್ದ ರಾಜನನ್ನು ಸುತ್ತುವರಿದು ನಿಂತಿತು.

ಪರ್ಯಾಶ್ವಸ್ತಶ್ಚ ರಾಜಾ ತಯೈವ ಸಹ ಶಿಬಿಕಯಾ
ಪ್ರಾಯಾದವಘೋಟಿತಯಾ ಸ ಸ್ವಂ ನಗರಮನುಪ್ರಾಪ್ಯ
ರಹಸಿ ತಯಾ ಸಹಾಸ್ತೇ ॥೧೮॥

ಸುಧಾರಿಸಿಕೊಂಡಿದ್ದ ರಾಜನು ಸೈನ್ಯವು ತಂದ ಪರದೆ ಇದ್ದ ಶಿಬಿಕೆಯಲ್ಲಿ ಅವಳ ಜೊತೆಯಲ್ಲಿ ನಗರವನ್ನು ತಲುಪಿ ಏಕಾಂತದಲ್ಲಿ ಅವಳ ಜೊತೆಯಲ್ಲಿ ಇರುತ್ತಿದ್ದನು.

ತತ್ರಾಭ್ಯಾಶಸ್ಥೋಽಪಿ ಕಶ್ಚಿನ್ನಾಪಶ್ಯದಥ
ಪ್ರಧಾನಾಮಾತ್ಯೋಽಭ್ಯಾಶಚರಾಸ್ತಸ್ಯ ಸ್ತ್ರಿಯೋಽಪೃಚ್ಛತ್ ।
ಕಿಮತ್ರ ಪ್ರಯೋಜನಂ ವರ್ತತೇ ಇತ್ಯಥಾಬ್ರುವಂಸ್ತಾಃ ಸ್ತ್ರಿಯಃ ॥೧೯॥

ಅಪೂರ್ವಮಿವ ಪಶ್ಯಾಮ ಉದಕಂ ನಾತ್ರ ನೀಯತ ॥೨೦॥

ಇತ್ಯಥಾಮಾತ್ಯೋಽನುದಕಂ ವನಂ ಕಾರಯಿತ್ವೋದಾರವೃಕ್ಷಂ
ಬಹುಪುಷ್ಪಫಲಮೂಲಂ ತಸ್ಯ ಮಧ್ಯೇ ಮುಕ್ತಾಜಾಲಮಯೀಂ
ಪಾರ್ಶ್ವೇ ವಾಪೀಂ ಗೂಢಾಂ ಸುಧಾಸಲಿಲಲಿಪ್ತಾಂ ಸ
ರಹಸ್ಯುಪಗಮ್ಯ ರಾಜಾನಮಬ್ರವೀತ್ ॥
ವನಮಿದಮುದಾರಮನುದಕಂ ಸಾಧ್ವತ್ರ ರಮ್ಯತಾಮಿತಿ ॥೨೧॥

ಅಲ್ಲಿ ಸಮೀಪದಲ್ಲಿದ್ದವರೂ ಸಹ ಯಾರೂ ಅವನನ್ನು ನೋಡಲು ಆಗುತ್ತಿರಲಿಲ್ಲ. ಆಗ ಪ್ರಧಾನಾಮಾತ್ಯನು ರಾಜನ ಸಮೀಪದಲ್ಲಿ ಇರುವ ಸ್ತ್ರೀಯರನ್ನು ಕುರಿತು ಇದರಲ್ಲಿ ಏನು ಪ್ರಯೋಜನವಿದೆ ಎಂದು ಕೇಳಿದನು. ಆಗ ಆ ಸ್ತ್ರೀಯರು ಹೀಗೆ ಹೇಳಿದರು. ಇದು ಅಪೂರ್ವವಾಗಿ ನೋಡುತ್ತಿದ್ದೇವೆ. ಇಲ್ಲಿ ನೀರನ್ನು ತೆಗೆದುಕೊಂಡು ಹೋಗುವುದಿಲ್ಲ ಎಂದು ಹೇಳಿದರು. ಆಗ ಅಮಾತ್ಯನು ಉದಕವಿಲ್ಲದ, ಬಹು ಪುಷ್ಪಫಲಮೂಲಗಳನ್ನುಳ್ಳ, ಅನೇಕ ವೃಕ್ಷಗಳುಳ್ಳ ವನವನ್ನು ಮಾಡಿಸಿ ಅದರ ಮಧ್ಯದಲ್ಲಿ ಮುಕ್ತಾಜಾಲಗಳಿಂದ ಒಂದು ಗೃಹವನ್ನು ನಿರ್ಮಿಸಿ, ಅದರ ಪಕ್ಕದಲ್ಲಿ ಒಂದು ಸುಣ್ಣದಿಂದ ಬಳಿದ ಗೂಢವಾದ ಮುತ್ತಿನ ಸಮೂಹದಂತೆ ತೋರುವ ಒಂದು

ಬಾವಿಯನ್ನು ನಿರ್ಮಿಸಿ, ಏಕಾಂತದಲ್ಲಿ ರಾಜನನ್ನು ಸಮೀಪಿಸಿ ಈ ಶ್ರೇಷ್ಠವಾದ ವನವು ಜಲರಹಿತವಾಗಿದೆ. ಇಲ್ಲಿ ನೀನು ಚೆನ್ನಾಗಿ ವಿಹರಿಸಬಹುದು ಎಂದು ಹೇಳಿದನು.

ಸ ತಸ್ಯ ವಚನಾತ್ ತಯೈವ ಸಹ ದೇವ್ಯಾ ತದ್ವನಂ ಪ್ರಾವಿಶತ್ ॥೨೨॥

ರಾಜನು ಅವನ ಮಾತಿನಂತೆ ಆ ದೇವಿಯ ಜೊತೆಯಲ್ಲಿಯೇ ಆ ವನವನ್ನು ಪ್ರವೇಶಿಸಿದನು.

ಸ ಕದಾಚಿತ್ ತಸ್ಮಿನ್‌ಕಾನನೇ ರಮ್ಯೇ ತಯೈವ ಸಹ ವ್ಯವಾಹರದಥ
ಕುತ್ಸಪ್ಲಾರ್ದಿತಃ ಶ್ರಾಂತೋಽತಿಮುಕ್ತಕಾಗಾರಮಪಶ್ಯತ್ ॥೨೩॥

ಅವನು ಒಮ್ಮೆ ಆ ರಮ್ಯವಾದ ಕಾನನದಲ್ಲಿ ಅವಳ ಜೊತೆಯಲ್ಲೇ ವ್ಯವಹರಿಸುತ್ತಿದ್ದನು. ಒಮ್ಮೆ ಹಸಿವು ನೀರಡಿಕೆಗಳಿಂದ ಬಳಲಿ ಮುತ್ತಿಗಿಂತ ಶುಭ್ರವಾದ ಆ ಮನೆಯನ್ನು ನೋಡಿದನು.

ತತ್ಪವಿಶ್ಯ ರಾಜಾ ಸಹ ಪ್ರಿಯಯಾ ಸುಧಾಕೃತಾಂ
ವಿಮಲಾಂ ಸಲಿಲಪೂರ್ಣಾಂ ವಾಪೀಮಪಶ್ಯತ್ ॥೨೪॥

ರಾಜನು ಅದನ್ನು ತನ್ನ ಪ್ರಿಯೆಯ ಜೊತೆಯಲ್ಲಿ ಪ್ರವೇಶಿಸಿ, ಸ್ವಚ್ಛವಾದ ಸುಣ್ಣದಿಂದ ಬಳಿದಿದ್ದ ನೀರಿನಿಂದ ತುಂಬಿದ ಬಾವಿಯನ್ನು ನೋಡಿದನು.

ದೃಷ್ಟ್ವೈವ ಚ ತಾಂ ತಸ್ಯಾಶ್ಚ ತೀರೇ ಸಹೈವ
ತಯಾ ದೇವ್ಯಾವಾತಿಷ್ಠತ್ ॥೨೫॥

ಆ ಬಾವಿಯನ್ನು ನೋಡಿದ ಕೂಡಲೇ ಅದರ ತೀರದಲ್ಲಿ ಆ ದೇವಿಯ ಜೊತೆಯಲ್ಲಿಯೇ ನಿಂತನು.

ಅಥ ತಾಂ ದೇವೀಂ ಸ ರಾಜಾಽಬ್ರವೀತ್
ಸಾಧ್ವವತರ ವಾಪೀಸಲಿಲಮಿತಿ ॥೨೬॥

ಅನಂತರ ಆ ರಾಜನು ಆ ದೇವಿಯನ್ನು ಕುರಿತು ಬಾವಿಯ ನೀರಿನಲ್ಲಿ ಜಾಗರೂಕವಾಗಿ ಇಳಿ ಎಂದು ಹೇಳಿದನು.

ಸಾ ತದ್ವಚಃ ಶ್ರುತ್ವಾವತೀರ್ಯ ವಾಪೀಂ
ನ್ಯಮಜ್ಜನ್ನ ಪುನರುದಮಜ್ಜತ್ ॥೨೭॥

ಅವಳು ಅವನ ಮಾತನ್ನು ಕೇಳಿ ಬಾವಿಯಲ್ಲಿ ಇಳಿದು ಮುಳುಗಿದಳು. ಪುನಃ ಮೇಲೆ ಬರಲಿಲ್ಲ.

ತಾಂ ಸ ಮೃಗಯಮಾಣೋ ರಾಜಾ ನಾಪಶ್ಯತ್
ವಾಪೀಮಪಿ ನಿಃಸ್ರಾವ್ಯ ಮಂಡೂಕಂ ಶ್ವಭ್ರಮುಖೇ
ದೃಷ್ಟ್ವಾ ಕ್ರುದ್ಧ ಆಜ್ಞಾಪಯಾಮಾಸ ಸ ರಾಜಾ ।
ಸರ್ವತ್ರ ಮಂಡೂಕವಧಃ ಕ್ರಿಯತಾಮಿತಿ ಯೋ ಮಯಾರ್ಥೀ
ಸ ಮಾಂ ಮೃತಮಂಡೂಕೋಪಾಯನಮಾದಾಯೋಪತಿಷ್ಠೇದಿತಿ ॥೨೮॥

ರಾಜನು ಅವಳನ್ನು ಹುಡುಕಿದರೂ ಅವಳು ಕಾಣಲಿಲ್ಲ. ಅವನು ಬಾವಿಯ ನೀರನ್ನೆಲ್ಲಾ ತೆಗೆದು ಆ ಗುಂಡಿನ ಮೇಲಿನ ಪ್ರದೇಶದಲ್ಲಿ ಒಂದು ಮಂಡೂಕವನ್ನು ನೋಡಿ ಕೋಪದಿಂದ ಎಲ್ಲಕಡೆಯಲ್ಲಿಯೂ ಮಂಡೂಕಗಳನ್ನು ವಧೆ ಮಾಡಿರಿ. ಯಾರು ನನ್ನನ್ನು ನೋಡಲು ಬಯಸುವರೋ ಅವರು ಮೃತಮಂಡೂಕವನ್ನು ಕಾಣಿಕೆಯಾಗಿ ತೆಗೆದುಕೊಂಡು ನನ್ನ ಬಳಿಗೆ ಬರಬೇಕು ಎಂದು ಆಜ್ಞೆಯನ್ನು ಮಾಡಿದನು.

ಅಥ ಮಂಡೂಕವಧೇ ಘೋರೇ ಕ್ರಿಯಮಾಣೇ
ದಿಕ್ಷು ಸರ್ವಾಸು ಮಂಡೂಕಾನ್ ಭಯಮಾವಿವೇಶ ॥
ತೇ ಭೀತಾ ಮಂಡೂಕರಾಜ್ಞೇ ಯಥಾವೃತ್ತಂ ನ್ಯವೇದಯನ್ ॥೨೯॥

ಆಗ ಘೋರವಾದ ಮಂಡೂಕವಧೆಯು ಎಲ್ಲ ದಿಕ್ಕುಗಳಲ್ಲಿಯೂ ಮಾಡಲ್ಪಡುತ್ತಿರಲು ಮಂಡೂಕಗಳಿಗೆ ಭಯವುಂಟಾಯಿತು. ಅವು ಭೀತಗಳಾಗಿ ಮಂಡೂಕರಾಜನಿಗೆ ಎಲ್ಲ ಘಟನೆಯನ್ನೂ ನಿವೇದಿಸಿದವು.

ತತೋ ಮಂಡೂಕರಾಟ್ ತಾಪಸವೇಷಧಾರೀ
ರಾಜಾನಮಭ್ಯಗಚ್ಛದುಪೇತ್ಯ ಚೈನಮುವಾಚ ॥೩೦॥

ಆಗ ಮಂಡೂಕರಾಜನು ತಾಪಸವೇಷವನ್ನು ಧರಿಸಿ ರಾಜನ ಬಳಿಗೆ ಬಂದು ಅವನನ್ನು ಕುರಿತು ಹೀಗೆ ಮಾತನಾಡಿದನು.

ಮಾ ರಾಜನ್ ಕ್ರೋಧವಶಂ ಗಮಃ ಪ್ರಸಾದಂ ಕುರು ।
ನಾರ್ಹಸಿ ಮಂಡೂಕಾನಾಮನಪರಾಧಿನಾಂ ವಧಂ ಕರ್ತುಮಿತಿ ॥೩೧॥

ರಾಜನೇ, ಕ್ರೋಧಕ್ಕೆ ವಶನಾಗಬೇಡ. ಅನುಗ್ರಹವನ್ನು ಮಾಡು. ನಿರಪರಾಧಿಗಳಾದ ಮಂಡೂಕಗಳ ವಧೆಯನ್ನು ಮಾಡುವುದು ಉಚಿತವಲ್ಲ ಎಂದು ಹೇಳಿದನು.

ಈ ವಿಷಯದಲ್ಲಿ ಈ ಶ್ಲೋಕಗಳಿವೆ–

ಮಾ ಮಂಡೂಕಾನ್ ಜಿಘಾಂಸ ತ್ವಂ ಕೋಪಂ ಸಂಧಾರಯಾಚ್ಯುತ ।
ಪ್ರಕ್ಷೀಯಂತೇ ವಧಾದ್ಯೇಕಾ ಜನಾನಾಮವಿಜಾನತಾಮ್ ॥೩೨॥

ಎಲೈ ಅಚ್ಯುತರಾಜನೇ, ನೀನು ಮಂಡೂಕವನ್ನು ಕೊಲ್ಲಬೇಡ. ಕೋಪವನ್ನು ತಡೆದುಕೋ. ಜನಗಳಿಗೆ ತಿಳಿಯದಂತೆಯೇ ಮಂಡೂಕಗಳು ವಧೆಯಿಂದ ಕ್ಷಯವನ್ನು ಹೊಂದುತ್ತಿವೆ.

ಪ್ರತಿಜಾನೀಹಿ ನೈತಾಂಸ್ತ್ವಂ ಪ್ರಾಪ್ಯ ಕ್ರೋಧಂ ವಿಮೋಕ್ಷ್ಯಸಿ ।
ಅಲಂ ಕೃತ್ವಾ ತವಾಧರ್ಮಂ ಮಂಡೂಕೈಃ ಕಿಂ ಹತೈರ್ಹಿ ತೇ ॥೩೩॥

ಮಂಡೂಕಗಳನ್ನು ಕೊಲ್ಲುವೆನೆಂದು ಪ್ರತಿಜ್ಞೆಯನ್ನು ಮಾಡಬೇಡ. ನಿನ್ನ ಪ್ರಿಯೆಯನ್ನು ಹೊಂದಿ ಕ್ರೋಧವನ್ನು ಬಿಡುವವನಾಗು. ಅಧರ್ಮವನ್ನು ಮಾಡಿದುದು ಸಾಕು. ಮಂಡೂಕಗಳನ್ನು ಕೊಲ್ಲುವುದರಿಂದ ನಿನಗೆ ಏನು ಪ್ರಯೋಜನ?

ತಮೇವಂವಾದಿನಮಿಷ್ಟಜನಶೋಕಪರೀತಾತ್ಮಾ ರಾಜಾಥೋವಾಚ ।
ನ ಹಿ ಕ್ಷಮ್ಯತೇ ತನ್ಮಯಾ ಹನಿಷ್ಯಾಮ್ಯೇತಾನೇತೈರ್ದುರಾತ್ಮಭಿಃ
ಪ್ರಿಯಾ ಮೇ ಭಕ್ಷಿತಾ ಸರ್ವಥೈವ ಮೇ ವಧ್ಯಾ ಮಂಡೂಕಾ
ನಾರ್ಹಸಿ ವಿದ್ವನ್ ಮಾಮುಪರೋದ್ಧುಮಿತಿ ॥೩೪॥

ಸ ತದಾಕ್ಯಮುಪಲಭ್ಯ ವ್ಯಥಿತೇಂದ್ರಿಯಮನಾಃ ಪ್ರೋವಾಚ
ಪ್ರಸೀದ ರಾಜನ್ನಹಮಾಯುರ್ನಾಮ ಮಂಡೂಕರಾಜೋ
ಮಮ ಸಾ ದುಹಿತಾ ಸುಶೋಭನಾ ನಾಮ ॥
ತಸ್ಯಾ ಹಿ ದೌಃಶೀಲ್ಯಮೇತದ್ವದ್ ಬಹವಸ್ತಯಾ
ರಾಜಾನೋ ವಿಪ್ರಲಬ್ಧಃ ಪೂರ್ವಾ ಇತಿ ॥೩೫॥

ಹೀಗೆ ಮಾತನಾಡಿದ ಆ ಮಂಡೂಕರಾಜನನ್ನು ಕುರಿತು ಪ್ರಿಯಜನ ಶೋಕದಿಂದ ತುಂಬಿದ ಮನಸ್ಸುಳ್ಳ ರಾಜನು ನಾನು ಆ ಅಪರಾಧವನ್ನು ಕ್ಷಮಿಸುವುದಿಲ್ಲ. ನಾನು ಇವುಗಳನ್ನು ಕೊಂದೇ ಕೊಲ್ಲುವೆನು. ಈ ದುರಾತ್ಮೆಗಳು ನನ್ನ ಪ್ರಿಯೆಯನ್ನು ತಿಂದಿವೆ. ಆದ್ದರಿಂದ ಅವುಗಳನ್ನು ನಾನು ಸರ್ವಪ್ರಕಾರದಿಂದ ಕೊಲ್ಲುವೆನು. ಎಲೈ ವಿದ್ವಾಂಸನೇ, ನನಗೆ ನೀನು ಹೀಗೆ ಒತ್ತಾಯವನ್ನು ಮಾಡಬಾರದು ಎಂದು ಹೇಳಿದನು. ಆ ಮಾತುಗಳನ್ನು ಕೇಳಿದ ಮಂಡೂಕರಾಜನು ಮನಸ್ಸಿನಲ್ಲಿಯೂ ಮತ್ತು ಇಂದ್ರಿಯಗಳಲ್ಲಿಯೂ ವ್ಯಥೆಯನ್ನು ಹೊಂದಿದವನಾಗಿ, ರಾಜನೇ, ಪ್ರಸನ್ನನಾಗು. ನಾನು ಆಯು ಎಂಬ ಮಂಡೂಕರಾಜ. ನಿನ್ನ ಪ್ರಿಯೆಯು ಸುಶೋಭನಾ ಎಂಬ ಹೆಸರುಳ್ಳ ನನ್ನ ಮಗಳು. ಅವಳಿಗೆ ಇದೊಂದು ದುಷ್ಪ್ರಭಾವ. ಅವಳು ಹಿಂದೆ ಅನೇಕ ರಾಜರನ್ನು ವಂಚಿಸಿದ್ದಾಳೆ ಎಂದು ಹೇಳಿದನು.

ತಮಬ್ರವೀದ್ ರಾಜಾ ತಯಾ ಸಹಾऽಹಮರ್ಥೀ
ಸಾ ಮೇ ದೀಯತಾಮಿತಿ ॥೩೬॥

ಆಗ ರಾಜನು ಅವನನ್ನು ಕುರಿತು ನಾನು ಅವಳಿಂದ ಅರ್ಥಿಯಾಗಿದ್ದೇನೆ. ಅವಳನ್ನು ನನಗೆ ಕೊಡು ಎಂದು ಹೇಳಿದನು.

ಅಥೈನಾಂ ರಾಜ್ಞೇ ಪಿತಾದಾದಬ್ರವೀಚ್ಚೈನಾಮೇನಂ
ರಾಜಾನಂ ಶ್ರುಶೂಷಸ್ವೇತಿ ॥೩೭॥

ಆಗ ಆ ತಂದೆಯಾದ ಮಂಡೂಕರಾಜನು ರಾಜನಿಗೆ ಅವಳನ್ನು ಕೊಟ್ಟು ಅವಳನ್ನು ಕುರಿತು ಈ ರಾಜನ ಸೇವೆಯನ್ನು ಮಾಡು ಎಂದು ಹೇಳಿದನು.

ಸ ಏವಮುಕ್ತ್ವಾ ದುಹಿತರಂ ಕ್ರುದ್ಧಃ ಶಶಾಪ ಯಸ್ಮಾತ್
ತ್ವಯಾ ರಾಜಾನೋ ವಿಪ್ರಲಬ್ಧಾ ಬಹವಸ್ತಸ್ಮಾದಬ್ರಹ್ಮಣ್ಯಾನಿ
ತವಾಪತ್ಯಾನಿ ಭವಿಷ್ಯಂತ್ಯಾನೃತಿಕತ್ವಾತ್ ತವೇತಿ ॥೩೮॥

ರಾಜನನ್ನು ಕುರಿತು ಹೀಗೆ ಹೇಳಿ ಅವನು ಕೋಪದಿಂದ ತನ್ನ ಮಗಳನ್ನು ಕುರಿತು ನೀನು ಅನೇಕ ಜನ ರಾಜರನ್ನು ವಂಚಿಸಿರುವುದರಿಂದ ಮತ್ತು ನೀನು ಅನೃತ ಭಾಷಿಣಿಯಾಗಿರುವುದರಿಂದ ನಿನ್ನ ಮಕ್ಕಳು ಅಬ್ರಹ್ಮಣ್ಯರಾಗುವರು ಎಂದು ಶಾಪವನ್ನು ನೀಡಿದನು.

ಸ ಚ ರಾಜಾ ತಾಮುಪಲಭ್ಯ ತಸ್ಯಾಂ ಸುರತಗುಣನಿಬದ್ಧಹೃದಯೋ
ಲೋಕತ್ರಯೈಶ್ವರ್ಯ-ಮಿವೋಪಲಭ್ಯ ಹರ್ಷೇಣ
ಬಾಷ್ಪಕಲಯಾ ವಾಚಾ ಪ್ರಣಿಪತ್ಯಾಭಿಪೂಜ್ಯ
ಮಂಡೂಕರಾಜಮಬ್ರವೀದನುಗೃಹೀತೋಽಸ್ಮೀತಿ ॥೩೯॥

ಆ ರಾಜನಾದರೂ ತ್ರೈಲೋಕ್ಯದ ಐಶ್ವರ್ಯವನ್ನು ಪಡೆದವನಂತೆ ಅವಳನ್ನು ಪಡೆದು, ಅವಳ ಸುರತದಲ್ಲಿ ಆಸಕ್ತವಾದ ಮನಸ್ಸುಳ್ಳವನಾಗಿ ನೀರು ತುಂಬಿದ ಕಣ್ಣುಗಳಿಂದ ಕೂಡಿ ಮಾತಿನಿಂದಲೇ ಮಂಡೂಕರಾಜನಿಗೆ ನಮಸ್ಕರಿಸಿ ಪೂಜೆಯನ್ನು ಮಾಡಿ, ನಾನು ನಿನ್ನಿಂದ ಅನುಗ್ರಹೀತನಾಗಿದ್ದೇನೆ ಎಂದು ಹೇಳಿದನು.

ಸ ಚ ಮಂಡೂಕರಾಜೋ ದುಹಿತರಮನುಜ್ಞಾಪ್ಯ
ಯಥಾಗತಮಗಚ್ಛತ್ ॥೪೦॥

ಆ ಮಂಡೂಕರಾಜನು ಮಗಳ ಅನುಮತಿಯನ್ನು ಪಡೆದು ತಾನು ಬಂದ ದಾರಿಯಲ್ಲಿಯೇ ಹಿಂದಿರುಗಿದನು.

ಅಥ ಕಸ್ಯಚಿತ್ ಕಾಲಸ್ಯ ತಸ್ಯಾಂ ಕುಮಾರಾಸ್ತ್ರಯಸ್ತಸ್ಯ
ರಾಜ್ಞಃ ಸಂಬಭೂವುಃ ಶಲೋ ದಲೋ ಬಲಶ್ಚೇತಿ ॥೪೧॥

ಸ್ವಲ್ಪಕಾಲವು ಕಳೆದ ಮೇಲೆ ರಾಜನಿಗೆ ಅವಳಲ್ಲಿ ಶಲ, ದಲ ಮತ್ತು ಬಲ ಎಂಬ ಮೂರು ಮಕ್ಕಳು ಜನಿಸಿದರು.

ತತಸ್ತೇಷಾಂ ಜ್ಯೇಷ್ಠಂ ಶಲಂ ಸಮಯೇ ಪಿತಾ
ರಾಜ್ಯೇಽಭಿಷಿಚ್ಯ ತಪಸಿ ಧೃತಾತ್ಮಾ ವನಂ ಜಗಾಮ ॥೪೨॥

ಅನಂತರ ಯೋಗ್ಯವಾದ ಸಮಯದಲ್ಲಿ ಆ ರಾಜನು ತನ್ನ ಜ್ಯೇಷ್ಠ ಪುತ್ರನಾದ ಶಲನಿಗೆ ರಾಜ್ಯದಲ್ಲಿ ಅಭಿಷೇಕವನ್ನು ಮಾಡಿ ತಪಸ್ಸನ್ನು ಮಾಡುವುದಾಗಿ ನಿಶ್ಚಯಿಸಿ ಕಾಡಿಗೆ ಹೋದನು.

ಅಥ ಕದಾಚಿಚ್ಛಲೋ ಮೃಗಯಾಮನುಚರನ್
ಮೃಗಮಾಸಾದ್ಯ ರಥೇನಾನ್ವಧಾವತ್ ಸೂತಂ ಚೋವಾಚ ।

ಶೀಘ್ರಂ ಮಾಂ ವಾಹಯಸ್ವೇತಿ ।
ಸ ತಥೋಕ್ತಃ ಸೂತೋ ರಾಜಾನಮಬ್ರವೀತ್ ॥೪೩॥

ಅನಂತರ ಒಮ್ಮೆ ಶಲನು ಬೇಟೆಯಾಡುತ್ತಾ ಒಂದು ಮೃಗವನ್ನು ಕಂಡು ರಥದಿಂದ ಅದನ್ನು ಹಿಂಬಾಲಿಸಿದನು. ತನ್ನ ಸೂತನನ್ನು ಕುರಿತು ನನ್ನ ರಥವನ್ನು ಬೇಗ ನಡಸು ಎಂದು ಹೇಳಿದನು.

ಮಾ ಕ್ರಿಯತಾಮನುಬಂಧೋ ನೈಷ ಶಕ್ಯಸ್ತ್ವಯಾ ಮೃಗೋಽಯಂ
ಗ್ರಹೀತುಂ ಯದ್ಯಪಿ ತೇ ರಥೇ ಯುಕ್ತೌ ವಾಮ್ಯೌ ಸ್ಯಾತಾಮಿತಿ ॥೪೪॥

ಆಗ ಸೂತನು ರಾಜನನ್ನು ಕುರಿತು ನನಗೆ ಒತ್ತಾಯವನ್ನು ಮಾಡಬೇಡ. ನಿನಗೆ ವಾಮದೇವ ಋಷಿಗಳ ಕುದುರೆಗಳು ದೊರೆತರೂ ಆ ಮೃಗವನ್ನು ಹಿಡಿಯಲು ನಿನ್ನಿಂದ ಸಾಧ್ಯವಿಲ್ಲ ಎಂದು ಹೇಳಿದನು.

ತತೋಽಬ್ರವೀದ್ ರಾಜಾ ಸೂತಮಾಚಕ್ಷ್ವ
ಮೇ ವಾಮ್ಯೌ, ಹನ್ಮಿ ಚ ತ್ವಾಮಿತಿ ॥೪೫॥

ಆಗ ರಾಜನು ಸೂತನನ್ನು ಕುರಿತು ವಾಮದೇವರ ಕುದುರೆಗಳು ಎಂದರೆ ಯಾವುವು. ಅದನ್ನು ನನಗೆ ಹೇಳು. ಇಲ್ಲದಿದ್ದರೆ ನಿನ್ನನ್ನು ಕೊಲ್ಲುವೆನು ಎಂದು ಹೇಳಿದನು.

ಸ ಏವಮುಕ್ತೋ ರಾಜಭಯಭೀತಃ ಸೂತೋ
ವಾಮದೇವಶಾಪಭೀತಶ್ಚ ಸನ್ನಾಚಖ್ಯೌ ರಾಜ್ಞೇ
ವಾಮದೇವಸ್ಯಾಶ್ವೌ ವಾಮ್ಯೌ ಮನೋಜವಾವಿತಿ ॥೪೬॥

ಹೀಗೆ ಹೇಳಲ್ಪಟ್ಟ ಸೂತನು ರಾಜನ ಭಯದಿಂದಲೂ, ವಾಮದೇವ ಋಷಿಗಳ ಶಾಪದ ಭಯದಿಂದಲೂ ಕೂಡಿದವನಾಗಿ ರಾಜನನ್ನು ಕುರಿತು ವಾಮ್ಯ ಎಂದರೆ ವಾಮದೇವರ ಕುದುರೆಗಳು ಎಂದರ್ಥ. ಅವು ಮನೋವೇಗವುಳ್ಳವು ಎಂದು ಹೇಳಿದನು.

ಅಥೈನಮೇವಂ ಬ್ರುವಾಣಮಬ್ರವೀದ್ ರಾಜಾ
ವಾಮದೇವಾಶ್ರಮಂ ಪ್ರಯಾಹೀತಿ ॥೪೭॥

ಆಗ ರಾಜನು ಅವನನ್ನು ಕುರಿತು ವಾಮದೇವಾಶ್ರಮಕ್ಕೆ ರಥವನ್ನು ತೆಗೆದುಕೊಂಡು ಹೋಗು ಎಂದು ಹೇಳಿದನು.

ಸ ಗತ್ವಾ ವಾಮದೇವಾಶ್ರಮಂ ತಮೃಷಿಮಬ್ರವೀತ್ ।
ಭಗವನ್ ಮೃಗೋ ಮೇ ವಿದ್ಧಃ ಪಲಾಯತೇ
ಸಂಭಾವಯಿತುಮ್ ಅರ್ಹಸಿ ವಾಮ್ಯೌ ದಾತುಮಿತಿ ॥೪೮॥

ರಾಜನು ವಾಮದೇವಾಶ್ರಮವನ್ನು ತಲುಪಿ ಆ ಋಷಿಗಳನ್ನು ಕುರಿತು 'ಪೂಜ್ಯರೇ, ನನ್ನಿಂದ ಹೊಡೆಯಲ್ಪಟ್ಟ ಮೃಗವು ಓಡಿಹೋಗುತ್ತಿದೆ. ನನ್ನನ್ನು ಸಮಾಧಾನಪಡಿಸಬೇಕು. ನೀವು ವಾಮ್ಯ ಎಂದು ಕರೆಯಲ್ಪಡುವ ಎರಡು ಕುದುರೆಗಳನ್ನು ನನಗೆ ನೀಡಬೇಕು' ಎಂದು ಹೇಳಿದನು.

ತಮಬ್ರವೀದೃಷಿರ್ದದಾನಿ ತೇ ವಾಮ್ಯೌ ॥
ಕೃತಕಾರ್ಯೇಣ ಭವತಾ ಮಮೈವ ವಾಮ್ಯೌ ನಿರ್ಯಾತ್ಯೌ ಕ್ಷಿಪ್ರಮಿತಿ ॥

ಋಷಿಗಳು ರಾಜನನ್ನು ಕುರಿತು 'ನಿನಗೆ ಆ ಎರಡು ವಾಮ್ಯ ಕುದುರೆಗಳನ್ನು ಕೊಟ್ಟೇನು. ನಿನ್ನ ಕಾರ್ಯ ಮುಗಿದ ಮೇಲೆ ಶೀಘ್ರವಾಗಿ ನನಗೇ ಆ ಕುದುರೆಗಳನ್ನು ಹಿಂದಿರುಗಿಸಬೇಕು' ಎಂದು ಹೇಳಿದರು.

ಸ ಚ ತಾವಶ್ವೌ ಪ್ರತಿಗೃಹ್ಯಾನುಜ್ಞಾಪ್ಯ ಋಷಿಂ ಪ್ರಾಯಾದ್
ವಾಮೀಪ್ರಯುಕ್ತೇನ ರಥೇನ ಮೃಗಂ ಪ್ರತಿಗಚ್ಛಂಶ್ಚಾಬ್ರವೀತ್
ಸೂತಮ್ ಅಶ್ವರತ್ನಾವಿಮಾವಯೋಗ್ಯೌ ಬ್ರಾಹ್ಮಣಾನಾಂ
ನೈತೌ ಪ್ರತಿದೇಯೌ ವಾಮದೇವಾಯೇತ್ಯುಕ್ತ್ವಾ ಮೃಗಮವಾಪ್ಯ
ಸ್ವನಗರಮೇತ್ಯಾಶ್ವಾವಂತಃಪುರೇಽಸ್ಥಾಪಯತ್ ॥೫೦॥

ರಾಜನು ಆ ಅಶ್ವಗಳನ್ನು ತೆಗೆದುಕೊಂಡು ಋಷಿಗಳ ಅನುಮತಿಯನ್ನು ಪಡೆದು ಆ ಕುದುರೆಗಳನ್ನು ಹೂಡಿದ ರಥದಲ್ಲಿ ಮೃಗವನ್ನು ಹಿಂಬಾಲಿಸುತ್ತಾ ಸೂತನನ್ನು ಕುರಿತು 'ಇವು ಅಶ್ವರತ್ನಗಳು, ಬ್ರಾಹ್ಮಣರಿಗೆ ಯೋಗ್ಯವಲ್ಲ. ಇದನ್ನು ವಾಮದೇವರಿಗೆ ಪುನಃ ಕೊಡಬಾರದು' ಎಂದು ಹೇಳಿ ಆ ಮೃಗವನ್ನು ತೆಗೆದುಕೊಂಡು ತನ್ನ ನಗರಕ್ಕೇ ಹಿಂದಿರುಗಿ ಕುದುರೆಗಳನ್ನು ತನ್ನ ಅಂತಃಪುರದಲ್ಲಿ ಇಟ್ಟನು.

ಅಥರ್ಷಿಶ್ಚಿಂತಯಾಮಾಸ ತರುಣೋ ರಾಜಪುತ್ರಃ ಕಲ್ಯಾಣಂ
ಪತ್ರಮಾಸಾದ್ಯ ರಮತೇ ನ ಪ್ರತಿನಿರ್ಯಾತಯತ್ಯಹೋ ಕಷ್ಟಮಿತಿ ॥೫೧॥

ಆಗ ಋಷಿಗಳು ತರುಣನಾದ ರಾಜಪುತ್ರನು ಮಂಗಳಕರವಾದ ವಾಹನಗಳನ್ನು ಪಡೆದು ವಿಹರಿಸುತ್ತಿದ್ದಾನೆ. ನನಗೆ ಹಿಂದಿರುಗಿಸುತ್ತಿಲ್ಲ. ಎಂತಹ ಕಷ್ಟವು ಪ್ರಾಪ್ತವಾಯಿತು ಎಂದು ಚಿಂತಿಸಿದರು.

ಸ ಮನಸಾ ವಿಚಿಂತ್ಯ ಮಾಸಿ ಪೂರ್ಣೇ ಶಿಷ್ಯಮಬ್ರವೀತ್ ।
ಗಚ್ಛಾತ್ರೇಯ ರಾಜಾನಂ ಬ್ರೂಹಿ ಯದಿ ಪರ್ಯಾಪ್ತಂ
ನಿರ್ಯಾತಯೋಪಾಧ್ಯಾಯವಾಮ್ಯಿತಿ ॥೫೨॥

ಅವರು ಮನಸ್ಸಿನಲ್ಲಿ ಹೀಗೆ ಯೋಚಿಸಿ ಒಂದು ತಿಂಗಳು ಕಳೆದ ಮೇಲೆ ತಮ್ಮ ಶಿಷ್ಯನನ್ನು ಕುರಿತು, 'ಆತ್ರೇಯನೇ, ನೀನು ರಾಜನ ಬಳಿಗೆ ಹೋಗಿ ನಿನ್ನ ಕೆಲಸವು ಮುಗಿದಿದ್ದರೆ ಉಪಾಧ್ಯಾಯರ ಅಶ್ವಗಳನ್ನು ಹಿಂದಿರುಗಿಸು ಎಂದು ಹೇಳು' ಎಂದು ಹೇಳಿದರು.

ಸ ಗತ್ವೈವಂ ತಂ ರಾಜಾನಮಬ್ರವೀತ್ ತತ್ ॥೫೩॥

ಆ ಶಿಷ್ಯನು ಹೋಗಿ ರಾಜನನ್ನು ಕುರಿತು ಹಾಗೆಯೇ ಹೇಳಿದನು.

ರಾಜಾ ಪ್ರತ್ಯುವಾಚ ರಾಜ್ಞಾಮೇತದ್ ವಾಹನಮನರ್ಹಾ
ಬ್ರಾಹ್ಮಣಾ ರತ್ನಾನಾಮೇವಂವಿಧಾನಾಂ ।
ಕಿಂ ಬ್ರಾಹ್ಮಣಾನಾಮ್ ಅಶ್ವೈಃ ಕಾರ್ಯಂ ।
ಸಾಧು ಗಮ್ಯತಾಮ್ ॥೫೪॥

ರಾಜನು 'ಈ ಕುದುರೆಗಳು ರಾಜನಿಗೆ ಯೋಗ್ಯವಾದವು. ಬ್ರಾಹ್ಮಣರು ಇಂತಹ ರತ್ನಗಳನ್ನು ಹೊಂದಿರುವುದು ಯೋಗ್ಯವಲ್ಲ. ಇಂತಹ ಕುದುರೆಗಳಿಂದ ಬ್ರಾಹ್ಮಣರಿಗೆ ಏನಾಗಬೇಕಿದೆ. ನಿನ್ನ ಪಾಡಿಗೆ ನೀನು ಹೋಗು' ಎಂದು ಹೇಳಿದನು.

ಸ ಗತ್ವೈತದುಪಾಧ್ಯಾಯಾಯಾಚಷ್ಟ ॥೫೫॥

ಆ ಶಿಷ್ಯನು ಹೋಗಿ ಉಪಾಧ್ಯಾಯರಿಗೆ ಇದನ್ನು ತಿಳಿಸಿದನು.

ತಚ್ಛ್ರುತ್ವಾ ವಚನಮಪ್ರಿಯಂ ವಾಮದೇವಃ ಕ್ರೋಧಪರೀತಾತ್ಮಾ
ಸ್ವಯಮೇವ ರಾಜಾನಮಭಿಗಮ್ಯಾಶ್ವಾರ್ಥಮಚೋದಯತ್
ನ ಚಾದದಾದ್ ರಾಜಾ ॥೫೬॥

ಆ ಅಪ್ರಿಯವಾದ ಮಾತುಗಳನ್ನು ಕೇಳಿದ ವಾಮದೇವರು ಕ್ರೋಧದಿಂದ ತುಂಬಿದವರಾಗಿ ತಾವೇ ರಾಜನ ಬಳಿಗೆ ಹೋಗಿ ಅಶ್ವಗಳನ್ನು ಕೊಡುವಂತೆ ಒತ್ತಾಯ ಮಾಡಿದರು. ಆದರೆ ರಾಜನು ಕೊಡಲಿಲ್ಲ.

ಪ್ರಯಚ್ಛ ವಾಮ್ಯೌ ಮಮ ಪಾರ್ಥಿವ ತ್ವಂ
ಕೃತಂ ಹಿ ತೇ ಕಾರ್ಯಮನ್ಯೈರ(ಮಾಭ್ಯಾಮ)ಶಕ್ಯಮ್ ।
ಮಾ ತ್ವಾ ವಧೀದ್ ವರುಣೋ ಘೋರಪಾಶೈಃ
ಬ್ರಹ್ಮಕ್ಷತ್ರಸ್ಯಾಂತರೇ ವರ್ತಮಾನಃ ॥೫೭॥

ವಾಮದೇವ– ಎಲೈ ರಾಜನೇ, ನನಗೆ ವಾಮ್ಯಾಶ್ವಗಳನ್ನು ಕೊಟ್ಟುಬಿಡು. ಅವು ಬೇರೆ ಅಶ್ವಗಳಿಂದ ಅಸಾಧ್ಯವಾದ ಕೆಲಸವನ್ನು ನಿನಗೆ ಮಾಡಿಕೊಟ್ಟಿವೆ. ಬ್ರಾಹ್ಮಣರು ಮತ್ತು ಕ್ಷತ್ರಿಯರಿಗೆ ವಿರೋಧವುಂಟಾದರೆ ವರುಣನು ತನ್ನ ಪಾಶಗಳಿಂದ ನಿನ್ನನ್ನು ಕೊಲ್ಲದಿರಲಿ.

ರಾಜಾ

ಅನಡ್ವಾಹೌ ಸುವ್ರತೌ ಸಾಧು ದಾಂತಾ–
ವೇತದ್ ವಿಪ್ರಾಣಾಂ ವಾಹನಂ ವಾಮದೇವ ।
ತಾಭ್ಯಾಂ ಯಾಹಿ ತ್ವಂ ತತ್ರ ಕಾಮೋ ಮಹರ್ಷೇ
ಛಂದಾಂಸಿ ವೈ ತ್ವಾದೃಶಂ ಸಂವಹಂತಿ ॥೫೮॥

ರಾಜ– ಎಲೈ ವಾಮದೇವರೇ, ಚೆನ್ನಾಗಿ ಪಳಗಿದ ಶಾಂತವಾದ ಒಳ್ಳೆಯ ಕೆಲಸವನ್ನು ಮಾಡುವ ಎತ್ತುಗಳು ಬ್ರಾಹ್ಮಣರಿಗೆ ವಾಹನ. ಅವುಗಳನ್ನು ತೆಗೆದುಕೊಂಡು ನಿನಗೆ ಇಷ್ಟಬಂದಂತೆ ಹೋಗು. ನಿನ್ನ ಕಾರ್ಯವು ಅದರಿಂದ ಪೂರ್ಣವಾಗುತ್ತದೆ. ಎಲೈ ಮಹರ್ಷಿಯೇ, ನಿಮ್ಮಂತಹವರನ್ನು ಛಂದಸ್ಸುಗಳೇ ಹೊರುತ್ತವೆ.

ವಾಮದೇವಃ

ಛಂದಾಂಸಿ ವೈ ಮಾದೃಶಂ ಸಂವಹಂತಿ
ಲೋಕೇऽಮುಷ್ಮಿನ್ ಪಾರ್ಥಿವ ಯಾನಿ ಸಂತಿ ।
ಅಸ್ಮಿಂಸ್ತು ಲೋಕೇ ಮಮ ಯಾನಮೇತದ್
ಅಸ್ಮದ್ವಿಧಾನಾಮಪರೇಷಾಂ ಚ ರಾಜನ್ ॥೫೯॥

ವಾಮದೇವ– ಎಲೈ ರಾಜನೇ, ಪರಲೋಕದಲ್ಲಿ ನನ್ನಂತಹವರನ್ನು ಛಂದಸ್ಸುಗಳು ಹೊತ್ತುಕೊಂಡು ಹೋಗುತ್ತವೆ. ಆದರೆ ಎಲೈ ರಾಜನೇ, ಈ ಲೋಕದಲ್ಲಿ ನನಗೂ ಮತ್ತು ನನ್ನಂತಹ ಬೇರೆಯವರಿಗೂ ಇವೇ ವಾಹನಗಳು.

ರಾಜಾ

ಚತ್ವಾರಸ್ತ್ವಾ ವಾ ಗರ್ದಭಾಃ ಸಂವಹಂತು
ಶ್ರೇಷ್ಠಾಶ್ವತರ್ಯೋ ಹರಯೋ ವಾತರಂಹಾಃ ।
ತೈಸ್ತ್ವಂ ಯಾಹಿ ಕ್ಷತ್ರಿಯಸ್ಯೈವ ವಾಹೋ
ಮಮೈವ ವಾಮ್ಯೌ ನ ತವೈತೌ ಹಿ ವಿದ್ಧಿ ॥೬೦॥

ರಾಜ– ನಾಲ್ಕು ಕತ್ತೆಗಳು ನಿಮ್ಮನ್ನು ಕರೆದುಕೊಂಡು ಹೋಗಲಿ. ಅಥವಾ ವಾಯುವೇಗವುಳ್ಳ ಶ್ರೇಷ್ಠವಾದ ನಾಲ್ಕು ಹೇಸರಕತ್ತೆಗಳು ನಿಮ್ಮನ್ನು ಕರೆದುಕೊಂಡು ಹೋಗಲಿ. ನೀವು ಆದನ್ನು ಹೂಡಿದ ರಥದಲ್ಲಿ ಹೋಗಿ. ಈ ವಾಹನಗಳಾದ ವಾಮ್ಯಾಶ್ವಗಳು ಮಾತ್ರ ಕ್ಷತ್ರಿಯನಾದ ನನಗೇ ಸೇರಿದವುಗಳು. ಅವು ನಿಮ್ಮದಲ್ಲ ಎಂದು ತಿಳಿಯಿರಿ.

ವಾಮದೇವಃ

ಘೋರಂ ವ್ರತಂ ಬ್ರಾಹ್ಮಣಸ್ಯೈತದಾಹು–
ರೇತದ್ ರಾಜನ್ ಯದಿಹಾಜೀವಮಾನಃ ।
ಅಯಸ್ಮಯಾ ಘೋರರೂಪಾ ಮಹಾಂತ–
ಶ್ಚತ್ವಾರೋ ವಾ ಯಾತುಧಾನಾಃ ಸುರೌದ್ರಾಃ ।
ಮಯಾ ಪ್ರಯುಕ್ತಾಸ್ತ್ವದ್ವಧಮೀಪ್ಸಮಾನಾ
ವಹಂತು ತ್ವಾಂ ಶತಶೂಲಾಶ್ಚತುರ್ಧಾ ॥೬೧॥

ವಾಮದೇವ– ಎಲೈ ರಾಜನೇ, ಬ್ರಾಹ್ಮಣರ ಸ್ವತ್ತನ್ನು ಕ್ಷತ್ರಿಯನು ಉಪಜೀವಿಸಿಕೊಂಡು ಬದುಕುವುದು ಘೋರವಾದ ಕಾರ್ಯವೆಂದು ತಿಳಿದವರು ಹೇಳುತ್ತಾರೆ. ನನ್ನಿಂದ ಪ್ರಯುಕ್ತರಾದ ಕಬ್ಬಿಣದಂತಿರುವ ಘೋರ ರೂಪವನ್ನು ಹೊಂದಿರುವ ದೊಡ್ಡ ಆಕೃತಿಯನ್ನು ಹೊಂದಿರುವ, ಸುಭೀಷಣರಾದ ನಾಲ್ಕು ಜನ ರಾಕ್ಷಸರು ನಿನ್ನ ವಧೆಯನ್ನು ಬಯಸುತ್ತಾ ನಿಶಿತವಾದ ಶೂಲಗಳನ್ನು ಹಿಡಿದು ನಿನ್ನನ್ನು ನಾಲ್ಕುಭಾಗವನ್ನಾಗಿ ಮಾಡಲಿ.

ರಾಜಾ

ಯೇ ತ್ವಾಂ ವಿದುರ್ಬ್ರಾಹ್ಮಣಂ ವಾಮದೇವ
ವಾಚಾ ಹಂತುಂ ಮನಸಾ ಕರ್ಮಣಾ ವಾ ।
ತೇ ತ್ವಾಂ ಸಶಿಷ್ಯಮಿಹ ಪಾತಯಂತು
ಮದ್ವಾಕ್ಯನುನ್ನಾಃ ಶಿತಶೂಲಾಸಿಹಸ್ತಾಃ ॥೬೨॥

ರಾಜ– ಎಲೈ ವಾಮದೇವರೇ, ಮಾತಿನಿಂದಲೂ, ಮನಸ್ಸಿನಿಂದಲೂ ಮತ್ತು ಕ್ರಿಯೆಯಿಂದಲೂ ಕೊಲ್ಲಲು ಬಯಸುವ ನಿನ್ನನ್ನು ಯಾರು ಬ್ರಾಹ್ಮಣನೆಂದು ತಿಳಿಯುವರೋ ಅಂತಹ ಶಿಷ್ಯರಿಂದೊಡಗೂಡಿದ ನಿನ್ನನ್ನು ನನ್ನ ವಾಕ್ಯದಿಂದ ಪ್ರೇರಿತರಾದ ನಿಶಿತವಾದ ಶೂಲ ಮತ್ತು ಖಡ್ಗಗಳನ್ನು ಧರಿಸಿದ ನನ್ನ ಸೇವಕರು ಹೊಡೆದು ಉರುಳಿಸಲಿ.

ವಾಮದೇವಃ

ನಾನುಯೋಗಾ ಬ್ರಾಹ್ಮಣಾನಾಂ ಭವಂತಿ
ವಾಚಾ ರಾಜನ್ ಮನಸಾ ಕರ್ಮಣಾ ವಾ ।
ಯಸ್ತ್ವೇವಂ ಬ್ರಹ್ಮ ತಪಸಾऽತ್ಯೇತಿ ವಿದ್ವಾನ್
ತೇನ ಶ್ರೇಷ್ಠೋ ಭವತಿ ಹಿ ಜೀವಮಾನಃ ॥೬೩॥

ವಾಮದೇವ– ಎಲೈ ರಾಜನೇ, ಬ್ರಾಹ್ಮಣರಿಗೆ ಮನಸ್ಸಿನಿಂದಾಗಲೀ, ಕ್ರಿಯೆಯಿಂದಾಗಲೀ ಅಥವಾ ಮಾತಿನಿಂದಾಗಲೀ ಹೀಗೆ ಶಾಪವನ್ನು ಕೊಡಲು ಬರುವುದಿಲ್ಲ. ಯಾವನು ಬ್ರಾಹ್ಮಣನು ತನ್ನ ತಪಸ್ಸಿನಿಂದ ಶ್ರೇಷ್ಠನಾಗಿ ಎಲ್ಲರನ್ನೂ ಮೀರುವನು ಎಂದು ತಿಳಿಯುವನೋ ಅಂತಹ ಮನುಷ್ಯನು ಶ್ರೇಷ್ಠನಾಗಿ ಜೀವಿಸುವನು.

ಮಾರ್ಕಂಡೇಯಃ

ಏವಮುಕ್ತೇ ವಾಮದೇವೇನ ರಾಜನ್
ಸಮುತ್ತಸ್ಥೂ ರಾಕ್ಷಸಾ ಘೋರರೂಪಾ ।
ತೈಃ ಶೂಲಹಸ್ತೈರ್ವಧ್ಯಮಾನಃ ಸ ರಾಜಾ
ಪ್ರೋವಾಚೇದಂ ವಾಕ್ಯಮುಚ್ಚೈಸ್ತದಾನೀಮ್ ॥೬೪॥

ಮಾರ್ಕಂಡೇಯ– ಎಲೈ ರಾಜನೇ, ವಾಮದೇವರು ಹೀಗೆ ಹೇಳುತ್ತಿರಲು ಘೋರ ರೂಪರಾದ ರಾಕ್ಷಸರು ಮೇಲಕ್ಕೆದ್ದರು. ಶೂಲಹಸ್ತರಾದ ಅವರಿಂದ ಪ್ರಹಾರಕ್ಕೆ ಒಳಗಾದ ರಾಜನು ಆಗ ಗಟ್ಟಿಯಾಗಿ ಈ ಮಾತನ್ನು ಆಡಿದನು.

ಐಕ್ಷ್ವಾಕವೋ ಯದಿ ಬ್ರಹ್ಮನ್ ದಲೋ ವಾ
ವಿಧೇಯಾ ಮೇ ಯದಿ ವಾನ್ಯೇ ವಿಶೋಽಪಿ ।
ನೋತ್ಸಕ್ಷ್ಯೇಽಹಂ ವಾಮದೇವಸ್ಯ ವಾಮ್ಯೈ
ನೈವಂವಿಧಾ ಧರ್ಮಶೀಲಾ ಭವಂತಿ ॥೬೫॥

ಎಲೈ ಬ್ರಾಹ್ಮಣರೇ, ನೀವು ನನ್ನ ತಮ್ಮನಾದ ಇಕ್ಷ್ವಾಕು ವಂಶದ ದಲನನ್ನಾಗಲೀ ಅಥವಾ ಇಕ್ಷ್ವಾಕು ವಂಶದ ಬೇರೆಯವರನ್ನಾಗಲೀ ಇಕ್ಷ್ವಾಕು ವಂಶಕ್ಕೆ ಅಧಿಪತಿಯನ್ನಾಗಿ ಮಾಡಬಹುದು. ನಾನು ವಾಮದೇವರ ಕುದುರೆಗಳನ್ನು ಮಾತ್ರ ಬಿಟ್ಟುಕೊಡುವುದಿಲ್ಲ. ಇಂತಹವರು (ನಿಮ್ಮಂತಹವರು) ಧರ್ಮಶೀಲರಲ್ಲ.

ಏವಂ ಬ್ರುವನ್ನೇವ ಸ ಯಾತುಧಾನ್ಯೈ–
ಹತೋ ಜಗಾಮಾಶು ಮಹೀಂ ಕ್ಷಿತೀಶಃ ।
ತತೋ ವಿದಿತ್ವಾ ನೃಪತಿಂ ನಿಪಾತಿತ–
ಮಿಕ್ಷ್ವಾಕವೋ ವೈ ದಲಮಭ್ಯಷಿಂಚನ್ ॥೬೬॥

ಹೀಗೆ ಹೇಳುತ್ತಿರುವಾಗಲೇ ಆ ರಾಜನು ರಾಕ್ಷಸರಿಂದ ಕೊಲ್ಲಲ್ಪಟ್ಟು ಭೂಮಿಯ ಮೇಲೆ ಉರುಳಿದನು. ಆಗ ರಾಜನು ಮೃತನಾದುದನ್ನು ತಿಳಿದು, ದಲನಿಗೆ ರಾಜ್ಯಾಭಿಷೇಕವನ್ನು ಮಾಡಿದರು.

ರಾಜ್ಯೇ ತದಾ ತತ್ರ ಗತ್ವಾ ಸ ವಿಪ್ರಃ
ಪೋವಾಚೇದಂ ವಚನಂ ವಾಮದೇವಃ ।
ದಲಂ ರಾಜಾನಂ ಬ್ರಾಹ್ಮಣಾನಾಂ ಹಿ ದೇಯಂ
ಏವಂ ರಾಜನ್ ಸರ್ವಧರ್ಮೇಷು ದೃಷ್ಟಮ್ ॥೬೭॥

ಆಗ ಬ್ರಾಹ್ಮಣರಾದ ವಾಮದೇವರು ಅಲ್ಲಿಗೆ ಹೋಗಿ ರಾಜನಾದ ದಲನನ್ನು ಕುರಿತು ಬ್ರಾಹ್ಮಣರ ಸ್ವತ್ತನ್ನು ಬ್ರಾಹ್ಮಣರಿಗೇ ಕೊಡಬೇಕು. ಹೀಗೆ ಎಲ್ಲಾ ಧರ್ಮದಲ್ಲಿಯೂ ದೃಷ್ಟವಾಗಿದೆ ಎಂದು ಹೇಳಿದರು.

ಬಿಭೇಷಿ ಚೇತ್ ತ್ವಮಧರ್ಮಾನ್ನರೇಂದ್ರ
ಪ್ರಯಚ್ಛ ಮೇ ಶೀಘ್ರಮೇವಾದ್ಯ ವಾಮ್ಯೌ ।
ಏತತ್ಶ್ರುತ್ವಾ ವಾಮದೇವಸ್ಯ ವಾಕ್ಯಂ
ಸ ಪಾರ್ಥಿವಃ ಸೂತಮುವಾಚ ರೋಷಾತ್ ॥೬೮॥

ಎಲೈ ನರೇಂದ್ರನೇ, ನೀನು ಅಧರ್ಮಕ್ಕೆ ಹೆದರುವುದಾದರೆ ಶೀಘ್ರವಾಗಿ ವಾಮ್ಯಾಶ್ವಗಳನ್ನು ಈಗಲೇ ಕೊಡು (ಎಂದು ಹೇಳಿದರು). ವಾಮದೇವರ ಈ ವಾಕ್ಯವನ್ನು ಕೇಳಿ ರಾಜನು ರೋಷದಿಂದ ಸೂತನನ್ನು ಕುರಿತು ಹೀಗೆ ಹೇಳಿದನು.

ಏಕಂ ಹಿ ಸಾಯಕಂ ಚಿತ್ರರೂಪಂ
ದಿಗ್ಧಂ ವಿಷೇಣಾಹರ ಸಂಗೃಹೀತಮ್ ।
ಯೇನ ವಿದ್ಧೋ ವಾಮದೇವಃ ಶಯೀತ
ಸಂದಶ್ಯಮಾನಃ ಶ್ವಭಿರಾರ್ತರೂಪಃ ॥೬೯॥

ಸೂತನೇ, ವಿಷದಿಂದ ಲಿಪ್ತವಾದ ಒಳ್ಳೆಯ ಆಕಾರವುಳ್ಳ ಒಂದು ಬಾಣವನ್ನು ನಮ್ಮ ಕೋಶದಿಂದ ತೆಗೆದುಕೊಂಡು ಬಾ. ಅದರಿಂದ ಹೊಡೆಯಲ್ಪಟ್ಟು ವಾಮದೇವ ಋಷಿಯು ಆರ್ತರೂಪವನ್ನು ಹೊಂದಿ ನಾಯಿಗಳಿಂದ ತಿನ್ನಲ್ಪಟ್ಟು ಭೂಮಿಯ ಮೇಲೆ ಮಲಗುವನು.

ವಾಮದೇವಃ

ಜಾನಾಮಿ ಪುತ್ರಂ ದಶವರ್ಷಂ ತವಾಹಂ
ಜಾತಂ ಮಹಿಷ್ಯಾಂ ಶ್ಯೇನಜಿತಂ ನರೇಂದ್ರ ।

ತಂ ಜಹಿ ತ್ವಂ ಮದ್ವಚನಾತ್ ಪ್ರಣುನ್ನಃ
ತೂರ್ಣಂ ಪ್ರಿಯೈಃ(ಯಂ) ಸಾಯಕೈರ್ಘೋರರೂಪೈಃ ॥೭೦॥

ವಾಮದೇವ– ಎಲೈ ನರೇಂದ್ರನೇ, ನಾನು ನಿನಗೆ ರಾಣಿಯಲ್ಲಿ ಜನಿಸಿದ ಶ್ಯೇನಜಿತನೆಂಬ ಹತ್ತು ವರ್ಷದ ಮಗನನ್ನು ತಿಳಿದಿದ್ದೇನೆ. ನನ್ನ ಮಾತಿನಿಂದ ಪ್ರೇರಿತನಾಗಿ ನೀನು ಘೋರರೂಪವಾದ ಬಾಣಗಳಿಂದ ಶೀಘ್ರವಾಗಿ ನಿನ್ನ ಆ ಪ್ರಿಯಪುತ್ರನನ್ನು ಕೊಲ್ಲು.

ಮಾರ್ಕಂಡೇಯಃ

ಏವಮುಕ್ತೋ ವಾಮದೇವೇನ ರಾಜನ್
ಅಂತಃಪುರೇ ರಾಜಪುತ್ರಂ ಜಘಾನ ।
ಸ ಸಾಯಕಸ್ತಿಗ್ಮತೇಜಾ ವಿಸೃಷ್ಟಃ
ಶ್ರುತ್ವಾ ದಲಸ್ತತ್ರ ವಾಕ್ಯಂ ಬಭಾಷೇ ॥೭೧॥

ಮಾರ್ಕಂಡೇಯ– ಎಲೈ ರಾಜನೇ, ವಾಮದೇವಕ ಹೀಗೆ ಹೇಳುತ್ತಿರಲು ಆ ರಾಜನಿಂದ ಬಿಡಲ್ಪಟ್ಟ ಬಾಣವು ಅಂತಃಪುರದಲ್ಲಿದ್ದ ರಾಜಪುತ್ರನನ್ನು ಕೊಂದಿತು. ಅದನ್ನು ಕೇಳಿದ ದಲನು ಹೀಗೆ ಮಾತನಾಡಿದನು.

ಇಕ್ಷ್ವಾಕವೋ ಹಂತ ಚರಾಮಿ ವಃ ಪ್ರಿಯಂ
ನಿಹನ್ಮೀಮಂ ವಿಪ್ರಮದ್ಯ ಪ್ರಮಥ್ಯ ।
ಆನೀಯತಾಮಪರಸ್ತಿಗ್ಮತೇಜಾಃ
ಪಶ್ಯಧ್ವಂ ಮೇ ವೀರ್ಯಮದ್ಯ ಕ್ಷಿತೀಶಾಃ ॥೭೨॥

ಎಲೈ ಇಕ್ಷ್ವಾಕು ವಂಶದವರೇ, ನಿಮಗೆ ಪ್ರಿಯವನ್ನು ಮಾಡುತ್ತೇನೆ. ಈ ಬ್ರಾಹ್ಮಣನನ್ನು ನನ್ನ ಬಲದಿಂದ ಈ ದಿನ ಕೊಲ್ಲುವೆನು. ತೀಕ್ಷ್ಣತೇಜಸ್ಸುಳ್ಳ ಇನ್ನೊಂದು ಬಾಣವನ್ನು ತೆಗೆದುಕೊಂಡು ಬನ್ನಿ. ಈ ದಿನ ರಾಜರು ನನ್ನ ಪರಾಕ್ರಮವನ್ನು ನೋಡಲಿ.

ವಾಮದೇವಃ

ಯತ್ ತ್ವಮೇನಂ ಸಾಯಕಂ ಘೋರರೂಪಂ
ವಿಷೇಣ ದಿಗ್ಧಂ ಮಮ ಸಂದಧಾಸಿ ।

ನ ತ್ವೇತಂ ತ್ವಂ ಶರವರ್ಷಂ ವಿಮೋಕ್ತುಂ
ಸಂಧಾತುಂ ವಾ ಶಕ್ಯಸೇ ಮಾನವೇಂದ್ರ ॥೭೩॥

ವಾಮದೇವ– ಎಲೈ ಮಾನವೇಂದ್ರ, ನನ್ನ ಮೇಲೆ ಪ್ರಯೋಗಿಸಲು ಯಾವ ವಿಷದಿಗ್ಧವಾದ ಭಯಂಕರವಾದ ಈ ಬಾಣವನ್ನು ಹೂಡುತ್ತಿರುವೆಯೋ, ನೀನು ಆ ಬಾಣವನ್ನು ಹೂಡುವುದಕ್ಕಾಗಲೀ ಅಥವಾ ಆ ಬಾಣವನ್ನು ಪ್ರಯೋಗಿಸುವುದಕ್ಕಾಗಲೀ ಶಕ್ತನಾಗುವುದಿಲ್ಲ.

ರಾಜಾ

ಇಕ್ಷ್ವಾಕವಃ ಪಶ್ಯತ ಮಾಂ ಗೃಹೀತಂ
ನ ವೈ ಶಕ್ನೋಮ್ಯೇಷ ಶರಂ ವಿಮೋಕ್ತುಮ್ ।
ನ ಚಾಸ್ಯ ಕರ್ತುಂ ನಾಶಮಭ್ಯುತ್ಸಹಾಮಿ
ಆಯುಷ್ಮಾನ್ ವೈ ಜೀವತು ವಾಮದೇವಃ ॥೭೪॥

ರಾಜ– ಎಲೈ ಇಕ್ಷ್ವಾಕುವಂಶದವರೇ, ಸ್ತಂಭಿತನಾದ ನನ್ನನ್ನು ನೋಡಿ. ಈ ನಾನು ಬಾಣವನ್ನು ಪ್ರಯೋಗಿಸಲು ಸಾಧ್ಯವಾಗುತ್ತಿಲ್ಲ. ಈ ವಾಮದೇವರ ನಾಶವನ್ನು ಮಾಡಲು ನಾನು ಬಯಸುವುದಿಲ್ಲ. ವಾಮದೇವ ಋಷಿಗಳು ಪೂರ್ಣಾಯುಷ್ಯವನ್ನು ಹೊಂದಿದವರಾಗಿ ಜೀವಿಸಲಿ.

ವಾಮದೇವಃ

ಸಂಸ್ಪೃಶ್ಯೈನಾಂ ಮಹಿಷೀಂ ಸಾಯಕೇನ
ತತಸ್ತಸ್ಮಾದೇನಸೋ ಮೋಕ್ಷ್ಯಸೇ ತ್ವಮ್ ॥೭೪॥

ವಾಮದೇವ– ಬಾಣದಿಂದ ಈ ನಿನ್ನ ರಾಣಿಯನ್ನು ಸ್ಪರ್ಶಮಾಡು. ಆಗ ನೀನು ನಿನ್ನ ಪಾಪದಿಂದ ಮುಕ್ತನಾಗುವಿ.

ಮಾರ್ಕಂಡೇಯಃ

ತತಸ್ತಥಾ ಕೃತವಾನ್ ಪಾರ್ಥಿವಸ್ತು ತತೋ
ಮುನಿಂ ರಾಜಪುತ್ರೀ ಬಭಾಷೇ ॥೭೫॥

ಮಾರ್ಕಂಡೇಯ– ರಾಜನಾದ ದಲನು ಹಾಗೆಯೇ ಮಾಡಿದನು. ಆ ರಾಜಪುತ್ರಿಯು (ರಾಣಿಯು) ಋಷಿಯನ್ನು ಕುರಿತು ಹೀಗೆ ಮಾತನಾಡಿದಳು.

ಯಥಾ ಯುಕ್ತಾ ವಾಮದೇವಾಹಮೇನಂ
ದಿನೇ ದಿನೇ ಸಂದಿಶಂತೀ ನೃಶಂಸಮ್ ।
ಬ್ರಾಹ್ಮಣೇಭ್ಯೋ ಮೃಗಯತೀ ಸೂನೃತಾನಿ
ತಥಾ ಬ್ರಹ್ಮನ್ ಪುಣ್ಯಲೋಕಂ ಲಭೇಯಮ್ ॥೭೬॥

ಎಲೈ ವಾಮದೇವ ಋಷಿಗಳೇ, ನನಗೆ ಈ ನನ್ನ ಪತಿಯು ಪ್ರತಿದಿವಸದಲ್ಲಿಯೂ ಬ್ರಾಹ್ಮಣನನ್ನು ಕುರಿತು ಕ್ರೂರವಾದುದನ್ನೇ ಉಪದೇಶ ಮಾಡಿದರೂ ನಾನು ಬ್ರಾಹ್ಮಣರಿಗೆ ಒಳ್ಳೆಯ ಮಾತುಗಳನ್ನೇ ಹುಡುಕಿ ಆಡಿದ್ದೇನೆ. ಎಲೈ ಬ್ರಾಹ್ಮಣರೇ, ಅದರಿಂದ ನನಗೆ ಪುಣ್ಯಲೋಕ ಪ್ರಾಪ್ತಿಯಾಗಲಿ.

ವಾಮದೇವಃ

ತ್ವಯಾ ತ್ರಾತಂ ರಾಜಕುಲಂ ಶುಭೇಕ್ಷಣೇ
ವರಂ ವೃಣೇಷ್ವಾಪ್ರತಿಮಂ ದದಾನಿ ತೇ ।
ಪ್ರಶಾಧೀಮಂ ಸ್ವಜನಂ ರಾಜಪುತ್ರಿ
ಇಕ್ಷ್ವಾಕುರಾಜ್ಯಂ ಸುಮಹಚ್ಚಾಪ್ಯನಿಂದ್ಯೇ ॥೭೭॥

ವಾಮದೇವ– ಎಲೌ ಶುಭನೇತ್ರೆಯೇ, ನೀನು ರಾಜಕುಲವನ್ನು ರಕ್ಷಿಸಿದ್ದೀಯೆ. ವರವನ್ನು ಕೇಳು. ಅಸದೃಶವಾದ ವರವನ್ನು ನಾನು ಕೊಡುವೆನು. ಎಲೌ ಅನಿಂದಿತಳಾದ ರಾಜಕುಮಾರಿಯಾದ ನೀನು ಈ ದೊಡ್ಡದಾದ ಇಕ್ಷ್ವಾಕು ರಾಜ್ಯವನ್ನು ಮತ್ತು ಈ ಸ್ವಜನರನ್ನು ಆಳುವವಳಾಗು.

ರಾಜಪುತ್ರೀ

ವರಂ ವೃಣೇ ಭಗವಂಸ್ತ್ವೇವಮೇಷ
ವಿಮುಚ್ಯತಾಂ ಕಿಲ್ಬಿಷಾದದ್ಯ ಭರ್ತಾ ।
ಶಿವೇನ ಚಾದ್ಯಾಹಿ ಸಪುತ್ರಬಾಂಧವಂ
ವರೋ ವೃತೋ ಹ್ಯೇಷ ಮಯಾ ದ್ವಿಜಾಗ್ರ್ಯ ॥೭೮॥

ರಾಜಪುತ್ರೀ– ಎಲೈ ಪೂಜ್ಯರೇ, ನಾನು ನಿಮ್ಮನ್ನು ಈ ವರವನ್ನು ಕೇಳುತ್ತಿದ್ದೇನೆ. ಈ ದಿನ ನನ್ನ ಪತಿಯು ಈ ಪಾಪದಿಂದ ಬಿಡುಗಡೆಯನ್ನು ಹೊಂದಲಿ. ಪುತ್ರಬಾಂಧವ ಸಹಿತನಾದ ರಾಜನಿಗೆ ಮಂಗಳವನ್ನು ಆಶಂಸನೆ ಮಾಡಿ. ಎಲೈ ದ್ವಿಜಶ್ರೇಷ್ಠರೇ, ನಾನು ಈ ವರವನ್ನು ಕೇಳುತ್ತಿದ್ದೇನೆ.

ಮಾರ್ಕಂಡೇಯಃ

ಶ್ರುತ್ವಾ ವಚಃ ಸ ಮುನೀ ರಾಜಪುತ್ರ್ಯಾಃ
ತಥಾಸ್ತ್ವಿತಿ ಪ್ರಾಹ ಕುರುಪ್ರವೀರ ।
ತತಃ ಸ ರಾಜಾ ಮುದಿತೋ ಬಭೂವ
ವಾಮ್ಯೌ ಚಾಸ್ಮೈ ಪ್ರದದೌ ಸಂಪ್ರಣಮ್ಯ ॥೭೯॥

ಮಾರ್ಕಂಡೇಯ– ಎಲೈ ಕುರುಪ್ರವೀರನಾದ ಯುಧಿಷ್ಠಿರನೇ, ರಾಜಕುಮಾರಿಯ ಮಾತನ್ನು ಕೇಳಿ ಆ ಋಷಿಗಳು ಹಾಗೆಯೇ ಆಗಲಿ ಎಂದು ಹೇಳಿದರು. ಆಗ ಆ ರಾಜನು ಸಂತುಷ್ಟನಾಗಿ ಅವರಿಗೆ ನಮಸ್ಕಾರವನ್ನು ಮಾಡಿ ವಾಮ್ಯಾಶ್ವಗಳನ್ನು ಅವರಿಗೆ ಹಿಂದಿರುಗಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಸಪ್ತಾಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ದ್ವಾದಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ತೇಳನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ತೆಂಟನೆಯ ಅಧ್ಯಾಯ

ಮಾರ್ಕಂಡೇಯರಿಂದ ಪಾಂಡವರನ್ನು ಕುರಿತು ಸ್ವರ್ಗವಾಸವನ್ನು ಕುರಿತು ಕೀರ್ತಿಯು ಕಾರಣ ಎಂಬ ನಿರೂಪಣೆ.

ವೈಶಂಪಾಯನಃ

ಮಾರ್ಕಂಡೇಯಮೃಷಯಃ ಪಾಂಡವಾಶ್ಚ ಪರ್ಯಪೃಚ್ಛನ್
ಅಸ್ತಿ ಕಶ್ಚಿತ್ ಭವತಶ್ಚಿರಜಾತತರ ಇತಿ ॥೧॥

ವೈಶಂಪಾಯನ– ಮಾರ್ಕಂಡೇಯರನ್ನು ಋಷಿಗಳು ಮತ್ತು ಪಾಂಡವರು ನಿಮಗಿಂತಲೂ ಮೊದಲು ಜನಿಸಿದವರು ಯಾರಾದರೂ ಇದ್ದಾರೆಯೇ? ಎಂದು ಕೇಳಿದರು.

ಸ ತಾನುವಾಚ ಅಸ್ತಿ ಖಲು ರಾಜರ್ಷಿರಿಂದ್ರದ್ಯುಮ್ನೋ ನಾಮ
ಕ್ಷೀಣಪುಣ್ಯೋ ತ್ರಿದಿವಾತ್ ಪ್ರಚ್ಯುತಃ ಕೀರ್ತಿಸ್ತಸ್ಯ ವಿಚ್ಯುತೇತಿ ।
ಸ ಮಾಮುಪಾತಿಷ್ಠದಥ ಪ್ರತ್ಯಾಭಿಜಾನಾತಿ ಮಾಂ ಭವಾನಿತಿ ॥೨॥

ಮಾರ್ಕಂಡೇಯರು ಅವರನ್ನು ಕುರಿತು ಹೇಳಿದರು. ರಾಜರ್ಷಿಯಾದ ಇಂದ್ರದ್ಯುಮ್ನನು ಇದ್ದಾನಷ್ಟೆ. ಭೂಲೋಕದಲ್ಲಿ ಅವನ ಕೀರ್ತಿಯು ನಷ್ಟವಾದುದರಿಂದ ತನ್ನ ಪುಣ್ಯವನ್ನು ಕಳೆದುಕೊಂಡು ಅವನು ಸ್ವರ್ಗದಿಂದ ಬಿದ್ದನು. ಅವನು ನನ್ನ ಬಳಿಗೆ ಬಂದು ನನ್ನನ್ನು ಗುರುತಿಸುತ್ತೀರಾ ಎಂದು ಕೇಳಿದನು.

ತಮಹಮಬ್ರವಂ ವಯಂ ರಸಾಯನಿಕಾಃ ನ
ಶರೀರೋಪತಾಪೇನಾತ್ಮನಃ ಸಮಾರಭಾಮಹೇ ಽರ್ಥಾ–
ನಾಮನುಷ್ಠಾನಮೇವ ನ ಭವಂತಂ ಪ್ರತ್ಯಭಿಜಾನೀಮ ಇತಿ ॥೩॥

ನಾನು ಅವನನ್ನು ಕುರಿತು ಭೂಮಿಯಲ್ಲಿ ವಾಸಮಾಡುವ ನಾವು ಶರೀರದ ಬಾಧೆಗಳಿಂದ ನಮಗೆ ಅರ್ಥಪ್ರದವಾದ ಕಾರ್ಯಗಳ ಅನುಷ್ಠಾನವನ್ನೂ ಸಹ ಆರಂಭಿಸಲು ಸಾಧ್ಯವಾಗುತ್ತಿಲ್ಲ. ನಿನ್ನನ್ನು ನಾನು ಗುರುತಿಸಲಾರೆ ಎಂದು ಹೇಳಿದನು.

ಏವಮುಕ್ತೋ ರಾಜರ್ಷಿರಿಂದ್ರದ್ಯುಮ್ನಃ ಪುನರ್ಮಾಮಬ್ರವೀತ್ ।
ಅಸ್ತಿ ಖಲು ಅಥಾಸ್ತಿ ಕಶ್ಚಿತ್ತ್ವತ್ಪಿರಜಾತತರ ಇತಿ ॥೪॥

ಹೀಗೆ ಹೇಳಲ್ಪಟ್ಟ ರಾಜರ್ಷಿಯಾದ ಇಂದ್ರದ್ಯುಮ್ನನು ಪುನಃ ನನ್ನನ್ನು ಕುರಿತು ನೀವು ಬಹುಕಾಲದಿಂದ ಇದ್ದೀರಿ. ಆದರೆ ನಿಮಗಿಂತ ಮೊದಲು ಜನಿಸಿದವರು ಯಾರಾದರೂ ಇದ್ದಾರೆಯೇ? ಎಂದು ಕೇಳಿದನು.

ತಂ ಪುನಃ ಪ್ರತ್ಯಬ್ರವಮ್ - ಅಸ್ತಿ ಖಿಲು ಹಿಮವತಿ
ಪ್ರಾಕಾರಕರ್ಣೋ ನಾಮೋಲೂಕಃ ಪ್ರತಿವಸತಿ ಸ್ಮ;
ಸ ಮತ್ತಶ್ಚಿರಜಾತಃ ಭವಂತಂ ಸ ಯದಿ ಜಾನೀಯಾದ್ ವಿಪ್ರಕೃಷ್ಟೇ
ಚಾಧ್ವನಿ ತತೋ ಹಿಮವಾನ್ ಯತ್ರಾಸೌ ಪ್ರತಿವಸತೀತಿ ॥೫॥

ನಾನು ಅವನನ್ನು ಕುರಿತು ಪುನಃ ಹಿಮಾಲಯದಲ್ಲಿ ಪ್ರಾಕಾರಕರ್ಣನೆಂಬ ಗೂಬೆಯು ವಾಸಮಾಡುತ್ತದೆ. ಅವನು ನಿನ್ನನ್ನು ಒಂದುಪಕ್ಷ ತಿಳಿದಿರಬಹುದು. ಹಿಮಾಲಯದಲ್ಲಿ ದೂರದಲ್ಲಿರುವ ಮಾರ್ಗದಲ್ಲಿ ಅವನು ವಾಸಿಸುತ್ತಾನೆ ಎಂದು ಹೇಳಿದೆನು.

ಸ ಮಾಮಶ್ವೋ ಭೂತ್ವಾ ತತ್ರಾವಹದ್ ಯತ್ರ ಬಭೂವೋಲೂಕಃ ॥೬॥

ಅವನು ಅಶ್ವರೂಪವನ್ನು ಧರಿಸಿ ಆ ಉಲೂಕನಿದ್ದ ಕಡೆಗೆ ನನ್ನನ್ನು ಕರೆದುಕೊಂಡು ಹೋದನು.

ಅಥೈನಂ ಸ ರಾಜರ್ಷಿಃ ಪರ್ಯಪೃಚ್ಛತ್ -
ಪ್ರತ್ಯಭಿಜಾನಾತಿ ಮಾಂ ಭವಾನಿತಿ ॥೭॥

ಅನಂತರ ಆ ರಾಜರ್ಷಿಯು ಅವನನ್ನು ಕುರಿತು ನನ್ನನ್ನು ಗುರುತಿಸುತ್ತೀಯಾ? ಎಂದು ಕೇಳಿದನು.

ಸ ಮುಹೂರ್ತಂ ಧ್ಯಾತ್ವಾಬ್ರವೀದೇನಂ
ನಾಭಿಜಾನೇ ಭವಂತಮಿತಿ ॥೮॥

ಆ ಉಲೂಕವು ಒಂದುಮುಹೂರ್ತ ಚಿಂತಿಸಿ ಅವನನ್ನು ಕುರಿತು ನಾನು ನಿನ್ನನ್ನು ಗುರುತಿಸಲಾರೆ ಎಂದು ಹೇಳಿತು.

ಸ ಏವಮುಕ್ತೋ ರಾಜರ್ಷಿರಿಂದ್ರದ್ಯುಮ್ನಃ ಪುನಸ್ತಮೂಲಕಮಬ್ರವೀತ್ -
ಅಥಾಸ್ತಿ ಕಶ್ಚಿತ್ ತ್ವತ್ತಶ್ಚಿರಜಾತತರ ಇತಿ ॥೯॥

ಹೀಗೆ ಹೇಳಲ್ಪಟ್ಟ ರಾಜರ್ಷಿಯಾದ ಇಂದ್ರದ್ಯುಮ್ನನು ಪುನಃ ಆ ಉಲೂಕವನ್ನು ಕುರಿತು ನಿನಗಿಂತ ಮೊದಲು ಜನಿಸಿದವರು ಯಾರಾದರೂ ಇದ್ದಾರೆಯೇ ಎಂದು ಕೇಳಿದನು.

ಸ ಏವಮುಕ್ತೋಽಬ್ರವೀದೇನಮ್ - ಅಸ್ತಿ ಖಲ್ವಿಂದ್ರದ್ಯುಮ್ನಸರೋ
ನಾಮ; ತಸ್ಮಿನ್ ನಾಲೀಜಂಘೋ ನಾಮ ಬಕಃ ಪ್ರತಿವಸತಿ;
ಸೋಽಸ್ಮತ್ತಶ್ಚಿರಜಾತತರಃ ತಂ ಪೃಚ್ಛೇ ॥೧೦॥

ಹೀಗೆ ಕೇಳಲ್ಪಟ್ಟ ಉಲೂಕವು ಅವನನ್ನು ಕುರಿತು ಇಂದ್ರದ್ಯುಮ್ನ ಸರೋವರವೆಂಬ ಒಂದು ಸರೋವರವಿದೆ. ಅಲ್ಲಿ ನಾಲೀಜಂಘವೆಂಬ ಒಂದು ಬಕವು ವಾಸಿಸುತ್ತದೆ. ಅದು ನನಗಿಂತಲೂ ಮೊದಲು ಹುಟ್ಟಿದುದು. ಅದನ್ನು ಕೇಳು ಎಂದು ಹೇಳಿತು.

ತತ ಇಂದ್ರದ್ಯುಮ್ನೋ ಮಾಮುಲೂಕಂ ಚಾದಾಯ
ತತ್ ಸರೋಽಗಚ್ಛತ್; ಯತ್ರಾಸೌ ನಾಲೀಜಂಘೋ
ನಾಮ ಬಕೋ ಬಭೂವ ॥೧೧॥

ಅನಂತರ ಇಂದ್ರದ್ಯುಮ್ನನು ನನ್ನನ್ನೂ ಮತ್ತು ಉಲೂಕವನ್ನೂ ಕರೆದುಕೊಂಡು ನಾಲೀಜಂಘವೆಂಬ ಬಕವು ವಾಸಿಸುವ ಸರೋವರಕ್ಕೆ ಹೋದನು.

ಸೋಽಸ್ಮಾಭಿಃ ಪೃಷ್ಟಃ - ಭವಾನಿಮಮಿಂದ್ರದ್ಯುಮ್ನಂ
ರಾಜಾನಂ ಪ್ರತ್ಯಭಿಜಾನಾತೀತಿ ॥೧೨॥

ನಾವು ಆ ಬಕವನ್ನು ಕುರಿತು ನೀನು ಈ ಇಂದ್ರದ್ಯುಮ್ನರಾಜನನ್ನು ಗುರುತಿಸಬಲ್ಲೆಯಾ? ಎಂದು ಕೇಳಿದೆವು.

ಸ ಏವಮುಕ್ತೋ ಮುಹೂರ್ತಂ ಧ್ಯಾತ್ವಾಽಬ್ರವೀತ್ -
ನಾಭಿಜಾನಾಮಿ ಭವಂತಮಿಂದ್ರದ್ಯುಮ್ನಂ ರಾಜಾನಮಿತಿ ॥೧೩॥

ಆ ಬಕವು ಒಂದು ಮುಹೂರ್ತಕಾಲ ಯೋಚಿಸಿ ಇಂದ್ರದ್ಯುಮ್ನ ರಾಜನಾದ ನಿನ್ನನ್ನು ನಾನು ಗುರುತಿಸಲಾರೆ ಎಂದು ಹೇಳಿತು.

ತತಃ ಸೋಽಸ್ಮಾಭಿಃ ಪೃಷ್ಟಃ - ಅಸ್ತಿ ಕಶ್ಚಿದ್
ಭವತೋಽನ್ಯಶ್ಚಿರಜಾತತರ ಇತಿ ॥೧೪॥

ಆಗ ನಾವು ಆ ಬಕವನ್ನು ನಿನಗಿಂತ ಮೊದಲು ಜನಿಸಿದವರು ಯಾರಾದರೂ ಇದ್ದಾರೆಯೇ? ಎಂದು ಕೇಳಿದೆನು.

ಸ ನೋಽಬ್ರವೀತ್ - ಅಸ್ತಿ ಖಲ್ವಿಹೈವ ಸರಸ್ಯಕೂಪಾರೋ
ನಾಮ ಕಚ್ಛಪಃ ಪ್ರತಿವಸತಿ; ಸ ಮತ್ತಶ್ಚಿರಜಾತತರಃ ಸ ಯದಿ
ಕಥಂಚಿದ್ ವಿಜಾನೀಯಾದಿಮಂ ರಾಜಾನಂ ತಂ ಪೃಚ್ಛಾಮೇತಿ ॥೧೫॥

ಆ ಬಕವು ನಮ್ಮನ್ನು ಕುರಿತು ಇಲ್ಲಿಯೇ ಸರೋವರದಲ್ಲಿ ಅಕೂಪಾರವೆಂಬ ಆಮೆಯು ವಾಸಿಸುತ್ತಿದೆ. ಅದು ನನಗಿಂತ ಮೊದಲು ಜನಿಸಿದುದು. ಅದು ಒಂದುಪಕ್ಷ ಈ ರಾಜನನ್ನು ತಿಳಿದಿರಬಹುದು. ಅದನ್ನು ಕೇಳೋಣ ಎಂದು ಹೇಳಿತು.

ತತಃಸ ಬಕಸ್ತಮಕೂಪಾರಂ ಕಚ್ಛಪಂ ವಿಜ್ಞಾಪಯಾಮಾಸ -
ಅಸ್ಮಾಕಮಭಿಪ್ರೇತಂ ಭವಂತಂ ಕಂಚಿದರ್ಥಮಭಿಪ್ರಷ್ಟುಂ
ಸಾಧ್ವಾಗಮ್ಯತಾಂ ತಾವದಿತಿ ॥೧೬॥

ಅನಂತರ ಆ ಬಕವು ಆ ಅಕೂಪಾರ ಆಮೆಗೆ ನಾವು ನಮಗೆ ಅಭಿಪ್ರೇತವಾದ ಒಂದು ಅರ್ಥವನ್ನು ಕೇಳಲು ನಿಮ್ಮ ಬಳಿಗೆ ಬಂದಿದ್ದೇವೆ. ಮೊದಲು ಹೊರಗೆ ಬಾ ಎಂದು ವಿಜ್ಞಾಪನೆಯನ್ನು ಮಾಡಿತು.

ತತ್ ಶ್ರುತ್ವಾ ಕಚ್ಛಪಸ್ತಸ್ಮಾತ್ ಸರಸ ಉತ್ಥಾಯಾಭ್ಯಾಗಚ್ಛದ್
ಯತ್ರ ತಿಷ್ಠಾಮೋ ವಯಮ್ ॥೧೭॥

ಅದನ್ನು ಕೇಳಿದ ಆಮೆಯು ಸರೋವರದಿಂದ ಮೇಲೆದ್ದು ನಾವಿದ್ದ ಕಡೆಗೆ ಬಂದಿತು.

ತಸ್ಯ ಸರಸಸ್ತೀರೇ ಆಗತಂ ಚೈನಂ ವಯಂ ಪೃಚ್ಛಾಮಃ -
ಭವಾನಿಂದ್ರದ್ಯುಮ್ನಂ ರಾಜಾನಮಭಿಜಾನಾತೀತಿ ॥೧೮॥

ಸರೋವರದ ತೀರಕ್ಕೆ ಬಂದ ಆ ಆಮೆಯನ್ನು ಕುರಿತು ನಾವು ನೀನು ಈ ಇಂದ್ರದ್ಯುಮ್ನರಾಜನನ್ನು ಬಲ್ಲೆಯಾ ಎಂದು ಕೇಳಿದೆವು.

ಸ ಮುಹೂರ್ತಂ ಧ್ಯಾತ್ವಾ ಬಾಷ್ಪಸಂಪೂರ್ಣನಯನ
ಉದ್ವಿಗ್ನಹೃದಯೋ ವೇಪಮಾನೋ ವಿಸಂಜ್ಞಕಲ್ಪಃ ಪ್ರಾಂಜಲಿರಬ್ರವೀತ್ -
ಕಿಮಹಮೇನಂ ನ ಪ್ರತ್ಯಭಿಜಾನಾಮಿ ಅಹಂ ಹ್ಯನೇನಾ
ಸಕೃತ್ ತತ್ರ ಅಗ್ನಿಚಿತಿಷು ಪಾತಿತಪೂರ್ವಃ ॥೧೯॥

ಅದು ಒಂದು ಮುಹೂರ್ತದ ಕಾಲ ಯೋಚಿಸಿ ಕಣ್ಣುಗಳಲ್ಲಿ ನೀರನ್ನು ತುಂಬಿಕೊಂಡು ಉದ್ವೇಗವುಳ್ಳ ಮನಸ್ಸಿನಿಂದ ನಡುಗುತ್ತಾ ಜ್ಞಾನವನ್ನೇ ಕಳೆದುಕೊಂಡವರಂತೆ ಆಗಿ ಕೈಗಳನ್ನು ಜೋಡಿಸಿ ನಾನು ಇವನನ್ನು ಹೇಗೆ ತಿಳಿಯದೇ ಇರಲು ಸಾಧ್ಯ ! ಇವನು ಯಾಗಗಳನ್ನು ಮಾಡುವಾಗ ಅನೇಕಬಾರಿ ನನ್ನನ್ನು ಹಿಂದೆ ಅಗ್ನಿಯಿಲ್ಲದ ಕಟ್ಟಿಗೆಗಳಲ್ಲಿ (ಸಮಿತ್ತುಗಳಲ್ಲಿ) ಕೆಡವಿದ್ದಾನೆ (ಇದರಿಂದ ಇಂದ್ರದ್ಯುಮ್ನನ ದಯೆಯು ತಿಳಿದುಬರುತ್ತದೆ).

ಸರಶ್ಚೇದಮಸ್ಯ ದಕ್ಷಿಣೋದಕದತ್ತಾಭಿರ್ಗೋಭಿರತಿಕ್ರಮಮಾಣಾಭಿಃ
ಕೃತಮ್; ಅತ್ರ ಚಾಹಂ ಪ್ರತಿವಸಾಮೀತಿ ॥೨೦॥

ಈ ಸರೋವರವಾದರೂ ಅವನು ದಕ್ಷಿಣಾಜಲಪೂರ್ವಕವಾಗಿ ದಾನಮಾಡಿದ ಗೋವುಗಳು ಆ ದಕ್ಷಿಣಾಜಲವನ್ನು ದಾಟುವಾಗ ಉಂಟಾದುದು. ಇಲ್ಲಿ ನಾನು ವಾಸಮಾಡುತ್ತೇನೆ.

ಅಥೈತತ್ ಕಚ್ಛಪೇನೋದಾಹೃತಂ ಶ್ರುತ್ವಾ ಸಮನಂತರಂ
ದೇವಲೋಕಾದ್ ದೇವರಥಃ ಪ್ರಾದುರಾಸೀದ್ ವಾಚೋಽಶ್ರೂಯಂತ
ಇಂದ್ರದ್ಯುಮ್ನಂ ಪ್ರತಿ - ಪ್ರಸ್ತುತಸ್ತೇ ಸ್ವರ್ಗೋ ಯಥೋಚಿತಂ
ಸ್ಥಾನಂ ಪ್ರತಿಪದ್ಯಸ್ವ ಕೀರ್ತಿಮಾನವ್ಯಗ್ರೋ ಯಾಹೀತಿ ॥೨೧॥

ಆಮೆಯು ಹೇಳಿದ ಈ ಮಾತುಗಳನ್ನು ನಾವು ಕೇಳಿದ ತಕ್ಷಣವೇ ದೇವಲೋಕದಿಂದ ದೇವರಥವು ಪ್ರಾದುರ್ಭೂತವಾಯಿತು. ಇಂದ್ರದ್ಯುಮ್ನನನ್ನು ಕುರಿತು ಆಡಿದ 'ನಿನ್ನ ಸ್ವರ್ಗವು ನಿನಗೆ ಮುಂದುವರಿದಿದೆ. ನೀನು ಯೋಗ್ಯವಾದ ಸ್ಥಾನವನ್ನು ಪುನಃ ಹೊಂದು. ನಿನ್ನ ಕೀರ್ತಿಯು ಭೂಲೋಕದಲ್ಲಿ ಸ್ಥಿರವಾಗಿದೆ. ಯಾವ ವಿಷಾದವಿಲ್ಲದೆ ಇಲ್ಲಿಂದ ಹೊರಡು' ಎಂಬ ಮಾತುಗಳು ಕೇಳಿಬಂದವು.

ದಿವಂ ಸ್ಪೃಶತಿ ಭೂಮಿಂ ಚ ಶಬ್ದಃ ಪುಣ್ಯಸ್ಯ ಕರ್ಮಣಃ ।
ಯಾವತ್ ಸ ಶಬ್ದೋ ಭವತಿ ತಾವತ್ ಸ್ವರ್ಗೇ ಮಹೀಯತೇ ॥೨೨॥

ಮನುಷ್ಯನು ಮಾಡಿದ ಪುಣ್ಯಕರ್ಮದ ಶಬ್ದವು (ಕೀರ್ತಿಯು) ಎಲ್ಲಿಯವರೆಗೆ ಸ್ವರ್ಗ ಮತ್ತು ಭೂಮಿಗಳನ್ನು ಸ್ಪರ್ಶಮಾಡುತ್ತದೆಯೋ ಅಲ್ಲಿಯವರೆಗೆ ಮನುಷ್ಯನು ಸ್ವರ್ಗದಲ್ಲಿ ಮೆರೆಯುತ್ತಾನೆ.

ಅಕೀರ್ತಿಃ ಕೀರ್ತ್ಯತೇ ಲೋಕೇ ಯಸ್ಯ ಭೂತಸ್ಯ ಕಸ್ಯಚಿತ್ ।
ಪತತ್ಯೇವಾಧಮಾಂಲ್ಲೋಕಾನ್ ಯಾವಚ್ಛಬ್ದಃ ಸ ಕೀರ್ತ್ಯತೇ ॥೨೩॥

ಯಾವನಿಗೆ ಭೂಲೋಕದಲ್ಲಿ ಅಕೀರ್ತಿಯು ಹೇಳಲ್ಪಡುತ್ತದೆಯೋ ಅವನು ಅಕೀರ್ತಿಯ ಶಬ್ದವಿರುವವರೆಗೆ ಅಧಃಪಾತವನ್ನು ಹೊಂದಿ ಅಧಮಲೋಕಗಳಲ್ಲಿ ಇರುತ್ತಾನೆ.

ತಸ್ಮಾತ್ - ಕಲ್ಯಾಣವೃತ್ತಃ ಸ್ಯಾದತ್ಯಂತಾಯ ನರೋ ಭಾವಿ ।
ವಿಹಾಯ ವೃತ್ತಂ ಪಾಪಿಷ್ಠಂ ಧರ್ಮಮೇವಾಭಿಸಂಶ್ರಯೇತ್ ॥೨೪॥

ಆದುದರಿಂದ ಭೂಮಿಯಲ್ಲಿ ಮನುಷ್ಯನು ಅತ್ಯಂತ ಕಲ್ಯಾಣಯುಕ್ತವಾದ ನಡತೆಯನ್ನು ಹೊಂದಿರಬೇಕು. ಪಾಪಿಷ್ಠವಾದ ನಡತೆಯನ್ನು ಬಿಟ್ಟು ಧರ್ಮವನ್ನೇ ಆಶ್ರಯಿಸಬೇಕು.

ಇತ್ಯೇತಚ್ಛ್ರುತ್ವಾ ಸ ರಾಜಾಽಬ್ರವೀತ್ -
ತಿಷ್ಠ ತಾವದ್ಯಾವದಿದಾನೀಮಿಮೌ ವೃದ್ಧೌ
ಯಥಾಸ್ಥಾನಂ ಪ್ರತಿಪಾದಯಾಮೀತಿ ॥೨೫॥

ಈ ಮಾತನ್ನು ಕೇಳಿದ ಆ ಇಂದ್ರದ್ಯುಮ್ನರಾಜನು (ದೇವದೂತನನ್ನುಕುರಿತು) ನಾನು ಈ ಇಬ್ಬರು ವೃದ್ಧರನ್ನೂ ಅವರ ಸ್ಥಾನಕ್ಕೆ ಸೇರಿಸಿ ಬರುವವರೆಗೆ ಸ್ವಲ್ಪ ನಿಲ್ಲು ಎಂದು ಹೇಳಿದನು.

ಮಾಂ ಪ್ರಕಾರಕರ್ಣ ಚೋಲೂಕಂ ಯಥೋಚಿತೇ ಸ್ಥಾನೇ ಪ್ರತಿಪಾದ್ಯ ಸಃ
ದೇವಯಾನೇನ ಸಂಪಿದ್ಧೋ ಯಥೋಚಿತಂ ಸ್ಥಾನಂ ಪ್ರತಿಪನ್ನಃ ॥೨೬॥

ನನ್ನನ್ನೂ ಪ್ರಾಕಾರಕರ್ಣ ಉಲೂಕನನ್ನೂ ಯೋಗ್ಯವಾದ ಸ್ಥಾನದಲ್ಲಿ ಸೇರಿಸಿ ಅವನು ಸಂಸಿದ್ಧನಾಗಿ ದೇವಯಾನದಿಂದ ಪ್ರಯಾಣ ಮಾಡಿ ತನಗೆ ಉಚಿತವಾದ ಸ್ಥಾನವನ್ನು ಹೊಂದಿದನು.

ಏವಂ ಮಯಾऽನುಭೂತಂ ಚಿರಜೀವಿನಾ ದ್ದಷ್ಟಮಿತಿ
ಪಾಂಡವಾನುವಾಚ ಮಾರ್ಕಂಡೇಯಃ ॥೨೭॥

ಇದು ಚಿರಜೀವಿಯಾದ ನನ್ನಿಂದ ಅನುಭೂತವಾದುದು ಮತ್ತು ನೋಡಲ್ಪಟ್ಟದ್ದು ಎಂದು ಪಾಂಡವರನ್ನು ಕುರಿತು ಮಾರ್ಕಂಡೇಯರು ಹೇಳಿದರು.

ತಮೃಷಿಂ ಪಾಂಡವಾಶ್ಚೋಚುಃ ಪ್ರೀತಾಃ ಸಾಧು ಶೋಭನಂ
ಕೃತಂ ಭವತಾ; ರಾಜಾನಮಿಂದ್ರದ್ಯುಮ್ನಂ ಸ್ವರ್ಗಲೋಕಾಚ್ಚ್ಯುತಂ
ಪುನಃ ಸ್ವರ್ಗಲೋಕಂ ಪ್ರತಿಪಾದಯತೇತಿ ॥೨೮॥

ಪಾಂಡವರೂ ಆ ಋಷಿಗಳೂ ಕುರಿತು ನಾವು ಸಂತುಷ್ಟರಾಗಿದ್ದೇವೆ. ಸ್ವರ್ಗಲೋಕದಿಂದ ಬಿದ್ದ ಇಂದ್ರದ್ಯುಮ್ನರಾಜನನ್ನು ಪುನಃ ಸ್ವರ್ಗಲೋಕಕ್ಕೆ ಸೇರಿಸಿ ನೀವು ಒಳ್ಳೆಯ ಕಾರ್ಯವನ್ನು ಮಾಡಿದ್ದೀರಿ ಎಂದು ಹೇಳಿದರು.

ಅಥೈತಾನ್ ಪ್ರತ್ಯಬ್ರವೀದಸೌ - ನನು ದೇವಕೀಪುತ್ರೇಣಾಪಿ
ಕೃಷ್ಣೇನ ನರಕೇ ಮಜ್ಜಮಾನೋ ರಾಜರ್ಷಿರ್ನೃಗಸ್ತಸ್ಮಾತ್
ಕೃಚ್ಛ್ರಾತ್ ಪುನಃ ಸಮುದ್ಧೃತ್ಯ ಸ್ವರ್ಗಂ ಪ್ರತಿಪಾದಿತ ಇತಿ ॥೨೯॥

ಆಗ ಆ ಮಾರ್ಕಂಡೇಯರು ಅವರನ್ನು ಕುರಿತು ದೇವಕೀಪುತ್ರನಾದ ಕೃಷ್ಣನೂ ಸಹ ನರಕದಲ್ಲಿ ಮುಳುಗುತ್ತಿದ್ದ ರಾಜರ್ಷಿಯಾದ ನೃಗನನ್ನು ಆ ಕಷ್ಟದಿಂದ ಪಾರುಮಾಡಿ ಸ್ವರ್ಗಕ್ಕೆ ಸೇರಿಸಿದನಷ್ಟೆ ಎಂದು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಾಶೀತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಖ್ಯಾಪರ್ವಣಿ ರಾಜಮಾಹಾತ್ಮ್ಯೇ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ತೆಂಟನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ಎಂಬತ್ತೊಂಬತ್ತನೆಯ ಅಧ್ಯಾಯ

ಮಾರ್ಕಂಡೇಯರಿಂದ ಧುಂಧುಮಾರೋಪಾಖ್ಯಾನದ ಆರಂಭ.
ಉದಂಕನ ತಪಸ್ಸು, ವಿಷ್ಣುವಿನ ವರದಾನ, ಉದಂಕನಿಂದ
ಕುವಲಾಶ್ವನಿಗೆ ಧುಂಧುವಿನ ವಧೆಯ ಪ್ರೇರಣೆ.

ವೈಶಂಪಾಯನಃ

ಯುಧಿಷ್ಠಿರೋ ಧರ್ಮರಾಜಃ ಪಪ್ರಚ್ಛ ಭರತರ್ಷಭ ।
ಮಾರ್ಕಂಡೇಯಂ ತಪೋವೃದ್ಧಂ ದೀರ್ಘಾಯುಷಮಕಲ್ಮಷಮ್ ॥೧॥

ವೈಶಂಪಾಯನ– ಧರ್ಮರಾಜನಾದ ಯುಧಿಷ್ಠಿರನು ದೀರ್ಘಾಯುಷಿಗಳಾದ ಪಾಪರಹಿತರಾದ ತಪೋವೃದ್ಧರಾದ ಮಾರ್ಕಂಡೇಯರನ್ನು ಪ್ರಶ್ನೆ ಮಾಡಿದನು.

ವಿದಿತಾಸ್ತವ ಧರ್ಮಜ್ಞ ದೇವದಾನವರಾಕ್ಷಸಾಃ ।
ರಾಜವಂಶಾಶ್ಚ ವಿವಿಧಾ ಋಷಿವಂಶಾಶ್ಚ ಶಾಶ್ವತಾಃ ।
ನ ತೇऽಸ್ಯವಿದಿತಂ ಕಿಂಚಿದ್ ಅಸ್ಮಿಂಲ್ಲೋಕೇ ದ್ವಿಜರ್ಷಭ ॥೨॥

ಧರ್ಮಜ್ಞನರೇ, ನೀವು ದೇವದಾನವರಾಕ್ಷಸರನ್ನೂ, ಅನೇಕ ರಾಜವಂಶಗಳನ್ನೂ ಮತ್ತು ಶಾಶ್ವತವಾದ ಋಷಿವಂಶಗಳನ್ನೂ ತಿಳಿದಿದ್ದೀರಿ. ಬ್ರಾಹ್ಮಣಶ್ರೇಷ್ಠರೇ, ಈ ಲೋಕದಲ್ಲಿ ನಿಮಗೆ ತಿಳಿಯದಿದ್ದುದು ಯಾವುದೂ ಇಲ್ಲ.

ಕಥಂ ವೇತ್ಸಿ ಮುನೇ ವಂಶಾನ್ ಮನುಷ್ಯೋರಗರಕ್ಷಸಾಮ್ ।
ಸುಪರ್ಣಕಿನ್ನರಾಣಾಂ ಚ ಯಕ್ಷಾಣಾಂ ಚ ಮಹೌಜಸಾಮ್ ॥೩॥

ಏತದಿಚ್ಛಾಮಿ ಭಗವನ್ ತತ್ತ್ವೇನ ಕಥಿತಂ ದ್ವಿಜ ॥೪॥

ಎಲೈ ಋಷಿಗಳೇ, ನೀವು ಮನುಷ್ಯೋರಗರಾಕ್ಷಸರ ವಂಶಗಳನ್ನೂ, ಸುಪರ್ಣ ಕಿನ್ನರರ ವಂಶಗಳನ್ನೂ, ಮಹಾಪ್ರತಾಪಶಾಲಿಗಳಾದ ಯಕ್ಷರ ವಂಶಗಳನ್ನೂ ಹೇಗೆ ತಿಳಿದಿದ್ದೀರಿ? ಪೂಜ್ಯರಾದ ಬ್ರಾಹ್ಮಣರೇ, ನಾನು ಇದನ್ನು ನಿಮ್ಮ ಮಾತಿನಿಂದ ತಿಳಿಯಲು ಬಯಸುತ್ತೇನೆ.

ಕುವಲಾಶ್ವ ಇತಿ ಖ್ಯಾತ ಇಕ್ಷ್ವಾಕುರಪರಾಜಿತಃ ।
ಕಥಂ ನಾಮವಿಪರ್ಯಾಸಾದ್ ಧುಂಧುಮಾರತ್ವಮಾಗತಃ ॥೫॥

ಕುವಲಾಶ್ವನೆಂದು ಪ್ರಸಿದ್ಧನಾದ ಜಯಶಾಲಿಯಾದ ಇಕ್ಷ್ವಾಕುರಾಜನಿಗೆ ಹೆಸರು ವ್ಯತ್ಯಾಸವಾಗಿ ಹೇಗೆ ಧುಂಧುಮಾರನೆಂಬ ಹೆಸರು ಬಂದಿತು?

ಏತದಿಚ್ಛಾಮಿ ತತ್ತ್ವೇನ ಜ್ಞಾತುಂ ಭಾರ್ಗವಸತ್ತಮ ।
ವಿಪರ್ಯಸ್ತಂ ಯಥಾ ನಾಮ ಕುವಲಾಶ್ವಸ್ಯ ಧೀಮತಃ ॥೬॥

ಎಲೈ ಭಾರ್ಗವಶ್ರೇಷ್ಠರೇ, ಮೇಧಾವಿಯಾದ ಕುವಲಾಶ್ವನಿಗೆ ಈ ನಾಮವಿಪರ್ಯಾಸವು ಹೇಗೆ ಉಂಟಾಯಿತೆಂದು ಸರಿಯಾಗಿ ತಿಳಿಯಲು ಬಯಸುತ್ತೇನೆ.

ಮಾರ್ಕಂಡೇಯಃ

ಹಂತ ತೇ ಕಥಯಿಷ್ಯಾಮಿ ಶೃಣು ರಾಜನ್ ಯುಧಿಷ್ಠಿರ ।
ಧರ್ಮಿಷ್ಠಮಿದಮಾಖ್ಯಾನಂ ಧುಂಧುಮಾರಸ್ಯ ತಚ್ಛೃಣು ॥೭॥

ಮಾರ್ಕಂಡೇಯ– ರಾಜನಾದ ಯುಧಿಷ್ಠಿರನೇ, ಬಹಳ ಸಂತೋಷ. ನಿನಗೆ ಧರ್ಮಿಷ್ಠವಾದ ಈ ಧುಂಧುಮಾರನ ಕಥೆಯನ್ನು ಹೇಳುವೆನು. ಅದನ್ನು ಕೇಳು.

ಯಥಾ ಸ ರಾಜಾ ಐಕ್ಷ್ವಾಕಃ ಕುವಲಾಶ್ವೋ ಮಹೀಪತಿಃ ।
ಧುಂಧುಮಾರತ್ವಮಗಮತ್ ತಚ್ಛೃಣುಷ್ವ ಮಹೀಪತೇ ॥೮॥

ಎಲೈ ಮಹೀಪತಿಯೇ, ಇಕ್ಷ್ವಾಕು ವಂಶದ ರಾಜನಾದ ಕುವಲಾಶ್ವನು ಹೇಗೆ ಧುಂಧುಮಾರನಾದನು ಎಂಬುದನ್ನೂ ಕೇಳು.

ಮಹರ್ಷಿರ್ವಿಶ್ರುತಸ್ತಾತ ಉದಂಕ ಇತಿ ಭಾರತ ।
ಮರುಧನ್ವಸು ರಮ್ಯೇಷು ಆಶ್ರಮಸ್ತಸ್ಯ ಕೌರವ ॥೯॥

ಎಲೈ ಭಾರತನೇ, ಉದಂಕನೆಂಬ ಪ್ರಖ್ಯಾತನಾದ ಮಹರ್ಷಿ ಇದ್ದನು. ಎಲೈ ಪ್ರೀತಿಪಾತ್ರನಾದ ಕೌರವನೇ, ಮರುಭೂಮಿಯ ಒಂದು ರಮ್ಯವಾದ ಪ್ರದೇಶದಲ್ಲಿ ಅವನ ಆಶ್ರಮವಿದ್ದಿತು.

ಉದಂಕಸ್ತು ಮಹಾತೇಜಾಃ ತಪೋಽತಪ್ಯತ್ ಸುದುಶ್ಚರಮ್ ।
ಆರಿರಾಧಯಿಷುರ್ವಿಷ್ಣುಂ ಬಹೂನ್ ವರ್ಷಗಣಾನ್ ವಿಭೋ ॥೧೦॥

ಎಲೈ ವಿಭುವೇ, ಮಹಾತೇಜಸ್ವಿಯಾದ ಉದಂಕನು ವಿಷ್ಣುವನ್ನು ಆರಾಧಿಸುತ್ತಾ ಅನೇಕವರ್ಷಗಳ ಕಾಲ ಬಹಳ ದುಷ್ಕರವಾದ ತಪಸ್ಸನ್ನು ಮಾಡಿದನು.

ತಸ್ಯ ಪ್ರೀತಃ ಸ ಭಗವಾನ್ ಸಾಕ್ಷಾದ್ದರ್ಶನಮೇಯಿವಾನ್ ।
ದೃಷ್ಟ್ವಾ ಮಹರ್ಷಿರ್ವಿಷ್ಣುಂ ತು ತುಷ್ಟಾವ ವಿವಿಧೈಃಸ್ತವೈಃ ॥೧೧॥

ಅವನಿಗೆ ಪ್ರಸನ್ನನಾದ ಭಗವಂತನು ತಾನೇ ದರ್ಶನವನ್ನು ಕೊಟ್ಟನು. ಮಹರ್ಷಿಯು ವಿಷ್ಣುವನ್ನು ನೋಡಿ ಅನೇಕ ಸ್ತೋತ್ರಗಳಿಂದ ಸ್ತೋತ್ರಮಾಡಿದನು.

ತ್ವಯಾ ದೇವ ಪ್ರಜಾಃಸರ್ವಾಃ ಸಸುರಾಸುರಮಾನವಾಃ ।
ಸ್ಥಾವರಾಣಿ ಚ ಭೂತಾನಿ ಜಂಗಮಾನಿ ಚ ಸರ್ವಶಃ ॥೧೨॥

ಬ್ರಹ್ಮ ವೇದಾಶ್ಚ ವೇದ್ಯಂ ಚ ತ್ವಯಾ ಸೃಷ್ಟಂ ಮಹಾದ್ಯುತೇ ।
ಶಿರಸ್ತೇ ಗಗನಂ ದೇವ ನೇತ್ರೇ ಶಶಿದಿವಾಕರೌ ॥೧೩॥

ನಿಃಶ್ವಾಸಃ ಪವನಶ್ಚಾಪಿ ತೇಜೋಽಗ್ನಿಶ್ಚ ತವಾಚ್ಯುತ ।
ಬಾಹವಸ್ತೇ ದಿಶಃ ಸರ್ವಾಃ ಕುಕ್ಷಿಶ್ಚಾಪಿ ಮಹಾರ್ಣವಃ ॥೧೪॥

ಊರೂ ತೇ ಪರ್ವತಾ ದೇವ ಖಂ ನಾಭಿರ್ಮಧುಸೂದನ ।
ಪಾದೌ ತೇ ಪೃಥಿವೀ ಚೈವ ರೋಮಾಣ್ಯೋಷಧಯಸ್ತವ ॥೧೫॥

ಎಲೈ ಮಹಾಕಾಂತಿಯುಳ್ಳ ದೇವನೇ, ನೀನು ಸುರರನ್ನೂ, ಅಸುರರನ್ನೂ, ಮಾನವರನ್ನೂ ಎಲ್ಲಾ ಸ್ಥಾವರಜಂಗಮ ಪ್ರಾಣಿಗಳನ್ನೂ ಬ್ರಾಹ್ಮಣಾದಿ ಜಾತಿಗಳನ್ನೂ, ವೇದಗಳನ್ನೂ, ವೇದ್ಯವಾದ ಎಲ್ಲಾ ವಸ್ತುಗಳನ್ನೂ ಸೃಷ್ಟಿಸಿದ್ದೀಯೆ. ದೇವನೇ, ನಿನ್ನ ಶಿರಸ್ಸಿನಿಂದ ಗಗನವು ಜನಿಸಿದೆ. ನೇತ್ರಗಳಿಂದ ಚಂದ್ರಸೂರ್ಯರು ಜನಿಸಿದ್ದಾರೆ. ಶ್ವಾಸದಿಂದ ವಾಯುವು, ತೇಜಸ್ಸಿನಿಂದ ಅಗ್ನಿಯು, ಬಾಹುಗಳಿಂದ ದಿಕ್ಕುಗಳು, ಉದರದಿಂದ ಸಮುದ್ರವು ಜನಿಸಿವೆ. ಎಲೈ ದೇವನೇ, ನಿನ್ನ ತೊಡೆಗಳಿಂದ ಪರ್ವತಗಳು, ಎಲೈ ಮಧುಸೂದನನೇ, ನಾಭಿಯಿಂದ ಅಂತರಿಕ್ಷವೂ, ಪಾದಗಳಿಂದ ಪೃಥಿವಿಯೂ ಮತ್ತು ರೋಮಗಳಿಂದ ಓಷಧಿ ವನಸ್ಪತಿಗಳೂ ಜನಿಸಿವೆ.

ಇಂದ್ರಸೋಮಾಗ್ನಿವರುಣಾ ದೇವಾಸುರಮಹೋರಗಾಃ ।
ಪ್ರಹ್ವಾಸ್ತ್ವಾಮುಪತಿಷ್ಠಂತಿ ಸ್ತುವಂತೋ ವಿವಿಧೈಃ ಸ್ತವೈಃ ॥೧೬॥

ಇಂದ್ರ, ಸೋಮ, ಅಗ್ನಿ, ವರುಣ ಮೊದಲಾದ ದೇವತೆಗಳೂ, ಅಸುರರೂ, ಮಹಾಸರ್ಪಗಳೂ ಅನೇಕ ಸ್ತೋತ್ರಗಳಿಂದ ನಿನ್ನನ್ನು ಸ್ತೋತ್ರಮಾಡುತ್ತಾ ವಿನಯದಿಂದ ನಿನ್ನ ಉಪಾಸನೆಯನ್ನು ಮಾಡುತ್ತಾರೆ.

ತ್ವಯಾ ವ್ಯಾಪ್ತಾನಿ ಸರ್ವಾಣಿ ಭೂತಾನಿ ಭುವನೇಶ್ವರ ।
ಯೋಗಿನಃ ಸುಮಹಾವೀರ್ಯಾಃ ಸ್ತುವಂತಿ ತ್ವಾಂ ಮಹರ್ಷಯಃ ॥೧೭॥

ಭುವನೇಶ್ವರನೇ, ನೀನು ಎಲ್ಲಾ ವಸ್ತುಗಳನ್ನೂ ವ್ಯಾಪಿಸಿದ್ದೀಯೆ. ಮಹಾಸಾಮರ್ಥ್ಯವುಳ್ಳ ಯೋಗಿಗಳಾದ ಮಹರ್ಷಿಗಳು ನಿನ್ನನ್ನು ಸ್ತೋತ್ರಮಾಡುತ್ತಾರೆ.

ತ್ವಯಿ ತುಷ್ಟೇ ಜಗಚ್ಛಾಂತಂ ತ್ವಯಿ ರುಷ್ಟೇ ಮಹದ್ಭಯಮ್ ।
ಭಯಾನಾಮಪನೇತಾऽಸಿ ತ್ವಮೇಕಃ ಪರುಷೋತ್ತಮ ॥೧೮॥

ಪುರುಷೋತ್ತಮನೇ, ನೀನು ಪ್ರಸನ್ನನಾಗಿದ್ದರೆ ಜಗತ್ತಿನಲ್ಲಿ ಶಾಂತಿ ಇರುತ್ತದೆ. ನೀನು ಕೋಪಗೊಂಡರೆ ದೊಡ್ಡ ಭಯವುಂಟಾಗುತ್ತದೆ. ನೀನೊಬ್ಬನೇ ಎಲ್ಲ ಭಯಗಳನ್ನೂ ನಿವಾರಣೆ ಮಾಡುವವನಾಗಿದ್ದೀಯೆ.

ದೇವಾನಾಂ ಮಾನುಷಾಣಾಂ ಚ ಸರ್ವಭೂತಸುಖಾವಹಃ ।
ತ್ರಿಭಿರ್ವಿಕ್ರಮಣೈರ್ದೇವ ತ್ರಯೋ ಲೋಕಾಸ್ತ್ವಯಾ ವೃತಾಃ ।
ಅಸುರಾಣಾಂ ಸಮೃದ್ಧಾನಾಂ ವಿನಾಶಶ್ಚ ತ್ವಯಾ ಕೃತಃ ॥೧೯॥

ದೇವತೆಗಳಿಗೂ ಮನುಷ್ಯರಿಗೂ ಮತ್ತು ಎಲ್ಲಾ ಪ್ರಾಣಿಗಳಿಗೂ ಸುಖವನ್ನು ಕೊಡುವವನಾಗಿದ್ದೀಯೆ. ನಿನ್ನ ಮೂರುಪಾದ ವಿಕ್ಷೇಪಗಳಿಂದ ಮೂರು ಲೋಕಗಳನ್ನೂ ಆವರಿಸಿದ್ದೀಯೆ. ಸಮೃದ್ಧರಾದ ಅಸುರರಿಗೆ ನೀನು ವಿನಾಶವನ್ನು ಉಂಟುಮಾಡಿದ್ದೀಯೆ.

ತವ ವಿಕ್ರಮಣೈರ್ದೇವ ನಿರ್ವಾಣಮಗಮನ್ ಪರಮ್ ।
ಪರಾಭವಂ ಚ ದೈತ್ಯೇಂದ್ರಾಃ ತ್ವಯಿ ಕ್ರುದ್ಧೇ ಮಹಾದ್ಯುತೇ ॥೨೦॥

ದೇವನೇ, ನಿನ್ನ ಸಾಮರ್ಥ್ಯದಿಂದ ದೈತ್ಯೇಂದ್ರರು ಸಂಪೂರ್ಣ ವಿನಾಶವನ್ನು ಹೊಂದಿದ್ದಾರೆ. ಮಹಾತೇಜಸ್ವಿಯೇ, ನಿನ್ನ ಕ್ರೋಧದಿಂದ ಅವರು ಪರಾಭವವನ್ನೂ ಹೊಂದಿದ್ದಾರೆ.

ತ್ವಂ ಹಿ ಕರ್ತಾ ವಿಕರ್ತಾ ಚ ಭೂತಾನಾಮಿಹ ಸರ್ವಶಃ ।
ಆರಾಧಯಿತ್ವಾ ತ್ವಾಂ ದೇವಾಃ ಸುಖಮೇಧಂತಿ ನಿತ್ಯಶಃ ॥೨೧॥

ನೀನೇ ಎಲ್ಲ ಜೀವರನ್ನೂ ಸೃಷ್ಟಿಮಾಡುವವನು ಮತ್ತು ಸಂಹಾರಮಾಡುವವನು. ನಿನ್ನ ಆರಾಧನೆಯನ್ನು ಮಾಡಿ ದೇವತೆಗಳು ಯಾವಾಗಲೂ ಸುಖವನ್ನು ಪಡೆಯುತ್ತಾರೆ.

ಏವಂ ಸ್ತುತೋ ಹೃಷೀಕೇಶ ಉದಂಕೇನ ಮಹಾತ್ಮನಾ ।
ಉದಂಕಮಬ್ರವೀದ್ ವಿಷ್ಣುಃ ಪ್ರೀತಸ್ತೇಽಹಂ ವರಂ ವೃಣು ॥೨೨॥

ಹೀಗೆ ಮಹಾತ್ಮನಾದ ಉದಂಕನಿಂದ ಸ್ತೋತ್ರಮಾಡಲ್ಪಟ್ಟ ಸರ್ವೇಂದ್ರಿಯ ಪ್ರೇರಕನಾದ ಹೃಷೀಕೇಶನು ಉದಂಕನನ್ನು ಕುರಿತು ನಾನು ನಿನಗೆ ಪ್ರಸನ್ನನಾಗಿದ್ದೇನೆ ವರವನ್ನು ಬೇಡು ಎಂದು ಹೇಳಿದನು.

ಉದಂಕಃ

ಪರ್ಯಾಪ್ತೋ ಮೇ ವರೋ ಹ್ಯೇಷ ಯದಹಂ ದೃಷ್ಟವಾನ್ ಹರಿಮ್ ।
ಪುರುಷಂ ಶಾಶ್ವತಂ ದಿವ್ಯಂ ಸ್ರಷ್ಟಾರಂ ಜಗತಃ ಪ್ರಭುಮ್ ॥೨೩॥

ಉದಂಕ– ಶಾಶ್ವತನೂ, ದಿವ್ಯಪುರುಷನೂ, ಜಗತ್ತಿನ ಸೃಷ್ಟಿಕರ್ತನೂ, ಪ್ರಭುವೂ ಆದ ಹರಿಯಾದ ನಿನ್ನನ್ನು ನಾನು ನೋಡಿರುವುದೇ ಶ್ರೇಷ್ಠವರವಾಗಿದೆ. ಬೇರೆ ವರವು ಬೇಡ.

ಶ್ರೀಭಗವಾನ್

ಪ್ರೀತಸ್ತೇಽಹಮಲೌಲ್ಯೇನ ಭಕ್ತ್ಯಾ ಚ ದ್ವಿಜಸತ್ತಮ ।
ಅವಶ್ಯಂ ಹಿ ತ್ವಯಾ ವಿದ್ವನ್ ಮತ್ತೋ ಗ್ರಾಹ್ಯೋ ವರೋ ದ್ವಿಜ ॥೨೪॥

ಶ್ರೀಭಗವಾನ್- ಎಲೈ ದ್ವಿಜಶ್ರೇಷ್ಠನೇ, ನಿನ್ನ ಅಚಾಂಚಲ್ಯದಿಂದಲೂ ಮತ್ತು ಭಕ್ತಿಯಿಂದಲೂ ನಾನು ಸಂತೋಷಗೊಂಡಿದ್ದೇನೆ. ಜ್ಞಾನಿಯಾದ ಬ್ರಾಹ್ಮಣನೇ ನೀನು ಅವಶ್ಯವಾಗಿ ನನ್ನಿಂದ ವರವನ್ನು ಸ್ವೀಕರಿಸಬೇಕು.

ಏವಂ ಸಂಚೋದ್ಯಮಾನಸ್ತು ವರೇಣ ಹರಿಣಾ ತದಾ ।
ಉದಂಕಃ ಪ್ರಾಂಜಲಿರ್ವವ್ರೇ ವರಂ ಭರತಸತ್ತಮ ॥೨೫॥

ಎಲೈ ಭರತಸತ್ತಮನೇ, ಹೀಗೆ ಹರಿಯಿಂದ ಒತ್ತಾಯ ಮಾಡಲ್ಪಟ್ಟ ಉದಂಕನು ಕೈಗಳನ್ನು ಮುಗಿದು ವರವನ್ನು ಬೇಡಿದನು.

ಉದಂಕಃ

ಯದಿ ಮೇ ಭಗವಾನ್ ಪ್ರೀತಃ ಪುಂಡರೀಕನಿಭೇಕ್ಷಣ ।
ಧರ್ಮೇ ಸತ್ಯೇ ದಮೇ ಚೈವ ಬುದ್ಧಿರ್ಭವತು ಮೇ ಸದಾ ॥೨೬॥

ಅಭ್ಯಾಸಶ್ಚ ಭವೇದ್ ಭಕ್ತ್ಯಾ ತ್ವಯಿ ನಿತ್ಯಂ ಮಹೇಶ್ವರ ॥೨೭॥

ಉದಂಕ– ಭಗವಂತನೇ, ಪುಂಡರೀಕಾಕ್ಷನೇ, ನೀನು ನನಗೆ ಪ್ರಸನ್ನನಾಗಿದ್ದರೆ ನನಗೆ ಯಾವಾಗಲೂ ಧರ್ಮದಲ್ಲಿಯೂ, ಸತ್ಯದಲ್ಲಿಯೂ, ದಮದಲ್ಲಿಯೂ ಬುದ್ಧಿಯುಂಟಾಗಲಿ. ಎಲೈ ಮಹಾಪ್ರಭುವೇ, ನಿನ್ನಲ್ಲಿ ಭಕ್ತಿಯೂ ಯಾವಾಗಲೂ ವೃದ್ಧಿಯನ್ನು ಹೊಂದಲಿ.

ಶ್ರೀಭಗವಾನ್

ಸರ್ವಮೇತದ್ಧಿ ಭವಿತಾ ಮತ್‌ಪ್ರಸಾದಾತ್ ತವ ದ್ವಿಜ ।
ಪ್ರತಿಭಾಸ್ಯತಿ ಯೋಗಶ್ಚ ಯೇನ ಯುಕ್ತೋ ದಿವೌಕಸಾಮ್ ।
ತ್ರಯಾಣಾಮಪಿ ಲೋಕಾನಾಂ ಮಹತ್ ಕಾರ್ಯಂ ಕರಿಷ್ಯಸಿ ॥೨೮॥

ಶ್ರೀಭಗವಾನ್- ಎಲೈ ಬ್ರಾಹ್ಮಣನೇ, ನನ್ನ ಅನುಗ್ರಹದಿಂದ ನಿನಗೆ ಇವೆಲ್ಲವೂ ಉಂಟಾಗುವುದು. ನಿನಗೆ ಯೋಗದ ಪ್ರತಿಭಾನವು ಉಂಟಾಗುವುದು. ಆದರಿಂದ ನೀನು ದೇವತೆಗಳಿಗೂ ಮತ್ತು ಮೂರುಲೋಕಗಳಿಗೂ ಉಪಕಾರವಾಗುವಂತಹ ದೊಡ್ಡ ಕಾರ್ಯವನ್ನು ಮಾಡುವಿ.

ಉತ್ಪಾದನಾರ್ಥಂ ಲೋಕಾನಾಂ ಧುಂಧುರ್ನಾಮ ಮಹಾಸುರಃ ।
ತಪಸ್ಯತಿ ತಪೋ ಘೋರಂ ಶೃಣು ಯಸ್ತಂ ಹನಿಷ್ಯತಿ ॥೨೯॥

ಲೋಕಗಳನ್ನು ವಿನಾಶಮಾಡುವ ಉದ್ದೇಶದಿಂದ ಧುಂಧು ಎಂಬ ಮಹಾ ಅಸುರನು ಘೋರವಾದ ತಪಸ್ಸನ್ನು ಮಾಡುತ್ತಿದ್ದಾನೆ. ಅವನನ್ನು ಸಂಹರಿಸುವವನು ಯಾವನು ಎಂದು ಹೇಳುವೆನು, ಅದನ್ನು ಕೇಳು.

ಬೃಹದಶ್ವ ಇತಿ ಖ್ಯಾತೋ ಭವಿಷ್ಯತಿ ಮಹೀಪತಿಃ ॥೩೦॥

ತಸ್ಯ ಪುತ್ರಃ ಶುಚಿರ್ದಾಂತಃ ಕುವಲಾಶ್ವ ಇತಿ ಶ್ರುತಃ ।
ಸ ಯೋಗಬಲಮಾಸ್ಥಾಯ ಮಾಮಕಂ ಪಾರ್ಥಿವೋತ್ತಮಃ ।
ಶಾಸನಾತ್ ತವ ವಿಪ್ರರ್ಷೇ ಧುಂಧುಮಾರೋ ಭವಿಷ್ಯತಿ ॥೩೧॥

ಬೃಹದಶ್ವ ಎಂಬ ಪ್ರಸಿದ್ಧನಾದ ರಾಜನು ಮುಂದೆ ಉಂಟಾಗುವನು. ಅವನಿಗೆ ಶುಚಿಯೂ ಮತ್ತು ಇಂದ್ರಿಯನಿಗ್ರಹವುಳ್ಳವನೂ ಆದ ಕುವಲಾಶ್ವನೆಂಬ ಪುತ್ರನು ಜನಿಸುವನು. ಆ ಶ್ರೇಷ್ಠರಾಜನು ನನ್ನ ಯೋಗಬಲವನ್ನು ಆಶ್ರಯಿಸಿ ಎಲೈ ವಿಪ್ರರ್ಷಿಯೇ, ನಿನ್ನ ಆದೇಶದಿಂದ ಧುಂಧುವನ್ನು ಸಂಹರಿಸುವನು.

ಮಾರ್ಕಂಡೇಯಃ

ಉದಂಕಮೇವಮುಕ್ತ್ವಾ ತು ವಿಷ್ಣುರಂತರಧೀಯತ ॥೩೨॥

ಮಾರ್ಕಂಡೇಯ– ಉದಂಕನಿಗೆ ಹೀಗೆ ಹೇಳಿ ವಿಷ್ಣುವು ಅಂತರ್ಧಾನವನ್ನು ಹೊಂದಿದನು.

ಇಕ್ಷ್ವಾಕೌ ಸಂಸ್ಥಿತೇ ರಾಜನ್ ಶಶಾದಃ ಪೃಥಿವೀಮಿಮಾಮ್ ।
ಪ್ರಾಪ್ತಃ ಪರಮಧರ್ಮಾತ್ಮಾ ಸೋಽಯೋಧ್ಯಾಯಾಂ ನೃಪೋಽಭವತ್ ॥

ರಾಜನೇ, ಇಕ್ಷ್ವಾಕುವು ಸ್ವರ್ಗಸ್ಥನಾದಮೇಲೆ ಶಶಾದನಿಗೆ ಈ ಭೂಮಿಯು ಪ್ರಾಪ್ತವಾಯಿತು. ಪರಮಧರ್ಮಾತ್ಮನಾದ ಅವನು ಅಯೋಧ್ಯೆಯಲ್ಲಿ(ರಾಜಧಾನಿ) ರಾಜನಾದನು.

ಶಶಾದಸ್ಯ ತು ದಾಯಾದಃ ಕಕುತ್ಸ್ಥೋ ನಾಮ ವೀರ್ಯವಾನ್ ।
ಅನೇನಾಶ್ಚಾಪಿ ಕಾಕುತ್ಸ್ಥಃ ಪೃಥುಶ್ಚಾನೇನಸಃ ಸುತಃ ॥೩೪॥

ಶಶಾದನ ಪುತ್ರನು ಪರಾಕ್ರಮಿಯಾದ ಕಕುತ್ಸ್ಥನು. ಅನೇನನು ಕಕುತ್ಸ್ಥನ ಪುತ್ರನು. ಪೃಥುವು ಅನೇನನ ಪುತ್ರ .

ವಿಷ್ವಗಶ್ವಃ ಪೃಥೋಃ ಪುತ್ರಃ ತಸ್ಮಾದಾರ್ದ್ರಸ್ತು ಜಜ್ಞಿವಾನ್ ।
ಆರ್ದ್ರಾದ್ ಯುವನಾಶ್ವಸ್ತು ಶ್ರಾವಸ್ತಸ್ತಸ್ಯ ಚಾತ್ಮಜಃ ॥೩೫॥

ವಿಷ್ವಗಶ್ವನು ಪೃಥುವಿನ ಪುತ್ರ. ಅವನಿಂದ ಆರ್ದ್ರನು ಜನಿಸಿದನು. ಆರ್ದ್ರನಿಂದ ಯುವನಾಶ್ವ ಮತ್ತು ಶ್ರಾವನು ಯುವನಾಶ್ವನ ಪುತ್ರ.

ಜಜ್ಞೇ ಶ್ರಾವ್ಯಸ್ತತೋ ರಾಜಾ ಶ್ರಾವಸ್ತೀ ಯೇನ ನಿರ್ಮಿತಾ ।
ಶ್ರಾವ್ಯಸ್ತಸ್ಯ ತು ದಾಯಾದೋ ಬೃಹದಶ್ವೋ ಮಹಾಬಲಃ ॥೩೬॥

ಶ್ರಾವನ ಮಗ ಶ್ರಾವ್ಯ. ಅವನು ಶ್ರಾವಸ್ತೀ ಪಟ್ಟಣವನ್ನು ನಿರ್ಮಾಣ ಮಾಡಿದನು. ಶ್ರಾವ್ಯನ ಪುತ್ರನು ಮಹಾಬಲನಾದ ಬೃಹದಶ್ವ.

ಬೃಹದಶ್ವಸುತಶ್ಚಾಪಿ ಕುವಲಾಶ್ವ ಇತಿ ಸ್ಮೃತಃ ।
ಕುವಲಾಶ್ವಸ್ಯ ಪುತ್ರಾಣಾಂ ಸಹಸ್ರಾಣ್ಯೇಕವಿಂಶತಿಃ ॥೩೭॥

ಬೃಹದಶ್ವನು ಕುವಲಾಶ್ವ ಎಂದು ಪ್ರಸಿದ್ಧನಾದವನು. ಕುವಲಾಶ್ವನಿಗೆ ಇಪ್ಪತ್ತೊಂದು ಸಾವಿರ ಪುತ್ರರು.

ಸರ್ವೇ ವಿದ್ಯಾಸು ನಿಷ್ಣಾತಾ ಬಲವಂತೋ ದುರಾಸದಾಃ ।
ಕುವಲಾಶ್ವಶ್ಚ ಪಿತೃತೋ ಗುಣೈರಭ್ಯಧಿಕೋऽಭವತ್ ॥೩೮॥

ಎಲ್ಲರೂ ಎಲ್ಲ ವಿದ್ಯೆಗಳಲ್ಲೂ ನಿಷ್ಣಾತರು, ಬಲಿಷ್ಠರಾದವರು ಮತ್ತು ಸೋಲಿಸಲು ಅಸಾಧ್ಯರಾದವರು. ಕುವಲಾಶ್ವನು ತನ್ನ ಗುಣಗಳಿಂದ ತನ್ನ ತಂದೆಯನ್ನೂ ಮೀರಿಸಿದನು.

ಸಮಯೇ ತಂ ತತೋ ರಾಜ್ಯೇ ಬೃಹದಶ್ವೋऽಭ್ಯಷೇಯತ್ ।
ಕುವಲಾಶ್ವಂ ಮಹಾರಾಜ ಶೂರಮುತ್ತಮಧಾರ್ಮಿಕಮ್ ॥೩೯॥

ಎಲೈ ಮಹಾರಾಜನೇ, ಯೋಗ್ಯವಾದ ಸಮಯದಲ್ಲಿ ಬೃಹದಶ್ವನು ಶೂರನೂ, ಉತ್ತಮ ಧಾರ್ಮಿಕನೂ ಆದ ಕುವಲಾಶ್ವನಿಗೆ ರಾಜ್ಯದಲ್ಲಿ ಅಭಿಷೇಕವನ್ನು ಮಾಡಿದನು.

ಪುತ್ರಸಂಕ್ರಾಮಿತಶ್ರೀಸ್ತು ಬೃಹದಶ್ವೋ ಮಹೀಪತಿಃ ।
ಜಗಾಮ ತಪಸೇ ಧೀಮಾನ್ ತಪೋವನಮಮಿತ್ರಹಾ ॥೪೦॥

ರಾಜನೂ ಶತ್ರುಸಂಹಾರಕನೂ ಆದ ಬೃಹದಶ್ವನು ಪುತ್ರನಿಗೆ ತನ್ನ ಸಂಪತ್ತನ್ನು ವರ್ಗಾಯಿಸಿ ಮೇಧಾವಿಯಾದ ಅವನು ತಪಸ್ಸನ್ನು ಮಾಡಲು ತಪೋವನಕ್ಕೆ ಹೋದನು.

ಅಥ ಶುಶ್ರಾವ ರಾಜರ್ಷಿಂ ತಮುದಂಕೋ ಯುಧಿಷ್ಠಿರ ।
ವನಂ ಸಂಪ್ರಸ್ಥಿತಂ ರಾಜನ್ ಬೃಹದಶ್ವಂ ದ್ವಿಜೋತ್ತಮಃ ॥೪೧॥

ಎಲೈ ಯುಧಿಷ್ಠಿರ ರಾಜನೇ, ಆಗ ದ್ವಿಜಶ್ರೇಷ್ಠನಾದ ಉದಂಕನು ರಾಜರ್ಷಿಯಾದ ಬೃಹದಶ್ವನು ಕಾಡಿಗೆ ಹೊರಟಿದ್ದಾನೆಂಬ ವಾರ್ತೆಯನ್ನು ಕೇಳಿದನು.

ತಮುದಂಕೋ ಮಹಾತೇಜಾಃ ಸರ್ವಾಸ್ತ್ರವಿದುಷಾಂ ವರಮ್ ।
ನ್ಯವಾರಯದಮೇಯಾತ್ಮಾ ಸಮಾಸಾದ್ಯ ಪುರೋತ್ತಮೇ ॥೪೨॥

ಅಚಿಂತ್ಯಶಕ್ತಿಯುಳ್ಳ ಉದಂಕನು ಮಹಾತೇಜಸ್ವಿಯೂ, ಸರ್ವಾಸ್ತ್ರಗಳನ್ನು ಬಲ್ಲವನೂ ಆದ ಬೃಹದಶ್ವನನ್ನು ಅವನ ಶ್ರೇಷ್ಠವಾದ ಪಟ್ಟಣದಲ್ಲಿ ಸಂಧಿಸಿ ಅವನನ್ನು ತಡೆದನು.

ಉದಂಕಃ

ಭವತಾ ರಕ್ಷಣಂ ಕಾರ್ಯಂ ತತ್ ತಾವತ್ ಕರ್ತುಮರ್ಹಸಿ ।
ನಿರುದ್ವಿಗ್ನಾ ವಯಂ ರಾಜನ್ ತ್ವತ್ಪ್ರಸಾದಾದ್ ವಸೇಮಹಿ ॥೪೩॥

ಉದಂಕ– ನೀನು ರಕ್ಷಣೆಯನ್ನು ಮಾಡಬೇಕಾದವನು. ನೀನು ಈಗ ಅದನ್ನೇ ಮಾಡುವುದು ಯೋಗ್ಯವಾದುದು. ಎಲೈ ರಾಜನೇ, ನಿನ್ನ ಅನುಗ್ರಹದಿಂದ ನಾವು ನಿನ್ನ ರಾಜ್ಯದಲ್ಲಿ ನಿರಾತಂಕವಾಗಿ ವಾಸಮಾಡುತ್ತಿದ್ದೇವೆ.

ತ್ವಯಾ ಹಿ ಪೃಥಿವೀ ರಾಜನ್ ರಕ್ಷ್ಯಮಾಣಾ ಮಹಾತ್ಮನಾ ।
ಭವಿಷ್ಯತಿ ನಿರುದ್ವಿಗ್ನಾ ನಾರಣ್ಯಂ ಗಂತುಮರ್ಹಸಿ ॥೪೪॥

ಎಲೈ ರಾಜನೇ, ಮಹಾತ್ಮನಾದ ನೀನು ಭೂಮಿಯನ್ನು ರಕ್ಷಣೆ ಮಾಡಿದರೆ ಎಲ್ಲವೂ ನಿರಾತಂಕವಾಗುವುದು. ನೀನು ಅರಣ್ಯಕ್ಕೆ ಹೋಗಬೇಡ.

ಪಾಲನೇ ಹಿ ಮಹಾನ್ ಧರ್ಮಃ ಪ್ರಜಾನಾಮಿಹ ದೃಶ್ಯತೇ ।
ನ ತಥಾ ದೃಶ್ಯತೇऽರಣ್ಯೇ ಮಾ ಭೂತ್ ತೇ ಬುದ್ಧಿರೀದೃಶೀ ॥೪೫॥

ಇಲ್ಲಿ ಪ್ರಜೆಗಳನ್ನು ಪಾಲನೆ ಮಾಡುವುದರಲ್ಲಿ ದೊಡ್ಡ ಧರ್ಮವೇ ಕಾಣುತ್ತದೆ. ಅದು ಅರಣ್ಯವಾಸದಲ್ಲಿ ಕಾಣುವುದಿಲ್ಲ. ಆದ್ದರಿಂದ ನಿನಗೆ ಇಂತಹ ಬುದ್ಧಿ ಉಂಟಾಗುವುದು ಬೇಡ.

ಈದೃಶೋ ನ ಚ ರಾಜೇಂದ್ರ ಧರ್ಮಃ ಕ್ವಚನ ದೃಶ್ಯತೇ ।
ಪ್ರಜಾನಾಂ ಪಾಲನೇ ಯೋ ವೈ ಪುರಾ ರಾಜರ್ಷಿಭಿಃ ಕೃತಃ ॥೪೬॥

ಎಲೈ ರಾಜೇಂದ್ರನೇ, ಹಿಂದೆ ರಾಜರ್ಷಿಗಳು ಯಾವ ಪ್ರಜಾಪಾಲನವನ್ನು ರಾಜರಿಗೆ ಧರ್ಮವೆಂದು ಹೇಳಿದ್ದಾರೆಯೋ ಅಂತಹ ಧರ್ಮವು ಬೇರೆ ಯಾವುದೂ ಕಂಡುಬರುವುದಿಲ್ಲ.

ರಕ್ಷಿತವ್ಯಾಃ ಪ್ರಜಾ ರಾಜ್ಞಾ ತಾಸ್ತ್ವಂ ರಕ್ಷಿತುಮರ್ಹಸಿ ।
ನಿರುದ್ವಿಗ್ನಸ್ತಪಸ್ತಪ್ತುಂ ನ ಹಿ ಶಕ್ನೋಮಿ ಪಾರ್ಥಿವ ॥೪೭॥

ರಾಜನು ಪ್ರಜೆಗಳನ್ನು ರಕ್ಷಿಸಬೇಕು. ಆದ್ದರಿಂದ ನೀನೂ ಸಹ ಪ್ರಜೆಗಳನ್ನು ರಕ್ಷಿಸುವುದು ಯೋಗ್ಯವಾದುದು. ಎಲೈ ರಾಜನೇ, ಹಾಗೆ ಮಾಡದಿದ್ದರೆ ನಾನು ನಿರಾತಂಕವಾಗಿ ತಪಸ್ಸನ್ನು ಮಾಡಲು ಸಾಧ್ಯವಾಗುವುದಿಲ್ಲ.

ಮಮಾಶ್ರಮಸಮೀಪೇ ಹಿ ಸಮೇಷು ಮರುಧನ್ವಸು ।
ಸಮುದ್ರವಾಲುಕಾಪೂರ್ಣ ಉಜ್ಜಾನಕ ಇತಿ ಸ್ಮೃತಃ ॥೪೮॥

ಮರುಭೂಮಿಯಲ್ಲಿ ಸಮತಟ್ಟಾದ ಒಂದು ದೇಶದಲ್ಲಿ ನನ್ನ ಆಶ್ರಮದ ಸಮೀಪದಲ್ಲಿ ಸಮುದ್ರದ ಮರಳಿನಿಂದ ತುಂಬಿದ ಉಜ್ಜಾನಕ ಎಂಬ ಪ್ರದೇಶವಿದೆ.

ಬಹುಯೋಜನವಿಸ್ತೀರ್ಣೋ ಬಹುಯೋಜನಮಾಯತಃ ।
ತತ್ರ ರೌದ್ರೋ ದಾನವೇಂದ್ರೋ ಮಹಾವೀರ್ಯಪರಾಕ್ರಮಃ ॥೪೯॥

ಮಧುಕೈಟಭಯೋಃ ಪುತ್ರೋ ಧುಂಧುರ್ನಾಮ ಮಹಾಸುರಃ ।
ಅಂತರ್ಭೂಮಿಗತೋ ರಾಜನ್ ವಸತ್ಯಮಿತವಿಕ್ರಮಃ ।
ತಂ ನಿಹತ್ಯ ಮಹಾರಾಜ ವನಂ ತ್ವಂ ಗಂತುಮರ್ಹಸಿ ॥೫೦॥

ಅದು ಅನೇಕ ಯೋಜನಗಳಷ್ಟು ಉದ್ದವೂ, ಅನೇಕ ಯೋಜನಗಳಷ್ಟು ಅಗಲವೂ ಆಗಿದೆ. ಅಲ್ಲಿ ಘೋರನಾದ ಮಹಾಬಲಪರಾಕ್ರಮವುಳ್ಳ ಮಧುಕೈಟಭರ ಪುತ್ರನಾದ ಧುಂಧು ಎಂಬ ಮಹಾಸುರನು ಅಸಾಧಾರಣ ವಿಕ್ರಮವನ್ನು ಹೊಂದಿದವನಾಗಿ ಭೂಮಿಯ ಒಳಗೆ ವಾಸಿಸುತ್ತಾನೆ. ಎಲೈ ಮಹಾರಾಜನೇ, ಅವನನ್ನು ಸಂಹಾರ ಮಾಡಿ ನೀನು ಅರಣ್ಯಕ್ಕೆ ಹೋಗಬೇಕು.

ಅಥ ಶುಶ್ರಾವ ರಾಜರ್ಷಿಂ ತಮುದಂಕೋ ಯುಧಿಷ್ಠಿರ ।
ವನಂ ಸಂಪ್ರಸ್ಥಿತಂ ರಾಜನ್ ಬೃಹದಶ್ವಂ ದ್ವಿಜೋತ್ತಮಃ ॥೪೧॥

ಎಲೈ ಯುಧಿಷ್ಠಿರ ರಾಜನೇ, ಆಗ ದ್ವಿಜಶ್ರೇಷ್ಠನಾದ ಉದಂಕನು ರಾಜರ್ಷಿಯಾದ ಬೃಹದಶ್ವನು ಕಾಡಿಗೆ ಹೊರಟಿದ್ದಾನೆಂಬ ವಾರ್ತೆಯನ್ನು ಕೇಳಿದನು.

ತಮುದಂಕೋ ಮಹಾತೇಜಾಃ ಸರ್ವಾಸ್ತ್ರವಿದುಷಾಂ ವರಮ್ ।
ನ್ಯವಾರಯದಮೇಯಾತ್ಮಾ ಸಮಾಸಾದ್ಯ ಪುರೋತ್ತಮೇ ॥೪೨॥

ಅಚಿಂತ್ಯಶಕ್ತಿಯುಳ್ಳ ಉದಂಕನು ಮಹಾತೇಜಸ್ವಿಯೂ, ಸರ್ವಾಸ್ತ್ರಗಳನ್ನು ಬಲ್ಲವನೂ ಆದ ಬೃಹದಶ್ವನನ್ನು ಅವನ ಶ್ರೇಷ್ಠವಾದ ಪಟ್ಟಣದಲ್ಲಿ ಸಂಧಿಸಿ ಅವನನ್ನು ತಡೆದನು.

ಉದಂಕಃ

ಭವತಾ ರಕ್ಷಣಂ ಕಾರ್ಯಂ ತತ್ ತಾವತ್ ಕರ್ತುಮರ್ಹಸಿ ।
ನಿರುದ್ವಿಗ್ನಾ ವಯಂ ರಾಜನ್ ತ್ವತ್‌ಪ್ರಸಾದಾದ್ ವಸೇಮಹಿ ॥೪೩॥

ಉದಂಕ– ನೀನು ರಕ್ಷಣೆಯನ್ನು ಮಾಡಬೇಕಾದವನು. ನೀನು ಈಗ ಅದನ್ನೇ ಮಾಡುವುದು ಯೋಗ್ಯವಾದುದು. ಎಲೈ ರಾಜನೇ, ನಿನ್ನ ಅನುಗ್ರಹದಿಂದ ನಾವು ನಿನ್ನ ರಾಜ್ಯದಲ್ಲಿ ನಿರಾತಂಕವಾಗಿ ವಾಸಮಾಡುತ್ತಿದ್ದೇವೆ.

ತ್ವಯಾ ಹಿ ಪೃಥಿವೀ ರಾಜನ್ ರಕ್ಷ್ಯಮಾಣಾ ಮಹಾತ್ಮನಾ ।
ಭವಿಷ್ಯತಿ ನಿರುದ್ವಿಗ್ನಾ ನಾರಣ್ಯಂ ಗಂತುಮರ್ಹಸಿ ॥೪೪॥

ಎಲೈ ರಾಜನೇ, ಮಹಾತ್ಮನಾದ ನೀನು ಭೂಮಿಯನ್ನು ರಕ್ಷಣೆ ಮಾಡಿದರೆ ಎಲ್ಲವೂ ನಿರಾತಂಕವಾಗುವುದು. ನೀನು ಅರಣ್ಯಕ್ಕೆ ಹೋಗಬೇಡ.

ಪಾಲನೇ ಹಿ ಮಹಾನ್ ಧರ್ಮಃ ಪ್ರಜಾನಾಮಿಹ ದೃಶ್ಯತೇ ।
ನ ತಥಾ ದೃಶ್ಯತೇऽರಣ್ಯೇ ಮಾ ಭೂತ್ ತೇ ಬುದ್ಧಿರೀದೃಶೀ ॥೪೫॥

ಇಲ್ಲಿ ಪ್ರಜೆಗಳನ್ನು ಪಾಲನೆ ಮಾಡುವುದರಲ್ಲಿ ದೊಡ್ಡ ಧರ್ಮವೇ ಕಾಣುತ್ತದೆ. ಅದು ಅರಣ್ಯವಾಸದಲ್ಲಿ ಕಾಣುವುದಿಲ್ಲ. ಆದ್ದರಿಂದ ನಿನಗೆ ಇಂತಹ ಬುದ್ಧಿ ಉಂಟಾಗುವುದು ಬೇಡ.

[illegible]

[illegible]

[illegible]

[illegible]

ಧರ್ಮವೆಂದು ಹೇಳಿದ್ದಾರೆಯೋ [illegible]

ಕಂಡುಬರುವುದಿಲ್ಲ.

[illegible]

[illegible]

ರಾಜನು ಪ್ರಜೆಗಳನ್ನು ರಕ್ಷಿಸಬೇಕು [illegible]

ರಕ್ಷಿಸುವುದು ಯೋಗ್ಯವಾದುದು. ಎಲ್ಲೆ [illegible]

ನಿರಾತಂಕವಾಗಿ ತಪಸ್ಸನ್ನು ಮಾಡಲು [illegible]

[illegible]

[illegible]

ಮರುಭೂಮಿಯಲ್ಲಿ ಸಮತಟ್ಟಾ [illegible]

ಸಮುದ್ರದ ಮರಳಿನಿಂದ ತುಂಬಿದ [illegible]

[illegible]

[illegible]

[illegible] ||೯೯||

[illegible]

[illegible]

ಅದು ಆನೇ [illegible] ||೧೦||

ಆಗಿದೆ. ಆಲ್ಲಿ [illegible]

ಧುಂಧು [illegible]

ಭೂಮಿಯ [illegible]

ನೀನು ಆ [illegible]

ಶೇತೇ ಸ ಲೋಕನಾಶಾಯ ತಪ ಆಸ್ಥಾಯ ದಾರುಣಮ್ ।
ತ್ರಿದಶಾನಾಂ ವಿನಾಶಾಯ ಲೋಕಾನಾಂ ಚಾಪಿ ಪಾರ್ಥಿವ ॥೫೧॥

ಎಲೈ ರಾಜನೇ, ಅವನು ಲೋಕದ ವಿನಾಶಕ್ಕಾಗಿ ಮತ್ತು ದೇವತೆಗಳ ವಿನಾಶಕ್ಕಾಗಿ ದಾರುಣವಾದ ತಪಸ್ಸನ್ನು ಮಾಡುತ್ತಾ ಅಲ್ಲಿ ಮಲಗಿರುತ್ತಾನೆ.

ಅವಧ್ಯೋ ದೈವತಾನಾಂ ಹಿ ದೈತ್ಯಾನಾಮಥ ರಕ್ಷಸಾಮ್ ।
ನಾಗಾನಾಮಥ ಯಕ್ಷಾಣಾಂ ಗಂಧರ್ವಾಣಾಂ ಚ ಸರ್ವಶಃ ॥೫೨॥

ಅವಾಪ್ಯ ಸ ವರಂ ರಾಜನ್ ಸರ್ವಲೋಕಪಿತಾಮಹಾತ್ ॥೫೩॥

ಎಲೈ ರಾಜನೇ, ಅವನು ಸರ್ವಲೋಕಪಿತಾಮಹರಾದ ಬ್ರಹ್ಮದೇವರಿಂದ ವರವನ್ನು ಪಡೆದು ದೇವತೆಗಳಿಂದಲೂ, ದೈತ್ಯರಿಂದಲೂ, ನಾಗಗಳಿಂದಲೂ, ಯಕ್ಷರಿಂದಲೂ, ಗಂಧರ್ವರಿಂದಲೂ ಸರ್ವಥಾ ಅವಧ್ಯನಾಗಿದ್ದಾನೆ.

ತಂ ವಿನಾಶಯ ಭದ್ರಂ ತೇ ಮಾ ತೇ ಬುದ್ಧಿರತೋಽನ್ಯಥಾ ।
ಪ್ರಾಪ್ಸ್ಯಸೇ ಮಹತೀಂ ಕೀರ್ತಿಂ ಶಾಶ್ವತೀಮವ್ಯಯಾಂ ಧ್ರುವಾಮ್॥೫೪॥

ಅವನನ್ನು ಸಂಹಾರ ಮಾಡು. ನಿನಗೆ ಮಂಗಳವಾಗಲಿ. ನೀನು ಬೇರೆ ರೀತಿಯೋಚಿಸಬೇಡ. ಇದರಿಂದ ನೀನು ಶಾಶ್ವತವಾದ, ನಾಶಹೊಂದದಿರುವ, ಧ್ರುವವಾದ ಮಹಾಕೀರ್ತಿಯನ್ನು ಪಡೆಯುವಿ.

ಕ್ರೂರಸ್ಯ ಸ್ವಪತಸ್ತಸ್ಯ ವಾಲುಕಾಂತರ್ಹಿತಸ್ಯ ವೈ ।
ಸಂವತ್ಸರಸ್ಯ ಪರ್ಯಂತೇ ನಿಃಶ್ವಾಸಃ ಸಂಪ್ರವರ್ತತೇ ॥೫೫॥

ಯದಾ ತದಾ ಭೂಶ್ಚಲತಿ ಸಶೈಲವನಕಾನನಾ ।
ತಸ್ಯ ನಿಃಶ್ವಾಸವಾತೇನ ರಜ ಉದ್ಧೂಯತೇ ಮಹತ್ ॥೫೬॥

ಕ್ರೂರನಾಗಿ ಮರಳಿನಲ್ಲಿ ಅಡಗಿ ನಿದ್ರೆಯನ್ನು ಮಾಡುವ ಅವನಿಗೆ ಒಂದು ವರ್ಷಕ್ಕೊಮ್ಮೆ ದೊಡ್ಡ ನಿಃಶ್ವಾಸ ಉಂಟಾಗುತ್ತದೆ. ಆಗ ಶೈಲವನಕಾನನಗಳಿಂದ ಕೂಡಿದ ಭೂಮಿಯು ಕಂಪಿಸುತ್ತದೆ. ಅವನ ನಿಃಶ್ವಾಸದಿಂದ ಉಂಟಾದ ವಾಯುವಿನಿಂದ ಧೂಳಿನ ದೊಡ್ಡ ಸಮೂಹವು ಮೇಲಕ್ಕೇಳುತ್ತದೆ.

ಆದಿತ್ಯಪಥಮಾಶ್ರಿತ್ಯ ಸಪ್ತಾಹಂ ಭೂಮಿಕಂಪನಮ್ ।
ಸವಿಸ್ಫುಲಿಂಗಂ ಸಜ್ವಾಲಂ ಸಧೂಮಂ ಹ್ಯಗ್ನಿದಾರುಣಮ್ ।
ನ ತೇನ ರಾಜನ್ ಶಕ್ನೋಮಿ ತಸ್ಮಿನ್ ಸ್ಥಾತುಂ ಸ್ವಆಶ್ರಮೇ ॥೫೭॥

ಆ ಧೂಳು ಸೂರ್ಯಪಥವನ್ನು ಆವರಿಸುತ್ತದೆ. ಏಳುದಿನಗಳ ಕಾಲ ಭೂಕಂಪವಾಗುತ್ತದೆ. ಕಿಡಿಗಳು ಜ್ವಾಲೆಗಳು ಮತ್ತು ಧೂಮದಿಂದ ಕೂಡಿದ ದಾರುಣವಾದ ಅಗ್ನಿಯು ಭೂಮಿಯಿಂದ ಹೊರಬರುತ್ತದೆ. ಎಲೈ ರಾಜನೇ, ಆ ಕಾರಣದಿಂದ ನಾನು ನನ್ನ ಆಶ್ರಮದಲ್ಲಿ ಇರಲು ಸಾಧ್ಯವಾಗುವುದಿಲ್ಲ.

ತಂ ವಿನಾಶಯ ರಾಜೇಂದ್ರ ಲೋಕಾನಾಂ ಹಿತಕಾಮ್ಯಯಾ ।
ಲೋಕಾಃ ಸ್ವಸ್ಥಾ ಭವಂತ್ವದ್ಯ ತಸ್ಮಿನ್ ವಿನಿಹತೇ ಯುಧಿ ॥೫೮॥

ಎಲೈ ರಾಜೇಂದ್ರನೇ, ಲೋಕಗಳಿಗೆ ಹಿತವನ್ನು ಬಯಸಿ ಅವನನ್ನು ವಿನಾಶಗೊಳಿಸು. ಅವನು ಯುದ್ಧದಲ್ಲಿ ಸಂಹರಿಸಲ್ಪಟ್ಟರೆ ಈ ದಿನ ಎಲ್ಲ ಜನರೂ ಸ್ವಸ್ಥರಾಗುತ್ತಾರೆ.

ಧುಂಧುನಾಮಾನಮತ್ಯುಗ್ರಂ ದಾನವಂ ಘೋರವಿಗ್ರಹಮ್ ।
ಸಮರೇ ಘೋರತುಮುಲೇ ವಿನಾಶಯ ಮಹೇಷುಣಾ ॥೫೯॥

ಘೋರ ಶರೀರವನ್ನು ಹೊಂದಿದ ಅತಿಕ್ರೂರನಾದ ದಾನವನಾದ ಧುಂಧುವನ್ನು ಘೋರವಾದ ಮತ್ತು ತೀವ್ರವಾದ ಯುದ್ಧದಲ್ಲಿ ನೀನು ದೊಡ್ಡ ಬಾಣದಿಂದ ಸಂಹಾರವನ್ನು ಮಾಡು.

ತ್ವಂ ಹಿ ತಸ್ಯ ವಿನಾಶಾಯ ಪರ್ಯಾಪ್ತ ಇತಿ ಮೇ ಮತಿಃ ।
ತೇಜಸಾ ತವ ತೇಜಶ್ಚ ವಿಷ್ಣುರಾಪ್ಯಾಯಯಿಷ್ಯತಿ ॥೬೦॥

ಅವನನ್ನು ಸಂಹರಿಸುವುದಕ್ಕೆ ನೀನು ಸಮರ್ಥನಾಗಿದ್ದೀಯೆ ಎಂದು ನನ್ನ ಅಭಿಪ್ರಾಯ. ವಿಷ್ಣುವು ತನ್ನ ತೇಜಸ್ಸಿನಿಂದ ನಿನ್ನ ತೇಜಸ್ಸನ್ನು ತುಂಬುವನು.

ವಿಷ್ಣುನಾ ಚ ವರೋ ದತ್ತೋ ಮಮ ಪೂರ್ವಂ ತು ತದ್ವಧೇ ॥೬೧॥

ಯಸ್ತಂ ಮಹಾಸುರಂ ರೌದ್ರಂ ವಧಿಷ್ಯತಿ ಮಹೀಪತಿಃ ।
ತೇಜಸ್ತದ್ವೈಷ್ಣವಮಿತಿ ಪ್ರವೇಕ್ಷ್ಯತಿ ದುರಾಸದಮ್ ॥೬೨॥

ಯಾವ ರಾಜನು ಘೋರನಾದ ಆ ಮಹಾಸುರನನ್ನು ಸಂಹರಿಸುತ್ತಾನೆಯೋ ಅವನಲ್ಲಿ ದುರಾಸದವಾದ ನನ್ನ ವೈಷ್ಣವ ತೇಜಸ್ಸು ಪ್ರವೇಶಿಸುವುದು ಎಂದು ಅವನ ವಧೆಯ ವಿಷಯದಲ್ಲಿ ಹಿಂದೆ ವಿಷ್ಣುವು ನನಗೆ ವರವನ್ನು ಕೊಟ್ಟಿದ್ದಾನೆ.

ತತ್ತೇಜಸ್ತ್ವಂ ಸಮಾಧಾಯ ರಾಜೇಂದ್ರ ಭವ ದುಃಸಹಃ ।
ತಂ ನಿಷೂದಯ ಸಂದಿಷ್ಟೋ ದೈತ್ಯಂ ರೌದ್ರಪರಾಕ್ರಮಮ್ ॥೬೩॥

ಎಲೈ ರಾಜೇಂದ್ರನೇ, ಆ ತೇಜಸ್ಸನ್ನು ನಿನ್ನಲ್ಲಿ ಆಧಾನ ಮಾಡಿಕೊಂಡು ನೀನು ದುಃಸಹನಾಗು. ನನ್ನಿಂದ ಸಂದಿಷ್ಟನಾಗಿ ರುದ್ರಪರಾಕ್ರಮವುಳ್ಳ ಆ ದೈತ್ಯನನ್ನು ಸಂಹರಿಸು.

ನ ಹಿ ಧುಂಧುರ್ಮಹಾತೇಜಾಃ ತೇಜಸಾऽಲ್ಪೇನ ಶಕ್ಯತೇ ।
ನಿರ್ದಗ್ಧುಂ ಪೃಥಿವೀಪಾಲ ಸ ಹಿ ವರ್ಷಶತೈರಪಿ ॥೬೪॥

ಎಲೈ ರಾಜನೇ, ಮಹಾತೇಜಸ್ವಿಯಾದ ಧುಂಧುವನ್ನು ಅಲ್ಪತೇಜಸ್ಸಿನಿಂದ ನೂರುವರ್ಷ ಯುದ್ಧಮಾಡಿದರೂ ದಹಿಸಲು ಸಾಧ್ಯವಿಲ್ಲ. ಇದು ಪ್ರಸಿದ್ಧವಾದುದು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನನವತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಚತುರ್ದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ಎಂಬತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ತನೆಯ ಅಧ್ಯಾಯ

ತನ್ನ ಪುತ್ರನಾದ ಕುವಲಾಶ್ವನು ಧುಂಧುವಧೆ ಮಾಡುವನೆಂದು ಹೇಳಿ ಬೃಹದಶ್ವನ ವನಗಮನ. ಧುಂಧುಜನ್ಮಕ್ಕೆ ಉಪೋದ್ಘಾತವಾಗಿ ಮಧುಕೈಟಭರ ವೃತ್ತಾಂತ.

ಮಾರ್ಕಂಡೇಯಃ

ಸ ಏವಮುಕ್ತೋ ರಾಜರ್ಷಿರುದಂಕೇನಾಪರಾಜಿತಃ ।
ಉದಂಕಂ ಕೌರವಶ್ರೇಷ್ಠ ಕೃತಾಂಜಲಿರಥಾಬ್ರವೀತ್ ॥೧॥

ಮಾರ್ಕಂಡೇಯ– ಎಲೈ ಕೌರವಶ್ರೇಷ್ಠನೇ, ಉದಂಕನಿಂದ ಹೀಗೆ ಹೇಳಲ್ಪಟ್ಟ ಅಪರಾಜಿತನಾದ ರಾಜರ್ಷಿಯಾದ ಬೃಹದಶ್ವನು ಅನಂತರ ಕೈಗಳನ್ನು ಮುಗಿದು ಉದಂಕನನ್ನು ಕುರಿತು ಹೇಳಿದನು.

ನಹಿ ಮೇ ಗಮನಂ ಬ್ರಹ್ಮನ್ ಮೋಘಮೇತದ್ ಭವಿಷ್ಯತಿ ।
ಪುತ್ರೋ ಮಮಾಪಿ ಭಗವನ್ ಕುವಲಾಶ್ವ ಇತಿ ಸ್ಮೃತಃ ॥೨॥

ಬ್ರಾಹ್ಮಣನೇ, ನನ್ನ ಈ ವನಗಮನವು ವ್ಯರ್ಥವಾಗುವುದಿಲ್ಲ. ಪೂಜ್ಯನೇ, ನನಗೆ ಕುವಲಾಶ್ವನೆಂಬ ಒಬ್ಬ ಮಗನೂ ಇದ್ದಾನೆ.

ಧೃತಿಮಾನ್ ಕ್ಷಿಪ್ರಕಾರೀ ಚ ವೀರ್ಯೇಣಾಪ್ರತಿಮೋ ಭುವಿ ।
ಪ್ರಿಯಂ ವೈ ಸರ್ವಮೇತತ್ ತೇ ಕರಿಷ್ಯತಿ ನ ಸಂಶಯಃ ॥೩॥

ಅವನು ಧೈರ್ಯಶಾಲಿ, ಕ್ಷಿಪ್ರಕಾರಿ ಮತ್ತು ಭೂಮಿಯಲ್ಲಿ ಅಸದೃಶಪರಾಕ್ರಮ ಉಳ್ಳವನು. ಅವನು ನಿನಗೆ ಪ್ರಿಯವಾದ ಇದನ್ನೆಲ್ಲಾ ಮಾಡುವನು. ಇದರಲ್ಲಿ ಸಂಶಯವಿಲ್ಲ.

ಪುತ್ರೈಃ ಪರಿವೃತಃ ಸರ್ವೈಃ ಶೂರೈಃ ಪರಿಘಬಾಹುಭಿಃ ।
ಹನಿಷ್ಯತಿ ಮಹಾಬಾಹುಸ್ತಂ ವೈ ಧುಂಧುಂ ಮಹಾಸುರಮ್ ।
ವಿಸರ್ಜಯಸ್ವ ಮಾಂ ಬ್ರಹ್ಮನ್ ನ್ಯಸ್ತಶಸ್ತ್ರೋಽಸ್ಮಿ ಸಾಂಪ್ರತಮ್ ॥೪॥

ಮಹಾಬಾಹುವಾದ ಅವನು ಪರಿಘಬಾಹುವುಳ್ಳ ತನ್ನ ಶೂರರಾದ ಪುತ್ರರಿಂದೊಡಗೂಡಿ ಮಹಾಸುರನಾದ ಧುಂಧುವನ್ನು ಕೊಲ್ಲುವನು. ಬ್ರಾಹ್ಮಣನೇ, ನನ್ನನ್ನು ಈಗ ಬೀಳ್ಕೊಡು. ನಾನು ಶಸ್ತ್ರಸಂನ್ಯಾಸವನ್ನು ಮಾಡಿದ್ದೇನೆ.

ತಥಾऽಸ್ತ್ವಿತಿ ಚ ತೇನೋಕ್ತೋ ಮುನಿನಾऽಮಿತತೇಜಸಾ ।
ಸ ತಮಾದಿಶ್ಯ ತನಯಮುದಂಕಾಯ ಮಹಾತ್ಮನೇ ॥೫॥

ಕ್ರಿಯತಾಮಿತಿ ರಾಜರ್ಷಿರ್ಜಗಾಮ ವನಮುತ್ತಮಮ್ ॥೬॥

ಅಮಿತತೇಜಸ್ವಿಯಾದ ಉದಂಕಮುನಿಯಿಂದ ಹಾಗೆಯೇ ಆಗಲಿ ಎಂದು ಹೇಳಲ್ಪಟ್ಟ ಬೃಹದಶ್ವನು ತನ್ನ ಮಗನನ್ನು ಮಹಾತ್ಮನಾದ ಉದಂಕನ ಆದೇಶದಲ್ಲಿಟ್ಟು, ಉದಂಕರ ಆಜ್ಞೆಯನ್ನು ಪಾಲಿಸು ಎಂದು ಹೇಳಿ ಶ್ರೇಷ್ಠವಾದ ತಪೋವನಕ್ಕೆ ಹೊರಟು ಹೋದನು.

ಯುಧಿಷ್ಠಿರಃ

ಕ ಏಷ ಭಗವನ್ ದೈತ್ಯೋ ಮಹಾವೀರ್ಯಸ್ತಪೋಧನ ।
ಕಸ್ಯ ಪುತ್ರೋऽಥ ನಪ್ತಾ ವಾ ಏತದಿಚ್ಛಾಮಿ ವೇದಿತುಮ್ ॥೭॥

ಯುಧಿಷ್ಠಿರ– ಪೂಜ್ಯನೇ, ತಪೋಧನನೇ, ಈ ಮಹಾಪರಾಕ್ರಮಿಯಾದ ಧುಂಧು ದೈತ್ಯನು ಯಾರು? ಇವನು ಯಾರ ಮಗ? ಅಥವಾ ಮೊಮ್ಮಗ? ಇದನ್ನು ತಿಳಿಯಲು ಬಯಸುತ್ತೇನೆ.

ಏವಂ ಮಹಾವೀರ್ಯಬಲೋ ನ ಶ್ರುತೋ ಮೇ ತಪೋಧನ ।
ಯಸ್ಯ ನಿಃಶ್ವಾಸವಾತೇನ ಕಂಪತೇ ಭೂಃ ಸಪರ್ವತಾ ॥೮॥

ಎಲೈ ತಪೋಧನನೇ, ಯಾವನ ನಿಃಶ್ವಾಸದಿಂದ ಉಂಟಾದ ವಾಯುವಿನಿಂದ ಪರ್ವತ ಸಹಿತವಾದ ಭೂಮಿಯು ಕಂಪಿಸುತ್ತದೆಯೋ, ಅಂತಹ ಮಹಾಪರಾಕ್ರಮ ಮತ್ತು ಬಲವನ್ನು ಹೊಂದಿದ ವ್ಯಕ್ತಿಯನ್ನು ನಾನು ಹಿಂದೆ ಕೇಳಲಿಲ್ಲ.

ಏತದಿಚ್ಛಾಮಿ ಭಗವನ್ ಯಾಥಾತಥ್ಯೇನ ವೇದಿತುಮ್ ।
ಸರ್ವಮೇವ ಮಹಾಪ್ರಾಜ್ಞ ವಿಸ್ತರೇಣ ತಪೋಧನ ॥೯॥

ಪೂಜ್ಯರೇ, ನಾನು ಇದನ್ನು ಸರಿಯಾಗಿ ತಿಳಿಯಲು ಬಯಸುತ್ತೇನೆ. ತಪೋಧನರೇ, ಮಹಾಪ್ರಾಜ್ಞರೇ, ನನಗೆ ಎಲ್ಲವನ್ನೂ ವಿಸ್ತಾರವಾಗಿ ಹೇಳಿ.

ಮಾರ್ಕಂಡೇಯಃ

ಶೃಣು ರಾಜನ್ನಿದಂ ಸರ್ವಂ ಯಥಾವೃತ್ತಂ ನರಾಧಿಪ ।
ಏಕಾರ್ಣವೇ ನಿರಾಲೋಕೇ ನಷ್ಟೇ ಸ್ಥಾವರಜಂಗಮೇ ।
ಪ್ರನಷ್ಟೇಷು ಚ ಭೂತೇಷು ಸರ್ವೇಷು ಭರತರ್ಷಭ ॥೧೦॥

ಪ್ರಭವಂ ಲೋಕಕರ್ತಾರಂ ವಿಷ್ಣುಂ ಶಾಶ್ವತಮವ್ಯಯಮ್ ।
ಚತುರ್ಭುಜಮುದಾರಾಂಗಂ ದೃಷ್ಟವಾನಸ್ಮಿ ಭಾರತ ॥೧೧॥

ಮಾರ್ಕಂಡೇಯ– ಎಲೈ ರಾಜನೇ, ನರಾಧಿಪನೇ, ಇದೆಲ್ಲವೂ ಹೇಗೆ ನಡೆಯಿತು ಎಂದು ಕೇಳು. ಎಲೈ ಭರತರ್ಷಭನೇ, ಸ್ಥಾವರಜಂಗಮವೆಲ್ಲವೂ ನಾಶವನ್ನು ಹೊಂದಿ ಉಳಿದ ಎಲ್ಲಾ ಪ್ರಾಣಿಗಳೂ ನಾಶವನ್ನು ಹೊಂದಿ ಯಾವ ಪ್ರಕಾಶವೂ ಇಲ್ಲದೇ ಏಕಾರ್ಣವವಾಗಿದ್ದ ಪ್ರಳಯಸಮಯದಲ್ಲಿ ನಾನು ಲೋಕಕರ್ತವಾದ ಶಾಶ್ವತನಾದ ಅವ್ಯಯನಾದ ಚತುರ್ಭುಜನಾದ ಸುಂದರಾಂಗನಾದ ಸರ್ವಸಂಪತ್ತಿಗೆ ಒಡೆಯನಾದ ವಿಷ್ಣುವನ್ನು ನೋಡಿದೆನು.

ಸುಷ್ವಾಪ ಭಗವಾನ್ ವಿಷ್ಣುರಹಿಶಯ್ಯಾಂ ಸ ವೈ ಹಿ ।
ನಾಗಸ್ಯ ಭೋಗೇ ಮಹತಿ ಶೇಷಸ್ಯಾಮಿತತೇಜಸಃ ॥೧೨॥

ಆದೇ ಭಗವಂತನಾದ ವಿಷ್ಣುವು ಅಮಿತತೇಜಸ್ವಿಯಾದ ಶೇಷನ ಮಂಚದ ಮೇಲೆ ಶೇಷನ ಆ ದೊಡ್ಡ ಶರೀರದ ಮೇಲೆ ಮಲಗಿದ್ದನು.

ಲೋಕಕರ್ತಾ ಮಹಾಭಾಗ ಭಗವಾನಚ್ಯುತೋ ಹರಿಃ ।
ನಾಗಭೋಗೇನ ಮಹತಾ ಪರಿಗೃಹ್ಯ(ರಭ್ಯ) ಚ ಮೇದಿನೀಮ್ ॥೧೩॥

ಸ್ವಪತಸ್ತಸ್ಯ ದೇವಸ್ಯ ಪದ್ಮಂ ಸೂರ್ಯಸಮಪ್ರಭಮ್ ।
ನಾಭ್ಯಾ ವಿನಿಸೃತಂ ದಿವ್ಯಂ ಯತ್ರೋತ್ಪನ್ನಃ ಪಿತಾಮಹಃ ॥೧೪॥

ಸಾಕ್ಷಾಲ್ಲೋಕಗುರುರ್ಬ್ರಹ್ಮಾ ಪದ್ಮೇ ಸೂರ್ಯೇಂದುಸಪ್ರಭಃ ॥೧೫॥

ಎಲೈ ಮಹಾಭಾಗ್ಯವಂತನೇ, ಲೋಕಕರ್ತವಾದ ಭಗವಂತನಾದ ಅಚ್ಯುತನಾದ ಹರಿಯು ವಿಸ್ತಾರವಾದ ಶೇಷಶರೀರದಲ್ಲಿ ಪ್ರಕೃತಿಯನ್ನು ತನ್ನ ಉದರದಲ್ಲಿಟ್ಟು

ಮಲಗಿರುವಾಗ ಅವನ ನಾಭಿಯಿಂದ ಸೂರ್ಯನಿಗೆ ಸಮಾನವಾದ ಕಾಂತಿಯುಳ್ಳ ಒಂದು ದಿವ್ಯವಾದ ಪದ್ಮವು ಹೊರಬಂದಿತು. ಅದರಲ್ಲಿ ಸಾಕ್ಷಾಲ್ಲೋಕಗುರುಗಳಾದ ಸೂರ್ಯಚಂದ್ರರಿಗೆ ಸಮಾನವಾದ ಕಾಂತಿಯುಳ್ಳ ಪಿತಾಮಹರಾದ ಬ್ರಹ್ಮದೇವರು ಜನಿಸಿದರು.

ಚತುರ್ವೇದಶ್ಚತುರ್ಮೂರ್ತಿಶ್ಚತುರ್ವರ್ಗಶ್ಚತುರ್ಮುಖಃ ।
ಸ್ವಪ್ರಭಾವಾದ್ ದುರಾಧರ್ಷೋ ಮಹಾಬಲಪರಾಕ್ರಮಃ ॥೧೬॥

ಅವರು ನಾಲ್ಕುವೇದಗಳನ್ನೂ ಬಲ್ಲವರು. ನಾಲ್ಕುಮುಖಗಳನ್ನುಳ್ಳವರು. ನಾಲ್ಕು ಮೂರ್ತಿಗಳನ್ನೂ ಮತ್ತು ನಾಲ್ಕುವರ್ಗಗಳನ್ನೂ ಹೊಂದಿದವರು. ಅವರು ಮಹಾಬಲಪರಾಕ್ರಮವುಳ್ಳವರು. ತಮ್ಮ ಪರಾಕ್ರಮದಿಂದಲೇ ಇನ್ನೊಬ್ಬರಿಗೆ ಸೋಲದವರು.

ಕಸ್ಯಚಿತ್ತ್ವಥ ಕಾಲಸ್ಯ ದಾನವೌ ವೀರ್ಯಸತ್ತಮೌ ।
ಮಧುಶ್ಚ ಕೈಟಭಶ್ಚೈವ ದೃಷ್ಟವಂತೌ ಹರಿಂ ಪ್ರಭುಮ್ ॥೧೭॥

ಸ್ವಲ್ಪಸಮಯದ ನಂತರ ಮಹಾಪರಾಕ್ರಮಶಾಲಿಗಳಾದ ಮಧುಕೈಟಭ ದಾನವರು ಪ್ರಭುವಾದ ಹರಿಯನ್ನು ನೋಡಿದರು.

ಶಯಾನಂ ಶಯನೇ ದಿವ್ಯೇ ನಾಗಭೋಗೇ ಮಹಾದ್ಯುತಿಮ್ ।
ಬಹುಯೋಜನವಿಸ್ತೀರ್ಣೇ ಬಹುಯೋಜನಮಾಯತೇ ॥೧೮॥

ಕಿರೀಟಕೌಸ್ತುಭಧರಂ ಪೀತಕೌಶೇಯವಾಸಸಮ್ ।
ದೀಪ್ಯಮಾನಂ ಶ್ರಿಯಾ ರಾಜನ್ ತೇಜಸಾ ವಪುಷಾ ತದಾ ।
ಸಹಸ್ರಸೂರ್ಯಪ್ರತಿಮಮದ್ಭುತೋಪಮದರ್ಶನಮ್ ॥೧೯॥

ಬಹುಯೋಜನ ವಿಸ್ತಾರವಾದ, ಬಹುಯೋಜನ ಉದ್ದವಾದ ದಿವ್ಯವಾದ ನಾಗಭೋಗರೂಪವಾದ ಹಾಸಿಗೆಯಲ್ಲಿ ಮಲಗಿದ, ಮಹಾಕಾಂತಿಯುಳ್ಳ, ಕಿರೀಟ ಕೌಸ್ತುಭಗಳನ್ನು ಧರಿಸಿದ, ರೇಷ್ಮೆ ಪೀತಾಂಬರವನ್ನು ಧರಿಸಿದ ತನ್ನ ಕಾಂತಿಯಿಂದಲೂ ಸಂಪತ್ತಿನಿಂದಲೂ ಮತ್ತು ದೇಹದಿಂದಲೂ ಬೆಳಗುತ್ತಿದ್ದಂತಹ ಸಹಸ್ರಸೂರ್ಯರಿಗೆ ಸಮಾನವಾಗಿದ್ದಂತಹ ಅದ್ಭುತದರ್ಶನ ಉಳ್ಳಂತಹ (ಹರಿಯನ್ನು ನೋಡಿದರು).

ವಿಸ್ಮಯಃ ಸುಮಹಾನಾಸೀನ್ಮಧುಕೈಟಭಯೋಸ್ತದಾ ।
ದೃಷ್ಟ್ವಾ ಪಿತಾಮಹಂ ಚೈವ ಪದ್ಮೇ ಪದ್ಮನಿಭೇಕ್ಷಣಮ್ ॥೨೦॥
ವಿತ್ರಾಸಯೇತಾಮಥ ತೌ ಬ್ರಹ್ಮಾಣಮಮಿತೌಜಸಮ್ ॥೨೧॥

ಆಗ ಮಧುಕೈಟಭರಿಗೆ ಬಹಳ ಆಶ್ಚರ್ಯವುಂಟಾಯಿತು. ಪದ್ಮದಲ್ಲಿ ಕುಳಿತಿದ್ದ ಪದ್ಮನೇತ್ರರಾದ ಪಿತಾಮಹರಾದ ಅಮಿತಶಕ್ತಿಶಾಲಿಯಾದ ಬ್ರಹ್ಮದೇವರನ್ನು ಅವರು ಹೆದರಿಸಿದರು.

ವಿತ್ರಾಸ್ಯಮಾನೋ ಬಹುಧಾ ಬ್ರಹ್ಮಾ ತಾಭ್ಯಾಂ ಮಹಾಯಶಾಃ ।
ಅಕಂಪಯತ್ ಪದ್ಮನಾಲಂ ತತೋಽಬುದ್ಧ್ಯ ತ ಕೇಶವಃ ॥೨೨॥

ಮಹಾಕೀರ್ತಿವಂತರಾದ ಬ್ರಹ್ಮದೇವರನ್ನು ಅವರಿಬ್ಬರೂ ಹೆದರಿಸಲು ಉದ್ಯುಕ್ತರಾದಾಗ ಪದ್ಮನಾಲವು ಅಲುಗಾಡಿತು. ಆಗ ಹರಿಯು ಎಚ್ಚರಗೊಂಡನು.

ಅಥಾಪಶ್ಯತ ಗೋವಿಂದೋ ದಾನವೌ ವೀರ್ಯಸತ್ತಮೌ ।
ದೃಷ್ಟ್ವಾ ತಾವಬ್ರವೀದ್ ದೇವಃ ಸ್ವಾಗತಂ ವಾಂ ಮಹಾಬಲೌ ।
ದದಾಮಿ ವಾಂ ವರಂ ಶ್ರೇಷ್ಠಂ ಪ್ರೀತಿರ್ಹಿ ಮಮ ಜಾಯತೇ ॥೨೩॥

ಆಗ ಗೋವಿಂದನು ಶೂರಶ್ರೇಷ್ಠರಾದ ಆ ದಾನವರನ್ನು ನೋಡಿದನು. ಆ ದೇವನು ಅವರನ್ನು ನೋಡಿ ಮಹಾಬಲರಾದ ನಿಮ್ಮಿಬ್ಬರಿಗೆ ಸ್ವಾಗತ. ನಿಮಗೆ ನಾನು ಶ್ರೇಷ್ಠವಾದ ವರವನ್ನು ಕೊಡುತ್ತೇನೆ. ನಿಮ್ಮನ್ನು ನೋಡಿದರೆ ನನಗೆ ಸಂತೋಷವಾಗುತ್ತದೆ ಎಂದು ಹೇಳಿದನು.

ತೌ ಪ್ರಹಸ್ಯ ಹೃಷೀಕೇಷಂ ಮಹಾದರ್ಪೌ ಮಹಾಬಲೌ ।
ಪ್ರತ್ಯಬ್ರೂತಾಂ ಮಹಾರಾಜ ಸಹಿತೌ ಮಧುಸೂದನಮ್ ॥೨೪॥

ಎಲೈ ಮಹಾರಾಜನೇ, ಮಹಾದರ್ಪವುಳ್ಳವರೂ, ಮಹಾಬಲಿಷ್ಠರೂ ಆದ ಅವರು ಸರ್ವೇಂದ್ರಿಯಪ್ರೇರಕನಾದ ಮಧುಸೂದನನಾದ ಹರಿಯನ್ನು ನೋಡಿ ಹಾಸ್ಯಮಾಡಿ ಮಾತನಾಡಿದರು.

ಆವಾಂ ವರಯ ದೇವ ತ್ವಂ ವರದೌ ಸ್ವಃಸುರೋತ್ತಮ ।
ದಾತಾರೌ ಸ್ವೋ ವರಂ ತುಭ್ಯಂ ತದ್ ಬ್ರವೀಹ್ಯವಿಚಾರಯನ್ ॥೨೫॥

ಎಲೈ ದೇವನೇ, ಎಲೈ ದೇವದೇವೋತ್ತಮನೇ, ನಾವೇ ವರವನ್ನು ಕೊಡುವೆವು. ಆದ್ದರಿಂದ ಏನೂ ಸಂಶಯವಿಲ್ಲದೆ ಏನು ವರಬೇಕೆಂದು ಹೇಳು ಎಂದು ಹೇಳಿದರು.

ಶ್ರೀಭಗವಾನ್

ಪ್ರತಿಗೃಹ್ಣೇ ವರಂ ವೀರಾವೀಪ್ಸಿತಂ ಚ ವರೋತ್ತಮಮ್ ।
ಯುವಾಂ ಹಿ ವೀರ್ಯಸಂಪನ್ನೌ ನ ವಾಮಸ್ತಿ ಸಮಃ ಪುಮಾನ್ ॥೨೬॥

ವಧ್ಯತ್ವಮುಪಗಚ್ಛೇತಾಂ ಮಮ ಸತ್ಯಪರಾಕ್ರಮೌ ।
ಏತದಿಚ್ಛಾಮ್ಯಹಂ ಕಾಮಂ ಪ್ರಾಪ್ತುಂ ಲೋಕಹಿತಾಯ ವೈ ॥೨೭॥

ಶ್ರೀಭಗವಾನ್- ಎಲೈ ವೀರರೇ, ನಾನು ನಿಮ್ಮಿಂದ ಶ್ರೇಷ್ಠವಾದ ವರವನ್ನು ಸ್ವೀಕರಿಸುತ್ತೇನೆ. ನೀವಿಬ್ಬರೂ ಬಹಳ ಬಲಶಾಲಿಗಳು. ನಿಮಗೆ ಸಮಾನನಾದ ಪುರುಷನಿಲ್ಲ. ಸತ್ಯಪರಾಕ್ರಮವುಳ್ಳ ನೀವಿಬ್ಬರು ನನ್ನಿಂದ ವಧ್ಯರಾಗಬೇಕು. ಲೋಕಹಿತಕ್ಕಾಗಿ ಈ ವರವನ್ನು ನಿಮ್ಮಿಂದ ಪಡೆಯಲು ಇಚ್ಛಿಸುತ್ತೇನೆ.

ಮಧುಕೈಟಭೌ

ಅನೃತಂ ನೋಕ್ತಪೂರ್ವಂ ನೌ ಸ್ವೈರೇಷ್ವಪಿ ಕುತೋಽನ್ಯಥಾ ।
ಸತ್ಯೇ ಧರ್ಮೇ ಚ ನಿರತೌ ವಿದ್ಧ್ಯಾವಾಂ ಪುರುಷೋತ್ತಮ ॥೨೮॥

ಮಧುಕೈಟಭರು– ನಾವಿಬ್ಬರೂ ಇದುವರೆಗೆ ವಿನೋದಕ್ಕಾಗಿಯೂ ಅನೃತವನ್ನು ಮಾತನಾಡಿಲ್ಲ. ಇನ್ನು ಬೇರೆ ಸಮಯದಲ್ಲಿ ಹೇಗೆ ಅನೃತವನ್ನು ಮಾತನಾಡುತ್ತೇವೆ? ಎಲೈ ಪುರುಷೋತ್ತಮನೇ, ನಾವಿಬ್ಬರೂ ಸತ್ಯದಲ್ಲಿಯೂ ಮತ್ತು ಧರ್ಮದಲ್ಲಿಯೂ ನಿರತರಾದವರೆಂದು ತಿಳಿ.

ಬಲೇ ವೀರ್ಯೇ ಚ ರೂಪೇ ಚ ಶಮೇ ನ ಚ ಸಮೋಽಸ್ತಿ ನೌ ।
ಧರ್ಮೇ ತಪಸಿ ದಾನೇ ಚ ಶೀಲಸತ್ತ್ವದಮೇಷು ಚ ॥೨೯॥

ಬಲದಲ್ಲಿ, ವೀರ್ಯದಲ್ಲಿ, ರೂಪದಲ್ಲಿ, ಶಮದಲ್ಲಿ ನಮ್ಮಿಬ್ಬರಿಗೆ ಸಮಾನರಾದವರು ಯಾರೂ ಇಲ್ಲ. ಧರ್ಮದಲ್ಲಿಯೂ, ತಪಸ್ಸಿನಲ್ಲಿಯೂ, ದಾನದಲ್ಲಿಯೂ, ಶೀಲಸತ್ತ್ವದಮಗಳಲ್ಲಿಯೂ ನಮಗೆ ಸಮಾನರಾದವರು ಯಾರೂ ಇಲ್ಲ.

ಉಪಪ್ಲವೋ ಮಹಾನಸ್ಮಾನುಪಾವರ್ತತ ಕೇಶವ ।
ಉಕ್ತಂ ಪ್ರತಿಕುರುಷ್ವ ತ್ವಂ ಕಾಲೋ ಹಿ ದುರತಿಕ್ರಮಃ ॥೩೦॥

ಕೇಶವನೇ, (ನಿನಗೆ ವರವನ್ನು ಕೊಟ್ಟು) ನಮಗೆ ದೊಡ್ಡ ಅನರ್ಥವು ಪ್ರಾಪ್ತವಾಯಿತು. ನೀನು ಹೇಳಿದಂತೆ ನಡೆದುಕೋ. ಕಾಲವನ್ನು ಯಾರೂ ಮೀರಲು ಸಾಧ್ಯವಿಲ್ಲ.

ಆವಾಮಿಚ್ಛಾವಹೇ ದೇವ ಕೃತಮೇಕಂ ತ್ವಯಾ ವಿಭೋ ।
ಅನಾಧೃ(ವೃ)ತೇ ತ್ವಮಾಕಾಶೇ ಜಹ್ಯಾವಾಂ ಸುರಸತ್ತಮ ॥೩೧॥

ಎಲೈ ವಿಭುವಾದ ದೇವನೇ, ನಾವಿಬ್ಬರೂ ನಿನ್ನಿಂದ ಇದೊಂದನ್ನು ಬಯಸುತ್ತೇವೆ. ಎಲೈ ಸುರಶ್ರೇಷ್ಠನೇ, ಆಧಾರವಿಲ್ಲದ ಆಕಾಶದಲ್ಲಿ ನೀನು ನಮ್ಮಿಬ್ಬರನ್ನೂ ಕೊಲ್ಲಬೇಕು.

ಪುತ್ರತ್ವಮಭಿಗಚ್ಛಾವಸ್ತವ ಚೈವ ಸುಲೋಚನ ।
ವರ ಏಷ ವೃತೋ ದೇವ ತದ್ ವಿದ್ಧಿ ಸುರಸತ್ತಮ ॥೩೨॥

ಎಲೈ ಸುಲೋಚನನೇ, ನಾವಿಬ್ಬರೂ ನಿನಗೆ ಪುತ್ರರಾಗಬೇಕು. ಎಲೈ ಸುರಶ್ರೇಷ್ಠನೇ, ಇದೇ ನಾವು ಕೇಳುವ ವರ. ಇದನ್ನು ನೀನು ತಿಳಿ.

ಶ್ರೀಭಗವಾನ್

ಬಾಢಮೇವಂ ಕರಿಷ್ಯಾಮಿ ಸರಮೇತದ್ ಭವಿಷ್ಯತಿ ॥೩೩॥

ಶ್ರೀಭಗವಾನ್– ಒಳ್ಳೆಯದು. ಹಾಗೆಯೇ ಮಾಡುವೆನು. ನೀವು ಹೇಳಿದಂತೆಯೇ ಎಲ್ಲವೂ ಆಗುವುದು.

ಚಿಂತಯನ್ನಥ ಗೋವಿಂದೋ ನಾಪಶ್ಯತ್ ತದನಾಧೃ(ವೃ)ತಮ್ ।
ಅವಕಾಶಂ ಪೃಥಿವ್ಯಾಂ ವಾ ದಿವಿ ವಾ ಮಧುಸೂದನಃ ॥೩೪॥

ಅನಂತರ ಮಧುಸೂದನನಾದ ಗೋವಿಂದನು ಎಷ್ಟು ಆಲೋಚಿಸಿದರೂ, ಭೂಮಿಯಲ್ಲಾಗಲೀ ಅಥವಾ ಸ್ವರ್ಗದಲ್ಲಾಗಲೀ ಆಧಾರವಿಲ್ಲದ ಆಕಾಶವನ್ನು ಕಾಣಲಿಲ್ಲ.

ಸ್ವಕಾವನಾಧೃತಾವೂರೂ ದೃಷ್ಟ್ವಾ ದೇವವರಸ್ತದಾ ।
ಮಧುಕೈಟಭಾಯೋರ್ಗೃಹ್ಯ ಶಿರಸೀ ಮಧುಸೂದನಃ ।
ಚಕ್ರೇಣ ಶಿತಧಾರೇಣ ನ್ಯಕೃತಂತ ಮಹಾಯಶಾಃ ॥೩೫॥

ಆಗ ದೇವಶ್ರೇಷ್ಠನಾದ ಅವನು ಆಧಾರವಿಲ್ಲದ ತನ್ನ ತೊಡೆಗಳನ್ನು ನೋಡಿ ಮಧುಕೈಟಭರನ್ನು ಹಿಡಿದು ಮಹಾಕೀರ್ತಿವಂತನಾದ ಮಧುಸೂದನನಾದ ಅವನು ಹರಿತವಾದ ಅಲಗುಳ್ಳ ಸುದರ್ಶನ ಚಕ್ರದಿಂದ ಅವರ ತಲೆಗಳನ್ನು ಕತ್ತರಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ನವತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಪಂಚದಶೋಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ತನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ತೊಂದನೆಯ ಅಧ್ಯಾಯ

ಮಾರ್ಕಂಡೇಯರಿಂದ ದುಂದುಮಾರೋಪಾಖ್ಯಾನ ಕಥನ.

ಮಾರ್ಕಂಡೇಯಃ

ಧುಂಧುರ್ನಾಮ ಮಹಾರಾಜ ತಯೋಃ ಪುತ್ರೋ ಮಹಾದ್ಯುತಿಃ ।
ಸ ತಪೋತಪ್ಯತ ಮಹನ್ಮಹಾವೀರ್ಯಪರಾಕ್ರಮಃ ॥೧॥

ಮಾರ್ಕಂಡೇಯ– ಎಲೈ ಮಹಾರಾಜನೇ, ಮಹಾತೇಜಸ್ವಿಯಾದ ಧುಂಧು ಎಂಬುವನು ಆ ಮಧುಕೈಟಭರ ಪುತ್ರ. ಮಹಾವೀರ್ಯ ಪರಾಕ್ರಮವುಳ್ಳ ಅವನು ದೊಡ್ಡ ತಪಸ್ಸನ್ನು ಮಾಡಿದನು.

ಅತಿಷ್ಠದೇಕಪಾದೇನ ಕೃಶೋ ಧಮನಿಸಂತತಃ ।
ತಸ್ಮೈ ಬ್ರಹ್ಮಾ ದದೌ ಪ್ರೀತೋ ವರಂ ವವ್ರೇ ಸ ಚ ಪ್ರಭುಮ್ ॥೨॥

ಅವನು ಒಂದು ಪಾದದ ಮೇಲೆ ನಿಂತು ಕೃಶನೂ, ಧಮನಿಗಳು ಎದ್ದು ಕಾಣುವಂತಹವನೂ ಆದನು. ಬ್ರಹ್ಮದೇವರು ಸಂತುಷ್ಟರಾಗಿ ಅವನಿಗೆ ವರವನ್ನು ನೀಡಿದರು. ಅವನು ಆ ಪ್ರಭುಗಳಿಂದ ವರವನ್ನು ಬೇಡಿದನು.

ಧುಂಧುಃ

ದೇವದಾನವಯಕ್ಷಾಣಾಂ ಸರ್ಪಗಂಧರ್ವರಕ್ಷಸಾಮ್ ।
ಅವಧ್ಯೋಽಹಂ ಭವೇಯಂ ವೈ ವರ ಏಷ ವೃತೋ ಮಯಾ ॥೩॥

ಧುಂಧು– ನಾನು ದೇವದಾನವ ಯಕ್ಷರಿಂದಲೂ, ಸರ್ಪಗಂಧರ್ವ ರಾಕ್ಷಸರಿಂದಲೂ ಅವಧ್ಯನಾಗಬೇಕು. ಇದೇ ನಾನು ಬೇಡುವ ವರ.

ಮಾರ್ಕಂಡೇಯಃ

ಏವಂ ಭವತು ಗಚ್ಛೇತಿ ತಮುವಾಚ ಪಿತಾಮಹಃ ।
ಸ ಏವಮುಕ್ತಸ್ತತ್ಪಾದೌ ಮೂರ್ಧ್ನಾ ಸ್ಪೃಶ್ಯ ಜಗಾಮ ಹ ॥೪॥

ಮಾರ್ಕಂಡೇಯ– ಬ್ರಹ್ಮದೇವರು ಅವನನ್ನು ಕುರಿತು ಹಾಗೆಯೇ ಆಗಲಿ ಎಂದು ಹೇಳಿದರು. ಅವನು ಬ್ರಹ್ಮದೇವರ ಪಾದಗಳಿಗೆ ಶಿರಸ್ಸಿನಿಂದ ನಮಸ್ಕಾರವನ್ನು ಮಾಡಿ ಅಲ್ಲಿಂದ ಹೊರಟನು.

ಸ ತು ಧುಂಧುರ್ವರಂ ಲಬ್ಧ್ವಾ ಮಹಾವೀರ್ಯಪರಾಕ್ರಮಃ ।
ಅನುಸ್ಮರನ್ ಪಿತೃವಧಂ ದ್ರುತಂ ವಿಷ್ಣುಮುಪಾಗಮತ್ ॥೫॥

ಮಹಾವೀರ್ಯಪರಾಕ್ರಮವುಳ್ಳ ಆ ಧುಂಧುವಾದರೂ ವರವನ್ನು ಪಡೆದು ತನ್ನ ತಂದೆಯ ವಧೆಯನ್ನು ಸ್ಮರಿಸುತ್ತಾ ಶೀಘ್ರವಾಗಿ ವಿಷ್ಣುವಿನ ಕಡೆಗೆ ಹೋದನು.

ಸ ತು ದೇವಾನ್ ಸಗಂಧರ್ವಾನ್ ಜಿತ್ವಾ ಧುಂಧುರಮರ್ಷಣಃ ।
ಬಬಾಧ ಸರ್ವಾನಸಕೃದ್ ವಿಷ್ಣುಂ ದೇವಾಂಶ್ಚ ವೈ ಭೃಶಮ್ ॥೬॥

ದುಷ್ಪಾತ್ಮನಾದ ಅವನು ಅಸಹನೆಯಿಂದ ಕೂಡಿದವನಾಗಿ ದೇವತೆಗಳನ್ನೂ, ಗಂಧರ್ವರನ್ನೂ ಬಾಧಿಸಿದನು. ಅನೇಕ ಬಾರಿ ಎಲ್ಲ ದೇವತೆಗಳನ್ನೂ ಮತ್ತು ವಿಷ್ಣುವನ್ನೂ ಸಹ ಬಹಳವಾಗಿ ಬಾಧಿಸಿದನು.

ಸಮುದ್ರೇ ವಾಲುಕಾಪೂರ್ಣೇ ಉಜ್ಜಾನಕ ಇತಿ ಸ್ಮೃತೇ ।
ಆಗಮ್ಯ ಚ ಸ ದುಷ್ಪಾತ್ಮಾ ತಂ ದೇಶಂ ಭರತರ್ಷಭ ।
ಬಾಧತೇ ಸ್ಮ ಪರಂ ಶಕ್ತ್ಯಾ ತಮುತ್ತಂಕಾಶ್ರಮಂ ವಿಭೋ ॥೭॥

ಎಲೈ ಭರತರ್ಷಭನೇ, ಎಲೈ ವಿಭುವೇ, ಮರಳಿನಿಂದ ಕೂಡಿದ ಉಜ್ಜಾನಕ ಎಂಬ ಸಮುದ್ರದ ಒಳಗಿನ ಪ್ರವೇಶದಲ್ಲಿ ಆ ದುಷ್ಪಾತ್ಮನು ವಾಸವನ್ನು ಮಾಡಿ ಅಲ್ಲಿಂದ ಬಂದು ತನ್ನ ಎಲ್ಲಾ ಶಕ್ತಿಯನ್ನು ಉಪಯೋಗಿಸಿ ಉತ್ತಂಕಾಶ್ರಮವನ್ನು ಬಾಧಿಸುತ್ತಿದ್ದನು.

ಅಂತರ್ಭೂಮಿಗತಸ್ತತ್ರ ವಾಲುಕಾಂತರ್ಹಿತಸ್ತಥಾ ॥೮॥

ಮಧುಕೈಟಭಯೋಃ ಪುತ್ರೋ ಧುಂಧುರ್ಭೀಮಪರಾಕ್ರಮಃ ।
ಶೇತೇ ಲೋಕವಿನಾಶಾಯ ತಪೋಬಲಮುಪಾಶ್ರಿತಃ ।
ಉದಂಕಸ್ಯಾಶ್ರಮಾಭ್ಯಾಶೇ ನಿಃಶ್ವಸನ್ ಪಾವಕಾರ್ಚಿಷಃ ॥೯॥

ಮರಳುಗಳಿಂದ ಮುಚ್ಚಿದ ಭೂಮಿಯ ಒಳಗೆ ವಾಸಮಾಡುವವನಾಗಿ ಮಧುಕೈಟಭರ ಪುತ್ರನಾದ ಭಯಂಕರ ಪರಾಕ್ರಮವುಳ್ಳ ಶಯನವನ್ನು ಮಾಡುತ್ತಿದ್ದನು. ತಪೋಬಲವನ್ನು ಹೊಂದಿದವನಾಗಿ ಲೋಕವನ್ನು ವಿನಾಶಮಾಡುವುದಕ್ಕೋಸ್ಕರ ಉದಂಕ ಋಷಿಗಳ ಆಶ್ರಮದ ಬಳಿ ಉಸಿರನ್ನು ಬಿಟ್ಟು ಬೆಂಕಿಯ ಕಿಡಿಗಳನ್ನು ಹೊರಹಾಕುತ್ತಿದ್ದನು. (ಕೆಲವು ಪಾಠಗಳಲ್ಲಿ ಉದಂಕ ಎಂಬುದಕ್ಕೆ ಬದಲಾಗಿ ಉತ್ತಂಕ ಎಂದಿದೆ).

ಏತಸ್ಮಿನ್ನೇವ ಕಾಲೇ ತು ರಾಜಾ ಸಬಲವಾಹನಃ ।
ಕುವಲಾಶ್ವೋ ನರಪತಿರನ್ವಿತೋ ಬಲಶಾಲಿನಾಮ್ ॥೧೦॥

ಸಹಸ್ರೈರೇಕವಿಂಶತ್ಯಾ ಪುತ್ರಾಣಾಮರಿಮರ್ದನಃ ।
ಪ್ರಾಯಾದುದಂಕಸಹಿತೋ ಧುಂಧೋಸ್ತಸ್ಯ ವಧಾಯ ವೈ ॥೧೧॥

ಆ ಸಮಯದಲ್ಲಿಯೇ ರಾಜನಾದ ಕುವಲಾಶ್ವನು ತನ್ನ ಬಲವಾಹನಗಳಿಂದ ಕೂಡಿದವನಾಗಿ ಬಲಿಷ್ಠರಾದ ಇಪ್ಪತ್ತೊಂದು ಸಹಸ್ರ ಪುತ್ರರಿಂದಲೂ ಕೂಡಿದವನಾಗಿ ಉದಂಕ ಸಹಿತನಾಗಿ ಧುಂಧುವಿನ ವಧೆಯನ್ನು ಉದ್ದೇಶಿಸಿ ಅಲ್ಲಿಗೆ ಬಂದನು.

ತಮಾವಿಶತ್ ತತೋ ವಿಷ್ಣುರ್ಭಗವಾಂಸ್ತೇಜಸಾ ಪ್ರಭುಃ ।
ಉತ್ತಂಕಸ್ಯ ನಿಯೋಗೇನ ಲೋಕಾನಾಂ ಹಿತಕಾಮ್ಯಯಾ ॥೧೨॥

ಉತ್ತಂಕನ ಪ್ರಾರ್ಥನೆಯಂತೆ ಲೋಕಗಳಿಗೆ ಹಿತವನ್ನುಂಟು ಮಾಡಲು ಬಯಸಿ ಭಗವಂತನಾದ ಪ್ರಭುವಾದ ವಿಷ್ಣುವು ತನ್ನ ತೇಜಸ್ಸಿನಿಂದ ಕುವಲಾಶ್ವನನ್ನು ಪ್ರವೇಶಿಸಿದನು.

ತಸ್ಮಿನ್ ಪ್ರಯಾತೇ ದುರ್ಧರ್ಷೇ ದಿವಿ ಶಬ್ದೋ ಮಹಾನಭೂತ್ ।
ಏಷ ಶ್ರೀಮಾನವಧ್ಯೋಽದ್ಯ ಧುಂಧುಮಾರೋ ಭವಿಷ್ಯತಿ ॥೧೩॥

ದುರ್ಧರ್ಷನಾದ ಅವನು ಯುದ್ಧಕ್ಕಾಗಿ ಪ್ರಯಾಣ ಮಾಡುತ್ತಿರಲು ಆಕಾಶದಲ್ಲಿ ಈ ಕಾಂತಿಯುಕ್ತನಾದ ಅವಧ್ಯನಾದ ಕುವಲಾಶ್ವನು ಈ ದಿನ ಧುಂಧುವನ್ನು ವಧೆ ಮಾಡುವನು ಎಂಬ ಮಾತುಗಳು ಕೇಳಿಬಂದವು.

ದಿವ್ಯೈಶ್ಚ ಪುಷ್ಪೈರ್ವಸ್ತಂ ದೇವಾಃ ಸಮಂತಾತ್ ಪರ್ಯವಾರಯನ್ ।
ದೇವದುಂದುಭಯಶ್ಚಾಪಿ ನೇದುಃ ಸ್ವಯಮನೀರಿತಾಃ ॥೧೪॥

ದೇವತೆಗಳು ಕುವಲಾಶ್ವನ ಸುತ್ತಲೂ ಪುಷ್ಪವೃಷ್ಟಿಯನ್ನು ಸುರಿಸಿದರು. ದೇವ ದುಂಧುಭಿಗಳು ತಾವಾಗಿಯೇ ಮೊಳಗಿದವು.

ಶೀತಶ್ಚ ವಾಯುಃ ಪ್ರವವೌ ಪ್ರಯಾಣೇ ತಸ್ಯ ಧೀಮತಃ ॥೧೫॥

ವಿಪಾಂಸುಲಾಂ ಮಹೀಂ ಕುರ್ವನ್ ವವರ್ಷ ಚ ಸುರೇಶ್ವರಃ ।
ಪ್ರದಕ್ಷಿಣಾಶ್ಚಾಪ್ಯಭವನ್ ವನ್ಯಾಸ್ತಂ ಸಮೃಗದ್ವಿಜಾಃ ॥೧೬॥

ಆ ಮೇಧಾವಿಯು ಪ್ರಯಾಣ ಮಾಡುವಾಗ ತಂಪಾದ ವಾಯುವು ಬೀಸಿತು. ಇಂದ್ರನು ಭೂಮಿಯ ಧೂಳನ್ನು ಅಡಗಿಸುತ್ತಾ ಮೃದುವಾಗಿ ಮಳೆಯನ್ನು ಸುರಿಸಿದನು. ಕಾಡಿನ ಮೃಗಪಕ್ಷಿಗಳು ಅವನ ಬಲಭಾಗದಲ್ಲಿ ಹೋದವು.

ಅಂತರಿಕ್ಷೇ ವಿಮಾನಾದಿ ದೇವತಾನಾಂ ಯುಧಿಷ್ಠಿರ ।
ತತ್ರೈವ ಸಮದೃಶ್ಯಂತ ಧುಂಧುರ್ಯತ್ರ ಮಹಾಸುರಃ ॥೧೭॥

ಎಲೈ ಯುಧಿಷ್ಠಿರನೇ, ಅಂತರಿಕ್ಷದಲ್ಲಿ ದೇವತೆಗಳ ವಿಮಾನಾದಿಗಳು ಮಹಾಸುರನಾದ ಧುಂಧುವು ಎಲ್ಲಿದ್ದನೋ ಅಲ್ಲಿಯೇ ಕಂಡುಬಂದವು.

ಕುವಲಾಶ್ವಸ್ಯ ಧುಂಧೋಶ್ಚ ಯುದ್ಧಕೌತೂಹಲಾನ್ವಿತಾಃ ।
ದೇವಗಂಧರ್ವಸಹಿತಾಃ ಸಮವೈಕ್ಷನ್ ಮಹರ್ಷಯಃ ॥೧೮॥

ಕುವಲಾಶ್ವಮತ್ತು ಧುಂಧುವಿನ ಯುದ್ಧವನ್ನು ನೋಡಲು ಕುತೂಹಲಾನ್ವಿತರಾದ ದೇವಗಂಧರ್ವಸಹಿತರಾದ ಮಹರ್ಷಿಗಳು ಅದನ್ನು ನೋಡಿದರು.

ನಾರಾಯಣೇನ ಕೌರವ್ಯ ತೇಜಸಾऽऽಪ್ಯಾಯಿತಸ್ತದಾ ।
ಸ ಗತೋ ನೃಪತಿಃ ಕ್ಷಿಪ್ರಂ ಪುತ್ರೈಸ್ತೈಃ ಸರ್ವತೋದಿಶಮ್ ॥೧೯॥

ಎಲೈ ಕೌರವ್ಯನೇ, ನಾರಾಯಣನ ತೇಜಸ್ಸಿನಿಂದ ಅಭಿವೃದ್ಧನಾದ ಆ ಕುವಲಾಶ್ವ ರಾಜನು ಶೀಘ್ರವಾಗಿ ತನ್ನ ಆ ಮಕ್ಕಳ ಜೊತೆಯಲ್ಲಿ ಹೊರಟನು.

ಅರ್ಣವಂ ಖಾನಯಾಮಾಸ ಕುವಲಾಶ್ವೋ ಮಹೀಪತಿಃ ॥೨೦॥

ಕುವಲಾಶ್ವಸ್ಯ ಪುತ್ರೈಶ್ಚ ತಸ್ಮಿನ್ ವೈ ವಾಲುಕಾರ್ಣವೇ ।
ಸಪ್ತಭಿರ್ದಿವಸೈಃ ಖಾತ್ವಾ ದೃಷ್ಟೋ ಧುಂಧುರ್ಮಹಾಬಲಃ ॥೨೧॥

ರಾಜನಾದ ಕುವಲಾಶ್ವನು ಎಲ್ಲ ದಿಕ್ಕುಗಳಲ್ಲಿಯೂ ಸಮುದ್ರವನ್ನು ಅಗೆಸಿದನು. ಕುವಲಾಶ್ವನ ಪುತ್ರರು ಆ ಮರಳಿನ ಸಮುದ್ರದಲ್ಲಿ ಏಳು ದಿವಸಗಳ ಕಾಲ ಅಗೆದು ಮಹಾಬಲನಾದ ಧುಂಧುವನ್ನು ನೋಡಿದರು.

ಆಸೀದ್ ಘೋರಂ ವಪುಸ್ತಸ್ಯ ವಾಲುಕಾಂತರ್ಹಿತಂ ಮಹತ್ ।
ದೀಪ್ಯಮಾನಂ ಯಥಾ ಸೂರ್ಯಸ್ತೇಜಸಾ ಭರತರ್ಷಭ ॥೨೨॥

ಎಲೈ ಭರತರ್ಷಭನೇ, ಮರಳಿನೊಳಗೆ ಹುದುಗಿದ್ದ ಅವನ ದೊಡ್ಡ ದೇಹವು ತನ್ನ ತೇಜಸ್ಸಿನಿಂದ ಬೆಳಗುವ ಸೂರ್ಯನಂತೆ ಘೋರವಾಗಿದ್ದಿತು.

ತತೋ ಧುಂಧುರ್ಮಹಾರಾಜ ದಿಶಮಾವೃತ್ಯ ಪಶ್ಚಿಮಾಮ್ ।
ಸುಪ್ತೋಽಭೂದ್ ರಾಜಶಾರ್ದೂಲ ಕಾಲಾನಲಸಮದ್ಯುತಿಃ ॥೨೩॥

ಎಲೈ ಮಹಾರಾಜನೇ, ಎಲೈ ರಾಜಶಾರ್ದೂಲನೇ, ಕಾಲಾನಲಕ್ಕೆ ಸಮನಾದ ಕಾಂತಿಯುಳ್ಳ ಆ ಧುಂಧುವು ಪಶ್ಚಿಮ ದಿಕ್ಕನ್ನು ಆವರಿಸಿ ಮಲಗಿದ್ದನು.

ಕುವಲಾಶ್ವಸ್ಯ ಪುತ್ರೈಸ್ತು ಸರ್ವತಃ ಪರಿವಾರಿತಃ ।
ಅಭಿದ್ರುತಃ ಶರೈಸ್ತೀಕ್ಷ್ಣೈರ್ಗದಾಭಿರ್ಮುಸಲೈರಪಿ ॥೨೪॥

ಪಟ್ಟಿಸೈಃ ಪರಿಘೈಃ ಪ್ರಾಸೈಃ ಖಡ್ಗೈಶ್ಚ ವಿಮಲೈಃ ಶಿತೈಃ ।
ಸ ವಧ್ಯಮಾನಃ ಸಂಕ್ರುದ್ಧಃ ಸಮುತ್ತಸ್ಥೌ ಮಹಾಬಲಃ ॥೨೫॥

ಕುವಲಾಶ್ವನ ಪುತ್ರರಿಂದ ಓಡಿ ಎಲ್ಲ ಕಡೆಯಿಂದಲೂ ಸುತ್ತುವರಿಯಲ್ಪಟ್ಟು ತೀಕ್ಷ್ಣವಾದ ಬಾಣಗಳಿಂದಲೂ ಗದೆಗಳಿಂದಲೂ, ಮುಸಲಗಳಿಂದಲೂ, ಪಟ್ಟಿಸಗಳಿಂದಲೂ, ಪರಿಘಗಳಿಂದಲೂ, ಪ್ರಾಸಗಳಿಂದಲೂ, ವಿಮಲವಾದ ಹರಿತವಾದ ಖಡ್ಗಗಳಿಂದಲೂ ಹೊಡೆಯಲ್ಪಟ್ಟ ಮಹಾಬಲನಾದ ಅವನು ಕೋಪಗೊಂಡವನಾಗಿ ಮೇಲೆದ್ದನು.

ಕ್ರುದ್ಧಶ್ಚಾಭಕ್ಷಯತ್ ತೇಷಾಂ ಶಸ್ತ್ರಾಣಿ ವಿವಿಧಾನಿ ಚ ।
ಆಸ್ಯಾದ್ ವಮನ್ ಪಾವಕಂ ಸ ಸಂವರ್ತಕಸಮಂ ತದಾ ॥೨೬॥

ಕ್ರುದ್ಧನಾದ ಅವನು ತನ್ನ ಮುಖದಿಂದ ಸಂವರ್ತಕಾಗ್ನಿಗೆ ಸಮಾನವಾದ ಅಗ್ನಿಯನ್ನು ಉಗುಳುತ್ತಾ ಅವರ ವಿಧವಿಧವಾದ ಶಸ್ತ್ರಗಳನ್ನು ನುಂಗಿದನು.

ತಾನ್ ಸರ್ವಾನ್ ನೃಪತೇಃ ಪುತ್ರಾನದಹತ್ ಸ್ವೇನ ತೇಜಸಾ ।
ಮುಖಜೇನಾಗ್ನಿನಾ ಕ್ರುದ್ಧೋ ಲೋಕಾನುದ್ವರ್ತಯನ್ನಿವ ॥೨೭॥

ಲೋಕವನ್ನೇ ಸುಡುವವನಂತೆ ಕ್ರುದ್ಧನಾದ ಅವನು ತನ್ನ ಮುಖದಿಂದ ಉಂಟಾದ ಅಗ್ನಿಯಿಂದಲೂ ಮತ್ತು ತನ್ನ ಪರಾಕ್ರಮದಿಂದಲೂ ರಾಜನ ಆ ಎಲ್ಲಾ ಪುತ್ರರನ್ನೂ ದಹಿಸಿದನು.

ಕ್ಷಣೇನ ರಾಜಶಾರ್ದೂಲ ಪುರೇವ ಕಪಿಲಃ ಪ್ರಭುಃ ।
ಸಗರಸ್ಯಾತ್ಮಜಾನ್ ಕ್ರುದ್ಧಸ್ತದದ್ಭುತಮಿವಾಭವತ್ ॥೨೮॥

ಎಲೈ ರಾಜಶಾರ್ದೂಲನೇ, ಸಗರನ ಮಕ್ಕಳನ್ನು ಹಿಂದೆ ಪ್ರಭುವಾದ ಕಪಿಲನು ದಹಿಸಿದಂತೆ ಕ್ರುದ್ಧನಾದ ಅವನು ಒಂದು ಕ್ಷಣದಲ್ಲಿ ಅವರೆಲ್ಲರನ್ನೂ ದಹಿಸಿದನು. ಅದು ಅದ್ಭುತವಾಗಿದ್ದಿತು.

ತೇಷು ಕ್ರೋಧಾಗ್ನಿದಗ್ಧೇಷು ತದಾ ಭರತಸತ್ತಮ ।
ತಂ ಪ್ರಬುದ್ಧಂ ಮಹಾತ್ಮಾನಂ ಕುಂಭಕರ್ಣಮಿವಾಪರಮ್ ।
ಆಸಸಾದ ಮಹಾತೇಜಾಃ ಕುವಲಾಶ್ವೋ ಮಹೀಪತಿಃ ॥೨೯॥

ಎಲೈ ಭರತಸತ್ತಮನೇ, ತನ್ನ ಮಕ್ಕಳೆಲ್ಲರೂ ಅವನ ಕ್ರೋಧಾಗ್ನಿಯಿಂದ ದಗ್ಧರಾದಮೇಲೆ ಎಚ್ಚರಗೊಂಡ ಮಹಾಪ್ರಯತ್ನಶೀಲನಾದ ಇನ್ನೊಬ್ಬ ಕುಂಭಕರ್ಣನಂತಿದ್ದ ಅವನನ್ನು ಮಹಾತೇಜಸ್ವಿಯಾದ ಕುವಲಾಶ್ವರಾಜನು ಸಮೀಪಿಸಿದನು.

ತಸ್ಯ ವಾರಿ ಮಹಾರಾಜ ಸುಸ್ರಾವ ಬಹು ದೇಹತಃ ।
ತದಾಪೀಯ ತತಸ್ತೇಜೋ ರಾಜಾ ವಾರಿಮಯಂ ನೃಪ ॥೩೦॥

ಯೋಗೀ ಯೋಗೇನ ವಹ್ನಿಂ ಚ ಶಮಯಾಮಾಸ ವಾರಿಣಾ ।
ಬ್ರಹ್ಮಾಸ್ತ್ರೇಣ ಚ ರಾಜೇಂದ್ರ ದೈತ್ಯಂ ಕ್ರೂರಪರಾಕ್ರಮಮ್ ॥೩೧॥

ದದಾಹ ಭರತಶ್ರೇಷ್ಠ ಸರ್ವಲೋಕಭವಾಯ ವೈ ॥೩೨॥

ಸೋಽಸ್ತ್ರೇಣ ದಗ್ಧ್ವಾ ರಾಜರ್ಷಿಃ ಕುವಲಾಶ್ವೋ ಮಹಾಸುರಮ್ ।
ಸುರಶತ್ರುಮಮಿತ್ರಘ್ನಃ ತ್ರೈಲೋಕ್ಯೇಶ ಇವಾಪರಃ ।
ಧುಂಧೋರ್ವಧಾತ್ ತದಾ ರಾಜಾ ಕುವಲಾಶ್ವೋ ಮಹಾಮನಾಃ ॥
ಧುಂಧುಮಾರ ಇತಿ ಖ್ಯಾತೋ ನಾಮ್ನಾ ಸಮಭವತ್ ತತಃ ।

ಎಲೈ ಮಹಾರಾಜನೇ, ಅವನ ದೇಹದಿಂದ ಬಹಳವಾಗಿ ನೀರು ಸುರಿಯಿತು. ಆ ರಾಜನು ವಾರಿಮಯವಾದ ಆ ತೇಜಸ್ಸನ್ನು ಪಾನಮಾಡಿ ಯೋಗಿಯಾದ ಅವನು

ತನ್ನ ಯೋಗಶಕ್ತಿಯಿಂದ ಧುಂಧುಮಾರನಿಂದ ಹೊರಟ ಅಗ್ನಿಯನ್ನು ಆ ಜಲದಿಂದ ನಾಶಪಡಿಸಿದನು. ಎಲೈ ರಾಜೇಂದ್ರನೇ, ಎಲೈ ಭರತಶ್ರೇಷ್ಠನೇ, ಸರ್ವಲೋಕಕ್ಕೆ ಮಂಗಳವನ್ನುಂಟು ಮಾಡಲು ಕ್ರೂರಪರಾಕ್ರಮವುಳ್ಳ ಆ ದೈತ್ಯನನ್ನು ಬ್ರಹ್ಮಾಸ್ತ್ರದಿಂದ ಸುಟ್ಟುಹಾಕಿದನು. ರಾಜರ್ಷಿಯಾದ ಆ ಕುವಲಾಶ್ವನು ಮಹಾಸುರನನ್ನು ಶತ್ರುಸೂದನನಾದ ತ್ರಿಲೋಕಾಧಿಪತಿಯಾದ ಇನ್ನೊಬ್ಬ ಇಂದ್ರನಂತೆ ಸಂಹಾರ ಮಾಡಿ (ಸಂತೋಷಪಟ್ಟನು). ಮಹಾಧೀರನಾದ ಕುವಲಾಶ್ವರಾಜನು ಧುಂಧುವಿನ ವಧೆಯ ನಿಮಿತ್ತದಿಂದಾಗಿ ಆಗ ಧುಂಧುಮಾರನೆಂದು ಪ್ರಖ್ಯಾತನಾಗಿ ಅಪ್ರತಿರಥನಾದನು.

ಪ್ರೀತೈಶ್ಚ ತ್ರಿದಶೈಃ ಸರ್ವೈರ್ಮಹರ್ಷಿಸಹಿತೈಸ್ತದಾ ।
ವರಂ ವೃಣೀಷ್ವೇತ್ಯುಕ್ತಃ ಸ ಪ್ರಾಂಜಲಿಃ ಪ್ರಣತಸ್ತದಾ ॥೩೪॥

ಅತೀವ ಮುದಿತೋ ರಾಜನ್ನಿದಂ ವಚನಮಬ್ರವೀತ್ ॥೩೫॥

ಎಲೈ ರಾಜನೇ, ಪ್ರಸನ್ನರಾದ ಎಲ್ಲಾ ಮಹರ್ಷಿಗಳಿಂದ ಸಹಿತರಾದ ದೇವತೆಗಳಿಂದ ವರವನ್ನು ಕೇಳು ಎಂದು ಆಗ ಹೇಳಲ್ಪಟ್ಟವನಾಗಿ ಅವನು ಅವರಿಗೆ ನಮಸ್ಕರಿಸಿ ಕೈಗಳನ್ನು ಮುಗಿದು ಬಹಳ ಸಂತೋಷದಿಂದ ಈ ಮಾತನ್ನು ಹೇಳಿದನು.

ದದ್ಯಾಂ ವಿತ್ತಂ ದ್ವಿಜಗ್ರ್ಯೇಭ್ಯಃ ಶತ್ರೂಣಾಂ ಚಾಪಿ ದುರ್ಜಯಃ ।
ಸಖ್ಯಂ ಚ ವಿಷ್ಣುನಾ ಮೇ ಸ್ಯಾದ್ ಭೂತೇಷ್ವದ್ರೋಹ ಏವ ಚ ।
ಧರ್ಮೇ ರತಿಶ್ಚ ಸತತಂ ಸ್ವರ್ಗೇ ವಾಸಸ್ತಥಾಽಕ್ಷಯಃ ॥೩೬॥

ನಾನು ಶ್ರೇಷ್ಠಬ್ರಾಹ್ಮಣರಿಗೆ ಧನವನ್ನು ಕೊಡುವವನಾಗಬೇಕು. ಶತ್ರುಗಳಿಗೆ ದುರ್ಜಯನಾಗಬೇಕು. ನನಗೆ ವಿಷ್ಣುವಿನ ಸಖ್ಯವು ಯಾವಾಗಲೂ ಇರಬೇಕು. ನನ್ನಿಂದ ಯಾವ ಪ್ರಾಣಿಗೂ ದ್ರೋಹವಾಗಬಾರದು. ನನಗೆ ಸತತವಾಗಿ ಧರ್ಮದಲ್ಲಿ ರತಿ ಇರಬೇಕು ಮತ್ತು ಹಾಗೆಯೇ ಸ್ವರ್ಗದಲ್ಲಿ ಅಕ್ಷಯವಾದ ವಾಸವುಂಟಾಗಬೇಕು.

ಮಾರ್ಕಂಡೇಯಃ

ತಥಾಸ್ತ್ವಿತಿ ತತೋ ದೇವೈಃ ಪ್ರೀತೈರುಕ್ತಃ ಸ ಪಾರ್ಥಿವಃ ।
ಋಷಿಭಿಶ್ಚ ಸಗಂಧರ್ವೈರುತ್ತಂಕೇನ ಚ ಧೀಮತಾ ॥೩೭॥

ಮಾರ್ಕಂಡೇಯ– ಆಗ ಪ್ರೀತಿಯುಕ್ತರಾದ ದೇವತೆಗಳೂ, ಋಷಿಗಳೂ, ಗಂಧರ್ವರೂ, ಮೇಧಾವಿಯಾದ ಉತ್ತಂಕನೂ ಸಹ ಆ ರಾಜನಿಗೆ ಹಾಗೆಯೇ ಆಗಲಿ ಎಂದು ಹೇಳಿದರು.

ಸಂಭಾಷ್ಯ ಚೈನಂ ವಿವಿಧೈರಾಶೀರ್ವಾದೈಸ್ತತೋ ನೃಪ ।
ದೇವಾ ಮಹರ್ಷಯಶ್ಚಾಪಿ ಸ್ವಾನಿ ಸ್ಥಾನಾನಿ ಭೇಜಿರೇ ॥೩೮॥

ಎಲೈ ರಾಜನೇ, ದೇವತೆಗಳು ಮತ್ತು ಮಹರ್ಷಿಗಳು ಅವನಿಗೆ ವಿಧವಿಧವಾದ ಆಶೀರ್ವಾದಗಳನ್ನು ಉಚ್ಚಾರಣೆ ಮಾಡಿ ಅನಂತರ ತಮ್ಮ ತಮ್ಮ ಸ್ಥಾನಗಳನ್ನು ಸೇರಿದರು.

ತಸ್ಯ ಪುತ್ರಾಸ್ತ್ರಯಃ ಶಿಷ್ಟಾ ಯುಧಿಷ್ಠಿರ ತದಾಽಭವನ್ ।
ದೃಢಾಶ್ವಃ ಕಪಿಲಾಶ್ವಶ್ಚ ಚಂದ್ರಾಶ್ವಶ್ಚೈವ ಭಾರತ ॥೩೯॥

ತೇಭ್ಯಃ ಪರಂಪರಾ ರಾಜನ್ನಿಕ್ಷ್ವಾಕೂಣಾಂ ಮಹಾತ್ಮನಾಮ್ ॥೪೦॥

ವಂಶಸ್ಯ ಸುಮಹಾಭಾಗ ರಾಜ್ಞಾಮಮಿತತೇಜಸಾಮ್ ।

ಎಲೈ ಭಾರತನೇ, ಯುಧಿಷ್ಠಿರನೇ, ಅವನ ಮಕ್ಕಳಲ್ಲಿ ಆಗ ದೃಢಾಶ್ವ, ಕಪಿಲಾಶ್ವ ಮತ್ತು ಚಂದ್ರಾಶ್ವನೆಂಬ ಮೂರು ಮಕ್ಕಳು ಉಳಿದರು. ಎಲೈ ರಾಜನೇ, ಎಲೈ ಮಹಾಭಾಗನೇ, ಅಮಿತಪರಾಕ್ರಮಿಗಳಾದ ಮಹಾತ್ಮರಾದ ಇಕ್ಷ್ವಾಕು ರಾಜರ ಪರಂಪರೆಯು ಅವರಿಂದ ಮುಂದುವರೆಯಿತು.

ಏವಂ ಸ ನಿಹತಸ್ತೇನ ಕುವಲಾಶ್ವೇನ ಸತ್ತಮ ।
ಧುಂಧುರ್ನಾಮ ಮಹಾದೈತ್ಯೋ ಮಧುಕೈಟಭಯೋಃ ಸುತಃ ॥೪೧॥

ಎಲೈ ಸಜ್ಜನರಲ್ಲಿ ಶ್ರೇಷ್ಠನಾದವನೇ, ಹೀಗೆ ಮಧುಕೈಟಭರ ಪುತ್ರನಾದ ಧುಂಧು ಎಂಬ ಮಹಾದೈತ್ಯನು ಕುವಲಾಶ್ವನಿಂದ ಕೊಲ್ಲಲ್ಪಟ್ಟನು.

ಕುವಲಾಶ್ವಶ್ಚ ನೃಪತಿರ್ಧುಂಧುಮಾರ ಇತಿ ಸ್ಮೃತಃ ।
ನಾಮ್ನಾ ಚ ಗುಣಸಂಯುಕ್ತಸ್ತದಾಪ್ರಭೃತಿ ಸೋಽಭವತ್ ॥೪೨॥

ಗುಣವಂತನಾದ ಕುವಲಾಶ್ವರಾಜನೂ ಸಹ ಅಲ್ಲಿಂದ ಮುಂದಕ್ಕೆ ಧುಂಧುಮಾರ ಎಂದು ಕರೆಯಲ್ಪಟ್ಟು ಅದೇ ನಾಮದಿಂದಲೇ ಪ್ರಖ್ಯಾತನಾದನು.

ಏತತ್ ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪೃಚ್ಛಸಿ ।
ಧೌಂಧುಮಾರಮುಪಾಖ್ಯಾನಂ ಪ್ರಥಿತಂ ಯಸ್ಯ ಕರ್ಮಣಾ ॥೪೩॥

ಯಾವ ಕುವಲಾಶ್ವನ ಕರ್ಮದಿಂದ ಪ್ರಸಿದ್ಧವಾಗಿದೆಯೋ ಅಂತಹ ನೀನು ಕೇಳಿದ ಈ ಧುಂಧುಮಾರೋಪಾಖ್ಯಾನವೆಲ್ಲವನ್ನೂ ನಿನಗೆ ಹೇಳಿದ್ದೇನೆ.

ಇದಂ ತು ಪುಣ್ಯಮಾಖ್ಯಾನಂ ವಿಷ್ಣೋಃ ಸಮನುಕೀರ್ತನಮ್ ।
ಶೃಣುಯಾದ್ ಯಃ ಸ ಧರ್ಮಾತ್ಮಾ ಪುತ್ರವಾಂಶ್ಚ ಭವೇನ್ನರಃ ॥೪೪॥

ಈ ಪುಣ್ಯವಾದ ಆಖ್ಯಾನವು ವಿಷ್ಣುವಿನ ಕೀರ್ತನರೂಪವೂ ಆಗಿದೆ. ಇದನ್ನು ಕೇಳುವ ಅಧಿಕಾರಿಯಾದ ಮನುಷ್ಯನು ಧರ್ಮಾತ್ಮನೂ, ಪುತ್ರವಂತನೂ ಆಗುವನು.

ಆಯುಷ್ಮಾನ್ ಭೂತಿಮಾಂಶ್ಚೈನ ಶ್ರುತ್ವಾ ಭವತಿ ಪರ್ವಸು ।
ನ ಚ ವ್ಯಾಧಿಭಯಂ ಕಿಂಚಿತ್ ಪ್ರಾಪ್ನೋತಿ ವಿಗತಜ್ವರಃ ॥೪೫॥

ಇದನ್ನು ಪರ್ವಕಾಲಗಳಲ್ಲಿ ಕೇಳಿದವನು ಆಯುಷ್ಮಂತನೂ, ಐಶ್ವರ್ಯವಂತನೂ ಆಗುವನು. ಅವನಿಗೆ ವ್ಯಾಧಿ ಭಯವಾಗಲೀ, ಮನಸ್ಸಿನ ಸಂತಾಪವಾಗಲೀ ಉಂಟಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಮಾರ್ಕಂಡೇಯಸಮಾಖ್ಯಾಪರ್ವಣಿ ಏಕನವತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಖ್ಯಾಪರ್ವಣಿ ಷೋಡಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ತೊಂದನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ತೆರಡನೆಯ ಅಧ್ಯಾಯ

ಮಾರ್ಕಂಡೇಯರಿಂದ ಪತಿವ್ರತಾ ಮಹಾತ್ಮ್ಯ ಕಥನಾರಂಭ.

ವೈಶಂಪಾಯನಃ

ತತೋ ಯುಧಿಷ್ಠಿರೋ ರಾಜಾ ಮಾರ್ಕಂಡೇಯಂ ಮಹಾದ್ಯುತಿಮ್ ।
ಪಪ್ರಚ್ಛ ಭರತಶ್ರೇಷ್ಠ ಧರ್ಮಪ್ರಶ್ನಂ ಸುದುರ್ವಿದಮ್ ॥೧॥

ವೈಶಂಪಾಯನ– ಎಲೈ ಭರತಶ್ರೇಷ್ಠನೇ, ಅನಂತರ ಯುಧಿಷ್ಠಿರ ರಾಜನು ಮಹಾತೇಜಸ್ವಿಗಳಾದ ಮಾರ್ಕಂಡೇಯರನ್ನು ಕುರಿತು ತಿಳಿಯಲು ಬಹಳ ಕಷ್ಟವಾದ ಧರ್ಮಪ್ರಶ್ನೆಯನ್ನು ಮಾಡಿದನು.

ಶ್ರೋತುಮಿಚ್ಛಾಮಿ ಭಗವನ್ ಸ್ತ್ರೀಣಾಂ ಮಾಹಾತ್ಮ್ಯಮುತ್ತಮಮ್ ।
ಕಥ್ಯಮಾನಂ ತ್ವಯಾ ವಿಪ್ರ ಸೂಕ್ಷ್ಮಂ ಧರ್ಮ್ಯಂ ಚ ತತ್ತ್ವತಃ ॥೨॥

ಪೂಜ್ಯರೇ, ಬ್ರಾಹ್ಮಣರೇ, ನಿಮ್ಮಿಂದ ನಾನು ಪತಿವ್ರತಾ ಸ್ತ್ರೀಯರ ಸೂಕ್ಷ್ಮವಾದ ಧರ್ಮ ಮತ್ತು ಸಂಬಂಧಿಯಾದ ಅವರ ಮಹಾತ್ಮ್ಯವನ್ನು ಯಥಾವತ್ತಾಗಿ ಕೇಳಿ ತಿಳಿಯಲು ಬಯಸುತ್ತೇನೆ.

ಪ್ರತ್ಯಕ್ಷಮಿಹ ವಿಪ್ರರ್ಷೇ ದೇವಾ ದೃಶ್ಯಂತಿ ಸತ್ತಮ ।
ಸೂರ್ಯಾಚಂದ್ರಮಸೌ ವಾಯುಃ ಪೃಥಿವೀ ವಹ್ನಿರೇವ ಚ ॥೩॥

ಎಲೈ ಸಜ್ಜನರಲ್ಲಿ ಶ್ರೇಷ್ಠರಾದವರೇ, ವಿಪ್ರರ್ಷಿಗಳೇ, ಈ ಲೋಕದಲ್ಲಿ ಸೂರ್ಯಚಂದ್ರರು, ವಾಯು, ಭೂಮಿ, ಅಗ್ನಿ, ಈ ದೇವತೆಗಳು ಪ್ರತ್ಯಕ್ಷವಾಗಿ ಗೋಚರಿಸುತ್ತಾರೆ.

ಪಿತಾ ಮಾತಾ ಚ ಭಗವನ್ ಗುರುರೇವ ಚ ಸತ್ತಮ ।
ಯಚ್ಚಾನ್ಯದ್ ದೇವವಿಹಿತಂ ತಚ್ಚಾಪಿ ಭೃಗುನಂದನ ।
ಮಾನ್ಯಾ ಹಿ ಗುರವಃ ಸರ್ವೇ ಏಕಪತ್ನ್ಯಸ್ತಥಾ ಸ್ತ್ರಿಯಃ ॥೪॥

ಪೂಜ್ಯರೇ, ಸಜ್ಜನರಲ್ಲಿ ಶ್ರೇಷ್ಠರೇ, ತಂದೆ, ತಾಯಿ, ಗುರುಗಳು ಇವರೂ ಪ್ರತ್ಯಕ್ಷದೇವತೆಗಳೇ. ಎಲೈ ಭೃಗುನಂದನನೇ, ದೇವವಿಹಿತವಾದ ಬೇರೆ ವಸ್ತುಗಳು

ಪ್ರತ್ಯಕ್ಷವಾಗಿ ಗೋಚರಿಸುತ್ತವೆ. ಗುರುಗಳು ಮತ್ತು ಪತಿವ್ರತೆಯರಾದ ಸ್ತ್ರೀಯರೆಲ್ಲರೂ ಮಾನ್ಯರಷ್ಟೆ?

ಪತಿವ್ರತಾನಾಂ ಶುಶ್ರೂಷಾ ದುಷ್ಕರಾ ಪ್ರತಿಭಾತಿ ಮೇ ।
ಪತಿವ್ರತಾನಾಂ ಮಾಹಾತ್ಮ್ಯಂ ವಕ್ತುಮರ್ಹಸಿ ನಃ ಪ್ರಭೋ ॥೫॥

ಪತಿವ್ರತೆಯರು ಮಾಡುವ ಸೇವೆಯು ದುಷ್ಕರವಾದೆಂದು ನನಗೆ ತೋರುತ್ತದೆ. ಪ್ರಭುಗಳೇ, ಪತಿವ್ರತೆಯರ ಮಹಾತ್ಮ್ಯವನ್ನು ನಮಗೆ ಹೇಳಬೇಕು.

ನಿರುದ್ಧ್ಯ ಚೇಂದ್ರಿಯಗ್ರಾಮಂ ಮನಃ ಸಂರುಧ್ಯ ಚಾನಘ ।
ಪತಿಂ ದೈವತವಚ್ಚಾಪಿ ಚಿಂತಯಂತ್ಯಃ ಸ್ಥಿತಾ ಹಿ ಯಾಃ ॥೬॥

ಎಲೈ ಅನಘರೇ, ಯಾವ ಸ್ತ್ರೀಯರು ತಮ್ಮ ಇಂದ್ರಿಯಗ್ರಾಮವನ್ನು ನಿಯಂತ್ರಿಸಿ, ಮನಸ್ಸನ್ನು ನಿಯಂತ್ರಿಸಿ, ಪತಿಯನ್ನು ದೇವತೆಯಂತೆ ಚಿಂತಿಸುವರೋ ಅವರ ಮಹಿಮೆಯನ್ನು ಹೇಳಿ.

ಭಗವನ್ ದುಷ್ಕರಂ ತ್ವೇತತ್ ಪ್ರತಿಭಾತಿ ಮಮ ಪ್ರಭೋ ।
ಮಾತಾಪಿತ್ರೋಶ್ಚ ಶುಶ್ರೂಷಾ ಸ್ತ್ರೀಣಾಂ ಭರ್ತರಿ ಚ ದ್ವಿಜ ॥೭॥

ಪೂಜ್ಯರೇ, ಪ್ರಭುಗಳೇ, ಸ್ತ್ರೀಯರು ತಂದೆತಾಯಿಗಳಿಗೆ ಮತ್ತು ಪತಿಗೆ ಮಾಡುವ ಸೇವೆಯು ದುಷ್ಕರವಾದುದೆಂದು ನನಗೆ ತೋರುತ್ತದೆ.

ಸ್ತ್ರೀಣಾಂ ಧರ್ಮಾತ್ ಸುಘೋರಾದ್ಧಿ ನಾನ್ಯಂ ಪಶ್ಯಾಮಿ ದುಷ್ಕರಮ್ ।
ಸಾಧ್ವಾಚಾರಾಃ ಸ್ತ್ರಿಯೋ ಬ್ರಹ್ಮನ್ ಯತ್ ಕುರ್ವಂತಿ ಸದಾऽऽದೃತಾಃ ॥

ಎಲೈ ಬ್ರಾಹ್ಮಣರೇ, ಸದಾಚಾರವುಳ್ಳ ಸ್ತ್ರೀಯರು ಸದಾ ಆದರದಿಂದ ಏನನ್ನು ಆಚರಿಸುತ್ತಾರೆಯೋ ಅಂತಹ ಅತ್ಯಂತ ಘೋರವಾದ ಸ್ತ್ರೀಧರ್ಮಕ್ಕಿಂತ ದುಷ್ಕರವಾದುದು ಇನ್ನೊಂದು ಇಲ್ಲವೆಂದು ನಾನು ಭಾವಿಸುತ್ತೇನೆ.

ದುಷ್ಕರಂ ಖಲು ಕುರ್ವಂತಿ ಪಿತರಂ ಮಾತರಂ ಚ ವೈ ।
ಏಕಪತ್ನ್ಯಶ್ಚ ಯಾ ನಾರ್ಯೋ ಯಾಶ್ಚ ಸತ್ಯಂ ವದಂತ್ಯುತ ॥೯॥

ತಂದೆತಾಯಿಗಳ ಸೇವೆಯನ್ನು ಮಾಡಿ ಯಾವ ಪತಿವ್ರತೆಯರು ಸತ್ಯವನ್ನೇ ನುಡಿಯುತ್ತಾರೆಯೋ ಅವರು ದುಷ್ಕರವಾದ ಕಾರ್ಯವನ್ನೇ ಮಾಡುತ್ತಾರೆ.

ಕುಕ್ಷಿಣಾ ದಶ ಮಾಸಾಂಶ್ಚ ಗರ್ಭಂ ಸಂಧಾರಯಂತಿ ಯಾಃ ।
ನಾರ್ಯಃ ಕಾಲೇನ ಸಂಭೂಯ ಕಿಮದ್ಭುತತರಂ ತತಃ ॥೧೦॥

ಯಾವ ನಾರಿಯರು ತಮ್ಮ ಉದರದಲ್ಲಿ ಹತ್ತು ತಿಂಗಳು ಗರ್ಭವನ್ನು ಧರಿಸಿ ಕಾಲವನ್ನು ನಿರೀಕ್ಷಿಸುವರೋ ಅದಕ್ಕಿಂತ ಅದ್ಭುತವಾದುದು ಯಾವುದು ಇದೆ?

ಸಂಶಯಂ ಪರಮಂ ಪ್ರಾಪ್ಯ ವೇದನಾಮತುಲಾಮಪಿ ।
ಪ್ರಜಾಯಂತೇ ಸುತಾನ್ ನಾರ್ಯೋ ದುಃಖೇನ ಮಹತಾ ವಿಭೋ ॥

ಎಲೈ ವಿಭುಗಳೇ, ಪ್ರಾಣಸಂಶಯವನ್ನು ಹೊಂದಿ ಅತುಲವಾದ ವೇದನೆಯನ್ನು ಅನುಭವಿಸಿ ಬಹಳ ಕಷ್ಟದಿಂದ ನಾರಿಯರು ಮಕ್ಕಳನ್ನು ಪಡೆಯುತ್ತಾರೆ.

ಪುಷ್ಣಂತಿ ಚಾಪಿ ಮಹತಾ ಸ್ನೇಹೇನ ದ್ವಿಜಪುಂಗವ ।
ಚಿಂತಯಂತಿ ತತಶ್ಚಾಪಿ ಕಿಂಶೀಲೋಽಯಂ ಭವಿಷ್ಯತಿ ॥೧೨॥

ಎಲೈ ದ್ವಿಜಶ್ರೇಷ್ಠರೇ, ಅನಂತರ ಬಹಳ ಸ್ನೇಹದಿಂದ ಆ ಶಿಶುಗಳನ್ನು ಪೋಷಿಸುತ್ತಾರೆ. ಅನಂತರ ಇವನು ಎಂತಹ ಸ್ವಭಾವವುಳ್ಳವನಾಗುವನು ಎಂದು ಸತತವಾಗಿ ಚಿಂತಿಸುವರು.

ಯಾಶ್ಚ ಕ್ರೂರೇಷು ಸತ್ತ್ವೇಷು ವರ್ತಮಾನಾ ಜುಗುಪ್ಸಿತಾಃ ।
ಸ್ವಕರ್ಮ ಕುರ್ವಂತಿ ಸದಾ ದುಷ್ಕರಂ ತಚ್ಚ ಮೇ ಮತಮ್ ॥೧೩॥

ಮತ್ತು ಯಾರು ಕ್ರೂರವಾದ ಮತ್ತು ಜುಗುಪ್ಸಿತವಾದ ಕಾರ್ಯಗಳಲ್ಲಿ ನಿರತರಾದರೂ ಸದಾ ತಮ್ಮ ಸ್ವಕರ್ಮವನ್ನು ಆಚರಿಸುತ್ತಾರೆಯೋ ಅದೂ ಸಹ ದುಷ್ಕರವೆಂದು ನನ್ನ ಅಭಿಪ್ರಾಯ.

ಕ್ಷತ್ರಧರ್ಮಸಮಾಚಾರತತ್ತ್ವಂ ವ್ಯಾಖ್ಯಾಹಿ ಮೇ ದ್ವಿಜ ।
ಧರ್ಮಃ ಸುದುರ್ಲಭೋ ವಿಪ್ರ ನೃಶಂಸೇನ ಮಹಾತ್ಮನಾಮ್ ॥೧೪॥

ಎಲೈ ಬ್ರಾಹ್ಮಣರೇ, ಕ್ಷತ್ರಿಯ ಧರ್ಮದ ಆಚರಣೆಯ ವಿಧಾನವನ್ನು ನನಗೆ ಹೇಳಿ. ಎಲೈ ಬ್ರಾಹ್ಮಣರೇ, ನನ್ನಂತಹ ಕ್ರೂರ ಕ್ಷತ್ರಿಯನಿಗೆ ಮಹಾತ್ಮರಿಂದ ತತ್ತ್ವವನ್ನು ಕೇಳುವುದು ದುರ್ಲಭವಾದುದು.

ಏತದಿಚ್ಛಾಮಿ ಭಗವನ್ ಪ್ರಶ್ನಂ ಪ್ರಶ್ನವಿದಾಂ ವರ ।
ಶ್ರೋತುಂ ಭೃಗುಕುಲಶ್ರೇಷ್ಠ ಶುಶ್ರೂಷೇ ತವ ಸುವ್ರತ ॥೧೫॥

ಎಲೈ ಪ್ರಶ್ನೆಗಳನ್ನು ತಿಳಿದವರಲ್ಲಿ ಶ್ರೇಷ್ಠರಾದವರೇ, ಒಳ್ಳೆಯ ವ್ರತವನ್ನು ಧರಿಸಿದವರೇ, ಭೃಗುಕುಲದಲ್ಲಿ ಶ್ರೇಷ್ಠರಾದವರೇ, ಪೂಜ್ಯರಾದವರೇ, ನಿಮ್ಮಿಂದ ಈ ನನ್ನ ಪ್ರಶ್ನೆಗಳಿಗೆ ಉತ್ತರವನ್ನು ಕೇಳಲು ಬಯಸುತ್ತೇನೆ.

ಮಾರ್ಕಂಡೇಯಃ

ಹಂತ ತೇऽಹಂ ಸಮಾಖ್ಯಾಸ್ಯೇ ಪ್ರಶ್ನಮೇತಂ ಸುದುರ್ವಚಮ್ ।
ತತ್ತ್ವೇನ ಭರತಶ್ರೇಷ್ಠ ಗದತಸ್ತನ್ನಿಬೋಧ ಮೇ ॥೧೬॥

ಮಾರ್ಕಂಡೇಯ– ಬಹಳ ಸಂತೋಷ. ಎಲೈ ಭರತಶ್ರೇಷ್ಠನೇ, ನೀನು ಕೇಳಿದ, ಉತ್ತರವನ್ನು ಹೇಳಲು ಕಷ್ಟವಾದ ಈ ಪ್ರಶ್ನೆಗಳಿಗೆ ಯಥಾರ್ಥವಾಗಿ ಉತ್ತರವನ್ನು ಹೇಳುವೆನು. ನಾನು ಹೇಳಿದಂತೆ ಅದನ್ನು ನೀನು ಕೇಳು.

ಮಾತ್ಯಸ್ತು ಗೌರವಾದನ್ಯೇ ಪಿತ್ಯನನ್ಯೇ ತು ಮೇನಿರೇ ।
ದುಷ್ಕರಂ ಕುರುತೇ ಮಾತಾ ಏವರ್ಧಯತಿ ಯಾ ಪ್ರಜಾಃ ॥೧೭॥

ಕೆಲವರು ತಾಯಿಯನ್ನು, ಇನ್ನು ಕೆಲವರು ತಂದೆಯನ್ನು ಶ್ರೇಷ್ಠರೆಂದು ತಿಳಿಯುತ್ತಾರೆ. ಯಾವ ತಾಯಿಯು ಮಕ್ಕಳನ್ನು ಬೆಳೆಸುತ್ತಾಳೆಯೋ ಅವಳು ದುಷ್ಕರವಾದ ಕಾರ್ಯವನ್ನು ಮಾಡುತ್ತಾಳೆ.

ತಪಸಾ ದೇವತೇಜ್ಯಾಭಿವಂದನೇನ ತಿತಿಕ್ಷಯಾ ।
ಸುಪ್ರಶಸ್ತೈರುಪಾಯೈಶ್ಚಾಪೀಹಂತೇ ಪಿತರಃ ಸುತಾನ್ ॥೧೮॥

ತಪಸ್ಸನ್ನು ಮಾಡಿ ದೇವತೆಗಳಿಗೆ ಪೂಜೆ ಮತ್ತು ನಮಸ್ಕಾರಗಳನ್ನು ಸಲ್ಲಿಸಿ ಸಹನೆಯಿಂದ ಇದ್ದು ಪ್ರಶಸ್ತವಾದ ಉಪಾಯಗಳನ್ನು ಅನುಸರಿಸಿ ತಂದೆ ತಾಯಿಗಳು ಮಕ್ಕಳನ್ನು ಪಡೆಯಲು ಬಯಸುತ್ತಾರೆ.

ಏವಂ ಕೃಚ್ಛ್ರೇಣ ಮಹತಾ ಪುತ್ರಂ ಪ್ರಾಪ್ಯ ಸುದುರ್ಲಭಮ್ ।
ಚಿಂತಯಂತಿ ಸದಾ ವೀರ ಕೀದೃಶೋಽಯಂ ಭವಿಷ್ಯತಿ ॥೧೯॥

ಎಲೈ ವೀರನೇ, ಹೀಗೆ ಬಹಳ ಕಷ್ಟದಿಂದ ದುರ್ಲಭನಾದ ಪುತ್ರನನ್ನು ಪಡೆದು ಇವನು ಎಂತಹ ಸ್ವಭಾವವುಳ್ಳವನಾಗುವನು ಎಂದು ಸತತವಾಗಿ ಚಿಂತಿಸುವರು.

ಆಶಂಸತೇ ಹಿ ಪುತ್ರೇಷು ಪಿತಾ ಮಾತಾ ಚ ಭಾರತ ।
ಯಶಃ ಕೀರ್ತಿಮಥೈಶ್ವರ್ಯಂ ಪ್ರಜಾಧರ್ಮಂ ತಥೈವ ಚ ॥೨೦॥

ಎಲೈ ಭಾರತನೇ, ತಂದೆ ತಾಯಿಗಳು ಮಕ್ಕಳಲ್ಲಿ ಯಾವಾಗಲೂ ಕೀರ್ತಿಯನ್ನೂ, ಐಶ್ವರ್ಯವನ್ನೂ ಮತ್ತು ಪ್ರಜಾಧರ್ಮವನ್ನೂ (ಅವರಿಗೂ ಮಕ್ಕಳಾಗಲಿ ಎಂಬುದನ್ನೂ) ಆಶಂಸನೆ ಮಾಡುತ್ತಾರೆ.

ಮಾತುಃ ಪಿತುಶ್ಚ ರಾಜೇಂದ್ರ ಸತತಂ ಹಿತಕಾರಿಣೋಃ ।
ತಯೋರಾಶಾಂ ತು ಸಫಲಾಂ ಯಃ ಕರೋತಿ ಸ ಧರ್ಮವಿತ್ ॥೨೧॥

ಎಲೈ ರಾಜೇಂದ್ರನೇ, ಸತತವಾಗಿ ಹಿತವನ್ನು ಮಾಡುವ ತಂದೆತಾಯಿಗಳ ಆಸೆಯನ್ನು ಯಾರು ಸಫಲಗೊಳಿಸುತ್ತಾನೆಯೋ ಅವನೇ ಧರ್ಮವನ್ನು ತಿಳಿದವನು (ಧರ್ಮವನ್ನು ಸಂಪಾದಿಸುವವನು).

ಪಿತಾ ಮಾತಾ ಚ ರಾಜೇಂದ್ರ ತುಷ್ಯತೋ ಯಸ್ಯ ನಿತ್ಯಶಃ ।
ಇಹ ಪ್ರೇತ್ಯ ಚ ತಸ್ಯಾಥ ಕೀರ್ತಿರ್ಧರ್ಮಶ್ಚ ಶಾಶ್ವತಃ ॥೨೨॥

ಎಲೈ ರಾಜೇಂದ್ರನೇ, ಯಾರ ವಿಷಯದಲ್ಲಿ ತಂದೆ ತಾಯಿಗಳು ನಿತ್ಯವೂ ಸಂತೋಷಪಡುತ್ತಾರೆಯೋ ಅವನು ಈ ಲೋಕದಲ್ಲಿ ಮತ್ತು ಪರಲೋಕದಲ್ಲಿ ಕೀರ್ತಿಯನ್ನೂ ಮತ್ತು ಶಾಶ್ವತಧರ್ಮವನ್ನೂ ಸಂಪಾದಿಸುತ್ತಾನೆ.

ನೈವ ಯಜ್ಞಕ್ರಿಯಾಃ ಕಾಶ್ಚಿನ್ನ ಶ್ರಾದ್ಧಂ ನೋಪವಾಸಕಮ್ ।
ಯಾ ತು ಭರ್ತರಿ ಶುಶ್ರೂಷಾ ತಯಾ ಸ್ವರ್ಗಂ ಜಯತ್ಯುತ ॥೨೩॥

ಸ್ತ್ರೀಯರು ಪತಿಸೇವೆಯಿಂದ ಎಂತಹ ಸ್ವರ್ಗವನ್ನು ಪಡೆಯುತ್ತಾರೆಯೋ ಅದನ್ನು ಯಜ್ಞಕ್ರಿಯೆಗಳಿಂದಾಗಲೀ, ಶ್ರಾದ್ಧದಿಂದಲಾಗಲೀ ಅಥವಾ ಉಪವಾಸದಿಂದಾಗಲೀ ಪಡೆಯಲು ಸಾಧ್ಯವಿಲ್ಲ.

ಏತತ್‌ಪ್ರಕರಣಂ ರಾಜನ್ನಧಿಕೃತ್ಯ ಯುಧಿಷ್ಠಿರ ।
ಪತಿವ್ರತಾನಾಂ ನಿಯತಂ ಧರ್ಮಂ ಚಾವಹಿತಃ ಶೃಣು ॥೨೪॥

ಎಲೈ ರಾಜನಾದ ಯುಧಿಷ್ಠಿರನೇ, ಈ ಪ್ರಕರಣಕ್ಕೆ ಸಂಬಂಧಿಸಿದ ಪತಿವ್ರತೆಯರ ನಿಯತವಾದ ಧರ್ಮವನ್ನು ಜಾಗರೂಕನಾಗಿ ಕೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿನವತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಪತಿವ್ರತಾಮಹಾತ್ಮ್ಯೇ ಸಪ್ತದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ತೆರಡನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ಮೂರನೆಯ ಅಧ್ಯಾಯ

ಕೌಶಿಕ ಬ್ರಾಹ್ಮಣರ ತಪಸ್ಸು, ಬಲಾಕ ಪಕ್ಷಿಯ ಪತನ ಮತ್ತು
ಪತಿವ್ರತೆಯ ಜೊತೆಯಲ್ಲಿ ಸಂವಾದ.

ಮಾರ್ಕಂಡೇಯಃ

ಕಶ್ಚಿದ್ ದ್ವಿಜಾತಿಪ್ರವರೋ ವೇದಾಧ್ಯಾಯೀ ತಪೋಧನಃ ।
ತಪಸ್ವೀ ಧರ್ಮಶೀಲಶ್ಚ ಕೌಶಿಕೋ ನಾಮ ಭಾರತ ॥೧॥

ಮಾರ್ಕಂಡೇಯ– ಎಲೈ ಭಾರತನೇ, ಒಬ್ಬ ವೇದಾಧ್ಯಯನವನ್ನು ಮಾಡಿದ ತಪೋಧನನಾದ ಧರ್ಮಶೀಲನಾದ ಕೌಶಿಕನೆಂಬ ಶ್ರೇಷ್ಠವಾದ ತಪಸ್ವಿಯಾದ ಬ್ರಾಹ್ಮಣನಿದ್ದನು.

ಸಾಂಗೋಪನಿಷದೋ ವೇದಾನಧೀತೋ ದ್ವಿಜಸತ್ತಮಃ ।
ಸ ವೃಕ್ಷಮೂಲೇ ಕಸ್ಮಿಂಶ್ಚಿದ್ ವೇದಾನುಚ್ಚಾರಯನ್ ಸ್ಥಿತಃ ॥೨॥

ಆ ದ್ವಿಜಶ್ರೇಷ್ಠನು ಉಪನಿಷತ್ತುಗಳಿಂದ ಮತ್ತು ಷಡಂಗಗಳಿಂದ ಸಹಿತವಾದ ವೇದಗಳನ್ನು ಅಧ್ಯಯನ ಮಾಡಿ ಯಾವುದೋ ಒಂದು ವೃಕ್ಷ ಮೂಲದಲ್ಲಿ ಕುಳಿತು ವೇದಗಳನ್ನು ಪಾರಾಯಣ ಮಾಡುತ್ತಿದ್ದನು.

ಉಪರಿಷ್ಟಾಚ್ಚ ವೃಕ್ಷಸ್ಯ ಬಲಾಕಾ ಸನ್ನ್ಯಲೀಯತ ।
ತಯಾ ಪುರೀಷಮುತ್ಸೃಷ್ಟಂ ಬ್ರಾಹ್ಮಣಸ್ಯ ತದೋಪರಿ ॥೩॥

ಆ ಮರದ ಮೇಲೆ ಒಂದು ಬಲಾಕ ಪಕ್ಷಿಯು ಅಡಗಿ ಕುಳಿತಿದ್ದಿತು. ಅದು ಬ್ರಾಹ್ಮಣನ ಮೇಲೆ ಮಲವಿಸರ್ಜನೆಯನ್ನು ಮಾಡಿತು.

ತಾಮವೇಕ್ಷ್ಯ ತತಃ ಕ್ರುದ್ಧಃ ಸಮವಧ್ಯಾಯತ ದ್ವಿಜಃ ।
ತಾಂ ಬಲಾಕಾಂ ಮಹಾರಾಜ ನಿಲೀನಾಂ ನಗಮೂರ್ಧನಿ ॥೪॥

ಎಲೈ ಮಹಾರಾಜನೇ, ಆ ಬ್ರಾಹ್ಮಣನು ಆಗ ಕ್ರುದ್ಧನಾಗಿ ವೃಕ್ಷದ ಮೇಲೆ ಅಡಗಿ ಕುಳಿತಿದ್ದ ಆ ಬಲಾಕ ಪಕ್ಷಿಯನ್ನು ನೋಡಿ ಅದಕ್ಕೆ ಕೇಡನ್ನು ಬಯಸಿದನು.

ಭೃಶಂ ಕ್ರೋಧಾಭಿಭೂತೇನ ಬಲಾಕಾ ಸಾ ನಿರೀಕ್ಷಿತಾ ।
ಅಪಧ್ಯಾತಾ ಚ ವಿಪ್ರೇಣ ನ್ಯಪತದ್ ಧರಣೀತಳೇ ॥೫॥

ಕ್ರೋಧಯುಕ್ತನಾದ ಆ ಬ್ರಾಹ್ಮಣನಿಂದ ಸಿಟ್ಟಿನಿಂದ ವೀಕ್ಷಿಸಲ್ಪಟ್ಟು ಕೇಡನ್ನು ಬಯಸಲ್ಪಟ್ಟ ಆ ಬಲಾಕ ಪಕ್ಷಿಯು ಭೂಮಿಯ ಮೇಲೆ ಬಿದ್ದಿತು.

ಬಲಾಕಾಂ ಪತಿತಾಂ ದೃಷ್ಟ್ವಾ ಗತಸತ್ತ್ವಾಮಚೇತನಾಮ್ ।
ಕಾರುಣ್ಯಾದಭಿಸಂತಪ್ತಃ ಪರ್ಯಶೋಚತ ತಾಂ ದ್ವಿಜಃ ।
ಅಕಾರ್ಯಂ ಕೃತವಾನಸ್ಮಿ ರೋಷರಾಗಬಲಾತ್ಕೃತಃ ॥೬॥

ಬಲಾಕ ಪಕ್ಷಿಯು ಭೂಮಿಯ ಮೇಲೆ ಬಿದ್ದು ಪ್ರಾಣವನ್ನು ಕಳೆದುಕೊಂಡುದನ್ನು ನೋಡಿ ಆ ಬ್ರಾಹ್ಮಣನು ಅದರ ಮೇಲೆ ಕರುಣೆಯನ್ನು ಹೊಂದಿದವನಾಗಿ ಪಶ್ಚಾತ್ತಾಪ ಪಡುತ್ತಾ ನಾನು ರೋಷ ಮತ್ತು ರಾಗಗಳಿಗೆ ವಶನಾಗಿ ಅಕಾರ್ಯವನ್ನು ಮಾಡಿದೆ ಎಂದು ಶೋಕಪಟ್ಟನು.

ಇತ್ಯುಕ್ತ್ವಾ ಬಹುಶೋ ವಿದ್ವಾನ್ ಗ್ರಾಮಂ ಭೈಕ್ಷ್ಯಾಯ ಸಂಶ್ರಿತಃ ॥೭॥

ಹೀಗೆ ಬಹಳವಾಗಿ ಹೇಳುತ್ತಾ ಅವನು ಭಿಕ್ಷೆಗಾಗಿ ಗ್ರಾಮವನ್ನು ಪ್ರವೇಶಿಸಿದನು.

ಗ್ರಾಮೇ ಶುಚೀನಿ ಪ್ರಚರನ್ ಕುಲಾನಿ ಭರತರ್ಷಭ ।
ಪ್ರವಿಷ್ಟಸ್ತತ್ಕುಲಂ ಯತ್ರ ಪೂರ್ವಂ ಚರಿತವಾಂಸ್ತು ಸಃ ॥೮॥

ಎಲೈ ಭರತರ್ಷಭನೇ, ಅವನು ಗ್ರಾಮದಲ್ಲಿ ಶುದ್ಧವಾದ ಮನೆಗಳಿಗೆ ಹೋಗುತ್ತಾ ಹಿಂದೆ ಯಾವ ಮನೆಯಲ್ಲಿ ಭಿಕ್ಷೆಯನ್ನು ಬೇಡಿದ್ದನೋ ಆ ಮನೆಯನ್ನು ಪ್ರವೇಶಿಸಿದನು.

ದೇಹೀತಿ ಯಾಚಮಾನೋಽಸೌ ತಿಷ್ಠೇತ್ಯುಕ್ತಃ ಸ್ತ್ರಿಯಾ ತತಃ ।
ಶೌಚಂ ತು ಯಾವತ್ ಕುರುತೇ ಭಾಜನಸ್ಯ ಕುಟುಂಬಿನೀ ॥೯॥

'ಭಿಕ್ಷಾಂ ದೇಹಿ' ಎಂದು ಹೇಳಿದ ಅವನಿಗೆ ಪಾತ್ರೆಯನ್ನು ತೊಳೆಯುತ್ತಿದ್ದ ಆ ಮನೆಯ ಒಡತಿಯು ಸ್ವಲ್ಪ ನಿಲ್ಲು ಎಂದು ಹೇಳಿದಳು.

ಏತಸ್ಮಿನ್ನಂತರೇ ರಾಜನ್ ಕ್ಷುಧಾಸಂಪೀಡಿತೋ ಭೃಶಮ್ ।
ಭರ್ತಾ ಪ್ರವಿಷ್ಟಃ ಸಹಸಾ ತಸ್ಯಾ ಭರತಸತ್ತಮ ॥೧೦॥

ಎಲೈ ಭರತಸತ್ತಮನೇ, ಎಲೈ ರಾಜನೇ, ಈ ಮಧ್ಯದಲ್ಲಿ ಬಹಳ ಹಸಿವಿನಿಂದ ಪೀಡಿತನಾದ ಅವಳ ಪತಿಯು ಇದ್ದಕ್ಕಿದ್ದಂತೆಯೇ ಮನೆಗೆ ಬಂದನು.

ಸಾ ತು ದೃಷ್ಟ್ವಾ ಪತಿಂ ಸಾಧ್ವೀ ಬ್ರಾಹ್ಮಣಂ ವ್ಯವಹಾಯ ತಮ್ ।
ಪಾದ್ಯಮಾಚಮನೀಯಂ ವೈ ದದೌ ಭರ್ತುಸ್ತಥಾಸನಮ್ ॥೧೧॥

ಆ ಸಾಧ್ವಿಯು ಪತಿಯನ್ನು ನೋಡಿ ಆ ಬ್ರಾಹ್ಮಣನ್ನು ಬಿಟ್ಟು ಆಗ ಆಗಮಿಸಿದ ತನ್ನ ಪತಿಗೆ ಪಾದ್ಯ ಆಚಮನೀಯ ಆಸನಗಳನ್ನು ಕೊಟ್ಟಳು.

ಪ್ರಹ್ವಾ ಪರ್ಯಚರಚ್ಚಾಪಿ ಭರ್ತಾರಮಸಿತೇಕ್ಷಣಾ ।
ಆಹಾರೇಣಾಥ ಭಕ್ಷ್ಯೈಶ್ಚ ಭೋಜ್ಯೈಃ ಸುಮಧುರೈಸ್ತಥಾ ॥೧೨॥

ವಿನಯದಿಂದ ಕೂಡಿದ ಆ ಸುಂದರಿಯು ತನ್ನ ಪತಿಯನ್ನು ಸುಮಧುರವಾದ ಭಕ್ಷ್ಯ ಭೋಜ್ಯಗಳಿಂದ ಕೂಡಿದ ಆಹಾರದಿಂದ ಉಪಚರಿಸಿದಳು.

ಉಚ್ಚಿಷ್ಟಂ ಭಾವಿತಾ ಭರ್ತುರ್ಭುಂಕ್ತೇ ನಿತ್ಯಂ ಯುಧಿಷ್ಠಿರ ।
ದೈವತಂ ಚ ಪತಿಂ ಮೇನೇ ಭರ್ತುಶ್ಚಿತ್ತಾನುಸಾರಿಣೀ ॥೧೩॥

ಎಲೈ ಯುಧಿಷ್ಠಿರನೇ, ಅವಳು ನಿತ್ಯವೂ ಪೂಜ್ಯಭಾವನೆಯಿಂದ ಪತಿಯ ಉಚ್ಚಿಷ್ಟವನ್ನೇ ಭುಂಜಿಸುತ್ತಿದ್ದಳು. ಪತಿಯ ಚಿತ್ತಕ್ಕೆ ಅನುಸಾರವಾಗಿ ನಡೆದುಕೊಂಡು ಪತಿಯನ್ನು ದೇವತೆ ಎಂದು ತಿಳಿದಿದ್ದಳು.

ಕರ್ಮಣಾ ಮನಸಾ ವಾಚಾ ನಾನ್ಯಚಿತ್ತಾಽಭ್ಯಗಾತ್ ಪತಿಮ್ ।
ತಂ ಸರ್ವಭಾವೋಪಗತಾ ಪತಿಶುಶ್ರೂಷಣೇ ರತಾ ॥೧೪॥

ಎಲ್ಲ ರೀತಿಯಿಂದಲೂ ಶುದ್ಧವಾದ ಮನಸ್ಸಿನಿಂದ ಪತಿಸೇವೆಯಲ್ಲಿಯೇ ನಿರತಳಾದ ಅವಳು ತನ್ನ ಕರ್ಮದಿಂದಲಾಗಲೀ, ಮನಸ್ಸಿನಿಂದಲಾಗಲೀ ಅಥವಾ ಮಾತಿನಿಂದಾಗಲೀ ಇನ್ನೊಬ್ಬ ಪುರುಷನನ್ನು ಚಿಂತಿಸದೆ ಪತಿಯ ಸಮೀಪದಲ್ಲಿರುತ್ತಿದ್ದಳು.

ಸಾಧ್ವಾಚಾರಾ ಶುಚಿರ್ದಕ್ಷಾ ಕುಟುಂಬಸ್ಯ ಹಿತೈಷಿಣೀ ।
ಭರ್ತುಶ್ಚಾಪಿ ಹಿತಂ ಯತ್ತತ್ ಸತತಂ ಸಾಽನುವರ್ತತೇ ॥೧೫॥

ಅವಳು ಒಳ್ಳೆಯ ಆಚಾರವುಳ್ಳವಳೂ, ಶುಚಿಯೂ, ಎಲ್ಲ ಕೆಲಸ ಮಾಡುವುದರಲ್ಲಿ ಸಮರ್ಥಳೂ ಕುಟುಂಬದ ಹಿತವನ್ನು ಬಯಸುವವಳೂ ಆಗಿದ್ದು, ಯಾವಾಗಲೂ ಪತಿಯ ಹಿತವನ್ನೇ ಬಯಸಿ ಅದನ್ನೇ ಅನುಸರಿಸುತ್ತಿದ್ದಳು.

ದೇವತಾತಿಥಿಭೃತ್ಯಾನಾಂ ಶ್ವಶ್ರೂಶ್ವಶುರಯೋಸ್ತಥಾ ।
ಶುಶ್ರೂಷಣಪರಾ ನಿತ್ಯಂ ಸತತಂ ಸಂಯತೇಂದ್ರಿಯಾ ॥೧೬॥

ಅವಳು ಸತತವಾಗಿ ಜಿತೇಂದ್ರಿಯಳಾಗಿದ್ದು ಯಾವಾಗಲೂ ದೇವತಾ ಅತಿಥಿಗಳ ಪೂಜೆಯಲ್ಲಿಯೂ ಭೃತ್ಯರ ಮತ್ತು ಅತ್ತೆಮಾವಂದಿರ ಸೇವೆಯಲ್ಲಿಯೂ ನಿರತಳಾಗಿರುತ್ತಿದ್ದಳು.

ಸಾ ಬ್ರಾಹ್ಮಣಂ ತದಾ ದೃಷ್ಟ್ವಾ ಸಂಸ್ಥಿತಂ ಭೈಕ್ಷ್ಯಕಾಂಕ್ಷಿಣಮ್ ।
ಕುರ್ವತೀ ಪತಿಶುಶ್ರೂಷಾಂ ಸಸ್ಮಾರಾಥ ಶುಭೇಕ್ಷಣಾ ॥೧೭॥

ಆ ಶುಭನೇತ್ರೆಯು ಪತಿಸೇವೆಯನ್ನು ಮಾಡುತ್ತಾ ಭಿಕ್ಷಾಕಾಂಕ್ಷಿಯಾಗಿ ನಿಂತಿದ್ದ ಬ್ರಾಹ್ಮಣನನ್ನು ನೋಡಿ ತಾನು ಮಾಡಬೇಕಾದ ಕಾರ್ಯವನ್ನು ಸ್ಮರಿಸಿಕೊಂಡಳು.

ವ್ರೀಡಿತಾ ಸಾಽಭವತ್ ಸಾಧ್ವೀ ತದಾ ಭರತಸತ್ತಮ ।
ಭಿಕ್ಷಾಮಾದಾಯ ವಿಪ್ರಾಯ ನಿರ್ಜಗಾಮ ಯಶಸ್ವಿನೀ ॥೧೮॥

ಎಲೈ ಭರತಶ್ರೇಷ್ಠನೇ, ಆ ಯಶಸ್ವಿನಿಯಾದ ಸಾಧ್ವಿಯು ತನ್ನ ವಿಳಂಬಕ್ಕೆ ಆಗ ನಾಚಿಕೆಗೊಂಡು ಆ ಬ್ರಾಹ್ಮಣನಿಗೆ ಕೊಡಲು ಭಿಕ್ಷೆಯನ್ನು ತೆಗೆದುಕೊಂಡು ಹೊರಗೆ ಬಂದಳು.

ಬ್ರಾಹ್ಮಣಃ

ಕಿಮಿದಂ ಭವತಿ ತ್ವಂ ಮಾಂ ತಿಷ್ಠೇತ್ಯುಕ್ತ್ವಾ ವರಾಂಗನೇ ।
ಉಪರೋಧಂ ಕೃತವತೀ ನ ಏಸರ್ಜಿತವತ್ಯಸಿ ॥೧೯॥

ಬ್ರಾಹ್ಮಣ– ಎಲೌ ಶ್ರೇಷ್ಠವನಿತೆಯೇ, ಪೂಜ್ಯೆಯೇ, ನೀನು ನನಗೆ ನಿಲ್ಲು ಎಂದು ಹೇಳಿ ಏನು ಮಾಡಿದೆ? ನನಗೆ ಹೋಗು ಎಂದು ಹೇಳದೆ ನನಗೆ ತೊಂದರೆಯನ್ನು ಮಾಡಿದೆ.

ಮಾರ್ಕಂಡೇಯಃ

ಬ್ರಾಹ್ಮಣಂ ಕ್ರೋಧಸಂತಪ್ತಂ ಜ್ವಲಂತಮಿವ ತೇಜಸಾ ।
ದೃಷ್ಟ್ವಾ ಸಾಧ್ವೀ ಮನುಷ್ಯೇಂದ್ರ ಸಾಂತ್ವಪೂರ್ವಂ ವಚೋಽಬ್ರವೀತ್ ॥

ಮಾರ್ಕಂಡೇಯ– ಬ್ರಾಹ್ಮಣನು ತೇಜಸ್ಸಿನಿಂದ ಬೆಳಗುತ್ತಾ ಕ್ರೋಧದಿಂದ ಸಂತಪ್ತನಾಗಿರುವುದನ್ನು ನೋಡಿ ಆ ಸಾಧ್ವಿಯು ಎಲೈ ಮನುಷ್ಯೇಂದ್ರನೇ, ಅವನನ್ನು ಸಮಾಧಾನಪಡಿಸುತ್ತಾ ಮಾತನಾಡಿದಳು.

ಸಾಧ್ವೀ

ಕ್ಷಂತುಮರ್ಹಸಿ ಮೇ ವಿದ್ವನ್ ಭರ್ತಾ ಮೇ ದೈವತಂ ಮಹತ್ ।
ಸ ಚಾಪಿ ಕ್ಷುಧಿತಃ ಶ್ರಾಂತಃ ಪ್ರಾಪ್ತಃ ಶುಶ್ರೂಷಿತೋ ಮಯಾ ॥೨೧॥

ಸಾಧ್ವೀ– ವಿದ್ವಾಂಸರೇ, ನೀವು ನನ್ನನ್ನು ಕ್ಷಮಿಸಬೇಕು. ನನಗೆ ಪತಿಯು ದೊಡ್ಡ ದೇವತೆ. ಅವನಾದರೂ ಹಸಿದು, ದಣಿದು ಬಂದನು. ನಾನು ಅವನ ಸೇವೆಯನ್ನು ಮಾಡುತ್ತಿದ್ದೆ.

ಬ್ರಾಹ್ಮಣಃ

ಬ್ರಾಹ್ಮಣಾ ನ ಗರೀಯಾಂಸೋ ಗರಿಯಾಂಸ್ತೇ ಪತಿಃ ಕೃತಃ ।
ಗೃಹಸ್ಥಧರ್ಮೇ ವರ್ತಂತೀ ಬ್ರಾಹ್ಮಣಾನವಮನ್ಯಸೇ ॥೨೨॥

ಬ್ರಾಹ್ಮಣ– ಬ್ರಾಹ್ಮಣರು ನಿನಗೆ ದೊಡ್ಡವರಲ್ಲ, ನಿನ್ನ ಪತಿಯೇ ನಿನಗೆ ದೊಡ್ಡವನಾದನು. ಗೃಹಸ್ಥ ಧರ್ಮದಲ್ಲಿ ಇದ್ದವಳಾಗಿ ನೀನು ಬ್ರಾಹ್ಮಣರಿಗೆ ಅವಮಾನ ಮಾಡುತ್ತಿದ್ದೀಯೆ.

ಇಂದ್ರೋಪ್ಯೇಷಾಂ ಪ್ರಣಮತೇ ಕಿಂ ಪುನರ್ಮಾನವೋ ಭುವಿ ।
ಅವಲಿಪ್ತೇ ನ ಜಾನೀಷೇ ವೃದ್ಧಾನಾಂ ನ ಶ್ರುತಂ ತ್ವಯಾ ॥೨೩॥

ಇಂದ್ರನೂ ಸಹ ಬ್ರಾಹ್ಮಣರಿಗೆ ನಮಸ್ಕಾರವನ್ನು ಮಾಡುತ್ತಾನೆ. ಇನ್ನು ಭೂಮಿಯಲ್ಲಿರುವ ಮನುಷ್ಯರಿಗೆ ಹೇಳುವುದೇನು? ಅಹಂಕಾರದಿಂದ ಕೂಡಿದವಳೇ ಯಾವ ನಿನಗೆ ಜ್ಞಾನವಿಲ್ಲ. ನೀನು ದೊಡ್ಡವರಿಂದ ಧರ್ಮವನ್ನೂ ಕೇಳಿಲ್ಲ.

ಬ್ರಾಹ್ಮಣಾ ಹ್ಯಗ್ನಿಸದೃಶಾ ದಹೇಯುಃ ಪೃಥಿವೀಮಪಿ ।
ಸಪರ್ವತವನದ್ವೀಪಂ ಕ್ಷಿಪ್ರಮೇವಾವಮಾನಿತಾಃ ॥೨೪॥

ಬ್ರಾಹ್ಮಣರು ಅಗ್ನಿಗೆ ಸದೃಶರಾದವರು. ಅವರಿಗೆ ಅವಮಾನವನ್ನು ಮಾಡಿದರೆ ಪರ್ವತವನದ್ವೀಪಗಳಿಂದ ಕೂಡಿದ ಪೃಥಿವಿಯನ್ನೂ ಸುಟ್ಟಾರು.

ಸಾಧ್ವೀ

ನಾವಜಾನಾಮ್ಯಹಂ ವಿಪ್ರಾನ್ ದೇವೈಸ್ತುಲ್ಯಾನ್ ಮನಸ್ವಿನಃ ।
ಅಪರಾಧಮಿಮಂ ವಿಪ್ರ ಕ್ಷಂತುಮರ್ಹಸಿ ಮೇಽನಘ ॥೨೫॥

ಸಾಧ್ವೀ– ಎಲೈ ಅನಘನೇ, ಧೈರ್ಯಶಾಲಿಗಳಾದ ದೇವತೆಗಳಿಗೆ ಸಮಾನರಾದ ಬ್ರಾಹ್ಮಣರಿಗೆ ನಾನು ಅವಮಾನವನ್ನು ಮಾಡುವವಳಲ್ಲ. ನನ್ನ ಈ ಅಪರಾಧವನ್ನು ನೀನು ಕ್ಷಮಿಸಬೇಕು.

ಜಾನಾಮಿ ತೇಜೋ ವಿಪ್ರಾಣಾಂ ಮಹಾಭಾಗ್ಯಂ ಚ ಧೀಮತಾಮ್ ।
ಅಪೇಯಃ ಸಾಗರಃ ಕ್ರೋಧಾತ್ ಕೃತೋ ಹಿ ಲವಣೋದಕಃ ॥೨೬॥

ನಾನು ಬ್ರಾಹ್ಮಣರ ಸಾಮರ್ಥ್ಯವನ್ನು, ಆ ಮೇಧಾವಿಗಳ ಮಹಾಭಾಗ್ಯವನ್ನು ತಿಳಿದಿದ್ದೇನೆ. ಬ್ರಾಹ್ಮಣರು ತಮ್ಮ ಸಿಟ್ಟಿನಿಂದ ಸಮುದ್ರವನ್ನು ಕುಡಿಯಲು ಅಸಾಧ್ಯವಾದ ಲವಣೋದಕದಿಂದ ಕೂಡಿದುದನ್ನಾಗಿ ಮಾಡಿದರು.

ತಥೈವ ದೀಪ್ತತಪಸಾಂ ಮುನೀನಾಂ ಭಾವಿತಾತ್ಮನಾಮ್ ।
ಯೇಷಾಂ ಕ್ರೋಧಾಗ್ನಿರದ್ಯಾಪಿ ದಂಡಕೇ ನೋಪಶಾಮ್ಯತಿ ।
ಕಸ್ತಾನ್ ಪರಿಭವೇನ್ಮೂಢೋ ಬ್ರಾಹ್ಮಣಾನಮಿತೌಜಸಃ ॥೨೭॥

ಹಾಗೆಯೇ ಶುದ್ಧಮನಸ್ಸುಳ್ಳ, ದೀಪ್ತವಾದ ತಪಸ್ಸುಳ್ಳ ಋಷಿಗಳ ಸಾಮರ್ಥ್ಯವನ್ನೂ ತಿಳಿದಿದ್ದೇನೆ. ಅವರ ಕ್ರೋಧಾಗ್ನಿಯಿಂದ ಸುಡುತ್ತಿರುವ ದಂಡಕಾರಣ್ಯವು ಇಂದಿಗೂ ಉಪಶಮನವನ್ನು ಹೊಂದಿಲ್ಲ. ಅಂತಹ ಅಮಿತವಾದ ಸಾಮರ್ಥ್ಯವನ್ನು ಹೊಂದಿದ ಬ್ರಾಹ್ಮಣರನ್ನು ಯಾವ ಮೂರ್ಖನು ಅವಮಾನಗೊಳಿಸುತ್ತಾನೆ?

ಬ್ರಾಹ್ಮಣಾನಾಂ ಪರಿಭವಾದ್ ವಾತಾಪಿಃ ಸುದುರಾತ್ಮವಾನ್ ।
ಅಗಸ್ತ್ಯಮೃಷಿಮಾಸಾದ್ಯ ಜೀರ್ಣಃ ಕ್ರೂರೋ ಮಹಾಸುರಃ ॥೨೮॥

ಬ್ರಾಹ್ಮಣರಿಗೆ ಅವಮಾನವನ್ನು ಮಾಡಿದ್ದರಿಂದ ಬಹಳ ದುಷ್ಟನಾದ ಕ್ರೂರನಾದ ಆ ವಾತಾಪಿಯು ಅಗಸ್ತ್ಯಋಷಿಗಳ ಸಮಾಗಮವನ್ನು ಹೊಂದಿ ಅವರ ಉದರದಲ್ಲಿ ಜೀರ್ಣನಾದನು.

ಬಹುಪ್ರಭಾವಾಃ ಶ್ರೂಯಂತೇ ಬ್ರಾಹ್ಮಣಾನಾಂ ಮಹಾತ್ಮನಾಮ್ ।
ಕ್ರೋಧಃ ಸುವಿಪುಲೋ ಬ್ರಹ್ಮನ್ ಪ್ರಸಾದಶ್ಚ ಮಹಾತ್ಮನಾಮ್ ॥೨೯॥

ಅಸ್ಮಿಂಸ್ತ್ವತಿಕ್ರಮೇ ಬ್ರಹ್ಮನ್ ಕ್ಷಂತುಮರ್ಹಸಿ ಮೇಽನಘ ॥೩೦॥

ಮಹಾತ್ಮರಾದ ಬ್ರಾಹ್ಮಣರ ಅನೇಕ ಸಾಮರ್ಥ್ಯವು ಕೇಳಿ ಬರುತ್ತವೆ. ಅವರ ಕ್ರೋಧವೂ ಬಹಳ ವಿಸ್ತಾರವಾದುದು ಮತ್ತು ಆ ಮಹಾತ್ಮರ ಅನುಗ್ರಹವೂ ಸಹ ಹಾಗೆಯೇ ವಿಪುಲವಾದುದು. ಎಲೈ ಬ್ರಾಹ್ಮಣನೇ, ಅನಘನೇ, ನಾನು ಮಾಡಿದ ಈ ಅಪರಾಧವನ್ನು (ವಿಳಂಬವನ್ನು) ಕ್ಷಮಿಸಬೇಕು.

ಪತಿಶುಶ್ರೂಷಯಾ ಧರ್ಮೋ ಯಃ ಸ ಮೇ ರೋಚತೇ ದ್ವಿಜ ।
ದೈವತೇಷ್ವಪಿ ಸರ್ವೇಷು ಭರ್ತಾ ಮೇ ದೈವತಂ ಪರಮ್ ॥೩೧॥

ಎಲೈ ಬ್ರಾಹ್ಮಣನೇ, ಪತಿಸೇವೆಯಿಂದ ಉಂಟಾಗುವ ಧರ್ಮವು ನನಗೆ ಬಹಳವಾಗಿ ಇಷ್ಟವಾಗುತ್ತದೆ. ಎಲ್ಲ ದೇವತೆಗಳಿಗಿಂತಲೂ ಪತಿಯೇ ಪರದೇವತೆ.

ಅವಿಶೇಷೇಣ ತಸ್ಯಾಹಂ ಕುರ್ಯಾಂ ಧರ್ಮಂ ದ್ವಿಜೋತ್ತಮ ।
ಶುಶ್ರೂಷಾಯಾಃ ಫಲಂ ಪಶ್ಯ ಪತ್ಯುರ್ಬ್ರಾಹ್ಮಣ ಯಾದೃಶಮ್ ॥೩೨॥

ಎಲೈ ದ್ವಿಜೋತ್ತಮನೇ, ನಾನು ಅತಿಶಯವಾದ ಅವನ ಸೇವೆಯನ್ನು ಮಾಡಿ ಧರ್ಮಾಚರಣೆಯನ್ನು ಮಾಡುತ್ತೇನೆ. ಎಲೈ ಬ್ರಾಹ್ಮಣನೇ, ಪತಿಸೇವೆಯ ಫಲವು ಹೇಗಿರುತ್ತದೆ ಎಂಬುದನ್ನು ನೋಡು.

ಬಲಾಕಾ ಹಿ ತ್ವಯಾ ದಗ್ಧಾ ರೋಷಾತ್ ತದ್ ವಿದಿತಂ ಮಯಾ ।
ಕ್ರೋಧಃ ಶತ್ರುಃ ಶರೀರಸ್ಥೋ ಮನುಷ್ಯಾಣಾಂ ದ್ವಿಜೋತ್ತಮ ।
ಯಃ ಕ್ರೋಧಮೋಹೌ ತ್ಯಜತಿ ತಂ ದೇವಾ ಬ್ರಾಹ್ಮಣಂ ವಿದುಃ ॥೩೩॥

ನೀನು ರೋಷದಿಂದ ಬಲಾಕಪಕ್ಷಿಯನ್ನು ಸುಟ್ಟ ವಿಷಯವನ್ನು ನಾನು ತಿಳಿದಿದ್ದೇನೆ. ಎಲೈ ದ್ವಿಜಶ್ರೇಷ್ಠನೇ, ಮನುಷ್ಯರಿಗೆ ಕ್ರೋಧವು ಶರೀರದಲ್ಲಿಯೇ ಇರುವ ಶತ್ರು. ಯಾರವನು ಕ್ರೋಧ, ಮೋಹಗಳನ್ನು ತ್ಯಜಿಸುತ್ತಾನೆಯೋ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಯೋ ವದೇದಿಹ ಸತ್ಯಾನಿ ಗುರುಂ ಸಂತೋಷಯಿಷ್ಯತಿ(ಯೇತ ಚ) ।
ಹಿಂಸಿತಶ್ಚ ನ ಹಿಂಸೇತ ತಂ ದೇವಾ ಬ್ರಾಹ್ಮಣಂ ವಿದುಃ ॥೩೪॥

ಯಾವನು ಈ ಲೋಕದಲ್ಲಿ ಸತ್ಯವನ್ನೇ ನುಡಿಯುವನೋ, ಗುರುಗಳನ್ನು ಸಂತೋಷಪಡಿಸುವನೋ, ತನಗೆ ಹಿಂಸೆ ಮಾಡಿದರೂ ಇನ್ನೊಬ್ಬರನ್ನು ಹಿಂಸಿಸುವುದಿಲ್ಲವೋ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಜಿತೇಂದ್ರಿಯೋ ಧರ್ಮಪರಃ ಸ್ವಾಧ್ಯಾಯನಿರತಃ ಶುಚಿಃ ।
ಕಾಮಕ್ರೋಧೌ ವಶೌ ಯಸ್ಯ ತಂ ದೇವಾ ಬ್ರಾಹ್ಮಣಂ ವಿದುಃ ॥೩೫॥

ಯಾವನು ಜಿತೇಂದ್ರಿಯನೂ, ಧರ್ಮಪರನೂ, ಸ್ವಾಧ್ಯಾಯನಿರತನೂ, ಶುಚಿಯೂ, ಕಾಮಕ್ರೋಧವನ್ನು ವಶಪಡಿಸಿಕೊಂಡವನೂ ಆಗಿರುತ್ತಾನೆಯೋ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಯೋಽಧ್ಯಾಪಯೇದಧೀಯೀದ್ ವಾ ಯಾಜಯೇತ ಯಜೇತ ವಾ ।
ದದ್ಯಾದ್ ವಾಽಪಿ ಯಥಾಶಕ್ತಿ ತಂ ದೇವಾ ಬ್ರಾಹ್ಮಣಂ ವಿದುಃ ॥೩೬॥

ಯಾವನು ಅಧ್ಯಯನವನ್ನಾಗಲೀ, ಅಧ್ಯಾಪನೆಯನ್ನಾಗಲೀ ಮಾಡುತ್ತಾನೆಯೋ, ತಾನೇ ಯಾಗವನ್ನು ಮಾಡುವನೋ ಅಥವಾ ಇನ್ನೊಬ್ಬರಿಂದ ಮಾಡಿಸುವನೋ ಮತ್ತು ಯಥಾಶಕ್ತಿ ದಾನವನ್ನು ಮಾಡುವನೋ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಬ್ರಹ್ಮಚಾರೀ ವದಾನ್ಯೋ ಯೋಽಧೀಯೀತ ದ್ವಿಜಪುಂಗವಃ ।
ಸರ್ವಧರ್ಮೇಷು ಚ ರತಸ್ತಂ ದೇವಾ ಬ್ರಾಹ್ಮಣಂ ವಿದುಃ ॥೩೭॥

ಯಾವ ದ್ವಿಜಶ್ರೇಷ್ಠನು ಬ್ರಹ್ಮಚಾರಿಯಾಗಿ ಉದಾರನಾಗಿ ವೇದಾಧ್ಯಯನವನ್ನು ಮಾಡಿ ತನ್ನ ಎಲ್ಲಾ ಧರ್ಮಗಳಲ್ಲಿಯೂ ನಿರತನಾಗಿರುತ್ತಾನೆಯೋ ಅವನನ್ನು ದೇವತೆಗಳು ಬ್ರಾಹ್ಮಣನೆಂದು ತಿಳಿಯುತ್ತಾರೆ.

ಯದ್ ಬ್ರಾಹ್ಮಣಾನಾಂ ಕುಶಲಂ ತದೇಷಾಂ ಪರಿಕೀರ್ತಯೀತ್ ।
ಸತ್ಯಂ ತಥಾ ವ್ಯಾಹರತಾಂ ನಾನೃತೇ ರಮತೇ ಮನಃ ॥೩೮॥

ಬ್ರಾಹ್ಮಣರಲ್ಲಿ ಯಾವುದು ಒಳ್ಳೆಯದಿದೆಯೋ ಅದನ್ನೇ ಇನ್ನೊಬ್ಬರಿಗೆ ಹೇಳಬೇಕು. ಹಾಗೆ ಸತ್ಯವನ್ನು ನುಡಿಯುವವರಿಗೆ ಅನೃತದಲ್ಲಿ ಮನಸ್ಸು ತೊಡಗುವುದಿಲ್ಲ.

ಧರ್ಮಂ ತು ಬ್ರಾಹ್ಮಣಸ್ಯಾಹುಃ ಸ್ವಾಧ್ಯಾಯಂ ದಮಮಾರ್ಜವಮ್ ।
ಇಂದ್ರಿಯಾಣಾಂ ನಿಗ್ರಹಂ ಚ ಶಾಶ್ವತಂ ದ್ವಿಜಸತ್ತಮ ॥೩೯॥

ಎಲೈ ದ್ವಿಜಶ್ರೇಷ್ಠನೇ, ಬ್ರಾಹ್ಮಣರ ಶಾಶ್ವತವಾದ ಧರ್ಮವೆಂದರೆ ಸ್ವಾಧ್ಯಾಯ, ದೇವನಿಷ್ಠೆ, ಆರ್ಜವ ಮತ್ತು ಇಂದ್ರಿಯನಿಗ್ರಹವೆಂದು ಹೇಳುತ್ತಾರೆ.

ಸತ್ಯಾರ್ಜವೇ ಧರ್ಮಮಾಹುಃ ಪರಂ ಧರ್ಮವಿದೋ ಜನಾಃ ।
ದುರ್ಜ್ಞೇಯಃ ಶಾಶ್ವತೋ ಧರ್ಮಃ ಸ ಚ ಸತ್ಯೇ ಪ್ರತಿಷ್ಠಿತಃ ॥೪೦॥

ಧರ್ಮವನ್ನು ತಿಳಿದ ಜನರು ಸತ್ಯವಚನ ಮತ್ತು ಆರ್ಜವಗಳನ್ನು ಶ್ರೇಷ್ಠವಾದ ಧರ್ಮವೆಂದು ಹೇಳುತ್ತಾರೆ. ಶಾಶ್ವತವಾದ ಧರ್ಮವು ತಿಳಿಯಲು ಕಷ್ಟವಾದುದು. ಅದಾದರೂ ಸತ್ಯವಚನದಲ್ಲಿ ಆಶ್ರಿತವಾಗಿರುತ್ತದೆ.

ಶ್ರುತಿಪ್ರಮಾಣೋ ಧರ್ಮಃ ಸ್ಯಾದಿತಿ ವೃದ್ಧಾನುಶಾಸನಮ್ ।
ಬಹುಧಾ ದೃಶ್ಯತೇ ಧರ್ಮಃ ಸೂಕ್ಷ್ಮ ಏವ ದ್ವಿಜೋತ್ತಮ ॥೪೧॥

ವೇದವು ಹೇಳಿದುದು ಧರ್ಮ ಎಂಬುದು ವೃದ್ಧರ ಅನುಶಾಸನ. ಎಲೈ ಬ್ರಾಹ್ಮಣ ಶ್ರೇಷ್ಠನೇ, ಸೂಕ್ಷ್ಮವಾದ ಧರ್ಮವು ಅನೇಕವಿಧವಾಗಿರುತ್ತದೆ.

ಭವಾನಪಿ ಚ ಧರ್ಮಜ್ಞಃ ಸ್ವಾಧ್ಯಾಯನಿರತಃ ಶುಚಿಃ ।
ನ ತು ತತ್ತ್ವೇನ ಭಗವನ್ ಧರ್ಮಂ ವೇತ್ತೀತಿ ಮೇ ಮತಿಃ ॥೪೨॥

ನೀನೂ ಸಹ ಧರ್ಮಜ್ಞನೂ, ಸ್ವಾಧ್ಯಾಯನಿರತನೂ ಮತ್ತು ಶುಚಿಯೂ ಆಗಿದ್ದೀಯೆ. ಆದರೂ ಪೂಜ್ಯನೇ, ನೀನು ಧರ್ಮವನ್ನು ಸರಿಯಾಗಿ ತಿಳಿದಿಲ್ಲವೆಂದು ನನ್ನ ಅಭಿಪ್ರಾಯ.

ಮಾತಾಪಿತೃಭ್ಯಾಂ ಶುಶ್ರೂಷುಃ ಸತ್ಯವಾದೀ ಜಿತೇಂದ್ರಿಯಃ ।
ಮಿಥಿಲಾಯಾಂ ವಸೇದ್ ವ್ಯಾಧಃ ಸ ತೇ ಧರ್ಮಾನ್ ಪ್ರವಕ್ಷ್ಯತಿ ॥೪೩॥

ಮಿಥಿಲಾ ಪಟ್ಟಣದಲ್ಲಿ ತಂದೆತಾಯಿಯರ ಸೇವೆಯನ್ನು ಮಾಡಿಕೊಂಡು ಸತ್ಯವಾದಿಯೂ, ಜಿತೇಂದ್ರಿಯನೂ ಆದ ಒಬ್ಬ ವ್ಯಾಧನು ವಾಸಿಸುತ್ತಾನೆ. ಅವನು ನಿನಗೆ ಧರ್ಮವನ್ನು ಉಪದೇಶ ಮಾಡುವನು.

ತತ್ರ ಗಚ್ಛಸ್ವ ಭದ್ರಂ ತೇ ಯಥಾಕಾಮಂ ದ್ವಿಜೋತ್ತಮ ।
ವ್ಯಾಧಃ ಪರಮಧರ್ಮಾತ್ಮಾ ಸ ತೇ ಚ್ಛೇತ್ಸ್ಯತಿ ಸಂಶಯಾನ್ ॥೪೪॥

ಎಲೈ ದ್ವಿಜೋತ್ತಮನೇ, ನಿನಗೆ ಮಂಗಳವಾಗಲಿ. ನಿನಗೆ ಇಚ್ಛೆ ಬಂದಂತೆ ಅಲ್ಲಿಗೆ ಹೋಗು. ಪರಮ ಧರ್ಮಾತ್ಮನಾದ ಆ ವ್ಯಾಧನು ನಿನ್ನ ಸಂಶಯಗಳನ್ನು ಪರಿಹರಿಸುವನು.

ಅತ್ಯುಕ್ತಮಪಿ ಮೇ ಸರ್ವಂ ಕ್ಷಂತುಮರ್ಹಸ್ಯನಿಂದಿತ ।
ಸ್ತ್ರಿಯೋ ಹ್ಯವಧ್ಯಾಃ ಸರ್ವೇಷಾಂ ಯೇ ಚ ಧರ್ಮವಿದೋ ಜನಾಃ ॥

ಎಲೈ ಅನಿಂದಿತನಾದ ಬ್ರಾಹ್ಮಣನೇ, ನಾನು ಬಹಳ ಮಾತನಾಡಿದುದನ್ನು ಕ್ಷಮಿಸು. ಸ್ತ್ರೀಯರು ಮತ್ತು ಧರ್ಮವನ್ನು ತಿಳಿದ ಜನರು ಎಲ್ಲರಿಗೂ ಅವಧ್ಯರಷ್ಟೆ?

ಬ್ರಾಹ್ಮಣಃ

ಪ್ರೀತೋಽಸ್ಮಿ ತವ ಭದ್ರಂ ತೇ ಗತಃ ಕ್ರೋಧಶ್ಚ ಶೋಭನೇ ।
ಉಪಾಲಂಭಸ್ತ್ವಯಾಽತ್ಯುಕ್ತೋ ಮಮ ನಿಶ್ರೇಯಸಂ ಪರಮ್ ॥೪೬॥

ಸ್ವಸ್ತಿ ತೇಽಸ್ತು ಗಮಿಷ್ಯಾಮಿ ಸಾಧಯಿಷ್ಯಾಮಿ ಶೋಭನೇ ।
ಧನ್ಯಾ ತ್ವಮಸಿ ಕಲ್ಯಾಣಿ ಯಸ್ಯಾಸ್ತೇ ವೃತ್ತಮೀದೃಶಮ್ ॥೪೭॥

ಬ್ರಾಹ್ಮಣ– ಎಲೈ ಶುಭಸ್ವರೂಪಳೇ, ನಿನಗೆ ಮಂಗಳವಾಗಲಿ. ನನ್ನ ಕೋಪವು ಹೊರಟು ಹೋಗಿದೆ. ನಾನು ಪ್ರಸನ್ನನಾಗಿದ್ದೇನೆ. ನೀನು ಆಡಿದ ನಿಂದಾ ವಚನಗಳು ನನ್ನ ಶ್ರೇಯಸ್ಸಿಗೇ ಕಾರಣವಾಗಿವೆ. ಮಂಗಳಸ್ವರೂಪಳೇ, ನಿನಗೆ ಮಂಗಳವಾಗಲಿ. ನಾನು ಮಿಥಿಲಾಪಟ್ಟಣಕ್ಕೆ ಹೋಗಿ ನೀನು ಹೇಳಿದ ಕಾರ್ಯವನ್ನು ಸಾಧಿಸುವೆನು. ಎಲೌ ಕಲ್ಯಾಣಿಯೇ, ಇಂತಹ ನಡತೆಯುಳ್ಳ ನೀನು ಧನ್ಯಳಾದವಳು.

ಮಾರ್ಕಂಡೇಯಃ

ತಯಾ ವಿಸೃಷ್ಟೋ ನಿರ್ಗಮ್ಯ ಸ್ವಮೇವ ಭವನಂ ಯಯೌ ।
ವಿನಿಂದನ್ ಸ ಸ್ವಮಾತ್ಮಾನಂ ಕೌಶಿಕೋ ದ್ವಿಜಸತ್ತಮಃ ॥೪೮॥

ಅವಳಿಂದ ಅನುಮತಿಯನ್ನು ಪಡೆದ ಆ ಕೌಶಿಕ ಬ್ರಾಹ್ಮಣಶ್ರೇಷ್ಠನು ತನ್ನನ್ನೇ ತಾನು ನಿಂದಿಸಿಕೊಳ್ಳುತ್ತಾ ಅಲ್ಲಿಂದ ಹೊರಟು ತನ್ನ ಮನೆಯನ್ನು ಸೇರಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಿನವತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಪತಿವ್ರತೋಪಾಖ್ಯಾನೇ
ಅಷ್ಟಾದಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ಮೂರನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ನಾಲ್ಕನೆಯ ಅಧ್ಯಾಯ

ಮಾರ್ಕಂಡೇಯಃ

ಚಿಂತಯಿತ್ವಾ ತದಾಶ್ಚರ್ಯಂ ಸ್ತ್ರಿಯಾ ಪ್ರೋಕ್ತಮಶೇಷತಃ ।
ವಿನಿಂದನ್ ಸ ಸ್ವಮಾತ್ಮಾನಮಾಗಸ್ಕತ ಇವಾಬಭೌ ॥೧॥

ಮಾರ್ಕಂಡೇಯ– ಆ ಪತಿವ್ರತೆಯು ಹೇಳಿದುದೆಲ್ಲವನ್ನೂ ಮತ್ತು ಆ ಆರ್ಯವನ್ನು ಚಿಂತಿಸುತ್ತಾ ಕೌಶಿಕ ಬ್ರಾಹ್ಮಣನು ಅಪರಾಧವನ್ನು ಮಾಡಿದವನಂತೆ ತನ್ನನ್ನೇ ತಾನು ನಿಂದಿಸಿಕೊಂಡನು.

ಚಿಂತಯಾನಃ ಸ್ವಧರ್ಮಸ್ಯ ಸೂಕ್ಷ್ಮಂ ಗತಿಮವಾಪ್ನುಯಾತ್ ।
ಶ್ರದ್ದಧಾನೇನ ವೈ ಭಾವ್ಯಂ ಗಚ್ಛಾಮಿ ಮಿಥಿಲಾಮಹಮ್ ॥೨॥

ಕೃತಾತ್ಮಾ ಧರ್ಮವಿತ್ ತಸ್ಯಾಂ ವ್ಯಾಧೋ ನಿವಸತೇ ಕಿಲ ।
ತಂ ಗಚ್ಛಾಮ್ಯಹಮದ್ಯೈವ ಧರ್ಮಂ ಪ್ರಷ್ಟುಂ ತಪೋಧನಮ್ ॥೩॥

ತನ್ನ ಧರ್ಮವನ್ನು ಸತತವಾಗಿ ಚಿಂತಿಸುವವನು ಸೂಕ್ಷ್ಮವಾದ ಗತಿಯನ್ನು ಪಡೆಯಬಹುದು. ನಾನು ಶ್ರದ್ಧೆಯಿಂದ ಕೂಡಿದವನಾಗಿರಬೇಕು. ಮಿಥಿಲಾ ಪಟ್ಟಣಕ್ಕೆ ಹೋಗುತ್ತೇನೆ. ಅಲ್ಲಿ ಧನ್ಯನೂ, ಧರ್ಮಜ್ಞನೂ ಆದ ವ್ಯಾಧನು ವಾಸಿಸುತ್ತಾನಷ್ಟೆ? ಆ ತಪೋಧನನಿಂದ ಧರ್ಮವನ್ನು ಶ್ರವಣಮಾಡಲು ನಾನು ಈ ದಿನವೇ ಅಲ್ಲಿಗೆ ಹೋಗುತ್ತೇನೆ.

ಇತಿ ಸಂಚಿತ್ಯ ಮನಸಾ ಶ್ರದ್ದಧಾನಃ ಸ್ತ್ರಿಯಾ ವಚಃ ।
ಬಲಾಕಾಪ್ರತ್ಯಯೇನಾಸೌ ಧರ್ಮ್ಯೈಶ್ಚ ವಚನೈಃ ಶುಭೈಃ ।
ಸಂಪ್ರತಸ್ಥೇ ಸ ಮಿಥಿಲಾಂ ಕೌತೂಹಲಸಮನ್ವಿತಃ ॥೪॥

ಹೀಗೆ ಚಿಂತಿಸಿ ಆ ಬ್ರಾಹ್ಮಣನು ತನ್ನ ಮನಸ್ಸಿನಲ್ಲಿ ಆ ಸಾಧ್ವಿಯ ಮಾತುಗಳಲ್ಲಿ ಶ್ರದ್ಧೆಯನ್ನು ಇಟ್ಟು ಬಲಾಕಾ ಪಕ್ಷಿಯ ಉಲ್ಲೇಖದಿಂದಲೂ ಮತ್ತು ಅವಳ ಉಳಿದ ಧರ್ಮದ ಮಾತುಗಳಿಂದಲೂ ಅವಳನ್ನು ನಂಬಿ ಕುತೂಹಲ ಸಮನ್ವಿತನಾಗಿ ಮಿಥಿಲಾ ಪಟ್ಟಣಕ್ಕೆ ಹೊರಟನು.

ತತೋ ಜಗಾಮ ಮಿಥಿಲಾಂ ಜನಕೇನ ಸುರಕ್ಷಿತಾಮ್ ।
ಧರ್ಮಸೇತುಸಮಾಕೀರ್ಣಾಂ ಯಜ್ಞೋತ್ಸವಮತೀಂ ಶುಭಾಮ್ ॥೫॥

ಅನಂತರ ಅವನು ಜನಕರಾಜನಿಂದ ಸುರಕ್ಷಿತವಾದ ಧರ್ಮಸೇತುಗಳಿಂದ ನಿಬಿಡವಾದ ಯಜ್ಞೋತ್ಸವಗಳಿಂದ ತುಂಬಿದ ಶುಭವಾದ ಮಿಥಿಲಾಪಟ್ಟಣವನ್ನು ತಲುಪಿದನು.

ಗೋಪುರಾಟ್ಟಾಲಕವತೀಂ ಹರ್ಮ್ಯಪ್ರಾಕಾರಶೋಭನಾಮ್ ॥೬॥

ಪ್ರವಿಶ್ಯ ನಗರೀಂ ರಮ್ಯಾಂ ವಿಮಾನೈರ್ಬಹುಭಿರ್ಯುತಾಮ್ ।
ಪುಷ್ಪೈಶ್ಚ(ಪಣ್ಯೈಶ್ಚ) ಬಹುಭಿರ್ಯುಕ್ತಾಂ ಸುವಿಭಕ್ತಮಹಾಪಥಾಮ್॥೭॥

ಗೋಪುರ ಮತ್ತು ಉಪ್ಪರಿಗೆಗಳಿಂದ ಕೂಡಿದ ಅನೇಕ ಅಂತಸ್ತಿನ ಮನೆಗಳು ಮತ್ತು ಕೋಟೆಯ ಗೋಡೆಗಳಿಂದ ಶೋಭಿತವಾದ ಅನೇಕ ಅಂತಸ್ತಿನ ಅನೇಕ ಮನೆಗಳಿಂದ ಕೂಡಿದ ಆ ಮನೋಹರವಾದ ನಗರವನ್ನು ತಲುಪಿದನು.

ಅಶ್ವೈ ರಥೈಸ್ತಥಾ ಯಾನೈ(ನಾಗೈ)ರ್ಯೋಧೈಶ್ಚ ಬಹುಭಿರ್ಯುತಾಮ್ ।
ಹೃಷ್ಟಪುಷ್ಟಜನಾಕೀರ್ಣಾಂ ನಿತ್ಯೋತ್ಸವಸಮಾಕುಲಾಮ್ ॥೮॥

ಸೋಽಪಶ್ಯದ್ ಬಹುವೃತ್ತಾಂತಾಂ ಬ್ರಾಹ್ಮಣಃ ಸಮತಿಕ್ರಮನ್ ॥೯॥

ಧರ್ಮವ್ಯಾಧಮಪೃಚ್ಛಚ್ಚ ಸ ಚಾಸ್ಯ ಕಥಿತೋ ದ್ವಿಜೈಃ ।
ಅಪಶ್ಯತ್ ತತ್ರ ಗತ್ವಾ ತಂ ಸೂನಾಮಧ್ಯೇ ವ್ಯವಸ್ಥಿತಮ್ ॥೧೦॥

ಅನೇಕ ಪುಷ್ಪಗಳಿಂದ ಕೂಡಿದ ದೊಡ್ಡ ದೊಡ್ಡ ಮಾರ್ಗಗಳಿಂದ ಕೂಡಿದ ಅಶ್ವರಥ ಯಾನಗಳಿಂದಲೂ, ಅನೇಕ ಯೋಧರಿಂದಲೂ ತುಂಬಿದ ಸಂತೋಷಗೊಂಡ ಪುಷ್ಪ ಜನರಿಂದ ನಿಬಿಡವಾದ ನಿತ್ಯೋತ್ಸವವನ್ನು ಹೊಂದಿದ ಆ ನಗರವನ್ನು ಪ್ರವೇಶಿಸಿದನು. ಆ ಬ್ರಾಹ್ಮಣನು ಮುಂದೆ ನಡೆಯುತ್ತಾ ಅನೇಕ ವಿಷಯಗಳನ್ನು ನೋಡಿದನು. ಅವನು ಧರ್ಮವ್ಯಾಧನನ್ನು ವಿಚಾರಿಸಿದಾಗ ಬ್ರಾಹ್ಮಣರು ಇನ್ನೊಬ್ಬರು ಕೊಂದ ಪ್ರಾಣಿಗಳ ಮಾಂಸವನ್ನು ಕತ್ತರಿಸಿ ಮಾರುವ ಅಂಗಡಿಯ ಮಧ್ಯದಲ್ಲಿ ಅವನು ಕುಳಿತಿರುವುದನ್ನು ಹೇಳಿದರು. ಅವನು ಅಲ್ಲಿಗೆ ಹೋಗಿ ಆ ಧರ್ಮವ್ಯಾಧನನ್ನು ನೋಡಿದನು.

ಮಾರ್ಗಮಾಹಿಷಮಾಂಸಾನಿ ವಿಕ್ರೀಣಂತಂ ತಪಸ್ವಿನಮ್ ।
ಆಕುಲತ್ವಾತ್ತು ಸೇತೂನಾಮೇಕಾಂತೇ ಸಂಸ್ಥಿತೋ ದ್ವಿಜಃ ॥೧೧॥

ಧರ್ಮಸೇತುಗಳ ಚಿಂತನೆಯಿಂದ ಆಕ್ರಾಂತವಾದ ಮನಸ್ಸಿದ್ದ ಕಾರಣದಿಂದ ಏಕಾಂತದಲ್ಲಿ ಕುಳಿತಿದ್ದ ಆ ಬ್ರಾಹ್ಮಣನನ್ನು ಜಿಂಕೆ, ಮಹಿಷ ಮಾಂಸಗಳನ್ನು ಮಾರುತ್ತಿದ್ದ ತಪಸ್ವಿಯಾದ ವ್ಯಾಧನು ನೋಡಿದನು.

ಸ ತು ಜ್ಞಾತ್ವಾ ದ್ವಿಜಂ ಪ್ರಾಪ್ತಂ ಸಹಸಾ ಸಂಭ್ರಾಮೋತ್ಥಿತಃ ।
ಆಜಗಾಮ ಯತೋ ವಿಪ್ರಃ ಸ್ಥಿತಃ ಏಕಾಂತ ಆಸನೇ ॥೧೨॥

ಧರ್ಮವ್ಯಾಧನು ಬ್ರಾಹ್ಮಣನು ಬಂದಿದ್ದನ್ನು ತಿಳಿದು ಸಂಭ್ರಮದಿಂದ ಬೇಗ ಕುಳಿತಿದ್ದ ಆಸನದಿಂದ ಮೇಲೆದ್ದು ವಿಪ್ರನು ಏಕಾಂತವಾದ ಆಸನದಲ್ಲಿ ಕುಳಿತಲ್ಲಿಗೆ ಬಂದನು.

ವ್ಯಾಧಃ

ಅಭಿವಾದಯೇ ತ್ವಾಂ ಭಗವನ್ ಸ್ವಾಗತಂ ತೇ ದ್ವಿಜೋತ್ತಮ ।
ಅಹಂ ವ್ಯಾಧೋ ಹಿ ಭದ್ರಂ ತೇ ಕಿಂ ಕರೋಮಿ ಪ್ರಶಾಧಿ ಮಾಮ್ ॥

ವ್ಯಾಧ– ಬ್ರಾಹ್ಮಣರೇ, ನಿಮಗೆ ನಮಸ್ಕಾರವನ್ನು ಮಾಡುತ್ತೇನೆ. ಪೂಜ್ಯರೇ, ನಿಮಗೆ ಸ್ವಾಗತ. ನಾನೇ ವ್ಯಾಧ. ನಿಮಗೆ ಮಂಗಳವಾಗಲಿ. ನಾನು ನಿಮಗೆ ಏನನ್ನು ಮಾಡಲಿ? ಆಜ್ಞೆಯನ್ನು ಮಾಡಿ.

ಏಕಪತ್ನ್ಯಾ ಯದುಕ್ತೋಽಸಿ ಗಚ್ಛ ತ್ವಂ ಮಿಥಿಲಾಮಿತಿ ।
ಜಾನಾಮ್ಯೇತದಹಂ ಸರ್ವಂ ಯದರ್ಥಂ ತ್ವಮಿಹಾಗತಃ ॥೧೪॥

ಪತಿವ್ರತೆಯು ಮಿಥಿಲಾಪಟ್ಟಣಕ್ಕೆ ಹೋಗು ಎಂದು ಹೇಳಿರುವಳಷ್ಟೆ? ನಾನು ಅದೆಲ್ಲವನ್ನೂ ಮತ್ತು ನೀವು ಇಲ್ಲಿಗೆ ಬಂದ ಉದ್ದೇಶವನ್ನೂ ತಿಳಿದಿದ್ದೇನೆ.

ಮಾರ್ಕಂಡೇಯಃ

ಶ್ರುತ್ವಾ ಚ ತಸ್ಯ ತದಾಖ್ಯಂ ಸ ವಿಪ್ರೋ ಭೃಶವಿಸ್ಮಿತಃ ।
ದ್ವಿತೀಯಮಿದಮಾಶ್ಚರ್ಯಮಿತ್ಯಚಿಂತಯತ ದ್ವಿಜಃ ॥೧೫॥

ಮಾರ್ಕಂಡೇಯ– ಅವನ ಆ ಮಾತನ್ನು ಕೇಳಿ ಬ್ರಾಹ್ಮಣನು ಬಹಳ ವಿಸ್ಮಿತನಾದನು. ಆ ಬ್ರಾಹ್ಮಣನು ಇದು ಎರಡನೆಯ ಆಶ್ಚರ್ಯ ಎಂದು ಮನಸ್ಸಿನಲ್ಲಿ ಚಿಂತಿಸಿದನು.

ಅದೇಶಸ್ಥಂ ಹಿ ತೇ ಸ್ಥಾನಮಿತಿ ವ್ಯಾಧೋಽಬ್ರವೀದಿದಮ್ ।
ಗೃಹಂ ಗಚ್ಛಾವ ಭಗವನ್ ಯದಿ ತೇ ರೋಚತೇಽನಘ ।
ಬಾಢಮಿತ್ಯೇವ ತಂ ವಿಪ್ರೋ ಹೃಷ್ಟೋ ವಚನಮಬ್ರವೀತ್ ॥೧೬॥

ಅಗ್ರತಸ್ತು ದ್ವಿಜಂ ಕೃತ್ವಾ ಸ ಜಗಾಮ ಗೃಹಂ ಪ್ರತಿ ॥೧೭॥

ವ್ಯಾಧನು ಆ ಬ್ರಾಹ್ಮಣನನ್ನು ಕುರಿತು, ಎಲೈ ಬ್ರಾಹ್ಮಣರೇ ಈ ಸ್ಥಾನವು ನಿಮಗೆ ಯೋಗ್ಯವಾದುದಲ್ಲ. ನಿಮಗೆ ಇಷ್ಟವಾಗುವುದಾದರೆ ಪೂಜ್ಯರೇ, ನನ್ನ ಮನೆಗೆ ಹೋಗೋಣ ಎಂದು ಹೇಳಿದನು. ಆ ಬ್ರಾಹ್ಮಣನು ಹಾಗೆಯೇ ಆಗಲಿ ಎಂದು ಸಂತೋಷದಿಂದ ಅವನಿಗೆ ಹೇಳಿದನು. ಆ ಬ್ರಾಹ್ಮಣನನ್ನು ಮುಂದೆ ಮಾಡಿಕೊಂಡು ವ್ಯಾಧನು ತನ್ನ ಮನೆಗೆ ಹೋದನು.

ಪ್ರವಿಶ್ಯ ಚ ಗೃಹಂ ರಮ್ಯಮಾಸನೇನಾಭಿಪೂಜಿತಃ ।
ಪಾದ್ಯಮಾಚಮನೀಯಂಚ ಪ್ರತಿಗೃಹ್ಯ ದ್ವಿಜೋತ್ತಮಃ ॥೧೮॥

ಅರ್ಘ್ಯೇಣ ಚ ಸ ವೈ ತೇನ ವ್ಯಾಧೇನ ದ್ವಿಜಸತ್ತಮಃ ।
ತತಃ ಸುಖೋಪವಿಷ್ಟಸ್ತಂ ವ್ಯಾಧಂ ವಚನಮಬ್ರವೀತ್ ॥೧೯॥

ತನ್ನ ಸುಂದರವಾದ ಮನೆಯನ್ನು ಪ್ರವೇಶಿಸಿ ಆ ಬ್ರಾಹ್ಮಣನಿಗೆ ಆಸನವನ್ನು ನೀಡಿ ಅವನನ್ನು ಪೂಜಿಸಿದನು. ಆ ಬ್ರಾಹ್ಮಣ ಶ್ರೇಷ್ಠನು ವ್ಯಾಧನಿಂದ ಪಾದ್ಯ, ಆಚಮನೀಯ ಮತ್ತು ಅರ್ಘ್ಯಗಳನ್ನು ಸ್ವೀಕರಿಸಿ ಪೂಜಿತನಾದನು. ಅನಂತರ ಸುಖವಾಗಿ ಕುಳಿತುಕೊಂಡು ವ್ಯಾಧನನ್ನು ಕುರಿತು ಬ್ರಾಹ್ಮಣನು ಹೀಗೆ ಹೇಳಿದನು.

ಕರ್ಮೈತದ್ ವೈ ನ ಸದೃಶಂ ಭವತಃ ಪ್ರತಿಭಾತಿ ಮೇ ।
ಅನುತಪ್ಯೇ ಭೃಶಂ ತಾತ ತವ ಘೋರೇಣ ಕರ್ಮಣಾ ॥೨೦॥

ಎಲೈ ವ್ಯಾಧನೇ, ನಿನ್ನ ಈ ಕರ್ಮವು ನಿನಗೆ ಸದೃಶವಾದುದಲ್ಲ ಎಂದು ನನಗೆ ತೋರುತ್ತದೆ. ಎಲೈ ಪ್ರೀತಿಪಾತ್ರನೇ, ನಿನ್ನ ಘೋರವಾದ ಕರ್ಮದಿಂದ ನಾನು ನಿನ್ನ ಮೇಲೆ ಬಹಳ ಅನುತಾಪವುಳ್ಳವನಾಗಿದ್ದೇನೆ.

ವ್ಯಾಧಃ

ಕುಲೋಚಿತಮಿದಂ ಕರ್ಮ ಪಿತೃಪೈತಾಮಹಂ ಪರಮ್ ।
ವರ್ತಮಾನಸ್ಯ ಮೇ ಧರ್ಮೇ ಸ್ವೇ ಮನ್ಯುಂ ಮಾ ಕೃಥಾ ದ್ವಿಜ ॥೨೧॥

ವ್ಯಾಧ– ಎಲೈ ಬ್ರಾಹ್ಮಣರೇ, ಇದು ತಂದೆ ತಾತಂದಿರ ಕಾಲದಿಂದ ನಡೆದುಬಂದ ನಮ್ಮ ಕುಲೋಚಿತವಾದ ಶ್ರೇಷ್ಠವಾದ ಧರ್ಮ. ನನ್ನ ಧರ್ಮದಲ್ಲಿ ಇರುವ ನನ್ನ ಮೇಲೆ ನೀವು ಅಸಮಾಧಾನವನ್ನು ಪಡಬಾರದು.

ವಿಧಾತ್ರಾ ವಿಹಿತಂ ಪೂರ್ವಂ ಕರ್ಮ ಸ್ವಮನುಪಾಲಯನ್ ।
ಪ್ರಯತ್ನಾಚ್ಚ ಗುರೂ ವೃದ್ಧೌ ಶುಶ್ರೂಷೇಽಹಂ ದ್ವಿಜೋತ್ತಮ ॥೨೨॥

ಎಲೈ ದ್ವಿಜೋತ್ತಮರೇ, ದೈವದಿಂದ ಮೊದಲೇ ವಿಹಿತವಾದ ನನ್ನ ಕರ್ಮವನ್ನು ನಾನು ಪಾಲಿಸುತ್ತಾ ವೃದ್ಧರಾದ ಮಾತಾಪಿತೃಗಳಿಗೆ ಮತ್ತು ಗುರುಗಳಿಗೆ ಪ್ರಯತ್ನಪೂರ್ವಕವಾಗಿ ಸೇವೆ ಮಾಡುತ್ತೇನೆ.

ಸತ್ಯಂ ವದೇ ನಾಭ್ಯಸೂಯೇ ಯಥಾಶಕ್ತಿ ದದಾಮಿ ಚ ।
ದೇವತಾತಿಥಿಭೃತ್ಯಾನಾಮವಶಿಷ್ಟೇನ ವರ್ತಯೇ ॥೨೩॥

ನಾನು ಸತ್ಯವನ್ನು ಮಾತನಾಡುತ್ತೇನೆ. ಅಸೂಯೆಯನ್ನು ಪಡುವುದಿಲ್ಲ. ನನ್ನ ಶಕ್ತಿ ಇದ್ದಷ್ಟು ದಾನವನ್ನು ಮಾಡುತ್ತೇನೆ. ದೇವತಾತಿಥಿ ಭೃತ್ಯರಿಗೆ ಅನ್ನವನ್ನು ನೀಡಿ ಉಳಿದುದನ್ನು ಸ್ವೀಕರಿಸುತ್ತೇನೆ.

ನ ಕುತ್ಸಯಾಮ್ಯಹಂ ಕಿಂಚಿನ್ನ ಗರ್ಹೇ ಬಲವತ್ತರಮ್ ।
ಕೃತಮನ್ವೇತಿ ಕರ್ತಾರಂ ಪುರಾ ಕರ್ಮ ದ್ವಿಜೋತ್ತಮ ॥೨೪॥

ಎಲೈ ದ್ವಿಜೋತ್ತಮರೇ, ನಾನು ಯಾರನ್ನೂ ಅವಮಾನ ಮಾಡುವುದಿಲ್ಲ. ಯಾರನ್ನೂ ಗಟ್ಟಿಯಾಗಿ ನಿಂದಿಸುವುದಿಲ್ಲ. ಹಿಂದೆ ಮಾಡಿದ ಕರ್ಮವು ಅದರ ಕರ್ತೃವನ್ನು ಅನುಸರಿಸುತ್ತದೆ.

ಕೃಷಿಗೋರಕ್ಷವಾಣಿಜ್ಯಮಿಹ ಲೋಕಸ್ಯ ಜೀವನಮ್ ।
ದಂಡನೀತಿಸ್ತ್ರಯೀ ವಿದ್ಯಾ ತೇನ ಲೋಕೋ ಭವತ್ಯುತ ॥೨೫॥

ಕೃಷಿಗೋರಕ್ಷ ಮತ್ತು ವಾಣಿಜ್ಯಗಳು ಜನರ ಜೀವನೋಪಾಯಗಳು. ಇನ್ನು ಕೆಲವರಿಗೆ ದಂಡನೀತಿಯೂ, ಇನ್ನು ಕೆಲವರಿಗೆ ವೇದವಿದ್ಯೆಯೂ ಜೀವನೋಪಾಯವಾಗುತ್ತವೆ.

ಕರ್ಮ ಶೂದ್ರೇ ಕೃಷಿರ್ವೈಶ್ಯೇ ಸಂಗ್ರಾಮಃ ಕ್ಷತ್ರಿಯೇ ಸ್ಮೃತಃ ।
ಬ್ರಹ್ಮಚರ್ಯಂ ತಪೋ ಮಂತ್ರಾಃ ಸತ್ಯಂ ಚ ಬ್ರಾಹ್ಮಣೇ ಸದಾ ॥೨೬॥

ಶೂದ್ರನಿಗೆ ಕರ್ಮವು, ವೈಶ್ಯರಿಗೆ ಕೃಷಿಯು, ಕ್ಷತ್ರಿಯರಿಗೆ ಯುದ್ಧವು ಧರ್ಮವೆಂದು ಹೇಳಲ್ಪಡುತ್ತದೆ. ಬ್ರಹ್ಮಚರ್ಯ, ತಪಸ್ಸು, ಮಂತ್ರ, ಸತ್ಯವಚನ ಇವು ಯಾವಾಗಲೂ ಬ್ರಾಹ್ಮಣನ ಧರ್ಮಗಳು.

ರಾಜಾ ಪ್ರಶಾಸ್ತಿ ಧರ್ಮೇಣ ಸ್ವಕರ್ಮನಿರತಾಃ ಪ್ರಜಾಃ ।
ವಿಕರ್ಮಾಣಶ್ಚ ಯೇ ಕೇಚಿತ್ತಾನ್ ಯುನಕ್ತಿ ಸ್ವಕರ್ಮಸು ॥೨೭॥

ರಾಜನು ಸ್ವಕರ್ಮನಿರತರಾದ ಪ್ರಜೆಗಳನ್ನು ಧರ್ಮದಿಂದ ಪಾಲಿಸುತ್ತಾನೆ. ವಿಕರ್ಮದಲ್ಲಿನಿರತರಾದವರನ್ನು ಸರಿಯಾದ ಕರ್ಮಗಳಲ್ಲಿ ತೊಡಗಿಸುತ್ತಾನೆ.

ಭೇತವ್ಯಂ ಹಿ ಸದಾ ರಾಜ್ಞಃ ಪ್ರಜಾನಾಮಧಿಪಾ ಹಿ ತೇ ।
ವಾರಯಂತಿ ವಿಕರ್ಮಸ್ಥಂ ನೃಪಾ ಮೃಗಮಿವೇಷುಭಿಃ ॥೨೮॥

ರಾಜನಿಗೆ ಯಾವಾಗಲೂ ಹೆದರಬೇಕು. ರಾಜರು ಪ್ರಜೆಗಳ ಅಧಿಪತಿಗಳಷ್ಟೆ? ಅವರು ಮೃಗವನ್ನು ಬಾಣಗಳಿಂದ ತಡೆದಂತೆ ವಿಕರ್ಮವನ್ನು ಮಾಡುವ ಪ್ರಜೆಗಳನ್ನು ವಿಕ್ರಮವನ್ನು ಮಾಡದಂತೆ ತಡೆಯುತ್ತಾರೆ.

ಜನಕಸ್ಯೇಹ ವಿಪ್ರರ್ಷೇ ವಿಕರ್ಮಸ್ಥೋ ನ ವಿದ್ಯತೇ ।
ಸ್ವಕರ್ಮನಿರತಾ ವರ್ಣಾಶ್ಚತ್ವಾರೋಽಪಿ ದ್ವಿಜೋತ್ತಮ ॥೨೯॥

ಎಲೈ ವಿಪ್ರರ್ಷಿಗಳೇ, ಜನಕನ ಈ ರಾಜ್ಯದಲ್ಲಿ ಯಾವನೂ ವಿಕರ್ಮವನ್ನು ಮಾಡುವುದಿಲ್ಲ. ದ್ವಿಜೋತ್ತಮರೇ, ನಾಲ್ಕು ವರ್ಣಗಳೂ ಸಹ ಸ್ವಕರ್ಮನಿರತವಾಗಿರುತ್ತವೆ.

ಸ ಏಷ ಜನಕೋ ರಾಜಾ ದುರ್ವೃತ್ತಮಪಿ ಚೇತ್ ಸುತಮ್ ।
ದಂಡ್ಯಂ ದಂಡೇ ನಿಕ್ಷಿಪತಿ ತಥಾ ನ ಗ್ಲಾತಿ ಧಾರ್ಮಿಕಮ್ ॥೩೦॥

ಈ ಜನಕರಾಜನಾದರೂ ತನ್ನ ಪುತ್ರನೇ ದುಷ್ಕರ್ಮವನ್ನು ಮಾಡಿ ದಂಡಕ್ಕೆ ಯೋಗ್ಯನಾದರೂ ಅವನನ್ನು ದಂಡಿಸುತ್ತಾನೆ. ಮತ್ತು ಹಾಗೆಯೇ ಯಾವ ಧಾರ್ಮಿಕನಿಗೂ ದುಃಖವನ್ನು ಕೊಡುವುದಿಲ್ಲ.

ಸುಯುಕ್ತಚಾರೋ ನೃಪತಿಃ ಸರ್ವಂ ಧರ್ಮೇಣ ಪಶ್ಯತಿ ।
ಶ್ರೀಶ್ಚ ರಾಜ್ಯಂ ಚ ದಂಡಶ್ಚ ಕ್ಷತ್ರಿಯಾಣಾಂ ದ್ವಿಜೋತ್ತಮ ॥೩೧॥

ಒಳ್ಳೆಯ ನಡತೆಯನ್ನು ಹೊಂದಿದ ರಾಜನು ಎಲ್ಲವನ್ನೂ ಧರ್ಮದಿಂದ ನೋಡುತ್ತಾನೆ. ಎಲೈ ದ್ವಿಜೋತ್ತಮರೇ, ಕ್ಷತ್ರಿಯರಿಗೆ ಸಂಪತ್ತು, ರಾಜ್ಯವು ಮತ್ತು ದಂಡಾಧಿಕಾರವು ಧರ್ಮದಿಂದ ಪ್ರಾಪ್ತವಾಗುತ್ತದೆ.

ರಾಜಾನೋ ಹಿ ಸ್ವಧರ್ಮೇಣ ಶ್ರಿಯಮಿಚ್ಛಂತಿ ಭೂಯಸೀಮ್ ।
ಸರ್ವೇಷಾಮೇವ ವರ್ಣಾನಾಂ ತ್ರಾತಾ ರಾಜಾ ಭವತ್ಯುತ ॥೩೨॥

ರಾಜರೂ ಕೂಡ ಧರ್ಮದಿಂದಲೇ ಬಹಳವಾದ ಸಂಪತ್ತನ್ನು ಪಡೆಯಲು ಬಯಸುತ್ತಾರೆ. ಮತ್ತು ರಾಜನು ಎಲ್ಲ ವರ್ಣದವರನ್ನೂ ರಕ್ಷಿಸುತ್ತಾನೆ.

ಪರೇಣ ಹಿ ಹತಾನ್ ಬ್ರಹ್ಮನ್ ವರಾಹಮಹಿಷಾನಹಮ್ ।
ನ ಸ್ವಯಂ ಹನ್ಮಿ ವಿಪ್ರರ್ಷೇ ವಿಕ್ರೀಣಾಮಿ ಸದಾ ತ್ವಹಮ್ ॥೩೩॥

ಎಲೈ ಬ್ರಾಹ್ಮಣರೇ, ನಾನು ಸ್ವತಃ ಪ್ರಾಣಿಯನ್ನು ಕೊಲ್ಲುವುದಿಲ್ಲ. ಇನ್ನೊಬ್ಬರು ಕೊಂದ ವರಾಹ, ಮಹಿಷಗಳನ್ನು ನಾನು ಮಾರುತ್ತೇನೆ.

ನ ಭಕ್ಷಯಾಮಿ ಮಾಂಸಾನಿ ಋತುಗಾಮೀ ತಥಾ ಹ್ಯಹಮ್ ।
ಸದೋಪವಾಸೀ ಚ ತಥಾ ನಕ್ತಭೋಜೀ ಸದಾ ದ್ವಿಜ ॥೩೪॥

ನಾನು ಮಾಂಸವನ್ನು ತಿನ್ನುವುದಿಲ್ಲ. ಪತ್ನಿಯಲ್ಲಿ ಋತುಗಾಮಿಯಾಗಿದ್ದೇನೆ. ಎಲೈ ಬ್ರಾಹ್ಮಣರೇ, ನಾನು ಶಾಸ್ತ್ರವಿಹಿತವಾದ ಉಪವಾಸವನ್ನು ಮಾಡುತ್ತಾ ರಾತ್ರಿಯ ಕಾಲದಲ್ಲಿ ಮಾತ್ರ ಭೋಜನವನ್ನು ಮಾಡುತ್ತೇನೆ.

ಅಶೀಲಶ್ಚಾಪಿ ಪುರುಷೋ ಭೂತ್ವಾ ಭವತಿ ಶೀಲವಾನ್ ।
ಪ್ರಾಣಿಹಿಂಸಾರತಶ್ಚಾಪಿ ಭವತೇ ಧಾರ್ಮಿಕಃ ಪುನಃ ॥೩೫॥

ಶೀಲವಿಲ್ಲದ ಪುರುಷನೂ ಸಹ ಧರ್ಮವನ್ನು ಆಚರಿಸಿದರೆ ಶೀಲವಂತನಾಗುತ್ತಾನೆ. ಮತ್ತು ಪ್ರಾಣಿಹಿಂಸಾರತನಾದವನೂ ಧಾರ್ಮಿಕನಾಗುತ್ತಾನೆ.

ವ್ಯಭಿಚಾರಾನ್ನರೇಂದ್ರಾಣಾಂ ಧರ್ಮಃ ಸಂಕೀರ್ಯತೇ ಮಹಾನ್ ।
ಅಧರ್ಮೋ-ವರ್ಧತೇ ಚಾಪಿ ಸಂಕೀರ್ಯಂತೇ ತತಃ ಪ್ರಜಾಃ ॥೩೬॥

ರಾಜರು ತಮ್ಮ ಧರ್ಮವನ್ನು ಮೀರಿ ನಡೆಯುವುದರಿಂದ ದೊಡ್ಡ ಧರ್ಮಸಂಕರವುಂಟಾಗುತ್ತದೆ. ಅಧರ್ಮವು ಹೆಚ್ಚಾಗುತ್ತದೆ ಮತ್ತು ಪ್ರಜೆಗಳಲ್ಲಿ ವರ್ಣಸಂಕರ ಉಂಟಾಗುತ್ತದೆ.

ಕುರುಂಡಾ ವಾಮನಾಃ ಕುಬ್ಜಾಃ ಸ್ಥೂಲಶೀರ್ಷಾಸ್ತಥೈವ ಚ ।
ಕ್ಲೀಬಾಶ್ಚಾಂಧಾಶ್ಚ ಬಧಿರಾ ಜಾಯಂತೇ ಲಂಬಚೂಚುಕಾಃ ।
ಪಾರ್ಥಿವಾನಾಮಧರ್ಮತ್ವಾತ್ ಪ್ರಜಾನಾಮಭವಃ ಸದಾ ॥೩೭॥

ವಿಕಾರವಾದ ತಲೆಯುಳ್ಳವರು, ದೇಹವೆಲ್ಲವೂ ಹ್ರಸ್ವರಾದವರು, ಪಾದಗಳಲ್ಲಿ ಮಾತ್ರ ಹ್ರಸ್ವರಾದವರು, ದಪ್ಪತಲೆಯನ್ನು ಹೊಂದಿದವರು, ನಪುಂಸಕರು, ಕುರುಡರು, ಕಿವುಡರು, ಇಳಿಬಿದ್ದಸ್ತನವುಳ್ಳವರು ಜನಿಸುತ್ತಾರೆ. ರಾಜರ ಅಧರ್ಮದಿಂದ ಪ್ರಜೆಗಳಿಗೆ ಅಮಂಗಲವುಂಟಾಗುತ್ತದೆ..

ಸ ಏಷ ರಾಜಾ ಜನಕಃ ಪ್ರಜಾ ಧರ್ಮೇಣ ಪಶ್ಯತಿ ॥೩೮॥

ಅನುಗೃಹ್ಣನ್ ಪ್ರಜಾಃ ಸರ್ವಾ ಸ್ವಧರ್ಮನಿರತಾಃ ಸದಾ ।
ಪಾತ್ಯೇವ ರಾಜಾ ಜನಕಃ ಪಿತೃವದ್ ದ್ವಿಜಸತ್ತಮ ॥೩೯॥

ಈ ಜನಕರಾಜನು ಸ್ವಧರ್ಮನಿರತರಾದ ಎಲ್ಲಾ ಪ್ರಜೆಗಳನ್ನೂ ಅನುಗ್ರಹಿಸುತ್ತಾ, ಪ್ರಜೆಗಳನ್ನು ಸದಾ ಧರ್ಮದಿಂದಲೇ ನೋಡುತ್ತಾನೆ. ಎಲೈ ದ್ವಿಜಶ್ರೇಷ್ಠನೇ, ಜನಕರಾಜನು ತಂದೆಯಂತೆ ಪ್ರಜೆಗಳನ್ನು ಪಾಲಿಸುತ್ತಾನೆ.

ಯೇ ಚೈವ ಮಾಂ ಪ್ರಶಂಸಂತಿ ಯೇ ಚ ನಿಂದಂತಿ ಮಾನವಾಃ ।
ಸರ್ವಾನ್ ಸುಪರಿಣೇತೇನ ಕರ್ಮಣಾ ತೋಷಯಾಮ್ಯಹಮ್ ॥೪೦॥

ಯಾರು ನನ್ನನ್ನು ಹೊಗಳುತ್ತಾರೋ ಅಥವಾ ಯಾವ ಮನುಷ್ಯರು ನನ್ನನ್ನು ನಿಂದಿಸುತ್ತಾರೋ ಅವರನ್ನು ಎಲ್ಲಾ ಅವಸ್ಥೆಗಳಲ್ಲಿಯೂ ನೀತಿಯುಕ್ತವಾದ ಕರ್ಮದಿಂದ ನಾನು ಸಂತೋಷಪಡಿಸುತ್ತೇನೆ.

ಯೇ ಜೀವಂತಿ ಸ್ವಧರ್ಮೇಣ ಸಂಯುಂಜಂತೇ ಚ ಪಾರ್ಥಿವಾಃ ।
ನ ಕಿಂಚಿದುಪಜೀವಂತಿ ದಾಂತಾ ಉತ್ಥಾನಶೀಲಿನಃ ॥೪೧॥

ಶಕ್ಯಾಽನ್ನದಾನಂ ಸತತಂ ತಿತಿಕ್ಷಾ ಧರ್ಮನಿತ್ಯತಾ ।
ಯಥಾರ್ಹಂ ಪ್ರತಿಪೂಜಾ ಚ ಸರ್ವಭೂತೇಷು ವೈ ಸದಾ ॥೪೨॥

ತ್ಯಾಗಾನ್ನಾನ್ಯತ್ರ ಮರ್ತ್ಯಾನಾಂ ಗುಣಾಸ್ತಿಷ್ಠಂತಿ ಪೂರುಷೇ ।

ಯಾವ ರಾಜರು ಸ್ವಧರ್ಮದಿಂದ ಜೀವಿಸುತ್ತಾರೋ ಅವರು ಸಂಪತ್ತಿನಿಂದ ಯುಕ್ತರಾಗುತ್ತಾರೆ. ಯಾರು ದಾಂತರೂ ಸತತವಾಗಿ ಉತ್ಥಾನಶೀಲರೂ ಆಗಿ ಇನ್ನೊಬ್ಬರನ್ನು ಉಪಜೀವಿಸುವುದಿಲ್ಲವೋ, ಶಕ್ತಿಯಿದ್ದಷ್ಟು ಅನ್ನದಾನವನ್ನು ಮಾಡಿ ಸತತವಾಗಿ ಸಹನೆಯನ್ನು ಹೊಂದಿ ಧರ್ಮನಿತ್ಯರಾಗಿರುತ್ತಾರೆಯೋ ಮತ್ತು ಯಥಾಯೋಗ್ಯವಾಗಿ ಯಾವಾಗಲೂ ಎಲ್ಲಾ ಪ್ರಾಣಿಗಳಲ್ಲಿಯೂ ಸತ್ಕಾರವನ್ನು ಮಾಡುತ್ತಾರೆಯೋ ಅವರೂ ಸಂಪದ್ಯುಕ್ತರಾಗುತ್ತಾರೆ. ಮನುಷ್ಯರಿಗೆ ತ್ಯಾಗವನ್ನು ಬಿಟ್ಟು ಬೇರೆ ಶ್ರೇಷ್ಠವಾದ ಗುಣವಿಲ್ಲ.

ಮೃಷಾವಾದಂ ಪರಿಹರೇತ್ ಕುರ್ಯಾತ್ ಪ್ರಿಯಮಯಾಚಿತಃ ॥೪೩॥

ನ ಚ ಕಾಮಾನ್ನ ಸಂರಂಭಾನ್ನ ದ್ವೇಷಾದ್ ಧರ್ಮಮುತ್ಸೃಜೇತ್ ।
ಪ್ರಿಯೇ ನಾತಿಭೃಶಂ ಹೃಷ್ಯೇದಪ್ರಿಯೇ ನ ಚ ಸಂಜ್ವರೇತ್ ॥೪೪॥

ಸುಳ್ಳುಮಾತನಾಡುವುದನ್ನು ತ್ಯಜಿಸಬೇಕು. ಇನ್ನೊಬ್ಬರಿಂದ ಪ್ರಾರ್ಥಿತರಾಗದೇ ಅವರಿಗೆ ಪ್ರಿಯವನ್ನು ಮಾಡಬೇಕು. ರಾಗದಿಂದಲಾಗಲೀ, ದ್ವೇಷದಿಂದಲಾಗಲೀ ಅಥವಾ ಕ್ರೋಧದಿಂದಲಾಗಲೀ ಧರ್ಮವನ್ನು ತ್ಯಜಿಸಬಾರದು. ಪ್ರಿಯವುಂಟಾದಾಗ

ಬಹಳ ಸಂತೋಷವನ್ನು ಪಡಬಾರದು. ಅಪ್ರಿಯವುಂಟಾದಾಗ ಸಂತಾಪವನ್ನೂ ಪಡಬಾರದು.

ನ ಮುಹ್ಯೇದರ್ಥಕೃಚ್ಛ್ರೇಷು ನ ಚ ಧರ್ಮಂ ಪರಿತ್ಯಜೇತ್ ।
ಕರ್ಮ ಚೇತ್ ಕಿಂಚಿದನ್ಯತ್ ಸ್ಯಾದಿತರನ್ನ ತದಾಚರೇತ್ ॥೪೫॥

ಅರ್ಥಸಂಕಟವು ಪ್ರಾಪ್ತವಾದಾಗ ಮೋಹಕ್ಕೆ ಒಳಗಾಗಿ ಧರ್ಮವನ್ನು ತ್ಯಜಿಸಬಾರದು. ಬೇರೆ ಯಾವುದಾದರೂ ಪುಣ್ಯಕರ್ಮವಿದ್ದರೆ ಅದನ್ನೂ ಮಾಡಬೇಕು. ಪುಣ್ಯಕರ್ಮವನ್ನು ಬಿಟ್ಟು ಪಾಪಕರ್ಮವನ್ನು ಆಚರಿಸಬಾರದು.

ಯತ್ ಕಲ್ಯಾಣಮಭಿಧ್ಯಾಯೇತ್ ತತ್ರಾತ್ಮಾನಂ ನಿಯೋಜಯೇತ್ ।
ನ ಪಾಪೇ ಪ್ರತಿಪಾಪಃ ಸ್ಯಾತ್ ಸಾಧುರೇವ ಸದಾ ಭವೇತ್ ॥೪೬॥

ಯಾವುದು ಒಳ್ಳೆಯ ಕಾರ್ಯವಿದೆಯೋ ಅದರಲ್ಲಿ ಮೊದಲು ತನ್ನನ್ನೇ ನಿಯೋಗಿಸಿಕೊಳ್ಳಬೇಕು. ಹಿಂಸೆಯನ್ನು ಮಾಡಿದವನಿಗೆ ಪ್ರತಿಹಿಂಸೆಯನ್ನು ಮಾಡಬಾರದು. ಯಾವಾಗಲೂ ಸಾಧುವಾಗಿಯೇ ಇರಬೇಕು.

ಆತ್ಮನೈವ ಹತಃ ಪಾಪೋ ಯಃ ಪಾಪಂ ಕರ್ತುಮಿಚ್ಛತಿ ।
ಕರ್ಮ ಚೈತದಸಾಧೂನಾಂ ವೃಜಿನಂ ನಾಮ ಸಾಧುವತ್ ॥೪೭॥

ಯಾವನು ಪಾಪವನ್ನು ಮಾಡಲು ಬಯಸುತ್ತಾನೆಯೋ ಅಂತಹವನು ತನ್ನ ಪಾಪದಿಂದಲೇ ಹತನಾಗಿರುತ್ತಾನೆ. ಪಾಪವು ಅಸಾಧುಗಳು ಮಾಡುವ ಕರ್ಮ. ಅದನ್ನು ಸತ್ಕರ್ಮದಂತೆಯೇ ನೋಡಿ ಸಾಧುವಾದವನು ಹಿಂಸೆ ಮಾಡದೇ ಸುಮ್ಮನಿರಬೇಕು.

ನ ಧರ್ಮೋಽಸ್ತೀತಿ ಮನ್ವಾನಾಃ ಶುಚೀನವಹಸಂತಿ ಯೇ ।
ಅಶ್ರದ್ದಧಂತೋ ಧರ್ಮಸ್ಯ ತೇ ನಶ್ಯಂತಿ ನ ಸಂಶಯಃ ॥೪೮॥

ಮಹಾಧೃತಿರಿವಾಧ್ಮಾತುಃ ಪಾಪೋ ಭವತಿ ನಿತ್ಯದಾ ।
ಸಾಧುಃ ಸನ್ನಿತಿಮಾನೇಷು ಸರ್ವತ್ರ ದ್ವಿಜಸತ್ತಮ ॥೪೯॥

ಯಾರು ಧರ್ಮವಿಲ್ಲವೆಂದು ತಿಳಿದು, ಶುಚಿಯಾದ ಪುರುಷರನ್ನು ಅವಮಾನ ಮಾಡಿ ಧರ್ಮದಲ್ಲಿ ಅಶ್ರದ್ಧೆಯನ್ನು ಮಾಡುತ್ತಾರೆಯೋ ಅವರು ನಾಶವನ್ನು

ಹೊಂದುತ್ತಾರೆ ಎಂಬ ವಿಷಯದಲ್ಲಿ ಸಂಶಯವಿಲ್ಲ. ಯುದ್ಧದಲ್ಲಿ ಶಂಕನಿನಾದವನ್ನು ಮಾಡುವ ವೀರಭಟನಿಗೆ ಮಹಾಧೈರ್ಯವು ಹೇಗೆ ಅಭಿವೃದ್ಧಿಯಾಗುತ್ತದೆಯೋ ಹಾಗೆ ಪಾಪಿಷ್ಠನೂ ಕೂಡ ತಾನು ಮಾಡಿದ ದುಷ್ಕರ್ಮದ ಪ್ರಶಂಸೆಯಿಂದ ಅಭಿವೃದ್ಧನಾಗುತ್ತಾನೆ (ಅಹಂಕಾರಿಯಾಗುತ್ತಾನೆ ಎಂದು ಅಭಿಪ್ರಾಯ). ಎಲೈ ದ್ವಿಜಶ್ರೇಷ್ಠರೇ, ಸಾಧುವಾದವನು ಮಾನ ಅವಮಾನಗಳಲ್ಲಿ ಎಲ್ಲ ಕಡೆಯಲ್ಲಿಯೂ ಸಮಾನವಾಗಿರುತ್ತಾನೆ.

ಮೂಢಾನಾಮವಲಿಪ್ತಾನಾಮಸಾರಂ ಭಾವಿತಂ ಭವೇತ್ ।
ದರ್ಶಯತ್ಯಂತರಾತ್ಮಾನಂ ದಿವಾ ರೂಪಮಿವಾಂಶುಮಾನ್ ॥೫೦॥

ಮೂಢರು ಮತ್ತು ಅಹಂಕಾರಿಗಳು ತಮ್ಮ ಮನಸ್ಸಿನಲ್ಲಿ ಕೆಟ್ಟದ್ದನ್ನೇ ಯೋಚಿಸುತ್ತಾರೆ. ಹಗಲಿನಲ್ಲಿ ಸೂರ್ಯನು ರೂಪವನ್ನು ತೋರಿಸಿದಂತೆ ಅವರ ಸಾಕ್ಷಿಯೇ ಅವರಿಗೆ ತಮ್ಮ ದುಃಸ್ವಭಾವವನ್ನು ತೋರಿಸುತ್ತದೆ.

ನ ಲೋಕೇ ರಾಜತೇ ಮೂರ್ಖಃ ಕೇವಲಾತ್ಮಪ್ರಶಂಸಯಾ ।
ಅಪಿ ಚೇಹ ಪ್ರಜಾಹೀನಃ ಕೃತವಿದ್ಯಃ ಪ್ರಕಾಶತೇ ॥೫೧॥

ವಿದ್ಯಾಹೀನನಾದ ಮೂರ್ಖನು ಕೇವಲ ಆತ್ಮಪ್ರಶಂಸೆಯಿಂದ ಪ್ರಪಂಚದಲ್ಲಿ ಶೋಭಿಸುವುದಿಲ್ಲ. ಸ್ತೋತ್ರಮಾಡುವವರಿಲ್ಲದಿದ್ದರೂ ವಿದ್ಯೆಯನ್ನು ಸಂಪಾದಿಸಿದವನು ಈ ಪ್ರಪಂಚದಲ್ಲಿ ಶೋಭಿಸುತ್ತಾನೆ.

ಅಬ್ರುವನ್ ಕಸ್ಯಚಿನ್ನಿಂದಾಮಾತ್ಮಪೂಜಾಮವರ್ಣಯನ್ ।
ನ ಕಶ್ಚಿದ್ ಗುಣಸಂಪನ್ನಃ ಪ್ರಕಾಶೋ ಭುವಿ ದೃಶ್ಯತೇ ॥೫೨॥

ಯಾವನನ್ನೂ ನಿಂದನೆಯನ್ನು ಮಾಡದೆ ಮತ್ತು ಆತ್ಮಪ್ರಶಂಸೆಯನ್ನು ಮಾಡಿಕೊಳ್ಳದೆ ಗುಣಸಂಪನ್ನನಾಗಿರುವವನು ಈ ಭೂಮಿಯಲ್ಲಿ ಯಾರೂ ಕಂಡುಬರುವುದಿಲ್ಲ.

ವಿಕರ್ಮಣಾ ತಪ್ಯಮಾನಃ ಪಾಪಾದ್ ವಿಪರಿಮುಚ್ಯತೇ ।
ನ ತತ್ ಕುರ್ಯಾಂ ಪುನರಿತಿ ದ್ವಿತೀಯಾತ್ ಪರಿಮುಚ್ಯತೇ ।
ಕರಿಷ್ಯೇ ಧರ್ಮಮೇವೇತಿ ತೃತೀಯಾತ್ಪರಿಮುಚ್ಯತೇ ॥೫೩॥

ತಾನು ಮಾಡಿದ ವಿಕರ್ಮದಿಂದ ಪಶ್ಚಾತ್ತಾಪಕ್ಕೆ ಒಳಗಾದವನು ವಿಕರ್ಮ ಜನಿತ ಪಾಪದಿಂದ ಮುಕ್ತನಾಗುತ್ತಾನೆ. ನಾನು ಆ ಕಾರ್ಯವನ್ನು ಪುನಃ ಮಾಡುವುದಿಲ್ಲ ಎಂದು ನಿರ್ಧರಿಸಿದವನು ಮುಂದೆ ಮಾಡಬಹುದಾದ ಎರಡನೆಯ ಪಾಪದಿಂದ ಮುಕ್ತನಾಗುತ್ತಾನೆ. ನಾನು ಧರ್ಮವನ್ನೇ ಮಾಡುವೆನು ಎಂದು ನಿಶ್ಚಯಿಸಿದವನು ಮುಂದೆ ಮಾಡಬಹುದಾದ ಮೂರನೆಯ ಪಾಪದಿಂದ ಮುಕ್ತನಾಗುತ್ತಾನೆ.

ಕರ್ಮಣಾ ಯೇನ ಕೇನೇಹ ಪಾಪಾತ್ಮಾ ದ್ವಿಜಸತ್ತಮ ।
ಏವಂ ಶ್ರುತಿರಿಯಂ ಬ್ರಹ್ಮನ್ ಧರ್ಮೇಷು ಪರಿದೃಶ್ಯತೇ ॥೫೪॥

ಎಲೈ ದ್ವಿಜಶ್ರೇಷ್ಠರೇ, ಪಾಪಾತ್ಮರಾದವನು ಇಲ್ಲಿ ಯಾವುದಾದರೂ ದುಷ್ಕರ್ಮವನ್ನು ಮಾಡುತ್ತಲೇ ಇರುತ್ತಾನೆ. ಎಲೈ ಬ್ರಾಹ್ಮಣರೇ, ಧರ್ಮದ ವಿಷಯದಲ್ಲಿ ಇಂತಹ ಈ ಶ್ರುತಿಯು ಕಂಡುಬರುತ್ತದೆ.

ಪಾಪಾನ್ಯಬುದ್ಧ್ವೇಹ ಪುರಾ ಕೃತಾನಿ
ಸ್ವಧರ್ಮಶೀಲೋಽಪಿ ವಿಹಂತಿ ಪಶ್ಚಾತ್ ।
ಧರ್ಮೋ ಬ್ರಹ್ಮನ್ ನುದತೇ ಪೂರುಷಾಣಾಂ
ಯತ್ಕುರ್ವತೇ ಪಾಪಮಿಹ ಪ್ರಮಾದಾತ್ ॥೫೫॥

ಮೊದಲು ಬುದ್ಧಿಪೂರ್ವಕವಲ್ಲದೇ ಪಾಪವನ್ನು ಮಾಡಿ ಅನಂತರ ಸ್ವಧರ್ಮ ಶೀಲನಾಗುವವನು ಆ ಪಾಪವನ್ನು ನಾಶಮಾಡುತ್ತಾನೆ. ಎಲೈ ಬ್ರಾಹ್ಮಣರೇ, ಪ್ರಮಾದದಿಂದ ಮಾಡಿದ ಪಾಪವನ್ನು ಪುರುಷರು ಮಾಡುವ ಧರ್ಮಗಳು ನಾಶಮಾಡುತ್ತವೆ.

ಪಾಪಂ ಕೃತ್ವಾ ಹಿ ಮನ್ಯೇತ ನಾಹಮಸ್ಮೀತಿ ಪೂರುಷಃ ।
ಚಿಕೀರ್ಷೇದೇವ ಕಲ್ಯಾಣಂ ಶ್ರದ್ದಧಾನೋಽನಸೂಯಕಃ ॥೫೬॥

ಪಾಪವನ್ನು ಮಾಡಿದ ಸಜ್ಜನನು ನಾನೇ ನಾಶವಾಗಿದ್ದೇನೆ ಎಂದು ತಿಳಿಯಬೇಕು. ಶ್ರದ್ಧೆಯನ್ನು ಹೊಂದಿ ಅಸೂಯಾರಹಿತನಾಗಿ ಕಲ್ಯಾಣವನ್ನು ಮಾಡಲು ಇಚ್ಛಿಸಲೇಬೇಕು.

ವಸನಸ್ಯೇವ ಛಿದ್ರಾಣಿ ಸಾಧೂನಾಂ ವಿವೃಣೋತಿ ಯಃ ।
ಅಪಶ್ಯನ್ನಾತ್ಮನೋ ದೋಷಾನ್ ಸ ಪಾಪಃ ಪ್ರೇತ್ಯ ನಶ್ಯತಿ ॥೫೭॥

ಯಾವನು ತನ್ನ ದೋಷಗಳನ್ನು ತಾನು ನೋಡದೆ, ವಸ್ತ್ರದಲ್ಲಿರುವ ಛಿದ್ರಗಳಂತೆ ಸಜ್ಜನರ ದೋಷಗಳನ್ನು ಬಹಿರಂಗ ಪಡಿಸುವನೋ ಅಂತಹ ಪಾಪಿಯು ಮರಣವನ್ನು ಹೊಂದಿ ನಾಶವನ್ನು ಹೊಂದುವನು.

ಪಾಪಂ ಚೇತ್ ಪುರುಷಃ ಕೃತ್ವಾ ಕಲ್ಯಾಣಮಭಿಪದ್ಯತೇ ।
ಮುಚ್ಯತೇ ಸರ್ವಪಾಪೇಭ್ಯೋ ಮಹಾಭ್ರೇಣೇವ ಚಂದ್ರಮಾಃ ॥೫೮॥

ಮನುಷ್ಯನು ಪಾಪವನ್ನು ಮಾಡಿ ಅನಂತರ ಧರ್ಮವನ್ನು ಆಚರಿಸಿದರೆ ಮಹಾಮೇಘಗಳಿಂದ ಚಂದ್ರನು ಬಿಡುಗಡೆಯನ್ನು ಹೊಂದಿದಂತೆ ಎಲ್ಲಾ ಪಾಪಗಳಿಂದಲೂ ಮುಕ್ತನಾಗುತ್ತಾನೆ.

ಯಥಾऽऽದಿತ್ಯಃ ಸಮುದ್ಯನ್ ವೈ ತಮಃ ಪೂರ್ವಂ ವ್ಯಪೋಹತೇ ।
ಏವಂ ಕಲ್ಯಾಣಮಾತಿಷ್ಠನ್ ಸರ್ವಪಾಪೈಃ ಪ್ರಮುಚ್ಯತೇ ॥೫೯॥

ಹೇಗೆ ಸೂರ್ಯನು ಉದಯಿಸುತ್ತಾ ಮೊದಲು ಅಂಧಕಾರವನ್ನು ನಾಶಮಾಡುತ್ತಾನೆಯೋ ಅದರಂತೆ ಪುಣ್ಯವನ್ನು ಆಚರಿಸುವವನು ಮೊದಲು ಸರ್ವಪಾಪಗಳನ್ನೂ ನಾಶಮಾಡಿ ಅದರಿಂದ ಮುಕ್ತನಾಗುತ್ತಾನೆ.

ಪಾಪಾನಾಂ ವಿದ್ಧ್ಯಧಿಷ್ಠಾನಂ ಲೋಭಮೇವ ದ್ವಿಜೋತ್ತಮ ।
ತಸ್ಮಾತ್ ತೌ ವಿದುಷಾ ವಿಪ್ರ ವರ್ಜನೀಯೌ ವಿಶೇಷತಃ ॥೬೦॥

ಎಲೈ ಬ್ರಾಹ್ಮಣಶ್ರೇಷ್ಠರೇ, ಪಾಪಗಳಿಗೆ ಮುಖ್ಯವಾದ ಆಶ್ರಯವು ಲೋಭವೆಂದು ತಿಳಿಯಿರಿ. ಆದ್ದರಿಂದ ಎಲೈ ಬ್ರಾಹ್ಮಣರೇ, ವಿವೇಕಿಯಾದವನು ಪಾಪ ಮತ್ತು ಲೋಭಗಳನ್ನು ವಿಶೇಷವಾಗಿ ತ್ಯಜಿಸಬೇಕು.

ಲುಬ್ಧಾಃ ಪಾಪಂ ವ್ಯವಸ್ಯಂತಿ ನರಾ ನಾತಿಬಹುಶ್ರುತಾಃ ।
ಅಧರ್ಮಾಃ ಧರ್ಮರೂಪೇಣ ತೃಣೈಃ ಕೂಪಾ ಇವಾವೃತಾಃ ॥೬೧॥

ಲೋಭವುಳ್ಳ ಮತ್ತು ಬಹುಶ್ರುತರಲ್ಲದ ಮನುಷ್ಯರು ಪಾಪವನ್ನು ಮಾಡಲು ನಿರ್ಧರಿಸುತ್ತಾರೆ. ತೃಣದಿಂದ ಮುಚ್ಚಿದ ಕೂಪದಂತೆ ಅವರಿಗೆ ಅಧರ್ಮವು ಧರ್ಮವಾಗಿ ತೋರುತ್ತದೆ.

ಯೇಷಾಂ ಪಂಚ ಪವಿತ್ರಾಣಿ ಪ್ರಲಾಪಾ ಧರ್ಮಸಂಶ್ರಿತಾಃ ।
ಸರ್ವಂ ಹಿ ವಿದ್ಯತೇ ತೇಷು ಶಿಷ್ಟಾಚಾರಃ ಸುದುರ್ಲಭಃ ॥೬೨॥

ಯಾರಲ್ಲಿ ಧರ್ಮಸಂಬಂಧಿಯಾದ ಐದು ವಸ್ತುಗಳೂ ಮತ್ತು ಡಂಬವಚನಗಳೂ ಇರುತ್ತವೆಯೋ ಅವರಲ್ಲಿ ಜನರ ವಂಚನೆಯಿಂದ ಪ್ರಾಪ್ತವಾದ ಧನಕನಕಾದಿ ಸರ್ವ ವಸ್ತುವೂ ಇರುತ್ತದೆ. ನಿಜವಾದ ಶಿಷ್ಟಾಚಾರವು ಬಹಳ ದುರ್ಲಭವಾದುದು.

ಮಾರ್ಕಂಡೇಯಃ

ಸ ತು ವಿಪ್ರೋ ಮಹಾಪ್ರಾಜ್ಞೋ ಧರ್ಮವ್ಯಾಧಮಪೃಚ್ಛತ ।
ಶಿಷ್ಟಾಚಾರಂ ಕಥಮಹಂ ವಿದ್ಯಾಮಿತಿ ನರೋತ್ತಮ ॥೬೩॥

ಮಾರ್ಕಂಡೇಯ– ಎಲೈ ನರೋತ್ತಮನೇ, ಮಹಾಪ್ರಾಜ್ಞನಾದ ಆ ವಿಪ್ರನು ಧರ್ಮವ್ಯಾಧನನ್ನು ಕುರಿತು ಶಿಷ್ಟಾಚಾರವನ್ನು ನಾನು ಹೇಗೆ ತಿಳಿದೇನು ಎಂದು ಪ್ರಶ್ನೆ ಮಾಡಿದನು.

ಪಂಚ ಕಾನಿ ಪವಿತ್ರಾಣಿ ಶಿಷ್ಟಾಚಾರೇಷು ನಿತ್ಯದಾ ।
ತ್ವತ್ತೋ ಮಹಾಮತೇ ವ್ಯಾಧ ತದ್ ಬ್ರವೀಹಿ ಯಥಾತಥಮ್ ॥೬೪॥

ಶಿಷ್ಟಾಚಾರದಲ್ಲಿ ಯಾವಾಗಲೂ ಇರುವ ಐದು ಪವಿತ್ರ ವಸ್ತುಗಳು ಯಾವುವು? ಎಲೈ ಮಹಾಮತಿಯಾದ ವ್ಯಾಧನೇ, ಅದನ್ನು ಸರಿಯಾಗಿ ಹೇಳು (ಎಂದು ಕೇಳಿದನು).

ವ್ಯಾಧಃ

ಯಜ್ಞೋ ದಾನಂ ತಪೋ ವೇದಾಃ ಸತ್ಯಂ ಚ ದ್ವಿಜಸತ್ತಮ ।
ಪಂಚೈತಾನಿ ಪವಿತ್ರಾಣಿ ಶಿಷ್ಟಾಚಾರೇಷು ಸರ್ವದಾ ॥೬೫॥

ವ್ಯಾಧ– ಎಲೈ ದ್ವಿಜಶ್ರೇಷ್ಠರೇ, ಯಜ್ಞ, ದಾನ, ತಪಸ್ಸು, ವೇದಗಳು ಮತ್ತು ಸತ್ಯವಚನ ಪವಿತ್ರವಾದ ಈ ಐದುವಸ್ತುಗಳು ಶಿಷ್ಟಾಚಾರದಲ್ಲಿ ಯಾವಾಗಲೂ ಇರುತ್ತವೆ.

ಕಾಮಕ್ರೋಧೌ ವಶೇ ಕೃತ್ವಾ ದಂಭಂ ಲೋಭಮನಾರ್ಜವಮ್ ।
ಧರ್ಮ ಇತ್ಯೇವ ಸಂತುಷ್ಟಾಸ್ತೇ ಶಿಷ್ಟಾಃ ಶಿಷ್ಟಸಮ್ಮತಾಃ ॥೬೬॥

ಕಾಮ, ಕ್ರೋಧ, ಡಂಬ, ಲೋಭ ಮತ್ತು ವಕ್ರತೆಗಳನ್ನು ವಶದಲ್ಲಿಟ್ಟುಕೊಂಡು ಧರ್ಮ ಎಂಬ ಒಂದೇ ದೃಷ್ಟಿಯಿಂದ ಯಾರು ಸಂತೋಷಪಡುತ್ತಾರೆಯೋ ಅವರು ಶಿಷ್ಟರು ಮತ್ತು ಶಿಷ್ಟರಿಗೆ ಸಮ್ಮತರಾದವರು.

ನ ತೇಷಾಂ ವಿದ್ಯತೇಽವೃತ್ತಂ ಯಜ್ಞಸ್ವಾಧ್ಯಾಯಶೀಲಿನಾಮ್ ।
ಆಚಾರಪಾಲನಂ ಚೈವ ದ್ವಿತೀಯಂ ಶಿಷ್ಟಲಕ್ಷಣಮ್ ॥೬೭॥

ಯಜ್ಞ ಮತ್ತು ಸ್ವಾಧ್ಯಾಯಗಳಲ್ಲಿ ನಿರತರಾದ ಅವರಲ್ಲಿ ಯಾವ ದುರ್ನಡತೆಯೂ ಇರುವುದಿಲ್ಲ. ಹಿಂದಿನಿಂದ ನಡೆದುಕೊಂಡು ಬಂದ ಆಚಾರದ ಪಾಲನೆಯು ಶಿಷ್ಟರ ಎರಡನೆಯ ಲಕ್ಷಣ.

ಗುರುಶುಶ್ರೂಷಣಂ ಸತ್ಯಮಕ್ರೋಧೋ ದಾನಮೇವ ಚ ।
ಏತಚ್ಚತುಷ್ಟಯಂ ಬ್ರಹ್ಮನ್ ಶಿಷ್ಟಾಚಾರೇಷು ನಿತ್ಯದಾ ॥೬೮॥

ಎಲೈ ಬ್ರಾಹ್ಮಣರೇ, ಗುರುಸೇವೆ, ಸತ್ಯವಚನ, ಅಕ್ರೋಧ ಮತ್ತು ದಾನ ಈ ನಾಲ್ಕು ವಸ್ತುಗಳು ಶಿಷ್ಟಾಚಾರಗಳಲ್ಲಿ ನಿತ್ಯವೂ ಇರುತ್ತವೆ.

ಶಿಷ್ಟಾಚಾರೇ ಮನಃ ಕೃತ್ವಾ ಪ್ರತಿಷ್ಠಾಪ್ಯ ಚ ಸರ್ವಶಃ ।
ಯಾಮಯಂ ಲಭತೇ ವೃತ್ತಿಂ ಸಾ ನ ಶಕ್ಯಾ ಹ್ಯತೋಽನ್ಯಥಾ ॥೬೯॥

ಶಿಷ್ಟಾಚಾರದಲ್ಲಿ ಮನಸ್ಸನ್ನು ಎಲ್ಲ ರೀತಿಯಿಂದಲೂ ಗಟ್ಟಿ ಮಾಡಿ ಯಾವ ಜೀವನೋಪಾಯವನ್ನು ಪಡೆಯುತ್ತಾನೆಯೋ ಅದನ್ನು ಬೇರೆ ರೀತಿಯಿಂದ ಪಡೆಯಲು ಸಾಧ್ಯವಿಲ್ಲ.

ವೇದಸ್ಯೋಪನಿಷತ್ ಸತ್ಯಂ ಸತ್ಯಸ್ಯೋಪನಿಷದ್ ದಮಃ ।
ದಮಸ್ಯೋಪನಿಷತ್ ತ್ಯಾಗಃ ಶಿಷ್ಟಾಚಾರೇಷು ನಿತ್ಯದಾ ॥೭೦॥

ವೇದದ ರಹಸ್ಯವೆಂದರೆ ಸತ್ಯವಚನ. ಸತ್ಯದ ರಹಸ್ಯವು ಇಂದ್ರಿಯನಿಗ್ರಹ. ಇಂದ್ರಿಯನಿಗ್ರಹದ ರಹಸ್ಯವು ತ್ಯಾಗ. ಇವು ಶಿಷ್ಟಾಚಾರಗಳಲ್ಲಿ ಯಾವಾಗಲೂ ಇರುತ್ತವೆ.

ಯೇ ತು ಧರ್ಮಾನಸೂಯಂತೇ ಬುದ್ಧಿಮೋಹಾನ್ವಿತಾ ನರಾಃ ।
ಅಪಥಾ ಗಚ್ಛತಾಂ ತೇಷಾಮನುಯಾತಾ ಚ ಪೀಡ್ಯತೇ ॥೭೧॥

ಯಾವ ಮನುಷ್ಯರು ಬುದ್ಧಿಮೋಹಕ್ಕೆ ಒಳಗಾಗಿ ಅಸೂಯೆಯಿಂದ ಧರ್ಮವನ್ನು ಬಿಟ್ಟು ಅಮಾರ್ಗದಲ್ಲಿ ನಡೆಯುತ್ತಾರೆಯೋ ಅಂತಹವರನ್ನು ಹಿಂಬಾಲಿಸುವವರು ಕೂಡ ದುಃಖಕ್ಕೆ ಒಳಗಾಗುತ್ತಾರೆ.

ಯೇ ತು ಶಿಷ್ಟಾಃ ಸುನಿಯತಾಃ ಶ್ರುತಿತ್ಯಾಗಪರಾಯಣಾಃ ।
ಧರ್ಮಪಂಥಾನಮಾರೂಢಾಃ ಸತ್ಯಧರ್ಮಪರಾಯಣಾಃ ॥೭೨॥

ನಿಯಚ್ಛಂತಿ ಪರಾಂ ಬುದ್ಧಿಂ ಶಿಷ್ಟಾಚಾರಾನ್ವಿತಾ ಜನಾಃ ।
ಉಪಾಧ್ಯಾಯಮತೇ ಯುಕ್ತಾಃ ಸ್ಥಿತ್ಯಾ ಧರ್ಮಾರ್ಥದರ್ಶಿನಃ ॥೭೩॥

ಯಾರು ಒಳ್ಳೆಯ ನಿಯಮವನ್ನು ಪಾಲಿಸುವವರಾಗಿ ವೇದ ಮತ್ತು ತ್ಯಾಗಗಳಲ್ಲಿ ನಿಯತರಾಗಿ ಸತ್ಯಧರ್ಮ ಪರಾಯಣರಾಗಿ ಶಿಷ್ಟಾಚಾರವನ್ನು ಹೊಂದಿದವರಾಗಿ ತಮ್ಮ ಶ್ರೇಷ್ಠವಾದ ಬುದ್ಧಿಯನ್ನು ವಶದಲ್ಲಿ ಇಟ್ಟುಕೊಳ್ಳುತ್ತಾರೆಯೋ ಮತ್ತು ಧರ್ಮ ಮಾರ್ಗದಲ್ಲಿಯೇ ನಡೆಯುತ್ತಾರೆಯೋ ಮತ್ತು ಉಪಾಧ್ಯಾಯರ ಅಭಿಪ್ರಾಯದಂತೆ ನಡೆದುಕೊಳ್ಳುವವರಾಗಿ ಧರ್ಮಾರ್ಥದರ್ಶಿಗಳಾಗಿರುತ್ತಾರೆಯೋ ಅವರು ನಿಜವಾದ ಶಿಷ್ಟರು.

ನಾಸ್ತಿಕಾನ್ ಭಿನ್ನಮರ್ಯಾದಾನ್ ಕ್ರೂರಾನ್ ಪಾಪಮತೌ ಸ್ಥಿತಾನ್ ।
ತ್ಯಜ ತಾನ್ ಜ್ಞಾನಮಾಶ್ರಿತ್ಯ ಧಾರ್ಮಿಕಾನುಪಸೇವ್ಯ ಚ ॥೭೪॥

ನಾಸ್ತಿಕರು, ಎಲ್ಲ ಮರ್ಯಾದೆಯನ್ನೂ ಮೀರಿದವರು, ಕ್ರೂರರು, ಪಾಪಬುದ್ಧಿಯಲ್ಲಿಯೇ ಇರುವವರೂ ಆದವರನ್ನು ತ್ಯಾಗಮಾಡು. ಒಳ್ಳೆಯ ಜ್ಞಾನವನ್ನು ಸಂಪಾದಿಸಿ ಹಿಂದೆ ಹೇಳಿದ ಧಾರ್ಮಿಕರನ್ನು ಆಶ್ರಯಿಸು.

ಕಾಮಲೋಭಗ್ರಹಾಕೀರ್ಣಾಂ ಪಂಚೇಂದ್ರಿಯಜಲಾಂ ನದೀಮ್ ।
ನಾವಂ ಧೃತಿಮಯೀಂ ಕೃತ್ವಾ ಜನ್ಮದುರ್ಗಾಣಿ ಸಂತರ ॥೭೫॥

ಕಾಮಲೋಭವೆಂಬ ಮೊಸಳೆಯಿಂದ ಕೂಡಿದ ಪಂಚೇಂದ್ರಿಯ ಎಂಬ ಜಲದಿಂದ ಕೂಡಿದ ಸಂಸಾರ ಎಂಬ ನದಿಯನ್ನು ಧೈರ್ಯ ಎಂಬ ನಾವೆಯನ್ನು ಆಶ್ರಯಿಸಿ, ಜನನ ಮರಣಗಳಿಂದಲೂ ದುಃಖದಿಂದಲೂ ದಾಟುವವನಾಗು.

ಕ್ರಮೇಣ ಸಂಚಿತೋ ಧರ್ಮೋ ಬುದ್ಧಿಯೋಗಮಯೋ ಮಹಾನ್ ।
ಶಿಷ್ಟಾಚಾರೋ ಭವೇತ್ ಸಾಧೂ ರಾಗಃ ಶುಕ್ಲೇವ ವಾಸಸಿ
(ಶುಕ್ರ ಇವಾಂಬರೇ) ॥೭೬॥

ಬುದ್ಧಿಯೋಗದಿಂದ ಕ್ರಮವಾಗಿ ಸಂಪಾದನೆ ಮಾಡಿ ಶೇಖರಿಸಿದ ಧರ್ಮವು ಶಿಷ್ಟಾಚಾರದಲ್ಲಿ ಚೆನ್ನಾಗಿ ಉಪಯುಕ್ತವಾಗುತ್ತದೆ. ಬಣ್ಣದಿಂದ ಕೂಡಿದ ವಸ್ತ್ರವು ಕ್ರಮೇಣ ಶುದ್ಧವಾಗುವಂತೆ ಅಂತಃಕರಣವು ಕ್ರಮೇಣ ನಿರ್ಮಲವಾಗುತ್ತದೆ.

ಅಹಿಂಸಾ ಸತ್ಯವಚನಂ ಸರ್ವಭೂತಹಿತಂ ಪರಮ್ ।
ಅಹಿಂಸಾ ಪರಮೋ ಧರ್ಮಃ ಸ ಚ ಸತ್ಯೇ ಪ್ರತಿಷ್ಠಿತಃ ॥೭೭॥

ಅಹಿಂಸೆ, ಸತ್ಯವಚನ, ಸರ್ವಭೂತಹಿತ ಈ ಮೂರರಲ್ಲಿ ಅಹಿಂಸೆಯು ಶ್ರೇಷ್ಠವಾದ ಧರ್ಮ. ಆ ಅಹಿಂಸೆಯಾದರೂ ಸತ್ಯದಲ್ಲಿ ಪ್ರತಿಷ್ಠಿತವಾಗಿದೆ.

ಸತ್ಯೇ ಕೃತ್ವಾ ಪ್ರತಿಷ್ಠಾಂ ತು ಪ್ರವರ್ತಂತೇ ಪ್ರವೃತ್ತಯಃ ।
ಸತ್ಯಮೇವ ಗರೀಯಸ್ತು ಶಿಷ್ಟಾಚಾರನಿಷೇವಿತಮ್ ।
ಆಚಾರಶ್ಚ ಸತಾಂ ಧರ್ಮಃ ಸಂತಶ್ಚಾಚಾರಲಕ್ಷಣಾಃ ॥೭೮॥

ಸಜ್ಜನರು ಸತ್ಯದಲ್ಲಿ ಪ್ರತಿಷ್ಠಿತರಾಗಿ ಎಲ್ಲ ಕಾರ್ಯಗಳಲ್ಲಿಯೂ ಪ್ರತಿಷ್ಠಿತರಾಗುತ್ತಾರೆ. ಶಿಷ್ಟಾಚಾರದಲ್ಲಿ ಒಂದು ಶ್ರೇಷ್ಠವಾದ ಧರ್ಮ ಎಂದರೆ ಅದು ಸತ್ಯವಚನ. ಆಚಾರವೂ ಸಜ್ಜನರ ಒಂದು ಧರ್ಮ. ಸದಾಚಾರವೇ ಸಜ್ಜನರ ಲಕ್ಷಣವೂ ಕೂಡ.

ಯೋ ಯಥಾಪ್ರಕೃತಿರ್ಜಂತುಃ ಸ ಸ್ವಾಂ ಪ್ರಕೃತಿಮಶ್ನುತೇ ।
ಪಾಪಾತ್ಮಾ ಕ್ರೋಧಕಾಮಾದೀನ್ ದೋಷಾನಾಪ್ನೋತ್ಯನಾತ್ಮವಾನ್ ॥

ಎಲ್ಲ ಜಂತುಗಳೂ ತಮ್ಮ ಉತ್ತಮ ಅಥವಾ ಮಧ್ಯಮ ಅಥವಾ ಅಧಮ ಪ್ರಕೃತಿಗೆ ಅನುಸಾರವಾಗಿ ನಡೆದು ತಮ್ಮ ತಮ್ಮ ಪ್ರಕೃತಿಯನ್ನೇ ಹೊಂದುತ್ತವೆ. ಪಾಪಾತ್ಮನಾದವನು ಮನೋನಿಗ್ರಹವಿಲ್ಲದೆ ಕಾಮಕ್ರೋಧಾದಿ ದೋಷಗಳನ್ನು ಹೊಂದುತ್ತಾನೆ.

ಆರಂಭೋ ನ್ಯಾಯಯುಕ್ತೋ ಯಃ ಸ ಹಿ ಧರ್ಮ ಇತಿ ಸ್ಮೃತಃ ।
ಅನಾಚಾರಸ್ತ್ವಧರ್ಮೇತಿ ಏತಚ್ಛಿಷ್ಟಾನುಶಾಸನಮ್ ॥೮೦॥

ಶಾಸ್ತ್ರವಿಹಿತವಾದ ಕ್ರಿಯಾರಂಭಗಳೆಲ್ಲವೂ ಧರ್ಮವೆಂದು ಹೇಳಲ್ಪಡುತ್ತದೆ. ಅನಾಚಾರವು ಅಧರ್ಮವೆಂದು ಹೇಳಲ್ಪಡುತ್ತದೆ. ಇದು ಶಿಷ್ಟರ ಅನುಶಾಸನ.

ಅಕ್ರುದ್ಧ್ಯಂತೋಽನಸೂಯಂತೋ ನಿರಹಂಕಾರಮತ್ಸರಾಃ ।
ಋಜವಃ ಶಮಸಂಪನ್ನಾಃ ಶಿಷ್ಟಾಚಾರಾ ಭವಂತಿ ತೇ ॥೮೧॥

ಕ್ರೋಧವನ್ನೂ, ಅಸೂಯೆಯನ್ನೂ ಮಾಡದೆ ಅಹಂಕಾರ ಮಾತ್ಸರ್ಯಗಳನ್ನು ಹೊಂದದೆ ಯಾರು ಆರ್ಜವವನ್ನೂ ಮತ್ತು ಭಗವನ್ನಿಷ್ಠೆಯನ್ನೂ ಹೊಂದಿರುತ್ತಾರೋ ಅವರನ್ನು ಶಿಷ್ಟಾಚಾರವುಳ್ಳವರು ಎಂದು ಕರೆಯುತ್ತಾರೆ.

ತ್ರೈವಿದ್ಯವೃದ್ಧಾಃ ಶುಚಯೋ ವೃತ್ತವಂತೋ ಮನಸ್ವಿನಃ ।
ಗುರುಶುಶ್ರೂಷವೋ ದಾಂತಾಃ ಶಿಷ್ಟಾಚಾರಾ ಭವಂತ್ಯುತ ॥೮೨॥

ಮೂರು ವೇದದ ಜ್ಞಾನವುಳ್ಳವರೂ, ಶುಚಿಯಾದವರೂ, ಒಳ್ಳೆಯ ನಡತೆಯುಳ್ಳವರೂ, ಧೈರ್ಯಶಾಲಿಗಳೂ, ಗುರುಸೇವೆಯನ್ನು ಮಾಡುವವರೂ ಮತ್ತು ಇಂದ್ರಿಯನಿಗ್ರಹವನ್ನು ಉಳ್ಳವರೂ ಸಹ ಶಿಷ್ಟಾಚಾರವನ್ನು ಹೊಂದಿದವರಾಗಿರುತ್ತಾರೆ.

ತೇಷಾಮದೀನಸತ್ತ್ವಾನಾಂ ದುಷ್ಕರಾಚಾರಕರ್ಮಣಾಮ್ ।
ಸ್ವೈಃ ಕರ್ಮಭಿಃ ಸತೃತಾನಾಂ ಘೋರತ್ವಂ ಸಂಪ್ರಣಶ್ಯತಿ ॥೮೩॥

ದೈನ್ಯರಹಿತವಾದ ಮನಸ್ಸುಳ್ಳವರಿಗೆ ದುಷ್ಕರ್ಮವಾದ ಆಚಾರದಲ್ಲಿ ಮತ್ತು ಕರ್ಮದಲ್ಲಿ ನಿರತರಾದ ಮನುಷ್ಯರಲ್ಲಿ ಅವರು ಮಾಡಿದ ಕ್ರೂರತ್ವವು ಅದರ ಸತ್ಕರ್ಮಗಳಿಂದ ನಾಶವನ್ನು ಹೊಂದುತ್ತವೆ.

ತಂ ಸದಾಚಾರಮಾಶ್ಚರ್ಯಂ ಪುರಾಣಂ ಶಾಶ್ವತಂ ಧ್ರುವಮ್ ।
ಧರ್ಮಂ ಧರ್ಮೇಣ ಪಶ್ಯಂತಃ ಸ್ವರ್ಗಂ ಯಾಂತಿ ಮನೀಷಿಣಃ ॥೮೪॥

ವಿವೇಕಿಗಳಾದವರು ಆ ಪುರಾತನವಾದ, ಶಾಶ್ವತವಾದ, ನಿತ್ಯವಾದ ಆಶ್ಚರ್ಯಕರವಾದ, ಸದಾಚಾರರೂಪವಾದ ಧರ್ಮವನ್ನು ಧರ್ಮದಿಂದಲೇ ನೋಡುತ್ತಾ (ಧರ್ಮಾಚರಣೆಯನ್ನು ಮಾಡುತ್ತಲೇ) ಸ್ವರ್ಗವನ್ನು ಪಡೆಯುತ್ತಾರೆ.

ಆಸ್ತಿಕಾ ಮಾನಹೀನಾಶ್ಚ ದ್ವಿಜಾತಿಜನಪೂಜಕಾಃ ।
ಶ್ರುತವೃತ್ತೋಪಸಂಪನ್ನಾಃ ಸಂತಃ ಸ್ವರ್ಗನಿವಾಸಿನಃ ॥೮೫॥

ಆಸ್ತಿಕರೂ, ಅಹಂಕಾರಹೀನರೂ, ಬ್ರಾಹ್ಮಣಪೂಜಕರೂ, ಶಾಸ್ತ್ರಶ್ರವಣ ಮಾಡಿದವರೂ, ಒಳ್ಳೆಯ ನಡತೆಯುಳ್ಳವರೂ ಆದ ಸಜ್ಜನರು ಸ್ವರ್ಗದಲ್ಲಿ ವಾಸವನ್ನು ಮಾಡುತ್ತಾರೆ.

ವೇದೋಕ್ತಃ ಪರಮೋ ಧರ್ಮೋ ಧರ್ಮಶಾಸ್ತ್ರೇಷು ಚಾಪರಃ ।
ಶಿಷ್ಟಾಚಾರಶ್ಚ ಶಿಷ್ಟಾನಾಂ ತ್ರಿವಿಧಂ ಧರ್ಮಲಕ್ಷಣಮ್ ॥೮೬॥

ವೇದೋಕ್ತವಾದುದು ಶ್ರೇಷ್ಠವಾದ ಧರ್ಮ. ಧರ್ಮಶಾಸ್ತ್ರಗಳಲ್ಲಿ ಹೇಳಿರುವುದು ಇನ್ನೊಂದು ಧರ್ಮ. ಶಿಷ್ಟರ ಶಿಷ್ಟಾಚಾರವು ಇನ್ನೊಂದು ಧರ್ಮ. ಹೀಗೆ ಧರ್ಮವು ಮೂರುರೂಪವಾಗಿದೆ.

ಪಾ(ಧಾ)ರಣಂ ಚಾಪಿ ವಿದ್ಯಾನಾಂ ತೀರ್ಥಾನಾಮವಗಾಹನಮ್ ।
ಕ್ಷಮಾ ಸತ್ಯಾರ್ಜವಂ ಶೌಚಂ ಸತಾಮಾಚಾರದರ್ಶನಮ್ ॥೮೭॥

ವಿದ್ಯೆಯನ್ನು ಕೊನೆಯವರೆಗೂ ಕಲಿಯುವುದು, ತೀರ್ಥದಲ್ಲಿ ಸ್ನಾನವನ್ನು ಮಾಡುವುದು, ಕ್ಷಮಾ, ಸತ್ಯವಚನ, ಆರ್ಜವ ಮತ್ತು ಶೌಚ ಇವುಗಳು ಸಜ್ಜನರ ಆಚಾರವನ್ನು ತೋರಿಸುತ್ತವೆ.

ಸರ್ವಭೂತದಯಾವಂತೋ ಅಹಿಂಸಾನಿರತಾಃ ಸದಾ ।
ಪರುಷಂ ಚ ನ ಭಾಷಂತೇ ಸದಾ ಸಂತೋ ದ್ವಿಜಪ್ರಿಯಾಃ ॥೮೮॥

ಸಜ್ಜನರಾದವರು ಯಾವಾಗಲೂ ಸರ್ವಭೂತ ದಯೆಯುಳ್ಳವರೂ, ಅಹಿಂಸಾ ನಿರತರೂ, ಮೃದುಭಾಷಿಗಳೂ ಮತ್ತು ಬ್ರಾಹ್ಮಣಪ್ರಿಯರೂ ಆಗಿರುತ್ತಾರೆ.

ಶುಭಾನಾಮಶುಭಾನಾಂ ಚ ಕರ್ಮಣಾಂ ಫಲಸಂಚಯೇ ।
ವಿಪಾಕಮಭಿಜಾನಂತಿ ತೇ ಶಿಷ್ಟಾಃ ಶಿಷ್ಟಸಮ್ಮತಾಃ ॥೮೯॥

ಯಾರು ಶುಭಾಶುಭಕರ್ಮಗಳಿಂದ ಉಂಟಾಗುವ ಫಲರಾಶಿಗಳಲ್ಲಿ ಇರುವ ವ್ಯತ್ಯಾಸವನ್ನು ಮತ್ತು ಆ ಕರ್ಮಗಳು ಪಾಕಹೊಂದುವ ಸಮಯವನ್ನು ತಿಳಿಯುತ್ತಾರೆಯೋ ಅವರು ಶಿಷ್ಟರಿಗೆ ಸಮ್ಮತರಾದ ಶಿಷ್ಟರು.

ನ್ಯಾಯೋಪೇತಾ ಗುಣೋಪೇತಾಃ ಸರ್ವಲೋಕಹಿತೈಷಿಣಃ ।
ಸಂತಃ ಸ್ವರ್ಗಜಿತಃ ಶುಕ್ಲಾಃ ಸನ್ನಿವಿಷ್ಟಾಶ್ಚ ಸತ್ಪಥೇ ॥೯೦॥

ನ್ಯಾಯದಿಂದ ನಡೆಯುವವರೂ, ಗುಣವಂತರೂ, ಸರ್ವಲೋಕ ಹಿತವನ್ನು ಬಯಸುವವರೂ, ಸನ್ಮಾರ್ಗದಲ್ಲೇ ನಿಷ್ಠರಾದವರೂ, ಶುದ್ಧರಾದವರೂ ಆದ ಸಜ್ಜನರು ಸ್ವರ್ಗವನ್ನು ಜಯಿಸುತ್ತಾರೆ.

ದಾತಾರಃ ಸಂವಿಭಕ್ತಾರೋ ದೀನಾನುಗ್ರಹಕಾರಿಣಃ ।
ಸರ್ವಭೂತದಯಾವಂತಸ್ತೇ ಶಿಷ್ಟಾಃ ಶಿಷ್ಟಸಮ್ಮತಾಃ ॥೯೧॥

ದಾನಮಾಡುವವರು ತಮ್ಮ ಸಂಪತ್ತನ್ನು ಇನ್ನೊಬ್ಬರಿಗೆ ಹಂಚುವವರು, ಧೀನರಿಗೆ ಅನುಗ್ರಹವನ್ನು ಮಾಡುವವರು ಮತ್ತು ಸರ್ವಭೂತಗಳಲ್ಲಿಯೂ ದಯೆಯುಳ್ಳವರು ಶಿಷ್ಟರಿಗೆ ಸಮ್ಮತವಾದ ಶಿಷ್ಟರೆನಿಸುತ್ತಾರೆ.

ಸರ್ವಪೂಜ್ಯಾಃ ಶ್ರುತಧನಾಸ್ತಥೈವ ಚ ತಪಸ್ವಿನಃ ।
ದಾನಶಿಷ್ಟಾಃ ಸುಖಾಂಲ್ಲೋಕಾನಾಪ್ನುವಂತೀಹ ಚ ಶ್ರಿಯಮ್ ॥೯೨॥

ಎಲ್ಲರಿಂದಲೂ ಪೂಜಿಸಲ್ಪಡುವವರೂ, ವಿದ್ಯೆಯೇ ಧನವಾಗಿ ಉಳ್ಳವರೂ, ತಪಸ್ವಿಗಳಾದವರೂ, ದಾನವನ್ನು ಮಾಡಿ ಶಿಷ್ಟರಾದವರೂ ಸುಖಮಯವಾದ ಲೋಕಗಳನ್ನು ಪಡೆಯುತ್ತಾರೆ ಮತ್ತು ಈ ಲೋಕದಲ್ಲಿಯೂ ಸಂಪತ್ತನ್ನು ಪಡೆಯುತ್ತಾರೆ.

ಪೀಡಯಾ ಚ ಕಳತ್ರಸ್ಯ ಭೃತ್ಯಾನಾಂ ಚ ಸಮಾಹಿತಾಃ ।
ಅತಿಶಕ್ಯಾ ಪ್ರಯಚ್ಛಂತಿ ಸಂತಃ ಸದ್ಭಿಃ ಸಮಾಗತಾಃ ॥೯೩॥

ಏವಂ ಸಂತೋ ವರ್ತಮಾನಾಸ್ತ್ವೇಧಂತೇ ಶಾಶ್ವತೀಃ ಸಮಾಃ ॥೯೪॥

ಹೆಂಡತಿಗೆ ಮತ್ತು ಸೇವಕರುಗಳಿಗೆ ಪೀಡೆಯನ್ನಾದರೂ ಮಾಡಿ ಸಮಾಧಾನವುಳ್ಳ ಮನಸ್ಸಿನಿಂದ ಸಜ್ಜನರ ಸಮಾಗಮ ಉಂಟಾದಾಗ ತಮ್ಮ ಶಕ್ತಿಯನ್ನು ಮೀರಿ ದಾನವನ್ನು ಮಾಡುತ್ತಾರೆ. ಅವರು ಸಜ್ಜನರು. ಹೀಗಿರುವ ಸಜ್ಜನರು ಬಹುಕಾಲದಲ್ಲಿ ಅಭಿವೃದ್ಧಿಯನ್ನೇ ಹೊಂದುತ್ತಾರೆ.

ಅಹಿಂಸಾ ಸತ್ಯವಚನಮಾನೃಶಂಸ್ಯಮಥಾರ್ಜವಮ್ ।
ಅದ್ರೋಹೋ ನಾಭಿಮಾನಶ್ಚ ಹ್ರೀಸ್ತಿತಿಕ್ಷಾ ದಮಃ ಶಮಃ ॥೯೫॥

ಧೀಮಂತೋ ಧೃತಿಮಂತಶ್ಚ ಭೂತಾನಾಮನುಕಂಪಕಾಃ ।
ಅಕಾಮದ್ವೇಷಸಂಯುಕ್ತಾಸ್ತೇ ಸಂತೋ ಲೋಕಸಾಕ್ಷಿಣಃ ॥೯೬॥

ಅಹಿಂಸೆ, ಸತ್ಯವಚನ, ಮಾರ್ದವ, ಆರ್ಜವ, ಅದ್ರೋಹ, ಅನಭಿಮಾನ, ನಾಚಿಕೆ, ಸಹನೆ, ಇಂದ್ರಿಯನಿಗ್ರಹ, ಭಗವನ್ನಿಷ್ಠೆ ಇವುಗಳಿಂದ ಕೂಡಿದ ಮೇಧಾವಿಗಳೂ, ಧೈರ್ಯವಂತರೂ, ಸರ್ವಪ್ರಾಣಿಗಳಲ್ಲಿ ದಯೆಯುಳ್ಳವರೂ, ಕಾಮದ್ವೇಷರಹಿತರೂ ಆದ ಸಜ್ಜನರು ಲೋಕಸಾಕ್ಷಿಗಳಾಗಿರುತ್ತಾರೆ.

ನ ಚೈವ ದ್ರುಹ್ಯೇದ್ ದದ್ಯಾಚ್ಚ ಸತ್ಯಂ ಚೈವ ಸದಾ ವದೇತ್ ॥೯೭॥

ಸರ್ವತ್ರ ಚ ದಯಾವಂತಃ ಸಂತಃ ಕರುಣವೇದಿನಃ ।
ಗಚ್ಛಂತೀಹ ಸುಸಂತುಷ್ಟಾ ಧರ್ಮಪಂಥಾನಮುತ್ತಮಮ್ ॥೯೮॥

ಯಾರಿಗೂ ದ್ರೋಹವನ್ನು ಮಾಡಬಾರದು. ದಾನವನ್ನು ಮಾಡಬೇಕು. ಯಾವಾಗಲೂ ಸತ್ಯವನ್ನೇ ನುಡಿಯಬೇಕು. ಎಲ್ಲರಲ್ಲಿಯೂ ದಯೆವುಳ್ಳವರಾಗಬೇಕು. ಕಾರುಣ್ಯವನ್ನು ಹೊಂದುವವರಾಗಬೇಕು. ಅಂತಹ ಸಜ್ಜನರು ಇಲ್ಲಿ ಸುಸಂತುಷ್ಟರಾಗಿ ಶ್ರೇಷ್ಠವಾದ ಧರ್ಮಪಥದಲ್ಲಿ ನಡೆಯುತ್ತಾರೆ.

ಶಿಷ್ಟಾಚಾರಾ ಮಹಾತ್ಮಾನೋ ಯೇಷಾಂ ಧರ್ಮಃ ಸುನಿಶ್ಚಿತಃ ॥೯೯॥

ಅವರು ಶಿಷ್ಟಾಚಾರವುಳ್ಳ ಮಹಾತ್ಮರು. ಅವರಿಗೆ ಧರ್ಮದ ವಿಷಯದಲ್ಲಿ ದೃಢವಾದ ನಿಶ್ಚಯವಿರುತ್ತದೆ.

ಕಾಮಕ್ರೋಧಪರಿತ್ಯಾಗಃ ಶಿಷ್ಟಾಚಾರನಿಷೇವಣಮ್ ॥೧೦೦॥

ಕರ್ಮ ಚ ಶ್ರುತಸಂಪನ್ನಂ ಸತಾಂ ಮಾರ್ಗಮನುತ್ತಮಮ್ ।
ಶಿಷ್ಟಾಚಾರಂ ನಿಷೇವಂತೇ ನಿತ್ಯಂ ಧರ್ಮಮನುವ್ರತಾಃ ॥೧೦೧॥

ಕಾಮಕ್ರೋಧಗಳ ಪರಿತ್ಯಾಗ, ಶಿಷ್ಟಾಚಾರದ ಆಚರಣೆ, ವೇದೋಕ್ತ ಕರ್ಮಗಳ ಅನುಷ್ಠಾನ ಇವು ಸಜ್ಜನರ ಶ್ರೇಷ್ಠವಾದ ಮಾರ್ಗ. ಧರ್ಮವನ್ನು ಅನುಸರಿಸುವವರು ಯಾವಾಗಲೂ ಶಿಷ್ಟಾಚಾರವನ್ನೇ ಸೇವಿಸುತ್ತಾರೆ (ನೆರವೇರಿಸುತ್ತಾರೆ).

ಪ್ರಜ್ಞಾಪ್ರಾಸಾದಮಾರುಹ್ಯ ಮುಚ್ಯಂತೇ ಮಹತೋ ಭಯಾತ್ ।
ಪ್ರೇಕ್ಷಂತೋ ಲೋಕವೃತ್ತಾನಿ ವಿವಿಧಾನಿ ದ್ವಿಜೋತ್ತಮ ।
ಅತಿಪುಣ್ಯಾನ್ನದಾನಾನಿ ತಾನಿ ದ್ವಿಜವರೋತ್ತಮ ॥೧೦೨॥

ಎಲೈ ದ್ವಿಜವರೋತ್ತಮರೇ, ಅತಿಪುಣ್ಯದಾಯಕವಾದ ಅನ್ನದಾನಾದಿ ಕರ್ಮಗಳನ್ನೂ, ವಿವಿಧವಾದ ಲೋಕವೃತ್ತಗಳನ್ನೂ ನೋಡುತ್ತಾ ಪ್ರಜ್ಞೆ ಎಂಬ ಉಪ್ಪರಿಗೆಯ ಮನೆಯನ್ನು ಏರಿದವರಾಗಿ ಸಜ್ಜನರು ದೊಡ್ಡ ಭಯದಿಂದ ನಿರ್ಮುಕ್ತರಾಗುತ್ತಾರೆ.

ಏತತ್ ತೇ ಸರ್ವಮಾಖ್ಯಾತಂ ಯಥಾಪ್ರಜ್ಞಂ ಯಥಾಶ್ರುತಮ್ ।
ಶಿಷ್ಟಾಚಾರಗುಣಂ ಬ್ರಹ್ಮನ್ ಪುರಸ್ಕೃತ್ಯ ದ್ವಿಜರ್ಷಭ ॥೧೦೩॥

ಎಲೈ ದ್ವಿಜ ಋಷಭರೇ, ಬ್ರಾಹ್ಮಣರೇ, ನೀವು ಕೇಳಿದ ಪ್ರಶ್ನೆಗೆ ಉತ್ತರವಾಗಿ ನಾನು ಶ್ರವಣ ಮಾಡಿದಂತೆ ಮತ್ತು ನನ್ನ ಬುದ್ಧಿಗೆ ಅನುಗುಣವಾಗಿ ಶಿಷ್ಟರ ಆಚಾರ ಮತ್ತು ಗುಣಗಳನ್ನು ಮುಂದೆ ಮಾಡಿಕೊಂಡು ಇವೆಲ್ಲವನ್ನೂ ನಿಮಗೆ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರ್ನವತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಪತಿವ್ರತಾಮಾಹಾತ್ಮ್ಯೇ
ಏಕೋನವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ತಾಲ್ಕನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ತೈದನೆಯ ಅಧ್ಯಾಯ

ಕೌಶಿಕ ಬ್ರಾಹ್ಮಣನಿಗೆ ಧರ್ಮವ್ಯಾಧನಿಂದ ಉಪದೇಶದ ಕಥನ.

ಮಾರ್ಕಂಡೇಯಃ

ಸ ತು ವಿಪ್ರಮಥೋವಾಚ ಧರ್ಮವ್ಯಾಧೋ ಯುಧಿಷ್ಠಿರ ।

ಮಾರ್ಕಂಡೇಯ- ಎಲೈ ಯುಧಿಷ್ಠಿರನೇ, ಅನಂತರ ಧರ್ಮವ್ಯಾಧನು ಆ ಬ್ರಾಹ್ಮಣನನು ಕುರಿತು ಮಾತನಾಡಿದನು.

ಯದಹಮಾಚರೇ ಕರ್ಮ ಘೋರಮೇತದಸಂಶಯಮ್ ॥೧॥

ವಿಧಿಸ್ತು ಬಲವಾನ್ ಬ್ರಹ್ಮನ್ ದುಸ್ತರಂ ಹಿ ಪುರಾಕೃತಮ್ ।
ಪುರಾಕೃತಸ್ಯ ಪಾಪಸ್ಯ ಕರ್ಮದೋಷೋ ಭವತ್ಯಯಮ್ ॥೨॥

ನಾನು ಏನು ಕರ್ಮವನ್ನು ಮಾಡುತ್ತಿದ್ದೇನೆಯೋ ಅದು ಘೋರವಾದುದು ಎಂಬುದರಲ್ಲಿ ಸಂಶಯವಿಲ್ಲ. ಎಲೈ ಬ್ರಾಹ್ಮಣರೇ, ವಿಧಿಯು ಪ್ರಬಲವಾದುದು. ನಾನು ಹಿಂದೆ ಮಾಡಿದ ಕರ್ಮವನ್ನು ಮೀರಲು ಸಾಧ್ಯವಿಲ್ಲ. ನಾನು ಈಗ ಮಾಡುತ್ತಿರುವುದು ಹಿಂದೆ ಮಾಡಿದ ಪಾಪಕರ್ಮದಿಂದ ಉಂಟಾದ ಕರ್ಮದೋಷವಾಗಿದೆ.

ದೋಷಸ್ಯೈತಸ್ಯ ವೈ ಬ್ರಹ್ಮನ್ ವಿಘಾತೇ ಯತ್ನವಾನಹಮ್ ।
ವಿಧಿನಾ ವಿಹಿತಂ ಪೂರ್ವಂ ನಿಮಿತ್ತಂ ಘಾತಕೋ ಭವೇತ್ ।
ನಿಮಿತ್ತಭೂತಾ ಹಿ ವಯಂ ಕರ್ಮಣೋಽಸ್ಯ ದ್ವಿಜೋತ್ತಮ ॥೩॥

ಎಲೈ ಬ್ರಾಹ್ಮಣರೇ, ಈ ದೋಷದ ಪರಿಹಾರಕ್ಕಾಗಿ ನಾನು ಪ್ರಯತ್ನವನ್ನು ಮಾಡುತ್ತಿದ್ದೇನೆ. ಮೊದಲು ವಿಧಿಯಿಂದ ಹೀನಯೋನಿಪ್ರಾಪ್ತಿಗೆ ಯಾವ ಕಾರಣವಾದ ಕರ್ಮವು ವಿಹಿತವಾಗಿದೆಯೋ ಆ ಕಾರಣವೂ ಕೂಡ ಹೀನಯೋನಿಯಲ್ಲಿಯೂ ಪುಣ್ಯವನ್ನು ಸಂಪಾದಿಸುವುದರಿಂದ ನಾಶವನ್ನು ಹೊಂದುತ್ತದೆ. ಎಲೈ ದ್ವಿಜಶ್ರೇಷ್ಠರೇ, ಇಂತಹ ದುಷ್ಕರ್ಮಗಳಿಗೆ ನಾವೇ ಕಾರಣರಾದವರು.

ಯೇಷಾಂ ಹತಾನಾಂ ಮಾಂಸಾನಿ ವಿಕ್ರೀಣಾಮೀಹ ವೈ ದ್ವಿಜ ।
ತೇಷಾಮಪಿ ಭವೇತ್‌ಕರ್ಮ ಉಪಯೋಗೇನ ಭಕ್ಷಣಾತ್ ॥೪॥

ದೇವತಾತಿಥಿಭೃತ್ಯಾನಾಂ ಪಿತೄಣಾಂ ಪ್ರತಿಪೂಜನಾತ್ ॥೫॥

ಎಲೈ ಬ್ರಾಹ್ಮಣರೇ, ಯಾವ ಪ್ರಾಣಿಗಳ ಮಾಂಸವನ್ನು ನಾನು ಮಾರುತ್ತೇನೆಯೋ ಆ ಪ್ರಾಣಿಗಳಿಗೂ ಸಹ ದೇವತಾಧಿಗಳ ಪೂಜೆಯನ್ನು ಮಾಡುವುದರಿಂದ ಆ ಮಾಂಸದಿಂದ ಪಿತೃಗಳ ಪೂಜೆಯನ್ನೂ, ಭೃತ್ಯರ ಪೂಜೆಯನ್ನೂ ಮಾಡುವುದರಿಂದ ಸ್ವತಃ ಸಜ್ಜನರು ಭಕ್ಷಣ ಮಾಡುವುದರಿಂದ ಪುಣ್ಯ ಉಂಟಾಗುತ್ತದೆ.

ಓಷಧ್ಯೋ ವೀರುಧಶ್ಚೈವ ಪಶವೋ ಮೃಗಪಕ್ಷಿಣಃ ।
ಅನ್ನಾದ್ಯಭೂತಾ ಭೂತಾನಾಮಿತ್ಯಪಿ ಶ್ರೂಯತೇ ಶ್ರುತಿಃ ॥೬॥

ಓಷಧಿಗಳು, ವೀರುಧಗಳು, ಪಶುಗಳು, ಮೃಗಪಕ್ಷಿಗಳು ಇವು ಪ್ರಾಣಿಗಳಿಗೆ ತಿನ್ನಲ್ಪಡುವ ಅನ್ನವಾಗಿದೆ ಎಂಬ ಶ್ರುತಿಯು ಕೇಳಿಬರುತ್ತದೆ.

ಆತ್ಮಮಾಂಸಪ್ರದಾನೇನ ಶಿಬಿರೌಶೀನರೋ ನೃಪಃ ।
ಸ್ವರ್ಗಂ ಸುದುರ್ಗಮಂ ಪ್ರಾಪ್ತಃ ಕ್ಷಮಾವಾನ್ ದ್ವಿಜಸತ್ತಮ ॥೭॥

ಎಲೈ ದ್ವಿಜಶ್ರೇಷ್ಠರೇ, ಕ್ಷಮಾಶೀಲನಾದ ಔಷೀನರನಾದ ಶಿಬಿಚಕ್ರವರ್ತಿಯು ತನ್ನ ಮಾಂಸವನ್ನು ದಾನಮಾಡುವುದರಿಂದ ದುರ್ಗಮವಾದ ಸ್ವರ್ಗವನ್ನು ಹೊಂದಿದನು.

ರಾಜ್ಞೋ ಮಹಾನಸೇ ಪೂರ್ವಂ ರಂತಿದೇವಸ್ಯ ವೈ ದ್ವಿಜ ।
ದ್ವೇ ಸಹಸ್ರೇ ತು ವಧ್ಯೇತೇ ಪಶೂನಾಮನ್ವಹಂ ತದಾ ॥೮॥

ಎಲೈ ಬ್ರಾಹ್ಮಣರೇ, ರಂತಿದೇವರಾಜನ ಅರಮನೆಯಲ್ಲಿ ಅಡಿಗೆಮನೆಯಲ್ಲಿ ನಿತ್ಯವೂ ಹಿಂದೆ ಎರಡು ಸಾವಿರ ಪಶುಗಳು ವಧಿಸಲ್ಪಡುತ್ತಿದ್ದವು.

ಸಮಾಂಸಂ ದದತೋ ಹ್ಯನ್ನಂ ರಂತಿದೇವಸ್ಯ ನಿತ್ಯಶಃ ।
ಅತುಲಾ ಕೀರ್ತಿರಭವನ್ನೃಪಸ್ಯ ದ್ವಿಜಸತ್ತಮ ॥೯॥

ಎಲೈ ದ್ವಿಜಶ್ರೇಷ್ಠರೇ, ನಿತ್ಯವೂ ಮಾಂಸಸಹಿತವಾದ ಅನ್ನವನ್ನು ದಾನ ಮಾಡುತ್ತಿದ್ದ ರಂತಿದೇವರಾಜನಿಗೆ ಅಪಾರವಾದ ಕೀರ್ತಿಯುಂಟಾಯಿತು.

ಚಾತುರ್ಮಾಸ್ಯೇ ಚ ಪಶವೋ ವಧ್ಯಂತ ಇತಿ ನಿತ್ಯಶಃ ।
ಅಗ್ನಯೋ ಮಾಂಸಕಾಮಾಶ್ಚ ಇತ್ಯಪಿ ಶ್ರೂಯತೇ ಶ್ರುತಿಃ ॥೧೦॥

ಚಾತುರ್ಮಾಸ್ಯಯಾಗದಲ್ಲಿ ಈ ರೀತಿ ಪಶುಗಳು ಯಾವಾಗಲೂ ವಧಿಸಲ್ಪಡುತ್ತವೆ. ಅಗ್ನಿಗಳು ಮಾಂಸಕಾಮವುಳ್ಳವರು ಎಂಬ ಶ್ರುತಿಯೂ ಕೇಳಿಬರುತ್ತದೆ.

ಯಜ್ಞೇಷು ಪಶವೋ ಬ್ರಹ್ಮನ್ ವಧ್ಯಂತೇ ಸತತಂ ದ್ವಿಜೈಃ ।
ಸಂಸ್ಕೃತಾಃ ಕಿಲ ಮಂತ್ರೈಶ್ಚ ತೇಽಪಿ ಸ್ವರ್ಗಮವಾಪ್ನುವನ್ ॥೧೧॥

ಎಲೈ ಬ್ರಾಹ್ಮಣರೇ, ಯಜ್ಞದಲ್ಲಿ ಸತತವಾಗಿ ದ್ವಿಜರಿಂದ ಪಶುಗಳು ವಧಿಸಲ್ಪಡುತ್ತವೆ. ಮಂತ್ರಗಳಿಂದ ಸಂಸ್ಕೃತವಾದ ಆ ಪಶುಗಳಿಗೂ ಸ್ವರ್ಗವುಂಟಾಗುತ್ತದೆ.

ಯದಿ ನೈವಾಗ್ನಯೋ ಬ್ರಹ್ಮನ್ಮಾಂಸಕಾಮಾಽಭವನ್ ಪುರಾ ।
ಭಕ್ಷ್ಯಂ ನೈವಾಭವನ್ಮಾಂಸಂ ಕಸ್ಯಚಿದ್ ದ್ವಿಜಸತ್ತಮ ।
ಅತ್ರಾಪಿ ವಿಧಿರುಕ್ತಶ್ಚ ಮುನಿಭಿರ್ಮಾಂಸಭಕ್ಷಣೇ ॥೧೨॥

ಎಲೈ ಬ್ರಾಹ್ಮಣರೇ, ಹಿಂದೆ ಒಂದು ಪಕ್ಷ ಅಗ್ನಿಗಳಿಗೆ ಮಾಂಸದ ಆಸೆಯಿಲ್ಲದಿದ್ದರೆ ಮಾಂಸವು ಯಾರಿಗೂ ಭಕ್ಷ್ಯವಾಗುತ್ತಿರಲಿಲ್ಲ (ತಿನ್ನಲು ಯೋಗ್ಯವಾಗುತ್ತಿರಲಿಲ್ಲ). ಮಾಂಸಭಕ್ಷಣ ವಿಷಯದಲ್ಲಿಯೂ ಋಷಿಗಳು ವಿಧಾನವನ್ನು ತಿಳಿಸಿದ್ದಾರೆ.

ದೇವತಾನಾಂ ಪಿತೄಣಾಂ ಚ ಭುಂಕ್ತೇ ದತ್ತ್ವಾಽಪಿ ಯಃ ಸದಾ -
ಯಥಾವಿಧಿ ಯಥಾಶ್ರದ್ಧಂ ನ ಪ್ರದುಷ್ಯತಿ ಭಕ್ಷಣಾತ್ ॥೧೩॥

ಅಮಾಂಸಾಶೀ ಭವತ್ಯೇವಮಿತ್ಯಪಿ ಶ್ರೂಯತೇ ಶ್ರುತಿಃ ॥೧೪॥

ಯಾವನು ದೇವತೆಗಳಿಗೂ, ಪಿತೃಗಳಿಗೂ ನಿವೇದಿಸಿ ವಿಧಿಗೆ ಅನುಗುಣವಾಗಿ ಮತ್ತು ತನ್ನ ಶ್ರದ್ಧೆಗೆ ಅನುಗುಣವಾಗಿ ಮಾಂಸಭಕ್ಷಣೆಯನ್ನು ಮಾಡುತ್ತಾನೆಯೋ ಅವನು ದೋಷಿಯಾಗುವುದಿಲ್ಲ. ಅವನು ಮಾಂಸಭಕ್ಷಣೆಯನ್ನು ಮಾಡದವನೇ ಆಗುತ್ತಾನೆ ಎಂದೂ ಶ್ರುತಿಯು ಕೇಳಿಬರುತ್ತದೆ.

ಭಾರ್ಯಾಂ ಗಚ್ಛನ್ ಬ್ರಹ್ಮಚಾರೀ ಋತೌ ಭವತಿ ಬ್ರಾಹ್ಮಣಃ ।
ಸತ್ಯಾನೃತೇ ವಿನಿಶ್ಚಿತ್ಯ ಅತ್ರಾಪಿ ವಿಧಿರುಚ್ಯತೇ ॥೧೫॥

ತನ್ನ ಪತ್ನಿಯಲ್ಲಿ ಋತುಗಾಮಿಯಾದ ಬ್ರಾಹ್ಮಣನು ಬ್ರಹ್ಮಚಾರಿಯೇ ಎಂದು ಹೇಳಲ್ಪಡುತ್ತಾನೆ. ಅದರಂತೆ ಮಾಂಸಭಕ್ಷಣ ವಿಷಯದಲ್ಲಿಯೂ ಸತ್ಯ ಮತ್ತು

ಅನೃತಗಳನ್ನು ವಿವೇಚಿಸಿ (ವಿಧಿಪೂರ್ವಕವಾದುದು ಸತ್ಯ, ರಾಗಪೂರ್ವಕವಾದುದು ಅನೃತ) ವಿಧಾನವು ಹೇಳಲ್ಪಡುತ್ತದೆ.

ಸೌದಾಸೇನ ತದಾ ರಾಜ್ಞಾ ಮಾನುಷಾ ಭಕ್ಷಿತಾ ದ್ವಿಜ ।
ಶಾಪಾಭಿಭೂತೇನ ಭೃಶಮತ್ರ ಕಿಂ ಪ್ರತಿಭಾತಿ ತೇ ॥೧೬॥

ಹಿಂದೆ ಸೌದಾಸ ರಾಜನು ಶಾಪಕ್ಕೆ ಒಳಗಾಗಿ ಅನೇಕ ಮನುಷ್ಯರನ್ನು ಚೆನ್ನಾಗಿ ಭಕ್ಷಿಸಿದನು. ಈ ವಿಷಯದಲ್ಲಿ ನಿನಗೆ ಹೇಗೆನಿಸುತ್ತದೆ?

ಸ್ವಧರ್ಮ ಇತಿ ಕೃತ್ವಾ ತು ನ ತ್ಯಜಾಮಿ ದ್ವಿಜೋತ್ತಮ ।
ಪುರಾಕೃತಮಿತಿ ಜ್ಞಾತ್ವಾ ಜೀವಾಮ್ಯೇತೇನ ಕರ್ಮಣಾ ॥೧೭॥

ಎಲೈ ದ್ವಿಜೋತ್ತಮರೇ, ಇದು ನನ್ನ ಸ್ವಧರ್ಮ ಎಂದು ತಿಳಿದು ನಾನು ಇದನ್ನು ಬಿಡುತ್ತಿಲ್ಲ. ಇದು ನನ್ನ ಪೂರ್ವಕರ್ಮದ ದೋಷವೆಂದು ತಿಳಿದು ಈ ಕರ್ಮವನ್ನು ಮಾಡಿ ಜೀವಿಸುತ್ತಿದ್ದೇನೆ.

ಸ್ವಕರ್ಮ ತ್ಯಜತೋ ಬ್ರಹ್ಮನ್ನಧರ್ಮ ಇಹ ದೃಶ್ಯತೇ ।
ಸ್ವಕರ್ಮನಿರತೋ ಯಸ್ತು ಧರ್ಮಃ ಸ ಇತಿ ನಿಶ್ಚಯಃ ॥೧೮॥

ಎಲೈ ಬ್ರಾಹ್ಮಣರೇ, ಸ್ವಧರ್ಮವನ್ನು ತ್ಯಾಗಮಾಡಿದರೆ ಅದು ಇಲ್ಲಿ ಅಧರ್ಮವಾಗುತ್ತದೆ. ಯಾರು ಇಲ್ಲಿ ಸ್ವಕರ್ಮನಿರತರಾಗಿರುತ್ತಾರೆಯೋ ಅದು ಧರ್ಮವೇ ಎಂದು ನಿಶ್ಚಿತವಾದುದು.

ಪೂರ್ವಂ ಹಿ ವಿಹಿತಂ ಕರ್ಮ ದೇಹಿನಂ ನ ವಿಮುಂಚತಿ ।
ಧಾತ್ರಾ ವಿಧಿರಯಂ ದೃಷ್ಟೋ ಬಹುಧಾ ಕರ್ಮನಿರ್ಣಯೇ ॥೧೯॥

ಹಿಂದೆ ಮಾಡಿದ ಕರ್ಮವು ದೇಹಿಯನ್ನು ಬಿಡುವುದಿಲ್ಲ. ಕರ್ಮನಿರ್ಣಯದ ವಿಷಯದಲ್ಲಿ ಬ್ರಹ್ಮದೇವರು ಈ ವಿಧಾನವನ್ನು ಬಹಳವಾಗಿ ಕಂಡಿದ್ದಾರೆ.

ದ್ರಷ್ಟವ್ಯಾ ತು ಭವೇತ್ ಪ್ರಜ್ಞಾ ಕ್ರೂರೇ ಕರ್ಮಣಿ ವರ್ತತಾ ।
ಕಥಂ ಕರ್ಮ ಶುಭಂ ಕುರ್ಯಾಂ ಕಥಂ ಮುಚ್ಯೇ ಪರಾಭವಾತ್ ॥೨೦॥

ಕ್ರೂರಕರ್ಮವನ್ನು ಮಾಡುವವನು ತನ್ನ ಬುದ್ಧಿಯಿಂದ ಈ ಕರ್ಮವು ಹೇಗೆ ಶುಭಕರ್ಮವಾದೀತು. ಇದರಿಂದ ಉಂಟಾಗುವ ದೋಷದಿಂದ ನಾನು ಹೇಗೆ ಬಿಡುಗಡೆಯನ್ನು ಹೊಂದಿಯೇನು ಎಂದು ಯಾವಾಗಲೂ ಯೋಚಿಸಬೇಕು.

ಕರ್ಮಣಸ್ತಸ್ಯ ಘೋರಸ್ಯ ಬಹುಧಾ ನಿರ್ಣಯೋ ಭವೇತ್ ।
ದಾನೇ ಚ ಸತ್ಯವಾಕ್ಯೇ ಚ ಗುರುಶುಶ್ರೂಷಣೇ ತಥಾ ॥೨೧॥

ಆ ಘೋರಕರ್ಮಕ್ಕೆ ದಾನವನ್ನು ಮಾಡುವುದರಿಂದ, ಸತ್ಯವನ್ನು ನುಡಿಯುವುದರಿಂದ, ಗುರುಸೇವೆಯಿಂದ ಅನೇಕ ರೀತಿಯಲ್ಲಿ ಸತ್ಕರ್ಮವೆಂಬ ನಿರ್ಣಯವು ಉಂಟಾದೀತು.

ದ್ವಿಜಾತಿಪೂಜನೇ ಚಾಹಂ ಧರ್ಮೇ ಚ ನಿರತಃ ಸದಾ ।
ಅಭಿಮಾನಾತಿವಾದಾಭ್ಯಾಂ ನಿವೃತ್ತೋಽಸ್ಮಿ ದ್ವಿಜೋತ್ತಮ ।
ಕೃಷಿಂ ಸಾಧ್ವಿತಿ ಮನ್ಯಂತೇ ತತ್ರ ಹಿಂಸಾ ಪರಾ ಸ್ಮೃತಾ ॥೨೨॥

ನಾನು ಯಾವಾಗಲೂ ದ್ವಿಜರ ಪೂಜೆಯಲ್ಲೂ ಮತ್ತು ಧರ್ಮಾಚರಣೆಯಲ್ಲಿಯೂ ನಿರತನಾಗಿದ್ದೇನೆ. ಎಲೈ ದ್ವಿಜೋತ್ತಮರೇ, ಅಹಂಕಾರವನ್ನೂ ಮತ್ತು ಆತ್ಮಪ್ರಶಂಸೆಯನ್ನೂ ಸರ್ವಥಾ ತ್ಯಜಿಸಿದ್ದೇನೆ. ಕೃಷಿಯನ್ನು ಸತ್ಕರ್ಮವೆಂದು ತಿಳಿಯುತ್ತಾರೆ. ಅಲ್ಲಿಯೂ ಬಹಳವಾದ ಹಿಂಸೆ ಇದೆ.

ಕರ್ಷಂತೋ ಲಾಂಗಲೈಃ ಪುಂಸೋ ಘ್ನಂತಿ ಭೂಮಿಶಯಾನ್ ಬಹೂನ್ ।
ಜೀವಾನನ್ಯಾಂಶ್ಚ ಬಹುಶಸ್ತತ್ರ ಕಿಂ ಪ್ರತಿಭಾತಿ ತೇ ॥೨೩॥

ನೇಗಿಲಿನಿಂದ ಉಳುತ್ತಾ ಭೂಮಿಯಲ್ಲಿರುವ ಅನೇಕ ಜಂತುಗಳನ್ನು ಮತ್ತು ವ್ಯವಸಾಯವನ್ನು ಮಾಡುತ್ತಾ ಇನ್ನೂ ಅನೇಕ ಜೀವರನ್ನು ಬಹಳವಾಗಿ ಕೊಲ್ಲುತ್ತಾರೆ. ಈ ವಿಷಯದಲ್ಲಿ ನಿಮಗೆ ಏನೆನಿಸುತ್ತದೆ?

ಧಾನ್ಯಬೀಜಾನಿ ಯಾನ್ಯಾಹುರ್ವ್ರೀಹ್ಯಾದೀನಿ ದ್ವಿಜೋತ್ತಮ ।
ಸರ್ವಾಣ್ಯೇತಾನಿ ಬೀಜಾನಿ ತತ್ರ ಕಿಂ ಪ್ರತಿಭಾತಿ ತೇ ॥೨೪॥

ಎಲೈ ದ್ವಿಜೋತ್ತಮರೇ, ವ್ರೀಹಿ ಮೊದಲಾದ ಯಾವ ಧಾನ್ಯ ಬೀಜಗಳಿದೆಯೋ ಅವೆಲ್ಲವೂ ಅಂಕುರಕ್ಕೆ ಕಾರಣವಾದ ಬೀಜಗಳು. ಆ ವಿಷಯದಲ್ಲಿ ನಿಮಗೆ ಏನೆನಿಸುತ್ತದೆ?

ಅಧ್ಯಾಕ್ರಮ್ಯ ಪಶೂಂಶ್ಚಾಪಿ ಘ್ನಂತಿ ವೈ ಭಕ್ಷಯಂತಿ ಚ ।
ವೃಕ್ಷಾಂಸ್ತಥೌಷಧೀಶ್ಚಾಪಿ ಛಿಂದಂತಿ ಪುರುಷಾ ದ್ವಿಜ ॥೨೫॥

ಪಶುಗಳನ್ನು ಮೆಟ್ಟಿನಿಂತು ಅವುಗಳನ್ನು ಕೊಂದು ತಿನ್ನುತ್ತಾರೆ. ಎಲೈ ಬ್ರಾಹ್ಮಣರೇ, ಮನುಷ್ಯರು ವೃಕ್ಷಗಳನ್ನು ಮತ್ತು ಓಷಧಿಗಳನ್ನು ಕಡಿಯುತ್ತಾರೆ.

ಜೀವಾ ಹಿ ಬಹವೋ ಬ್ರಹ್ಮನ್ ವೃಕ್ಷೇಷು ಚ ಫಲೇಷು ಚ ।
ಉದಕೇ ಬಹವಶ್ಚಾಪಿ ತತ್ರ ಕಿಂ ಪ್ರತಿಭಾತಿ ತೇ ॥೨೬॥

ಎಲೈ ಬ್ರಾಹ್ಮಣರೇ, ವೃಕ್ಷಗಳಲ್ಲಿಯೂ ಮತ್ತು ಫಲಗಳಲ್ಲಿಯೂ ಅನೇಕ ಜೀವಗಳಿವೆ. ಜಲದಲ್ಲಿಯೂ ಅನೇಕ ಜೀವಗಳಿವೆ. ಈ ವಿಷಯದಲ್ಲಿ ನಿಮಗೆ ಏನೆನಿಸುತ್ತದೆ?

ಸರ್ವಂ ವ್ಯಾಪ್ತಮಿದಂ ಬ್ರಹ್ಮನ್ ಪ್ರಾಣಿಭಿಃ ಪ್ರಾಣಿಜೀವನೈಃ ।
ಮತ್ಸ್ಯಾನ್ ಗ್ರಸಂತೇ ಮತ್ಸ್ಯಾಶ್ಚ ತತ್ರ ಕಿಂ ಪ್ರತಿಭಾತಿ ತೇ ॥೨೭॥

ಎಲೈ ಬ್ರಾಹ್ಮಣರೇ, ಈ ಜಗತ್ತೆಲ್ಲವೂ ಪ್ರಾಣಿಗಳನ್ನು ತಿನ್ನುವ ಪ್ರಾಣಿಗಳಿಂದ ತುಂಬಿಹೋಗಿದೆ. ಮೀನುಗಳೇ ಮೀನುಗಳನ್ನು ನುಂಗುತ್ತವೆ. ಈ ವಿಷಯದಲ್ಲಿ ನಿಮಗೆ ಏನೆನಿಸುತ್ತದೆ?

ಸತ್ತ್ವೈಃ ಸತ್ತ್ವಾನಿ ಜೀವಂತಿ ಬಹುಧಾ ದ್ವಿಜಸತ್ತಮ ।
ಪ್ರಾಣಿನೋಽನ್ಯೋನ್ಯಭಕ್ಷಾಶ್ಚ ತತ್ರ ಕಿಂ ಪ್ರತಿಭಾತಿ ತೇ ॥೨೮॥

ಎಲೈ ದ್ವಿಜಶ್ರೇಷ್ಠರೇ, ಒಂದು ಪ್ರಾಣಿಯ ದೇಹವನ್ನು ಇನ್ನೊಂದು ಪ್ರಾಣಿಯು ತಿಂದು ಬಹುವಿಧವಾಗಿ ಜೀವಿಸುತ್ತದೆ. ಪ್ರಾಣಿಗಳು ಪರಸ್ಪರ ಭಕ್ಷಗಳಾಗಿವೆ. ಈ ವಿಷಯದಲ್ಲಿ ನಿಮಗೆ ಏನೆನಿಸುತ್ತದೆ?

ಚಂಕ್ರಮ್ಯಮಾಣಾ ಜೀವಾಂಶ್ಚ ಧರಣೀಸಂಶ್ರಿತಾನ್ ಬಹೂನ್ ।
ಪದ್ಭ್ಯಾಂ ಘ್ನಂತಿ ನರಾ ವಿಪ್ರ ತತ್ರ ಕಿಂ ಪ್ರತಿಭಾತಿ ತೇ ॥೨೯॥

ಮನುಷ್ಯರು ಒಂದು ಕಡೆಯಿಂದ ಇನ್ನೊಂದು ಕಡೆಗೆ ಓಡಾಡುತ್ತಾ ತಮ್ಮ ಪಾದಗಳಿಂದ ಭೂಮಿಯನ್ನು ಆಶ್ರಯಿಸಿರುವ ಅನೇಕ ಜೀವರನ್ನು ಕೊಲ್ಲುತ್ತಾರೆ. ಎಲೈ ಬ್ರಾಹ್ಮಣರೇ, ಈ ವಿಷಯದಲ್ಲಿ ನಿಮಗೆ ಏನೆನಿಸುತ್ತದೆ?

ಉಪವಿಷ್ಟಾಃ ಶಯಾನಾಶ್ಚ ಘ್ನಂತಿ ಜೀವಾನನೇಕಶಃ ।
ಜ್ಞಾನವಿಜ್ಞಾನವಂತಶ್ಚ ತತ್ರ ಕಿಂ ಪ್ರತಿಭಾತಿ ತೇ ॥೨೯.೧॥

ಕುಳಿತಿರುವಾಗ ಮಲಗಿರುವಾಗ ಜ್ಞಾನವಿಜ್ಞಾನವಂತರೂ ಸಹ ಅನೇಕ ಜೀವರನ್ನು ಕೊಲ್ಲುತ್ತಾರೆ. ಈ ವಿಷಯದಲ್ಲಿ ನಿಮಗೆ ಏನೆನಿಸುತ್ತದೆ?

ಜೀವೈರ್ಗ್ರಸ್ತಮಿದಂ ಸರ್ವಮಾಕಾಶಂ ಪೃಥಿವೀ ತಥಾ ।
ಅವಿಜ್ಞಾನಾಚ್ಚ ಹಿಂಸಂತಿ ತತ್ರ ಕಿಂ ಪ್ರತಿಭಾತಿ ತೇ ॥೩೦॥

ಭೂಮಿ ಮತ್ತು ಆಕಾಶವೆಲ್ಲವೂ ಜೀವರಿಂದ ತುಂಬಿಹೋಗಿದೆ. ಅಜ್ಞಾನದಿಂದಲೂ ಅವುಗಳನ್ನು ಹಿಂಸಿಸುತ್ತಾರೆ. ಈ ವಿಷಯದಲ್ಲಿ ನಿಮಗೆ ಏನೆನಿಸುತ್ತದೆ?

ಅಹಿಂಸೇತಿ ಯದುಕ್ತಂ ಹಿ ಪುರುಷೈರ್ವಿಸ್ಮೃತೈಃ ಪುರಾ ।
ಕೇ ನ ಹಿಂಸಂತಿ ಜೀವಾನ್ ವೈ ಲೋಕೇಽಸ್ಮಿನ್ ದ್ವಿಜಸತ್ತಮ ॥೩೧॥

ಬಹು ಸಂಚಿತ್ಯ ಇತಿ ವೈ ನಾಸ್ತಿ ಕಶ್ಚಿದಹಿಂಸಕಃ ॥೩೨॥

ತತ್ತ್ವವಿಸ್ಮೃತಿವುಳ್ಳ ಪುರುಷರು ಮಾತ್ರ ಹಿಂದೆ ಅಹಿಂಸೆ ಎಂದು ಹೇಳುತ್ತಿದ್ದರು. ಎಲೈ ಬ್ರಾಹ್ಮಣಶ್ರೇಷ್ಠರೇ, ಈ ಲೋಕದಲ್ಲಿ ಯಾರು ಜೀವ ಹಿಂಸೆಯನ್ನು ಮಾಡುವುದಿಲ್ಲ? ಹೀಗೆ ಬಹಳವಾಗಿ ಯೋಚನೆ ಮಾಡಿದರೆ ಅಹಿಂಸಕರು ಯಾರೂ ಇಲ್ಲವೆಂದು ತಿಳಿಯುತ್ತದೆ.

ಅಹಿಂಸಾಯಾಂ ತು ನಿರತಾ ಯತಯೋ ದ್ವಿಜಸತ್ತಮ ।
ಕುರ್ವಂತ್ಯೇವ ಹಿ ಹಿಂಸಾಂ ತೇ ಯತ್ನಾದಲ್ಪತರಾ ಭವೇತ್ ॥೩೩॥

ಎಲೈ ಬ್ರಾಹ್ಮಣಶ್ರೇಷ್ಠರೇ, ಅಹಿಂಸೆಯಲ್ಲಿ ನಿರತರಾದ ಯತಿಗಳೂ ಕೂಡ ಹಿಂಸೆಯನ್ನು ಮಾಡಿಯೇ ಮಾಡುತ್ತಾರೆ. ಆದರೆ ಅವರ ಪ್ರಯತ್ನದಿಂದ ಅದು ಅಲ್ಪವಾಗಿರಬಹುದು.

ಆಲಕ್ಷ್ಯಶ್ಚೈವ ಪುರುಷಾಃ ಕುಲೇ ಜಾತಾ ಮಹಾಗುಣಾಃ ।
ಮಹಾಘೋರಾಣಿ ಕರ್ಮಾಣಿ ಕೃತ್ವಾ ಲಜ್ಜಂತಿ ವೈ ದ್ವಿಜ ॥೩೪॥

ಎಲೈ ಬ್ರಾಹ್ಮಣರೇ, ದೊಡ್ಡ ಕುಲದಲ್ಲಿ ಜನಿಸಿದ ಮಹಾಗುಣವುಳ್ಳ ಎಲ್ಲರೂ ಗಮನಿಸುವ ಪುರುಷರೂ ಸಹ ಮಹಾಘೋರವಾದ ಕರ್ಮವನ್ನು ಮಾಡಿ ನಾಚಿಕೆ ಪಡುತ್ತಾರೆ.

ಸುಹೃದಃ ಸುಹೃದೋಽನ್ಯೇ ಚ ಸುಹೃದಶ್ಚಾಪಿ ದುರ್ಹೃದಃ ।
ಸಮ್ಯಕ್‌ಪ್ರವೃತ್ತಾನ್ ಪುರುಷಾನ್ ನ ಸಮ್ಯಗನುಪಶ್ಯತಿ ॥೩೫॥

ಸುಹೃದಯವುಳ್ಳವರು (ವಿಶ್ವಾಸವುಳ್ಳವರು) ಸುಹೃದರನ್ನೂ, ಹಾಗೆಯೇ ದುರ್ಹೃದ ಉಳ್ಳವರು ಸುಹೃದಯರನ್ನೂ ಅವರು ಚೆನ್ನಾಗಿ ಪ್ರವೃತ್ತರಾದರೂ ಸಹ ಆ ಪುರುಷರನ್ನು ಸರಿಯಾಗಿ ನೋಡುವುದಿಲ್ಲ.

ಸುಸಮೃದ್ಧ್ಯೈರ್ನ ನಂದಂತಿ ಬಾಂಧವಾ ಬಾಂಧವೈರಪಿ ।
ಗೂರೂಂಶ್ಚೈವ ಏನಿಂದಂತಿ ಮೂಢಾಃ ನಿಶ್ಚಿತಮಾನಿನಃ ॥೩೬॥

ಬಾಂಧವರ ಸಮೃದ್ಧಿಯನ್ನು ನೋಡಿ ಬಾಂಧವರೇ ಸಹಿಸುವುದಿಲ್ಲ. ಮೂಢರೂ ಮತ್ತು ಪಂಡಿತಮಾನಿಗಳೂ ಗುರುಗಳನ್ನೂ ನಿಂದಿಸುತ್ತಾರೆ.

ಬಹು ಲೋಕೇ ವಿಪರ್ಯಸ್ತಂ ದೃಶ್ಯತೇ ದ್ವಿಜಸತ್ತಮ ।
ಧರ್ಮಯುಕ್ತಮಧರ್ಮಂ ಚ ತತ್ರ ಕಿಂ ಪ್ರತಿಭಾತಿ ತೇ ॥೩೭॥

ಎಲೈ ದ್ವಿಜಶ್ರೇಷ್ಠರೇ, ಲೋಕದಲ್ಲಿ ಹೀಗೆ ತಲೆಕೆಳಗಾಗಿರುವುದು ಬಹಳವಾಗಿ ಕಾಣುತ್ತದೆ. ಅಧರ್ಮವು ಧರ್ಮಯುಕ್ತವಾಗಿ ಕಾಣುತ್ತದೆ. ಈ ವಿಷಯದಲ್ಲಿ ನಿಮ್ಮ ಅಭಿಪ್ರಾಯವೇನು?

ವಕ್ತುಂ ಬಹುವಿಧಂ ಶಕ್ಯಂ ಧರ್ಮಾಧರ್ಮೇಷು ಕರ್ಮಸು ।
ಸ್ವಕರ್ಮನಿರತೋ ಯೋ ಹಿ ಸ ಯಶಃ ಪ್ರಾಪ್ನುಯಾನ್ಮಹತ್ ॥೩೮॥

ಧರ್ಮಾಧರ್ಮ ಕಾರ್ಯಗಳ ವಿಷಯದಲ್ಲಿ ಬೇಕಾದಷ್ಟು ಮಾತನಾಡಬಹುದು. ಯಾರು ಸ್ವಕರ್ಮನಿರತನಾಗಿರುತ್ತಾನೆಯೋ ಅವನು ಮಹಾಕೀರ್ತಿಯನ್ನು ಪಡೆಯುತ್ತಾನೆ (ಎಂಬುದು ಸಾರಾಂಶ).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚನವತ್ಯಧಿಕಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಪತಿವ್ರತೋಪಾಖ್ಯಾನೇ
ಬ್ರಾಹ್ಮಣವ್ಯಾಧಸಂವಾದೇ ಪತಿವ್ರತಾಮಾಹಾತ್ಮ್ಯೇ ಏಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ತೈದನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ತಾರನೆಯ ಅಧ್ಯಾಯ

ಧರ್ಮವ್ಯಾಧನ ಉಪದೇಶ. ಪುರುಷಪ್ರಯತ್ನವನ್ನು ನಿಂದಿಸಿ ದೈವಸಂಕಲ್ಪದ ಪ್ರಶಂಸೆ.

ಮಾರ್ಕಂಡೇಯಃ

ಧರ್ಮವ್ಯಾಧಸ್ತು ನಿಪುಣಂ ಪುನರೇವ ಯುಧಿಷ್ಠಿರ ।
ವಿಪ್ರರ್ಷಭಮುವಾಚೇದಂ ಸರ್ವಧರ್ಮಭೃತಾಂ ವರ ॥೧॥

ಮಾರ್ಕಂಡೇಯ– ಎಲೈ ಸರ್ವಧರ್ಮಿಷ್ಠರಲ್ಲಿ ಶ್ರೇಷ್ಠನಾದ ಯುಧಿಷ್ಠಿರನೇ, ಧರ್ಮವ್ಯಾಧನು ಪುನಃ ಆ ಬ್ರಾಹ್ಮಣಶ್ರೇಷ್ಠನನ್ನು ಕುರಿತು ನಿಪುಣತೆಯಿಂದ ಹೀಗೆ ಮಾತನಾಡಿದನು.

ಶ್ರುತಿಪ್ರಮಾಣೋ ಧರ್ಮೋऽಯಮಿತಿ ವೃದ್ಧಾನುಶಾಸನಮ್ ।
ಸೂಕ್ಷ್ಮಾ ಗತಿರ್ಹಿ ಧರ್ಮಸ್ಯ ಬಹುಶಾಖಾ ಹ್ಯನಂತಿಕಾ ।
ಪ್ರಾಣಾಂತಿಕೇ ವಿವಾಹೇ ಚ ವಕ್ತವ್ಯಮನೃತಂ ಭವೇತ್ ॥೨॥

ಶ್ರುತಿಪ್ರಮಾಣದಿಂದ ತಿಳಿದುಬರುವುದು ಧರ್ಮವೆಂದು ವೃದ್ಧರ ಅನುಶಾಸನ. ಧರ್ಮದ ಗತಿಯು ಬಹಳ ಸೂಕ್ಷ್ಮವಾದುದು. ಅನೇಕ ಪ್ರಕಾರಗಳುಳ್ಳದ್ದು ಮತ್ತು ಅನಂತವಾದುದು. ಪ್ರಾಣಾಪಾಯದ ಸಮಯದಲ್ಲಿ ಮತ್ತು ವಿವಾಹ ಸಮಯದಲ್ಲಿ ಅನೃತವನ್ನೂ ಹೇಳಬೇಕಾದೀತು.

ಅನೃತೇನ ಭವೇತ್ ಸತ್ಯಂ ಸತ್ಯೇನೈವಾನೃತಂ ಭವೇತ್ ।
ಯದ್ ಭೂತಹಿತಮತ್ಯಂತಂ ತತ್ ಸತ್ಯಮಿತಿ ಧಾರಣಾ ॥೩॥

ವಿಪರ್ಯಯಕೃತೋऽಧರ್ಮಃ ಪಶ್ಯ ಧರ್ಮಸ್ಯ ಸೂಕ್ಷ್ಮತಾಮ್ ॥೪॥

ಅನೃತದಿಂದ ಸತ್ಯವುಂಟಾಗುತ್ತದೆ. ಸತ್ಯದಿಂದ ಅನೃತವೂ ಉಂಟಾದೀತು. ಯಾವುದು ಬಹಳ ಜನರಿಗೆ ಅತ್ಯಂತ ಹಿತವಾದುದೋ ಅದು ಸತ್ಯವೆಂಬುದು ನಿಶ್ಚಿತವಾದುದು. ಯಾವುದು ಬಹುಜನರಿಗೆ ಹಿತವಲ್ಲವೋ ಅದು ಸತ್ಯವಚನವಾದರೂ ಅಧರ್ಮವಾಗುತ್ತದೆ. ಧರ್ಮದ ಸೂಕ್ಷ್ಮತೆಯನ್ನು ಗಮನಿಸಿ.

ಯತ್ ಕರೋತ್ಯಶುಭಂ ಕರ್ಮ ಶುಭಂ ವಾ ಯದಿ ಸತ್ತಮ ।
ಅವಶ್ಯಂ ತತ್ ಸಮಾಪ್ನೋತಿ ಪುರುಷೋ ನಾತ್ರ ಸಂಶಯಃ ॥೫॥

ಎಲೈ ಸಜ್ಜನರಲ್ಲಿ ಶ್ರೇಷ್ಠರಾದವರೇ, ಪುರುಷನು ಯಾವ ಶುಭಕರ್ಮವನ್ನಾಗಲೀ, ಅಶುಭಕರ್ಮವನ್ನಾಗಲೀ ಮಾಡುತ್ತಾನೆಯೋ ಅದರ ಫಲವನ್ನು ಅವಶ್ಯವಾಗಿ ಪಡೆಯುತ್ತಾನೆ. ಈ ವಿಷಯದಲ್ಲಿ ಸಂಶಯವಿಲ್ಲ.

ವಿಪಮಾಂ ಚ ದಶಾಂ ಪ್ರಾಪ್ತೋ ದೇವಾನ್ ಗರ್ಹತಿ ವೈ ಭೃಶಮ್ ।
ಆತ್ಮನಃ ಕರ್ಮದೋಷಾಣಿ ನ ವಿಜಾನಾತ್ಯಪಂಡಿತಃ ।
ಮೂಢೋ ನೈಕೃತಿಕಶ್ಚಾಪಿ ಚಪಲಶ್ಚ ದ್ವಿಜೋತ್ತಮ ॥೬॥

ನ ಶುಭಂ ಕರ್ಮ ಬಧ್ನಾತಿ ಪುರುಷಂ ಪಾಪನಿಶ್ಚಯಮ್ ॥೭॥

ಸುಖದುಃಖವಿಪರ್ಯಾಸೋ ಯದಾ ಸಮುಪಪದ್ಯತೇ ।
ನೈನಂ ಪ್ರಜ್ಞಾ ಸುನೀತಂ ವಾ ತ್ರಾಯತೇ ನೈವ ಪೌರುಷಮ್ ॥೮॥

ದುಃಸ್ಥಿತಿಗೆ ಒಳಗಾದ ಅಪಂಡಿತನು ಬಹಳವಾಗಿ ದೇವತೆಗಳನ್ನು ನಿಂದಿಸುತ್ತಾನೆ. ಅವನು ತನ್ನ ಕರ್ಮದೋಷಗಳನ್ನು ತಿಳಿಯುವುದಿಲ್ಲ. ಸುಖದುಃಖದ ವಿಪರ್ಯಾಸವು (ಸುಖಸಾಧನಕ್ಕೆ ದುಃಖಫಲದಲ್ಲಿ ಪರ್ಯವಸಾನವು) ಯಾವಾಗ ಉಂಟಾಗುತ್ತದೆಯೋ ಆಗ ಮನುಷ್ಯನನ್ನು ಅವನ ಪ್ರಜ್ಞೆಯಾಗಲೀ, ಅವನ ವಿದ್ಯೆಯಾಗಲೀ, ಅವನ ಪೌರುಷವಾಗಲೀ ರಕ್ಷಿಸುವುದಿಲ್ಲ.

ಯೋಽಯಮಿಚ್ಛೇದ್ ಯಥಾಕಾಮಂ ತಂ ತಂ ಕಾಮಂ ಸ ಆಪ್ನುಯಾತ್
ಯದಿ ಸ್ಯಾದಪರಾಧೀನಂ ಪೌರುಷೇಯಸ್ಯ ಕ್ರಿಯಾಫಲಮ್ ॥೯॥

ಪುರುಷ ಪ್ರಯತ್ನದಿಂದ ಮಾಡಿದ ಕ್ರಿಯೆಯ ಫಲವು ಪರಾಧೀನವಲ್ಲದಿದ್ದರೆ ಪುರುಷನು ಯಾವ ಯಾವ ಕಾಮವನ್ನು ಇಚ್ಛಿಸುತ್ತಿದ್ದನೋ ಅವೆಲ್ಲವನ್ನೂ ಪಡೆಯಬೇಕಾಗಿದ್ದಿತು.

ಸಂಯತಾಶ್ಚಾಪಿ ದಕ್ಷಾಶ್ಚ ಮತಿಮಂತಶ್ಚ ಮಾನವಾಃ ।
ದೃಶ್ಯಂತೇ-ನಿಷ್ಕ(ಷ್ಫ)ಲಾಃ ಸಂತಃ ಪ್ರಹೀಣಾಃ ಸರ್ವಕರ್ಮಭಿಃ ॥೧೦॥

ಸಂಯಮದಿಂದ ಕೂಡಿದ ದಕ್ಷರಾದ ಮೇಧಾವಿಗಳಾದ ಮಾನವರು ಸರ್ವಕರ್ಮಗಳನ್ನು ಮಾಡಿದರೂ ಅವು ನಿಷ್ಫಲವಾಗಿ ಅವರು ದುಃಸ್ಥಿತಿಯಲ್ಲಿರುವುದು ಕಂಡುಬರುತ್ತದೆ.

ಭೂತಾನಾಮಪರಃ ಕಶ್ಚಿದ್ದಿಂಸಾಯಾಂ ಸತತೋತ್ಥಿತಃ ।
ವಂಚನಾಯಾಂ ಚ ಲೋಕಸ್ಯ ಸ ಸುಖೇನೈವ ಯುಜ್ಯತೇ ॥೧೧॥

ಮಾನವರಲ್ಲಿ ಇನ್ನೊಬ್ಬನು ಸತತವಾಗಿ ಹಿಂಸೆಯಲ್ಲಿಯೂ, ಜನರ ವಂಚನೆಯಲ್ಲಿಯೂ ಉದ್ಯುಕ್ತನಾದರೂ ಅವನಿಗೆ ಸುಖವೇ ಉಂಟಾಗುತ್ತದೆ.

ಅಚೇಷ್ಟಮಪಿ ಚಾಸೀನಂ ಶ್ರೀಃ ಕಂಚಿದುಪತಿಷ್ಠತಿ ।
ಕಶ್ಚಿತ್ ಕರ್ಮಾಣಿ ಕುರ್ವನ್ ಹಿ ನ ಪ್ರಾಪ್ಯಮಧಿಗಚ್ಛತಿ ॥೧೨॥

ಯಾವ ಕ್ರಿಯೆಯನ್ನೂ ಮಾಡದೆ ಸುಮ್ಮನೆ ಕುಳಿತಿರುವವನನ್ನು ಸಂಪತ್ತು ಬಂದು ಸೇರುತ್ತದೆ. ಇನ್ನೊಬ್ಬನು ಎಲ್ಲ ಕರ್ಮಗಳನ್ನು ಮಾಡಿದರೂ ಅವನಿಗೆ ಕರ್ಮದ ಫಲವು ಈಡೇರುವುದಿಲ್ಲ.

ದೇವಾನಿಷ್ಟ್ವಾ ತಪಸ್ತಪ್ತ್ವಾ ಕೃಪಣೈಃ ಪುತ್ರಗೃಧ್ನುಭಿಃ ।
ದಶಮಾಸಧೃತಾ ಗರ್ಭೇ ಜಾಯಂತೇ ಕುಲಪಾಂಸನಾಃ ॥೧೩॥

ದೇವತೆಗಳನ್ನು ಪೂಜೆ ಮಾಡಿ, ತಪಸ್ಸನ್ನು ಮಾಡಿ, ಲೋಭಿಗಳಾಗಿ ದೇವತಾ ಭಕ್ತಿಯಿಲ್ಲದೆ ಕೇವಲ ಪುತ್ರಕಾಮಿಗಳಾದವರು ಹತ್ತುತಿಂಗಳು ಧರಿಸಿದ ಗರ್ಭದಿಂದ ಕುಲನಾಶಕರು ಜನಿಸುತ್ತಾರೆ.

ಅಪರೇ ಧನಧಾನ್ಯೈಶ್ಚ ಭೋಗೈಶ್ಚ ಪಿತೃಸಂಚಿತೈಃ ।
ವಿಪುಲೈರಭಿಜಾಯಂತೇ ಲಬ್ಧಾಸ್ಸೈರೇವ ಮಂಗಲೈಃ ॥೧೪॥

ಇನ್ನು ಕೆಲವರು ದೇವತಾ ಭಕ್ತಿಯಿಂದ ತಂದೆ ತಾಯಿಗಳು ಮಾಡಿದ ಮಂಗಳಕಾರ್ಯದಿಂದ ಅದರ ಪುಣ್ಯಫಲದಿಂದ ಉಂಟಾದ ಧನಧಾನ್ಯಗಳಿಂದಲೂ, ವಿಪುಲವಾದ ಭೋಗಗಳಿಂದ ಹತ್ತು ತಿಂಗಳ ಗರ್ಭದಿಂದ ಜನಿಸುತ್ತಾರೆ.

ನ ದೇಹಜಾ ಮನುಷ್ಯಾಣಾಂ ವ್ಯಾಧಯೋ ದ್ವಿಜಸತ್ತಮ ।
ಕರ್ಮಜಾ ಹಿ ಮನುಷ್ಯಾಣಾಂ ರೋಗಾ ನಾಸ್ಯತ್ರ ಸಂಶಯಃ ॥೧೫॥

ಎಲೈ ದ್ವಿಜಶ್ರೇಷ್ಠನೇ, ಮನುಷ್ಯರಿಗೆ ವ್ಯಾಧಿಗಳು ಕೇವಲ ದೇಹದಿಂದ ಉಂಟಾಗುವುದಿಲ್ಲ. ಮನುಷ್ಯರಿಗೆ ರೋಗಗಳು ಕರ್ಮದಿಂದ ಉಂಟಾಗುತ್ತವೆ. ಈ ವಿಷಯದಲ್ಲಿ ಸಂಶಯವಿಲ್ಲ.

ಆಧಿಭಿಶ್ಚೈವ ಬಾಧ್ಯಂತೇ ವ್ಯಾಧೈಃ ಕ್ಷುದ್ರಮೃಗಾ ಇವ ।
ತೇ ಚಾಪಿ ಕುಶಲೈರ್ವೈದ್ಯೈರ್ನಿಪುಣೈಃ ಸಂಭೃತೌಷಧೈಃ ।
ವ್ಯಾಧಯೋ ವಿನಿವಾರ್ಯಂತೇ ಮೃಗಾ ವ್ಯಾಧೈರಿವ ದ್ವಿಜ ॥೧೬॥

ಮನುಷ್ಯರು ವ್ಯಾಧರಿಂದ ಕ್ಷುದ್ರಮೃಗಗಳು ಬಾಧಿಸಲ್ಪಡುವಂತೆ ಮನೋರೋಗದಿಂದಲೂ, ದೇಹರೋಗದಿಂದಲೂ ಬಾಧಿತರಾಗುತ್ತಾರೆ. ಎಲೈ ಬ್ರಾಹ್ಮಣರೇ, ಆ ರೋಗಗಳೂ ಕೂಡ ನಿಪುಣರಾದ, ಕುಶಲರಾದ ಒಳ್ಳೆಯ ಔಷಧಿಯನ್ನು ಹೊಂದಿದ ವೈದ್ಯರಿಂದ ವ್ಯಾಧರಿಂದ ಮೃಗಗಳು ನಿವಾರಿಸಲ್ಪಡುವಂತೆ ನಿವಾರಿಸಲ್ಪಡುತ್ತವೆ (ಭೋಕ್ತವ್ಯವಾದ ಪ್ರಾರಬ್ಧಕರ್ಮವೂ ಸಹ ಕುಶಲಕರ್ಮದಿಂದ ನಿವಾರಿಸಲ್ಪಡುತ್ತದೆ).

ಯೇಷಾಮಸ್ತಿ ಚ ಭೋಕ್ತವ್ಯಂ ಗ್ರಹಣೀರೋಗಪೀಡಿತಾಃ ।
ನ ಶಕ್ನುವಂತಿ ತೇ ಭೋಕ್ತುಂ ಚೇಷ್ಟಿತುಂ ಪೂರ್ವಕರ್ಮಣಾ ॥೧೭॥

ಯಾರಿಗೆ ಭೋಕ್ತವ್ಯವಾದ ಪ್ರಾರಬ್ಧಕರ್ಮವಿರುತ್ತದೆಯೋ ಅವರು ಸಂಗ್ರಹಣೀ ರೋಗಪೀಡಿತರಾಗುತ್ತಾರೆ. ತಾವು ಮಾಡಿದ ಪೂರ್ವಕರ್ಮಗಳಿಂದಾಗಿ ಅವರಿಗೆ ಭೋಜನ ಮಾಡುವುದಕ್ಕಾಗಲೀ ಅಥವಾ ಕಾರ್ಯವನ್ನು ಮಾಡುವುದಕ್ಕಾಗಲೀ ಸಾಧ್ಯವಾಗುವುದಿಲ್ಲ.

ಅಪರೇ ಬಾಹುಬಲಿನಃ ಕ್ಲಿಶ್ಯಂತೇ ಬಹವೋ ಜನಾಃ ।
ದುಃಖೇನ ಚಾಧಿಗಚ್ಛಂತಿ ಭೋಜನಂ ದ್ವಿಜಸತ್ತಮ ॥೧೮॥

ಇನ್ನು ಬಾಹುಬಲವುಳ್ಳ ಅನೇಕ ಜನರು ಕ್ಲೇಶವನ್ನು ಅನುಭವಿಸುತ್ತಾರೆ. ಎಲೈ ದ್ವಿಜಶ್ರೇಷ್ಠರೇ, ಅವರು ಬಹಳ ಕಷ್ಟದಿಂದ ಭೋಜನವನ್ನು ಪಡೆಯುತ್ತಾರೆ.

ಇತಿ ಲೋಕಮನಾಕ್ರಂದಂ ದೇಹಶಂಕಾಪರಿಪ್ಲುತಮ್ ।
ಸ್ರೋತಸಾऽಸಕೃದಾಕ್ಷಿಪ್ತಂ ಹ್ರಿಯಮಾಣಂ ಬಲೀಯಸಾ ॥೧೯॥

ಹೀಗೆ ಜನರು ದೇಹರೋಗದಿಂದ ಪೂರ್ಣವಾಗಿ ಪೀಡಿತರಾಗಿ ಅಳುವುದಕ್ಕೂ ಶಕ್ತಿಯಿಲ್ಲದೆ ಬಲವಾದ ಕರ್ಮಪ್ರವಾಹದಿಂದ ಎಳೆದೊಯ್ಯಲ್ಪಡುತ್ತಾರೆ.

ನ ಮ್ರಿಯೇಯುರ್ನ ಜೀರ್ಯೇಯುಃ ಸರ್ವೇ ಸ್ಯುಃ ಸ(ಸಾ)ರ್ವಕಾಮಿಕಾಃ ।
ನಾಪ್ರಿಯಂ ಪ್ರತಿಪಶ್ಯೇಯುರ್ವಶಿತ್ವಂ ಯದಿ ವೈ ಭವೇತ್ ॥೨೦॥

ಮನುಷ್ಯರಿಗೆ ಸ್ವಾತಂತ್ರ್ಯವಿದ್ದಿದ್ದರೆ ಅವರಿಗೆ ಮರಣವಾಗಲೀ, ಮುಪ್ಪಾಗಲೀ ಉಂಟಾಗುತ್ತಿರಲಿಲ್ಲ. ಎಲ್ಲರಿಗೂ ಎಲ್ಲ ಕಾಮ್ಯಪದಾರ್ಥಗಳೂ ದೊರೆಯುತ್ತಿದ್ದವು. ಯಾರೂ ತಮಗೆ ಅಪ್ರಿಯವಾದುದನ್ನು ಕಾಣುತ್ತಿರಲಿಲ್ಲ.

ಉಪರ್ಯುಪರಿ ಲೋಕಸ್ಯ ಸರ್ವೋ ಗಂತುಂ ಸಮೀಹತೇ ।
ಯತತೇ ಚ ಯಥಾಶಕ್ತಿ ನ ಚ ತದ್ವರ್ತತೇ ತಥಾ ॥೨೧॥

ಎಲ್ಲರೂ ಲೋಕದಲ್ಲಿ ಮೇಲೆ ಮೇಲೆ ಹೋಗುವುದಕ್ಕೆ ಬಯಸುತ್ತಾರೆ. ಅದಕ್ಕಾಗಿ ಯಥಾಶಕ್ತಿ ಪ್ರಯತ್ನವನ್ನೂ ಮಾಡುತ್ತಾರೆ. ಆದರೆ ಹಾಗಾಗುವುದಿಲ್ಲ.

ಬಹವಃ ಸಂಪ್ರದೃಶ್ಯಂತೇ ತುಲ್ಯನಕ್ಷತ್ರಮಂಗಲಾಃ ।
ಮಹಚ್ಚ ಫಲವೈಷಮ್ಯಂ ದೃಶ್ಯತೇ ಕರ್ಮಸಂಧಿಷು ॥೨೨॥

ವಹಂತಿ ಶಿಬಿಕಾಮನ್ಯೇ ಯಾಂತ್ಯನ್ಯೇ ಶಿಬಿಕಾಗತಾಃ ।

ಒಂದೇ ಶುಭನಕ್ಷತ್ರದಲ್ಲಿ ಜನಿಸಿದ ಅನೇಕ ಮಾನವರು ಕಂಡುಬರುತ್ತಾರೆ. ಆದರೆ ಅವರಿಗೆ ಫಲದಲ್ಲಿ ಬಹಳ ವೈಷಮ್ಯವು ಕಂಡುಬರುತ್ತದೆ. ಕೆಲವರು ಪಲ್ಲಕ್ಕಿಯನ್ನು ಹೊರುತ್ತಾರೆ. ಇನ್ನು ಕೆಲವರು ಪಲ್ಲಕ್ಕಿಯಲ್ಲಿ ಕುಳಿತುಕೊಂಡು ಹೋಗುತ್ತಾರೆ.

ನ ಕೇಚಿದೀಶತೇ ಬ್ರಹ್ಮನ್ ಸ್ವಯಂಗ್ರಾಹ್ಯಸ್ಯ ಸತ್ತಮ ।
ಕರ್ಮಣಾಂ ಪ್ರಕೃತಾನಾಂ ವಾ ಇಹ ಸಿದ್ಧಿಃ ಪ್ರದೃಶ್ಯತೇ ॥೨೩॥

ಎಲೈ ಸಜ್ಜನರಲ್ಲಿ ಶ್ರೇಷ್ಠರಾದವರೇ, ತಾವು ಮಾಡಿದ ಕರ್ಮಫಲವನ್ನು ತಾವೇ ಸ್ವತಃ ಸಂಪಾದಿಸಲು ಯಾರೂ ಶಕ್ತರಲ್ಲ. ಇಲ್ಲಿ ಮಾಡಿದ ಉತ್ಕಟವಾದ ಕರ್ಮಗಳ ಫಲದ ಸಿದ್ಧಿಯು ಇಲ್ಲಿಯೇ ಕಂಡುಬರುತ್ತದೆ.

ಯಥಾ ಶ್ರುತಿರಿಯಂ ನಿತ್ಯಾ ಜೀವಃ ಕಿಲ ಸನಾತನಃ ।
ಶರೀರಮಧ್ರುವಂ ಲೋಕೇ ಸರ್ವೇಷಾಂ ಪ್ರಾಣಿನಾಮಿಹ ॥೨೪॥

ಹೇಗೆ ವೇದವು ನಿತ್ಯವೋ ಅದರಂತೆ ಜೀವನೂ ಸಹ ಆದ್ಯಂತರಹಿತನಾದವನು. ಈ ಲೋಕದಲ್ಲಿ ಎಲ್ಲ ಪ್ರಾಣಿಗಳಿಗೂ ಶರೀರವು ಮಾತ್ರ ಅನಿತ್ಯವಾದುದು.

ವಧ್ಯಮಾನೇ ಶರೀರೇ ತು ದೇಹನಾಶೋ ಭವತ್ಯುತ ।
ಜೀವಃ ಸಂಕ್ರಮತೇಽನ್ಯತ್ರ ಕರ್ಮಬಂಧನಿಬಂಧನಃ ॥೨೫॥

ಶರೀರಕ್ಕೆ ಹಿಂಸೆಯನ್ನು ಮಾಡಿದರೆ ದೇಹನಾಶವಾಗುತ್ತದೆ. ಜೀವನು ಮಾತ್ರ ತನ್ನ ಕರ್ಮಬಂಧಕ್ಕೆ ಒಳಗಾಗಿ ಬೇರೆ ಕಡೆಗೆ ಹೋಗುತ್ತಾನೆ.

ಬ್ರಾಹ್ಮಣಃ

ಕಥಂ ಧರ್ಮವಿದಾಂ ಶ್ರೇಷ್ಠ ಜೀವೋ ಭವತಿ ಶಾಶ್ವತಃ ।
ಏತದಿಚ್ಛಾಮ್ಯಹಂ ಜ್ಞಾತುಂ ತತ್ತ್ವೇನ ವದತಾಂ ವರ ॥೨೬॥

ಬ್ರಾಹ್ಮಣ– ಧರ್ಮಜ್ಞರಲ್ಲಿ ಶ್ರೇಷ್ಠನಾದವನೇ, ಜೀವನು ಹೇಗೆ ಶಾಶ್ವತನಾಗಿದ್ದಾನೆ. ಎಲೈ ಮಾತನಾಡುವವರಲ್ಲಿ ಶ್ರೇಷ್ಠನಾದವನೇ, ಇದನ್ನು ನಾನು ಸರಿಯಾಗಿ ತಿಳಿದುಕೊಳ್ಳಲು ಬಯಸುತ್ತೇನೆ.

ವ್ಯಾಧಃ

ನ ಜೀವನಾಶೋಽಸ್ತಿ ಹಿ ದೇಹಭೇದೇ
ಮಿಥ್ಯೈತದಾಹುರ್ಮ್ರಿಯತೀತಿ ಮೂಢಾಃ ।
ಜೀವಸ್ತು ದೇಹಾಂತರಿತಃ ಪ್ರಯಾತಿ
ದಶಾರ್ಧತಸ್ತಸ್ಯ ಶರೀರಭೇದಃ ॥೨೭॥

ವ್ಯಾಧ– ಒಂದು ಶರೀರದಿಂದ ಇನ್ನೊಂದು ಶರೀರಕ್ಕೆ ಹೋದಾಗ ಜೀವನಾಶವಾಗುವುದಿಲ್ಲ. ಮೂಢರು ಹೇಳುವ ಜೀವನಿಗೆ ಮರಣವುಂಟಾಯಿತು ಎಂಬ ಮಾತು ಸುಳ್ಳಾದುದು. ಜೀವನು ದೇಹಭೇದ ಉಂಟಾದಾಗ ಇನ್ನೊಂದು ಶರೀರಕ್ಕೆ ಹೋಗುತ್ತಾನೆ. ಪಂಚಮಹಾಭೂತಗಳ ವ್ಯತ್ಯಾಸದಿಂದ ಶರೀರದಲ್ಲಿ ಭೇದವುಂಟಾಗುತ್ತದೆ.

ಅನ್ಯೋ ಹಿ ನಾಶ್ನಾತಿ ಕೃತಂ ಹಿ ಕರ್ಮ
ಮನುಷ್ಯಲೋಕೇ ಮನುಜಸ್ಯ ಕಶ್ಚಿತ್ ।
ಯತ್ತೇನ ಕಿಂಚಿದ್ಧಿ ಕೃತಂ ಹಿ ಕರ್ಮ
ತದಶ್ನುತೇ ನಾತ್ರ ಕೃತಸ್ಯ ನಾಶಃ ॥೨೮॥

ಒಬ್ಬ ಜೀವನು ಮಾಡಿದ ಕರ್ಮದ ಫಲವನ್ನು ಇನ್ನೊಬ್ಬ ಜೀವನು ಎಂದೂ ಅನುಭವಿಸುವುದಿಲ್ಲ. ಜೀವನು ಇಲ್ಲಿ ಯಾವ ಕರ್ಮವನ್ನು ಮಾಡಿದ್ದಾನೆಯೋ ಅದರ ಫಲವನ್ನು ಅವನೇ ಪಡೆಯುತ್ತಾನೆ. ಮಾಡಿದ ಕರ್ಮಕ್ಕೆ ನಾಶವುಂಟಾಗುವುದಿಲ್ಲ.

ಅಪುಣ್ಯಶೀಲಾ ಹಿ ಭವಂತಿ ಪುಣ್ಯಾ ನರಾಧಮಾಃ ಪಾಪಕೃತೋ ಭವಂತಿ।
ನರೋಽನುಯಾತಸ್ತ್ವಿಹ ಕರ್ಮಭಿಃ ಸ್ವೈಸ್ತತಃ ಸಮುತ್ಪದ್ಯತಿ ಭಾವಿತಸ್ತೈಃ ॥

ನರೋತ್ತಮರಾದ ಅಜಾಮಿಳ ಮೊದಲಾದವರು ಕೆಲವು ಕಾಲ ಅಪುಣ್ಯಶೀಲರಾದರೂ ಕೊನೆಯಲ್ಲಿ ಪುಣ್ಯವನ್ನು ಮಾಡುವವರೇ ಆಗುತ್ತಾರೆ. ನರಾಧಮರಾದವರು ಸಜ್ಜನರ ಸಂಸರ್ಗದಿಂದ ಸ್ವಲ್ಪ ಕಾಲ ಪುಣ್ಯಶೀಲರಾದರೂ ಕೊನೆಯಲ್ಲಿ ಜಟಾಸಂರಾದಿಗಳಂತೆ ಪಾಪವನ್ನು ಮಾಡುವವರೇ ಆಗುತ್ತಾರೆ. ಮಧ್ಯಮ ಜೀವರು ತಮ್ಮ ಕರ್ಮಗಳಿಂದ ಹಿಂಬಾಲಿಸಲ್ಪಟ್ಟು ಆ ಕರ್ಮಗಳ ನಿಮಿತ್ತದಿಂದಾಗಿ ಪುನಃ ಭೂಮಿಯಲ್ಲಿಯೇ ಜನಿಸುತ್ತಾರೆ.

ಬ್ರಾಹ್ಮಣಃ

ಕಥಂ ಸಂಭವತೇ ಯೋನೌ ಕಥಂ ವಾ ಪುಣ್ಯಪಾಪಯೋಃ ।
ಜಾತೀಃ ಪುಣ್ಯಾ ಹ್ಯಪುಣ್ಯಾಶ್ಚ ಕಥಂ ಗಚ್ಛತಿ ಸತ್ತಮ ॥೩೦॥

ಬ್ರಾಹ್ಮಣ– ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ಪುಣ್ಯಪಾಪಸಂಬಂಧಿಯಾದ ಮಧ್ಯಮ ಜೀವನು ಹೇಗೆ ಪುಣ್ಯ ಯೋನಿಗಳನ್ನು, ಅಪುಣ್ಯಯೋನಿಯನ್ನು ಹೊಂದಿ ಜನಿಸುತ್ತಾನೆ?

ವ್ಯಾಧಃ

ಗರ್ಭಾಧಾನಸಮಾಯುಕ್ತಂ ಕರ್ಮೇದಂ ಸಂಪ್ರದೃಶ್ಯತೇ ।
ಸಮಾಸೇನ ತು ತೇ ಕ್ಷಿಪ್ರಂ ಪ್ರವಕ್ಷ್ಯಾಮಿ ದ್ವಿಜೋತ್ತಮ ॥೩೧॥

ವ್ಯಾಧ– ಗರ್ಭಾಧಾನದಿಂದ ಆರಂಭಿಸಿ ಈ ಕರ್ಮವು (ಕರ್ಮದ ಫಲವು) ಕಂಡುಬರುತ್ತದೆ. ಎಲೈ ದ್ವಿಜೋತ್ತಮರೇ, ನಿಮಗೆ ನಾನು ಅದನ್ನು ಸಂಕ್ಷಿಪ್ತವಾಗಿ ಹೇಳುವೆನು.

ಯಥಾಸಂಭೃತಸಂಭಾರಃ ಪುನರೇವ ಪ್ರಜಾಯತೇ ।
ಶುಭಕೃಚ್ಛುಭಯೋನೀಷು ಪಾಪಕೃತ್ ಪಾಪಯೋನಿಷು ॥೩೨॥

ತಾನು ಹೊತ್ತಿರುವ ಕರ್ಮಗಳ ಭಾರಕ್ಕೆ ಅನುಗುಣವಾಗಿ ಶುಭವನ್ನು ಮಾಡಿದವನು ಶುಭಯೋನಿಗಳಲ್ಲಿಯೂ ಪಾಪವನ್ನು ಮಾಡಿದವನು ಪಾಪಯೋನಿಗಳಲ್ಲಿಯೂ ಪುನಃ ಜನಿಸುತ್ತಾನೆ.

ಶುಭೈಃ ಪ್ರಯೋಗೈರ್ದೇವತ್ವಂ ವ್ಯಾಮಿಶ್ರೈರ್ಮಾನುಷೋ ಭವೇತ್ ।
ಮೋಹನೀಯೈರ್ವಿಯೋನೀಷು ತ್ವಧೋಗಾಮೀ ಚ ಕಿಲ್ಬಿಷೀ ॥೩೩॥

ಶುಭವಾದ ಮನಸ್ಸಿನ ಪ್ರಯೋಗಗಳಿಂದ ಉತ್ತಮ ಜೀವರು ದೇವತ್ವವನ್ನು ಹೊಂದುವರು. ಶುಭಾಶುಭವೃತ್ತಿಗಳಿಂದ ಕೂಡಿದ ಪ್ರಯೋಗವುಳ್ಳವರು ಪುನಃ ಮನುಷ್ಯರಾಗುವರು. ಮಿಥ್ಯಾಜ್ಞಾನಕ್ಕೆ ಯೋಗ್ಯವಾದ ಪ್ರಯೋಗವನ್ನು ಹೊಂದಿದ ಅಧಮಜೀವರು ಅಧೋಗಾಮಿಗಳಾಗಿ ತಮಸ್ಸಿಗೆ ಹೋಗುವರು (ಹೀಗೆ ಉತ್ತಮ ಜೀವರಿಗೆ ಕೇವಲ ಪುಣ್ಯ , ಮಧ್ಯಮ ಜೀವರಿಗೆ ಪುಣ್ಯಪಾಪಗಳು, ಅಧಮ ಜೀವರಿಗೆ ಕೇವಲ ಪಾಪ ಎಂಬ ಈ ಸಾಧನ ಭೇದದಿಂದ ಗತಿಭೇದವು ಉಂಟಾಗುತ್ತದೆ).

ಜಾತಿಮೃತ್ಯುಜರಾದುಃಖೈಃ ಸತತಂ ಸಮಭಿದ್ರುತಃ ।
ಸಂಸಾರೇ ಪಚ್ಯಮಾನಶ್ಚ ದೋಷೈರಾತ್ಮಕೃತೈರ್ನರಃ ॥೩೪॥

ತಿರ್ಯಗ್ಯೋನಿಸಹಸ್ರಾಣಿ ಗತ್ವಾ ನರಕಮೇವ ಚ ।
ಜೀವಾಃ ಸಂಪರಿವರ್ತಂತೇ ಕರ್ಮಬಂಧನಿಬಂಧನಾಃ ॥೩೫॥

ಮನುಷ್ಯನು ತಾನು ಮಾಡಿದ ದೋಷಗಳಿಂದ ಜನನ ಮರಣ ಜರಾದುಃಖಗಳಿಂದ ಸತತವಾಗಿ ಪೀಡಿತನಾಗಿ ಸಂಸಾರದಲ್ಲಿ ಸಂತಪ್ತನಾಗುತ್ತಾನೆ. ಕರ್ಮಬಂಧದ ನಿಮಿತ್ತದಿಂದಾಗಿ ಜೀವರು ಒಂದು ಸಹಸ್ರ ನೀಚಯೋನಿಗಳಿಗೆ ಹೋಗಿ ಮತ್ತು ನರಕಕ್ಕೂ ಹೋಗಿ ಹಾಗೆಯೇ ಸುತ್ತುತ್ತಿರುತ್ತಾರೆ.

ಜಂತುಸ್ತು ಕರ್ಮಭಿಸ್ತೈಸ್ತೈಃ ಸ್ವಕೃತೈಃ ಪ್ರೇತ್ಯ ದುಃಖಿತಃ ।
ತದ್ ದುಃಖಪ್ರತಿಘಾತಾರ್ಥಮಪುಣ್ಯಾಂ ಯೋನಿಮಾಪ್ನುತೇ ॥೩೬॥

ಜಂತುವು ತಾನು ಮಾಡಿದ ಆಯಾ ಕರ್ಮಗಳಿಂದ ಮರಣವನ್ನು ಹೊಂದಿ ದುಃಖಿತನಾಗಿ ಆ ದುಃಖವನ್ನು ಪರಿಹಾರ ಮಾಡಿಕೊಳ್ಳಲು ಇನ್ನೊಂದು ಪಾಪಯೋನಿಯನ್ನು ಹೊಂದುತ್ತಾನೆ.

ತತಃ ಕರ್ಮ ಸಮಾದತ್ತೇ ಪುನರನ್ಯಂ ನವಂ ಬಹು ।
ಪಚ್ಯತೇ ತು ಪುನಸ್ತೇನ ಭುಕ್ತ್ವಾಽಪಥ್ಯಮಿವಾತುರಃ ॥೩೭॥

ಅಜಸ್ರಮೇವ ದುಃಖಾರ್ತೋ ದುಃಖಿತಃ ಸುಖಸಂಜ್ಞಿತಃ ॥೩೮॥

ಪುನಃ ಅನೇಕ ಕರ್ಮವನ್ನು ಮಾಡುತ್ತಾನೆ. ಪುನಃ ಇನ್ನೊಂದು ಹೊಸ ಶರೀರವನ್ನು ಪಡೆದು ಅಪಥ್ಯವನ್ನು ತಿಂದ ರೋಗಿಯಂತೆ ಆ ಕರ್ಮದಿಂದ ಪುನಃ ಸಂಸಾರದಲ್ಲಿ ಬೇಯಿಸಲ್ಪಡುತ್ತಾನೆ. ಹೀಗೆ ಸತತವಾಗಿ ದುಃಖದಿಂದ ಆರ್ತನಾಗಿ ಒಮ್ಮೊಮ್ಮೆ ಸ್ವಲ್ಪ ಸುಖವಿರುವುದರಿಂದ ಸುಖೀ ಎಂದು ಕರೆಸಿಕೊಂಡು ಸಂಚರಿಸುತ್ತಾನೆ.

ತತೋಽನಿವೃತ್ತಬಂಧತ್ವಾತ್ ಕರ್ಮಣಾಮುದಯಾದಪಿ ।
ಪರಿಕ್ರಾಮತಿ ಸಂಸಾರೇ ಚಕ್ರವದ್ ಬಹುವೇದನಃ ।
ಸ ಚೇನ್ನಿವೃತ್ತಬಂಧಸ್ತು ವಿಶುದ್ಧಶ್ಚಾಪಿ ಕರ್ಮಭಿಃ ॥೩೯॥

ಆ ಮಧ್ಯಮಜೀವನು ಕೇವಲ ತತ್ತ್ವಜ್ಞಾನಿಯಂತೆ ಬಂಧನಿವೃತ್ತಿ ಇಲ್ಲದಿರುವುದರಿಂದ (ಕೇವಲ ಮಿಥ್ಯಾಜ್ಞಾನಿಯಂತೆ ಸುಖರಹಿತನೂ, ಕೇವಲ ತತ್ತ್ವಜ್ಞಾನಿಯಂತೆ ದುಃಖರಹಿತನೂ ಆಗದಿರುವುದರಿಂದ) ತನ್ನ ಕರ್ಮಗಳ

ಪ್ರಭಾವದಿಂದ ಸಂಸಾರದಲ್ಲಿ ಬಹುವೇದನೆಯನ್ನು ಅನುಭವಿಸುತ್ತಾ ಚಕ್ರದಂತೆ ತಿರುಗುತ್ತಾನೆ. ಈ ಮೂರು ವಿಧ ಜೀವರಲ್ಲಿ ಒಬ್ಬ ಉತ್ತಮ ಜೀವನು ನಿವೃತ್ತಬಂಧನಾದರೆ ಎಂದರೆ ಹರಿಯಲ್ಲಿ ಚೆನ್ನಾಗಿ ಸ್ನೇಹ, ಅನುಬಂಧವನ್ನು ಹೊಂದಿದವನಾದರೆ ಎಂದರೆ ಭಕ್ತಿ ಪರಿಪಾಕವುಳ್ಳವನಾದರೆ ತನ್ನ ಕರ್ಮಗಳಿಂದ ವಿಶುದ್ಧನೂ ಆಗುತ್ತಾನೆ.

ತಪೋಯೋಗಸಮಾರಂಭಂ ಕುರುತೇ ದ್ವಿಜಸತ್ತಮ ॥೪೦॥

ಎಲೈ ದ್ವಿಜಶ್ರೇಷ್ಠರೇ, ಅವನು ತಪೋಯೋಗಗಳಲ್ಲಿ ಪ್ರಯತ್ನವನ್ನು ಮಾಡುತ್ತಾನೆ.

ಕರ್ಮಭಿರ್ಬಹುಭಿಶ್ಚಾಪಿ ಲೋಕಾನಶ್ನಾತಿ ಮಾನವಃ ।
ಪ್ರಾಪ್ನೋತಿ ಸುಕೃತಾಂಲ್ಲೋಕಾನ್ ಯತ್ರ ಗತ್ವಾ ನ ಶೋಚತಿ ॥೪೧॥

ಆ ಮನುಷ್ಯನು ಅನೇಕ ಕರ್ಮಗಳನ್ನು ಮಾಡಿ ಎಲ್ಲಿ ಶೋಕವಿರುವುದಿಲ್ಲವೋ ಅಂತಹ ಸುಕೃತಲೋಕವಾದ ವೈಕುಂಠಾದಿಗಳನ್ನು ಹೊಂದುತ್ತಾನೆ.

ಪಾಪಕರ್ಮಾ ಪಾಪವೃತ್ತಃ ಪಾಪಸ್ಯಾಂತಂ ನ ಗಚ್ಛತಿ ।

ಪುಣ್ಯಂ ಕುರ್ವನ್ ಪುಣ್ಯವ್ರತಃ ಪುಣ್ಯಸ್ಯಾಂತಂ ನ ಗಚ್ಛತಿ ।
ತತ್ ಕರ್ಮ ಯದಿ ಚೇತ್ ಕರ್ತುಃ ವರ್ಜಯೀತ ಚ ಪಾಪಕಮ್ ॥

ಪಾಪಕರ್ಮವನ್ನು ಮಾಡಿದವನು ಪಾಪಸ್ವಭಾವವನ್ನೇ ಉಳ್ಳವನಾಗಿ ಪಾಪಫಲದ ಅಂತವನ್ನೇ ಕಾಣುವುದಿಲ್ಲ (ಸಂಸಾರ ಬಂಧವು ನಿವೃತ್ತವಾದಮೇಲೂ ಅವನು ಪಾಪದ ಫಲವಾದ ದುಃಖವನ್ನೇ ಅಂಧತಮಸ್ಸಿನಲ್ಲಿ ಅನುಭವಿಸುತ್ತಾನೆ). ಪುಣ್ಯವನ್ನು ಮಾಡುವ ಉತ್ತಮ ಜೀವನು ಪುಣ್ಯದ ಅಂತವನ್ನೂ ಕಾಣುವುದಿಲ್ಲ (ಉತ್ತಮಜೀವನು ಸಂಸಾರ ಬಂಧವು ಕಳೆದ ಮೇಲೆಯೂ ಹಿಂದೆ ಮಾಡಿದ ಸತ್ಕರ್ಮಗಳ ಫಲವಾಗಿ ಮೋಕ್ಷದಲ್ಲಿ ಆನಂದಾತಿಶಯವನ್ನು ಪಡೆಯುತ್ತಾನೆ). ಆದ್ದರಿಂದ ತಾನು ಮಾಡಿದ ಕರ್ಮವು ತನ್ನನ್ನು ಬಿಡದಿದ್ದರೂ ಪ್ರಯತ್ನಪೂರ್ವಕವಾಗಿ ಪಾಪಕರ್ಮವನ್ನು ತ್ಯಜಿಸಬೇಕು.

ಅನಸೂಯುಃ ಕೃತಜ್ಞಶ್ಚ ಕಲ್ಯಾಣಾನಿ ಚ ಸೇವತೇ ।
ಸುಖಾನಿ ಧರ್ಮಮರ್ಥಂ ಚ ಸ್ವರ್ಗಂ ಚ ಲಭತೇ ನರಃ ॥೪೩॥

ಅಸೂಯೆ ಇಲ್ಲದವನೂ ಕೃತಜ್ಞನೂ ಆದ ಮನುಷ್ಯನು ಕಲ್ಯಾಣ ಕರ್ಮಗಳನ್ನೇ ಮಾಡುತ್ತಾನೆ. ಅವನು ಸುಖವನ್ನೂ ಧರ್ಮಾರ್ಥಗಳನ್ನೂ ಮತ್ತು ಸ್ವರ್ಗವನ್ನೂ ಪಡೆಯುತ್ತಾನೆ.

ಸಂಯತಸ್ಯ ಚ ದಾಂತಸ್ಯ ನಿಯತಸ್ಯ ಯತಾತ್ಮನಃ ।
ಪ್ರಾಜ್ಞಸ್ಯಾನಂತರಾ ವೃತ್ತಿರಿಹ ಲೋಕೇ ಪರತ್ರ ಚ ॥೪೪।

ಸುಸಂಯತನಾದ ಇಂದ್ರಿಯನಿಗ್ರಹವುಳ್ಳ ನಿಯಮಬದ್ಧನಾದ ಮನೋಜಯವುಳ್ಳ ಪ್ರಾಜ್ಞನಿಗೆ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ನಿರವಧಿಕವಾದ ಸುಖಜೀವನವೇ ಇದೆ.

ಸತಾಂ ಧರ್ಮೇಣ ವರ್ತೇತ ಕ್ರಿಯಾಂ ಶಿಷ್ಟವದಾಚರೇತ್ ।
ಅಸಂಕ್ಲೇಶೇನ ಲೋಕಸ್ಯ ವೃತ್ತಿಂ ಲಿಪ್ಸೇತ ವೈ ದ್ವಿಜ ॥೪೫॥

ಎಲೈ ಬ್ರಾಹ್ಮಣರೇ, ಸಜ್ಜನರ ಧರ್ಮದಿಂದ ವರ್ತಿಸಬೇಕು. ಶಿಷ್ಟರಂತೆ ಕ್ರಿಯೆಗಳನ್ನು ಆಚರಿಸಬೇಕು. ಇನ್ನೊಬ್ಬರಿಗೆ ತೊಂದರೆಯನ್ನು ಕೊಡದಂತೆ ಜೀವನೋಪಾಯವನ್ನು ಹೊಂದಲು ಇಚ್ಛಿಸಬೇಕು.

ಸಂತಿ ಹ್ಯಾಗಮವಿಜ್ಞಾನಾಃ ಶಿಷ್ಟಾಃ ಶಾಸ್ತ್ರೇ ವಿಚಕ್ಷಣಾಃ ।
ಸ್ವಧರ್ಮೇಣ ಕ್ರಿಯಾ ಲೋಕೇ ಕರ್ಮಣಃ ಸೋಽಪ್ಯಸಂಕರಃ ।
ಪ್ರಾಜ್ಞೋ ಧರ್ಮೇಣ ರಮತೇ ಧರ್ಮಂ ಚೈವೋಪಜೀವತಿ ॥೪೬॥

ತಸ್ಮಾದ್ ಧರ್ಮಾದವಾಪ್ತೇನ ಧನೇನ ದ್ವಿಜಸತ್ತಮ ।
ತಸ್ಯೈವ ಸಂಚಿತೇ ಮೂಲಂ ಗುಣಾನ್ ಪಶ್ಯತಿ ಯತ್ರ ವೈ ॥೪೭॥

ಆಗಮ ವಿಜ್ಞಾನವನ್ನೂ, ಶಾಸ್ತ್ರಪಾಂಡಿತ್ಯವನ್ನೂ ಹೊಂದಿದ ಶಿಷ್ಟರು ಲೋಕದಲ್ಲಿ ತಮ್ಮ ಧರ್ಮದಿಂದ ಕ್ರಿಯೆಗಳನ್ನು ಮಾಡುವವರಾಗಿದ್ದಾರೆ. ಅಲ್ಲಿ ಕರ್ಮದ ಸಾಂಕರ್ಯ ಉಂಟಾಗುವುದಿಲ್ಲ. ಪ್ರಾಜ್ಞನಾದವನು ಧರ್ಮದಲ್ಲಿಯೇ ಸಂತೋಷಪಡುತ್ತಾನೆ. ಧರ್ಮವನ್ನೇ ಉಪಜೀವಿಸುತ್ತಾನೆ. ಎಲೈ ದ್ವಿಜಶ್ರೇಷ್ಠರೇ, ಧರ್ಮದಿಂದ ಸಂಪಾದಿಸಿದ ಧನದಿಂದ ಆ ಧನಸಂಚಯದ ಮೂಲವಾದ ನ್ಯಾಯದಿಂದ ಧನಾರ್ಜನೆಯ ರೂಪವಾದ ಧನವನ್ನು ಅವನು ನೋಡುತ್ತಾನೆ.

ಧರ್ಮೇಣ ವೃತ್ತಿಂ ಕುರುತೇ ಧರ್ಮಂ ಚೈವ ಪ್ರಶಂಸತಿ ।
ಧರ್ಮಾತ್ಮಾ ಭವತಿ ಹ್ಯೇವಂ ಚಿತ್ತಂ ಚಾಸ್ಯ ಪ್ರಸೀದತಿ ।
ಸ ಮಿತ್ರಜನಸಂತುಷ್ಟ ಇಹ ಪ್ರೇತ್ಯ ಚ ನಂದತಿ ॥೪೮॥

ಧರ್ಮದಿಂದ ಜೀವನವನ್ನು ನಡೆಸುತ್ತಾನೆ. ಧರ್ಮವನ್ನೇ ಪ್ರಶಂಸಿಸುತ್ತಾನೆ. ಅವನು ಹೀಗೆ ಧರ್ಮಾತ್ಮನಾಗುತ್ತಾನೆ. ಅವನ ಮನಸ್ಸು ಪ್ರಸನ್ನವಾಗಿರುತ್ತದೆ. ಅವನು ಮಿತ್ರಜನರೊಡನೆ ಸಂತುಷ್ಟನಾಗಿ ಈ ಲೋಕದಲ್ಲಿಯೂ ಮತ್ತು ಪರಲೋಕದಲ್ಲಿಯೂ ಸುಖವನ್ನು ಅನುಭವಿಸುತ್ತಾನೆ.

ಶಬ್ದಂ ಸ್ಪರ್ಶಂ ತಥಾ ರೂಪಂ ಗಂಧಾನಿಷ್ಟಾಂಶ್ಚ ಸತ್ತಮ ।
ಪ್ರಭುತ್ವಂ ಲಭತೇ ಚಾಪಿ ಧರ್ಮಸ್ಯೈತತ್ ಫಲಂ ವಿದುಃ ॥೪೯॥

ಎಲೈ ಸಜ್ಜನರಲ್ಲಿ ಶ್ರೇಷ್ಠರಾದವರೇ, ಇಷ್ಟವಾದ ಶಬ್ದಸ್ಪರ್ಶರೂಪರಸಗಂಧಗಳು ಮತ್ತು ಪ್ರಭುತ್ವವು ಅವನಿಗೆ ಲಭಿಸುತ್ತದೆ. ಇದನ್ನು ಧರ್ಮದ ಫಲವೆಂದು ಹೇಳುತ್ತಾರೆ.

ಧರ್ಮಸ್ಯ ಚ ಫಲಂ ಲಬ್ಧ್ವಾ ನ ತೃಪ್ಯತಿ ಮಹಾದ್ವಿಜ ।
ಅತೃಪ್ಯಮಾಣೋ ನಿರ್ವೇದಮಾಪೇದೇ ಜ್ಞಾನಚಕ್ಷುಷಾ ॥೫೦॥

ಎಲೈ ಮಹಾಬ್ರಾಹ್ಮಣರೇ, ಸಜ್ಜನರಾದವರು ಧರ್ಮದ ಫಲವನ್ನು ಹೊಂದಿ ತೃಪ್ತಿಯನ್ನು ಹೊಂದುವುದಿಲ್ಲ. ಅವನು ಅತೃಪ್ತಿಯನ್ನು ಹೊಂದಿ ಜ್ಞಾನಚಕ್ಷುಸ್ಸಿನಿಂದ ವೈರಾಗ್ಯವನ್ನು ಹೊಂದುತ್ತಾನೆ.

ಪ್ರಜ್ಞಾಚಕ್ಷುರ್ನರ ಇಹ ದೋಷಂ ನೈವಾನುರುಧ್ಯತೇ ।
ವಿರಜ್ಯತಿ ಯಥಾಕಾಮಂ ನ ಚ ಧರ್ಮಂ ವಿಮುಂಚತಿ ॥೫೧॥

ಪ್ರಜ್ಞಾಚಕ್ಷುಸ್ಸನ್ನು ಹೊಂದಿದ ನರನು ದೋಷವನ್ನು ಅನುಸರಿಸುವುದಿಲ್ಲ. ತನ್ನ ಇಚ್ಛೆಗೆ ಅನುಗುಣವಾಗಿ ವೈರಾಗ್ಯವನ್ನು ಹೊಂದುತ್ತಾನೆ ಮತ್ತು ಧರ್ಮವನ್ನು ಬಿಡುವುದಿಲ್ಲ.

ಫಲತ್ಯಾಗೇ ಚ ಯತತೇ ದೃಷ್ಟ್ವಾ ಲೋಕಂ ಶ್ರಿಯಾತ್ಮಕಮ್ ।
ತತೋ ಮೋಕ್ಷೇ ಪ್ರಯತತೇ ನಾನೋಪಾಯಾದುಪಾಯತಃ ॥೫೨॥

ಲಕ್ಷ್ಯಾತ್ಮಕವಾದ ವೈಕುಂಠಾದಿ ಲೋಕಗಳನ್ನು ಶಾಸ್ತ್ರದೃಷ್ಟಿಯಿಂದ ನೋಡಿ ಕರ್ಮಫಲವನ್ನು ತ್ಯಾಗ ಮಾಡಲು ಪ್ರಯತ್ನಿಸುತ್ತಾನೆ. ಅನಂತರ ಅನೇಕ ಉಪಾಯಗಳನ್ನು ಹೊಂದಿದ ನಾರಾಯಣನ ಅನುಗ್ರಹದಿಂದ ಶ್ರವಣ ಮನನಾದಿ ಉಪಾಯಗಳಿಂದ ಮೋಕ್ಷವನ್ನು ಪಡೆಯಲು ಪ್ರಯತ್ನಿಸುತ್ತಾನೆ.

ಏವಂ ನಿರ್ವೇದಮಾದತ್ತೇ ಪಾಪಂ ಕರ್ಮ ಜಹಾತಿ ಚ ।
ಧಾರ್ಮಿಕಶ್ಚಾಪಿ ಭವತಿ ಮೋಕ್ಷಂ ಚ ಲಭತೇ ಪರಮ್ ॥೫೩॥

ಹೀಗೆ ವೈರಾಗ್ಯವನ್ನು ಹೊಂದುತ್ತಾನೆ. ಪಾಪಕರ್ಮವನ್ನು ತ್ಯಜಿಸುತ್ತಾನೆ. ಧಾರ್ಮಿಕನಾಗುತ್ತಾನೆ ಮತ್ತು ಶ್ರೇಷ್ಠವಾದ ಮೋಕ್ಷವನ್ನೂ ಹೊಂದುತ್ತಾನೆ.

ತಪೋ ನಿಶ್ರೇಯಸಂ ಜಂತೋಸ್ತಸ್ಯ ಮೂಲಂ ಶಮೋ ದಮಃ ।
ತೇನ ಸರ್ವಾನವಾಪ್ನೋತಿ ಕಾಮಾನ್ ಯಾನ್ ಮನಸೇಚ್ಛತಿ ॥೫೪॥

ತಪಸ್ಸು ಮನುಷ್ಯನ ಶ್ರೇಯಸ್ಸಿಗೆ ಮೂಲಕಾರಣವಾದುದು. ತಪಸ್ಸಿಗೆ ಶಮ ಮತ್ತು ದಮಗಳು ಮೂಲವಾದುವುಗಳು. ಶಮದ ಮೂಲಕವಾದ ತಪಸ್ಸಿನಿಂದ ಅವನ ಮನಸ್ಸಿಗೆ ಕಾಮಗಳೆಲ್ಲವನ್ನೂ ಪಡೆಯುತ್ತಾನೆ.

ಇಂದ್ರಿಯಾಣಾಂ ನಿರೋಧೇನ ಸತ್ಯೇನ ಚ ದಮೇನ ಚ ।
ಬ್ರಹ್ಮಣಃ ಪದಮಾಪ್ನೋತಿ ಯತ್ಪರಂ ದ್ವಿಜಸತ್ತಮ ॥೫೫॥

ಎಲೈ ದ್ವಿಜಶ್ರೇಷ್ಠರೇ, ಇಂದ್ರಿಯಗಳನ್ನು ನಿಗ್ರಹಿಸಿ ಸತ್ಯ ಮತ್ತು ದಮಗಳ ಕಾರಣದಿಂದಾಗಿ ಅವನು ಬ್ರಹ್ಮನ ಶ್ರೇಷ್ಠವಾದ ಸ್ಥಾನವನ್ನು ಹೊಂದುತ್ತಾನೆ.

ಕೌಶಿಕಃ

ಇಂದ್ರಿಯಾಣಿ ತು ಯಾನ್ಯಾಹುಃ ಕಾನಿ ತಾನಿ ಯತವ್ರತ ।
ನಿಗ್ರಹಶ್ಚ ಕಥಂ ಕಾರ್ಯೋ ನಿಗ್ರಹಸ್ಯ ಚ ಕಿಂ ಫಲಮ್ ॥೫೬॥

ಕೌಶಿಕ– ಎಲೈ ವ್ರತನಿಷ್ಠನಾದವನೇ, ಯಾವುದನ್ನು ಇಂದ್ರಿಯನೆಂದು ಹೇಳುತ್ತಾರೆಯೋ ಅವು ಯಾವುವು? ಅವುಗಳನ್ನು ನಿಗ್ರಹ ಮಾಡುವುದು ಹೇಗೆ? ಮತ್ತು ಆ ನಿಗ್ರಹದ ಫಲವಾದರೂ ಏನು?

ಕಥಂ ಚ ಫಲಮಾಪ್ನೋತಿ ತೇಷಾಂ ಧರ್ಮಭೃತಾಂ ವರ ।
ಏತದಿಚ್ಛಾಮಿ ತತ್ತ್ವೇನ ಧರ್ಮಂ ಜ್ಞಾತುಂ ನಿಬೋಧ ಮೇ ॥೫೭॥

ಧರ್ಮಿಷ್ಠರಲ್ಲಿ ಶ್ರೇಷ್ಠನಾದವನೇ ಆ ಫಲವನ್ನು ಜೀವನು ಹೇಗೆ ಪಡೆಯುತ್ತಾನೆ? ಈ ಧರ್ಮವನ್ನು ಯಥಾರ್ಥವಾಗಿ ನಾನು ತಿಳಿಯಲು ಇಚ್ಛಿಸುತ್ತೇನೆ. ಅದನ್ನು ನನಗೆ ಹೇಳು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಷಣ್ಣವತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಬ್ರಾಹ್ಮಣವ್ಯಾಧಸಂವಾದೇ
ಪತಿವ್ರತಾಮಾಹಾತ್ಮ್ಯೇ ಏಕವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ತಾರನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ತೇಳನೆಯ ಅಧ್ಯಾಯ

ಧರ್ಮವ್ಯಾಧನಿಂದ ಸುಬುದ್ಧಿ ಮತ್ತು ದುರ್ಬುದ್ಧಿಗಳಿಂದ ಉಂಟಾಗುವ ಪರಂಪರೆಯ ಕಥನ. ಸತ್ಸಂಗದಿಂದ ಜ್ಞಾನಲಾಭದ ಕಥನ ಮತ್ತು ಬ್ರಹ್ಮವಿದ್ಯೆಯ ವರ್ಣನೆ.

ಮಾರ್ಕಂಡೇಯಃ

ಏವಮುಕ್ತಸ್ತು ವಿಪ್ರೇಣ ಧರ್ಮವ್ಯಾಧೋ ಯುಧಿಷ್ಠಿರ ।
ಪ್ರತ್ಯುವಾಚ ಯಥಾ ವಿಪ್ರಂ ತಚ್ಛೃಣುಷ್ವ ನರಾಧಿಪ ॥೧॥

ಮಾರ್ಕಂಡೇಯ– ನರಾಧಿಪನಾದ ಯುಧಿಷ್ಠಿರನೇ, ಆ ಬ್ರಾಹ್ಮಣನಿಂದ ಹೀಗೆ ಹೇಳಲ್ಪಟ್ಟ ಧರ್ಮವ್ಯಾಧನು ಆ ಬ್ರಾಹ್ಮಣನನ್ನು ಕುರಿತು ಏನು ಉತ್ತರವನ್ನು ಕೊಟ್ಟನು ಎಂದು ಹೇಳುತ್ತೇನೆ ಅದನ್ನು ಕೇಳು.

ವ್ಯಾಧಃ

ವಿಜ್ಞಾನಾರ್ಥಂ ಮನುಷ್ಯಾಣಾಂ ಮತಿಃ ಪೂರ್ವಂ ಪ್ರವರ್ತತೇ ।
ತಾಂ ಪ್ರಾಪ್ಯ ಕಾಮಂ ಭಜತೇ ರೋಷಂ(ಕ್ರೋಧಂ) ಚ ದ್ವಿಜಸತ್ತಮ ॥

ವ್ಯಾಧ– ಎಲೈ ದ್ವಿಜಶ್ರೇಷ್ಠರೇ, ಜ್ಞಾನದ ಸಲುವಾಗಿ ಮನುಷ್ಯರಿಗೆ ಮೊದಲು ಮನಸ್ಸು ಮನೋವೃತ್ತಿ ರೂಪವಾಗಿ ಪ್ರವೃತ್ತವಾಗುತ್ತದೆ. ಮನೋವೃತ್ತಿ ಹೊಂದಿದ ಮೇಲೆ ಕಾಮವಾಗಲೀ, ರೋಷವಾಗಲೀ ಉಂಟಾಗುತ್ತದೆ (ಮನೋವೃತ್ತಿಯು ಒಳ್ಳೆಯ ವೃತ್ತಿ ಮತ್ತು ಕೆಟ್ಟವೃತ್ತಿ ಎಂಬ ಎರಡು ವಿಧ. ಒಳ್ಳೆವೃತ್ತಿಯಿಂದ ಕಾಮವು, ಕೆಟ್ಟವೃತ್ತಿಯಿಂದ ರೋಷವು ಉಂಟಾಗುತ್ತದೆ).

ತತಸ್ತದರ್ಥಂ ಯತತೇ ಕರ್ಮ ಚಾರಭತೇ ಮಹತ್ ।
ಇಷ್ಟಾನಾಂ ರೂಪಗಂಧಾನಾಮಭ್ಯಾಸಂ ಚ ನಿಷೇವತೇ ॥೩॥

ಅನಂತರ ಕಾಮ ಉಂಟಾದ ಮೇಲೆ (ಕಾಮ ಎಂದರೆ ಇಚ್ಛೆ ಎಂದು ಅರ್ಥ) ಆ ಇಚ್ಛೆಯ ವಿಷಯವನ್ನು ಸಂಪಾದಿಸಲು ದೊಡ್ಡ ಕರ್ಮವನ್ನು ಪ್ರಾರಂಭಿಸುತ್ತಾನೆ. ತನ್ನ ಇಷ್ಟವಾದ ರೂಪ ರಸಗಂಧಾದಿಗಳನ್ನು ಪುನಃ ಪುನಃ ಸೇವಿಸುತ್ತಾನೆ.

ತತೋ ರಾಗಃ ಪ್ರಭವತಿ ದ್ವೇಷಶ್ಚ ತದನಂತರಮ್ ।
ತತೋ ಲೋಭಃ ಪ್ರಭವತಿ ಮೋಹಶ್ಚ ತದನಂತರಮ್ ॥೪॥

ಮನೋವೃತ್ತಿಯು ಕೆಟ್ಟದಾದರೆ ಅದರಿಂದ ರಾಗವು ಉಂಟಾಗುತ್ತದೆ. ಅನಂತರ ದ್ವೇಷವು ಉಂಟಾಗುತ್ತದೆ. ಅನಂತರ ಲೋಭವೂ, ಅನಂತರ ಮೋಹವೂ ಉಂಟಾಗುತ್ತದೆ.

ತತೋ ಲೋಭಾಭಿಭೂತಸ್ಯ ರಾಗದ್ವೇಷಹತಸ್ಯ ಚ ।
ನ ಧರ್ಮೇ ಜಾಯತೇ ಬುದ್ಧಿರ್ವ್ಯಾಜಾದ್ ಧರ್ಮಂ ಕರೋತಿ ಚ ।
ವ್ಯಾಜೇನ ಚರತೇ ಧರ್ಮಮರ್ಥಂ ವ್ಯಾಜೇನ ರೋಚತೇ ॥೫॥

ಆಗ ಲೋಭಕ್ಕೆ ಒಳಗಾಗಿ ರಾಗದ್ವೇಷಗಳಿಂದ ಉಪಹತನಾದ ಮನುಷ್ಯನಿಗೆ ಧರ್ಮದಲ್ಲಿ ಬುದ್ಧಿ ಉಂಟಾಗುವುದಿಲ್ಲ. ಫಲದ ಅಪೇಕ್ಷೆಯ ನಿಮಿತ್ತದಿಂದ ಧರ್ಮವನ್ನು ಆಚರಿಸುತ್ತಾನೆ. ಇಂತಹ ವ್ಯಾಜದಿಂದ ಧರ್ಮವನ್ನು ಆಚರಿಸುತ್ತಾನೆ. ಮತ್ತು ಅದರ ಫಲವಾಗಿ ಅರ್ಥಲಾಭದಲ್ಲಿ ಅಭಿರುಚಿ ಉಳ್ಳವನಾಗುತ್ತಾನೆ.

ವ್ಯಾಜೇನ ಸಿಧ್ಯಮಾನೇಷು ಧನೇಷು ದ್ವಿಜಸತ್ತಮ ।
ತತ್ರೈವ ರಮತೇ ಬುದ್ಧಿಸ್ತತಃ ಪಾಪಂ ಚಿಕೀರ್ಷತಿ ॥೬॥

ಎಲೈ ದ್ವಿಜಸತ್ತಮರೇ, ಇಂತಹ ವ್ಯಾಜದಿಂದ ಧನವು ಒದಗುತ್ತಿರಲು ಅಲ್ಲಿಯೇ ಅವನ ಬುದ್ಧಿಯು ಸಂತೋಷಗೊಳ್ಳುತ್ತದೆ. ಅನಂತರ ಪಾಪಕರ್ಮವನ್ನು ಮಾಡಲು ಬಯಸುತ್ತಾನೆ.

ಸುಹೃದ್ಭಿರ್ವಾರ್ಯಮಾಣಶ್ಚ ಪಂಡಿತೈಶ್ಚ ದ್ವಿಜೋತ್ತಮ ।
ಉತ್ತಮಶ್ರುತಸಂಬಂಧೋ ಬ್ರವೀತಿ ಶ್ರುತಯೋ ಜಿತಮ್ ॥೭॥

ಎಲೈ ದ್ವಿಜೋತ್ತಮರೇ, ಪಂಡಿತರಿಂದಲೂ ನಿವಾರಿಸಲ್ಪಟ್ಟರೂ ಸಹ ಕಾಮಕ್ರೋಧದಿಂದ ಜಿತರಾಗಿ ಉತ್ತಮರಿಂದ ಕೇಳಿದ ಶ್ರುತಿಗಳನ್ನು ಮಾತ್ರ ಹೇಳುತ್ತಾನೆ. ಆ ಶ್ರುತಿಗಳಲ್ಲಿ ಹೇಳಿದುದನ್ನು ಆಚರಿಸುವುದಿಲ್ಲ.

ಅಧರ್ಮಸ್ತ್ರಿವಿಧಸ್ತಸ್ಯ ವರ್ತತೇ ರಾಗದೋಷಜಃ ।
ಪಾಪಂ ಚಿಂತಯತೇ ಚಾಪಿ ಬ್ರವೀತಿ ಚ ಕರೋತಿ ಚ ॥೮॥

ರಾಗದೋಷದಿಂದ ಉಂಟಾದ ಅಧರ್ಮವು ಈ ಮೂರು ವಿಧವಾಗಿ ಇರುತ್ತದೆ. ಮೊದಲು ಪಾಪವನ್ನು ಚಿಂತಿಸುತ್ತಾನೆ. ಅನಂತರ ಅದನ್ನು ಕುರಿತು ಮಾತನಾಡುತ್ತಾನೆ. ಅನಂತರ ಅದನ್ನು ಆಚರಿಸುತ್ತಾನೆ.

ತಸ್ಯಾಧರ್ಮಪ್ರವೃತ್ತಸ್ಯ ಗುಣಾ ನಶ್ಯಂತಿ ಸಾಧವಃ ।
ಏಕಶೀಲೈಶ್ಚ ಮಿತ್ರತ್ವಂ ಭಜಂತೇ ಪಾಪಕರ್ಮಿಣಃ ॥೯॥

ಅಧರ್ಮದಲ್ಲಿ ಪ್ರವೃತ್ತನಾದವನಿಗೆ ಸದ್ಗುಣಗಳು ನಾಶವನ್ನು ಹೊಂದುತ್ತವೆ. ಪಾಪಕರ್ಮವನ್ನು ಮಾಡುವವರು ಸಮಾನಶೀಲವುಳ್ಳವರ ಜೊತೆಯಲ್ಲಿ ಸ್ನೇಹವನ್ನು ಸಂಪಾದಿಸುತ್ತಾರೆ.

ಸ ತೇನ ದುಃಖಮಾಪ್ನೋತಿ ಪರತ್ರ ಚ ವಿಪದ್ಯತೇ ।
ಪಾಪಾತ್ಮಾ ಭವತಿ ಹ್ಯೇವಂ ಧರ್ಮಲಾಭಂ ತು ಮೇ ಶೃಣು ॥೧೦॥

ಅವನು ಅದರಿಂದ ಈ ಲೋಕದಲ್ಲಿ ದುಃಖವನ್ನು ಪಡುತ್ತಾನೆ. ಪರಲೋಕದಲ್ಲಿಯೂ ವಿಪತ್ತಿಗೆ ಒಳಗಾಗುತ್ತಾನೆ. ಪಾಪಾತ್ಮನು ಈ ರೀತಿಯಲ್ಲಿ ಇರುತ್ತಾನೆ. ಧರ್ಮಾತ್ಮನ ಧರ್ಮಲಾಭದ ಪ್ರಕಾರವನ್ನು ನನ್ನಿಂದ ಕೇಳು.

ಯಸ್ತೇತಾನ್ ಪ್ರಜ್ಞಯಾ ದೋಷಾನ್ ಪೂರ್ವಮೇವಾನುಪಶ್ಯತಿ ।
ಕುಶಲಃ ಸುಖದುಃಖೇಷು ಸಾಧೂಂಶ್ಚಾಪ್ಯುಪಸೇವತೇ ॥೧೧॥

ಧರ್ಮಾತ್ಮನಾದವನು ಈ ದೋಷಗಳನ್ನು ಮೊದಲೇ ತನ್ನ ಬುದ್ಧಿಯಿಂದ ಗಮನಿಸುತ್ತಾನೆ. ಅವನು ಸುಖದುಃಖಗಳಲ್ಲಿ ಸಮಾನನಾಗಿರುತ್ತಾನೆ ಮತ್ತು ಸಜ್ಜನರ ಸೇವೆಯನ್ನು ಮಾಡುತ್ತಾನೆ.

ತಸ್ಯ ಸಾಧುಸಮಾರಂಭಾದ್ ಬುದ್ಧಿರ್ಧರ್ಮೇಷು ರಾಜತೇ ॥೧೨॥

ಅವನು ಸತ್ಕರ್ಮಗಳನ್ನು ಆರಂಭಿಸುವುದರಿಂದ ಅವನ ಬುದ್ಧಿಯು ಧರ್ಮಗಳಲ್ಲಿಯೇ ಪ್ರಕಾಶಿಸುತ್ತದೆ.

ಬ್ರಾಹ್ಮಣಃ

ಬ್ರವೀಷಿ-ಸೂನೃತಂ ಧರ್ಮ್ಯಂ ಯಸ್ಯ ವಕ್ತಾ ನ ವಿದ್ಯತೇ ।
ದಿವ್ಯಪ್ರಭಾವಃ ಸುಮಹಾನೃಷಿರೇವ ಮತೋಽಸಿ ಮೇ ॥೧೩॥

ಬ್ರಾಹ್ಮಣ -ನೀನು ಮಧುರವಾದ ಧರ್ಮವಚನಗಳನ್ನು ಆಡುತ್ತಿದ್ದೀಯೆ. ಇಂತಹ ಮಾತನ್ನು ಆಡುವವರು ಇನ್ನೊಬ್ಬರಿಲ್ಲ. ದಿವ್ಯಪ್ರಭಾವವುಳ್ಳ ನೀನು ದೊಡ್ಡ ಋಷಿ ಎಂದೇ ನನ್ನ ಅಭಿಪ್ರಾಯ.

ವ್ಯಾಧಃ

ಬ್ರಾಹ್ಮಣಾ ವೈ ಮಹಾಭಾಗಾಃ ಪಿತರೋಽಗ್ರಭುಜಃ ಸದಾ ।
ತೇಷಾಂ ಸರ್ವಾತ್ಮನಾ ಕಾರ್ಯಂ ಪ್ರಿಯಂ ಲೋಕೇ ಮನೀಷಿಣಾ॥೧೪॥

ವ್ಯಾಧ– ಬ್ರಾಹ್ಮಣರು ಮಹಾನುಭಾವರು. ಅವರು ಪಿತೃಗಳು. ಯಾವಾಗಲೂ ಅಗ್ರಭೋಜಿಗಳು. ವಿವೇಕವುಳ್ಳವನು ಲೋಕದಲ್ಲಿ ಸರ್ವಪ್ರಕಾರದಿಂದಲೂ ಅವರಿಗೆ ಪ್ರಿಯವನ್ನು ಮಾಡಬೇಕು.

ಯತ್ ತೇಷಾಂ ಚ ಪ್ರಿಯಂ ತತ್ ತೇ ವಕ್ಷ್ಯಾಮಿ ದ್ವಿಜಸತ್ತಮ ।
ನಮಸೃತ್ವಾ ಬ್ರಾಹ್ಮಣೇಭ್ಯೋ ಬ್ರಾಹ್ಮೀಂ ವಿದ್ಯಾಂ ನಿಬೋಧ ಮೇ ॥೧೫॥

ಎಲೈ ದ್ವಿಜಶ್ರೇಷ್ಠರೇ, ಅವರಿಗೆ ಯಾವುದು ಪ್ರಿಯವೋ ಅದನ್ನು ನಿಮಗೆ ಹೇಳುವೆನು. ಬ್ರಾಹ್ಮಣರಿಗೆ ನಮಸ್ಕರಿಸಿ ನನ್ನಿಂದ ಬ್ರಹ್ಮವಿದ್ಯೆಯನ್ನು ತಿಳಿಯಿರಿ.

ಇದಂ ವಿಶ್ವಂ ಜಗತ್ ಸರ್ವಮಜಯ್ಯಂ ಚಾಪಿ ಸರ್ವಶಃ ।
ಮಹಾಭೂತಾತ್ಮಕಂ ಬ್ರಹ್ಮ ನಾತಃ ಪರತರಂ ಭವೇತ್ ॥೧೬॥

ಎಲೈ ಬ್ರಾಹ್ಮಣರೇ, ಈ ಸಮಸ್ತವಾದ ಜಗತ್ತು ಸರ್ವಥಾ ಅಜೇಯವಾದುದು. ಇದರಲ್ಲಿ ಮಹಾಭೂತನೆಂದು ಕರೆಸಿಕೊಳ್ಳುವ ಪರಬ್ರಹ್ಮನು ಇದ್ದಾನೆ. ಅವನಿಗಿಂತ ಶ್ರೇಷ್ಠವಾದ ವಸ್ತುವು ಇನ್ನೊಂದಿಲ್ಲ.

ಮಹಾಭೂತಾನಿ ಖಂ ವಾಯುರಗ್ನಿರಾಪಸ್ತಥಾ ಚ ಭೂಃ ।
ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ತದ್ಗುಣಾಃ ॥೧೭॥

ಪೃಥಿವೀ, ಜಲ, ವಾಯು, ಅಗ್ನಿ, ಆಕಾಶಗಳು ಪಂಚಮಹಾಭೂತಗಳು. ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳು ಅವುಗಳ ಗುಣಗಳು.

ತೇಷಾಮಪಿ ಗುಣಾಃ ಸರ್ವೇ ಗುಣವೃತ್ತಿಃ ಪರಸ್ಪರಮ್ ।
ಪೂರ್ವಪೂರ್ವಗುಣಾಃ ಸರ್ವೇ ಕ್ರಮಶೋ ಗುಣೇಷು ತ್ರಿಷು ॥೧೮॥

ಅವುಗಳ ಗುಣಗಳೂ ಸಹ ಪರಸ್ಪರವಾಗಿ ಗುಣಗಳಲ್ಲಿರುತ್ತವೆ. ವಾಯು, ಆಕಾಶದ ಗುಣಗಳು ಕ್ರಮವಾಗಿ ಮುಂದಿನ ಮೂರು ದ್ರವ್ಯಗಳಲ್ಲಿ ಇರುತ್ತವೆ. (ಆಕಾಶದಲ್ಲಿ ಶಬ್ದ, ವಾಯುವಿನಲ್ಲಿ ಶಬ್ದ ಮತ್ತು ಸ್ಪರ್ಶ, ಅಗ್ನಿಯಲ್ಲಿ ಶಬ್ದಸ್ಪರ್ಶ ಮತ್ತು ರೂಪ, ಜಲದಲ್ಲಿ ಶಬ್ದ ಸ್ಪರ್ಶ ರೂಪ ಮತ್ತು ರಸ, ಭೂಮಿಯಲ್ಲಿ ಶಬ್ದ ಸ್ಪರ್ಶ ರೂಪ ರಸ ಮತ್ತು ಗಂಧ. ಹೀಗೆ ಕ್ರಮವಾಗಿರುತ್ತವೆ).

ಷಷ್ಠಸ್ತು ಚೇತನಾ ನಾಮ ಮನ ಇತ್ಯಭಿಧೀಯತೇ ।
ಸಪ್ತಮೀ ತು ಭವೇದ್ ಬುದ್ಧಿರಹಂಕಾರಸ್ತತಃ ಪರಮ್ ॥೧೯॥

ಆರನೆಯ ವಸ್ತುವೆಂದರೆ ಚೇತನಾ ಎಂದು ಕರೆಯಲ್ಪಡುವ ಮನಸ್ಸು ಎಂದು ಹೇಳಲ್ಪಡುತ್ತದೆ. ಏಳನೆಯದೆಂದರೆ ಬುದ್ಧಿ ಅದರ ನಂತರ ಅಹಂಕಾರ.

ಇಂದ್ರಿಯಾಣಿ ಚ ಪಂಚಾತ್ಮಾ ರಜಃ ಸತ್ತ್ವಂ ತಮಸ್ತಥಾ ।
ಇತ್ಯೇಷ ಸಪ್ತದಶಕೋ ರಾಶಿರವ್ಯಕ್ತಸಂಜ್ಞಿತಃ ॥೨೦॥

ಅನಂತರ ಪಂಚವಿಧವಾದ ಇಂದ್ರಿಯಗಳು. ಸತ್ತ್ವರಜಸ್ತಮೋಗುಣಗಳು.ಇದು ಅವ್ಯಕ್ತ ಸಂಜ್ಞೆಯುಳ್ಳ ಮೂಲಪ್ರಕೃತಿಯ ಜೊತೆ ಸೇರಿ ಹದಿನೇಳು ದ್ರವ್ಯಗಳ ರಾಶಿ ಎಂದು ಕರೆಯಲ್ಪಡುತ್ತದೆ (ಪಂಚಮಹಾಭೂತಗಳು, ಪಂಚೇಂದ್ರಿಯಗಳು, ಮನಸ್ಸು ಬುದ್ಧಿ, ಅಹಂಕಾರ, ಸತ್ತ್ವರಜಸ್ತಮೋಗುಣಗಳು ಮತ್ತು ಮೂಲಪ್ರಕೃತಿ. ಇದು ಹದಿನೇಳರ ರಾಶಿ. ರೂಪಾದಿ ಪಂಚಕವು ಗುಣವಾದ್ದರಿಂದ ಅದನ್ನು ದ್ರವ್ಯದ ಜೊತೆಯಲ್ಲಿ ಗಣನೆಯನ್ನು ಮಾಡಿಲ್ಲ).

ಸರ್ವೈರಿಹೇಂದ್ರಿಯಾರ್ಥೈಸ್ತು ವ್ಯಕ್ತಾವ್ಯಕ್ತೈಃ ಸುಸಂವೃತೈಃ ।
ಚತುರ್ವಿಂಶಕ ಇತ್ಯೇಷ ವ್ಯಕ್ತಾವ್ಯಕ್ತಮಯೋ ಗಣಃ ।
ಏತತ್ತೇ ಸರ್ವಮಾಖ್ಯಾತಂ ಕಿಂ ಭೂಯಃ ಶೋರತುಮಿಚ್ಛಸಿ ॥೨೧॥

ಇದಕ್ಕೆ ಇಂದ್ರಿಯಕ್ಕೆ ವಿಷಯಗಳಾದ ಶಬ್ದ ಸರ್ಶ ರೂಪ ರಸ ಗಂಧಗಳನ್ನೂ, ವ್ಯಕ್ತವಾದ ಬ್ರಹ್ಮಾಂಡವನ್ನೂ ಮತ್ತು ಅವ್ಯಕ್ತವಾದ ಮಹತ್ತತ್ವವನ್ನೂ ಸೇರಿಸಿದರೆ ಇದು ವ್ಯಕ್ತಾವ್ಯಕ್ತವಾದ ಇಪ್ಪತ್ನಾಲ್ಕು ವಸ್ತುಗಳ ಒಂದು ರಾಶಿಯಾಗುತ್ತದೆ. ನೀನು ಕೇಳಿದ ಎಲ್ಲವನ್ನೂ ನಿನಗೆ ಹೇಳಿದ್ದೇನೆ. ಇನ್ನೇನನ್ನು ಕೇಳಲು ಬಯಸುತ್ತೀಯೆ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತನವತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಬ್ರಾಹ್ಮಣಮಾಹಾತ್ಮ್ಯೇ
ಪತಿವ್ರತಾಮಾಹಾತ್ಮ್ಯೇ ದ್ವಾವಿಂಶೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ತೇಳನೆಯ
ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ತೆಂಟನೆಯ ಅಧ್ಯಾಯ

ಧರ್ಮವ್ಯಾಧನಿಂದ ಪಂಚಮಹಾಭೂತಗಳ ಗುಣನಿರೂಪಣೆ.

ಮಾರ್ಕಂಡೇಯಃ

ಏವಮುಕ್ತಃ ಸ ವಿಪ್ರಸ್ತು ಧರ್ಮವ್ಯಾಧೇನ ಭಾರತ ।
ಕಥಾಮಕಥಯದ್ ಭೂಯೋ ಮನಸಃ ಪ್ರೀತಿವರ್ಧನೀಮ್ ॥೧॥

ಮಾರ್ಕಂಡೇಯ– ಎಲೈ ಭಾರತನೇ, ಧರ್ಮವ್ಯಾಧನಿಂದ ಹೀಗೆ ಹೇಳಲ್ಪಟ್ಟ ಆ ಬ್ರಾಹ್ಮಣನು ಮನಸ್ಸಿಗೆ ಸಂತೋಷವುಂಟು ಮಾಡುವ ಕಥೆಯನ್ನು ಪುನಃ ಮುಂದುವರಿಸಿದನು.

ಬ್ರಾಹ್ಮಣಃ

ಮಹಾಭೂತಾನಿ ಯಾನ್ಯಾಹುಃ ಪಂಚ ಧರ್ಮಭೃತಾಂ ವರ ।
ಏಕೈಕಸ್ಯ ಗುಣಾನ್ ಸಮ್ಯಕ್ ಪಂಚಾನಾಮಪಿ ಮೇ ವದ ॥೨॥

ಬ್ರಾಹ್ಮಣ– ಎಲೈ ಧರ್ಮಿಷ್ಠರಲ್ಲಿ ಶ್ರೇಷ್ಠನೇ, ಯಾವುದನ್ನು ಪಂಚಮಹಾಭೂತಗಳೆಂದು ಹೇಳುತ್ತಾರೆಯೋ ಅವುಗಳಲ್ಲಿ ಒಂದೊಂದರ ಗುಣಗಳನ್ನೂ ನನಗೆ ಚೆನ್ನಾಗಿ ಹೇಳು.

ವ್ಯಾಧಃ

ಭೂಮಿರಾಪಸ್ತಥಾ ಜ್ಯೋತಿರ್ವಾಯುರಾಕಾಶಮೇವ ಚ ।
ಗುಣೋತ್ತರಾಣಿ ಸರ್ವಾಣಿ ತೇಷಾಂ ವಕ್ಷ್ಯಾಮಿ ತೇ ಗುಣಾನ್ ॥೩॥

ವ್ಯಾಧ– ಭೂಮಿ, ಜಲ, ಅಗ್ನಿ, ವಾಯು ಮತ್ತು ಆಕಾಶ. ಇವುಗಳು ಗುಣಗಳಿಂದ ಕೂಡಿದವು. ಆ ಗುಣದ ಪ್ರಕಾರಗಳನ್ನು ನಿನಗೆ ಹೇಳುವೆನು.

ಭೂಮಿಃ ಪಂಚಗುಣಾಃ ಬ್ರಹ್ಮನ್ನುದಕಂ ಚ ಚತುರ್ಗುಣಮ್ ।
ಗುಣಾಸ್ತ್ರಯಸ್ತೇಜಸಿ ಸ ತ್ರಯಶ್ಚಾಕಾಶವಾತಯೋಃ ॥೪॥

ಎಲೈ ಬ್ರಾಹ್ಮಣರೇ, ಭೂಮಿಗಳಲ್ಲಿ ಐದು ಗುಣಗಳು, ಉದಕದಲ್ಲಿ ನಾಲ್ಕು ಗುಣಗಳು, ತೇಜಸ್ಸಿನಲ್ಲಿ ಮೂರು ಗುಣಗಳು, ವಾಯುವಿನಲ್ಲಿ ಎಂಡು ಗುಣಗಳು ಮತ್ತು ಆಕಾಶದಲ್ಲಿ ಒಂದು ಗುಣ (ಆಕಾಶವಾಯುಗಳಲ್ಲಿ ಒಟ್ಟು ಮೂರುಗುಣಗಳು).

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸೋ ಗಂಧಶ್ಚ ಪಂಚಮಃ ।
ಏತೇ ಗುಣಾಃ ಪಂಚ ಭೂಮೇಃ ಸರ್ವೇಭ್ಯೋ ಗುಣವತ್ತರಾ ॥೫॥

ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧ ಈ ಐದು ಭೂಮಿಯ ಗುಣಗಳು. ಭೂಮಿಯಲ್ಲಿ ಉಳಿದ ನಾಲ್ಕು ಪಂಚಮಹಾಭೂತಗಳಿಗಿಂತ ಅಧಿಕ ಸಂಖ್ಯೆಯ ಗುಣಗಳಿರುತ್ತವೆ.

ಶಬ್ದಃ ಸ್ಪರ್ಶಶ್ಚ ರೂಪಂ ಚ ರಸಶ್ಚಾಪಿ ದ್ವಿಜೋತ್ತಮ ।
ಅಪಾಮೇತೇ ಗುಣಾ ಬ್ರಹ್ಮನ್ ಕೀರ್ತಿತಾಸ್ತವ ಸುವ್ರತ ॥೬॥

ಎಲೈ ದ್ವಿಜೋತ್ತಮರೇ, ಸುವ್ರತರೇ, ಶಬ್ದ, ಸ್ಪರ್ಶ, ರೂಪ, ರಸಗಳು ಉದಕದ ಗುಣಗಳೆಂದು ನಿಮಗೆ ಹೇಳುತ್ತಿದ್ದೇನೆ.

ಶಬ್ದಃ ಸ್ಪರ್ಶಶ್ಚ ರೂಪಂ ಚ ತೇಜಸೋಽಥ ಗುಣಾಸ್ತ್ರಯಃ ।
ಶಬ್ದಃ ಸ್ಪರ್ಶಶ್ಚ ವಾಯೌ ತು ಶಬ್ದಶ್ಚಾಕಾಶ ಏವ ತು ॥೭॥

ತೇಜಸ್ಸಿನಲ್ಲಿ ಶಬ್ದ, ಸ್ಪರ್ಶ, ರೂಪ ಈ ಮೂರು ಗುಣಗಳಿವೆ. ವಾಯುವಿನಲ್ಲಿ ಶಬ್ದಮತ್ತು ಸ್ಪರ್ಶಗಳು. ಆಕಾಶದಲ್ಲಿ ಮಾತ್ರ ಶಬ್ದವು ಒಂದೇ ಗುಣ.

ಏತೇ ಪಂಚದಶ ಬ್ರಹ್ಮನ್ ಗುಣಾ ಭೂತೇಷು ಪಂಚಸು ।
ವರ್ತಂತೇ ಸರ್ವಭೂತೇಷು ಯೇಷು ಲೋಕಾಃ ಪ್ರತಿಷ್ಠಿತಾಃ ।
ಅನ್ಯೋನ್ಯಂ ನಾತಿವರ್ತಂತೇ ಸಮ್ಯಕ್ ಚ ಭವತಿ ದ್ವಿಜ ॥೮॥

ಎಲೈ ಬ್ರಾಹ್ಮಣರೇ, ಪಂಚಮಹಾಭೂತಗಳಲ್ಲಿ ಹೀಗೆ ಒಟ್ಟು ಹದಿನೈದು ಗುಣಗಳಿರುತ್ತವೆ. ಲೋಕಗಳೆಲ್ಲವೂ ಈ ಪಂಚಭೂತಗಳಲ್ಲಿ ಪ್ರತಿಷ್ಠಿತವಾಗಿವೆ. ಎಲೈ ಬ್ರಾಹ್ಮಣರೇ, ಇವು ಒಂದನ್ನೊಂದು ಮೀರಿ ಇರುವುದಿಲ್ಲ (ದೇಹಗಳಲ್ಲಿ ಎಷ್ಟು ಪ್ರಮಾಣದಲ್ಲಿ ಇರಬೇಕೋ ಅಷ್ಟೇ ಪ್ರಮಾಣದಲ್ಲಿ ಇರುತ್ತವೆ). ಹಾಗಾದಾಗ ಎಲ್ಲವೂ ಸರಿಯಾಗಿರುತ್ತದೆ.

ಯದಾ ತು ವಿಷಮಂ ಭಾವಮಾಚರಂತಿ ಚರಾಚರಾಃ ।
ತದಾ ದೇಹೀ ದೇಹಮನ್ಯಂ ವ್ಯತಿರೋಹತಿ ಕಾಲತಃ ॥೯॥

ಯಾವಾಗ ಚರಾಚರ ದೇಹಿಗಳ ಸಂಬಂಧಿಯಾದ ಈ ಪಂಚಭೂತಗಳಲ್ಲಿ ವೈಷಮ್ಯ ಉಂಟಾಗುವುದೋ ಆಗ ದೇಹಿಯು ಮರಣವನ್ನು ಹೊಂದುವನು.

ಪ್ರಾತಿಲೋಮ್ಯಾದ್ ವಿನಶ್ಯಂತಿ ಜಾಯಂತೇ ಚಾನುಪೂರ್ವಶಃ ॥೧೦॥

ಪಂಚಭೂತಗಳು ಯಾವ ಕ್ರಮದಲ್ಲಿ ಜನಿಸುತ್ತವೆಯೋ ಅದಕ್ಕೆ ವಿರುದದ್ಧವಾದ ಕ್ರಮದಲ್ಲಿ ನಾಶವನ್ನು ಹೊಂದುತ್ತವೆ (ಆಕಾಶ, ವಾಯು, ಅಗ್ನಿ, ಉದಕ, ಪೃಥಿವೀ ಈ ಕ್ರಮದಲ್ಲಿ ಜನನ. ಪೃಥಿವೀ, ಜಲ, ಅಗ್ನಿ, ವಾಯು, ಆಕಾಶ ಈ ಕ್ರಮದಲ್ಲಿ ನಾಶ).

ತತ್ರ ತತ್ರ ಹಿ ದೃಶ್ಯಂತೇ ಧಾತವಃ ಪಾಂಚಭೌತಿಕಾಃ ।
ಯೈರಾವೃತಮಿದಂ ಸರ್ವಂ ಜಗತ್ ಸ್ಥಾವರಜಂಗಮಮ್ ॥೧೧॥

ಪಂಚಭೂತಗಳಿಗೆ ಸಂಬಂಧಪಟ್ಟ ಧಾತುಗಳು ಎಲ್ಲಾ ಕಡೆಯಲ್ಲಿಯೂ ಕಂಡುಬರುತ್ತವೆ. ಅವುಗಳಿಂದ ಸ್ಥಾವರ ಜಂಗಮಾತ್ಮಕವಾದ ಜಗತ್ತೆಲ್ಲವೂ ವ್ಯಾಪ್ತವಾಗಿದೆ.

ಇಂದ್ರಿಯೈಃ ಗೃಹ್ಯತೇ ಯದ್ಯತ್ ತತ್ತದ್ವ್ಯಕ್ತಮಿತಿ ಸ್ಮೃತಮ್ ।
ತದವ್ಯಕ್ತಮಿತಿ ಜ್ಞೇಯಂ ಲಿಂಗಗ್ರಾಹ್ಯಮತೀಂದ್ರಿಯಮ್ ॥೧೨॥

ಇಂದ್ರಿಯಗಳಿಗೆ ಗೋಚರವಾಗುವುದೆಲ್ಲವೂ ವ್ಯಕ್ತ ಎಂದು ಕರೆಯಲ್ಪಡುತ್ತದೆ. ಲಿಂಗಗ್ರಾಹ್ಯವಲ್ಲದುದು ಮತ್ತು ಅತೀಂದ್ರಿಯವಾದುದು ಅವ್ಯಕ್ತ ಎಂದು ತಿಳಿಯಬೇಕು.

ಯಥಾಸ್ವಂ ಗ್ರಾಹಕಾನ್ಯೇಷಾಂ ಶಬ್ದಾದೀನಾಮಿಮಾನಿ ತು ।
ಇಂದ್ರಿಯಾಣಿ ಯದಾ ದೇಹೀ ಧಾರಯನ್ನಿಹ ತಪ್ಯತೇ ॥೧೩॥

ಯಾವಾಗ ದೇಹಿಯು ಇಂದ್ರಿಯಗಳನ್ನು ಧರಿಸಿ ಸಂಸಾರದಲ್ಲಿ ತಾಪವನ್ನು ಅನುಭವಿಸುತ್ತಾನೆಯೋ ಆಗ ಇಂದ್ರಿಯಗಳು ತಮ್ಮ ಸ್ವಭಾವಕ್ಕೆ ಅನುಗುಣವಾಗಿ ವಿಷಯಗಳನ್ನು ಗ್ರಹಿಸುತ್ತವೆ (ಆಕಾಶೇಂದ್ರಿಯವಾದ ಶ್ರೋತ್ರವು ಶಬ್ದವನ್ನು ಗ್ರಹಿಸುತ್ತದೆ. ವಾಯ್ವಿಂದ್ರಿಯವಾದ ತ್ವಕ್ ಸ್ಪರ್ಶವನ್ನು ಗ್ರಹಿಸುತ್ತದೆ. ತೇಜ ಇಂದ್ರಿಯವಾದ ಚಕ್ಷುಸ್ಸು ರೂಪವನ್ನು ಗ್ರಹಿಸುತ್ತದೆ. ಜಲೇಂದ್ರಿಯವಾದ ರಸನಯು ರಸವನ್ನು ಗ್ರಹಿಸುತ್ತದೆ. ಭೂಮೀಂದ್ರಿಯವಾದ ಘ್ರಾಣವು ಗಂಧವನ್ನು ಗ್ರಹಿಸುತ್ತದೆ).

ಪರಾವರಜ್ಞೋ ಯಃ ಶಕ್ತಃ ಸ ತು ಭೂತಾನಿ ಪಶ್ಯತಿ ॥೧೪॥

ಪರಾವರ ವಸ್ತುವನ್ನು ತಿಳಿದ ಸಮರ್ಥನಾದ ಯಾವ ಜ್ಞಾನಿಯು ಲೋಕದಲ್ಲಿ ವ್ಯಾಪ್ತನಾದ ಪರಮಾತ್ಮನನ್ನು, ಪರಮಾತ್ಮನಲ್ಲಿ ಆಶ್ರಿತವಾದ ಲೋಕವನ್ನು ನೋಡುತ್ತಾನೆಯೋ ಅವನು ಪಂಚಭೂತಗಳನ್ನು ಸರಿಯಾಗಿ ತಿಳಿಯುತ್ತಾನೆ.

ಪಶ್ಯತಃ ಸರ್ವಭೂತಾನಿ ಸರ್ವಾವಸ್ಥಾಸು ಸರ್ವದಾ ।
ಬ್ರಹ್ಮಭೂತೇನ ಸಂಯೋಗೋ ನಾಶುಭೇನೋಪಪದ್ಯತೇ ॥೧೫॥

ಯಾವನು ಎಲ್ಲಾ ಅವಸ್ಥೆಗಳಲ್ಲಿಯೂ ಯಾವಾಗಲೂ ಸರ್ವಭೂತಗಳನ್ನು ಕಾಣುತ್ತಾನೆಯೋ ಅವನಿಗೆ ವೇದಪ್ರತಿಪಾದಿತವಾದ ಸದ್ಧರ್ಮದ ಜೊತೆಯಲ್ಲಿ ಸಂಯೋಗ ಉಂಟಾಗುತ್ತದೆ. ಅಶುಭಧರ್ಮದ ಸಂಯೋಗವು ಉಂಟಾಗುವುದಿಲ್ಲ.

ಜ್ಞಾನಮೂಲಾತ್ಮಕಂ ಕ್ಲೇಶಮತಿವೃತ್ತಸ್ಯ ಮೋಹಜಮ್ ।
ಲೋಕೋ ಬುದ್ಧಿಪ್ರಕಾಶೇನ ಜ್ಞೇಯಮಾರ್ಗೇಣ ಗಮ್ಯತೇ ॥೧೬॥

ವಿಷಯಗಳಲ್ಲಿ ಅತಿಯಾಗಿ ಆಸಕ್ತನಾದವನಿಗೆ ಜ್ಞಾನಗಳನ್ನು ನಿರ್ಮೂಲಗೊಳಿಸುವ ಮೋಹಜನ್ಯವಾದ ಕ್ಲೇಶವುಂಟಾಗುತ್ತದೆ. ಲೋಕವು ತಮ್ಮ ಬುದ್ಧಿಯು ತೋರಿಸಿದ ವಿಷಯದ ಮಾರ್ಗದಲ್ಲಿ ಒಯ್ಯಲ್ಪಡುತ್ತದೆ.

ಅನಾದಿನಿಧನಂ ಜಂತುಮಾತ್ಮಯೋನಿಂ ಸದಾವ್ಯಯಮ್ ।
ಅನೌಪಮ್ಯಮಮೂರ್ತಂ ಚ ಭಗವಾನಾಹ ಬುದ್ಧಿಮಾನ್ ॥೧೭॥

ಮೇಧಾವಿಯಾದ ಮಾನವನು ಅನಾದಿನಿಧನನಾದ ಆತ್ಮಯೋನಿಯಾದ ಶಾಶ್ವತನಾದ ಅಸದೃಶನಾದ ಅವ್ಯಕ್ತವಾದ ವಸ್ತುವನ್ನು ಪರಮಾತ್ಮನೆಂದು ಕರೆಯುತ್ತಾನೆ.

ತಪೋಮೂಲಮಿದಂ ಸರ್ವಂ ಯನ್ಮಾಂ ವಿಪ್ರಾನುಪೃಚ್ಛಥ ।
ತಪಸಾ ಹಿ ಸಮಾಪ್ನೋತಿ ಯದ್ಯದೇವಾಭಿವಾಂಛಿತಮ್ ॥೧೮॥

ಎಲೈ ಬ್ರಾಹ್ಮಣರೇ, ನೀವು ನನ್ನನ್ನು ಏನನ್ನು ಕೇಳುತ್ತಿದ್ದೀರೋ ಅವೆಲ್ಲವೂ ತಪೋಮೂಲವಾದುದು. ಮಾನವನು ತನಗೆ ಇಷ್ಟವಾದುದೆಲ್ಲವನ್ನೂ ತಪಸ್ಸಿನಿಂದ ಪಡೆಯುತ್ತಾನೆ.

ಇಂದ್ರಿಯಾಣ್ಯೇವ ತತ್ ಸರ್ವಂ ಯೌಸ್ವರ್ಗನರಕಾವುಭೌ ।
ನಿಗೃಹೀತವಿಸೃಷ್ಟಾನಿ ಸ್ವರ್ಗಾಯ ನರಕಾಯ ಚ ॥೧೯॥

ಸ್ವರ್ಗ ಮತ್ತು ನರಕ ಈ ಎರಡು ಲೋಕಗಳಿಗೆ ಪುರುಷನನ್ನು ಇಂದ್ರಿಯಗಳೇ ಕರೆದುಕೊಂಡು ಹೋಗುತ್ತವೆ. ನಿಗೃಹೀತವಾದ ಇಂದ್ರಿಯಗಳು ಸ್ವರ್ಗಕ್ಕೂ, ನಿಯಂತ್ರಣವಿಲ್ಲದ ಇಂದ್ರಿಯಗಳು ನರಕಕ್ಕೂ ಕೊಂಡೊಯ್ಯುತ್ತವೆ.

ತದಿಂದ್ರಿಯಾಣಿ ಸಂಯಮ್ಯ ತಪೋ ಭವತಿ ನಾನ್ಯಥಾ ।
ಏಷ ಯೋಗವಿಧಿಃ ಕೃತ್ಸ್ನೋ ಯಾವದಿಂದ್ರಿಯಧಾರಣಮ್ ।
ಏತನ್‌ಮೂಲಂ ಹಿ ತಪಸಃ ಸ್ವರ್ಗಸ್ಯ ನರಕಸ್ಯ ಚ ॥೨೦॥

ಆದ್ದರಿಂದ ಇಂದ್ರಿಯಗಳನ್ನು ನಿಗ್ರಹಿಸಿದರೆ ಮಾತ್ರ ತಪಸ್ಸು ಸಾಧ್ಯವಾಗುತ್ತದೆ. ಬೇರೆ ರೀತಿಯಲ್ಲಿ ಆಗುವುದಿಲ್ಲ. ಇಂದ್ರಿಯಧಾರಣೆಯೇ ಸಮಸ್ತ ಯೋಗವಿಧಿಗಳ ಉದ್ದೇಶವಾಗಿದೆ. ಈ ಇಂದ್ರಿಯಗಳೇ ತಪಸ್ಸಿಗೂ, ಸ್ವರ್ಗಕ್ಕೂ ಮತ್ತು ನರಕಕ್ಕೂ ಕಾರಣಗಳಾಗಿವೆ.

ಇಂದ್ರಿಯಾಣಾಂ ಪ್ರಸಂಗೇನ ದೋಷಮಾರ್ಚ್ಛತ್ಯಸಂಶಯಮ್ ।
ಸನ್ನಿಯಮ್ಯ ತು ತಾನ್ಯೇವ ತತಃ ಸಿದ್ಧಿಂ ಸಮಾಪ್ನುಯಾತ್ ॥೨೧॥

ಇಂದ್ರಿಯಗಳನ್ನು ಅತಿಯಾಗಿ ವಿಷಯಗಳಲ್ಲಿ ಹರಿಯಲು ಬಿಟ್ಟರೆ ನಿಸ್ಸಂಶಯವಾಗಿ ದೋಷವುಂಟಾಗುತ್ತದೆ. ಅವುಗಳನ್ನು ನಿಗ್ರಹಮಾಡಿದರೆ ಮಾತ್ರ ಅದರಿಂದ ಸಿದ್ಧಿ ಉಂಟಾಗುತ್ತದೆ.

ಷಣ್ಣಾಮಾತ್ಮನಿ ಯೋಜ್ಯಾನಾಮೈಶ್ವರ್ಯಂ ಯೋಽಧಿಗಚ್ಛತಿ ।
ನ ಸ ಪಾಪೈಃ ಕುತೋಽನರ್ಥೈರ್ಯುಜ್ಯತೇ ವಿಜಿತೇಂದ್ರಿಯಃ ॥೨೨॥

ಪರಮಾತ್ಮನಲ್ಲಿ ಯೋಜಿಸಲ್ಪಡಬೇಕಾದ ಆರು ಇಂದ್ರಿಯಗಳ ಮೇಲೆ (ಮನಸ್ಸು ಮತ್ತು ಐದು ಜ್ಞಾನೇಂದ್ರಿಯಗಳ ಮೇಲೆ) ಯಾರು ಪ್ರಭುತ್ವವನ್ನು ಹೊಂದುತ್ತಾನೆಯೋ ಅಂತಹ ಜಿತೇಂದ್ರಿಯನಾದವನು ಪಾಪದಿಂದ ಯುಕ್ತನಾಗುವುದಿಲ್ಲ. ಇನ್ನು ಅವನಿಗೆ ದುಃಖವು ಎಲ್ಲಿಂದ ಬರಬೇಕು?

ರಥಂ ಶರೀರಂ ಪುರುಷಸ್ಯ ದೃಷ್ಟ-
ಮಾತ್ಮಾನಿಯತೇಂದ್ರಿಯಾಣ್ಯಾಹುರಶ್ವಾನ್ ।
ತೈರಪ್ರಮತ್ತಃ ಕುಶಲೀ ಸದಶ್ವೈಃ
ದಾಂತೈಃ ಸುಖಂ ಯಾತಿ ರಥೀವ ಧೀರಃ ॥೨೩॥

ಮನುಷ್ಯನ ಶರೀರವೇ ಒಂದು ರಥವೆಂದು ಜ್ಞಾನಿಗಳಿಂದ ದೃಷ್ಟವಾಗಿದೆ. ಪರಮಾತ್ಮನು ನಿಯಂತ್ರಿಸುವ ರಥಿಕ. ಇಂದ್ರಿಯಗಳನ್ನು ಅಶ್ವಗಳೆಂದು ಕರೆಯುತ್ತಾರೆ. ಆ ಇಂದ್ರಿಯಗಳ ವಿಷಯದಲ್ಲಿ ಪ್ರಮಾದವನ್ನು ಹೊಂದದೇ ಕುಶಲನಾಗಿದ್ದರೆ ಪಳಗಿಸಿದ ಸದಶ್ವಗಳಿಂದ ರಥಿಕನು ಸುಖವಾಗಿ ಪ್ರಯಾಣ ಮಾಡುವಂತೆ ಧೀರನಾದ ಪುರುಷನು ಸುಖವಾಗಿ ಪ್ರಯಾಣವನ್ನು ಮಾಡುತ್ತಾನೆ.

ಷಣ್ಣಾಮಾತ್ಮನಿ ಯುಕ್ತಾನಾಮಿಂದ್ರಿಯಾಣಾಂ ಪ್ರಮಾಥಿನಾಮ್ ।
ಯೋ ಧೀರೋ ಧಾರಯೇದ್ ರಶ್ಮೀನ್ ಸ ಸ್ಯಾತ್ ಪರಮಸಾರಥಿಃ ॥

ಮನುಷ್ಯನನ್ನು ಕ್ಷೋಭೆಗೊಳಿಸುವ ಈ ಆರು ಇಂದ್ರಿಯಗಳನ್ನು ಯಾವ ಧೀರನು ಪರಮಾತ್ಮನಲ್ಲಿ ಯೋಜಿಸುತ್ತಾನೆಯೋ ಅವನೇ ಕಡಿವಾಣವನ್ನು ಹಿಡಿದ ಶ್ರೇಷ್ಠ ಸಾರಥಿ.

ಇಂದ್ರಿಯಾಣಾಂ ಪ್ರಸೃಷ್ಟಾನಾಂ ಹಯಾನಾಮಿವ ವರ್ತ್ಮಸು ।
ಧೃತಿಂ ಕುರ್ವೀತ ಸಾರಥ್ಯೇ ಧೃತ್ಯಾ ತಾನಿ ಜಯೇದ್ ಧ್ರುವಮ್ ॥೨೫॥

ಅಶ್ವಗಳು ಮಾರ್ಗದಲ್ಲಿ ಹೋಗುವಂತೆ ವಿಷಯದ ಮಾರ್ಗದಲ್ಲಿ ಹೋಗುವ ಇಂದ್ರಿಯಗಳನ್ನು ಸಾರಥಿಯು ಧೈರ್ಯದಿಂದ ನಿಯಂತ್ರಿಸಬೇಕು. ಧೈರ್ಯದಿಂದ ಇಂದ್ರಿಯಗಳ ಜಯವು ಖಂಡಿತವಾಗಿ ಸಾಧ್ಯವಾಗುತ್ತದೆ.

ಇಂದ್ರಿಯಾಣಾಂ ವಿಚರತಾಂ ಯನ್ಮನೋऽನುವಿಧೀಯತೇ ।
ತದಸ್ಯ ಹರತೇ ಬುದ್ಧಿಂ ನಾವಂ ವಾಯುರಿವಾಂಭಸಿ ॥೨೬॥

ಯಾವನ ಮನಸ್ಸು ಇಂದ್ರಿಯಗಳು ಹೋದ ದಾರಿಯಲ್ಲಿಯೇ ಹೋಗುತ್ತವೆಯೋ ಅವನ ಮನಸ್ಸು ಜಲದಲ್ಲಿ ವಾಯುವು ನೌಕೆಯನ್ನು ಎಳೆದುಕೊಂಡು ಹೋದಂತೆ ಅವನ ಬುದ್ಧಿಯನ್ನು ಎಳೆದುಕೊಂಡು ಹೋಗುತ್ತದೆ (ನಾಶಮಾಡುತ್ತದೆ).

ಯೇಷು ವಿಪ್ರತಿಪದ್ಯಂತೇ ಷಟ್‌ಸ್ವಮೋಹಾತ್ ಫಲಾಗಮಮ್ ।
ಜ್ಞಾತ್ವೈಷ್ವಧ್ಯಾಯಾಸಿತೋ ಧ್ಯಾಯೀ ಏಂದತೇ ಧ್ಯಾನಜಂ ಫಲಮ್ ॥

ಯಾವ ಆರು ಇಂದ್ರಿಯಗಳಲ್ಲಿ ಮೋಹವಿಲ್ಲದೆ ವರ್ತಿಸುವುದರಿಂದ ಫಲಪ್ರಾಪ್ತಿಯನ್ನು ವಿಶೇಷವಾಗಿ ಪಡೆಯುತ್ತಾರೆಯೋ, ಆ ಆರು ಇಂದ್ರಿಯಗಳನ್ನು ತಿಳಿದು ಅವುಗಳಲ್ಲಿ ಅಧಿಷ್ಠಿತನಾಗಿ ಪರಮಾತ್ಮನನ್ನು ಧ್ಯಾನಮಾಡುವವನು ಪರಮ ಸುಖವನ್ನು ಪಡೆಯುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟನವತ್ಯಧಿಕಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಪತಿವ್ರತಾಮಾಹಾತ್ಮ್ಯೇ
ತ್ರಯೋವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ತೆಂಟನೆಯ ಅಧ್ಯಾಯ ಮುಗಿಯಿತು

★ ★ ★ ★

ನೂರ ತೊಂಬತ್ತೊಂಬತ್ತನೆಯ ಅಧ್ಯಾಯ

ಧರ್ಮವ್ಯಾಧನಿಂದ ಸತ್ತ್ವಾದಿ ಗುಣದಿಂದ ಉಂಟಾಗುವ ಗುಣಗಳ ವರ್ಣನೆ.

ಮಾರ್ಕಂಡೇಯಃ

ಏವಂ ತು ಸೂಕ್ಷ್ಮೇ ಕಥಿತೇ ಧರ್ಮವ್ಯಾಧೇನ ಭಾರತ ।
ಬ್ರಾಹ್ಮಣಃ ಸ ಪುನಃ ಸೂಕ್ಷ್ಮಂ ಪಪ್ರಚ್ಛ ಸುಸಮಾಹಿತಃ ॥೧॥

ಮಾರ್ಕಂಡೇಯ– ಎಲೈ ಯುಧಿಷ್ಠಿರನೇ, ಧರ್ಮವ್ಯಾಧನಿಂದ ಇಂತಹ ಸೂಕ್ಷ್ಮ ವಿಷಯವು ಹೇಳಲ್ಪಡುತ್ತಿರಲು ಆ ಬ್ರಾಹ್ಮಣನು ಸಮಾಧಾನವುಳ್ಳವನಾಗಿ ಇನ್ನೊಂದು ಸೂಕ್ಷ್ಮ ವಿಷಯದಲ್ಲಿ ಹೀಗೆ ಪ್ರಶ್ನೆಯನ್ನು ಮಾಡಿದನು.

ಸತ್ತ್ವಸ್ಯ ರಜಸಶ್ಚೈವ ತಮಸಶ್ಚ ಯಥಾತಥಮ್ ।
ಗುಣಾಂಸ್ತತ್ತ್ವೇನ ಮೇ ಬ್ರೂಹಿ ಯಥಾವದಿಹ ಪೃಚ್ಛತಃ ॥೨॥

ಸತ್ತ್ವ, ರಜಸ್ಸು ಮತ್ತು ತಮಸ್ಸು ಈ ಮೂರು ಗುಣಗಳಿಂದ ಮನುಷ್ಯನಲ್ಲಿ ಉಂಟಾಗುವ ಗುಣಗಳನ್ನು ಪ್ರಶ್ನೆಯನ್ನು ಕೇಳುತ್ತಿರುವ ನನಗೆ ಯಥಾರ್ಥವಾಗಿ ಹೇಳು.

ವ್ಯಾಧಃ

ಹಂತ ತೇ ಕಥಯಿಷ್ಯಾಮಿ ಯನ್ಮಾಂ ತ್ವಂ ಪರಿಪೃಚ್ಛಸಿ ।
ಏಷಾಂ ಗುಣಾನ್ ಪೃಥಕ್ತ್ವೇನ ನಿಬೋಧ ಗದತೋ ಮಮ ॥೩॥

ವ್ಯಾಧ– ಸಂತೋಷ. ನೀನು ಏನನ್ನು ಕೇಳುತ್ತಿದ್ದೀಯೋ ಅಂತಹ ಸತ್ತ್ವಾದಿ ಗುಣಗಳಿಂದ ಉಂಟಾಗುವ ಗುಣಗಳನ್ನು ಬೇರೆ ಬೇರೆಯಾಗಿ ಹೇಳುವೆನು. ನಾನು ಹೇಳಿದಂತೆ ಅದನ್ನು ಕೇಳು.

ಮೋಹಾತ್ಮಕಂ ತಮಸ್ತೇಷಾಂ ರಜ ಏಷಾಂ ಪ್ರವರ್ತಕಮ್ ।
ಪ್ರಕಾಶಬಹುಲತ್ವಾಚ್ಚ ಸತ್ತ್ವಂ ಜ್ಯಾಯ ಇಹೋಚ್ಯತೇ ॥೪॥

ಸತ್ತ್ವಾದಿ ಮೂರುಗುಣಗಳಲ್ಲಿ ತಮೋಗುಣವು ಮೋಹವನ್ನು ಉಂಟುಮಾಡುವಂತಹದು. ರಜೋಗುಣವು ವಿಷಯದಲ್ಲಿ ಪ್ರವೃತ್ತಿಯನ್ನು ಉಂಟುಮಾಡುವಂತಹುದು. ಸತ್ತ್ವವು ಜ್ಞಾನವನ್ನು ಉಂಟುಮಾಡುವ ಕಾರಣದಿಂದ ಅದು ಶ್ರೇಷ್ಠವಾದುದು ಎಂದು ಹೇಳಲ್ಪಡುತ್ತದೆ.

ಅವಿದ್ಯಾಬಹುಲೋ ಮೂಢಃ ಸ್ವಪ್ನಶೀಲೋ ವಿಚೇತನಃ ।
ದುರ್ಹೃಷೀಕಸ್ತಮೋಧ್ವಸ್ತಃ ಸಕ್ರೋಧಸ್ತಾಮಸೋಽಲಸಃ ॥೫॥

ತಾಮಸನಾದ ಮಾನವನು ತಮೋಗುಣದಿಂದ ಪೀಡಿತನಾಗಿ ಬಹಳ ಅಜ್ಞಾನವನ್ನು ಹೊಂದಿ ಮೂಢನೂ, ನಿದ್ರಾಳುವೂ, ವಿಚೇತನನೂ, ದುಷ್ಟೇಂದ್ರಯಗಳನ್ನು ಹೊಂದಿದವನೂ, ಕ್ರೋಧವುಳ್ಳವನೂ, ಆಲಸ್ಯ ಉಳ್ಳವನೂ ಆಗಿರುತ್ತಾನೆ.

ಪ್ರವೃತ್ತವಾಕ್ಯೋ ಮಂತ್ರೀ ಚ ಯೋಽನುರಾಗ್ಯಭ್ಯಸೂಯಕಃ ।
ವಿಧಿತ್ಸಮಾನೋ ವಿಪ್ರರ್ಷೇ ಸ್ತಬ್ಧೋ ಮಾನೀ ಸ ರಾಜಸಃ ॥೬॥

ಎಲೈ ವಿಪ್ರರ್ಷಿಗಳೇ, ರಾಜಸನಾದವನು ಹೆಚ್ಚು ಮಾತನಾಡುವವನೂ, ಮಂತ್ರಾಲೋಚನೆಯನ್ನು ಮಾಡುವವನೂ, ಅನುರಾಗ ಮತ್ತು ಅಸೂಯೆಯನ್ನು ಉಳ್ಳವನೂ, ಯಾವಾಗಲೂ ಏನಾದರೂ ಪ್ರವೃತ್ತಿಯನ್ನು ಮಾಡುವವನೂ, ಅಹಂಕಾರ ಉಳ್ಳವನೂ ಮತ್ತು ಗರ್ವವುಳ್ಳವನೂ ಆಗಿರುತ್ತಾನೆ.

ಪ್ರಕಾಶಬಹುಲೋ ಧೀರೋ ನಿರ್ವಿತ್ತೋಽನಸೂಯಕಃ ।
ಅಕ್ರೋಧನೋ ನರೋ ಧೀಮಾನ್ ದಾಂತಶ್ಚೈವ ಸ ಸಾತ್ತ್ವಿಕಃ ॥೭॥

ಸಾತ್ವಿಕನಾದವನು ಬಹಳ ಜ್ಞಾನವನ್ನು ಹೊಂದಿದವನೂ, ಧೀರನೂ, ಸಂಶಯ ರಹಿತನೂ, ಅಸೂಯಾ ರಹಿತನೂ, ಕ್ರೋಧರಹಿತನೂ, ಮೇಧಾವಿಯೂ, ಇಂದ್ರಿಯ ನಿಗ್ರಹವುಳ್ಳವನೂ ಆಗಿರುತ್ತಾನೆ.

ಸಾತ್ತ್ವಿಕಸ್ತ್ವಥ ಸಂಬುದ್ಧೋ ಲೋಕವೃತ್ತೇರ್ನ ಕ್ಲಿಶ್ಯತೇ ।
ಯದಾ ಬುಧ್ಯತಿ ಬೋದ್ಧವ್ಯಂ ಲೋಕವೃತ್ತಂ ಜುಗುಪ್ಸತೇ ॥೮॥

ಒಳ್ಳೆಯ ಜ್ಞಾನವನ್ನು ಹೊಂದಿದ ಸಾತ್ವಿಕನು ಲೋಕದ ನಡತೆಯಿಂದ ಕ್ಲೇಶವನ್ನು ಪಡುವುದಿಲ್ಲ. ಅವನು ತಿಳಿಯಬೇಕಾದುದನ್ನೆಲ್ಲಾ ತಿಳಿದಾಗ ಲೋಕವೃತ್ತವನ್ನು ನೋಡಿ ಜುಗುಪ್ಸೆ ಪಡುತ್ತಾನೆ.

ವೈರಾಣ್ಯಸ್ಯ ಚ ರೂಪಂ ತು ಪೂರ್ವಮೇವ ಪ್ರವರ್ತತೇ ।
ಮೃದುರ್ಭವತ್ಯಹಂಕಾರಃ ಪ್ರಸೀದತ್ಯಾರ್ಜವಂ ಚ ಯತ್ ।
ತತೋಽಸ್ಯ ಸರ್ವದ್ವಂದ್ವಾನಿ ಪ್ರಶಾಮ್ಯಂತಿ ಪರಸ್ಪರಮ್ ॥೯॥

ಈ ಲೋಕವೃತ್ತಕ್ಕೆ ವಿರುದ್ಧವಾದ ಚಿಹ್ನೆಗಳು ಅವನಲ್ಲಿ ಮೊದಲೇ ಕಾಣಿಸಿಕೊಳ್ಳುತ್ತವೆ. ಅಹಂಕಾರವುಳ್ಳವನು ಮೃದುವಾಗುತ್ತಾನೆ. ಮನಸ್ಸು ಪ್ರಸನ್ನವಾಗುತ್ತದೆ. ಆರ್ಜವವನ್ನು ಹೊಂದಿದವನಾಗುತ್ತಾನೆ. ಅನಂತರ ಅವನು ಎಲ್ಲಾ ದ್ವಂದ್ವಗಳನ್ನೂ ತ್ಯಜಿಸಿ ಶಾಂತಿಯನ್ನು ಹೊಂದುತ್ತಾನೆ.

ನ ಚಾಸ್ಯ ಸಂಶಯೋ ನಾಮ ಕ್ವಚಿದ್ ಭವತಿ ಕಶ್ಚನ ॥೧೦॥

ಅವನಿಗೆ ಎಲ್ಲಿಯೂ ಯಾವ ಸಂಶಯವೂ ಇರುವುದಿಲ್ಲ.

ಶೂದ್ರಯೋನೌ ಹಿ ಜಾತಸ್ಯ ಸದ್ಗುಣಾನುಪತಿಷ್ಠತಃ ।
ವೈಶ್ಯತ್ವಂ ಲಭತೇ ಬ್ರಹ್ಮನ್ ಕ್ಷತ್ರಿಯತ್ವಂ ತಥೈವ ಚ ॥೧೧॥

ಶೂದ್ರಯೋನಿಯಲ್ಲಿ ಹುಟ್ಟಿ ಸದ್ಗುಣಗಳನ್ನು ಆಶ್ರಯಿಸಿದವನು ವೈಶ್ಯಜನ್ಮವನ್ನು ಪಡೆಯುತ್ತಾನೆ. ಎಲೈ ಬ್ರಾಹ್ಮಣರೇ, ಹಾಗೆಯೇ ಅವನು ಕ್ಷತ್ರಿಯ ಜನ್ಮವನ್ನೂ ಪಡೆಯುತ್ತಾನೆ.

ಆರ್ಜವೇ ವರ್ತಮಾನಸ್ಯ ಬ್ರಾಹ್ಮಣ್ಯಮಭಿಜಾಯತೇ ।
ಗುಣಾಸ್ತೇ ಕೀರ್ತಿತಾಃ ಸರ್ವೇ ಕಿಂ ಭೂಯಃ ಶ್ರೋತುಮಿಚ್ಛಸಿ ।
ಏತೈರ್ಗುಣೈರ್ವಿಹೀನಸ್ಯ ವಿಪ್ರಸ್ಯಾಪಿ ನ ವಿಪ್ರತಾ ॥೧೨॥

ಅವನು ಆರ್ಜವವನ್ನು ಹೊಂದಿದ್ದರೆ ಬ್ರಾಹ್ಮಣ ಜನ್ಮವು ಲಭಿಸುತ್ತದೆ. ನೀನು ಕೇಳಿದ ಎಲ್ಲಾ ಗುಣಗಳನ್ನೂ ನಿನಗೆ ಹೇಳಿದ್ದೇನೆ. ಇನ್ನು ಏನನ್ನು ಕೇಳಲು ಬಯಸುತ್ತೀಯೆ? ಈ ಗುಣಗಳಿಂದ ರಹಿತನಾದ ಬ್ರಾಹ್ಮಣನು ಬ್ರಾಹ್ಮಣನೇ ಅಲ್ಲ.

ಬ್ರಾಹ್ಮಣಃ

ಪಾರ್ಥಿವಂ ಧಾತುಮಾಸಾದ್ಯ ಶಾರೀರೋऽಗ್ನಿಃ ಕಥಂ ಭವೇತ್ ।
ಅವಕಾಶವಿಶೇಷೇಣ ಕಥಂ ವರ್ತಯತೇऽನಿಲಃ ॥೧೩॥

ಬ್ರಾಹ್ಮಣ– ಶರೀರದಲ್ಲಿ ಪೃಥಿವಿಯ ಅಂಶದ ಜೊತೆಯಲ್ಲಿ ಬೆರೆತು ಅಗ್ನಿಯು ಹೇಗೆ ಇರುತ್ತದೆ? ವಾಯುವಾದರೂ ಹೇಗೆ ಅವಕಾಶವಿಶೇಷವನ್ನು ಪಡೆದು ಸಂಚರಿಸುತ್ತದೆ?

ಮಾರ್ಕಂಡೇಯಃ

ಪ್ರಶ್ನಮೇತಂ ಸಮುದ್ದಿಷ್ಟಂ ಬ್ರಾಹ್ಮಣೇನ ಯುಧಿಷ್ಠಿರ ।
ವ್ಯಾಧಸ್ತು ಕಥಯಾಮಾಸ ಬ್ರಾಹ್ಮಣಾಯ ಮಹಾತ್ಮನೇ ॥೧೪॥

ಮಾರ್ಕಂಡೇಯ– ಎಲೈ ಯುಧಿಷ್ಠಿರನೇ, ಬ್ರಾಹ್ಮಣನು ಕೇಳಿದ ಈ ಪ್ರಶ್ನೆಗೆ ವ್ಯಾಧನಾದರೂ ಮಹಾತ್ಮನಾದ ಬ್ರಾಹ್ಮಣನಿಗೆ ಉತ್ತರವನ್ನು ಕೊಟ್ಟನು.

ವ್ಯಾಧಃ

ಮೂರ್ಧಾನಮಾಶ್ರಿತೋ ವಹ್ನಿಃ ಶರೀರಂ ಪರಿಪಾಲಯನ್ ।
ಪ್ರಾಣೋ ಮೂರ್ಧನಿ ಚಾಗ್ನೌ ಚ ವರ್ತಮಾನೋ ವಿಚೇಷ್ಟತೇ ॥೧೫॥

ವ್ಯಾಧ– ಅಗ್ನಿಯು ಶಿರಸ್ಸನ್ನು ಆಶ್ರಯಿಸಿ ಶರೀರವನ್ನು ಪರಿಪಾಲಿಸುತ್ತದೆ. ಮುಖ್ಯಪ್ರಾಣನು ಶಿರಸ್ಸಿನಲ್ಲಿಯೂ ಅಗ್ನಿಗಳಲ್ಲಿಯೂ ಇದ್ದು ಎಲ್ಲಾ ಚೇಷ್ಟೆಗಳನ್ನು ಮಾಡಿಸುತ್ತಾನೆ.

ಭೂತಂ ಭವ್ಯಂ ಭವಿಷ್ಯಂ ಚ ಸರ್ವಂ ಪ್ರಾಣೇ ಪ್ರತಿಷ್ಠಿತಮ್ ।
ಶ್ರೇಷ್ಠಂ ತದೇವ ಭೂತಾನಾಂ ಬ್ರಹ್ಮ ಜ್ಯೋತಿರುಪಾಸ್ಮಹೇ ॥೧೬॥

ಭೂತ, ವರ್ತಮಾನ ಮತ್ತು ಭವಿಷ್ಯ ಎಲ್ಲವೂ ಮುಖ್ಯಪ್ರಾಣನನ್ನು ಆಶ್ರಯಿಸಿದೆ. ಎಲ್ಲ ಜೀವರಿಗಿಂತಲೂ ಅವನು ಶ್ರೇಷ್ಠನಾದವನು. ಅವನನ್ನು ಜ್ಯೋತೀರೂಪನಾದ ಪ್ರತ್ಯಕ್ಷ ಬ್ರಹ್ಮನೆಂದು ಉಪಾಸನೆ ಮಾಡುತ್ತೇವೆ.

ಸ ಜಂತುಃ ಸರ್ವಭೂತಾತ್ಮಾ ಪುರುಷಃ ಸ ಸನಾತನಃ ।
ಮಹಾನ್ ಬುದ್ಧಿರಹಂಕಾರೋ ಭೂತಾನಾಂ ವಿಷಯಶ್ಚ ಸಃ ॥೧೭॥

ಶರೀರಮಧ್ಯೆ ನಾಭಿಃ ಸ್ಯಾನ್ನಾಭ್ಯಾಮಗ್ನಿಃ ಪ್ರತಿಷ್ಠಿತಃ ।
ವಿಷತ್ವಗ್ನಿರಪಾನೇನ ಪ್ರಾಣೇನ ಪರಿಪಾಲ್ಯತೇ ।
ಮಧ್ಯೇ ನಾಭ್ಯಾಂ ತು ಜಠರೇಗ್ನಿಃ ಪ್ರತಿಷ್ಠಿತಃ ।
ಅವ್ಯಕ್ತಂ ಸತ್ತ್ವಸಂಜ್ಞಂ ಚ ಜೀವಃ ಕಾಲಃ ಸ ಚೈವ ಹಿ ।
ಪ್ರಕೃತಿಃ ಪುರುಷಶ್ಚೈವ ಪ್ರಾಣ ಏವ ದ್ವಿಜೋತ್ತಮ ॥೧೮॥

ಅವನು ಸರ್ವಜೀವರಿಗೆ ನಿಯಾಮಕನಾಗಿದ್ದಾನೆ. ಅವನು ವೇದ ಪ್ರತಿಪಾದ್ಯನಾದವನು. ಅವನು ಮಹಾನ್, ಬುದ್ಧಿ, ಪುರುಷ, ಮೊದಲಾದ ಶಬ್ದಗಳಿಂದ ವಾಚ್ಯನಾದವನು. ಶರೀರದ ಮಧ್ಯೆ ಜಠರದ ಮಧ್ಯೆ ನಾಭಿಯಲ್ಲಿ ಅಗ್ನಿಯು ಪ್ರತಿಷ್ಠಿತನಾಗಿದ್ದಾನೆ. ಅವನು ಪ್ರಾಣದಿಂದ ಪರಿಪಾಲಿಸಲ್ಪಡುತ್ತಾನೆ. ಅಹಂಕಾರ ಶಬ್ದದಿಂದಲೂ ವಾಚ್ಯನಾದವನು. ಎಲೈ ದ್ವಿಜೋತ್ತಮನೇ, ಅವನನ್ನು ಅವ್ಯಕ್ತ, ತತ್ತ್ವ, ಜೀವ, ಕಾಲ, ಪ್ರಕೃತಿ, ಪುರುಷ, ಪ್ರಾಣ ಮೊದಲಾದ ಶಬ್ದಗಳಿಂದ ಕರೆಯುತ್ತಾರೆ.

ಜಾಗರ್ತಿ ಸ್ವಪ್ನಕಾಲೇ ಚ ಸ್ವಪ್ನೇ ಸ್ವಪ್ನಾಯತೇ ಚ ಸಃ ।
ಜಾಗ್ರತ್ಸು ಬಲಮಾಧತ್ತೇ ಚೇಷ್ಟತ್ಸು ಚೇಷ್ಟಯತ್ಯಪಿ ॥೧೯॥

ಅವನು ಜೀವನು ಸ್ವಪ್ನವನ್ನು ನೋಡುವ ಸಮಯದಲ್ಲಿ ಎಚ್ಚರದಿಂದಿರುತ್ತಾನೆ ಮತ್ತು ಜೀವನಿಗೆ ಸ್ವಾಪ್ನ ಪದಾರ್ಥಗಳನ್ನು ತೋರಿಸುತ್ತಾನೆ. ಜೀವನು ಎಚ್ಚರಗೊಂಡಾಗ ಅವನಿಗೆ ಬಲವನ್ನು ನೀಡುತ್ತಾನೆ. ಜೀವನು ಕಾರ್ಯಗಳನ್ನು ಮಾಡುವಾಗ ಅವನು ಮಾಡಿಸುತ್ತಾನೆ.

ತಸ್ಮಿನ್ ನಿರುದ್ಧೇ ವಿಪ್ರೇಂದ್ರ ಮೃತ ಇತ್ಯಭಿಧೀಯತೇ ।
ತ್ಯಕ್ತ್ವಾ ಶರೀರಂ ಭೂತಾತ್ಮಾ ಪುನರನ್ಯತ್ ಪ್ರಪದ್ಯತೇ ॥೨೦॥

ಏವಂ ತ್ವಿಹ ಸ ಸರ್ವತ್ರ ಪ್ರಾಣೇನ ಪರಿಪಾಲ್ಯತೇ ॥೨೧॥

ಎಲೈ ವಿಪ್ರೇಂದ್ರರೇ, ಅವನು ಶರೀರದಲ್ಲಿ ತನ್ನ ವ್ಯಾಪಾರವನ್ನು ನಿಲ್ಲಿಸಿದರೆ ಜೀವನನ್ನು ಮೃತನೆಂದು ಕರೆಯುತ್ತಾರೆ. ಜೀವನು ಆ ಶರೀರವನ್ನು ಬಿಟ್ಟು ಪಂಚಭೂತಗಳ ಜೊತೆಯಲ್ಲಿ ಇನ್ನೊಂದು ಶರೀರವನ್ನು ಹೊಂದುತ್ತಾನೆ. ಹೀಗೆ ಜೀವನು ಈ ಶರೀರದಲ್ಲಿಯೂ ಮತ್ತು ಎಲ್ಲಾ ಶರೀರದಲ್ಲಿಯೂ ಮುಖ್ಯಪ್ರಾಣನಿಂದ ರಕ್ಷಿಸಲ್ಪಡುತ್ತಾನೆ.

ಪೃಷ್ಠತಸ್ತು ಸಮಾನೇನ ಸ್ವಾಂ ಸ್ವಾಂ ಗತಿಮುಪಾಶ್ರಿತಃ ॥೨೨॥

ವಸ್ತಿಮೂಲೇ ಗುದೇ ಚೈವ ಪಾವಕಂ ಸಮುಪಾಶ್ರಿತಃ ।
ವಹನ್ ಮೂತ್ರಂ ಪುರೀಷಂ ವಾಪ್ಯಪಾನಃ ಪರಿವರ್ತತೇ ॥೨೩॥

ಮುಖ್ಯಪ್ರಾಣನು ಶರೀರದ ಹಿಂಭಾಗದಲ್ಲಿ ಸಮಾನರೂಪದಿಂದ ಸಂಚರಿಸಿ ತನ್ನ ಕಾರ್ಯಗಳನ್ನು ಮಾಡುತ್ತಾನೆ. ಅಪಾನನಾಗಿ ವಸ್ತಿಮೂಲ ಮತ್ತು ಗುದದಲ್ಲಿರುವ ಅಗ್ನಿಯಲ್ಲಿ ಆಶ್ರಿತನಾಗಿ ಮೂತ್ರ ಪುರೀಷಗಳನ್ನು ಸಾಗಿಸುತ್ತಾನೆ.

ಪ್ರಯತ್ನೇ ಕರ್ಮಣಿ ಬಲೇ ಸ(ಯ) ಏಷ ತ್ರಿಷು ವರ್ತತೇ ।
ಉದಾನಮಿತಿ ತಂ ಪ್ರಾಹುರಧ್ಯಾತ್ಮವಿದುಷೋ ಜನಾಃ ॥೨೪॥

ಪ್ರಯತ್ನ, ಕರ್ಮ ಮತ್ತು ಬಲ ಇವುಗಳಲ್ಲಿ ಯಾವ ಮುಖ್ಯಪ್ರಾಣನ ರೂಪವು ಜೀವನನ್ನು ಪ್ರೇರಿಸುವುದೋ ಆ ರೂಪವನ್ನು ಉದಾನನೆಂದು ಅಧ್ಯಾತ್ಮವಿದ್ಯೆಯನ್ನು ಬಲ್ಲಮಾನವರು ಹೇಳುತ್ತಾರೆ.

ಸಂಧೌ ಸಂಧೌ ಸನ್ನಿವಿಷ್ಟಃ ಸರ್ವೇಷ್ವಪಿ ತಥಾನಿಲಃ ।
ಶರೀರೇಷು ಮನುಷ್ಯಾಣಾಂ ವ್ಯಾನ ಇತ್ಯುಪದಿಶ್ಯತೇ ॥೨೫॥

ಮನುಷ್ಯನ ದೇಹದ ಸರ್ವಸಂಧಿಗಳಲ್ಲೂ ಇರುವ ಮುಖ್ಯಪ್ರಾಣನ ರೂಪವನ್ನು ವ್ಯಾನ ಎಂದು ಕರೆಯುತ್ತಾರೆ.

ಧಾತುಷ್ವಗ್ನಿಸ್ತು ವಿತತಃ ಸ ತು ವಾಯುಸಮೀರಿತಃ ।
ರಸಾನ್ ಧಾತೂಂಶ್ಚ ದೋಷಾಂಶ್ಚ ವರ್ತಯನ್ ಪರಿಧಾವತಿ ॥೨೬॥

ಶರೀರಧಾತುಗಳಲ್ಲಿ ಅಗ್ನಿಯು ವ್ಯಾಪಿಸಿದೆ. ಆ ಅಗ್ನಿಯಾದರೂ ವಾಯುವಿನಿಂದ ಪ್ರೇರಿತನಾಗಿ ಶರೀರದ ರಸಗಳು, ಧಾತುಗಳು ಮತ್ತು ದೋಷಗಳನ್ನು ಕಾರ್ಯಪ್ರವೃತ್ತವಾಗುವಂತೆ ಮಾಡಿ ಶರೀರದಲ್ಲೆಲ್ಲಾ ಸಂಚರಿಸುತ್ತಾನೆ.

ಪ್ರಾಣಾನಾಂ ಸನ್ನಿಪಾತಾತ್ತು ಸನ್ನಿಪಾತಃ ಪ್ರಜಾಯತೇ ।
ಸೋಷ್ಮಾ ಸೋಗ್ನಿರಿತಿ ಜ್ಞೇಯೋ ಯೋಽನ್ನಂ ಪಚತಿ ದೇಹಿನಾಮ್॥೨೭॥

ಈ ಐದು ವಾಯುಗಳು ತಮ್ಮ ಮಾರ್ಗವನ್ನು ಬದಲಿಸಿ ಸಂಚಾರವನ್ನು ಮಾಡಿದರೆ ಆಗ ಸನ್ನಿಪಾತ ಎಂಬ ವ್ಯಾಧಿಯು ಉಂಟಾಗುತ್ತದೆ. ಉಷ್ಣಸ್ಪರ್ಶದಿಂದ ಕೂಡಿದ ವಾಯುವೇ ಅಗ್ನಿ ಎಂದು ತಿಳಿಯಬೇಕು. ಅವನು ದೇಹಿಗಳಲ್ಲಿ ಅನ್ನವನ್ನು ಪಚನ ಮಾಡುತ್ತಾನೆ.

ಅಪಾನೋದಾನಯೋರ್ಮಧ್ಯೇ ಪ್ರಾಣವ್ಯಾನೌ ಸಮಾಹಿತೌ ।
ಸಮನ್ವಿತಸ್ತ್ವಧಿಷ್ಠಾನಂ ಸಮ್ಯಕ್ ಪಚತಿ ಪಾವಕಃ ॥೨೮॥

ಅಪಾನ ಉದಾನರ ಮಧ್ಯೆ ಪ್ರಾಣವ್ಯಾನಗಳು ಪ್ರತಿಷ್ಠಿತವಾಗಿವೆ. ಚೆನ್ನಾಗಿ ವಾಯುವಿನ ಜೊತೆಯಲ್ಲಿ ಸೇರಿದ ಅಗ್ನಿಯು ತನಗೆ ಅಧಿಷ್ಠಾನವಾದ ಈ ದೇಹವನ್ನು ಪಚನ ಮಾಡುತ್ತಾನೆ (ಬಿಸಿಯಾಗಿ ಇಡುತ್ತಾನೆ).

ತಸ್ಯಾಪಿ ವಾಯುಪರ್ಯಂತಸ್ತಥಾ ಸ್ಯಾದ್ಗುಣಸಂಜ್ಞಿತಃ ।
ಸ್ರೋತಾಂಸಿ ತಸ್ಮಾಜ್ಜಾಯಂತೇ ಸರ್ವಪ್ರಾಣೇಷು ದೇಹಿನಾಮ್ ॥೨೯॥

ಆ ಅಗ್ನಿಯಾದರೂ ಎಲ್ಲಿಯವರೆಗೆ ಶರೀರದಲ್ಲಿ ವಾಯು ಸಂಚಾರವಿರುತ್ತದೆಯೋ ಅಲ್ಲಿಯವರೆಗೆ ತನ್ನ ಗುಣವಾದ ಉಷ್ಣಸ್ಪರ್ಶದ ಜೊತೆಯಲ್ಲಿ ಇರುವವನಾಗಿ ದೇಹಿಗಳಿಗೆ ಎಲ್ಲಕಡೆಯಲ್ಲಿಯೂ ಬೆವರಿನ ರೂಪವಾದ ಪ್ರವಾಹವನ್ನು ಉಂಟುಮಾಡುತ್ತಾನೆ.

ಅಗ್ನಿವೇಗವಹಃ ಪ್ರಾಣೋ ಗುದಾಂತೇ ಪ್ರತಿಹನ್ಯತೇ ।
ಸ ಊರ್ಧ್ವಮಾಗಮ್ಯ ಪುನಃ ಸಮುತ್ ಕ್ಷಿಪತಿ ಪಾವಕಮ್ ॥೩೦॥

ಅಗ್ನಿಯ ವೇಗವನ್ನು ಶರೀರದಲ್ಲಿ ಎಲ್ಲಾ ಕಡೆಗೆ ತೆಗೆದುಕೊಂಡು ಹೋಗುವ ಪ್ರಾಣನು ಗುದದ ಕೊನೆಯಲ್ಲಿ ತನ್ನ ಗತಿಯನ್ನು ಕಳೆದುಕೊಳ್ಳುತ್ತಾನೆ. ಅವನು ಪುನಃ ಅಲ್ಲಿಂದ ಊರ್ಧ್ವಮುಖವಾಗಿ ಬಂದು ಅಗ್ನಿಯನ್ನು ಉತ್ತೇಜನಗೊಳಿಸುತ್ತಾನೆ.

ಪಕ್ವಾಶಯಸ್ತ್ವಧೋ ನಾಭ್ಯಾಂ ಊರ್ಧ್ವಮಾಮಾಶಯಃ ಸ್ಥಿತಃ ।
ನಾಭಿಮಧ್ಯೇ ಶರೀರಸ್ಯ ಪ್ರಾಣಾಃ ಸರ್ವೇ ಪ್ರತಿಷ್ಠಿತಾಃ ॥೩೧॥

ನಾಭಿಯ ಕೆಳಗೆ ಪಕ್ವವಾದ ಅನ್ನದ ಸ್ಥಾನವಿದೆ. ಅಲ್ಲಿ ಅಗ್ನಿ ಇದ್ದಾನೆ. ನಾಭಿಯ ಮೇಲ್ಭಾಗದಲ್ಲಿ ಪರಮಾತ್ಮನಿಗೆ ಆಶ್ರಯನಾಗಿದ್ದಾನೆ (ನಾಭಿಯ ಕೆಳಗಿರುವ ಅಗ್ನಿಯ ಶಿಖೆಯು ನಾಭಿಯ ಮೇಲ್ಭಾಗಕ್ಕೆ ಬಂದು ಆ ಶಿಖೆಯ ಮಧ್ಯದಲ್ಲಿ ಪರಮಾತ್ಮನು ನೆಲೆಸಿದ್ದಾನೆ). ನಾಭಿಮಧ್ಯದಲ್ಲಿ ಶರೀರದಲ್ಲಿರುವ ಎಲ್ಲಾ ಪ್ರಾಣಗಳೂ ಆಶ್ರಿತವಾಗಿವೆ.

ಯೋಗಿನಾಮೇಷ ಮಾರ್ಗಸ್ತು ಯೇನ ಗಚ್ಛಂತಿ ತತ್‌ಪರಮ್ ॥೩೨॥

ಈ ಅಗ್ನಿಯು ಯೋಗಿಗಳು ಸರ್ವೋತ್ತಮನಾದ ಪರಮಾತ್ಮನನ್ನು ಹೊಂದಲು ಹೋಗುವ ಮಾರ್ಗದಲ್ಲಿ ಮೊದಲನೆಯ ಸ್ಥಾನ.

ಪ್ರವೃತ್ತಾ ಹೃದಯಾತ್ ಸರ್ವೇ ತಿರ್ಯಗೂರ್ಧ್ವಮಧಸ್ತಥಾ ।
ವಹಂತ್ಯನ್ನರಸಾನ್ ನಾಡ್ಯೋ ದಶಪ್ರಾಣಪ್ರಚೋದಿತಾಃ ।
ಜಿತಕ್ಲಮಾಃ ಸಮಾ ಧೀರಾ ಮೂರ್ಧನ್ಯಾತ್ಮಾನಮಾದಧುಃ ॥೩೩॥

ಹೃದಯದಿಂದ ಮೇಲ್ಮುಖವಾಗಿ, ಕೆಳಮುಖವಾಗಿ ಮತ್ತು ಅಡ್ಡಲಾಗಿ ಹರಿಯುವ ಎಲ್ಲಾ ನಾಡಿಗಳು ವ್ಯಾನನ ಹತ್ತುರೂಪಗಳಿಂದ ಪ್ರಚೋದಿತವಾಗಿ ಅನ್ನರಸವನ್ನು ದೇಹದ ಎಲ್ಲಾ ಭಾಗಗಳಿಗೂ ಸಾಗಿಸುತ್ತವೆ. ಶ್ರಮವನ್ನು ಮೀರಿದ, ಸಮಾಧಾನವುಳ್ಳ ಧೀರರು ಶಿರಸ್ಸಿನಲ್ಲಿ ಪರಮಾತ್ಮನನ್ನು ಆಧಾನ ಮಾಡಿ ಚಿಂತಿಸುತ್ತಾರೆ.

ಏವಂ ಸರ್ವೇಷು ವಿತತೌ ಪ್ರಾಣಾಪಾನೌ ಹಿ ದೇಹಿಷು ।
ತೌ ತಾವದಗ್ನಿಸಹಿತೌ ವಿದ್ಧಿ ವೈ ಪ್ರಾಣಮಾತ್ಮನಿ ॥೩೪॥

ಹೀಗೆ ಎಲ್ಲ ದೇಹಿಗಳಲ್ಲಿಯೂ ಪ್ರಾಣಾಪಾನರು ವ್ಯಾಪ್ತರಾಗಿದ್ದಾರೆ. ಜೀವರಲ್ಲಿ ಅವರನ್ನು ಅಗ್ನಿಸಹಿತವಾದ ಉಚ್ಛ್ವಾಸ ಮತ್ತು ನಿಶ್ವಾಸಗಳೆಂದು ತಿಳಿಯಿರಿ.

ಏಕಾದಶವಿಕಾರಾತ್ಮಾ ಕಲಾಸಂಭಾರಸಂಭೃತಃ ।
ಮೂರ್ತಿಮಂತಂ ಹಿ ತಂ ವಿದ್ಧಿ ನಿತ್ಯಂ ಕರ್ಮಜಿತಾತ್ಮಕಮ್ ॥೩೫॥

ಷೋಡಶಕಲೆಗಳಿಂದ ಯುತನಾಗಿ ಏಕಾದಶ ವಿಕಾರವುಳ್ಳ ದೇಹವನ್ನು ಹೊಂದಿದವನನ್ನು ಜೀವನೆಂದು ತಿಳಿಯಿರಿ. ಅವನು ಯಾವಾಗಲೂ ತನ್ನ ಕರ್ಮದಿಂದ ದೇಹವನ್ನು ಸಂಪಾದಿಸುತ್ತಾನೆ.

ತಸ್ಮಿನ್ ಯಃ ಸಂಸ್ಥಿತೋ ಹ್ಯಗ್ನಿರ್ನಿತ್ಯಂ ಸ್ಥಾಲ್ಯಾಮಿವಾಹಿತಃ ।
ಆತ್ಮಾನಂ ತಂ ವಿಜಾನೀಹಿ ನಿತ್ಯಂ ತ್ಯಾಗಜಿತಾತ್ಮಕಮ್ ॥೩೬॥

ಸ್ಥಾಲಿಯಲ್ಲಿ ಆಹಿತವಾದ ಅಗ್ನಿಯಂತೆ ಅಂತಹ ಶರೀರದಲ್ಲಿ ಯಾವ ಅಗ್ನಿಯು ಯಾವಾಗಲೂ ಇದ್ದಾನೆಯೋ ಅವನನ್ನು ಪರಮಾತ್ಮನ ಸನ್ನಿಧಾನ ಸ್ಥಾನವೆಂದು ತಿಳಿಯಿರಿ. ಅವನು ತ್ಯಾಗದಿಂದ ಅಂತಹ ಸ್ವರೂಪವನ್ನು ಪಡೆದಿದ್ದಾನೆ.

ದೇವೋ ಯಃ ಸಂಸ್ಥಿತಸ್ತಸ್ಮಿನ್ನಬ್ಬಿಂದುರಿವ ಪುಷ್ಕರೇ ।
ಕ್ಷೇತ್ರಜ್ಞಂ ತಂ ವಿಜಾನೀಹಿ ನಿತ್ಯಂ ಯೋಗಜಿತಾತ್ಮಕಮ್ ॥೩೭॥

ಆ ಅಗ್ನಿಯಲ್ಲಿ ಯಾವನು ಕಮಲಪತ್ರದಲ್ಲಿರುವ ಜಲಬಿಂದುಗಳಂತೆ ಸನ್ನಿಹಿತನಾಗಿದ್ದಾನೆಯೋ ಅವನನ್ನು ಕ್ಷೇತ್ರಜ್ಞನಾದ ಪರಮಾತ್ಮನೆಂದು ತಿಳಿಯಿರಿ. ಅವನು ತನ್ನ ಆ ಸ್ವರೂಪವನ್ನು ತನ್ನ ಸ್ವಾತಂತ್ರ್ಯಾದಿ ಸಾಮರ್ಥ್ಯದಿಂದ ಅನಾದಿ ಕಾಲದಿಂದಲೂ ಪಡೆದಿದ್ದಾನೆ.

ಜೀವಾತ್ಮಕಾನಿ ಜಾನೀಹಿ ರಜಃ ಸತ್ತ್ವಂ ತಮಸ್ತಥಾ ।
ಜೀವಮಾತ್ಮಗುಣಂ ವಿದ್ಧಿ ತಥಾऽऽತ್ಮಾನಂ ಪರಾತ್ಮಕಮ್ ॥೩೮॥

ಸತ್ತ್ವರಜಸ್ತಮೋ ವ್ಯಾಪಾರಗಳು ಜೀವನ ಸ್ವಭಾವಭೂತಗಳಾದವುಗಳು ಎಂದು ತಿಳಿಯಿರಿ. ಜೀವನು ಅಂತರ್ಯಾಮಿಯಿಂದ ಜ್ಞಾನಾದಿ ಗುಣಗಳನ್ನು ಪಡೆಯುತ್ತಾನೆಂದೂ ಅಂತರ್ಯಾಮಿಯಾದರೂ ಪರಿಪೂರ್ಣನಾದ, ಸರ್ವೋತ್ತಮನಾದ ಪರಬ್ರಹ್ಮನಿಂದ ಅಭಿನ್ನನೆಂದೂ ತಿಳಿಯಿರಿ.

ಅಚೇತನಂ ಜೀವಗುಣಂ ವದಂತಿ
ಸ ಚೇಷ್ಟತೇ ಚೇಷ್ಟಯತೇ ಚ ಸರ್ವಮ್ ।
ತತಃ ಪರಂ ಕ್ಷೇತ್ರವಿದೋ ಬ್ರುವಂತಿ
ಪ್ರಾಕಲ್ಪಯದ್ ಯೋ ಭುವನಾನಿ ಸಪ್ತ ॥೩೯॥

ಅಚೇತನವಾದ ಶರೀರವನ್ನು ಜೀವನಿಗೆ ಅಪ್ರಧಾನವೆಂದು ಹೇಳುತ್ತಾರೆ. ಆ ಜೀವನು ಪರಮಾತ್ಮ ಪ್ರೇರಣೆಯಿಂದ ತಾನು ಕ್ರಿಯೆಯನ್ನು ಮಾಡಿ ದೇಹೇಂದ್ರಿಯಾದಿಗಳಲ್ಲಿ ಕ್ರಿಯೆಯನ್ನು ಉಂಟುಮಾಡುತ್ತಾನೆ. ಸಪ್ತಲೋಕಗಳನ್ನೂ ಸೃಷ್ಟಿಮಾಡಿದ ಪರಮಾತ್ಮನು ಆ ಜೀವನಿಗಿಂತ ಭಿನ್ನ ಮತ್ತು ಉತ್ತಮನೆಂದು ಜ್ಞಾನಿಗಳು ಹೇಳುತ್ತಾರೆ.

ಏವಂ ಸರ್ವೇಷು ಭೂತೇಷು ಭೂತಾತ್ಮಾ ಸಂಪ್ರಕಾಶತೇ ।
ದೃಶ್ಯತೇ ತ್ವಗ್ರ್ಯಯಾ ಬುದ್ಧ್ಯಾ ಸೂಕ್ಷ್ಮಯಾ ಜ್ಞಾನವೇದಿಭಿಃ ॥೪೦॥

ಹೀಗೆ ಸರ್ವಭೂತಗಳಲ್ಲಿಯೂ ಸರ್ವಸ್ವಾಮಿಯಾದ ಪರಮಾತ್ಮನು ಪ್ರಕಾಶಿಸುತ್ತಾನೆ. ಜ್ಞಾನವನ್ನು ಸಂಪಾದಿಸಿದವರ ಶ್ರೇಷ್ಠವಾದ ಮತ್ತು ಸೂಕ್ಷ್ಮವಾದ ಬುದ್ಧಿಗೆ ಅವನು ಗೋಚರಿಸುತ್ತಾನೆ.

ಚಿತ್ತಸ್ಯ ಹಿ ಪ್ರಸಾದೇನ ಹಂತಿ ಕರ್ಮ ಶುಭಾಶುಭಮ್ ।
ಪ್ರಸನ್ನಾತ್ಮಾಽಽತ್ಮನಿ ಸ್ಥಿತ್ವಾ ಸುಖಮಾನಂತ್ಯಮಶ್ನುತೇ ॥೪೧॥

ಚಿತ್ತದ ಪ್ರಸನ್ನತೆಯನ್ನು ಸಂಪಾದಿಸಿದವನು ಶುಭಾಶುಭಕರ್ಮಗಳನ್ನು ನಾಶ ಮಾಡುತ್ತಾನೆ. ಪ್ರಸನ್ನಚಿತ್ತನಾದವನು ಪರಮಾತ್ಮನಲ್ಲಿಯೇ ಇದ್ದು ಅನಂತ ಸುಖವನ್ನು ಪಡೆಯುತ್ತಾನೆ.

ಲಕ್ಷಣಂ ತು ಪ್ರಮಾಣಸ್ಯ ಯಥಾವೃತ್ತಃ ಸುಖಂ ಸ್ವಪೇತ್ ।
ಸುಖದುಃಖೇ ಹಿ ಸಂತ್ಯಜ್ಯ ನಿರ್ದ್ವಂದ್ವೋ ನಿಷ್ಪತ್ತಿಗ್ರಹಃ ।
ನಿವಾತೇ ವಾ ಯಥಾ ದೀಪೋ ದೀಪ್ಯೇತ್ ಕುಶಲದೀಪಿತಃ ॥೪೨॥

ಜೀವನು ತನ್ನ ಎಲ್ಲಾ ಇಂದ್ರಿಯಗಳು ಉಪರತವಾದಮೇಲೂ ಯಾವನ ಅನುಗ್ರಹದಿಂದ ನಿದ್ರೆಯಲ್ಲಿ ಸುಖವನ್ನು ಪಡೆಯುತ್ತಾನೆಯೋ ಅದೇ ಪ್ರಕೃಷ್ಟ

ಪರಿಮಾಣವುಳ್ಳ ನಾರಾಯಣನ ಲಕ್ಷಣ (ನಿದ್ರಿತನಾಗಿ ಬಹಿರ್ವ್ಯಾಪಾರಶೂನ್ಯನಾದ ಜೀವನ ದೇಹವು ಯಾವನ ಅನುಗ್ರಹದಿಂದ ಜೀವಿಸುತ್ತದೆಯೋ ಅವನು ಪರಮಾತ್ಮನೆಂದು ಇಲ್ಲಿ ಸ್ವಾತಂತ್ರ್ಯರೂಪವಾದ ಲಕ್ಷಣವು ಹೇಳಲ್ಪಟ್ಟಿದೆ). ಪ್ರಾಕೃತ ಸುಖದುಃಖಗಳನ್ನು ಅಭಿಮಾನ ತ್ಯಾಗಮಾಡಿ ತಿರಸ್ಕರಿಸಿ, ನಿರ್ದ್ವಂದ್ವನೂ, ನಿಷ್ಪರಿಗ್ರಹನೂ ಆದ ಜೀವನ ಪರಮಾತ್ಮ ವಿಷಯವಾದ ಜ್ಞಾನವು ಕುಶಲನಾದವನು ಗಾಳಿಯಿಲ್ಲದ ಪ್ರದೇಶದಲ್ಲಿ ಹಚ್ಚಿದ ದೀಪದಂತೆ ಬೆಳಗುತ್ತದೆ.

ಪೂರ್ವರಾತ್ರೇ ಪರೇ ಚೈವ ಯುಂಜಾನಃ ಸತತಂ ಮನಃ ।
ಲಘ್ವಾಹಾರೋ ವಿಶುದ್ಧಾತ್ಮಾ ಪಶ್ಯನ್ನಾತ್ಮಾನಮಾತ್ಮನಿ ॥೪೩॥

ಪ್ರದೀಪ್ತೇನೇವ ದೀಪೇನ ಮನೋದೀಪೇನ ಪಶ್ಯತಿ ।
ದೃಷ್ಟ್ವಾSSತ್ಮಾನಂ ನಿರಾತ್ಮಾನಂ ಸ ತದಾ ವಿಪ್ರಮುಚ್ಯತೇ ॥೪೪॥

ರಾತ್ರಿಯ ಪ್ರಾರಂಭದಲ್ಲಿಯೂ ಮತ್ತು ರಾತ್ರಿಯ ಅಂತ್ಯದಲ್ಲಿಯೂ ಸತತವಾಗಿ ದೇವರ ಧ್ಯಾನವನ್ನು ಮಾಡಿ, ಲಘುವಾದ ಆಹಾರವುಳ್ಳವನೂ, ವಿಶುದ್ಧವಾದ ಮನಸ್ಸುಳ್ಳವನೂ ಆದ ಪುರುಷನು ತನ್ನಲ್ಲಿಯೇ ಇರುವ ಪರಮಾತ್ಮನನ್ನು ಚೆನ್ನಾಗಿ ಬೆಳಗುವ ಮನಸ್ಸು ಎಂಬ ದೀಪದಿಂದ ನೋಡುತ್ತಾನೆ. ಅನನ್ಯಾಧಿಪತಿಯಾದ ಪರಮಾತ್ಮನನ್ನು ನೋಡಿ ಅವನು ಮುಕ್ತನಾಗುತ್ತಾನೆ.

ಸರ್ವೋಪಾಯೈಸ್ತು ಲೋಭಸ್ಯ ಕ್ರೋಧಸ್ಯ ಚ ವಿನಿಗ್ರಹಃ ।
ಏತತ್ ಪವಿತ್ರಂ ಲೋಕಾನಾಂ ತಪೋ ವೈ ಸಂಕ್ರಮೋ ಮತಃ ॥೪೫॥

ಎಲ್ಲ ಉಪಾಯಗಳಿಂದಲೂ ಲೋಭ ಮತ್ತು ಕ್ರೋಧಗಳ ವಿನಿಗ್ರಹ ಮತ್ತು ಮನಸ್ಸನ್ನು ಪರಮಾತ್ಮನಲ್ಲಿ ಇಡುವುದು ಇದೇ ಮನುಷ್ಯನಿಗೆ ಪವಿತ್ರವಾದ ತಪಸ್ಸು ಎಂದು ಹೇಳಲ್ಪಡುತ್ತದೆ.

ನಿತ್ಯಂ ಕ್ರೋಧಾತ್ ತಪೋ ರಕ್ಷೇದ್ ಧರ್ಮಂ ರಕ್ಷೇಚ್ಚ ಮತ್ಸರಾತ್ ।
ವಿದ್ಯಾಂ ಮಾನಾಪಮಾನಾಭ್ಯಾಮಾತ್ಮಾನಂ ತು ಪ್ರಮಾದತಃ ॥೪೬॥

ಯಾವಾಗಲೂ ಕ್ರೋಧದಿಂದ (ಕ್ರೋಧವು ಉಂಟಾಗದಂತೆ ನೋಡಿಕೊಂಡು) ತಪಸ್ಸನ್ನು ರಕ್ಷಿಸಬೇಕು. ಮಾತ್ಸರ್ಯದಿಂದ ಧರ್ಮವನ್ನು ರಕ್ಷಿಸಬೇಕು.

ಮಾನಾಪಮಾನಗಳಿಂದ ವಿದ್ಯೆಯನ್ನು ರಕ್ಷಿಸಬೇಕು ಮತ್ತು ಪ್ರಮಾದದಿಂದ ತನ್ನನ್ನು ರಕ್ಷಿಸಿಕೊಳ್ಳಬೇಕು.

ಆನೃಶಂಸ್ಯಂ ಪರೋ ಧರ್ಮಃ ಕ್ಷಮಾ ಚ ಪರಮಂ ಬಲಮ್ ।
ಆತ್ಮಜ್ಞಾನಂ ಪರಂ ಜ್ಞಾನಂ ಸತ್ಯಂ ವ್ರತಪರಂ ವ್ರತಮ್ ॥೪೭॥

ಮೃದುವಚನವು ಶ್ರೇಷ್ಠವಾದ ಧರ್ಮ. ಕ್ಷಮೆಯು ಶ್ರೇಷ್ಠವಾದ ಬಲ. ಆತ್ಮಜ್ಞಾನವು ಶ್ರೇಷ್ಠವಾದ ಜ್ಞಾನ. ಸತ್ಯವಚನವು ಎಲ್ಲಾ ವ್ರತಗಳಿಗಿಂತಲೂ ಶ್ರೇಷ್ಠವಾದ ವ್ರತ.

ಸತ್ಯಸ್ಯ ವಚನಂ ಶ್ರೇಯಃ ಸತ್ಯಂ ಜ್ಞಾನಂ ಹಿತಂ ಭವೇತ್ ।
ಯದ್ ಭೂತಹಿತಮತ್ಯಂತಂ ತದ್ ವೈ ಸತ್ಯಂ ಪರಂ ಮತಮ್ ॥೪೮॥

ಸತ್ಯವಚನವು ಶ್ರೇಯಸ್ಕರವಾದುದು. ಸತ್ಯವೂ, ಜ್ಞಾನವೂ ಹಿತವಾಗಿರಬೇಕು. ಯಾವುದು ಸಜ್ಜನರಿಗೆ ಅತ್ಯಂತ ಹಿತವಾಗಿರುತ್ತದೆಯೋ ಅದೇ ಶ್ರೇಷ್ಠವಾದ ಸತ್ಯವೆಂದು ತಿಳಿಯಲ್ಪಡುತ್ತದೆ.

ಯಸ್ಯ ಸರ್ವೇ ಸಮಾರಂಭಾ ನಿರಾಶೀರ್ಬಂಧನಾಃ ಸದಾ ।
ತ್ಯಾಗೇ ಯಸ್ಯ ಹುತಂ ಸರ್ವಂ ಸ ತ್ಯಾಗೀ ಸ ಚ ಬುದ್ಧಿಮಾನ್ ॥೪೯॥

ಯಾವನ ಎಲ್ಲಾ ಕ್ರಿಯಾರಂಭಗಳೂ ಯಾವಾಗಲೂ ಫಲಸಂಕಲ್ಪ ರಹಿತವಾಗಿರುತ್ತವೆಯೋ ಮತ್ತು ಯಾವನು ತ್ಯಾಗವನ್ನು ಮಾಡಿ ತನ್ನ ಸರ್ವಸ್ವವನ್ನು ಅರ್ಪಿಸಿದ್ದಾನೆಯೋ ಅವನೇ ತ್ಯಾಗಿ, ಅವನೇ ಮೇಧಾವಿ.

ಯತೋ ನ ಗುರುರಪ್ಯೇನಂ ಚ್ಯಾವಯೇದುಪಪಾದಯನ್ ।
ತಂ ವಿದ್ಯಾದ್ ಬ್ರಹ್ಮಣೋ ಯೋಗಮಯೋಗಂ ಯೋಗಸಂಜ್ಞಿತಮ್ ॥

ಎಂತಹ ಶ್ರೇಷ್ಠವಾದ ಮತ್ತು ಮಹತ್ತಾದ ವಿಷಯದ ಸಂಬಂಧವಾದರೂ ಅದು ಯಾವನ ಭಗವದ್ಧ್ಯಾನವನ್ನು ಕೆಡಿಸುವುದಿಲ್ಲವೋ ಅದನ್ನೇ ವಿಷಯ ಸಂಬಂಧ ರಹಿತವಾದ ನಿಜವಾದ ಬ್ರಹ್ಮಪ್ರಾಪ್ತಿಯ ಯೋಗವೆಂದು ತಿಳಿಯಬೇಕು.

ನ ಹಿಂಸ್ಯಾತ್ ಸರ್ವಭೂತಾನಿ ಮೈತ್ರಾಯಣಗತಶ್ಚರೇತ್ ।
ನೇದಂ ಜೀವಿತಮಾಸಾದ್ಯ ವೈರಂ ಕುರ್ವೀತ ಕೇನಚಿತ್ ॥೫೦॥

ಯಾವ ಪ್ರಾಣಿಗೂ ಹಿಂಸೆಯನ್ನು ಮಾಡಬಾರದು. ಎಲ್ಲರಿಗೂ ಮಿತ್ರನಾಗಿರಬೇಕು. ಈ ಮನುಷ್ಯ ಶರೀರವನ್ನು ಹೊಂದಿ ಯಾರ ಜೊತೆಯಲ್ಲಿಯೂ ವೈರವನ್ನು ಮಾಡಬಾರದು.

ಅಕಿಂಚನ್ಯಂ ಸುಸಂತೋಷೋ ನಿರಾಶೀತ್ವಮಚಾಪಲಮ್ ।
ಏತದೇವ ಪರಂ ಜ್ಞಾನಂ ಸದಾತ್ಮಜ್ಞಾನಮುತ್ತಮಮ್ ॥೫೨॥

ದಾರಿದ್ರ್ಯ, ಸಂತೋಷ, ಆಶಾರಾಹಿತ್ಯ ಮತ್ತು ಸ್ಥಿರತ್ವ ಇವುಗಳೇ ಪರಮಾತ್ಮನ ಶ್ರೇಷ್ಠವಾದ ಜ್ಞಾನವನ್ನು ಪಡೆಯಲು ಇರುವ ಶ್ರೇಷ್ಠವಾದ ಜ್ಞಾನಸಾಧನಗಳು.

ಪರಿಗ್ರಹಂ ಪರಿತ್ಯಜ್ಯ ಭವೇದ್ ಬುದ್ಧ್ಯಾ ಯತವ್ರತಃ ।
ಅಶೋಕಂ ಸ್ಥಾನಮಾಶ್ರಿತ್ಯ ನಿಶ್ಚಲಂ ಪ್ರೇತ್ಯ ಚೇಹ ಚ ॥೫೩॥

ಪರಿಗ್ರಹವನ್ನು ತ್ಯಾಗಮಾಡಿ ಬುದ್ಧಿಯಿಂದ ದೃಢವಾದ ವ್ರತವನ್ನು ಹೊಂದಿದವನಾಗಬೇಕು. ಅವನು ಇಲ್ಲಿಯೂ ಮತ್ತು ಪರಲೋಕದಲ್ಲಿಯೂ ನಿಶ್ಚಲವಾದ ಶೋಕರಹಿತ ಸ್ಥಾನವನ್ನು ಹೊಂದಿ ಸುಖವಾಗಿರುವನು.

ತಪೋನಿತ್ಯೇನ ದಾಂತೇನ ಮುನಿನಾ ಸಂಯತಾತ್ಮನಾ ।
ಅಜಿತಂ ಜೇತುಕಾಮೇನ ಭಾವ್ಯಂ ಸಂಗೇಷ್ವಸಂಗಿನಾ ॥೫೪॥

ತನಗೆ ಇದುವರೆಗೆ ದೊರೆಯದಿದ್ದ ಮೋಕ್ಷವನ್ನು ಪಡೆಯಲು ಇಚ್ಛಿಸುವವನು ಯಾವಾಗಲೂ ತಪಸ್ಸನ್ನೂ, ಇಂದ್ರಿಯನಿಗ್ರಹವನ್ನೂ, ಮೌನವನ್ನೂ, ಮನೋನಿಗ್ರಹವನ್ನೂ, ವಿಷಯಗಳಲ್ಲಿ ಅಸಂಗವನ್ನೂ ಹೊಂದಿದವನಾಗಿರಬೇಕು.

ಗುಣಾಗುಣಮನಾಸಂಗಮೇಕಕಾರ್ಯಮನಂತರಮ್ ।
ಏತತ್ ತದ್ ಬ್ರಹ್ಮಣೋ ವೃತ್ತಮಾಹುರೇಕಪದಂ ಸುಖಮ್ ॥೫೫॥

ಭಗವಂತನ ಗುಣಗಳಲ್ಲಿ ಸ್ನೇಹವೆಂಬ ಶ್ರೇಷ್ಠವಾದ ಗುಣವನ್ನು ಹೊಂದಿರಬೇಕು. ವಿಷಯಗಳ ಸಂಗವನ್ನು ಹೊಂದಿರಬಾರದು. ನಿರಂತರವಾಗಿ ಒಂದೇ ಉದ್ದೇಶವನ್ನು ಹೊಂದಿರಬೇಕು. ಇದು ಪರಬ್ರಹ್ಮನನ್ನು ಪಡೆಯಲು ಇರುವ ನಡತೆ. ಇದರಿಂದ ಮುಖ್ಯವಾದ ಸುಖವು ಲಭ್ಯವಾಗುತ್ತದೆ.

ಪರಿತ್ಯಜತಿ ಯೋ ದುಃಖಿಂ ಸುಖಿಂ ಚಾಪ್ಯುಭಯಂ ನರಃ ।
ಬ್ರಹ್ಮಪ್ರಾಪ್ನೋತಿ ಸೋಽತ್ಯಂತಮಸಂಗೇನ ಚ ಗಚ್ಛತಿ ॥೫೬॥

ಯಾವನು ಪ್ರಾಕೃತವಾದ ಸುಖದುಃಖಗಳೆರಡನ್ನೂ ಸಹಿಸುತ್ತಾನೆಯೋ ಅವನು ಅತ್ಯಂತ ಅಸಂಗದಿಂದ ನಡೆದು ಪರಬ್ರಹ್ಮನನ್ನು ತಿಳಿದು ಅವನನ್ನು ಹೊಂದುತ್ತಾನೆ.

ಯಥಾಶ್ರುತಮಿದಂ ಸರ್ವಂ ಸಮಾಸೇನ ದ್ವಿಜೋತ್ತಮ ।
ಏತತ್ ತೇ ಸರ್ವಮಾಖ್ಯಾತಂ ಕಿಂ ಭೂಯಃ ಶ್ರೋತುಮಿಚ್ಛಸಿ ॥೫೭॥

ಎಲೈ ದ್ವಿಜಶ್ರೇಷ್ಠರೇ, ನಾನು ಕೇಳಿದಂತೆ ಇವೆಲ್ಲವನ್ನೂ ನಿಮಗೆ ಸಂಕ್ಷೇಪವಾಗಿ ಹೇಳಿದ್ದೇನೆ. ಇನ್ನು ಏನನ್ನು ಕೇಳಲು ಬಯಸುತ್ತೀರಿ?

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನದ್ವಿಶತಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಬ್ರಾಹ್ಮಣ ಸಂವಾದೇ
ಪತಿವ್ರತಾಮಾಹಾತ್ಮ್ಯೇ ಚತುರ್ವಿಂಶೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ನೂರ ತೊಂಬತ್ತೊಂಬತ್ತನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರನೆಯ ಅಧ್ಯಾಯ

ಧರ್ಮವ್ಯಾಧನಿಂದ ಕೌಶಿಕನನ್ನು ಮನೆಗೆ ಕರೆದುಕೊಂಡು ಹೋಗಿ ತನ್ನ ಮಾತಾಪಿತೃಗಳ ದರ್ಶನ ಮತ್ತು ತಾನು ಅವರಿಗೆ ಮಾಡುವ ಶುಶ್ರೂಷೆಯ ಕಥನ.

ಮಾರ್ಕಂಡೇಯಃ

ಏವಂ ಸಂಕಥಿತೇ ಕೃತ್ಸ್ನೇ ಮೋಕ್ಷಧರ್ಮೇ ಯುಧಿಷ್ಠಿರ ।
ದೃಢಪ್ರೀತಮನಾ ವಿಪ್ರೋ ಧರ್ಮವ್ಯಾಧಮುವಾಚ ಹ ॥೧॥

ಮಾರ್ಕಂಡೇಯ– ಎಲೈ ಯುಧಿಷ್ಠಿರನೇ, ಹೀಗೆ ಧರ್ಮವ್ಯಾಧನಿಂದ ಸಮಗ್ರವಾದ ಮೋಕ್ಷಧರ್ಮವು ಹೇಳಲ್ಪಡುತ್ತಿರಲು ಬಹಳ ಸಂತೋಷ ಹೊಂದಿದ ಮನಸ್ಸುಳ್ಳ ಕೌಶಿಕ ಬ್ರಾಹ್ಮಣನು ಅವನನ್ನು ಕುರಿತು ಹೀಗೆ ಹೇಳಿದನು.

ನ್ಯಾಯಯುಕ್ತಮಿದಂ ಸರ್ವಂ ಭವತಾ ಪರಿಕೀರ್ತಿತಮ್ ।
ನ ತೇऽಸ್ಯವಿದಿತಂ ಕಿಂಚಿದ್ ಧರ್ಮೇಷ್ವಿಹ ಹಿ ದೃಶ್ಯತೇ ॥೨॥

ನೀನು ಮಾತನಾಡಿದುದೆಲ್ಲವೂ ನ್ಯಾಯದಿಂದ ಕೂಡಿದೆ. ಧರ್ಮದ ವಿಷಯದಲ್ಲಿ ನಿನಗೆ ತಿಳಿಯದಿರುವ ವಿಷಯವು ಯಾವುದೂ ಇಲ್ಲವೆಂದು ನನಗೆ ತೋರುತ್ತದೆ.

ವ್ಯಾಧಃ

ಪ್ರತ್ಯಕ್ಷಂ ಮಮ ಯೋ ಧರ್ಮಸ್ತಂ ಚ ಪಶ್ಯ ದ್ವಿಜೋತ್ತಮ ।
ಯೇನ ಸಿದ್ಧಿರಿಯಂ ಪ್ರಾಪ್ತಾ ಮಯಾ ಬ್ರಾಹ್ಮಣಪುಂಗವ ॥೩॥

ವ್ಯಾಧ– ಎಲೈ ದ್ವಿಜೋತ್ತಮರೇ, ಬ್ರಾಹ್ಮಣಪುಂಗವರೇ, ಯಾವ ಧರ್ಮಾಚರಣೆಯಿಂದ ನನಗೆ ಈ ಸಿದ್ಧಿಯು ಉಂಟಾಗಿದೆಯೋ ಅಂತಹ ಧರ್ಮವನ್ನು ಪ್ರತ್ಯಕ್ಷವಾಗಿ ನೋಡಿ.

ಉತ್ತಿಷ್ಠ ಭಗವನ್ ಕ್ಷಿಪ್ರಂ ಪ್ರವಿಶ್ಯಾಭ್ಯಂತರಂ ಗೃಹಮ್ ।
ದ್ರಷ್ಟುಮರ್ಹಸಿ ಧರ್ಮಜ್ಞ ಮಾತರಂ ಪಿತರಂ ಚ ಮೇ ॥೪॥

ಪೂಜ್ಯರೇ, ಧರ್ಮಜ್ಞರೇ, ಇಲ್ಲಿಂದ ಎದ್ದು ಮನೆಯ ಒಳಭಾಗವನ್ನು ಪ್ರವೇಶಿಸಿ ನನ್ನ ಮಾತಾಪಿತೃಗಳನ್ನು ನೀವು ನೋಡಬೇಕು.

ಇತ್ಯುಕ್ತಃ ಸ ಪ್ರವಿಶ್ಯಾಥ ದದರ್ಶ ಪರಮಾರ್ಚಿತಮ್ ।
ಸೌಧಂ ಹೃದ್ಯಂ ಚತುಃಶಾಲಮತೀವ ಚ ಮನೋರಮಮ್ ॥೫॥

ಹೀಗೆ ಹೇಳಲ್ಪಟ್ಟ ಆ ಬ್ರಾಹ್ಮಣನು ಎದ್ದು ಒಳಗೆ ಪ್ರವೇಶಿಸಿ ನಾಲ್ಕು ಶಾಲೆಗಳಿದ್ದ ಸುಂದರವಾದ, ಮನೋಹರವಾದ ಅವನ ಮನೆಯನ್ನು ನೋಡಿದನು.

ದೇವತಾಗೃಹಸಂಕಾಶಂ ದೈವತೈಶ್ಚ ಸುಪೂಜಿತಮ್ ।
ಶಯನಾಸನಸಂಬಾಧಂ ಗಂಧೈಶ್ಚ ಪರಮೈರ್ಯುತಮ್ ॥೬॥

ದೇವತಾಗೃಹಕ್ಕೆ ಸಮಾನವಾಗಿದ್ದ, ದೇವತೆಗಳಿಂದಲೂ ಪೂಜಿಸಲು ಯೋಗ್ಯವಾದ ಶಯನಾಸನದಿಂದ ತುಂಬಿದ್ದ, ದಿವ್ಯಗಂಧಯುಕ್ತವಾದ (ಮನೆಯನ್ನು ನೋಡಿದನು).

ತತ್ರ ಶುಕ್ಲಾಂಬರಧರೌ ಪಿತರಾವಸ್ಯ ಪೂಜಿತೌ ।
ಕೃತಾಹಾರೌ ತು ಸಂತುಷ್ಟಾವುಪವಿಷ್ಟೌ ವರಾಸನೇ ॥೭॥

ಅಲ್ಲಿ ಅವನ ಪೂಜ್ಯರಾದ ತಂದೆತಾಯಿಗಳು ಆಹಾರವನ್ನು ಸೇವಿಸಿ ಬಿಳಿಯ ವಸ್ತ್ರವನ್ನು ಧರಿಸಿ ಶ್ರೇಷ್ಠವಾದ ಆಸನ ಒಂದರಲ್ಲಿ ಸಂತೋಷದಿಂದ ಕುಳಿತಿದ್ದರು.

ತಸ್ಯ ವ್ಯಾಧಸ್ಯ ಪಿತರೌ ಬ್ರಾಹ್ಮಣಃ ಸಂದದರ್ಶ ಹ ॥
ಧರ್ಮವ್ಯಾಧಸ್ತು ತೌ ದೃಷ್ಟ್ವಾ ಪಾದೇಷು ಶಿರಸಾऽಪತತ್ ॥೮॥

ಬ್ರಾಹ್ಮಣನು ವ್ಯಾಧನ ತಂದೆತಾಯಿಗಳನ್ನು ನೋಡಿದನು. ಧರ್ಮವ್ಯಾಧನಾದರೂ ಅವರನ್ನು ನೋಡಿ ಅವರ ಪಾದಗಳಿಗೆ ಶಿರಸಾ ನಮಸ್ಕರಿಸಿದನು.

ಉತ್ತಿಷ್ಠೋತ್ತಿಷ್ಠ ಧರ್ಮಜ್ಞ ಧರ್ಮಸ್ತ್ವಾಮಭಿರಕ್ಷತು ।
ಪ್ರೀತೌ ಸ್ಮ ತವ ಶೌಚೇನ ದೀರ್ಘಮಾಯುರವಾಪ್ನುಹಿ ॥೯॥

ವೃದ್ಧರು– ಧರ್ಮಜ್ಞನೇ, ಎದ್ದೇಳು, ಎದ್ದೇಳು. ಧರ್ಮವು ನಿನ್ನನ್ನು ರಕ್ಷಿಸಲಿ. ನಿನ್ನ ಶುದ್ಧಿಯನ್ನು ನೋಡಿ ನಾವು ಪ್ರೀತರಾಗಿದ್ದೇವೆ. ದೀರ್ಘಾಯುಷ್ಯವನ್ನು ಹೊಂದು.

ಸತ್ಪುತ್ರೇಣ ತ್ವಯಾ ಪುತ್ರ ನಿತ್ಯಂ ಕಾಲೇ ಸುಪೂಜಿತೌ ।
ಸುಖಿಮಾವಾಂ ವಸಾವೋಕತ್ರ ದೇವಲೋಕಗತಾವಿವ ॥೧೦॥

ಪುತ್ರನೇ, ಸತ್ಪುತ್ರನಾದ ನಿನ್ನಿಂದ ನಾವು ಯಾವಾಗಲೂ ಪೂಜಿತರಾಗಿದ್ದೇವೆ. ನಾವು ಇಲ್ಲಿ ದೇವಲೋಕದಲ್ಲಿರುವಂತೆ ಸುಖಿವಾಗಿ ವಾಸಿಸುತ್ತಿದ್ದೇವೆ.

ನ ತೇऽನ್ಯದ್ ದೈವತಂ ಕಿಂಚಿದ್ದೈವತೇಷ್ವಪಿ ವರ್ತತೇ ।
ಪ್ರಯತತ್ವಾದ್ ದ್ವಿಜಾತೀನಾಂ ದಮೇನಾಸಿ ಸಮನ್ವಿತಃ ॥೧೧॥

ನಮ್ಮನ್ನು ಬಿಟ್ಟು ನಿನಗೆ ದೇವತೆಗಳಲ್ಲಿಯೂ ಬೇರೆ ದೇವತೆ ಇಲ್ಲ. ಬಹಳ ನಿಯಮದಿಂದ ಕೂಡಿರುವ ನೀನು ಬ್ರಾಹ್ಮಣರಿಗೆ ಯೋಗ್ಯವಾದ ಇಂದ್ರಿಯನಿಗ್ರಹದಿಂದ ಕೂಡಿದವನಾಗಿದ್ದೀಯೆ.

ಪಿತುಃ ಪಿತಾಮಹಾ ಯೇ ಚ ತಥೈವ ಪ್ರಪಿತಾಮಹಾಃ ।
ಪ್ರೀತಾಸ್ತೇ ಸತತಂ ಪುತ್ರ ದಮೇನಾವಾಂ ಚ ಪೂಜಯಾ ॥೧೨॥

ಎಲೈ ಪುತ್ರನೇ, ನಿನ್ನ ಇಂದ್ರಿಯನಿಗ್ರಹದಿಂದಲೂ ಮತ್ತು ನೀನು ಮಾಡುವ ನಮ್ಮ ಪೂಜೆಯಿಂದಲೂ ನನ್ನ ಪಿತಾಮಹರೂ ಮತ್ತು ಪ್ರಪಿತಾಮಹರೂ ಸಹ ನಿನಗೆ ಪ್ರಸನ್ನರಾಗಿದ್ದಾರೆ.

ಮನಸಾ ಕರ್ಮಣಾ ವಾಚಾ ಶುಶ್ರೂಷಾ ನೈವ ಹೀಯತೇ ।
ನ ಚಾನ್ಯಾ ಹಿ ತಥಾ ಬುದ್ಧಿರ್ದೃಶ್ಯತೇ ಸಾಂಪ್ರತಂ ತವ ॥೧೩॥

ನೀನು ನಮಗೆ ಮನಸ್ಸಿನಿಂದ, ಕ್ರಿಯೆಯಿಂದ ಮತ್ತು ಮಾತಿನಿಂದ ಮಾಡುವ ಸೇವೆಯು ಸ್ವಲ್ಪವೂ ಕಡಿಮೆಯಾಗುವುದಿಲ್ಲ. ನಿನಗೆ ಸದ್ಯದಲ್ಲಿ ನಮ್ಮ ಸೇವೆಯನ್ನು ಬಿಟ್ಟು ಬೇರೆ ಏನನ್ನಾದರೂ ಮಾಡಬೇಕೆಂಬ ಬುದ್ಧಿಯು ಉಂಟಾಗುವುದು ಕಾಣುವುದಿಲ್ಲ.

ಜಾಮದಗ್ನ್ಯೇನ ರಾಮೇಣ ಯಥಾ ವೃದ್ಧೌ ಸುಪೂಜಿತೌ ।
ತಥಾ ತ್ವಯಾ ಕೃತಂ ಸರ್ವಂ ತದ್ವಿಶಿಷ್ಟಂ ಚ ಪುತ್ರಕ ॥೧೪॥

ಎಲೈ ಪುತ್ರನೇ, ಜಮದಗ್ನಿಗಳ ಮಗನಾದ ಪರಶುರಾಮನು ಹೇಗೆ ವೃದ್ಧರಾದ ತನ್ನ ಮಾತಾಪಿತೃಗಳನ್ನು ಪೂಜಿಸಿದನೋ ಹಾಗೆ ನೀನು ನಮಗೆ ಎಲ್ಲವನ್ನೂ ಮಾಡಿದ್ದೀಯೆ. ಮತ್ತು ಅದಕ್ಕಿಂತ ಹೆಚ್ಚಿನ ಸೇವೆಯನ್ನೂ ಮಾಡಿದ್ದೀಯೆ (ಎಂದು ಹೇಳಿದರು).

ಮಾರ್ಕಂಡೇಯಃ

ತತಸ್ತಂ ಬ್ರಾಹ್ಮಣಂ ತಾಭ್ಯಾಂ ಧರ್ಮವ್ಯಾಧೋ ನ್ಯವೇದಯತ್ ।
ತೌ ಸ್ವಾಗತೇನ ತಂ ವಿಪ್ರಮರ್ಚಯಾಮಾಸತುಸ್ತದಾ ।
ಪ್ರತಿಪೂಜ್ಯ ಚ ತಾಂ ಪೂಜಾಂ ದ್ವಿಜಃ ಪಪ್ರಚ್ಛ ತಾವುಭೌ ॥೧೫॥

ಮಾರ್ಕಂಡೇಯ– ಅನಂತರ ಧರ್ಮವ್ಯಾಧನು ಕೌಶಿಕ ಬ್ರಾಹ್ಮಣನನ್ನು ತನ್ನ ತಂದೆತಾಯಿಗಳಿಗೆ ಪರಿಚಯಿಸಿದನು. ಆಗ ಅವರು ಸ್ವಾಗತವನ್ನು ಮಾಡಿ ಆ ಬ್ರಾಹ್ಮಣನನ್ನು ಸತ್ಕರಿಸಿದರು. ಆ ಪೂಜೆಯನ್ನು ಸ್ವೀಕರಿಸಿದ ಬ್ರಾಹ್ಮಣನು ಅವರಿಬ್ಬರನ್ನೂ ಕುರಿತು ಪ್ರಶ್ನಿಸಿದನು.

ಕೌಶಿಕಃ

ಸುಪುತ್ರಾಭ್ಯಾಂ ಸಭೃತ್ಯಾಭ್ಯಾಂ ಕಚ್ಚಿದ್ ವಾಂ ಕುಶಲಂ ಗೃಹೇ ।
ಅನಾಮಯಂ ಚ ವಾಂ ಕಚ್ಚಿತ್ ಸದೈವೇಹ ಶರೀರಯೋಃ ॥೧೬॥

ಕೌಶಿಕ– ಸುಪುತ್ರ ಮತ್ತು ಭೃತ್ಯರಿಂದ ಕೂಡಿದ ನೀವು ಈ ಮನೆಯಲ್ಲಿ ಕ್ಷೇಮದಿಂದಿರುವಿರಷ್ಟೆ? ನಿಮಗೆ ಯಾವ ದೇಹಬಾಧೆಯೂ ಇಲ್ಲವಷ್ಟೆ?

ವೃದ್ಧೌ

ಕುಶಲಂ ನೌ ಗೃಹೇ ವಿಪ್ರ ಭೃತ್ಯವರ್ಗೇ ಚ ಸರ್ವಶಃ ।
ಕಚ್ಚಿತ್ ತ್ವಮಪ್ಯವಿಘ್ನೇನ ಸಂಪ್ರಾಪ್ತೋ ಭಗವನ್ನಿತಿ ॥೧೭॥

ವೃದ್ಧರು– ಬ್ರಾಹ್ಮಣನೇ, ನಮ್ಮ ಮನೆಯಲ್ಲಿಯೂ, ನಮ್ಮ ಭೃತ್ಯವರ್ಗದಲ್ಲಿಯೂ ಎಲ್ಲವೂ ಕುಶಲವಾಗಿದೆ. ಪೂಜ್ಯನೇ, ನೀನಾದರೂ ಇಲ್ಲಿಗೆ ನಿರ್ವಿಘ್ನವಾಗಿ ಬಂದೆಯಷ್ಟೆ?

ಮಾರ್ಕಂಡೇಯಃ

ಬಾಢಮಿತ್ಯೇವ ತೌ ವಿಪ್ರಃ ಪ್ರತ್ಯುವಾಚ ಮುದಾನ್ವಿತಃ ।
ಧರ್ಮವ್ಯಾಧೋ ನಿರೀಕ್ಷ್ಯಾಥ ತತಸ್ತಂ ವಾಕ್ಯಮಬ್ರವೀತ್ ॥೧೮॥

ಮಾರ್ಕಂಡೇಯ– ಸಂತೋಷದಿಂದ ಕೂಡಿದ ಆ ಬ್ರಾಹ್ಮಣನು ಅವರನ್ನು ಕುರಿತು ಹೌದು ಎಂದು ಹೇಳಿದನು. ಧರ್ಮವ್ಯಾಧನು ಆಗ ಬ್ರಾಹ್ಮಣನನ್ನು ನೋಡಿ ಹೀಗೆ ಮಾತನಾಡಿದನು.

ಪಿತಾ ಮಾತಾ ಚ ಭಗವನ್ನೇತೌ ಮದ್ದೈವತಂ ಪರಮ್ ।
ಯದ್ ದೈವತೇಭ್ಯಃ ಕರ್ತವ್ಯಂ ತದೇತಾಭ್ಯಾಂ ಕರೋಮ್ಯಹಮ್ ॥೧೯॥

ಪೂಜ್ಯರೇ, ತಂದೆತಾಯಿಗಳೇ ನನಗೆ ಪರದೇವತೆಗಳು. ದೇವತೆಗಳಿಗೆ ಏನು ಮಾಡಬೇಕೋ ಅದನ್ನು ಇವರಿಬ್ಬರಿಗೆ ಮಾಡುತ್ತೇನೆ.

ತ್ರಯಸ್ತ್ರಿಂಶದ್ ಯಥಾ ದೇವಾಃ ಸರ್ವೇ ಶಕ್ರಪುರೋಗಮಾಃ ।
ಸಂಪೂಜ್ಯಾಃ ಸರ್ವಲೋಕಸ್ಯ ತಥಾ ವೃದ್ಧಾವಿಮೌ ಮಮ ॥೨೦॥

ಇಂದ್ರನೇ ಮೊದಲಾದ ಮೂವತ್ತ್ಮೂರು ದೇವತೆಗಳು ಎಲ್ಲ ಜನರಿಂದಲೂ ಹೇಗೆ ಪೂಜಿಸಲ್ಪಡುತ್ತಾರೆಯೋ ಅದರಂತೆ ಈ ವೃದ್ಧರು ನನ್ನಿಂದ ಪೂಜಿಸಲ್ಪಡುತ್ತಾರೆ.

ಉಪಾಹಾರಾನಾಹರಂತೋ ದೇವತಾನಾಂ ಯಥಾ ದ್ವಿಜಾಃ ।
ಕುರ್ವಂತಿ ತದ್ವೇದತಾಭ್ಯಾಂ ಕರೋಮ್ಯಹಮತಂದ್ರಿತಃ ॥೨೧॥

ದ್ವಿಜರು ಉಪಾಹಾರಗಳನ್ನು ತಂದು ದೇವತೆಗಳನ್ನು ಹೇಗೆ ಪೂಜಿಸುತ್ತಾರೋ ಅದರಂತೆ ನಾನು ಆಲಸ್ಯವಿಲ್ಲದೆ ಇವರಿಬ್ಬರಲ್ಲಿ ನಡೆದುಕೊಳ್ಳುತ್ತೇನೆ.

ಏತೌ ಮೇ ಪರಮಂ ಬ್ರಹ್ಮನ್ ಪಿತಾ ಮಾತಾ ಚ ದೈವತಮ್ ।
ಏತೌ ಪುಷ್ಪೈಃ ಫಲೈರನ್ನೈಸ್ತೋಷಯಾಮಿ ಸದಾ ದ್ವಿಜ ॥೨೨॥

ಎಲೈ ಬ್ರಾಹ್ಮಣರೇ, ಈ ತಂದೆತಾಯಿಗಳೇ ನನಗೆ ಪರಮದೇವತೆಗಳು. ಇವರನ್ನು ನಾನು ಫಲಪುಷ್ಪಗಳಿಂದಲೂ, ಅನ್ನದಿಂದಲೂ ಯಾವಾಗಲೂ ಸಂತೋಷಪಡಿಸುತ್ತೇನೆ.

ಏತಾವೇವಾಗ್ನಯೋ ಮಹ್ಯಂ ಯಾನ್ ವದಂತಿ ಮನೀಷಿಣಃ ।
ಯಜ್ಞಾ ವೇದಾಶ್ಚ ಚತ್ವಾರಃ ಸರ್ವಮೇತೌ ಮಮ ದ್ವಿಜ ॥೨೩॥

ಜ್ಞಾನಿಗಳು ಯಾವ ಅಗ್ನಿಗಳನ್ನು ಹೇಳುತ್ತಾರೆಯೋ ನನಗೆ ಇವರಿಬ್ಬರೇ ಆ ಅಗ್ನಿಗಳು. ಎಲೈ ಬ್ರಾಹ್ಮಣರೇ, ಯಜ್ಞಗಳು ನಾಲ್ಕುವೇದಗಳು ಎಲ್ಲವೂ ಇವರಿಬ್ಬರೇ.

ಏತದರ್ಥಂ ಮಮ ಪ್ರಾಣಾ ಭಾರ್ಯಾ ಪುತ್ರಃ ಸುಹೃಜ್ಜನಃ ।
ಸಪುತ್ರದಾರಃ ಶುಶ್ರೂಷಾಂ ನಿತ್ಯಮೇವ ಕರೋಮ್ಯಹಮ್ ॥೨೪॥

ನನ್ನ ಪ್ರಾಣಗಳು, ನನ್ನ ಪತ್ನಿ, ಪುತ್ರ, ಸುಹೃಜ್ಜನರು ಎಲ್ಲರೂ ಇವರ ಸಲುವಾಗಿಯೇ ಇದ್ದಾರೆ. ಹೆಂಡತಿ ಮಕ್ಕಳೊಂದಿಗೆ ಕೂಡಿ ನಿತ್ಯದಲ್ಲಿಯೂ ಇವರ ಸೇವೆಯನ್ನು ಮಾಡುತ್ತೇವೆ.

ಸ್ವಯಂ ಚ ಸ್ನಾಪಯಾಮ್ಯೇತೌ ತಥಾ ಪಾದೌ ಪ್ರಧಾವಯೇ ।
ಆಹಾರಂ ಚ ಪ್ರಯಚ್ಛಾಮಿ ಸ್ವಯಂ ಚ ದ್ವಿಜಸತ್ತಮ ॥೨೫॥

ನಾನು ಸ್ವತಃ ಅವರಿಗೆ ಸ್ನಾನವನ್ನು ಮಾಡಿಸುತ್ತೇನೆ. ಅವರ ಪಾದಗಳನ್ನು ತೊಳೆಯುತ್ತೇನೆ. ಸ್ವತಃ ಅವರಿಗೆ ಆಹಾರವನ್ನು ಬಡಿಸುತ್ತೇನೆ.

ಅನುಕೂಲಂ ತಥಾ ವಚ್ಮಿ ವಿಪ್ರಿಯಂ ಪರಿವರ್ಜಯೇ ।
ಅಧರ್ಮೇಣಾಪಿ ಸಂಯುಕ್ತಂ ಪ್ರಿಯಮಾಭ್ಯಾಂ ಕರೋಮ್ಯಹಮ್ ॥೨೬॥

ಅವರಿಗೆ ಅನುಕೂಲವಾದುದನ್ನು ಮಾತನಾಡುತ್ತೇನೆ. ಅಪ್ರಿಯವಾದುದನ್ನು ತ್ಯಜಿಸುತ್ತೇನೆ. ಅವರಿಗೆ ಪ್ರಿಯವಾದುದು ಒಂದುಪಕ್ಷ ಅಧರ್ಮವಾದರೂ ನಾನು ಅದನ್ನು ಮಾಡುತ್ತೇನೆ.

ಧರ್ಮಮೇವ ಗುರುಂ ಜ್ಞಾತ್ವಾ ಕರೋಮಿ ದ್ವಿಜಸತ್ತಮ ।
ಅತಂದ್ರಿತಃ ಸದಾ ವಿಪ್ರ ಶುಶ್ರೂಷಾಂ ವೈ ಕರೋಮ್ಯಹಮ್ ॥೨೭॥

ಎಲೈ ದ್ವಿಜಶ್ರೇಷ್ಠರೇ, ಧರ್ಮವೇ ದೊಡ್ಡದೆಂದು ತಿಳಿದು ಯಾವ ಆಲಸ್ಯವೂ ಇಲ್ಲದೆ ಯಾವಾಗಲೂ ಇವರ ಸೇವೆಯನ್ನು ಮಾಡುತ್ತೇನೆ.

ಪಂಚೈವ ಗುರವೋ ಬ್ರಹ್ಮನ್ ಪುರುಷಸ್ಯ ಬುಭೂಷತಃ ।
ಪಿತಾ ಮಾತಾऽಗ್ನಿರಾತ್ಮಾ ಚ ಗುರುಶ್ಚ ದ್ವಿಜಸತ್ತಮ ॥೨೮॥

ಎಲೈ ದ್ವಿಜಶ್ರೇಷ್ಠರೇ, ಮಂಗಳವನ್ನು ಬಯಸುವವರಿಗೆ ತಂದೆ, ತಾಯಿ, ಗುರು, ಅಗ್ನಿ ಮತ್ತು ಪರಮಾತ್ಮ. ಈ ಐದು ವಸ್ತುಗಳೇ ಪರಮಪೂಜ್ಯವಾದವುಗಳು.

ಏತೇಷು ಯಸ್ತು ವರ್ತೇತ ಸಮ್ಯಗೇವ ದ್ವಿಜೋತ್ತಮ ।
ಭವೇಯುರಗ್ನಯಸ್ತಸ್ಯ ಪರಿಚೀರ್ಣಾಸ್ತು ನಿತ್ಯಶಃ ॥೨೯॥

ಗಾರ್ಹಸ್ಥ್ಯೇ ವರ್ತಮಾನಸ್ಯ ಏಷ ಧರ್ಮಃ ಸನಾತನಃ ॥೩೦॥

ಎಲೈ ದ್ವಿಜಶ್ರೇಷ್ಠರೇ, ಈ ಐದು ವಸ್ತುಗಳ ವಿಷಯದಲ್ಲಿ ಯಾವನು ಸರಿಯಾಗಿ ನಡೆದುಕೊಳ್ಳುತ್ತಾನೆಯೋ ಅವನು ನಿತ್ಯದಲ್ಲಿಯೂ ಅಗ್ನಿಯ ಸೇವೆಯನ್ನು ಮಾಡಿದಂತೆ ಆಗುತ್ತದೆ. ಗೃಹಸ್ಥನಿಗೆ ಇದು ಸನಾತನ ಧರ್ಮವಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಿಶತಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ
ಪತಿವ್ರತಾಮಾಹಾತ್ಮ್ಯೇ ಪಂಚವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಒಂದನೆಯ ಅಧ್ಯಾಯ

ಧರ್ಮವ್ಯಾಧನಿಂದ ಶೂದ್ರಯೋನಿಗೆ ಕಾರಣವಾದ ತನ್ನ ಪೂರ್ವವೃತ್ತಾಂತ ಕಥನ, ನಾನಾ ಧರ್ಮೋಪದೇಶ. ಕೌಶಿಕನ ಪ್ರತಿನಿವೃತ್ತಿ. ಮಾರ್ಕಂಡೇಯರಿಂದ ಯುಧಿಷ್ಠಿರನನ್ನು ಕುರಿತು ಪತಿವ್ರತಾ ಮಹಾತ್ಮ್ಯ ಕಥನದ ಉಪಸಂಹಾರ.

ಮಾರ್ಕಂಡೇಯಃ

ಗುರೂ ನಿವೇದ್ಯ ವಿಪ್ರಾಯ ತೌ ಮಾತಾಪಿತರಾವುಭೌ ।
ಪುನರೇವ ಸ ಧರ್ಮಾತ್ಮಾ ವ್ಯಾಧೋ ಬ್ರಾಹ್ಮಣಮಬ್ರವೀತ್ ॥೧॥

ಮಾರ್ಕಂಡೇಯ– ತನ್ನ ಹಿರಿಯರಾದ ಮಾತಾಪಿತೃಗಳಿಬ್ಬರನ್ನೂ ಬ್ರಾಹ್ಮಣರಿಗೆ ನಿವೇದಿಸಿ ಧರ್ಮಾತ್ಮನಾದ ವ್ಯಾಧನು ಪುನಃ ಬ್ರಾಹ್ಮಣನನ್ನು ಕುರಿತು ಮಾತನಾಡಿದನು.

ಪ್ರವೃತ್ತಚಕ್ಷುರ್ಜಾತೋಽಸ್ಮಿ ಸಂಪಶ್ಯ ತಪಸೋ ಬಲಮ್ ।
ಯದರ್ಥಮುಕ್ತೋಽಸಿ ತಯಾ ಗಚ್ಛ ತ್ವಂ ಮಿಥಿಲಾಮಿತಿ ॥೨॥

ನನಗೆ ಜ್ಞಾನೋದಯವುಂಟಾಗಿದೆ. ತಪಸ್ಸಿನ ಬಲವನ್ನು ನೋಡು. ಅದರಿಂದ ಆ ಪತಿವ್ರತೆಯು ಮಿಥಿಲಾಪಟ್ಟಣಕ್ಕೆ ಹೋಗು ಎಂದು ನಿನಗೆ ಹೇಳಿದಳು.

ಪತಿಶುಶ್ರೂಷಪರಯಾ ದಾಂತಯಾ ಸತ್ಯಶೀಲಯಾ ।
ಮಿಥಿಲಾಯಾಂ ವಸೇದ್ ವ್ಯಾಧಃ ಸ ತೇ ಧರ್ಮಾನ್ ಪ್ರವಕ್ಷ್ಯತಿ ॥೩॥

ಪತಿಶುಶ್ರೂಷಾಪರಳೂ, ಇಂದ್ರಿಯನಿಗ್ರಹವುಳ್ಳವಳೂ, ಸತ್ಯಶೀಲೆಯೂ ಆದ ಆ ಪತಿವ್ರತೆಯು ಮಿಥಿಲಾಪಟ್ಟಣದಲ್ಲಿ ವ್ಯಾಧನಿದ್ದಾನೆ ಅವನು ನಿನಗೆ ಧರ್ಮಗಳನ್ನು ಉಪದೇಶಿಸುವನು ಎಂದು ಹೇಳಿದಳಷ್ಟೆ?

ಬ್ರಾಹ್ಮಣಃ

ಪತಿವ್ರತಾಯಾಃ ಸತ್ಯಾಯಾಃ ಶೀಲಾಢ್ಯಾಯಾ ಯತವ್ರತ ।
ಸಂಸ್ಮೃತ್ಯ ವಾಕ್ಯಂ ಧರ್ಮಜ್ಞ ಗುಣವಾನಸಿ ಮೇ ಮತಃ ॥೪॥

ಬ್ರಾಹ್ಮಣ– ಎಲೈ ನಿಯತವ್ರತನಾದ ವ್ಯಾಧನೇ, ಪತಿವ್ರತೆಯೂ, ಸತ್ಯಶೀಲೆಯೂ, ಗುಣಾಢ್ಯಳೂ ಆದ ಅವಳ ಮಾತುಗಳನ್ನು ಸ್ಮರಿಸಿ, ಎಲೈ ಧರ್ಮಜ್ಞನೇ, ನೀನು ಗುಣವಂತನೆಂದು ನಾನು ಅಭಿಪ್ರಾಯಪಡುತ್ತೇನೆ.

ವ್ಯಾಧಃ

ಯತ್ ತದಾ ತ್ವಂ ದ್ವಿಜಶ್ರೇಷ್ಠ ತಯೋಕ್ತೋ ಮಾಂ ಪ್ರತಿ ಪ್ರಭೋ ।
ದೃಷ್ಟಮೇವ ತಯಾ ಸಮ್ಯಗೇಕಪತ್ನ್ಯಾ ನ ಸಂಶಯಃ ॥೫॥

ವ್ಯಾಧ– ಎಲೈ ದ್ವಿಜಶ್ರೇಷ್ಠರೇ, ಪ್ರಭುಗಳೇ, ಅವಳು ನನ್ನ ವಿಷಯದಲ್ಲಿ ನಿನಗೆ ಏನು ಹೇಳಿದಳೋ ಅವೆಲ್ಲವನ್ನೂ ಪತಿವ್ರತೆಯಾದ ಅವಳು ನಿಸ್ಸಂಶಯವಾಗಿ ಮೊದಲೇ ನೋಡಿದ್ದಾಳೆ.

ತ್ವದನುಗ್ರಹಬುದ್ಧ್ಯಾ ತು ವಿಪ್ರೈತದ್ ದರ್ಶಿತಂ ಮಯಾ ।
ವಾಕ್ಯಂ ಚ ಶೃಣು ಮೇ ತಾತ ಯತ್ ತೇ ವಕ್ಷ್ಯೇ ಹಿತಂ ದ್ವಿಜ ॥೬॥

ಎಲೈ ಬ್ರಾಹ್ಮಣರೇ, ನಿಮಗೆ ಅನುಗ್ರಹ ಮಾಡಬೇಕೆಂಬ ದೃಷ್ಟಿಯಿಂದ ನಾನು ಇದೆಲ್ಲವನ್ನೂ ತೋರಿಸಿದೆನು. ಪ್ರೀತಿಪಾತ್ರರಾದ ಬ್ರಾಹ್ಮಣರೇ, ನನ್ನ ಮಾತನ್ನು ಕೇಳಿ. ನಿಮಗೆ ಹಿತವನ್ನು ಹೇಳುವೆನು.

ತ್ವಯಾ ವಿನಿಕೃತಾ ಮಾತಾ ಪಿತಾ ಚ ದ್ವಿಜಸತ್ತಮ ।
ಅನಿಸೃಷ್ಟೋಽಸಿ ನಿಷ್ಕ್ರಾಂತೋ ಗೃಹಾತ್ ತಾಭ್ಯಾಮನಿಂದಿತ ।
ವೇದೋಚ್ಚಾರಣಕಾರ್ಯಾರ್ಥಮಯುಕ್ತಂ ತತ್ ತ್ವಯಾ ಕೃತಮ್ ॥೭॥

ಎಲೈ ದ್ವಿಜಶ್ರೇಷ್ಠರೇ, ನೀವು ನಿಮ್ಮ ಮಾತಾಪಿತೃಗಳಿಗೆ ಅಪಚಾರವನ್ನು ಮಾಡಿದ್ದೀರಿ. ಎಲೈ ಅನಿಂದಿತರೇ, ಅವರ ಅನುಮತಿಯನ್ನು ಪಡೆಯದೆ ವೇದೋಚ್ಚಾರದ ಉದ್ದೇಶದಿಂದ ಮನೆಯನ್ನು ಬಿಟ್ಟು ಬಂದಿದ್ದೀರಿ. ನೀವು ಮಾಡಿದುದು ಅಯುಕ್ತವಾದುದು.

ತವ ಶೋಕೇನ ವೃದ್ಧೌ ತಾವಂಧೀಭೂತೌ ತಪಸ್ವಿನೌ ।
ತೌ ಪ್ರಸಾದಯಿತುಂ ಗಚ್ಛ ಮಾ ತ್ವಾಂ ಧರ್ಮೋಽತ್ಯಗಾದಯಮ್ ॥೮॥

ನಿಮ್ಮ ಅಗಲಿಕೆಯ ಶೋಕದಿಂದ ಶೋಚನೀಯರಾದ ಆ ಇಬ್ಬರು ವೃದ್ಧರೂ ಕುರುಡರಾಗಿದ್ದಾರೆ. ಅವರನ್ನು ಸಮಾಧಾನಪಡಿಸಲು ಮನೆಗೆ ಹೋಗಿ. ಈ ಧರ್ಮದ ಅತಿಕ್ರಮವು ಉಂಟಾಗುವುದು ಬೇಡ.

ಸರ್ವಮೇತದಪಾರ್ಥಂ ತೇ ಕ್ಷಿಪ್ರಂ ತ್ವಂ ಸಂಪ್ರಸಾದಯ ।
ತ್ವಂ ಪ್ರಸಾದ್ಯ ದ್ವಿಜಶ್ರೇಷ್ಠ ಯಚ್ಛ್ರೇಯಸ್ತದವಾಪ್ಸ್ಯಸಿ ॥೯॥

ಅವರನ್ನು ಸಂತೋಷಗೊಳಿಸದಿದ್ದರೆ ನೀವು ಮಾಡಿದುದೆಲ್ಲವೂ ವ್ಯರ್ಥವಾಗುತ್ತದೆ. ಎಲೈ ದ್ವಿಜಶ್ರೇಷ್ಠರೇ, ಅವರನ್ನು ಸಂತೋಷ ಪಡಿಸಿ ನೀವು ಎಲ್ಲಾ ಶ್ರೇಯಸ್ಸನ್ನೂ ಹೊಂದುವಿರಿ.

ಶ್ರದ್ದಧಸ್ವ ಮಮ ಬ್ರಹ್ಮನ್ ನಾನ್ಯಥಾ ಕರ್ತುಮರ್ಹಸಿ ।
ಗಮ್ಯತಾಮದ್ಯ ವಿಪ್ರರ್ಷೇ ಶ್ರೇಯಸ್ತೇ ಕಥಯಾಮ್ಯಹಮ್ ॥೧೦॥

ಬ್ರಾಹ್ಮಣರೇ, ನನ್ನ ಮಾತನ್ನು ನಂಬಿ. ಬೇರೆ ಏನನ್ನೂ ಮಾಡಬೇಡಿ. ವಿಪ್ರರ್ಷಿಗಳೇ, ಈ ದಿನವೇ ಮನೆಗೆ ಹೋಗಿ. ನಾನು ನಿಮ್ಮ ಶ್ರೇಯಸ್ಸನ್ನು ಹೇಳುತ್ತಿದ್ದೇನೆ.

ಬ್ರಾಹ್ಮಣಃ

ಯದೇತದುಕ್ತಂ ಭವತಾ ಸರ್ವಂ ಸತ್ಯಮಸಂಶಯಮ್ ।
ಪ್ರೀತೋಽಸ್ಮಿ ತವ ಭದ್ರಂ ತೇ ಧರ್ಮಾಚಾರಣಗುಣಾನ್ವಿತ ॥೧೧॥

ಬ್ರಾಹ್ಮಣ– ಧರ್ಮಾಚಾರಣಗುಣಾನ್ವಿತನಾದ ವ್ಯಾಧನೇ, ನೀನು ಹೇಳಿದುದೆಲ್ಲವೂ ಸತ್ಯವಾಗಿದೆ. ಇದರಲ್ಲಿ ಸಂಶಯವಿಲ್ಲ. ನನಗೆ ಸಂತೋಷವಾಗಿದೆ. ನಿನಗೆ ಮಂಗಳವಾಗಲಿ.

ವ್ಯಾಧಃ

ದೈವತಪ್ರತಿಮೋ ಹಿ ತ್ವಂ ಯಸ್ತ್ವಂ ಧರ್ಮಮನುವ್ರತಃ ।
ಪುರಾಣಂ ಶಾಶ್ವತಂ ದಿವ್ಯಂ ದುಷ್ಪ್ರಾಪ್ಯಮಕೃತಾತ್ಮಭಿಃ ॥೧೨॥

ವ್ಯಾಧ– ಧರ್ಮವನ್ನು ಅನುಸರಿಸುವ ನೀವು ನನಗೆ ದೇವತಾ ಸಮಾನನಾಗಿದ್ದೀರಿ. ದುಷ್ಪರಿಗೆ ದೊರೆಯದಂತಹ ದಿವ್ಯವಾದ ಸನಾತನವಾದ, ಶಾಶ್ವತವಾದ ದೇವತಾ ಸ್ವರೂಪವು ನಿಮ್ಮಲ್ಲಿದೆ.

ಮಾತಾಪಿತ್ರೋಃ ಸಕಾಶಂ ಹಿ ಗತ್ವಾ ತ್ವಂ ದ್ವಿಜಸತ್ತಮ ।
ಅತಂದ್ರಿತಃ ಕುರು ಕ್ಷಿಪ್ರಂ ಮಾತಾಪಿತ್ರೋರ್ಹಿ ಪೂಜನಮ್ ॥೧೩॥

ಅತಃ ಪರಮಹಂ ಧರ್ಮಂ ನಾನ್ಯಂ ಪಶ್ಯಾಮಿ ಕಂಚನ ॥೧೪॥

ಎಲೈ ದ್ವಿಜಶ್ರೇಷ್ಠರೇ, ನೀವು ಮಾತಾಪಿತೃಗಳ ಸಮೀಪಕ್ಕೆ ಕ್ಷಿಪ್ರವಾಗಿ ಹೋಗಿ ಆಲಸ್ಯವಿಲ್ಲದೆ ಅವರ ಸೇವೆಯನ್ನು ಮಾಡಿ. ಇದಕ್ಕಿಂತ ದೊಡ್ಡ ಧರ್ಮವು ನನಗೆ ಯಾವುದೂ ತೋರುವುದಿಲ್ಲ.

ಕೌಶಿಕಃ

ಇಹಾಹಮಾಗತೋ ದಿಷ್ಟ್ಯಾ ದಿಷ್ಟ್ಯಾ ಮೇ ಸಂಗತಂ ತ್ವಯಾ ।
ಈದೃಶಾ ದುರ್ಲಭಾ ಲೋಕೇ ನರಾ ಧರ್ಮಪ್ರದರ್ಶಕಾಃ ॥೧೫॥

ಕೌಶಿಕ– ದೇವರ ದಯೆಯಿಂದ ನಾನು ಇಲ್ಲಿಗೆ ಬಂದು ನಿನ್ನ ಸಮಾಗಮವನ್ನು ಹೊಂದಿದೆ. ಹೀಗೆ ಧರ್ಮದ ಮಾರ್ಗವನ್ನು ತೋರಿಸುವವರು ಲೋಕದಲ್ಲಿ ದುರ್ಲಭರಾಗಿದ್ದಾರೆ.

ಏಕೋ ನರಸಹಸ್ರೇಷು ಧರ್ಮವಿದ್ ವಿದ್ಯತೇ ನ ವಾ ।
ಪ್ರೀತೋಽಸ್ಮಿ ತವ ಸತ್ಯೇನ ಭದ್ರಂ ತೇ ಪುರುಷರ್ಷಭ ॥೧೬॥

ಸಹಸ್ರ ಮನುಷ್ಯರಲ್ಲಿ ಒಬ್ಬನಾದರೂ ಧರ್ಮಜ್ಞನಾದವನು ಇದ್ದಾನೆಯೋ ಇಲ್ಲವೋ ಎನಿಸುತ್ತದೆ. ನಿನ್ನ ಸತ್ಯವಚನಗಳಿಂದ ನಾನು ಸಂತುಷ್ಟನಾಗಿದ್ದೇನೆ. ಪುರುಷಶ್ರೇಷ್ಠನೇ, ನಿನಗೆ ಮಂಗಳವಾಗಲಿ.

ಪತಮಾನೋಽದ್ಯ ನರಕೇ ಭವತಾಽಸ್ಮಿ ಸಮುದ್ಧೃತಃ ।
ಭವಿತವ್ಯಮಥೈವಂ ಚ ಯದ್‌ದೃಷ್ಟೋಽಸಿ ಮಯಾನಘ ॥೧೭॥

ನರಕದಲ್ಲಿ ಬೀಳಲಿದ್ದ ನಾನು ಈ ದಿನ ನಿನ್ನಿಂದ ಉದ್ಧರಿಸಲ್ಪಟ್ಟಿದ್ದೇನೆ. ಎಲೈ ಅನಘನೇ, ನಾನು ನಿನ್ನನ್ನು ನೋಡಬೇಕೆಂಬುದು ದೈವಸಂಕಲ್ಪವಾಗಿದ್ದಿತು.

ರಾಜಾ ಯಯಾತಿರ್ದೌಹಿತ್ರೈಃ ಪತಿತಸ್ತಾರಿತೋ ಯಥಾ ।
ಸದ್ಭಿಃ ಪುರುಷಶಾರ್ದೂಲ ತಥಾಽಹಂ ಭವತಾ ದ್ವಿಜಃ ॥೧೮॥

ಎಲೈ ಪುರುಷಶಾರ್ದೂಲನೇ, ಸ್ವರ್ಗಲೋಕದಿಂದ ಕೆಳಗೆ ಬೀಳುತ್ತಿದ್ದ ಯಯಾತಿಯು ಸಜ್ಜನರಾದ ತನ್ನ ದೌಹಿತ್ರದಿಂದ ಪಾರುಮಾಡಲ್ಪಟ್ಟನು. ಹಾಗೆಯೇ ಬ್ರಾಹ್ಮಣನಾದ ನಾನು ನಿನ್ನಿಂದ ಪಾರುಮಾಡಲ್ಪಟ್ಟಿದ್ದೇನೆ.

ಮಾತಾಪಿತೃಭ್ಯಾಂ ಶುಶ್ರೂಷಾಂ ಕರಿಷ್ಯೇ ವಚನಾತ್ ತವ ।
ನಾಕೃತಾತ್ಮಾ ವೇದಯತಿ ಧರ್ಮಾಧರ್ಮವಿನಿಶ್ಚಯಮ್ ॥೧೯॥

ನಿನ್ನ ಮಾತಿನಂತೆ ನಾನು ಮಾತಾಪಿತೃಗಳ ಸೇವೆಯನ್ನು ಮಾಡುವೆನು. ಮನೋನಿಗ್ರಹವಿಲ್ಲದವನು ಧರ್ಮಾಧರ್ಮಗಳ ವಿವೇಚನೆಯನ್ನು ಮಾಡಲಾರ.

ದುರ್ಜ್ಞೇಯಃ ಶಾಶ್ವತೋ ಧರ್ಮಃ ಶೂದ್ರಯೋನೌ ಹಿ ವರ್ತತೇ ।
ನ ತ್ವಾಂ ಶೂದ್ರಮಹಂ ಮನ್ಯೇ ಭವಿತವ್ಯಂ ಹಿ ಕಾರಣಮ್ ॥೨೦॥

ದುರ್ಜ್ಞೇಯವಾದ ಶಾಶ್ವತವಾದ ಧರ್ಮವು ಶೂದ್ರಯೋನಿಯಲ್ಲಿರುವ ನಿನ್ನಲ್ಲಿ ಆಶ್ರಿತವಾಗಿದೆ. ನಾನು ನಿನ್ನನ್ನು ಶೂದ್ರನೆಂದು ಭಾವಿಸುವುದಿಲ್ಲ. ನೀನು ಶೂದ್ರಯೋನಿಯಲ್ಲಿ ಹುಟ್ಟುವುದಕ್ಕೆ ಏನೋ ಬಲವಾದ ಕಾರಣವಿರಬೇಕು.

ಯೇನ ಕರ್ಮವಿಶೇಷೇಣ ಪ್ರಾಪ್ತೇಯಂ ಶೂದ್ರತಾ ತ್ವಯಾ ।
ಏತದಿಚ್ಛಾಮಿ ವಿಜ್ಞಾತುಂ ತತ್ತ್ವೇನ ಹಿ ಮಹಾಮತೇ ।
ಕಾಮಯಾ ಬ್ರೂಹಿ ಮೇ ಸರ್ವಂ ಸತ್ಯೇನ ಪ್ರಯತಾತ್ಮನಾ ॥೨೧॥

ಎಲೈ ಮಹಾಮತಿಯೇ, ನೀನು ಯಾವ ಕರ್ಮವಿಶೇಷದಿಂದ ಈ ಶೂದ್ರಯೋನಿಯನ್ನು ಹೊಂದಿದೆ ಎಂದು ನಾನು ಸರಿಯಾಗಿ ತಿಳಿಯಲು ಬಯಸುತ್ತೇನೆ. ನಿಯತಾತ್ಮನಾದ ನೀನು ಅವೆಲ್ಲವನ್ನೂ ನನಗೆ ಸತ್ಯವಾಗಿ ಸಂತೋಷದಿಂದ ಹೇಳು.

ವ್ಯಾಧಃ

ಅನತಿಕ್ರಮಣೀಯಾ ವೈ ಬ್ರಾಹ್ಮಣಾ ಮೇ ದ್ವಿಜೋತ್ತಮ ।
ಶೃಣು ಸರ್ವಮಿದಂ ವೃತ್ತಂ ಪೂರ್ವದೇಹೇ ಮಮಾನಘ ॥೨೨॥

ವ್ಯಾಧ– ಎಲೈ ದ್ವಿಜೋತ್ತಮರೇ, ನನಗೆ ಬ್ರಾಹ್ಮಣರು ಮೀರಲು ಅಸಾಧ್ಯರಾದವರು. ಅನಘರೇ, ನನ್ನ ಹಿಂದಿನ ದೇಹದಲ್ಲಿ ನಡೆದ ಈ ಘಟನೆಯನ್ನೆಲ್ಲಾ ಕೇಳಿ.

ಅಹಂ ಹಿ ಬ್ರಾಹ್ಮಣಃ ಪೂರ್ವಮಾಸಂ ದ್ವಿಜವರಾತ್ಮಜಃ ।
ವೇದಾಧ್ಯಾಯೀ ಸುಕುಶಲೋ ವೇದಾಂಗಾನಾಂ ಚ ಪಾರಗಃ ॥೨೩॥

ಆತ್ಮದೋಷಕೃತೈರ್ಬ್ರಹ್ಮನ್ನವಸ್ಥಾಮಾಪ್ತವಾನಿಮಾಮ್ ॥೨೪॥

ನಾನು ಹಿಂದಿನ ಜನ್ಮದಲ್ಲಿ ಒಬ್ಬ ಶ್ರೇಷ್ಠಬ್ರಾಹ್ಮಣನ ಮಗನಾಗಿದ್ದೆ. ವೇದಾಧ್ಯಯನದಲ್ಲಿ ಕುಶಲನೂ, ವೇದಾಂಗದಲ್ಲಿ ಪಾರಂಗತನೂ ಆಗಿದ್ದೆನು. ಎಲೈ ಬ್ರಾಹ್ಮಣರೇ, ನಾನು ಸ್ವತಃ ಮಾಡಿದ ಅಪರಾಧದಿಂದಾಗಿ ಈ ದುರವಸ್ಥೆಯನ್ನು ಪಡೆದಿದ್ದೇನೆ.

ಕಶ್ಚಿದ್ ರಾಜಾ ಮಮ ಸಖಾ ಧನುರ್ವೇದಪರಾಯಣಃ ।
ಸಂಸರ್ಗಾದ್ ಧನುಷಿ ಶ್ರೇಷ್ಠಸ್ತತೋಽಹಮಭವಂ ದ್ವಿಜ ॥೨೫॥

ನನಗೆ ಧನುರ್ವೇದಪರಾಯಣನಾದ ಒಬ್ಬ ರಾಜನು ಸ್ನೇಹಿತನಾಗಿದ್ದನು. ಎಲೈ ಬ್ರಾಹ್ಮಣರೇ, ಅವನ ಸಂಪರ್ಕದಿಂದ ನಾನೂ ಸಹ ಧನುರ್ವಿದ್ಯೆಯಲ್ಲಿ ನಿಪುಣನಾದೆನು.

ಏತಸ್ಮಿನ್ನೇವ ಕಾಲೇ ತು ಮೃಗಯಾಂ ನಿರ್ಗತೋ ನೃಪಃ ।
ಸಹಿತೋ ಯೋಧಮುಖ್ಯೈಶ್ಚ ಮಂತ್ರಿಭಿಶ್ಚ ಸುಸಂವೃತಃ ।
ತತೋಽಭ್ಯಹನ್ ಮೃಗಾಂಸ್ತತ್ರ ಸುಬಹೂನಾಶ್ರಮಂ ಪ್ರತಿ ॥೨೬॥

ಆ ಸಮಯದಲ್ಲಿ ಒಮ್ಮೆ ರಾಜನು ತನ್ನ ಮಂತ್ರಿಗಳಿಂದಲೂ ಮತ್ತು ಮುಖ್ಯವಾದ ಸೈನಿಕರಿಂದಲೂ ಸಹಿತನಾಗಿ ಬೇಟೆಗೆ ಹೊರಟನು. ಅವನು ಕಾಡಿನಲ್ಲಿ ಒಂದು ಆಶ್ರಮದ ಬಳಿ ಇದ್ದ ಅನೇಕ ಮೃಗಗಳನ್ನು ಕೊಂದನು.

ಅಥ ಕ್ಷಿಪ್ತಃ ಶರೋ ಘೋರೋ ಮಯಾಽಪಿ ದ್ವಿಜಸತ್ತಮ ।
ತಾಡಿತಶ್ಚ ಋಷಿಸ್ತೇನ ಶರೇಣಾನತಪರ್ವಣಾ ॥೨೭॥

ಎಲೈ ದ್ವಿಜಶ್ರೇಷ್ಠರೇ, ಆಗ ನಾನೂ ಒಂದು ಘೋರವಾದ ಬಾಣವನ್ನು ಪ್ರಯೋಗಿಸಿದೆನು. ಬಾಗಿದ ತುದಿಯುಳ್ಳ ಆ ಬಾಣವು ಋಷಿಯನ್ನು ತಾಕಿತು.

ಭೂಮೌ ನಿಪತಿತೋ ಬ್ರಹ್ಮನ್ನುವಾಚ ಪ್ರತಿನಾದಯನ್ ।
ನಾಪರಾಧ್ಯಾಮ್ಯಹಂ ಕಿಂಚಿತ್ ಕೇನ ಪಾಪಮಿದಂ ಕೃತಮ್ ॥೨೮॥

ಎಲೈ ಬ್ರಾಹ್ಮಣರೇ, ಭೂಮಿಯಲ್ಲಿ ಬಿದ್ದ ಆ ಋಷಿಯು ನಾನು ಯಾರಿಗೂ ಅಪರಾಧವನ್ನು ಮಾಡಿಲ್ಲ. ಈ ಪಾಪಕಾರ್ಯವನ್ನು ಮಾಡಿದವನು ಯಾರು? ಎಂದು ಗರ್ಜಿಸುತ್ತಾ ಹೇಳಿದನು.

ಮನ್ವಾನಸ್ತಂ ಮೃಗಂ ಚಾಹಂ ಸಂಪ್ರಾಪ್ತಃ ಸಹಸಾ ಪ್ರಭೋ ।
ಅಪಶ್ಯಂ ತಮೃಷಿಂ ವಿದ್ಧಂ ಶರೇಣಾನತಪರ್ವಣಾ ॥೨೯॥

ಪ್ರಭುಗಳೇ, ಅವನನ್ನು ಮೃಗವೆಂದು ತಿಳಿದಿದ್ದ ನಾನು ತಕ್ಷಣ ಅವನ ಹತ್ತಿರಕ್ಕೆ ಹೋಗಿ ಬಾಗಿದ ತುದಿಯುಳ್ಳ ಬಾಣದಿಂದ ತಾಡಿತನಾದ ಆ ಋಷಿಯನ್ನು ನೋಡಿದೆನು.

ತಮುಗ್ರತಪಸಂ ವಿಪ್ರಂ ನಿಷ್ಪನಂತಂ ಮಹೀತಳೇ ।
ಅಕಾರ್ಯಕರಣಾಚ್ಚಾಪಿ ಭೃಶಂ ಮೇ ವ್ಯಥಿತಂ ಮನಃ ॥೩೦॥

ಅಜಾನತಾ ಕೃತಮಿದಂ ಮಯೇತ್ಯಹಮಥಾಬ್ರುವಮ್ ।
ಕ್ಷಂತುಮರ್ಹಸಿ ಮೇ ಸರ್ವಮಿತಿ ಚೋಕ್ತೋ ಮಯಾ ಮುನಿಃ ॥೩೧॥

ಉಗ್ರ ತಪಸ್ವಿಯಾಗಿದ್ದ, ಭೂಮಿಯಲ್ಲಿ ಬಿದ್ದು ಹೊರಳಾಡುತ್ತಿದ್ದ ಆ ಬ್ರಾಹ್ಮಣನನ್ನು ನೋಡಿ ನಾನು ಅಕಾರ್ಯವನ್ನು ಮಾಡಿದುದರಿಂದ ಮನಸ್ಸಿನಲ್ಲಿ ಬಹಳ ವ್ಯಥೆಯನ್ನು ಪಟ್ಟೆನು. ನಾನು ನೀವು ಋಷಿಗಳೆಂದು ತಿಳಿಯದೆ ಅಜ್ಞಾನದಿಂದ ಈ ಕಾರ್ಯವನ್ನು ಮಾಡಿದೆನು. ಆದ್ದರಿಂದ ನಾನು ಮಾಡಿದ ಅಪರಾಧವನ್ನು ಕ್ಷಮಿಸಬೇಕು ಎಂದು ಆ ಋಷಿಗಳಿಗೆ ಹೇಳಿದೆನು.

ತತಃ ಪ್ರತ್ಯಬ್ರವೀದ್ ವಾಕ್ಯಮೃಷಿರ್ಮಾಂ ಕ್ರೋಧಮೂರ್ಛಿತಃ ।
ವ್ಯಾಧಸ್ತ್ವಂ ಭವಿತಾ ಕ್ರೂರ ಶೂದ್ರಯೋನಾವಿತಿ ದ್ವಿಜ ॥೩೨॥

ಎಲೈ ಬ್ರಾಹ್ಮಣರೇ, ಆಗ ಕ್ರೋಧಮೂರ್ಛಿತರಾದ ಆ ಋಷಿಯು ನನ್ನನ್ನು ಕುರಿತು ಎಲೈ ಕ್ರೂರನೇ, ನೀನು ಶೂದ್ರಯೋನಿಯಲ್ಲಿ ಜನಿಸಿ ವ್ಯಾಧನಾಗುವಿ ಎಂದು ಹೇಳಿದರು.

ಏವಂ ಶಪ್ತೋಽಹಮೃಷಿಣಾ ತದಾ ದ್ವಿಜವರೋತ್ತಮ ।
ಅಭಿಪ್ರಸಾದಯಮೃಷಿಂ ಗಿರಾ ತ್ರಾಹೀತಿ ಮಾಂ ತದಾ ॥೩೩॥

ಅಜಾನತಾ ಮಯಾಽಕಾರ್ಯಮಿದಮದ್ಯ ಕೃತಂ ಮುನೇ ।
ಕ್ಷಂತುಮರ್ಹಸಿ ತತ್ಸರ್ವಂ ಪ್ರಸೀದ ಭಗವನ್ನಿತಿ ॥೩೪॥

ಎಲೈ ಬ್ರಾಹ್ಮಣಶ್ರೇಷ್ಠರೇ, ಆ ಋಷಿಗಳಿಂದ ಹೀಗೆ ಶಾಪಕ್ಕೆ ಒಳಗಾದ ನಾನು ಆಗ ಪ್ರಸನ್ನನಾಗಿ ನನ್ನನ್ನು ರಕ್ಷಿಸಿ. ಎಲೈ ಪೂಜ್ಯರೇ, ನಾನು ತಿಳಿಯದೆ ಈ ದಿನ ಈ ಅಕಾರ್ಯವನ್ನು ಮಾಡಿದೆನು. ನನ್ನ ಅಪರಾಧವೆಲ್ಲವನ್ನೂ ಕ್ಷಮಿಸಿ ಪ್ರಸನ್ನರಾಗಬೇಕು ಎಂದು ಕೇಳಿಕೊಂಡೆನು.

ಋಷಿಃ

ನಾನ್ಯಥಾ ಭವಿತಾ ಶಾಪ ಏವಮೇತದಸಂಶಯಮ್ ।
ಆನೃಶಂಸ್ಯಾತ್ ತ್ವಹಂ ಕಿಂಚಿತ್ ಕರ್ತಾऽನುಗ್ರಹಮದ್ಯ ತೇ ॥೩೫॥

ಋಷಿ– ನನ್ನ ಶಾಪವು ವ್ಯರ್ಥವಾಗುವುದಿಲ್ಲ. ಇದರಲ್ಲಿ ಸಂಶಯವಿಲ್ಲ. ಆದರೆ ನಿನ್ನ ಮೇಲಿನ ಕರುಣೆಯಿಂದ ನಿನಗೆ ಸ್ವಲ್ಪ ಅನುಗ್ರಹವನ್ನು ಮಾಡುವೆನು.

ಶೂದ್ರಯೋನ್ಯಾಂ ವರ್ತಮಾನೋ ಧರ್ಮಜ್ಞೋ ಹಿ ಭವಿಷ್ಯಸಿ ।
ಮಾತಾಪಿತ್ರೋಶ್ಚ ಶುಶ್ರೂಷಾಂ ಕರಿಷ್ಯಸಿ ನ ಸಂಶಯಃ ॥೩೬॥

ಶೂದ್ರಯೋನಿಯಲ್ಲಿ ಹುಟ್ಟಿದರೂ ನೀನು ಧರ್ಮಜ್ಞನಾಗಿರುವಿ. ಮಾತಾಪಿತೃಗಳ ಸೇವೆಯನ್ನು ಮಾಡುವಿ. ಇದರಲ್ಲಿ ಸಂಶಯವಿಲ್ಲ.

ತಯಾ ಶುಶ್ರೂಷಯಾ ಸಿದ್ಧಿಂ ಮಹತೀಂ ಸಮವಾಪ್ಸ್ಯಸಿ ।
ಜಾತಿಸ್ಮರಶ್ಚ ಭವಿತಾ ಸ್ವರ್ಗಂ ಚೈವ ಗಮಿಷ್ಯಸಿ ॥೩೭॥

ಆ ಸೇವೆಯಿಂದ ನಿನಗೆ ದೊಡ್ಡ ಸಿದ್ಧಿ ಉಂಟಾಗುವುದು. ಪೂರ್ವಜನ್ಮದ ಸ್ಮರಣೆಯೂ ಉಂಟಾಗುವುದು ಮತ್ತು ನೀನು ಸ್ವರ್ಗಕ್ಕೆ ಹೋಗುವಿ.

ಭೂತ್ವಾ ಚ ಧಾರ್ಮಿಕೋ ವ್ಯಾಧಃ ಪಿತೃಶುಶ್ರೂಷಣೇ ರತಃ ।
ಶಾಪಕ್ಷಯೇ ತು ನಿರ್ವೃತ್ತೇ ಭವಿತಾಸಿ ಪುನರ್ದ್ವಿಜಃ ॥೩೮॥

ನೀನು ಧಾರ್ಮಿಕನಾದ ವ್ಯಾಧನಾಗಿ ತಂದೆತಾಯಿಗಳ ಸೇವೆಯಲ್ಲಿ ನಿರತನಾಗಿ ಶಾಪದ ಫಲವು ಕಳೆದ ಮೇಲೆ ಪುನಃ ಬ್ರಾಹ್ಮಣನಾಗುವಿ.

ವ್ಯಾಧಃ

ಏವಂ ಶಪ್ತಃ ಪುರಾ ತೇನ ಋಷಿಣಾऽಸ್ಮ್ಯುಗ್ರತೇಜಸಾ ।
ಪ್ರಸಾದಶ್ಚ ಕೃತಸ್ತೇನ ಮಮೈವಂ ದ್ವಿಪದಾಂವರ ॥೩೯॥

ವ್ಯಾಧ– ಎಲೈ ಬ್ರಾಹ್ಮಣಶ್ರೇಷ್ಠರೇ, ಹೀಗೆ ಘೋರತೇಜಸ್ವಿಗಳಾದ ಆ ಋಷಿಗಳಿಂದ ಶಾಪವುಂಟಾಯಿತು ಮತ್ತು ಅವರು ಅನುಗ್ರಹವನ್ನೂ ಮಾಡಿದರು.

ಶರಂ ಚೋದ್ಧೃತವಾನಸ್ಮಿ ತಸ್ಯ ವೈ ದ್ವಿಜಸತ್ತಮ ।
ಆಶ್ರಮಂ ಚ ಮಯಾ ನೀತೋ ನ ಚ ಪ್ರಾಣೈರ್ವ್ಯಯುಜ್ಯತ ॥೪೦॥

ಎಲೈ ದ್ವಿಜಶ್ರೇಷ್ಠರೇ, ನಾನು ಅವರ ಶರೀರದಲ್ಲಿ ನೆಟ್ಟ ಬಾಣವನ್ನು ತೆಗೆದು ಅವರನ್ನು ಆಶ್ರಮಕ್ಕೆ ಕರೆದುಕೊಂಡು ಹೋದೆನು. ಅವರು ಮರಣವನ್ನು ಹೊಂದಲಿಲ್ಲ.

ಏತತ್ ತೇ ಸರ್ವಮಾಖ್ಯಾತಂ ಯಥಾ ಮಮ ಪುರಾऽಭವತ್ ।
ಅಭಿತಶ್ಚಾಪಿ ಗಂತವ್ಯಂ ಮಯಾ ಸ್ವರ್ಗಂ ದ್ವಿಜೋತ್ತಮ ॥೪೧॥

ಹೀಗೆ ನನಗೆ ಹಿಂದೆ ನಡೆದುದನ್ನೆಲ್ಲಾ ನಿಮಗೆ ಹೇಳಿದೆನು. ಎಲೈ ದ್ವಿಜೋತ್ತಮರೇ, ನಾನು ಸದ್ಯದಲ್ಲಿಯೇ ಸ್ವರ್ಗಕ್ಕೆ ಹೋಗಬೇಕಾಗಿದೆ.

ಬ್ರಾಹ್ಮಣಃ

ಏವಮೇತಾನಿ ಪುರುಷಾ ದುಃಖಾನಿ ಚ ಸುಖಾನಿ ಚ ।
ಆಪ್ನುವಂತಿ ಮಹಾಬುದ್ಧೇ ನೋತ್ಕಂಠಾಂ ಕರ್ತುಮರ್ಹಸಿ ॥೪೨॥

ದುಷ್ಕರಂ ಹಿ ಕೃತಂ ಕರ್ಮ ಜಾನತಾ ಜಾತಿಮಾತ್ಮನಃ ॥೪೩॥

ಬ್ರಾಹ್ಮಣ– ಎಲೈ ಮಹಾಬುದ್ಧಿಯುಳ್ಳವನೇ, ಮನುಷ್ಯರು ಹೀಗೆ ಸುಖದುಃಖಗಳನ್ನು ಪಡೆಯುತ್ತಾರೆ. ಇದರ ಬಗ್ಗೆ ಕೊರಗಬೇಡ. ಪೂರ್ವಜನ್ಮದ ಸ್ಮರಣೆಯನ್ನು ಹೊಂದಿದ ನೀನು ದುಷ್ಕರವಾದ ಕಾರ್ಯವನ್ನು ಮಾಡಿದ್ದೀಯೆ.

ಕರ್ಮದೋಷಶ್ಚ ವೈ ವಿದ್ವನ್ನಾತ್ಮಜಾತಿಕೃತೇನ ತೇ ।
ಕಂಚಿತ್ ಕಾಲಂ ಮೃಷ್ಯತಾಂ ವೈ ತತೋऽಸಿ ಭವಿತಾ ದ್ವಿಜಃ ।
ಸಾಂಪ್ರತಂ ಚ ಮತೋ ಮೇऽಸಿ ಬ್ರಾಹ್ಮಣೋ ನಾತ್ರ ಸಂಶಯಃ ॥೪೪॥

ಎಲೈ ವಿದ್ವಾಂಸನೇ, ನಿನ್ನ ಜಾತಿಪ್ರಯುಕ್ತವಾಗಿ ನಿನಗೆ ಈ ಕರ್ಮದೋಷವು ಉಂಟಾಗಿದೆ. ಸ್ವಲ್ಪ ಸಮಯ ಸಹಿಸಿಕೋ. ಅನಂತರ ಬ್ರಾಹ್ಮಣನಾಗುವಿ. ನನ್ನ ಅಭಿಪ್ರಾಯದಂತೆ ನೀನು ಈಗಲೇ ಬ್ರಾಹ್ಮಣನಾಗಿದ್ದೀಯೆ ಎಂಬ ವಿಷಯದಲ್ಲಿ ಸಂಶಯವಿಲ್ಲ.

ಬ್ರಾಹ್ಮಣಃ ಪತನೀಯೇಷು ವರ್ತಮಾನೋ ವಿಕರ್ಮಸು ।
ದಾಂಭಿಕೋ ದುಷ್ಕೃತಃ ಪ್ರಾಯಃ ಶೂದ್ರೇಣ ಸದೃಶೋ ಭವೇತ್ ॥೪೫॥

ಪತನಕ್ಕೆ ಕಾರಣವಾದ ವಿಕರ್ಮಗಳನ್ನು ಮಾಡುವ ದುಷ್ಕರ್ಮಿಯಾದ ಡಾಂಭಿಕನಾದ ಬ್ರಾಹ್ಮಣನು ಹೆಚ್ಚಾಗಿ ಶೂದ್ರನಿಗೆ ಸಮಾನನಾಗುತ್ತಾನೆ.

ಯಸ್ತು ಶೂದ್ರೋ ದಮೇ ಸತ್ಯೇ ಧರ್ಮೇ ಚ ಸತತೋಽತ್ಥಿತಃ ।
ತಂ ಬ್ರಾಹ್ಮಣಮಹಂ ಮನ್ಯೇ ವೃತ್ತೇನ ಹಿ ಭವೇದ್ ದ್ವಿಜಃ ॥೪೬॥

ಯಾವ ಶೂದ್ರನು ದಮ, ಸತ್ಯ, ಧರ್ಮಗಳಲ್ಲಿ ಸತತವಾಗಿ ನಿರತನಾಗಿರುತ್ತಾನೆಯೋ ಅವನನ್ನು ನಾನು ಬ್ರಾಹ್ಮಣನೆಂದು ತಿಳಿಯುತ್ತೇನೆ. ಗುಣದಿಂದಲೇ ಬ್ರಾಹ್ಮಣ್ಯವು ಉಂಟಾಗುವುದಷ್ಟೆ.

ಕರ್ಮದೋಷೇಣ ವಿಷಮಾಂ ಗತಿಮಾಪ್ನೋತಿ ದಾರುಣಾಮ್ ।
ಕ್ಷೀಣದೋಷಮಹಂ ಮನ್ಯೇ ಚಾಭಿತಸ್ತ್ವಾಂ ನರೋತ್ತಮ ॥೪೭॥

ಕರ್ಮದೋಷದಿಂದ ಮನುಷ್ಯನು ಘೋರವಾದ ವಿಷಮಗತಿಯನ್ನು ಹೊಂದುತ್ತಾನೆ. ಎಲೈ ನರಶ್ರೇಷ್ಠನೇ, ಈಗ ನಿನ್ನ ದೋಷವು ನಾಶವನ್ನು ಹೊಂದಿದೆ ಎಂದು ನಾನು ತಿಳಿಯುತ್ತೇನೆ.

ಕರ್ತುಮರ್ಹಸಿ ನೋತ್ಕಂಠಾಂ ತ್ವದ್ವಿಧಾ ಹ್ಯವಿಷಾದಿನಃ ।
ಲೋಕವೃತ್ತಾನುವೃತ್ತಜ್ಞಾ ನಿತ್ಯಂ ಧರ್ಮಪರಾಯಣಾಃ ॥೪೮॥

ಈ ವಿಷಯದಲ್ಲಿ ವಿಷಾದವನ್ನು ಪಡಬೇಡ. ಲೋಕವೃತ್ತವನ್ನು ತಿಳಿದ, ನಿತ್ಯವೂ ಧರ್ಮಪರಾಯಣರಾದ ನಿನ್ನಂತಹವರು ವಿಷಾದವನ್ನು ಪಡಬಾರದು.

ವ್ಯಾಧಃ

ಪ್ರಜ್ಞಯಾ ಮಾನಸಂ ದುಃಖಂ ಹನ್ಯಾಚ್ಛಾರೀರಮೌಷಧೈಃ ।
ಏತದ್ ವಿಜ್ಞಾನಸಾಮರ್ಥ್ಯಂ ನ ಬಾಲೈಃ ಸಮತಾಮಿಯಾತ್ ॥೪೯॥

ವ್ಯಾಧ– ಜ್ಞಾನದಿಂದ ಮಾನಸದುಃಖವನ್ನೂ, ಔಷಧಿಗಳಿಂದ ಶರೀರದ ದುಃಖವನ್ನೂ ಪರಿಹರಿಸಿಕೊಳ್ಳಬೇಕು. ಜ್ಞಾನದ ಬಲ ಇಂತಹುದು. ಜ್ಞಾನವುಳ್ಳವನು ಎಂದೂ ಬಾಲಕರಿಗೆ ಸಮನಾಗುವುದಿಲ್ಲ.

ಅನಿಷ್ಟಸಂಪ್ರಯೋಗಾಚ್ಚ ವಿಪ್ರಯೋಗಾತ್ ಪ್ರಿಯಸ್ಯ ಚ ।
ಮನುಷ್ಯಾ ಮಾನಸೈರ್ದುಃಖೈರ್ಯುಜ್ಯಂತೇ ಚಾಲ್ಪಬುದ್ಧಯಃ ॥೫೦॥

ಅನಿಷ್ಟಸಂಯೋಗದಿಂದ ಮತ್ತು ಇಷ್ಟವಿಯೋಗದಿಂದ ಅಲ್ಪಬುದ್ಧಿಯುಳ್ಳ ಮನುಷ್ಯರು ಮಾನಸದುಃಖಗಳಿಗೆ ಒಳಗಾಗುತ್ತಾರೆ.

ಗುಣೈರ್ಭೂತಾನಿ ಯುಜ್ಯಂತೇ ವಿಯುಜ್ಯಂತೇ ತಥೈವ ಚ ।
ಸರ್ವಾಣಿ ನೈತದೇಕಸ್ಯ ಶೋಕಸ್ಥಾನಂ ಹಿ ವಿದ್ಯತೇ ॥೫೧॥

ಎಲ್ಲಜೀವರಿಗೂ ಇಂತಹ ಆಪತ್ತುಗಳು ಬರುತ್ತವೆ ಮತ್ತು ಹೋಗುತ್ತವೆ. ಎಲ್ಲರಿಗೂ ಒಂದೇ ವಿಧವಾದ ಶೋಕಸ್ಥಾನವಿಲ್ಲ.

ಅನಿಷ್ಟಂ ಚಾನ್ವಿತಂ ಪಶ್ಯಂಸ್ತಥಾ ಕ್ಷಿಪ್ರಂ ವಿರಜ್ಯತೇ ।
ತತಶ್ಚ ಪ್ರತಿಕುರ್ವಂತಿ ಯದಿ ಪಶ್ಯಂತ್ಯುಪಕ್ರಮಾತ್ ॥೫೨॥

ಶೋಚತೋ ನ ಭವೇತ್ ಕಿಂಚಿತ್ ಕೇವಲಂ ಪರಿತಪ್ಯತೇ ॥೫೩॥

ಅನಿಷ್ಟ ಒದಗಿದ ಕೂಡಲೇ ಅದನ್ನು ನೋಡಿ ಮನುಷ್ಯನು ಬೇಗ ವಿಷಾದಪಡುತ್ತಾನೆ. ತನ್ನ ಪ್ರಯತ್ನದಿಂದ ಅದನ್ನು ಪರಿಹರಿಸಲು ಶಕ್ಯವಾದರೆ ಆ ಪರಿಹಾರವನ್ನು ಮಾಡಲು ಪ್ರಯತ್ನಿಸುತ್ತಾನೆ. ಕೇವಲ ಶೋಕಪಡುವುದರಿಂದ ಏನೂ ಆಗುವುದಿಲ್ಲ. ಕೇವಲ ಶೋಕಿಸುವುದಷ್ಟೇ ಆಗುತ್ತದೆ.

ಪರಿತ್ಯಜಂತಿ ಯೇ ದುಃಖಂ ಸುಖಂ ವಾಪ್ಯುಭಯಂ ನರಾಃ ।
ತ ಏವ ಸುಖಮೇಧಂತೇ ಜ್ಞಾನತೃಪ್ತಾ ಮನೀಷಿಣಃ ।
ಅಸಂತೋಷಪರಾ ಮೂಢಾಃ ಸಂತೋಷಂ ಯಾಂತಿ ಪಂಡಿತಾಃ ॥೫೪॥

ಯಾವ ಮನುಷ್ಯರು ಹೀಗೆ ಸಂಸಾರದಲ್ಲಿ ಒದಗಿಬಂದ ಪ್ರಾಕೃತವಾದ ಸುಖ ಮತ್ತು ದುಃಖಗಳೆರಡನ್ನೂ ತ್ಯಜಿಸುತ್ತಾರೆಯೋ ಜ್ಞಾನತೃಪ್ತರಾದ ವಿವೇಕಿಗಳಾದ ಅವರೇ ಸುಖವನ್ನು ಹೊಂದುತ್ತಾರೆ. ಮೂಢರು ಯಾವಾಗಲೂ ಅಸಂತೋಷವನ್ನೇ ಪಡೆಯುತ್ತಾರೆ. ಪಂಡಿತರು ಸಂತೋಷವನ್ನು ಹೊಂದುತ್ತಾರೆ.

ಅಸಂತೋಷಸ್ಯ ನಾಸ್ತ್ಯಂತಸ್ತುಷ್ಟಿಸ್ತು ಪರಮಂ ಸುಖಮ್ ।
ನ ಶೋಚಂತಿ ಗತಾಧ್ವಾನಃ ಪಶ್ಯಂತಃ ಪರಮಾಂ ಗತಿಮ್ ॥೫೫॥

ಅಸಂತೋಷ ಎಂದರೆ ಅತೃಪ್ತಿ. ಅತೃಪ್ತಿಗೆ ಕೊನೆಯೇ ಇಲ್ಲ. ತೃಪ್ತಿಯೇ ಪರಮಸುಖಕರವಾದುದು. ದೂರದಿಂದ ನಡೆದುಬಂದವರು ತಮ್ಮ ಗುರಿಯನ್ನು ತಲುಪಿದ ಮೇಲೆ ಹಿಂದೆ ನಡೆದುಬಂದ ಮಾರ್ಗವನ್ನು ನೋಡಿ ದುಃಖಪಡುವುದಿಲ್ಲ.

ನ ವಿಷಾದೇ ಮನಃ ಕಾರ್ಯಂ ವಿಷಾದೋ ವಿಷಮುತ್ತಮಮ್ ।
ಮಾರಯತ್ಯಕೃತಪ್ರಜ್ಞಂ ಬಾಲಂ ಕ್ರುದ್ಧ ಇವೋರಗಃ ॥೫೬॥

ಯಾವಾಗಲೂ ಮನಸ್ಸಿನಲ್ಲಿ ವಿಷಾದವನ್ನು ಪಡಬಾರದು. ವಿಷಾದವೆಂಬುದು ಶ್ರೇಷ್ಠವಾದ ವಿಷ. ಅದು ಕೋಪಗೊಂಡ ಸರ್ಪದಂತೆ ಅವಿವೇಕಿಯಾದ ಬಾಲಕನನ್ನು ಕೊಲ್ಲುತ್ತದೆ.

ಯಂ ವಿಷಾದೋಽಭಿಭವತಿ ವಿಕ್ರಮೇ ಸಮುಪಸ್ಥಿತೇ ।
ತೇಜಸಾ ತಸ್ಯ ಹೀನಸ್ಯ ಪುರುಷಾರ್ಥೋ ನ ವಿದ್ಯತೇ ॥೫೭॥

ಪ್ರಯತ್ನವನ್ನು ಮಾಡಬೇಕಾದ ಕಾಲದಲ್ಲಿ ಯಾವನನ್ನು ವಿಷಾದವು ಆವರಿಸುತ್ತದೆಯೋ ಅವನು ಪರಾಕ್ರಮಹೀನನಾದವನು. ಅವನಿಗೆ ಯಾವ ಪುರುಷಾರ್ಥ ಪ್ರಾಪ್ತಿಯೂ ಇಲ್ಲ.

ಅವಶ್ಯಂ ಕ್ರಿಯಮಾಣಸ್ಯ ಕರ್ಮಣೋ ದೃಶ್ಯತೇ ಫಲಮ್ ।
ನ ಹಿ ನಿರ್ವೇದಮಾಗಮ್ಯ ಕಿಂಚಿತ್ ಪ್ರಾಪ್ನೋತಿ ಶೋಭನಮ್ ॥೫೮॥

ಒಂದು ಕರ್ಮವನ್ನು ಪ್ರಯತ್ನಪೂರ್ವಕವಾಗಿ ಮಾಡಿದರೆ ಫಲವು ಅವಶ್ಯವಾಗಿ ದೊರೆಯುತ್ತದೆ. ಸತ್ಕರ್ಮದಲ್ಲಿಯೇ ವೈರಾಗ್ಯವನ್ನು ಹೊಂದಿ ವಿಷಾದದಿಂದ ಕುಳಿತಿದ್ದರೆ ಯಾವ ಒಳ್ಳೆಯ ಫಲವೂ ಉಂಟಾಗುವುದಿಲ್ಲ.

ಅಥಾಪ್ಯುಪಾಯಂ ಪಶ್ಯೇತ ದುಃಖಸ್ಯ ಪರಿಮೋಕ್ಷಣೇ ।
ಅಶೌಚಂ ನಾರಭೇತೈವ ಯುಕ್ತಶ್ಚಾವ್ಯಸನೀ ಭವೇತ್ ॥೫೯॥

ಆದರೂ ದುಃಖವುಂಟಾದಾಗ ಅದನ್ನು ಪರಿಹರಿಸಿಕೊಳ್ಳುವ ಉಪಾಯವನ್ನು ಹುಡುಕಬೇಕು. ತನ್ನ ಜೀವನದ ಆಸೆಯಿಂದ ಮಾಂಸಭಕ್ಷಣ ಮೊದಲಾದ ಅಶುಚಿಯಾದ ಕರ್ಮಗಳನ್ನು ಮಾಡಲು ಆರಂಭಿಸಬಾರದು. ಯಾವ ಚಟಕ್ಕೂ ಬಲಿಯಾಗದೆ ಯುಕ್ತವಾದ ಕರ್ಮವನ್ನೇ ಮಾಡಬೇಕು.

ಭೂತೇಷ್ವಭಾವಂ ಸಂಚಿಂತ್ಯ ತೇ ಯು ಬುದ್ಧೇಃ ಪರಂ ಗತಾಃ ।
ನ ಶೋಚಂತಿ ಕೃತಪ್ರಜ್ಞಾಃ ಪಶ್ಯಂತಃ ಪರಮಾಂ ಗತಿಮ್ ॥೬೦॥

ಯಾರು ವಸ್ತುಗಳಿಗೆ ಅಭಾವವನ್ನು ಚಿಂತಿಸಿ (ಉಂಟಾದ ಅನಿಷ್ಟಗಳಿಗೆ ವಿನಾಶವನ್ನು ಚಿಂತಿಸಿ) ಬುದ್ಧಿಯ ಶ್ರೇಷ್ಠವಾದ ಮಟ್ಟವನ್ನು ತಲುಪಿರುತ್ತಾರೆಯೋ ಅವರು ಕೃತಪ್ರಜ್ಞರಾಗಿ ಶ್ರೇಷ್ಠವಾದ ಗತಿಯನ್ನು ನೋಡುತ್ತಾರೆ ಮತ್ತು ದುಃಖಪಡುವುದಿಲ್ಲ.

ನ ಶೋಚಾಮಿ ಚ ವೈ ವಿದ್ವನ್ ಕಾಲಾಕಾಂಕ್ಷೀ ಸ್ಥಿತೋ ಹ್ಯಹಮ್ ।
ಏತೈರ್ನಿದರ್ಶನೈರ್ಬ್ರಹ್ಮನ್ ನಾವಸೀದಾಮಿ ಸತ್ತಮ ॥೬೧॥

ಎಲೈ ವಿದ್ವಾಂಸರಾದ ಬ್ರಾಹ್ಮಣರೇ, ಸಜ್ಜನರಲ್ಲಿ ಶ್ರೇಷ್ಠರಾದವರೇ, ನಾನು ದುಃಖಪಡುತ್ತಿಲ್ಲ. ಕಾಲವನ್ನು ನಿರೀಕ್ಷಿಸುತ್ತಿದ್ದೇನೆ. ನೀವು ಹೇಳಿದ ನಿದರ್ಶನಗಳನ್ನು ಕೇಳಿ ನಾನು ವಿಷಾದಪಡುತ್ತಿಲ್ಲ.

ಬ್ರಾಹ್ಮಣಃ

ಕೃತಪ್ರಜ್ಞೋಽಸಿ ಮೇಧಾವೀ ಬುದ್ಧಿರ್ಹಿ ವಿಪುಲಾ ತವ ।
ನಾಹಂ ಭವಂತಂ ಶೋಚಾಮಿ ಜ್ಞಾನತೃಪ್ತೋಽಸಿ ಧರ್ಮವಿತ್ ॥೬೨॥

ಆಪೃಚ್ಛೇ ತ್ವಾಂ ಸ್ವಸ್ತಿ ತೇಽಸ್ತು ಧರ್ಮಸ್ತ್ವಾಂ ಪರಿರಕ್ಷತು ।
ಅಪ್ರಮಾದಸ್ತು ಕರ್ತವ್ಯೋ ಧರ್ಮೇ ಧರ್ಮಭೃತಾಂ ವರ ॥೬೩॥

ಬ್ರಾಹ್ಮಣ– ಎಲೈ ವ್ಯಾಧನೇ, ನೀನು ಕೃತಪ್ರಜ್ಞನೂ, ಮೇಧಾವಿಯೂ ಆಗಿದ್ದೀಯೆ. ನಿನ್ನ ಬುದ್ಧಿಯು ಅಗಾಧವಾಗಿದೆ. ನಾನು ನಿನ್ನನ್ನು ಕುರಿತು ಶೋಕಿಸುವುದಿಲ್ಲ. ನೀನು ಜ್ಞಾನತೃಪ್ತನೂ, ಧರ್ಮಜ್ಞನೂ ಆಗಿದ್ದೀಯೆ. ಧರ್ಮಿಷ್ಠರಲ್ಲಿ ಶ್ರೇಷ್ಠನಾದವನೇ, ನಾನು ಹೊರಡಲು ನಿನ್ನ ಅನುಮತಿಯನ್ನು ಕೇಳುತ್ತಿದ್ದೇನೆ. ನಿನಗೆ ಮಂಗಳವಾಗಲಿ. ಧರ್ಮವು ನಿನ್ನನ್ನು ರಕ್ಷಿಸಲಿ. ಧರ್ಮದ ವಿಷಯದಲ್ಲಿ ಯಾವಾಗಲೂ ಎಚ್ಚರದಿಂದಿರು.

ಮಾರ್ಕಂಡೇಯಃ

ಬಾಢಮಿತ್ಯೇವ ತಂ ವ್ಯಾಧಃ ಕೃತಾಂಜಲಿರುವಾಚ ಹ ।
ಪ್ರದಕ್ಷಿಣಮಥೋ ಕೃತ್ವಾ ಪ್ರಸ್ಥಿತೋ ದ್ವಿಜಸತ್ತಮಃ ॥೬೪॥

ಮಾರ್ಕಂಡೇಯ– ವ್ಯಾಧನು ಕೈಗಳನ್ನು ಮುಗಿದು ಹಾಗೆಯೇ ಆಗಲಿ ಎಂದು ಆ ಬ್ರಾಹ್ಮಣನಿಗೆ ಹೇಳಿದನು. ಆ ಬ್ರಾಹ್ಮಣಶ್ರೇಷ್ಠನು ವ್ಯಾಧನಿಗೆ ಪ್ರದಕ್ಷಿಣೆಯನ್ನು ಮಾಡಿ ಅಲ್ಲಿಂದ ಹೊರಟನು.

ಸ ತು ಗತ್ವಾ ದ್ವಿಜಃ ಸರ್ವಾಂ ಶುಶ್ರೂಷಾಂ ಕೃತವಾಂಸ್ತದಾ ।
ಮಾತಾಪಿತೃಭ್ಯಾಂ ವೃದ್ಧಾಭ್ಯಾಂ ಯಥಾನ್ಯಾಯಂ ಸುಶಂಸಿತಃ ॥೬೫॥

ಆ ಬ್ರಾಹ್ಮಣನು ತನ್ನ ಪಟ್ಟಣವನ್ನು ತಲುಪಿ ವೃದ್ಧರಾದ ತನ್ನ ತಂದೆತಾಯಿಗಳಿಂದ ಪ್ರಶಂಸಿಸಲ್ಪಟ್ಟು ಅವರಿಗೆ ಉಚಿತವಾದ ಎಲ್ಲಾ ಸೇವೆಯನ್ನೂ ಮಾಡಿದನು.

ಏತತ್ ತೇ ಸರ್ವಮಾಖ್ಯಾತಂ ನಿಖಿಲೇನ ಯುಧಿಷ್ಠಿರ ।
ಪೃಷ್ಟವಾನಸಿ ಯಂ ತಾತ ಧರ್ಮಂ ಧರ್ಮಭೃತಾಂ ವರ ॥೬೬॥

ಎಲೈ ಯುಧಿಷ್ಠಿರನೇ, ಪ್ರೀತಿಪಾತ್ರನೇ, ಧರ್ಮಿಷ್ಠರಲ್ಲಿ ಶ್ರೇಷ್ಠನಾದವನೇ, ಧರ್ಮದ ವಿಷಯದಲ್ಲಿ ನೀನು ಏನು ಪ್ರಶ್ನೆ ಮಾಡಿದೆಯೋ ಅದೆಲ್ಲವನ್ನೂ ನಾನು ನಿನಗೆ ನಿಶ್ಶೇಷವಾಗಿ ಹೇಳಿದ್ದೇನೆ.

ಪತಿವ್ರತಾಯಾ ಮಾಹಾತ್ಮ್ಯಂ ಬ್ರಾಹ್ಮಣಸ್ಯ ಚ ಸತ್ತಮ ।
ಮಾತಾಪಿತ್ರೋಶ್ಚ ಶುಶ್ರೂಷಾ ಧರ್ಮವ್ಯಾಧೇನ ಕೀರ್ತಿತಾ ॥೬೭॥

ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ಪತಿವ್ರತೆಯ ಮಹಾತ್ಮೆ, ಬ್ರಾಹ್ಮಣರ ಮಹಾತ್ಮೆ, ಮಾತಾಪಿತೃಗಳ ಸೇವೆ ಎಲ್ಲವೂ ಧರ್ಮವ್ಯಾಧನಿಂದ ಹೇಳಲ್ಪಟ್ಟಿದೆ.

ಯುಧಿಷ್ಠಿರಃ

ಅತ್ಯದ್ಭುತಮಿದಂ ಬ್ರಹ್ಮನ್ ಧರ್ಮಾಖ್ಯಾನಮನುತ್ತಮಮ್ ।
ಸರ್ವಧರ್ಮವಿದಾಂ ಶ್ರೇಷ್ಠ ಕಥಿತಂ ಮನುಸತ್ತಮ ॥೬೮॥

ಸುಖಿಶ್ಯಾವೃತಯಾ ವಿದ್ವನ್ಮುಹೂರ್ತ ಇವ ಮೇ ಗತಃ ।
ನ ಹಿ ತೃಪ್ತೋಽಸ್ಮಿ ಭಗವನ್ ಶೃಣ್ವಾನೋ ಧರ್ಮಮುತ್ತಮಮ್ ॥೬೯॥

ಯುಧಿಷ್ಠಿರ– ಎಲೈ ಬ್ರಾಹ್ಮಣರೇ, ಸರ್ವಧರ್ಮವೇತ್ತದಲ್ಲಿ ಶ್ರೇಷ್ಠರೇ, ಮುನಿಶ್ರೇಷ್ಠರೇ, ನೀವು ಹೇಳಿದ ಈ ಧರ್ಮಾಖ್ಯಾನವು ಅತ್ಯದ್ಭುತವಾದುದು. ಎಲೈ

ವಿದ್ವಾಂಸರೇ, ಶ್ರೋತ್ರಮಧುರವಾಗಿದ್ದ ಕಾರಣದಿಂದ ನನಗೆ ಒಂದು ಮುಹೂರ್ತದಂತೆ ಕಾಲವು ಕಳೆದುಹೋಯಿತು. ಪೂಜ್ಯರೇ, ನಿಮ್ಮಿಂದ ಶ್ರೇಷ್ಠವಾದ ಧರ್ಮವನ್ನು ಕೇಳುತ್ತಿರುವ ನನಗೆ ಸಾಕು ಎಂಬ ಬುದ್ಧಿಯೇ ಉಂಟಾಗುತ್ತಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಾಧಿಕದ್ವಿಶತಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಬ್ರಾಹ್ಮಣವ್ಯಾಧಸಂವಾದೇ
ಷಡ್ವಿಂಶೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಒಂದನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಎರಡನೆಯ ಅಧ್ಯಾಯ

ಮಾರ್ಕಂಡೇಯರಿಂದ ರಾಜರ ಮಹಿಮೆಯ ಕಥನ. ಸುಹೋತ್ರ ಶಿಬಿ ಕಥಾ.

ವೈಶಂಪಾಯನಃ

ತತಃ ಪಾಂಡವಾಃ ಪುನರೇವ ಮಾರ್ಕಂಡೇಯಂ ಪ್ರತ್ಯೂಚುಃ ।
ಕಥಿತಂ ಬ್ರಾಹ್ಮಣಮಾಹಾತ್ಮ್ಯಂ ಸ್ತ್ರೀಮಾಹಾತ್ಮ್ಯಂ ಚ ।
ಇದಾನೀಂ ರಾಜಮಾಹಾತ್ಮ್ಯಂ ವದ ॥೧॥

ವೈಶಂಪಾಯನ– ಅನಂತರ ಪಾಂಡವರು ಮಾರ್ಕಂಡೇಯರನ್ನು ಕುರಿತು ಬ್ರಾಹ್ಮಣ ಮಹಾತ್ಮೈಯನ್ನು ಮತ್ತು ಸ್ತ್ರೀ ಮಹಾತ್ಮೈಯನ್ನು ಹೇಳಿದ್ದೀರಿ. ಈಗ ರಾಜರ ಮಹಾತ್ಮೈಯನ್ನು ಹೇಳಿ ಎಂದು ಪುನಃ ಕೇಳಿದರು.

ತಾನುವಾಚ ಮಾರ್ಕಂಡೇಯಃ ।
ಶ್ರೂಯತಾಂ ತಾವದಿದಾನೀಂ ರಾಜಮಹಾತ್ಮ್ಯಮ್ ॥೨॥

ಮಾರ್ಕಂಡೇಯರು ಈಗ ನೀವು ರಾಜ ಮಹಾತ್ಮೈಯನ್ನು ಕೇಳಿ ಎಂದು ಅವರನ್ನು ಕುರಿತು ಹೇಳಿದರು.

ಕುರೂಣಾಮನ್ಯತಮಃ ಸುಹೋತ್ರೋ ನಾಮ ವೈ ರಾಜಾ
ಮಹರ್ಷಿಮಭಿಗಮ್ಯ ನಿವೃತ್ತಃ । ರಥಸ್ಥಃ ಪಥಿ ರಥಸ್ಥಂ ವನೇ ಚ
ರಾಜಾನಮೌಶೀನರಂ ಶಿಬಿಂ ದದರ್ಶಾಭಿಮುಖಿಮ್ ॥೩॥

ಕುರುವಂಶದಲ್ಲಿ ಒಬ್ಬನಾದ ಸುಹೋತ್ರನೆಂಬ ರಾಜನು ಒಬ್ಬ ಮಹರ್ಷಿಗಳನ್ನು ನೋಡಿ ಹಿಂದಿರುಗುತ್ತಿದ್ದನು. ರಥದಲ್ಲಿ ಕುಳಿತಿದ್ದ ಅವನು ಕಾಡಿನಲ್ಲಿ ತನಗೆ ಅಭಿಮುಖವಾಗಿ ಬರುತ್ತಿದ್ದ. ರಥದಲ್ಲಿ ಕುಳಿತಿದ್ದ ಔಷೀನರನಾದ ಶಿಬಿರಾಜನನ್ನು ನೋಡಿದನು.

ತೌ ಸಮೇತ್ಯ ಪರಸ್ಪರಂ ಯಥಾವಯಃ ಪೂಜಾಂ ಪ್ರಯುಜ್ಯ
ಗುಣಸಾಮ್ಯೇನ ಪರಸ್ಪರಂ ತುಲ್ಯಮಾನೌ (ತುಲ್ಯಾತ್ಮಾನೌ) ವಿದಿತ್ವಾ

ಅವರು ಪರಸ್ಪರ ಸಮಾಗಮವನ್ನು ಹೊಂದಿ ವಯಸ್ಸಿಗೆ ಅನುಗುಣವಾಗಿ ಪರಸ್ಪರವಾಗಿ ಪೂಜೆಯನ್ನು ಸಲ್ಲಿಸಿ ಗುಣಸಾಮ್ಯವಿದ್ದ ಪ್ರಯುಕ್ತ ಇಬ್ಬರೂ ತಮ್ಮನ್ನು ಪರಸ್ಪರ ಸಮಾನರೆಂದು ತಿಳಿದು ಯಾರೊಬ್ಬರೂ ಇನ್ನೊಬ್ಬರಿಗೆ ದಾರಿಯನ್ನು ಕೊಡಲಿಲ್ಲ.

ನಾರದೋ ಮಹಾನ್ ದೇವರ್ಷಿಃ ಪ್ರಾದುರಾಸೀತ್ ॥ (ಉವಾಚ ಚ)
ಕಿಮಿದಂ ಭವಂತೌ ಪರಸ್ಪರಂ ಪಂಥಾನಮಾವೃತ್ಯ ತಿಷ್ಠತ ಇತಿ ॥೫॥

ಅವರ ಅಭಿಪ್ರಾಯವನ್ನು ತಿಳಿದ ಮಹಾತ್ಮರಾದ ದೇವರ್ಷಿಗಳಾದ ನಾರದರು ಅಲ್ಲಿ ಪ್ರಾದುರ್ಭೂತರಾದರು. ಇದೇನು ನೀವಿಬ್ಬರು ಪರಸ್ಪರವಾಗಿ ದಾರಿಯನ್ನು ಅಡ್ಡಗಟ್ಟಿ ನಿಂತಿದ್ದೀರಿ? ಎಂದು ಕೇಳಿದರು.

ತಾವೂಚತುರಿದಮ್ । ತದ್ ಭವತ್ಯೈವ ಕಥಯಿತವ್ಯಮಿತಿ ।
ಸರ್ವಥಾ ಧರ್ಮಪ್ರವಾದಿಭಿಃ ವಸಿಷ್ಠಸ್ಯ ಪಂಥಾ ಉಪದಿಶ್ಯತೇ ।
ಆವಾಂ ಚ ಸಮೇತೌ ಪರಸ್ಪರೇಣ । ಭವಾಂಸ್ತ್ವಿದಾನೀಂ
ಬ್ರುವತುವೈ ಕ ಏವಾವಯೋರ್ವಾನ್ ಕೋ ಗರೀಯಾನಿತಿ ॥೬॥

ಅವರು ಹೇಳಿದರು ಅದನ್ನು ನೀವೇ ಹೇಳಬೇಕು. ಧರ್ಮವನ್ನು ತಿಳಿದವರು ಬಹುಕಾಲವಾಸಿಯಾದ ವೃದ್ಧನಿಗೆ ಮಾರ್ಗವನ್ನು ಬಿಡಬೇಕೆಂದು ಹೇಳುತ್ತಾರೆ.

ನಾವಿಬ್ಬರೂ ಪರಸ್ಪರವಾಗಿ ಸಂಧಿಸಿದ್ದೇವೆ. ನಮ್ಮಲ್ಲಿ ಯಾರು ವೃದ್ಧರು, ಯಾರು ಕನಿಷ್ಠರೆಂದು ನೀವೇ ಹೇಳಬೇಕು.

ನಾರದಸ್ತ್ವೇವಮುಕ್ತಃ ಶ್ಲೋಕಾವಪಠತ್ ।

ಹೀಗೆ ಹೇಳಲ್ಪಟ್ಟ ನಾರದರು ಶ್ಲೋಕಗಳನ್ನು ಹೇಳಿದರು.

ಕ್ರೂರಃ ಕ್ರೂರಾಯ ಕೌರವ್ಯೋ ಮೃದವೇ ಕೌರವ್ಯೋ ಮೃದುಃ ।
ಅಸಾಧವೇ ತ್ವಸಾಧುಶ್ಚ ಸಾಧವೇ ತತ್ಸಮೋ ಮತಃ ॥
ದಾನಾತ್ ಕದರ್ಯಂ ಜಯತಿ ಸತ್ಯೇನಾನೃತವಾದಿನಮ್ ।
ಅಕ್ರೋಧಾಜ್ಜಯತೇ ಕ್ರೋಧಮಸಾಧುಂ ಸಾಧುಕರ್ಮಭಿಃ ॥
ಉಭಾವೇವ ಭವಂತಾವೀದೃಶೌ ।
ಉದಾರೋಽಯಂ ಶಿಬಿರಹಂ ಮನ್ಯೇ । ಕೌರವ್ಯೋಽಪಯಾತ್ವಿತಿ ॥೭॥

ಕೌರವ್ಯನಾದ ಸುಹೋತ್ರನು ಕ್ರೂರನಿಗೆ ಕ್ರೂರನಾಗಿದ್ದಾನೆ. ಮೃದುವಿಗೆ ಮೃದು. ಅಸಾಧುವಿಗೆ ಅಸಾಧು. ಸಾಧುವಿಗೆ ಅವನು ಸಮಾನನಾದವನು.

ದಾನದಿಂದ ಜಿಪುಣನನ್ನು ಗೆಲ್ಲಬೇಕು. ಸತ್ಯದಿಂದ ಅನೃತವಾದಿಯನ್ನು ಗೆಲ್ಲಬೇಕು. ಕ್ಷಮೆಯಿಂದ ಕ್ರೋಧವನ್ನು ಗೆಲ್ಲಬೇಕು. ಅಸಾಧುವನ್ನು ಸತ್ಕಾರ್ಯದಿಂದ ಗೆಲ್ಲಬೇಕು.

ನೀವಿಬ್ಬರೂ ಇಂತಹವರೇ ಆದರೂ ನಾನು ಶಿಬಿಯನ್ನು ಶ್ರೇಷ್ಠನೆಂದು ತಿಳಿದಿದ್ದೇನೆ. ಕೌರವ್ಯನಾದ ಸುಹೋತ್ರನು ದಾರಿಯನ್ನು ಬಿಡಬೇಕು (ಎಂದು ಹೇಳಿದರು).

ಏತತ್ ಸಂಗತಮಿತಿ ತೂಷ್ಣೀಂ ನಾರದೋಽಭವತ್ ॥೮॥

ಇದು ಸೂಕ್ತವಾದುದು ಎಂದು ಹೇಳಿ ನಾರದರು ಸುಮ್ಮನಾದರು.

ಕೌರವ್ಯಃ ಶಿಬಿಂ ಪ್ರದಕ್ಷಿಣಂ ಕೃತ್ವಾ ಪಂಥಾನಂ
ದತ್ವಾ ಪ್ರಯಯೌ ಬಹುವಿಧಮಭಿಶಸ್ಯ ॥೯॥

ಅದನ್ನು ಕೇಳಿದ ಕೌರವ್ಯನಾದ ಸುಹೋತ್ರನು ಶಿಬಿಗೆ ಪ್ರದಕ್ಷಿಣೆಯನ್ನು ಮಾಡಿ, ಬಹುವಿಧವಾಗಿ ಪ್ರಶಂಸೆಯನ್ನು ಮಾಡಿ ದಾರಿಯನ್ನು ಕೊಟ್ಟು ಹೊರಟುಹೋದನು.

ತದೇಷ ವಿನಯೋ ರಾಜ್ಞಾಂ ಮಹಾಭಾಗ್ಯಂ ಚ ಕಥಿತಮಿತಿ ॥

ಇದು ರಾಜರ ವಿನಯ ಮತ್ತು ಮಹಾಭಾಗ್ಯ. ಇದನ್ನು ನಾನು ನಿಮಗೆ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವ್ಯಧಿಕದ್ವಿಶತಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ರಾಜಮಹಾತ್ಮ್ಯೇ ಪ್ರಥಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎರಡನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಮೂರನೆಯ ಅಧ್ಯಾಯ

ಮಾರ್ಕಂಡೇಯರಿಂದ ರಾಜರ ಮಹಿಮೆಯ ಕಥನ - ಯಯಾತಿಯ ಕಥೆ.

ಮಾರ್ಕಂಡೇಯಃ

ಇದಮನ್ಯಚ್ಛ್ರೂಯತಾಮ್ । ಯಯಾತಿರ್ನಾಹುಷೋ
ರಾಜಾ ರಾಜ್ಯಸ್ಥಃ ಪೌರಜನಪರಿವೃತಃ ಆಸಾಂಚಕ್ರೇ ॥ ತಂ ಗುರ್ವರ್ಥಂ
ಭಿಕ್ಷಯನ್ ಸಮಯಾದಿತಿ ಕಶ್ಚಿದ್ ಬ್ರಾಹ್ಮಣ ಆಗಚ್ಛತ್ ॥೧॥

ಮಾರ್ಕಂಡೇಯ– ಈ ಇನ್ನೊಂದು ಕಥೆಯನ್ನು ಕೇಳಿ. ನಹುಷನ ಮಗನಾದ ಯಯಾತಿ ರಾಜನು ರಾಜ್ಯದಲ್ಲಿ ಪೌರಜನ ಪರಿವ್ರತನಾಗಿ ವಾಸಿಸುತ್ತಿದ್ದನು. ಅವನನ್ನು ಕುರಿತು ಇಷ್ಟು ಗುರುದಕ್ಷಿಣೆಯನ್ನು ಕೊಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿದ್ದ ಒಬ್ಬ ಬ್ರಾಹ್ಮಣನು ಆ ಧನವನ್ನು ಬೇಡಲು ರಾಜನ ಬಳಿಗೆ ಬಂದನು.

ರಾಜೋವಾಚ ಬ್ರವೀತು ಭಗವಾನ್ ಸಮಯಮಿತಿ ॥೨॥

ರಾಜನು ಅವನನ್ನು ಕುರಿತು ಪೂಜ್ಯರು ನಿಮ್ಮ ನಿಬಂಧನೆಯನ್ನು ಹೇಳಬೇಕು ಎಂದು ಹೇಳಿದನು.

ಬ್ರಾಹ್ಮಣಃ

ವಿದ್ವೇಷಣಂ ಪರಮಂ ಜೀವಲೋಕೇ ।
ಕುರ್ಯಾನ್ನರಃ ಪಾರ್ಥಿವ ಯಾಚ್ಯಮಾನಃ ।

ತಥಾಪಿ ಪೃಚ್ಛಾಮಿ ಕಥಂ ನು ರಾಜನ್ ।
ದದ್ಯಾದ್ ಭವಾನ್ ಯದಿ ತೃಪ್ತಶ್ಚ ಮೇಽದ್ಯ ॥೩॥

ಆ ಬ್ರಾಹ್ಮಣನು ಹೀಗೆ ಹೇಳಿದನು.

ಎಲೈ ರಾಜನೇ, ಜೀವಲೋಕದಲ್ಲಿ ಯಾರನ್ನಾದರೂ ಬೇಡಿದರೆ ಬೇಡಲ್ಪಡುವ ಮನುಷ್ಯನು ಪರಮ ವಿದ್ವೇಷವನ್ನು ಹೊಂದುತ್ತಾನೆ. ಆದರೂ ಎಲೈ ರಾಜನೇ, ನೀನು ಸಂತೋಷದಿಂದ ಕೊಡುವುದಾದರೆ ಈ ದಿನ ನಾನು ನಿನ್ನನ್ನು ಕೇಳುತ್ತೇನೆ.

ರಾಜಾ

ನ ಚಾನುಕೀರ್ತಯೇ ದತ್ತ್ವಾ ಅಯಾಚ್ಯಮರ್ಥಂ ನ ಚ ಸಂಶೃಣೋಮಿ ।
ಪ್ರಾಪ್ಯಮರ್ಥಂ ಚ ಸಂಶ್ರುತ್ಯ ತಂ ಚಾಪಿ ದತ್ತ್ವಾ ಸುಸುಖೀ ಭವಾಮಿ ॥

ರಾಜ– ನಾನು ದಾನವನ್ನು ಕೊಟ್ಟು ಅದನ್ನು ಇನ್ನೊಬ್ಬರಿಗೆ ಹೇಳುವುದಿಲ್ಲ. ಕೊಡಲು ಸಾಧ್ಯವಿಲ್ಲದ ವಸ್ತುವನ್ನು ಕೊಡುವೆನೆಂದು ಪ್ರತಿಜ್ಞೆಯನ್ನೂ ಮಾಡುವುದಿಲ್ಲ. ಕೊಡಲು ಸಾಧ್ಯವಾದ ವಸ್ತುವನ್ನು ಕೊಡುತ್ತೇನೆಂದು ಪ್ರತಿಜ್ಞೆ ಮಾಡಿ ಅದನ್ನು ಕೊಟ್ಟು ಸಂತೋಷದಿಂದ ಇರುತ್ತೇನೆ.

ದದಾಮಿ ತೇ ರೋಹಿಣೀನಾಂ ಸಹಸ್ರಂ
ಪ್ರಿಯೋ ಹಿ ಮೇ ಬ್ರಾಹ್ಮಣೋ ಯಾಚಮಾನಃ ।
ನ ಮೇ ಮನಃ ಕುಪ್ಯತಿ ಯಾಚ್ಯಮಾನೇ
ದತ್ತ್ವಾ ನ ಶೋಚಾಮಿ ಕಥಂಚಿದರ್ಥಮ್ ॥೫॥

ನಾನು ನಿನಗೆ ಸಹಸ್ರ ಗೋವುಗಳನ್ನು ಕೊಡುತ್ತೇನೆ. ಬೇಡಲು ಬಂದ ಬ್ರಾಹ್ಮಣನು ನನಗೆ ಪ್ರಿಯನಾದವನಷ್ಟೆ? ಬೇಡುವವನ ಮೇಲೆ ನನಗೆ ಎಂದೂ ಕೋಪವುಂಟಾಗುವುದಿಲ್ಲ ಮತ್ತು ವಸ್ತುವನ್ನು ದಾನ ಮಾಡಿ ಅನಂತರ ಯಾವ ಕಾರಣದಿಂದಲೂ ವಿಷಾದ ಪಡುವುದಿಲ್ಲ.

ಮಾರ್ಕಂಡೇಯಃ

ಇತ್ಯುಕ್ತ್ವಾ ಬ್ರಾಹ್ಮಣಾಯ ರಾಜಾ ಗೋಸಹಸ್ರಂ ದದೌ ।
ಪ್ರಾಪ್ತವಾಂಶ್ಚ ಗೋಸಹಸ್ರಂ ಬ್ರಾಹ್ಮಣ ಇತಿ ॥

ಮಾರ್ಕಂಡೇಯ– ಹೀಗೆ ಹೇಳಿ ರಾಜನು ಬ್ರಾಹ್ಮಣನಿಗೆ ಸಹಸ್ರ ಗೋವುಗಳನ್ನು ಕೊಟ್ಟನು. ಆ ಬ್ರಾಹ್ಮಣನಾದರೂ ಸಹಸ್ರ ಗೋವುಗಳನ್ನು ಪಡೆದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರ್ಯಧಿಕದ್ವಿಶತಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಖ್ಯಾಪರ್ವಣಿ ರಾಜಮಹಾತ್ಮ್ಯೇ ದ್ವಿತೀಯೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಮೂರನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ನಾಲ್ಕನೆಯ ಅಧ್ಯಾಯ

ಮಾರ್ಕಂಡೇಯರಿಂದ ರಾಜ ಮಹಿಮೆಯ ಕಥನ– ಸೇದುಕ ವೃಷದರ್ಭರ ಕಥೆ.

ವೈಶಂಪಾಯನಃ

ಭೂಯ ಏವ ಮಹಾಭಾಗ್ಯಂ ಕಥ್ಯತಾಮಿತ್ಯಬ್ರವೀತ್ ಪಾಂಡವಃ ॥೧॥

ವೈಶಂಪಾಯನ– ಇನ್ನೂ ರಾಜರ ಮಹಾಭಾಗ್ಯವನ್ನು ಹೇಳಿ ಎಂದು ಪಾಂಡವನಾದ ಯುಧಿಷ್ಠಿರನು ಕೇಳಿದನು.

ಅಥಾಚಷ್ಟ ಮಹಾರಾಜ ಮಾರ್ಕಂಡೇಯಃ ।
ವೃಷದರ್ಭಸೇದುಕನಾಮಾನೌ ಬಲಿನೌ
ನೀತಿಮಾರ್ಗ-ರತಾವಸ್ತ್ರೋಪಾಸ್ತ್ರಕೃತಿನೌ ॥೨॥

ಎಲೈ ಜನಮೇಜಯ ಮಹಾರಾಜನೇ ಆಗ ಮಾರ್ಕಂಡೇಯರು ಹೇಳಿದರು. ವೃಷದರ್ಭ ಮತ್ತು ಸೇದುಕರೆಂಬ ನೀತಿಮಾರ್ಗವನ್ನು ತಿಳಿದ, ಅಸ್ತ್ರ ಮತ್ತು ಉಪಾಸ್ತ್ರಗಳಲ್ಲಿ ಕುಶಲರಾದ ಇಬ್ಬರು ಮಹಾರಾಜರಿದ್ದರು.

ಸೇದುಕೋ ಬಾಲಸ್ಯೈವ ವೃಷದರ್ಭಸ್ಯ ಉಪಾಂಶುವ್ರತಮಭ್ಯಜಾನಾತ್ ।
ಕೂಪ್ಯಮದೇಯಂ ಬ್ರಾಹ್ಮಣಸ್ಯೇತಿ ॥೩॥

ಸೇದುಕನು ವೃಷದರ್ಭನು ಬಾಲ್ಯದಲ್ಲಿಯೇ ಮಾಡಿದ ರಹಸ್ಯ , ವ್ರತಪ್ರತಿಜ್ಞೆಯನ್ನು ತಿಳಿದಿದ್ದನು. ಬ್ರಾಹ್ಮಣನಿಗೆ ಹಿರಣ್ಯರಜತಗಳನ್ನು ಬಿಟ್ಟು ಬೇರೆ ಏನನ್ನೂ ಕೊಡಬಾರದು ಎಂಬುದು ಅವನ ರಹಸ್ಯವ್ರತವಾಗಿದ್ದಿತು.

ಅಥ ತಂ ಸೇದುಕಂ ಕಶ್ಚಿದ್ ಬ್ರಾಹ್ಮಣೋ
ವೇದಾಧ್ಯಯನಸಂಪನ್ನ ಆಶಿಷಂ ದತ್ವಾ ಗುರ್ವರ್ಥೀ ಭಿಕ್ಷಿತವಾನ್ ॥
ಅಶ್ವಸಹಸ್ರಂ ಮೇ ಭಗವಾನ್ ದದಾತ್ವಿತಿ ॥೪॥

ಅನಂತರ ಒಮ್ಮೆ ವೇದಾಧ್ಯಯನ ಸಂಪನ್ನನಾದ ಒಬ್ಬ ಬ್ರಾಹ್ಮಣನು ಸೇದುಕನ ಬಳಿಗೆ ಬಂದು ಆಶೀರ್ವಾದವನ್ನು ಮಾಡಿ ತಾನು ಕೊಡಬೇಕಾದ ಗುರುದಕ್ಷಿಣೆಯನ್ನು ಬೇಡಿದನು. ಪೂಜ್ಯನಾದ ನೀನು ಒಂದು ಸಹಸ್ರ ಅಶ್ವಗಳನ್ನು ಕೊಡಬೇಕು ಎಂಬುದು ಆ ಬೇಡಿಕೆಯಾಗಿದ್ದಿತು.

ಕೂಪ್ಯಾರ್ಥಿತೋಽಯಂ ಬ್ರಾಹ್ಮಣಸ್ಯ ತಂ ಸೇದುಕೋ
ಬ್ರಾಹ್ಮಣಮಬ್ರವೀತ್ । ನಾಸ್ತಿ ಸಂಭವೋ ಗುರ್ವರ್ಥಂ ದಾತುಮಿತಿ ।
ಸ ತ್ವಂ ಗಚ್ಛ ವೃಷದರ್ಭಸ್ಯ ಸಕಾಶಮ್ । ರಾಜಾ ಪರಮಧರ್ಮಜ್ಞಃ ।
ಬ್ರಾಹ್ಮಣ ತಂ ಭಿಕ್ಷಸ್ವ । ಸ ತೇ ದಾಸ್ಯತಿ । ತಸ್ಯೈತದುಪಾಂಶುವ್ರತಮಿತಿ॥

ಸುವರ್ಣರಜತವ್ಯತಿರಿಕ್ತವಾದ ವಸ್ತುವು ಬ್ರಾಹ್ಮಣನಿಂದ ಬೇಡಲ್ಪಟ್ಟಾಗ ಸೇದುಕನು ಆ ಬ್ರಾಹ್ಮಣನನ್ನು ಕುರಿತು ನನ್ನ ಬಳಿ ನಿನ್ನ ಗುರುದಕ್ಷಿಣೆಯನ್ನು ಕೊಡುವ ಅವಕಾಶವಿಲ್ಲ. ನೀನು ವೃಷದರ್ಭನ ಸಮೀಪಕ್ಕೆ ಹೋಗು. ಆ ರಾಜನು ಪರಮಧರ್ಮಿಷ್ಠನಾದವನು. ಎಲೈ ಬ್ರಾಹ್ಮಣನೇ, ಅವನನ್ನು ಬೇಡು. ಅವನು ನಿನಗೆ ಕೊಡುವನು. ಇದು ಅವನ ರಹಸ್ಯವ್ರತ ಎಂದು ಹೇಳಿದನು.

ಅಥ ಬ್ರಾಹ್ಮಣೋ ವೃಷದರ್ಭಸಕಾಶಂ ಗತ್ವಾ ಅಶ್ವಸಹಸ್ರಮಯಾಚತ ।
ಸ ರಾಜಂ ತಂ ಕಂಸೇನಾತಾಡಯತ್ ॥
ತಂ ಬ್ರಾಹ್ಮಣೋಽಬ್ರವೀತ್ । ಕಿಂ ಹಂಸ್ಯಾನಾಗಸಂ ಮಾಮಿತಿ ॥೬॥

ಅನಂತರ ಬ್ರಾಹ್ಮಣನು ವೃಷದರ್ಭನ ಬಳಿಗೆ ಹೋಗಿ ಒಂದು ಸಹಸ್ರ ಅಶ್ವಗಳನ್ನು ಬೇಡಿದನು. ಆ ರಾಜನು ಅವನನ್ನು ತನ್ನ ಕಮಂಡಲುವಿನಿಂದ ಹೊಡೆದನು (ಸುವರ್ಣ ರಜತವನ್ನು ಬೇಡಲಿಲ್ಲ ಎಂದು ರಾಜನ ಕೋಪ). ಆಗ ಬ್ರಾಹ್ಮಣನು ಯಾವ ಅಪರಾಧವನ್ನೂ ಮಾಡದಿರುವ ನನ್ನನ್ನು ಏಕೆ ಹೊಡೆದೆ? ಎಂದು ಕೇಳಿದನು.

ಏವಮುಕ್ತ್ವಾ ತಂ ಶಪಂತಂ ರಾಜಾऽऽಹ ।
ವಿಪ್ರ ಕಿಂ ಯೋ ನ ದದಾತಿ ತುಭ್ಯಮ್ ॥
ಉತಾಹೋಸ್ವಿದ್ ಬ್ರಾಹ್ಮಣ ಮೈತದ್ ॥೭॥

ಹೀಗೆ ಹೇಳಿ ಆ ರಾಜನಿಗೆ ಶಾಪವನ್ನು ಕೊಡಲು ಉದ್ಯುಕ್ತನಾದಾಗ ರಾಜನು ಅವನನ್ನು ಕುರಿತು ಬ್ರಾಹ್ಮಣನೇ, ಶಾಪವನ್ನು ಕೊಡಬೇಡ. ಎಲೈ ಬ್ರಾಹ್ಮಣನೇ, ನಿನಗೆ ಕೊಡದಿರುವವರು ಯಾರು? ಎಂದು ಹೇಳಿದನು.

ಬ್ರಾಹ್ಮಣಃ

ರಾಜಾಧಿರಾಜಸಮೀಪಂ ಸೇದುಕೇನ ಪ್ರೇಷಿತೇ ।
ಭಿಕ್ಷಿತುಮಾಗತಃ ॥
ತೇನಾನುಶಿಷ್ಟೇನ ಮಯಾ ತ್ವಂ ಭಿಕ್ಷಿತೋऽಸಿ ॥೮॥

ಬ್ರಾಹ್ಮಣ– ಸೇದುಕನಿಂದ ಕಳುಹಿಸಲ್ಪಟ್ಟವನಾಗಿ ರಾಜಾಧಿರಾಜನಾದ ನಿನ್ನ ಸಮೀಪಕ್ಕೆ ಯಾಚಿಸಲು ಬಂದೆನು. ಅವನ ಆದೇಶದಂತೆ ನಾನು ನಿನ್ನನ್ನು ಬೇಡಿದೆನು ಎಂದು ಹೇಳಿದನು.

ರಾಜಃ

ಪೂರ್ವಾಹ್ಣೇ ತೇ ದಾಸ್ಯಾಮಿ । ಯೋऽಮೋಘಬಲಿರಾಗಮಿಷ್ಯತಿ
ಯೋ ಹನ್ಯತೇ ಕಶಯಾ ಕಥಂ ತಸ್ಯ ನ ದೇಯಂ ಸ್ಯಾತ್ ॥೯॥

ರಾಜ– ರಾಜನು ಪ್ರಾತಃಕಾಲದಲ್ಲಿ ನಿನಗೆ ಕೊಡುವೆನು. ಯಾರಿಗೆ ಕೊಟ್ಟ ದಾನವು ಎಂದೂ ವ್ಯರ್ಥವಾಗುವುದಿಲ್ಲವೋ ಮತ್ತು ಯಾರು ಶಾಪವೆಂಬ ಚಾವಟಿಯಿಂದ ಕೊಲ್ಲಲು ಸಮರ್ಥರೋ ಅಂತಹ ನಿನಗೆ ಹೇಗೆ ಕೊಡದಿರಲು ಸಾಧ್ಯ ? ಎಂದು ಹೇಳಿದನು.

ಇತ್ಯುಕ್ತ್ವಾ ಬ್ರಾಹ್ಮಣಸ್ಯ ದೈವಿಸಿಕಾಮುತ್ಪತ್ತಿಂ ಪ್ರಾದಾತ್ ।
ಅಧಿಕಸ್ಯಾಶ್ಚ ಸಹಸ್ರಸ್ಯ ಮೂಲ್ಯಮೇವಾದಾದಿತಿ ॥೧೦॥

ಹೀಗೆ ಹೇಳಿ ಬ್ರಾಹ್ಮಣನಿಗೆ ತನ್ನ ರಾಜ್ಯದ ಒಂದು ದಿವಸದ ಆದಾಯವನ್ನು ಕೊಟ್ಟನು. ಅವನು ಒಂದು ಸಹಸ್ರ ಅಶ್ವಗಳ ಮೌಲ್ಯಕ್ಕಿಂತಲೂ ಅಧಿಕವಾದ ಧನವನ್ನೇ ಬ್ರಾಹ್ಮಣನಿಗೆ ನೀಡಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರಧಿಕದ್ವಿಶತಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಖ್ಯಾಪರ್ವಣಿ ರಾಜಮಹಾತ್ಮ್ಯೇ ತೃತೀಯೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ನಾಲ್ಕನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಐದನೆಯ ಅಧ್ಯಾಯ

ಮಾರ್ಕಂಡೇಯರಿಂದ ಶಿಬಿಯ ಮಹಿಮೆಯ ಕಥನ –
ಶ್ಯೇನ ಕಪೋತೀ ಉಪಾಖ್ಯಾನ.

ಮಾರ್ಕಂಡೇಯಃ

**ಅಥ ದೇವಾನಾಂ ಕಥಾ ಸಂಜಾತಾ । ಮಹೀತಳಂ ಗತ್ವಾ ಮಹಾಮತಿಂ
ಮಹೀಪತಿಂ ಶಿಬಿಮೌಶೀನರಂ ಸಾಧ್ವೇನಂ ಜಿಜ್ಞಾಸ್ಯಾಮ ಇತಿ ।
ಏವಂ ಭೋ ಇತ್ಯುಕ್ತ್ವಾ ಅಗ್ನೀಂದ್ರಾವುಪತಿಷ್ಠೇತಾಮ್ ॥೧॥**

ಮಾರ್ಕಂಡೇಯ– ಒಮ್ಮೆ ದೇವಲೋಕದಲ್ಲಿ ಭೂಮಿಗೆ ಹೋಗಿ ಮಹಾಮತಿಯಾದ ರಾಜನಾದ ಔಷೀನರ ಶಿಬಿಯನ್ನು ಚೆನ್ನಾಗಿ ತಿಳಿದುಕೊಳ್ಳೋಣ ಎಂಬ ಸಂಭಾಷಣೆ ಉಂಟಾಯಿತು. ಹಾಗೆಯೇ ಆಗಲಿ ಎಂದು ಅಗ್ನಿ ಮತ್ತು ಇಂದ್ರರು ಹೊರಟರು.

**ಅಗ್ನಿಃ ಕಪೋತರೂಪೇಣ ತಮಭಿಧಾವದಾಮಿಷಾರ್ಥಮಿಂದ್ರಃ
ಶ್ಯೇನರೂಪೇಣ ॥೨॥**

ಅಗ್ನಿಯು ಕಪೋತರೂಪವನ್ನು ಧರಿಸಿ ಶಿಬಿಯೆಡೆಗೆ ಓಡಿ ಬಂದನು. ಇಂದ್ರನು ಶ್ಯೇನ ರೂಪವನ್ನು ಧರಿಸಿ ಮಾಂಸಾಹಾರಕ್ಕಾಗಿ ಅದನ್ನು ಹಿಂಬಾಲಿಸಿದನು.

ಅಥ ಕಪೋತೋ ದೇವ್ಯಾ ಸಹಾಸೀನಸ್ಯೋತ್ಸಂಗೇ ನ್ಯಪತತ್ ॥೩॥

ಆಗ ಕಪೋತವು ಬಂದು ರಾಣಿಯ ಜೊತೆಯಲ್ಲಿ ಕುಳಿತಿದ್ದ ರಾಜನ ತೊಡೆಯ ಮೇಲೆ ಬಿದ್ದಿತು.

ಅಥ ಪುರೋಹಿತೋ ರಾಜಾನಮಬ್ರವೀತ್ ।
ನಿಂದಿತಂ ಯಸ್ಯಾಭಿಪತತೇ ಕಪೋತಕಃ । ಸ ಭವಾನ್ ರಾಜವೇಶ್ಮ
ಚಾನ್ಯದ್ವಾ ವಸು ದದಾತು । ಅನ್ನಂ ಚಾಶು ಪಾರ್ಥಿವೋಽಸ್ಯ
ನಿಷ್ಕೃತಿಂ ಕುರ್ಯಾತ್ । ಘೋರಂ ಕಪೋತಸ್ಯ ನಿಪಾತಮಾಹುಃ ॥೪॥

ಆಗ ಪುರೋಹಿತನು ರಾಜನನ್ನು ಕುರಿತು ಯಾರ ಮೇಲೆ ಕಪೋತವು ಬೀಳುತ್ತದೆಯೋ ಅದು ಅಪಶಕುನ. ಎಲೈ ರಾಜನೇ, ನೀನು ಶ್ರೇಷ್ಠವಾದ ಮನೆಯನ್ನಾಗಲೀ ಬೇರೆ ಧನವನ್ನಾಗಲೀ ದಾನವನ್ನು ಮಾಡು. ಅನ್ನವನ್ನೂ ಶೀಘ್ರವಾಗಿ ದಾನವನ್ನು ಮಾಡಿ ರಾಜನು ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳಬೇಕು. ಕಪೋತದ ನಿಪಾತದ ಫಲವು ಘೋರವೆಂದು ತಿಳಿದವರು ಹೇಳುತ್ತಾರೆ ಎಂದು ಹೇಳಿದರು.

ಅಥ ಕಪೋತೋ ರಾಜಾನಮಬ್ರವೀತ್ । ಪ್ರಾಣರಕ್ಷಣಾರ್ಥಂ ಶ್ಯೇನಾದ್
ಭಯಭೀತೋ ಭವಂತಂ ಶರಣಾಗತೋಽರ್ಥೀ ಪ್ರಪದ್ಯೇ ।
ಅಂಗೈರಂಗಾನಿ ಪ್ರಾಪುರತೋ ಮುನಿರ್ಭೂತ್ವಾ ಪ್ರಾಣಾಸ್ತ್ವಂ ಪ್ರಪದ್ಯೇ॥

ಆಗ ಕಪೋತವು (ಪಾರಿವಾಳವು) ರಾಜನನ್ನು ಕುರಿತು ನಾನು ಶ್ಯೇನದಿಂದ (ಗಿಡುಗದಿಂದ) ಭಯಭೀತನಾಗಿ ನನ್ನ ಪ್ರಾಣವನ್ನು ರಕ್ಷಿಸಿಕೊಳ್ಳಲು ಬಯಸಿ ನಿನಗೆ ಶರಣಾಗತನಾಗಿ ಪ್ರಪನ್ನನಾಗಿದ್ದೇನೆ. ಶ್ಯೇನದ ಮುಖ, ರೆಕ್ಕೆ, ಪಾದಗಳು ಮೊದಲಾದ ಅಂಗಗಳಿಂದ ನನ್ನ ಅಂಗಗಳು ಮತ್ತು ಪ್ರಾಣಗಳು ಹೊರಟು ಹೋದಂತೆಯೇ ಆಗಿವೆ. ಆದ್ದರಿಂದ ಮೌನವಾಗಿ ನಾನು ಶರಣಾಗತನಾಗಿದ್ದೇನೆ ಎಂದು ಹೇಳಿತು.

ಸ್ವಾಧ್ಯಾಯೇನ ಕರ್ಶಿತಂ ಬ್ರಹ್ಮಚಾರಿಣಂ ಮಾಂ ವಿದ್ಧಿ ।
ತಪಸಾ ದಮೇನ ಯುಕ್ತಮಾರ್ಯಾ ಪ್ರತಿಕೂಲಭಾಷಿಣಮ್ ।
ಏವಂ ಯುಕ್ತಮಪಾಪಂ ಮಾಂ ವಿದ್ಧಿ ॥೬॥

ನನ್ನನ್ನು ವೇದಾಧ್ಯಯನದಿಂದ ಬಳಲಿದ ಬ್ರಹ್ಮಚಾರಿ ಎಂದು ತಿಳಿ. ನಾನು ತಪಸ್ಸು ಮತ್ತು ಇಂದ್ರಿಯನಿಗ್ರಹದಿಂದ ಕೂಡಿದವನು. ಗುರುಗಳಿಗೆ ಪ್ರತಿಕೂಲವಾಗಿ ಎಂದೂ ಮಾತನಾಡದವನು. ಹೀಗೆ ನಿಯಮಯುಕ್ತನಾದ ನನ್ನನ್ನು ಪಾಪರಹಿತನೆಂದು ತಿಳಿ.

ಗದಾಮಿ ವೇದಾನ್ ವಿಚಿನೋಮಿ ಛಂದಃ
ಸರ್ವೇ ವೇದಾ ಅಕ್ಷರಶೋ ಮೇ ಅಧೀತಾಃ ।
ನ ಸಾಧ್ವದಾನಂ ಶ್ರೋತ್ರೀಯಸ್ಯ ಪ್ರಮಾದಂ
ಮಾ ಪ್ರಾದಾ ಶ್ಯೇನಕಪೋತೋಽಸ್ಮಿ ರಾಜನ್ ॥೭॥

ನಾನು ವೇದಗಳನ್ನು ಉಚ್ಚರಿಸುತ್ತೇನೆ. ಛಂದಸ್ಸುಗಳನ್ನು ಬಿಡಿಸುತ್ತೇನೆ. ಎಲ್ಲ ವೇದಗಳನ್ನು ಅಕ್ಷರಶಃ ಅಧ್ಯಯನ ಮಾಡಿದ್ದೇನೆ. ಎಲೈ ರಾಜನೇ, ಪ್ರಮಾದದಿಂದ ನಾನು ಬೇಡಿದ ದಾನವನ್ನು ಶ್ರೋತ್ರಿಯನಾದ ನನಗೆ ಕೊಡದೇ ಇರಬೇಡ. ನಾನು ಶ್ಯೇನಕ್ಕೆ ಹೆದರಿ ಬಂದ ಕಪೋತನಾಗಿದ್ದೇನೆ.

ಪರ್ಯಾಯೇಣ ವಸತಿರ್ವಾ ಭಾವೇಷು
ಸ್ವರ್ಗೋ ಜಾತಃ ಪೂರ್ವಮಾಸ್ಮಾಕಮಾತ್ರಮ್ ।
ಮಮಾದದಾನೋಽದ್ಯ ಕಪೋತಮೇನಂ
ಮಾತ್ವಂ ರಾಜನ್ ವಿಪ್ರಕರ್ತಾ ಭವೇಥಾಃ ॥೮॥

ಆಗ ಶ್ಯೇನವು ರಾಜನನ್ನು ಕುರಿತು ಹೇಳಿತು. ಜೀವರಿಗೆ ಪರ್ಯಾಯ ಕ್ರಮದಿಂದ ವಾಸವು ಉಂಟಾಗುತ್ತದೆ. ಅದರಂತೆ ನಾನು ಮೊದಲು ಸ್ವರ್ಗದಲ್ಲಿದ್ದೆ. ಈ ಕಪೋತವು ನನ್ನ ಭಕ್ಷಣಕ್ಕೆ ಯೋಗ್ಯವಾದ ಒಂದು ಅಂಶವಾಗಿದೆ. ಎಲೈ ರಾಜನೇ, ನೀನು ಅದನ್ನು ನನಗೆ ಕೊಡದೇ ಅಪಕಾರವನ್ನು ಮಾಡಬೇಡ.

ರಾಜಾ

ಕೇನೇದೃಶೀ ಜಾತು ಪುರಾ ಹಿ ದೃಷ್ಟಾ
ವಾಗುಚ್ಯಮಾನಾ ಶಕುನೇನ ಸಂಸ್ಕೃತಾ ।
ಯಾಂ ವೈ ಕಪೋತೋ ವದತೇ ಯಾಂ ಚ
ಶ್ಯೇನ ಉಭೌ ವಿದಿತ್ವಾ ಶಸ್ತ ಇಯಾಂ ಕಥಂ ನು ॥೯॥

ರಾಜ– ಇಂತಹ ಒಂದು ಪ್ರಸಂಗವನ್ನು ಹಿಂದೆ ಯಾರು ನೋಡಿದ್ದಾರೆ? ಪಕ್ಷಿಯು ಸುಸಂಸ್ಕೃತವಾದ ಮಾತನಾಡುತ್ತದೆ! ಕಪೋತವು ಏನನ್ನು ಹೇಳುತ್ತಿದೆಯೋ, ಶ್ಯೇನನು ಏನು ಹೇಳುತ್ತಿದೆಯೋ ಎರಡನ್ನೂ ತಿಳಿದು ನಾನು ಹೇಗೆ ಪ್ರಶಸ್ತವಾದ ಕರ್ಮವನ್ನು ಮಾಡಲಿ?

ನಾಸ್ಯ ವರ್ಷಂ ವರ್ಷತಿ ವರ್ಷಕಾಲೇ
ನಾಸ್ಯ ಬೀಜಂ ರೋಹತಿ ಕಾಲ ಉತ್ತಮ್ ।
ಭೀತಂ ಪ್ರಪನ್ನಂ ಯೋ ಹಿ ದದಾತಿ ಶತ್ರವೇ
ನ ತ್ರಾತಾರಂ ಲಭತೇ ತ್ರಾತುಮಿಚ್ಛನ್ ॥೧೦॥

ಯಾವ ರಾಜನು ಭೀತನಾದ, ಶರಣಾಗತನಾದ ವ್ಯಕ್ತಿಯನ್ನು ಶತ್ರುವಿಗೆ ಅರ್ಪಿಸುತ್ತಾನೆಯೋ, ರಕ್ಷಣೆಯನ್ನು ಬಯಸಿದ ವ್ಯಕ್ತಿಯು ಎಲ್ಲಿ ರಕ್ಷಣೆಯನ್ನು ಪಡೆಯುವುದಿಲ್ಲವೋ ಅಂತಹವನಿಗೆ ಮಳೆಗಾಲದಲ್ಲಿ ಮಳೆಯಾಗುವುದಿಲ್ಲ ಮತ್ತು ಯೋಗ್ಯವಾದ ಕಾಲದಲ್ಲಿ ಬಿತ್ತಿದ ಬೀಜವು ಮೊಳಕೆಯೊಡೆದು ಬೆಳೆಯುವುದಿಲ್ಲ.

ಕಾಲೇ ಜಾತಾ ಸ್ತಾ ಪ್ರಜಾಽಸ್ಯೈ ಪ್ರಮೀಯತೇ
ಸದಾ ಸುಬಾಧಾಂ ಪಿತರೋಽಸ್ಯ ಕುರ್ವತೇ ।
ಭೀತಂ ಪ್ರಪನ್ನಂ ಯೋ ಹಿ ದದಾತಿ ಶತ್ರವೇ
ನಾಸ್ಯ ದೇವಾಃ ಪ್ರಹರಂತ್ಯಸ್ಯ ವಜ್ರಮ್ ॥೧೧॥

ಯಾರು ಭೀತನಾಗಿ ಪ್ರಪನ್ನನಾದ ವ್ಯಕ್ತಿಯನ್ನು ಶತ್ರುವಿಗೆ ಕೊಡುತ್ತಾನೆಯೋ ಅವನಿಗೆ ಯೋಗ್ಯಕಾಲದಲ್ಲಿ ಹುಟ್ಟಿದ ಮಕ್ಕಳು ಮೃತರಾಗುತ್ತಾರೆ. ಪಿತೃಗಳು ಯಾವಾಗಲೂ ಬಾಧೆಯನ್ನು ಕೊಡುತ್ತಾರೆ. ದೇವತೆಗಳು ಸಹಾಯಭೂತರಾಗಿರುವುದಿಲ್ಲ ಮತ್ತು ದೇವತೆಗಳು ವಜ್ರಪ್ರಯೋಗವನ್ನೂ ಮಾಡುತ್ತಾರೆ.

ಉಕ್ಷಾಣಂ ಪಕ್ತ್ವಾ ಸಹ ಓದನೇನ
ಅಸ್ಮಾತ್ ಕಪೋತಾದಧಿಕಂ ವೈ ನಯಂತು ।
ಯಸ್ಮಿನ್ ದೇಶೇ ರಮಸೇಽತೀವ ಶ್ಯೇನ
ತತ್ರ ಮಾಂಸಂ ವಯಸೇಽಸ್ಯೈ ವಹಂತು ॥೧೨॥

ಎಲೈ ಶ್ಯೇನವೇ ವೃಷಭದ ಮಾಂಸವನ್ನು ಅನ್ನದ ಜೊತೆಯಲ್ಲಿ ಬೇಯಿಸಿ ಈ ಕಪೋತಕ್ಕಿಂತ ಅಧಿಕ ಪರಿಮಾಣವುಳ್ಳ ಅದನ್ನು ನನ್ನ ಸೇವಕರು ನಿನಗೆ ತಂದುಕೊಡಲಿ. ಎಲೈ ಶ್ಯೇನವೇ, ನೀನು ಯಾವ ದೇಶದಲ್ಲಿ ಬಹಳ ಸಂತೋಷಪಡುತ್ತೀಯೋ ಅಂತಹ ದೇಶದಲ್ಲಿಯೇ ಪಕ್ಷಿಯಾದ ನಿನಗೆ ನನ್ನ ಸೇವಕರು ಮಾಂಸವನ್ನು ತೆಗೆದುಕೊಂಡು ಹೋಗಿ ಕೊಡಲಿ.

ಶ್ಯೇನಃ

ನೋಕ್ಷಣೋ ರಾಜನ್ ದ್ವಾದಶ ಕಾಮಯೇಯಂ
ನಾನ್ಯನ್ಮಾಂಸಮಧಿಕಂ ವಾ ಕಪೋತಾತ್ ।
ದೇವೈರ್ದತ್ತಃ ಶೈಬ್ಯ ಮಮೈಷ ಭಕ್ಷಃ
ತನ್ಮೇದದಸ್ವ ಶಕುನಾನ್ನಭಾವಾತ್ ॥೧೩॥

ಶ್ಯೇನ– ಎಲೈ ರಾಜನೇ, ನನಗೆ ಹನ್ನೆರಡು ವೃಷಭವಾದರೂ ಬೇಡ. ಅಥವಾ ಬೇರೆ ಮಾಂಸವಾಗಲೀ ಅಥವಾ ಕಪೋತಕ್ಕಿಂತ ಅಧಿಕವಾದ ಮಾಂಸವಾಗಲೀ ಬೇಡ. ಎಲೈ ಶಿಬಿಚಕ್ರವರ್ತಿಯೇ ಇದು ದೇವತೆಗಳು ನನಗೆ ಕೊಟ್ಟ ಆಹಾರ. ಆದ್ದರಿಂದ ಈ ಕಪೋತವು ನನ್ನ ಆಹಾರವಾದ ಕಾರಣದಿಂದ ಅದನ್ನು ನನಗೆ ಕೊಡು.

ಉಕ್ಷಾಣಂ ವೇಹತಮನೂನಂ ನಯಂತು ತೇ
ವಹಂತು ಪುರುಷಾ ವಚನಾನ್ಮಮೈವ ।
ಯಾಹಿ ತಸ್ಯ ದಯೇ ಮಾಮಾಂತಿಕಾತ್
ತ್ವಂ ಹ್ಯೇನಂ ಸ್ವಪುರುಷಂ ಮಾ ಹಿಂಸೀಃ ಕಪೋತಮ್ ॥೧೪॥

ಎಲೈ ಶ್ಯೇನವೇ, ನನ್ನ ಆದೇಶದಂತೆ ನನ್ನ ಭೃತ್ಯರು ನಿನಗೆ ಕಪೋತದ ಮಾಂಸಕ್ಕಿಂತ ಕಡಿಮೆಯಿಲ್ಲದ ವೃಷಭದ ಮಾಂಸವನ್ನಾಗಲೀ ಅಥವಾ ಬರಡು ಹಸುವಿನ ಮಾಂಸವನ್ನಾಗಲೀ ತಂದುಕೊಂಡುವರು. ಎಲೈ ದಯಾರೂಪನಾದ ಶ್ಯೇನವೇ, ನನ್ನ ಸಮೀಪದಿಂದ ಹೊರಟುಹೋಗು (ನಿನಗೆ ಇಷ್ಟವಾದ ದೇಶಕ್ಕೆ ಹೊರಟು ಹೋಗು). ನನಗೆ ಶರಣಾಗತನಾಗಿ ಭೃತ್ಯನಾಗಿರುವ ಈ ಕಪೋತವನ್ನು ಹಿಂಸಿಸಬೇಡ.

ತ್ಯಜೇ ಪ್ರಾಣಾನ್ ನೈವ ದದ್ಯಾಂ ಕಪೋತಂ
ಸೌಮ್ಯೋ ಹ್ಯಹಂ ಕಿಂ ನ ಜಹಾಸಿ ಶ್ಯೇನ ।
ವೃಥಾ ಕ್ಲೇಶಂ ಮಾ ಕುರುಷ್ವೇಹ ತ್ವಂ ಹಿ
ನಾಹಂ ಕಪೋತಮರ್ಪಯಿಷ್ಯೇ ಕಥಂಚಿತ್ ॥೧೫॥

ನಾನು ಪ್ರಾಣಗಳನ್ನು ಬಿಟ್ಟೇನು. ಆದರೆ ಕಪೋತವನ್ನು ಕೊಡಲಾರೆ. ನಾನು ಸೌಮ್ಯ ಸ್ವಭಾವದವನು. ಶ್ಯೇನವೇ, ಏಕೆ ನೀನು ಕಪೋತವನ್ನು ಬಿಡುತ್ತಿಲ್ಲ. ಇಲ್ಲಿ ನೀನು ವ್ಯರ್ಥವಾಗಿ ಕ್ಲೇಶಪಡಬೇಡ. ನಾನು ಯಾವ ಕಾರಣದಿಂದಲೂ ಕಪೋತವನ್ನು ನಿನಗೆ ಕೊಡುವುದಿಲ್ಲ.

ಯಥಾ ಮಾಂ ವೈ ಸಾಧುವಾದೈಃ ಪ್ರಸನ್ನಾಃ
ಪ್ರಶಂಸೇಯುಃ ಶಿಬಯಃ ಕರ್ಮಣಾದ್ಯ ।
ಯಥಾ ತೇ ಶ್ಯೇನ ಪ್ರಿಯಮೇವ ಕುರ್ಯಾಂ
ಪ್ರಶಾಧಿಮಾಂ ಯದ್ ವದೇಸ್ತತ್ಕರೋಮಿ ॥೧೬॥

ಎಲೈ ಶ್ಯೇನವೇ, ನಾನು ಯಾವ ಕಾರ್ಯವನ್ನು ಮಾಡಿದರೆ ಶಿಬಿವಂಶದವರೆಲ್ಲರೂ ಪ್ರಸನ್ನರಾಗಿ ಸಾಧುವಚನಗಳಿಂದ ನನ್ನನ್ನು ಪ್ರಶಂಸೆ ಮಾಡುವರೋ ಅಂತಹ ನಿನಗೆ ಪ್ರಿಯವಾದ ಯಾವ ಕಾರ್ಯವನ್ನು ಮಾಡಲಿ ಎಂದು ನನಗೆ ಆಜ್ಞೆಯನ್ನು ಮಾಡು. ನೀನು ಹೇಳಿದಂತೆ ಮಾಡುತ್ತೇನೆ.

ಶ್ಯೇನಃ

ಊರೋರ್ದಕ್ಷಿಣಾದವಕೃತ್ಯ ಸ್ವಪಿಶಿತಂ ತಾವದ್ ರಾಜನ್ ಯಾವತ್
ಕಪೋತೇನ ಸಮಂ ದದ್ಯಾಃ ತಸ್ಮಾತ್ ಸಾಧುತ್ರಾತಃ ಕಪೋತಃ
ಪ್ರಶಂಸೇಯುಃ ಶಿಬಯಃ ಕೃತಂ ಚ ಪ್ರಿಯಂ ಸ್ಯಾನ್ಮಮೇತಿ ॥೧೭॥

ಶ್ಯೇನ– ಎಲೈ ರಾಜನೇ, ನಿನ್ನ ಬಲತೊಡೆಯಿಂದ ಕಪೋತದ ತೂಕಕ್ಕೆ ಸಮವಾದಷ್ಟು ನಿನ್ನ ಮಾಂಸವನ್ನು ಕತ್ತರಿಸಿ ಕೊಡುವವನಾಗು. ಹಾಗೆ ಮಾಡಿದರೆ ಕಪೋತದ ರಕ್ಷಣೆಯೂ ಚೆನ್ನಾಗಿ ಆಗುತ್ತದೆ. ಶಿಬಿಗಳೂ ನಿನ್ನನ್ನು ಪ್ರಶಂಸಿಸುತ್ತಾರೆ ಮತ್ತು ನನಗೆ ಪ್ರಿಯವನ್ನೂ ಮಾಡಿದಂತಾಗುತ್ತದೆ.

ಮಾರ್ಕಂಡೇಯಃ

ಅಥ ಸ ದಕ್ಷಿಣಾದೂರೋರುತ್ಕೃತ್ಯ
ಸ್ವಮಾಂಸಪೇಶೀಂ ತುಲಯಾऽಧಾರಯತ್ ।
ಗುರುತರಃ ಕಪೋತ ಆಸೀತ್ ।
ಪುನರನ್ಯನ್ಮಾಂಸಮುಚ್ಚಕರ್ತ । ಗುರುರೇವ ಕಪೋತಃ ॥
ಏವಂ ಸರ್ವಮಾಂಸಮುತ್ಕೃತ್ಯ ಶರೀರಂ ತುಲಾಮಾರೋಪಯಾಮಾಸ
ತತ್ । ತಥಾಪಿ ಗುರುತರ ಏವ ಕಪೋತ ಆಸೀತ್ ॥೧೮॥

ಅನಂತರ ಅವನು ತನ್ನ ದಕ್ಷಿಣ ತೊಡೆಯಿಂದ ಕತ್ತರಿಸಿದ ಮಾಂಸದ ಮುದ್ದೆಯನ್ನು ತಕ್ಕಡಿಯಲ್ಲಿಟ್ಟನು. ಕಪೋತವೇ ಅದಕ್ಕಿಂತ ಹೆಚ್ಚಿನ ಭಾರವಾಯಿತು. ಪುನಃ ಬೇರೆ ಮಾಂಸವನ್ನು ಕತ್ತರಿಸಿ ಇಟ್ಟನು. ಆಗಲೂ ಕಪೋತವು ಭಾರವೇ ಆಯಿತು. ಹೀಗೆ ಶರೀರದ ಎಲ್ಲಾ ಮಾಂಸವನ್ನು ಕತ್ತರಿಸಿ ಅದನ್ನು ತಕ್ಕಡಿಯಲ್ಲಿಟ್ಟನು. ಆದರೂ ಆ ಕಪೋತವೇ ಅವನ ಮಾಂಸಕ್ಕಿಂತ ಹೆಚ್ಚು ಭಾರವಾಯಿತು.

ಅಥ ರಾಜಾ ಸ್ವಯಮೇವ ತುಲಾಮಾರುರೋಹ ।
ನ ಚ ವ್ಯಲೀಕಮಾಸೀದ್ ರಾಜ್ಞಃ । ಏತದ್ ವೃತ್ತಾಂತಂ
ದೃಷ್ಟ್ವಾ ತ್ರಾತ ಇತ್ಯುಕ್ತ್ವಾ ಪ್ರಾಲೀಯತ ಶ್ಯೇನಃ ॥೧೯॥

ಆಗ ರಾಜನು ತಾನೇ ತಕ್ಕಡಿಯನ್ನು ಏರಿ ಕುಳಿತುಕೊಂಡನು. ರಾಜನು ತಾನು ಕೊಟ್ಟ ಮಾತನ್ನು ಸುಳ್ಳು ಮಾಡಲಿಲ್ಲ. ಈ ದೃಶ್ಯವನ್ನು ನೋಡಿದ ಶ್ಯೇನವು ಕಪೋತವು ರಕ್ಷಿಸಲ್ಪಟ್ಟಿತು ಎಂದು ಹೇಳಿ. ಅದೃಶ್ಯವಾಯಿತು.

ಅಥ ರಾಜಾऽಬ್ರವೀತ್ ಕಪೋತಂ ।
ಕಥಂ ವಿದ್ಯುಃ ಶಿಬಯಸ್ತ್ವಾಂ ಕಪೋತ
ಪೃಚ್ಛಾಮಿ ತ್ವಾಂ ಶಕುನೇ ಕೋನು ಶ್ಯೇನಃ ।
ನಾನೀಶ್ವರ ಈದೃಶಂ ಜಾತು ಕುರ್ಯಾತ್
ಏತಂ ಪ್ರಶ್ನಂ ಭಗವನ್ ಮೇ ವಿಚಕ್ಷ್ವ ॥೨೦॥

ಆಗ ರಾಜನು ಕಪೋತವನ್ನು ಕುರಿತು ಹೇಳಿದನು.

ಎಲೈ ಕಪೋತಪಕ್ಷಿಯೇ, ನಿನ್ನನ್ನು ಶಿಬಿಗಳು ಏನೆಂದು ತಿಳಿಯಬೇಕು? ಆ ಶ್ಯೇನವು ಯಾರು ಎಂದು ನಿನ್ನನ್ನು ಕೇಳುತ್ತಿದ್ದೇನೆ. ದೇವತೆಯಲ್ಲದವನು ಯಾವನೂ ಇಂತಹ ಕೆಲಸವನ್ನು ಮಾಡಲಾರ. ಪೂಜ್ಯನಾದ ಕಪೋತವೇ, ನನ್ನ ಈ ಪ್ರಶ್ನೆಗೆ ಉತ್ತರವನ್ನು ನೀಡು.

ಕಪೋತಃ

ವೈಶ್ವಾನರೋಽಹಂ ಜ್ವಲನೋ ಧೂಮಕೇತು–
ರಥೈವ ಶ್ಯೇನೋ ವಜ್ರಹಸ್ತಃ ಶಚೀಪತಿಃ ।
ಸಾಧು ಜ್ಞಾತುಂ ತ್ವಾಮೃಷಯಃ ಸೌರಥೇಯ
ಆವಾಂ ವಿಜ್ಞಾಸಯಾ ತ್ವತ್ಸಕಾಶಂ ಪ್ರಪನ್ನೌ ॥೨೧॥

ಕಪೋತ– ನಾನು ಧೂಮಧ್ವಜನಾದ ಜ್ವಲಿಸುವ ಅಗ್ನಿಯು. ಅದರಂತೆ ಶ್ಯೇನವು ಶಚೀಪತಿಯಾದ ವಜ್ರಾಸ್ತನಾದ ಇಂದ್ರನು. ಎಲೈ ಮಹಾರಥನೇ, ನಾವು ಮತ್ತು ಋಷಿಗಳು ನಿನ್ನನ್ನು ಸರಿಯಾಗಿ ತಿಳಿಯುವ ಇಚ್ಛೆಯಿಂದ ನಾವಿಬ್ಬರೂ ನಿನ್ನ ಸಮೀಪಕ್ಕೆ ಬಂದೆನು.

ಯಾಮೇತಾಂ ಪೇಶೀಂ ನಿಷ್ಕೃಯಾಯ
ಪ್ರಾದಾದ್ ಭವಾನಸಿನೋತ್ಕೃತ್ಯ ರಾಜನ್ ।
ಏತದ್ಘೋಽಲಕ್ಷಂ ಶಿಬೇ ಕರೋಮಿ
ಹಿರಣ್ಯವರ್ಣಂ ರುಚಿರಂ ಪುಣ್ಯಗಂಧಮ್ ॥೨೨॥

ಎಲೈ ರಾಜನೇ, ನನಗೆ ಉಪಕಾರವನ್ನು ಮಾಡಲು ನೀನು ಯಾವ ಮಾಂಸದ ಮುದ್ದೆಯನ್ನು ನಿನ್ನ ದೇಹದಿಂದ ಕತ್ತರಿಸಿದೆಯೋ ಅಂತಹ ನೋಡಲು ಅಸಾಧ್ಯವಾದ (ಅಸಹ್ಯವಾದ) ನಿನ್ನ ಈ ಕ್ರೂರರೂಪವನ್ನು ಸುವರ್ಣವರ್ಣವುಳ್ಳದ್ದಾಗಿ ಸುಗಂಧವುಳ್ಳದ್ದಾಗಿ ಮತ್ತು ಮನೋಹರವಾಗಿ ಮಾಡುತ್ತೇನೆ.

ಏತಾಸಾಂ ಪ್ರಜಾನಾಂ ಪಾಲಯಿತಾ ಯಶಸ್ವೀ
ಸುರರ್ಷೀಣಾಮಥ ಸಮ್ಮತೋ ಭೃಶಮ್ ।

ಏತಸ್ಮಾತ್ ಪಾರ್ಶ್ವತ್ ಪುರುಷೋ ಜನಿಷ್ಯತೇ
ಕಪೋತರೋಮೇತಿ ಚ ತಸ್ಯ ನಾಮ ॥೨೩॥

ನೀನು ಈ ಪ್ರಜೆಗಳನ್ನು ಕೀರ್ತಿವಂತನಾಗಿ ಪಾಲಿಸುವಿ. ದೇವತೆಗಳಿಗೂ ಮತ್ತು ಋಷಿಗಳಿಗೂ ಅತ್ಯಂತ ಸಮ್ಮತನಾಗುವಿ. ನೀನು ಮಾಂಸವನ್ನು ಕಿತ್ತ ನಿನ್ನ ಶರೀರದ ಭಾಗದಿಂದ ನಿನಗೆ ಒಬ್ಬ ಪುತ್ರನು ಜನಿಸುವನು. ಅವನಿಗೆ ಕಪೋತರೋಮ ಎಂದು ಹೆಸರಾಗುತ್ತದೆ.

ಕಪೋತರೋಮಾಣಂ ಶಿಬಿಮೌದ್ಭಿದಂ ಪುತ್ರಂ ಪ್ರಾಪ್ಸ್ಯಸಿ
ನೃಪವೃಷಂ ಮಹಾರಥಂ ಯಶೋದೀಪ್ಯಮಾನಂ
ದ್ರಷ್ಟಾಸಿ ಶೂರಮೃಷಭಂ ಸೌರಥಾನಾಮ್ ॥೨೪॥

ಎಲೈ ಶಿಬಿಯೇ, ಶತ್ರುಗಳನ್ನು ಸಂಹಾರ ಮಾಡುವ ಕಪೋತರೋಮನೆಂಬ ಶಿಬಿಯನ್ನು ನೀನು ಪುತ್ರನನ್ನಾಗಿ ಪಡೆಯುವಿ. ನೃಪಶ್ರೇಷ್ಠನಾದ ಕೀರ್ತಿಯಿಂದ ಬೆಳಗುವ ಮಹಾರಥರಲ್ಲಿ ಶ್ರೇಷ್ಠನಾದ ಶೂರನಾದ ಅವನನ್ನು ನೀನು ನೋಡುವಿ (ಎಂದು ಹೇಳಿತು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚಾಧಿಕದ್ವಿಶತಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಖ್ಯಾಪರ್ವಣಿ
ರಾಜಮಾಹಾತ್ಮ್ಯೇ ಚತುರ್ಥೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಐದನೆಯ
ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಆರನೆಯ ಅಧ್ಯಾಯ

ಮಾರ್ಕಂಡೇಯರಿಂದ ಅಷ್ಟಕನ ಅಶ್ವಮೇಧಯಾಗದ ಪ್ರಸಂಗದಲ್ಲಿ
ಶಿಬಿಯ ಮಾಹಾತ್ಮ್ಯದ ಕಥನ.

ವೈಶಂಪಾಯನಃ

ಭೂಯ ಏವ ಮಹಾಭಾಗ್ಯಂ ಕಥ್ಯತಾಮಿತ್ಯಬ್ರವೀತ್
ಪಾಂಡವೋ ಮಾರ್ಕಂಡೇಯಮ್ ॥೧॥

ವೈಶಂಪಾಯನ– ರಾಜರ ಮಹಾಭಾಗ್ಯವನ್ನು ಇನ್ನೂ ಹೇಳಿ ಎಂದು ಯುಧಿಷ್ಠಿರನು ಮಾರ್ಕಂಡೇಯರನ್ನು ಕೇಳಿದನು.

ಅಥಾಚಷ್ಟ ಮಾರ್ಕಂಡೇಯಃ ।
ಅಷ್ಟಕಸ್ಯ ವೈಶ್ವಾಮಿತ್ರೇಽಶ್ವಮೇಧೇ ಸರ್ವೇ ರಾಜಾನ ಆಗಚ್ಛನ್ ।
ಭ್ರಾತರಶ್ಚಾಸ್ಯ ಪ್ರತರ್ದನೋ ವಸುಮನಾಃ ಶಿಬಿರೌಶೀನರ ಇತಿ ॥೨॥

ಆಗ ಮಾರ್ಕಂಡೇಯರು ಹೇಳಿದರು. ವಿಶ್ವಾಮಿತ್ರರು ನಡೆಸಿಕೊಟ್ಟ ಅಷ್ಟಕನ ಅಶ್ವಮೇಧ ಯಾಗಕ್ಕೆ ಎಲ್ಲ ರಾಜರೂ ಬಂದರು. ಅಷ್ಟಕನ ಸಹೋದರನಾದ ಪ್ರತರ್ದನ, ವಸುಮನಾ ಮತ್ತು ಔಶೀನರ ಶಿಬಿಯೂ ಸಹ ಬಂದರು.

ಸ ಚ ಸಮಾಪ್ತಯಜ್ಞೋ ಭ್ರಾತೃಭಿಃ ಸಹ ರಥೇನ ಪ್ರಾಯಾತ್ ।
ತೇ ಚ ನಾರದಮಾಗಚ್ಛಂತಮಪಶ್ಯನ್ ।
ತಮಭಿವಾದ್ಯಾರೋಹತು ಭವಾನ್ ರಥಮಿತ್ಯಬ್ರುವನ್ ॥೩॥

ಅಷ್ಟಕನು ಯಜ್ಞವನ್ನು ಸಮಾಪ್ತಿಗೊಳಿಸಿ ಸಹೋದರರ ಜೊತೆಯಲ್ಲಿ ರಥದಲ್ಲಿ ಹೊರಟನು. ಅವರು ಎದುರಿಗೆ ನಾರದರು ಬರುತ್ತಿರುವುದನ್ನು ನೋಡಿದರು. ಅವರಿಗೆ ನಮಸ್ಕರಿಸಿ ತಾವು ರಥವನ್ನು ಏರಿ ಎಂದು ಹೇಳಿದರು.

ತಾನ್ ತಥೇತ್ಯುಕ್ತ್ವಾ ರಥಮಾರುರೋಹ ।
ಅಥ ತೇಷಾಮೇಷಾಮೇಕತರ ಋಷಿಂ ನಾರದಮಬ್ರವೀತ್ ।
ಪ್ರಸಾದ್ಯ ಭಗವಂತಂ ಕಿಂಚಿದಿಚ್ಛೇಯಂ ಪ್ರಷ್ಟುಮಿತಿ ॥
ಪೃಚ್ಛೇತ್ಯಬ್ರವೀತ್ ಋಷಿರ್ನಾರದಃ ॥೪॥

ನಾರದರು ಹಾಗೆಯೇ ಆಗಲಿ ಎಂದು ಹೇಳಿ ರಥವನ್ನು ಏರಿದರು. ಆಗ ಅವರಲ್ಲಿ ಒಬ್ಬನು ನಾರದ ಋಷಿಗಳನ್ನು ಕುರಿತು ಪೂಜ್ಯರಾದ ತಮ್ಮನ್ನು ಪ್ರಸನ್ನೀಕರಿಸಿ ಒಂದು ಪ್ರಶ್ನೆಯನ್ನು ಕೇಳಲು ಬಯಸುತ್ತೇನೆ ಎಂದು ಹೇಳಿದನು. ನಾರದ ಋಷಿಗಳು ಕೇಳು ಎಂದು ಹೇಳಿದರು.

ಸೋಽಬ್ರವೀತ್ । ಆಯುಷ್ಮಂತಃ ಸರ್ವ ಏವ ಗುಣಪ್ರಮುದಿತಾಃ ।
ಅಥಾಯುಷ್ಮಂತಂ ಸ್ವರ್ಗಸ್ಥಾನಂ ಗುಣವಿಶೇಷಾಚ್ಚತುರ್ಭಿರ್ಯಾತವ್ಯಂ
ಸ್ಯಾತ್ ಕೋಽವತರೇತ್ ॥೫॥

ಅವನು ಹೇಳಿದನು. ರಥದಲ್ಲಿರುವ ಸೌಭಾಗ್ಯವಂತರೆಲ್ಲರೂ ಗುಣಗಳಿಂದ ಕೂಡಿ ಸಂತೋಷಪಡುವವರಾಗಿದ್ದಾರೆ. ಒಂದುಪಕ್ಷ ಸ್ಥಿರಕಾಲೀನವಾದ ಸ್ವರ್ಗಸ್ಥಾನವನ್ನು ಗುಣವಿಶೇಷವುಳ್ಳ ನಾಲ್ಕು ಜನರೇ ತಲುಪಬೇಕೆಂದಾದರೆ ಯಾರು ಇಳಿಯಬೇಕು?

ಅಯಮಷ್ಟಕೋಽವತರೇದಿತ್ಯಬ್ರವೀದ್ ಋಷಿಃ ।
ಕಿಂ ಕಾರಣಮಿತ್ಯಪೃಚ್ಛತ್ ॥೬॥

ಈ ಅಷ್ಟಕನು ಇಳಿಯಬೇಕು ಎಂದು ನಾರದರು ಹೇಳಿದರು. ಅದಕ್ಕೆ ಏನು ಕಾರಣ ಎಂದು ಅವನು ಪ್ರಶ್ನೆ ಮಾಡಿದನು.

ಅಥಾಚಷ್ಟ । ಅಷ್ಟಕಸ್ಯ ಗೃಹೇ ಮಯಾ ಉಷಿತಮ್ ।
ಸ ಮಾಂ ರಥೇನಾನುಪ್ರಾವಹತ್ ।
ಅಥಾಪಶ್ಯಮನೇಕಾನಿ ಗೋಸಹಸ್ರಾಣಿ ವರ್ಣಶೋ ವಿವಿಕ್ತಾನಿ ।
ತಮಹಮಪೃಚ್ಛಂ ಕಸ್ಯೇಮಾ ಗಾವ ಇತಿ । ಸೋಽಬ್ರವೀತ್ ।
ಮಯಾ ನಿಸೃಷ್ಟಾ ಇತಿ । ತೇನೈವ ಸ್ವಯಂ ಶ್ಲಾಘತಿ ಕಥಿತೇನ ।
ತೇನೈಷೋಽವತರೇತ್ ॥೭॥

ಆಗ ನಾರದರು ಹೇಳಿದರು. ನಾನು ಹಿಂದೆ ಅಷ್ಟಕನ ಮನೆಯಲ್ಲಿ ವಾಸಮಾಡಿದೆನು. ಅವನು ಒಮ್ಮೆ ನನ್ನನ್ನು ರಥದಲ್ಲಿ ಕರೆದುಕೊಂಡು ಹೋದನು. ಆಗ ನಾನು ಅವುಗಳ ಬಣ್ಣಗಳಿಗೆ ಅನುಸಾರವಾಗಿ ವಿಂಗಡಿಸಿದ್ದ ಅನೇಕ ಸಹಸ್ರ ಗೋವುಗಳನ್ನು ನೋಡಿದೆನು. ನಾನು ಇವನನ್ನು ಈ ಗೋವುಗಳು ಯಾರವು ಎಂದು ಕೇಳಿದೆನು. ಇವನು ನಾನು

ದಾನ ಮಾಡಿದವು ಎಂದು ಹೇಳಿದನು. ಇವನು ತಾನೇ ದಾನವನ್ನು ಕೊಟ್ಟು ಅದನ್ನು ತಾನೇ ಶ್ಲಾಘಿಸುತ್ತಾನೆ. ಆಕಾರಣದಿಂದ ಇವನೇ ಇಳಿಯಬೇಕು.

ಅಥ ತ್ರಿಭಿರ್ಯಾತವ್ಯಂ ಸಾಂಪ್ರತಮ್ । ಕೋऽವತರೇತ್ ॥೮॥

ಇನ್ನು ಮೂರುಜನರು ಹೋಗಬೇಕಾದರೆ ಈಗ ಯಾರು ಇಳಿಯಬೇಕು?

ಪ್ರತರ್ದನ ಇತ್ಯಬ್ರವೀದ್ ಋಷಿಃ । ತತ್ರ ಕಿಂ ಕಾರಣಮ್ ॥೯॥

ಪ್ರತರ್ದನ ಎಂದು ನಾರದರು ಹೇಳಿದರು. ಅದಕ್ಕೇನು ಕಾರಣ? (ಎಂದು ಅವನು ಕೇಳಿದನು)

ಪ್ರತರ್ದನಸ್ಯಾಪಿ ಗೃಹೇ ಮಯೋಷಿತಮ್ ।
ಸ ಮಾಂ ರಥೇನಾನುಪ್ರಾವಹತ್ ।
ಅಥೈತಂ ಬ್ರಾಹ್ಮಣೋ ಭಿಕ್ಷಿತವಾನಶ್ವಂ ಮೇ ದದಾತ್ವಿತಿ ।
ನಿವೃತ್ತೋ ದಾಸ್ಯಾಮೀತ್ಯಬ್ರವೀದ್ ಬ್ರಾಹ್ಮಣಮ್ ।
ತ್ವರಿತಮೇವ ದೀಯತಾಮಿತ್ಯಬ್ರವೀದ್ ಬ್ರಾಹ್ಮಣಃ ।
ತ್ವರಿತಮೇವ । ಸ ಬ್ರಾಹ್ಮಣಸ್ಯೈವಮುಕ್ತ್ವಾ
ದಕ್ಷಿಣಪಾರ್ಶ್ವಸ್ಥಮಶ್ವಮದದಾತ್ ॥೧೦॥

ಪ್ರತರ್ದನನ ಮನೆಯಲ್ಲಿಯೂ ನಾನು ವಾಸಮಾಡಿದೆನು. ಅವನು ನನ್ನನ್ನು ರಥದಲ್ಲಿ ಕರೆದುಕೊಂಡು ಹೋದನು. ಆಗ ದಾರಿಯಲ್ಲಿ ಒಬ್ಬ ಬ್ರಾಹ್ಮಣನು ಬಂದು ನನಗೆ ಒಂದು ಅಶ್ವವನ್ನು ಕೊಡು ಎಂದು ಬೇಡಿದನು. ಪ್ರಯಾಣವನ್ನು ಮುಗಿಸಿ ಬಂದು ಕೊಡುವೆನು ಎಂದು ಬ್ರಾಹ್ಮಣನಿಗೆ ಪ್ರತರ್ದನನು ಹೇಳಿದನು. ಶೀಘ್ರವಾಗಿಯೇ ಕೊಡು ಎಂದು ಬ್ರಾಹ್ಮಣನು ಹೇಳಿದನು. ಶೀಘ್ರವಾಗಿಯೇ (ಕೊಡುವೆನು) ಎಂದು ಪ್ರತರ್ದನನು ಹೇಳಿದನು. ಅವನು ಬ್ರಾಹ್ಮಣನಿಗೆ ಹೀಗೆ ಹೇಳಿ ರಥದ ಬಲಭಾಗದಲ್ಲಿದ್ದ ಅಶ್ವವನ್ನು ಕೊಟ್ಟನು.

ಅಥ ಪ್ರಾಯಾತ್ । ಪುನರಪಿ ಚಾನ್ಯೋಪ್ಯಶ್ವಾರ್ಥೀ
ಬ್ರಾಹ್ಮಣ ಆಗಚ್ಛತ್ । ತಮಬ್ರವೀದಭಿಯಾತೋ ದಾಸ್ಯಾಮಿತಿ ।

ತ್ವರಿತಮೇವ ದೀಯತಾಮಿತ್ಯಬ್ರವೀದ್ ಬ್ರಾಹ್ಮಣಃ ।
ತಥೇತಿ ಚೈನಮುಕ್ತ್ವಾ ವಾಮಪಾರ್ಷ್ಣಿಸ್ಥಮಶ್ವಮಭ್ಯದಾತ್ ॥೧೧॥

ಅನಂತರ ಅಲ್ಲಿಂದ ಹೊರಟನು. ಪುನಃ ಇನ್ನೊಬ್ಬ ಅಶ್ವಾರ್ಥಿಯಾದ ಬ್ರಾಹ್ಮಣನು ಬಂದನು. ಅವನಿಗೂ ಪ್ರತರ್ದನನು ಪ್ರಯಾಣವನ್ನು ಮುಗಿಸಿ ಕೊಡುವೆನು ಎಂದು ಹೇಳಿದನು. ಶೀಘ್ರವಾಗಿಯೇ ಕೊಡು ಎಂದು ಬ್ರಾಹ್ಮಣನು ಹೇಳಿದನು. ಹಾಗೆಯೇ ಆಗಲಿ ಎಂದು ಅವನಿಗೆ ಹೇಳಿ ಪ್ರತರ್ದನನು ರಥದ ಎಡಭಾಗದಲ್ಲಿದ್ದ ಅಶ್ವವನ್ನು ಅವನಿಗೆ ನೀಡಿದನು.

ಅಥ ಪ್ರಾಯಾತ್ । ಪುನರಪಿ ಚಾನ್ಯೋಽಶ್ವಾರ್ಥೀ ಬ್ರಾಹ್ಮಣ ಆಗಚ್ಛತ್ ।
ತ್ವರಿತೋಽಥ ತಸ್ಮೈ ಅಪನಹ್ಯ ವಾಮಂ ಧುರ್ಯಮದದಾತ್ ॥೧೨॥

ಪುನಃ ಮುಂದೆ ಹೊರಟನು. ಪುನಃ ಅಶ್ವಾರ್ಥಿಯಾದ ಇನ್ನೊಬ್ಬ ಬ್ರಾಹ್ಮಣನು ಬಂದನು. ಅವನಿಗೆ ನೊಗದ ಎಡಭಾಗದಲ್ಲಿ ರಥವನ್ನು ಹೊತ್ತಿದ್ದ ಅಶ್ವವನ್ನು ಬಿಚ್ಚಿ ಕೊಟ್ಟನು.

ಅಥ ಪ್ರಾಯಾತ್ । ಪುನರನ್ಯ ಆಗಚ್ಛದಶ್ವಾರ್ಥೀ ಬ್ರಾಹ್ಮಣಃ ।
ತಮಬ್ರವೀತ್-ಅತಿಯಾತೋ ದಾಸ್ಯಾಮೀತಿ ।
ತ್ವರಿತಮೇವ ಮೇ ದೀಯತಾಮಿತ್ಯಬ್ರವೀದ್ ಬ್ರಾಹ್ಮಣಃ ।
ತಸ್ಮೈ ದತ್ತ್ವಾಽಶ್ವಂ ಸ್ವಪುರಂ ಗೃಹ್ಣತಾ ವ್ಯಾಹೃತಂ-
ಬ್ರಾಹ್ಮಣಾನಾಂ ಸಾಂಪ್ರತಂ ನಾಸ್ತಿ ಕಿಂಚಿದಿತಿ ॥೧೩॥

ಪುನಃ ಹೊರಟನು. ಪುನಃ ಅಶ್ವಾರ್ಥಿಯಾದ ಇನ್ನೊಬ್ಬ ಬ್ರಾಹ್ಮಣನು ಬಂದನು. ಅವನಿಗೆ ಪ್ರಯಾಣವನ್ನು ಮುಗಿಸಿ ಕೊಡುವೆನು ಎಂದು ಹೇಳಿದನು. ಶೀಘ್ರವಾಗಿ ಕೊಡು ಎಂದು ಬ್ರಾಹ್ಮಣನು ಹೇಳಿದನು ಅವನಿಗೆ (ರಥದ ನೊಗದ ಬಲಭಾಗದಲ್ಲಿ ಕಟ್ಟಿದ್ದ) ಅಶ್ವವನ್ನು ಕೊಟ್ಟು ತನ್ನ ಪಟ್ಟಣವನ್ನು ರಕ್ಷಿಸಲು ಹಿಂದೆ ಬರುತ್ತಾ ಇನ್ನು ಬ್ರಾಹ್ಮಣರಿಗೆ ಕೊಡಲು ಏನೂ ಉಳಿದಿಲ್ಲವೆಂದು ಹೇಳಿದನು.

ಯ ಏಷ ದದಾತಿ ಚಾಸೂಯತಿ ಚ ।
ತೇನ ಸ್ಯಾದ್ಧತೇನ ತಥಾಽವತರೇತ್ ॥೧೪॥

ಇವನು ದಾನವನ್ನು ಮಾಡುತ್ತಾನೆ ಮತ್ತು ಅಸೂಯೆಯನ್ನೂ ಪಡುತ್ತಾನೆ. ಆದ್ದರಿಂದ ಅಸೂಯೆಯಿಂದಲೇ ಹತನಾದ ಅವನು ರಥದಿಂದ ಇಳಿಯಬೇಕು.

ಅಥ ದ್ವಾಭ್ಯಾಂ ಯಾತವ್ಯಂ ಕೋಽವತರೇತ್ ।
ವಸುಮನಾ ಅವತರೇದಿತ್ಯಬ್ರವೀದ್ ಋಷಿಃ ॥೧೫॥

ಇನ್ನು ಇಬ್ಬರೇ ಹೋಗಬೇಕಾಗಿದೆ. ಯಾರು ಇಳಿಯಬೇಕು? ವಸುಮನನು ಇಳಿಯಬೇಕು ಎಂದು ನಾರದರು ಹೇಳಿದರು.

ಕಿಂ ಕಾರಣಮಿತ್ಯಪೃಚ್ಛದಥಾಚಷ್ಟ ನಾರದಃ ॥೧೬॥

ಅದಕ್ಕೇನು ಕಾರಣ? ಎಂದು ಕೇಳಿದನು. ಆಗ ನಾರದರು ಹೇಳಿದರು.

ಅಹಂ ಪರಿಭ್ರಮಂಶ್ಚ ವಸುಮನಸೋ ಗೃಹೇ ಉಪಸ್ಥಿತಃ ।
ಸ್ವಸ್ತಿವಾಚನಮಾಸೀತ್ ಪುಷ್ಪರಥಸ್ಯ ಪ್ರಯೋಜನೇನ ।
ತಮಹಮನ್ವಗಚ್ಛಮ್ । ಸ್ವಸ್ತಿವಾಚಿತೇಷು ಬ್ರಾಹ್ಮಣೇಷು
ರಥೋ ಬ್ರಾಹ್ಮಣಾನಾಂ ದರ್ಶಿತಃ ॥೧೭॥

ನಾನು ಸಂಚಾರವನ್ನು ಮಾಡುತ್ತಾ ವಸುಮನನ ಮನೆಗೆ ಬಂದೆನು. ಅಲ್ಲಿ ಅವನ ಪುಷ್ಪರಥವನ್ನು ಉದ್ದೇಶಿಸಿ ಸ್ವಸ್ತಿವಾಚನವು ನಡೆದಿದ್ದಿತು. ನಾನು ಅವನನ್ನು ಹಿಂಬಾಲಿಸಿದೆನು. ಬ್ರಾಹ್ಮಣರು ಸ್ವಸ್ತಿವಾಚನವನ್ನು ಮಾಡಿದ ಮೇಲೆ ಅವನು ಅವರಿಗೆ ರಥವನ್ನು ತೋರಿಸಿದನು.

ತಮಹಂ ರಥಂ ಪ್ರಾಶಂಸಮ್ । ಅಥ ಸ ರಾಜಾಽಬ್ರವೀತ್ ।
ಭವತಾ ರಥಃ ಪ್ರಶಸ್ತಃ । ಏಷ ಭಗವತೋ ರಥ ಇತಿ ॥೧೮॥

ನಾನು ಆ ರಥವನ್ನು ಪ್ರಶಂಸಿಸಿದೆನು. ಆಗ ರಾಜನು ಹೇಳಿದನು ನೀವು ರಥವನ್ನು ಹೊಗಳಿದ್ದೀರಿ. ಇದು ಪೂಜ್ಯರಾದ ನಿಮ್ಮದೇ ರಥ ಎಂದು.

ಅಥ ಕದಾಚಿತ್ ಪುನರಪ್ಯಹಮುಪಸ್ಥಿತಃ ।
ಪುನರೇವ ಚ ರಥಪ್ರಯೋಜನಮಾಸೀತ್ ।
ತಥಾ ಚೈನಂ ಪ್ರಾಶಂಸಮ್ ।
ಏಷ ಭಗವತ ಇತ್ಯೇವಂ ರಾಜಾಽಬ್ರವೀತ್ ಪುನರೇವ ಚ ॥೧೯॥

ಅನಂತರ ಇನ್ನೊಮ್ಮೆ ನಾನು ಅವನ ಮನೆಗೆ ಹೋದೆನು. ಆಗಲೂ ಆ ರಥವನ್ನು ಉದ್ದೇಶಿಸಿ ಪುನಃ ಉತ್ಸವವು ನಡೆದಿದ್ದಿತು. ಆಗಲೂ ನಾನು ರಥವನ್ನು ಪ್ರಶಂಸಿಸಿದೆನು. ಇದು ತಮ್ಮದೇ ರಥ ಎಂದು ರಾಜನು ಪುನಃ ಹೇಳಿದನು.

ತೃತೀಯಂ ಸ್ವಸ್ತಿವಾಚನಂ ಸಮಭಾವಯತ್ ।
ಅಥ ರಾಜಾ ಬ್ರಾಹ್ಮಣಾನ್ ದರ್ಶಯನ್ ಮಾಮಭಿಪ್ರೇಕ್ಷ್ಯಾಬ್ರವೀತ್ ।
ಅಹೋ ಭಗವತಾ ಪುಷ್ಪರಥಸ್ಯ ಸ್ವಸ್ತಿವಾಚನಾನಿ ಸುಷ್ಠು ಸಂಭಾವಿತಾನಿ
(ಇತಿ) । ಏತೇನ ದ್ರೋಹವಾಕ್ಯೇನೈಷೋಽವತರೇತ್ ॥೨೦॥

ಆ ರಾಜನು ಮೂರನೆಯ ಬಾರಿಗೆ ಆ ರಥದ ಉದ್ದೇಶದಿಂದ ಸ್ವಸ್ತಿವಾಚನವನ್ನು ಮಾಡಿಸಿದನು. ಆಗ ರಾಜನು ಬ್ರಾಹ್ಮಣರಿಗೆ ರಥವನ್ನು ತೋರಿಸುತ್ತಾ ನನ್ನನ್ನು ನೋಡಿ ಪೂಜ್ಯರಾದ ನೀವು ಪುಷ್ಪರಥಕ್ಕೆ ಮಂಗಳಾಶೀರ್ವಾದವನ್ನು ಮಾಡಿದ್ದೀರಿ ಎಂದು ಹೇಳಿದನು. ಈ ದ್ರೋಹವಚನದಿಂದ ಅವನೂ ಇಳಿಯಬೇಕು (ನಾರದರು ರಾಜನಿಗೆ ನಿರುಪಾಧಿಕವಾಗಿ ಶುಭಾಶಂಸನೆಯನ್ನು ಮಾಡಿದ್ದರೂ, ಪುಷ್ಪರಥದ ನಿಮಿತ್ತದಿಂದ ಮಾಡಿದ್ದೀರಿ ಎಂದು ಹೇಳಿದುದು ರಾಜನ ದ್ರೋಹವಚನ).

ಅಥೈಕೇನ ಯಾತವ್ಯಂ ಸ್ಯಾತ್ ಕೋಽವತರೇತ್ ।
ಪುನರ್ನಾರದ ಆಹ - ಶಿಬಿರ್ಯಾಯಾದಹಮವತರೇಯಮಿತಿ ।
ಅತ್ರ ಕಿಂ ಕಾರಣಮಿತ್ಯಬ್ರವೀತ್ ।
ಅಸಾವಹಂ ಶಿಬಿನಾಂ ಸಮೋ ನಾಸ್ತಿ (ಇತಿ) ॥೨೧॥

ಇನ್ನು ಒಬ್ಬನೇ ಹೋಗಬೇಕಾದರೆ ಯಾರು ಇಳಿಯಬೇಕು? ಪುನಃ ನಾರದರು ಶಿಬಿಯು ರಥದಲ್ಲಿ ಹೋಗಬೇಕು. ನಾನು ಇಳಿಯಬೇಕು ಎಂದು ಹೇಳಿದರು. ಅದಕ್ಕೆ ಏನು ಕಾರಣ ಎಂದು ಕೇಳಿದನು. ಈ ನಾನು ಶಿಬಿಗೆ ಸಮಾನನಲ್ಲ ಎಂದು (ನಾರದರು ಹೇಳಿದರು).

ಬ್ರಾಹ್ಮಣಃ ಕಶ್ಚಿದೇನಮಬ್ರವೀತ್ ಶಿಬೇ ಅನ್ನಾರ್ಥ್ಯಹಮಸ್ಮೀತಿ ।
ತಮಬ್ರವೀತ್ ಶಿಬಿಃ ಕಿಂ ಕ್ರಿಯತಾಮಾಜ್ಞಾಪಯತು ಭವಾನಿತಿ ॥೨೨॥

ಒಬ್ಬ ಬ್ರಾಹ್ಮಣನು ಶಿಬಿಯ ಬಳಿಗೆ ಬಂದು ನಾನು ಅನ್ನಾರ್ಥಿಯಾಗಿದ್ದೇನೆ ಎಂದು ಹೇಳಿದನು. ಅವನನ್ನು ಕುರಿತು ಶಿಬಿಯು ಏನು ಸಿದ್ಧಪಡಿಸಬೇಕೆಂದು ತಾವು ಆದೇಶವನ್ನು ನೀಡಿ ಎಂದು ಹೇಳಿದನು.

ಅಥೈನಂ ಬ್ರಾಹ್ಮಣೋಽಬ್ರವೀತ್ । ಯ ಏಷ ತೇ ಪುತ್ರೋ
ವೃಷದರ್ಭ(ಬೃಹದ್ಗರ್ಭ) ನಾಮಾ ಏಷ ಸಂಸ್ಕ್ರಿಯತಾಮ್ ।
ತ್ವಂ ಚೈನಂ ಸಂಜ್ಞಾಪ್ಯ ಸಂಸೃತ್ಯ ಪಾತ್ರ್ಯಾಂ ಸ್ಥಾಪಯ
ತತೋಽಹಂ ಪ್ರತೀಕ್ಷ್ಯ ಇತಿ ॥೨೩॥

ಆಗ ಬ್ರಾಹ್ಮಣನು ಅವನನ್ನು ಕುರಿತು ಈ ನಿನ್ನ ವೃಷದರ್ಭನೆಂಬ ಪುತ್ರನನ್ನು ಸಂಸ್ಕರಿಸು. ನೀನೇ ಅವನನ್ನು ವಧೆ ಮಾಡಿ ಅವನ ಮಾಂಸವನ್ನು ಸಿದ್ಧಪಡಿಸಿ ಒಂದು ಪಾತ್ರೆಯಲ್ಲಿ ಇಡು. ನಾನು ಅಲ್ಲಿಯವರೆಗೆ ನಿರೀಕ್ಷಿಸುತ್ತೇನೆ ಎಂದು ಹೇಳಿದನು.

ಅಥೋ ಪುತ್ರಂ ಸಂಜ್ಞಾಪ್ಯ ಸಂಸೃತ್ಯ ಚಾವಿಮನಾ ಪಾತ್ರ್ಯಾಂ
ವರ್ತಯಿತ್ವಾ ಶಿರಸಾ ಪ್ರಗೃಹ್ಯ ಬಹಿರ್ಮೃಗಯತೇ ॥೨೪॥

ಆಗ ಶಿಬಿಯು ಪುತ್ರನನ್ನು ವಧೆ ಮಾಡಿ ವಿಷಾದಪಡದೇ ಅವನ ಮಾಂಸವನ್ನು ಸಂಸ್ಕರಿಸಿ ಒಂದು ಪಾತ್ರೆಯೊಳಗಿಟ್ಟು ಅದನ್ನು ತಲೆಯ ಮೇಲಿಟ್ಟುಕೊಂಡು ಹೊರಗೆ ಬ್ರಾಹ್ಮಣನನ್ನು ಹುಡುಕಿದನು.

ಅಥಾಸ್ಯಾಚಷ್ಟ ಕಶ್ಚಿನ್ ಮೃಗಯಮಾಣಸ್ಯ ।
ಏಷ ಸ ಬ್ರಾಹ್ಮಣೋ ನಗರಂ ಪ್ರವಿಶ್ಯ ದಹತಿ ತೇ
ಗೃಹಂ ಕೋಷ್ಠಂ ಕೋಶಾಗರಮಾಯುಧಾಗಾರಂ
ಹಸ್ತ್ಯಾಗಾರಮಶ್ವಶಾಲಾಂ ಪ್ರಕ್ರುದ್ಧ ಇತಿ ॥೨೫॥

ಬ್ರಾಹ್ಮಣನನ್ನು ಹುಡುಕುತ್ತಿದ್ದ ಅವನಿಗೆ ಆಗ ಯಾವನೋ ಒಬ್ಬನು ನೀನು ಹುಡುಕುತ್ತಿರುವ ಆ ಬ್ರಾಹ್ಮಣನು ನಗರವನ್ನು ಪ್ರವೇಶಿಸಿ ಕೋಪದಿಂದ ನಿನ್ನ ಅರಮನೆಯನ್ನೂ, ಅಂತರ್ಗೃಹವನ್ನೂ, ಕೋಶಾಗಾರವನ್ನೂ, ಆಯುಧಾಗಾರವನ್ನೂ, ಗಜಾಗಾರವನ್ನೂ, ಅಶ್ವಶಾಲೆಯನ್ನೂ ಸುಡುತ್ತಿದ್ದಾನೆ ಎಂದು ಹೇಳಿದನು.

ಅಥ ಶಿಬಿರವಿಕೃತಮುಖವರ್ಣೋ ನಗರಂ ಪ್ರವಿಶ್ಯ
ಬ್ರಾಹ್ಮಣಂ ತಮಬ್ರವೀತ್ ಸಿದ್ಧಮನ್ನಂ ಭಗವನ್ನಿತಿ ।
ಏವಮುಕ್ತೋ ಬ್ರಾಹ್ಮಣೋ ನ ಕಿಂಚಿ ತದ್ ವ್ಯಾಜಹಾರ ।
ಅವಾಙ್‌ಮುಖಶ್ಚಾಸೀತ್ ॥೨೬॥

ಆಗ ಶಿಬಿಯು ತನ್ನ ಮುಖವರ್ಣದಲ್ಲಿ ಯಾವುದೇ ವ್ಯತ್ಯಾಸವನ್ನು ಮಾಡಿಕೊಳ್ಳದೇ ನಗರವನ್ನು ಪ್ರವೇಶಿಸಿ ಬ್ರಾಹ್ಮಣನನ್ನು ಕುರಿತು ಪೂಜ್ಯರೇ, ಅನ್ನವು ಸಿದ್ಧವಾಗಿದೆ ಎಂದು ಹೇಳಿದನು. ಈ ಮಾತನ್ನು ಕೇಳಿದ ಬ್ರಾಹ್ಮಣನು ಏನೂ ಮಾತನಾಡಲಿಲ್ಲ. ತಲೆಯನ್ನು ತಗ್ಗಿಸಿದನು.

ತತಃ ಪ್ರಸಾದ್ಯ ಬ್ರಾಹ್ಮಣಂ ಭಗವನ್ ಭುಜ್ಯತಾಮಿತಿ ।
ಸ ಮುಹೂರ್ತಾದುದೀಕ್ಷ್ಯ ಶಿಬಿಮಬ್ರವೀತ್ ॥೨೭॥

ಆಗ ಶಿಬಿಯು ಬ್ರಾಹ್ಮಣನನ್ನು ಪ್ರಸನ್ನೀಕರಿಸಿ ಪೂಜ್ಯರೇ, ಭೋಜನವನ್ನು ಮಾಡಿ ಎಂದು ಹೇಳಿದನು. ಆ ಬ್ರಾಹ್ಮಣನು ಒಂದು ಮುಹೂರ್ತವು ಕಳೆದ ಮೇಲೆ ಶಿಬಿಯನ್ನು ನೋಡಿ ಮಾತನಾಡಿದನು.

ಮಾಹಮತೀತೋ ಭೂತ್ವಾ ಏನಮುಪಭುಂಕ್ಷೇ ತ್ವಮೇವೈತದಶಾನೇತಿ ।
ಅಥ ಶಿಬಿಸ್ತಥೈವಾವಿಮನಾ ಅರ್ಚಯಿತ್ವಾ ಕಪಾಲಮಭ್ಯುದ್ಧಾರ್ಯ
ತಮೈಚ್ಛದ್ ಭೋಕ್ತುಮ್ ॥೨೮॥

ನೀನು ಆಹಾರವನ್ನು ತರುವುದು ತಡವಾದುದರಿಂದ ನಾನು ತಿನ್ನುವುದಿಲ್ಲ. ನೀನೇ ಅದನ್ನು ತಿನ್ನು. ಆಗ ಶಿಬಿಯು ಮನಸ್ಸಿನಲ್ಲಿ ಏನೂ ವಿಕಾರವನ್ನು ಮಾಡಿಕೊಳ್ಳದೆ ಬ್ರಾಹ್ಮಣನನ್ನು ಸತ್ಕರಿಸಿ ಪಾತ್ರೆಯನ್ನು ಎತ್ತಿ ತಿನ್ನಲು ಉದ್ಯುಕ್ತನಾದನು.

ಅಥಾಸ್ಯ ಬ್ರಾಹ್ಮಣೋ ಹಸ್ತಮಗೃಹ್ಣಾತ್ । ಅಬ್ರವೀಚ್ಚೈನಂ
ಜಿತಕ್ರೋಧೋऽಸಿ । ನ ತೇ ಕಿಂಚಿತದಪರಿತ್ಯಾಜ್ಯಂ ಬ್ರಾಹ್ಮಣಾರ್ಥೇ ।
ಬ್ರಾಹ್ಮಣೋಪಿ ತಂ ಮಹಾಭಾಗಂ ಸಭಾಜಯತ್ ॥೨೯॥

ಆಗ ಬ್ರಾಹ್ಮಣನು ಅವನ ಕೈಯನ್ನು ಹಿಡಿದುಕೊಂಡನು ಮತ್ತು ಅವನನ್ನು ಕುರಿತು ರಾಜನೇ, ನೀನು ಕ್ರೋಧವನ್ನು ಗೆದ್ದಿದ್ದೀಯೆ. ಬ್ರಾಹ್ಮಣರ ಸಲುವಾಗಿ ಪರಿತ್ಯಾಗವನ್ನು ಮಾಡಲಾರದ ಯಾವ ವಸ್ತುವೂ ನಿನ್ನ ಬಳಿ ಇಲ್ಲ ಎಂದು ಹೇಳಿ ಆ ಬ್ರಾಹ್ಮಣನು ಮಹಾನುಭಾವನಾದ ಶಿಬಿಯನ್ನು ಸತ್ಕರಿಸಿದನು.

ಸ ಹ್ಯುದೀಕ್ಷಮಾಣಃ ಪುತ್ರಮಪಶ್ಯದಗ್ರೇ ತಿಷ್ಠಂತಂ
ದೇವಕುಮಾರಮಿವಪುಣ್ಯಗಂಧಾನ್ವಿತಮಲಂಕೃತಮ್ ।
ಸರ್ವಂ ಚೈತದರ್ಥಂ ವಿಧಾಯಾಥ ಸ ಬ್ರಾಹ್ಮಣೋಽಂತರಧೀಯತ ॥

ಶಿಬಿಯು ಮುಖವನ್ನು ಮೇಲಕ್ಕೆ ಎತ್ತಿ ತನ್ನ ಮುಂಭಾಗದಲ್ಲಿ ದೇವಕುಮಾರನಂತೆ ಪುಣ್ಯಗಂಧದಿಂದ ಕೂಡಿ ಅಲಂಕೃತನಾಗಿ ನಿಂತಿರುವ ತನ್ನ ಪುತ್ರನನ್ನು ನೋಡಿದನು. ಈ ಎಲ್ಲ ಕಾರ್ಯವನ್ನೂ ಮಾಡಿ ಆ ಬ್ರಾಹ್ಮಣನು ಅಂತರ್ಧಾನವನ್ನು ಹೊಂದಿದನು.

ತಸ್ಯ ರಾಜರ್ಷೇರ್ವಿಧಾತಾ ತೇನೈವ ವೇಷೇಣ
ಪರೀಕ್ಷಾರ್ಥಮಾಗತ ಇತಿ ॥೩೧॥

ರಾಜರ್ಷಿಯಾದ ಶಿಬಿಯನ್ನು ಪರೀಕ್ಷೆ ಮಾಡಲು ಸಲುವಾಗಿ ವಿಧಿಯೇ ಆ ರೂಪದಲ್ಲಿ ಬಂದಿದ್ದನು.

ತಸ್ಮಿನ್ನಂತರ್ಹಿತೇ ಅಮಾತ್ಯಾ ರಾಜಾನಮೂಚುಃ ।
ಕಂ ಪಶ್ಯತಾ ಮೈವಂ ಜೀವಂತೀಯಕಂ ಕೃತಮಿತಿ ॥೩೨॥

ಆ ಬ್ರಾಹ್ಮಣನು ಅಂತರ್ಧಾನವನ್ನು ಹೊಂದಲು ಅಮಾತ್ಯರು ರಾಜನನ್ನು ಕುರಿತು ಯಾವ ಪುರುಷಾರ್ಥವನ್ನು ಗಮನಿಸಿ ಇಂತಹ ಪುತ್ರಹನನಾದಿ ಕಾರ್ಯವನ್ನು ಮಾಡಿದೆ? ಹೀಗೆ ನಿನ್ನಂತೆ ಯಾರೂ ಜೀವಿಸುವುದಿಲ್ಲ ಎಂದು ಹೇಳಿದರು.

ಶಿಬಿಃ

ನೈವಾಹಮೇತದ್ ಯಶಸೇ ದದಾನಿ
ನ ಭೂತಿಮಿಚ್ಛನ್ ನ ಚ ಭೋಗತೃಷ್ಣಯಾ ।
ಶಿಷ್ಟೈಃ ಸದಾ ಸೇವಿತ ಏಷ ಮಾರ್ಗ
ಇತ್ಯೇವಮೇತತ್ ಸಕಲಂ ಕರೋಮಿ ।

ಪಾಪೈರನಾಸೇವಿತ ಏಷ ಮಾರ್ಗಃ
ತಸ್ಮಾತ್ ಪ್ರದಾನಾದ್ ಧ್ರಿಯತೇ ಮತಿರ್ಮೇ ॥೩೩॥

ಶಿಬಿಯು ಹೇಳಿದನು. ನಾನು ಇದನ್ನು ಕೀರ್ತಿಗಾಗಿ ಮಾಡುವುದಿಲ್ಲ. ಐಶ್ವರ್ಯವನ್ನು ಬಯಸಿ ಮಾಡುವುದಿಲ್ಲ ಮತ್ತು ಭೋಗದ ಆಸೆಯಿಂದಲೂ ಮಾಡುವುದಿಲ್ಲ. ಇದು ಶಿಷ್ಟರಿಂದ ಯಾವಾಗಲೂ ಸೇವಿತವಾದ ಮಾರ್ಗವೆಂದು ತಿಳಿದು ಇವೆಲ್ಲವನ್ನೂ ಮಾಡುತ್ತೇನೆ. ಈ ಮಾರ್ಗವು ಪಾಪಿಗಳಿಂದ ಸೇವಿತವಾದುದಲ್ಲ. ಆದ್ದರಿಂದ ಇಂತಹ ದಾನದಿಂದ ನನ್ನ ಬುದ್ಧಿಯು ಸ್ಥಿರವಾಗಿದೆ.

ನಾರದಃ

ಏತಾಚ್ಛಿಬೇರ್ಮಹಾಭಾಗ್ಯಂ ತಸ್ಮಾದವತರೇಯಂ ಶಿಬಿರ್ಯಾಯಾದಿತಿ॥

ನಾರದ– ಆಗ ನಾರದರು ಇದು ಶಿಬಿಯ ಮಹಾಭಾಗ್ಯ. ಆದ್ದರಿಂದ ನಾನೇ ರಥದಿಂದ ಇಳಿಯುತ್ತೇನೆ. ಶಿಬಿಯು ರಥದಿಂದ ಮುಂದೆ ಸಾಗಲಿ ಎಂದು ಹೇಳಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಷಡಧಿಕದ್ವಿಶತಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಖ್ಯಾಪರ್ವಣಿ ರಾಜಮಹಾತ್ಮ್ಯೇ ಪಂಚಮೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಆರನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಏಳನೆಯ ಅಧ್ಯಾಯ

ಮಾರ್ಕಂಡೇಯರಿಂದ ಬಕಮುನಿಗಳ ಮಾಹಾತ್ಮ್ಯದ ಕಥನ. ಇಂದ್ರ-ಬಕ ಸಮಾಗಮ ಮತ್ತು ಚಿರಜೀವಿಗಳ ಕ್ಲೇಶಗಳ ಕಥನ.

ವೈಶಂಪಾಯನಃ

ಮಾರ್ಕಂಡೇಯಮೃಷಯಃ ಪಾಂಡವಾಶ್ಚ ಪರ್ಯಪೃಚ್ಛನ್
ಕೇನ ದೀರ್ಘಾಯುರಾಸೀದ್ ಬಕ ಇತಿ ॥೧॥

ವೈಶಂಪಾಯನ– ಪಾಂಡವರು ಮತ್ತು ಋಷಿಗಳು ಮಾರ್ಕಂಡೇಯರನ್ನು ಕುರಿತು ಯಾವ ಕಾರಣದಿಂದ ಬಕಮುನಿಗಳು ದೀರ್ಘಾಯುಷ್ಮವುಳ್ಳವರಾದರು ಎಂದು ಕೇಳಿದರು.

ಮಾರ್ಕಂಡೇಯಃ

ಋಷಿಃ ಕಿಲ ದೀರ್ಘಾಯುಸ್ತು ಬಕೋ ರಾಜನ್ ನಾತ್ರ ಕಾರ್ಯಾ ವಿಚಾರಣಾ ।
ಕಿಮಶ್ರುತಂ ಭವತೇದಂ ಕಾಲಾಂತರೇ ಕ್ವಚಿತ್ ॥೨॥

ಮಾರ್ಕಂಡೇಯ– ರಾಜನೇ, ಬಕ ಋಷಿಗಳು ದೀರ್ಘಾಯುಷ್ಯವುಳ್ಳವರು. ಇದರಲ್ಲಿ ಸಂಶಯಪಡಬೇಕಾಗಿಲ್ಲ. ನೀನು ಈ ವಿಷಯವನ್ನು ಹಿಂದೆ ಯಾವಾಗಲೂ ಕೇಳಿರಲಿಲ್ಲವೇ?

ವೈಶಂಪಾಯನಃ

ಏತತ್ ಶ್ರುತ್ವಾ ತು ಕೌಂತೇಯೋ ಧರ್ಮರಾಜೋ ಯುಧಿಷ್ಠಿರಃ ।
ಮಾರ್ಕಂಡೇಯಂ ಮಹಾಭಾಗಂ ಕೃತಕಾಲಮಭಾಷತ ॥೩॥

ವೈಶಂಪಾಯನ– ಇದನ್ನು ಕೇಳಿದ ಕುಂತೀಪುತ್ರನಾದ ಧರ್ಮರಾಜನಾದ ಯುಧಿಷ್ಠಿರನು ಮಹಾನುಭಾವರಾದ ಮಾರ್ಕಂಡೇಯರನ್ನು ಕುರಿತು ಯೋಗ್ಯಕಾಲದಲ್ಲಿ ಮಾತನಾಡಿದನು.

ಶ್ರೂಯತೇ ಹಿ ಮಹಾಭಾಗ ಬಕೋಟ್ಟಾಲ್ಭೋ ಮಹಾಯಶಾಃ ।
ಪ್ರಿಯಃ ಸಖಾ ಚ ಶಕ್ರಸ್ಯ ಚಿರಂಜೀವೀ ಚ ಸತ್ತಮ ॥೪॥

ಮಹಾನುಭಾವರೇ, ಸಜ್ಜನರಲ್ಲಿ ಶ್ರೇಷ್ಠರಾದವರೇ, ಬಕರು ಮಹಾಕೀರ್ತಿವಂತರೆಂದೂ, ಅಲ್ಪಾಹಾರಿಗಳೆಂದೂ, ಇಂದ್ರನ ಪ್ರಿಯಸ್ನೇಹಿತರೆಂದೂ, ಚಿರಜೀವಿಗಳೆಂದೂ ಕೇಳಿದ್ದೇವೆ.

ಏತದಿಚ್ಛಾಮಿ ಭಗವನ್ ಬಕಸ್ಯೇಂದ್ರಸಮಾಗಮಮ್ ।
ಸುಖದುಃಖಸಮಾಯುಕ್ತಂ ತತ್ತ್ವೇನ ಕಥಿತಂ ತ್ವಯಾ ॥೫॥

ಪೂಜ್ಯರೇ, ಸುಖದುಃಖಸಮಾಯುಕ್ತವಾದ ಈ ಬಕ-ಇಂದ್ರರ ಸಮಾಗಮವನ್ನು ನಿಮ್ಮಿಂದ ಸರಿಯಾಗಿ ಹೇಳಲ್ಪಟ್ಟಿದ್ದನ್ನು ನಾನು ಕೇಳಲು ಬಯಸುತ್ತೇನೆ.

ಮಾರ್ಕಂಡೇಯಃ

ವೃತ್ತೇ ದೇವಾಸುರೇ ರಾಜನ್ ಸಂಗ್ರಾಮೇ ರೋಮಹರ್ಷಣೇ ।
ತ್ರಯಾಣಾಮಪಿ ಲೋಕಾನಾಮಿಂದ್ರೋ ಲೋಕಾಧಿಪೋಽಭವತ್ ॥೬॥

ಮಾರ್ಕಂಡೇಯ– ರಾಜನೇ, ರೋಮಾಂಚಕಾರಿಯಾದ ದೇವಾಸುರ ಯುದ್ಧವು ಮುಗಿಯುತ್ತಿರಲು ಮೂರುಲೋಕಗಳಿಗೂ ಇಂದ್ರನು ಅಧಿಪತಿಯಾದನು.

ಸಮ್ಯಗ್ ವರ್ಷತಿ ಪರ್ಜನ್ಯಃ ಸಸ್ಯಸಂಪದ ಉತ್ತಮಾಃ ।
ನಿರಾಮಯಾಃ ಸುಧರ್ಮಿಷ್ಠಾಃ ಪ್ರಜಾ ಧರ್ಮಪರಾಯಣಾಃ ॥೭॥

ಪರ್ಜನ್ಯನು ಸರಿಯಾಗಿ ಮಳೆಯನ್ನು ಸುರಿಸುತ್ತಿದ್ದನು. ಸಸ್ಯಸಂಪತ್ತುಗಳು ಶ್ರೇಷ್ಠವಾಗಿದ್ದವು. ಪ್ರಜೆಗಳು ರೋಗರುಜಿನಗಳಿಲ್ಲದೆ ಒಳ್ಳೆಯ ಧರ್ಮಪರಾಯಣರು ಮತ್ತು ಒಳ್ಳೆಯ ಧರ್ಮಿಷ್ಠರೂ ಆಗಿದ್ದರು.

ತಾಃ ಪ್ರಜಾ ಮುದಿತಾಃ ಸರ್ವಾ ದೃಷ್ಟ್ವಾ ಬಲನಿಷೂದನಃ ।
ತತಸ್ತು ಮುದಿತೋ ರಾಜನ್ ದೇವರಾಜಃ ಶತಕ್ರತುಃ ॥೮॥

ಐರಾವತಮಥಾರುಹ್ಯ ಶ್ವೇತಂ ಗಜವರೋತ್ತಮಮ್ ।
ಲೋಕಂ ಸಮಾನಮಾಸ್ಥಾಯ ದದರ್ಶ ಮುದಿತಾಃ ಪ್ರಜಾಃ ॥೯॥

ಎಲೈ ರಾಜನೇ, ಪ್ರಜೆಗಳು ಸಂತೋಷದಲ್ಲಿರುವುದನ್ನು ನೋಡಿದ ಬಲನಿಷೂದನನಾದ ಶತಕ್ರತುವಾದ ದೇವರಾಜನು ಸಂತೋಷದಿಂದ ಕೂಡಿದವನಾಗಿ ಶ್ರೇಷ್ಠಗಜವಾದ ಐರಾವತವನ್ನು ಏರಿ ಪ್ರಜೆಗಳ ಸಮಾನವಾದ ಲೋಕಕ್ಕೆ ಬಂದು ಸಂತೋಷಗೊಂಡ ಪ್ರಜೆಗಳನ್ನು ನೋಡಿದನು.

ಆಶ್ರಮಾಣಿ ಚ ಪುಣ್ಯಾನಿ ನದೀಃ ಶೈಲಾನ್ ಸರಾಂಸಿ ಚ ।
ನಗರಾಣಿ ಸಮೃದ್ಧಾನಿ ನಾನಾಜನಪದಾನಿ ಚ ।
ಪ್ರಜಾಪಾಲನವೃತ್ತಾಂಶ್ಚ ನರೇಂದ್ರಾನ್ ಧರ್ಮಚಾರಿಣಃ ॥೧೦॥

ಪವಿತ್ರವಾದ ಆಶ್ರಮಗಳು, ನದಿಗಳು, ಪರ್ವತಗಳು, ಸರೋವರಗಳು, ಸಮೃದ್ಧವಾದ ನಗರಗಳು, ನಾನಾಜನಪದಗಳು, ಪ್ರಜಾಪಾಲನತತ್ಪರರಾದ ಧರ್ಮಚಾರಿಗಳಾದ ರಾಜರುಗಳು (ಇವರನ್ನು ನೋಡಿದನು).

ಉದಪಾನ ಪ್ರಪಾಕೂಪಾತಟಾಕಾರಾಮ ಸಂಕುಲಾಮ್ ।
ನಾನಾಜನಪದಾಕೀರ್ಣಾಂ ಬ್ರಹ್ಮಚಾರಿನಿಷೇವಿತಾಮ್ ॥೧೧॥

ಯಜ್ಞೋತ್ಸವವತೀಂ ದೇವೀಂ ಸಾಗರಾಂತಾಂ ಸಮೇಖಲಾಮ್ ।
ಬಹುವ್ರತಸಮಾಚಾರೈಃ ಸೇವಿತಾಂ ದ್ವಿಜಸತ್ತಮೈಃ ॥೧೨॥

ಕೆರೆ, ಬಾವಿ ಮತ್ತು ಸರೋವರಗಳು, ಉದ್ಯಾನವನಗಳು ಮತ್ತು ಮಂಟಪಗಳಿಂದ ಕೂಡಿದ ಅನೇಕ ಜನಪದರಿಂದ ತುಂಬಿದ ಬ್ರಹ್ಮಚಾರಿಗಳಿಂದ ಸೇವಿಸಲ್ಪಟ್ಟ ಬಹುವ್ರತಧಾರಿಗಳಾದ, ದ್ವಿಜಶ್ರೇಷ್ಠರಿಂದ ಸೇವಿಸಲ್ಪಟ್ಟ ಯಜ್ಞೋತ್ಸವವನ್ನುಳ್ಳ ಸಾಗರಾಂತವಾದ ಮೇಖಲಾಲಂಕೃತವಾದ ಭೂಮಿಯನ್ನು ನೋಡಿದನು.

ಅಥ ರಮ್ಯೇ ಶಿವೇ ದೇಶೇ ಬಹುವೃಕ್ಷಸಮಾಕುಲೇ ।
ಪೂರ್ವಸ್ಯಾಂ ದಿಶಿ ರಮ್ಯಾಯಾಂ ಸಮುದ್ರಮಭಿತೋಽಭವತ್ ॥೧೩॥

ತತ್ರಾಶ್ರಮಪದಂ ರಮ್ಯಂ ಮೃಗಪಕ್ಷಿನಿಷೇವಿತಮ್ ।
ದದರ್ಶ ಶಕ್ರಃ ಸ ಮಹದ್ ಬಕಸ್ಯ ಸುಮಹಾತ್ಮನಃ ॥೧೪॥

ಅಲ್ಲಿ ಮನೋಹರವಾದ ಪೂರ್ವದಿಕ್ಕಿನಲ್ಲಿ ಸಮುದ್ರದ ಸಮೀಪದಲ್ಲಿ ಅನೇಕ ವೃಕ್ಷಗಳಿಂದ ಕೂಡಿದ ಮನೋಹರವಾದ ಮಂಗಳವಾದ ಪ್ರದೇಶದಲ್ಲಿ ಅನೇಕ ಮೃಗಪಕ್ಷಿಗಳಿಂದ ಸೇವಿತವಾದ ಮನೋಹರವಾದ ಮಹಾತ್ಮರಾದ ಬಕರ ದೊಡ್ಡ ಆಶ್ರಮಸ್ಥಾನವನ್ನು ಇಂದ್ರನು ನೋಡಿದನು.

ತತ್ರಾವತೀರ್ಯ ಭಗವಾನ್ ಶಕ್ರೋ ದಿತಿಜಸೂದನಃ ।
ಪ್ರವಿವೇಶ ಮಹಾಪುಣ್ಯಂ ತಪೋವನಮನುತ್ತಮಮ್ ॥೧೫॥

ಪೂಜ್ಯನಾದ ಮತ್ತು ದೈತ್ಯಸಂಹಾರಿಯಾದ ಇಂದ್ರನು ಅಲ್ಲಿ ಇಳಿದು ಶ್ರೇಷ್ಠವಾದ ಮತ್ತು ಮಹಾಪುಣ್ಯಪ್ರದವಾದ ಆ ತಪೋವನವನ್ನು ಪ್ರವೇಶಿಸಿದನು.

ಬಕಃ ಸುರಪತಿಂ ದೇವಂ ಪೂಜಯಾಮಾಸ ಸತ್ತಮಃ ।
ಸುಖೋಪವಿಷ್ಟೋ ವರದ ಇಂದ್ರೋಬಲನಿಷೂದನಃ ॥೧೬॥

ತತಃ ಪ್ರಶ್ನಂ ಬಕಂ ದಾಲ್ಭ್ಯಮುವಾಚ ಕುರುನಂದನ ।

ಸಜ್ಜನರಲ್ಲಿ ಶ್ರೇಷ್ಠರಾದ ಬಕರು ಸುರಪತಿಯಾದ ಇಂದ್ರನನ್ನು ಸತ್ಕರಿಸಿದರು. ಎಲೈ ಕುರುನಂದನನೇ, ಬಲನಿಷೂದನನಾದ, ವರಪ್ರದನಾದ ಇಂದ್ರನು ಸುಖಾಸೀನನಾಗಿ ದಲ್ಭ್ಯಋಷಿಗಳ ಮಕ್ಕಳಾದ ಬಕರನ್ನು ಕುರಿತು ಈ ಪ್ರಶ್ನೆಯನ್ನು ಮಾಡಿದನು.

ಶತಂ ವರ್ಷಸಹಸ್ರಾಣಾಂ ಮುನೇ ಜಾತಸ್ಯ ತೇ ಬಕ ।
ಆಖ್ಯಾಹಿ ತನ್ಮಮ ಬ್ರಹ್ಮನ್ ಕಿಂದುಃಖಂ ಚಿರಜೀವಿತಮ್ ॥೧೭॥

ಎಲೈ ಬಕಋಷಿಗಳೇ, ನೀವು ಹುಟ್ಟಿ ನೂರುಸಾವಿರವರ್ಷಗಳು ಕಳೆದಿವೆ. ಬ್ರಾಹ್ಮಣರೇ ಚಿರಜೀವಿಗಳಿಗೆ ಏನು ದುಃಖವೆಂದು ನನಗೆ ನಿರೂಪಿಸಿ (ಎಂದು ಹೇಳಿದನು).

ಬಕಃ

ಪುತ್ರನಾಶೋಽರ್ಥನಾಶಶ್ಚ ಜ್ಞಾತೀನಾಂ ಸುಹೃದಾಂ ತಥಾ ।
ಪರೇಷ್ವಾಯತ್ತತಾ ಚೈವ ಕಿಂನು ದುಃಖಮತಃ ಪರಮ್ ॥೧೮॥

ಬಕ– ಪುತ್ರನಾಶ, ದ್ರವ್ಯನಾಶ, ಜ್ಞಾತಿಗಳ ಮತ್ತು ಸ್ನೇಹಿತರ ನಾಶ, ಪರಾಧೀನತೆ ಇವುಗಳಿಗಿಂತ ದೊಡ್ಡ ದುಃಖ ಯಾವುದಿದೆ?

ನಾನ್ಯದ್ ದುಃಖತರಂ ಕಿಂಚಿಲ್ಲೋಕೇಽಸ್ಮಿನ್ ಪ್ರತಿಭಾತಿ ಮೇ ।
ಅರ್ಥೈರ್ವಿಹೀನಃ ಪುರುಷೋಯಃ ಪರೈರಭಿಭೂಯತೇ ॥೧೯॥

ಅರ್ಥವಿಹೀನನಾದ ಪುರುಷನು ಇನ್ನೊಬ್ಬರಿಂದ ಅವಮಾನಪಡಿಸಲ್ಪಡುವುದಕ್ಕಿಂತ ದೊಡ್ಡ ದುಃಖವು ಈ ಲೋಕದಲ್ಲಿ ನನಗೆ ಯಾವುದೂ ಕಾಣುವುದಿಲ್ಲ.

ಅಕುಲಾನಾಂ ಕುಲೀಭಾವಂ ಕುಲಾನಾಂ ಚಾಕುಲಕ್ರಿಯಾ ।
ಸಂಯೋಗಾನ್ ವಿಪ್ರಯೋಗಾಂಶ್ಚ ಪಶ್ಯಂತಿ ಚಿರಜೀವಿನಃ ॥೨೦॥

ಕುಲೀನರಲ್ಲದವರು ಒಳ್ಳೆಯ ಕುಲದಲ್ಲಿ ಬರುತ್ತಾರೆ. ಒಳ್ಳೆಯ ಕುಲಗಳು ಕುಲಕ್ಕೆ ಅಯೋಗ್ಯವಾದ ಕ್ರಿಯೆಗಳನ್ನು ಮಾಡುತ್ತವೆ. ಬಹುಕಾಲ ಬದುಕುವವನು ಅನಿಷ್ಟ ಸಂಯೋಗವನ್ನೂ ಮತ್ತು ಇಷ್ಟ ವಿಯೋಗವನ್ನೂ ನೋಡುತ್ತಾನೆ.

ಅಪಿ ಪ್ರತ್ಯಕ್ಷಮೇವೈತತ್ ತವ ದೇವ ಶತಕ್ರತೋ ।
ಅಸುರಾಣಾಂ ಸಮೃದ್ಧಾನಾಂ ಕಥಿತಃ ಕಾಲಪರ್ಯಯಃ ॥೨೧॥

ಎಲೈ ದೇವನಾದ ಶತಕ್ರತುವೇ, ಇವೆಲ್ಲವೂ ನಿನಗೆ ಪ್ರತ್ಯಕ್ಷವಾದ ವಿಷಯ. ಸಮೃದ್ಧರಾದ ಅಸುರರಿಗೂ ಕಾಲದಲ್ಲಿ ವಿಪರ್ಯಯವುಂಟಾಗುತ್ತದೆ ಎಂದು ಹೇಳಲ್ಪಟ್ಟಿದೆಯಷ್ಟೆ.

ದೇವದಾನವಗಂಧರ್ವಾಃ ಕಿನ್ನರೋರಗಮಾನುಷಾಃ ।
ಪ್ರಾಪ್ನುವಂತಿ ವಿಪರ್ಯಾಸಂ ಕಿಂ ನು ದುಃಖತರಃ ತತಃ ॥೨೨॥

ದೇವದಾನವಗಂಧರ್ವರು ಕಿನ್ನರೋರಗಮನುಷ್ಯರು ಎಲ್ಲರೂ ವಿಪರ್ಯಾಸವನ್ನು ಹೊಂದುತ್ತಾರೆ. ಅದಕ್ಕಿಂತ ದೊಡ್ಡ ದುಃಖವು ಯಾವುದು?

ಕುಲೇಜಾತಾಶ್ಚ ದೃಶ್ಯಂತೇ ದೌಷ್ಕುಲೇಯಾಸ್ತಥಾ ನರಾಃ ।
ಆಢ್ಯಾ ದರಿದ್ರಾಶ್ಚಾಕ್ರಾಂತಾಃ ಕಿಂನು ದುಃಖತರಂ ತತಃ ॥೨೩॥

ದುಷ್ಕುಲದಲ್ಲಿ ಹುಟ್ಟಬೇಕಾದ ಮನುಷ್ಯರು ಒಳ್ಳೆಯ ಕುಲದಲ್ಲಿ ಜನಿಸುವುದು ಕಾಣುತ್ತದೆ. ಆಢ್ಯರು ದರಿದ್ರರಾಗುತ್ತಾರೆ. ಇನ್ನೊಬ್ಬರ ಆಕ್ರಮಕ್ಕೆ ಒಳಪಡುತ್ತಾರೆ. ಅದಕ್ಕಿಂತ ದೊಡ್ಡ ದುಃಖವು ಯಾವುದು?

ಕುಲೇ ಜಾತಾಶ್ಚ ಕ್ಲಿಶ್ಯಂತೇ ದೌಷ್ಕುಲೇಯವಶಾನುಗಾಃ ।
ಆಢ್ಯೈರ್ದರಿದ್ರಾಕವಮತಾಃ ಕಿಂನು ದುಃಖತರಂ ತತಃ ॥೨೪॥

ಒಳ್ಳೆಯ ಕುಲದಲ್ಲಿ ಹುಟ್ಟಿದವರು ದುಷ್ಕುಲಪ್ರಸೂತರಿಗೆ ಅಧೀನರಾಗಿ ಕ್ಲೇಶವನ್ನು ಪಡುತ್ತಾರೆ. ಧನಾಢ್ಯರಿಂದ ಧನವಿಲ್ಲದವರು ಅವಮಾನವನ್ನು ಅನುಭವಿಸುತ್ತಾರೆ. ಅದಕ್ಕಿಂತ ದೊಡ್ಡ ದುಃಖವು ಯಾವುದು?

ಬಹ್ವನರ್ಥಮಯೋ ಲೋಕೋ ದೃಶ್ಯತೇ ಶತ್ರುಸೂದನ ।
ಹೀನ ಜ್ಞಾನಾಶ್ಚ ಹೃಷ್ಯಂತೇ ಕ್ಲಿಶ್ಯಂತೇ ಪ್ರಾಜ್ಞಕೋವಿದಾಃ ॥೨೫॥

ಎಲೈ ಶತ್ರುಸೂದನನೇ, ಲೋಕದಲ್ಲಿ ಬಹಳ ಅನರ್ಥಗಳು ಕಂಡುಬರುತ್ತವೆ. ಜ್ಞಾನಹೀನರು ಸಂತೋಷದಿಂದ ಮೆರೆಯುತ್ತಾರೆ. ಪ್ರಾಜ್ಞರು ಮತ್ತು ಕೋವಿದರು ಕ್ಲೇಶವನ್ನು ಅನುಭವಿಸುತ್ತಾರೆ.

ಲೋಕೇ ವೈಧರ್ಮ್ಯಮೇತತ್ ತು ದೃಶ್ಯತೇ ಬಹುವಿಸ್ತರಮ್ ।
ಮಹದ್ದುಃಖತರಕ್ಲೇಶಂ ಮಾನುಷ್ಯಮಿಹ ದೃಶ್ಯತೇ ॥೨೬॥

ಲೋಕದಲ್ಲಿ ಈ ವಿರುದ್ಧ ಧರ್ಮಗಳು ಬಹಳ ವಿಸ್ತಾರವಾಗಿ ಕಂಡುಬರುತ್ತವೆ. ಮನುಷ್ಯರಿಗಂತೂ ಬಹಳ ದುಃಖಗಳು ಮತ್ತು ಕ್ಲೇಶಗಳು ಉಂಟಾಗುವುದು ಕಂಡುಬರುತ್ತದೆ.

ಇಂದ್ರಃ

ಪುನರೇವ ಮಹಾಭಾಗ ಸಪ್ತರ್ಷಿಗಣಸನ್ನಿಭ ।
ಆಖ್ಯಾಹಿ ತ್ವಂ ಮಮ ಬ್ರಹ್ಮನ್ ಕಿಂ ದುಃಖಂ ಚಿರಜೀವಿನಾಮ್ ॥೨೭॥

ಇಂದ್ರ– ಸಪ್ತರ್ಷಿಗಣಕ್ಕೆ ಸಮಾನವಾದ ಕಾಂತಿಯನ್ನು ಹೊಂದಿದ ಮಹಾನುಭಾವರಾದ ವಿಪ್ರರೇ, ಪುನಃ ನನಗೆ ಚಿರಜೀವಿಗಳಿಗೆ ಏನು ದುಃಖವೆಂದು ಹೇಳಿ.

ಬಕಃ

ಅಪ್ರಿಯೈಃ ಸಹ ಸಂವಾಸಃ ಪ್ರಿಯೈಶ್ಚಾಪಿ ವಿನಾ ಭವಃ ।
ಆಪದ್ಭಿಃ ಸಂಪ್ರಯೋಗಶ್ಚ ತದ್ ದುಃಖಂ ಚಿರಜೀವಿನಾಮ್ ॥೨೮॥

ಬಕ– ಅಪ್ರಿಯರ ಜೊತೆಯಲ್ಲಿ ವಾಸ, ಪ್ರಿಯರಿಲ್ಲದೇ ಜೀವನ, ಆಪತ್ತುಗಳ ಸಂಯೋಗ ಇದು ಚೀರಜೀವಿಗಳ ದುಃಖ.

ಪುತ್ರನಾಶೋಽರ್ಥನಾಶಶ್ಚ ಜ್ಞಾತೀನಾಂ ಸುಹೃದಾಂ ತಥಾ ।
ಪರೇಷ್ವಾಯತ್ತತಾ ಚೈವ ಕಿಂ ನು ದುಃಖಮತಃ ಪರಮ್ ॥೨೯॥

ಪುತ್ರನಾಶ, ಅರ್ಥನಾಶ, ಬಾಂಧವರ ಮತ್ತು ಸ್ನೇಹಿತರ ನಾಶ ಮತ್ತು ಪರಾಧೀನತೆ ಇದಕ್ಕಿಂತ ದೊಡ್ಡ ದುಃಖವು ಯಾವುದು?

ನಾನ್ಯದ್ ದುಃಖತರಂ ಕಿಂಚಿಲ್ಲೋಕೇಽಸ್ಮಿನ್ ಪ್ರತಿಭಾತಿ ಮೇ ।
ಅರ್ಥೈರ್ವಿಹೀನಃ ಪುರುಷೋ ಯತ್ ಪರೈರಭಿಭೂಯತೇ ॥೩೦॥

ಧನಹೀನನಾದ ಪುರುಷನು ಇನ್ನೊಬ್ಬನಿಂದ ಅವಮಾನಕ್ಕೆ ಒಳಗಾಗುವುದಕ್ಕಿಂತ ಹೆಚ್ಚಿನ ಇನ್ನೊಂದು ದುಃಖವು ನನಗೆ ಈ ಲೋಕದಲ್ಲಿ ಕಾಣುವುದಿಲ್ಲ.

ಅಷ್ಟಮೇ ನವಮೇ ವಾಽಪಿ ಯಃ ಶಾಕಂ ಪಚತೇ ಗೃಹೇ ।
ಕುಮಿತ್ರಾಣ್ಯವ್ಯಪಾಶ್ರಿತ್ಯ ಕಿಂ ವೈ ಸುಖಿತರಂ ತತಃ ॥೩೧॥

ಕೆಟ್ಟ ಸ್ನೇಹಿತರನ್ನು ಆಶ್ರಯಿಸದೆ ಹಗಲಿನ ಎಂಟನೆಯ ಅಥವಾ ಒಂಭತ್ತನೆಯ ಭಾಗದಲ್ಲಿ ಯಾರು ಮನೆಯಲ್ಲಿ ತರಕಾರಿಯನ್ನು ಬೇಯಿಸಿಕೊಂಡು ತಿನ್ನುತ್ತಾರೋ ಅದಕ್ಕಿಂತ ಸುಖಕರವಾದುದು ಯಾವುದಿದೆ?

ದಿನಾನಿ ನಾಸ್ಯ ಗಣ್ಯಂತೇ ನೈನಮಾಹುರ್ಮಹಾಶನಮ್ ।
ಅಪಿ ಶಾಕಂ ಪಚಾನಸ್ಯ ಸ್ವಗೃಹೇ ಪರಮಂ ಸುಖಮ್ ॥೩೨॥

ಯಾರು ತನ್ನ ಮನೆಯಲ್ಲಿ ತರಕಾರಿಯನ್ನು ಬೇಯಿಸಿಕೊಂಡು ಜೀವಿಸುತ್ತಾನೆಯೋ ಅವನ ದಿನಗಳನ್ನು ಯಾರೂ ಎಣಿಸುವುದಿಲ್ಲ (ಇನ್ನೊಬ್ಬರ ಮನೆಗೆ ಹೋದರೆ ಇಷ್ಟು ದಿನವಾಯಿತು ಎಂದು ಎಣಿಸುತ್ತಾರೆ). ಅವನನ್ನು ಬಹಳ ಊಟ ಮಾಡುವವನು ಎಂದು ಯಾರೂ ಹೇಳುವುದಿಲ್ಲ. ಸ್ವಗೃಹದಲ್ಲಿಯೇ ಪರಮಸುಖವಿದೆ.

ಆರ್ಜಿತಂ ಸ್ವೇನ ವೀರ್ಯೇಣ ಅನಪಾಶ್ರಿತ್ಯ ಬಾಂಧವಾನ್ ।
ಫಲಮೂಲಮಪಿ ಶ್ರೇಯೋ ಭುಕ್ತಂ ಹ್ಯಕೃಪಣಂ ಸತಾಮ್ ॥೩೩॥

ಬಂಧುಗಳನ್ನು ಆಶ್ರಯಿಸದೆ ತನ್ನ ಸಾಮರ್ಥ್ಯದಿಂದ ಸಂಪಾದಿಸಿದ ಫಲಮೂಲಗಳನ್ನು ಭುಂಜಿಸಿದರೂ ಸಹ ಅದು ಸಜ್ಜನರಿಗೆ ಶ್ರೇಯಸ್ಕರವಾದುದು ಮತ್ತು ಕಾರ್ಪಣ್ಯರಹಿತವಾದುದು.

ಪರಸ್ಯ ಚ ಗೃಹೇ ಭುಕ್ತಂ ಪರಿಭೂತಸ್ಯ ನಿತ್ಯಶಃ ।
ಸುಮೃಷ್ಟಮಪಿ ನ ಶ್ರೇಯೋ ವಿಷಕಲ್ಪಸಮಂ ಸತಾಮ್ ॥೩೪॥

ನಿತ್ಯವೂ ಅವಮಾನಿತನಾಗಿ ಪರಗೃಹದಲ್ಲಿ ಮೃಷ್ಟಾನ್ನವನ್ನು ಭುಂಜಿಸಿದರೂ ಅದು ಸಜ್ಜನರಿಗೆ ಶ್ರೇಯಸ್ಕರವಲ್ಲ. ಅದು ವಿಷಕ್ಕೆ ಸಮಾನವಾದುದು.

ಲಾಲಪ್ಯಮಾನೋ ಭುಂಜತಿ ಯಃ ಪರಸ್ಯ ಗೃಹೇ ಸದಾ ।
ಧಿಗಸ್ಯ ತಸ್ಯ ತದ್ ವೃತ್ತಂ ಕೃಪಣಸ್ಯ ದುರಾತ್ಮನಃ ॥೩೫॥

ಯಾವನು ಪರಗೃಹದಲ್ಲಿ ಯಾವಾಗಲೂ ಬಹಳ ಮಾತನಾಡುತ್ತಾ ಊಟ ಮಾಡುತ್ತಾನೆಯೋ ಅಂತಹ ದುರಾತ್ಮನಾದ ಜಿಪುಣನ ನಡತೆಗೆ ಧಿಕ್ಕಾರವಿರಲಿ.

ಶ್ವವದ್ಧಿ ಲೋಲುಪೋ ಯಸ್ತು ಪರಾನ್ನ ಭೋಕ್ತುಮಿಚ್ಛತಿ ॥
ಧಿಗಸ್ತು ತಸ್ಯ ತದ್ ಭುಕ್ತಂ ಕೃಪಣಸ್ಯ ದುರಾತ್ಮನಃ ॥೩೬॥

ಯಾವನು ನಾಯಿಯಂತೆ ಲೋಲುಪನಾಗಿ ಪರಾನ್ನವನ್ನು ತಿನ್ನಲು ಬಯಸುತ್ತಾನೆಯೋ ಆ ಜಿಪುಣನೂ ಮತ್ತು ದುರಾತ್ಮನೂ ಆದ ಅವನು ಭುಂಜಿಸಿದ ಅನ್ನಕ್ಕೆ ಧಿಕ್ಕಾರವಿರಲಿ.

ಅತೋ ಮೃಷ್ಟತರಂ ನಾನ್ಯತ್ ಕಿಂಚಿದಸ್ತಿ ಶತಕ್ರತೋ ।
ದೇವತಾತಿಥಿಭೃತ್ಯೇಭ್ಯೋ ದತ್ತ್ವಾ ಭುಂಕ್ತೇ ಹಿ ಯಃ ಸದಾ ॥೩೭॥

ಎಲೈ ಶತಕ್ರತುವೇ, ಯಾವನು ದೇವತೆಗಳಿಗೂ, ಅತಿಥಿಗಳಿಗೂ ಮತ್ತು ಭೃತ್ಯರಿಗೂ ಕೊಟ್ಟು ಅನಂತರ ಸದಾ ಭುಂಜಿಸುತ್ತಾನೆಯೋ ಅದಕ್ಕಿಂತ ಹೆಚ್ಚಿನ ಮೃಷ್ಟಾನ್ನವು ಯಾವುದೂ ಇಲ್ಲ.

ದೇವತಾತಿಥಿಭೃತ್ಯಾನಾಂ ಪಿತೄಣಾಂ ಚ ವಿಶೇಷತಃ ।
ವಿಶಿಷ್ಟಾನ್ನಾನಿ ಯೋ ಭುಂಕ್ತೇ ಕಿಂ ವೈ ಸುಖಿತರಂ ತತಃ ।
ಅದತ್ತ್ವಾ ಯಸ್ತು ವಿಪ್ರೇಭ್ಯೋ ಭುಂಕ್ತೇ ಸ್ತೇನಃ ಸ ಏವ ತು ॥೩೮॥

ದೇವತೆಗಳಿಗೆ, ಅತಿಥಿಗಳಿಗೆ ಮತ್ತು ಭೃತ್ಯರಿಗೆ ಮತ್ತು ವಿಶೇಷವಾಗಿ ಪಿತೃಗಳಿಗೆ ಕೊಟ್ಟು ಉಳಿದ ಅನ್ನವನ್ನು ಯಾವನು ಭುಂಜಿಸುತ್ತಾನೆಯೋ ಅದಕ್ಕಿಂತ ಸುಖಕರವಾದುದು ಯಾವುದಿದೆ? ಬ್ರಾಹ್ಮಣರಿಗೆ ನೀಡದೆ ಯಾವನು ಭುಂಜಿಸುತ್ತಾನೆಯೋ ಅವನು ಕಳ್ಳನೇ ಸರಿ.

ಏತಾಶ್ಚಾನ್ಯಾಶ್ಚ ವೈ ಬಹ್ವೀಃ ಕಥಯಿತ್ವಾ ಕಥಾಃ ಶುಭಾಃ ।
ಬಕೇನ ಸಹ ದೇವೇಶ ಆಪೃಷ್ಟ್ವಾ ತ್ರಿದಿವಂ ಗತಃ ॥೩೯॥

ದೇವೇಶನಾದ ಇಂದ್ರನು ಬಕನ ಜೊತೆಯಲ್ಲಿ ಇವುಗಳನ್ನೂ ಮತ್ತು ಇನ್ನೂ ಅನೇಕ ಶುಭಕಥೆಗಳನ್ನೂ ಮಾತನಾಡಿ ಬಕನ ಅನುಮತಿಯನ್ನು ಪಡೆದು ಸ್ವರ್ಗಕ್ಕೆ ಹೋದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತಾಧಿಕದ್ವಿಶತಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ರಾಜಮಹಾತ್ಮ್ಯೇಷಷ್ಠೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಏಳನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಎಂಟನೆಯ ಅಧ್ಯಾಯ

ಮಾರ್ಕಂಡೇಯರಿಂದ ಆಂಗೀರಸೋಪಾಖ್ಯಾನ ಪ್ರಾರಂಭ. ಅಂಗೀರಸರಿಂದ ಬೃಹಸ್ಪತ್ಯಾಚಾರ್ಯರ ಉತ್ಪತ್ತಿ. ದೇವತೆಗಳಿಂದ ಗುರುತ್ವೇನ ಅವರ ಸ್ವೀಕಾರ. ಅಗ್ನಿಯಿಂದ ಅಂಗೀರಸರನ್ನು ಪ್ರಥಮಪುತ್ರತ್ವೇನ ಸ್ವೀಕಾರ. ಅಗ್ನಿಗಳ ಉತ್ಪತ್ತಿ.

ವೈಶಂಪಾಯನಃ

ಶ್ರುತ್ವೇಮಾಂ ಧರ್ಮಸಂಯುಕ್ತಾಂ ಧರ್ಮರಾಜಃ ಕಥಾಂ ಶುಭಾಮ್ ।
ಪುನಃ ಪಪ್ರಚ್ಛ ತಮೃಷಿಂ ಮಾರ್ಕಂಡೆಯಮಿದಂ ತದಾ ॥೧॥

ವೈಶಂಪಾಯನ– ಧರ್ಮರಾಜನು ಧರ್ಮಯುಕ್ತವಾದ ಈ ಪವಿತ್ರವಾದ ಕಥೆಯನ್ನು ಕೇಳಿ ಮಾರ್ಕಂಡೇಯ ಋಷಿಗಳನ್ನು ಕುರಿತು ಪುನಃ ಹೀಗೆ ಪ್ರಶ್ನೆ ಮಾಡಿದನು.

ಕಥಮಗ್ನಿರ್ವನಂ ಯಾತಃ ಕಥಂ ಚಾಪ್ಯಂಗಿರಾಃ ಪುರಾ ।
ನಷ್ಟೇಽಗ್ನೌ ಹವ್ಯಮವಹದಗ್ನಿರ್ಭೂತ್ವಾ ಮಹಾದ್ಯುತಿಃ ॥೨॥

ಅಗ್ನಿಯು ಯಾವ ಕಾರಣದಿಂದ ವನಕ್ಕೆ ಹೋದನು? ಹಿಂದೆ ಅಗ್ನಿಯು ನಷ್ಟವಾದಾಗ ಮಹಾದ್ಯುತಿಯುಳ್ಳ ಅಂಗೀರಸರು ತಾವೇ ಅಗ್ನಿಯಾಗಿ ದೇವತೆಗಳಿಗೆ ಹೇಗೆ ಹವಿಸ್ಸನ್ನು ತಲುಪಿಸಿದರು?

ಅಗ್ನಿರ್ಯದಾ ತ್ವೇಕ ಏವ ಬಹುತ್ವಂ ಚಾಸ್ಯ ಕರ್ಮಸು ।
ದೃಶ್ಯತೇ ಭಗವನ್ ಸರ್ವಮೇತದಿಚ್ಛಾಮಿ ವೇದಿತುಮ್ ॥೩॥

ಅಗ್ನಿಯು ಒಬ್ಬನೇ, ಆದರೆ ಅವನಲ್ಲಿ ಅನೇಕ ಕರ್ಮಗಳಲ್ಲಿ ಬಹುತ್ವವು ಕಂಡುಬರುತ್ತದೆ. ಪೂಜ್ಯರೇ, ನಾನು ಇದೆಲ್ಲವನ್ನೂ ತಿಳಯಲು ಬಯಸುತ್ತೇನೆ.

ಕುಮಾರಶ್ಚ ಯಥೋತ್ಪನ್ನೋ ಯಥಾ ಚಾಗ್ನೇಃ ಸುತೋಽಭವತ್ ।
ಯಥಾ ರುದ್ರಾಚ್ಚ ಸಂಭೂತೋ ಗಂಗಾಯಾಂ ಕೃತ್ತಿಕಾಸು ಚ ॥೪॥

ಕುಮಾರನು (ಷಣ್ಮುಖನು) ಹೇಗೆ ಉತ್ಪನ್ನನಾದನು? ಹೇಗೆ ಅಗ್ನಿಯ ಸುತನೂ, ರುದ್ರನ ಸುತನೂ, ಗಂಗೆಯ ಸುತನೂ ಮತ್ತು ಕೃತ್ತಿಕಾ ಸುತನೂ ಆದನು?

ಏತದಿಚ್ಛಾಮ್ಯಹಂ ತತ್ತ್ವತಃ ಶ್ರೋತುಂ ಭಾರ್ಗವಸತ್ತಮ ।
ಕೌತೂಹಲಸಮಾವಿಷ್ಟೋ ಯಾಥಾತಥ್ಯಂ ಮಹಾಮುನೇ ॥೫॥

ಎಲೈ ಭಾರ್ಗವಶ್ರೇಷ್ಠರೇ, ನಾನು ಇದನ್ನು ತಿಳಿಯಲು ಕುತೂಹಲದಿಂದ ಕೂಡಿದವನಾಗಿದ್ದೇನೆ. ಮಹಾಮುನಿಗಳೇ, ಇದನ್ನು ಯಥಾರ್ಥವಾಗಿ ನಿಮ್ಮಿಂದ ಕೇಳಲು ಬಯಸುತ್ತೇನೆ.

ಮಾರ್ಕಂಡೇಯಃ

ಅತ್ರಾಪ್ಯುದಾಹರಂತೀಮಮಿತಿಹಾಸಂ ಪುರಾತನಮ್ ।
ಯಥಾ ಕ್ರುದ್ಧೋ ಹುತವಹಸ್ತಪಸ್ತಪ್ತುಂ ವನಂ ಗತಃ ॥೬॥

ಮಾರ್ಕಂಡೇಯ– ಅಗ್ನಿಯು ಹೇಗೆ ಕೋಪಗೊಂಡು ತಪಸ್ಸನ್ನು ಮಾಡಲು ಕಾಡಿಗೆ ಹೋದನು ಎಂಬ ಈ ವಿಷಯದಲ್ಲಿ ಪ್ರಾಚೀನವಾದ ಒಂದು ಇತಿಹಾಸವನ್ನು ಹೇಳುತ್ತಾರೆ.

ಯಥಾ ಚ ಭಗವಾನಗ್ನಿಃ ಸ್ವಯಮೇವಾಂಗಿರಾಽಭವತ್ ।
ಸಂತಾಪಯಂಶ್ಚ ಪ್ರಭಯಾ ನಾಶಯಂಸ್ತಿಮಿರಾಣಿ ಚ ॥೭॥

ಹೇಗೆ ಪೂಜ್ಯರಾದ ಅಂಗಿರಸರು ತಾವೇ ಅಗ್ನಿಯಾದರು ಮತ್ತು ತಮ್ಮ ಪ್ರಭೆಯಿಂದ ಅಂಧಕಾರವನ್ನು ನಾಶಮಾಡಿ ಶಾಖವನ್ನು ಕೊಟ್ಟರು ಎಂಬ ವಿಷಯದಲ್ಲಿಯೂ ಪ್ರಾಚೀನವಾದ ಇತಿಹಾಸವನ್ನು ಹೇಳುತ್ತಾರೆ.

ಪುರಾಂಗಿರಾ ಮಹಾಬಾಹೋ ಚಚಾರ ತಪ ಉತ್ತಮಮ್ ।
ಆಶ್ರಮಸ್ಥೋ ಮಹಾಭಾಗೋ ಹವ್ಯವಾಹಂ ವಿಶೇಷಯನ್ ।
ತಥಾ ಸ ಭೂತ್ವಾ ತು ತದಾ ಜಗತ್ ಸರ್ವಂ ವ್ಯಕಾಶಯತ್ ॥೮॥

ಎಲೈ ಮಹಾಬಾಹುವೇ, ಹಿಂದೆ ಮಹಾನುಭಾವರಾದ ಅಂಗೀರಸರು ತಮ್ಮ ಆಶ್ರಮದಲ್ಲಿಯೇ ಇದ್ದು ಶ್ರೇಷ್ಠವಾದ ತಪಸ್ಸನ್ನು ಮಾಡಿದರು. ಅಗ್ನಿಯನ್ನೂ ಮೀರಿಸಿದರು. ಅವರು ಅಂತಹ ಸ್ವರೂಪವನ್ನು ತಳೆದು ಎಲ್ಲ ಜಗತ್ತನ್ನೂ ಪ್ರಕಾಶಿಸಿದರು.

ತಪಶ್ಚರಂಸ್ತು ಹುತಭುಕ್ ಸಂತಪ್ತಸ್ತಸ್ಯ ತೇಜಸಾ ।
ಭೃಶಂ ಗ್ಲಾನಶ್ಚ ತೇಜಸ್ವೀ ನ ಚ ಕಿಂಚಿತ್ ಪ್ರಜಜ್ಞಿವಾನ್ ।
ಅಥ ಸಂಚಿಂತಾಯಾಮಾಸ ಭಗವಾನ್ ಹವ್ಯವಾಹನಃ ॥೯॥

ತಪಸ್ಸನ್ನು ಮಾಡುತ್ತಿದ್ದ ಅಗ್ನಿದೇವನು ಅವರ ತೇಜಸ್ಸಿನಿಂದ ತಾಪವನ್ನು ಹೊಂದಿದನು. ತೇಜಸ್ವಿಯಾದ ಅವನು ಬಹಳ ವಿಷಾದದಿಂದ ಕೂಡಿದವನಾಗಿ ಏನನ್ನೂ ತಿಳಿಯಲಿಲ್ಲ. ಆಗ ಭಗವಂತನಾದ ಅಗ್ನಿಯು ಹೀಗೆ ಯೋಚಿಸಿದನು.

ಅನ್ಯೋಽಗ್ನಿರಿಹ ಲೋಕಾನಾಂ ಬ್ರಹ್ಮಣಾ ಸಂಪ್ರಕಲ್ಪಿತಃ ।
ಅಗ್ನಿತ್ವಂ ವಿಪ್ರಣಷ್ಟಂ ಹಿ ತಪ್ಯಮಾನಸ್ಯ ಮೇ ತಪಃ ॥೧೦॥

ಬ್ರಹ್ಮದೇವರು ಲೋಕಕ್ಕೆ ಇನ್ನೊಬ್ಬ ಅಗ್ನಿಯನ್ನೇ ನೀಡಿದ್ದಾರೆ. ತಪಸ್ಸನ್ನು ಮಾಡುತ್ತಿರುವ ನನಗೆ ಅಗ್ನಿತ್ವವು ನಾಶವನ್ನು ಹೊಂದಿದೆ.

ಕಥಮಗ್ನಿಃ ಪುನರಹಂ ಭವೇಯಮಿತಿ ಚಿಂತ್ಯ ಸಃ ।
ಅಪಶ್ಯದಗ್ನಿವಲ್ಲೋಕಾಂಸ್ತಾಪಯಂತಂ ಮಹಾಮುನಿಮ್ ॥೧೧॥

ಸೋಪಾಸರ್ಪಚ್ಛನೈರ್ಭೀತಸ್ತಮುವಾಚ ತದಾಽಂಗಿರಾಃ ॥೧೨॥

ನಾನು ಪುನಃ ಹೇಗೆ ಅಗ್ನಿಯಾಗುತ್ತೇನೆ ಎಂದು ಚಿಂತಿಸಿ ಅವನು ಲೋಕಗಳನ್ನು ಅಗ್ನಿಯಂತೆ ಶಾಖಯುಕ್ತವನ್ನಾಗಿ ಮಾಡುತ್ತಿದ್ದಂತಹ ಮಹರ್ಷಿಗಳಾದ ಅಂಗಿರಸರನ್ನು ನೋಡಿದನು. ಅವನು ಭೀತನಾಗಿ ಮೆಲ್ಲನೆ ಅವರ ಬಳಿಗೆ ಹೋದನು. ಅಂಗೀರಸರು ಅವನನ್ನು ಕುರಿತು ಹೀಗೆ ಮಾತನಾಡಿದರು.

ಶೀಘ್ರಮೇವ ಭವಸ್ವಾಗ್ನಿಸ್ತ್ವಂ ಪುನರ್ಲೋಕಭಾವನಃ ।
ವಿಜ್ಞಾತಶ್ಚಾಸಿ ಲೋಕೇಷು ತ್ರಿಷು ಸಂಸ್ಥಾನಚಾರಿಷು ॥೧೩॥

ನೀನು ಪುನಃ ಎಲ್ಲ ಲೋಕಗಳಿಗೂ ಕ್ಷೇಮವನ್ನುಂಟುಮಾಡುವ ಅಗ್ನಿಯಾಗು. ಮೂರುಲೋಕಗಳಲ್ಲಿರುವ ಸ್ಥಾವರಜಂಗಮಗಳಲ್ಲಿ ನೀನು ಅಗ್ನಿ ಎಂದು ಪ್ರಸಿದ್ಧನಾಗಿದ್ದೀಯೆ.

ತ್ವಮಗ್ನಿಃ ಪ್ರಥಮಂ ಸೃಷ್ಟೋ ಬ್ರಹ್ಮಣಾ ತಿಮಿರಾಪಹಃ ।
ಸ್ವಸ್ಥಾನಂ ಪ್ರತಿಪದ್ಯಸ್ವ ಶೀಘ್ರಮೇವ ತಮೋನುದ ॥೧೪॥

ಬ್ರಹ್ಮದೇವರು ನಿನ್ನನ್ನು ಅಂಧಕಾರವನ್ನು ನಾಶಮಾಡುವ ಅಗ್ನಿ ಎಂದು ಮೊದಲು ಸೃಷ್ಟಿಮಾಡಿದ್ದಾರೆ. ಎಲೈ ಅಂಧಕಾರಪರಿಹಾರಕನೇ, ಶೀಘ್ರವಾಗಿ ನಿನ್ನ ಮೊದಲಿನ ಸ್ಥಾನವನ್ನು ಹೊಂದುವವನಾಗು.

ಅಗ್ನಿಃ

ನಷ್ಟಕೀರ್ತಿರಹಂ ಲೋಕೇ ಭವಾನ್ ಜಾತೋ ಹುತಾಶನಃ ।
ಭವಂತಮೇವ ಜ್ಞಾಸ್ಯಂತಿ ಪಾವಕಂ ನ ತು ಮಾಂ ಜನಾಃ ॥೧೫॥

ಅಗ್ನಿ– ಲೋಕದಲ್ಲಿ ನಾನು ಅಗ್ನಿ ಎಂಬ ಕೀರ್ತಿಯನ್ನು ಕಳೆದುಕೊಂಡಿದ್ದೇನೆ. ಈಗ ನೀನು ಅಗ್ನಿಯಾಗಿದ್ದೀಯೆ. ಜನರು ನಿನ್ನನ್ನೇ ಅಗ್ನಿ ಎಂದು ತಿಳಿಯುವರು. ನನ್ನನ್ನಲ್ಲ.

ನಿಕ್ಷಿಪಾಮ್ಯಹಮಗ್ನಿತ್ವಂ ತ್ವಮಗ್ನಿಃ ಪ್ರಥಮೋ ಭವ ।
ಭವಿಷ್ಯಾಮಿ ದ್ವಿತೀಯೋಽಹಂ ಪ್ರಾಜಾಪತ್ಯಸ್ತಥೈಕತಃ ॥೧೬॥

ನಾನು ಅಗ್ನಿತ್ವವನ್ನು ಬಿಡುತ್ತೇನೆ. ನೀನೇ ಮೊದಲನೆಯ ಅಗ್ನಿಯಾಗು. ನಾನು ಎರಡನೆಯ ಅಗ್ನಿಯಾಗುತ್ತೇನೆ. ಎಲೈ ಬ್ರಹ್ಮಪುತ್ರನೇ, ನಾನು (ಬೇರೆ) ಒಂದು ಕಡೆ ಇರುತ್ತೇನೆ.

ಅಂಗಿರಾಃ

ಕುರು ಪುಣ್ಯಂ ಪ್ರಜಾಸ್ವರ್ಗ್ಯಂ ಭವಾಗ್ನಿಸ್ತಿಮಿರಾಪಹಃ ।
ಮಾಂ ಚ ದೇವ ಕುರುಷ್ವಾಗ್ನೇ ಪ್ರಥಮಂ ಪುತ್ರಮಂಜಸಾ ॥೧೭॥

ಅಂಗಿರಾಃ– ಪುಣ್ಯವನ್ನು ಆಚರಿಸಿ ಪ್ರಜೆಗಳು ಸ್ವರ್ಗವನ್ನು ಪಡೆಯುವುದಕ್ಕೆ ಕಾರಣನಾಗು. ಅಂಧಕಾರವನ್ನು ನಾಶಮಾಡುವ ಅಗ್ನಿಯು ನೀನೇ ಆಗು. ಎಲೈ ದೇವನೇ, ನನ್ನನ್ನು ನಿನ್ನ ಪ್ರಥಮಪುತ್ರನೆಂದು ಪ್ರೀತಿಯಿಂದ ಅಂಗೀಕರಿಸು.

ಮಾರ್ಕಂಡೇಯಃ

ತಚ್ಛ್ರುತ್ವಾಽಂಗಿರಸೋ ವಾಕ್ಯಂ ಜಾತವೇದಾಸ್ತಥಾಽಕರೋತ್ ।
ರಾಜನ್ ಬೃಹಸ್ಪತಿರ್ನಾಮ ತಸ್ಯಾಪ್ಯಂಗಿರಸಃ ಸುತಃ ॥೧೮॥

ಮಾರ್ಕಂಡೇಯ– ಅಂಗೀರಸರ ಮಾತನ್ನು ಕೇಳಿ ಅಗ್ನಿಯು ಹಾಗೆಯೇ ಮಾಡಿದನು (ಅಂಗೀರಸರನ್ನು ತನ್ನ ಪ್ರಥಮಪುತ್ರನನ್ನಾಗಿ ಸ್ವೀಕರಿಸಿದನು). ಎಲೈ ರಾಜನೇ, (ಕಾಲಕ್ರಮದಲ್ಲಿ) ಅಂಗೀರಸರಿಗೆ ಬೃಹಸ್ಪತಿ ಎಂಬ ಪುತ್ರನು ಜನಿಸಿದನು.

ಜ್ಞಾತ್ವಾ ಪ್ರಥಮಜಂ ತಂ ತು ವಹ್ನೇರಂಗಿರಸಂ ಸುತಮ್ ।
ಉಪೇತ್ಯ ದೇವಾಃ ಪಪ್ರಚ್ಛುಃ ಕಾರಣಂ ತತ್ರ ಭಾರತ ॥೧೯॥

ಎಲೈ ಭಾರತನೇ, ಅಂಗಿರಸರನ್ನು ಅಗ್ನಿಯ ಪ್ರಥಮಪುತ್ರನೆಂದು ತಿಳಿದ ದೇವತೆಗಳು ಅವರನ್ನು ಸಮೀಪಿಸಿ ಅದಕ್ಕೆ ಕಾರಣವನ್ನು ಕೇಳಿದರು.

ಸ ತು ಪೃಷ್ಟಸ್ತದಾ ದೇವೈಸ್ತತಃ ಕಾರಣಮಬ್ರವೀತ್ ।
ಪ್ರತ್ಯಗೃಹ್ಣಂಸ್ತು ದೇವಾಶ್ಚ ತದ್ವಚೋಽಂಗಿರಸಸ್ತದಾ ॥೨೦॥

ದೇವತೆಗಳಿಂದ ಕೇಳಲ್ಪಟ್ಟ ಅಂಗಿರಸರು ಕಾರಣವನ್ನು ಹೇಳಿದರು. ದೇವತೆಗಳಾದರೂ ಆಗ ಅಂಗಿರಸರ ಆ ಮಾತುಗಳನ್ನು ಸ್ವೀಕರಿಸಿದರು.

ತತ್ರ ನಾನಾವಿಧಾನಗ್ನೀನ್ ಪ್ರವಕ್ಷ್ಯಾಮಿ ಮಹಾಪ್ರಭಾನ್ ।
ಕರ್ಮಭಿರ್ಬಹುಭಿಃ ಖ್ಯಾತಾನ್ ನಾನಾರ್ಥಾನ್ ಬ್ರಾಹ್ಮಣೇಷ್ವಿಹ ॥೨೧॥

ಆ ವಿಷಯದಲ್ಲಿ ಬ್ರಾಹ್ಮಣರಿಗೆ ಅನೇಕ ಪ್ರಯೋಜನವನ್ನುಂಟು ಮಾಡುವ ಅನೇಕ ಕರ್ಮಗಳಲ್ಲಿ ಅನೇಕ ಹೆಸರುಗಳಿಂದ ಖ್ಯಾತರಾದ ಮಹಾಪ್ರಭೆಯುಳ್ಳ ನಾನಾವಿಧವಾದ ಅಗ್ನಿಗಳನ್ನು ಹೇಳುವೆನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಾಧಿಕದ್ವಿಶತಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಆಂಗಿರಸೇ ಪ್ರಥಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಎಂಟನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಒಂಬತ್ತನೆಯ ಅಧ್ಯಾಯ

ಸ್ಕಂದೋತ್ಪತ್ತಿಯ ಉಪೋದ್ಘಾತರೂಪವಾಗಿ ಅಂಗೀರಸ ವಂಶದ ಕಥನ.

ಮಾರ್ಕಂಡೇಯಃ

ಬ್ರಹ್ಮಣೋ ಯಸ್ತೃತೀಯಸ್ತು ಪುತ್ರಃ ಕುರುಕುಲೋದ್ವಹ ।
ತಸ್ಯಾಪವವಸುತಾ ಭಾರ್ಯಾ ಪ್ರಜಾಸ್ತಸ್ಯಾಂ ಚ ಮೇ ಶೃಣು ॥೧॥

ಮಾರ್ಕಂಡೇಯ– ಎಲೈ ಕುರುಕುಲೋದ್ಭವನೇ, ಬ್ರಹ್ಮದೇವರ ತೃತೀಯ ಪುತ್ರರಾದ ಅಂಗಿರಸರಿಗೆ ವಸಿಷ್ಠರ ಮಗಳಾದ ಕಪರ್ದಿಯು ಪತ್ನಿ. ಅವಳಲ್ಲಿ ಹುಟ್ಟಿದ ಪ್ರಜೆಗಳನ್ನು ನನ್ನಿಂದ ಕೇಳು.

ಬೃಹತ್ಕೀರ್ತಿರ್ಬೃಹಜ್ಜ್ಯೋತಿರ್ಬೃಹದ್ಬ್ರಹ್ಮಾ ಬೃಹನ್ಮನಾಃ ।
ಬೃಹನ್ಮಂತ್ರೋ ಬೃಹದ್ಭಾಸಸ್ತಥಾ ರಾಜನ್ ಬೃಹಸ್ಪತಿಃ ॥೨॥

ಬೃಹತ್ಕೀರ್ತಿ, ಬೃಹಜ್ಜ್ಯೋತಿ, ಬೃಹದ್ಬ್ರಹ್ಮ, ಬೃಹನ್ಮನ, ಬೃಹನ್ಮಂತ್ರ, ಬೃಹದ್ಭಾಸ ಮತ್ತು ಬೃಹಸ್ಪತಿ. ಇವರು ಅವರ ಮಕ್ಕಳು.

ಪ್ರಜಾಸು ತಾಸು ಸರ್ವಾಸು ರೂಪೇಣಾಪ್ರತಿಮಾऽಭವತ್ ।
ದೇವೀ ಭಾನುಮತೀ ನಾಮ ಪ್ರಥಮಾಂಗಿರಸಃ ಸುತಾ ॥೩॥

ಅಂಗಿರಸರ ಎಲ್ಲಾ ಪ್ರಜೆಗಳಲ್ಲಿಯೂ ರೂಪದಿಂದ ಅಸದೃಶಳಾದವಳು ಭಾನುಮತಿ ಎಂಬುವಳು. ಅವಳು ಅಂಗಿರಸರ ಪ್ರಥಮಪುತ್ರಿ.

ಭೂತಾನಾಮೇವ ಸರ್ವೇಷಾಂ ಯಸ್ಯಾಂ ರಾಗಸ್ತದಾऽಭವತ್ ।
ರಾಗಾದ್ ರಾಗೇತಿ ಯಾಮಾಹುರ್ದ್ವಿತೀಯಾಂಗಿರಸಃ ಸುತಾ ॥೪॥

ಯಾವಳು ಹುಟ್ಟಿದಾಗ ಎಲ್ಲ ಪ್ರಾಣಿಗಳಿಗೂ ಅವಳಿಗೆ ರಾಗ (ಪ್ರೀತಿ) ಉಂಟಾಯಿತೋ ಅವಳನ್ನು ರಾಗಾ ಎಂದೇ ಕರೆಯುತ್ತಾರೆ. ಅವಳು ಅಂಗಿರಸರ ದ್ವಿತೀಯ ಪುತ್ರಿ.

ಯಾಂ ಕಪರ್ದೀಸುತಾಮಾಹುರ್ದರ್ಶಾದೃಶ್ಯೇತಿ ದೇಹಿನಃ ।
ತನುತ್ವಾತ್ ಸಾ ಸಿನೀವಾಲೀ ತೃತೀಯಾऽಂಗಿರಸಃ ಸುತಾ ॥೫॥

ಕಪರ್ದಿ ಸುತಳಾದ ಯಾವಳನ್ನು ಮನುಷ್ಯರು ದೃಶ್ಯಾದೃಶ್ಯಾ ಎಂದು ಕರೆಯುತ್ತಾರೋ, ಅವಳು ಕೃಶಳಾದ್ದರಿಂದ ಸಿನೀವಾಲೀ ಎಂದೂ ಕರೆಯಲ್ಪಡುತ್ತಾಳೆ. ಯಾವಳನ್ನು ನೋಡಿ ಜನಗಳು ವಿನೋದಮಾಡುತ್ತಾಳೆಯೋ ಅವಳಿಗೆ ಕುಹು ಎಂದೂ ಹೆಸರು (ದೃಶ್ಯಾದೃಶ್ಯಾ ಸಿನೀವಾಲೀ ಕುಹೂ ಎಂಬುದು ಒಬ್ಬಳಿಗೇ ಇರುವ ಮೂರು ಹೆಸರುಗಳು).

ಯಾಂ ತು ದೃಷ್ಟ್ವಾ ಭಗವತೀಂ ಜನಃ ಕುಹಕುಹಾಯತೇ ।
ಏಕಾನಂಶೇ(ಗೇ)ತಿ ತಾಮಾಹುಃ ಚತುರ್ಥೀಮಂಗಿರಃಸುತಾಮ್ ॥೬॥

ಪಂಚಮ್ಯರ್ಚಿಷ್ಮತೀ ಭಾಭಿರ್ಹವಿರ್ಭಿಶ್ಚ ಹವಿಷ್ಮತೀ ।
ಷಷ್ಠೀಮಂಗಿರಸಃ ಕನ್ಯಾಂ ಪುಣ್ಯಾಮಾಹುಃ ಮಹಿಷ್ಮತೀಮ್ ॥೭॥

ಅಂಗಿರಸರ ನಾಲ್ಕನೆಯ ಪುತ್ರಿಯನ್ನು ಏಕಾನಂಗಾ (ಏಕಾನಂಶಾ) ಎಂದು ಹೇಳುತ್ತಾರೆ. ಅಂಗಿರಸರ ಐದನೆಯ ಪುತ್ರಿಯನ್ನು ಪ್ರಕಾಶದ ಕಾರಣದಿಂದ ಅರ್ಚಿಷ್ಮತೀ ಎಂದೂ ಹವಿಸ್ಸನ್ನು ಸ್ವೀಕರಿಸುವುದರಿಂದ ಹವಿಷ್ಮತೀ ಎಂದೂ ಕರೆಯುತ್ತಾರೆ. ಅಂಗಿರಸರ ಆರನೆಯ ಪುತ್ರಿಯನ್ನು ಪುಣ್ಯಾ ಎಂದೂ ಮಹೀಷ್ಮತೀ ಎಂದೂ ಕರೆಯುತ್ತಾರೆ.

ಮಹಾಮಖೇಷ್ವಾಂಗಿರಸೀ ದೀಪ್ತಿಮತ್ಸು ಮಹಾಮತೇ ।
ಮಹಾಮತೀತಿ ವಿಖ್ಯಾತಾ ಸಪ್ತಮೀ ಕಥ್ಯತೇ ಸುತಾ ॥೮॥

ಎಲೈ ಮಹಾಮತಿಯೇ, ದೊಡ್ಡ ಯಜ್ಞಗಳಲ್ಲಿ ಪ್ರಕಾಶಿಸುವ ಅಂಗಿರಸರ ಮಗಳನ್ನು ಮಹಾಮತಿ ಎಂದು ಕರೆಯುತ್ತಾರೆ. ಇವಳು ಏಳನೆಯ ಪುತ್ರಿ.

ಬೃಹಸ್ಪತೇಃ ಚಾಂದ್ರಮಸೀ ಭಾರ್ಯಾऽऽಭೂದ್ ಯಾ ಯಶಸ್ವಿನೀ ।
ಅಗ್ನೀನ್ ಸಾಜನಯತ್ ಪುತ್ರಾನ್ ಷಡೇಕಾಂ ಚಾಪಿ ಪುತ್ರಿಕಾಮ್ ॥೯॥

ಬೃಹಸ್ಪತಿಗಳ ಪತ್ನಿಯು ಚಂದ್ರನ ಮಗಳಾದ ಯಶಸ್ವಿನೀ. ಅವಳು ಅಗ್ನಿಗಳೇ ಆರು ಗಂಡುಮಕ್ಕಳನ್ನು ಮತ್ತು ಒಬ್ಬ ಮಗಳನ್ನೂ ಪಡೆದಳು.

ಆಹುತಿಷ್ವೇವ ಯಸ್ಯಾಗ್ನೇರ್ಹವಿಷ್ಯಾ(ಜ್ಯಂ)ದ್ಯಂ ವಿಧೀಯತೇ ।
ಸೋऽಗ್ನಿರ್ಬೃಹಸ್ಪತೇಃ ಪುತ್ರಃ ಶಂಯುರ್ನಾಮ ಮಹಾವ್ರತಃ ॥೧೦॥

ಆಹುತಿಗಳನ್ನು ಕೊಡುವಾಗ ಯಾವ ಅಗ್ನಿಗೆ ಮೊದಲನೆಯ ಹವಿಸ್ಸು ಕೊಡಲ್ಪಡುತ್ತದೆಯೋ ಅವನು ಬೃಹಸ್ಪತಿಯ ಪುತ್ರನಾದ ಮಹಾವ್ರತನಾದ ಶಂಯುನಾಮಕನಾದ ಅಗ್ನಿ.

ಚಾತುರ್ಮಾಸ್ಯೇಷು ಯಸ್ಯೇಷ್ಟ್ಯಾ ಮಶ್ವಮೇಧೇಽಗ್ರಜಃ ಪಶುಃ ।
ದೀಪ್ತೋ ಜ್ವಾಲೈರನೇಕಾಭೈರಗ್ನಿಷ್ಟೋಮೇಽಥ ವೀರ್ಯವಾನ್ ॥೧೧॥

ಚಾತುರ್ಮಾಸ್ಯಗಳಲ್ಲಿ ಮಾಡುವ ಇಷ್ಟಿಗಳಲ್ಲಿ ಕೊಡುವ ಹವಿಸ್ಸಿನಲ್ಲಿ ಮೊದಲನೆಯ ಭಾಗವೂ, ಅಶ್ವಮೇಧ ಯಾಗಗಳಲ್ಲಿ ಕೊಡುವ ಪಶುವಿನ ಮೊದಲನೆಯ ಹವಿಸ್ಸೂ ಮತ್ತು ಅಗ್ನಿಷ್ಟೋಮಗಳಲ್ಲಿ ಕೊಡುವ ಮೊದಲನೆಯ ಹವಿಸ್ಸೂ ಸಹ ಅನೇಕ ಬಣ್ಣದ ಜ್ವಾಲೆಗಳಿಂದ ದೀಪ್ತನಾದ ವೀರ್ಯವಂತನಾದ ಶಂಯುವಿಗೇ ಸಲ್ಲುತ್ತದೆ.

ಶಂಯೋರಪ್ರತಿಮಾ ಭಾರ್ಯಾ ಸತ್ಯಾಸತ್ಯಾಽಥ ಧರ್ಮಜಾ ।
ಅಗ್ನಿಸ್ತಸ್ಯ ಸುತೋ ದೀಪ್ತಸ್ತಿಸ್ರಃ ಕನ್ಯಾಶ್ಚ ಸುಪ್ರಭಾಃ ॥೧೨॥

ಶಂಯುವಿಗೆ ಧರ್ಮನ ಮಗಳಾದ ಅಸದೃಶಳಾದ ಸತ್ಯಾಸತ್ಯ ಎಂಬುವಳು ಪತ್ನಿ. ಅವನಿಗೆ ದೀಪ್ತನಾಮಕನಾದ ಅಗ್ನಿಯೂ ಮತ್ತು ಒಳ್ಳೆಯ ಕಾಂತಿಯುಳ್ಳ ಮೂರು ಪುತ್ರಿಯರೂ ಮಕ್ಕಳು.

ಪ್ರಥಮೇನಾಜ್ಯಭಾಗೇನ ಪೂಜ್ಯತೇ ಯೋಽಗ್ನಿರಧ್ವರೇ ।
ಅಗ್ನೇಸ್ತಸ್ಯ ಭರದ್ವಾಜಃ ಪ್ರಥಮಃ ಪುತ್ರ ಉಚ್ಯತೇ ॥೧೩॥

ಯಾಗಗಳಲ್ಲಿ ಯಾವ ಅಗ್ನಿಗೆ ಮೊದಲನೆಯ ಆಜ್ಯಭಾಗವು ಸಲ್ಲುತ್ತದೆಯೋ ಅವನು ಶಂಯುವಿನ ಪ್ರಥಮಪುತ್ರನಾದ ಭರದ್ವಾಜ ಅಗ್ನಿ ಎಂದು ಕರೆಯಲ್ಪಡುತ್ತಾನೆ.

ಪೌರ್ಣಮಾಸೇಷು ಸರ್ವೇಷು ಹವಿಷ್ಯಾಜ್ಯಂ ಸ್ರುವೋದ್ಯತಮ್ ।
ಭರತೋ ನಾಮತಃ ಸೋಽಗ್ನಿರ್ದ್ವಿತೀಯಃ ಶಂಯುತಃ ಸುತಃ ॥೧೪॥

ಪೌರ್ಣಮಾಸೇಷ್ಟಿಗಳಲ್ಲಿ ಯಾವನಿಗೆ ಸ್ರುವದಿಂದ ಮೊದಲನೆಯ ಆಜ್ಯಭಾಗವು ಹವಿಸ್ಸಾಗಿ ಕೊಡಲ್ಪಡುತ್ತದೆಯೋ ಅವನು ಭರತನಾಮಕನಾದ ಶಂಯುವಿನ ದ್ವಿತೀಯಪುತ್ರ.

ತಿಸ್ರಃ ಕನ್ಯಾ ಭವಂತ್ಯನ್ಯಾ ಯಾಸಾಂ ಸ ಭರತಃ ಪತಿಃ ।
ಭಾರತಸ್ತು ಸುತಸ್ತಸ್ಯ ಭಾರತ್ಯೇಕಾ ಚ ಪುತ್ರಿಕಾ ॥೧೫॥

ಇದಲ್ಲದೇ ಮೂರುಜನ ಕನ್ಯೆಯರಿದ್ದಾರೆ. ಅವರಿಗೆ ಭರತನೇ ಪತಿ. ಭರತನಾಮಕ ಅಗ್ನಿಗೆ ಭಾರತನೆಂಬ ಪುತ್ರ ಮತ್ತು ಭಾರತಿ ಎಂಬ ಒಬ್ಬ ಪುತ್ರಿಯೂ ಮಕ್ಕಳು.

ಭಾರತೋ ಭರತಸ್ಯಾಗ್ನೇಃ ಪಾವಕಸ್ತು ಪ್ರಜಾಯತೇ ।
ಮಹಾನತ್ಯರ್ಥಮಹಿತಸ್ತಥಾ ಭರತಸತ್ತಮ ॥೧೬॥

ಎಲೈ ಭರತಸತ್ತಮನೇ, ಭರತನೆಂಬ ಅಗ್ನಿಗೆ ಹುಟ್ಟಿದ ಭಾರತನೂ ಸಹ ಒಬ್ಬ ಅಗ್ನಿಯೇ. ಅವನು ಬಹಳ ಪೂಜಿತನಾದವನು.

ಭರದ್ವಾಜಸ್ಯ ಭಾರ್ಯಾ ತು ವೀರಾ ವೀರಶ್ಚ ಪಿಂಡದಃ ।
ಪ್ರಾಹುರಾಜ್ಯೇನ ತಸ್ಯೇಜ್ಯಾಂ ಸೋಮಸ್ಯೇವ ದ್ವಿಜಾಃ ಶನೈಃ ॥೧೭॥

ಭರದ್ವಾಜರ ಭಾರ್ಯೆಯೇ ವೀರಾ ಎಂದು. ವೀರನು ಅವರಿಗೆ ಪಿಂಡಪ್ರದನಾದ ಪುತ್ರನು. ಅವನಿಗೆ ಚಂದ್ರನಿಗೆ ಅನಂತರದ ಆಜ್ಯಭಾಗಗಳು ಸಲ್ಲುವಂತೆ ಅನಂತರದ ಆಜ್ಯಭಾಗಗಳು ಸಲ್ಲುತ್ತವೆ ಎಂದು ಬ್ರಾಹ್ಮಣರು ಹೇಳುತ್ತಾರೆ.

ಹವಿಷಾ ಯೋ ದ್ವಿತೀಯೇನ ಸೋಮೇನ ಸಹ ಯುಜ್ಯತೇ ।
ರಥಪ್ರಭೂ ರಥಧ್ವಾನಃ ಕುಂಭರೇತಾಃ ಸ ಉಚ್ಯತೇ ॥೧೮॥

ಎರಡನೆಯ ಸೋಮದಿಂದ ಮಿಶ್ರಿತವಾದ ಹವಿರ್ಭಾಗವು ಯಾವನಿಗೆ ಸಲ್ಲುತ್ತದೆಯೋ ಅವನನ್ನು ರಥಪ್ರಭು ಎಂದೂ ರಥಧ್ವಾನ ಎಂದೂ ಕುಂಭರೇತನೆಂದೂ ಕರೆಯುತ್ತಾರೆ.

ಸರಯ್ವಾಂ ಜನಯತ್ ಸಿದ್ಧಿಂ ಭಾನುಂ ಭಾಭಿಃ ಸಮಾವೃಣೋತ್ ।
ಆಗ್ನೇಯಮಾನಯನ್ನಿತ್ಯಮಾಹ್ವಾನೇ ಹ್ಯೇಷ ಕಥ್ಯತೇ ॥೧೯॥

ಅವನು ಸರಯೂ ಎಂಬ ತನ್ನ ಪತ್ನಿಯಲ್ಲಿ ಸಿದ್ಧಿ ಎಂಬ ಪುತ್ರನನ್ನು ಪಡೆದನು. ಮತ್ತು ತನ್ನ ಕಾಂತಿಯಿಂದ ಚಂದ್ರನನ್ನು ಆವರಿಸಿದನು. ಯಾವನಿಗೆ ಆಜ್ಯಭಾಗವನ್ನು ಸಲ್ಲಿಸಿದರೆ ಹೋಮವು ಚೆನ್ನಾಗಿ ನಡೆದಂತೆ ಆಗುತ್ತದೆಯೋ ಅವನನ್ನು ಶ್ರೇಷ್ಠನಾದ ಸ್ವಿಷ್ಟಕೃತ್ ಎಂದು ಕರೆಯುತ್ತಾರೆ.

ಯಸ್ತು ನ ಚ್ಯವತೇ ನಿತ್ಯಂ ಯಶಸಾ ವರ್ಚಸಾ ಶ್ರಿಯಾ ।
ಅಗ್ನಿರ್ನಿಶ್ಚ್ಯವನೋ ನಾಮ ಪೃಥಿವೀಂ ಸ್ತೌತಿ ಕೇವಲಮ್ ॥೨೦॥

ಯಾವ ಅಗ್ನಿಯು ಕೀರ್ತಿಯಿಂದ, ಕಾಂತಿಯಿಂದ, ಸಂಪತ್ತಿನಿಂದ ಎಂದೂ ಚ್ಯುತನಾಗುವುದಿಲ್ಲವೋ ಅವನು ನಿಶ್ಚ್ಯವನ ಎಂಬ ಅಗ್ನಿ. ಅವನು ಪೃಥಿವಿಯನ್ನು ಸ್ತೋತ್ರಮಾಡುತ್ತಾನೆ.

ವಿಪಾಪ್ಮಾ ಕಲುಷೈರ್ಮುಕ್ತೋ ವಿಶುದ್ಧಶ್ಚಾರ್ಚಿಷಾ ಜ್ವಲನ್ ।
ವಿಪಾಪೋಽಗ್ನಿಃ ಸುತಸ್ತಸ್ಯ ಸತ್ಯಃ ಸಮಯಧರ್ಮಕೃತ್ ॥೨೧॥

ಯಾರು ದೋಷಗಳಿಂದ ಮುಕ್ತನಾಗಿ ಜ್ವಾಲೆಗಳಿಂದ ಬೆಳಗುತ್ತಾ ವಿಶುದ್ಧನಾಗಿದ್ದಾನೆಯೋ ಅವನು ವಿಪಾಪ ಎಂಬ ಅಗ್ನಿ. ಅವನ ಪುತ್ರನು ಸತ್ಯನೆಂಬ ಅಗ್ನಿ. ಅವನು ಸಮಯಧರ್ಮಗಳನ್ನು ಪಾಲಿಸುವವನು.

ಆಕ್ರೋಶತಾಂ ತು ಭೂತಾನಾಂ ಯಃ ಕರೋತಿ ಹಿ ನಿಷ್ಕೃತಿಮ್ ।
ಅಗ್ನಿಃ ಸ ನಿಷ್ಕೃತಿರ್ನಾಮ ಶೋಭಯತ್ಯಭಿಸೇವಿತೇ ॥೨೨॥

ಕಿರುಚಾಡುವ ಪ್ರಾಣಿಗಳಿಗೆ ಯಾರು ಸಮಾಧಾನವನ್ನು ಮಾಡುತ್ತಾನೆಯೋ ಆ ಅಗ್ನಿಗೆ ನಿಷ್ಕೃತಿ ಎಂದು ಹೆಸರು. ಅವನನ್ನು ಸೇವಿಸಿದರೆ ಶೋಭೆ ಉಂಟಾಗುವಂತೆ ಮಾಡುತ್ತಾನೆ.

ಅನುಕೂಜಂತಿ ಯೇನೇಹ ವೇದನಾರ್ತಾಃ ಸ್ವಯಂ ಜನಾಃ ।
ತಸ್ಯ ಪುತ್ರಃ ಸ್ವನೋ ನಾಮ ಪಾವಕಃ ಸ ರುಜಸ್ಕರಃ ॥೨೩॥

ವೇದನೆಯಿಂದ ಬಳಲುವ ಜನರು ಯಾವನಿಂದ ಪ್ರೇರಿತನಾಗಿ ನೆರಳುತ್ತಾರೆಯೋ ಅವನು ನಿಷ್ಕೃತಿಯ ಮಗನಾದ ಸ್ವನ ಎಂಬ ಹೆಸರಿನ ಅಗ್ನಿ. ಅವನು ರೋಗಗಳನ್ನು ಉಂಟುಮಾಡುವವನು.

ಯಸ್ತು ವಿಶ್ವಸ್ಯ ಜಗತೋ ಬುದ್ಧಿಮಾಕ್ರಮ್ಯ ತಿಷ್ಠತಿ ।
ತಂ ಪ್ರಾಹುರಧ್ಯಾತ್ಮವಿದೋ ವಿಶ್ವಜಿನ್ನಾಮ ಪಾವಕಮ್ ॥೨೪॥

ಯಾವ ಅಗ್ನಿಯು ಜಗತ್ತಿನ ಎಲ್ಲಾ ಪ್ರಾಣಿಗಳ ಬುದ್ಧಿಯನ್ನು ಆಕ್ರಮಿಸಿ ಅಲ್ಲಿದ್ದು ಪ್ರೇರಿಸುತ್ತಾನೆಯೋ ಅವನನ್ನು ಅಧ್ಯಾತ್ಮಜ್ಞಾನಿಗಳು ವಿಶ್ವಜಿತ್ ನಾಮಕ ಅಗ್ನಿ ಎಂದು ಕರೆಯುತ್ತಾರೆ.

ಅಂತರಾಗ್ನಿಃ ಸ್ಥಿತೋ ಯಸ್ತು ಭುಕ್ತಂ ಪಚತಿ ದೇಹಿನಾಮ್ ।
ಸ ಜಜ್ಞೇ ವಿಶ್ವಭುಜ್‌ನಾಮ ಸರ್ವಲೋಕೇಷು ಭಾರತ ॥೨೫॥

ಎಲೈ ಭಾರತನೇ, ಯಾವ ಅಗ್ನಿಯು ದೇಹದ ಒಳಗಿದ್ದು ಪ್ರಾಣಿಗಳು ತಿಂದ ಆಹಾರವನ್ನು ಪಚನಮಾಡುತ್ತಾನೆಯೋ ಅವನು ಸರ್ವಲೋಕಗಳಲ್ಲಿಯೂ ವಿಶ್ವಭುಕ್ ಎಂಬ ಹೆಸರಿನಿಂದ ಪ್ರಸಿದ್ಧನಾದನು.

ಬ್ರಹ್ಮಚಾರೀ ಯತಾತ್ಮಾ ಚ ಸತತಂ ವಿಪುಲವ್ರತಃ ।
ಬ್ರಾಹ್ಮಣಾಃ ಪೂಜಯಂತ್ಯೇನಂ ಪಾಕಯಜ್ಞೇಷು ಪಾವಕಮ್ ॥೨೬॥

ಈ ವಿಶ್ವಭುಕ್‌ನಾಮಕ ಅಗ್ನಿಯು ಬ್ರಹ್ಮಚಾರಿ, ಮನೋನಿಗ್ರಹವುಳ್ಳವನು, ಸತತವಾಗಿ ಬಹಳ ವ್ರತಗಳನ್ನು ಮಾಡುವವನು. ಬ್ರಾಹ್ಮಣರು ಪಾಕಯಜ್ಞಗಳಲ್ಲಿ ಈ ಅಗ್ನಿಯನ್ನು ಪೂಜಿಸುತ್ತಾರೆ.

ಪವಿತ್ರಾ ಗೋಮತೀ ನಾಮ ನದೀ ಯಸ್ಯಾಭವತ್ ಪ್ರಿಯಾ ।
ತಸ್ಮಿನ್ ಕರ್ಮಾಣಿ ಸರ್ವಾಣಿ ಕ್ರಿಯಂತೇ ಕರ್ಮಕರ್ತೃಭಿಃ ॥೨೭॥

ಪವಿತ್ರವಾದ ಗೋಮತೀ ನದಿಯು ಅವನಿಗೆ ಪ್ರಿಯಳಾದಳು. ಕರ್ಮಗಳನ್ನು ಮಾಡುವವರು ಎಲ್ಲ ಕರ್ಮಗಳನ್ನೂ ಈ ಅಗ್ನಿಯಲ್ಲಿಯೇ ಮಾಡುತ್ತಾರೆ.

ವಡವಾಗ್ನಿಃ ಪಿಬತ್ಯಂಭೋ ಯೋಽಸೌ ಪರಮದಾರುಣಃ ।
ಊರ್ಧ್ವಭಾಗೂರ್ಧ್ವಭಾಜ್‌ನಾಮ ಕವಿಃ ಪ್ರಾಣಾಶ್ರಿತಸ್ತು ಯಃ ॥೨೮॥

ಸಮುದ್ರದಲ್ಲಿ ಇರುವ ಪರಮದಾರುಣವಾದ ಜಲಪಾನವನ್ನು ಮಾಡುವ ಅಗ್ನಿಗೆ ವಡವಾಗ್ನಿ ಎಂದು ಹೆಸರು. ದೇಹದ ಊರ್ಧ್ವಭಾಗದಲ್ಲಿ ಪ್ರಾಣಾಶ್ರಿತನಾಗಿರುವ ಅಗ್ನಿಗೆ ಕವಿ ಎಂದೂ, ಊರ್ಧ್ವಭಾಕ್ ಎಂದೂ ಹೆಸರು.

ಉದಗ್ದ್ವಾರಂ ಹವಿರ್ಯಸ್ಯ ಗೃಹೇ ನಿತ್ಯಂ ಪ್ರದೀಯತೇ ।
ತತಃ ಸ್ವಿಷ್ಟಂ ಭವೇದಾಜ್ಯಂ ಸ್ವಿಷ್ಟಕೃತ್ ಪರಮಃ ಸ್ತು ಸಃ ॥೨೯॥

ಯಾವ ಅಗ್ನಿಗೆ ಮನೆಯಲ್ಲಿ ಪ್ರತಿನಿತ್ಯವೂ ಉತ್ತರದ್ವಾರದಲ್ಲಿ ಹವಿಸ್ಸು ಕೊಡಲ್ಪಡುತ್ತದೆಯೋ, ಮತ್ತು ಯಾವನಲ್ಲಿ ಹವಿಸ್ಸನ್ನು ಕೊಟ್ಟರೆ ಮಾಡಿದ ಹೋಮವು ಚೆನ್ನಾಗಿ ಮಾಡಲ್ಪಟ್ಟಂತೆ ಆಗುವುದೋ ಅವನು ಸ್ವಿಷ್ಟಕೃತ್ ನಾಮಕನಾದ ಶ್ರೇಷ್ಠನಾದ ಅಗ್ನಿ.

ಯಃ ಪ್ರಶಾಂತೇಷು ಭೂತೇಷು ಮನ್ಯುರ್ಭವತಿ ಪಾವಕಃ ।
ಮನ್ಯುಮಾನ್ನಾಮ ಭಗವಾನಗ್ನಿರೇವ ಮಹಾಬಲಃ ।

ಶಾಂತರಾದ ಮನುಷ್ಯರಲ್ಲಿ ಮತ್ತು ಪ್ರಾಣಿಗಳಲ್ಲಿ ಕೋಪವನ್ನು ಉಂಟುಮಾಡಲು ಕಾರಣನಾದ ಯಾವ ಅಗ್ನಿ ಇದ್ದಾನೆಯೋ, ಆ ಪೂಜ್ಯನಾದ ಮಹಾಬಲನಾದ ಅಗ್ನಿಗೆ ಮನ್ಯುಮಾನ್ ಎಂದು ಹೆಸರು.

ಆರಣ್ಯಾನಿ ತಥಾ ಗ್ರಾಮ್ಯಾನ್ ಯೋ ದಹನ್ ಸಂಪ್ರಕಾಶತೇ ।
ಸ್ವಯಮುತ್ಪತಿತಃ ಶ್ರೀಮಾನ್ ವೃದ್ಧಿಮಾನ್ನಾಮ ಪಾವಕಃ ।
ಕ್ರೋಧಃ ಸ ತು ಮಹಾತೇಜಾ ವಿಜ್ಞೇಯಃ ಸರ್ವದೇಹಿಷು ॥೩೦॥

ಯಾವ ಅಗ್ನಿಯು ತಾನೇ ಉತ್ಪತಿತನಾಗಿ ಅರಣ್ಯದಲ್ಲಿರುವ ವಸ್ತುಗಳನ್ನೂ, ಗ್ರಾಮದಲ್ಲಿರುವ ವಸ್ತುಗಳನ್ನೂ ದಹಿಸುತ್ತಾ ಪ್ರಕಾಶಿಸುತ್ತಾನೆಯೋ ಆ ಕಾಂತಿಯುಕ್ತನಾದ ಅಗ್ನಿಗೆ ವೃದ್ಧಿಮಾನ್ ಎಂದು ಹೆಸರು. ಮಹಾತೇಜಸ್ವಿಯಾದ ಅವನಿಗೆ ಕ್ರೋಧ ಎಂದೂ ಹೆಸರು. ಅವನು ಎಲ್ಲಾ ದೇಹಗಳಲ್ಲಿಯೂ ಇರುತ್ತಾನೆಂದು ತಿಳಿಯಬೇಕು.

ಕ್ರೋಧಸ್ಯ ತು ರಜೋ ಜಜ್ಞೇ ಮಥ್ನತೀ ಚಾಪಿ ಪುತ್ರಿಕಾ ।
ಹಾಹೇತಿ ದಾರುಣಾ ಕ್ರುದ್ಧಾ ಸರ್ವಭೂತೇಷು ತಿಷ್ಠತಿ ॥೩೧॥

ಕ್ರೋಧನಿಗೆ ರಜ ಎಂಬ ಮಗನೂ, ಮಥ್ನತೀ ಎಂಬ ಮಗಳೂ ಜನಿಸಿದರು. ಆ ಮಥ್ನತೀ ಎಂಬ ಮಗಳು ದಾರುಣಳೂ ಕ್ರೂರಳೂ ಆಗಿದ್ದು ಪ್ರಾಣಿಗಳಲ್ಲಿ ಹಾಹಾಕಾರವನ್ನು ಉಂಟುಮಾಡುವವಳಾಗಿ ಸರ್ವಪ್ರಾಣಿಗಳಲ್ಲಿಯೂ ಇರುತ್ತಾಳೆ.

ತ್ರಿದಿವೇ ಯಸ್ಯ ಸದೃಶೋ ನಾಸ್ತಿ ರೂಪೇಣ ಕಶ್ಚನ ।
ಅತುಲತ್ವಾತ್ ಕೃತೋ ದೇವೈರ್ನಾಮ್ನಾ ಕಾಮಸ್ತು ಪಾವಕಃ ॥೩೨॥

ದೇವತೆಗಳಲ್ಲಿ ಯಾರ ರೂಪಕ್ಕೆ ಸದೃಶವಾದ ರೂಪವಿಲ್ಲವೋ ಅಂತಹ ಅಸದೃಶ ರೂಪವುಳ್ಳ ಅಗ್ನಿಗೆ ದೇವತೆಗಳು ಕಾಮ ಎಂದು ನಾಮಕರಣ ಮಾಡಿದರು.

ಸಂಹರ್ಷಾದ್ ಧಾರಯನ್ ಕ್ರೋಧಂ ಧನ್ವೀ ಸ್ರಗ್ವೀ ರಥೇ ಸ್ಥಿತಃ ।
ಸಮರೇ ನಾಶಯೇಚ್ಛತ್ರೂನಮೋಘೋ ನಾಮ ಪಾವಕಃ ॥೩೩॥

ಯಾರು ಸಂತೋಷವನ್ನೂ ಮತ್ತು ಕ್ರೋಧವನ್ನೂ ಧರಿಸಿ (ಸಂತೋಷದಿಂದ ಕ್ರೋಧವನ್ನು ಧರಿಸಿ) ಧನುಸ್ಸನ್ನು ಹಿಡಿದು ಮಾಲೆಯನ್ನು ಧರಿಸಿ ರಥದಲ್ಲಿ ಕುಳಿತು ಯುದ್ಧದಲ್ಲಿ ಶತ್ರುಗಳನ್ನು ನಾಶಮಾಡುತ್ತಾನೆಯೋ ಆ ಅಗ್ನಿಗೆ ಅಮೋಘ ಎಂದು ಹೆಸರು.

ಉಕ್ಥೋ ನಾಮ ಮಹಾಭಾಗ ತ್ರಿಭಿರುಕ್ಥೈರಭಿಷ್ಟುತಃ ।
ಮಹಾವಾಚಂ ತ್ವಜನಯತ್ ಸಮಾಶ್ವಾಸಂ ಹಿ ಯಂ ವಿದುಃ ॥೩೪॥

ಎಲೈ ಮಹಾನುಭಾವನೇ, ಉಕ್ಥ ಎಂಬ ಅಗ್ನಿಯು ಮೂರುವೇದದ ಉಕ್ಥಗಳಿಂದ ಸ್ತೋತ್ರವಾಡಲ್ಪಡುತ್ತಾನೆ. ಯಾವ ಅಗ್ನಿಯು ಮಹಾವಾಕ್ಯಗಳನ್ನು ಉಂಟುಮಾಡುತ್ತಾನೆಯೋ ಅವನನ್ನು ಸಮಾಶ್ವಾಸ ಎಂದು ಕರೆಯುತ್ತಾರೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ನವಾಧಿಕದ್ವಿಶತಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಆಂಗಿರಸೇ ದ್ವಿತಿಯೋಽಧ್ಯಾಯಃ

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಒಂಬತ್ತನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಹತ್ತನೆಯ ಅಧ್ಯಾಯ

ಮಾರ್ಕಂಡೇಯರಿಂದ ಪಾಂಚಜನ್ಯ ಅಗ್ನಿಯ ಉತ್ಪತ್ತಿ ಮತ್ತು ಅವನ ವಂಶದ ಕಥನ.

ಮಾರ್ಕಂಡೇಯಃ

ಕಾಶ್ಯಪೋ ಹ್ಯಥ ವಾಸಿಷ್ಠಃ ಪ್ರಾಣಶ್ಚ ಪ್ರಾಣಪುತ್ರಕಃ ।
ಅಂಗಿರಾಂಗಿರಸಶ್ಚೈವ ಚ್ಯವನಶ್ಚ ಸುವರ್ಚಕಃ ॥೦॥

ಅಚರಂತ ತಪಸ್ತೀವ್ರಂ ಪುತ್ರಾರ್ಥೇ ಬಹುವಾರ್ಷಿಕಮ್ ।
ಪುತ್ರಂ ಲಭೇಮ ಧರ್ಮಿಷ್ಠಂ ಯಶಸಾ ಬ್ರಹ್ಮಣಾ ಸಮಮ್ ॥೨॥

ಮಾರ್ಕಂಡೇಯ– ಕಾಶ್ಯಪ, ವಸಿಷ್ಠ ವಂಶದ ಭೃಹದ್ವತ, ಪ್ರಾಣಪುತ್ರನಾದ ಪ್ರಾಣ, ಅಂಗಿರಸರ ಪುತ್ರರಾದ ಅಂಗಿರಸರು ಮತ್ತು ಚ್ಯವನಪುತ್ರರಾದ ಸುವರ್ಚರು, ಧರ್ಮಿಷ್ಠನಾದ ಕೀರ್ತಿಯಿಂದ ಬ್ರಹ್ಮನಿಗೆ ಸಮನಾದ ಪುತ್ರನನ್ನು ಪಡೆಯೋಣವೆಂದು ಪುತ್ರಾರ್ಥವಾಗಿ ಅನೇಕ ವರ್ಷಗಳ ಕಾಲ ತೀವ್ರವಾದ ತಪಸ್ಸನ್ನು ಆಚರಿಸಿದರು.

ಮಹಾವ್ಯಾಹೃತಿಭಿರ್ಧ್ಯಾತಃ ಪಂಚಭಿಸ್ತೈಸ್ತದಾ ತ್ವಥ ।
ಜಜ್ಞೇ ತೇಜೋ ಮಹಾರ್ಚಿಷ್ಮಾನ್ ಪಂಚವರ್ಣಃ ಪ್ರಭಾವನಃ ॥೩॥

ಸಮಿದ್ಧೋಽಗ್ನಿಃ ಶಿರಸ್ತಸ್ಯ ಬಾಹೂ ಸೂರ್ಯನಿಭೌ ತಥಾ ।
ತ್ವಙ್ನೇತ್ರೇ ಚ ಸುವರ್ಣಾಭೇ ಕೃಷ್ಣೇ ಜಂಘೇ ಚ ಭಾರತ ॥೪॥

ಆಗ ಐದುಜನರಿಂದಲೂ ಮಹಾವ್ಯಾಹೃತಿ ಮಂತ್ರಗಳಿಂದ ಧ್ಯಾತನಾದ ಅಗ್ನಿಯು, ಪಂಚವರ್ಣದಿಂದ ಕೂಡಿದವನಾಗಿ ಸೃಷ್ಟಿಯನ್ನು ಮಾಡುವವನಾಗಿ ಸಮಿದ್ದಾಗ್ನಿಯಾಗಿ ಜನಿಸಿದನು. ಆ ಅಗ್ನಿಗೆ ಸಮಿದ್ದವಾದ ಅಗ್ನಿಯೇ ಶಿರಸ್ಸು. ಬಾಹುಗಳು ಸೂರ್ಯನ ಕಾಂತಿಯನ್ನು ಪಡೆದವುಗಳು. ಚರ್ಮ ಮತ್ತು ನೇತ್ರಗಳು ಸುವರ್ಣದ ಕಾಂತಿಯಿಂದ ಕೂಡಿದ್ದವು. ಎಲೈ ಭಾರತನೇ, ಜಂಘೆಗಳು ಕೃಷ್ಣವರ್ಣದಿಂದ ಕೂಡಿದ್ದವು.

ಪಂಚವರ್ಣಃ ಸ ತಪಸಾ ಕೃತಸ್ತೈಃ ಪಂಚಭಿರ್ಜನೈಃ ।
ಪಾಂಚಜನ್ಯಃ ಶ್ರು(ಸು)ತೋ ದೇವಃ ಪಂಚವಂಶಕರಸ್ತು ಸಃ ॥೫॥

ಆ ಐದುಜನರ ತಪಸ್ಸಿನಿಂದ ಅವನು ಐದುವರ್ಣದಿಂದ ಕೂಡಿದವನಾಗಿ ಮಾಡಲ್ಪಟ್ಟನು. ಅವನಿಗೆ ಪಾಂಚಜನ್ಯ ಎಂದು ಹೆಸರಾಯಿತು (ತಪಸ್ಸೆಂದೂ ಅವನ ಹೆಸರು). ಅವನು ಈ ಐದುಜನರ ವಂಶಗಳನ್ನು ಮುಂದುವರೆಸುವವನಾದನು.

ದಶವರ್ಷಸಹಸ್ರಾಣಿ ತಪಸ್ತಪ್ತ್ವಾ ಮಹಾತಪಾಃ ।
ಜನಯತ್ ಪಾವಕಂ ಘೋರಂ ಪಿತೄಣಾಂ ಸ ಪ್ರಜಾಃ ಸೃಜನ್ ॥೬॥

ಪಿತೃಗಳಿಗೆ ಪ್ರಜೆಗಳನ್ನು ಸೃಷ್ಟಿಸುವವನಾಗಿ ಮಹಾತಪಸ್ವಿಯಾದ ಅವನು ಹತ್ತುಸಾವಿರ ವರ್ಷಗಳ ಕಾಲ ತಪಸ್ಸನ್ನು ಮಾಡಿ ಘೋರವಾದ ಅಗ್ನಿಯನ್ನು ಉತ್ಪಾದಿಸಿದನು.

ಬೃಹದ್ರಥಂತರಂ ಮೂರ್ಧ್ನೋ ವಕ್ತ್ರಾದ್ವಾ ತರಸಾಹರೌ ।
ಶಿವಂ ನಾಭ್ಯಾಂ ಬಲಾದಿಂದ್ರಂ ವಾಯ್ವಗ್ನೀ ಪ್ರಾಣತೋಽಸೃಜತ್ ॥೭॥

ಅವನು ತನ್ನ ಶಿರಸ್ಸಿನಿಂದ ಬೃಹದ್ರಥಂತರಗಳನ್ನೂ, ತನ್ನ ಮುಖದಿಂದ ವಾಯು ವರುಣರನ್ನೂ, ನಾಭಿಯಿಂದ ಶಿವನನ್ನೂ, ಬಲದಿಂದ ಇಂದ್ರನನ್ನೂ, ಪ್ರಾಣದಿಂದ ವಾಯ್ವಗ್ನಿಗಳನ್ನೂ ಸೃಷ್ಟಿಸಿದನು.

ಬಾಹುಭ್ಯಾಮನುದಾತ್ತೇ ಚ ವಿಶ್ವೇ ಭೂತಾನಿ ಚೈವ ಹ ।
ಏತಾನ್ ಸೃಷ್ಟ್ವಾ ತತಃ ಪಂಚ ಪಿತೄಣಾಮಸೃಜತ್ ಸುತಾನ್ ॥೮॥

ಬಾಹುಗಳಿಂದ ಉದಾತ್ತ ಅನುದಾತ್ತಗಳನ್ನೂ ಮತ್ತು ಎಲ್ಲಾ ಪ್ರಾಣಿಗಳನ್ನೂ ಸೃಷ್ಟಿಸಿದನು. ಅನಂತರ ತನ್ನ ಪಿತೃಗಳಿಗಾಗಿ ಪಂಚಪುತ್ರರನ್ನು ಸೃಷ್ಟಿಸಿದನು.

ಬೃಹದ್ರಥಸ್ಯ ಪ್ರಣಿಧಿಃ ಕಾಶ್ಯಪಸ್ಯ ಬೃಹತ್ತರಃ ।
ಭಾನುಃ ಅಂಗಿರಸೋ ಧೀರಃ ಪುತ್ರೋ ವರ್ಚಸ್ಯ ಸೌಭರಃ ।
ಪ್ರಾಣಸ್ಯ ಚಾನುದಾತ್ತಸ್ತು ಪ್ರಖ್ಯಾತಾಃ ಪಂಚವಂಶಜಾಃ ॥೯॥

ಬೃಹದ್ರಥನಿಗೆ ಪ್ರಣಿಧಿ, ಕಾಶ್ಯಪನಿಗೆ ಬೃಹತ್ತರ, ಅಂಗಿರಸನಿಗೆ ಧೀರನಾದ ಭಾನು, ಸುವರ್ಚನಿಗೆ ಸೌಭರ, ಪ್ರಾಣನಿಗೆ ಅನುದಾತ್ತ ಇವರು ಪಂಚವಂಶಜರೆಂದು ಹೇಳಲ್ಪಡುತ್ತಾರೆ.

ದೇವಾನ್ ಯಜ್ಞಮುಷಶ್ಚಾನ್ಯಾನಸೃಜತ್ ಪಂಚದಶೋತ್ತರಾನ್ ॥೧೦॥

ಸಭೀಮಮತಿಭೀಮಂ ಚ ಭೀಮಂ ಭೀಮಬಲಾಬಲಮ್ ।
ಏತಾನ್ ಯಜ್ಞಮುಷಃ ಪಂಚ ದೇವಾನಪ್ಯಸೃಜತ್ ತಪಃ ॥೧೧॥

ಯಜ್ಞಚೋರರಾದ ದೇವತೆಗಳನ್ನೂ ಮತ್ತು ಇನ್ನೂ ಬೇರೆ ದೇವತೆಗಳನ್ನೂ ಒಟ್ಟು ಹದಿನೈದು ದೇವತೆಗಳನ್ನು ಸೃಷ್ಟಿಸಿದನು. ತಪೋನಾಮಕನಾದ ಪಾಂಚಜನ್ಯನು ಸುಭೀಮ, ಅತಿಭೀಮ, ಭೀಮ, ಭೀಮಬಲ ಮತ್ತು ಅಬಲ ಎಂಬ ಯಜ್ಞವನ್ನು ಅಪಹರಿಸುವ ಐದು ದೇವತೆಗಳನ್ನು ಸೃಷ್ಟಿಸಿದನು.

ಸುಮಿತ್ರಂ ಮಿತ್ರವಂತಂ ಚ ಮಿತ್ರಜ್ಞಂ ಮಿತ್ರವರ್ಧನಮ್ ।
ಮಿತ್ರಧರ್ಮಾಣಮಿತ್ಯೇತಾನ್ ದೇವಾನಪ್ಯಸೃಜತ್ ತತಃ ॥೧೨॥

ಅನಂತರ ಸುಮಿತ್ರ , ಮಿತ್ರವಂತ, ಮಿತ್ರಜ್ಞ , ಮಿತ್ರವರ್ಧನ, ಮಿತ್ರಧರ್ಮ ಎಂಬ ಐದುದೇವತೆಗಳನ್ನು ಸೃಷ್ಟಿಸಿದನು.

ಸುರಪ್ರವೀರಂ ವೀರಂ ಚ ಸುಕೇಶಂ ಚ ಸುವರ್ಚಸಮ್ ।
ಸುರಾಣಾಮಪಿ ಹಂತಾರಂ ಪಂಚೈತಾನುಸೃಚತ್ ತಪಃ (ತತಃ) ॥೧೩॥

ತಪೋನಾಮಕನಾದ ಅವನು ಸುರಪ್ರವೀರ, ವೀರ, ಸುಕೇಶ, ಸುವರ್ಚ, ಸುರಹಂತಾ ಎಂಬ ಐವರನ್ನೂ ಸೃಷ್ಟಿಸಿದನು.

ತ್ರಿವಿಧಂ ಸಂಸ್ಥಿತಾ ಹ್ಯೇತೇ ಪಂಚ ಪಂಚ ಪೃಥಕ್‌ಪೃಥಕ್ ।
ಮುಷ್ಣಂತ್ಯತ್ರ ಸ್ಥಿತಾ ಹ್ಯೇತೇ ಸ್ವರ್ಗತೋ ಯಜ್ಞಯಾಜಿನಃ ॥೧೪॥

ಈ ಮೂರು ಐದ್ಯೆದುಜನರ ಗುಂಪುಗಳು ಪ್ರತ್ಯೇಕವಾಗಿರುತ್ತವೆ. ಅವರು ಇಲ್ಲಿ ಭೂಮಿಯಲ್ಲಿಯೇ ಇದ್ದು ಯಜ್ಞವನ್ನು ಮಾಡಿ ಸ್ವರ್ಗಕ್ಕೆ ಹೋದವರನ್ನು ಸ್ವರ್ಗದಿಂದ ಅಪಹರಿಸುತ್ತಾರೆ.

ತೇಷಾಮಿಷ್ಟಂ ಹರಂತ್ಯೇತೇ ನಿಘ್ನಂತಿ ಚ ಮಹದ್ದವಿಃ ।
ಸ್ಪರ್ಧಯಾ ಹವ್ಯವಾಹಾನಾಂ ನಿಘ್ನಂತ್ಯೇತೇ ಹರಂತಿ ಚ ॥೧೫॥

ಅವರ ಇಷ್ಟವನ್ನು ಅಪಹಾರ ಮಾಡುತ್ತಾರೆ. ಅವರ ಶ್ರೇಷ್ಠವಾದ ಹವಿಸ್ಸನ್ನು ನಾಶಪಡಿಸುತ್ತಾರೆ. ಸಾತ್ವಿಕದೇವತೆಗಳಾದ ಅಗ್ನಿಗಳ ಮೇಲಿನ ಸ್ಪರ್ಧೆಯಿಂದ ಇವರು ನಾಶವನ್ನು ಮತ್ತು ಚೌರ್ಯವನ್ನೂ ಮಾಡುತ್ತಾರೆ.

ಬಹಿರ್ವೇದ್ಯಾಂ ತದಾದಾನಂ ಕುಶಲೈಃ ಸಂಪ್ರವರ್ತಿತಮ್ ।
ತದೈತೇ ನೋಪಸರ್ಪಂತಿ ಯತ್ರ ಚಾಗ್ನಿಃ ಸ್ಥಿತೋ ಭವೇತ್ ॥೧೬॥

ಇವರಿಗೆ ವೇದಿಕೆಯ ಹೊರಗಡೆಯಲ್ಲಿಯೇ ಬಲ್ಯಾದಿಗಳನ್ನು ಕೊಡುವುದು ನಿಪುಣರಿಂದ ಪ್ರವರ್ತಿತವಾಗಿದೆ. ಆಗ ಇವರು ಅಗ್ನಿ ಇರುವಲ್ಲಿಗೆ ಪ್ರವೇಶಿಸುವುದಿಲ್ಲ.

ಚಿತೋಽಗ್ನಿರುದ್ದಹನ್ ಯಜ್ಞಂ ಪಕ್ಷಾಭ್ಯಾಂ ತಾನ್ ಪ್ರಬಾಧತೇ ।
ಮಂತ್ರೈಃ ಪ್ರಶಮಿತಾ ಹ್ಯೇತೇ ನಮುಷ್ಣಂತಿ ಚ ಯಜ್ಞಿಯಮ್ ॥೧೭॥

ಚಯನ ಮಾಡಲ್ಪಟ್ಟ ಅಗ್ನಿಯು ಪಕ್ಷಿರೂಪವನ್ನು ತಾಳಿ ಯಜ್ಞವನ್ನು ನಿರ್ವಹಿಸುತ್ತಾ ತನ್ನ ರೆಕ್ಕೆಗಳಿಂದ ಅವರನ್ನು ಬಾಧಿಸುತ್ತಾನೆ. ಮಂತ್ರಗಳಿಂದ ಶಾಂತಗೊಳಿಸಲ್ಪಟ್ಟ ಇವರು ಆಗ ಯಜ್ಞದ ಶುಭಫಲವನ್ನಾಗಲೀ, ಯಜ್ಞಸಂಬಂಧಿಯಾದ ವಸ್ತುವನ್ನಾಗಲೀ ಕದಿಯುವುದಿಲ್ಲ.

ಬೃಹದುಕ್ಥಸ್ತಪಸ್ಯೇವ ಪುತ್ರೋ ಭೂಮಿಮುಪಾಶ್ರಿತಃ ।
ಅಗ್ನಿಹೋತ್ರೇ ಹೂಯಮಾನೇ ಪೃಥಿವ್ಯಾಂ ಸದ್ಭಿರಿಜ್ಯತೇ ॥೧೮॥

ಬೃಹದುಕ್ಥನು ತಪಃನಾಮಕನಾದ ಇದೇ ಅಗ್ನಿಯ ಪುತ್ರನಾಗಿ ಭೂಮಿಯನ್ನು ಆಶ್ರಯಿಸಿಕೊಂಡಿರುತ್ತಾನೆ. ಅಗ್ನಿಹೋತ್ರವನ್ನು ಮಾಡುವಾಗ ಸಜ್ಜನರು ಇವನಿಗೆ ಭೂಮಿಯಲ್ಲಿ ಪೂಜೆಯನ್ನು ಸಲ್ಲಿಸುತ್ತಾರೆ.

ರಥಂತರಶ್ಚ ತಪಸಃ ಪುತ್ರೋಽಗ್ನಿಃ ಪರಿಪಠ್ಯತೇ ।
ಮಿತ್ರವಿಂದಾಯ ವೈ ತಸ್ಯ ಹವಿರಧ್ವರ್ಯವೋ ವಿದುಃ ॥೧೯॥

ರಥಂತರ ಎಂಬುವನು ತಪೋನಾಮಕ ಅಗ್ನಿಯ ಇನ್ನೊಬ್ಬ ಪುತ್ರನೆಂದು ಹೇಳಲ್ಪಡುತ್ತಾನೆ (ತಪಸ್ಸೆಂಬ ಸಕಾರಾಂತ ಶಬ್ದವೂ ತಪಃ ಎಂಬ ಅಕಾರಾಂತ ಶಬ್ದವೂ ಈ ಪಾಂಚಜನ್ಯ ಅಗ್ನಿಯನ್ನೇ ಹೇಳುತ್ತದೆ). ಅವನಿಗೆ ಕೊಡುವ ಹವಿಸ್ಸು ಮಿತ್ರಲಾಭ ಪ್ರಯೋಜನವುಳ್ಳದ್ದೆಂದು ತಿಳಿಯುತ್ತಾರೆ.

ಏತೈಃ ಸಹ ಮಹಾಭಾಗ ತಪಸ್ತೇಜಸ್ವಿಭಿರ್ನೃಪ ।
ಮುಮುದೇ ಪರಮಪ್ರೀತಃ ಸಹ ಪುತ್ರೈರ್ಮಹಾಯಶಾಃ ॥೨೦॥

ಎಲೈ ಮಹಾನುಭಾವನೇ, ರಾಜನೇ, ಮಹಾಕೀರ್ತಿವಂತನಾದ ಪಾಂಚಜನ್ಯಾಗ್ನಿಯು ತಪಸ್ಸಿನಿಂದ ಸಂಪಾದಿಸಿದ ತೇಜಸ್ಸಿನಿಂದ ಕೂಡಿದ ಈ ಪುತ್ರರ ಜೊತೆಯಲ್ಲಿ ಪರಮತೃಪ್ತಿಯನ್ನು ಹೊಂದಿದವನಾಗಿ ಸಂತೋಷಪಡುತ್ತಾನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದಶಾಧಿಕದ್ವಿಶತಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಆಂಗಿರಸೇ ತೃತೀಯೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹತ್ತನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಹನ್ನೊಂದನೆಯ ಅಧ್ಯಾಯ

ಮಾರ್ಕಂಡೇಯರಿಂದ ವಿಸ್ತಾರವಾಗಿ ಅಗ್ನಿಗಳ ವಂಶ ಮತ್ತು ಗುಣಗಳ ಕಥನ.

ಮಾರ್ಕಂಡೇಯಃ

ಗುರುಭಿರ್ನಿಯಮೈರ್ಯುಕ್ತೋ ಭರತೋ ನಾಮ ಪಾವಕಃ ।
ಅಗ್ನಿಃ ಪುಷ್ಟಿಪತಿರ್ನಾಮ ತುಷ್ಟಃ ಪುಷ್ಟಿಂ ಪ್ರಯಚ್ಛತಿ ॥೧॥

ಮಾರ್ಕಂಡೇಯ– ಭರತನೆಂಬ ಅಗ್ನಿಯು ದೊಡ್ಡ ನಿಯಮಗಳನ್ನು ಆಚರಿಸುವವನು. ಪುಷ್ಟಿಪತಿ ಎಂಬ ಅಗ್ನಿಯು ಸಂತುಷ್ಟನಾಗಿ ಪುಷ್ಟಿಯನ್ನು ಕೊಡುವವನು.

ಭರತ್ಯೇಷ ಪ್ರಜಾಃ ಸರ್ವಾಸ್ತತೋ ಭರತ ಉಚ್ಯತೇ ।
ಸತತಂ ಭರತಶ್ರೇಷ್ಠ ಪಾವಕೋವೈ ಮಹಾಪ್ರಭಃ ॥೨॥

ಭರತನೆಂಬ ಅಗ್ನಿಯು ಎಲ್ಲಾ ಪ್ರಜೆಗಳನ್ನು ಸತತವಾಗಿ ಭರಣ (ಪೋಷಣ) ಮಾಡುತ್ತಾನೆ. ಆದ್ದರಿಂದಲೇ ಅವನಿಗೆ ಭರತ ಎಂದು ಹೆಸರು. ಎಲೈ ಭರತಶ್ರೇಷ್ಠನೇ, ಈ ಅಗ್ನಿಯು ಮಹಾಕಾಂತಿಯುಳ್ಳವನು.

ಅಗ್ನಿರ್ಯಶ್ಚ ಶಿವೋ ನಾಮ ಶಕ್ತಿಪೂಜಾಪರಶ್ಚ ಸಃ ।
ದುಃಖಾರ್ತಾನಾಂ ಚ ಸರ್ವೇಷಾಂ ಶಿವಕೃತ್ ಸತತಂ ಶಿವಃ ॥೩॥

ಶಿವನಾಮಕ ಅಗ್ನಿಯು ಶಕ್ತಿಪೂಜಾ ನಿರತನಾಗಿರುತ್ತಾನೆ. ಅವನು ದುಃಖದಿಂದ ಬಳಲಿದ ಎಲ್ಲರಿಗೂ ಶುಭವನ್ನು ಉಂಟುಮಾಡುತ್ತಾನೆ.

ತಪಸಸ್ತು ಫಲಂ ದೃಷ್ಟ್ವಾ ಸಂಪ್ರವೃದ್ಧಂ ತಪೋಮಯಮ್ ।
ಉದ್ದರ್ತುಕಾಮೋ ಮತಿಮಾನ್ ಪುತ್ರೋ ಜಜ್ಞೇ ಪುರಂದರಃ ॥೪॥

ತಪೋನಾಮಕ ಅಗ್ನಿಯ ವಂಶವು ಸಮೃದ್ಧವಾಗಿ ಬೆಳೆದು ತಪೋನಿಷ್ಠವಾಗಿರುವುದನ್ನು ನೋಡಿ ಮೇಧಾವಿಯಾದ ಇಂದ್ರನು ತನ್ನ ಉದ್ಧಾರವನ್ನು ಬಯಸಿ ಅವನಿಗೆ ಪುತ್ರನಾಗಿ ಜನಿಸಿದನು.

ಊಷ್ಮಾ ಚೈವೋಷ್ಮಣೋ ಜಜ್ಞೇ ಸೋಽಗ್ನಿರ್ಭೂತೇಷು ಲಕ್ಷ್ಯತೇ ।
ಅಗ್ನಿಶ್ಚಾಪಿ ಮನುರ್ನಾಮ ಪ್ರಾಜಾಪತ್ಯಮಕಾರಯತ್ ॥೫॥

ತಪೋನಾಮಕ ಅಗ್ನಿಯ ಉಷ್ಣಸ್ಪರ್ಶದಿಂದ ಊಷ್ಮನಾಮಕ ಅಗ್ನಿಯು ಜನಿಸಿದನು. ಈ ಅಗ್ನಿಯು ಎಲ್ಲಾ ಪ್ರಾಣಿಗಳಲ್ಲಿ ಉಷ್ಣಸ್ಪರ್ಶರೂಪದಲ್ಲಿ ಕಾಣಿಸಿಕೊಳ್ಳುತ್ತಾನೆ. ಮನುನಾಮಕ ಅಗ್ನಿಯು ತಪೋನಾಮಕ ಅಗ್ನಿಯ ಇನ್ನೊಬ್ಬ ಪುತ್ರ. ಅವನು ಪ್ರಜೆಗಳ ಪಾಲನೆಯನ್ನು ಮಾಡುತ್ತಾನೆ.

ಶಂಭುಮಗ್ನಿಮಥ ಪ್ರಾಹುರ್ಬ್ರಾಹ್ಮಣಾ ವೇದಪಾರಗಾಃ ।
ಆವಸಥ್ಯಂ ದ್ವಿಜಂ ಪ್ರಾಹುರ್ದೀಪ್ತಮಗ್ನಿಂ ಮಹಾಪ್ರಭಮ್ ॥೬॥

ವೇದಪಾರಂಗತರಾದ ಬ್ರಾಹ್ಮಣರು ಶಂಭುನಾಮಕ ಅಗ್ನಿಯನ್ನು (ಇನ್ನೊಬ್ಬ ಪುತ್ರನೆಂದು) ಹೇಳುತ್ತಾರೆ. ದೀಪ್ತನಾದ ಮಹಾಪ್ರಭೆಯುಳ್ಳ ಔಪಾಸನಾಗ್ನಿಯನ್ನು ದ್ವಿಜನಾಮಕನೆಂದು ಹೇಳುತ್ತಾರೆ.

ಊರ್ಜಸ್ಕರಾನ್ ಹವ್ಯವಾಹಾನ್ ಸುವರ್ಣಸದೃಶಪ್ರಭಾನ್ ।
ತತಸ್ತಪೋ ಹ್ಯಜನಯತ್ ಪಂಚ ಯಜ್ಞಸುತಾನಿಹ ॥೭॥

ಅನಂತರ ತಪೋನಾಮಕ ಅಗ್ನಿಯು ದೇವಾನ್ನವನ್ನು ಮಾಡುವ ಹವ್ಯವನ್ನು ಸಾಗಿಸುವ ಐದುಜನ ಯಜ್ಞಸಂಬಂಧಿಪುತ್ರರನ್ನು ಪಡೆದನು. ಅವರು ಸುವರ್ಣ ಕಾಂತಿಯುಳ್ಳವರು.

ಪ್ರಶಾಂತೋಽಗ್ನಿರ್ಮಹಾಭಾಗ ಪರಿಶ್ರಾಂತೋ ಗವಾಂಪತಿಃ ।
ಅಸುರಾನ್ ಜನಯನ್ ಘೋರಾನ್ಮರ್ತ್ಯಾಂಶ್ಚೈವ ಪೃಥಗ್ವಿಧಾನ್ ॥೮॥

ಎಲೈ ಮಹಾನುಭಾವನೇ, ಪ್ರಶಾಂತ, ಪರಿಶ್ರಾಂತ ಮತ್ತು ಗೋಪತಿ ಎಂಬ ಅಗ್ನಿಗಳು ಘೋರರಾದ ಅಸುರರನ್ನೂ, ಅನೇಕ ವಿಧವಾದ ಮನುಷ್ಯರನ್ನೂ ಪಡೆದರು.

ತಪಸಶ್ಚ ಮನುಃ ಪುತ್ರೋ ಭಾನುಂ ಚಾಪ್ಯಂಗಿರಾಃ ಸೃಜತ್ ।
ಬೃಹದ್ಭಾನುಂ ತು ತಂ ಪ್ರಾಹುರ್ಬ್ರಾಹ್ಮಣಾ ವೇದಪಾರಗಾಃ ॥೯॥

ತಪೋನಾಮಕ ಅಗ್ನಿಗೆ ಮನುನಾಮಕ ಅಗ್ನಿಯು ಇನ್ನೊಬ್ಬ ಪುತ್ರ. ಅಂಗಿರಾ ನಾಮಕ ಅಗ್ನಿಯು ಭಾನುವನ್ನು ಪುತ್ರನನ್ನಾಗಿ ಪಡೆದನು. ವೇದಪಾರಂಗತರಾದ ಬ್ರಾಹ್ಮಣರು ಇವನನ್ನು ಬೃಹದ್ಭಾನು ಎಂದೂ ಕರೆಯುತ್ತಾರೆ.

ಭಾನೋರ್ಭಾರ್ಯಾ ಸುಪ್ರಜಾ ತು ಬೃಹದ್ಭಾಸಾ ತು ಸೋಮಜಾ ।
ಅಸೃಜೇತಾಂ ತು ತೇಪುತ್ರಾನ್ ಶೃಣು ತೇಷಾಂ ಪ್ರಜಾವಿಧಿಮ್ ॥೧೦॥

ಚಂದ್ರನ ಮಕ್ಕಳಾದ ಸುಪ್ರಜಾ ಮತ್ತು ಬೃಹದ್ಭಾಸಾ ಎಂಬುವವರು ಭಾನುವಿನ ಪತ್ನಿಯರು. ಅವರಿಬ್ಬರೂ ಅನೇಕ ಪುತ್ರರನ್ನು ಪಡೆದರು. ಅವರ ವಂಶವನ್ನು ಕೇಳು.

ದುರ್ಬಲಾನಾಂ ತು ಭೂತಾನಾಮಸೂನ್ಯಃ ಪಂಪ್ರಯಚ್ಛತಿ ।
ತಮಗ್ನಿಂ ಬಲದಂ ಪ್ರಾಹುಃ ಪ್ರಥಮಂ ಭಾನುತಃ ಸುತಮ್ ॥೧೧॥

ದುರ್ಬಲರಾದ ಮನುಷ್ಯರಿಗೆ ಮತ್ತು ಪ್ರಾಣಿಗಳಿಗೆ ಯಾವನು ಪ್ರಾಣಗಳನ್ನು ಕೊಡುತ್ತಾನೆಯೋ ಅವನನ್ನು ಬಲದ ಎಂದು ಕರೆಯುತ್ತಾರೆ. ಅವನು ಭಾನುವಿನ ಪ್ರಥಮ ಪುತ್ರ.

ಯಃ ಪ್ರಶಾಂತೇಷು ಭೂತೇಷು ಮನ್ಯುರ್ಭವತಿ ದಾರುಣಃ ।
ಅಗ್ನಿಃ ಸ ಮನ್ಯುಮಾನ್ನಾಮ ದ್ವಿತೀಯೋ ಭಾನುತಃ ಸುತಃ ॥೧೨॥

ಪ್ರಶಾಂತವಾದ ಪ್ರಾಣಿಗಳು ಮತ್ತು ಮನುಷ್ಯರಲ್ಲಿ ದಾರುಣವಾದ ಕೋಪವು ಉಂಟಾಗುವುದಕ್ಕೆ ಕಾರಣನಾದವನು ಮನ್ಯುಮಾನ್ ಎಂಬ ಅಗ್ನಿ. ಅವನು ಭಾನುವಿನ ಎರಡನೆಯ ಪುತ್ರ.

ದರ್ಶೇ ಚ ಪೌರ್ಣಮಾಸೇ ಚ ಯಸ್ಯೇಹ ಹವಿರುಚ್ಯತೇ ।
ವಿಷ್ಣುನಾ ಸಹ ಯೋऽಗ್ನಿಸ್ತು ಧೃತಿಮಾನ್ನಾಮ ಸೋऽಂಗಿರಾಃ ॥೧೩॥

ದರ್ಶಪೂರ್ಣಮಾಸಗಳಲ್ಲಿ ಯಾವ ಅಗ್ನಿಗೆ ವಿಷ್ಣುವಿನ ಜೊತೆಯಲ್ಲಿ ಹವಿಸ್ಸು ಸಲ್ಲುತ್ತದೆಯೋ ಅವನಿಗೆ ಧೃತಿಮಾನ್ ಎಂದು ಹೆಸರು. ಅವನು ಅಂಗಿರಸರ ವಂಶಕ್ಕೆ ಸೇರಿದವನು.

ಇಂದ್ರೇಣ ಸಹಿತಂ ಯಸ್ಯ ಹವಿರಾಗ್ರಯಣಂ ಸ್ಮೃತಮ್ ।
ಅಗ್ನಿರಾಗ್ರಯಣೋ ನಾಮ ಭಾನೋರೇವಾನ್ವಯಸ್ತು ಸಃ ॥೧೪॥

ಯಾವ ಅಗ್ನಿಗೆ ಇಂದ್ರನ ಜೊತೆಯಲ್ಲಿ ಆಗ್ರಯಣ ಹವಿಸ್ಸು ಸಲ್ಲುತ್ತದೆಯೋ ಅವನಿಗೆ ಆಗ್ರಯಣ ಎಂದೇ ಹೆಸರು. ಅವನು ಭಾನುವಿನ ವಂಶಕ್ಕೆ ಸೇರಿದವನು.

ಚಾತುರ್ಮಾಸ್ಯೇಷು ನಿತ್ಯಾನಾಂ ಹವಿಷಾಂ ಯೋ ನಿರಗ್ರಹಃ ।
ಚತುರ್ಭಿಃ ಸಹಿತಃ ಪುತ್ರೈರ್ಭಾನೋರೇವಾನ್ವಯಃ ಸ್ಮೃತಃ ॥೧೫॥

ಚಾತುರ್ಮಾಸ್ಯದಲ್ಲಿ ಯಾವ ಅಗ್ನಿಯು ತನ್ನ ನಾಲ್ಕುಪುತ್ರರ ಜೊತೆಯಲ್ಲಿ ನಿತ್ಯವಾದ ಹವಿಸ್ಸನ್ನು ಸ್ವೀಕರಿಸುತ್ತಾನೆಯೋ ಅವನಿಗೆ ನಿರಗ್ರಹ (ನಿರಗ್ರಜ) ಎಂದು ಹೆಸರು. ಅವನು ಭಾನುವಿನ ವಂಶಕ್ಕೇ ಸೇರಿದವನು.

ನಿಶಾ ತ್ವಜನಯತ್ ಕನ್ಯಾಮಗ್ನೀಷೋಮಾವುಭೌ ತಥಾ ।
ಮನೋರೇವಾಭವದ್ ಭಾರ್ಯಾ ಸುಷುವೇ ಪಂಚ ಪಾವಕಾನ್ ॥೧೬॥

ನಿಶಾ ಎಂಬ ರಾತ್ರ್ಯಭಿಮಾನಿ ದೇವತೆಯು ಒಬ್ಬ ಕನ್ಯೆಯನ್ನೂ ಅಗ್ನಿ ಸೋಮ ಎಂಬ ಇಬ್ಬರು ಪುತ್ರರನ್ನೂ ಪಡೆದಳು. ಆ ಕನ್ಯೆಯು ಮನುನಾಮಕ ಅಗ್ನಿಯ ಪತ್ನಿಯಾಗಿ ಐದು ಅಗ್ನಿಗಳನ್ನು ಮಕ್ಕಳಾಗಿ ಪಡೆದಳು.

ಪೂಜ್ಯತೇ ಹವಿಷಾಗ್ರ್ಯೇಣ ಚಾತುರ್ಮಾಸ್ಯೇಷು ಪಾವಕಃ ।
ಪರ್ಜನ್ಯಸಹಿತಃ ಶ್ರೀಮಾನಗ್ನಿರ್ವೈಶ್ವಾನರಸ್ತು ಸಃ ॥೧೭॥

ಚಾತುರ್ಮಾಸ್ಯಗಳಲ್ಲಿ ಯಾವ ಅಗ್ನಿಯು ಪರ್ಜನ್ಯನ ಜೊತೆಯಲ್ಲಿ ಶ್ರೇಷ್ಠವಾದ ಹವಿಸ್ಸಿನಿಂದ ಪೂಜಿಸಲ್ಪಡುತ್ತಾನೆಯೋ ಕಾಂತಿಯುಕ್ತನಾದ ಅವನಿಗೆ ವೈಶ್ವಾನರ ಎಂದು ಹೆಸರು.

ಅಸ್ಯ ಲೋಕಸ್ಯ ಸರ್ವಸ್ಯ ಯಃ ಪ್ರಭುಃ ಪರಿಪಠ್ಯತೇ ।
ಸೋಽಗ್ನಿರ್ವಿಶ್ವಪತಿರ್ನಾಮ ದ್ವಿತೀಯೋ ವೈ ಮನೋಃ ಸುತಃ ॥೧೮॥

ಎಲ್ಲ ಮನುಷ್ಯರಿಗೂ ಯಾವನನ್ನು ಪ್ರಭುವೆಂದು ಕರೆಯುತ್ತಾರೆಯೋ ಅವನನ್ನು ವಿಶ್ವಪತಿ ಎಂದು ಕರೆಯುತ್ತಾರೆ. ಅವನು ಮನುವಿನ ದ್ವಿತೀಯ ಪುತ್ರ (ವೈಶ್ವಾನರನು ಪ್ರಥಮ ಪುತ್ರ).

ಯಸ್ತು ವಿಶ್ವಸ್ಯ ಜಗತೋ ಬುದ್ಧಿಮಾಕ್ರಮ್ಯ ತಿಷ್ಠತಿ ।
ತಂ ಪ್ರಾಹುರಧ್ಯಾತ್ಮವಿದೋ ವಿಶ್ವಜಿನ್ನಾಮ ಪಾವಕಮ್ ॥೧೯॥

ಯಾವ ಅಗ್ನಿಯು ಎಲ್ಲ ಜೀವರ ಬುದ್ಧಿಯನ್ನು ಅಧಿಷ್ಠಾನವನ್ನಾಗಿ ಮಾಡಿಕೊಂಡು ಇರುತ್ತಾನೆಯೋ ಅವನನ್ನು ಅಧ್ಯಾತ್ಮಜ್ಞಾನಿಗಳು ವಿಶ್ವಜಿತ್‌ನಾಮಕನಾದ ಅಗ್ನಿ ಎಂದು ಕರೆಯುತ್ತಾರೆ.

ಅಂತರಗ್ನಿಃ ಶ್ರಿತೋ ಯೋ ಹಿ ಭುಕ್ತಂ ಪಚತಿ ದೇಹಿನಾಮ್ ।
ಸ ಜಜ್ಞೇ ವಿಶ್ವಭುಜ್‌ನಾಮ ಸರ್ವಲೋಕೇಶ್ವರೇಶ್ವರಃ ॥೨೦॥

ಯಾವ ಅಗ್ನಿಯು ದೇಹದ ಒಳಗಿದ್ದು ಪ್ರಾಣಿಗಳು ತಿಂದ ಆಹಾರವನ್ನು ಪಚನ ಮಾಡುತ್ತಾನೆಯೋ ಅವನಿಗೆ ವಿಶ್ವಭುಗ್ ಎಂದು ಹೆಸರು. ಅವನು ಎಲ್ಲ ಪ್ರಾಣಿಗಳಿಗೂ ಪ್ರಭುವಾಗಿದ್ದಾನೆ.

ಬ್ರಹ್ಮಚಾರೀ ಯತಾತ್ಮಾ ಚ ಸತತಂ ವಿಪುಲವ್ರತಃ ।
ಬ್ರಾಹ್ಮಣಾಃ ಪೂಜಯಂತ್ಯೇನಂ ಪಾಕಯಜ್ಞೇಷು ಪಾವಕಮ್ ॥೨೧॥

ಅವನು ಬ್ರಹ್ಮಚಾರಿ, ಮನೋನಿಗ್ರಹವುಳ್ಳವನು, ಸತತವಾಗಿ ಅನೇಕ ವ್ರತಗಳನ್ನು ಧರಿಸಿದವನು. ಬ್ರಾಹ್ಮಣರು ಪಾಕಯಜ್ಞಗಳಲ್ಲಿ ಈ ಅಗ್ನಿಯನ್ನು ಪೂಜಿಸುತ್ತಾರೆ.

ಪ್ರಥಿತೋ ಗೋಪತಿರ್ನಾಮ ನದೀ ಭಾರ್ಯಾऽಭವತ್ತ್ರಿಯಾ ।
ತಸ್ಮಿನ್ ಸರ್ವಾಣಿ ಕರ್ಮಾಣಿ ಕ್ರಿಯಂತೇ ಧರ್ಮಸೇವತಃ ॥೨೨॥

ಗೋಪತಿ ಎಂಬ ಅಗ್ನಿಯು ಭಾನುವಿನ ಇನ್ನೊಬ್ಬ ಪುತ್ರನು. ನದೀ ಎಂಬುವಳು ಅವನ ಪ್ರಿಯಪತ್ನಿ. ಧರ್ಮಸ್ಥಾಪಕವಾದ ಎಲ್ಲಾ ಕರ್ಮಗಳನ್ನೂ ಈ ಅಗ್ನಿಯಲ್ಲಿ ಮಾಡುತ್ತಾರೆ.

ಕನ್ಯಾ ಸಾ ರೋಹಿಣೀ ನಾಮ ಹಿರಣ್ಯಕಶಿಪೋಃ ಸುತಾ ।
ಕರ್ದಮಸ್ಯಾಭವದ್ ಭಾರ್ಯಾ ಸ ವಹ್ನಿಃ ಸ ಪ್ರಜಾಪತಿಃ ॥೨೩॥

ಹಿರಣ್ಯಕಶಿಪುವಿನ ಮಗಳಾದ ರೋಹಿಣೀ ಎಂಬ ಕನ್ಯೆಯು ಕರ್ದಮನಾಮಕ ವಹ್ನಿಯ ಪತ್ನಿ. ಆ ವಹ್ನಿಯು ಪ್ರಜೆಗಳ ಪಾಲನೆಯನ್ನು ಮಾಡುತ್ತಾನೆ.

ಪ್ರಾಣಾನಾಶ್ರಿತ್ಯ ಯೋ ದೇಹಂ ಪ್ರವರ್ತಯತಿ ದೇಹಿನಾಮ್ ।
ತಸ್ಯ ಸನ್ನಿಹಿತೋ ನಾಮ ಶಬ್ದರೂಪಸ್ಯ ಸಾಧನಃ ॥೨೪॥

ದೇಹಿಗಳ ಇಂದ್ರಿಯಗಳನ್ನು ಆಶ್ರಯಿಸಿ ಯಾವ ಅಗ್ನಿಯು ಅವರಲ್ಲಿ ಪ್ರವೃತ್ತಿಯನ್ನು ಉಂಟುಮಾಡುತ್ತಾನೆಯೋ ಅವನಿಗೆ ಸನ್ನಿಹಿತ ಎಂದು ಹೆಸರು. ಅವನು ಶಬ್ದ ಮತ್ತು ರೂಪಗಳ ಜ್ಞಾನಕ್ಕೆ ಸಾಧನವಾಗಿದ್ದಾನೆ.

ಶುಕ್ಲಕೃಷ್ಣವಪುರ್ದೇವೋ ಯೋ ಬಿಭರ್ತಿ ಹುತಾಶನಃ ।
ಅಕಲ್ಮಷಃ ಕಲ್ಮಷಾಣಾಂ ಕರ್ತಾ ಕ್ರೋಧಾಶ್ರಿತಸ್ತು ಸಃ ॥೨೫॥

ಯಾವ ಅಗ್ನಿಯು ಶುಕ್ಲಕೃಷ್ಣ ದೇಹವನ್ನು ಧರಿಸಿ ತಾನು ಕಲ್ಮಶರಹಿತನಾಗಿ ಜೀವರಲ್ಲಿ ಕಲ್ಮಶವನ್ನು ಉಂಟುಮಾಡುತ್ತಾನೆಯೋ ಅವನಿಗೆ ಕ್ರೋಧಾಶ್ರಿತ ಎಂದು ಹೆಸರು.

ಕಪಿಲಂ ಪರಮರ್ಷಿಂ ಚ ಯಂ ಪ್ರಾಹುರ್ಯತಯಃ ಸದಾ ।
ಅಗ್ನಿಃ ಸ ಕಪಿಲೋ ನಾಮ ಸಾಂಖ್ಯಯೋಗಪ್ರವರ್ತಕಃ ॥೨೬॥

ಯತಿಗಳು ಯಾವನನ್ನು ಸದಾ ಕಪಿಲ ಮಹರ್ಷಿ ಎಂದು ಹೇಳುತ್ತಾರೆಯೋ ಅವನು ಕಪಿಲನಾಮಕ ಅಗ್ನಿ. ಅವನು ಸಾಂಖ್ಯಯೋಗಪ್ರವರ್ತಕನಾದವನು.

ಅನ್ನಂ ಯಚ್ಛಂತಿ ಭೂತಾನಾಂ ಯೇನ ಭೂತಾನಿ ನಿತ್ಯದಾ ।
ಕರ್ಮಸ್ವಿಹ ವಿಚಿತ್ರೇಷು ಸೋಽಗ್ರಣೇರ್ವಹ್ನಿರುಚ್ಯತೇ ॥೨೭॥

ಅನೇಕ ವಿಧವಾದ ಕರ್ಮಗಳನ್ನು ಮಾಡಿದಾಗ ಮನುಷ್ಯರು ಪ್ರಾಣಿಗಳಿಗೆ ನಿತ್ಯವೂ ಏನು ಅನ್ನದಾನವನ್ನು ಮಾಡುತ್ತಾರೆಯೋ ಅದಕ್ಕೆ ಪ್ರೇರಕನಾದ ಅಗ್ನಿಗೆ ಅಗ್ರಣೀ ಎಂದು ಹೆಸರು.

ಇಮಾನನ್ಯಾನ್ ಸಮಸೃಜತ್ ಪಾವಕಾನ್ ಪ್ರಥಿತಾನ್ ಭುವಿ ।
ಅಗ್ನಿಹೋತ್ರಸ್ಯ ದುಷ್ಟಸ್ಯ ಪ್ರಾಯಶ್ಚಿತ್ತಾರ್ಥಮುಲ್ಬಣಾನ್ ॥೨೮॥

ಅನಂತರ ಅಗ್ನಿಹೋತ್ರವು ದುಷ್ಟವಾದಾಗ ಪ್ರಾಯಶ್ಚಿತ್ತವನ್ನು ಮಾಡುವ ಸಲುವಾಗಿ ಈ ಉಲ್ಬಣವಾದ ಪ್ರಖ್ಯಾತರಾದ ಅನೇಕ ವಹ್ನಿಗಳನ್ನು ಭಾನುವು ಸೃಷ್ಟಿಮಾಡಿದನು.

ಸಂಸ್ಪೃಶೇಯುರ್ಯದಾನ್ಯೋನ್ಯಂ ಕಥಂಚಿದ್ ವಾಯುನಾऽಗ್ನಯಃ ।
ಇಷ್ಟಿರಷ್ಟಾಕಪಾಲೇನ ಕಾರ್ಯಾ ವೈ ಶುಚಯೇऽಗ್ನಯೇ ॥೨೯॥

ಯಾವಾಗ ವಾಯುವಿನಿಂದ ಎರಡು ಅಗ್ನಿಗಳಿಗೆ ಸಂಸ್ಪರ್ಶವುಂಟಾಗುತ್ತದೆಯೋ ಆಗ ಎಂಟುಕಪಾಲದ ಪುರೋಡಾಶದಿಂದ ಶುಚಿ ಎಂಬ ಅಗ್ನಿಗೆ ಇಷ್ಟಿಯನ್ನು ಮಾಡಬೇಕು.

ದಕ್ಷಿಣಾಗ್ನಿರ್ಯದಾ ದ್ವಾಭ್ಯಾಂ ಸಂಸೃಜೇತ ತದಾ ಕಿಲ ।
ಇಷ್ಟಿರಷ್ಟಾಕಪಾಲೇನ ಕಾರ್ಯಾ ವೈ ವೀತಯೇऽಗ್ನಯೇ ॥೩೦॥

ದಕ್ಷಿಣಾಗ್ನಿಗೆ ಉಳಿದ ಎರಡು ಅಗ್ನಿಗಳಾದ ಆಹವನೀಯ ಮತ್ತು ಗಾರ್ಹಪತ್ಯದ ಸಂಸ್ಪರ್ಶ ಉಂಟಾದರೆ ವೀತಿನಾಮಕ ಅಗ್ನಿಗೆ ಅಷ್ಟಕಪಾಲದ ಇಷ್ಟಿಯನ್ನು ಮಾಡಬೇಕು.

ಯದ್ಯಗ್ನಯೋ ಹಿ ಸ್ಪೃಶ್ಯೇಯುರ್ನಿವೇಶಸ್ಥಾ ದವಾಗ್ನಿನಾ ।
ಇಷ್ಟಿರಷ್ಟಾಕಪಾಲೇನ ಕಾರ್ಯಾ ತು ಶುಚಯೇऽಗ್ನಯೇ ॥೩೧॥

ಗೃಹದಲ್ಲಿರುವ ಅಗ್ನಿಗಳಿಗೆ ದಾವಾಗ್ನಿಯ ಸ್ಪರ್ಶವುಂಟಾದರೆ ಶುಚಿನಾಮಕ ಅಗ್ನಿಗೆ ಅಷ್ಟಕಪಾಲದ ಇಷ್ಟಿಯನ್ನು ಮಾಡಬೇಕು.

ಅಗ್ನಿಂ ರಜಸ್ವಲಾ ವೈ ಸ್ತ್ರೀ ಸಂಸ್ಪೃಶೇದಗ್ನಿಹೋತ್ರಿಕಮ್ ।
ಇಷ್ಟಿರಷ್ಟಾಕಪಾಲೇನ ಕಾರ್ಯಾ ವಸುಮತೇಽಗ್ನಯೇ ॥೩೨॥

ಅಗ್ನಿಹೋತ್ರದ ಅಗ್ನಿಯನ್ನು ರಜಸ್ವಲೆಯಾದ ಸ್ತ್ರೀಯು ಮುಟ್ಟಿದರೆ ವಸುಮಾನ್ ಎಂಬ ಅಗ್ನಿಗೆ ಅಷ್ಟಕಪಾಲದ ಇಷ್ಟಿಯನ್ನು ಮಾಡಬೇಕು.

ವೈದ್ಯುತಾಗ್ನಿರ್ಯದಾ ತ್ವಗ್ನಿಂ ಸಂಸ್ಪೃಶೇದಾಗ್ನಿಹೋತ್ರಿಕಮ್ ।
ಇಷ್ಟಿರಷ್ಟಾಕಪಾಲೇನ ಕಾರ್ಯಾ ಹ್ಯಗ್ನಿಮತೇಽಗ್ನಯೇ ॥೩೩॥

ಅಗ್ನಿಹೋತ್ರದ ಅಗ್ನಿಗೆ ಮಿಂಚು ಅಥವಾ ಸಿಡಿಲಿನ ಸ್ಪರ್ಶವುಂಟಾದರೆ ಅಗ್ನಿಮಾನ್ ನಾಮಕ ಅಗ್ನಿಗೆ ಅಷ್ಟಕಪಾಲದ ಇಷ್ಟಿಯನ್ನು ಮಾಡಬೇಕು.

ಮೃತಃ ಶ್ರೂಯೇತ ಯೋ ಜೀವನ್ ಪರೇಯುಃ ಪಶವೋ ಯದಾ ।
ಇಷ್ಟಿರಷ್ಟಾಕಪಾಲೇನ ಕಾರ್ಯಾ ಸುರಭಿಮತೇಽಗ್ನಯೇ ॥೩೪॥

ಬದುಕಿರುವವನು ಮೃತನೆಂಬ ವಾರ್ತೆಯು ಕೇಳಿಬಂದರೆ ಅಥವಾ ಅಗ್ನಿಹೋತ್ರದ ಸ್ಥಳದಲ್ಲಿ ಪಶುಗಳು ಮರಣಹೊಂದಿದರೆ ಸುರಭಿಮಾನ್ ಎಂಬ ಅಗ್ನಿಗೆ ಅಷ್ಟಕಪಾಲದ ಇಷ್ಟಿಯನ್ನು ಮಾಡಬೇಕು.

ಮೃತೇ ಸ್ಪೃಶೇಚ್ಚ ಯಶ್ಚಾಗ್ನಿಮ್ ಅಶುಚಿರ್ಬಾಲಿಶೋ ನರಃ ।
ಇಷ್ಟಿರಷ್ಟಾಕಪಾಲೇನ ಕಾರ್ಯಾ ಸ್ಯಾದುತ್ತರಾಗ್ನಯೇ ॥೩೫॥

ಮೃತಾಶೌಚ ಇರುವಾಗ ಬಾಲಿಶನಾದ ಮನುಷ್ಯನು ಅಗ್ನಿಹೋತ್ರಾದಿ ಅಗ್ನಿಯನ್ನು ಸ್ಪರ್ಶಮಾಡಿದರೆ ಉತ್ತರನಾಮಕ ಅಗ್ನಿಗೆ ಅಷ್ಟಕಪಾಲದ ಇಷ್ಟಿಯನ್ನು ಮಾಡಬೇಕು.

ಆರ್ತೋ ನ ಜುಹುಯಾದಗ್ನಿಂ ತ್ರಿರಾತ್ರಂ ಯಸ್ತು ಬ್ರಾಹ್ಮಣಃ ।
ಇಷ್ಟಿರಷ್ಟಾಕಪಾಲೇನ ಕಾರ್ಯಾ ಪಥಿಕೃತೇಽಗ್ನಯೇ ॥೩೬॥

ರೋಗಗ್ರಸ್ತನಾದ ಬ್ರಾಹ್ಮಣನು ಮೂರುದಿನಗಳ ಕಾಲ ಅಗ್ನಿಹೋತ್ರದಲ್ಲಿ ಹೋಮವನ್ನು ಮಾಡದಿದ್ದರೆ ಪಥಿಕೃತ್ ಎಂಬ ಅಗ್ನಿಗೆ ಅಷ್ಟಕಪಾಲದ ಇಷ್ಟಿಯನ್ನು ಮಾಡಬೇಕು.

ಸೂತಿಕಾಗ್ನಿರ್ಯದಾ ಚಾಗ್ನಿಂ ಸಂಸ್ಪೃಶೇದಗ್ನಿಹೋತ್ರಿಕಮ್ ।
ದರ್ಶಂ ಚ ಪೌರ್ಣಮಾಸಂ ಚ ಯಸ್ಯ ತಿಷ್ಠೇತ್ಪ್ರತಿಷ್ಠಿತಮ್ ।
ಇಷ್ಟಿರಷ್ಟಾಕಪಾಲೇನ ಕಾರ್ಯಾ ಚಾಭಿಮತೇऽಗ್ನಯೇ ॥೩೭॥

ಜಾತಾಶೌಚ ಇರುವವನು ಮನೆಯಲ್ಲಿ ಪ್ರತಿಷ್ಠಿತವಾದ ಅಗ್ನಿಹೋತ್ರಾದಿಗಳನ್ನು ಸ್ಪರ್ಶಮಾಡಿದರೆ ಅಥವಾ ದರ್ಶಪೌರ್ಣಮಾಸಗಳ ಉಲ್ಲಂಘನೆಯಾದರೆ ಅಭಿಮಾನ್ (ಅಶುಚಿ) ಎಂಬ ಅಗ್ನಿಗೆ ಅಷ್ಟಕಪಾಲದ ಇಷ್ಟಿಯನ್ನು ಮಾಡಬೇಕು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕಾದಶಾಧಿಕದ್ವಿಶತಶತತಮೋऽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಆಂಗಿರಸೇ ಚತುರ್ಥೋऽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹನ್ನೊಂದನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಹನ್ನೆರಡನೆಯ ಅಧ್ಯಾಯ

ಮಾರ್ಕಂಡೇಯರಿಂದ ಪುನಃ ಅಗ್ನಿವಂಶದ ಕಥನ.

ಮಾರ್ಕಂಡೇಯಃ

ಅಪವಸ್ಯ ಸುತಾ ಭಾರ್ಯಾ ಸಹಸ್ಯ ಪರಮಪ್ರಿಯಾ ।
ಭೂಪತಿಂಭೂತಭರ್ತಾರಂ ಜನಯಾಮಸ ಪಾವಕಮ್ ॥೧॥

ಮಾರ್ಕಂಡೇಯ– ವಸಿಷ್ಠರ ಪುತ್ರಿಯು ಸಹ ನಾಮಕನಾದ ಅಗ್ನಿಯ ಪರಮಪ್ರಿಯಳಾದ ಪತ್ನಿ. ಅವನು ಅವಳಲ್ಲಿ ಭೂಪತಿ ಮತ್ತು ಭೂತಭರ್ತಾ ಎಂಬ ಅಗ್ನಿಗಳನ್ನು ಮಕ್ಕಳಾಗಿ ಪಡೆದನು.

ಭೂತಾನಾಂ ಚಾಪಿ ಸರ್ವೇಷಾಂ ಯಂ ಪ್ರಾಹುಃ ಪಾವಕಂ ಪತಿಮ್ ।
ಆತ್ಮಾ ಭುವನಭರ್ತೇತಿ ಸಾನ್ವಯೇಷು ದ್ವಿಜಾತಿಷು ॥೨॥

ಭೂತಪತಿ ಅಗ್ನಿಯನ್ನು ಎಲ್ಲಾ ಭೂತಗಳಿಗೂ ಒಡೆಯನೆಂದು ಹೇಳುತ್ತಾರೆ. ಅವನು ಆತ್ಮಾ ಎಂದೂ ಭುವನಭರ್ತಾ ಎಂದೂ ಬ್ರಾಹ್ಮಣರು ತಮ್ಮ ವಂಶಪರಂಪರೆಯಲ್ಲಿ ಕರೆಯುತ್ತಾರೆ.

ಮಹತಾಂ ಚೈವ ಭೂತಾನಾಂ ಸರ್ವೇಷಾಮಿಹ ಯಃ ಪತಿಃ ।
ಭಗವಾನ್ ಸ ಮಹಾತೇಜಾ ನಿತ್ಯಂ ಚರತಿ ಪಾವಕಃ ॥೩॥

ಮಹಾಭೂತಗಳಿಗೆ ಒಡೆಯನಾದ ಯಾವ ಅಗ್ನಿ ಇದ್ದಾನೆಯೋ ಅವನನ್ನು ಪಾವಕ ಎಂದು ಕರೆಯುತ್ತಾರೆ. ಪೂಜ್ಯನಾದ ಮಹಾತೇಜಸ್ವಿಯಾದ ಅವನು ಯಾವಾಗಲೂ ಸಂಚರಿಸುತ್ತಾನೆ.

ಅಗ್ನಿರ್ಗ್ಯ(ರ್ಬೃ)ಹಪತಿರ್ನಾಮ ನಿತ್ಯಂ ಯಜ್ಞೇಷು ಪೂಜ್ಯತೇ ।
ಹುತಂ ವಹತಿ ಯೋ ಹವ್ಯಮಸ್ಯ ಲೋಕಸ್ಯ ಪಾವಕಃ ॥೪॥

ಉತ್ತಮವಾದ ಹವಿಸ್ಸನ್ನು ಯಾರು ಲೋಕಗಳಿಗೆ ಕೊಂಡೊಯ್ಯುತ್ತಾನೆಯೋ ಅವನಿಗೆ ಗೃಹಪತಿ (ಬೃಹಸ್ಪತಿ) ಎಂದು ಹೆಸರು. ಅವನು ಯಾವಾಗಲೂ ಯಜ್ಞದಲ್ಲಿ ಪೂಜಿಸಲ್ಪಡುತ್ತಾನೆ.

ಅಪಾಂಗರ್ಭೋ ಮಹಾಭಾಗಃ ಮಹಪುತ್ರೋ ಮಹಾದ್ಭುತಃ ।
ಭೂಪತಿರ್ಭೂತಭರ್ತಾ ಚ ಮಹತಃ ಪತಿರುಚ್ಯತೇ ।
ದಹನ್ ಮೃತಾನಿ ಭೂತಾನಿ ತಸ್ಯಾಗ್ನಿರತೋಽಭವನ್ ॥೫॥

ಅಗ್ನಿಷ್ಟೋಮೇ ತು ನಿಯತಃ ಕ್ರತುಶ್ರೇಷ್ಠೋ ಭವತ್ಯುತ ॥೬॥

ಜಲಗರ್ಭದಲ್ಲಿರುವ ಮಹಾನುಭಾವನಾದ ಮಹಾದ್ಭುತನೂ (ಇವನಿಗೆ ಅದ್ಭುತ ಎಂದು ಹೆಸರು) ಸಹ ನಾಮಕ ಅಗ್ನಿಯ ಪುತ್ರನು. ಭೂಪತಿ ಮತ್ತು ಭೂತಭರ್ತರೂ ಸಹ ಸಹಪುತ್ರರು. ಅದ್ಭುತನು ಶ್ರೇಷ್ಠರಾದವರಿಗೆ ಪತಿ ಎಂದು ಹೇಳಲ್ಪಡುತ್ತಾನೆ. ಮೃತರಾದ ಪ್ರಾಣಿಗಳನ್ನು ಯಾವ ಅಗ್ನಿ ಸುಡುತ್ತಾನೋ ಅವನಿಗೆ ಭರತನೆಂದು ಹೆಸರು. ಶ್ರೇಷ್ಠಕ್ರತುವಾದ ಅಗ್ನಿಷ್ಟೋಮದಲ್ಲಿ ಪೂಜಿಸಲ್ಪಡುವವನು ನಿಯತನಾಮಕನಾದ ಅಗ್ನಿ.

ಆಯಾಂತಂ ನಿಯತೋ ದೃಷ್ಟ್ವಾ ಪ್ರವಿಶೇಶಾರ್ಣವಂ ಭಯಾತ್ ।
ದೇವಾಸ್ತತ್ರಾಪಿ ಗಚ್ಛಂತಿ ಮಾರ್ಗಮಾಣಾ ಯಥಾದಿಶಮ್ ॥೭॥

ದೇಹದಾಹಕನಾದ ಭರತನು ಬರುತ್ತಿರುವುದನ್ನು ಕಂಡು ನಿಯತನು ಭಯದಿಂದ ಸಮುದ್ರವನ್ನು ಪ್ರವೇಶಿಸಿದನು. ದೇವತೆಗಳು ಅಲ್ಲಿಯೂ ಅವನನ್ನು ಎಲ್ಲ ದಿಕ್ಕುಗಳಲ್ಲಿಯೂ ಹುಡುಕಿಕೊಂಡು ಹೋದರು.

ದೃಷ್ಟ್ವಾ ತ್ವಗ್ನಿರಥರ್ವಾಣಂ ತತೋ ವಚನಮಬ್ರವೀತ್ ।
ದೇವಾನಾಂ ವಹ ಹವ್ಯಂ ತ್ವಮಹಂ ವೀರ ಸುದುರ್ಬಲಃ ।
ಅಥರ್ವನ್ ಗಚ್ಛ ಮಧ್ವಕ್ಷ ಪ್ರಿಯಮೇತತ್ ಕುರುಷ್ವ ಮೇ ॥೮॥

ನಿಯತನಾಮಕ ಅಗ್ನಿಯು ಅಥರ್ವನಾಮಕ ಅಗ್ನಿಯನ್ನು ಕಂಡು ಎಲೈ ವೀರನೇ, ನಾನು ಬಹಳ ದುರ್ಬಲನಾಗಿದ್ದೇನೆ. ನೀನೇ ದೇವತೆಗಳಿಗೆ ಹವ್ಯವನ್ನು ತೆಗೆದುಕೊಂಡು ಹೋಗು. ಎಲೈ ಅಥರ್ವನಾಮಕ ಅಗ್ನಿಯೇ, ವಿಮಲಾಕ್ಷನೇ, ನೀನೇ ಹವ್ಯವನ್ನು ತೆಗೆದುಕೊಂಡು ಹೋಗಿ ನನಗೆ ಪ್ರಿಯವನ್ನುಂಟುಮಾಡು ಎಂದು ಮಾತನಾಡಿದನು.

ಮಾರ್ಕಂಡೇಯಃ

ಪ್ರೇಷ್ಯ ಚಾಗ್ನಿರಥರ್ವಾಣಮನ್ಯಂ ದೇಶಂ ತತೋಽಗಮತ್ ।
ಮತ್ಸ್ಯಾಸ್ತಸ್ಯ ಸಮಾಚಖ್ಯುಃ ಕ್ರುದ್ಧಸ್ತಾನಗ್ನಿರಬ್ರವೀತ್ ।
ಭಕ್ಷ್ಯಾ ವೈ ವಿವಿಧೈರ್ಭಾವೈರ್ಭವಿಷ್ಯಥ ಶರೀರಿಣಾಮ್ ॥೯॥

ಮಾರ್ಕಂಡೇಯ– ಅಥರ್ವಾಗ್ನಿಯನ್ನು ಹಾಗೆ ಕಳುಹಿಸಿ ನಿಯತನು ಬೇರೆ ದೇಶಕ್ಕೆ ಹೋಗಿ ನೀರಿನಲ್ಲಿ ಅಡಗಿಕೊಂಡನು. ಮತ್ಸ್ಯಗಳು ಅವನು ಅಲ್ಲಿ ಇರುವುದನ್ನು ತಿಳಿಸಿದವು. ಕ್ರುದ್ಧನಾದ ಅಗ್ನಿಯು ಅವುಗಳಿಗೆ ನೀವು ಅನೇಕ ವಿಧಗಳಲ್ಲಿ ಶರೀರಿಗಳಿಗೆ ಆಹಾರವಾಗಿ ಎಂದು ಶಾಪವನ್ನು ಕೊಟ್ಟನು.

ಅಥರ್ವಾಣಂ ತಥಾ ಚಾಪಿ ಹವ್ಯವಾಹೋಽಬ್ರವೀದ್ ವಚಃ ॥೧೦॥

ಮತ್ತು ಪುನಃ ಅಥರ್ವಾಗ್ನಿಯ ಜೊತೆಯಲ್ಲಿ ಮಾತನಾಡಿದನು.

ಅನುನೀಯಮಾನೋ ಹಿ ಭೃಶಂ ದೇವವಾಕ್ಯದ್ಧಿ ತೇನ ಸಃ ।
ನೈಚ್ಛದ್ ವೋಢುಂ ಹವಿಃ ಸೋಢುಂ ಶರೀರಂ ಚಾಪಿ ಸೋಽತ್ಯಜತ್ ॥

ಅಥರ್ವಾಗ್ನಿಯನ್ನು ದೇವವಾಕ್ಯಕ್ಕೆ ಅನುಸಾರವಾಗಿ ನಿಯತಾಗ್ನಿಯು ಎಷ್ಟು ಅನುನಯ ಮಾಡಿದರೂ ಅವನು ಹವ್ಯವನ್ನು ತೆಗೆದುಕೊಂಡು ಹೋಗಲು ಒಪ್ಪಲಿಲ್ಲ. ಆಗ ನಿಯತಾಗ್ನಿಯು ತನ್ನ ಶರೀರವನ್ನು ತ್ಯಜಿಸಿದನು.

ಸ ತಚ್ಛರೀರಂ ಸಂತ್ಯಜ್ಯ ಪ್ರವಿವೇಶ ಧರಾಂ ತದಾ ।
ಭೂಮಿಂ ಸ್ಪೃಷ್ಟ್ವಾಽಸೃಜದ್ ಧಾತುಂ ಪೃಥಕ್‌ಪೃಥಗತೀವ ಹಿ ॥೧೨॥

ನಿಯತನು ಆ ಶರೀರವನ್ನು ತ್ಯಜಿಸಿ ಭೂಮಿಯನ್ನು ಪ್ರವೇಶಿಸಿ, ಭೂಮಿಯನ್ನು ಸ್ಪರ್ಶಮಾಡಿ ತನ್ನ ಆ ದೇಹದಲ್ಲಿದ್ದ ಅಸ್ಥಿಶ್ಲೇಷ್ಮ ಮೊದಲಾದ ಪದಾರ್ಥಗಳಿಂದ ಭೂಮಿಯಲ್ಲಿನಾನಾ ಪದಾರ್ಥಗಳನ್ನು ಬೇರೆ ಬೇರೆಯಾಗಿ ಸೃಷ್ಟಿಸಿದನು.

ಪೂಯಾತ್‌ಸುಗಂಧಂ ತೇಜಶ್ಚ ಅಸ್ಥಿಭ್ಯೋ ದೇವದಾರು ಚ ।
ಶ್ಲೇಷ್ಮಣಃ ಸ್ಫಾಟಿಕಂ ತಸ್ಯ ಪಿತ್ತಾನ್ಮಾರಕತಂ ತಥಾ ॥೧೩॥

ಅವನು ಪೂಯ (ಕೀವು, ರಕ್ತ) ದಿಂದ ಸುಗಂಧ ಮತ್ತು ತೇಜಸ್ಸನ್ನೂ, ಅಸ್ಥಿಗಳಿಂದ ದೇವದಾರುವನ್ನೂ, ಶ್ಲೇಷ್ಮದಿಂದ ಸ್ಫಟಿಕವನ್ನೂ ಮತ್ತು ಪಿತ್ತದಿಂದ ಮರಕತವನ್ನೂ ಸೃಷ್ಟಿಸಿದನು.

ಯಕೃತ್ಕೃಷ್ಣಾಯಸಂ ತಸ್ಯ ತ್ರಿಭಿರೇತೈರ್ಬಹು ಪ್ರಜಾಃ(ಭಾಃ) ।
ನಖಾಸ್ತಸ್ಯಾಭ್ರಪಟಲಂ ಸ್ನಾಯುಜಾಲಾನಿ ವಿದ್ರುಮಮ್ ॥೧೪॥

ಯಕೃತ್ತಿನಿಂದ ಕಬ್ಬಿಣವನ್ನು ಸೃಷ್ಟಿಸಿದನು. ಶ್ಲೇಷ್ಮ, ಪಿತ್ತ ಮತ್ತು ಯಕೃತ್ ಈ ಮೂರರಿಂದ ಅನೇಕ ಕಾಂತಿಗಳನ್ನು ಸೃಷ್ಟಿಸಿದನು. ನಖಗಳು ಮೇಘಮಾಲೆಯಾದವು. ಸ್ನಾಯುಜಾಲಗಳು ಹವಳವಾದವು.

ಶರೀರಾದ್ ವಿವಿಧಾಶ್ಚಾನ್ಯೇ ಧಾತವೋಽಸ್ಯಾಭವನ್ ನೃಪ ।
ಏವಂ ತ್ಯಕ್ತ್ವಾ ಶರೀರಂ ಚ ಪರಮೇ ತಪಸಿ ಸ್ಥಿತಃ ॥೧೫॥

ಎಲೈ ರಾಜನೇ, ಹೀಗೆ ಅವನ ಶರೀರದಿಂದ ವಿವಿಧವಾದ ಬೇರೆ ಪದಾರ್ಥಗಳೂ ಜನಿಸಿದವು. ಹೀಗೆ ಶರೀರವನ್ನು ತ್ಯಜಿಸಿ ನಿಯತನು ಶ್ರೇಷ್ಠವಾದ ತಪಸ್ಸಿನಲ್ಲಿಯೇ ನಿರತನಾದನು.

ಭೃಗ್ವಂಗಿರಾದಿಭಿರ್ಭೂಯಸ್ತಪಸೋತ್ಥಾಪಿತಸ್ತದಾ ।
ಭೃಶಂ ಜಜ್ವಾಲ ತೇಜಸ್ವೀ ತಪಸಾಽಪ್ಯಾಯಿತಃ ಶಿಖೀ ॥೧೬॥

ದೃಷ್ಟ್ವಾ ಋಷಿಭಯಾಚ್ಚಾಪಿ ಪ್ರವಿವೇಶ ಮಹಾರ್ಣವಮ್ ॥೧೭॥

ಭೃಗು ಅಂಗಿರ ಮೊದಲಾದವರು ಬಂದು ಅವನನ್ನು ಪುನಃ ತಪಸ್ಸಿನಿಂದ ಎಬ್ಬಿಸಿದರು. ಆಗ ತಪಸ್ಸಿನಿಂದ ಅಭಿವೃದ್ಧಿಯನ್ನು ಹೊಂದಿದ್ದ ತೇಜಸ್ವಿಯಾದ ಆ ನಿಯತಾಗ್ನಿಯು ಬಹಳವಾಗಿ ಜ್ವಲಿಸಿದನು. ಋಷಿಗಳಾದ ಅಥರ್ವಾಗ್ನಿಯ ಬಲದಿಂದ ಅವನು ಪುನಃ ಸಮುದ್ರವನ್ನು ಪ್ರವೇಶಿಸಿದನು.

ತಸ್ಮಿನ್ ನಷ್ಟೇ ಜಗದ್ ಭೀತಮಥರ್ವಾಣಮಥಾಶ್ರಿತಮ್ ।
ಅಚರ್ಯಾಮಾಸುರೇಮೈನಮಥರ್ವಾಣಂ ಸುರಾದಯಃ ॥೧೮॥

ಅವನು ನಷ್ಟವಾಗುತ್ತಿರಲು ಜಗತ್ತು ಭಯಗೊಂಡು ಅಥರ್ವಾಗ್ನಿಯನ್ನು ಆಶ್ರಯಿಸಿತು. ದೇವತೆಗಳು ಮೊದಲಾದವರುಗಳು ಈ ಅಥರ್ವಾಗ್ನಿಯನ್ನು ಪೂಜಿಸಿದರು.

ಅಥರ್ವಾ ತ್ವಸೃಜಲ್ಲೋಕಾನಾತ್ಮನಾऽऽಲೋಕ್ಯ ಪಾವಕಮ್ ।
ಮಿಷತಾಂ ಸರ್ವಭೂತಾನಾಮುನ್ಮಮಾಥ ಮಹಾರ್ಣವಮ್ ॥೧೯॥

ಅಥರ್ವಾಗ್ನಿಯು ನಿಯತಾಗ್ನಿಯು ಸಮುದ್ರವನ್ನು ಪ್ರವೇಶಿಸಿರುವುದನ್ನು ನೋಡಿ ತಾನೇ ಲೋಕಗಳನ್ನು ಸೃಷ್ಟಿಸಿದನು ಮತ್ತು ಎಲ್ಲಾ ಪ್ರಾಣಿಗಳು ನೋಡುತ್ತಿರುವಂತೆಯೇ ಸಮುದ್ರವನ್ನು ಕ್ಷೋಭೆಗೊಳಿಸಿದನು.

ಏವಮಗ್ನಿರ್ಭಗವತಾ ನಷ್ಟಃ ಪೂರ್ವಮಥರ್ವಣಾ ।
ಆಹೂತಃ ಸರ್ವಭೂತಾನಾಂ ಹವ್ಯಂ ವಹತಿ ಸರ್ವದಾ ॥೨೦॥

ಹೀಗೆ ಮೊದಲು ನಷ್ಟವಾಗಿದ್ದ ನಿಯತಾಗ್ನಿಯು ಪೂಜ್ಯನಾದ ಅಥರ್ವಾಗ್ನಿಯಿಂದ ಪುನಃ ಕರೆಯಲ್ಪಟ್ಟು ಎಲ್ಲ ಪ್ರಾಣಿಗಳಿಗೂ ಯಾವಾಗಲೂ ಹವಿಸ್ಸನ್ನು ತೆಗೆದುಕೊಂಡು ಹೋಗುತ್ತಾನೆ.

ಏಷ ತ್ವಜನಯದ್ ಧಿಷ್ಣ್ಯಾನ್ ವೇದೋಕ್ತಾನ್ ವಿವಿಧಾನ್ ಬಹೂನ್ ।
ವಿಚರನ್ ವಿವಿಧಾನ್ ದೇಶಾನ್ ಭ್ರಮಮಾಣಸ್ತು ತತ್ರ ವೈ ॥೨೧॥

ಈ ನಿಯತಾಗ್ನಿಯು ಅನೇಕ ದೇಶಗಳಲ್ಲಿ ಸಂಚಾರಮಾಡುತ್ತಾ ಋಷಿಗಳಿಗೆ ನಿವಾಸಸ್ಥಾನವಾದಂತಹ ವೇದೋಕ್ತವಾದ ಅನೇಕ ಆಶ್ರಮಗಳನ್ನು ಸೃಷ್ಟಿಸಿದನು.

ಸಿಂಧುನದಂ ಪಂಚನದಂ ದೇವಿಕಾಥ ಸರಸ್ವತೀ ।
ಗಂಗಾ ಚ ಶತಕುಂಭಾ ಚ ಸರಯೂರ್ಗಂಡಸಾಹ್ವಯಾ ॥೨೨॥

ಚರ್ಮಣ್ವತೀ ಮಹೀ ಚೈವ ಮೇಧ್ಯಾ ಮೇಧಾತಿಥಿಸ್ತದಾ ।
ತಾಮ್ರವತೀ ವೇತ್ರವತೀ ನದ್ಯಸ್ತಿಸ್ರೋಽಥ ಕೌಶಿಕೀ (ಗೌತಮೀ) ॥೨೩॥

ತಮಸಾ ನರ್ಮದಾ ಚೈವ ನದೀ ಗೋದಾವರೀ ತಥಾ ।
ವೇಣೋಪವೇಣಾ ಭೀಮಾ ಚ ವಡವಾ ಚೈವ ಭಾರತ ॥೨೪॥

ಭಾರತೀ ಸುಪ್ರಯೋಗಾ ಚ ಕಾವೇರೀ ಮುರ್ಮುರಾ ತಥಾ ।
ತುಂಗವೇಣೇ(ಣಾ) ಕೃಷ್ಣವೇಣೇ(ಣಾ) ಕಪಿಲಾ ಶೋಣ ಏವ ಚ ।
ಏತಾ ನದ್ಯಸ್ತು ಧಿಷ್ಣ್ಯಾನಾಂ ಮಾತರೋ ಯಾಃ ಪ್ರಕೀರ್ತಿತಾಃ ॥

ಎಲೈ ಭಾರತನೇ, ಸಿಂಧುನದ, ಪಂಚನದ, ದೇವಿಕಾ, ಸರಸ್ವತೀ, ಗಂಗಾ, ಶತಕುಂಭಾ, ಸರಯೂ, ಗಂಡಕೀ, ಚರ್ಮಣ್ವತೀ, ಮಹೀ, ಮೇಧ್ಯಾ, ಮೇಧಾತಿಥಿ, ತಾಮ್ರವತೀ, ವೇತ್ರವತೀ, ಗೌತಮೀ (ಕೌಶಿಕೀ), ತಮಸಾ, ನರ್ಮದಾ, ಗೋದಾವರೀ, ವೇಣಾ, ಉಪವೇಣಾ, ಭೀಮಾ, ವಡವಾ, ಭಾರತೀ, ಸುಪ್ರಯೋಗಾ, ಕಾವೇರೀ, ಮುರ್ಮುರಾ, ತುಂಗವೇಣೇ, ಕೃಷ್ಣವೇಣೇ, ಕಪಿಲಾ, ಶೋಣ ಈ ನದಿಗಳು ಋಷಿಗಳ ಆಶ್ರಮಕ್ಕೆ ಮಾತೃಗಳೆಂದು ಹೇಳಲ್ಪಡುತ್ತವೆ.

ಅದ್ಭುತಸ್ಯ ಪ್ರಿಯಾ ಭಾರ್ಯಾ ತಸ್ಯ ಪುತ್ರೋ ವಿಡೂರಥಃ ।
ಯಾವಂತಃ ಪಾವಕಾಃ ಪ್ರೋಕ್ತಾಃ ಸೋಮಾಸ್ತಾವಂತ ಏವ ಚ ॥೨೬॥

ಅದ್ಭುತಾಗ್ನಿಯ ಪತ್ನಿ ಪ್ರಿಯಾ. ಅವನ ಪುತ್ರ ವಿಡೂರಥ. ಎಷ್ಟು ಮಂದಿ ಅಗ್ನಿಗಳಿದ್ದಾರೆಯೋ ಅಷ್ಟುವಿಧವಾದ ಸೋಮಲತೆಗಳಿವೆ.

ಅತ್ರೇಶ್ಚೋಪ್ಯನ್ವಯೇ ಜಾತಾ ಬ್ರಹ್ಮಣೋ ಮಾನಸಾಃ ಪ್ರಜಾಃ ।
ಅಗ್ನಿಃ ಪುತ್ರಾನ್‌ಸ್ರಷ್ಟುಕಾಮಸ್ತಾನೇವಾತ್ಮನ್ಯಧಾರಯತ್ ॥೨೭॥

ಅತ್ರಿಯ ವಂಶದಲ್ಲಿಯೂ ಬ್ರಹ್ಮದೇವರ ಮಾನಸಪುತ್ರರು ಜನಿಸಿದರು. ಅಗ್ನಿಪುತ್ರರನ್ನು ಸೃಷ್ಟಿಸಲು ಬಯಸಿದ ಬ್ರಹ್ಮದೇವರು ಅವುಗಳನ್ನು ಜಗತ್ತಿನಲ್ಲಿ ಸಂಚಾರಕ್ಕೆ ಬಿಟ್ಟರೆ ಜಗತ್ತು ನಾಶವಾಗುವುದೆಂಬ ಭಯದಿಂದ ಅಗ್ನಿಪುತ್ರರನ್ನು ತನ್ನ ದೇಹದಲ್ಲಿಯೇ ಧರಿಸಿ ಇಟ್ಟುಕೊಂಡನು.

ತಸ್ಯ ತದ್ಬ್ರಹ್ಮಣಃ ಕಾಯಾನ್ನಿರ್ಹರಂತಿ ಹುತಾಶನಾಃ ॥೨೮॥

ಈ ಅಗ್ನಿಗಳು ತಮ್ಮ ಕಾರ್ಯವಿದ್ದಾಗ ಬ್ರಹ್ಮದೇವರ ದೇಹದಿಂದ ಹೊರಗೆ ಬರುತ್ತಾರೆ (ಕಾರ್ಯವು ಮುಗಿದ ಮೇಲೆ ಪುನಃ ಅಲ್ಲಿಯೇ ಪ್ರವೇಶಿಸುತ್ತಾರೆ).

ಏವಮೇತೇ ಮಹಾತ್ಮಾನಃ ಕೀರ್ತಿತಾಸ್ತೇऽಗ್ನಯೋ ಯಥಾ ।
ಅಪ್ರಮೇಯಾ ಯಥೋತ್ಪನ್ನಾಃ ಶ್ರೀಮಂತಸ್ತಿಮಿರಾಪಹಾಃ ॥೨೯॥

ಹೀಗೆ ಅಪ್ರಮೇಯರೂ, ಕಾಂತಿಯುಕ್ತರೂ, ಅಂಧಕಾರನಾಶಕರೂ, ಮಹಾನುಭಾವರೂ ಆದ ಈ ಅಗ್ನಿಗಳು ಹೇಗೆ ಉತ್ಪನ್ನರಾದರೆಂದು ನಾನು ನಿನಗೆ ತಿಳಿಸಿದ್ದೇನೆ.

ಅದ್ಭುತಸ್ಯ ತು ಮಾಹಾತ್ಮ್ಯಂ ಯಥಾ ವೇದೇಷು ಕೀರ್ತಿತಮ್ ।
ತಾದೃಶಂ ವಿದ್ಧಿ ಸರ್ವೇಷಾಮೇಕೋ ಹ್ಯೇಷ ಹುತಾಶನಃ ॥೩೦॥

ಅದ್ಭುತನ ಮಹಾತ್ಮೆಯನ್ನು ವೇದಗಳು ಹೇಗೆ ಹೇಳಿವೆಯೋ ಹಾಗೆಯೇ ತಿಳಿಯುವವನಾಗು. ಈ ಎಲ್ಲ ಅಗ್ನಿಗಳಿಗೂ ಒಬ್ಬ ಅಗ್ನಿಯಾದ ಹುತಾಶನನೇ ಮೂಲನಾದವನು.

ಏಕ ಏವೈಷ ಭಗವಾನ್ ವಿಜ್ಞೇಯಃ ಪ್ರಥಮೋऽಂಗಿರಾಃ ।
ಬಹುಧಾ ನಿಃಸೃತಃ ಕಾಯಾಜ್ಜ್ಯೋತಿಷ್ಟೋಮಃ ಕ್ರತುರ್ಯಥಾ ॥೩೧॥

ಪೂಜ್ಯನಾದ ಇವನು ಒಬ್ಬನೇ ಇವನು ಅಂಗಿರಸರ ಪ್ರಥಮ ಪುತ್ರ. ಜ್ಯೋತಿಷ್ಟೋಮ ಯಾಗವು ಅನೇಕ ರೂಪಗಳನ್ನು ಧರಿಸಿದಂತೆ ಅವನು ಬೇರೆ ಬೇರೆ ಶರೀರಗಳಿಂದ ಅನೇಕ ರೂಪವನ್ನು ಧರಿಸಿಬಂದಿದ್ದಾನೆ.

ಇತ್ಯೇಷ ವಂಶಃ ಸುಮಹಾನಗ್ನೀನಾಂ ಕೀರ್ತಿತೋ ಮಯಾ ।
ಯೋಽರ್ಚಿತೋ ವಿವಿಧೈರ್ಮಂತ್ರೈರ್ಹವ್ಯಂ ವಹತಿ ದೇಹಿನಾಮ್ ॥೩೨॥

ಯಾವ ಅಗ್ನಿಯು ಅನೇಕ ಮಂತ್ರಗಳಿಂದ ಪೂಜಿತನಾಗಿ ದೇವತೆಗಳಿಗೆ ಮತ್ತು ಉಳಿದವರಿಗೆ ಹವ್ಯಗಳನ್ನು ತೆಗೆದುಕೊಂಡು ಹೋಗುತ್ತಾನೆಯೋ ಅಂತಹ ಅಗ್ನಿಯ ಈ ಬಹಳ ದೊಡ್ಡದಾದ ವಂಶವನ್ನು ನಾನು ನಿನಗೆ ಹೇಳಿದ್ದೇನೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ದ್ವಾದಶಾಧಿಕದ್ವಿಶತಶತತಮೋಽಧ್ಯಾಯಃ ॥
॥ ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಆಂಗಿರಸೇ ಪಂಚಮೋಽಧ್ಯಾಯಃ ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹನ್ನೆರಡನೆಯ ಅಧ್ಯಾಯ ಮುಗಿಯಿತು

॥ ಆಂಗಿರಸೋಪಾಖ್ಯಾನ ಸಮಾಪ್ತವಾಯಿತು ॥

★ ★ ★ ★

ಇನ್ನೂರ ಹದಿಮೂರನೆಯ ಅಧ್ಯಾಯ

ಮಾರ್ಕಂಡೇಯರಿಂದ ಕುಮಾರೋತ್ಪತ್ತಿ ಪ್ರಕಾರ ಕಥನ ಪ್ರಾರಂಭ.

ಮಾರ್ಕಂಡೇಯಃ

ಅಗ್ನೀನಾಂ ವಿವಿಧಾ ವಂಶಾಃ ಕೀರ್ತಿತಾಸ್ತೇ ಮಯಾಽನಘ ।
ಶೃಣು ಜನ್ಮ ತು ಕೌರವ್ಯ ಕಾರ್ತ್ತಿಕೇಯಸ್ಯ ಧೀಮತಃ ॥೧॥

ಮಾರ್ಕಂಡೇಯ– ಎಲೈ ಅನಘನೇ, ನಾನು ಅಗ್ನಿಗಳ ಅನೇಕ ವಿಧವಾದ ವಂಶಗಳನ್ನು ನಿನಗೆ ಹೇಳಿದ್ದೇನೆ. ಕೌರವ್ಯನೇ, ಮೇಧಾವಿಯಾದ ಕಾರ್ತಿಕೇಯನ ಜನ್ಮವನ್ನು ಕೇಳು.

ಅದ್ಭುತಸ್ಯಾದ್ಭುತಂ ಪುತ್ರಂ ಪ್ರವಕ್ಷ್ಯಾಮ್ಯಮಿತೌಜಸಮ್ ।
ಜಾತಂ ಬ್ರಹ್ಮರ್ಷಿಭಾರ್ಯಾಭಿರ್ಬ್ರಹ್ಮಣ್ಯಂ ಕೀರ್ತಿವರ್ಧನಮ್ ॥೨॥

ಅದ್ಭುತನಾಮಕ ಅಗ್ನಿಯಿಂದ ಜನಿಸಿದ ಬ್ರಹ್ಮರ್ಷಿ ಪತ್ನಿಯರಿಂದಲೂ ಜನಿಸಿದ ಬ್ರಾಹ್ಮಣವತ್ಸಲನೂ, ಕೀರ್ತಿವರ್ಧನನೂ, ಅಮಿತಪರಾಕ್ರಮಿಯೂ ಆದ ಅದ್ಭುತನಾದ ಷಣ್ಮುಖನ ಕಥೆಯನ್ನು ಹೇಳುವೆನು.

ದೇವಾಸುರಾಃ ಪುರಾ ಯತ್ತಾ ವಿನಿಘ್ನಂತಃ ಪರಸ್ಪರಮ್ ।
ತತ್ರಾಜಯನ್ ಸದಾ ದೇವಾನ್ ದಾನವಾ ಘೋರರೂಪಿಣಃ ॥೩॥

ಹಿಂದೆ ದೇವಾಸುರರು ಪರಸ್ಪರವಾಗಿ ಕೊಲ್ಲುತ್ತಾ ಯುದ್ಧದಲ್ಲಿ ನಿರತರಾಗಿದ್ದರು. ಆ ಯುದ್ಧಗಳಲ್ಲಿ ಘೋರರೂಪವುಳ್ಳ ದಾನವರು ಯಾವಾಗಲೂ ದೇವತೆಗಳನ್ನು ಜಯಿಸುತ್ತಿದ್ದರು.

ವಧ್ಯಮಾನಂ ಬಲಂ ದೃಷ್ಟ್ವಾ ಬಹುಶಸ್ತೈಃ ಪುರಂದರಃ ।
ಸ ಸೈನ್ಯನಾಯಕಾರ್ಥಾಯ ಚಿಂತಾಮಾಪ ಭೃಶಂ ತದಾ ॥೪॥

ತನ್ನ ಸೈನ್ಯವು ಬಹಳವಾಗಿ ಅವರಿಂದ ಹತವಾಗುತ್ತಿದ್ದುದನ್ನು ನೋಡಿ ಪುರಂದರನು ಒಬ್ಬ ಸೇನಾಪತಿಯ ಸಲುವಾಗಿ ಬಹಳ ಚಿಂತೆಯನ್ನು ಮಾಡಿದನು.

ದೇವಸೇನಾಂ ದಾನವೈರ್ಹಿ ಭಗ್ನಾಂ ದೃಷ್ಟ್ವಾ ಮಹಾಬಲಃ ।
ಪಾಲಯೇದ್ ವೀರ್ಯಮಾಶ್ರಿತ್ಯ ಸ ಜ್ಞೇಯಃ ಪುರುಷೋ ಮಯಾ ।

ದೇವಸೇನೆಯು ದಾನವರಿಂದ ಭಗ್ನವಾಗುತ್ತಿದುದನ್ನು ನೋಡಿ ಮಹಾಬಲನಾದ ಯಾವನು ತನ್ನ ಶೌರ್ಯದಿಂದ ದೇವಸೇನೆಯನ್ನು ಪಾಲಿಸುವನೋ ಅಂತಹ ಪುರುಷನನ್ನು ನಾನು ತಿಳಿಯಬೇಕು (ಎಂದು ಚಿಂತಿಸಿದನು).

ಸ ಶೈಲಂ ಮಾನಸಂ ಗತ್ವಾ ಧ್ಯಾಯನ್ನರ್ಥಮಿಮಂ ಭೃಶಮ್ ।
ಶುಶ್ರಾವಾರ್ತಸ್ವರಂ ಘೋರಮಥ ಮುಕ್ತಂ ಸ್ತ್ರಿಯಾ ತದಾ ॥೫॥

ಅವನು ಮಾನಸ ಸರೋವರಕ್ಕೆ ಹೋಗಿ ಇದೇ ವಿಷಯವನ್ನು ಚಿಂತಿಸುತ್ತಿರುವಾಗ ದೈತ್ಯಭಯದಿಂದ ಉಂಟಾದ ಒಬ್ಬ ವನಿತೆಯ ಘೋರವಾದ ಆರ್ತಸ್ವರವನ್ನು ಕೇಳಿದನು.

ಅಭಿಧಾವತು ಮಾಂ ಕಶ್ಚಿತ್ ಪುರುಷಸ್ತ್ವತು ಚೈವ ಹ ।
ಪತಿಂ ಚ ಮೇ ಪ್ರದಿಶತು ಸ್ವಯಂ ವಾ ಪತಿರಸ್ತು ಮೇ ॥೬॥

ನನ್ನನ್ನು ದೈತ್ಯರಿಂದ ರಕ್ಷಿಸಲು ಯಾವನಾದರೂ ಪುರುಷನು ಬೇಗ ಬರಲಿ. ಅವನು ನನಗೆ ಪತಿಯನ್ನೂ ಕೊಡಲಿ ಅಥವಾ ತಾನೇ ನನ್ನ ಪತಿಯಾಗಲಿ (ಎಂಬ ಸ್ವರವು ಕೇಳಿಬಂದಿತು).

ಮಾರ್ಕಂಡೇಯಃ

ಪುರಂದರಸ್ತು ತಾಮಾಹ ಮಾ ಭೈರ್ನಾಸ್ತಿ ಭಯಂ ತವ ॥೭॥

ಮಾರ್ಕಂಡೇಯ– ಪುರಂದರನಾದರೂ ಅವಳನ್ನು ಕುರಿತು ಹೆದರಬೇಡ, ನಿನಗೆ ಭಯವಿಲ್ಲ ಎಂದು ಹೇಳಿದನು.

ಏವಮುಕ್ತ್ವಾ ತತೋಽಪಶ್ಯತ್ ಕೇಶಿನಂ ಸ್ಥಿತಮಗ್ರತಃ ।
ಕಿರೀಟಿನಂ ಗದಾಪಾಣಿಂ ಧಾತುಮಂತಮಿವಾಚಲಮ್ ।
ಹಸ್ತೇ ಗೃಹೀತ್ವಾ ಕನ್ಯಾಂ ತಾಮಥೈನಂ ವಾಸವೋಽಬ್ರವೀತ್ ॥೮॥

ಅನಾರ್ಯಕರ್ಮನ್ ಕಸ್ಮಾತ್ ತ್ವಮಿಮಾಂ ಕನ್ಯಾಂ ಜಿಹೀರ್ಷಸಿ ।
ವಜ್ರಿಣಂ ಮಾಂ ವಿಜಾನೀಹಿ ವಿರಮಾಸ್ಯಾಃ ಪ್ರಬಾಧನಾತ್ ॥೯॥

ಹೀಗೆ ಹೇಳಿ ಅವನು ಆಗ ತನ್ನ ಎದುರಿಗೆ ಕಿರೀಟವನ್ನು ಧರಿಸಿ ಗದಾಪಾಣಿಯಾಗಿ ಧಾತುಗಳಿಂದ ಕೂಡಿದ ಪರ್ವತದಂತೆ ನಿಂತಿದ್ದ ಕೇಶಿ ದೈತ್ಯನನ್ನು ನೋಡಿದನು. ಆ ಕನ್ಯೆಯನ್ನು ಹಸ್ತದಲ್ಲಿ ಹಿಡಿದುಕೊಂಡು ವಾಸವನು ಕೇಶಿಯನ್ನು ಕುರಿತು ಅನಾರ್ಯಕಾರ್ಯವನ್ನು ಮಾಡುವವನೇ ನೀನು ಏಕೆ ಈ ಕನ್ಯೆಯನ್ನು ಎಳೆದೊಯ್ಯುತ್ತಿದ್ದೀಯೆ? ನಾನು ವಜ್ರಧರನಾದ ಇಂದ್ರನೆಂದು ತಿಳಿ. ಇವಳನ್ನು ಪೀಡಿಸುವುದನ್ನು ನಿಲ್ಲಿಸು ಎಂದು ಹೇಳಿದನು.

ಕೇಶೀ

ವಿಸೃಜಸ್ವ ತ್ವಮೇವೈನಾಂ ಶಕ್ರೈಷಾ ಪ್ರಾರ್ಥಿತ ಮಯಾ ।
ಕ್ಷಮಂ ತೇ ಜೀವತೋ ಗಂತುಂ ಸ್ವಪುರಂ ಪಾಕಶಾಸನ ॥೧೦॥

ಕೇಶೀ– ಶಕ್ರನೇ, ನೀನೇ ಅವಳ ಕೈಯನ್ನು ಬಿಡು. ನಾನು ಅವಳನ್ನು ಬಯಸಿ ಪ್ರಾರ್ಥಿಸಿದ್ದೇನೆ. ಪಾಕಶಾಸನನೇ, ಹಾಗೆ ಮಾಡಿದರೆ ನೀನು ಜೀವಸಹಿತನಾಗಿ ನಿನ್ನ ಪಟ್ಟಣಕ್ಕೆ ಹಿಂದಿರುಗಲು ಸಾಧ್ಯ.

ಮಾರ್ಕಂಡೇಯಃ

ಏವಮುಕ್ತ್ವಾ ಗದಾಂ ಕೇಶೀ ಚಿಕ್ಷೇಪೇಂದ್ರವಧಾಯ ವೈ ।
ತಾಮಾಪತಂತೀಂ ಚಿಚ್ಛೇದ ಮಧ್ಯೇ ವಜ್ರೇಣ ವಾಸವಃ ॥೧೧॥

ಮಾರ್ಕಂಡೇಯ– ಹೀಗೆ ಹೇಳಿ ಕೇಶಿಯು ಇಂದ್ರವಧೆಯನ್ನು ಮಾಡಲು ಗದೆಯನ್ನು ಬೀಸಿದನು. ಇಂದ್ರನು ಅದು ತನ್ನೆಡೆಗೆ ಬರುತ್ತಿರುವಾಗಲೇ ವಜ್ರಾಯುಧದಿಂದ ಅದನ್ನು ಕತ್ತರಿಸಿದನು.

ಅಥಾಸ್ಯ ಶೈಲಶಿಖರಂ ಕೇಶೀ ಕ್ರುದ್ಧೋ ವ್ಯವಾಸೃಜತ್ ॥೧೨॥

ತದಾಪತಂತಂ ಸಂಪ್ರೇಕ್ಷ್ಯ ಶೈಲಶೃಂಗಂ ಶತಕ್ರತುಃ ।
ಬಿಭೇದ ರಾಜನ್ ವಜ್ರೇಣ ಭುವಿ ತನ್ನಿಪಪಾತ ಹ ॥೧೩॥

ಎಲೈ ರಾಜನೇ, ಅನಂತರ ಕ್ರುದ್ಧನಾದ ಕೇಶಿಯು ಪರ್ವತಶಿಖರವೊಂದನ್ನು ಅವನ ಮೇಲೆ ಎಸೆದನು. ಇಂದ್ರನು ಆ ಶೈಲಶೃಂಗವು ತನ್ನೆಡೆಗೆ ಬರುತ್ತಿರುವುದನ್ನು ನೋಡಿ ವಜ್ರಾಯುಧದಿಂದ ಅದನ್ನು ಭೇದಿಸಿದನು. ಅದು ಭೂಮಿಯಲ್ಲಿ ಬಿದ್ದುಹೋಯಿತು.

ಪತತಾ ತು ತದಾ ಕೇಶೀ ತೇನ ಶೃಂಗೇಣ ತಾಡಿತಃ ।
ಹಿತ್ವಾ ಕನ್ಯಾಂ ಮಹಾಭಾಗಾಂ ಪ್ರಾದ್ರವದ್ ಭೃಶಪೀಡಿತಃ ॥೧೪॥

ಆ ಶೈಲಶೃಂಗವು ಬೀಳುತ್ತಾ ಕೇಶಿಯ ಮೇಲೆ ಬಿದ್ದಿತು. ಆಗ ಅವನು ಅದರಿಂದ ಬಹಳ ಪೀಡಿತನಾಗಿ ಮಹಾನುಭಾವಳಾದ ಆ ಕನ್ಯೆಯನ್ನು ಬಿಟ್ಟು ಓಡಿಹೋದನು.

ಅಪಯಾತೇऽಸುರೇ ತಸ್ಮಿಂಸ್ತಾಂ ಕನ್ಯಾಂ ವಾಸವೋऽಬ್ರವೀತ್ ।
ಕಾಸಿ ಕಸ್ಯಾಸಿ ಕಿಂಚೇಹ ಕುರುಷೇ ತ್ವಂ ಶುಭಾನನೇ ॥೧೫॥

ಆ ಅಸುರನು ಓಡಿಹೋಗುತ್ತಿರಲು ಇಂದ್ರನು ಆ ಕನ್ಯೆಯನ್ನು ಕುರಿತು ಶುಭಾನನೆಯೇ, ನೀನು ಯಾರು? ಯಾರಿಗೆ ಸೇರಿದವಳು? ಇಲ್ಲಿ ಏನು ಮಾಡುತ್ತಿದ್ದೀಯೆ? ಎಂದು ಕೇಳಿದನು.

ಕನ್ಯಾ

ಅಹಂ ಪ್ರಜಾಪತೇಃ ಕನ್ಯಾ ದೇವಸೇನೇತಿ ವಿಶ್ರುತಾ ।
ಭಗಿನೀ ಮೇ ದೈತ್ಯಸೇನಾ ಸಾ ಪೂರ್ವಂ ಕೇಶಿನಾ ಹೃತಾ ॥೧೬॥

ಕನ್ಯಾ– ನಾನು ದಕ್ಷಪ್ರಜಾಪತಿಯ ಪುತ್ರಿ. ದೇವಸೇನಾ ಎಂದು ಪ್ರಸಿದ್ಧಳಾಗಿದ್ದೇನೆ. ದೈತ್ಯಸೇನೆಯು ನನ್ನ ಸಹೋದರಿ. ಅವಳನ್ನು ಕೇಶಿಯು ಮೊದಲೇ ಅಪಹರಿಸಿದ್ದಾನೆ.

ಸದೈವಾವಾಂ ಭಗಿನ್ಯೌ ತು ಸಖೀಭಿಃ ಸಹ ಮಾನಸಮ್ ।
ಆಗಚ್ಛಾವೇಹ ರತ್ಯರ್ಥಮನುಜ್ಞಾಯ ಪ್ರಜಾಪತಿಮ್ ॥೧೭॥

ನಾವಿಬ್ಬರು ಅಕ್ಕತಂಗಿಯರು ದಕ್ಷಪ್ರಜಾಪತಿಯ ಅಪ್ಪಣೆಯನ್ನು ಪಡೆದು ನಮ್ಮ ಸಖಿಯರ ಜೊತೆಯಲ್ಲಿ ಈ ಮಾನಸ ಸರೋವರಕ್ಕೆ ಆಟವಾಡಲು ಯಾವಾಗಲೂ ಬರುತ್ತೇವೆ.

ನಿತ್ಯಂ ಚಾವಾಂ ಪ್ರಾರ್ಥಯತೇ ಹರ್ತುಂ ಕೇಶೀ ಮಹಾಸುರಃ ।
ಇಚ್ಛತ್ಯೇನಂ ದೈತ್ಯಸೇನಾ ನ ಚಾಹಂ ಪಾಕಶಾಸನ ॥೧೮॥

ಈ ಮಹಾಸುರನಾದ ಕೇಶಿಯು ಯಾವಾಗಲೂ ನಮ್ಮನ್ನು ಎಳೆದೊಯ್ಯಲು ನಮ್ಮಿಬ್ಬರನ್ನೂ ಪ್ರಾರ್ಥಿಸುತ್ತಾನೆ. ಪಾಕಶಾಸನನೇ, ದೈತ್ಯಸೇನೆಯು ಅವನನ್ನು ಬಯಸುತ್ತಾಳೆ. ನಾನು ಬಯಸುವುದಿಲ್ಲ.

ಸಾ ಹೃತಾऽನೇನ ಭಗವನ್ ಮುಕ್ತಾऽಹಂ ತ್ವದ್ಬಲೇನ ತು ।
ತ್ವಯಾ ದೇವೇಂದ್ರ ನಿರ್ದಿಷ್ಟಂ ಪತಿಮಿಚ್ಛಾಮಿ ದುರ್ಜಯಮ್ ॥೧೯॥

ಪೂಜ್ಯನೇ, ಅವಳು ಅವನಿಂದ ಕರೆದೊಯ್ಯಲ್ಪಟ್ಟಿದ್ದಾಳೆ. ನಿನ್ನ ಸಾಮರ್ಥ್ಯದಿಂದ ನಾನು ಮುಕ್ತಳಾಗಿದ್ದೇನೆ. ದೇವೇಂದ್ರನೇ, ನೀನು ಸೂಚಿಸಿದ ದುರ್ಜಯನಾದ ಪತಿಯನ್ನು ಹೊಂದಲು ನಾನು ಬಯಸುತ್ತೇನೆ.

ಇಂದ್ರಃ

ಮಮ ಮಾತೃಷ್ವಸೇಯೀ ತ್ವಂ ಮಾತಾ ದಾಕ್ಷಾಯಣೀ ಮಮ ।
ಆಖ್ಯಾತಂ ತ್ವಹಮಿಚ್ಛಾಮಿ ಸ್ವಯಮಾತ್ಮಬಲಂ ತ್ವಯಾ ॥೨೦॥

ಇಂದ್ರ– ನೀನು ನನ್ನ ಚಿಕ್ಕಮ್ಮನ ಮಗಳು. ನನ್ನ ತಾಯಿಯು ದಕ್ಷಪುತ್ರಿ. ನಿನ್ನ ಬಲವು ಏನೆಂದು ಹೇಳು. ಅದನ್ನು ನಾನು ಕೇಳಲು ಬಯಸುತ್ತೇನೆ.

ಕನ್ಯಾ

ಅಬಲಾऽಹಂ ಮಹಾಬಾಹೋ ಪತಿಸ್ತು ಬಲವಾನ್ ಮಮ ।
ವರದಾನಾತ್ ಪಿತುರ್ಭಾವೀ ಸುರಾಸುರನಮಸ್ಕೃತಃ ॥೨೧॥

ಕನ್ಯಾ– ಮಹಾಬಾಹುವೇ, ನಾನು ಅಬಲೆ. ನನ್ನ ತಂದೆಯ ವರದಾನದಿಂದ ನನ್ನ ಪತಿಯು ಬಲಿಷ್ಠನೂ ಮತ್ತು ಸುರಾಸುರನಮಸ್ಕೃತನೂ ಆಗುವನು.

ಇಂದ್ರಃ

ಕೀದೃಶಂ ತು ಬಲಂ ದೇವಿ ಪತ್ಯುಸ್ತವ ಭವಿಷ್ಯತಿ ।
ಏತದಿಚ್ಛಾಮ್ಯಹಂ ಶ್ರೋತುಂ ತವ ವಾಕ್ಯಮನಿಂದಿತೇ ॥೨೨॥

ಇಂದ್ರ– ದೇವಿಯೇ, ನಿನ್ನ ಪತಿಯು ಎಂತಹ ಬಲವುಳ್ಳವನಾಗುವನು? ಅನಿಂದಿತೆಯೇ, ಇದಕ್ಕೆ ಉತ್ತರವಾಗಿ ನಿನ್ನ ಮಾತನ್ನು ಕೇಳಲು ಬಯಸುತ್ತೇನೆ.

ಕನ್ಯಾ

ದೇವದಾನವಯಕ್ಷಾಣಾಂ ಕಿನ್ನರೋರಗರಕ್ಷಸಾಮ್ ।
ಜೇತಾ ಯೋ ದುಷ್ಪದೈತ್ಯಾನಾಂ ಮಹಾವೀರ್ಯೋ ಮಹಾಬಲಃ ॥೨೩॥

ಯಸ್ತು ಸರ್ವಾಣಿ ಭೂತಾನಿ ತ್ವಯಾ ಸಹ ವಿಜೇಷ್ಯತಿ ।
ಸ ಹಿ ಮೇ ಭವಿತಾ ಭರ್ತಾ ಬ್ರಹ್ಮಣ್ಯಃ ಕೀರ್ತಿವರ್ಧನಃ ॥೨೪॥

ಕನ್ಯಾ– ಯಾವನು ದೇವದಾನವಯಕ್ಷರನ್ನೂ, ಕಿನ್ನರೋರಗರಾಕ್ಷಸರನ್ನೂ, ದುಷ್ಪ ದೈತ್ಯರನ್ನೂ ಜಯಿಸುವನೋ ಮತ್ತು ಯಾವನು ನಿನ್ನ ಜೊತೆಯಲ್ಲಿ ಎಲ್ಲರನ್ನೂ ಜಯಿಸುವನೋ ಅಂತಹ ಮಹಾಬಲನೂ, ಮಹಾಪರಾಕ್ರಮಿಯೂ, ಬ್ರಾಹ್ಮಣ ವತ್ಸಲನೂ, ಕೀರ್ತಿವರ್ಧನನೂ ಆದವನು ನನ್ನ ಪತಿಯಾಗುವನು.

ಮಾರ್ಕಂಡೇಯಃ

ಇಂದ್ರಸ್ತಸ್ಯಾ ವಚಃ ಶ್ರುತ್ವಾ ದುಃಖಿತೋಽಚಿಂತಯದ್ ಭೃಶಮ್ ।
ಅಸ್ಯಾ ದೇವ್ಯಾಃ ಪತಿರ್ನಾಸ್ತಿ ಯಾದೃಶಂ ಸಂಪ್ರಭಾಷತೇ ॥೨೫॥

ಮಾರ್ಕಂಡೇಯ– ಇಂದ್ರನು ಅವಳ ಮಾತನ್ನು ಕೇಳಿ ಈ ದೇವಿಯು ಎಂತಹ ಪತಿಯನ್ನು ಹೇಳುತ್ತಾಳೆಯೋ ಅಂತಹವರು ಯಾರೂ ಕಾಣುವುದಿಲ್ಲ ಎಂದು ಬಹಳ ದುಃಖಿತನಾದನು.

ಅಥಾಪಶ್ಯತ್ ಸ ಉದಯೇ ಭಾಸ್ಕರಂ ಭಾಸ್ಕರದ್ಯುತಿಃ ।
ಸೋಮಂ ಚೈವ ಮಹಾಭಾಗಂ ವಿಶಮಾನಂ ದಿವಾಕರಮ್ ॥೨೬॥

ಆಗ ಭಾಸ್ಕರದ್ಯುತಿಯುಳ್ಳ ಅವನು ಉದಯಿಸುತ್ತಿರುವ ಸೂರ್ಯನನ್ನೂ, ಮಹಾನುಭಾವನಾದ ಚಂದ್ರನು ಸೂರ್ಯನನ್ನು ಪ್ರವೇಶಿಸುತ್ತಿರುವುದನ್ನೂ ನೋಡಿದನು.

ಅಮಾವಾಸ್ಯಾಂ ಪ್ರವೃತ್ತಾಯಾಂ ಮುಹೂರ್ತೇ ರೌದ್ರ ಏವ ತು ।
ದೇವಾಸುರಂ ಚ ಸಂಗ್ರಾಮಂ ಸೋಽಪಶ್ಯದುದಯೇ ಗಿರೌ ॥೨೭॥

ಅಮಾವಾಸ್ಯೆಯು ಪ್ರವೃತ್ತವಾಗುತ್ತಿರಲು ರೌದ್ರ ಮುಹೂರ್ತದಲ್ಲಿ ಅವನು ದೇವಾಸುರ ಸಂಗ್ರಾಮವುಂಟಾಗುವುದೆಂದು ಉದಯಗಿರಿಯಲ್ಲಿಯೇ ನೋಡಿದನು (ನಿಶ್ಚಯಿಸಿದನು).

ಲೋಹಿತೈಶ್ಚ ಘನೈರ್ಯುಕ್ತಾಂ ಪೂರ್ವಾಂ ಸಂಧ್ಯಾಂ ಶತಕ್ರತುಃ ।
ಅಪಶ್ಯಲ್ಲೋಹಿತೋದಂ ಚ ಭಗವಾನ್ ವರುಣಾಲಯಮ್ ॥೨೮॥

ಪೂಜ್ಯನಾದ ಇಂದ್ರನು ಪೂರ್ವಸಂಧ್ಯೆಯು ಕೆಂಪು ಮೋಡಗಳಿಂದ ಕೂಡಿರುವುದನ್ನೂ, ವರುಣಾಲಯವು ಆ ಕಾಲದಲ್ಲಿ ಕೆಂಪು ನೀರಿನಿಂದ ಕೂಡಿರುವುದನ್ನೂ ಗಮನಿಸಿದನು (ನೋಡಿದನು).

ಭೃಗುಭಿಶ್ಚಾಂಗಿರೋಭಿಶ್ಚ ಹುತಂ ಮಂತ್ರೈಃ ಪೃಥಗ್ವಿಧೈಃ ।
ಹವ್ಯಂ ಗೃಹೀತ್ವಾ ವಹ್ನಿಂ ಚ ಪ್ರವಿಶಂತಂ ದಿವಾಕರಮ್ ॥೨೯॥

ಭೃಗುಗಳಿಂದಲೂ ಮತ್ತು ಅಂಗಿರಸರಿಂದಲೂ ಮಂತ್ರಪೂರ್ವಕವಾಗಿ ಕೊಡಲ್ಪಟ್ಟ ವಿಧವಿಧವಾದ ಆಹುತಿಗಳನ್ನು ಸ್ವೀಕರಿಸಿ ಅಗ್ನಿಯನ್ನು ಪ್ರವೇಶಿಸುತ್ತಿರುವ ದಿವಾಕರನನ್ನು ನೋಡಿದನು.

ಪರ್ವ ಚೈವ ಚತುರ್ವಿಂಶತ್ ತದಾ ಸೂರ್ಯಮುಪಸ್ಥಿತಮ್ ।
ತಥಾ ಸೂರ್ಯಂ ವಹ್ನಿಗತಂ ಸೋಮಂ ಸೂರ್ಯಗತಂ ಚ ತಮ್ ॥

ಸಮಾಲೋಕ್ಯೈಕತಾಮೇವ ಶಶಿನೋ ಭಾಸ್ಕರಸ್ಯ ಚ ।
ಸಮವಾಯಂ ತು ತಂ ರೌದ್ರಂ ದೃಷ್ಟ್ವಾ ಶಕ್ರೋಽನ್ವಚಿಂತಯತ್ ॥೩೧॥

ಇಪ್ಪತ್ತಾ ನ್ಕು ಪರ್ವಗಳಲ್ಲಿ ಸೂರ್ಯನಿಗೆ ಪ್ರಿಯವಾದ ಅಮಾವಾಸ್ಯಾ ಪರ್ವವು ಉಂಟಾಗುತ್ತಿದ್ದಿತು. ಹಾಗೇ ವಹ್ನಿಗತ ಸೂರ್ಯನನ್ನೂ, ಸೂರ್ಯಗತ ಚಂದ್ರನನ್ನೂ

ನೋಡಿ ಸೂರ್ಯಚಂದ್ರರು ಸಮಾಗಮವನ್ನು ಹೊಂದುವುದನ್ನು ನೋಡಿ ಆ ರೌದ್ರಮುಹೂರ್ತವನ್ನು ಗಮನಿಸಿ ಇಂದ್ರನು ಹೀಗೆ ಚಿಂತಿಸಿದನು.

ಸೂರ್ಯಾಚಂದ್ರಮಸೋಘೋರಂ ದೃಶ್ಯತೇ ಪರಿವೇಷಣಮ್ ।
ಏತಸ್ಮಿನ್ನೇವ ರಾತ್ರ್ಯಂತೇ ಮಹದ್ಯುದ್ಧಂ ತು ಶಂಸತಿ ।
ಸರಿತ್‌ಸಿಂಧುರಪೀಯಂ ತು ಪ್ರತ್ಯಸೃಗ್ವಾಹಿನೀ ಭೃಶಮ್ ।
ಶೃಗಾಲಿನ್ಯಗ್ನಿವಕ್ತ್ರಾ ಚ ಪ್ರತ್ಯಾದಿತ್ಯಂ ವಿರಾವಿಣೀ ।

ಸೂರ್ಯಚಂದ್ರರಿಗೆ ಘೋರವಾದ ಪರಿವೇಷಣವು ಕಂಡುಬರುತ್ತಿದೆ. ಇದು ಈ ರಾತ್ರಿಯ ಕೊನೆಯಲ್ಲಿಯೇ ದೊಡ್ಡ ಯುದ್ಧವನ್ನು ಸೂಚಿಸುತ್ತದೆ. ಸಮುದ್ರದ ಬಳಿ ಇರುವ ಈ ನದಿಯು ಕೆಂಪು ನೀರನ್ನು ತೆಗೆದುಕೊಂಡು ಹರಿಯುತ್ತಿದೆ. ಹೆಣ್ಣುನರಿಯು ಮುಖದಿಂದ ಅಗ್ನಿಯನ್ನು ಕಾರುತ್ತಾ ಸೂರ್ಯನನ್ನು ನೋಡಿ ಅಳುತ್ತಿದೆ.

ಏಷ ರೌದ್ರಶ್ಚ ಸಂಘಾತೋ ಮಹಾನ್ ಯುಕ್ತಶ್ಚ ತೇಜಸಾ ।
ಸೋಮಸ್ಯ ವಹ್ನಿಸೂರ್ಯಾಭ್ಯಾಮದ್ಭುತೋಽಯಂ ಸಮಾಗಮಃ ॥೩೨॥

ಇದು ಘೋರವಾದ ಮತ್ತು ವೀರ್ಯಶಾಲಿಯಾದ ಒಂದು ಸಮಾಗಮ. ಚಂದ್ರನಿಗೆ ವಹ್ನಿಸೂರ್ಯರಿಂದ ಉಂಟಾಗುವ ಈ ಸಮಾಗಮವು ಅದ್ಭುತವಾದುದು.

ಜನಯೇದ್ ಯಂ ಸುತಂ ಸೋಮಃ ಸೋಽಸ್ಯಾ ದೇವ್ಯಾಃ ಪತಿರ್ಭವೇತ್ ।
ಅಗ್ನಿಶ್ಚೈತೈರ್ಗುಣೈರ್ಯುಕ್ತಃ ಅಗ್ನೌ ಸರ್ವಾಶ್ಚ ದೇವತಾಃ ॥೩೩॥

ಏಷ ಚೇಜ್ಜನಯೇದ್ ಗರ್ಭಂ ಸೋಽಸ್ಯಾ ದೇವ್ಯಾಃ ಪತಿರ್ಭವೇತ್ ॥

ಚಂದ್ರನು ಈ ಮುಹೂರ್ತದಲ್ಲಿ ಯಾವನನ್ನಾದರೂ ಮಗನನ್ನಾಗಿ ಪಡೆದರೆ ಅವನು ಈ ದೇವಿಗೆ ಪತಿಯಾದಾನು. ಅಗ್ನಿಯೂ ಸಹ ಇಂತಹ ಗುಣಗಳಿಂದ ಕೂಡಿದವನು. ಮತ್ತು ಅಗ್ನಿಯಲ್ಲಿ ಎಲ್ಲ ದೇವತೆಗಳೂ ಇದ್ದಾರೆ. ಅಗ್ನಿಯು ಈಗ ಗರ್ಭೋತ್ಪತ್ತಿಯನ್ನು ಮಾಡಿದರೆ ಜನಿಸುವ ಪುರುಷನು ಈ ದೇವಿಗೆ ಪತಿಯಾದಾನು.

ಏವಂ ಸಂಚಿತ್ಯ ಮಘವಾನ್ ಬ್ರಹ್ಮಲೋಕಂ ತದಾ ಗತಃ ।
ಗೃಹೀತ್ವಾ ದೇವಸೇನಾಂ ತಾಮವದತ್ ಸ ಪಿತಾಮಹಮ್ ।
ಉವಾಚ ಚಾಸ್ಯಾ ದೇವ್ಯಾಸ್ತ್ವಂ ಸಾಧುಶೂರಂ ಪತಿಂ ದಿಶ ॥೩೫॥

ಹೀಗೆ ಆಲೋಚಿಸಿ ಪೂಜ್ಯನಾದ ಅವನು ದೇವಸೇನೆಯನ್ನು ಕರೆದುಕೊಂಡು ಬ್ರಹ್ಮಲೋಕಕ್ಕೆ ಹೋಗಿ ಬ್ರಹ್ಮದೇವರನ್ನು ಕುರಿತು ಈ ಕನ್ಯೆಗೆ ನೀನು ಸಾಧುವೂ ಮತ್ತು ಶೂರನೂ ಆದ ಒಬ್ಬ ಪತಿಯನ್ನು ಕರುಣಿಸು ಎಂದು ಕೇಳಿದನು.

ಬ್ರಹ್ಮಾ

ಮಯೈತಚ್ಚಿಂತಿತಂ ಕಾರ್ಯಂ ತ್ವಯಾ ದಾನವಸೂದನ ।
ತಥೈವ ಭವಿತಾ ಗರ್ಭೋ ಬಲವಾನುರುವಿಕ್ರಮಃ ॥೩೬॥

ಸ ಭವಿಷ್ಯತಿ ಸೇನಾನೀಸ್ತ್ವಯಾ ಸಹ ಶತಕ್ರತೋ ।
ಅಸ್ಯಾ ದೇವ್ಯಾಃ ಪತಿಶ್ಚೈವ ಸ ಭವಿಷ್ಯತಿ ವೀರ್ಯವಾನ್ ॥೩೭॥

ಬ್ರಹ್ಮಾ– ದಾನವ ಸೂದನನೇ, ನೀನು ಹೇಳಿದ ಕಾರ್ಯವನ್ನು ನಾನು ಮೊದಲೇ ಚಿಂತಿಸಿದ್ದೇನೆ. ನೀನು ಯೋಚಿಸಿದಂತೆಯೇ ಬಲಿಷ್ಠನೂ ಮತ್ತು ವಿಕ್ರಮಶಾಲಿಯೂ ಆದ ಒಂದು ಗರ್ಭವು ಉಂಟಾಗುವುದು. ಅವನು ನಿನ್ನ ಜೊತೆಯಲ್ಲಿ ಸೇನಾಪತಿಯಾಗುವನು. ಎಲೈ ಶತಕ್ರತುವೇ, ಪರಾಕ್ರಮಶಾಲಿಯಾದ ಅವನು ಈ ದೇವಿಗೆ ಪತಿಯೂ ಆಗುವನು.

ಮಾರ್ಕಂಡೇಯಃ

ಏತತ್ಶ್ರುತ್ವಾ ನಮಸ್ತಸ್ಮೈ ಕೃತ್ವಾಽಸೌ ಸಹ ಕನ್ಯಯಾ ।
ತತ್ರಾಭ್ಯಗಚ್ಛದ್ ದೇವೇಂದ್ರೋ ಯತ್ರ ದೇವರ್ಷಯೋಽಭವನ್ ॥೩೮॥

ಮಾರ್ಕಂಡೇಯ– ಈ ಮಾತುಗಳನ್ನು ಕೇಳಿದ ಇಂದ್ರನು ಬ್ರಹ್ಮದೇವರಿಗೆ ನಮಸ್ಕಾರವನ್ನು ಮಾಡಿ ಕನ್ಯೆಯನ್ನು ಕರೆದುಕೊಂಡು ದೇವರ್ಷಿಗಳು ಇದ್ದಲ್ಲಿಗೆ ಬಂದನು.

ವಸಿಷ್ಠಪ್ರಮುಖಾ ಮುಖ್ಯಾ ವಿಪ್ರೇಂದ್ರಾ ಸುಮಹಾಬಲಾಃ ।
ಭಾಗಾರ್ಥಂ ತಪಸೋ ಧಾತುಂ ತೇಷಾಂ ಸೋಮಂ ತಥಾಽಧ್ವರೇ ॥

ಪಿಪಾಸವೋಽಭ್ಯಯುರ್ದೇವಾಃ ಶತಕ್ರತುಪುರೋಗಮಾಃ ॥೪೦॥

ವಸಿಷ್ಠರೇ ಮೊದಲಾದ ಮಹಾಬಲಶಾಲಿಗಳೂ ಮತ್ತು ಪ್ರಧಾನರೂ ಆದ ವಿಪ್ರರಿಂದಲೂ ತಮ್ಮ ತಪಸ್ಸಿನ ಭಾಗವನ್ನು ಇಂದ್ರನಿಗೆ ಆಧಾನವನ್ನು ಮಾಡಲು

(ಕಾಯುತ್ತಿದ್ದರು). ಅವರ ಯಾಗದಲ್ಲಿ ಸೋಮವನ್ನು ಪಾನಮಾಡುವ ಇಚ್ಛೆಯಿಂದಲೂ ಇಂದ್ರ ಮೊದಲಾದ ದೇವತೆಗಳು ಅಲ್ಲಿಗೆ ಹೋದರು.

ಇಷ್ಟಿಂ ಕೃತ್ವಾ ಯಥಾನ್ಯಾಯಂ ಸುಸಮಿದ್ಧೇ ಹುತಾಶನೇ ।
ಜುಹುವುಸ್ತೇ ಮಹಾತ್ಮಾನೋ ಹವ್ಯಂ ಸರ್ವದಿವೌಕಸಾಮ್ ॥೪೧॥

ಆ ಮಹಾನುಭಾವರು ಪ್ರಜ್ವಲಿಸುವ ಅಗ್ನಿಯಲ್ಲಿ ವಿಧಿಪೂರ್ವಕವಾಗಿ ಇಷ್ಟಿಯನ್ನು ಮಾಡಿ ಎಲ್ಲ ದೇವತೆಗಳಿಗೂ ಹವಿಸ್ಸನ್ನು ಹೋಮ ಮಾಡಿದರು.

ಸಮಾಹೂತೋ ಹುತವಹಃ ಸೋಽದ್ಭುತಃ ಸೂರ್ಯಮಂಡಲಾತ್ ।
ವಿನಿಃಸೃತ್ಯ ಯಯೌ ವಹ್ನಿರ್ವಾಗ್ಯತೋ ವಿಧಿವತ್ ಪ್ರಭುಃ ॥೪೨॥

ಅಗ್ನಿಯನ್ನು ಆಹ್ವಾನ ಮಾಡಿದಾಗ ಪ್ರಭುವಾದ ಅದ್ಭುತನಾಮಕ ಅಗ್ನಿಯು ಸೂರ್ಯಮಂಡಲದಿಂದ ಹೊರಗೆ ಬಂದು ಮೌನವಾಗಿ ವಿಧಿಪೂರ್ವಕವಾಗಿ ಹವಿಸ್ಸನ್ನು ಸ್ವೀಕರಿಸಿದನು.

ಆಗಮ್ಯಾಹವನೀಯಂ ವೈ ತೈರ್ದ್ವಿಜೈರ್ಮಂತ್ರತೋ ಹುತಮ್ ।
ಸ ತತ್ರ ವಿವಿಧಂ ಹವ್ಯಂ ಪ್ರತಿಗೃಹ್ಯ ಹುತಾಶನಃ ॥೪೩॥

ಋಷಿಭ್ಯೋ ಭರತಶ್ರೇಷ್ಠ ಪ್ರಾಯಚ್ಛತ ದಿವೌಕಸಾಮ್ ।
ನಿಷ್ಕ್ರಮಂಶ್ಚಾಪ್ಯಪಶ್ಯತ್ ಸ ಪತ್ನೀಸ್ತೇಷಾಂ ಮಹಾತ್ಮನಾಮ್ ॥೪೪॥

ಆ ಅಗ್ನಿಯು ಆಹವನೀಯ ವಹ್ನಿಸ್ಥಾನದಲ್ಲಿ ಬಂದು ಆ ಬ್ರಾಹ್ಮಣರಿಂದ ಮಂತ್ರಪೂರ್ವಕವಾಗಿ ಕೊಡಲ್ಪಟ್ಟ ವಿವಿಧ ಹವಿಸ್ಸನ್ನು ಋಷಿಗಳಿಂದ ಸ್ವೀಕರಿಸಿ ದೇವತೆಗಳಿಗೆ ಅದನ್ನು ತಲುಪಿಸಿದನು. ಎಲೈ ಭರತಶ್ರೇಷ್ಠನೇ, ಅವನು ಅಲ್ಲಿಂದ ಹೊರಗೆ ಬರುತ್ತಾ ಮಹಾನುಭಾವರಾದ ಆ ಋಷಿಗಳ ಪತ್ನಿಯರನ್ನು ನೋಡಿದನು.

ಸ್ವೇಷ್ವಾಸನೇಷೂಪವಿಷ್ಟಾಃ ಸ್ವಪಂತೀಶ್ಚ ತಥಾ ಸುಖಮ್ ।
ದೃಷ್ಟ್ವಾ ಶ್ರಮೇಷೂಪವಿಷ್ಟಾಃ ಸ್ನಾಯಂತೀಶ್ಚ ಪತಿವ್ರತಾಃ ।
ರುಗ್ವೇದಿನಿಭಾಸ್ತಾಸ್ತು ಚಂದ್ರಲೇಖಾ ಇವಾಮಲಾಃ ॥೪೫॥

ತಮ್ಮತಮ್ಮ ಆಸನದಲ್ಲಿ ಕುಳಿತಿದ್ದಂತಹ, ಹಾಗೆಯೇ ಸುಖವಾಗಿ ನಿದ್ರಿಸುತ್ತಿದ್ದಂತಹ, ತಮ್ಮ ತಮ್ಮ ಆಶ್ರಮದಲ್ಲಿ ಕುಳಿತಿದ್ದಂತಹ, ಸ್ನಾನವನ್ನು ಮಾಡುತ್ತಿದ್ದಂತಹ ಸ್ವರ್ಣವೇದಿಯಂತೆ ಪ್ರಕಾಶಮಾನರಾದಂತಹ, ಚಂದ್ರಲೇಖೆಯಂತೆ ಸ್ವಚ್ಛರಾದಂತಹ (ಆ ಪತ್ನಿಯರನ್ನು ನೋಡಿದನು). ಅವರೆಲ್ಲರೂ ಅಗ್ನಿಶಿಖೆಯನ್ನು ಹೋಲುವವರು, ನಕ್ಷತ್ರಗಳಿಗಿಂತ ಅದ್ಭುತರಾದವರೂ ಆಗಿದ್ದರು.

ಸ ತತ್ರ ತೇನ ಮನಸಾ ಬಭೂವ ಕ್ಷುಭಿತೇಂದ್ರಿಯಃ ।
ಪತ್ನೀರ್ದೃಷ್ಟ್ವಾ ದ್ವಿಜೇಂದ್ರಾಣಾಂ ವಹ್ನಿಃ ಕಾಮವಶಂ ಯಯೌ ॥೪೬॥

ಅವರ ದರ್ಶನದಿಂದ ಅವನ ಮನಸ್ಸಿನಲ್ಲಿಯೇ ಇಂದ್ರಿಯ ಕ್ಷೋಭೆಗೆ ಒಳಗಾದನು. ದ್ವಿಜಶ್ರೇಷ್ಠರ ಪತ್ನಿಯರನ್ನು ನೋಡಿ ವಹ್ನಿಯು ಕಾಮವಶನಾದನು.

ಭೂಯಃ ಸ ಚಿಂತಯಾಮಾಸ ನ ನ್ಯಾಯ್ಯಂ ಕ್ಷುಭಿತೋ ಹ್ಯಹಮ್ ।
ಸಾಧ್ವ್ಯಃ ಪತ್ನ್ಯೋ ದ್ವಿಜೇಂದ್ರಾಣಾಮಕಾಮಾಃ ಕಾಮಯಾಮ್ಯಹಮ್ ॥

ನೈತಾಃ ಶಕ್ಯಾ ಮಯಾ ದ್ರಷ್ಟುಂ ಸ್ಪೃಷ್ಟುಂ ವಾಽಪ್ಯನಿಮಿತಃ ।
ಗಾರ್ಹಪತ್ಯಂ ಸಮಾವಿಶ್ಯ ತಸ್ಮಾತ್ ಪಶ್ಯಾಮ್ಯಭೀಕ್ಷ್ಣಶಃ ॥೪೮॥

ಅವನು ಪುನಃ ಇದು ಯುಕ್ತವಲ್ಲ. ನಾನು ಕ್ಷೋಭೆಗೆ ಒಳಗಾಗಿದ್ದೇನೆ. ಋಷಿಪತ್ನಿಯರು ಪತಿವ್ರತೆಯರು. ನನ್ನನ್ನು ಕಾಮಿಸುವುದಿಲ್ಲ. ನಾನು ಅವರನ್ನು ಕಾಮಿಸುತ್ತಿದ್ದೇನೆ. ಇವರು ನನ್ನಿಂದ ನಿಮಿತ್ತವಿಲ್ಲದೆ ನೋಡಲೂ ಅಥವಾ ಸ್ಪರ್ಶಮಾಡಲು ಸಾಧ್ಯವಿಲ್ಲ. ಆದ್ದರಿಂದ ಗಾರ್ಹಪತ್ಯ ಅಗ್ನಿಯ ಸ್ಥಾನವನ್ನು ಪ್ರವೇಶಿಸಿ ಇವರನ್ನು ಚೆನ್ನಾಗಿ ನೋಡುತ್ತೇನೆ ಎಂದು ಚಿಂತಿಸಿದನು.

ಮಾರ್ಕಂಡೇಯಃ

ಸಂಸ್ಪೃಶ್ಯನ್ನಿವ ಸರ್ವಾಸ್ತಾಃ ಶಿಖಾಭಿಃ ಕಾಂಚನಪ್ರಭಾಃ ।
ಪಶ್ಯಮಾನಶ್ಚ ಮುಮುದೇ ಗಾರ್ಹಪತ್ಯಂ ಸಮಾಶ್ರಿತಃ ॥೪೯॥

ಮಾರ್ಕಂಡೇಯ– ಅಗ್ನಿಯು ಗಾರ್ಹಪತ್ಯಸ್ಥಾನವನ್ನು ಆಶ್ರಯಿಸಿದವನಾಗಿ ಸುವರ್ಣಕಾಂತಿಯುಳ್ಳ ಅವರೆಲ್ಲರನ್ನೂ ತನ್ನ ಶಿಖೆಗಳಿಂದ ಮುಟ್ಟುವವನಂತೆ ಅವರನ್ನು ನೋಡುತ್ತಾ ಸಂತೋಷಪಟ್ಟನು.

ನಿರುಷ್ಯ ತತ್ರ ಸುಚಿರಮೇವಂ ವಹ್ನಿರ್ವಶಂ ಗತಃ ।
ಮನಸ್ತಾಸು ವಿನಿಕ್ಷಿಪ್ಯ ಕಾಮಯಾನೋ ವರಾಂಗನಾಃ ॥೫೦॥

ಕಾಮಸಂತಪ್ತಹೃದಯೋ ದೇಹತ್ಯಾಗವಿನಿಶ್ಚಿತಃ ।
ಅಲಾಭೇ ಬ್ರಾಹ್ಮಣಸ್ತ್ರೀಣಾಮಗ್ನಿರ್ವನಮುಪಾಗಮತ್ ।
ಸ್ವಾಹಾ ತಂ ದಕ್ಷದುಹಿತಾ ಪ್ರಥಮಂ ಕಾಮಯತ್ ತದಾ ॥೫೧॥

ಕಾಮವಶನಾದ ವಹ್ನಿಯು ಅಲ್ಲಿ ಬಹುಕಾಲ ಇದ್ದು, ಅವರಲ್ಲಿ ಮನಸ್ಸನ್ನಿಟ್ಟು ಆ ವರಾಂಗನೆಯರನ್ನು ಕಾಮಿಸುತ್ತಾ, ಕಾಮಸಂತಪ್ತ ಹೃದಯವುಳ್ಳವನಾಗಿ ಆ ಬ್ರಾಹ್ಮಣ ಸ್ತ್ರೀಯರು ದೊರೆಯದಿದ್ದರೆ ದೇಹತ್ಯಾಗವನ್ನು ಮಾಡುವುದಾಗಿ ನಿಶ್ಚಯಿಸಿ ವನಕ್ಕೆ ಹೋದನು. ದಕ್ಷನ ಕುಮಾರಿಯಾದ ಸ್ವಾಹಾ ದೇವಿಯು ಅವನನ್ನು ಮೊದಲೇ ಕಾಮಿಸಿದ್ದಳು.

ಸಾ ತಸ್ಯ ಚ್ಛಿದ್ರಮನ್ವೇಚ್ಛಚ್ಛಿರಾತ್ಪ್ರಭೃತಿ ಭಾಮಿನೀ ।
ಅಪ್ರಮತ್ತಸ್ಯ ದೇವಸ್ಯ ನ ಚ ಪಶ್ಯತ್ಯನಿಂದಿತಾ ॥೫೨॥

ಆ ಭಾಮಿನಿಯಾದ ಸ್ವಾಹಾದೇವಿಯು ಅವನ ಜೊತೆಯಲ್ಲಿ ಸಮಾಗಮನವನ್ನು ಹೊಂದಲು ಬಹಳ ಕಾಲದಿಂದಲೂ ಅವಕಾಶವನ್ನು ಕಾಯುತ್ತಿದ್ದಳು. ವಹ್ನಿಯು ಬಹಳ ಜಾಗರೂಕನಾಗಿದ್ದುದರಿಂದ ಅನಿಂದಿತೆಯಾದ ಅವಳಿಗೆ ಅವಕಾಶವು ದೊರೆತಿರಲಿಲ್ಲ.

ಸಾ ತಂ ಜ್ಞಾತ್ವಾ ಯಥಾವತ್ ತು ವಹ್ನಿಂ ವನಮುಪಾಗತಮ್ ।
ತತ್ತ್ವತಃ ಕಾಮಸಂತಪ್ತಂ ಚಿಂತಯಾಮಾಸ ಭಾರತ ॥೫೩॥

ಈಗ ಅವಳು ಅಗ್ನಿಯು ಕಾಡಿಗೆ ಹೋಗಿರುವುದನ್ನು ಯಥಾರ್ಥವಾಗಿ ತಿಳಿದು ಅವನು ಕಾಮತಪ್ತನಾಗಿರುವನೆಂದೂ ತಿಳಿದು ಹೀಗೆ ಯೋಚಿಸಿದಳು.

ಅಹಂ ಸಪ್ತರ್ಷಿಪತ್ನೀನಾಂ ಕೃತ್ವಾ ರೂಪಾಣಿ ಪಾವಕಮ್ ।
ಕಾಮಯಿಷ್ಯಾಮಿ ಕಾಮಾರ್ತಾ ತಾಸಾಂ ರೂಪೇಣ ಮೋಹಿತಮ್ ॥

ಏವಂ ಕೃತೇ ಪ್ರೀತಿರಸ್ಯ ಕಾಮಾವಾಪ್ತಿಶ್ಚ ಮೇ ಭವೇತ್ ॥೫೫॥

ಕಾಮಾರ್ಥಳಾದ ನಾನು ಸಪ್ತರ್ಷಿಗಳ ಪತ್ನಿಯರ ರೂಪವನ್ನು ಧರಿಸಿ ಅವರ ರೂಪದಿಂದ ಮೋಹಿತನಾದ ಅಗ್ನಿಯನ್ನು ಕಾಮಿಸುವೆನು. ಹೀಗೆ ಮಾಡಿದರೆ ಅವನಿಗೆ ಸಂತೋಷವೂ ನನಗೆ ಕಾಮತೃಪ್ತಿಯೂ ಉಂಟಾಗುವುದು (ಎಂದು ಚಿಂತಿಸಿದಳು).

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ತ್ರಯೋದಶಾಧಿಕದ್ವಿಶತಶತತಮೋऽಧ್ಯಾಯಃ ॥
॥ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಸ್ಕಾಂದೋಪಾಖ್ಯಾನೇ ಪ್ರಥಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹದಿಮೂರನೆಯ
ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಹದಿನಾಲ್ಕನೆಯ ಅಧ್ಯಾಯ

ಅರುಂಧತಿಯನ್ನು ಬಿಟ್ಟು ಉಳಿದ ಆರು ಸಪ್ತರ್ಷಿ ಪತ್ನಿಯರ
ವೇಷದಿಂದ ಸ್ವಾಹಾದೇವಿಯಿಂದ ಅಗ್ನಿ ಸಮಾಗಮ.
ಷಣ್ಮುಖನ ಉತ್ಪತ್ತಿ ಮತ್ತು ಅವನ ಪರಾಕ್ರಮ.

ಮಾರ್ಕಂಡೇಯಃ

ಶಿವಾ ಭಾರ್ಯಾ ತ್ವಂಗಿರಸಃ ಶೀಲರೂಪಗುಣಾನ್ವಿತಾ ।
ತಸ್ಯಾಃ ಸಾ ಪ್ರಥಮಂ ರೂಪಂ ಕೃತ್ವಾ ದೇವೀ ಜನಾಧಿಪ ।
ಜಗಾಮ ಪಾವಕಾಭ್ಯಾಶಂ ತಂ ಚೋವಾಚ ವರಾಂಗನಾ ॥೧॥

ಮಾರ್ಕಂಡೇಯ– ಅಂಗಿರಸರ ಪತ್ನಿಯು ಶೀಲರೂಪ ಗುಣಗಳಿಂದ ಕೂಡಿದ ಶಿವಾ ಎಂಬುವಳು. ಎಲೈ ರಾಜನೇ, ಸುಂದರಿಯಾದ ಸ್ವಾಹಾದೇವಿಯು ಮೊದಲು ಅವಳ ರೂಪವನ್ನು ಧರಿಸಿ ಪಾವಕನ ಸಮೀಪಕ್ಕೆ ಹೋಗಿ ಹೀಗೆ ಮಾತನಾಡಿದಳು.

ಮಾಮಗ್ನೇ ಕಾಮಸಂತಪ್ತಾಂ ತ್ವಂ ಕಾಮಯಿತುಮರ್ಹಸಿ ॥೨॥
ಕರಿಷ್ಯಸಿ ನ ಚೇದೇವಂ ಮೃತಾಂ ಮಾಮುಪಧಾರಯ ।
ತವಾಪ್ಯಧರ್ಮಃ ಸುಮಹಾನ್ ಭವಿತಾ ವೈ ಹುತಾಶನ ॥೩॥

ಅಗ್ನಿಯೇ, ಕಾಮಸಂತಪ್ತಳಾದ ನನ್ನನ್ನು ನೀನು ಕಾಮಿಸಬೇಕು. ಹಾಗೆ ಮಾಡದಿದ್ದರೆ ನನ್ನನ್ನು ಮೃತಳೆಂದು ತಿಳಿ. ಎಲೈ ಹುತಾಶನನೇ, ಅದರಿಂದ ನಿನಗೂ ದೊಡ್ಡ ಅಧರ್ಮವು ಉಂಟಾಗುವುದು.

ಅಹಮಂಗಿರಸೋ ಭಾರ್ಯಾ ಶಿವಾ ನಾಮ ಹುತಾಶನ ।
ಶಿಷ್ಟಾಭಿಃ ಪ್ರಹಿತಾ ಪ್ರಾಪ್ತಾ ಮಂತ್ರಯಿತ್ವಾ ವಿನಿಶ್ಚಯಮ್ ॥೪॥

ಹುತಾಶನನೇ, ನಾನು ಅಂಗಿರಸರ ಪತ್ನಿಯಾದ ಶಿವಾ ಎಂಬುವಳು. ಉಳಿದವರು ಮಂತ್ರಾಲೋಚನೆಯನ್ನು ಮಾಡಿ ಒಂದು ನಿರ್ಧಾರಕ್ಕೆ ಬಂದು ನನ್ನನ್ನು ನಿನ್ನ ಬಳಿಗೆ ಕಳುಹಿಸಿದ್ದಾರೆ.

ಅಗ್ನಿಃ

ಕಥಂ ಮಾಂ ತ್ವಂ ವಿಜಾನಿಷೇ ಕಾಮಾರ್ತಮಿತರಾಃ ಕಥಮ್ ।
ಯಾಸ್ತ್ವಯಾ ಕೀರ್ತಿತಾಃ ಸರ್ವಾಃ ಸಪ್ತರ್ಷೀಣಾಂ ಪ್ರಿಯಾಃ ಸ್ತ್ರಿಯಃ ॥೫॥

ಅಗ್ನಿ– ನೀನಾಗಲೀ ಅಥವಾ ನೀನು ಹೇಳಿದ ಉಳಿದ ಸಪ್ತರ್ಷಿಗಳ ಪ್ರಿಯ ಪತ್ನಿಯರಾಗಿಗಲೀ ನನ್ನನ್ನು ಕಾಮಾರ್ತನೆಂದು ಹೇಗೆ ತಿಳಿದಿದ್ದೀರಿ?

ಶಿವಾ

ಅಸ್ಮಾಕಂ ತ್ವಂ ಪ್ರಿಯೋ ನಿತ್ಯಂ ಬಿಭೀಮಸ್ತು ವಯಂ ತವ ।
ತ್ವಚ್ಚಿತ್ತಮಿಂಗಿತೈರ್ಜ್ಞಾತ್ವಾ ಪ್ರೇಷಿತಾಽಸ್ಮಿ ತವಾಂತಿಕಮ್ ॥೬॥

ಶಿವಾ– ನಮಗೆ ನೀನು ಯಾವಾಗಲೂ ಪ್ರಿಯನಾದವನು. ಆದರೆ ನಾವು ನಿನಗೆ ಹೆದರುತ್ತೇವೆ. ನಿನ್ನ ಚಿತ್ತವನ್ನು ನಿನ್ನ ಇಂಗಿತಗಳಿಂದ ತಿಳಿದು ಉಳಿದವರು ನಿನ್ನ ಬಳಿಗೆ ನನ್ನನ್ನು ಕಳುಹಿಸಿದ್ದಾರೆ.

ಮೈಥುನಾಯೇಹ ಸಂಪ್ರಾಪ್ತಾ ಕಾಮಾಚ್ಚೈವ ದ್ರುತಂ ಚ ಮಾಮ್ ।
ಉಪಯಂತುಂ ಮಹಾವೀರ್ಯ ಪೂರ್ವಮೇವ ತ್ವಮರ್ಹಸಿ ॥೭॥

ನಾನು ಮೈಥುನಕ್ಕಾಗಿ ಇಲ್ಲಿಗೆ ಬಂದಿದ್ದೇನೆ. ಎಲೈ ಮಹಾವೀರ್ಯನೇ, ಕಾಮದಿಂದ ಬಂದಿರುವ ನನ್ನನ್ನು ಮೊದಲು ಬೇಗ ರಮಿಸಬೇಕು.

ತತೋऽಗ್ನಿರುಪಯೇಮೇ ತಾಂ ಶಿವಾಂ ಪ್ರೀತಾಂ ಮುದಾಯುತಃ ।
ಪ್ರೀತ್ಯಾ ದೇವೀ ಸಮಾಯುಕ್ತಾ ಶುಕ್ರಂ ಜಗ್ರಾಹ ಪಾಣಿನಾ ॥೮೪॥

ಮಾರ್ಕಂಡೇಯ– ಅನಂತರ ಅಗ್ನಿಯು ಸಂತುಷ್ಟಳಾದ ಶಿವೆಯ ಜೊತೆಯಲ್ಲಿ ಸಂತೋಷದಿಂದ ಕೂಡಿದವನಾಗಿ ಸಮಾಗಮವನ್ನು ಮಾಡಿದನು. ಸಂತೋಷದಿಂದ ಯುಕ್ತಳಾದ ಆ ದೇವಿಯು ಅಗ್ನಿಯ ವೀರ್ಯವನ್ನು ಕೈಯಲ್ಲಿ ತೆಗೆದುಕೊಂಡಳು.

ಅಚಿಂತಯನ್ಮಮೇದಂ ಯೇ ರೂಪಂ ದ್ರಕ್ಷ್ಯಂತಿ ಕಾನನೇ ।
ತೇ ಬ್ರಾಹ್ಮಣೀನಾಮನೃತಂ ದೋಷಂ ವಕ್ಷ್ಯಂತಿ ಪಾಪಕಮ್ ॥೯॥

ತಸ್ಮಾದೇತದ್ ರಕ್ಷಮಾಣಾ ಗರುಡೀ ಸಂಭವಾಮ್ಯಹಮ್ ।
ವನಾನ್ನಿರ್ಗಮನೇ ಚೈವ ಸುಖಂ ಮಮ ಭವಿಷ್ಯತಿ ॥೧೦॥

ಅವಳು ಹೀಗೆ ಚಿಂತಿಸಿದಳು. ಈ ಕಾಡಿನಲ್ಲಿ ಯಾರಾದರೂ ನನ್ನ ರೂಪವನ್ನು ನೋಡಿದರೆ ಬ್ರಾಹ್ಮಣ ಸ್ತ್ರೀಯರಿಗೆ ಅವರು ಅನೃತದೋಷವನ್ನು ಮತ್ತು ಪಾಪವನ್ನೂ ಹೇಳುವರು. ಆದ್ದರಿಂದ ಈ ರೂಪವನ್ನು ರಕ್ಷಣೆ ಮಾಡಿಕೊಂಡು (ಮರೆಸಿಕೊಂಡು) ಗರುಡಿಯ ರೂಪವನ್ನು ತಾಳುವೆನು. ಹಾಗೆ ಮಾಡಿದರೆ ನಾನು ಈ ವನದಿಂದ ಹೋಗಲು ನನಗೆ ಸುಖವಾಗುವುದು.

ಮಾರ್ಕಂಡೇಯಃ

ಸುಪರ್ಣೀ ಸಾ ತತೋ ಭೂತ್ವಾ ನಿರ್ಜಗಾಮ ಮಹಾವನಾತ್ ।
ಅಪಶ್ಯತ್ ಪರ್ವತಂ ಶ್ವೇತಂ ಶರಸ್ತಂಬೈಃ ಸುಸಂವೃತಮ್ ॥೧೧॥

ಮಾರ್ಕಂಡೇಯ– ಅವಳು ಹೆಣ್ಣು ಗರುಡಪಕ್ಷಿಯ ರೂಪವನ್ನು ಧರಿಸಿ ದೊಡ್ಡ ಕಾಡಿನಿಂದ ಹೊರಟು ಹೋದಳು. ಅನಂತರ ಹುಲ್ಲಿನ ಪೊದೆಗಳಿಂದ ಚೆನ್ನಾಗಿ ಆವೃತವಾದ ಶ್ವೇತಪರ್ವತವನ್ನು ನೋಡಿದಳು.

ದೃಷ್ಟೀವಿಷೈಃ ಸಪ್ತಶೀರ್ಷೈರ್ಗುಪ್ತಂ ಭೋಗಿಭಿರದ್ಭುತೈಃ ।
ರಕ್ಷೋಭಿಶ್ಚ ಪಿಶಾಚೈಶ್ಚ ರೌದ್ರೈರ್ಭೂತಗಣೈಸ್ತಥಾ ॥೧೨॥

ರಾಕ್ಷಸೀಭಿಶ್ಚ ಸಂಪೂರ್ಣಮನೇಕೈಶ್ಚ ಮೃಗದ್ವಿಜೈಃ ।
ನದೀಪ್ರಸ್ರವಣೋಪೇತಂ ನಾನಾತರುಗಣಾಕುಲಮ್ ॥೧೩॥

ಆ ಪ್ರದೇಶವು ದೃಷ್ಟಿವಿಷವುಳ್ಳ ಏಳು ಹೆಡೆಯುಳ್ಳ ಅದ್ಭುತ ಸರ್ಪಗಳಿಂದಲೂ, ರಾಕ್ಷಸರಿಂದಲೂ, ಪಿಶಾಚಿಗಳಿಂದಲೂ, ರುದ್ರನಭೂತಗಣಗಳಿಂದಲೂ ರಕ್ಷಿತವಾಗಿದ್ದಿತು. ಅನೇಕ ಮೃಗಪಕ್ಷಿಗಳಿಂದಲೂ ಮತ್ತು ರಾಕ್ಷಸರಿಂದಲೂ ಸಂಕುಲವಾಗಿದ್ದಿತು. ಅನೇಕ ವೃಕ್ಷಗಳ ಸಮೂಹದಿಂದಲೂ, ಅನೇಕ ನೀರಿನ ಝರಿಗಳಿಂದಲೂ ಕೂಡಿದ್ದಿತು.

ಸಾ ತತ್ರ ಸಹಸಾ ಗತ್ವಾ ಶೈಲಪೃಷ್ಠಂ ಸುದುರ್ಗಮಮ್ ।
ಪ್ರಾಕ್ಷಿಪತ್ ಕಾಂಚನೇ ಕುಂಡೇ ಶುಕ್ರಂ ಸಾ ತ್ವರಿತಾ ಶುಭಾ ॥೧೪॥

ಶುಭಳಾದ ಅವಳು ಶೀಘ್ರವಾಗಿ ಬಹಳ ದುರ್ಗಮವಾದ ಆ ಪರ್ವತದ ತಪ್ಪಲಿಗೆ ಹೋಗಿ ಒಂದು ಸುವರ್ಣಮಯವಾದ ಕುಂಡದಲ್ಲಿ ಶೀಘ್ರವಾಗಿ ಅಗ್ನಿಯ ವೀರ್ಯವನ್ನು ಹಾಕಿದಳು.

ಸಪ್ತಾನಾಮಪಿ ದೇವೀನಾಂ ಸಪ್ತರ್ಷೀಣಾಂ ಮಹಾತ್ಮನಾಮ್ ।
ಪತ್ನೀಸರೂಪತಾಂ ಕೃತ್ವಾ ಕಾಮಯಾಮಾಸ ಪಾವಕಮ್ ॥೧೫॥

ಆ ದೇವಿಯು ಮಹಾತ್ಮರಾದ ಏಳೂ ಜನ ಸಪ್ತರ್ಷಿಗಳ ಪತ್ನಿಯರ ವೇಷವನ್ನು ಧರಿಸಿ ಅಗ್ನಿಯನ್ನು ಕಾಮಿಸಿದಳು (ಕಾಮಿಸಲು ಇಚ್ಛಿಸಿದಳು).

ದಿವ್ಯರೂಪಮರುಂಧತ್ಯಾಃ ಕರ್ತುಂ ನ ಶಕಿತಂ ತಯಾ ।
ತಸ್ಯಾಸ್ತಪಃಪ್ರಭಾವೇಣ ಭರ್ತೃಶುಶ್ರೂಷಣೇನ ಚ ॥೧೬॥

ಆದರೆ ಅರುಂಧತಿಯ ತಪಃ ಪ್ರಭಾವದಿಂದ ಮತ್ತು ಅವಳ ಪತಿ ಸೇವೆಯ ಬಲದಿಂದ ಅರುಂಧತಿಯ ದಿವ್ಯರೂಪವನ್ನು ಅವಳು ಧರಿಸಲು ಸಾಧ್ಯವಾಗಲಿಲ್ಲ.

ಷಟ್‌ಕೃತ್ವಸ್ತತ್ತು ನಿಕ್ಷಿಪ್ತಮಗ್ನೇ ರೇತಃ ಕುರೂತ್ತಮ ।
ತಸ್ಮಿನ್ ಕುಂಡೇ ಪ್ರತಿಪದಿ ಕಾಮಿನ್ಯಾ ಸ್ವಾಹಯಾ ತದಾ ॥೧೭॥

ಎಲೈ ಕುರುಶ್ರೇಷ್ಠನೇ, ಕಾಮಿನಿಯಾದ ಸ್ವಾಹಾದೇವಿಯು ಆಗ ಪಾಡ್ಯದ ತಿಥಿಯಂದು ಆರುಬಾರಿ ಆ ವೀರ್ಯವನ್ನು ಆ ಕುಂಡದಲ್ಲಿ ಹಾಕಿದಳು.

ತತ್ ಸ್ಕನ್ನಂ ತೇಜಸಾ ತತ್ರ ಸಂವೃತಂ ಜನಯತ್ ಸುತಮ್ ।
ಋಷಿಭಿಃ ಪೂಜಿತಂ ಸ್ಕನ್ನಮನಯತ್ ಸ್ಕಂದತಾಂ ತತಃ ॥೧೮॥

ಸ್ಖಲನಗೊಂಡ ಮತ್ತು ತೇಜಸ್ಸಿನಿಂದ ಚೆನ್ನಾಗಿ ರಕ್ಷಿತವಾದ ಆ ವೀರ್ಯವು ಒಬ್ಬ ಮಗನನ್ನು ಉತ್ಪಾದಿಸಿತು. ಋಷಿಗಳಿಂದ ಪೂಜಿತವಾದ ಆ ಪತಿತವಾದ ವೀರ್ಯವೇ ಸ್ಕಂದನ ರೂಪವನ್ನು ತಾಳಿತು.

ಷಟ್‌ಶಿರಾ ದ್ವಿಗುಣಶ್ರೋತ್ರೋ ದ್ವಾದಶಾಕ್ಷಿಭುಜಕ್ರಮಃ ।
ಏಕಗ್ರೀವೈಕಜಠರಃ ಕುಮಾರಃ ಸಮಪದ್ಯತ ॥೧೯॥

ಆರು ತಲೆಗಳು, ಹನ್ನೆರಡು ಕಿವಿಗಳು, ಹನ್ನೆರಡು ಕಣ್ಣುಗಳು ಮತ್ತು ಭುಜಗಳು, ಒಂದು ಕತ್ತು ಮತ್ತು ಒಂದು ಜಠರವಿರುವ ಕುಮಾರನು ಜನಿಸಿದನು.

ದ್ವಿತೀಯಾಯಾಮಭಿವ್ಯಕ್ತಸ್ತೃತೀಯಾಯಾಂ ಶಿಶುರ್ಬಭೌ ।
ಅಂಗಪ್ರತ್ಯಂಗಸಂಭೂತಶ್ಚತುರ್ಥ್ಯಮಭವದ್ ಗುಹಃ ॥೨೦॥

ದ್ವಿತೀಯಾ ತಿಥಿಯಂದು ಸ್ವಲ್ಪ ಅಭಿವ್ಯಕ್ತವಾದ ಅವನು ತೃತೀಯಾ ತಿಥಿಯಲ್ಲಿ ಶಿಶುರೂಪವನ್ನು ತಾಳಿದನು. ಚತುರ್ಥಿಯಂದು ಅಂಗಪ್ರತ್ಯಂಗಗಳು ಬೆಳೆದು ಗುಹನಾಮಕನಾದನು.

ಲೋಹಿತಾಭ್ರೇಣ ಮಹತಾ ಸಂವೃತಃ ಸಹ ವಿದ್ಯುತಾ ।
ಲೋಹಿತಾಭ್ರೇ ಸುಮಹತಿ ಭಾತಿ ಸೂರ್ಯ ಇವೋದಿತಃ ॥೨೧॥

ವಿದ್ಯುತ್ತಿನಿಂದ ಕೂಡಿದ ದೊಡ್ಡ ಕೆಂಪು ಮೋಡಗಳಿಂದ ಮುಚ್ಚಲ್ಪಟ್ಟ ಅವನು, ದೊಡ್ಡ ಕೆಂಪು ಮೋಡಗಳಲ್ಲಿ ಉದಯಿಸಿದ ಸೂರ್ಯನಂತೆ ಕಂಗೊಳಿಸಿದನು.

ಗೃಹೀತಂ ತದ್ ಧನುಸ್ತೇನ ವಿಪುಲಂ ಲೋಮಹರ್ಷಣಮ್ ।
ನ್ಯಸ್ತಂ ಯತ್ ತ್ರಿಪುರಘ್ನೇನ ಸುರಾರಿವಿನಿಕೃಂತನಮ್ ॥೨೨॥

ತ್ರಿಪುರಾರಿಯಾದ ಶಿವನು ರಾಕ್ಷಸರನ್ನು ಕೊಲ್ಲುವ ರೋಮಾಂಚಕಾರಿಯಾದ ಯಾವ ವಿಪುಲವಾದ ಧನುಸ್ಸನ್ನು ಇಟ್ಟಿದ್ದನೋ ಅದನ್ನು ಅವನು ಕೈಯಲ್ಲಿ ತೆಗೆದುಕೊಂಡನು.

ತದ್ ಗೃಹೀತ್ವಾ ಧನುಃ ಶ್ರೇಷ್ಠಂ ನನಾದ ಬಲವಾಂಸ್ತದಾ ।
ಸಮ್ಮೋಹಯನ್ನಿಮಾನ್ ಸರ್ವಾನ್ ತ್ರೀಂಲ್ಲೋಕಾನ್ ಸಚರಾಚರಾನ್ ॥

ಆಗ ಆ ಶ್ರೇಷ್ಠವಾದ ಧನುಸ್ಸನ್ನು ಕೈಯಲ್ಲಿ ತೆಗೆದುಕೊಂಡು ಚರಾಚರ ಸಹಿತವಾದ ಈ ಮೂರುಲೋಕಗಳೂ ಗಾಬರಿಗೊಳ್ಳುವಂತೆ ಗರ್ಜಿಸಿದನು.

ತಸ್ಯ ತಂ ನಿನದಂ ಶ್ರುತ್ವಾ ಮಹಾಮೇಘೌಘನಿಸ್ವನಮ್ ।
ಉತ್ಪೇತತುರ್ಮಹಾನಾಗೌ ಚಿತ್ರಶ್ಚೈರಾವತಶ್ಚ ಹ ॥೨೪॥

ಮಹಾಮೇಘಗಳ ಗರ್ಜನೆಯನ್ನು ಹೋಲುವ ಅವನ ನಾದವನ್ನು ಕೇಳಿದ ಚಿತ್ರ ಮತ್ತು ಐರಾವತ ಎಂಬ ಎರಡು ದೊಡ್ಡ ದಿಗ್ಗಜಗಳು ಮೇಲಕ್ಕೆ ನೆಗೆದವು.

ತಾವಾಪತಂತೌ ಸಂಪ್ರೇಕ್ಷ್ಯ ಸ ಬಾಲೋಽರ್ಕಸಮದ್ಯುತಿಃ ।
ದ್ವಾಭ್ಯಾಂ ಗೃಹೀತ್ವಾ ಪಾಣಿಭ್ಯಾಂ ಶಕ್ತಿಂ ಚಾನ್ಯೇನ ಪಾಣಿನಾ ॥೨೫॥

ಅಪರೇಣಾಗ್ನಿದಾಯಾದಸ್ತಾಮ್ರಚೂಡಂ ಭುಜೇನ ಸಃ ।
ಮಹಾಕಾಯಮುಪಶ್ಲಿಷ್ಟಂ ಕುಕ್ಕುಟಂ ಬಲಿನಾಂ ವರಮ್ ।
ಗೃಹೀತ್ವಾ ವ್ಯನದದ್ ಭೀಮಂ ಚಿಕ್ರೀಡ ಚ ಮಹಾಭುಜಃ ॥೨೬॥

ಮೇಲೆ ನೆಗೆಯುತ್ತಿದ್ದ ಗಜಗಳನ್ನು ನೋಡಿದ ಆ ಬಾಲಾರ್ಕ ಪ್ರಭೆಯುಳ್ಳ ಕುಮಾರನು ಎರಡು ಕೈಗಳಿಂದ ಆ ಗಜಗಳನ್ನು ಹಿಡಿದುಕೊಂಡು, ಇನ್ನೊಂದು ಕೈಯಿಂದ ಶಕ್ತಿಯನ್ನು ಹಿಡಿದುಕೊಂಡು, ಇನ್ನೊಂದು ಕೈಯಿಂದ ಬಲಿಷ್ಠವಾದ ಮಹಾಶರೀರವುಳ್ಳ ಸಮೀಪದಲ್ಲಿದ್ದ ಕೆಂಪು ಶಿರಸ್ಸುಳ್ಳ ಕುಕ್ಕುಟವನ್ನು (ಹುಂಜ) ಹಿಡಿದುಕೊಂಡು, ಮಹಾಭುಜನಾದ ಅವನು ಘೋರವಾಗಿ ನಾದವನ್ನು ಮಾಡಿ ಆಟವಾಡಿದನು.

ದ್ವಾಭ್ಯಾಂ ಭುಜಾಭ್ಯಾಂ ಬಲವಾನ್ ಗೃಹೀತ್ವಾ ಶಂಖಮುತ್ತಮಮ್ ।
ಪ್ರಾಧ್ಮಾಪಯತ ಭೂತಾನಾಂ ತ್ರಾಸನಂ ಬಲಿನಾಮಪಿ ॥೨೭॥

ದ್ವಾಭ್ಯಾಂ ಭುಜಾಭ್ಯಾಮಾಕಾಶಂ ಬಹುಶೋ ನಿಜಘಾನ ಸಃ ॥೨೮॥

ಬಲಿಷ್ಠನಾದ ಅವನು ಎರಡು ಕೈಗಳಿಂದ ಶ್ರೇಷ್ಠವಾದ ಶಂಖವನ್ನು ಹಿಡಿದುಕೊಂಡು ಬಲಶಾಲಿಗಳಾದ ಪ್ರಾಣಿಗಳೂ ಹೆದರುವಂತೆ ಅದನ್ನು ಊದಿದನು. ಎರಡು ಭುಜಗಳಿಂದ ಅನೇಕ ಬಾರಿ ಆಕಾಶವನ್ನು ಗುದ್ದಿದನು.

ಕ್ರೀಡನ್ ಭಾತಿ ಮಹಾಸೇನಸ್ತ್ರೀಂಲ್ಲೋಕಾನ್ ವದನೈಃ ಪಿಬನ್ ।
ಪರ್ವತಾಗ್ರೇऽಪ್ರಮೇಯಾತ್ಮಾ ರಶ್ಮಿಮಾನುದಯೇ ಯಥಾ ॥೨೯॥

ಲೀಲೆಯಿಂದ ಆಟವಾಡಿದ ಮಹಾಸೇನನು ಉದಯಪರ್ವತದ ಶಿಖರದಲ್ಲಿ ಅಪ್ರಮೇಯ ಸ್ವರೂಪನಾದ ಆದಿತ್ಯನಂತೆ ಮೂರುಲೋಕಗಳನ್ನೂ ತನ್ನ ವದನಗಳಿಂದ ಪಾನಮಾಡುವವನಂತೆ ತೋರುತ್ತಿದ್ದನು.

ಸ ತಸ್ಯ ಪರ್ವತಸ್ಯಾಗ್ರೇ ನಿಷಣ್ಣೋऽದ್ಭುತವಿಕ್ರಮಃ ।
ವ್ಯಲೋಕಯದಮೇಯಾತ್ಮಾ ಮುಖೈನಾನಾರ್ವಿಧೈರ್ದಿಶಃ ।
ಸ ಪಶ್ಯನ್ ವಿವಿಧಾನ್ ಭಾವಾಂಶ್ಚಕಾರ ನಿನದಂ ಪುನಃ ॥೩೦॥

ಅದ್ಭುತವಿಕ್ರಮನೂ, ಅಪ್ರಮೇಯಾತ್ಮನೂ ಆದ ಅವನು ಪರ್ವತದ ಶಿಖರದಲ್ಲಿ ಕುಳಿತು ತನ್ನ ನಾನಾವಿಧವಾದ ಮುಖಗಳಿಂದ ಎಲ್ಲ ದಿಕ್ಕುಗಳನ್ನೂ ನೋಡಿದನು. ಆ ದಿಕ್ಕುಗಳಲ್ಲಿ ಅನೇಕ ವಿಧವಾದ ವಸ್ತುಗಳನ್ನು ನೋಡುತ್ತಾ ಅವನು ಪುನಃ ಗರ್ಜಿಸಿದನು.

ತಸ್ಯ ತಂ ನಿನದಂ ಶ್ರುತ್ವಾ ನ್ಯಪತನ್ ಬಹುಧಾ ಜನಾಃ ।
ಭೀತಾಶ್ಚೋದ್ವಿಗ್ನಮನಸಸ್ತಮೇವ ಶರಣಂ ಯಯುಃ ॥೩೧॥

ಅವನ ಗರ್ಜನೆಯನ್ನು ಕೇಳಿದ ಅನೇಕ ಜನರು (ಭೂಮಿಯ ಮೇಲೆ) ಬಿದ್ದರು. ಅವರು ಭೀತರಾಗಿ ಉದ್ವಿಗ್ನ ಮನಸ್ಸಿನಿಂದ ಕೂಡಿ ಅವನನ್ನೇ ಶರಣು ಹೊಂದಿದರು.

ಯೇ ತು ತಂ ಸಂಶ್ರಿತಾ ದೇವಂ ನಾನಾವರ್ಣಾಸ್ತದಾ ಜನಾಃ ।
ತಾಂಸ್ತಸ್ಯಾಹುಃ ಪಾರಿಷದಾನ್ ಬ್ರಾಹ್ಮಣಾಃ ಸುಮಹಾಬಲಾನ್ ॥೩೨॥

ಯಾವ ನಾನಾ ವರ್ಣದ ಜನರು ಆ ದೇವನನ್ನು ಆಗ ಆಶ್ರಯಿಸಿದರೋ ಬಲಿಷ್ಠರಾದ ಆ ಜನರನ್ನು ಬ್ರಾಹ್ಮಣರು ಅವನ ಪಾರ್ಷದರೆಂದು ಕರೆಯುತ್ತಾರೆ.

ಸ ತೂತ್ಥಾಯ ಮಹಾಬಾಹುರುಪಸಾಂತ್ವ್ಯ ಚ ತಾನ್ ಜನಾನ್ ।
ಧನುರ್ವಿಕೃಷ್ಯ ವ್ಯಸೃಜದ್ ಬಾಣಾನ್ಶ್ವೇತೇ ಮಹಾಗಿರೌ ॥೩೩॥

ಮಹಾಬಾಹುವಾದ ಅವನು ಎದ್ದು ಆ ಜನಗಳನ್ನು ಸಮಾಧಾನಗೊಳಿಸಿ ಧನುಸ್ಸನ್ನು ಎಳೆದು ಆ ಮಹಾಶ್ವೇತಗಿರಿಗೆ ಬಾಣಪ್ರಯೋಗವನ್ನು ಮಾಡಿದನು.

ಬಿಭೇದ ಸ ಶರೈಃ ಶೈಲಂ ಕ್ರೌಂಚಂ ಹಿಮವತಃ ಸುತಮ್ ।
ತೇನ ಹಂಸಾಶ್ಚ ಗೃಧ್ರಾಶ್ಚ ಮೇರುಂ ಗಚ್ಛಂತಿ ಪರ್ವತಮ್ ॥೩೪॥

ಸ ವಿಶೀರ್ಣೋಽಪತಚ್ಛೈಲೋ ಭೃಶಮಾರ್ತಸ್ವರಾನ್ ರುವನ್ ॥

ಅವನು ತನ್ನ ಬಾಣಗಳಿಂದ ಹಿಮಾಲಯದ ಪುತ್ರನಾದ ಕ್ರೌಂಚಪರ್ವತವನ್ನು ಭೇದಿಸಿದನು. ಆ ಕಾರಣದಿಂದ ಹಂಸಗಳು ಮತ್ತು ಗೃಧ್ರಗಳು ಮೇರುಪರ್ವತಕ್ಕೆ ಹೋದವು. ಆ ಕ್ರೌಂಚ ಪರ್ವತವು ಬಹಳ ಆರ್ತಸ್ವರವನ್ನು ಮಾಡುತ್ತಾ ಬಿರಿದು ಬಿದ್ದುಹೋಯಿತು.

ತಸ್ಮಿನ್ ನಿಪತಿತೇ ತ್ವನ್ಯೇ ನೇದುಃ ಶೈಲಾ ಭೃಶಂ ತದಾ ।
ಘೋರಮಾರ್ತಸ್ವರಂ ಚಕ್ರುರ್ದೃಷ್ಟ್ವಾ ಕ್ರೌಂಚಂ ವಿದಾರಿತಮ್ ॥೩೬॥

ಕ್ರೌಂಚಪರ್ವತವು ಬೀಳುತ್ತಿರಲು ಬಿರಿದುಬಿದ್ದ ಆ ಕ್ರೌಂಚಪರ್ವತವನ್ನು ನೋಡಿ ಉಳಿದ ಪರ್ವತಗಳು ಘೋರವಾದ ಆರ್ತಸ್ವರವನ್ನು ಬಹಳವಾಗಿ ಮಾಡಿದವು.

ಸ ತಂ ನಾದಂ ಭೃಶಾರ್ತಾನಾಂ ಶ್ರುತ್ವಾಽಪಿ ಬಲಿನಾಂ ವರಃ ।
ನ ಪ್ರಾಪದದಮೇಯಾತ್ಮಾ ಶಕ್ತಿಮುದ್ಯಮ್ಯ ಚಾನದತ್ ॥೩೭॥

ಅಮೇಯಾತ್ಮನೂ, ಬಲಿಷ್ಠರಲ್ಲಿಶ್ರೇಷ್ಠನೂ ಆದ ಅವನು ಬಹಳವಾಗಿ ಆರ್ತವಾದ ಆ ಪರ್ವತಗಳ ಘೋರವಾದ ನಾದವನ್ನು ಕೇಳಿದರೂ ಕೂಡ ಕೆಳಗೆ ಬೀಳಲಿಲ್ಲ. ಶಕ್ತಿಯನ್ನು ಎತ್ತಿ ಪುನಃ ಗರ್ಜಿಸಿದನು.

ಸಾ ತದಾ ವಿಮಲಾ ಶಕ್ತಿಃ ಕ್ಷಿಪ್ತಾ ತೇನಾಮಿತಾತ್ಮನಾ ।
ಬಿಭೇದ ಶಿಖರಂ ಕ್ರೋಧಾತ್ ಶ್ವೇತಸ್ಯ ತರಸಾ ಗಿರೇಃ ॥೩೮॥

ಆ ಮಹಾತ್ಮನು ಕ್ರೋಧದಿಂದ ಪ್ರಯೋಗಿಸಿದ ಆ ವಿಮಲವಾದ ಶಕ್ತಿಯು ಶೀಘ್ರವಾಗಿ ಶ್ವೇತಪರ್ವತದ ಶಿಖರವನ್ನು ಭೇದಿಸಿತು.

ಸ ತೇನಾಭಿಹತೋ ದೀರ್ಣೋ ಗಿರಿಃ ಶ್ವೇತೋಽಚಲೈಃ ಸಹ ।
ಉತ್ಪಪಾತ ಮಹೀಂ ತ್ಯಕ್ತ್ವಾ ಭೀತಸ್ತಸ್ಮಾನ್ಮಹಾತ್ಮನಃ ॥೩೯॥

ಹೀಗೆ ಹೊಡೆಯಲ್ಪಟ್ಟು ಬಿರಿದ ಆ ಶ್ವೇತಪರ್ವತವು ಮಹಾತ್ಮನಾದ ಆ ಕುಮಾರನಿಗೆ ಹೆದರಿ ಉಳಿದ ಪರ್ವತಗಳ ಜೊತೆಯಲ್ಲಿ ಭೂಮಿಯನ್ನು ಬಿಟ್ಟು ಮೇಲಕ್ಕೆ ಹಾರಿತು.

ತತಃ ಪ್ರವ್ಯಥಿತಾ ಭೂಮಿರ್ವ್ಯಶೀರ್ಯತ ಸಮಂತತಃ ।
ಆರ್ತಾ ಸ್ಕಂದಂ ಸಮಾಸಾದ್ಯ ಪುನರ್ಬಲವತೀ ಬಭೌ ॥೪೦॥

ಆಗ ದುಃಖಗೊಂಡ ಭೂಮಿಯು ಎಲ್ಲ ಕಡೆಗಳಲ್ಲಿಯೂ ಬಿರಿಯಿತು. ಅದು ಆರ್ತವಾಗಿ ಸ್ಕಂದನನ್ನು ಸಮೀಪಿಸಿ ಶರಣಾಗತಿಯನ್ನು ಹೊಂದಿ ಪುನಃ ಬಲವುಳ್ಳದ್ದಾಗಿ ಕಂಗೊಳಿಸಿತು.

ಪರ್ವತಾಶ್ಚ ನಮಸ್ಕೃತ್ಯ ತಮೇವ ಪೃಥಿವೀಂ ಗತಾಃ ।
ಅಥೈನಮಭಜಲ್ಲೋಕಃ ಸ್ಕಂದಂ ಶುಕ್ಲಸ್ಯ ಪಂಚಮೀಮ್ ॥೪೧॥

ಪರ್ವತಗಳೂ ಸಹ ಅವನಿಗೆ ನಮಸ್ಕರಿಸಿ ಪುನಃ ಭೂಮಿಗೇ ಬಂದವು. ಅನಂತರ ಶುಕ್ಲಪಕ್ಷದ ಪಂಚಮಿಯಂದು ಜನರು ಸ್ಕಂದನನ್ನು ಪೂಜಿಸಿದರು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಚತುರ್ದಶಾಧಿಕದ್ವಿಶತಶತತಮೋऽಧ್ಯಾಯಃ ॥
॥ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಸ್ಕಾಂದೋಪಾಖ್ಯಾನೇ ದ್ವಿತೀಯೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹದಿನಾಲ್ಕನೆಯ
ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಹದಿನೈದನೆಯ ಅಧ್ಯಾಯ

ಸಪ್ತರ್ಷಿಗಳಲ್ಲಿ ಆರುಜನರಿಂದ ತಮ್ಮ ಪತ್ನಿಯರ ಪರಿತ್ಯಾಗ, ವಿಶ್ವಾಮಿತ್ರರಿಂದ ಕುಮಾರನಿಗೆ ಜಾತಕರ್ಮಾದಿ ಸಂಸ್ಕಾರ ಮತ್ತು ನಿಜಸ್ಥಿತಿಯ ಘೋಷಣೆ. ಋಷಿಗಳಿಂದ ಪತ್ನಿಯರ ಸ್ವೀಕಾರ.

ಮಾರ್ಕಂಡೇಯಃ

ಋಷಯಶ್ಚ ಮಹಾಘೋರಾನ್ ದೃಷ್ಟ್ವೋತ್ಪಾತಾನ್ ಸಮಂತತಃ ।
ಅಕುರ್ವಂಛಾಂತಿಮುದ್ದಿಗ್ನಾ ಲೋಕಾನಾಂ ಶಾಂತಿಭಾವನಾಃ ॥೧॥

ಮಾರ್ಕಂಡೇಯ– ಲೋಕಗಳಿಗೆ ಶಾಂತಿಯನ್ನು ಬಯಸುವ ಋಷಿಗಳು ಎಲ್ಲಕಡೆಗಳಲ್ಲಿಯೂ ಮಹಾಘೋರವಾದ ಅಪಶಕುನಗಳನ್ನು ನೋಡಿ ಉದ್ವಿಗ್ನರಾಗಿ ಶಾಂತಿಯನ್ನು ಮಾಡಿದರು.

ನಿವಸಂತಿ ವನೇ ಯೇ ತು ತಸ್ಮಿಂಶ್ಚೈತ್ರರಥೇ ಜನಾಃ ।
ತೇऽಬ್ರುವನ್ನೇಷ ನೋऽನರ್ಥಃ ಪಾವಕೇನಾಹಿತೋ ಮಹಾನ್ ।
ಸಂಗಮ್ಯ ಷಡ್ಭಿಃ ಪತ್ನೀಭಿಃ ಸಪ್ತರ್ಷೀಣಾಮಿತಿ ಸ್ಮ ಹ ॥೨॥

ಆ ಚೈತ್ರರಥವನದಲ್ಲಿ ವಾಸಮಾಡುವ ಜನಗಳು ಮಾತ್ರ ಅಗ್ನಿಯು ಸಪ್ತರ್ಷಿಗಳ ಪತ್ನಿಯರ ಜೊತೆಯಲ್ಲಿ ಸಂಗವನ್ನು ಮಾಡಿ ನಮಗೆ ಈ ಅನರ್ಥವನ್ನು ತಂದೊಡ್ಡಿದ್ದಾನೆ ಎಂದು ಹೇಳಿದರು.

ಅಪರೇ ಗರುಡೀಮಾಹುಸ್ತ್ವಯಾऽನರ್ಥೋऽಯಮಾಹೃತಃ ।
ಯೈರ್ದೃಷ್ಟಾ ಸಾ ತದಾ ದೇವೀ ತಸ್ಯಾ ರೂಪೇಣ ಗಚ್ಛತೀ ॥೩॥

ಸ್ವಾಹಾದೇವಿಯು ಹೆಣ್ಣುಗರುಡ ಪಕ್ಷಿಯ ರೂಪದಲ್ಲಿ ಹೋಗುವುದನ್ನು ನೋಡಿದ್ದ ಇನ್ನು ಕೆಲವರು ಆ ಹೆಣ್ಣು ಗರುಡ ಪಕ್ಷಿಯು ಇಂತಹ ಅನರ್ಥವನ್ನು ತಂದಿದೆ ಎಂದು ಹೇಳಿದರು.

ನ ತು ತತ್ ಸ್ವಾಹಯಾ ಕರ್ಮ ಕೃತಂ ಜಾನಾತಿ ವೈ ಜನಃ ॥೪॥

ಈ ಕಾರ್ಯವನ್ನು ಮಾಡಿದವಳು ಸ್ವಾಹಾದೇವಿ ಎಂದು ಯಾರೂ ತಿಳಿದಿರಲಿಲ್ಲ.

ಸುಪರ್ಣೀ ತು ವಚಃ ಶ್ರುತ್ವಾ ಮಮಾಯಂ ತನಯಸ್ತಿ ತಿ ।
ಉಪಗಮ್ಯ ಶನೈಃ ಸ್ಕಂದಮಾಹಾಹಂ ಜನನೀ ತವ ॥೫॥

ಆ ಸುಪರ್ಣಿಯಾದರೋ ಇವನು ತನ್ನ ಮಗನೆಂಬ ಮಾತನ್ನು ಕೇಳಿ ಮೆಲ್ಲನೆ ಸ್ಕಂದನನ್ನು ಸಮೀಪಿಸಿ ನಾನು ನಿನ್ನ ತಾಯಿ ಎಂದು ಹೇಳಿದಳು.

ಅಥ ಸಪ್ತರ್ಷಯಃ ಶ್ರುತ್ವಾ ಜಾತಂ ಪುತ್ರಂ ಮಹೌಜಸಮ್ ।
ತತ್ಯಜುಃ ಷಟ್ ತದಾ ಪತ್ನೀರ್ವಿನಾ ದೇವೀಮರುಂಧತೀಮ್ ।
ಷಡ್ಭಿರೇವ ತದಾ ಜಾತಮಾಹುಸ್ತದ್ವನವಾಸಿನಃ ॥೬॥

ಆಗ ಸಪ್ತರ್ಷಿಗಳು ಮಹಾಪರಾಕ್ರಮಿಯಾದ ಪುತ್ರನು ಹುಟ್ಟಿದುದನ್ನು ಕೇಳಿ ಅರುಂಧತಿ ಒಬ್ಬಳನ್ನು ಬಿಟ್ಟು ಉಳಿದ ಆರು ಪತ್ನಿಯರನ್ನು ಪರಿತ್ಯಾಗ ಮಾಡಿದರು. ಆ ವನವಾಸಿಗಳು ಆರುಜನ ಸ್ತ್ರೀಯರೇ ಈ ಕಾರ್ಯವನ್ನು ಮಾಡಿದರು ಎಂದು ಹೇಳಿದರಷ್ಟೆ?

ಸಪ್ತರ್ಷೀನಾಹ ಚ ಸ್ವಾಹಾ ಮಮ ಪುತ್ರೋಽಯಮಿತ್ಯುತ ।
ಅಹಂ ಜಾನೇ ನೈತದೇವಮಿತಿ ರಾಜನ್ ಪುನಃ ಪುನಃ ॥೭॥

ಎಲೈ ರಾಜನೇ, ಸ್ವಾಹಾದೇವಿಯು ಸಪ್ತರ್ಷಿಗಳ ಬಳಿಗೆ ಬಂದು ಇದು ನೀವು ತಿಳಿದುಕೊಂಡಿರುವಂತೆ ಅಲ್ಲ. ನಾನು ಸರಿಯಾಗಿ ತಿಳಿದಿದ್ದೇನೆ. ಇವನು ನನ್ನ ಪುತ್ರ ಎಂದು ಪುನಃ ಪುನಃ ಹೇಳಿದಳು (ಆದರೂ ಅವರು ಒಪ್ಪಲಿಲ್ಲ).

ವಿಶ್ವಾಮಿತ್ರಸ್ತು ಕೃತ್ವೇಷ್ಟಿಂ ಸಪ್ತರ್ಷೀಣಾಂ ಮಹಾಮುನಿಃ ।
ಪಾವಕಂ ಕಾಮಸಂತಪ್ತಮದೃಷ್ಟಃ ಪೃಷ್ಠತೋಽನ್ವಗಾತ್ ॥೮॥

ಮಹಾಮುನಿಗಳಾದ ವಿಶ್ವಾಮಿತ್ರರು ಒಬ್ಬರು ಮಾತ್ರ ಸಪ್ತರ್ಷಿಗಳ ಯಾಗವನ್ನು ಮುಗಿಸಿ ಅಗ್ನಿಗೆ ತಿಳಿಯದಂತೆ ಕಾಮಸಂತಪ್ತನಾದ ಅಗ್ನಿಯನ್ನು ಹಿಂಬಾಲಿಸಿದ್ದರು.

ತತ್ ತೇನ ನಿಖಿಲಂ ಸರ್ವಮವಬುದ್ಧಂ ಯಥಾತಥಮ್ ।
ವಿಶ್ವಾಮಿತ್ರಸ್ತು ಪ್ರಥಮಂ ಕುಮಾರಂ ಶರಣಂ ಗತಃ ॥೯॥

ಆಕಾರಣದಿಂದ ಅವರು ಎಲ್ಲ ವಿಷಯವನ್ನೂ ಯಥಾರ್ಥವಾಗಿ ತಿಳಿದಿದ್ದರು. ವಿಶ್ವಾಮಿತ್ರರು ಒಬ್ಬರೇ ಮೊದಲು ಕುಮಾರನಿಗೆ ಶರಣಾಗತರಾದರು.

ಸ್ತವಂ ದಿವ್ಯಂ ಸಂಪ್ರಚಕ್ರೇ ಮಹಾಸೇನಸ್ಯ ಚಾಪಿ ಸಃ ।
ಮಂಗಲಾನಿ ಚ ಕರ್ಮಾಣಿ ಕೌಮಾರಾಣಿ ತ್ರಯೋದಶ ॥೧೦॥

ಜಾತಕರ್ಮಾದಿಕಾಸ್ತಸ್ಯ ಕ್ರಿಯಾಶ್ಚಕ್ರೇ ಮಹಾಮುನಿಃ ॥೧೧॥

ಮತ್ತು ಅವರು ಮಹಾಸೇನನನ್ನು ಕುರಿತು ದಿವ್ಯಸ್ತೋತ್ರವನ್ನು ಮಾಡಿದರು. ಅಲ್ಲದೆ ಬಾಲಕರಿಗೆ ಮಾಡಬೇಕಾದ ಜಾತಕರ್ಮಾದಿ ತ್ರಯೋದಶ ಮಂಗಳ ವಿಧಿಗಳನ್ನೂ ಸಹ ಆ ಮಹಾಮುನಿಗಳು ಮಾಡಿದರು.

ಷಡ್‌ವಕ್ತ್ರಸ್ಯ ತು ಮಾಹಾತ್ಮ್ಯಂ ಕುಕ್ಕುಟಸ್ಯ ತು ಸಾಧನಮ್ ।
ಶಕ್ತ್ಯಾ ದೇವ್ಯಾಃ ಸಾಧನಂ ಚ ತಥಾ ಪಾರಿಷದಾಮಪಿ ।
ವಿಶ್ವಾಮಿತ್ರಶ್ಚಕಾರೈತತ್ಕರ್ಮ ಲೋಕಹಿತಾಯ ವೈ ॥೧೨॥

ಷಣ್ಮುಖನ ಮಹಾತ್ಮೆ, ಕುಕ್ಕುಟದ ಸಂಪಾದನೆ, ಶಕ್ತಿ-ದೇವಿಯರ ಮತ್ತು ಪಾರ್ಷದರ ಸಂಪಾದನೆ ಎಲ್ಲವನ್ನೂ ತಮ್ಮ ಸ್ತೋತ್ರದಲ್ಲಿ ಹೇಳಿ ಲೋಕಹಿತಕ್ಕಾಗಿ ಈ ಕರ್ಮವನ್ನು ವಿಶ್ವಾಮಿತ್ರರು ಮಾಡಿದರು.

ತಸ್ಮಾದೃಷಿಃ ಕುಮಾರಸ್ಯ ವಿಶ್ವಾಮಿತ್ರೋಽಭವತ್ ಪ್ರಿಯಃ ।
ಅಜಾನಾತ್ ತಚ್ಚ ಸ್ವಾಹಾಯಾ ರೂಪಾನ್ಯತ್ವಂ ಮಹಾಮುನಿಃ ॥೧೩॥

ಆದ್ದರಿಂದ ವಿಶ್ವಾಮಿತ್ರ ಋಷಿಗಳು ಕುಮಾರನಿಗೆ ಪ್ರಿಯರಾದರು. ಆ ಮಹಾಮುನಿಗಳು ಸ್ವಾಹಾದೇವಿಯು ರೂಪಾಂತರವನ್ನು ಧರಿಸಿ ಮಾಡಿದ ಈ ಕಾರ್ಯವನ್ನು ತಿಳಿದಿದ್ದರು.

ಅಥಾಬ್ರವೀತ್ ತಾನ್ ಸಪ್ತರ್ಷೀನ್ ಯುಷ್ಮತ್ಪತ್ನೀಷ್ವಯಂ ಶಿಶುಃ ।
ಷಟ್‌ಸು ಜಾತೋ ಹುತವಹಾತ್ ತೇ ಚಾಗ್ನೇಸ್ತ್ವ ಗ್ರತೋಽತ್ಯಜನ್ ॥

ಅಬ್ರವೀಚ್ಚ ಮುನೀನ್ ಸರ್ವಾನ್ ನಾಪರಾಧ್ಯಂತಿ ವೈ ಸ್ತ್ರಿಯಃ ।
ಶ್ರುತ್ವಾ ತು ತತ್ತ್ವತಸ್ತಸ್ಮಾತ್ ತೇ ಪತ್ನೀಃ ಸರ್ವತೋಽತ್ಯಜನ್ ॥೧೫॥

ಅವರು ಎಲ್ಲಾ ಮುನಿಗಳನ್ನೂ ಕುರಿತು ನಿಮ್ಮ ಸ್ತ್ರೀಯರು ಯಾವ ಅಪರಾಧವನ್ನೂ ಮಾಡಿಲ್ಲ ಎಂದು ಹೇಳಿ ನಡೆದ ಎಲ್ಲಾ ವಿಷಯಗಳನ್ನೂ ಯಥಾರ್ಥವಾಗಿ ತಿಳಿಸಿದರು. ಅದನ್ನು ಕೇಳಿದರೂ ಆರು ಋಷಿಗಳು ತಮ್ಮ ಪತ್ನಿಯರನ್ನು ತ್ಯಜಿಸಿದರು.

ಸ್ಕಂದಂ ಶ್ರುತ್ವಾ ತದಾ ದೇವಾ ವಾಸವಂ ಸಹಿತಾಽಬ್ರುವನ್ ।
ಅವಿಷಹ್ಯಬಲಂ ಸ್ಕಂದಂ ಜಹಿ ಶಕ್ರಾಶು ಮಾಚಿರಮ್ ॥೧೬॥

ದೇವತೆಗಳು ಸ್ಕಂದನ ವೃತ್ತಾಂತವನ್ನು ಕೇಳಿ ಒಟ್ಟಾಗಿ ಇಂದ್ರನ ಬಳಿಗೆ ಹೋಗಿ ಇಂದ್ರನೇ, ಅಸಹ್ಯಬಲವುಳ್ಳ ಈ ಸ್ಕಂದನನ್ನು ಶೀಘ್ರವಾಗಿ ಸಂಹರಿಸು ಎಂದು ಕೇಳಿಕೊಂಡರು.

ಯದಿ ವಾ ನ ನಿಹಂಸ್ಯೇನಂ ದೇವೇಂದ್ರೋಽಯಂ ಭವಿಷ್ಯತಿ ।
ತ್ರೈಲೋಕ್ಯಂ ಸಂನಿಗೃಹ್ಯಾಸ್ಮಾಂಸ್ತ್ವಾಂ ಚ ಶಕ್ರ ಮಹಾಬಲ ॥೧೭॥

ಎಲೈ ಮಹಾಬಲನೇ, ಒಂದುಪಕ್ಷ ನೀನು ಅವನನ್ನು ಕೊಲ್ಲದಿದ್ದರೆ ಅವನು ಮೂರು ಲೋಕಗಳನ್ನೂ, ನಮ್ಮನ್ನೂ ಮತ್ತು ನಿನ್ನನ್ನೂ ವಶಪಡಿಸಿಕೊಂಡು ತಾನೇ ದೇವೇಂದ್ರನಾಗುವನು (ಎಂದು ಹೇಳಿದರು).

ಸ ತಾನುವಾಚ ವ್ಯಥಿತೋ ಬಾಲೋಽಯಂ ಸುಮಹಾಬಲಃ ।
ಸ್ರಷ್ಟಾರಮಪಿ ಲೋಕಾನಾಂ ಯುಧಿ ವಿಕ್ರಮ್ಯ ನಾಶಯೇತ್ ॥೧೮॥

ವ್ಯಥೆಯಿಂದ ಕೂಡಿದ ಇಂದ್ರನು ಈ ಮಹಾಬಲವುಳ್ಳ ಸ್ಕಂದನು ಲೋಕಗಳ ಸೃಷ್ಟಿಕರ್ತನಾದ ಬ್ರಹ್ಮನನ್ನು ಕೂಡ ಯುದ್ಧದಲ್ಲಿ ಆಕ್ರಮಿಸಿ ನಾಶಮಾಡಿಯಾನು ಎಂದು ಅವರನ್ನು ಕುರಿತು ಹೇಳಿದನು.

ಸರ್ವಾಸ್ತ್ವದ್ಯಾಭಿಗಚ್ಛಂತು ಸ್ಕಂದಂ ಲೋಕಸ್ಯ ಮಾತರಃ ।
ಕಾಮವೀರ್ಯಾ ಘ್ನಂತು ಚೈನಂ ತಥೇತ್ಯುಕ್ತ್ವಾ ಚ ತಾ ಯಯುಃ ॥

ತಮಪ್ರತಿಬಲಂ ದೃಷ್ಟ್ವಾ ವಿಷಣ್ಣಾವದನಾಸ್ತು ತಾಃ ।
ಅಶಕ್ಯೋಽಯಂ ವಿಚಿಂತ್ಯೈವಂ ತಮೇವ ಶರಣಂ ಯಯುಃ ॥೨೦॥

ಊಚುಶ್ಚೈನಂ ತ್ವಮಸ್ಮಾಕಂ ಪುತ್ರೋ ಭವ ಮಹಾಬಲ ।
ಅಭಿನಂದಸ್ವ ನಃ ಸರ್ವಾಃ ಪ್ರಸ್ನುತಾಃ ಸ್ನೇಹವಿಕ್ಲವಾಃ ॥೨೧॥

ಕಾಮವೀರ್ಯವುಳ್ಳ (ತಮಗೆ ಇಚ್ಛೆಬಂದಷ್ಟು ಸಾಮರ್ಥ್ಯವನ್ನು ಹೊಂದುವ) ಲೋಕಮಾತೆಯರಾದ ಬ್ರಾಹ್ಮೀ, ಮಹೇಶ್ವರೀ ಮೊದಲಾದ ಸಪ್ತಮಾತೆಯರು ಸ್ಕಂದನ ಬಳಿಗೆ ಹೋಗಿ ಅವನನ್ನು ಕೊಲ್ಲಲಿ ಎಂದು ಹೇಳಿ ಆ ದೇವತೆಗಳು ಹೋದರು.

ಆ ಸಪ್ತಮಾತೆಯರು ಅವನ ಅಸದೃಶಬಲವನ್ನು ನೋಡಿ ವಿಷಣ್ಣ ಮುಖವುಳ್ಳವರಾಗಿ ಇವನು ನಮ್ಮಿಂದ ಏನನ್ನೂ ಮಾಡಲು ಅಸಾಧ್ಯನಾದವನು ಎಂದು ಚಿಂತಿಸಿ ಅವನಿಗೇ ಶರಣಾಗತರಾದರು ಮತ್ತು ಅವನನ್ನು ಕುರಿತು ಎಲೈ ಮಹಾಬಲನೇ, ನಾವೆಲ್ಲರೂ ಸ್ನೇಹದಿಂದ ಸ್ತನಗಳಿಂದ ಕ್ಷೀರಧಾರೆಯನ್ನು ಹರಿಸುತ್ತಿದ್ದೇವೆ. ನಮ್ಮನ್ನು ಅಭಿನಂದಿಸಿ ನಮಗೆ ಪುತ್ರನಾಗು ಎಂದು ಹೇಳಿದರು.

ತಾಃ ಸಂಪೂಜ್ಯ ಮಹಾಸೇನಃ ಕಾಮಾಂಶ್ಚಾಸಾಂ ಪ್ರದಾಯ ಸಃ ।
ಅಪಶ್ಯದಗ್ನಿಮಾಯಾಂತಂ ಪಿತರಂ ಬಲಿನಾಂ ಬಲೀ ॥೨೨॥

ಬಲಿಷ್ಠರಲ್ಲಿ ಬಲಿಷ್ಠನಾದ ಮಹಾಸೇನನು ಅವರನ್ನು ಸತ್ಕರಿಸಿ ಅವರಿಗೆ ಬೇಕಾದ ವರಗಳನ್ನು ಕೊಟ್ಟು ತನ್ನ ತಂದೆಯಾದ ಅಗ್ನಿಯು ಬರುತ್ತಿರುವುದನ್ನು ನೋಡಿದನು.

ಸ ತು ಸಂಪೂಜಿತಸ್ತೇನ ಸಹ ಮಾತೃಗಣೇನ ಹ ।
ಪರಿಷ್ವಜ್ಯ ಮಹಾಸೇನಂ ರಕ್ಷಮಾಣಃ ಸ್ಥಿತಃ ಶಿವಃ ॥೨೩॥

ಅಗ್ನಿಯು ಮಹಾಸೇನನಿಂದ ಚೆನ್ನಾಗಿ ಪೂಜಿತನಾಗಿ ಮಾತೃಗಣದ ಜೊತೆಯಲ್ಲಿ ಮಹಾಸೇನನನ್ನು ಸುತ್ತುವರಿದು ರಕ್ಷಣೆ ಮಾಡುತ್ತಾ ಅವನಿಗೆ ಸುಖಪ್ರದನಾಗಿ ನಿಂತನು.

ಸರ್ವಾಸಾಂ ತತ್ರ ನಾರೀಣಾಂ ನಾರೀ ಕ್ರೋಧಸಮುದ್ಭವಾ ।
ಧಾತ್ರೀ ಸ್ವಪುತ್ರವತ್ ಸ್ಕಂದಂ ಶೂಲಹಸ್ತಾऽಭ್ಯರಕ್ಷತ ॥೨೪॥

ಆ ಸಪ್ತಮಾತೆಯರಲ್ಲಿ ಕ್ರೋಧಸಮುದ್ಭವಾ ಎನಿಸಿದ ಚಾಮುಂಡಿಯು ದಾದಿಯು ತನ್ನ ಪುತ್ರನನ್ನು ರಕ್ಷಿಸುವಂತೆ ಕೈಯಲ್ಲಿ ಶೂಲವನ್ನು ಹಿಡಿದು ಸ್ಕಂದನನ್ನು ರಕ್ಷಿಸಿದಳು.

ಲೋಹಿತಸ್ಯೋದಧೇಃ ಕನ್ಯಾ ಕ್ರೂರಾ ಲೋಹಿತಭೋಜನಾ ।
ಪರಿಷ್ವಜ್ಯ ಮಹಾಸೇನಂ ಪುತ್ರವತ್ ಪರ್ಯರಕ್ಷತ ॥೨೫॥

ಸಂಧ್ಯಾಕಾಲದಲ್ಲಿ ಲೋಹಿತವರ್ಣದಿಂದ ಕಾಣುವ ಲೋಹಿತಸಮುದ್ರನ ಕನ್ಯೆಯಾದ ರಕ್ತಭೋಜಿನಿಯಾದ ಕ್ರೂರಾ ಎಂಬ ಮಾತೆಯು ಮಹಾಸೇನನನ್ನು ಆಲಿಂಗಿಸಿ ಮಗನಂತೆ ಅವನನ್ನು ರಕ್ಷಿಸಿದಳು.

ಅಗ್ನಿರ್ಭೂತ್ವಾ ನೈಜಮೇಷಶ್ಛಾಗವಕ್ತ್ರೋ ಬಹುಪ್ರಜಃ ।
ರಮಯಾಮಾಸ ಶೈಲಸ್ಥಂ ಬಾಲಂ ಕ್ರೀಡನಕೈರಿವ ॥೨೬॥

ಬಹುಪ್ರಜೆಗಳನ್ನುಳ್ಳ ಅಗ್ನಿಯು ಹೋತದ ಮುಖವನ್ನು, ಟಗರಿನ ದೇಹವನ್ನು ಹೊಂದಿದವನಾಗಿ ಪರ್ವತದಲ್ಲಿದ್ದ ಬಾಲನಾದ ಮಹಾಸೇನನನ್ನು ಕ್ರೀಡಾವಸ್ತುಗಳಿಂದ ಆಡಿಸುವಂತೆ ಆಡಿಸಿ ಸಂತೋಷಪಡಿಸಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಪಂಚದಶಾಧಿಕದ್ವಿಶತಶತತಮೋऽಧ್ಯಾಯಃ ॥
॥ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಸ್ಕಾಂದೋಪಾಖ್ಯಾನೇ ತೃತೀಯೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹದಿನೈದನೆಯ
ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಹದಿನಾರನೆಯ ಅಧ್ಯಾಯ

ಇಂದ್ರಸ್ಕಂದರ ಯುದ್ಧ. ಸ್ಕಂದನಿಂದ ಇಂದ್ರನಿಗೆ ಅಭಯದಾನ.

ಮಾರ್ಕಂಡೇಯಃ

ಗ್ರಹಾಃ ಶ್ಚೋಪಗ್ರಹಾಶ್ಚೈವ ಋಷಯೋ ಮಾತರಸ್ತಥಾ ।
ಹುತಾಶನಮುಖಾಶ್ಚೈವ ದೃಪ್ತಾಃ ಪಾರಿಷದಾಂ ಗಣಾಃ ॥೧॥

ಏತೇ ಚಾನ್ಯೇ ಚ ಬಹವೋ ಘೋರಾಸ್ತ್ರಿದಿವವಾಸಿನಃ ।
ಪರಿವಾರ್ಯ ಮಹಾಸೇನಂ ಸ್ಥಿತಾ ಭೂತಗಣೈಃ ಸಹ ॥೨॥

ಮಾರ್ಕಂಡೇಯ– ಉಪಗ್ರಹಗಳಿಂದ ಸಹಿತವಾದ ಗ್ರಹಗಳು, ಋಷಿಗಳು, ಮಾತೃಗಣ, ಅಗ್ನಿಮೊದಲಾದವರು ದರ್ಪದಿಂದ ಕೂಡಿದ ಪಾರ್ಷದ ಸಮೂಹಗಳು,

ಇವರು ಮತ್ತು ಇನ್ನೂ ಅನೇಕ ಸ್ವರ್ಗವಾಸಿಗಳಾದ ಘೋರರೂಪರಾದವರು ಮಹಾಸೇನನನ್ನು ಸುತ್ತುವರಿದು ಭೂತಗಣಗಳ ಜೊತೆಯಲ್ಲಿ ನಿಂತರು.

ಸಂದಿಗ್ಧಂ ವಿಜಯಂ ದೃಷ್ಟ್ವಾ ವಿಜಯೇಪ್ಸುಃ ಸುರೇಶ್ವರಃ ।
ಆರುಹ್ಯೈರಾವತಸ್ಕಂಧಂ ಪ್ರಯಯೌ ದೈವತೈಃ ಸಹ ।
ವಿಜಿಘಾಂಸುರ್ಮಹಾಸೇನಮಿಂದ್ರಸ್ತೂರ್ಣತರಂ ತದಾ ॥೩॥

ತನ್ನ ವಿಜಯವು ಸಂದಿಗ್ಧವಾಗಿದೆ ಎಂದು ತಿಳಿದ ವಿಜಯೇಚ್ಛುವಾದ ಸುರೇಶ್ವರನಾದ ಇಂದ್ರನು ಐರಾವತವನ್ನು ಏರಿ ದೇವತೆಗಳ ಜೊತೆಯಲ್ಲಿ ಯುದ್ಧಕ್ಕೆ ಹೊರಟನು.

ಆದಾಯ ವಜ್ರಂ ಬಲವಾನ್ಸರ್ವೈರ್ದೇವಗಣೈರ್ವೃತಃ ॥೫.೧॥

ಬಲಿಷ್ಠನಾದ ಇಂದ್ರನು ಮಹಾಸೇನನನ್ನು ಸಂಹರಿಸಲು ಬಯಸಿ ವಜ್ರಾಯುಧವನ್ನು ತೆಗೆದುಕೊಂಡು ಸರ್ವದೇವಗಣಗಳಿಂದ ಕೂಡಿದವನಾಗಿ ಆಗ ಶೀಘ್ರವಾಗಿ ಹೊರಟನು.

ಉಗ್ರಂ ತಂ ಚ ಮಹಾನಾದಂ ದೇವಾನೀಕಂ ಮಹಾಪ್ರಭಮ್ ।
ವಿಚಿತ್ರಧ್ವಜಸನ್ನಾಹಂ ನಾನಾವಾಹನಕಾರ್ಮುಕಮ್ ॥೬॥

ಪ್ರವರಾಂಬರಸಂವೀತಂ ಶ್ರಿಯಾ ಜುಷ್ಟಮಲಂಕೃತಮ್ ।
ವಿಜಿಘಾಂಸುಂ ತಮಾಯಾಂತಂ ಕುಮಾರಃ ಶಕ್ರಮನ್ವಯಾತ್ ॥೭॥

ಉಗ್ರವಾದ ಮಹಾನಾದವನ್ನು ಮಾಡುತ್ತಿದ್ದ, ಮಹಾಕಾಂತಿಯುಳ್ಳ, ವಿಚಿತ್ರ ಧ್ವಜಗಳಿಂದ ಕೂಡಿದ್ದ, ಅನೇಕ ವಾಹನಗಳಿಂದ ಮತ್ತು ಧನುಸ್ಸುಗಳಿಂದ ಕೂಡಿದ್ದ, ಶ್ರೇಷ್ಠವಾದ ವಸ್ತ್ರಗಳನ್ನು ಧರಿಸಿ ಕಾಂತಿಯಿಂದ ಕಂಗೊಳಿಸುತ್ತಿದ್ದ, ತನ್ನೆಡೆಗೆ ವಧೇಚ್ಛೆಯಿಂದ ಬರುತ್ತಿದ್ದ ಇಂದ್ರನನ್ನು ಕುಮಾರನು ಎದುರಿಸಿದನು.

ಏನದನ್ ಪಥಿ ಶಕ್ರಸ್ತು ದ್ರುತಂ ಯಾತಿ ಮಹಾಬಲಃ ।
ಸಂಹರ್ಷಯನ್ ದೇವಸೇನಾಂ ಜಿಘಾಂಸುಃ ಪಾವಕಾತ್ಮಜಮ್ ॥೮॥

ಮಾರ್ಗದಲ್ಲಿ ಮಹಾಬಲನಾದ ದೇವೇಂದ್ರನು ಸಿಂಹನಾದವನ್ನು ಮಾಡುತ್ತಾ ದೇವಸೈನ್ಯವನ್ನು ಸಂತೋಷಪಡಿಸುತ್ತಾ ಅಗ್ನಿಪುತ್ರನಾದ ಮಹಾಸೇನನನ್ನು ಸಂಹರಿಸುವ ಇಚ್ಛೆಯುಳ್ಳವನಾಗಿ ಶೀಘ್ರವಾಗಿ ಬಂದನು.

ಸಂಪೂಜ್ಯಮಾನಸ್ತ್ರಿದಶೈಸ್ತಥೈವ ಪರಮರ್ಷಿಭಿಃ ।
ಸಮೀಪಮಥ ಸಂಪ್ರಾಪ್ತಃ ಕಾರ್ತ್ತಿಕೇಯಸ್ಯ ವಾಸವಃ ॥೯॥

ಇಂದ್ರನು ದೇವತೆಗಳಿಂದಲೂ, ಅದರಂತೆಯೇ ಮಹರ್ಷಿಗಳಿಂದಲೂ ಪೂಜಿತನಾಗಿ ಕಾರ್ತ್ತಿಕೇಯನ ಸಮೀಪಕ್ಕೆ ಬಂದನು.

ಸಿಂಹನಾದಂ ತದಾ ಚಕ್ರೇ ದೇವೇಶಃ ಸಹಿತಃ ಸುರೈಃ ।
ಗುಹೋಽಪಿ ಶಬ್ದಂ ತಂ ಶ್ರುತ್ವಾ ವ್ಯನದತ್ ಸಾಗರೋ ಯಥಾ ॥೧೦॥

ಆಗ ದೇವತೆಗಳ ಜೊತೆಯಲ್ಲಿದ್ದ ಇಂದ್ರನು ಸಿಂಹನಾದವನ್ನು ಮಾಡಿದನು. ಆ ಶಬ್ದವನ್ನು ಕೇಳಿದ ಗುಹನೂ ಸಹ ಸಾಗರದಂತೆ ಘೋಷವನ್ನು ಮಾಡಿದನು.

ತಸ್ಯ ಶಬ್ದೇನ ಮಹತಾ ಸಮುದ್ಭೂತೋದಧಿಪ್ರಭಮ್ ।
ಬಭ್ರಾಮ ತತ್ರ ತತ್ರೈವ ದೇವಸೈನ್ಯಮಚೇತನಮ್ ॥೧೧॥

ಗುಹನ ಆ ದೊಡ್ಡ ಶಬ್ದವನ್ನು ಕೇಳಿ ಉಕ್ಕಿದ ಸಮುದ್ರದ ಕಾಂತಿಯನ್ನು ಹೊಂದಿದ್ದ ದೇವಸೈನ್ಯವು ಸಂಜ್ಞಾಹೀನವಾಗಿ ಅಲ್ಲಲ್ಲಿಯೇ ತಿರುಗಾಡಿತು.

ಜಿಘ್ರಾಂಸೂನುಪಸಂಪ್ರಾಪ್ತಾನ್ ದೇವಾನ್ ದೃಷ್ಟ್ವಾ ಸ ವಾವಕಿಃ ।
ವಿಸಸರ್ಜ ಮುಖಾತ್ ಕ್ರುದ್ಧಃ ಪ್ರವೃದ್ಧಾಃ ಪಾವಕಾರ್ಚಿಷಃ ॥೧೨॥

ಅಹದ್ ದೇವಸೈನ್ಯಾನಿ ವೇಪಮಾನಾನಿ ಭೂತಳೇ ॥೧೩॥

ದೇವತೆಗಳು ತನ್ನ ಸಮೀಪಕ್ಕೆ ತನ್ನನ್ನು ಕೊಲ್ಲುವ ಉದ್ದೇಶದಿಂದ ಬಂದಿರುವುದನ್ನು ಗಮನಿಸಿದ ಅಗ್ನಿಪುತ್ರನಾದ ಗುಹನು ಕೋಪಗೊಂಡು ತನ್ನ ಮುಖದಿಂದ ದೊಡ್ಡದಾದ ಅಗ್ನಿಜ್ವಾಲೆಗಳನ್ನು ಸೃಷ್ಟಿಸಿದನು. ಅದರಿಂದ ಭೂತಳದಲ್ಲಿ ನಡುಗುತ್ತಿದ್ದ ದೇವಸೈನ್ಯವನ್ನು ದಹಿಸಿದನು.

ತೇ ಪ್ರದೀಪ್ತಶಿರೋದೇಹಾಃ ಪ್ರದೀಪ್ತಾಯುಧವಾಹನಾಃ ।
ಪತಿತಾಃ ಸಹಸಾ ಭಾಂತಿ ವ್ಯಸ್ತಾಸ್ತಾರಾಗಣಾ ಇವ ॥೧೪॥

ಆ ದೇವಸೈನ್ಯದ ಸೈನಿಕರು ಅಗ್ನಿಜ್ವಾಲೆಯಿಂದ ಉರಿಯುತ್ತಿದ್ದ ತಮ್ಮ ದೇಹ ಮತ್ತು ಶಿರಸ್ಸುಗಳು ಮತ್ತು ಆಯುಧಗಳು ಮತ್ತು ವಾಹನಗಳನ್ನು ಉಳ್ಳವರಾಗಿ ಇದ್ದಕ್ಕಿದ್ದಂತೆಯೇ ಭೂತಳದಲ್ಲಿ ಬಿದ್ದು ಚದುರಿದ ನಕ್ಷತ್ರಸಮೂಹದಂತೆ ತೋರುತ್ತಿದ್ದರು.

ದಹ್ಯಮಾನಾಃ ಪ್ರಪನ್ನಾಸ್ತೇ ಶರಣಂ ಪಾವಕಾತ್ಮಜಮ್ ।
ದೇವಾ ವಜ್ರಧರಂ ತ್ಯಕ್ತ್ವಾ ತತಃ ಶಾಂತಿಮುಪಾಗತಾಃ ॥೧೫॥

ಅಗ್ನಿಜ್ವಾಲೆಗಳಿಂದ ದಹಿಸಲ್ಪಡುತ್ತಿದ್ದ ಅವರು ಅಗ್ನಿಪುತ್ರನಿಗೆ ಶರಣಾಗತರಾದರು. ದೇವತೆಗಳು ವಜ್ರಧರನಾದ ಇಂದ್ರನನ್ನು ತ್ಯಜಿಸಿ ಯುದ್ಧದಿಂದ ನಿವೃತ್ತರಾದರು.

ತ್ಯಕ್ತೋ ದೇವೈಸ್ತತಃ ಸ್ಕಂದೇ ವಜ್ರಂ ಶಕ್ರೋ ನ್ಯಪಾತಯತ್ ।
ತದ್ದಿಸೃಷ್ಟಂ ಜಘಾನಾಶು ಪಾರ್ಶ್ವಂ ಸ್ಕಂದಸ್ಯ ದಕ್ಷಿಣಮ್ ॥೧೬॥

ಬಿಭೇದ ಚ ಮಹಾರಾಜ ಪಾರ್ಶ್ವಂ ತಸ್ಯ ಮಹಾತ್ಮನಃ ॥೧೬.೧॥

ದೇವತೆಗಳಿಂದ ತ್ಯಕ್ತನಾದ ಇಂದ್ರನು ಸ್ಕಂದನ ಮೇಲೆ ವಜ್ರಾಯುಧದ ಪ್ರಯೋಗವನ್ನು ಮಾಡಿದನು. ಎಲೈ ಮಹಾರಾಜನೇ, ಪ್ರಯೋಗಿಸಲ್ಪಟ್ಟ ಆ ವಜ್ರಾಯುಧವು ಸ್ಕಂದನ ದಕ್ಷಿಣ ಪಾರ್ಶ್ವವನ್ನು ಭೇದಿಸಿತು.

ವಜ್ರಪ್ರಹಾರಾತ್ ಸ್ಕಂದಸ್ಯ ಸಂಜಾತಃ ಪುರುಷೋಽಪರಃ ।
ಯುವಾ ಕಾಂಚನಸನ್ನಾಹಃ ಶಕ್ತಿಭೃದ್ ದಿವ್ಯಕುಂಡಲಃ ।
ಯದ್ ವಜ್ರವಿಶನಾಜ್ಜಾತೋ ವಿಶಾಖಸ್ತೇನ ಸೋಽಭವತ್ ॥೧೭॥

ಸ್ಕಂದನಿಗೆ ವಜ್ರಪ್ರಹಾರ ಉಂಟಾದಾಗ ಅವನ ಶರೀರದಿಂದ ಯುವಕನೂ, ಕಾಂಚನ ಪ್ರಭೆಯುಳ್ಳವನೂ, ದಿವ್ಯಕುಂಡಲವನ್ನು ಧರಿಸಿದವನೂ, ಶಕ್ತ್ಯಾಯುಧವನ್ನು ಧರಿಸಿದವನೂ ಆದ ಇನ್ನೊಬ್ಬ ಪುರುಷನು ಜನಿಸಿದನು. ವಜ್ರಾಯುಧದ ಪ್ರವೇಶದಿಂದ (ಉಂಟಾದ ಭೇದನದಿಂದ) ಜನಿಸಿದುದರಿಂದ ಅವನಿಗೆ ವಿಶಾಖ ಎಂದು ಹೆಸರಾಯಿತು.

ಸಂಜಾತಮಪರಂ ದೃಷ್ಟ್ವಾ ಕಾಲಾನಲಸಮದ್ಯುತಿಮ್ ।
ಭಯಾದಿಂದ್ರಸ್ತು ತಂ ಸ್ಕಂದಂ ಪ್ರಾಂಜಲಿಃ ಶರಣಂ ಗತಃ ॥೧೮॥

ತಸ್ಯಾಭಯಂ ದದೌ ಸ್ಕಂದಃ ಸಹ ಸೈನ್ಯಸ್ಯ ಸತ್ತಮಃ ॥೧೯॥

ಪ್ರಳಯಕಾಲದ ಅಗ್ನಿಯ ಕಾಂತಿಯನ್ನು ಹೊಂದಿ ಜನಿಸಿದ ಇನ್ನೊಬ್ಬ ಪುರುಷನನ್ನು ನೋಡಿ ಇಂದ್ರನು ಭಯದಿಂದ ಸ್ಕಂದನಿಗೆ ಕೈಗಳನ್ನು ಮುಗಿದು ಶರಣಾಗತನಾದನು. ಸಜ್ಜನರಲ್ಲಿ ಶ್ರೇಷ್ಠನಾದ ಸ್ಕಂದನು ಇಂದ್ರನಿಗೂ ಮತ್ತು ಇಂದ್ರನ ಸೈನ್ಯಕ್ಕೂ ಅಭಯವನ್ನು ಕೊಟ್ಟನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ ವನಪರ್ವಣಿ ಷೋಡಶಾಧಿಕದ್ವಿಶತಶತತಮೋऽಧ್ಯಾಯಃ ॥

॥ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಸ್ಕಾಂದೋಪಾಖ್ಯಾನೇ ಚತುರ್ಥೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹದಿನಾರನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಹದಿನೇಳನೆಯ ಅಧ್ಯಾಯ

ಸ್ಕಂದಪಾರ್ಷದರ ನಿರೂಪಣೆ.

ಮಾರ್ಕಂಡೇಯಃ

ತತಃ ಪ್ರಹೃಷ್ಟಾಸ್ತ್ರಿದಶಾ ವಾದಿತ್ರಾಣ್ಯಭ್ಯವಾದಯನ್ ॥೧॥

ಮಾರ್ಕಂಡೇಯ– ಆಗ ಸಂತೋಷಗೊಂಡ ದೇವತೆಗಳು ವಾದ್ಯಗಳನ್ನು ಮೊಳಗಿಸಿದರು.

ಸ್ಕಂದಪಾರಿಷದಾನ್ ಘೋರಾನ್ ಶೃಣುಷ್ವಾದ್ಭುತ ವಿಕ್ರಮಾನ್ ॥೨॥

ವಜ್ರಪ್ರಹಾರಾತ್ ಸ್ಕಂದಸ್ಯ ಜಜ್ಞುಸ್ತತ್ರ ಕುಮಾರಕಾಃ ।
ಯೇ ಹರಂತಿ ಶಿಶೂನ್ ಜಾತಾನ್ ಗರ್ಭಸ್ಥಾಂಶ್ಚೈವ ದಾರುಣಾಃ ।
ವಜ್ರಪ್ರಹಾರಾತ್ ಕನ್ಯಾಶ್ಚ ಜಜ್ಞಿರೇऽಸ್ಯ ಮಹಾಬಲಾಃ ॥೩॥

ಘೋರರಾದ ಮತ್ತು ಅದ್ಭುತವಿಕ್ರಮವುಳ್ಳ ಸ್ಕಂದನ ಪಾರ್ಷದರನ್ನು ಹೇಳುತ್ತೇನೆ, ಕೇಳು. ಸ್ಕಂದನಿಗೆ ಇಂದ್ರನು ವಜ್ರಪ್ರಹಾರವನ್ನು ಮಾಡಿದಾಗ ಸ್ಕಂದನ ಶರೀರದಿಂದ ಅನೇಕ ಕುಮಾರರು ಜನಿಸಿದರು. ಮಹಾಬಲವುಳ್ಳ ಅನೇಕ ಕನ್ಯೆಯರೂ ಜನಿಸಿದರು. ಆ ಕುಮಾರರು ದಾರುಣರಾಗಿದ್ದು ಗರ್ಭಸ್ಥರಾದ ಮತ್ತು ನವಜಾತರಾದ ಶಿಶುಗಳನ್ನು ಅಪಹರಿಸುತ್ತಾರೆ.

ವೃತಃ ಕನ್ಯಾಗಣೈಃ ಸರ್ವೈರಾತ್ಮೀಯೈರ್ಭೃಃ ಸಹ ಪುತ್ರಕೈಃ ।
ಮಾತೃಣಾಂ ಪ್ರೇಕ್ಷತಾಂ ಭದ್ರಶಾಖಸ್ತು ಕೋಮಲೈಃ ॥೪॥

ಮಾತೃಗಣಗಳು ನೋಡುತ್ತಿರುವಂತೆಯೇ ಭದ್ರಶಾಖನು ಕೋಮಲವಾದ ಭೃತ್ಯಗಣಗಳಿಂದಲೂ, ಆತ್ಮೀಯರಾದ ಕನ್ಯಾಗಣಗಳಿಂದಲೂ ಮತ್ತು ಪುತ್ರಗಣಗಳಿಂದಲೂ ಪರಿವೃತನಾಗಿ ಶೋಭಿಸಿದನು (ಭದ್ರಶಾಖ ಎನ್ನುವುದು ಸ್ಕಂದನ ಇನ್ನೊಂದು ರೂಪ. ಇವನಿಗೆ ಶಾಖ ಎಂದೂ ಹೆಸರು).

ಕುಮಾರಸ್ತು ವಿಶಾಖಂ ಚ ಪುತ್ರತ್ವೇ ಸಮಕಲ್ಪಯತ್ ।
ಸ ಭೂತ್ವಾ ಭಗವಾನ್‌ಸಂಬೇ ರಕ್ಷಂಶ್ಚಾಗ್ರಮುಖಸ್ತದಾ ॥೫॥

ಕುಮಾರನಾದರೂ ವಿಶಾಖನನ್ನು ಪುತ್ರನಾಗಿ ಕಲ್ಪಿಸಿಕೊಂಡನು. ಆ ಪೂಜ್ಯನೇ ಭಾಗಮುಖನಾಗಿ ಯುದ್ಧದಲ್ಲಿ ಸ್ಕಂದನನ್ನು ರಕ್ಷಿಸುವವನಾದನು ('**ತತೋಭವ ಚತುಮೂರ್ತಿಃ ಕ್ಷಣೇನ ಭಗವಾನ್ ಪ್ರಭುಃ। ತಸ್ಯ ಶಾಖೋ ವಿಶಾಖಶ್ಚ ನೈಜಮೇಷಶ್ಚ ಪೃಷ್ಠತಃ॥**' ಎಂದು ಗದಾಪರ್ವದಲ್ಲಿ ಹೇಳಿರುವುದರಿಂದ ಸ್ಕಂದನು ಅಗ್ರಗಾಮಿ ಶಾಖ, ವಿಶಾಖ ಮತ್ತು ನೈಜಮೇಷರು ಅವನ ಹಿಂದೆ ಹೋಗುವವರು ಮತ್ತು ಅವನದೇ ಬೇರೆ ರೂಪಗಳು. ಆದ್ದರಿಂದ ಇಲ್ಲಿಯೂ ವಿಶಾಖ ಪದದಿಂದ ಶಾಖ ಮತ್ತು ನೈಜಮೇಷರನ್ನು ಇಟ್ಟುಕೊಳ್ಳಬೇಕು. ಇಲ್ಲಿ ಭಾಗಮುಖನೆಂದರೆ ಹೋತದಂತೆ ಮುಖವುಳ್ಳ ವಿಶಾಖ. ಅವನೂ ಸ್ಕಂದನ ಒಂದು ಅಂಶ. ಅವನು ಯುದ್ಧದಲ್ಲಿ ರಕ್ಷಣೆ ಮಾಡುವವನು - ಲಕ್ಷಾಲಂಕಾರ).

ತತಃ ಕುಮಾರಪಿತರಂ ಸ್ಕಂದಮಾಹುರ್ಜನಾ ಭುವಿ ।
ರುದ್ರಮಗ್ನಿಮುಮಾಂ ಸ್ವಾಹಾಂ ಪ್ರದೇಶೇಷು ಮಹಾಬಲಮ್ ।
ಯಜಂತಿ ಪುತ್ರಕಾಮಾಶ್ಚ ಪುತ್ರಿಣಶ್ಚ ಸದಾ ಜನಾಃ ॥೬॥

ಆದ್ದರಿಂದ ಸ್ಕಂದನನ್ನು ವಿಶಾಖ ಎಂಬ ಕುಮಾರನ ಪಿತೃ ಎಂದು ಭೂಮಿಯಲ್ಲಿ ಜನರು ಹೇಳುತ್ತಾರೆ. ರುದ್ರನನ್ನು, ಅಗ್ನಿಯನ್ನು, ಪಾರ್ವತಿಯನ್ನು ಮತ್ತು ಸ್ವಾಹಾದೇವಿಯನ್ನು ಕುಮಾರನ ಮಾತಾಪಿತೃಗಳೆಂದು ಹೇಳುತ್ತಾರೆ. ಮಕ್ಕಳನ್ನು ಹೊಂದಿದ ಮತ್ತು ಮಕ್ಕಳನ್ನು ಪಡೆಯುವ ಆಸೆಯುಳ್ಳ ಜನರು ಯಾವಾಗಲೂ ಈ ನಾಲ್ವರನ್ನು ಪೂಜೆಮಾಡುತ್ತಾರೆ (ಮೊದಲು ರುದ್ರನ ವೀರ್ಯವನ್ನು ತನ್ನ ಯೋನಿಯಲ್ಲಿ

ಧರಿಸಲು ಸಾಧ್ಯವಾಗದೆ ಗೌರಿಯು ಅದನ್ನು ಅಗ್ನಿಯಲ್ಲಿ ಹಾಕಿದಳು. ಅಗ್ನಿಯೂ ಸಹ ಅದರ ಉಷ್ಣಸ್ಪರ್ಶವನ್ನು ತಾಳಲಾರದೆ ಆ ವೀರ್ಯವನ್ನು ಗಂಗೆಯಲ್ಲಿ ಹಾಕಿದನು. ಗಂಗೆಯೂ ಸಹ ಆ ವೀರ್ಯವನ್ನು ತನ್ನ ತೀರದಲ್ಲಿದ್ದ ಶರವಣದಲ್ಲಿ- ಹುಲ್ಲಿನ ವನದಲ್ಲಿ- ತುಂಬಿದಳು. ಆ ವೀರ್ಯವೇ ಬಹಳವಾಗಿದ್ದುದರಿಂದ ಒಂದು ಪರ್ವತವಾಯಿತು. ಆ ಪರ್ವತದಲ್ಲಿ ಗರುಡೀರೂಪವನ್ನು ಧರಿಸಿದ ಸ್ವಾಹಾದೇವಿಯು ಅಗ್ನಿವೀರ್ಯವನ್ನೂ ತಂದು ಸೇರಿಸಿದಾಗ ಶ್ವೇತಪರ್ವತರೂಪವಾಗಿದ್ದ ಆ ರುದ್ರವೀರ್ಯವೇ ಸ್ಕಂದನಾಗಿ ಜನಿಸಿತು. ಆದ್ದರಿಂದ ರುದ್ರ-ಉಮಾ-ಅಗ್ನಿ-ಸ್ವಾಹಾ ಈ ನಾಲ್ವರು ಕುಮಾರನ ಮಾತಾಪಿತೃಗಳಾಗುತ್ತಾರೆ - ಲಕ್ಷಾಲಂಕಾರ).

ಯಾಸ್ತಾಸ್ತ ಜನಯತ್ ಕನ್ಯಾಸ್ತಪೋ ನಾಮ ಹುತಾಶನಃ ।
ಕಿಂ ಕರೋಮೀತಿ ತಾಃ ಸ್ಕಂದಂ ಸಂಪ್ರಾಪ್ತಾಃ ಸಮಭಾಷಯನ್ ॥೭॥

ಭವೇಮ ಸರ್ವಲೋಕಸ್ಯ ಮಾತರೋ ವಯಮುತ್ತಮಾಃ ।
ಪ್ರಸಾದಾತ್ ತವ ಪೂಜ್ಯಾಶ್ಚ ಪ್ರಿಯಮೇತತ್ ಕುರುಷ್ವ ನಃ ।
ಸೋಽಬ್ರವೀದ್ ಬಾಢಮಿತ್ಯೇವಂ ಭವಿಷ್ಯಧ್ವಂ ಪೃಥಗ್ವಿಧಾಃ ॥೮॥

ಅಶಿವಾಶ್ಚ ಶಿವಾಶ್ಚೈವ ಪುನಃ ಪುನರುದಾರಧೀಃ ॥೯॥

ವಜ್ರಪ್ರಹಾರವನ್ನು ಮಾಡಿದಾಗ ತಪೋನಾಮಕ ಅಗ್ನಿಯು ಸ್ಕಂದನ ಶರೀರದಿಂದ ಕನ್ಯೆಯರನ್ನು ಸೃಷ್ಟಿಸಿದನು. ಅವರು ಸ್ಕಂದನ ಬಳಿಗೆ ಬಂದು ನಾವು ಏನು ಮಾಡಬೇಕು? ನಾವು ನಿನ್ನ ಅನುಗ್ರಹದಿಂದ ಎಲ್ಲ ಲೋಕಕ್ಕೆ ಉತ್ತಮ ಮಾತೆಯರೂ, ಪೂಜ್ಯರೂ ಆಗಲು ಬಯಸುತ್ತೇವೆ.ನಮಗೆ ಪ್ರಿಯವಾದ ಈ ಉಪಕಾರವನ್ನು ಮಾಡು ಎಂದು ಕೇಳಿದರು. ಉದಾರಬುದ್ಧಿಯುಳ್ಳ ಸ್ಕಂದನು ಹಾಗೆಯೇ ಆಗಲಿ, ನೀವು ಮಂಗಳರಾದ ಮತ್ತು ಅಮಂಗಳರಾದ ಅನೇಕ ವಿಧರಾದ ತಾಯಿಯರಾಗಿರಿ ಎಂದು ಮತ್ತೆ ಮತ್ತೆ ಹೇಳಿದನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಸಪ್ತದಶಾಧಿಕದ್ವಿಶತಶತತಮೋಽಧ್ಯಾಯಃ ॥
॥ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಸ್ಕಾಂದೋಪಾಖ್ಯಾನೇ ಪಂಚಮೋಽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹದಿನೇಳನೆಯ ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಹದಿನೆಂಟನೆಯ ಅಧ್ಯಾಯ

ಮಾರ್ಕಂಡೇಯರಿಂದ ಮುಂದುವರಿದ ಸ್ಕಂದ ಚರಿತ್ರೆಯ ಕಥನ. ಸ್ಕಂದನಿಗೆ ಸೇನಾಪತ್ಯದಲ್ಲಿ ಅಭಿಷೇಕ ಮತ್ತು ದೇವಸೇನೆಯ ಜೊತೆಯಲ್ಲಿ ವಿವಾಹ.

ಮಾರ್ಕಂಡೇಯಃ

ಲಬ್ಧಪ್ರಸಾದಾ ಮುದಿತಾಸ್ತಸ್ಮಾದ್ ದೇವಾನ್ಮಹಾತ್ಮನಃ ।
ತತಃ ಸಂಕಲ್ಪ್ಯ ಪುತ್ರತ್ವೇ ಸ್ಕಂದಂ ಮಾತೃಗಣೋऽಗಮತ್ ।
ಕಾಕೀ ಚ ಹಲಿಮಾ ಚೈವ ಭದ್ರಾ ಚ ವೃಷಭಾ ತಥಾ ।
ಆರ್ಯಾ ಬಾಲಾ ಚ ಧಾತ್ರೀ ಚ ಸಪ್ತೈತಾಃ ಶಿಶುಮಾತರಃ ॥೧॥

ಮಾರ್ಕಂಡೇಯ– ಆ ಮಾತೆಯರೆಲ್ಲರೂ ಮಹಾತ್ಮನಾದ ಆ ದೇವನ ಅನುಗ್ರಹವನ್ನು ಪಡೆದು ಸಂತುಷ್ಟರಾದರು. ಅನಂತರ ಸ್ಕಂದನನ್ನು ಪುತ್ರನೆಂದು ಸಂಕಲ್ಪಿಸಿ ಕಾಕೀ, ಹಲಿಮಾ, ಭದ್ರಾ, ವೃಷಭಾ, ಆರ್ಯಾ, ಬಾಲಾ, ಧಾತ್ರೀ ಈ ಏಳು ಜನರಿದ್ದ ಮಾತೃಗಣವು ಹೊರಟುಹೋಯಿತು. ಈ ಏಳುಜನರು ಸ್ಕಂದನ ಪ್ರಸಾದದಿಂದ ಹುಟ್ಟಿದ ಶಿಶು ಎಂಬ ಪುತ್ರನ ಮಾತೆಯರು.

ಏತಾಸಾಂ ವೀರ್ಯಸಂಪನ್ನಃ ಶಿಶುರ್ನಾಮಾತಿದಾರುಣಃ ।
ಸ್ಕಂದಪ್ರಸಾದಜಃ ಪುತ್ರೋ ಲೋಹಿತಾಕ್ಷೋ ಭಯಂಕರಃ ॥೨॥

ಶಿಶುವು ಸ್ಕಂದನ ಅನುಗ್ರಹದಿಂದ ಈ ಮಾತೆಯರ ವೀರ್ಯದಿಂದ ಹುಟ್ಟಿದ ಪುತ್ರ. ಅವನು ಲೋಹಿತಾಕ್ಷ, ಅತಿದಾರುಣ ಮತ್ತು ಭಯಂಕರ.

ಏಷ ವೀರೋऽಷ್ಟಕಃ ಪ್ರೋಕ್ತಃ ಸ್ಕಂದೋ ಮಾತೃಗಣೋದ್ವಹಃ ।
ಛಾಗವಕ್ತ್ರೇಣ ಸಹಿತೋ ನವಮಃ ಪರಿಕೀರ್ತಿತಃ ॥೩॥

ಈ ವೀರನು (ಶಿಶುನಾಮಕನು) ಮಾತೃಗಣದ ಜೊತೆಯಲ್ಲಿಸೇರಿ ಎಂಟನೆಯ ಸ್ಕಂದನೆನಿಸುತ್ತಾನೆ. ಈ ಶಿಶುವು ಸ್ಕಂದನ ಸಪ್ತಮಾತೆಯರನ್ನು ವಿವಾಹ ಮಾಡಿಕೊಳ್ಳುವವನು. ಛಾಗವಕ್ತ್ರನಾದ ವಿಶಾಖನ ಜೊತೆಯಲ್ಲಿ ಸೇರಿದರೆ ಇವನು ಒಂಭತ್ತನೆಯವನಾಗುತ್ತಾನೆ.

ಷಷ್ಠಂ ಛಾಗಮಯಂ ವಕ್ತ್ರಂ ಸ್ಕಂದಸ್ಯೈವೇತಿ ವಿದ್ಧಿ ತತ್ ॥೪॥

ಆರನೆಯವನು ಛಾಗವಕ್ತ್ರನಾದ ವಿಶಾಖನೆಂಬುವನು. ಅವನನ್ನು ಸ್ಕಂದನ ರೂಪಾಂತರವೆಂದೇ ತಿಳಿ.

ಷಡ್ಭಿರಭ್ಯಂತರೇ ರಾಜನ್ ನಿತ್ಯಂ ಮಾತೃಗಣಾರ್ಚಿತಮ್ ।
ಷಣ್ಣಾಂ ತು ಪ್ರವರಂ ತಸ್ಯ ಶೀರ್ಷಾಣಾಮಿಹ ಶಸ್ಯತೇ ॥೫॥

ಎಲೈ ರಾಜನೇ, ಅವನು ಏಕಾಂತದಲ್ಲಿ ಆರುಮಾತೃಗಣಗಳಿಂದ ಅರ್ಚಿಸಲ್ಪಡುವವನು. ಛಾಗಮುಖವು ಅವನ ಆರುಮುಖಗಳಲ್ಲಿ ಶ್ರೇಷ್ಠವಾದುದೆಂದು ಪ್ರಶಂಸಿಸಲ್ಪಡುತ್ತದೆ.

ಶಕ್ತಿಂ ಯೇನಾಸೃಜದ್ ದಿವ್ಯಾಂ ಭದ್ರಶಾಖಾಮಿತಿ ಸ್ಮ ಹ ।
ಇತ್ಯೇತದ್ ವಿವಿಧಾಕಾರಂ ವೃತ್ತಂ ಶುಕ್ಲಸ್ಯ ಪಂಚಮೀಮ್ ॥೬॥

ಅವನು ತನ್ನ ಆ ಮುಖದಿಂದ ಭದ್ರಶಾಖಾ ಎಂದು ಕರೆಯುವ ಶಕ್ತ್ಯಾಯುಧವನ್ನು ನಿರ್ಮಾಣ ಮಾಡಿದನು. ಇಂತಹ ವಿವಿಧವಾದ ಘಟನೆಗಳೆಲ್ಲವೂ ಶುಕ್ಲಪಕ್ಷದ ಪಂಚಮಿಯಂದು ಜರುಗಿದವು.

ತತ್ರ ಯುದ್ಧಂ ಮಹಾಘೋರಂ ವೃತ್ತಂ ಷಷ್ಠ್ಯಾಂ ಜನಾಧಿಪ ।
ಉಪವಿಷ್ಟಂ ತು ತಂ ಸ್ಕಂದಂ ಹಿರಣ್ಯಕವಚಸ್ರಜಮ್ ॥೭॥

ಹಿರಣ್ಯಚೂಡಮಕುಟಂ ಹಿರಣ್ಯಾಕ್ಷಂ ಮಹಾಪ್ರಭಮ್ ।
ಲೋಹಿತಾಂಬರಸಂವೀತಂ ತೀಕ್ಷ್ಣದಂಷ್ಟ್ರಂ ಮನೋರಮಮ್ ॥೮॥

ಸರ್ವಲಕ್ಷಣಸಂಪನ್ನಂ ತ್ರೈಲೋಕ್ಯಸ್ಯಾಪಿ ಸುಪ್ರಿಯಮ್ ।
ತತಸ್ತಂ ವರದಂ ಶೂರಂ ಯುವಾನಂ ಮೃಷ್ಟಕುಂಡಲಮ್ ॥೯॥

ಅಭಜತ್ ಪದ್ಮಹಸ್ತಾ ಶ್ರೀಃ ಸ್ವಯಮೇವ ಶರೀರಿಣೇ ।

ಎಲೈ ರಾಜನೇ, ಷಷ್ಠಿಯ ದಿನದಂದು ಘೋರವಾದ ಯುದ್ಧವು ಜರುಗಿತು. ಹಿರಣ್ಯಕವಚವನ್ನೂ, ಹಿರಣ್ಯಮಾಲೆಯನ್ನೂ ಧರಿಸಿ, ಹಿರಣ್ಯಕಿರೀಟವನ್ನೂ ಧರಿಸಿ

ರಕ್ತಾಂಬರಧಾರಿಯಾಗಿ ತೀಕ್ಷ್ಣದಂಷ್ಟ್ರನೂ, ಮನೋಹರನೂ, ಹಿರಣ್ಯಾಕ್ಷನೂ, ಮಹಾಪ್ರಭೆಯುಳ್ಳವನೂ, ಮೂರುಲೋಕಕ್ಕೂ ಪ್ರಿಯನಾದವನೂ ಆಗಿ ಕುಳಿತಿದ್ದ ಆ ಸ್ಕಂದನನ್ನು ಪದ್ಮಹಸ್ತಳಾದ ಶ್ರೀದೇವಿಯು ತಾನಾಗಿಯೇ ಶರೀರವನ್ನು ಧರಿಸಿ ಬಂದು ಅವನನ್ನು ಭಜಿಸಿದಳು (ಅವನಲ್ಲಿ ಸನ್ನಿಹಿತಳಾದಳು).

ಶ್ರಿಯಾ ಜುಷ್ಟಃ ಪೃಥುಯಶಾಃ ಸ ಕುಮಾರವರಸ್ತದಾ ।
ನಿಷಣ್ಣೋ ದೃಶ್ಯತೇ ಭೂತೈಃ ಪೌರ್ಣಮಾಸ್ಯಾಂ ಯಥಾ ಶಶೀ ॥೧೦॥

ಲಕ್ಷ್ಮಿಯಿಂದ ಸೇವಿತನಾದ ಪೃಥುಕೀರ್ತಿಶಾಲಿಯಾದ ಆ ಕುಮಾರಶ್ರೇಷ್ಠನು ಕುಳಿತುಕೊಂಡಿರಲು ಪೌರ್ಣಮಾಸೀ ದಿನದಂದು ಭೂತಗಳಿಂದ ಸುತ್ತುವರಿಯಲ್ಪಟ್ಟ ಚಂದ್ರನಂತೆ ಕಾಣುತ್ತಿದ್ದನು.

ಅಪೂಜಯನ್ ಮಹಾತ್ಮಾನೋ ಬ್ರಾಹ್ಮಣಾಸ್ತಂ ಮಹಾಬಲಮ್ ।
ಇದಮಾಹುಸ್ತದಾ ಚೈವ ಸ್ಕಂದಂ ತತ್ರ ಮಹರ್ಷಯಃ ॥೧೧॥

ಮಹಾತ್ಮರಾದ ಬ್ರಾಹ್ಮಣರು ಮಹಾಬಲನಾದ ಅವನನ್ನು ಪೂಜಿಸಿದರು. ಆಗ ಮಹರ್ಷಿಗಳು ಸ್ಕಂದನನ್ನು ಕುರಿತು ಈ ಮಾತುಗಳನ್ನು ಹೇಳಿದರು.

ಹಿರಣ್ಯಗರ್ಭ ಭದ್ರಂ ತೇ ಲೋಕಾನಾಂ ಶಂಕರೋ ಭವ ।
ತ್ವಯಾ ಷಡ್ರಾತ್ರಜಾತೇನ ಸರ್ವೇ ಲೋಕಾ ವಶೀಕೃತಾಃ ॥೧೨॥

ಎಲೈ ಹಿರಣ್ಯಗರ್ಭನೇ, ನಿನಗೆ ಮಂಗಳವಾಗಲಿ. ಲೋಕಗಳಿಗೆ ಸುಖವನ್ನು ಉಂಟುಮಾಡುವವನಾಗು. ಆರು ದಿನಗಳ ಹಿಂದೆ ಹುಟ್ಟಿದ ನೀನು ಎಲ್ಲ ಲೋಕಗಳನ್ನೂ ವಶಪಡಿಸಿಕೊಂಡಿದ್ದೀಯೆ.

ಅಭಯಂ ಚ ಪರಂ ದತ್ತಂ ತ್ವಯೈವೈಷಾಂ ಸುರೋತ್ತಮ ।
ತಸ್ಮಾದಿಂದ್ರೋ ಭವಾನಸ್ತು ತ್ರೈಲೋಕ್ಯಸ್ಯ ಹಿತಾಯ ವೈ ॥೧೩॥

ಎಲೈ ಸುರೋತ್ತಮನೇ, ನೀನು ಇವರಿಗೆಲ್ಲಾ ಅಭಯವನ್ನು ಕೊಟ್ಟಿದ್ದೀಯೆ. ಆದ್ದರಿಂದ ಮೂರು ಲೋಕಗಳ ಹಿತಕ್ಕಾಗಿ ನೀನೇ ಇಂದ್ರನಾಗು.

ಸ್ಕಂದಃ

ಕಿಮಿಂದ್ರಃ ಸರ್ವಲೋಕಾನಾಂ ಕರೋತೀಹ ತಪೋಧನಾಃ ।
ಕಥಂ ದೇವಗಣಾಂಶ್ಚೈವ ಪಾತಿ ನಿತ್ಯಂ ಸುರೇಶ್ವರಃ ॥೧೪॥

ಸ್ಕಂದ– ಎಲೈ ತಪೋಧನರೇ, ಇಂದ್ರನು ಎಲ್ಲ ಲೋಕಗಳಿಗೂ ಏನು ಮಾಡುತ್ತಾನೆ? ಸುರೇಶ್ವನು ದೇವಗಣಗಳನ್ನು ನಿತ್ಯವೂ ಹೇಗೆ ಪಾಲಿಸುತ್ತಾನೆ?

ಋಷಯಃ

ಇಂದ್ರೋ ದಿಶತಿ ಭೂತಾನಾಂ ಬಲಂ ತೇಜಃ ಪ್ರಜಾಃ ಸುಖಮ್ ।
ತುಷ್ಟಃ ಪ್ರಯಚ್ಛತಿ ತಥಾ ಸರ್ವಾನ್ ಕಾಮಾನ್ ಸುರೇಶ್ವರಃ ॥೧೫॥

ಇಂದ್ರನು ಎಲ್ಲ ಪ್ರಾಣಿಗಳಿಗೆ ಬಲವನ್ನೂ, ತೇಜಸ್ಸನ್ನೂ, ಪ್ರಜೆಗಳನ್ನೂ ಮತ್ತು ಸುಖವನ್ನೂ ಕೊಡುತ್ತಾನೆ. ಸಂತುಷ್ಟನಾದರೆ ಆ ಸುರೇಶ್ವರನು ಎಲ್ಲ ಕಾಮಗಳನ್ನೂ ಕೊಡುತ್ತಾನೆ.

ದುರ್ವೃತ್ತಾನಾಂ ಸಂಹರತಿ ಸುವೃತ್ತಾನಾಂ ಪ್ರಯಚ್ಛತಿ ।
ಅನುಶಾಸ್ತಿ ಚ ಭೂತಾನಿ ಕಾರ್ಯೇಷು ಬಲಸೂದನಃ ॥೧೬॥

ಕೆಟ್ಟ ನಡತೆಯುಳ್ಳವರನ್ನು ಸಂಹಾರ ಮಾಡುತ್ತಾನೆ. ಒಳ್ಳೆಯ ನಡತೆಯುಳ್ಳವರಿಗೆ ಎಲ್ಲವನ್ನೂ ಕೊಡುತ್ತಾನೆ. ಬಲಸೂದನನಾದ ಅವನು ಆಯಾ ಜೀವರು ಮಾಡಬೇಕಾದ ಕಾರ್ಯಗಳಲ್ಲಿ ಅನುಶಾಸನವನ್ನು ಮಾಡುತ್ತಾನೆ.

ಅಸೂರ್ಯೇ ಚ ಭವೇತ್ ಸೂರ್ಯಸ್ತಥಾऽಚಂದ್ರೇ ಚ ಚಂದ್ರಮಾಃ ।
ಭವತ್ಯಗ್ನಿಶ್ಚ ವಾಯುಶ್ಚ ಪೃಥಿವ್ಯಾಪಶ್ಚ ಕಾರಣೈಃ ॥೧೭॥

ಸೂರ್ಯನಿಲ್ಲದಿದ್ದಾಗ ತಾನೇ ಸೂರ್ಯನಾಗುತ್ತಾನೆ. ಚಂದ್ರನಿಲ್ಲದಿದ್ದಾಗ ಚಂದ್ರನಾಗುತ್ತಾನೆ. ಹೀಗೆ ನಿಮಿತ್ತವು ಒದಗಿದಾಗ ಅಗ್ನಿಯು, ವಾಯುವೂ, ಪೃಥಿವಿಯೂ ಮತ್ತು ಜಲವೂ ಆಗುತ್ತಾನೆ.

ಏತದಿಂದ್ರೇಣ ಕರ್ತವ್ಯಮಿಂದ್ರೇ ಹಿ ವಿಪುಲಂ ಬಲಮ್ ।
ತ್ವಂ ಚ ವೀರ ಬಲೀ ಶ್ರೇಷ್ಠಸ್ತಸ್ಮಾದಿಂದ್ರೋ ಭವಸ್ವ ನಃ ॥೧೮॥

ಇದು ಇಂದ್ರನ ಕಾರ್ಯ. ಇಂದ್ರನಲ್ಲಿ ವಿಪುಲವಾದ ಬಲವಿದೆ. ಎಲೈ ವೀರನೇ, ನೀನು ಸಹ ಬಲಶಾಲಿಯೂ, ಶ್ರೇಷ್ಠನೂ ಆಗಿದ್ದೀಯೆ. ಆದ್ದರಿಂದ ನಮಗೆ ನೀನೇ ಇಂದ್ರನಾಗು.

ಶಕ್ರಃ

ಭವಸ್ವೇಂದ್ರೋ ಮಹಾಬಾಹೋ ಸರ್ವೇಷಾಂ ನಃ ಸುಖಾವಹಃ ।
ಅಭಿಷಿಚ್ಯಸ್ವ ಚೈವಾದ್ಯ ಪ್ರಾಪ್ತರೂಪೋಽಸಿ ಸತ್ತಮ ॥೧೯॥

ಶಕ್ರ– ಎಲೈ ಮಹಾಬಾಹುವೇ, ನೀನೇ ಇಂದ್ರನಾಗು. ನಮ್ಮೆಲ್ಲರಿಗೂ ಸುಖವನ್ನು ಉಂಟುಮಾಡುವವನಾಗು. ಈ ದಿನವೇ ಅಭಿಷಿಕ್ತನಾಗು. ಎಲೈ ಸಜ್ಜನರಲ್ಲಿ ಶ್ರೇಷ್ಠನೇ, ನೀನು ಆ ಸ್ಥಾನಕ್ಕೆ ಬೇಕಾದ ಎಲ್ಲ ಗುಣಗಳನ್ನು ಹೊಂದಿದ್ದೀಯೆ.

ಕಾರ್ತಿಕೇಯಃ

ಶಾಧಿ ತ್ವಮೇವ ತ್ರೈಲೋಕ್ಯಮವ್ಯಗ್ರೋ ವಿಜಯೇ ರತಃ ।
ಅಹಂ ತೇ ಕಿಂಕರಃ ಶಕ್ರ ನ ಮಮೇಂದ್ರತ್ವಮೀಪ್ಸಿತಮ್ ॥೨೦॥

ಕಾರ್ತಿಕೇಯ– ಇಂದ್ರನೇ, ನೀನೇ ಎಚ್ಚರಿಕೆಯಿಂದ ವಿಜಯದಲ್ಲಿಯೇ ರತನಾಗಿ ಮೂರುಲೋಕಗಳನ್ನು ಆಳು. ನಾನು ನಿನ್ನ ಕಿಂಕರನಾಗಿರುತ್ತೇನೆ. ನನಗೆ ಇಂದ್ರ ಪದವಿಯ ಅಪೇಕ್ಷೆಯಿಲ್ಲ.

ಶಕ್ರಃ

ಬಲಂ ತವಾದ್ಭುತಂ ವೀರ ತ್ವಂ ದೇವಾನಾಮರೀನ್ ಜಹಿ ।
ಅವಜ್ಞಾಸ್ಯಂತಿ ಮಾಂ ಲೋಕಾ ವೀರ್ಯೇಣ ತವ ವಿಸ್ಮಿತಾಃ ॥೨೧॥

ಶಕ್ರ– ಎಲೈ ವೀರನೇ, ನಿನಗೆ ಅದ್ಭುತವಾದ ಬಲವಿದೆ. ನೀನು ದೇವಶತ್ರುಗಳನ್ನು ಸಂಹರಿಸು. ನಿನ್ನ ಪರಾಕ್ರಮವನ್ನು ನೋಡಿ ವಿಸ್ಮಿತನಾದ ಜನರು ನನಗೆ ಅವಮಾನವನ್ನು ಮಾಡುವರು.

ಇಂದ್ರತ್ವೇಽಪಿ ಸ್ಥಿತಂ ವೀರ ಬಲಹೀನಂ ಪರಾಜಿತಮ್ ।
ತತ್ತೇಜಸಾಽವಮಂಸ್ಯಂತಿ ಲೋಕಾ ಮಾಂ ಸುರಸತ್ತಮ ॥೨೨॥

ಎಲೈ ವೀರನೇ, ಸುರಶ್ರೇಷ್ಠನೇ, ನಾನು ನಿನ್ನ ಪರಾಕ್ರಮದಿಂದ ಪರಾಜಿತನಾಗಿ ದುರ್ಬಲನಾಗಿ ಇಂದ್ರನ ಪದವಿಯಲ್ಲಿ ಕುಳಿತುಕೊಂಡರೆ ಜನರು ನನಗೆ ಅವಮಾನವನ್ನು ಮಾಡುವರು.

ಆವಯೋಶ್ಚ ಮಿಥೋ ಭೇದೇ ಪ್ರಯತಿಷ್ಯಂತ್ಯತಂದ್ರಿತಾಃ ।
ಭೇದಿತೇ ಚ ತ್ವಯಿ ವಿಭೋ ಲೋಕೋ ದ್ವೈಧಮುಪೇಷ್ಯತಿ ॥೨೩॥

ನಮ್ಮಿಬ್ಬರಲ್ಲಿ ವಿರೋಧವನ್ನುಂಟು ಮಾಡುವುದಕ್ಕೆ ಜಾಗರೂಕತೆಯಿಂದ ಪ್ರಯತ್ನ ಪಡುವರು. ವಿಭುವೇ, ನೀನು ವಿರುದ್ಧನಾದರೆ ಲೋಕವು ನಾಶವನ್ನು ಹೊಂದುವುದು (ಲೋಕದಲ್ಲಿಯೂ ವಿರೋಧವುಂಟಾಗುವುದು).

ದ್ವೈಧೀಭೂತೇಷು ಲೋಕೇಷು ನಿಶ್ಚಿತೇಷ್ವಾವಯೋಸ್ತದಾ ।
ವಿಗ್ರಹಃ ಸಂಪ್ರವರ್ತೇತ ಭೂತಭೇದಾನ್ಮಹಾಬಲ ॥೨೪॥

ಎಲೈ ಮಹಾಬಲನೇ, ಲೋಕದಲ್ಲಿ ವಿರೋಧವುಂಟಾಗುವುದು ನಿಶ್ಚಿತವಾದರೆ ಆಗ ನಮ್ಮಿಬ್ಬರಿಗೆ ಯುದ್ಧವು ನಡೆಯುತ್ತದೆ.

ತತ್ರ ತ್ವಂ ಮಾಂ ರಣೇ ತಾತ ಯಥಾಶ್ರದ್ಧಂ ವಿಜೇಷ್ಯಸಿ ।
ತಸ್ಮಾದಿಂದ್ರೋ ಭವಾನೇವ ಭವಿತಾ ಮಾ ವಿಚಾರಯ ॥೨೫॥

ಎಲೈ ಪ್ರೀತಿಪಾತ್ರನೇ, ಆಗ ನೀನು ಯುದ್ಧದಲ್ಲಿ ನನ್ನನ್ನು ಅನಾಯಾಸದಿಂದ ಗೆಲ್ಲುವಿ. ಆದ್ದರಿಂದ ನೀನೇ ಇಂದ್ರನಾಗಬೇಕಾದವನು. ಈ ವಿಷಯದಲ್ಲಿ ಸಂಶಯಪಡಬೇಡ.

ಕಾರ್ತಿಕೇಯಃ

ತ್ವಮೇವ ರಾಜಾ ಭದ್ರಂ ತೇ ತ್ರೈಲೋಕ್ಯಸ್ಯ ಮಮೈವ ಚ ।
ಕರೋಮಿ ಕಿಂ ಚ ತೇ ಶಕ್ರ ಶಾಸನಂ ಬ್ರೂಹಿ ತನ್ಮಮ ॥೨೬॥

ಕಾರ್ತಿಕೇಯ– ಎಲೈ ಶಕ್ರನೇ, ನಿನಗೆ ಮಂಗಳವಾಗಲಿ. ಮೂರುಲೋಕಗಳಿಗೂ ಮತ್ತು ನನಗೂ ನೀನೇ ಒಡೆಯನಾದವನು. ನಾನು ನಿನ್ನ ಯಾವ ಶಾಸನವನ್ನು ಅನುಸರಿಸಲಿ? ಅದನ್ನು ನನಗೆ ಹೇಳು.

ಇಂದ್ರಃ

ಅಹಮಿಂದ್ರೋ ಭವಿಷ್ಯಾಮಿ ತವ ವಾಕ್ಯಾನ್ಮಹಾಬಲ ।
ಯದಿ ಸತ್ಯಮಿದಂ ವಾಕ್ಯಂ ನಿಶ್ಚಯಾದ್ ಭಾಷಿತಂ ತ್ವಯಾ ॥೨೭॥

ಅಭಿಷಿಚ್ಯಸ್ವ ದೇವಾನಾಂ ಸೇ(ಸೈ) ನಾಪತ್ಯೇ ಮಹಾಬಲ ।
ಅಹಮಿಂದ್ರೋ ಭವಿಷ್ಯಾಮಿ ತವ ವಾಕ್ಯಾನ್ಮಹಾಬಲ ॥೨೮॥

ಇಂದ್ರ– ಮಹಾಬಲನೇ, ನೀನು ಈ ಮಾತನ್ನು ಸತ್ಯವಾಗಿ ಆಡಿದ್ದೇ ಆದರೆ ನಿನ್ನ ಮಾತಿನಂತೆ ನಾನು ಇಂದ್ರನಾಗುವೆನು. ಮಹಾಬಲನೇ, ನೀನು ದೇವತೆಗಳ ಸೇನಾಧಿಪತ್ಯದಲ್ಲಿ ಅಭಿಷಿಕ್ತನಾಗು. ಮಹಾಬಲನೇ, ನಿನ್ನ ಮಾತಿನಂತೆ ನಾನು ಇಂದ್ರನಾಗುವೆನು.

ಸ್ಕಂದಃ

ದಾನವಾನಾಂ ವಿನಾಶಾಯ ದೇವಾನಾಮರ್ಥಸಿದ್ಧಯೇ ।
ಗೋಬ್ರಾಹ್ಮಣಹಿತಾರ್ಥಾಯ ಸೇ(ಸೈ) ನಾಪತ್ಯೇऽಭಿಷಿಂಚ ಮಾಮ್ ॥

ಸ್ಕಂದ– ದಾನವರನ್ನು ಸಂಹರಿಸುವುದಕ್ಕೋಸ್ಕರ ದೇವತೆಗಳ ಕಾರ್ಯವನ್ನು ಸಾಧಿಸುವುದಕ್ಕೋಸ್ಕರ ಮತ್ತು ಗೋಬ್ರಾಹ್ಮಣರಿಗೆ ಹಿತವನ್ನು ಮಾಡುವುದಕ್ಕೋಸ್ಕರ ನನ್ನನ್ನು ಸೇನಾಪತಿಯಾಗಿ ಅಭಿಷೇಕ ಮಾಡು.

ಮಾರ್ಕಂಡೇಯಃ

ಸೋऽಭಿಷಿಕ್ತೋ ಮಘವತಾ ಸರ್ವೈರ್ದೇವಗಣೈಃ ಸಹ ।
ಅತೀವ ಶುಶುಭೇ ತತ್ರ ಪೂಜ್ಯಮಾನೋ ಮಹರ್ಷಿಭಿಃ ॥೩೦॥

ಮಾರ್ಕಂಡೇಯ– ಅವನು ದೇವಗಣಗಳಿಂದ ಕೂಡಿದ ಇಂದ್ರನಿಂದ ಅಭಿಷಿಕ್ತನಾಗಿ, ಮಹರ್ಷಿಗಳಿಂದ ಪೂಜಿತನಾಗಿ ಅಲ್ಲಿ ಬಹಳವಾಗಿ ಶೋಭಿಸಿದನು.

ತಸ್ಯ ತತ್ಕಾಂಚನಂ ಛತ್ರಂ ಧ್ರಿಯಮಾಣಂ ವ್ಯರೋಚತ ।
ಯಥೈವ ಸುಸಮಿದ್ಧಸ್ಯ ಪಾವಕಸ್ಯಾತ್ಮಮಂಡಲಮ್ ॥೩೧॥

ಆಗ ಅವನಿಗೆ ಹಿಡಿದ ಸುವರ್ಣಮಯವಾದ ಛತ್ರವು ತನ್ನ ಮಂಡಲದಿಂದ ಕೂಡಿದ ಸುಸಮಿದ್ಧನಾದ ಅಗ್ನಿಯಂತೆ ಕಂಗೊಳಿಸಿತು.

ವಿಶ್ವಕರ್ಮಕೃತಾ ಚಾಸ್ಯ ದಿವ್ಯಾ ಮಾಲಾ ಹಿರಣ್ಮಯೀ ।
ಆಬದ್ಧಾ ತ್ರಿಪುರಘ್ನೇನ ಸ್ವಯಮೇವ ಯಶಸ್ವಿನಾ ॥೩೨॥

ವಿಶ್ವಕರ್ಮನು ಮಾಡಿದ ದಿವ್ಯವಾದ, ಸುವರ್ಣಮಯವಾದ ಮಾಲೆಯನ್ನು ತ್ರಿಪುರಾರಿಯಾದ ಕೀರ್ತಿವಂತನಾದ ಶಂಕರನೇ ಸ್ವತಃ ಅವನ ಕೊರಳಿಗೆ ಹಾಕಿದನು.

ಆಗಮ್ಯ ಮನುಜವ್ಯಾಘ್ರ ಸಹ ದೇವ್ಯಾ ಪರಂತಪಃ ।
ಅರ್ಚಯಾಮಾಸ ಸುಪ್ರೀತೋ ಭಗವಾನ್ ಗೋವೃಷಧ್ವಜಃ ॥೩೩॥

ಎಲೈ ಮನುಜವ್ಯಾಘ್ರನೇ, ಪರಂತಪನೂ, ವೃಷಧ್ವಜನೂ ಆದ ಭಗವಂತನಾದ ಅವನು ಪಾರ್ವತೀದೇವಿಯ ಜೊತೆಯಲ್ಲಿ ಬಂದು ಬಹಳ ಪ್ರಸನ್ನನಾಗಿ ಪೂಜಿಸಿದನು.

ರುದ್ರಮಗ್ನಿಂ ಪ್ರಜಾಃ ಪ್ರಾಹೂ ರುದ್ರಸೂನುಸ್ತತಸ್ತು ಸಃ ।
ಕೀರ್ತ್ಯತೇ ಸುಮಹಾತೇಜಾಃ ಕುಮಾರೋಽದ್ಭುತದರ್ಶನಃ ॥೩೪॥

ರುದ್ರನನ್ನು ಕಾಲಾಗ್ನಿರುದ್ರ ಎಂದು ಪ್ರಜೆಗಳು ಹೇಳುತ್ತಾರೆ. ಆದ್ದರಿಂದ ಅವನು ರುದ್ರಪುತ್ರನಾದರೂ ಅಗ್ನಿಪುತ್ರನಾಗುತ್ತಾನೆ. ಆದ್ದರಿಂದ ಅದ್ಭುತದರ್ಶನನಾದ ಮಹಾತೇಜಸ್ವಿಯಾದ ಅವನು ಅಗ್ನಿಪುತ್ರನೆಂದು ಹೇಳಲ್ಪಡುತ್ತಾನೆ.

ರುದ್ರೇಣ ಶುಕ್ರಮುತ್ಸೃಷ್ಟಂ ತಚ್ಛ್ವೇತಃ ಪರ್ವತೋಽಭವತ್ ।
ಪಾವಕಸ್ಯೇಂದ್ರಿಯಂ ಶ್ವೇತೇ ಕೃತ್ತಿಕಾಭಿಃ ಧೃತಂ ನಗೇ ॥೩೫॥

ರುದ್ರನು ವಿಸರ್ಜನೆ ಮಾಡಿದ್ದ ವೀರ್ಯವು ಶ್ವೇತಪರ್ವತವಾಯಿತು. ಆ ಶ್ವೇತಪರ್ವತದಲ್ಲಿ ಕೃತ್ತಿಕೆಯರು ಅಗ್ನಿಯ ವೀರ್ಯವನ್ನು ಧರಿಸಿದರು (ರಕ್ಷಿಸಿ ಪೋಷಿಸಿದರು).

ಪೂಜ್ಯಮಾನಂ ತು ರುದ್ರೇಣ ದೃಷ್ಟ್ವಾ ಸರ್ವೇ ದಿವೌಕಸಃ ।
ರುದ್ರಸೂನುಂ ತತಃ ಪ್ರಾಹುರ್ಗುಹಂ ಗುಣವತಾಂ ವರಮ್ ॥೩೬॥

ರುದ್ರನು ಗುಹನನ್ನು ಪೂಜಿಸುವುದನ್ನು ನೋಡಿದ ದೇವತೆಗಳೆಲ್ಲರೂ ಆ ಕಾರಣದಿಂದ ರುದ್ರಪುತ್ರನಾದ ಗುಹನನ್ನು ಗುಣವಂತರಲ್ಲಿ ಶ್ರೇಷ್ಠನೆಂದು ಹೇಳಿದರು.

ಅನುಪ್ರವಿಶ್ಯ ರುದ್ರೇಣ ವಹ್ನಿಜಾತೋ ಹ್ಯಯಂ ಶಿಶುಃ ।
ತತ್ರ ಜಾತಸ್ತತಃ ಸ್ಕಂದೋ ರುದ್ರಸೂನುಸ್ತತೋಽಭವತ್ ॥೩೭॥

ರುದ್ರನಿಂದ ಅನುಪ್ರವಿಶ್ಟನಾದ ವಹ್ನಿಯಿಂದ ಈ ಶಿಶುವು ಶ್ವೇತಪರ್ವತದಲ್ಲಿ ಜನಿಸಿತು. ಆದ್ದರಿಂದ ಅಲ್ಲಿ ಜನಿಸಿದ ಸ್ಕಂದನು ರುದ್ರಪುತ್ರನಾದನು.

ರುದ್ರಸ್ಯ ವಹ್ನೇಃ ಸ್ವಾಹಾಯಾಃ ಷಣ್ಣಾಂ ಸ್ತ್ರೀಣಾಂ ಚ ಭಾರತ ।
ಜಾತಃ ಸ್ಕಂದಃ ಸುರಶ್ರೇಷ್ಠೋ ರುದ್ರಸೂನುಸ್ತತೋಽಭವತ್ ॥೩೮॥

ಎಲೈ ಭಾರತನೇ, ಸ್ಕಂದನು ರುದ್ರನಿಂದ, ವಹ್ನಿಯಿಂದ, ಪಾರ್ವತಿಯಿಂದ, ಸ್ವಾಹಾದೇವಿಯಿಂದ ಮತ್ತು ಷಟ್ಕೃತ್ತಿಕೆಯರಿಂದ ಹುಟ್ಟಿದವನು. ಆದ್ದರಿಂದ ಆ ಸುರಶ್ರೇಷ್ಠನು ರುದ್ರಪುತ್ರನೂ ಆದನು.

ಅರಜೇ ವಾಸಸೀ ರಕ್ತೇ ವಸಾನಃ ಪಾವಕಾತ್ಮಜಃ ।
ಭಾತಿ ದೀಪ್ತವಪುಃ ಶ್ರೀಮಾನ್ ರಕ್ತಾಭ್ರಾಭ್ಯಾಮಿವಾಂಶುಮಾನ್ ॥೩೯॥

ನಿರ್ಮಲವಾದ ರಕ್ತವಸ್ತ್ರವನ್ನು ಧರಿಸಿದ ದೀಪ್ತಶರೀರವುಳ್ಳ ಕಾಂತಿಯುಕ್ತನಾದ ಅಗ್ನಿಪುತ್ರನಾದ ಅವನು ಕೆಂಪು ಮೋಡಗಳ ನಡುವೆ ಇರುವ ಸೂರ್ಯನಂತೆ ಕಂಡನು.

ಕುಕ್ಕುಟಶ್ಚಾಗ್ನಿನಾ ದತ್ತಸ್ತಸ್ಯ ಕೇತುರಲಂಕೃತಃ ।
ರಥೇ ಸಮುಚ್ಛ್ರಿತೋ ಭಾತಿ ಕಾಲಾಗ್ನಿರಿವ ಲೋಹಿತಃ ॥೪೦॥

ಅಗ್ನಿಯಿಂದ ಕೊಡಲ್ಪಟ್ಟ ಕುಕ್ಕುಟವೂ ಅವನ ಅಲಂಕೃತ ಧ್ವಜವಾಯಿತು. ರಥದಲ್ಲಿ ಉನ್ನತ ಸ್ಥಾನದಲ್ಲಿ ಅದು ರಕ್ತವರ್ಣದಿಂದ ಯುಕ್ತವಾಗಿ ಕಾಲಾಗ್ನಿಯಂತೆ ಶೋಭಿಸುತ್ತದೆ.

ಯಾ ಚೇಷ್ಟಾ ಸರ್ವಭೂತಾನಾಂ ಪ್ರಜಾ ಶಾಂತಿರ್ಬಲಂ ತಥಾ ।
ಅಗ್ರತಸ್ತಸ್ಯ ಸಾ ಶಕ್ತಿರ್ದೇವಾನಾಂ ಜಯವರ್ಧಿನೀ ॥೪೦.೧॥

ಎಲ್ಲ ಭೂತಗಳಿಗೆ ಯಾವ ಚೇಷ್ಟಾ ಪ್ರಜೆ ಶಾಂತಿ, ಬಲಗಳು ಇವೆಯೋ ಅವೆಲ್ಲವೂ ಸ್ಕಂದನ ಅನುಗ್ರಹದಿಂದ ಆಗುತ್ತದೆ. ಅವನು ಪ್ರಯಾಣ ಮಾಡುವಾಗ ಅವನ ಮುಂದೆ ಹೋಗುವ ಆ ಶಕ್ತ್ಯಾಯುಧವು ದೇವತೆಗಳಿಗೆ ಜಯವನ್ನು ಉಂಟುಮಾಡುವಂತಹದಾಗಿದೆ.

ವಿವೇಶ ಕವಚಂ ಚಾಸ್ಯ ಶರೀರೇ ಸಹಜಂ ತಥಾ ।
ಯುಧ್ಯಮಾನಸ್ಯ ದೇವಸ್ಯ ಪ್ರಾದುರ್ಭವತಿ ತತ್ಸದಾ ॥೪೧॥

ಅವನ ಶರೀರವನ್ನು ಸಹಜವಾದ ಕವಚವು ಪ್ರವೇಶಿಸಿತು. ಆ ದೇವನು ಯುದ್ಧಮಾಡುವಾಗ ಆ ಕವಚವು ಯಾವಾಗಲೂ ಅಭಿವ್ಯಕ್ತವಾಗುತ್ತದೆ.

ಶಕ್ತಿರ್ಧರ್ಮೋ ಬಲಂ ತೇಜಃ ಕಾಂತತ್ವಂ ಸತ್ಯಮುನ್ನತಿಃ ।
ಬ್ರಹ್ಮಣ್ಯತ್ವಮಸಮ್ಮೋಹೋ ಭಕ್ತಾನಾಂ ಪರಿರಕ್ಷಣಮ್ ॥೪೨॥

ನಿಕೃಂತನಂ ಚ ಶತ್ರೂಣಾಂ ಲೋಕಾನಾಂ ಚಾಭಿರಕ್ಷಣಮ್ ।
ಸ್ಕಂದೇನ ಸಹ ಜಾತಾನಿ ಸರ್ವಾಣ್ಯೇವ ಜನಾಧಿಪ ॥೪೩॥

ಎಲೈ ಜನಾಧಿಪನೇ, ಶಕ್ತಿ, ಧರ್ಮ, ಬಲ, ತೇಜಸ್ಸು, ಸಹನೆ, ಸತ್ಯ, ಉನ್ನತಿ, ಬ್ರಾಹ್ಮಣವಾತ್ಸಲ್ಯ, ಅಸಮ್ಮೋಹ, ಭಕ್ತರಕ್ಷಣೆ, ಶತ್ರುಸಂಹಾರ, ಲೋಕಗಳ ರಕ್ಷಣೆ ಇವೆಲ್ಲಾ ಗುಣಗಳೂ ಸ್ಕಂದನ ಜೊತೆಯಲ್ಲಿಯೇ ಹುಟ್ಟಿದವು.

ಏವಂ ದೇವಗಣೈಃ ಸರ್ವೈಃ ಸೋಽಭಿಷಿಕ್ತಃ ಸ್ವಲಂಕೃತಃ ।
ಬಭೌ ಪ್ರತೀತಃ ಸುಮನಾಃ ಪರಿಪೂರ್ಣೇಂದುಮಂಡಲಃ ॥೪೪॥

ಹೀಗೆ ಎಲ್ಲಾ ದೇವಗಣಗಳಿಂದಲೂ ಅಭಿಷಿಕ್ತನಾಗಿ ಅಲಂಕೃತನಾಗಿ ಒಳ್ಳೆಯ ಮನಸ್ಸಿನಿಂದ ಕೂಡಿ ಸಂತುಷ್ಟನಾದ ಅವನು ಪೂರ್ಣಚಂದ್ರಮಂಡಲದಂತೆ ಶೋಭಿಸಿದನು.

ಇಷ್ಟೈಃ ಸ್ವಾಧ್ಯಾಯಘೋಷೈಶ್ಚ ವೇಣುತೂರ್ಯವರೈರಪಿ ।
ದೇವಗಂಧರ್ವಗೀತೈಶ್ಚ ಸರ್ವೈರಪ್ಸರಸಾಂ ಗಣೈಃ ॥೪೫॥

ಏತೈಶ್ಚಾನ್ಯೈಶ್ಚ ಬಹುಭಿಸ್ತುಷ್ಟೈರ್ಹೃಷ್ಟೈಃ ಸ್ವಲಂಕೃತೈಃ ।
ಕ್ರೀಡನ್ ಭಾತಿ ತದಾ ದೇವೈರಭಿಷಿಕ್ತಶ್ಚ ಪಾವಕಿಃ ॥೪೬॥

ಪ್ರಿಯವಾದ ಸ್ವಾಧ್ಯಾಯ ಘೋಷಗಳಿಂದಲೂ, ವೇಣುತೂರ್ಯಾದಿ ವಾದ್ಯ ಘೋಷಗಳಿಂದಲೂ, ದೇವಗಂಧರ್ವ ಗಾನಗಳಿಂದಲೂ, ಅಪ್ಸರೋಗಣದ ನರ್ತನದಿಂದಲೂ (ಅವನು ಅಭಿಷಿಕ್ತನಾದನು). ದೇವತೆಗಳಿಂದ ಅಭಿಷಿಕ್ತನಾದ

ಅಗ್ನಿಪುತ್ರನಾದ ಸ್ಕಂದನು ಗಂಧರ್ವರಿಂದಲೂ, ಅಪ್ಸರೆಯರಿಂದಲೂ ಇನ್ನೂ ಅನೇಕ ಅಲಂಕೃತರಾದ ಶಿಷ್ಟಜನರಿಂದಲೂ ಕೂಡಿ ಕ್ರೀಡಿಸುತ್ತಾ ಕಂಗೊಳಿಸಿದನು.

ಅಭಿಷಿಕ್ತಂ ಮಹಾಸೇನಮಪಶ್ಯಂತ ದಿವೌಕಸಃ ।
ವಿನಿಕೃ(ಹ)ತ್ಯ ತಮಃ ಸೂರ್ಯಂ ಯಥೇಹಾಭ್ಯುದಿತಂ ತಥಾ ॥೪೭॥

ದೇವತೆಗಳು ಅಭಿಷಿಕ್ತನಾದ ಮಹಾಸೇನನನ್ನು ಕತ್ತಲೆಯನ್ನು ಪರಿಹರಿಸಿ ಉದಯವನ್ನು ಹೊಂದಿದ ಸೂರ್ಯನಂತೆ ಕಂಡರು.

ಅಥೈನಮಭ್ಯಯುಃ ಸರ್ವಾ ದೇವಸೇನಾಃ ಸಹಸ್ರಶಃ ।
ಅಸ್ಮಾಕಂ ತ್ವಂ ಪತಿರಿತಿ ಬ್ರುವಾಣಾಃ ಸರ್ವತೋ ದಿಶಃ ॥೪೮॥

ಅನಂತರ ಎಲ್ಲ ದಿಕ್ಕುಗಳಿಂದಲೂ ಸಹಸ್ರ ಸಂಖ್ಯೆಯಲ್ಲಿ ಎಲ್ಲಾ ದೇವಸೇನೆಗಳೂ ನೀನು ನಮ್ಮ ಒಡೆಯ ಎಂದು ಹೇಳುತ್ತಾ ಅವನ ಬಳಿಗೆ ಬಂದವು.

ತಾಃ ಸಮಾಸಾದ್ಯ ಭಗವಾನ್ ಸರ್ವಭೂತಗಣೈರ್ವೃತಃ ।
ಅರ್ಚಿತಸ್ತು ಸ್ತುತಶ್ಚೈವ ಸಾಂತ್ವಯಾಮಾಸ ತಾ ಅಪಿ ॥೪೯॥

ಭಗವಂತನಾದ ಸ್ಕಂದನು ಸರ್ವಭೂತಗಣಗಳಿಂದ ಕೂಡಿದವನಾಗಿ ಅವರ ಸಮೀಪವನ್ನು ತಲುಪಿ ಅವರಿಂದ ಪೂಜಿತನೂ, ಸ್ತುತನೂ ಆಗಿ ಅವರೆಲ್ಲರನ್ನೂ ಸಮಾಧಾನಗೊಳಿಸಿದನು.

ಶತಕ್ರತುಶ್ಚಾಭಿಷಿಚ್ಯ ಸ್ಕಂದಂ ಸೇನಾಪತಿಂ ತದಾ ।
ಸಸ್ಮಾರ ತಾಂ ದೇವಸೇನಾಂ ಯಾ ಸಾ ತೇನ ವಿಮೋಕ್ಷಿತಾ ॥೫೦॥

ಶತಕ್ರತುವಾದರೂ ಸ್ಕಂದನಿಗೆ ಸೇನಾಪತ್ಯದಲ್ಲಿ ಅಭಿಷೇಕವನ್ನು ಮಾಡಿ ತಾನು ಹಿಂದೆ ವಿಮೋಚನೆಗೊಳಿಸಿದ್ದ ಆ ದೇವಸೇನೆಯನ್ನು ಸ್ಮರಿಸಿದನು.

ಇಂದ್ರಃ

ಅಯಂ ತಸ್ಯಾಃ ಪತಿರ್ನೂನಂ ವಿಹಿತೋ ಬ್ರಹ್ಮಣಾ ಸ್ವಯಮ್ ॥೫೧॥

ಇತಿ ಚಿಂತ್ಯಾನಯಾಮಾಸ ದೇವಸೇನಾಂ ಹ್ಯಲಂಕೃತಾಮ್ ।
ಸ್ಕಂದಂ ಪ್ರೋವಾಚ ಬಲಭಿದಿಯಂ ಕನ್ಯಾ ಸುರೋತ್ತಮ ।
ಅಜಾತೇ ತ್ವಯಿ ನಿರ್ದಿಷ್ಟಾ ತವ ಪತ್ನೀ ಸ್ವಯಂಭುವಾ ॥೫೧.೧॥

ತಸ್ಮಾತ್ ತ್ವಮಸ್ಯಾ ವಿಧಿವತ್ ಪಾಣಿಂ ಮಂತ್ರಪುರಸ್ಕೃತಮ್ ।
ಗೃಹಾಣ ದಕ್ಷಿಣಂ ದೇವ್ಯಾಃ ಪಾಣಿನಾ ಪದ್ಮವರ್ಚಸಮ್ ॥೫೨॥

ಇಂದ್ರ– ಈ ಮಹಾಸೇನನು ಅವಳ ಪತಿಯಾಗಿ ಬ್ರಹ್ಮದೇವರಿಂದ ಸಂಕಲ್ಪಿಸಲ್ಪಟ್ಟಿದ್ದಾನೆ ಎಂದು ಚಿಂತಿಸಿ ಅವನು ಅಲಂಕೃತಳಾದ ದೇವಸೇನೆಯನ್ನು ಅಲ್ಲಿಗೆ ಕರೆಸಿದನು. ಬಲಶತ್ರುವಾದ ಇಂದ್ರನು ಸ್ಕಂದನನ್ನು ಕುರಿತು ಎಲೈ ಸುರೋತ್ತಮನೇ, ಈ ಕನ್ಯೆಯನ್ನು ನೀನು ಹುಟ್ಟುವುದಕ್ಕಿಂತ ಮುಂಚೆಯೇ ಬ್ರಹ್ಮದೇವರು ನಿನ್ನ ಪತ್ನಿ ಎಂದು ಸಂಕಲ್ಪ ಮಾಡಿದ್ದಾರೆ. ಆದ್ದರಿಂದ ಮಂತ್ರಪುರಸ್ಸರವಾಗಿ ಇವಳ ಪಾಣಿಗ್ರಹಣವನ್ನು ಮಾಡು. ನಿನ್ನ ಕೈಯಿಂದ ಪದ್ಮಕಾಂತಿಯುಳ್ಳ ಇವಳ ದಕ್ಷಿಣ ಹಸ್ತವನ್ನು ಹಿಡಿದುಕೋ (ಎಂದು ಹೇಳಿದನು).

ಏವಮುಕ್ತಃ ಸ ಜಗ್ರಾಹ ತಸ್ಯಾಃ ಪಾಣಿಂ ಯಥಾವಿಧಿ ।
ಬೃಹಸ್ಪತಿರ್ಮಂತ್ರವಿದ್ಧಿ ಜಜಾಪ ಚ ಜುಹಾವ ಚ ॥೫೩॥

ಹೀಗೆ ಹೇಳಲ್ಪಟ್ಟ ಮಹಾಸೇನನು ಅವಳ ಪಾಣಿಯನ್ನು ವಿಧಿಪೂರ್ವಕವಾಗಿ ಹಿಡಿದುಕೊಂಡನು. ಮಂತ್ರವೇತ್ತರಾದ ಬೃಹಸ್ಪತಿಗಳು ಉಚಿತವಾದ ಜಪವನ್ನು ಮಾಡಿ ಹೋಮವನ್ನು ಮಾಡಿದರು.

ಏವಂ ಸ್ಕಂದಸ್ಯ ಮಹಿಷೀಂ ದೇವಸೇನಾಂ ವಿದುರ್ಜನಾಃ ।
ಷಷ್ಠೀಂ ಯಾಂ ಬ್ರಾಹ್ಮಣಾಃ ಪ್ರಾಹುರ್ಲಕ್ಷ್ಮೀಮಾಶಾಂ ಸುಖಪ್ರದಾಮ್ ॥

ಸಿನೀವಾಲೀಂ ಕುಹೂಂ ಚೈವ ಸದ್ವೃತ್ತಿಮಪರಾಜಿತಾಮ್ ।
ಇತ್ಯೇವಮಾದಿಭಿರ್ದೇವೀ ನಾಮಭಿಃ ಪರಿಕೀರ್ತ್ಯತೇ ॥೫೫॥

ಹೀಗೆ ಜನಗಳು ದೇವಸೇನೆಯನ್ನು ಸ್ಕಂದನ ರಾಣಿ ಎಂದು ತಿಳಿಯುತ್ತಾರೆ. ಬ್ರಾಹ್ಮಣರು ಯಾರನ್ನು ಷಷ್ಠೀ ಎಂದು ಹೇಳುತ್ತಾರೋ, ಲಕ್ಷ್ಮೀ ಎಂದು ಕರೆಯುತ್ತಾರೋ, ಸುಖಪ್ರದಳಾದ ಆಶಾ ಎಂದು ಕರೆಯುತ್ತಾರೆಯೋ, ಸಿನೀವಾಲೀ, ಕುಹೂ, ಸದ್ವೃತ್ತಿ, ಅಪರಾಜಿತಾ ಇದೇ ಮೊದಲಾದ ನಾಮಗಳಿಂದ ಕರೆಯುತ್ತಾರೆಯೋ ಅವೆಲ್ಲವೂ ಈ ದೇವಸೇನೆಯ ನಾಮಗಳೇ.

ಯದಾ ಸ್ಕಂದಃ ಪತಿರ್ಲಬ್ಧಃ ಶಾಶ್ವತೋ ದೇವಸೇನಯಾ ।
ತದಾ ತಮಾಶ್ರಯಲ್ಲಕ್ಷ್ಮೀಃ ಸ್ವಯಂ ದೇವೀ ಶರೀರಿಣೀ ॥೫೬॥

ಯಾವಾಗ ದೇವಸೇನೆಯು ಸ್ಕಂದನನ್ನು ಶಾಶ್ವತವಾದ ಪತಿಯನ್ನಾಗಿ ಪಡೆದಳೋ ಆಗ ಲಕ್ಷ್ಮೀದೇವಿಯು ಶರೀರವನ್ನು ಧರಿಸಿ ಇನ್ನೊಂದು ರೂಪದಿಂದ ಅವನಲ್ಲಿ ಸನ್ನಿಹಿತಳಾದಳು.

ಶ್ರೀಜುಷ್ಟಃ ಪಂಚಮೀಂ ಸ್ಕಂದಸ್ತಸ್ಮಾತ್ ಶ್ರೀಃ ಪಂಚಮೀ ಸ್ಮೃತಾ ।
ಷಷ್ಠ್ಯಾಂ ಕೃತಾರ್ಥೋಽಭೂದ್ ಯಸ್ಮಾತ್ತಸ್ಮಾತ್ ಷಷ್ಠೀ ಮಹಾತಿಥಿಃ ॥

ಸ್ಕಂದನು ಪಂಚಮಿಯಂದು ಶ್ರೀ ಸಹಿತನಾದನು. ಆದ್ದರಿಂದ ಶ್ರೀದೇವಿಯನ್ನು ಪಂಚಮೀ ಎಂದೂ ಕರೆಯುತ್ತಾರೆ. ಷಷ್ಠಿಯ ದಿವಸ ಅವನು ಕೃತಾರ್ಥನಾದ ಕಾರಣದಿಂದ ಷಷ್ಠಿಯು ಪವಿತ್ರವಾದ ತಿಥಿಯಾಗಿದೆ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಅಷ್ಟಾದಶಾಧಿಕದ್ವಿಶತಶತತಮೋಽಧ್ಯಾಯಃ ॥
॥ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಸ್ಕಾಂದೋಪಾಖ್ಯಾನೇ ಷಷ್ಠ್ಯೋಽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹದಿನೆಂಟನೆಯ
ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಹತ್ತೊಂಬತ್ತನೆಯ ಅಧ್ಯಾಯ

ಮಾರ್ಕಂಡೇಯರಿಂದ ಸ್ಕಂದನ ಮುಂದಿನ ಚರಿತ್ರೆಯ ಕೀರ್ತನೆ.

ಮಾರ್ಕಂಡೇಯಃ

ಶ್ರಿಯಾ ಜುಷ್ಟಂ ಮಹಾಸೇನಂ ದೇವಸೇನಾಪತಿಂ ಕೃತಮ್ ।
ಸಪ್ತರ್ಷಿಪತ್ನ್ಯಃ ಷಡ್‌ದೇವ್ಯಸ್ತತ್ಸಕಾಶಮಥಾಗಮನ್ ॥೧॥

ಮಾರ್ಕಂಡೇಯ– ಅನಂತರ ಸಂಪದ್ಯುಕ್ತನಾದ ದೇವಸೇನಾಪತಿಯಾದ ಮಹಾಸೇನನ ಬಳಿಗೆ ಸಪ್ತರ್ಷಿ ಪತ್ನಿಯರಲ್ಲಿ ಆರುಜನರು ಬಂದರು.

ಋಷಿಭಿಃ ಸಂಪರಿತ್ಯಕ್ತಾ ಧರ್ಮಯುಕ್ತಾ ಮಹಾವ್ರತಾಃ ।
ದ್ರುತಮಾಗಮ್ಯ ಚೋಚುಸ್ತಾ ದೇವಸೇನಾಪತಿಂ ಪ್ರಭುಮ್ ॥೨॥

ಧರ್ಮಯುಕ್ತರೂ, ಮಹಾವ್ರತಶೀಲರೂ ಆದ ಅವರು ತಮ್ಮ ಪತಿಗಳಾದ ಋಷಿಗಳಿಂದ ಪರಿತ್ಯಕ್ತರಾಗಿ ದೇವಸೇನಾಪತಿಯಾದ ಪ್ರಭುವನ್ನು ಕುರಿತು ಬೇಗ ಬಂದು ಅವರೆಲ್ಲರೂ ಹೇಳಿದರು.

ವಯಂ ಪುತ್ರ ಪರಿತ್ಯಕ್ತಾ ಭರ್ತೃಭಿರ್ದೇವಸಮ್ಮಿತೈಃ ।
ಅಕಾರಣಾದ್ ರುಷಾ ತೈಸ್ತು ಪುಣ್ಯಸ್ಥಾನಾತ್ ಪರಿಚ್ಯುತಾಃ ॥೩॥

ದೇವಿಯರು– ಎಲೈ ಪುತ್ರನೇ, ನಾವು ನಿಷ್ಕಾರಣವಾಗಿ ದೇವತಾ ಸಮಾನರಾದ ನಮ್ಮ ಪತಿಗಳಿಂದ ರೋಷದಿಂದ ಪರಿತ್ಯಾಗಮಾಡಲ್ಪಟ್ಟು ನಮ್ಮ ಪವಿತ್ರವಾದ ಸ್ಥಾನಗಳಿಂದ ಚ್ಯುತರಾಗಿದ್ದೇವೆ.

ಅಸ್ಮಾಭಿಃ ಕಿಲ ಜಾತಸ್ತ್ವಮಿತಿ ಕೇನಾಪ್ಯುದಾಹೃತಮ್ ।
ತತ್ ಸತ್ಯಮೇತತ್ ಸಂಶ್ರುತ್ಯ ತಸ್ಮಾನ್ನಸ್ತ್ರಾತುಮರ್ಹಸಿ ॥೪॥

ನೀನು ನಮ್ಮ ಪುತ್ರನೆಂದು ಯಾರೋ ಹೇಳಿದರು (ಈ ಮಾತನ್ನು ಕೇಳಿದ ಋಷಿಗಳು ನಮ್ಮನ್ನು ಶಂಕಿಸಿ ತ್ಯಜಿಸಿದ್ದಾರೆ). ನೀನು ಈ ವಿಷಯದಲ್ಲಿ ಸತ್ಯವಾದ ಅಂಶವೇನು ಎಂದು ಘೋಷಣೆಯನ್ನು ಮಾಡಿ ನಮ್ಮನ್ನು ರಕ್ಷಿಸಬೇಕು.

ಅಕ್ಷಯಶ್ಚ ಭವೇತ್ ಸ್ವರ್ಗಸ್ತ್ವತ್ಪ್ರಸಾದಾದ್ಧಿ ನಃ ಪ್ರಭೋ ।
ತ್ವಾಂ ಪುತ್ರಂ ಚಾಪ್ಯಭೀಪ್ಸಾಮಃ ಕೃತ್ವೈತದನೃಣೋ ಭವ ॥೫॥

ಎಲೈ ಪ್ರಭುವೇ, ನಿನ್ನ ಅನುಗ್ರಹದಿಂದ ನಮಗೆ ಅಕ್ಷಯವಾದ ಸ್ವರ್ಗಲೋಕ ಪ್ರಾಪ್ತಿಯಾದೀತು. ನಿನ್ನನ್ನು ಪುತ್ರನೆಂದು ಸ್ವೀಕರಿಸಲು ನಾವು ಬಯಸುತ್ತೇವೆ. ಈ ಉಪಕಾರವನ್ನು ಮಾಡಿ ನೀನು ಋಣಮುಕ್ತನಾಗು.

ಸ್ಕಂದಃ

ಮಾತರೋ ಹಿ ಭವತ್ಯೋ ಮೇ ಸುತೋ ವೋಽಹಮನಿಂದಿತಾಃ ।
ಯದ್ವಾಪೀಚ್ಛತ ತತ್ಸರ್ವಂ ಸಂಭವಿಷ್ಯತಿ ವಸ್ತಥಾ ॥೬॥

ಸ್ಕಂದ– ನೀವೆಲ್ಲರೂ ನನ್ನ ಪೂಜ್ಯರಾದ ಮಾತೆಯರು. ಎಲೌ ಅನಿಂದಿತರೇ, ನಾನು ನಿಮ್ಮ ಪುತ್ರ. ನೀವು ಏನನ್ನು ಬಯಸುತ್ತೀರೋ ಅದೆಲ್ಲವೂ ನಿಮಗೆ ಸಿದ್ಧಿಸುವುದು.

ಮಾರ್ಕಂಡೇಯಃ

ಏವಮುಕ್ತೇ ತತಃ ಶಕ್ರಂ ಕಿಂ ಕಾರ್ಯಮಿತಿ ಸೋಽಬ್ರವೀತ್ ।
ಉಕ್ತಃ ಸ್ಕಂದೇನ ಬ್ರೂಹೀತಿ ಸೋಽಬ್ರವೀತ್ ವಾಸವಸ್ತತಃ ॥೭॥

ಮಾರ್ಕಂಡೇಯ– ಹೀಗೆ ಹೇಳುತ್ತಿರಲು ಸ್ಕಂದನು ಇಂದ್ರನನ್ನು ಕುರಿತು ಏನು ಮಾಡಬೇಕು ಅದನ್ನು ಹೇಳು ಎಂದು ಕೇಳಿದನು. ಆಗ ಇಂದ್ರನು ಹೀಗೆ ಹೇಳಿದನು.

ಅಭಿಜಿತ್ ಸ್ಪರ್ಧಮಾನಾ ತು ರೋಹಿಣ್ಯಾ ಕನ್ಯಸೀ ಸ್ವಸಾ ।
ಇಚ್ಛಂತೀ ಜ್ಯೇಷ್ಠತಾಂ ದೇವೀ ತಪಸ್ತಪ್ತುಂ ವನಂ ಗತಾ ॥೮॥

ಅಭಿಜಿತ್ ನಕ್ಷತ್ರ ದೇವತೆಯು ರೋಹಿಣಿಯ ತಂಗಿ. ಆ ದೇವಿಯು ತನಗೆ ಜ್ಯೇಷ್ಠತೆಯು ಉಂಟಾಗಬೇಕೆಂದು ಉದ್ದೇಶಿಸಿ ತಪಸ್ಸನ್ನು ಮಾಡಲು ಕಾಡಿಗೆ ಹೋದಳು (ಈ ಆರು ಋಷಿಪತ್ನಿಯರು ತಮಗೆ ಬ್ರಾಹ್ಮೀ, ಮಾಹೇಶ್ವರೀ ಮೊದಲಾದ ಸಪ್ತಮಾತೆಯ ಸ್ಥಾನವು ಸಿಗಬೇಕೆಂದು ಕೇಳಲು ಸ್ಕಂದನ ಬಳಿಗೆ ಬಂದರು. ಅದು ಅವರಿಗೆ ಅಯೋಗ್ಯವಾದ್ದರಿಂದ ಅದು ಅವರಿಗೆ ದೊರೆಯುವುದು ಅಸಂಭಾವಿತ. ಆದ್ದರಿಂದ ನೀನು ಅವರಿಗೆ ಕೊಡಕೂಡದು ಎಂದು ಸ್ಕಂದನಿಗೆ ಸೂಚಿಸಲು ಇಂದ್ರನು ಅಭಿಜಿತ್‌ಗೆ ಸಂಬಂಧಿಸಿದ ಒಂದು ಕಥೆಯನ್ನು ಹೇಳುತ್ತಿದ್ದಾನೆ).

ತತ್ರ ಮೂಢೋಽಸ್ಮಿ ಭದ್ರಂ ತೇ ನಕ್ಷತ್ರಂ ಗಗನಾಚ್ಚ್ಯುತಮ್ ।
ಕಾಲಂ ತ್ವಿಮಂ ಪರಂ ಸ್ಕಂದ ಬ್ರಹ್ಮಣಾ ಸಹ ಚಿಂತಯ ॥೯॥

ಎಲೈ ಸ್ಕಂದನೇ, ಅಭಿಜಿತ್‌ಗೆ ಆ ಸ್ಥಾನವು ದೊರೆಯುವುದೋ ಇಲ್ಲವೋ ಎಂಬ ವಿಷಯದಲ್ಲಿ ನಾನು ಮೂಢನಾಗಿದ್ದೇನೆ (ಅದು ನನಗೆ ತಿಳಿದಿಲ್ಲ). ನಿನಗೆ ಮಂಗಳವಾಗಲಿ. ಆಗ ಕೃತ್ತಿಕಾ ನಕ್ಷತ್ರವು ಗಗನದಿಂದ ಚ್ಯುತವಾಯಿತು. ಎಲೈ ಸ್ಕಂದನೇ, ಈ ಕಾಲದ ವಿಷಯವನ್ನು ನೀನು ಬ್ರಹ್ಮದೇವರ ಜೊತೆಯಲ್ಲಿ ಚಿಂತಿಸಬೇಕು. (ಅಭಿಜಿತ್ ದೇವತೆಗೆ ಅವಳು ಅಪೇಕ್ಷಿಸಿದ ಸ್ಥಾನವು ದೊರೆಯುವುದೋ ಇಲ್ಲವೋ ಎಂದು ನನಗೆ ತಿಳಿದಿಲ್ಲ. ಅಭಿಜಿತ್ ದೇವತೆಯು ತನಗೆ ಅಯೋಗ್ಯವಾದ ಜ್ಯೇಷ್ಠತ್ವವನ್ನು

ಉದ್ದೇಶಿಸಿ ತಪಸ್ಸನ್ನು ಮಾಡಿದ ದೋಷದಿಂದ ಕೃತ್ತಿಕಾ ನಕ್ಷತ್ರವು ಉತ್ಪಾತರೂಪದಿಂದ ಕೆಳಗೆ ಬಿದ್ದಿತು. ಮೊದಲು ರೋಹಿಣಿಯು ಶ್ರೇಷ್ಠನಕ್ಷತ್ರವಾಗಿದ್ದಿತು. ಬ್ರಹ್ಮದೇವರ ಆದೇಶದ ನಂತರ ಧನಿಷ್ಠಾ ನಕ್ಷತ್ರವು ಶ್ರೇಷ್ಠವಾಯಿತು. ಹೀಗೆ ಎರಡೇ ರೀತಿ. ಅಭಿಜಿತ್ ದೇವತೆಗೆ ರೋಹಿಣಿಗಿಂತ ಶ್ರೇಷ್ಠತ್ವವು ಎಂದೂ ಪ್ರಾಪ್ತವಾಗುವುದಿಲ್ಲ ಎಂದು ಅಭಿಪ್ರಾಯ- ಲಕ್ಷಾಲಂಕಾರ).

ಧನಿಷ್ಠಾದಿಸ್ತದಾ ಕಾಲೋ ಬ್ರಹ್ಮಣಾ ಪರಿಕೀರ್ತಿತಃ ।
ರೋಹಿಣೇ ಹ್ಯಭವತ್ ಪೂರ್ವಮೇವಂ ಸಂಖ್ಯಾ ಸಮಾಭವತ್ ॥೧೦॥

ಆಗ ಬ್ರಹ್ಮದೇವರು ಧನಿಷ್ಠಾದಿಯಾದ ಕಾಲವನ್ನು ಕಲ್ಪಿಸಿದರು. ಮೊದಲು ರೋಹಿಣ್ಯಾದಿ ಕಾಲವಾಗಿದ್ದಿತು. ಈ ರೀತಿ ಸಂಖ್ಯೆಯು ಸಮವೇ ಆಯಿತು. (ಹಿಂದೆ ಕೃತಯುಗದ ಪ್ರಾರಂಭಕಾಲವು ರೋಹಿಣಿಯಾಗಿದ್ದಿತು. ಎಂದರೆ ಸೂರ್ಯಚಂದ್ರ ಮತ್ತು ಬೃಹಸ್ಪತಿಗಳು ಯಾವಾಗ ಒಂದೇ ಕಾಲದಲ್ಲಿ ರೋಹಿಣಿಯನ್ನು ಪ್ರವೇಶಿಸುತ್ತಾರೋ ಅದು ಕೃತಯುಗಾದಿ ಎಂಬ ನಿರ್ಧಾರವಿದ್ದಿತು. ಈಗ ಕೃತ್ತಿಕೆಯು ಬಿದ್ದುಹೋದುದರಿಂದ ನಕ್ಷತ್ರಕಾಲದಲ್ಲಿ ವ್ಯತ್ಯಾಸವಾಗಿ ಧನಿಷ್ಠಾ ನಕ್ಷತ್ರಕ್ಕೆ ಯಾವಾಗ ಸೂರ್ಯಚಂದ್ರ ಮತ್ತು ಬೃಹಸ್ಪತಿಗಳು ಏಕಕಾಲದಲ್ಲಿ ಪ್ರವೇಶಿಸುತ್ತಾರೆಯೋ ಅದು ಕೃತಯುಗಾದಿ ಎಂದು ಬ್ರಹ್ಮದೇವರು ತೀರ್ಮಾನಿಸಿದರು. ಎರಡು ಪಕ್ಷಗಳಲ್ಲಿಯೂ ಅಭಿಜಿತ್‌ಗೆ ಶ್ರೇಷ್ಠತೆಯು ಬರಲಿಲ್ಲ. ಆದ್ದರಿಂದ ಅವಳ ಕನಿಷ್ಠತ್ವ ಸ್ಥಿತಿಯು ಸಮವೇ ಆಗಿದ್ದಿತು).

ಏವಮುಕ್ತೇ ತು ಶಕ್ರೇಣ ತ್ರಿದಿವಂ ಕೃತ್ತಿಕಾಗತಾ ।
ನಕ್ಷತ್ರಂ ಶಕಟಾಕಾರಂ ಭಾತಿ ತದ್ ವಹ್ನಿದೈವತಮ್ ॥೧೦.೧॥

ಮಾರ್ಕಂಡೇಯರು– ಹೀಗೆ ಇಂದ್ರನು ಹೇಳುತ್ತಿರಲು ಕೃತ್ತಿಕಾ ನಕ್ಷತ್ರವು ಪುನಃ ಸ್ವರ್ಗಕ್ಕೆ ಹೋಯಿತು. ವಹ್ನಿದೈವತವಾದ ಆ ನಕ್ಷತ್ರವು ಈಗಲೂ ಶಕಟಾಕಾರವಾಗಿ ಕಾಣುತ್ತದೆ (ಕೃತ್ತಿಕಾ ನಕ್ಷತ್ರದ ಸಂಸ್ಥಾನದಲ್ಲಿರುವ ಆರುನಕ್ಷತ್ರಗಳು ಸಪ್ತರ್ಷಿಗಳ ಆರು ಪತ್ನಿಯರಿಂದ ಅಭಿಮನ್ಯವಾದ ನಕ್ಷತ್ರಗಳು. ಅದು ಅವರ ಸ್ಥಾನ. ಒಟ್ಟು ಅದು ಶಕಟಾಕಾರವಾಗಿ ಕಾಣುತ್ತದೆ. ಅಭಿಜಿತ್‌ಗೆ ಹೇಗೆ ಅವಳಿಗೆ ಅಯೋಗ್ಯವಾದ ಸ್ಥಾನವು ದೊರೆಯಲಿಲ್ಲವೋ ಅದರಂತೆ ಈ ಋಷಿಪತ್ನಿಯರಿಗೂ ಪ್ರಾಚೀನರಾದ ಷಣ್ಮಾತೃಗಳ

ಸ್ಥಾನವು ಅಯೋಗ್ಯವಾದುದರಿಂದ ಅದನ್ನು ನೀನು ಕೊಡಬೇಡ ಎಂದು ಇಂದ್ರನ ಅಭಿಪ್ರಾಯ. ಆದ್ದರಿಂದ ಷಟ್‌ಪತ್ನಿಯರು ಸ್ವರ್ಗಕ್ಕೆ ಹೋಗಿ ತಮ್ಮ ಸ್ಥಾನವನ್ನೇ ಸೇರಿದರು - ಲಕ್ಷಾಲಂಕಾರ).

ವಿನತಾ ಚಾಬ್ರವೀತ್ ಸ್ಕಂದಂ ಮಮ ತ್ವಂ ಪಿಂಡದಃ ಸುತಃ ।
ಇಚ್ಛಾಮಿ ನಿತ್ಯಮೇವಾಹಂ ತ್ವಯಾ ಪುತ್ರ ಸಹಾಸಿತುಮ್ ॥೧೧॥

ವಿನತೆಯು ಸ್ಕಂದನನ್ನು ಕುರಿತು ನೀನು ನನಗೆ ಪಿಂಡಪ್ರದನಾದ ಪುತ್ರ. ಎಲೈ ಪುತ್ರನೇ, ನಾನು ನಿನ್ನ ಜೊತೆಯಲ್ಲಿ ಯಾವಾಗಲೂ ಇರಲು ಬಯಸುತ್ತೇನೆ ಎಂದು ಹೇಳಿದಳು.

ಸ್ಕಂದಃ

ಏವಮಸ್ತು ನಮಸ್ತೇಽಸ್ತು ಪುತ್ರಸ್ನೇಹಾತ್ ಪ್ರಶಾಧಿ ಮಾಮ್ ।
ಸ್ನುಷಯಾ ಪೂಜ್ಯಮಾನಾ ವೈ ದೇವಿ ವತ್ಸ್ಯಸಿ ನಿತ್ಯದಾ ॥೧೨॥

ಸ್ಕಂದ– ಹಾಗೆಯೇ ಆಗಲಿ. ನಿನಗೆ ನಮಸ್ಕಾರ. ಪುತ್ರಸ್ನೇಹದಿಂದ ನನಗೆ ಶಾಸನವನ್ನು ಮಾಡು. ದೇವಿಯೇ, ಸೊಸೆಯಿಂದ ಪೂಜಿತಳಾಗಿ ಯಾವಾಗಲೂ ನನ್ನ ಜೊತೆಯಲ್ಲಿ ವಾಸಮಾಡುವವಳಾಗು.

ಮಾರ್ಕಂಡೇಯಃ

ಅಥ ಮಾತೃಗಣಃ ಸರ್ವಃ ಸ್ಕಂದಂ ವಚನಮಬ್ರವೀತ್ ।
ವಯಂ ಸರ್ವಸ್ಯ ಲೋಕಸ್ಯ ಮಾತರಃ ಕವಿಭಿಃ ಸ್ತುತಾಃ ॥೧೩॥

ಇಚ್ಛಾಮ ಮಾತರಸ್ತುಭ್ಯಂ ಭವಿತುಂ ಪೂಜಯಸ್ವ ನಃ ।
ತಾಸಾಂ ತು ವಚನಂ ಶ್ರುತ್ವಾ ಸ್ಕಂದೋ ವಚನಮಬ್ರವೀತ್ ॥೧೪॥

ಮಾರ್ಕಂಡೇಯ– ಅನಂತರ ಋಷಿಪತ್ನಿರೂಪವಾದ ಮಾತೃಗಣವು ಸ್ಕಂದನನ್ನು ಸಮೀಪಿಸಿ ಎಲ್ಲರೂ ಅವನನ್ನು ಕುರಿತು ನಾವೆಲ್ಲರೂ ಲೋಕಮಾತೆಯರೆಂದು ಜ್ಞಾನಿಗಳಿಂದ ಪ್ರಶಂಸಿಸಲ್ಪಟ್ಟಿದ್ದೇವೆ. ನಾವು ನಿನಗೂ ಮಾತೆಯರಾಗಲು ಬಯಸುತ್ತೇವೆ. ನಮ್ಮನ್ನು ಪೂಜಿಸು ಎಂದು ಹೇಳಿದರು. ಅವರ ಮಾತನ್ನು ಕೇಳಿ ಸ್ಕಂದನು ಹೀಗೆ ಮಾತನಾಡಿದನು.

ಮಾತರೋ ಹಿ ಭವತ್ಯೋ ಮೇ ಭವತೀನಾಮಹಂ ಸುತಃ ।
ಉಚ್ಯತಾಂ ಯನ್ಮಯಾ ಕಾರ್ಯಂ ಭವತೀನಾಮಥೇಪ್ಸಿತಮ್ ॥೧೫॥

ನೀವೆಲ್ಲರೂ ನನ್ನ ಮಾತೆಯರೇ. ನಾನು ನಿಮ್ಮ ಪುತ್ರ. ನಿಮಗೆ ಇಷ್ಟವಾದ ಯಾವ ಕಾರ್ಯವನ್ನು ನಾನು ಮಾಡಬೇಕೆಂದು ಹೇಳಿ (ಎಂದು ಹೇಳಿದನು).

ಮಾತರಃ

ಯಾಸ್ತು ತಾ ಮಾತರಃ ಪೂರ್ವಂ ಲೋಕಸ್ಯಾಸ್ಯ ಪ್ರಕಲ್ಪಿತಾಃ ।
ಅಸ್ಮಾಕಂ ತು ಭವೇತ್ ಸ್ಥಾನಂ ತಾಸಾಂ ಚೈವ ನ ತದ್ ಭವೇತ್ ॥೧೬॥

ಭವೇಮ ಪೂಜ್ಯಾ ಲೋಕಸ್ಯ ನ ತಾಃ ಪೂಜ್ಯಾಃ ಸುರರ್ಷಭ ।
ಅಸ್ಮತ್ಪ್ರಜಾ ಹೃತಾಸ್ತಾಭಿಸ್ತ್ವತೇ ತಾಃ ಪ್ರಯಚ್ಛ ನಃ ॥೧೭॥

ಮಾತೆಯರು– ಬ್ರಾಹ್ಮೀ, ಮಾಹೇಶ್ವರ್ಯಾದಿ ಮಾತೆಯರು ಲೋಕಮಾತೆಯರೆಂದು ಹಿಂದೆ ಕ್ಲಪ್ತರಾಗಿದ್ದಾರೆಯೋ ನಮಗೆ ಆ ಸ್ಥಾನವು ದೊರೆಯಬೇಕು. ಅವರಿಗೆ ಆ ಸ್ಥಾನವು ದೊರೆಯಬಾರದು. ನಾವು ಲೋಕದಲ್ಲಿ ಪೂಜ್ಯರಾಗಬೇಕು. ಸುರರ್ಷಭನೇ, ಅವರಿಗೆ ಪೂಜೆಯು ಸಲ್ಲಬಾರದು. ಅವರು ನಮ್ಮ ಪ್ರಜೆಗಳನ್ನು ನಿನ್ನ ಸಲುವಾಗಿ ಕದ್ದೊಯ್ದಿದ್ದಾರೆ. ಆ ಪ್ರಜೆಗಳನ್ನು ಹಿಂದಿರುಗಿಸು.

ಸ್ಕಂದಃ

ದತ್ತಾಃ ಪ್ರಜಾ ನ ತಾಃ ಶಕ್ಯಾ ಭವತೀಭಿರ್ನಿಷೇವಿತುಮ್ ।
ಅನ್ಯಾಂ ವಃ ಕಾಂ ಪ್ರಯಚ್ಛಾಮಿ ಪ್ರಜಾಂ ಯಾಂ ಮನಸೇಚ್ಛಥ ॥೧೮॥

ಸ್ಕಂದ– ಆ ಪ್ರಜೆಗಳನ್ನು ಅವರಿಗೆ ಕೊಟ್ಟಿದ್ದಾಗಿದೆ. ಅವರನ್ನು ನೀವು ಪುನಃ ಪಡೆಯಲು ಸಾಧ್ಯವಿಲ್ಲ. ನೀವು ಎಂತಹ ಪ್ರಜೆಯನ್ನು ಮನಸ್ಸಿನಲ್ಲಿ ಇಚ್ಛಿಸುತ್ತೀರೋ ಅಂತಹ ಬೇರೆ ಯಾವ ಪ್ರಜೆಯನ್ನು ಕೊಡಲಿ ಎಂದು ಹೇಳಿ (ವಿನತಾ ಅದಿತಿ ಮೊದಲಾದ ನಾಮಗಳುಳ್ಳ ದೇವಮಾತೆಯರು ಬೇರೆ. ಅದೇ ನಾಮಗಳುಳ್ಳ ಸ್ಕಂದ ಪರಿವಾರವು ಬೇರೆ. ಸ್ಕಂದಪರಿವಾರಕ್ಕೆ ಸೇರಿದವರೆಲ್ಲರೂ ಭೂತಗ್ರಹಗಳೇ ಹೊರತು ದೇವಮಾತೆಯರಲ್ಲ. ದೇವಮಾತೆಯರು ಎಲ್ಲ ಲೋಕಕ್ಕೂ ಸುಖವನ್ನು ಕೊಡುವವರು. ಸ್ಕಂದನ ಪರಿವಾರಕ್ಕೆ ಸೇರಿದ ಮಾರಿಕಾ ಮೊದಲಾದ ಮಾತೆಯರು ಜಗತ್ತಿಗೆ ಉಪದ್ರವವನ್ನು ಕೊಡುವವರು ಎಂದು ತಿಳಿಯಬೇಕು - ಲಕ್ಷಾಲಂಕಾರ).

ಮಾತರಃ

ಇಚ್ಛಾಮ ತಾಸಾಂ ಮಾತೄಣಾಂ ಪ್ರಜಾ ಭೋಕ್ತುಂ ಪ್ರಯಚ್ಛ ನಃ ।
ತ್ವಯಾ ಸಹ ಪೃಥಗ್ಭೂತಾ ಯೇ ಚ ತಾಸಾಮಧೀಶ್ವರಾಃ ॥೧೯॥

ಮಾತೆಯರು– ಆ ಮಾತೆಯರ ಪ್ರಜೆಗಳನ್ನು ತಿನ್ನಲು ನಾವು ಬಯಸುತ್ತೇವೆ. ಅವರನ್ನು ನಮಗೆ ಕೊಡು. ಅವರ ಅಧಿಪತಿಗಳಾದ ಪತಿಗಳಾರಿದ್ದಾರೆಯೋ ಅವರನ್ನೂ ಸಹ ನಿನ್ನ ಜೊತೆಯಲ್ಲಿ ಬೇರೆಯಾಗಿ ಕುಳಿತು ತಿನ್ನಲು ಬಯಸುತ್ತೇವೆ.

ಸ್ಕಂದಃ

ಪ್ರಜಾ ವೋ ದದ್ಮಿ ಕಷ್ಟಂ ತು ಭವತೀಭಿರುದಾಹೃತಮ್ ।
ಪರಿರಕ್ಷತ ಭದ್ರಂ ವಃ ಪ್ರಜಾಃ ಸಾಧು ನಮಸ್ಕೃತಾಃ ॥೨೦॥

ಸ್ಕಂದ– ನಿಮಗೆ ಪ್ರಜೆಗಳನ್ನು ಕೊಡುತ್ತೇನೆ. ಆದರೆ ನೀವು ಬೇಡಿದುದು ಮಾತ್ರ ಬಹಳ ಕಷ್ಟಕರವಾದುದು. ನನ್ನಿಂದ ನಮಸ್ಕರಿಸಲ್ಪಡುವ ನೀವು ನಿಮ್ಮ ಪ್ರಜೆಗಳನ್ನು ಚೆನ್ನಾಗಿ ರಕ್ಷಿಸಿಕೊಳ್ಳಿ.

ಮಾತರಃ

ಪರಿರಕ್ಷಾಮ ಭದ್ರಂ ತೇ ಪ್ರಜಾಃ ಸ್ಕಂದ ಯಥೇದಿಚ್ಛಸಿ ।
ತ್ವಯಾ ನೋ ರೋಚತೇ ಸ್ಕಂದ ಸಹವಾಸಶ್ಚಿರಂ ಪ್ರಭೋ ॥೨೧॥

ಮಾತೆಯರು– ಸ್ಕಂದನೇ, ನೀನು ಬಯಸಿದಂತೆ ನಮ್ಮ ಪ್ರಜೆಗಳನ್ನು ನಾವು ಚೆನ್ನಾಗಿ ರಕ್ಷಿಸುತ್ತೇವೆ. ನಿನಗೆ ಮಂಗಳವಾಗಲಿ. ಸ್ಕಂದನೇ, ಪ್ರಭುವೇ, ನಾವು ನಿನ್ನ ಜೊತೆಯಲ್ಲಿ ಬಹುಕಾಲ ಇರಬೇಕೆಂದು ಇಷ್ಟಪಡುತ್ತೇವೆ.

ಸ್ಕಂದಃ

ಯಾವತ್ ಷೋಡಶ ವರ್ಷಾಣಿ ಭವಂತಿ ತರುಣಾಃ ಪ್ರಜಾಃ ।
ಪ್ರಬಾಧತ ಮನುಷ್ಯಾಣಾಂ ತಾವದ್ರೂಪೈಃ ಪೃಥಗ್ವಿಧೈಃ ॥೨೨॥

ಅಹಂ ಚ ವಃ ಪ್ರದಾಸ್ಯಾಮಿ ರೌದ್ರಮಾತ್ಮಾನಮವ್ಯಯಮ್ ।
ಪರಮಂ ತೇನ ಸಹಿತಾಃ ಸುಖಿಂ ವತ್ಸ್ಯಥ ಪೂಜಿತಾಃ ॥೨೩॥

ಸ್ಕಂದ– ತರುಣರಾದ ಮನುಷ್ಯ ಪ್ರಜೆಗಳಿಗೆ ಹದಿನಾರು ವರ್ಷಗಳಾಗುವವರೆಗೆ ನೀವು ಅನೇಕ ವಿಧವಾದ ರೂಪಗಳನ್ನು ತೆಗೆದುಕೊಂಡು ಅವರನ್ನು ಬಾಧಿಸಿ. ನಾನು ನನ್ನದೇ ಒಂದು ಶಾಶ್ವತವಾದ ಘೋರವಾದ ರೂಪವನ್ನು ನಿಮಗೆ ಕೊಡುವೆನು. ಆ ರೂಪದ ಜೊತೆಯಲ್ಲಿ ಪೂಜಿತರಾಗಿ ನೀವು ಸುಖವಾಗಿ ವಾಸಮಾಡಿ.

ಮಾರ್ಕಂಡೇಯಃ

ತತಃ ಶರೀರಾತ್ ಸ್ಕಂದಸ್ಯ ಪುರುಷಃ ಪಾವಕಪ್ರಭಃ ।
ಭೋಕ್ತುಂ ಪ್ರಜಾಃ ಸ ಮರ್ತ್ಯಾನಾಂ ನಿಷ್ಪಪಾತ ಮಹಾಪ್ರಭಃ ॥೨೪॥

ಮಾರ್ಕಂಡೇಯ– ಆಗ ಸ್ಕಂದನ ಶರೀರದಿಂದ ಅಗ್ನಿಯ ಕಾಂತಿಯುಳ್ಳ ಒಬ್ಬ ಪುರುಷನು ಮಹಾಪ್ರಭೆಯುಳ್ಳವನು ಮನುಷ್ಯರ ಪ್ರಜೆಗಳನ್ನು ತಿನ್ನಲು ಹೊರಗೆ ಬಂದನು.

ಅಪತತ್ ಸಹಸಾ ಭೂಮೌ ವಿಸಂಜ್ಞೋಽಥ ಕ್ಷುಧಾಽರ್ದಿತಃ ।
ಸ್ಕಂದೇನ ಸೋಽಭ್ಯನುಜ್ಞಾತೋ ರೌದ್ರರೂಪೋಽಭವದ್ ಗ್ರಹಃ ॥೨೫॥

ಅವನು ಹಸಿವಿನಿಂದ ಬಳಲಿ ಪ್ರಜ್ಞಾಶೂನ್ಯನಾಗಿ ಇದ್ದಕ್ಕಿದ್ದಂತೆಯೇ ಭೂಮಿಯ ಮೇಲೆ ಬಿದ್ದನು. ಅನಂತರ ಸ್ಕಂದನ ಅನುಮತಿಯನ್ನು ಪಡೆದು ಅವನೊಂದು ಘೋರರೂಪದ ಗ್ರಹವಾದನು.

ಸ್ಕಂದಾಪಸ್ಮಾರಮಿತ್ಯಾಹುರ್ಗ್ರಹಂ ತಂ ದ್ವಿಜಸತ್ತಮಾಃ ।
ವಿನತಾ ತು ಮಹಾರೌದ್ರಾ ಕಥ್ಯತೇ ಶಕುನಿರ್ಗ್ರಹಃ ॥೨೬॥

ದ್ವಿಜಶ್ರೇಷ್ಠರು ಆ ಗ್ರಹವನ್ನು ಸ್ಕಂದಾಪಸ್ಮಾರಗ್ರಹ ಎಂದು ಕರೆಯುತ್ತಾರೆ. ಮಹಾಭಯಂಕರಳಾದ ವಿನತೆಯನ್ನು ಶಕುನಿಗ್ರಹ ಎಂದು ಕರೆಯುತ್ತಾರೆ.

ಪೂತನಾಂ ರಾಕ್ಷಸೀಂ ಪ್ರಾಹುಸ್ತಂ ವಿದ್ಯಾತ್ ಪೂತನಾಗ್ರಹಮ್ ।
ಕಷ್ಟಾ ದಾರುಣರೂಪೇಣ ಘೋರರೂಪಾ ನಿಶಾಚರೀ ॥೨೭॥

ಪೂತನಿಯನ್ನು ರಾಕ್ಷಸಿ ಎಂದು ಹೇಳುತ್ತಾರೆ. ಅವಳನ್ನು ಪೂತನಾಗ್ರಹವೆಂದು ತಿಳಿಯಬೇಕು. ಅವಳು ಕಷ್ಟಕರವಾದ ದಾರುಣವಾದ ಘೋರರೂಪವನ್ನು ಧರಿಸಿದ ರಾಕ್ಷಸಿ.

ಪಿಶಾಚೀ ದಾರುಣಾಕಾರಾ ಕಥ್ಯತೇ ಶೀತಪೂತನಾ ।
ಗರ್ಭಾನ್ ಸಾ ಮಾನುಷೀಣಾಂ ತು ಹರತೇ ಘೋರದರ್ಶನಾ ॥೨೮॥

ದಾರುಣಾಕಾರವನ್ನು ಹೊಂದಿದ ಶೀತಪೂತನಾ ಎಂಬ ಇನ್ನೊಬ್ಬ ಪಿಶಾಚಿ ಇದ್ದಾಳೆ. ನೋಡುವುದಕ್ಕೆ ಘೋರವಾಗಿರುವ ಅವಳು ಮನುಷ್ಯಸ್ತ್ರೀಯರ ಗರ್ಭವನ್ನು ಅಪಹರಿಸುತ್ತಾಳೆ.

ಅದಿತಿಂ ರೇವತೀಂ ಪ್ರಾಹುರ್ಗ್ರಹಸ್ತಸ್ಯಾಸ್ತು ರೈವತಃ ।
ಸೋಽಪಿ ಬಾಲಾನ್ ಮಹಾಘೋರೋ ಬಾಧತೇ ವೈ ಮಹಾಪ್ರಭಃ ॥

ಅದಿತಿಗ್ರಹವನ್ನು ರೇವತಿ ಎಂದು ಕರೆಯುತ್ತಾರೆ. ಅವಳ ಮಗನು ರೈವತಗ್ರಹ. ಆ ಮಹಾಘೋರನಾದ ರೈವತನೂ ಸಹ ಮಹಾಕಾಂತಿಯನ್ನು ಹೊಂದಿದವನಾಗಿ ಬಾಲಕರನ್ನು ಬಾಧಿಸುತ್ತಾನೆ.

ದೈತ್ಯಾನಾಂ ಯಾ ದಿತಿರ್ಮಾತಾ ತಾಮಾಹುರ್ಮುಖಮಂಡಿಕಾಮ್ ।
ಅತ್ಯರ್ಥಂ ಶಿಶುಮಾಂಸೇನ ಸಂಪ್ರಹೃಷ್ಟಾ ದುರಾಸದಾ ॥೩೦॥

ದೈತ್ಯರ ಮಾತೆಯಾದ ದಿತಿಯಾವಳಿದ್ದಾಳೋ ಅದೇ ಹೆಸರನ್ನು ಧರಿಸಿದ ಸ್ಕಂದ ಪರಿವಾರದವಳೊಬ್ಬಳಿದ್ದಾಳೆ. ಅವಳನ್ನು ಮುಖಮಂಡಿಕಾ ಎಂದು ಕರೆಯುತ್ತಾರೆ. ದುರಾಸದಳಾದ ಅವಳು ಶಿಶುಗಳ ಮಾಂಸದಿಂದ ಬಹಳ ಸಂತೋಷವನ್ನು ಪಡುವವಳು.

ಕುಮಾರಾಶ್ಚ ಕುಮಾರ್ಯಶ್ಚ ಯೇ ಪ್ರೋಕ್ತಾಃ ಸ್ಕಂದಸಂಭವಾಃ ।
ತೇಽಪಿ ಗರ್ಭಭುಜಃ ಸರ್ವೇ ಕೌರವ್ಯ ಸುಮಹಾಗ್ರಹಾಃ ॥೩೧॥

ಎಲೈ ಕೌರವ್ಯನೇ, ಸ್ಕಂದನ ಶರೀರದಿಂದ ಉಂಟಾದ ಕುಮಾರರು ಮತ್ತು ಕುಮಾರಿಯರನ್ನು ಏನು ಹೇಳಿದೆನೋ ಅವರೆಲ್ಲರೂ ಗರ್ಭವನ್ನು ತಿನ್ನುವಂತಹ ಕೆಟ್ಟ ಮಹಾಗ್ರಹಗಳು.

ತಾಸಾಮೇವ ತು ಪತ್ನೀನಾಂ ಪತಯಸ್ತೇ ಪ್ರಕೀರ್ತಿತಾಃ ।
ಆಜಾಯಮಾನಾನ್ ಗೃಹ್ಣಂತಿ ಬಾಲಕಾನ್ ರೌದ್ರಕರ್ಮಿಣಃ ॥೩೨॥

ಆ ಕುಮಾರರೆಲ್ಲರೂ ಆ ಕುಮಾರಿಯರ ಪತಿಗಳೆಂದು ಹೇಳುತ್ತಾರೆ. ಘೋರಕರ್ಮಿಗಳಾದ ಅವರು ಮಕ್ಕಳು ಹುಟ್ಟುತ್ತಿರುವಾಗಲೇ ಅವರನ್ನು ಹಿಡಿದುಕೊಳ್ಳುತ್ತಾರೆ.

ಗವಾಂ ಮಾತಾ ತು ಯಾ ಪ್ರಾಜ್ಞೈಃ ಕಥ್ಯತೇ ಸುರಭಿರ್ನೃಪ ।
ಶಕುನಿಸ್ತಾಮಥಾರುಹ್ಯ ಸಹ ಭುಂಕ್ತೇ ಶಿಶೂನ್ ಭುವಿ ॥೩೩॥

ಗೋವುಗಳ ಮಾತೆಯಾದ ಯಾವ ಸುರಭಿಯು ಪ್ರಾಜ್ಞರಿಂದ ಹೇಳಲ್ಪಡುತ್ತದೆಯೋ ಅದೇ ನಾಮವನ್ನು ಧರಿಸಿದ ಸ್ಕಂದ ಪರಿವಾರದ ಒಂದು ಪಿಶಾಚಿ ಇದೆ. ಶಕುನಿ ಎಂಬ ಪಿಶಾಚನು ಅವಳನ್ನು ಏರಿ ಅವಳ ಜೊತೆಯಲ್ಲಿ ಭೂಮಿಯಲ್ಲಿ ಶಿಶುಗಳನ್ನು ತಿನ್ನುತ್ತಾನೆ.

ಸರಮಾ ನಾಮ ಯಾ ಮಾತಾ ಶುನಾಂ ದೇವೀ ಜನಾಧಿಪ ।
ಸಾऽಪಿ ಗರ್ಭಾನ್ ಸಮಾದತ್ತೇ ಮಾನುಷೀಣಾಂ ಸದೈವ ಹಿ ॥೩೪॥

ಎಲೈ ಜನಾಧಿಪನೇ, ಸರಮಾ ಎಂಬ ಸಾರಮೇಯಗಳ ಮಾತೆಯು ದೇವಲೋಕದಲ್ಲಿ ಇರುವಳಷ್ಟೆ? ಅದೇ ಹೆಸರಿನ ಸ್ಕಂದ ಪರಿವಾರಕ್ಕೆ ಸೇರಿದ ಒಬ್ಬ ಪಿಶಾಚಿಯು ಮನುಷ್ಯ ಸ್ತ್ರೀಯರ ಗರ್ಭವನ್ನು ಯಾವಾಗಲೂ ತೆಗೆದುಕೊಂಡು ಹೋಗಿ ತಿನ್ನುತ್ತಾಳೆ.

ಪಾದಪಾನಾಂ ಚ ಯಾ ಮಾತಾ ಕರಂಜನಿಲಯಾ ಹಿ ಸಾ ।
ವರದಾ ಸಾ ಹಿ ಸೌಮ್ಯಾ ಚ ನಿತ್ಯಂ ಭೂತಾನುಕಂಪಿನೀ ॥೩೫॥

ವೃಕ್ಷಗಳ ತಾಯಿ ಯಾರು ಇದ್ದಾಳೆಯೋ ಅವಳು ಕರಂಜ ವೃಕ್ಷದಲ್ಲಿ ಇರುತ್ತಾಳೆ. ಅವಳು ದನುವಿನ ಸಮಾನನಾಮವನ್ನು ಹೊಂದಿದವಳು. ಅವಳು ಸೌಮ್ಯಳಾದವಳು ಮತ್ತು ವರವನ್ನು ಕೊಡುವವಳು ಮತ್ತು ಪ್ರಾಣಿಗಳಲ್ಲಿ ಅನುಕಂಪೆ ಉಳ್ಳವಳು.

ಕರಂಜೇ ತಾಂ ನಮಸ್ಯಂತಿ ತಸ್ಮಾತ್ತುತ್ರಾರ್ಥಿನೋ ನರಾಃ ।
ಇಮೇ ತ್ವಷ್ಟಾದಶಾನ್ಯೇ ವೈ ಗ್ರಹಾ ಮಾಂಸಮಧುಪ್ರಿಯಾಃ ॥೩೬॥

ಆದ್ದರಿಂದ ಪುತ್ರಾರ್ಥಿಗಳಾದ ಮನುಷ್ಯರು ಕರಂಜವೃಕ್ಷದಲ್ಲಿ ಅವಳಿಗೆ ನಮಸ್ಕಾರವನ್ನು ಮಾಡುತ್ತಾರೆ. ಇವು ಒಟ್ಟು ಹದಿನೆಂಟು ಗ್ರಹಗಳು. ಮಾಂಸಮದ್ಯ ಪ್ರಿಯವಾದ ಬೇರೆ ಗ್ರಹಗಳೂ ಇವೆ (ಆರುಜನ ಮಾತೆಯರು, ಶಕುನಿ-ಐರಾವತ ಎಂಬ ಎರಡು ಪುರುಷಗ್ರಹ, ಇವು ಎಂಟು. ಸ್ಕಂದನ ಕುಮಾರಿಯರು ಐದು, ಕದ್ರು ಮೊದಲಾದ ಕುಮಾರರು ಐದು, ಹೀಗೆ ಒಟ್ಟು ಹದಿನೆಂಟು. ಇವರೆಲ್ಲರೂ ಮದ್ಯಮಾಂಸಪ್ರಿಯರಾದ ಲೋಕೋಪದ್ರವಕಾರಿಗಳು).

ದ್ವಿಪಂಚರಾತ್ರಂ ತಿಷ್ಠಂತಿ ಸತತಂ ಸೂತಿಕಾಗೃಹೇ ॥೩೭॥

ಕದ್ರೂಃ ಸೂಕ್ಷ್ಮವಪುರ್ಭೂತ್ವಾ ಗರ್ಭಿಣೀಂ ಪ್ರವಿಶೇತ್ ತದಾ ।
ಭುಂಕ್ತೇ ಸಾ ತತ್ರ ತಂ ಗರ್ಭಂ ಸಾ ತು ನಾಗಂ ಪ್ರಸೂಯತೇ ॥೩೮॥

ಸೂತಿಕಾಗೃಹದಲ್ಲಿ ಈ ಹದಿನೆಂಟು ಗ್ರಹಗಳು ಹತ್ತುದಿನಗಳವರೆಗೆ ಯಾವಾಗಲೂ ಇರುತ್ತವೆ. ಕದ್ರೂ ಎಂಬ ಸ್ಕಂದ ಕುಮಾರಿಯು ಸೂಕ್ಷ್ಮವಾದ ಶರೀರವನ್ನು ಧರಿಸಿ ಗರ್ಭಿಣಿಯನ್ನು ಯಾವಾಗ ಪ್ರವೇಶಿಸುತ್ತಾಳೆಯೋ ಆಗ ಅವಳು ಆ ಗರ್ಭವನ್ನು ತಿನ್ನುತ್ತಾಳೆ. ಮತ್ತು ಆ ಗರ್ಭಿಣಿಯು ಸರ್ಪವನ್ನು ಪ್ರಸವಿಸುತ್ತಾಳೆ.

ಗಂಧರ್ವಾಣಾಂ ತು ಯಾ ಮಾತಾ ಸಾ ಗರ್ಭಂ ಗೃಹ್ಯ ಗಚ್ಛತಿ ।
ಅಜ್ಞಾತಹರಿಣೀ ಯಾ ತು ಸಾ ಗರ್ಭಂ ವಿಶತಿ ಪ್ರಭೋ ।
ತತೋ ವಿಲೀನಗರ್ಭಾ ಸಾ ಮಾನುಷೀ ಭುವಿ ದೃಶ್ಯತೇ ॥೩೯.೧॥

ಗಂಧರ್ವರ ಮಾತೆಯ ಸಮಾನನಾಮವುಳ್ಳ ಇನ್ನೊಂದು ಹೆಣ್ಣುಗ್ರಹವಿದೆ. ಅವಳು ಯಾರಿಗೂ ಗೊತ್ತಾಗದಂತೆ ಗರ್ಭವನ್ನು ತೆಗೆದುಕೊಂಡು ಹೋಗುವವಳು. ಅವಳು ಗರ್ಭವನ್ನು ಪ್ರವೇಶಮಾಡಿ ತೆಗೆದುಕೊಂಡು ಹೋಗುತ್ತಾಳೆ. ಅನಂತರ ಮನುಷ್ಯರ ಗರ್ಭವು ವಿಲೀನವಾಯಿತು ಎಂದು ಲೋಕದಲ್ಲಿ ಕಂಡುಬರುತ್ತದೆ.

ಯಾ ಜನಿತ್ರೀ ತ್ವಪ್ಸರಸಾಂ ಗರ್ಭಮಾಸ್ತೇ ಪ್ರಗೃಹ್ಯ ಸಾ ।
ಉಪನಷ್ಟಂ ತತೋ ಗರ್ಭಂ ಕಥಯಂತಿ ಮನೀಷಿಣಃ ॥೩೯॥

ಅಪ್ಸರೆಯರ ತಾಯಿಯ ನಾಮವುಳ್ಳ ಒಂದು ಸ್ತ್ರೀಗ್ರಹವು ಗರ್ಭವನ್ನು ಹಿಡಿದುಕೊಂಡು ಒಳಗೇ ಕುಳಿತಿರುತ್ತದೆ. ಆಗ ಜ್ಞಾನಿಗಳು ಗರ್ಭವು ಒಳಗೇ ನಷ್ಟವಾಯಿತು ಎಂದು ಹೇಳುತ್ತಾರೆ.

ಲೋಹಿತಸ್ಯೋದಧೇಃ ಕನ್ಯಾ ಧಾತ್ರೀ ಸ್ಕಂದಸ್ಯ ಸಾ ಸ್ಮೃತಾ ।
ಲೋಹಿತಾಯನಿರಿತ್ಯೇವಂ ಕದಂಬೇ ಸಾ ಹಿ ಪೂಜ್ಯತೇ ॥೪೦॥

ಲೋಹಿತ ಸಮುದ್ರನ ಕನ್ಯೆಯಾದ ಸ್ಕಂದನ ಧಾತ್ರಿಯಾದ ಯಾವ ಗ್ರಹವಿದೆಯೋ ಅವಳನ್ನು ಲೋಹಿತಾಯನಿ ಎಂದು ಕರೆಯುತ್ತಾರೆ. ಅವಳು ಕದಂಬ ವೃಕ್ಷದಲ್ಲಿ ಪೂಜಿಸಲ್ಪಡುತ್ತಾಳೆ.

ಪುರುಷೇಷು ಯಥಾ ರುದ್ರಸ್ತಥಾऽऽರ್ಯಾ ಪ್ರಮದಾಸ್ವಪಿ ।
ಆರ್ಯಾ ಮಾತಾ ಕುಮಾರಸ್ಯ ಪೃಥಕ್ಕಾಮಾರ್ಥಮಿಜ್ಯತೇ ॥೪೧॥

ಪುರುಷರಿಗೆ ಹೇಗೆ ರುದ್ರನು ಇಷ್ಟಾರ್ಥಪ್ರದನೋ ಹಾಗೆ ಸ್ತ್ರೀಯರಿಗೂ ಸ್ಕಂದನ ತಾಯಿಯಾದ ಆರ್ಯೆಯು ಇಷ್ಟಾರ್ಥಪ್ರದಳು. ತಮ್ಮ ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಅವಳನ್ನು ಪೂಜಿಸುತ್ತಾರೆ.

ಏವಮೇತೇ ಕುಮಾರಾಣಾಂ ಮಯಾ ಪ್ರೋಕ್ತಾ ಮಹಾಗ್ರಹಾಃ ।
ಯಾವತ್ ಷೋಡಶ ವರ್ಷಾಣಿ ಶಿಶೂನಾಂ ಹ್ಯಶಿವಾಸ್ತದಾ ॥೪೨॥

ಹೀಗೆ ನಾನು ಕುಮಾರನ ಪರಿವಾರಕ್ಕೆ ಸೇರಿದ ಈ ಮಹಾಗ್ರಹಗಳನ್ನು ಹೇಳಿದ್ದೇನೆ. ಈ ಗ್ರಹಗಳೆಲ್ಲವೂ ಹದಿನಾರು ವರ್ಷವಾಗುವವರೆಗೆ ಮಕ್ಕಳಿಗೆ ಅಮಂಗಲಪ್ರದವಾದವುಗಳು.

ಯೇ ಚ ಮಾತೃಗಣಾಃ ಪ್ರೋಕ್ತಾಃ ಪುರುಷಾಶ್ಚೈವ ಯೇ ಗ್ರಹಾಃ ।
ಸರ್ವೇ ಸ್ಕಂದಗ್ರಹಾ ನಾಮ ಜ್ಞೇಯಾ ನಿತ್ಯಂ ಶರೀರಿಭಿಃ ॥೪೩॥

ಯಾವ ಮಾತೃಗಣಗಳನ್ನು ಹೇಳಿದ್ದೇನೆಯೋ ಮತ್ತು ಯಾವ ಪುರುಷಗ್ರಹಗಳನ್ನು ಹೇಳಿದ್ದೇನೆಯೋ ಅವೆಲ್ಲವನ್ನೂ ಮನುಷ್ಯರು ಸ್ಕಂದಗ್ರಹಗಳೆಂದೇ ತಿಳಿಯಬೇಕು.

ತೇಷಾಂ ಪ್ರಶಮನಂ ಕಾರ್ಯಂ ಸ್ನಾನಂ ಧೂಪಮಥಾರ್ಚನಮ್ ।
ಬಲಿಕರ್ಮೋಪಹಾರಾಶ್ಚ ಸ್ಕಂದಸ್ಯೇಜ್ಯಾ ವಿಶೇಷತಃ ॥೪೪॥

ಅವುಗಳನ್ನು ಅಭಿಷೇಕ, ಧೂಪ, ಅರ್ಚನೆ, ಅಂಜನ, ನೈವೇದ್ಯ ಮತ್ತು ಉಪಹಾರಗಳಿಂದ ಪೂಜಿಸಿ ಅವುಗಳನ್ನು ಶಮನಗೊಳಿಸಬೇಕು. ಅವುಗಳ ಪೂಜೆಯೇ ವಿಶೇಷವಾಗಿ ಸ್ಕಂದನ ಪೂಜೆ.

ಏವಮಭ್ಯರ್ಚಿತಾಃ ಸರ್ವೇ ಪ್ರಯಚ್ಛಂತಿ ಶುಭಂ ನೃಣಾಮ್ ।
ಆಯುರ್ವೀರ್ಯಂ ಚ ರಾಜೇಂದ್ರ ಸಮ್ಯಕ್‌ಪೂಜಾನಮಸ್ಕೃತಾಃ ॥೪೫॥

ಎಲೈ ರಾಜೇಂದ್ರನೇ, ಹೀಗೆ ಚೆನ್ನಾಗಿ ಪೂಜೆಯನ್ನು ಮಾಡಿ ನಮಸ್ಕರಿಸಿದರೆ ಆ ಎಲ್ಲಾ ಗ್ರಹಗಳು ಮನುಷ್ಯರಿಗೆ ಆಯುಸ್ಸು, ವೀರ್ಯ ಮೊದಲಾದ ಶುಭಫಲ ಕೊಡುತ್ತವೆ.

ಊರ್ಧ್ವಂ ತು ಷೋಡಶಾದ್ ವರ್ಷಾದ್ ಯೇ ಭವಂತಿ ಗ್ರಹಾ ನೃಣಾಮ್।
ತಾನಹಂ ಸಂಪ್ರವಕ್ಷ್ಯಾಮಿ ನಮಸ್ಕೃತ್ಯ ಮಹೇಶ್ವರಮ್ ॥೪೬॥

ಹದಿನಾರುವರ್ಷಗಳು ಕಳೆದ ಮೇಲೆ ಮನುಷ್ಯರಿಗೆ ಯಾವ ಗ್ರಹವು ಉಂಟಾಗುತ್ತವೆಯೋ ಅವುಗಳನ್ನು ನಾನು ಮಹೇಶ್ವರನಿಗೆ ನಮಸ್ಕಾರವನ್ನು ಮಾಡಿ ಹೇಳುವೆನು.

ಯಃ ಪಶ್ಯತಿ ನರೋ ದೇವಾನ್‌ಜಾಗ್ರದ್ವಾ ಶಯಿತೋಽಪಿ ವಾ ।
ಉನ್ಮಾದ್ಯತಿ ಸ ತು ಕ್ಷಿಪ್ರಂ ತಂ ತು ದೇವಗ್ರಹಂ ವಿದುಃ ॥೪೭॥

ಯಾವ ಮನುಷ್ಯರು ಜಾಗ್ರದವಸ್ಥೆಯಲ್ಲಾಗಲೀ ಅಥವಾ ಸ್ವಪ್ನಾವಸ್ಥೆಯಲ್ಲಾಗಲೀ ದೇವತೆಯನ್ನು ನೋಡಿ ಕ್ಷಿಪ್ರವಾಗಿ ಹುಚ್ಚನ್ನು ಹೊಂದುತ್ತಾನೆಯೋ ಅದನ್ನು ದೇವಗ್ರಹವೆಂದು ಕರೆಯುತ್ತಾನೆ.

ಆಸೀನಶ್ಚ ಶಯಾನಶ್ಚ ಯಃ ಪಶ್ಯತಿ ನರಃ ಪಿತೄನ್ ।
ಉನ್ಮಾದ್ಯತಿ ಸ ತು ಕ್ಷಿಪ್ರಂ ಸ ಜ್ಞೇಯಸ್ತು ಪಿತೃಗ್ರಹಃ ॥೪೮॥

ಕುಳಿತಿರುವಾಗ ಅಥವಾ ಮಲಗಿರುವಾಗ ಯಾವ ಮನುಷ್ಯನು (ಮೃತರಾದ) ಪಿತೃಗಳನ್ನು ನೋಡಿ ಶೀಘ್ರದಲ್ಲಿ ಹುಚ್ಚನ್ನು ಹೊಂದುತ್ತಾನೆಯೋ ಆ ಗ್ರಹವನ್ನು ಪಿತೃಗ್ರಹ ಎಂದು ಕರೆಯುತ್ತಾರೆ.

ಅವಮನ್ಯತಿ ಯಃ ಸಿದ್ಧಾನ್‌ಕ್ರುಧ್ಯತ್ಯಭಿಶ ಪತ್ಯಪಿ ।
ಉನ್ಮಾದ್ಯತಿ ಸ ತು ಕ್ಷಿಪ್ರಂ ಜ್ಞೇಯಃ ಸಿದ್ಧಗ್ರಹಸ್ತು ಸಃ ॥೪೯॥

ಯಾರು ಸಿದ್ಧಪುರುಷರನ್ನು ಅವಮಾನ ಮಾಡಿ ಅವರ ಮೇಲೆ ಕೋಪಗೊಂಡು ಅವರನ್ನು ಶಪಿಸುತ್ತಾನೆಯೋ ಮತ್ತು ಸದ್ಯದಲ್ಲಿಯೇ ಉನ್ಮಾದವನ್ನು ಹೊಂದುತ್ತಾನೆಯೋ ಅದಕ್ಕೆ ಕಾರಣವಾದ ಗ್ರಹಕ್ಕೆ ಸಿದ್ಧಗ್ರಹ ಎಂದು ಹೆಸರು.

ಯಸ್ಯ ದೋಷೈಃ ಪ್ರಕುಪಿತಂ ಚಿತ್ತಂ ಮುಹ್ಯತಿ ದೇಹಿನಃ ॥೪೯.೧॥

ಆ ಸಿದ್ಧಗ್ರಹದ ಕೋಪಕ್ಕೆ ತುತ್ತಾದ ಮನುಷ್ಯನಿಗೆ ಆ ದೋಷದಿಂದ ಚಿತ್ತಭ್ರಾಂತಿ ಉಂಟಾಗುತ್ತದೆ.

ಉಪಘ್ರಾತಿ ಚ ಯೋ ಗಂಧಾನ್ರಸಾಂಶ್ಚಾಪಿ ಪೃಥಗ್ವಿಧಾನ್ ।
ಉನ್ಮಾದ್ಯತಿ ಸ ತು ಕ್ಷಿಪ್ರಂ ಸ ಜ್ಞೇಯೋ ರಾಕ್ಷಸೋ ಗ್ರಹಃ ॥೫೦॥

ಯಾವನು ಅನೇಕ ವಿಧವಾದ ಗಂಧಗಳನ್ನು ಆಘ್ರಾಣಿಸಿ ರಸಗಳನ್ನು ಸೇವಿಸಿ ತಕ್ಷಣದಲ್ಲಿ ಉನ್ಮಾದವನ್ನು ಹೊಂದುತ್ತಾನೆಯೋ ಅದಕ್ಕೆ ಕಾರಣವಾದ ಗ್ರಹವನ್ನು ರಾಕ್ಷಸಗ್ರಹ ಎಂದು ತಿಳಿಯಬೇಕು.

ಗಂಧರ್ವಾಶ್ಚಾಪಿ ಯಂ ದಿವ್ಯಾಃ ಸಂವಿಶಂತಿ ನರಂ ಭುವಿ ।
ಉನ್ಮಾದ್ಯತಿ ಸ ತು ಕ್ಷಿಪ್ರಂ ಗ್ರಹೋ ಗಾಂಧರ್ವ ಏವ ಸಃ ॥೫೧॥

ದೇವಲೋಕದ ಗಂಧರ್ವರು ಭೂಮಿಯಲ್ಲಿರುವ ಮನುಷ್ಯರನ್ನು ಪ್ರವೇಶ ಮಾಡುತ್ತಾರೆ. ಅನಂತರ ಮನುಷ್ಯರು ಕ್ಷಿಪ್ರವಾಗಿ ಉನ್ಮಾದವನ್ನು ಹೊಂದುತ್ತಾನೆ. ಅದನ್ನು ಗಾಂಧರ್ವಗ್ರಹ ಎಂದು ತಿಳಿಯಬೇಕು.

ಅಧಿರೋಹಂತಿ ಯಂ ನಿತ್ಯಂ ಪಿಶಾಚಾಃ ಪುರುಷಂ ಕ್ವಚಿತ್ ।
ಉನ್ಮಾದ್ಯತಿ ಸ ತು ಕ್ಷಿಪ್ರಂ ಗ್ರಹಃ ಪೈಶಾಚ ಏವ ಸಃ ॥೫೨॥

ಪಿಶಾಚಗಳು ನಿತ್ಯವೂ ಒಬ್ಬನ ಮೈಮೇಲೆ ಬಂದು ಅವನು ಉನ್ಮಾದಕ್ಕೆ ಒಳಗಾದರೆ ಅದನ್ನು ಪೈಶಾಚಗ್ರಹ ಎಂದು ಕರೆಯಬೇಕು.

ಆವಿಶಂತಿ ಚ ಯಂ ಯಕ್ಷಾಃ ಪುರುಷಂ ಕಾಲಪರ್ಯಯೇ ।
ಉನ್ಮಾದ್ಯತಿ ಸ ತು ಕ್ಷಿಪ್ರಂ ಜ್ಞೇಯೋ ಯಕ್ಷಗ್ರಹಸ್ತು ಸಃ ॥೫೨.೧॥

ಯಕ್ಷರು ಪುರುಷರನ್ನು ಪ್ರವೇಶಿಸಿ ಪುರುಷನಿಗೆ ಶೀಘ್ರವಾಗಿ ಉನ್ಮಾದ ಉಂಟಾದರೆ ಅದನ್ನು ಯಕ್ಷಗ್ರಹವೆಂದು ತಿಳಿಯಬೇಕು.

ಯಸ್ಯ ದೋಷೈಃ ಪ್ರಕೃಪಿತಂ ಚಿತ್ತಂ ಮುಹ್ಯತಿ ದೇಹಿನಃ ।
ಉನ್ಮಾದ್ಯತಿ ಸ ತು ಕ್ಷಿಪ್ರಂ ಸಾಧನಂ ತಸ್ಯ ಶಾಸ್ತ್ರತಃ ॥೫೩॥

ಯಾವ ಮನುಷ್ಯನು ದೋಷಗಳಿಗೆ ಒಳಗಾಗಿ ಕೋಪವನ್ನು ಮತ್ತು ಚಿತ್ತಭ್ರಮೆಯನ್ನು ಹೊಂದಿ ಕ್ಷಿಪ್ರವಾಗಿ ಉನ್ಮಾದವನ್ನು ಹೊಂದುತ್ತಾನೆಯೋ ಅದಕ್ಕೆ ದುಷ್ಟಪಿಶಾಚಿಯು ಕಾರಣ ಎಂದು ಶಾಸ್ತ್ರದಿಂದ ತಿಳಿಯಬೇಕು.

ವೈಕ್ಲವ್ಯಾಚ್ಚ ಭಯಾಚ್ಚೈವ ಘೋರಾಣಾಂ ಚಾಪಿ ದರ್ಶನಾತ್ ।
ಉನ್ಮಾದ್ಯತಿ ಸ ತು ಕ್ಷಿಪ್ರಂ ಸತ್ವಂ ತಸ್ಯ ತು ಸಾಧನಮ್ ॥೫೪॥

ಗಾಬರಿಯಿಂದಲೂ, ಭಯದಿಂದಲೂ, ಘೋರಪ್ರಾಣಿಗಳ ದರ್ಶನದಿಂದಲೂ ಉನ್ಮಾದ ಉಂಟಾದರೆ ಅದಕ್ಕೆ ಕಾರಣವಾದುದು ಒಂದು ದುಷ್ಟಪಿಶಾಚಿ ಎಂದು ತಿಳಿಯಬೇಕು. ಧೈರ್ಯವೇ ಅದಕ್ಕೆ ಪರಿಹಾರ.

ಕಶ್ಚಿತ್ ಕ್ರೀಡಿತುಕಾಮೋ ವೈ ಭೋಕ್ತುಕಾಮಸ್ತಥಾऽಪರಃ ।
ಅಭಿಕಾಮಸ್ತಥೈವಾನ್ಯ ಇತ್ಯೇಷ ತ್ರಿವಿಧೋ ಗ್ರಹಃ ॥೫೫॥

ಕೆಲವು ಗ್ರಹಗಳು ಆಟವಾಡಲು ಬಯಸುತ್ತವೆ. ಕೆಲವು ಊಟಮಾಡಲು ಬಯಸುತ್ತವೆ. ಇನ್ನು ಕೆಲವು ಕಂಡದ್ದನ್ನೆಲ್ಲಾ ಬಯಸುತ್ತವೆ. ಹೀಗೆ ಗ್ರಹಗಳು ಮೂರುವಿಧ.

ಯಾವತ್ಸಪ್ತತಿವರ್ಷಾಣಿ ಭವಂತ್ಯೇತೇ ಗ್ರಹಾ ನೃಣಾಮ್ ।
ಅತಃ ಪರಂ ದೇಹಿನಾಂ ತು ಗ್ರಹತುಲ್ಯೋ ಭವೇಜ್ಜ್ವರಃ ॥೫೬॥

ಮನುಷ್ಯರಿಗೆ ಎಪ್ಪತ್ತು ವರ್ಷಗಳಾಗುವವರೆಗೆ ಈ ಗ್ರಹಗಳು ಪ್ರಾಪ್ತವಾಗುತ್ತವೆ. ಅಲ್ಲಿಂದ ಮುಂದಕ್ಕೆ ಗ್ರಹದಂತೆ ಪೀಡಿಸುವ ಜ್ವರವು ಮನುಷ್ಯರಿಗೆ ಉಂಟಾಗುತ್ತದೆ.

ಅಪ್ರಕೀರ್ಣೇಂದ್ರಿಯಂ ದಾಂತಂ ಶುಚಿಂ ನಿತ್ಯಮತಂದ್ರಿತಮ್ ।
ಆಸ್ತಿಕಂ ಶ್ರದ್ದಧಾನಂ ಚ ವರ್ಜಯಂತಿ ಸದಾ ಗ್ರಹಾಃ ॥೫೭॥

ಯಾವ ಮನುಷ್ಯನು ತನ್ನ ಉಪಸ್ಥೇಂದ್ರಿಯ ಶುದ್ಧಿಯನ್ನು ಹೊಂದಿ ದಾಂತನೂ, ಶುಚಿಯೂ, ನಿತ್ಯವೂ ಜಾಗರೂಕನೂ, ಆಸ್ತಿಕನೂ ಮತ್ತು ಶ್ರದ್ಧಾಳುವೂ ಆಗಿದ್ದಾನೆಯೋ ಅಂತಹ ಮನುಷ್ಯನನ್ನು ಎಲ್ಲಾ ಗ್ರಹಗಳು ಯಾವಾಗಲೂ ವರ್ಜಿಸುತ್ತವೆ.

ಇತ್ಯೇಷ ತೇ ಗ್ರಹೋದ್ದೇಶೋ ಮಾನುಷಾಣಾಂ ಪ್ರಕೀರ್ತಿತಃ ।
ನ ಸ್ಪೃಶಂತಿ ಗ್ರಹಾ ಭಕ್ತಾನ್ ನರಾನ್ ದೇವೇ ಮಹೇಶ್ವರೇ ॥೫೮॥

ಹೀಗೆ ನಾನು ನಿನಗೆ ಮನುಷ್ಯರಿಗೆ ಗ್ರಹಗಳಿಂದ ಉಂಟಾಗುವ ಬಾಧೆಗಳನ್ನೆಲ್ಲಾ ತಿಳಿಸಿದ್ದೇನೆ. ಆದರೆ ಯಾರು ಮಹೇಶ್ವರನಲ್ಲಿ ಭಕ್ತಿಯನ್ನು ಹೊಂದಿದ್ದಾರೆಯೋ ಅಂತಹ ಭಕ್ತರನ್ನು ಗ್ರಹಗಳು ಮುಟ್ಟುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕೋನವಿಂಶತ್ಯಧಿಕದ್ವಿಶತಶತತಮೋऽಧ್ಯಾಯಃ ॥
॥ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಸ್ಕಾಂದೋಪಾಖ್ಯಾನೇ ಸಪ್ತಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಹತ್ತೊಂಬತ್ತನೆಯ
ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಇಪ್ಪತ್ತನೆಯ ಅಧ್ಯಾಯ

ಸ್ಕಂದನಿಂದ ಸ್ವಾಹಾದೇವಿಗೆ ಅಭೀಷ್ಟದಾನ.
ಬ್ರಹ್ಮದೇವರಿಂದ ಸ್ಕಂದನ ಜನ್ಮವೃತ್ತಾಂತ ಕಥನ.

ಮಾರ್ಕಂಡೇಯಃ

ಯದಾ ಸ್ಕಂದೇನ ಮಾತೄಣಾಮೇವಮೇತತ್ ಪ್ರಿಯಂ ಕೃತಮ್ ।
ಅಥೈನಮಬ್ರವೀತ್ ಸ್ವಾಹಾ ಮಮ ಪುತ್ರಸ್ತ್ವಮೌರಸಃ ॥೧॥

ಇಚ್ಛಾಮ್ಯಹಂ ತ್ವಯಾ ದತ್ತಾಂ ಪ್ರೀತಿಂ ಪರಮದುರ್ಲಭಾಮ್ ।
ತಾಮಮ್ರವೀತ್ ತತಃ ಸ್ಕಂದಃ ಪ್ರೀತಿಮಿಚ್ಛಸಿ ಕೀದೃಶೀಮ್ ॥೨॥

ಮಾರ್ಕಂಡೇಯ– ಯಾವಾಗ ಸ್ಕಂದನು ಮಾತೆಯರಿಗೆ ಈ ರೀತಿಯಲ್ಲಿ ಪ್ರಿಯವನ್ನು ಮಾಡಿದನೋ ಆಗ ಸ್ವಾಹಾದೇವಿಯು ಅವನನ್ನು ಕುರಿತು ನೀನು ನನ್ನ ಔರಸ ಪುತ್ರ. ನೀನು ಕೊಡುವ ಪರಮ ದುರ್ಲಭವಾದ ಪ್ರೀತಿಯನ್ನು ಅಪೇಕ್ಷಿಸುತ್ತೇನೆ ಎಂದು ಹೇಳಿದಳು. ಸ್ಕಂದನು ಅವಳನ್ನು ಕುರಿತು ನೀನು ಎಂತಹ ಪ್ರೀತಿಯನ್ನು ಇಚ್ಛಿಸುತ್ತೀಯೆ ಎಂದು ಕೇಳಿದನು.

ಸ್ವಾಹಾ

ದಕ್ಷಸ್ಯಾಹಂ ಪ್ರಿಯಾ ಕನ್ಯಾ ಸ್ವಾಹಾ ನಾಮ ಮಹಾಭುಜ ।
ಬಾಲ್ಯಾತ್ ಪ್ರಭೃತಿ ನಿತ್ಯಂ ಚ ಜಾತಕಾಮಾ ಹುತಾಶನೇ ॥೩॥

ನ ಸ ಮಾಂ ಕಾಮಿನೀಂ ಪುತ್ರ ಸಮ್ಯಗ್ ಜಾನಾತಿ ಪಾವಕಃ ।
ಇಚ್ಛಾಮಿ ಶಾಶ್ವತಂ ವಾಸಂ ವಸ್ತುಂ ಪುತ್ರ ಸಹಾಗ್ನಿನಾ ॥೪॥

ಸ್ವಾಹಾ– ಮಹಾಭುಜನೇ, ನಾನು ದಕ್ಷಪ್ರಜಾಪತಿಯ ಪ್ರೀತಿಯ ಮಗಳು. ನನ್ನ ಹೆಸರು ಸ್ವಾಹಾ ಎಂದು. ನಾನು ಬಾಲ್ಯದಿಂದಲೂ ಯಾವಾಗಲೂ ಅಗ್ನಿಯನ್ನೇ ಕಾಮಿಸುತ್ತಿದ್ದೇನೆ. ಎಲೈ ಪುತ್ರನೇ, ಅಗ್ನಿಯು ನಾನು ಅವನನ್ನು ಕಾಮಿಸುತ್ತಿದ್ದೇನೆ ಎಂಬ ವಿಷಯವನ್ನು ಸರಿಯಾಗಿ ತಿಳಿದಿಲ್ಲ. ಪುತ್ರನೇ, ನಾನು ಅಗ್ನಿಯ ಜೊತೆಯಲ್ಲಿ ಶಾಶ್ವತವಾಗಿ ವಾಸವನ್ನು ಮಾಡಲು ಬಯಸುತ್ತೇನೆ.

ಸ್ಕಂದಃ

ಹವ್ಯಂ ಕವ್ಯಂ ಚ ಯತ್ಕಿಂಚಿದ್ ದ್ವಿಜಾನಾಂ ಮಂತ್ರಸಂಸ್ಕೃತಮ್ ।
ಹೋಷ್ಯಂತ್ಯಗ್ನೌ ಸದಾ ದೇವಿ ಸ್ವಾಹೇತ್ಯುಕ್ತ್ವಾ ಸಮುದ್ಯತಮ್ ॥೫॥

ಅದ್ಯಪ್ರಭೃತಿ ದಾಸ್ಯಂತಿ ಸುವೃತ್ತಾಃ ಸತ್ಪಥೇ ಸ್ಥಿತಾಃ ।
ಏವಮಗ್ನಿಸ್ತ್ವಯಾ ಸಾರ್ಧಂ ಸದಾ ವತ್ಸ್ಯತಿ ಶೋಭತೇ ॥೬॥

ಸ್ಕಂದ– ಎಲೌ ದೇವಿಯೇ, ಬ್ರಾಹ್ಮಣರು ಮಂತ್ರಸಂಯುತವಾಗಿ ಯಾವ ಹವ್ಯಕವ್ಯಗಳನ್ನು ಅಗ್ನಿಯಲ್ಲಿ ಹೋಮಿಸಲು ತೆಗೆದುಕೊಳ್ಳುತ್ತಾರೆಯೋ ಅದನ್ನು ಒಳ್ಳೆಯ ನಡತೆಯುಳ್ಳ ಅವರು ಸ್ವಾಹಾ ಎಂದು ಹೇಳಿಯೇ ಈ ದಿನದಿಂದ ಕೊಡುವರು. ಶೋಭನೆಯೇ, ಈ ರೀತಿಯಲ್ಲಿ ಅಗ್ನಿಯು ಸದಾ ನಿನ್ನ ಜೊತೆಯಲ್ಲಿ ವಾಸಮಾಡುವನು.

ಮಾರ್ಕಂಡೇಯಃ

ಏವಮುಕ್ತಾ ತತಃ ಸ್ವಾಹಾ ತುಷ್ಟಾ ಸ್ಕಂದೇನ ಪೂಜಿತಾ ।
ಪಾವಕೇನ ಸಮಾಯುಕ್ತಾ ಭರ್ತ್ರಾ ಸ್ಕಂದಮಪೂಜಯತ್ ।

ತತೋ ಬ್ರಹ್ಮಾ ಮಹಾಸೇನಂ ಪ್ರಜಾಪತಿರಥಾಬ್ರವೀತ್ ॥೭॥

ಮಾರ್ಕಂಡೇಯ– ಹೀಗೆ ಸ್ಕಂದನಿಂದ ಹೇಳಲ್ಪಟ್ಟು ಪೂಜಿಸಲ್ಪಟ್ಟ ಸ್ವಾಹಾದೇವಿಯು ಪತಿಯಾದ ಅಗ್ನಿಯಿಂದ ಸಹಿತಳಾಗಿ ಸ್ಕಂದನನ್ನು ಪೂಜಿಸಿದಳು. ಅನಂತರ ಪ್ರಜಾಪತಿಗಳಾದ ಬ್ರಹ್ಮದೇವರು ಮಹಾಸೇನನನ್ನು ಕುರಿತು ಹೇಳಿದರು.

ಅಭಿಗಚ್ಛ ಮಹಾದೇವಂ ಪಿತರಂ ತ್ರಿಪುರಾರ್ದನಮ್ ।
ರುದ್ರೇಣಾಗ್ನಿಂ ಸಮಾವಿಶ್ಯ ಸ್ವಾಹಾಮಾವಿಶ್ಯ ಚೋಮಯಾ ॥೮॥

ಹಿತಾರ್ಥಂ ಸರ್ವಲೋಕಾನಾಂ ಜಾತಸ್ತ್ವಮಪರಾಜಿತಃ ॥೯॥

ನಿನ್ನ ತಂದೆಯಾದ ತ್ರಿಪುರಾರ್ದನನಾದ ಮಹಾದೇವನ ಬಳಿಗೆ ಹೋಗು. ರುದ್ರನು ಅಗ್ನಿಯನ್ನು ಮತ್ತು ಉಮಾದೇವಿಯು ಸ್ವಾಹಾದೇವಿಯನ್ನು ಆವೇಶ ಮಾಡಿ ಸರ್ವಲೋಕಗಳ ಹಿತಕ್ಕಾಗಿ ಅಪರಾಜಿತನಾದ ನಿನ್ನನ್ನು ಪಡೆದಿದ್ದಾರೆ.

ಉಮಾಯೋನ್ಯಾಂ ಚ ರುದ್ರೇಣ ಶುಕ್ರಂ ಸಿಕ್ತಂ ಮಹಾತ್ಮನಾ ।
ಅಸ್ಮಿನ್ ಗಿರೌ ನಿಪತಿತಂ ಮಿಂಜಿಕಾಮಿಂಜಿಕಂ ಯತಃ ॥೧೦॥

ಮಿಥುನಂ ವೈ ಮಹಾಭಾಗ ತತ್ರ ತದ್ ರುದ್ರಸಂಭವಮ್ ।
ಸಂಭೂತಂ ಲೋಹಿತೋದೇ ತು ಶುಕ್ರಶೇಷಮವಾಪತತ್ ॥೧೧॥

ಉಮಾಯೋನಿಯಲ್ಲಿ ಮಹಾತ್ಮನಾದ ರುದ್ರನು ಸೇಕಮಾಡಿದ ವೀರ್ಯವು ಈ ಪರ್ವತದಲ್ಲಿ ಬಿದ್ದಿತು. ಅದರಿಂದ ಮಿಂಜಿಕಾಮಿಂಜಿಕ ಎಂಬ ಅವಳಿ ಮಕ್ಕಳು ಜನಿಸಿದರು. ಎಲೈ ಮಹಾಭಾಗನೇ, ಆ ಮಿಥುನವು ರುದ್ರದೇವರಿಂದ ಜನಿಸಿದುದು. ಲೋಹಿತ ಸಮುದ್ರದಲ್ಲಿ ವೀರ್ಯದ ಇನ್ನೊಂದು ಭಾಗವು ಬಿದ್ದಿತು.

ಸೂರ್ಯರಶ್ಮಿಷು ಚಾಪ್ಯನ್ಯದನ್ಯಚ್ಚಾಪ್ಯಪತದ್ ಭುವಿ ।
ಆಸಕ್ತಮನ್ಯದ್ ವೃಕ್ಷೇಷು ತದೇವಂ ಪಂಚಧಾऽಪತತ್ ॥೧೨॥

ತತ್ಕೈತೇ ವಿವಿಧಾಕಾರಾ ಗಣಾ ಜ್ಞೇಯಾ ಮನೀಷಿಭಿಃ ।
ತವ ಪಾರಿಷದಾ ಘೋರಾ ಯ ಏತೇ ಪಿಶಿತಾಶನಾಃ ॥೧೩॥

ಇನ್ನೊಂದು ಭಾಗವು ಸೂರ್ಯರಶ್ಮಿಗಳಲ್ಲಿಯೂ, ಇನ್ನೊಂದು ಭಾಗವು ಭೂಮಿಯಲ್ಲಿಯೂ ಬಿದ್ದಿತು. ಇನ್ನೊಂದು ಭಾಗವು ವೃಕ್ಷಗಳಲ್ಲಿಯೇ ನಿಂತಿತು. ಹೀಗೆ ರುದ್ರವೀರ್ಯವು ಐದುಭಾಗವಾಗಿ ಬಿದ್ದಿತು. ಆ ಐದುಭಾಗಗಳಿಂದ ನಿನ್ನ ಮಾಂಸಾಶನರಾದ ಘೋರವಾದ ಪಾರಿಶದರ ಗಣಗಳು ಹುಟ್ಟಿದವೆಂದು ವಿವೇಕಿಗಳು ತಿಳಿಯಬೇಕು.

ಮಾರ್ಕಂಡೇಯಃ

ಏವಮಸ್ತ್ವಿತಿ ಚಾಪ್ಯುಕ್ತ್ವಾ ಮಹಾಸೇನೋ ಮಹೇಶ್ವರಮ್ ।
ಅಪೂಜಯದಮೇಯಾತ್ಮಾ ಪಿತರಂ ಪಿತೃವತ್ಸಲಃ ॥೧೪॥

ಮಾರ್ಕಂಡೇಯ– ಅಮೇಯಾತ್ಮನೂ, ಪಿತೃವತ್ಸಲನೂ ಆದ ಮಹಾಸೇನನು ಹಾಗೆಯೇ ಆಗಲಿ ಎಂದು ಹೇಳಿ ತಂದೆಯಾದ ಮಹೇಶ್ವರನನ್ನು ಪೂಜಿಸಿದನು.

ಅರ್ಕಪುಷ್ಪೈಸ್ತು ತೇ ಪಂಚ ಗಣಾಃ ಪೂಜ್ಯಾ ಧನಾರ್ಥಿಭಿಃ ।
ವ್ಯಾಧಿಪ್ರಶಮನಾರ್ಥಂ ಚ ತೇಷಾಂ ಪೂಜಾಂ ಸಮಾಚರೇತ್ ॥೧೫॥

ಧನಾರ್ಥಿಯಾದವರು ಈ ಐದುಗಣಗಳನ್ನು ಅರ್ಕಪುಷ್ಪಗಳಿಂದ ಪೂಜಿಸಬೇಕು. ವ್ಯಾಧಿಪ್ರಶಮನಕ್ಕಾಗಿಯೂ ಕೂಡಿ ಆ ಗಣಗಳನ್ನು ಪೂಜಿಸಬೇಕು.

ಮಿಂಜಿಕಾಮಿಂಜಿಕಂ ಚೈವ ಮಿಥುನಂ ರುದ್ರಸಂಭವಮ್ ।
ನಮಸ್ಕಾರ್ಯಂ ಸದೈವೇಹ ಬಾಲಾನಾಂ ಹಿತಮಿಚ್ಛತಾ ॥೧೬॥

ಬಾಲಕರಿಗೆ ಹಿತವನ್ನು ಇಚ್ಛಿಸುವವರು, ರುದ್ರನಿಂದ ಜನಿಸಿದ ಮಿಂಜಿಕಾಮಿಂಜಿಕ ಮಿಥುನಕ್ಕೆ ಯಾವಾಗಲೂ ನಮಸ್ಕಾರವನ್ನು ಮಾಡಬೇಕು.

ಸ್ತ್ರಿಯೋ ಮಾನುಷಮಾಂಸಾದಾ ವೃದ್ಧಿಕಾ ನಾಮ ನಾಮತಃ ।
ವೃಕ್ಷೇಷು ಜಾತಾಸ್ತಾ ನಾರ್ಯೋ ನಮಸ್ಕಾರ್ಯಾಃ ಪ್ರಜಾರ್ಥಿಭಿಃ ॥೧೭॥

ವೃಕ್ಷದಲ್ಲಿ ಬಿದ್ದ ರುದ್ರದೇವರ ವೀರ್ಯದಿಂದ ಮನುಷ್ಯಮಾಂಸವನ್ನು ತಿನ್ನುವ ವೃದ್ಧಿಕಾ ಎಂಬ ಹೆಸರಿನ ಸ್ತ್ರೀಯರು ಜನಿಸಿದರು. ಪ್ರಜೆಗಳನ್ನು ಅಪೇಕ್ಷಿಸುವವರು ಅವರಿಗೆ ನಮಸ್ಕಾರ ಮಾಡಬೇಕು.

ಏವಮೇತೇ ಪಿಶಾಚಾನಾಮಸಂಖ್ಯೇಯಾ ಗಣಾಃ ಸ್ಮೃತಾಃ ।
ಘಂಟಾಯಾಃ ಸಪತಾಕಾಯಾಃ ಶೃಣು ಮೇ ಸಂಭವಂ ನೃಪ ॥೧೮॥

ಎಲೈ ರಾಜನೇ, ಹೀಗೆ ಈ ಪಿಶಾಚಿಗಳ ಗಣಗಳು ಅಸಂಖ್ಯೇಯವಾಗಿ ಇವೆ ಎಂದು ಹೇಳಲ್ಪಡುತ್ತವೆ. ಘಂಟೆ ಮತ್ತು ಪತಾಕಗಳು ದೊರಕಿದ ರೀತಿಯನ್ನು ಹೇಳುತ್ತೇನೆ ಕೇಳು.

ಐರಾವತಸ್ಯ ಘಂಟೇ ದ್ವೇ ವೈಜಯಂತ್ಯಾವಿತಿ ಶ್ರುತೇ ।
ಗುಹಸ್ಯ ತೇ ಸ್ವಯಂ ದತ್ತೇ ಕ್ರಮೇಣಾನಾಯ್ಯ ಧೀಮತಾ ॥೧೯॥

ಐರಾವತದ ಎರಡು ಘಂಟೆಗಳು ವೈಜಯಂತಿ ಎಂದು ಪ್ರಸಿದ್ಧವಾದವು. ಮೇಧಾವಿಯಾದ ಇಂದ್ರನು ತಾನೇ ಅದನ್ನು ತರಿಸಿ ಕ್ರಮವಾಗಿ ಗುಹನಿಗೆ ಕೊಟ್ಟನು.

ಏಕಾ ತತ್ರ ವಿಶಾಖಸ್ಯ ಘಂಟಾ ಸ್ಕಂದಸ್ಯ ಚಾಪರಾ ।
ಪತಾಕಾ ಕಾರ್ತ್ತಿಕೇಯಸ್ಯ ವಿಶಾಖಸ್ಯ ಚ ಲೋಹಿತಾ ॥೨೦॥

ಅದರಲ್ಲಿ ಒಂದು ಘಂಟೆಯು ವಿಶಾಖನಿಗೂ, ಇನ್ನೊಂದು ಘಂಟೆಯು ಸ್ಕಂದನಿಗೂ ಸೇರಿತು. ಸ್ಕಂದ ಮತ್ತು ವಿಶಾಖ ಇಬ್ಬರ ಪತಾಕೆಗಳೂ ಕೆಂಪುಬಣ್ಣದವುಗಳೇ ಆಗಿವೆ.

ಯಾನಿ ಕ್ರೀಡನಕಾನ್ಯಸ್ಯ ದೇವೈರ್ದತ್ತಾನಿ ವೈ ತದಾ ।
ತೈರೇವ ರಮತೇ ದೇವೋ ಮಹಾಸೇನೋ ಮಹಾಬಲಃ ॥೨೧॥

ಆಗ ದೇವತೆಗಳು ಯಾವ ಕ್ರೀಡಾವಸ್ತುಗಳನ್ನು ತಂದುಕೊಟ್ಟರೋ ಮಹಾಬಲನೂ, ದೇವನೂ ಆದ ಮಹಾಸೇನನು ಅವುಗಳಿಂದಲೇ ಕ್ರೀಡಿಸುತ್ತಾನೆ.

ಸ ಸಂವೃತಃ ಪಿಶಾಚಾನಾಂ ಗಣೈರ್ದೇವಗಣೈಸ್ತಥಾ ।
ಶುಶುಭೇ ಕಾಂಚನೇ ಶೈಲೇ ದೀಪ್ಯಮಾನಃ ಶ್ರಿಯಾ ವೃತಃ ॥೨೨॥

ಅವನು ಸ್ವರ್ಣಮಯವಾದ ಪರ್ವತದಲ್ಲಿ ಪಿಶಾಚಿಗಳ ಗಣಗಳಿಂದಲೂ, ದೇವತೆಗಳ ಗಣಗಳಿಂದಲೂ ಸುತ್ತುವರಿಯಲ್ಪಟ್ಟು ಕಾಂತಿಯಿಂದ ಕೂಡಿದವನಾಗಿ ಕಂಗೊಳಿಸಿದನು.

ತೇನ ವೀರೇಣ ಶುಶುಭೇ ಸ ಶೈಲಃ ಶುಭಕಾನನಃ ।
ಆದಿತ್ಯೇನೇವಾಂಶುಮತಾ ಮಂದರಶ್ಚಾರುಕಂದರಃ ॥೨೩॥

ಆ ಶೈಲ ಮತ್ತು ಶುಭವಾದ ವನವು ಆ ವೀರನಿಂದ ಅನೇಕ ಗುಹೆಗಳುಳ್ಳ ಮಂದರಪರ್ವತವು ಸೂರ್ಯನಿಂದ ಶೋಭಿಸುವಂತೆ ಶೋಭಿಸಿತು.

ಸಂತಾನಕವನೈಃ ಫುಲ್ಲೈಃ ಕರವೀರವನೈರಪಿ ।
ಪಾರಿಜಾತವನೈಶ್ಚೈವ ಜಪಾಶೋಕವನೈಸ್ತಥಾ ॥೨೪॥

ಕದಂಬತರುಷಂಡೈಶ್ಚ ದಿವ್ಯೈರ್ಮೃಗಗಣೈರಪಿ ।
ದಿವ್ಯೈಃ ಪಕ್ಷಿಗಣೈಶ್ಚೈವ ಶುಶುಭೇ ಶ್ವೇತಪರ್ವತಃ ।

ಸಂತಾನ ವೃಕ್ಷಗಳ ವನದಿಂದಲೂ, ಹೂ ಅರಳಿದ ಕರವೀರ ಪುಷ್ಪಗಳ ವನದಿಂದಲೂ, ಪಾರಿಜಾತ ವನಗಳಿಂದಲೂ, ಜಪಾಶೋಕ ವನಗಳಿಂದಲೂ, ಕದಂಬ ವೃಕ್ಷಗಳಿಂದಲೂ, ದಿವ್ಯವಾದ ಮೃಗಗಣಗಳಿಂದಲೂ, ದಿವ್ಯವಾದ ಪಕ್ಷಿಗಣಗಳಿಂದಲೂ ಆ ಶ್ವೇತಪರ್ವತವು ಶೋಭಿಸಿತು.

ತತ್ರ ದೇವಗಣಾಃ ಸರ್ವೇ ಸರ್ವೇ ದೇವರ್ಷಯಸ್ತಥಾ ।
ಮೇಘತೂರ್ಯರವಾಶ್ಚೈವ ಕ್ಷುಬ್ಧೋದಧಿಸಮಸ್ವನಾಃ ।

ಅಲ್ಲಿ ಎಲ್ಲಾ ದೇವಗಣಗಳೂ ಮತ್ತು ಎಲ್ಲಾ ದೇವರ್ಷಿಗಳೂ ಇದ್ದರು. ಮೇಘ ಮತ್ತು ವಾದ್ಯಗಳ ನಾದವು ಕ್ಷೋಭೆಗೊಂಡ ಸಮುದ್ರದ ನಾದಕ್ಕೆ ಸಮನಾಗಿದ್ದಿತು.

ತತ್ರ ದಿವ್ಯಾಶ್ಚ ಗಂಧರ್ವಾ ನೃತ್ಯಂತ್ಯಪ್ಸರಸಾಂ ಗಣಾಃ ।
ಹೃಷ್ಟಾನಾಂ ತತ್ರ ಭೂತಾನಾಂ ಶ್ರೂಯತೇ ನಿನದೋ ಮಹಾನ್ ॥೨೫॥

ಅಲ್ಲಿ ದಿವ್ಯರಾದ ಗಂಧರ್ವರು ಮತ್ತು ನರ್ತನವನ್ನು ಮಾಡುವ ಅಪ್ಸರೆಯರ ಗಣಗಳೂ ಇದೆ. ಸಂತೋಷದಿಂದ ಪ್ರಾಣಿಗಳು ಕೇಕೆ ಹಾಕುವ ದೊಡ್ಡ ನಾದವು ಅಲ್ಲಿ ಕೇಳಿಬರುತ್ತದೆ.

ಏವಂ ಸೇಂದ್ರಂ ಜಗತ್ಸರ್ವಂ ಶ್ವೇತಪರ್ವತಸಂಸ್ಥಿತಮ್ ।
ಪ್ರಹೃಷ್ಟಂ ಪ್ರೇಕ್ಷತೇ ಸ್ಕಂದಂ ನ ಚ ಗ್ಲಾಯತಿ ದರ್ಶನಾತ್ ॥೨೬॥

ಹೀಗೆ ಇಂದ್ರನಿಂದ ಕೂಡಿದ ಎಲ್ಲ ಜಗತ್ತೂ ಶ್ವೇತಪರ್ವತದಲ್ಲಿ ನೆಲೆಸಿ ಸಂತೋಷಗೊಂಡ ಸ್ಕಂದನನ್ನು ಯಾವಾಗಲೂ ನೋಡುತ್ತದೆ. ಅವನ ದರ್ಶನದಿಂದ (ದರ್ಶನದಲ್ಲಿ) ಅವರಿಗೆ ಆಯಾಸವೇ ಉಂಟಾಗುವುದಿಲ್ಲ.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ವಿಂಶತ್ಯಧಿಕದ್ವಿಶತಶತತಮೋऽಧ್ಯಾಯಃ ॥
॥ಇತಿ ಮಾರ್ಕಂಡೇಯಸಮಾಸ್ಯಾಪರ್ವಣಿ ಸ್ಕಾಂದೋಪಾಖ್ಯಾನೇ ಅಷ್ಟಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ತನೆಯ
ಅಧ್ಯಾಯ ಮುಗಿಯಿತು

★ ★ ★ ★

ಇನ್ನೂರ ಇಪ್ಪತ್ತೊಂದನೆಯ ಅಧ್ಯಾಯ

ಭದ್ರವಟಕ್ಕೆ ಪಾರ್ವತೀ ಸಹಿತನಾದ ರುದ್ರನ ಮತ್ತು ಉಳಿದ ದೇವತೆಗಳ ಆಗಮನ.

ಮಾರ್ಕಂಡೇಯಃ

ಯದಾऽಭಿಷಿಕ್ತೋ ಭಗವಾನ್ ಸೈನಾಪತ್ಯೇನ ಪಾವಕಿಃ ।
ತದಾ ಸಂಪ್ರಸ್ಥಿತಃ ಶ್ರೀಮಾನ್ ಹೃಷ್ಟೋ ಭದ್ರವಟಂ ಹರಃ ॥೧॥

ಮಾರ್ಕಂಡೇಯ– ಯಾವಾಗ ಪೂಜ್ಯನಾದ ಅಗ್ನಿಪುತ್ರನಾದ ಮಹಾಸೇನನು ಸೇನಾಪತ್ಯದಲ್ಲಿ ಅಭಿಷಿಕ್ತನಾದನೋ ಆಗ ಸಂಪದ್ಯುಕ್ತನಾದ ಶಂಕರನು ಸಂತೋಷದಿಂದ ಭದ್ರವಟಕ್ಕೆ ಹೊರಟನು.

ರಥೇನಾದಿತ್ಯವರ್ಣೇನ ಪಾರ್ವತ್ಯಾ ಸಹಿತಃ ಪ್ರಭುಃ ।
ಅನುಯಾತಃ ಸುರೈಃ ಸರ್ವೈಃ ಸಹಸ್ರಾಕ್ಷಪುರೋಗಮೈಃ ॥೨॥

ಆದಿತ್ಯವರ್ಣದ ರಥದಲ್ಲಿ ಕುಳಿತು ಪಾರ್ವತಿಯಿಂದ ಸಹಿತನಾದ ಆ ಪ್ರಭುವು ಇಂದ್ರ ಮೊದಲಾದ ಎಲ್ಲ ದೇವತೆಗಳಿಂದಲೂ ಹಿಂಬಾಲಿಸಲ್ಪಟ್ಟನು.

ಸಹಸ್ರಂ ತತ್ರ ಸಿಂಹಾನಾಂ ತಸ್ಮಿನ್ ಯುಕ್ತಂ ರಥೋತ್ತಮೇ ।
ಉತ್ಪಪಾತ ದಿವಂ ಶುಭ್ರಂ ಸೂತೇನಾಭಿಪ್ರಚೋದಿತಃ ॥೩॥

ಅವನ ಶ್ರೇಷ್ಠವಾದ ರಥದಲ್ಲಿ ಸಹಸ್ರಸಿಂಹಗಳು ಹೂಡಲ್ಪಟ್ಟಿದ್ದವು. ಸೂತನಿಂದ ಪ್ರಚೋದಿತವಾದ ಆ ಶುಭ್ರವಾದ ರಥವು ಆಕಾಶಕ್ಕೆ ಹಾರಿತು.

ತೇ ಪಿಬಂತ ಇವಾಕಾಶಂ ತ್ರಾಸಯಂತಶ್ಚರಾಚರಾನ್ ।
ಸಿಂಹಾ ನಭಸ್ಯಗಚ್ಛಂತ ನದಂತಶ್ಚಾರುಕೇಸರಾಃ ॥೪॥

ಆ ಮನೋಹರವಾದ ಕೇಸರಗಳಿಂದ ಕೂಡಿದ ಸಿಂಹಗಳು ಆಕಾಶವನ್ನು ಕುಡಿಯುವಂತೆ ಚರಾಚರ ಪ್ರಾಣಿಗಳನ್ನು ಹೆದರಿಸುತ್ತಾ ಆಕಾಶದಲ್ಲಿ ಹೊರಟವು.

ತಸ್ಮಿನ್ ರಥೇ ಪಶುಪತಿಃ ಸ್ಥಿತೋ ಭಾತ್ಯುಮಯಾ ಸಹ ।
ವಿದ್ಯುತಾ ಸಹಿತಃ ಸೂರ್ಯಃ ಸೇಂದ್ರಚಾಪೇ ಘನೇ ಯಥಾ ॥೫॥

ಆ ರಥದಲ್ಲಿ ಪಾರ್ವತಿಯ ಜೊತೆಯಲ್ಲಿ ಕುಳಿತ ಪಶುಪತಿಯು ವಿದ್ಯುತ್ತಿನಿಂದ ಸಹಿತವಾದ ಸೂರ್ಯನು ಕಾಮನಬಿಲ್ಲಿನಿಂದ ಕೂಡಿದ ಮೋಡದಲ್ಲಿ ಕಂಗೊಳಿಸುವಂತೆ ಕಂಗೊಳಿಸಿದನು.

ಅಗ್ರತಸ್ತಸ್ಯ ಭಗವಾನ್ ಧನೇಶೋ ಗುಹ್ಯಕೈಃ ಸಹ ।
ಆಸ್ಥಾಯ ರುಚಿರಂ ಯಾತಿ ಪುಷ್ಪಕಂ ನರವಾಹನಃ ॥೬॥

ನರವಾಹನನಾದ ಪೂಜ್ಯನಾದ ಕುಬೇರನು ಅವನ ಮುಂಭಾಗದಲ್ಲಿ ಸುಂದರವಾದ ಪುಷ್ಪಕವಿಮಾನವನ್ನೇರಿ ಗುಹ್ಯಕರ ಜೊತೆಯಲ್ಲಿ ಹೊರಟನು.

ಐರಾವತಂ ಸಮಾಸ್ಥಾಯ ಶಕ್ರಶ್ಚಾಪಿ ಸುರೈಃ ಸಹ ।
ಪೃಷ್ಠತೋऽನುಯಯೌ ಯಾಂತಂ ವರದಂ ವೃಷಭಧ್ವಜಮ್ ॥೭॥

ಇಂದ್ರನೂ ಸಹ ಐರಾವತವನ್ನೇರಿ ದೇವತೆಗಳ ಜೊತೆಯಲ್ಲಿ ವರದನೂ, ವೃಷಭಧ್ವಜನೂ ಆದ ಪ್ರಯಾಣಿಸುತ್ತಿದ್ದ ಶಂಕರನನ್ನು ಹಿಂಬಾಲಿಸಿದನು.

ಗುಹ್ಯಕೈರ್ಯಕ್ಷರಕ್ಷೋಭಿಃ ಸ್ರಗ್ವಿಭಿಃ ಸಮಲಂಕೃತಃ ।
ಯಾತ್ಯಮೋಘೋ ಮಹಾಯಕ್ಷೋ ದಕ್ಷಿಣಂ ಪಕ್ಷಮಾಸ್ಥಿತಃ ॥೮॥

ಗುಹ್ಯಕರಿಂದಲೂ, ಮಾಲೆಗಳನ್ನು ಧರಿಸಿ ಅಲಂಕೃತರಾದ ಯಕ್ಷರಕ್ಷ ರಾಕ್ಷಸರುಗಳಿಂದಲೂ ಕೂಡಿದವನಾಗಿ ಮಹಾಯಕ್ಷನಾದ ಅಮೋಘನು ಬಲಭಾಗದಲ್ಲಿ ಹೊರಟನು.

ತಸ್ಯ ದಕ್ಷಿಣತೋ ದೇವಾ ಮರುತಶ್ಚಿತ್ರಯೋಧಿನಃ ।
ಗಚ್ಛಂತಿ ವಸುಭಿಃ ಸಾರ್ಧಂ ಸರ್ವತಃ ಪರಿವಾರಿತಃ ।
ಘೋರೈರ್ವ್ಯಾಧಿಶತೈರ್ಯಾತಿ ಘೋರರೂಪವಪುಸ್ತದಾ ॥೯॥

ಅವನ ಬಲಭಾಗದಲ್ಲಿ ಚಿತ್ರಯೋಧಿಗಳಾದ ಮರುತ್ತುಗಳೂ, ವಸುಗಳ ಮತ್ತು ರುದ್ರರ ಜೊತೆಯಲ್ಲಿ ಸೇರಿ ಹೊರಟವು. ಘೋರರೂಪವನ್ನು ಧರಿಸಿದ ಯಮನು ಮೃತ್ಯುವಿನ ಜೊತೆಯಲ್ಲಿ ಘೋರವಾದ ನೂರಾರು ವ್ಯಾಧಿಗಳಿಂದ ಎಲ್ಲ ಕಡೆಯಲ್ಲಿಯೂ ಸುತ್ತುವರಿಯಲ್ಪಟ್ಟವನಾಗಿ ಹೊರಟನು.

ಯಮಸ್ಯ ಪೃಷ್ಠತಶ್ಚೈವ ಘೋರಸ್ತ್ರಿಶಿಖರಃ ಶಿತಃ ।
ವಿಜಯೋ ನಾಮ ರುದ್ರಸ್ಯ ಯಾತಿ ಶೂಲಃ ಸ್ವಲಂಕೃತಃ ॥೧೦॥

ಯಮನ ಹಿಂಭಾಗದಲ್ಲಿ ಘೋರವೂ, ಮೂರುಶಿಖರಗಳನ್ನುಳ್ಳದ್ದು, ಹರಿತವಾದದ್ದೂ ಮತ್ತು ಅಲಂಕೃತವಾದದ್ದೂ ಆದ ರುದ್ರನ ವಿಜಯನಾಮಕ ತ್ರಿಶೂಲವು ಹೊರಟಿತು.

ತಮುಗ್ರಪಾಶೋ ವರುಣೋ ಭಗವಾನ್ ಸಲಿಲೇಶ್ವರಃ ।
ಪರಿವಾರ್ಯ ಶನೈರ್ಯಾತಿ ಯಾದೋಭಿರ್ವಿವಿಧೈರ್ವೃತಃ ॥೧೧॥

ಆ ವಿಜಯ ತ್ರಿಶೂಲವನ್ನು ಸುತ್ತುವರಿದು ಉಗ್ರಪಾಶವನ್ನು ಧರಿಸಿದ ಸಲಿಲೇಶ್ವರನಾದ ಪೂಜ್ಯನಾದ ವರುಣನು ಜಲಚರಪ್ರಾಣಿಗಳಿಂದ ಆವೃತನಾಗಿ ನಿಧಾನವಾಗಿ ನಡೆದನು.

ಪೃಷ್ಠತೋ ವಿಜಯಸ್ಯಾಪಿ ಯಾತಿ ರುದ್ರಸ್ಯ ಪಟ್ಟ(ಟ್ಟ)ಸಃ ।
ಗದಾಮುಸಲಶಕ್ತ್ಯಾದ್ಯೈರ್ವರ್ಯತಃ ಪ್ರಹರಣೋತ್ತಮೈಃ ॥೧೨॥

ವಿಜಯನಾಮಕ ತ್ರಿಶೂಲದ ಹಿಂದೆ ಗದಾಮುಸಲಶಕ್ತಿ ಮೊದಲಾದ ಶ್ರೇಷ್ಠ ಆಯುಧಗಳಿಂದ ಸುತ್ತುವರಿಯಲ್ಪಟ್ಟ ರುದ್ರದೇವರ ಪಟ್ಟಸ ಆಯುಧವು ಹೊರಟಿತು.

ಪಟ್ಟಿಸಂ ತ್ವನ್ವಗಾದ್ ರಾಜನ್ ಶಸ್ತ್ರಂ ರೌದ್ರಂ ಮಹಾಬಲಮ್ ।
ಕಮಂಡಲುಶ್ಚಾಪ್ಯನು ತಂ ಮಹರ್ಷಿಗಣಸೇವಿತಮ್ ॥೧೩॥

ಎಲೈ ರಾಜನೇ, ಆ ಪಟ್ಟಸದ ಹಿಂದೆ ಮಹಾಬಲವುಳ್ಳ ರುದ್ರನ ಶಸ್ತ್ರವು (ಮಹಾಪ್ರಭೆಯುಳ್ಳ ರುದ್ರನ ಛತ್ರವು) ಮತ್ತು ಮಹರ್ಷಿಗಣ ಸೇವಿತವಾದ ಕಮಂಡಲವೂ ಹೊರಟಿತು.

ತಸ್ಯ ದಕ್ಷಿಣತೋ ಯಾತಿ ದಂಡೋ ಗಚ್ಛನ್ ಶ್ರಿಯಾ ವೃತಃ ।
ಭೃಗ್ವಂಗಿರೋಭಿಃ ಸಹಿತೋ ದೈವತೈಶ್ಚಾನುಪೂಜಿತಃ ॥೧೪॥

ಅದರ ಬಲಭಾಗದಲ್ಲಿ ಭೃಗು ಮತ್ತು ಅಂಗಿರ ಋಷಿಗಳಿಂದ ಸಹಿತವಾದ ಮತ್ತು ದೇವತೆಗಳಿಂದ ಪೂಜಿತವಾದ ಕಾಂತಿಯುಕ್ತವಾದ ದಂಡವು ಹೊರಟಿತು.

ಏಷಾಂ ತು ಪೃಷ್ಠತೋ ರುದ್ರೋ ವಿಮಲೇ ಸ್ಯಂದನೇ ಸ್ಥಿತಃ ।
ಯಾತಿ ಸಂಹರ್ಷಯನ್ ಸರ್ವಾಂಸ್ತೇಜಸಾ ತ್ರಿದಿವೌಕಸಃ ॥೧೫॥

ಇವುಗಳ ಹಿಂಭಾಗದಲ್ಲಿ ರುದ್ರನು ವಿಮಲವಾದ ರಥದಲ್ಲಿ ಕುಳಿತು ತನ್ನ ತೇಜಸ್ಸಿನಿಂದ ದೇವತೆಗಳಿಗೆ ಸಂತೋಷವನ್ನು ಉಂಟುಮಾಡುತ್ತಾ ಹೊರಟನು.

ಋಷಯಶ್ಚಾಪಿ ದೇವಾಶ್ಚ ಗಂಧರ್ವಾ ಭುಜಗಾಸ್ತಥಾ ।
ನದ್ಯೋ ಹ್ರದಾಃ ಸಮುದ್ರಾಶ್ಚ ತಥೈವಾಪ್ಸರಸಾಂ ಗಣಾಃ ॥೧೬॥

ನಕ್ಷತ್ರಾಣಿ ಗ್ರಹಾಶ್ಚೈವ ದೇವಾನಾಂ ಶಿಶವಶ್ಚ ಯೇ ।
ಸ್ತ್ರಿಯಶ್ಚ ವಿವಿಧಾಕಾರಾ ಯಾಂತಿ ರುದ್ರಸ್ಯ ಪೃಷ್ಠತಃ ॥೧೭॥

ಋಷಿಗಳೂ, ದೇವತೆಗಳೂ, ಗಂಧರ್ವರೂ, ಸರ್ಪಗಳೂ, ನದಿಗಳೂ, ಸರೋವರಗಳೂ, ಸಮುದ್ರಗಳೂ, ಅಪ್ಸರೆಯರಗಣಗಳೂ, ನಕ್ಷತ್ರಗಳೂ, ಗ್ರಹಗಳೂ, ದೇವತೆಗಳ ಮಕ್ಕಳೂ ಮತ್ತು ಸ್ತ್ರೀಯರೂ ವಿವಿಧಾಕಾರವನ್ನು ಧರಿಸಿ ರುದ್ರನ ಹಿಂದುಗಡೆ ನಡೆದರು.

ಸೃಜಂತ್ಯಃ ಪುಷ್ಪವರ್ಷಾಣಿ ಚಾರುರೂಪಾ ವರಾಂಗನಾಃ ।
ಪರ್ಜನ್ಯಶ್ಚಾಪ್ಯನುಯಯೌ ನಮಸ್ಕೃತ್ಯ ಪಿನಾಕಿನಮ್ ॥೧೮॥

ಸುಂದರಿಯರಾದ ವರಾಂಗನೆಯರು ಪುಷ್ಪವೃಷ್ಟಿಯನ್ನು ಮಾಡುತ್ತಾ ನಡೆದರು. ಪರ್ಜನ್ಯನೂ ಸಹ ರುದ್ರನಿಗೆ ನಮಸ್ಕಾರವನ್ನು ಮಾಡಿ ಹಿಂದೆ ನಡೆದನು.

ಛತ್ರಂ ಚ ಪಾಂಡರಂ ಸೋಮಸ್ತಸ್ಯ ಮೂರ್ಧ್ನ್ಯಧಾರಯತ್ ।
ಚಾಮರೇ ಚಾಪಿ ವಾಯುಶ್ಚ ಗೃಹೀತ್ವಾಽಗ್ನಿಶ್ಚ ಧಿಷ್ಠಿತೌ ॥೧೯॥

ಚಂದ್ರನು ಅವನ ತಲೆಯ ಮೇಲೆ ಶ್ವೇತಚ್ಛತ್ರವನ್ನು ಹಿಡಿದನು. ಅಗ್ನಿ ಮತ್ತು ವಾಯುಗಳು ಚಾಮರವನ್ನು ಹಿಡಿದು ಅವನ ಪಾರ್ಶ್ವಗಳಲ್ಲಿ ನಿಂತಿದ್ದರು.

ಶಕ್ರಶ್ಚ ಪೃಷ್ಠತಸ್ತಸ್ಯ ಯಾತಿ ರಾಜನ್ ಶ್ರಿಯಾ ವೃತಃ ।
ಸಹ ರಾಜರ್ಷಿಭಿಃ ಸರ್ವೈಃ ಸ್ತುವಾನೋ ವೃಷಕೇತನಮ್ ॥೨೦॥

ಎಲೈ ರಾಜನೇ, ಇಂದ್ರನೂ ಸಹ ಎಲ್ಲ ರಾಜರ್ಷಿಗಳಿಂದ ಕೂಡಿದವನಾಗಿ ಕಾಂತಿಯಿಂದ ಕಂಗೊಳಿಸುತ್ತಾ ವೃಷಧ್ವಜನಾದ ಶಂಕರನನ್ನು ಸ್ತೋತ್ರಮಾಡುತ್ತಾ ಅವನ ಹಿಂದೆ ನಡೆದನು.

ಗೌರೀ ವಿದ್ಯಾऽಥ ಗಾಂಧಾರೀ ಕೇಶಿನೀ ಮಿತ್ರಸಾಹ್ವಯಾ ।
ಸಾವಿತ್ರ್ಯಾ ಸಹ ಸರ್ವಾಸ್ತಾಃ ಪಾರ್ವತ್ಯಾ ಯಾಂತಿ ಪೃಷ್ಠತಃ ॥೨೧॥

ಗೌರೀ, ವಿದ್ಯಾ, ಗಾಂಧಾರೀ, ಕೇಶಿನೀ, ಮಿತ್ರಾ, ಸಾವಿತ್ರೀ ಮೊದಲಾದವರೆಲ್ಲರೂ ಪಾರ್ವತಿಯ ಹಿಂದೆ ನಡೆದರು.

ತತ್ರ ವಿದ್ಯಾಗಣಾಃ ಸರ್ವೇ ಯೇ ಕೇಚಿತ್ ಕವಿಭಿಃ ಕೃತಾಃ ।
ತಸ್ಯ ಕುರ್ವಂತಿ ವಚನಂ ಸೇಂದ್ರಾ ದೇವಾಶ್ಚಮೂಮುಖೇ ॥೨೨॥

ಅಲ್ಲಿ ಕೆಲವರು ಜ್ಞಾನಿಗಳು ಮಾಡಿದ ವಿದ್ಯಾಗಣಗಳೇನಿವೆಯೋ ಅವುಗಳನ್ನು ಇಂದ್ರ ಮೊದಲಾದ ದೇವತೆಗಳೆಲ್ಲರೂ ಸೇನಾಮುಖದಲ್ಲಿ ಪ್ರವಚನವನ್ನು ಮಾಡುತ್ತಿದ್ದರು.

ಸ್ವೇನ ಸ್ವೇನಾನುಯೋಗೇನ ಸರ್ವೇ ತೇऽನುಯಯುರ್ಹರಮ್ ।
ಗೃಹೀತ್ವಾ ತು ಪತಾಕಾಂ ವೈ ಯಾತ್ಯಸೌ ರಾಕ್ಷಸೋ ಗ್ರಹಃ ।
ವ್ಯಾಪೃತಸ್ತು ಶ್ಮಶಾನೇ ಯೋ ನಿತ್ಯಂ ರುದ್ರಸ್ಯ ವೈ ಸಖಾ ॥೨೩॥

ತಮ್ಮ ತಮ್ಮ ಅನುಚರರಿಂದ ಕೂಡಿ ಎಲ್ಲರೂ ರುದ್ರನ ಹಿಂದೆ ಹೊರಟರು. ರುದ್ರನ ಸ್ನೇಹಿತನಾಗಿ ನಿತ್ಯವೂ ಸ್ಮಶಾನ ಕಾರ್ಯಗಳಲ್ಲಿ ನಿರತವಾದ ರಾಕ್ಷಸ ಗ್ರಹವು ಪತಾಕೆಯನ್ನು ಹಿಡಿದುಕೊಂಡು ಹೊರಟಿತು.

ಪಿಂಗಲೋ ನಾಮ ಯಕ್ಷೇಂದ್ರೋ ಲೋಕಸ್ಯಾನಂದದಾಯಕಃ ।
ಏಭಿಶ್ಚ ಸಹಿತೋ ದೇವಸ್ತತ್ರ ಯಾತಿ ಯಥಾಸುಖಮ್ ॥೨೪॥

ಅಗ್ರತಃ ಪೃಷ್ಠತಶ್ಚೈವ ನ ಹಿ ತಸ್ಯ ಗತಿರ್ಧ್ರುವಾ ।

ಲೋಕಕ್ಕೆ ಆನಂದವನ್ನು ಕೊಡುವ ಪಿಂಗಲ ಎಂಬ ಯಕ್ಷೇಂದ್ರನೂ ಹೊರಟನು. ಇವರೆಲ್ಲರಿಂದ ಕೂಡಿದ ದೇವನಾದ ಶಂಕರನು ಭದ್ರವಟಕ್ಕೆ ಅನಾಯಾಸವಾಗಿ

ಪ್ರಯಾಣವನ್ನು ಬಯಸಿದನು. ರುದ್ರನ ಪರಿವಾರದ ಗಮನವು ಒಂದೇ ರೀತಿ ಇರಲಿಲ್ಲ. (ಕೆಲವು ಸಲ ಮುಂಭಾಗದಲ್ಲಿಯೂ, ಕೆಲವು ಸಲ ಹಿಂಭಾಗದಲ್ಲಿಯೂ, ಕೆಲವು ಸಲ ಪಾರ್ಶ್ವಗಳಲ್ಲಿಯೂ ಹೋಗುತ್ತಿತ್ತು).

ರುದ್ರಂ ಸತ್ಕರ್ಮಭಿರ್ಮರ್ತ್ಯಾಃ ಪೂಜಯಂತೀಹ ದೈವತಮ್ ॥೨೫॥

ಶಿವಮಿತ್ಯೇವ ಯಂ ಪ್ರಾಹುರೀಶಂ ರುದ್ರಂ ಪಿತಾಮಹಮ್ ॥೨೬॥

ಏವಂ ಸರ್ವೇ ಸುರಗಣಾಸ್ತದಾ ವೈ ಪ್ರೀತಮಾನಸಾಃ ।
ಭಾವೈಸ್ತು ವಿವಿಧಾಕಾರೈಃ ಪೂಜಯಂತಿ ಮಹೇಶ್ವರಮ್ ॥೨೭॥

ಭೂಮಿಯಲ್ಲಿ ಮನುಷ್ಯರು ಸತ್ಕರ್ಮಗಳಿಂದ ರುದ್ರದೇವರನ್ನು ಪೂಜಿಸುತ್ತಾರೆ. ಯಾವನನ್ನು ಶಿವನೆಂದೂ, ಈಶನೆಂದೂ, ರುದ್ರನೆಂದೂ, ಪಿತಾಮಹನೆಂದೂ ಹೇಳುತ್ತಾರೆಯೋ ಅಂತಹ ಮಹೇಶ್ವರನನ್ನು ಮನಸ್ಸಿನಲ್ಲಿ ಸಂತೋಷಗೊಂಡ ಎಲ್ಲಾ ಸುರಗಣಗಳೂ ವಿವಿಧಾಕಾರಗಳಿಂದ ಮತ್ತು ವಿವಿಧ ಭಾವನೆಗಳಿಂದ ಪೂಜಿಸಿದರು.

ದೇವಸೇನಾಪತಿಸ್ತ್ವೇವಂ ದೇವಸೇನಾಭಿರಾವೃತಃ ।
ಅನುಗಚ್ಛತಿ ದೇವೇಶಂ ಬ್ರಹ್ಮಣ್ಯಃ ಕೃತ್ತಿಕಾಸುತಃ ॥೨೮॥

ಈ ರೀತಿಯಲ್ಲಿ ದೇವಸೇನಾಪತಿಯಾದ ಬ್ರಾಹ್ಮಣ ವತ್ಸಲನಾದ ಕಾರ್ತಿಕೇಯನೂ ಸಹ ದೇವಸೇನೆಯಿಂದ ಪರಿವೃತನಾಗಿ ದೇವೇಶನಾದ ಶಂಕರನನ್ನು ಹಿಂಬಾಲಿಸಿದನು.

ಅಥಾಬ್ರವೀನ್ಮಹಾಸೇನಂ ಮಹಾದೇವೋ ಬೃಹದ್ವಚಃ ।
ಸಪ್ತಮಂ ಮಾರುತಸ್ಕಂಧಂ ರಕ್ಷ ನಿತ್ಯಮತಂದ್ರಿತಃ ॥೨೯॥

ಆಗ ಮಹಾದೇವನು ಮಹಾಸೇನನನ್ನು ಕುರಿತು ನೀನು ಎಚ್ಚರಿಕೆಯಿಂದ ಏಳನೆಯ ಮಾರುತ ಸ್ಕಂದವನ್ನು ರಕ್ಷಿಸು ಎಂಬ ದೊಡ್ಡ ಮಾತನ್ನು ಆಡಿದನು (ಅಷ್ಟದಿಕ್ಪಾಲಕರಲ್ಲಿ ಇರುವ ಎಂಟು ಸೇನಾಸಮುದಾಯಗಳಲ್ಲಿ ಈಶಾನ್ಯದಿಕ್ಕಿನ ದೇವಸಮುದಾಯವನ್ನು ತಾನೇ ರಕ್ಷಿಸುವುದರಿಂದ ಉಳಿದ ಏಳು ದೇವತಾ ಸಮೂಹಗಳನ್ನು - ಅವು ಮರುದ್ಗಣಗಳ ಸಮುದಾಯಗಳು - ರಕ್ಷಿಸು ಎಂದು ಅಭಿಪ್ರಾಯ).

ಸ್ಕಂದಃ

ಸಪ್ತಮಂ ಮಾರುತಸ್ಕಂಧಂ ಪಾಲಯಿಷ್ಯಾಮ್ಯಹಂ ಪ್ರಭೋ ।
ಯದನ್ಯದಪಿ ಮೇ ಕಾರ್ಯಂ ದೇವ ತದ್ ವದ ಮಾಚಿರಮ್ ॥೩೦॥

ಸ್ಕಂದ– ಪ್ರಭುವೇ, ನಾನು ಏಳನೆಯ ಮಾರುತಸ್ಕಂಧವನ್ನು ರಕ್ಷಿಸುವೆನು. ನಾನು ಮಾಡಬೇಕಾದ ಬೇರೆ ಕಾರ್ಯವಿದ್ದರೆ ಅದನ್ನೂ ಶೀಘ್ರವಾಗಿ ಹೇಳು.

ರುದ್ರಃ

ಕಾರ್ಯೇಷ್ವಹಂ ತ್ವಯಾ ಪುತ್ರ ಸಂದ್ರಷ್ಟವ್ಯಃ ಸದೈವ ಹಿ ।
ದರ್ಶನಾನ್ಮಮ ಭಕ್ತ್ಯಾ ಚ ಶ್ರೇಯಃ ಪರಮವಾಪ್ಸ್ಯಸಿ ॥೩೧॥

ರುದ್ರ– ಪುತ್ರನೇ, ಎಲ್ಲ ಕಾರ್ಯಗಳನ್ನೂ ಮಾಡುವಾಗ ನೀನು ಯಾವಾಗಲೂ ನನ್ನ ಸಂದರ್ಶನವನ್ನು ಮಾಡಬೇಕು. ನನ್ನ ದರ್ಶನದಿಂದ ಮತ್ತು ನಿನ್ನ ಭಕ್ತಿಯಿಂದ ಶ್ರೇಷ್ಠವಾದ ಶ್ರೇಯಸ್ಸನ್ನು ಹೊಂದುವಿ.

ಮಾರ್ಕಂಡೇಯಃ

ಇತ್ಯುಕ್ತ್ವಾ ವಿಸಸರ್ಜೈನಂ ಪರಿಷ್ವಜ್ಯ ಮಹೇಶ್ವರಃ ।
ಸ್ಕಂದಂ ಸಹೋಮಯಾ ಪ್ರೀತೋ ಜ್ವಲಂತಮಿವ ತೇಜಸಾ ॥೩೨॥

ಮಾರ್ಕಂಡೇಯ– ಪಾರ್ವತಿಯಿಂದ ಸಹಿತನಾದ ಮಹೇಶ್ವರನು ಪ್ರಸನ್ನನಾಗಿ ಹೀಗೆ ಹೇಳಿ ತೇಜಸ್ಸಿನಿಂದ ಬೆಳಗುತ್ತಿದ್ದ ಸ್ಕಂದನನ್ನು ಆಲಿಂಗಿಸಿ ಅವನನ್ನು ಬೀಳ್ಕೊಟ್ಟನು.

ವಿಸರ್ಜಿತೇ ತತಃ ಸ್ಕಂದೇ ಬಭೂವೌತ್ಪಾತಿಕಂ ಮಹತ್ ।
ಸಹಸೈವ ಮಹಾರಾಜ ದೇವಾನ್ ಸರ್ವಾನ್ ಪ್ರಮೋಹಯತ್ ॥೩೩॥

ಮಹಾರಾಜನೇ, ಮಹೇಶ್ವರನು ಸ್ಕಂದನನ್ನು ಬೀಳ್ಕೊಡುತ್ತಿರಲು ಇದ್ದಕ್ಕಿದ್ದಂತೆಯೇ ದೇವತೆಗಳಿಗೂ ದಿಗ್ಭ್ರಮೆಯನ್ನು ಉಂಟುಮಾಡುವಂತೆ ದೊಡ್ಡ ಅಪಶಕುನವು ಉಂಟಾಯಿತು.

ಜಜ್ವಾಲ ಖಂ ಸನಕ್ಷತ್ರಂ ಪ್ರಮೂಢಂ ಭುವನಂ ಭೃಶಮ್ ।
ಚಚಾಲ ವ್ಯನದಚ್ಚೋರ್ವೀ ತಮೋಭೂತಂ ಜಗದ್ ಬಭೌ ॥೩೪॥

ನಕ್ಷತ್ರದಿಂದ ಕೂಡಿದ ಆಕಾಶದಲ್ಲಿ ಜ್ವಾಲೆಗಳು ಕಂಡುಬಂದವು. ಭೂಮಿಯು ಮೋಹಕ್ಕೆ ಒಳಗಾಯಿತು. ಭೂಮಿಯು ನಡುಗಿತು ಮತ್ತು ಗುಡುಗಿತು. ಜಗತ್ತು ಕತ್ತಲಿನಿಂದ ಆವರಿಸಲ್ಪಟ್ಟಿತು.

ತತಸ್ತದ್ದಾರುಣಂ ದೃಷ್ಟ್ವಾ ಕ್ಷುಭಿತಃ ಶಂಕರಸ್ತದಾ ।
ಉಮಾ ಚೈವ ಮಹಾಭಾಗ ದೇವಾಶ್ಚರ್ಷಿಗಣೈಃ ಸಹ ॥೩೫॥

ಆಗ ಆ ದಾರುಣವಾದ ಅಪಶಕುನಗಳನ್ನು ನೋಡಿ ಶಂಕರನು ಕ್ಷೋಭೆಗೊಂಡನು. ಮಹಾನುಭಾವಳಾದ ಪಾರ್ವತಿಯೂ, ಋಷಿಗಣಗಳಿಂದ ಸಹಿತರಾದ ದೇವತೆಗಳೂ ಕ್ಷೋಭೆಗೊಂಡರು.

ತತಸ್ತೇಷು ಪ್ರಮೂಢೇಷು ಪರ್ವತಾಂಬುದಸನ್ನಿಭಮ್ ।
ನಾನಾಪ್ರಹರಣಂ ಘೋರಮದೃಶ್ಯತ ಮಹದ್ಬಲಮ್ ॥೩೬॥

ಹೀಗೆ ಅವರು ದಿಗ್ಭ್ರಮೆಗೊಳ್ಳುತ್ತಿರಲು ಪರ್ವತವನ್ನು ಮುಚ್ಚುವ ಮೋಡದಂತಿರುವ ಅನೇಕ ಆಯುಧಗಳಿಂದ ಕೂಡಿದ ದೊಡ್ಡ ಸೈನ್ಯವು ಕಂಡುಬಂದಿತು.

ತದ್ ವೈ ಘೋರಮಸಂಖ್ಯೇಯಂ ಗರ್ಜಚ್ಚ ವಿವಿಧಾ ಗಿರಃ ।
ಅಭ್ಯದ್ರವದ್ ರಣೇ ದೇವಾನ್ ಭಗವಂತಂ ಚ ಶಂಕರಮ್ ॥೩೭॥

ಆ ಘೋರವಾದ ಅಸಂಖ್ಯಾತವಾದ ಸೈನ್ಯವು ವಿಧವಿಧವಾದ ನಾದಗಳನ್ನು ಗರ್ಜಿಸುತ್ತಾ ಯುದ್ಧದಲ್ಲಿ ದೇವತೆಗಳ ಮೇಲೆ ಮತ್ತು ಭಗವಂತನಾದ ಶಂಕರನ ಮೇಲೆ ಎರಗಿತು.

ತೈರ್ವಿಸೃಷ್ಟಾನ್ಯನೀಕೇಷು ಬಾಣಜಾಲಾನ್ಯನೇಕಶಃ ।
ಪರ್ವತಾಶ್ಚ ಶತಘ್ನ್ಯಶ್ಚ ಪ್ರಾಸಾಸಿಪರಿಘಾ ಗದಾಃ ॥೩೮॥

ನಿಪತದ್ಭಿಸ್ತು ತೈರ್ಘೋರೈರ್ದೇವಾನೀಕಂ ಮಹಾಯುಧೈಃ ।
ಕ್ಷಣೇನ ವ್ಯದ್ರವತ್ ಸರ್ವಂ ವಿಮುಖಂ ಚಾಪ್ಯದೃಶ್ಯತ ॥೩೯॥

ಅವರಿಂದ ದೇವಸೈನ್ಯದ ಮೇಲೆ ಪ್ರಯೋಗಿಸಲ್ಪಟ್ಟ ಅನೇಕ ಬಾಣಜಾಲಗಳೂ, ಪರ್ವತಗಳೂ, ಶತಘ್ನಿಗಳೂ, ಪ್ರಾಸ-ಅಸಿ-ಪರಿಘಾ ಮತ್ತು ಗದೆಗಳೂ (ದೇವತೆಗಳ

ಸೈನ್ಯದ ಮೇಲೆ ಬಿದ್ದವು). ಆ ಘೋರವಾದ ಮಹಾಯುಧಗಳು ದೇವ ಸೈನ್ಯದ ಮೇಲೆ ಬೀಳುತ್ತಿದ್ದಂತೆ ಒಂದು ಕ್ಷಣದಲ್ಲಿ ದೇವಸೈನ್ಯವೆಲ್ಲವೂ ಚದುರಿಹೋಯಿತು. ಯುದ್ಧ ವಿಮುಖವಾಗಿಯೂ ಕಂಡುಬಂದಿತು.

ನಿಕೃತ್ತಯೋಧನಾಗಾಶ್ವಂ ಕೃತ್ತಾಯುಧಮಹಾರಥಮ್ ।
ದಾನವೈರರ್ದಿತಂ ಸೈನ್ಯಂ ದೇವಾನಾಂ ವಿಮುಖಂ ಬಭೌ ॥೪೦॥

ಕತ್ತರಿಸಲ್ಪಟ್ಟ ಸೈನಿಕರೂ, ಗದೆಗಳೂ ಮತ್ತು ಅಶ್ವಗಳನ್ನುಳ್ಳ ಕತ್ತರಿಸಲ್ಪಟ್ಟ ಆಯುಧಗಳನ್ನೂ ಮತ್ತು ಮಹಾರಥಗಳನ್ನುಳ್ಳ ದೇವತೆಗಳ ಸೈನ್ಯವು ದಾನವರಿಂದ ಪೀಡಿತವಾಗಿ ವಿಮುಖವಾದುದು ಕಂಡುಬಂದಿತು.

ಅಸುರೈರ್ವಧ್ಯಮಾನಂ ತತ್ ಪಾವಕೈರಿವ ಕಾನನಮ್ ।
ಅಪತದ್ ದಗ್ಧಭೂಯಿಷ್ಠಂ ಮಹಾದ್ರುಮವನಂ ಯಥಾ ॥೪೧॥

ಅಸುರರಿಂದ ಹತವಾಗುತ್ತಿದ್ದ ಆ ಸೈನ್ಯವು ಕಾಡ್ಗಿಚ್ಚಿನಿಂದ ಮಹಾವೃಕ್ಷಗಳನ್ನು ಹೊಂದಿದ ವನವು ದಗ್ಧಭೂಯಿಷ್ಠವಾಗಿ ಬೀಳುವಂತೆ ಬಿದ್ದುಹೋಯಿತು.

ತೇ ವಿಭಿನ್ನಶಿರೋದೇಹಾಃ ಪ್ರಾದ್ರವಂತೋ ದಿವೌಕಸಃ ।
ನ ನಾಥಮಭ್ಯಗಚ್ಛಂತಿ ವಧ್ಯಮಾನಾ ಮಹಾರಣೇ ॥೪೨॥

ದೇವತೆಗಳು ಅಸುರರಿಂದ ಮಹಾಯುದ್ಧದಲ್ಲಿ ಪ್ರಹಾರಗಳಿಗೆ ಒಳಗಾಗಿ ತಮ್ಮ ಶಿರಸ್ಸು ಮತ್ತು ದೇಹಗಳನ್ನು ಒಡೆದುಕೊಂಡು ಓಡುತ್ತಾ ತಮ್ಮನ್ನು ರಕ್ಷಿಸುವ ಸ್ವಾಮಿಯನ್ನು ಕಾಣಲಿಲ್ಲ.

ಅಥ ತದ್‌ವಿದ್ರುತಂ ಸೈನ್ಯಂ ದೃಷ್ಟ್ವಾ ದೇವಃ ಪುರಂದರಃ ।
ಆಶ್ವಾಸಯನ್ನುವಾಚೇದಂ ಬಲಭಿದ್ ದಾನವಾರ್ದಿತಮ್ ॥೪೩॥

ಆಗ ಬಲಶತ್ರುವಾದ ಪುರಂದರನು ದಾನವರಿಂದ ಪೀಡಿತವಾಗಿ ಓಡಿ ಹೋಗುತ್ತಿದ್ದ ತನ್ನ ಸೈನ್ಯವನ್ನು ನೋಡಿ ಆಶ್ವಾಸನೆಯನ್ನು ಮಾಡುತ್ತಾ ಹೀಗೆ ಮಾತನಾಡಿದನು.

ಭಯಂ ತ್ಯಜತ ಭದ್ರಂ ವಃ ಶೂರಾಃ ಶಸ್ತ್ರಾಣಿ ಗೃಹ್ಣತ ।
ಕುರುಧ್ವಂ ವಿಕ್ರಮೇ ಬುದ್ಧಿಂ ಮಾ ವಃ ಕಾಚಿದ್ ವ್ಯಥಾ ಭವೇತ್ ॥೪೪॥

ಭಯವನ್ನು ತ್ಯಜಿಸಿ, ನಿಮಗೆ ಮಂಗಳವಾಗಲಿ. ಶೂರರೇ, ಶಸ್ತ್ರಗಳನ್ನು ಹಿಡಿಯಿರಿ. ಪರಾಕ್ರಮದಲ್ಲಿ ಬುದ್ಧಿಯನ್ನು ಮಾಡಿ. ಯಾವ ವ್ಯಥೆಯನ್ನೂ ಪಡಬೇಡಿ.

ಜಯತೈನಾನ್ ದುರಾಚಾರಾನ್ ದಾನವಾನ್ ಘೋರದರ್ಶನಾನ್ ।
ಅಭಿದ್ರವತ ಭದ್ರಂ ವೋ ಮಯಾ ಸಹ ಮಹಾಸುರಾನ್ ॥೪೫॥

ದುರಾಚಾರಿಗಳಾದ ಘೋರರೂಪವನ್ನು ಧರಿಸಿದ ಈ ದಾನವರನ್ನು ಜಯಿಸಿ. ನಿಮಗೆ ಮಂಗಳವಾಗಲಿ. ನನ್ನ ಜೊತೆಯಲ್ಲಿ ಮಹಾಸುರರ ಮೇಲೆ ಎರಗಿ.

ಶಕ್ರಸ್ಯ ವಚನಂ ಶ್ರುತ್ವಾ ಸಮಾಶ್ವಸ್ತಾ ದಿವೌಕಸಃ ।
ದಾನವಾನ್ ಪ್ರತ್ಯಯುಧ್ಯಂತ ಶಕ್ರಂ ಕೃತ್ವಾ ವ್ಯಪಾಶ್ರಯಮ್ ॥೪೬॥

ಇಂದ್ರನ ಮಾತುಗಳನ್ನು ಕೇಳಿ ಧೈರ್ಯವನ್ನು ಪಡೆದ ದೇವತೆಗಳು ಇಂದ್ರನನ್ನು ಆಶ್ರಯಿಸಿ ದಾನವರ ಜೊತೆಯಲ್ಲಿ ಯುದ್ಧವನ್ನು ಮಾಡಿದರು.

ತತಸ್ತೇ ತ್ರಿದಶಾಃ ಸರ್ವೇ ಮರುತಶ್ಚ ಮಹಾಬಲಾಃ ।
ಪ್ರತ್ಯುದ್ಯಯುರ್ಮಹಾವೇಗಾಃ ಸಾಧ್ಯಾಶ್ಚ ವಸುಭಿಃ ಸಹ ॥೪೭॥

ಅನಂತರ ಮಹಾಬಲರಾದ, ಮಹಾವೇಗವುಳ್ಳ ಮರುತ್ತುಗಳೂ ಮತ್ತು ಎಲ್ಲಾ ದೇವತೆಗಳೂ ಸಾಧ್ಯರ ಮತ್ತು ವಸುಗಳ ಜೊತೆಯಲ್ಲಿ ಸೇರಿ ದೈತ್ಯರ ಮೇಲೆ ಎರಗಿದರು.

ತೈರ್ವಿಸೃಷ್ಟಾನ್ಯನೀಕೇಷು ಕ್ರುದ್ಧೈಃ ಶಸ್ತ್ರಾಣಿ ಸಂಯುಗೇ ।
ಶರಾಶ್ಚ ದೈತ್ಯಕಾಯೇಷು ಪಿಬಂತಿ ರುಧಿರಂ ಬಹು ॥೪೮॥

ಅವರು ಯುದ್ಧದಲ್ಲಿ ಕ್ರುದ್ಧರಾಗಿ ದೈತ್ಯಸೇನೆಯಲ್ಲಿ ಪ್ರಯೋಗಿಸಿದ ಶಸ್ತ್ರಗಳು ಮತ್ತು ಬಾಣಗಳು ದೈತ್ಯರ ಶರೀರವನ್ನು ಪ್ರವೇಶಿಸಿ ಅವರ ರಕ್ತವನ್ನು ಬಹಳವಾಗಿ ಕುಡಿದವು.

ತೇಷಾಂ ದೇಹಾನ್ ವಿನಿರ್ಭಿದ್ಯ ಶರಾಸ್ತೇ ನಿಶಿತಾಸ್ತದಾ ।
ನಿಪತಂತೋಽಭ್ಯದೃಶ್ಯಂತ ನಗೇಭ್ಯ ಇವ ಪನ್ನಗಾಃ ॥೪೯॥

ಆ ನಿಶಿತವಾದ ಬಾಣಗಳು ಆಗ ಪರ್ವತದಿಂದ ಹೊರಬರುವ ಸರ್ಪದಂತೆ ದೈತ್ಯರ ಶರೀರವನ್ನು ಭೇದಿಸಿ ಹೊರಗೆ ಬರುತ್ತಿದ್ದುದು ಕಂಡುಬಂದಿತು.

ತಾನಿ ದೈತ್ಯಶರೀರಾಣಿ ನಿರ್ಭಿನ್ನಾನಿ ಸ್ಮ ಸಾಯಕೈಃ ।
ಅಪತನ್ ಭೂತಲೇ ರಾಜಂಶ್ಛಿನ್ನಾಭ್ರಾಣೀವ ಸರ್ವಶಃ ॥೫೦॥

ಎಲೈ ರಾಜನೇ, ಬಾಣಗಳಿಂದ ಕತ್ತರಿಸಲ್ಪಟ್ಟ ದೈತ್ಯಶರೀರಗಳು ಛಿನ್ನವಾದ ಮೋಡಗಳಂತೆ ಭೂತಲದಲ್ಲಿ ಎಲ್ಲ ಕಡೆಯಲ್ಲಿಯೂ ಬಿದ್ದವು.

ತತಸ್ತದ್ ದಾನವಂ ಸೈನ್ಯಂ ಸರ್ವೈರ್ದೇವಗಣೈರ್ಯುಧಿ ।
ತ್ರಾಸಿತಂ ವಿವಿಧೈರ್ಬಾಣೈಃ ಕೃತಂ ಚೈವ ಪರಾಙ್ಮುಖಮ್ ॥೫೧॥

ಆಗ ಆ ದಾನವ ಸೈನ್ಯವು ಎಲ್ಲ ದೇವಗಣಗಳಿಂದ ವಿವಿಧ ಬಾಣಗಳಿಂದ ಯುದ್ಧದಲ್ಲಿ ಹೆದರಿಸಲ್ಪಟ್ಟಿತು ಮತ್ತು ಯುದ್ಧವಿಮುಖವಾಗಿಯೂ ಮಾಡಲ್ಪಟ್ಟಿತು.

ಅಥೋ ಕ್ರುಷ್ಟಂ ತದಾ ಹೃಷ್ಟೈಃ ಸರ್ವೈರ್ದೇವೈರುದಾಯುಧೈಃ ।
ಸಂಹಿತಾನಿ ಚ ತೂರ್ಯಾಣಿ ಪ್ರಾವಾದ್ಯಂತ ಹ್ಯನೇಕಶಃ ॥೫೨॥

ಆಗ ದೈತ್ಯಸೈನ್ಯವು ಆಕ್ರೋಶವನ್ನು ಮಾಡಿತು. ಸಂತುಷ್ಟಗೊಂಡ ಮತ್ತು ಆಯುಧಗಳನ್ನು ಎತ್ತಿಹಿಡಿದ ದೇವತೆಗಳು ಜೊತೆಯಾಗಿ ಅನೇಕರೀತಿಯಲ್ಲಿ ಮಂಗಳವಾದ್ಯಗಳನ್ನು ಮೊಳಗಿಸಿದರು.

ಏವಮನ್ಯೋನ್ಯಸಂಯುಕ್ತಂ ಯುದ್ಧಮಾಸೀತ್ ಸುದಾರುಣಮ್ ।
ದೇವಾನಾಂ ದಾನವಾನಾಂ ಚ ಮಾಂಸಶೋಣಿತಕರ್ದಮಮ್ ॥೫೩॥

ಹೀಗೆ ದೇವತೆಗಳಿಗೂ ಮತ್ತು ದಾನವರಿಗೂ ಪರಸ್ಪರ ಸಂಯುಕ್ತವಾಗಿ ಮಾಂಸಶೋಣಿತಗಳೇ ಕೆಸರಾಗಿ ಉಳ್ಳ ಅತ್ಯಂತ ದಾರುಣವಾದ ಯುದ್ಧವು ಜರುಗಿತು.

ಅನಯೋ ದೇವಲೋಕಸ್ಯ ಸಹಸೈವಾಭ್ಯದೃಶ್ಯತ ।
ತದಾऽಪಿ ದಾನವಾ ಘೋರಾ ಏನಿಘ್ನಂತಿ ದಿವೌಕಸಃ ॥೫೪॥

ಆಗ ಇದ್ದಕ್ಕಿದ್ದಂತೆಯೇ ದೇವಲೋಕಕ್ಕೆ ಅಪಚಾರವುಂಟಾಗುವುದು ಕಂಡುಬಂದಿತು. ಆಗಲೂ ಘೋರ ದಾನವರು ದೇವತೆಗಳನ್ನು ಕೊಲ್ಲುತ್ತಿದ್ದರು.

ತತಸ್ತೂರ್ಯಪ್ರಾಣದಾಶ್ಚ ಭೇರೀಣಾಂ ಚ ಮಹಾಸ್ವನಃ ।
ಬಭೂವುರ್ದಾನವೇಂದ್ರಾಣಾಂ ಸಿಂಹಾನಾದಾಶ್ಚ ದಾರುಣಾಃ ॥೫೫॥

ಆಗ ದಾನವೇಂದ್ರರ ತೂರ್ಯನಿನಾದಗಳೂ ಭೇರಿಗಳ ಮಹಾಧ್ವನಿಯೂ ದಾರುಣವಾದ ಸಿಂಹನಾದವೂ ಕೇಳಿಬಂದವು.

ಅಥ ದೈತ್ಯಬಲಾದ್ ಘೋರಾನ್ನಿಷ್ಪಪಾತ ಮಹಾಬಲಃ ।
ದಾನವೋ ಮಹಿಷೋ ನಾಮ ಪ್ರಗೃಹ್ಯ ವಿಪುಲಂ ಗಿರಿಮ್ ॥೫೬॥

ಅನಂತರ ದೈತ್ಯಸೈನ್ಯದಿಂದ ಮಹಾಬಲನಾದ ಮಹಿಷನೆಂಬ ದಾನವನು ದೊಡ್ಡ ಪರ್ವತವನ್ನು ಎತ್ತಿಕೊಂಡು ಹೊರಗೆ ಬಂದನು.

ತೇ ತಂ ಘನೈರಿವಾದಿತ್ಯಂ ದೃಷ್ಟ್ವಾ ಸಂಪರಿವಾರಿತಮ್ ।
ಸಮುದ್ಯಮ್ಯಗಿರಿಂ ರಾಜನ್ ವ್ಯದ್ರವಂತ ದಿವೌಕಸಃ ॥೫೭॥

ಎಲೈ ರಾಜನೇ, ದೇವತೆಗಳು ಮೋಡಗಳಿಂದ ಸುತ್ತುವರಿಯಲ್ಪಟ್ಟ ಸೂರ್ಯನಂತೆ ದೊಡ್ಡ ಪರ್ವತವನ್ನು ಎತ್ತಿಬರುತ್ತಿದ್ದ ಆ ದಾನವನನ್ನು ನೋಡಿ ದಿಕ್ಕುದಿಕ್ಕುಗಳಿಗೆ ಓಡಿ ಹೋದರು.

ಅಥಾಭಿದ್ರುತ್ಯ ಮಹಿಷೋ ದೇವಾಂಶ್ಚಿಕ್ಷೇಪ ತಂ ಗಿರಿಮ್ ।
ಮಹಾಕಾಯಂ ಮಹಾರಾಜ ಸತೋಯಮಿವ ತೋಯದಮ್ ॥೫೮॥

ಎಲೈ ಮಹಾರಾಜನೇ, ಆಗ ಮಹಿಷನು ದೇವತೆಗಳನ್ನು ಅಟ್ಟಿಸಿಕೊಂಡು ಹೋಗಿ ನೀರಿನಿಂದ ಕೂಡಿದ ಮೋಡದಂತಿದ್ದ ಮಹಾಪರಿಮಾಣದ ಪರ್ವತವನ್ನು ದೇವತೆಗಳ ಮೇಲೆ ಎಸೆದನು.

ಪತತಾ ತೇನ ಗಿರಿಣಾ ದೇವಸೈನ್ಯಸ್ಯ ಪಾರ್ಥಿವ ।
ಭೀಮರೂಪೇಣ ನಿಹತಮಯುತಂ ಪ್ರಾಪತದ್ ಭುವಿ ॥೫೯॥

ಎಲೈ ರಾಜನೇ, ಆ ಪರ್ವತವು ಬೀಳುವಾಗ ದೇವಸೈನ್ಯದ ಹತ್ತುಸಾವಿರ ಸೈನ್ಯವು ಭಯಂಕರ ರೂಪವುಳ್ಳ ಆ ಪರ್ವತದಿಂದ ಹತವಾಗಿ ಭೂಮಿಯ ಮೇಲೆ ಬಿದ್ದಿತು.

ಅಥ ತೈರ್ದಾನವೈಃಸಾರ್ಧಂ ಮಹಿಷಸ್ತ್ರಾಸಯನ್ ಸುರಾನ್ ।
ಅಭ್ಯದ್ರವದ್ ರಣೇ ತೂರ್ಣಂ ಸಿಂಹಃ ಕ್ಷುದ್ರಮೃಗಾನಿವ ॥೬೦॥

ಅನಂತರ ಆ ದಾನವರಿಂದ ಒಡಗೂಡಿದ ಮಹಿಷನು ದೇವತೆಗಳನ್ನು ಹೆದರಿಸುತ್ತಾ ಸಿಂಹವು ಕ್ಷುದ್ರಮೃಗಗಳ ಕಡೆಗೆ ಓಡುವಂತೆ ಯುದ್ಧದಲ್ಲಿ ದೇವತೆಗಳ ಕಡೆಗೆ ಓಡಿದನು.

ತಮಾಪತಂತಂ ಮಹಿಷಂ ದೃಷ್ಟ್ವಾ ಸೇಂದ್ರಾ ದಿವೌಕಸಃ ।
ವ್ಯದ್ರವಂತ ರಣೇ ಭೀತಾ ವಿಕೀರ್ಣಾಯುಧಕೇತನಾಃ ॥೬೧॥

ಹಾಗೆ ಮೇಲೆರಗುತ್ತಿದ್ದ ಮಹಿಷನನ್ನು ನೋಡಿ ಇಂದ್ರಸಹಿತರಾದ ದೇವತೆಗಳು ಯುದ್ಧದಲ್ಲಿ ಭೀತರಾಗಿ ತಮ್ಮ ಆಯುಧ ಮತ್ತು ಧ್ವಜಗಳನ್ನು ಎಸೆದು ಓಡಿಹೋದರು.

ತತಃ ಸ ಮಹಿಷಃ ಕ್ರುದ್ಧಸ್ತೂರ್ಣಂ ರುದ್ರರಥಂ ಯಯೌ ।
ಅಭಿದ್ರುತ್ಯ ಚ ಜಗ್ರಾಹ ರುದ್ರಸ್ಯ ರಥಕೂಬರಮ್ ॥೬೨॥

ಆಗ ಆ ಮಹಿಷನು ಕೋಪಗೊಂಡು ಶೀಘ್ರವಾಗಿ ರುದ್ರನ ರಥಕ್ಕೆ ಹೋದನು. ಅವನು ಓಡಿಹೋಗಿ ರುದ್ರನ ರಥದ ಕೂಬರವನ್ನು (ಮೂಕಿಯನ್ನು) ಹಿಡಿದನು.

ಯದಾ ರುದ್ರರಥಂ ಕ್ರುದ್ಧೋ ಮಹಿಷಃ ಸಹಸಾ ಗತಃ ।
ರೇಸತೂ ರೋದಸೀ ಗಾಢಂ ಮುಮುಹುಶ್ಚಸ್ತದಾ ॥೬೩॥

ಕೋಪಗೊಂಡ ಮಹಿಷನು ವೇಗವಾಗಿ ಹೋಗಿ ರುದ್ರರಥವನ್ನು ಹಿಡಿದಾಗ ದ್ಯಾವಾಪೃಥಿವಿಗಳು ಗಾಢವಾಗಿ ಕಂಪಿಸಿದವು. ಋಷಿಗಳು ಮೋಹಕ್ಕೆ ಒಳಗಾದರು.

ಅನದಂಶ್ಚ ಮಹಾಕಾಯಾ ದೈತ್ಯಾ ಜಲಧರೋಪಮಾಃ ।
ಆಸೀಚ್ಚ ನಿಶ್ಚಿತಂ ತೇಷಾಂ ಜಿತಮಸ್ಮಾಭಿರಿತ್ಯುತ ॥೬೪॥

ಮಹಾಶರೀರವುಳ್ಳ ದೈತ್ಯರು ಮೋಡಗಳಂತೆ ಗುಡುಗಿದರು ಮತ್ತು ಅವರು ನಾವು ಗೆದ್ದೆವು ಎಂಬ ನಿಶ್ಚಯವುಳ್ಳವರಾಗಿದ್ದರು.

ತಥಾಭೂತೇ ತು ಭಗವಾನ್ ನಾಹನನ್ಮಹಿಷಂ ರಣೇ ।
ಸಸ್ಮಾರ ಚ ತದಾ ಸ್ಕಂದಂ ಮೃತ್ಯುಂ ತಸ್ಯ ದುರಾತ್ಮನಃ ॥೬೫॥

ಅಂತಹ ಪರಿಸ್ಥಿತಿ ಇದ್ದರೂ ಯುದ್ಧದಲ್ಲಿ ಭಗವಂತನಾದ ಶಂಕರನು ಮಹಿಷನನ್ನು ಕೊಲ್ಲಲಿಲ್ಲ. ಆ ದುರಾತ್ಮನಿಗೆ ಸ್ಕಂದನೇ ಮೃತ್ಯುವೆಂದು ಆಗ ಅವನು ಸ್ಮರಿಸಿದನು.

ಮಹಿಷೋಽಪಿ ರಥಂ ದೃಷ್ಟ್ವಾ ರೌದ್ರೋ ರುದ್ರಸ್ಯ ಚಾನದತ್ ।
ದೇವಾನ್ ಸಂತ್ರಾಸಯಂಶ್ಚಾಪಿ ದೈತ್ಯಾಂಶ್ಚಾಪಿ ಪ್ರಹರ್ಷಯನ್ ॥೬೬॥

ಘೋರನಾದ ಮಹಿಷನೂ ಸಹ ರುದ್ರನ ರಥವನ್ನು ನೋಡಿ ದೇವತೆಗಳನ್ನು ಭಯಪಡಿಸುತ್ತಾ ದೈತ್ಯರನ್ನು ಸಂತೋಷಪಡಿಸುವವನಾಗಿ ಘೋರನಾದವನ್ನು ಮಾಡಿದನು.

ತತಸ್ತಸ್ಮಿನ್ ಭಯೇ ಘೋರೇ ದೇವಾನಾಂ ಸಮುಪಸ್ಥಿತೇ ।
ಆಜಗಾಮ ಮಹಾಸೇನಃ ಕ್ರೋಧಾತ್ ಸೂರ್ಯ ಇವ ಜ್ವಲನ್ ॥೬೭॥

ಆಗ ದೇವತೆಗಳಿಗೆ ಆ ಘೋರವಾದ ಭಯವು ಪ್ರಾಪ್ತವಾಗಿರಲು ಮಹಾಸೇನನು ಸೂರ್ಯನಂತೆ ಕ್ರೋಧದಿಂದ ಬೆಳಗುತ್ತಾ ಅಲ್ಲಿಗೆ ಬಂದನು.

ಲೋಹಿತಾಂಬರಸಂವೀತೋ ಲೋಹಿತಸ್ರಗ್ವಿಭೂಷಣಃ ।
ಲೋಹಿತಾಕ್ಷೋ ಮಹಾಬಾಹುರ್ಹಿರಣ್ಯಕವಚಃ ಪ್ರಭುಃ ॥೬೮॥

ರಥಮಾದಿತ್ಯಸಂಕಾಶಮಾಸ್ಥಿತಃ ಕನಕಪ್ರಭಮ್ ।
ತಂ ದೃಷ್ಟ್ವಾ ದೈತ್ಯಸೇನಾ ಸಾ ವ್ಯದ್ರವತ್ ಸಹಸಾ ರಣೇ ॥೬೯॥

ರಕ್ತವಸ್ತ್ರಧಾರಿಯೂ, ರಕ್ತಮಾಲಾವಿಭೂಷಿತನೂ, ರಕ್ತಾಕ್ಷನೂ, ಹಿರಣ್ಯಕವಚನೂ, ಮಹಾಬಾಹುವೂ ಆದ ಆ ಪ್ರಭುವು ಸುವರ್ಣಕಾಂತಿಯುಳ್ಳ, ಆದಿತ್ಯನಂತೆ ಹೊಳೆಯುವ ರಥವನ್ನು ಏರಿ ಬಂದನು. ಅವನನ್ನು ನೋಡಿ ದೈತ್ಯಸೈನ್ಯವು ಇದ್ದಕ್ಕಿದ್ದಂತೆಯೇ ಯುದ್ಧದಲ್ಲಿ ಓಡಿಹೋಯಿತು.

ಸ ಚಾಪಿ ತಾಂ ಪ್ರಜ್ವಲಿತಾಂ ಮಹಿಷಸ್ಯ ವಿದಾರಿಣೀಮ್ ।
ಮುಮೋಚ ಶಕ್ತಿಂ ರಾಜೇಂದ್ರ ಮಹಾಸೇನೋ ಮಹಾಬಲಃ ॥೭೦॥

ಎಲೈ ರಾಜೇಂದ್ರನೇ, ಆ ಮಹಾಬಲನಾದ ಮಹಾಸೇನನಾದರೂ ಸಹ ಮಹಿಷನನ್ನು ಭೇದಿಸುವ ಜ್ವಾಲೆಗಳಿಂದ ಬೆಳಗುತ್ತಿದ್ದಂತಹ ಶಕ್ತ್ಯಾಯುಧವನ್ನು ಪ್ರಯೋಗಿಸಿದನು.

ಸಾ ಮುಕ್ತಾಽಭ್ಯಹರತ್ ತಸ್ಯ ಮಹಿಷಸ್ಯ ಶಿರೋ ಮಹತ್ ।
ಪಪಾತ ಭಿನ್ನೇ ಶಿರಸಿ ಮಹಿಷಸ್ಯೋಕ್ತಜೀವಿತಃ ॥೭೧॥

ಅವನಿಂದ ಪ್ರಯೋಗಿಸಲ್ಪಟ್ಟ ಆ ಶಕ್ತ್ಯಾಯುಧವು ಆ ಮಹಿಷನ ದೊಡ್ಡದಾದ ಶಿರಸ್ಸನ್ನು ಕತ್ತರಿಸಿತು. ಶಿರಸ್ಸು ಕತ್ತರಿಸಲ್ಪಡುತ್ತಿರಲು ಮಹಿಷನು ಪ್ರಾಣವನ್ನು ತೊರೆದು ಬಿದ್ದನು.

ಕ್ಷಿಪ್ತಾಕ್ಷಿಪ್ತಾ ತು ಸಾ ಶಕ್ತಿರ್ಹತ್ವಾ ಶತ್ರೂನ್ ಸಹಸ್ರಶಃ ।
ಸ್ಕಂದಹಸ್ತಮನುಪ್ರಾಪ್ತಾ ದೃಶ್ಯತೇ ದೇವದಾನವೈಃ ॥೭೨॥

ಮಹಾಸೇನನು ಆ ಶಕ್ತಿಯನ್ನು ಮತ್ತೆ ಮತ್ತೆ ಪ್ರಯೋಗಿಸುತ್ತಿದ್ದಂತೆ ಅದು ಸಹಸ್ರಾರು ಶತ್ರುಗಳನ್ನು ಕೊಂಡು ಪುನಃ ಸ್ಕಂದನ ಕೈ ಸೇರುತ್ತಿದ್ದುದು ದೇವತೆಗಳಿಗೆ ಮತ್ತು ದಾನವರಿಗೆ ಗೋಚರಿಸಿತು.

ಪ್ರಾಯಃ ಶರೈರ್ವಿನಿಹತಾ ಮಹಾಸೇನೇನ ಧೀಮತಾ ।
ದಾನವೇಷು ಮಹಾರಾಜ ತಸ್ಮಿನ್ ದೇವಾಸುರೇ ಯುಧಿ ॥೭೩॥

ಶೇಷಾ ದೈತ್ಯಗಣಾ ಘೋರಾ ಭೀತಾಸ್ತ್ರಸ್ತಾ ದುರಾಸದೈಃ ।
ಸ್ಕಂದಪಾರಿಷದೈರ್ಹತ್ವಾ ಭಕ್ಷಿತಾಶ್ಚ ಸಹಸ್ರಶಃ ॥೭೪॥

ಎಲೈ ಮಹಾರಾಜನೇ, ಮೇಧಾವಿಯಾದ ಮಹಾಸೇನನಿಂದ ಬಾಣಪ್ರಯೋಗದಿಂದ ದಾನವರ ಸೈನ್ಯದಲ್ಲಿ ದಾನವರು ಹೆಚ್ಚಾಗಿ ಹತರಾದರು. ಆ ದೇವಾಸುರ ಯುದ್ಧದಲ್ಲಿ ಉಳಿದ ಘೋರವಾಗಿ ಹೆದರಿ ನಡುಗಿದ ದೈತ್ಯಗಣಗಳು ದುರಾಸದರಾದ ಸ್ಕಂದಪಾರ್ಷದರಿಂದ ಸಹಸ್ರಸಂಖ್ಯೆಯಲ್ಲಿ ಕೊಂದು ತಿನ್ನಲ್ಪಟ್ಟರು.

ದಾನವಾನ್ ಭಕ್ಷಯಂತಸ್ತೇ ಪ್ರಪಿಬಂತಶ್ಚ ಶೋಣಿತಮ್ ।
ಕ್ಷಣಾನ್ನಿರ್ದಾನವಂ ಸರ್ವಮಕಾರ್ಷುರ್ಹೃಷ್ಟಶಹರ್ಷಿತಾಃ ॥೭೫॥

ಆ ಸ್ಕಂದಪಾರ್ಷದರು ದಾನವರನ್ನು ಭಕ್ಷಿಸುತ್ತಾ ಅವರ ರಕ್ತವನ್ನು ಪಾನಮಾಡುತ್ತಾ ಬಹಳ ಹರ್ಷದಿಂದ ಕೂಡಿದವರಾಗಿ ಒಂದುಕ್ಷಣದಲ್ಲಿ ಆ ಎಲ್ಲಾ ಸೈನ್ಯವನ್ನು ನಿರ್ದಾನವವನ್ನಾಗಿ ಮಾಡಿದರು.

ತಮಾಂಸಿ ಚ ಯಥಾ ಸೂರ್ಯೋ ವೃಕ್ಷಾನಗ್ನಿರ್ಘನಾನ್ ಖಗಃ ।
ತಥಾ ಸ್ಕಂದೋऽಜಯಚ್ಛತ್ರೂನ್ ಸ್ವೇನ ವೀರ್ಯೇಣ ಕೀರ್ತಿಮಾನ್ ॥

ಸೂರ್ಯನು ಕತ್ತಲೆಯನ್ನು ನಾಶಮಾಡಿದಂತೆ, ಅಗ್ನಿಯು ವೃಕ್ಷಗಳನ್ನು ನಾಶಮಾಡಿದಂತೆ, ವಾಯುವು ಮೋಡಗಳನ್ನು ನಾಶಮಾಡಿದಂತೆ ಕೀರ್ತಿಶಾಲಿಯಾದ ಸ್ಕಂದನು ತನ್ನ ಪರಾಕ್ರಮದಿಂದ ಶತ್ರುಗಳನ್ನು ಗೆದ್ದನು.

ಸಂಪೂಜ್ಯಮಾನಸ್ತ್ರಿದಶೈರಭಿವಾದ್ಯ ಮಹೇಶ್ವರಮ್ ।
ಶುಶುಭೇ ಕೃತ್ತಿಕಾಪುತ್ರಃ ಪ್ರಕೀರ್ಣಾಂಶುರಿವಾಂಶುಮಾನ್ ॥೭೭॥

ದೇವತೆಗಳಿಂದ ಪೂಜಿಸಲ್ಪಟ್ಟು ಮಹೇಶ್ವರನಿಗೆ ನಮಸ್ಕಾರವನ್ನು ಮಾಡಿ ಎಲ್ಲಕಡೆಗಳಲ್ಲಿಯೂ ಹರಡಿದ ಕಿರಣಗಳುಳ್ಳ ಸೂರ್ಯನಂತೆ ಕೃತ್ತಿಕಾಪುತ್ರನು ಶೋಭಿಸಿದನು.

ನಷ್ಟಶತ್ರುರ್ಯದಾ ಸ್ಕಂದಃ ಪ್ರಯಾತಸ್ತು ಮಹೇಶ್ವರಮ್ ।
ತದಾಬ್ರವೀನ್ಮಹಾಸೇನಂ ಪರಿಷ್ವಜ್ಯ ಪುರಂದರಃ ॥೭೮॥

ಸ್ಕಂದನು ಶತ್ರುಗಳನ್ನು ನಾಶಮಾಡಿ ಮಹೇಶ್ವರನ ಬಳಿಗೆ ಹೋದಾಗ ಪುರಂದರನು ಮಹಾಸೇನನನ್ನು ಆಲಿಂಗಿಸಿ ಹೀಗೆ ಮಾತನಾಡಿದನು.

ಬ್ರಹ್ಮದತ್ತವರಃ ಸ್ಕಂದ ತ್ವಯಾऽಯಂ ಮಹಿಷೋ ಹತಃ ।
ಅಜೇಯೋ ಯುಧಿ ದೇವಾನಾಂ ದಾನವಃ ಸುಮಹಾಬಲಃ ॥೭೯॥

ಎಲೈ ಸ್ಕಂದನೇ, ಬ್ರಹ್ಮನಿಂದ ವರವನ್ನು ಪಡೆದು ಯುದ್ಧದಲ್ಲಿ ದೇವತೆಗಳಿಂದ ಅಜೇಯನಾದ ಮಹಾಬಲಿಷ್ಠನಾದ ಈ ಮಹಿಷದಾನವನು ನಿನ್ನಿಂದ ಹತನಾಗಿದ್ದಾನೆ.

ದೇವಾಸ್ತೃಣಸಮಾ ಯಸ್ಯ ಬಭೂವುರ್ಜಯತಾಂ ವರ ।
ಸೋऽಯಂ ತ್ವಯಾ ಮಹಾಬಾಹೋ ಶಮಿತೋ ದೇವಕಂಟಕಃ ॥೮೦॥

ಎಲೈ ಜಯಿಸಾವವರಲ್ಲಿ ಶ್ರೇಷ್ಠನಾದವನೇ, ಯಾವನಿಗೆ ದೇವತೆಗಳು ತೃಣಕ್ಕೆ ಸಮಾನರಾಗಿದ್ದರೋ ಅಂತಹ ದೇವಕಂಟಕನಾದ ಇವನು ಎಲೈ ಮಹಾಬಾಹುವೇ, ನಿನ್ನಿಂದ ಶಾಂತಗೊಳಿಸಲ್ಪಟ್ಟಿದ್ದಾನೆ.

ಶತಂ ಮಹಿಷತುಲ್ಯಾನಾಂ ದಾನವಾನಾಂ ಮಹಾ(ತ್ವಯಾ)ರಣೇ ।
ನಿಹತಂ ದೇವಶತ್ರೂಣಾಂ ಯೈರ್ವಯಂ ಪೂರ್ವತಾಪಿತಾಃ ॥೮೧॥

ಯಾರಿಂದ ನಾವು ಹಿಂದೆ ಉಪದ್ರವಕ್ಕೆ ಒಳಗಾಗಿದ್ದೆವೋ ಅಂತಹ ಆ ದೇವಶತ್ರುಗಳಾದ ಮಹಿಷನಿಗೆ ಸಮಾನರಾದ ದಾನವರು ಒಂದು ನೂರುಜನ ಯುದ್ಧದಲ್ಲಿ ನಿನ್ನಿಂದ ಹತರಾಗಿದ್ದಾರೆ.

ತಾವಕೈರ್ಭಕ್ಷಿತಾಶ್ಚಾನ್ಯೇ ದಾನವಾಃ ಶತಸಂಘಶಃ ।
ಅಜೇಯಸ್ತ್ವಂ ರಣೇಽರೀಣಾಮುಮಾಪತಿರಿವ ಪ್ರಭುಃ ।
ಭವತೋಽನುಚರೈರ್ವೀರ ಗಣೈಃ ಪರಮಭೀಷಣೈಃ ॥೮೨॥

ಉಳಿದ ದಾನವರು ಶತಸಂಖ್ಯೆಗಳಲ್ಲಿ ನಿನ್ನ ಸೈನ್ಯದಿಂದ ಭಕ್ಷಿಸಲ್ಪಟ್ಟಿದ್ದಾರೆ. ಎಲೈ ವೀರನೇ, ಪರಮಭೀಷಣರಾದ ನಿನ್ನ ಅನುಚರರಿಂದ ಕೂಡಿದ ನೀನು ಯುದ್ಧದಲ್ಲಿ ಪ್ರಭುವಾದ ಉಮಾಪತಿಯಂತೆ ಶತ್ರುಗಳಿಂದ ಅಜೇಯನಾಗಿದ್ದೀಯೆ.

ಏತತ್ತೇ ಪ್ರಥಮಂ ದೇವ ಖ್ಯಾತಂ ಕರ್ಮ ಭವಿಷ್ಯತಿ ।
ತ್ರಿಷು ಲೋಕೇಷು ಕೀರ್ತಿಶ್ಚ ತವಾಕ್ಷಯ್ಯಾ ಭವಿಷ್ಯತಿ ॥೮೩॥

ವಶಗಾಶ್ಚ ಭವಿಷ್ಯಂತಿ ಸುರಾಸ್ತವ ಸುರಾತ್ಮಜ ॥೮೪॥

ಎಲೈ ದೇವನೇ, ಈ ನಿನ್ನ ಪ್ರಥಮ ಕರ್ಮವು ಲೋಕದಲ್ಲಿ ಪ್ರಖ್ಯಾತವಾಗುವುದು. ಮೂರುಲೋಕಗಳಲ್ಲಿಯೂ ನಿನ್ನ ಕೀರ್ತಿಯು ಅಕ್ಷಯವಾಗುವುದು. ಎಲೈ ಸುರಾತ್ಮಜನೇ, ದೇವತೆಗಳು ಎಲ್ಲರೂ ನಿನಗೆ ವಶರಾಗುವರು.

ಮಾರ್ಕಂಡೇಯಃ

ಏವಮುಕ್ತ್ವಾ ಮಹಾಸೇನಂ ನಿವೃತ್ತಃ ಸಹ ದೈವತೈಃ ।
ಅನುಜ್ಞಾತೋ ಭಗವತಾ ತ್ರ್ಯಂಬಕೇಣ ಶಚೀಪತಿಃ ॥೮೫॥

ಮಾರ್ಕಂಡೇಯ– ಮಹಾಸೇನನಿಗೆ ಹೀಗೆ ಹೇಳಿ ಶಚೀಪತಿಯು ಪೂಜ್ಯನಾದ ಶಂಕರನಿಂದ ಅನುಮತಿಯನ್ನು ಪಡೆದು ದೇವತೆಗಳ ಜೊತೆಯಲ್ಲಿ ಹಿಂದಿರುಗಿದನು.

ಗತೋ ಭದ್ರವಟಂ ರುದ್ರೋ ನಿವೃತ್ತಾಶ್ಚ ದಿವೌಕಸಃ ।
ಉಕ್ತಾಶ್ಚ ದೇವಾ ರುದ್ರೇಣ ಸ್ಕಂದಂ ಪಶ್ಯತ ಮಾಮಿವ ॥೮೬॥

ರುದ್ರನು ಭದ್ರವಟಕ್ಕೆ ಹೋದನು. ದೇವತೆಗಳೂ ಹಿಂದಿರುಗಿದರು. ದೇವತೆಗಳನ್ನು ಕುರಿತು ರುದ್ರನು ಸ್ಕಂದನನ್ನು ನನ್ನಂತೆ ನೋಡಿ ಎಂದು ಹೇಳಿದನು.

ಸ ಹತ್ವಾ ದಾನವಗಣಾನ್ ಪೂಜ್ಯಮಾನೋ ಮಹರ್ಷಿಭಿಃ ।
ಏಕಾಹ್ನೈವಾಜಯತ್ ಸರ್ವಂ ತ್ರೈಲೋಕ್ಯಂ ವಹ್ನಿನಂದನಃ ॥೮೭॥

ವಹ್ನಿನಂದನನಾದ ಆ ಮಹಾಸೇನನು ದಾನವಗಣಗಳನ್ನು ಸಂಹರಿಸಿ ಮಹರ್ಷಿಗಳಿಂದ ಪೂಜಿತನಾಗಿ ಒಂದುದಿನದಲ್ಲಿಯೇ ಮೂರುಲೋಕಗಳನ್ನೂ ಗೆದ್ದನು.

ಸ್ಕಂದಸ್ಯ ಯ ಇದಂ ವಿಪ್ರಃ ಪಠೇಜ್ಜನ್ಮ ಸಮಾಹಿತಃ ।
ಸ ಪುಷ್ಟಿಮಿಹ ಸಂಪ್ರಾಪ್ಯ ಸ್ಕಂದಸಾಲೋಕ್ಯಮಾಪ್ನುಯಾತ್ ॥೮೮॥

ಸ್ಕಂದನ ಈ ಜನ್ಮಚರಿತ್ರೆಯನ್ನು ಯಾವ ವಿಪ್ರನು ಶುದ್ಧಮನಸ್ಸಿನಿಂದ ಪಠಿಸುವನೋ ಅವನು ಈ ಲೋಕದಲ್ಲಿ ಪುಷ್ಟಿಯನ್ನು ಹೊಂದಿ ಪರಲೋಕದಲ್ಲಿ ಸ್ಕಂದಸಾಲೋಕ್ಯವನ್ನು ಪಡೆಯುವನು.

॥ ಇತಿ ಶ್ರೀಮನ್ಮಹಾಭಾರತೇ ಶತಸಹಸ್ರಿಕಾಯಾಂಸಂಹಿತಾಯಾಂ ವೈಯಾಸಿಕ್ಯಾಂ
ವನಪರ್ವಣಿ ಏಕವಿಂಶತ್ಯಧಿಕದ್ವಿಶತಶತತಮೋऽಧ್ಯಾಯಃ ॥
॥ಇತಿ ಮಾರ್ಕಂಡೇಯಸಮಸ್ಯಾಪರ್ವಣಿ ಸ್ಕಾಂದೋಪಾಖ್ಯಾನೇ ನವಮೋऽಧ್ಯಾಯಃ॥

ಇಲ್ಲಿಗೆ ಮಹಾಭಾರತದ ವನಪರ್ವದಲ್ಲಿ ಇನ್ನೂರ ಇಪ್ಪತ್ತೊಂದನೆಯ
ಅಧ್ಯಾಯ ಮುಗಿಯಿತು

॥ ಮಾರ್ಕಂಡೇಯ ಸಮಾಸ್ಯಾಪರ್ವ ಸಮಾಪ್ತಂ ॥

★ ★ ★ ★